
ಉತ್ತರ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ

ಸಂಪಾದಕರು
ಡಾ. ಆರ್. ಗೋಪಾಲ್



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
2021

ಉತ್ತರ ಕನ್ನಡ ಜಿಲ್ಲೆಯ
ಇತಿಹಾಸ ಮತ್ತು ಪುರಾತತ್ವ

ಸಂಪಾದಕರು
ಡಾ. ಆರ್. ಗೋಪಾಲ್

ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ವಸ್ತುಪ್ರದರ್ಶನ ಆವರಣ, ಮೈಸೂರು – 570 010
2020

1ನೇ ಕೃಷ್ಣವರ್ಮನ ಪೋಟಿನ್ ನಾಣ್ಯ ?

– ಪ್ರಕಾಶ್ ಶೇಟ್
ಡಾ. ಎಸ್.ಜಿ. ಸಾಮಕ್

ಕೆಲವು ತಿಂಗಳ ಹಿಂದೆ ಬನವಾಸಿಗೆ ಹೋಗಿದ್ದಾಗ ಅಲ್ಲಿನ ಅಕ್ಕಸಾಲಿಗರೊಬ್ಬರಲ್ಲಿ ಕೆಲವು ಪುರಾತನ ನಾಣ್ಯಗಳಿದ್ದ ವಿಷಯ ತಿಳಿಯಿತು. ಅವರಲ್ಲಿದ್ದ ನಾಣ್ಯಗಳನ್ನು ಪರಿಶೀಲಿಸಿದಾಗ ಎರಡು ಪೋಟಿನ್ ನಾಣ್ಯಗಳು ನಮ್ಮ ಗಮನಕ್ಕೆ ಬಂದವು. ಅವುಗಳನ್ನು ಪಡೆದ ಬಗ್ಗೆ ಅಧ್ಯಯನ ಮಾಡಬೇಕೆಂದಿರುವಾಗಲೇ ಅಂತಹುದೇ ನಾಣ್ಯಗಳನ್ನು ಕುರಿತಾದ ಲೇಖನ ದಿನಾಂಕ 11–1–2008ರ ಹಿಂದೂ ಪತ್ರಿಕೆಯಲ್ಲಿ ಪ್ರಕಟಗೊಂಡಿತ್ತು. ಆ ಲೇಖನದಲ್ಲಿ ಮಂಜೇಶ್ವರದ ಮುಕುಂದ ಪ್ರಭುಗಳು ಮೊದಲ ಬಾರಿಗೆ ಬನವಾಸಿ ಕದಂಬರ ನಾಣ್ಯವನ್ನು ಪತ್ತೆಹಚ್ಚಿದ ವಿಷಯ ತಿಳಿಯಿತು. ಮುಕುಂದ ಪ್ರಭುಗಳು ಆ ನಾಣ್ಯಗಳ ಮೇಲಿದ್ದ 'ಶ್ರೀ ದೋಷರಾಶಿ' ಯೆಂಬ ಶಾಸನದಿಂದ ಅವು ಕದಂಬರ ಪ್ರಸಿದ್ಧ ದೊರೆ 2ನೇ ರವಿವರ್ಮನ ಕಾಲದ್ದೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಡಾ. ಶ್ರೀನಿವಾಸ ಪಾಡಿಗಾರ್ ಹಾಗೂ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಶಾಸನಶಾಸ್ತ್ರ ವಿಭಾಗದ ನಿರ್ದೇಶಕರು ನೀಡಿರುವ ಅಭಿಪ್ರಾಯಗಳ ಆಧಾರದ ಮೇಲೆ ಪ್ರಭುಗಳು ಮೇಲಿನ ತೀರ್ಮಾನಕ್ಕೆ ಬಂದಿದ್ದಾರೆ.

ನಮಗೆ ಸಿಕ್ಕಿರುವ ಎರಡು ಪೋಟಿನ್ ನಾಣ್ಯಗಳಲ್ಲಿ ಒಂದು ನಾಣ್ಯ 450 ಮಿಲಿಗ್ರಾಂ ತೂಕವಿದ್ದು 11 ಮಿ.ಮಿ. ವ್ಯಾಸವನ್ನು ಹೊಂದಿದ್ದು 'ದೋಷರಾಶಿ'ಯೆಂಬ ಬರಹವನ್ನು ಹೊಂದಿದೆ. ಮತ್ತೊಂದು ನಾಣ್ಯ 550 ಮಿಲಿಗ್ರಾಂ ತೂಕವಿದ್ದು, 14 ಮಿ.ಮಿ. ವ್ಯಾಸ ಹೊಂದಿದ್ದು 'ಶ್ರೀ ದೋಷರಾಶಿ' ಯಂಬ ಬರಹವನ್ನು ಹೊಂದಿದ್ದು ಎರಡು ನಾಣ್ಯಗಳ ಹಿಂಭಾಗವು ಶಾಸನ ಹಾಗೂ ಅಲಂಕಾರ ರಹಿತವಾಗಿವೆ. ನಾಣ್ಯಗಳ ಮೇಲೆ ನಾಲ್ಕು ಎಸಳುಗಳ ಕಮಲದ ಹೂವನ್ನು ಚಿತ್ರಿಸಿ ಎಸಳುಗಳ ಮೇಲೆ ಶಾಸನ ಅಕ್ಷರಗಳನ್ನು ಬರೆಯಲಾಗಿದೆ. ಇತ್ತೀಚೆಗೆ ಡಾ. ಎಂ. ಗಿರಿಜಾಪತಿ ಹಾಗೂ ಎಲ್. ಸುಬ್ರಮಣ್ಯ ಅವರು Numismatics Digest Vol. 31 (2007), pp 135 (Coins of the Kadambas of Banavasi)ಯೆಂಬ ಲೇಖನದಲ್ಲಿ ಇದೇ ರೀತಿಯ ನಾಣ್ಯಗಳನ್ನು ಉಲ್ಲೇಖಿಸಿ (ಬೆಣ್ಣೂರು ತಾಮ್ರ ಶಾಸನವನ್ನು ಆಧರಿಸಿ) ಅವು ಕದಂಬ ದೊರೆ 2ನೇ ಕೃಷ್ಣವರ್ಮನದ್ದಾಗಿರ ಬೇಕೆಂದು ಅಭಿಪ್ರಾಯಪಟ್ಟಿರುತ್ತಾರೆ. (ಸಾಲು 9,20 ; ಶ್ರೀ ದೋಶರಾಶಿವರ್ಮಾತ್ಮ ಧರ್ಮೇಣ ಪೃತ್ವಿಂಚರಂ ಸಿಂಹಾಸನ–ವ, ––ರಾಶೀಣಃ–).

ಕೆಲವರ್ಷಗಳ ಹಿಂದೆ ಡಾ. ಸಾಮಕ್ ಮತ್ತು ಡಾ. ಜಗದೀಶ್, ಸೊರಬ ತಾಲೂಕಿನ ಅರತೆಲಗದ್ದೆಯಲ್ಲಿ ಬನವಾಸಿ ಕದಂಬರ ಕಾಲದ ಏಳು ತಾಮ್ರಶಾಸನಗಳನ್ನು ಬೆಳಕಿಗೆ ತಂದಿದ್ದಾರೆ. ಅವುಗಳಲ್ಲಿ ಒಂದು ಶಾಸನ ಕದಂಬದೊರೆ 1ನೇ ಕೃಷ್ಣವರ್ಮನದಾಗಿದ್ದು ಅದು ಆತನ ಈವರೆಗೆ ದೊರೆತ ಪ್ರಪ್ರಥಮ ಶಾಸನವಾಗಿದೆ. ಆ ಶಾಸನದಲ್ಲಿ 1ನೇ ಕೃಷ್ಣವರ್ಮನನ್ನು ಶ್ರೀ ದೋಶರಾಸಿ ನರೇಂದ್ರನೆಂದು ಕರೆಯಲಾಗಿದೆ. ಅದರಲ್ಲಿ ಆತ ಸ್ವಸಾಮ್ರಾಜ್ಯ ವ್ರತದೀಕ್ಷೆಯನ್ನು ತೆಗೆದುಕೊಂಡಿರುವುದಾಗಿ ಉಲ್ಲೇಖಿತವಾಗಿದೆ.

ಕೃಷ್ಣವರ್ಮನ 15 ನೆಯ ವರ್ಷದ ಅರೇತಲಗದ್ದೆ ತಾಮ್ರಶಾಸನ

ಮೊದಲನೆಯ ಹಲಗೆ ಹಿಂಭಾಗ

1. ಸ್ವಸ್ತಿ ಜಯತಿ ವಿಜಯ ಹೇತುಃ ಕಾರಣಂ ಕಾರಣಾನಾಂ ಪರಮ ನಿಧನಮೇಕ
2. ಜ್ಯೋತಿರಾತ್ಮೇಶ್ವರಸ್ಯ ಯದಧಿ ವಸತಿ ವಿಶ್ವಾವಿಷ್ವಪಾನಾಂ ವಿಭೂತಿಃ
3. ಸ್ಥಿತಿಚಿರತಿ ನಿಸರ್ಗ್ಗೇ ಸ್ವೇನ ವಿಷ್ವಜ್ಮಹಿಮ್ನಾ ॥ ತದನುಕೃತ ವಿಧಾತಃ
4. ಕೃಷ್ಣವರ್ಮ್ಮರುಧರ್ಮ್ಮಾ ಭುವನವಿದಿತ ಶೌರ್ಯ್ಯಾವಾಪ್ತ ಸರ್ವ್ವಸ್ವರಾಜ್ಯಃ
5. ಜಯತಿ ಭುವ ಮುದನ್ವನ್ಮೇಖಲಾಮೇಕಪತ್ನೀಮ್ ನಿಹತರಿಪು ನೃಪ ಶ್ರೀ ದೋ

ಎರಡನೆಯ ಹಲಗೆ ಹಿಂಭಾಗ

6. ಷರಾಷಿರ್ನ್ನರೇನ್ದ್ರಃ ಅಪಿಚ ಪರಮಾಯುಷಾಮಧಿಗತ ವಿದ್ಯಾನಾ
7. ಮತಿಷಯ ವಿಭವ ಭುವನ ವಿದಿತಾನಾಮವಿಪನ್ನರ್ತು ಸಮ್ಪದ
8. ವೃದ್ಧಜನಪದ ಧನಕನಕ ನಿಚಯಾಭಿತರ್ಪ್ಪಿತ ಸುರ
9. ಗುರುಜನಾನಾನ್ನಿರನ್ತರ ವರ್ಧಮಾನ ಪುಣ್ಯಕರ್ಮ್ಮ ಣಾಮ್
10. ಅನೇಕ ಸಮರ ಸಂಕಟ ವಿಜಯಲಬ್ಧ ಬಹು ಮಾನಾನಾಂ

ಮಂಗಳವೂ ವಿಜಯಕ್ಕೆ ಕಾರಣನೂ ಕಾರಣಗಳಿಗೆ ಆತ್ಮೇಶ್ವರನ ಏಕಜ್ಯೋತಿಯಾದ ವಿಶ್ವವ್ಯಾಪಿಗಳ ಸ್ಥಿತಿ ಚರ ನಿಸರ್ಗ (ಮೂರು ಸ್ವಭಾವಗಳಿಗೂ) ಕಾರಣ ಪುರುಷನೂ ವಿಶ್ವದ ಮಹಿಮೆಯಿಂದ ತಾನೇ ಆಗಿರುವವನೂ ಯಾವುದನ್ನು ಆಶ್ರಯಿಸಿ ವಾಸಿಸುತ್ತಾನೆ (ಅವನು ಜಯಿಸುತ್ತಾನೆ) ಅವನನ್ನು ಆಶ್ರಯಿಸಿದ ವಿಧಾತನಾದ ಕೃಷ್ಣವರ್ಮ(ನು) ಹೆಚ್ಚಿನ ಧರ್ಮದಿಂದಾಗಿ ಪ್ರಪಂಚದಲ್ಲಿ ತಿಳಿಯಲ್ಪಟ್ಟ ಶೌರ್ಯದಿಂದ ಆವರಿಸಿದ ಎಲ್ಲ ಸ್ವರಾಜ್ಯಗಳನ್ನು ಹೊಂದಿದವನಾಗಿ, ಒಡೆತನದಿಂದ ಅಖಿಲ ಸ್ವರಾಜ್ಯವನ್ನು ಏಕಪತ್ನಿಯನ್ನಾಗಿ ಮಾಡಿಕೊಂಡು ಸೋಲಿಸಲ್ಪಟ್ಟ ಶತ್ರುರಾಜರುಗಳನ್ನು ಹೊಂದಿದ ಶ್ರೀದೋಷರಾಶಿನರೇಂದ್ರನು ಜಯಿಸುತ್ತಾನೆ ಮತ್ತು ಕೂಡಾ ಪರಮಾಯುಷಿಗಳ (ಹೆಚ್ಚಿನ ಆಯುಷ್ಯುಳ್ಳ) ವಿದ್ಯೆಯನ್ನು ಹೊಂದಿರುವರ ಅತಿಶಯವಾದ ಐಶ್ವರ್ಯ ದಿಂದಾಗಿ ತಿಳಿಯಲ್ಪಟ್ಟವರ ಭೂಸಂಪತ್ತನ್ನು ಹೊಂದಿದ ಹೆಚ್ಚುತ್ತಿರುವ ದೇಶ ಧನಕನಕಗಳ ರಾಶಿಯಿಂದ ಅರ್ಪಿಸಲ್ಪಟ್ಟವನು, ದೇವ ಗುರು ಜನರನ್ನು ನಿರಂತರವಾಗಿ ಹೊಂದಿರುವ ಹೆಚ್ಚುತ್ತಿರುವ ಪುಣ್ಯಕಾರ್ಯಗಳಿಂದಾಗಿ ಅನೇಕ ಸಮರಗಳೆಂಬ ಸಂಕಟದಲ್ಲಿ ವಿಜಯವನ್ನು ಪಡೆದ ಪ್ರಶಸ್ತಿಗಳನ್ನು, ಪೂಜಿಸುವ ಒಡೆಯರ (ರಾಜರ) ಅಖಿಲ ಜಗಧರ್ಮ ಹೊಂದಿರುವ ಮಹಾರಾಜನಾದ, ಒಡೆಯನಾದ ಮಹಾಸೇನ ಮಾತೃಗಣಗಳನ್ನು ಸೇವಿಸಿದವನಾದ ಅಶ್ವಮೇಧಯಾಗ ಮಾಡಿರುವ ಮಾನವ್ಯಸ ಗೋತ್ರದ ಹಾರಿತೀ ಪುತ್ರನಾದ ಶ್ರೀಕೃಷ್ಣವರ್ಮನು ಶ್ರೀಮತಿಯೊಂದಿಗೆ ಸ್ವಸಾಮ್ರಾಜ್ಯದ ವ್ರತ ದೀಕ್ಷೆಯ ಹದಿನೈದನೆಯ ವರ್ಷದಲ್ಲಿ ಈ ಶಾಸನವನ್ನು ಹೊರಡಿಸಿದ್ದಾರೆ.

ಈಗ ತಿಳಿದಿರುವಂತೆ ಕದಂಬರ ಉಚ್ಚಂಗಿ ಶಾಖೆಯ ಮೂಲಪುರುಷ ಒಂದನೇ ಕೃಷ್ಣವರ್ಮನಾಗಿದ್ದಾನೆ. ಪ್ರಸ್ತುತ ಶಾಸನದ ಆಧಾರದ ಮೇಲೆ ಈವರೆಗೆ ರವಿವರ್ಮನ ಅಥವಾ 2ನೇ ಕೃಷ್ಣವರ್ಮನದ್ದಾಗಿರಬೇಕೆಂದು ಭಾವಿಸಲಾಗಿದ್ದ ದೋಷರಾಶಿ ಅಂಕಿತದ ನಾಣ್ಯಗಳನ್ನು ದೊರೆ 1ನೇ

❑

ಹಾನಗಲ್ಲು ಕದಂಬ 3ನೇ ತೈಲಪನ ಅಪ್ರಕಟಿತ ಶಾಸನ

– ಜಿ.ಕೆ. ದೇವರಾಯ ಸ್ವಾಮಿ

ಈ ಶಾಸನವು ಶಿರ್ಸಿ ತಾಲ್ಲೂಕಿನ ಸುರಗುಪ್ಪಾ ಗ್ರಾಮದ ಕರೂರಿನ ಈಶ್ವರ ದೇವಾಲಯದ ಮುಂದೆ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದೆ. ಈ ಶಾಸನವು ಒಂದು ಹುಲಿಬೇಟೆ ವೀರಗಲ್ಲಾಗಿದೆ. ಸುಮಾರು ಮೂರು ಅಡಿ ಆರು ಇಂಚು ಎತ್ತರ ಹಾಗೂ ಒಂದು ಅಡಿ ಆರು ಇಂಚುಗಳಷ್ಟು ಅಗಲ ವಾದ ಕಣಶಿಲೆ (Granite) ಚಪ್ಪಡಿಯಲ್ಲಿ ಶಾಸನ ಹಾಗೂ ಉಬ್ಬು ಶಿಲ್ಪವನ್ನು ಕೊರೆಯಲಾಗಿದೆ.

ಶಾಸನವು ಒಟ್ಟು ಆರು ಪಟ್ಟಿಕೆಗಳನ್ನು ಹೊಂದಿದೆ. ಕೆಳಭಾಗದಿಂದ ಕ್ರಮವಾಗಿ ಮೊದಲ ಪಟ್ಟಿಕೆಯಲ್ಲಿ ಮೂರು ಸಾಲಿನ ಶಾಸನವಿದೆ.

ಎರಡನೇ ಪಟ್ಟಿಕೆಯಲ್ಲಿ ಶಾಸನೋಕ್ತ ವೀರನಾದ ಸಾನ್ತಣನು ಹುಲಿಯೊಂದಿಗೆ ಹೋರಾಡುವ ದೃಶ್ಯವಿದೆ; ಮೂರನೇ ಪಟ್ಟಿಕೆಯಲ್ಲಿ ಮೂರು ಜನ ಯೋಧರು ಬಿಲ್ಲನ್ನು ಹಿಡಿದು ಬಾಣವನ್ನು ಎಳೆದುಬಿಡುತ್ತಿರುವ ಚಿತ್ರಣವಿದೆ;ನಾಲ್ಕನೇ ಪಟ್ಟಿಕೆಯಲ್ಲಿ ಅಪ್ಸರೆಯರು ಸ್ವರ್ಗಕ್ಕೆ ಕೊಂಡೊ ಯ್ಯುವ ಚಿತ್ರ; ಐದನೇ ಪಟ್ಟಿಕೆಯಲ್ಲಿ 5 ಸಾಲುಗಳ ಶಾಸನವಿದೆ; ಆರನೇ ಹಂತದಲ್ಲಿ ಶಿವಲಿಂಗದೆದುರಿಗೆ ಕೈಮುಗಿದು ನಿಂತಿರುವ ವೀರನ ಚಿತ್ರದ ಪಕ್ಕದಲ್ಲಿ ಚಾಮರಧಾರಿ ಸ್ತ್ರೀ ಚಿತ್ರ, ಮತ್ತೊಂದು ಭಾಗದಲ್ಲಿರುವ ಬಸವನ ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರವಿದ್ದು, ಹಸಿರು ಪಾಚಿ ಕಟ್ಟಿ ಶಿಲ್ಪಗಳು ಅಸ್ಪಷ್ಟವಾಗಿವೆ. ಒಟ್ಟು ಎಂಟು ಸಾಲಿನ ಶಾಸನವಿದೆ.

ಶಾಸನ ಪಾಠ

1. ಸ್ವಸ್ತಿ ಶ್ರೀಮನ್ನಮಹಾ ಮಂಡಳೇಸ್ವರಂ ತೈಲಮದೇವರಸರುನಾನೂ
2. ರುಬಾಡಮಂ ಸುಖದಿಂ ರಾಜ್ಯಂಗೆಯುತ್ತಮಿರೆ ಬೆಣಗಾಮೆ
3. ಯ ಕರಡಿಯ ರಜ್ಜುಗವುಡನ ಮಗ ಕರಡಿಯ ಸಾನ್ತಣ ಅಸ
4. ಗ ಗವುಡನ ತಮ್ಮ ಲೋಕಬ್ಬೆ ಗವುಡಿಯ ಮಗ ಸಾನ್ತಣ ಹು
5. ಲಿಯ ಕೊಂದು ಸುರಲೋಕ ಪ್ರಾಪ್ತನಾದ ಕರುವೂರ
6. ಶ್ರೀ ಭೂದೇವಿಯಾಳುತ್ತಮಿರಲು ಅಸಗ ಗವು
7. ಡ ತನ್ನ ತಮ್ಮ ಸಾನ್ತಣ ಗೆ ಕಲ್ಲನಿರಿಸಿದ ಮಂ
8. ಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ

ಶಾಸನ ಸಾರಾಂಶ : ಹಾನಗಲ್ಲು ಕದಂಬ ಮೂರನೇ ತೈಲಪ (ಕ್ರಿ.ಶ. ಸು. 1150)ನು ಬಾಡನಾನೂರನ್ನು ರಾಜ್ಯ ಭಾರ ಮಾಡುತ್ತಿದ್ದನು. ಇವನು ಮಹಾಮಂಡಳೇಶ್ವರನಾಗಿದ್ದು, ಆ ಸಮಯದಲ್ಲೇ ಕರಡಿ ಕುಟುಂಬದ ಸಾನ್ತಣ ಎಂಬುವನು

ಹುಲಿಯೊಡನೆ ಹೋರಾಡಿ ಮೃತನಾಗುತ್ತಾನೆ. ಇವನು ಕರಡಿಯ ರಜ್ಜುಗೌಡ ಮತ್ತು ಲೋಕಬ್ಬೆಗೌಡತಿಯ ಮಗನೂ, ಅಸಗಗೌಡನ ತಮ್ಮನೂ ಆಗಿದ್ದಾನೆಂದು ಶಾಸನದಿಂದ ತಿಳಿಯುತ್ತದೆ. ಸಾನ್ತಣನ ಸ್ಮಾರಕವಾಗಿ ಅವನ ಅಣ್ಣ ಅಸಗ ಗೌಡಕಲ್ಲನ್ನು ಕರವೂರಿನಲ್ಲಿ ಹಾಕಿಸುತ್ತಾನೆ. ಈ ಪ್ರದೇಶವನ್ನು ಕದಂಬರ ಮೂರನೇ ತೈಲಮನ ಪತ್ನಿ ಶ್ರೀ ಭೂದೇವಿಯು ಆಳುತ್ತಿರುತ್ತಾಳೆ ಎಂಬುದು ಶಾಸನದ ಸಾರಾಂಶ. ಇದರಲ್ಲಿ ಕಾಲದ ಉಲ್ಲೇಖವಿಲ್ಲ. ಲಿಪಿಸ್ವರೂಪ ಮತ್ತು ಕದಂಬತೈಲಮನ ಉಲ್ಲೇಖದಿಂದ ಇದರ ಕಾಲವನ್ನು ಕ್ರಿ.ಶ. ಸು. 1150 ಎನ್ನಬಹುದು.

ಶಾಸನೋಕ್ತ ತೈಲಮನು ಕದಂಬ ಮೂರನೇ ತೈಲಪನೇ!

ಕದಂಬರ ಎರಡನೇ ತೈಲಪನಿಗೆ, ಮಯೂರವರ್ಮ, ಮಲ್ಲಿಕಾರ್ಜುನ ಮತ್ತು ತೈಲಪ ಎಂಬ ಮೂವರು ಮಕ್ಕಳು. ಎರಡನೇ ತೈಲಪ ಪ್ರಖ್ಯಾತನಾಗಿದ್ದ ಬಗ್ಗೆ ಶಾಸನಗಳು ತಿಳಿಸುತ್ತವೆ. ಅವನೊಂದಿಗೆ ಪರಕೀಯ ಆಕ್ರಮಣ (ಹೊಯ್ಸಳ) ಕಾಲದಲ್ಲಿ ಮಲ್ಲಿಕಾರ್ಜುನ ಆಡಳಿತ ನಡೆಸಿದ ಬಗ್ಗೆ ಉಲ್ಲೇಖಗಳಿವೆ. ಎರಡನೇ ತೈಲಪನು 5ನೇ ಅಕ್ಟೋಬರ್ 1130ರಲ್ಲಿ ಮರಣ ಹೊಂದಿದನು. ಆನಂತರ ಮಯೂರ ಮತ್ತು ಮಲ್ಲಿಕಾರ್ಜುನ (1132–1138) ಬನವಾಸಿ ಮತ್ತು ಹಾನಗಲ್ಲುಗಳನ್ನು, ಚಾಲುಕ್ಯರ ಮಹಾಮಂಡಳೇಶ್ವರ ರಾಗಿ ಯಶಸ್ವೀರಾಜ್ಯಾಡಳಿತದಿಂದ ಪ್ರಖ್ಯಾತರಾದ ಬಗ್ಗೆಶಾಸನಗಳು ಉಲ್ಲೇಖಿಸುತ್ತವೆ.

ವಿಷ್ಣುವರ್ಧನನು, ಬನವಾಸಿ ಮತ್ತು ಹಾನಗಲ್ಲುಪ್ರದೇಶವನ್ನು ವಶಪಡಿಸಿಕೊಂಡು ಅವನ ರಾಜ್ಯ ವಿಸ್ತಾರ ಮಾಡಿದನು. ವಿಷ್ಣುವರ್ಧನನ ಕಾಲಾನಂತರ (ಕ್ರಿ.ಶ. 1148) ಹಾಗೂ ಅವನ ಆಳ್ವಿಕೆಯ ಕೊನೆಯ ಕೆಲವು ವರ್ಷಗಳ ಮುಂಚೆ ಪುನಃ ಈ ಪ್ರಾಂತ್ಯವು ಹಾನಗಲ್ಲು ಕದಂಬರ ವಶವಾಯಿತು. ಅದೇ ಸಮಯದಲ್ಲಿ ಕಳಚೂರಿ ಬಿಜ್ಜಳಪಟ್ಟವೇರಿದಲ್ಲದೆ, ಕದಂಬರ ಮೇಲೆ ಕಣ್ಣಿಟ್ಟಿದ್ದನು. ಅವರನ್ನು ಬನವಾಸಿ ಪ್ರಾಂತ್ಯದಲ್ಲಿ ಸ್ಥಳಾಂತರಗೊಳಿಸುತ್ತಿದ್ದನು.

ಮೂರನೇ ತೈಲಪನ ಪ್ರಕಟಿತ ಶಾಸನಗಳು : 1. ವಿದ್ವಾಂಸರುಗಳಾದ ಡಾ. ಆರ್.ಎನ್. ಗುರುವ (ಕಾರವಾರ ಜಿಲ್ಲೆಯ ಶಾಸನಗಳು) ಮತ್ತು ಡಾ. ಚನ್ನಕ್ಕಪಾವಟೆ (ಹಾನಗಲ್ಲ ಕದಂಬರು ಪುಟ. 68) ಇವರುಗಳು, ಇಂದ್ರೂರ ಗ್ರಾಮದ ಕ್ರಿ.ಶ. 1120ರ ಜನವರಿ ಮತ್ತು ಫೆಬ್ರವರಿಯ ಎರಡೂಶಾಸನಗಳನ್ನು ಉಲ್ಲೇಖಿಸುತ್ತಾರೆ. ಆದರೆ ಮೂರನೇ ತೈಲಪನ ಕಾಲ ಕ್ರಿ.ಶ. 1147–1152 ಎಂದು ವಿದ್ವಾಂಸರು ಗುರುತಿಸಿದ್ದಾರೆ. ಆದ್ದರಿಂದ ಕ್ರಿ.ಶ. 1120ರ ಕಾಲದ ಎರಡುಶಾಸನಗಳು ಕದಂಬ ಎರಡನೇ ತೈಲಪನ ಶಾಸನಗಳಾಗಿವೆ. ಈ ಸಮಯದಲ್ಲಿ ತೈಲಪ ಮತ್ತು ಅವನ ತಮ್ಮ ಮಲ್ಲಿಕಾರ್ಜುನರು ಹಾನಗಲ್ಲು ಬನವಾಸಿ ಪ್ರದೇಶದಲ್ಲಿ ಮಹಾಮಂಡಳೇಶ್ವರರಾಗಿ ಪ್ರಬಲರಾಗಿದ್ದರು. ಮೇಲೆ ಉಲ್ಲೇಖಿಸಿದ ಶಾಸನಗಳು ಎರಡನೇ ತೈಲಪನ ಕಾಲದ್ದಾಗಿರ ಬೇಕು. 2. ಖ್ಯಾತ ವಿದ್ವಾಂಸರಾದ ಬಾ.ರಾ. ಗೋಪಾಲ್‌ರವರು Karnataka Inscriptions Series Vol. 5ರಲ್ಲಿ ಹಾನಗಲ್ಲ ಕದಂಬರ ಶಾಸನಗಳಲ್ಲಿ ಹೇಳುವಂತೆ Kondali Siddapur Taluk ಉತ್ತರ ಕನ್ನಡ ಜಿಲ್ಲೆಯ ಈಶ್ವರ ದೇವಾಲಯದ ಮುಂದಿರುವ ಎರಡು ವೀರಗಲ್ಲುಗಳನ್ನು (ನಂ. 54 ಮತ್ತು 55) ತಿಳಿಸುತ್ತಾರೆ. ಅವುಗಳ ಕಾಲ ಕ್ರಿ.ಶ. 1148 ನವೆಂಬರ್ 10 ಮತ್ತು ನವೆಂಬರ್ 12 ಎಂದು ಎರಡುದಿನಗಳ ವ್ಯತ್ಯಾಸದಲ್ಲಿ ಹಾಕಿಸಿರುವ ವೀರಗಲ್ಲುಗಳಲ್ಲಿ ಕಾಲ ವನ್ನು ನಮೂದಿಸಿದೆ. ಈ ಎರಡು ಶಾಸನಗಳಲ್ಲಿ 'ತೈಲಹದೇವ' ಮತ್ತು 'ವೆಯಹದೇವ' (ತೆಯ್ಲಹದೇವ) ಎಂದು ಶಾಸನೋಕ್ತ ಹೆಸರುಗಳಿವೆ. ಈ ಎರಡು ಶಾಸನಗಳನ್ನು ಕದಂಬ ಮೂರನೇ ತೈಲಪನಿಗೆ ಸಂಬಂಧಿಸಿದ್ದೆಂದು ತಿಳಿಸುತ್ತಾರೆ.

ಉಪಲಬ್ದವಾದ ಶಾಸನವೂ ಮೂರನೇ ತೈಲಪನದ್ದಾಗಿದೆ :

1. ಈ ಶಾಸನದಲ್ಲಿನ ಲಿಪಿ, ಮಹಾಮಂಡಳೇಶ್ವರ, ತೈಲಪ ಎಂಬ ಶಬ್ದ ಇವುಗಳಿಂದ ಕದಂಬ ಮೂರನೇ ತೈಲಪನಿಗೆ ಹೋಲಿಸಿದೆ; 2. ಬಾ.ರಾ. ಗೋಪಾಲ್‌ರವರು ತಿಳಿಸಿದ 2 ಶಾಸನಗಳಿಗಿಂತ ನಂತರ ಕಾಲದ್ದೆಂದು ಊಹಿಸಿದೆ. ಕಾರಣ ಶಾಸನದಲ್ಲಿ ಮಹಾಮಂಡಳೇಶ್ವರ ಎಂಬುದು ಬಿಟ್ಟರೆ ವಂಶಪಾರಂಪರ್ಯವಾದ ಬಿರುದಾವಳಿಗಳಿಲ್ಲ ಹಾಗೂ ಲಿಪಿ ಕೂಡ ಸು. ಕ್ರಿ.ಶ. 1150ರದ್ದಾಗಿದೆ ಎಂದು ಅಂದಾಜುಮಾಡಿದೆ; 3. 'ತೈಲಹದೇವ', 'ವೆಯಹದೇವ' ಮತ್ತು ತೈಲಮನೇ ಕದಂಬ ಮೂರನೇ ತೈಲಪನೆನ್ನಬಹುದು; 4. ವಿದ್ವಾಂಸರು ಇವನ ಕಾಲವನ್ನು ಕ್ರಿ.ಶ. ಸುಮಾರು 1147–1152 ಎಂಬುದಾಗಿ ಗುರುತಿಸಿದ್ದಾರೆ. ಈ ಸಮಯದಲ್ಲಿ ನಾಗರಖಂಡ 7ನ್ನು ಕದಂಬ ಶಾಖೆಯ ಬೊಪ್ಪರಸನ ಮಗ ಸೋಯಿದೇವ ಬನವಾಸಿ

ಮತ್ತು ಹಾನಗಲ್ಲು ಪ್ರದೇಶದಲ್ಲಿ ಮಹಾಮಂಡಳೇಶ್ವರನಾಗಿದ್ದಾನೆಂದುಶಾಸನಗಳು ತಿಳಿಸುತ್ತವೆ. ಇವನೊಂದಿಗೆ ಬಿಜ್ಜಳನ ಅಳಿಯ ಬೊಮ್ಮರಸನೂ ಇವನಿಗೆ ಸಹಾಯಕನಾಗಿರುತ್ತಾನೆ. ಇಂತಹ ಒತ್ತಡದಲ್ಲಿದ್ದೂ, ಮಹಾಮಂಡಳೇಶ್ವರನಾಗಿ ನಾನೂರು ಬಾಡಪ್ರದೇಶವನ್ನು ತೈಲಮ ದೇವನು ನೋಡಿಕೊಳ್ಳುತ್ತಿದ್ದನೆನ್ನಬಹುದು; 5. ತೈಲಮದೇವನು ಮಹಾಮಂಡಳೇಶ್ವರನಾಗಿ ನಾನೂರು ಬಾಡವನ್ನು ಆಳುತ್ತಿದ್ದ ಬಗ್ಗೆ ಹಾಗೂ ಅವನಪತ್ನಿ ಶ್ರೀ ಭೂದೇವಿ ಕರವೂರ ಪ್ರದೇಶವನ್ನು ಆಳುತ್ತಿದ್ದಳೆಂದುಪ್ರಸ್ತುತ ಶಾಸನವು ತಿಳಿಸುತ್ತದೆ; 6. ಶಾಸನೋಕ್ತ ಸ್ಥಳಗಳಾದ 'ಬಾಡ', 'ಕರವೂರು', 'ಬೆಣಗಾಮೆ', ಊರುಗಳು ಹಾನಗಲ್ಲು 500ರ ವ್ಯಾಪ್ತಿಯಲ್ಲಿದ್ದುದಲ್ಲದೆ, ಪ್ರಸ್ತುತ ಶಾಸನವು ದೊರೆತ ಸ್ಥಳದ ಸುತ್ತಮುತ್ತಲಿನ ಪ್ರದೇಶಗಳೇ ಆಗಿವೆ.

ಶಾಸನೋಕ್ತ ಸ್ಥಳನಾಮಗಳು

ಬಾಡ : ಬಾಡ ಎಂಬುದು ಪಡುವಣ ಮೂಲದಿಂದ ಬಂದಿರಬೇಕು ಎಂಬುದು ಶಂಭಾರವರ ಹೇಳಿಕೆ. ಕುಮಟಾ ಸಮೀಪ ಬಾಡ ಎಂಬ ಊರು ಇದೆ. ಧಾರವಾಡ ಜಿಲ್ಲಾ ಶಿಗ್ಗಾಂವಿ ತಾಲ್ಲೂಕಿನ ಬಾಡ ಪ್ರದೇಶವು ರಾಷ್ಟ್ರಕೂಟರ ಕಾಲದಿಂದಲೇ ಶಾಸನೋಕ್ತವಾಗಿ ಹೆಸರು ಪಡೆದಿದೆ. ಇನ್ನು ಹಳೇ ಬಾಡವು ದಾಸ ಶ್ರೇಷ್ಠ ಕನಕದಾಸರ ಜನ್ಮಸ್ಥಳವಾಗಿದೆ. ಬಹುಶಃ ಶಾಸನೋಕ್ತ ಬಾಡವು ಶಿಗ್ಗಾಂವಿ ತಾಲೂಕಿನದೇ ಪ್ರದೇಶವಾಗಿರಬೇಕು (ಶಿಗ್ಗಾಂವಿ ಶಾಸನ 1055).

ಕರವೂರ : ಇದು ಶಿರ್ಸಿ ತಾಲ್ಲೂಕಿನ ದೇವನಹಳ್ಳಿ ಸಮೀಪದ ಸುರಗುಪ್ಪಾ ಗ್ರಾಮದಲ್ಲಿದ್ದು ಈಗಲೂ ಅದೇ ಹೆಸರಿನಲ್ಲಿದೆ.

ಬೆಣಗಾಮೆ : ಇದು ಶಿರ್ಸಿ ತಾಲ್ಲೂಕಿನ ದೇವನಹಳ್ಳಿ ಸಮೀಪದಲ್ಲಿದ್ದು ಬೇಣಗಾವ್ ಆಗಿದೆ. ಇಲ್ಲಿಂದ ಯಾಣಕ್ಕೆ 8 ಕಿ.ಮೀ. ದೂರವಿದೆ.

ಕರಡಿಕಲ್ಲಿನ ಕದಂಬರು

ಶಾಸನೋಕ್ತ ಕರಡಿ ಎಂಬ ಪದವನ್ನು ಕರಡಿಕಲ್ಲಿನ ಕದಂಬರಿಗೆ ಸಮೀಕರಿಸಬಹುದಾಗಿದೆ. ರಾಯಚೂರು ಜಿಲ್ಲಾ ಕರಡಿಕಲ್ಲಿನ ಕದಂಬರು ಕದಂಬ ಶಾಖೆಯವರೆಂದು ತಿಳಿದದ್ದೇ ಆಗಿದೆ. ಶಾಸನೋಕ್ತ ಕರಡಿ ರಜ್ಜುಗವುಡ, ಕರಡಿಯ ಸಾನ್ತಣ, ಕರಡಿಯ ಅಸಗಗವುಡ ಎಂಬುವರು ಕರಡಿಕಲ್ಲಿನ ಕದಂಬ ರಾಗಿದ್ದು, ಹಾನಗಲ್ಲ ಕದಂಬ ತೈಲಪನಿಗೆ ಬಂಧುಗಳೋ ಅಥವಾ ಸಹಾಯಕರಾಗಿದ್ದವರಾಗಿರಬೇಕು. ಈ ಮನೆತನದ ಹೆಸರು ಎಲ್ಲೂ ಕಾಣಬರುವುದಿಲ್ಲ. ಈ ಹೆಸರಿನ ಸ್ಥಳನಾಮ ಹಾನಗಲ್ಲು ಹಾಗೂ ಬನವಾಸಿ ಪ್ರದೇಶಗಳ ವ್ಯಾಪ್ತಿಯಲ್ಲಿ ಕಾಣಬರುವುದಿಲ್ಲ. ಇದರಿಂದ ಶಾಸನೋಕ್ತ ವ್ಯಕ್ತಿಗಳು ಕರಡಿಕಲ್ಲಿನವರೇ ಆಗಿದ್ದಾರೆನ್ನಬಹುದು.

ರಜ್ಜುಗೌಡ

ಹೆಂಡತಿ ಲೋಕಬೇಗೌಡಿ

ಅಸಗಗೌಡ — ಸಾನ್ತಣಗೌಡ

ಹಾನಗಲ್ಲು ಕದಂಬರು

ಪ್ರಾಚೀನ ಕರ್ನಾಟಕದ ಪ್ರಖ್ಯಾತ ಅರಸು ಮನೆತನ ಬನವಾಸಿ ಕದಂಬರು. 'ವೈಜಯಂತಿ', 'ಜಯಂತಿಪುರ' ಎಂಬ ಪರ್ಯಾಯ ನಾಮದ ಬನವಾಸಿ ಪ್ರದೇಶವನ್ನು ರಾಜಧಾನಿ ಯನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಬನವಾಸಿ ಕದಂಬರ ಆಳ್ವಿಕೆಯು ಬಾದಾಮಿ ಚಾಲುಕ್ಯರ ಯಶೋವೃದ್ಧಿಯಿಂದ ಅಳಿದು ಹೋದರೂ, ಪ್ರಾಚೀನ ಕದಂಬರದೇ ಎಂದು ಹೇಳಿಕೊಂಡು ಕೆಲವು ಶಾಖೆಗಳು ದಕ್ಷಿಣ ಭಾರತದ ಬೇರೆ ಬೇರೆ ಭಾಗಗಳಲ್ಲಿ ಆಳುತ್ತಿದ್ದರು. ಇವರಲ್ಲಿ ಹಾನಗಲ್ಲು ಕದಂಬರು, ಗೋವೆ ಕದಂಬರು ಪ್ರಮುಖರು. ಇವರು ಕಲ್ಯಾಣದ ಚಾಲುಕ್ಯರ ಮಹಾಮಂಡಳೇಶ್ವರರಾಗಿ ದೀರ್ಘಕಾಲ ರಾಜ್ಯವಾಳಿದರು ಹಾಗೆಯೇ ಇತರ ಕಡೆಗಳಲ್ಲಿ ಸುಮಾರು ಹದಿಮೂರು ಕದಂಬ ಶಾಖೆಗಳಲ್ಲಿ ರಾಜ್ಯವಾಳಿದರೆಂದು ತಿಳಿದಿದೆ.

ಮಹಾಮಂಡಳೇಶ್ವರರು : ಹಾನಗಲ್ಲ ಕದಂಬರು ಬೆಳಕಿಗೆ ಬಂದುದು ಕಲ್ಯಾಣ ಚಾಲುಕ್ಯ ಚಕ್ರವರ್ತಿಗಳ ಕಾಲದಲ್ಲಿ. ಕದಂಬರು ಚಾಲುಕ್ಯರ ಮಹಾಮಂಡಳೇಶ್ವರರಾಗಿದ್ದರು. ವಿಸ್ತಾರ ಸಾಮ್ರಾಜ್ಯದ ಆಡಳಿತವನ್ನು ಚಕ್ರವರ್ತಿಯೊಬ್ಬನೇ ರಾಜ್ಯಭಾರ ಮಾಡುವುದು ಅಸಾಧ್ಯವಾದ್ದರಿಂದ ಆಡಳಿತ ಅನುಕೂಲಕ್ಕಾಗಿ ಮಂಡಳಗಳನ್ನು ರಚಿಸಿ, ಮಂಡಳೇಶ್ವರರಿಗೆ ಅವುಗಳ ಮೇಲ್ವಿಚಾರಣೆ ಮಾಡಲು ಅವಕಾಶ ಮಾಡಿಕೊಡು ತ್ತಿದ್ದರು. ಚಕ್ರವರ್ತಿಗೆ ಅಧೀನರಾಗಿ ನಡೆಯುತ್ತಿದ್ದರೂ, ತಮ್ಮದೇ ಆದ ಸ್ವಾತಂತ್ರ್ಯವನ್ನು ಅಳವಡಿಸಿಕೊಂಡಿದ್ದರು. ಹಾನಗಲ್ಲ ಐನೂರು ಪ್ರದೇಶಗಳ ಮೇಲೆ ಪ್ರಭುತ್ವವಿರಿಸಿದ ಇವರುಪರಂಪರಾಗತ ಮಹಾಮಂಡಲೇಶ್ವರಾಗಿದ್ದರು. ಇವರದ್ದು ಉಭಯ ಸ್ವಾಮ್ಯದ ಆಡಳಿತ. ಅಂದರೆ ಚಾಲುಕ್ಯರಿಗೂ ಮತ್ತು ಗೋವೆಯ ಕದಂಬರರಿಗೂ ಮಂಡಳೇಶ್ವರಾಗಿದ್ದರು.

ವ್ಯಾಪ್ತಿ : ಧಾರವಾಡ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ದಕ್ಷಿಣದ ಕೆಲವು ಗ್ರಾಮಗಳು, ಹಾವೇರಿ ತಾಲೂಕಿನ ಪಶ್ಚಿಮ ದಕ್ಷಿಣಕ್ಕಿರುವ ಕೆಲವು ಗ್ರಾಮ, ರಾಣೆಬೆನ್ನೂರು ತಾಲೂಕಿನ ಒಂದೆರಡು ಗ್ರಾಮ, ಉ.ಕ. ಜಿಲ್ಲೆಯ ಮುಂಡಗೋಡ ತಾಲೂಕಿನ ಕೆಲವು ಗ್ರಾಮ, ಕುಂದಗೋಳ ತಾಲ್ಲೂಕಿನ ದಕ್ಷಿಣ ಭಾಗ, ಸಿದ್ಧಾಪುರ ತಾಲೂಕಿನ ಕೆಲವು ಭಾಗಗಳು, ಶಿವಮೊಗ್ಗ ಜಿಲ್ಲಾ ಸೊರಬ ತಾಲೂಕಿನ ಕೆಲವು ಗ್ರಾಮ, ಹಾನಗಲ್ಲು ತಾಲ್ಲೂಕಿನ ಹೆಚ್ಚಿನ ಸಂಖ್ಯೆ ಗ್ರಾಮಗಳು ಹಾನಗಲ್ಲ ಐನೂರರ ವ್ಯಾಪ್ತಿಯಾಗಿವೆ. ಹಾನಗಲ್ಲು ಕದಂಬರ ಲಾಂಛನ ಸಿಂಹ; ರಾಜವಾದ್ಯವೂ ಪೆರ್ಮಟ್ಟಿ; ಧ್ವಜ ಶಾಖಾಚರೇಂದ್ರ; ಕುಲ ದೇವತೆ ಜಯಂತಿ ಮಧುಕೇಶ್ವರ.

ಬನವಾಸಿ ಪನ್ನಿರ್ಚ್ಛಾಸಿರದ ಹಿರಿಯ ಘಟಕದಲ್ಲಿ ಹಾನಗಲ್ಲು ಐನೂರು ಒಂದು ಕಿರಿಯ ಘಟಕ. ಹಾನಗಲ್ಲನ್ನು ಕೇಂದ್ರ ಸ್ಥಾನವಾಗಿಸಿ 500 ಗ್ರಾಮಗಳ ಆಡಳಿತವನ್ನು ಕದಂಬ ಅರಸರು, ಕ್ರಿ.ಶ. 1068 ರಿಂದ ಕ್ರಿ.ಶ. 1203ರ ವರೆಗೆ ಚಕ್ರವರ್ತಿಗಳ ಮಹಾಮಂಡಲೀಕರಾಗಿ ತುಂಬ ನಿಷ್ಠೆಯಿಂದ ಸೇವೆಗೈದವರಾಗಿದ್ದಾರೆ.

ಶಾಸನದ ಮುಖ್ಯಾಂಶಗಳು : ಕದಂಬ ಮೂರನೇ ತೈಲಪ ಮಹಾಮಂಡಳೇಶ್ವರನಾದ ಬಗ್ಗೆ; ಬಾಡನಾನೂರು ಎಂಬ ಪ್ರದೇಶ ಆಳುತ್ತಿದ್ದ ಬಗ್ಗೆ; ಅವನ ಪತ್ನಿ ಶ್ರೀ ಭೂದೇವಿ ಎಂಬುದೂ ಹಾಗೂ ಅವಳು ಕರವೂರ ಪ್ರದೇಶ ಆಳುತ್ತಿದ್ದ ಬಗ್ಗೆ; ತೈಲಪನಿಗೆ, ತೈಲಹದೇವ, ವೆಯಹ (ತೈಯ್ಲಹದೆ) ದೇವ ಎಂಬ ಹೆಸರಿನೊಂದಿಗೆ ತೈಲಮ ಎಂಬ ಹೆಸರೂ ಇದ್ದುದು ಶಾಸನದಿಂದ ತಿಳಿಯುತ್ತದೆ; ಕರಡಿ ಕಲ್ಲಿನ ಕದಂಬರ ಸಂಬಂಧ ಶಾಸನದಿಂದ ತಿಳಿಯುತ್ತದೆ. ಇದು ಕದಂಬರ ತೈಲಪನ ಕುರಿತಾದ ಮೂರನೆ ಶಾಸನ (ಉಳಿದೆರಡು ಬಾ.ರಾ. ಗೋಪಾಲ್ ತಿಳಿಸಿರುವುದಾಗಿದೆ).

(ಕೃತಜ್ಞತೆಗಳು : ಕ್ಷೇತ್ರ ಕಾರ್ಯದಲ್ಲಿ ಹಾಗೂ ಎಲ್ಲಾ ರೀತಿಯಲ್ಲಿ ಸಹಕಾರ ನೀಡಿದ ಈಶ್ವರ ಸುಬ್ರಾಯ ಹೆಗಡೆ ಬೆಣಗಾಂವ್ ಮತ್ತು ಮಿತ್ರ ರಘುವೀರ ಹೆಗಡೆ ಇವರಿಗೆ ನನ್ನ ನಮಸ್ಕಾರಗಳು)

ಆಧಾರಸೂಚಿ

1. ಹಾನಗಲ್ಲ ಕದಂಬರು : ಡಾ. ಚನ್ನಕ್ಕ ಪಾವಟೆ.
2. ಕಾರವಾರ ಜಿಲ್ಲೆಯ ಶಾಸನಗಳು : ಡಾ. ಗುರುವ ಆರ್.ಎನ್.
3. ನಾಗರಖಂಡ 70 ಒಂದು ಅಧ್ಯಯನ : ಡಾ. ಭೋಜರಾಜ ಪಾಟೀಲ
4. ದಿ ಕದಂಬ ಕುಲ : ಮೋರಾಸ್

❑

ಸ್ವರ್ಣವಲ್ಲೀ ಮಠಕ್ಕೆ ಕೆಳದಿ ನಾಯಕರ ಧರ್ಮ

– ಡಾ. ಎ.ಕೆ. ಶಾಸ್ತ್ರಿ

ವಿಜಯನಗರದ ಸಾಮಂತರಲ್ಲಿ ಪ್ರಬಲರೆನಿಸಿದ ಕೆಳದಿಯನಾಯಕರು ಸಾಮ್ರಾಜ್ಯದ ಪತನಾನಂತರ, ಕರ್ನಾಟಕದ ರಾಜಕೀಯ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವಹಿಸಿದರು. ವಿಜಯನಗರ ಸಾಮ್ರಾಜ್ಯದ ಭವ್ಯ ಪರಂಪರೆಯನ್ನು ಮುಂದುವರಿಸುವಲ್ಲಿ ಕೆಳದಿಯ ನಾಯಕರು ಯಶಸ್ವಿ ಯಾದರು. ಈಗ ಕೆಳದಿ ಶಿವಮೊಗ್ಗೆ ಜಿಲ್ಲೆಯ ಸಾಗರ ತಾಲೂಕಿನ ಒಂದು ಚಿಕ್ಕ ಗ್ರಾಮ. ಆದರೆ ಪೂರ್ವದಲ್ಲಿ ಅದು ಕೆಳದಿ ನೃಪರ ರಾಜಧಾನಿ. ಸುಮಾರು ಎರಡೂವರೆಶತಮಾನಗಳ ಕಾಲ (ಕ್ರಿ.ಶ. 1499–ಕ್ರಿ.ಶ1763) ಕೆಳದಿನೃಪರು ಕರ್ನಾಟಕ ಮಧ್ಯ–ಪಶ್ಚಿಮ ಭಾಗದ ಒಡೆಯರಾಗಿದ್ದರು. ಕೆಳದಿ ರಾಜ್ಯವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಈಗಿನ ಶಿವಮೊಗ್ಗೆ, ಮಂಗಳೂರು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳ ಬಹುಭಾಗ ಕಾರವಾರ, ಧಾರವಾಡ, ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗ ಮತ್ತು ಕೇರಳದ ಸ್ವಲ್ಪ ಭಾಗಗಳನ್ನು ಒಳಗೊಂಡಿತ್ತು. ಕೆಳದಿಯ ಅರಸುಗಳು ಮುಸಲ್ಮಾನರ ದಾಳಿಗಳನ್ನು ಎದುರಿಸಲು ಮತ್ತು ಅನುಕೂಲಕ್ಕೆ ತಕ್ಕಂತೆ ಕ್ರಮವಾಗಿ ಕೆಳದಿ, ಇಕ್ಕೇರಿ, ಬಿದನೂರು ಮತ್ತು ಭುವನಗಿರಿದುರ್ಗ (ಕವಲೆದುರ್ಗ) ಗಳೆಂಬ ರಾಜಧಾನಿಗಳಿಂದ ರಾಜ್ಯವನ್ನಾಳಿದರು1. ಕೆಳದಿಯನಾಯಕರು ವೀರಶೈವ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತಗಳನ್ನುಪ್ರತಿಪಾದಿಸುವ ಗುರುಗಳನ್ನು ಅವರ ಮಠಗಳನ್ನು ಮತ್ತುಪ್ರಜೆಗಳನ್ನು ಗೌರವಿಸಿ, ಪೋಷಿಸಿದರೆಂಬುದು ಐತಿಹಾಸಿಕ ಸತ್ಯ. ಜೈನರ ಬಸದಿ ಮತ್ತು ಮುಸಲ್ಮಾನರ ಮಸೀದಿಗಳಿಗೂನಾಯಕರು ದಾನ–ದತ್ತಿ ನೀಡಿದರು, ಶೃಂಗೇರಿ ಮಠದ ಜಗದ್ಗುರುಗಳನ್ನು ಗೌರವಿಸಿ, ಮಠಕ್ಕೆ ದಾನ ದತ್ತಿ ನೀಡಿ, ಮಠವನ್ನು ರಕ್ಷಿಸಿದ್ದು ಬಹು ಪ್ರಖ್ಯಾತ. ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸ್ವರ್ಣವಲ್ಲಿ ಮಠಕ್ಕೂ ಕೆಳದಿ ನಾಯಕರು ಭೂದಾನ ಮಾಡಿದ್ದು ನೆನಪಿಡಬೇಕಾದ ಸಂಗತಿ ಮತ್ತುಪ್ರಸ್ತುತ ಲೇಖನ ಈ ವಿಷಯಕ್ಕೆ ಸಂಬಂಧಿಸಿದುದರಿಂದ ಇನ್ನುಳಿದ ವಿಷಯಗಳ ವಿವರಣೆ ಅನಗತ್ಯ.

ಕಾಶಿಯಲ್ಲಿ ಆದಿಶಂಕರರ ಸಮ್ಮುಖದಲ್ಲಿ ಅವರ ಶಿಷ್ಯರಲೊಬ್ಬರಾದ ಭಾಸ್ಕರೇಂದ್ರ ಸರಸ್ವತಿಗಳಿಂದ ಗುಣನಿಧಿಗಳು ಸನ್ಯಾಸ ದೀಕ್ಷೇ ಪಡೆದು ಕಾಶಿಯಲ್ಲ ಪ್ರಥಮ ಮಠ ಸ್ಥಾಪನೆಯಾಗಿ, ಮುಂದೆ ಕ್ರಮೇಣ ಉಜ್ಜಯಿನಿ, ಗೋಕರ್ಣ, ಕಡೆತೋಕೆ, ಸಹಸ್ರಲಿಂಗ ಮತ್ತು ಕ್ರಿ.ಶ. 1556 ರಲ್ಲಿ ಇಂದಿನ ಸ್ವರ್ಣವಲ್ಲಿಗೆ ಮಠ ಸ್ಥಳಾಂತರಗೊಂಡಿದ್ದು ಶ್ರೀಮಠದಲ್ಲಿಯ ಚಾರಿತ್ರಿಕ ದಾಖಲೆಗಳಿಂದ ಸ್ಪಷ್ಟವಾಗುತ್ತದೆ3.ಪ್ರತ್ಯಕ್ಷವಾಗಿ ಸ್ವರ್ಣವಲ್ಲಿ ಮಠ ಸೋದೆ (ಸ್ವಾದಿ) ರಾಜ್ಯದಲ್ಲಿತ್ತಾದರೂ, ಪರೋಕ್ಷವಾಗಿ ಈ ಸ್ಥಳ ಕೆಲವೊಮ್ಮೆ ಕೆಳದಿ ನಾಯಕರ ನಿಯಂತ್ರಣಕ್ಕೊಳಪಟ್ಟಂತೆ ತೊರುತ್ತವೆ.ಪ್ರಸ್ತುತ ಲೇಖನವು 'ಸ್ವರ್ಣವಲ್ಲಿ ಮಠಕ್ಕೆ ಕೆಳದಿನಾಯಕರ ಧರ್ಮ' ಎಂಬುದಕ್ಕೆ ಸೀಮಿತವಾಗಿರುವದರಿಂದ, ಈ ವಿಷಯಕ್ಕೆ ಸಂಬಂಧಿಸಿ ಸ್ವರ್ಣವಲ್ಲಿ ಮಠದಲ್ಲಿ ದೊರೆತ ಕೆಲವು ಚಾರಿತ್ರಿಕ ದಾಖಲೆಗಳ ಪರಿಚಯ ಇಂತಿದೆ.

ಒಟ್ಟು ಮೂರು ದಾಖಲೆಗಳು [illegible]ದ್ದು, ಅವು ಕ್ರಮವಾಗಿ ವೆಂಕ[illegible]ಯಕ ಮತ್ತು ಚೆನ್ನಮ್ಮಾಜಿಯವರಿಗೆ ಸಂಬಂಧಿಸಿದವು.

ಮೊದಲನೆಯದು ವೆಂಕಟಪ್ಪನಾಯಕರ ಕಾಲಕ್ಕೆ ಸೇರಿದ್ದು. ದೊಡ್ಡ ಸಂಕಣ್ಣ ನಾಯಕರ ಪುತ್ರ, ಹಿರಿಯರ ವೆಂಕಟಪ್ಪನಾಯಕರು (ಕ್ರಿ.ಶ.1582–1629) ಕೆಳದಿಅರಸು ಮನೆತನದ ಘನವಂತ ದೊರೆಗಳು. ವಿಜಯನಗರ ಸಮ್ರಾಟರ ಹಿಡಿತದಿಂದ ಪಾರಾಗಿ, ತಮ್ಮ ಮನೆತನದಲ್ಲಿಯೇ ಸ್ವತಂತ್ರ ದೊರೆಯೆನಿಸಿದ ಹಿರಿಯ ವೆಂಕಟಪ್ಪನಾಯಕರುಶ್ರೇಷ್ಠ ಕವಿಗಳೂ ವಿದ್ಯಾಪೋಷಕರೂ ಆಗಿದ್ದರು. ಸರ್ವಮತಧರ್ಮಗಳನ್ನು ಸಮಾನವಾಗಿ ಪೋಷಿಸಿದ ಕೀರ್ತಿ ಹಿರಿಯ ವೆಂಕಟಪ್ಪನಾಯಕರದು ಸ್ವರ್ಣವಲ್ಲಿ ಮಠದ ಗರುಪರಂಪರೆಯಲ್ಲಿ 36ನೆಯ ವರಾದ ಶ್ರೀರಾಮಚಂದ್ರ ಸರಸ್ವತಿಗಳು (ಕ್ರಿ.ಶ. 1620–1642) ವೆಂಕಟಪ್ಪ ನಾಯಕರ ಸಮಕಾಲೀನರು.

ಕ್ರಿ.ಶ. 1542, ರೌದ್ರಿ ಸಂವತ್ಸರದ ಚೈತ್ರ ಬ. 3 (6–4–1620) ರವಿವಾರದಂದು, ಚಂದಾವರ (ಹೊನ್ನಾವರ ತಾಲೂಕ್) ಹೋಬಳಿಯೊಳಗಿನ ಅಗಸೆ ಮಾಡಗೆರೆ ಗ್ರಾಮಗಳೊಳಗಿನ ಸ್ಥಳವನ್ನು ಪೂರ್ವಮರ್ಯಾದಿಯಂತೆ ಒಪ್ಪಿಕೊಂಡು 339 ವರಹ ಮತ್ತು ಹಣಗಳನ್ನು ಕಾಲಂಪ್ರತಿ (ಪ್ರತಿವರ್ಷ) ಅರಮನೆಗೆ (ಕೆಳದಿ ಸರಕಾರಕ್ಕೆ) ಸಲ್ಲಿಸುತ್ತ, ಧರ್ಮನಡೆಸುವಂತೆ, ಹೊನ್ನೆಹಳ್ಳಿ (ಸ್ವರ್ಣವಲ್ಲಿ) ರಾಮಚಂದ್ರ ಸರಸ್ವತಿಗಳಿಗೆ ವೆಂಕಟಪ್ಪನಾಯಕರು ಪಟ್ಟೆ ಬರಿಸಿಕೊಟ್ಟರು. ಆರಮನೆಗೆ ನೀಡುವ ಶಿಸ್ತಿನ ವಿವರವನ್ನು ಪ್ರಸ್ತುತ ಪಟ್ಟೆಯಲ್ಲಿ ವಿವರಿಸಲಾಗಿದೆ. ಗೋಕರ್ಣದ ಮಹಾಬಲೇಶ್ವರ ದೇವರಿಗೆ ಗುರುಗಳ ಭಿಕ್ಷೆಗೆ, ಮಠಗಳಿಗೆ ಮಾಡಗೆರೆ ಮೇಗಣ ಮಠದ ಗೋಪಿನಾಥ ದೇವರಿಗೆ, ಕೆಳಮಠದ ನರಸಿಂಹ ದೇವರಿಗೆ, ವೇದೇಶ್ವರ ದೇವರಿಗೆ ಮತ್ತು ಅಗಸೆ ಕಾಮೇಶ್ವರ ದೇವರಿಗೆ ಸಂಬಂಧಿಸಿದ ಧರ್ಮದ ವಿವರವೂ ಸದರಿ ಪಟ್ಟೆ ಪ್ರತಿಯಲ್ಲಿ ನಮೂದಿಸಲಾಗಿದೆ.ನಷ್ಟಕ್ಕೆ ಬಿಟ್ಟ ಅಕ್ಕಿಯನ್ನು ಉಲ್ಲೇಖಿಸಲಾಗಿದೆ. ಕ್ರಿ.ಶ. 1690ರ ಪೂರ್ವದಲ್ಲಿಯೇ ಅಗಸೆ ಮೂಡಗೆರೆ ಗ್ರಾಮದೊಳಗಿನ ಸ್ಥಳವು ಸ್ವರ್ಣವಲ್ಲಿ ಮಹಾಸಂಸ್ಥಾನಕ್ಕೆ, ಬಹುಶಃ ಅರ್ಥಮಾನ್ಯವಾಗಿ ದೊರೆಕಿತ್ತೆಂದು ಪ್ರಸ್ತುತ ಪಟ್ಟೆ ಪ್ರತಿಯಿಂದ ಖಚಿತವಾಗುತ್ತದೆ.

ವೆಂಕಟಪ್ಪ ನಾಯಕರು ಶೃಂಗೇರಿಯ ಪ್ರಥಮ ಶ್ರೀ ಅಭಿನವ ನರಸಿಂಹ ಭಾರತೀ (ಕ್ರಿ.ಶ. 1599–1622) ಸ್ವಾಮಿಗಳಿಗಾಗಿ ಶೃಂಗೇರಿಯಲ್ಲಿಯ ಮಠದ ಕಟ್ಟಡವನ್ನು ವಿಸ್ತರಿಸಿದರು. ಇದಲ್ಲದೆ, ಅಗ್ರಹಾರವನ್ನು ನಿರ್ಮಿಸಿ, 50 ಪಗೋಡಗಳಿಗಿಂತಲೂ ಹೆಚ್ಚು ಉತ್ಪತ್ತಿಯುಳ್ಳ ಮುಕ್ಕರನಾಡಿನ ಭೂಮಿಯನ್ನು ದಾನಮಾಡಿದರು. ಈ ಸತ್ಕಾರ್ಯಕ್ಕಾಗಿ,ನಾಯಕರಿಗೆ "ಶೃಂಗೇರಿ ಪ್ರತಿಷ್ಠಾಪಕ" ಮತ್ತು "ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ" ಎಂಬ ಬಿರುದುಗಳೂ ಜಗದ್ಗುರುಗಳಿಂದ ದಯಪಾಲಿಸಲ್ಪಟ್ಟವು, ಎಂಬೆಲ್ಲ ಸಂಗತಿ ಗಳನ್ನು ಪ್ರಸ್ತುತ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.5

ಎರಡನೇ ದಾಖಲೆ ಬಸವಪ್ಪ ನಾಯಕರ ಕಾಲದ್ದುಶಾ.ಶ. 1590ನೆಯ ಕೀಲಕ ಸಂವತ್ಸರದ ಚೈತ್ರ ಶು.5 (2–3–1668), ಶನಿವಾರದಂದು ಚಂದಾವರ ಸೀಮೆಯೊಳಗಿನ ಅಗಸೆ–ಮೂಡಗೆರೆ ಗ್ರಾಮಗಳನ್ನು ಕೆಳದಿ ಬಸವಪ್ಪ ನಾಯಕರು ಹೊನ್ನೆಹಳ್ಳಿ ಮಠದ ಮಾಧವೇಂದ್ರ ಸರಸ್ವತೀ ಶ್ರೀಪಾದಂಗಳಿಗೆ ಬರೆಸಿಕೊಟ್ಟ ಮೂಲ ಗುತ್ತಿಗೆ ರಾಯಸದ ಪಟ್ಟೆಯೂ ಸ್ವರ್ಣವಲ್ಲಿ ಮಠದಲ್ಲಿ ದೊರೆಕಿದೆ. ಸ್ಥಳದ ಶಾನಭೋಗನ ಕಡತದ ಲೆಕ್ಕದ ಪ್ರಕಾರ, ಗುತ್ತಿಗೆ ಮಾಡಿಕೊಟ್ಟ ಪ್ರಕಾರ, ಮಠದ ಶುಕ್ಲಭಟ್ಟನ ಮುಖಾಂತರ ಆ ಗ್ರಾಮದಿಂದ ಅರಮನೆಗೆ ಸಲ್ಲುವ ಶಿಸ್ತಿನ [ಸಿಸ್ತಿನ] ಹಣವನ್ನು ಅರಮನೆಗೆ ಸಂದಾಯ ಮಾಡುವಂತೆ ಸದರಿ ಮೂಲಗುತ್ತಿಗೆಯ ರಾಯಸದ ಪಟ್ಟೆಯಲ್ಲಿ ಉಲ್ಲೇಖಿಸಲಾಗಿದೆ. ಅಗಸೆ ಮಾಡಗೆರೆ ಗ್ರಾಮವನ್ನು ಮೊದಲಿನಿಂದಲೂ ಕೆಳದಿನಾಯಕರು ಆಳಿ ಬರುತ್ತಿದ್ದರೆಂತಲೂ ಮತ್ತು ಹಿಂದಿನಿಂದಲೂ ಆ ಗ್ರಾಮವನ್ನು ಹೊನ್ನೆಹಳ್ಳಿ ಮಠಕ್ಕೆ ಮೂಲ ಗುತ್ತಿಗೆಗೆನೀಡುತ್ತ ಬಂದಿರುವ ವಿಷಯ ಪ್ರಸ್ತುತ ದಾಖಲೆಯಿಂದ ತಿಳಿದುಬರುತ್ತದೆ. ದಾಖಲೆಯಲ್ಲಿ ನಮೂದಿಸಲಾದ ಕಾಲ (ಕ್ರಿ.ಶ. 1668) ಬಸಪ್ಪ ನಾಯಕರ ಕಾಲಕ್ಕೆ ಸರಿ ಹೊಂದದಿದ್ದರೂ ಅಲ್ಲಿ ದಾಖಲಿಸಲಾದ ವಿಷಯ ಮಾತ್ರ ಸತ್ಯ ಎಂಬುದನ್ನು ಓದುಗರು ಗಮನದಲ್ಲಿಡಬೇಕು.7

ರಕ್ತಾಕ್ಷಿ ಸಂವತ್ಸರದ ಆಶ್ವಿಜ ಬ. 12 (25–10– 1684) ರಂದು, ಸ್ವರ್ಣವಲ್ಲಿ ಮಠದ ಹವಾಲೆಯಾಗಿದ್ದ ಅಡಕಳ್ಳಿ ನರಸಿಂಹ ದೇವರಿಗೆ ಹೆಚ್ಚುವರಿಯಾಗಿ ವಿಧಿಸಲಾದ ಗ. 10॥0॥=(ಹತ್ತು ವರಹ, ಒಂದು ಹೊನ್ನು, ಮುಪಾಗ, ಬೇಳೆ)ಯನ್ನು ಆ ದೇವತಾ ವೆಚ್ಚಕ್ಕೆ ಬಿಟ್ಟು ಬಿಡಬೇಕಾಗಿ ಕೆಳದಿ ಚೆನ್ನಮ್ಮಾಜಿಯವರು ಬಸ್ವೆಯಣಿ ಬರೆಸಿ ಕಳುಹಿದ ಕಾರ್ಯವು (ನಿರೂಪ) ಸ್ವರ್ಣವಲ್ಲಿ ಮಠದ ದಾಖಲೆಗಳಲ್ಲಿ ಲಭ್ಯವಾಗಿದೆ8, ನರಸಿಂಹದೇವರಿಗೆ ಉತ್ತಾರವಾದ ಭೂಮಿಯನ್ನು ಮತ್ತೊಮ್ಮೆ ಅಳತೆ

ಮಾಡಿ ಗುತ್ತಿಗೆ ಹಣವನ್ನು ಹೆಚ್ಚಿಸಿದ್ದ ರಿಂದ ಹೊನ್ನೆಹಳ್ಳಿ ಮಠದ ಸ್ವಾಮಿಯವರ ಬಣೆಯವರು ಈ ವಿಷಯವನ್ನು ಹುಜೂರರಿಗೆ ಬಂದು ತಿಳಿಸಿದ್ದರಿಂದ ಚೆನ್ನಮ್ಮಾಜಿಯವರು ವಿನಂತಿಯನ್ನು ಮನ್ನಿಸಿ, ಹೆಚ್ಚು ವಿಧಿಸಿದ ತೆರಿಗೆಯನ್ನು ಆ ದೇವತಾ ವೆಚ್ಚಕ್ಕೇ ಬಿಡುವಂತೆ ಬಸ್ಯೆಯನೆಂಬ ಅಧಿಕಾರಿಗೆ ಆಜ್ಞೆ ವಿಧಿಸಿದಳೆಂಬುದು ನಿರೂಪದಿಂದ ತಿಳಿದುಬರುತ್ತದೆ. ಗುರುಪೀಠದಲ್ಲಿ 44ನೆಯವರಾದ ಶ್ರೀರಾಮಚಂದ್ರ ಸರಸ್ವತಿಗಳು (ಕ್ರಿ.ಶ. 1678–1712) ಹೊನ್ನೆಹಳ್ಳಿ ಮಠದ ಅಂದಿನ ಗುರುಗಳು.

ಕೆಳದಿಯ ಇತಿಹಾಸದಲ್ಲಿಯೇ ಅತ್ಯಂತ ಪ್ರಸಿದ್ಧ ರಾಣಿ ಚೆನ್ನಮ್ಮಾಜಿಯವರು (ಕ್ರಿ.ಶ. 1672–1698) ತನ್ನ ಪತಿ ಹಿರಿಯ ಸೋಮಶೇಖರ ನಾಯಕನಿಗೆ ಚೆನ್ನಮ್ಮ ಆಡಳಿತದಲ್ಲಿ ಸಹಕರಿಸಿದರು. ಪತಿಯ ಕಗ್ಗೊಲೆ ನಂತರ ಆಡಳಿತ ಸೂತ್ರವನ್ನು ತಾವೇ ವಹಿಸಿಕೊಂಡರು. ತನ್ನ ನಾದಿನಿಯ ಮಗನಾದ ಬಸಪ್ಪನನ್ನು ದತ್ತು ಪುತ್ರನಾಗಿ ಸ್ವೀಕರಿಸಿದರು. ರಾಜಕೀಯ ಚಾತುರ್ಯ ಮತ್ತು ಧೈರ್ಯಕ್ಕೆ ಹೆಸರಾದ ಚೆನ್ನಮ್ಮ ಪುಂಡರ ಹಾವಳಿಯನ್ನು ಅಡಗಿಸಿ, ವಸುಧಾರೆ, ತನನಿಧಿ, ಹೊನ್ನಾಳಿ, ಜಡೆ, ಸ್ವಾದಿ, ಶಿರಸಿ, ಬನವಸೆ, ಕಡೂರು, ಬಾಣಾವರ, ಹಾಸನ, ಬೇಲೂರು ಮೊದಲಾದ ಪ್ರದೇಶಗಳನ್ನು ಅಂಕಿತದಲ್ಲಿರಿಸಿದರು. "ಚೆನ್ನಮ್ಮಾಜಿಯು ಶಿವಾಜಿಯ ಮಗ ರಾಜಾರಾಮನಿಗೆ ಆಶ್ರಯವಿತ್ತು, ಮೊಗಲರನ್ನು ಸೋಲಿಸಿ, ಅವನಿಗೆ ರಕ್ಷಣೆ ಒದಗಿಸಿದ ಘಟನೆಯು ಭಾರತದ ಇತಿಹಾಸ [illegible] ಪರಿಣಾಮ ಬೀರಿತ್ತು. ಎಂದು ಡಾ॥ ಬಿ.ಎ. ಸಾಲೆತೂರರು ಕನ್ನಡ ನಾಡಿನ ಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ. ತಮ್ಮ ಸೇವಕರಾದ ಶಿವಭಕ್ತರ ಮುಖಂಡರೂ, ಶೈವ ಹಾಗೂ ವೈಷ್ಣವ [illegible] ಮುಖಂಡರೂ ಆದವರ ಮುಖಾಂತರ ಮಠ, ಮಾನ್ಯ, ದೇವಸ್ಥಾನ, ಅಗ್ರಹಾರ, ಮೊದಲಾದವುಗಳಿಗೆ ದಾನ ಧರ್ಮಗಳನ್ನು ಮಾಡಿ ಶಾಶ್ವತವಾದ ಧರ್ಮ ಮತ್ತು ಕೀರ್ತಿ ಸಂಪಾದಿಸಿ ಸದ್ಧರ್ಮದಿಂದ ರಾಜ್ಯವನ್ನು ಪರಿಪಾಲಿಸಿ ದಳು ಉನ್ನತವಾದ ಗುಣಸಂಪನ್ನತೆಯಿಂದಲೂ, ಪರಾಕ್ರಮ ಹಾಗೂ ದಾನಧರ್ಮಾದಿಗಳಿಂದಲೂ ಚೆನ್ನಮ್ಮಾಜಿಗೆ ಸರಿಸಮಾನರಾದ ರಾಜರೇ ಇಲ್ಲವೆನ್ನುವ ರೀತಿಯಲ್ಲಿ ರಾಜ್ಯವನ್ನು ರಕ್ಷಿಸಿದಳೆಂದು 'ಕೆಳದಿ ನೃಪವಿಜಯ'ದಲ್ಲಿ ವರ್ಣಿಸಲಾಗಿದೆ.

"ಉನ್ನತ ಶುಭಗುಣ ಸಂಪನ್ನತೆಯಿಂ ಕ್ಷಾತ್ರ ದಾನ ಧರ್ಮಾದಿಗಳಿಂ ಚನ್ನಮ್ಮಾಜಿಗೆ ಸರಿಯಹ ಮನ್ನೆಯರಿಲ್ಲೆನಿಸಿ ರಾಜ್ಯಮಂ ರಕ್ಷಿಸಿದಳ್"9

ಈ ರೀತಿಯಾಗಿ, ಸ್ವರ್ಣವಲ್ಲಿ ಮಠದಲ್ಲಿ ದೊರೆತ ಮೂರು ದಾಖಲೆಗಳು, ಕೆಳದಿ ನಾಯಕರು ಸ್ವರ್ಣವಲ್ಲಿ ಮಠದೊಂದಿಗೆ ಇರಿಸಿಕೊಂಡ ಸಂಬಂಧವನ್ನರಿಯಲು ಉಪಯುಕ್ತವಾಗಿವೆ. ಲೇಖಕರು ಸ್ವರ್ಣವಲ್ಲೀ ಮಠದ ಸಹಸ್ರಾರು ದಾಖಲೆಗಳ ಅಧ್ಯಯನ ಮಾಡುವ ಸಂದರ್ಭದಲ್ಲಿ ಕಾಲ ಸರಿದಂತೆ, ಅದೆಷ್ಟು ಸಹಸ್ರ ದಾಖಲೆಗಳುನಾಶವಾಗಿರುವುದನ್ನು ಗಮನಿಸಿದ್ದಾರೆ. ನಾಶವಾದ ಅಂಥ ದಾಖಲೆಗಳಲ್ಲಿ, ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ದಾಖಲೆಗಳು ಅದೆಷ್ಟಿದ್ದರಲು ಸಾಕು! ಇನ್ನುಳಿದ ಕೆಲವು ಸಂಸ್ಥಾನಗಳಂತೆ ಕೆಳದಿ ಸಂಸ್ಥಾನವೂ ಕ್ರಿ.ಶ. 1763ರಲ್ಲಿ ಹೈದರಲಿಯ ದಂಡಿಗೆ ಬಲಿಯಾಗಿ, ಪತನಗೊಂಡಿತು.ಆದರೆ ಸ್ವರ್ಣವಲ್ಲಿ ಮಠ, ಅನೇಕ ರಾಜಕೀಯ ಬದಲಾವಣೆ ಗಳಾದಾಗ್ಯೂ, ತನ್ನ ಆಸ್ತಿತ್ವವನ್ನುಳಿಸಿಕೊಳ್ಳುವದರ ಜೊತೆಗೆ, ಮಹಾಸಂಸ್ಥಾನವಾಗಿ ರೂಪುಗೊಂಡಿದ್ದು ವಿಶೇಷ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಕೆಳದಿ ನಾಯಕರಿಗೆ ಸಂಬಂಧಿಸಿ, ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ಗ್ರಂಥಗಳನ್ನು ಓದಿರಿ.

I ಡಾ॥ ಜಿ.ಎಸ್. ದೀಕ್ಷಿತ, 'ಕೆಳದಿ ನಾಯಕರು', ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, 1969.

II ಕೆಳದಿಗುಂಡಾ ಜೋಯ್ಸ, 'ಬಿದನೂರಿನ ಕೆಳದಿ ನಾಯಕರು', ಪ್ರಸಾರಾಂಗ ಮೈಸೂರು ವಿ.ವಿ., 1980, ಪು. 24–32 ಮತ್ತು ಇದೇ ಲೇಖಕರ ಸಂಪಾದಿತ 'ಲಿಂಗಣ್ಣ ಕವಿಯ ಕೆಳದಿನೃಪ ವಿಜಯ', ಕನ್ನಡ ಸಾಹಿತ್ಯ ಪರಿಷತ್ತು [illegible]

III ಕೆಳದಿ ಬಸವರಾಜನ 'ಶಿವತತ್ವ ರತ್ನಾಕರ'., 1927., (ಸಂ.) ಆರ್. ರಾಮರಾವ್ [illegible] ಸುಂದರ ಶಾಸ್ತ್ರಿ ಮಂಗಳೂರು.

IV ಡಾ॥ ಎ.ಕೆ.ಶಾಸ್ತ್ರಿ., A History of Sringeri ಕ.ವಿ.ವಿ. ಧಾರವಾಡ, ಪ್ರಥಮ [illegible], ದ್ವಿತೀಯ ಮುದ್ರಣ 1999.

V ಡಾ॥ ಎ.ಕೆ. ಶಾಸ್ತ್ರಿ, 'ಶೃಂಗೇರಿ ಧರ್ಮಸಂಸ್ಥಾನ' ಶೃಂಗೇರಿ ಮಠ 1982.

VI ಡಾ॥ ಎ.ಕೆ. ಶಾಸ್ತ್ರಿ, 'The records of the Sringeri Matha relating to Keladi', Keladi museum and HRB, 2001.

VII K.N.Chitnis , Keladi polity, Karnatak University, Dharwad 1974.

2. ಲೇಖಕರ ಮೇಲ್ಕಾಣಿಸಿದ ಗ್ರಂಥಗಳನ್ನು ಓದಿರಿ.
3. ಡಾ॥ ಎ.ಕೆ. ಶಾಸ್ತ್ರಿ., 'ಶ್ರೀಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು (ಸ್ವದಾ.), ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು, 1992.
4. ಸ್ವಾದಾ. 18.
5. ಡಾ॥ ಎ.ಕೆ. ಶಾಸ್ತ್ರಿ., 'ಶೃಂಗೇರಿ ಧರ್ಮಸಂಸ್ಥಾನ', ಪು. 38.
6. ಸ್ವದಾ 29 ಮಾಧವೇಂದ್ರ ಸರಸ್ವತಿಗಳು (ಕ್ರಿ.ಶ. 1668–1672) ಪೀಠದಲ್ಲಿ 49 ನೆಯವರು.
7. ಕೆಳದಿ ಅರಸು ಮನೆತನದಲ್ಲಿ ಬಸಪ್ಪನಾಯಕ ೩ (ಕ್ರಿ.ಶ. 1697–1714), ಬಸಪ್ಪನಾಯಕ (ಕ್ರಿ.ಶ. 1737–1754) ಮತ್ತು ಚೆನ್ನಬಸವಪ್ಪನಾಯಕ (ಕ್ರಿ.ಶ. 1754–1757) ಎಂಬ ಮೂವರು ಬಸವಪ್ಪರಿದ್ದು, ಪ್ರಸ್ತುತ ದಾಖಲೆಯಲ್ಲಿ ನಮೂದಿಸಲಾದ ಕ್ರಿ.ಶ. 1668, ಇವರಾರ ಕಾಲಕ್ಕೂ ಸರಿ ಹೊಂದುವದಿಲ್ಲ ಕ್ರಿ.ಶ 1668ರಲ್ಲಿ ಮೊದಲನೇ ಸೋಮಶೇಖರ ನಾಯಕರ ಪತ್ನಿ ಚೆನ್ನಮ್ಮಾಜಿಯವರು (ಕ್ರಿ.ಶ. 1991– 1992) ರಾಜ್ಯಭಾರ ನಡೆಸಿದ್ದರು, ಆದರೂ ಹಿಂದೆ ನಮೂದಿಸಲಾದ ವೆಂಕಟಪ್ಪನಾಯಕರ ಪಟ್ಟೆಯಲ್ಲಿಯೂ (ಸ್ವ ದಾ.18) ಅಗಸೆ ಮಾಡಗೆರಿ ಗ್ರಾಮವನ್ನು ಹೊನ್ನೆಹಳ್ಳಿ ಮಠವು ಮೂಲಗುತ್ತಿಗೆ ಗ್ರಾಮವಾಗಿ ಅನುಭವಿಸುತ್ತ ಬಂದಿತ್ತೆಂಬುದನ್ನು ಗಮನಿಸಿದಾಗ ದಾಖಲೆಯಲ್ಲಿನಮೂದಿಸಲಾದ ಸಂಗತಿ ಸತ್ಯ ಎಂಬುದು ಸುಸ್ಪಷ್ಟ. ಹೆಸರಿನಲ್ಲಿ ಮಾತ್ರ ವ್ಯತ್ಯಾಸ ಕಂಡು ಬರುತ್ತದೆ.
8. ಸ್ವದಾ. 37. 9. ಪು. 242–243.

❑

ಇಟ್ಟಪ್ಪ : ಹಾಲುಮತ ಸಾಂಸ್ಕೃತಿಕ ವೀರ

– ಡಾ. ಎಫ್.ಟಿ. ಹಳ್ಳಿಕೇರಿ

ಹಾಲುಮತ ಸಾಂಸ್ಕೃತಿಕ ವೀರಪರಂಪರೆಯಲ್ಲಿ ಬೀರಪ್ಪ, ಮಾಳಿಂಗರಾಯ, ಮೈಲಾರಲಿಂಗ, ಕರಿಸಿದ್ಧೇಶ್ವರ, ಹುಲ್ಲಪ್ಪ ಚಂದಪ್ಪ ಮೊದಲಾದವರು ಪ್ರಮುಖರು. ಈ ಪರಂಪರೆಯಲ್ಲಿ ಮತ್ತೊಬ್ಬ ವೀರನಾಗಿ ಪ್ರಸಿದ್ಧನಾದವನು ಇಟ್ಟಪ್ಪ. ಈತ ಬೀರಪ್ಪನ ಸಹಾಯಕನಾಗಿದ್ದವನು. ಮಹಾರಾಷ್ಟ್ರದಲ್ಲಿ ಯಂತೂ ಎಲ್ಲೆಲ್ಲಿ ಇಟ್ಟಪ್ಪನ ಕೇಂದ್ರವಿದೆಯೋ ಅಲ್ಲಿ ಸಾಮಾನ್ಯ ವಾಗಿ ಬೀರಪ್ಪನಿದ್ದಾನೆ. ವಿಶೇಷವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಈಗಲೂ ಈತನ ಆರಾಧನೆ ದಟ್ಟವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಇಟ್ಟಪ್ಪನ ಇತಿವೃತ್ತ ವಿಚಾರ, ಆತನ ನೆಲೆಗಳು, ಆಚರಣೆ ಸಂಪ್ರದಾಯಗಳು, ದೇವಾಲಯ ವಾಸ್ತುಶಿಲ್ಪಗಳ ವಿಶಿಷ್ಟತೆ, ಮೌಖಿಕ ಮತ್ತು ಲಿಖಿತ ಪರಂಪರೆಯಲ್ಲಿ ಸೃಷ್ಟಿಯಾದ ಸಾಹಿತ್ಯ, ಇಟ್ಟಪ್ಪನ ಪಂಥ ಹಾಗೂ ಪ್ರಭಾವ ಇತ್ಯಾದಿ ಸಾಂಸ್ಕೃತಿಕ ಸಂಗತಿಗಳನ್ನು ಕುರಿತು ವಿವೇಚಿಸಲಾಗುವುದು.

ಇಟ್ಟಪ್ಪನ ಇತಿಹಾಸ

ಇಟ್ಟಪ್ಪನ ಈಗಿನ ಹೆಸರು ವಿಠಲ. ವಿಠಲನನ್ನು ಗ್ರಾಮೀಣ ಜನರು ಇಟ್ಟಪ್ಪ ಎಂದು ಕರೆಯುತ್ತಾರೆ. ಈ ಇಟ್ಟಪ್ಪ ಪದದ ಮೂಲ ರೂಪ ಇದು. ಇದು ದಕ್ಷಿಣ ಭಾಷೆ ಅದರಲ್ಲಿಯೂ ತಮಿಳು ಶಬ್ದ ಎಂಬುದು ವಿದ್ವಾಂಸರ ಅಭಿಪ್ರಾಯ.1 ಇಟು > ಇಠೂ > ಇಟೂಬಾ > ಇಠೂಬಾ > ವಿಠಲ ಹೆಸರಿನಿಂದ ಕ್ರಮಾನುಗತವಾಗಿ ಪರಿವರ್ತನೆಗೊಳ್ಳುತ್ತ ಬಂದಿರುವುದನ್ನು ಕಾಣಬಹುದು. ಶಂಬಾ ಜೋಶಿ ಅವರು ಈ ಪದವು ಇಟ್ಟ > ವಿಟ್ಟ > ವಿಟ್ಟಲ ಎಂದು ರೂಪಾಂತರ ಗೊಳ್ಳುತ್ತ ಬಂದಿರಬಹುದೆಂದು ಹೇಳುತ್ತಾರೆ. ಅಲ್ಲದೇ 'ವಿಠಲನ ಮೂಲಸ್ಥಾನವು ಚಂದ್ರಭಾಗಾ ತೀರ. ಹಾಲು ಮತದ ಹಟ್ಟಿಕಾರರು ಸಿಂಧೂತೀರದಲ್ಲಿ ಚಂದ್ರಭಾಗೆಯನೆರೆಯಲ್ಲಿದ್ದಾಗ ವಿಟ್ಟನು ಹುಟ್ಟಿರಬೇಕು' ಎಂಬ ನಿಲುವನ್ನು ತಾಳುತ್ತಾರೆ.2 ಪೋಖರಾಪುರದ ಇಟ್ಟಪ್ಪನ ಪೂಜಾರಿಗಳು "ನಮ್ಮ ದೇವರು ಪಂಢರಪುರದ ವಿಠ್ಠಲನಿಗಿಂತ ಹಳೆಯದು"3 ಎನ್ನುತ್ತಾರೆ. ಅಂದರೆ ಇಟ್ಟಪ್ಪನು ಅತ್ಯಂತ ಪ್ರಾಚೀನ ವ್ಯಕ್ತಿ ಎಂಬುದು ಸ್ಪಷ್ಟವಾಗುತ್ತದೆ. ಈ ಎಲ್ಲ ವಿವರಗಳನ್ನು ಕುರುಬರ ಒಬ್ಬ ಪುರುಷನು ತನ್ನ ದನ ಕರು ಕುರಿಗಳ ರಕ್ಷಣೆಯ ಸಂದರ್ಭದಲ್ಲಿ ಕ್ರೂರ ಪ್ರಾಣಿಗಳ ಜೊತೆ ಹೋರಾಡಿ ವೀರ ಮರಣ ಹೊಂದಿರಬೇಕು. ಮುಂದೆ ಈತನೇ ಸಾಂಸ್ಕೃತಿಕನಾಯಕನಾಗಿ ಕುರುಬ ಸಮಾಜದಲ್ಲಿ ಪ್ರಸಿದ್ಧನಾಗಿರುವಂತಿದೆ. ಇದಕ್ಕೆ ಸಾಕ್ಷಿಯೆನ್ನುವಂತೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಇಟ್ಟಪ್ಪನ ಹೆಸರಿನ ಗುಡಿಗುಂಡಾರಗಳು, ಶಿಲ್ಪಗಳು ಮತ್ತು ಆತನ ಆರಾಧನೆ ವ್ಯಾಪಕವಾಗಿ ಕಂಡು ಬರುತ್ತದೆ.

ಈತನ ಇತಿವೃತ್ತದ ಬಗೆಗೆ ಪೂರ್ಣಪ್ರಮಾಣದ ವಿವರ ಗಳು ಲಭ್ಯವಾಗುವುದಿಲ್ಲ. ಪಟ್ಟಣ ಕಡೋಲಿಯ ದೇವಾಲಯ ದಲ್ಲಿರುವ ಗದ್ದುಗೆಗಳ ಪ್ರಕಾರ ಈತನ ಗುರುಮುರೆಪ್ಪ, ಹೆಂಡತಿಪದುಬಾಯಿ, ಮಗಳು ಭಾಗವ್ವ, ಶಿಷ್ಯ ಮಾಳಿಂಗರಾಯ. ಇಷ್ಟನ್ನು ಬಿಟ್ಟರೆ ಮತ್ತಾವ ಚಾರಿತ್ರಿಕ ಸಂಗತಿಗಳು ತಿಳಿದು ಬರುವುದಿಲ್ಲ.

ಇಟ್ಟಪ್ಪನ ನೆಲೆಗಳು

ಈತನ ನೆಲೆಗಳು ದಕ್ಷಿಣ ಮಹಾರಾಷ್ಟ್ರ ಮತ್ತು ಕರ್ನಾಟಕದ ಬೆಳಗಾವಿ ಜಿಲ್ಲೆಯಲ್ಲಿ ಅಧಿಕ ಪ್ರಮಾಣದಲ್ಲಿವೆ. ಮುಖ್ಯವಾಗಿ ಮಹಾರಾಷ್ಟ್ರದ ಪಟ್ಟಣ ಕಡೋಲಿ (ಕೊಲ್ಲಾಪುರ ಜಿಲ್ಲೆ), ಸಿದ್ದೇಶ್ವರ ಕಡೋಲಿ (ಸಾತಾರಾ ಜಿಲ್ಲೆ), ಪೋಖರಾಪುರ (ತಾ. ಮೊಹೋಳ, ಸೊಲ್ಲಾಪುರ ಜಿ), ಹಾಗೂ ಕರ್ನಾಟಕದ ಮಬನೂರು (ತಾ. ಸವದತ್ತಿ, ಬೆಳಗಾವಿ ಜಿ), ಬೆಣಚಿನಮರಡಿ (ತಾ. ಗೋಕಾಕ, ಬೆಳಗಾವಿ ಜಿ), ಹುನ್ನೂರು (ತಾ. ಹುಕ್ಕೇರಿ, ಬೆಳಗಾವಿ ಜಿ), ತುರುವನೂರು (ತಾ. ರಾಮದುರ್ಗ, ಬೆಳಗಾವಿ ಜಿ), ದೇವರ ಕಡಬಿ (ತಾ. ಸವದತ್ತಿ, ಬೆಳಗಾವಿ ಜಿ), ಗೊರವಗುಂಡಗಿ (ತಾ. ಸಿಂದಗಿ, ಬಿಜಾಪುರ ಜಿ) ಮೊದಲಾದ ಸ್ಥಳಗಳಲ್ಲಿ ಇಟ್ಟಪ್ಪನ ಹೆಸರಿನ ದೇವಾಲಯ ಗಳಿವೆ. ಈ ದೇವಾಲಯಗಳಲ್ಲಿ ಇಟ್ಟಪ್ಪನ ಜೊತೆಗೆ ಬೀರಪ್ಪನ ಮೂರ್ತಿಗಳಿರುವುದು ಒಂದು ವಿಶೇಷ ಸಂಗತಿ.

ಪಟ್ಟಣ ಕಡೋಲಿ, ಇಟ್ಟಪ್ಪನ ಪ್ರಮುಖ ನೆಲೆಗಳಲ್ಲಿ ಒಂದು. ಇದು ಕೊಲ್ಲಾಪುರ ಜಿಲ್ಲೆಯ ಹಾತಕಣಗಿಲೆ ತಾಲೂಕಿನ ಒಂದು ದೊಡ್ಡ ಹಳ್ಳಿ. ಕೊಲ್ಲಾಪುರದಿಂದ ಆಗ್ನೆಯದಿಕ್ಕಿಗೆ 18 ಕಿ.ಮೀ. ಅಂತರದಲ್ಲಿದೆ. ಅಂದಾಜು ಇಪ್ಪತ್ತು ಸಾವಿರ ಜನಸಂಖ್ಯೆಯುಳ್ಳ ಈ ಗ್ರಾಮದಲ್ಲಿ ಕುರುಬರೇ ಅಧಿಕ ಸಂಖ್ಯೆಯಲ್ಲಿದ್ದಾರೆ. ಅದರಲ್ಲಿಯೂ ಕುರುಬರ ಉಪಪಂಗಡವಾಗಿರುವ ಪೂಜಾರಿ ಮನೆತನಗಳೇ ಹೆಚ್ಚಾಗಿವೆ.ನಾರಾಯಣ ಗಾವುಡ ಎಂಬುವವನು ಈ ದೇವಾಲಯದ ಆದ್ಯ ಪೂಜಾರಿಯಾಗಿದ್ದವನು. ನಂತರ ಆತನ ಮೂವರು ಮಕ್ಕಳ ಸಂತತಿ ವಿಸ್ತಾರಗೊಂಡು ಈಗ ಐದನೂರು ಮನೆತನ ಗಳಾಗಿವೆ. ಇದರಿಂದಾಗಿ ಪೂಜಾಧಿಕಾರ ಸಹ ಹಂಚಿ ಹೋಗಿದ್ದು ಒಂದು ಮನೆಗೆ ಒಂದು ವಾರ ಪೂಜಾಧಿಕಾರ ಕ್ರಮವಿದೆ. ಇಟ್ಟಪ್ಪ ದೇವರ ಆರಾಧನೆ, ಅರ್ಚನೆ, ಪೂಜೆಪುನಸ್ಕಾರಗಳನ್ನು ಮಾಡುವುದು ಇವರ ದಿನನಿತ್ಯದ ಕಾಯಕ. ಇದಕ್ಕಾಗಿ ಸರಕಾರ ಮತ್ತು ಸಮಾಜದವರು ಕೆಲವು ಜಮೀನುಗಳನ್ನು ದತ್ತಿಯಾಗಿ ಕೊಟ್ಟಿದ್ದಾರೆ. ಜೊತೆಗೆ ಭಕ್ತರು ದವಸ ಧಾನ್ಯ ಧನ ಮತ್ತು ಕುರಿ ಉಣ್ಣೆರೂಪದ ಕಾಣಿಕೆಗಳನ್ನು ಸಮರ್ಪಿಸುತ್ತಾರೆ. ಜಾತ್ರೆ ಉತ್ಸವ ಸಮಯದಲ್ಲಿ ಬಂದ ಭಕ್ತರಿಗೆ ಆಶ್ರಯ ನೀಡುವುದು, ಊಟೋಪಚಾರದ ವ್ಯವಸ್ಥೆ ಯನ್ನು ಸಹ ಆಯಾ ಪೂಜಾರಿಗಳೇ ಮಾಡುತ್ತಾರೆ.

ಆಚರಣೆ ಆರಾಧನೆಗಳು

ಈಗಾಗಲೇ ಹೇಳಿದಂತೆ ಮಹಾರಾಷ್ಟ್ರದ ದಕ್ಷಿಣ ಜಿಲ್ಲೆಗಳಲ್ಲಿ ಹಾಗೂ ಕರ್ನಾಟಕದ ಬೆಳಗಾವಿ, ವಿಜಾಪುರ ಜಿಲ್ಲೆ ಗಳಲ್ಲಿ ಇಟ್ಟಪ್ಪನ ಆರಾಧನೆ ದಟ್ಟವಾಗಿ ಕಂಡುಬರುತ್ತದೆ. ಈ ಭಾಗಗಳಲ್ಲಿ ಕುರುಬರು ವಾಸಿಸಿರುವ ಓಣಿ ಅಥವಾ ಹಟ್ಟಿಗಳಲ್ಲಿ ಇಟ್ಟಪ್ಪನ ಗುಡಿಗುಂಡಾರ ಮತ್ತು ಗದ್ದುಗೆಗಳಿವೆ. ನಿರ್ದಿಷ್ಟ ಸಮಯದಲ್ಲಿ ಜಾತ್ರೆ ಉತ್ಸವಗಳು ನೆರವೇರುತ್ತವೆ. ಸುತ್ತಮುತ್ತಲಿನ ಭಕ್ತಾದಿಗಳು ದೇವಾಲಯಕ್ಕೆ ಆಗಮಿಸಿ ತಮ್ಮ ಭಕ್ತಿಯನ್ನು ಸಮರ್ಪಿಸಿ ಆಶೀರ್ವಾದ ಪಡೆದುಕೊಳ್ಳುತ್ತಾರೆ.

ಪಟ್ಟಣ ಕಡೋಲಿಯ ಬೀರದೇವ ಮತ್ತು ವಿಠ್ಠಲ ದೇವಾಲಯ ಅತ್ಯಂತ ಪ್ರಸಿದ್ಧವಾದ ಪುಣ್ಯಕ್ಷೇತ್ರವಾಗಿದೆ. ಗರ್ಭಗುಡಿಯ ಕಮಾನು ಮಂಟಪದಲ್ಲಿ ಬೀರದೇವ ಮತ್ತು ವಿಠ್ಠಲ ಇವರ ಉದ್ಭವ ಲಿಂಗಗಳಿವೆ. ಪೂಜೆಗಾಗಿ ಬೇವಿನ ಎಲೆ ಮತ್ತು ಚೆಂಡುಹೂವುಗಳನ್ನು ಏರಿಸುತ್ತಾರೆ. ಮೊಸರನ್ನ, ರೊಟ್ಟಿ ಹಾಗೂ ಬದನೆಕಾಯಿ ಪಲ್ಲೆಯ ನೈವೇದ್ಯವನ್ನು ಅರ್ಪಿಸಲಾಗುತ್ತದೆ. ಏಕಾದಶಿಯಂದು ನೆಲ್ಲಕ್ಕಿ ಅನ್ನದ ನೈವೇದ್ಯ ವಿರುತ್ತದೆ. ರವಿವಾರ ಈ ನೈವೇದ್ಯ ಪ್ರತಿ ಮನೆಯಿಂದ ಬರುತ್ತದೆ. ಮಾಂಸಾಹಾರಿ ನೈವೇದ್ಯವನ್ನು ಹೊರಗೆ ಅರ್ಪಿಸಲಾಗುತ್ತದೆ. ಕುರುಬರಿಗೆ ರವಿವಾರ ಮಹತ್ವದ ದಿನವೆಂದು ಹೇಳಲಾಗುತ್ತದೆ. ಮೈಲಾರಲಿಂಗ, ಹುಲ್ಲಪ್ಪ ಚಂದಪ್ಪ, ಬೀರಪ್ಪ, ಮಾಳಿಂಗರಾಯರ ದೇವಸ್ಥಾನಗಳಿಗೆ ಕುರುಬರು ರವಿವಾರದಿವಸ ಕಡ್ಡಾಯವಾಗಿ ನಡೆದುಕೊಳ್ಳುವ ಪದ್ಧತಿಯಿದೆ. ಹಾಗೆಯೇ ಇಟ್ಟಪ್ಪನ ಆರಾಧನೆ ನಡೆಯುವುದು ರವಿವಾರವೇ.

ಇಟ್ಟಪ್ಪನ ಜಾತ್ರೆ, ಉತ್ಸವ ಮತ್ತು ಆಚರಣೆಗಳು ಅತ್ಯಂತ ಅದ್ದೂರಿಯಾಗಿ ನಡೆಯುವ ಪ್ರಮುಖ ಸ್ಥಳ, ಪಟ್ಟಣ ಕಡೋಲಿ. ವರುಷದಲ್ಲಿ ಎರಡು ಬಾರಿ ಅಂದರೆ ಯುಗಾದಿ ಹಾಗೂ ಸೀಗಿ ಹುಣ್ಣಿಮೆಯಾದ ನಂತರ ಮೃಗನಕ್ಷತ್ರದಲ್ಲಿ ಇಟ್ಟಪ್ಪದೇವರ ಜಾತ್ರೆ ಇಲ್ಲಿ ನಡೆಯುತ್ತದೆ. ಅದರಲ್ಲಿಯೂ ಸೀಗಿಹುಣ್ಣಿಮೆಯ ನಂತರ ಮೂರು ದಿನ ವೈಭವದಿಂದನಡೆಯುವ ಜಾತ್ರೆ ದೊಡ್ಡ ಪ್ರಮಾಣದ್ದು. ಕರ್ನಾಟಕದ ಕುರುಬ ಭಕ್ತರೇ ಅಧಿಕವಾಗಿ ಸೇರಿರುವ ಈ ಜಾತ್ರೆಯಲ್ಲಿ ಡೊಳ್ಳು ಹಾಡುಗಳ

ಮೂಲಕ ತಮ್ಮ ಭಕ್ತಿ ಗೌರವವನ್ನು ಸಲ್ಲಿಸುತ್ತಾರೆ. ಮೂರು ದಿನ ನಿರಂತರವಾಗಿ ನಡೆಯುವ ಈ ಜಾತ್ರೆಯ ಆಚರಣೆಗಳನ್ನು ಜ್ಯೋತಿ ಹೊಸೂರ ಅವರು ಹೀಗೆ ಒಂದೆಡೆ ಉಲ್ಲೇಖಿಸುತ್ತಾರೆ. "ಪ್ರತಿ ವರುಷ ಸೀಗಿ ಹುಣ್ಣಿಮೆಯಾದನಾಲ್ಕಾರು ದಿನಗಳಲ್ಲಿಯೇ ಬರುವ ಮೃಗಮಹೂರ್ತದಂದು ಜಾತ್ರೆ ಕೂಡುತ್ತದೆ. ಅಂದು 'ಫರಂಡಿ' ನಾಡಿನಿಂದ ಬಂದಿರುವಫರಂಡಿ ಎಂಬ ಭಕ್ತ ಅಲಗು ಹಾಯುತ್ತಾನೆ (ಖಡ್ಗಗಳಿಂದ) ಹೊಟ್ಟೆಗೆ ಹೊಡೆದುಕೊಳ್ಳುತ್ತಾನೆ). ಅವನು ಸೊಲ್ಲಾಪುರ ಜಿಲ್ಲೆಯ ಮಾಡ ತಾಲೂಕಿನ ಅಂಜನಗಾಂವ ಊರಿನಿಂದ ಜಾತ್ರೆಯ ಸಲುವಾಗಿ ಹೊರಟಂದಿನಿಂದ ಉಪವಾಸ ಮಾಡು ತ್ತಾನೆ. ಇವನು ಬಂದು ಗುಡಿಯಿಂದ ಸುಮಾರು ಒಂದುಫರ್ಲಾಂಗು ದೂರದಲ್ಲಿ ಅವನಿಗಾಗಿ ಕಟ್ಟಿರುವ ಒಂದು ಕಟ್ಟೆಯ ಮೇಲೆ ಆಸನಾರೂಢನಾಗಿರುತ್ತಾನೆ. ಮೃಗಮಹೂರ್ತದಂದು ಮಧ್ಯಾಹ್ನ ಎರಡು ಗಂಟೆಯ ಹೊತ್ತಿಗೆ ಕೈಯಲ್ಲಿ ಜೋಡು ಖಡ್ಗಗಳನ್ನು ಜೋಡಿಸಿ ಹಿಡಿದು ಆರ್ಭಟಿಸುತ್ತ ಹೊಟ್ಟೆಗೆ ಹೊಡೆದುಕೊಳ್ಳುತ್ತಾನೆ. ಆದರೆ ಅದರ ಯಾವುದೇ ಪರಿಣಾಮ ಹೊಟ್ಟೆಯ ಮೇಲೆ ಕಂಡುಬರುವುದಿಲ್ಲ. ಈ ಸಂದರ್ಭದಲ್ಲಿ 'ಭಂಡಾರ'ವನ್ನು ಭಕ್ತರು ಒಂದೇ ಸವನೆ ಹಾರಿಸುತ್ತಿರುತ್ತಾರೆ. ಆಕಾಶದ ತುಂಬೆಲ್ಲ ಹಳದೀ ಬಣ್ಣದ ಧೂಳೇ ತುಂಬಿರುತ್ತದೆ. ಜನರ ಬಟ್ಟೆ ಮೈ ತುಂಬೆಲ್ಲ ಭಂಡಾರವೇ ಭಂಡಾರ. ನಡೆದರೆ ಭಂಡಾರಗಳಲ್ಲಿ ಪಾದಗಳು ಮೂಡುತ್ತವೆ. ಸುಂಟರಗಾಳಿ ಯಲ್ಲಿಯ ಧೂಳಿನಂತೆ ಭಂಡಾರ ಆಕಾಶದಲ್ಲಿ ಮೇಲೆದ್ದಿರುತ್ತದೆ. ಅದರ ಜೊತೆಗೆ ಉತ್ತತ್ತಿ ಕೊಬ್ಬರಿ ಕುರಿಉಣ್ಣೆ ಕೂಡ ತೆರಪಿಲ್ಲದೆ ಹಾರುತ್ತಿರುತ್ತವೆ. 'ಫರಂಡಿ' ನಿಶ್ಚಿತ ಸ್ಥಳಗಳಲ್ಲಿ ಅಲಗು ಹಾಯುತ್ತ ಗುಡಿಯೆದುರು ಬರುವವರೆಗೆ ಭಂಡಾರ, ಉತ್ತತ್ತಿ ಹಾಗೂ ಉಣ್ಣೆ ಹಾರುತ್ತಲೇ ಇರುತ್ತವೆ. ಗುಡಿಯ ಮುಂದೆ ಬಂದು ಕೊನೆಯದಾಗಿ ಅಲಗು ಹಾಯ್ದು ಇಂದಿನಿಂದ ಮುಂದಿನ ಜಾತ್ರೆಯವರೆಗಿನ ಮಳೆಬೆಳೆ ಇತ್ಯಾದಿಗಳಿಗೆ ಸಂಬಂಧಿಸಿದ ಭವಿಷ್ಯದ ನುಡಿ ಹೇಳುತ್ತಾನೆ. ನಂತರ ಗುಡಿಯ ಹಿಂದೆ ಅವನಿಗಾಗಿಯೇ ಏರ್ಪಡಿಸಿದ ಕಟ್ಟೆಯ ಮೇಲೆ ಆಸನಾರೂಢನಾಗುತ್ತಾನೆ. ಭಕ್ತಜನರು ಈ ಅಲಗು ಹಾಯುವ ದನ್ನು ಕುತೂಹಲದಿಂದ ಭಕ್ತಿಯಿಂದ ನೋಡುತ್ತಾರೆ. ಜಾತ್ರೆನಡೆಯುವಷ್ಟು ಕಾಲವೂ ಈ 'ಫರಂಡಿ'ಯವನ ಸೇವೆಯನ್ನು ಜನ ಭಕ್ತಿಯಿಂದ ಮಾಡುತ್ತಾರೆ. ಕಾಣಿಕೆ ಮುಡಿಪುಗಳನ್ನು ಅರ್ಪಿಸುತ್ತಾರೆ.

ಮರುದಿವಸ ಭೋಜನದ ಕಾರ್ಯಕ್ರಮ. ಅಂದುಪ್ರತಿಯೊಂದು ಊರಿನ ಭಕ್ತರೆಲ್ಲರೂ ಒಂದೆಡೆಗೆ ಕೂಡಿ ಸಾಮೂಹಿಕ ಅಡಿಗೆ ಮಾಡಿ ದೇವರಿಗೆ ನೈವೇದ್ಯ ಅರ್ಪಿಸು ವರು. ಮತ್ತು ಪೂಜಾರಿಗಳಿಗೆ ಉಣಿಸಿ ತಾವು ಊಟ ಮಾಡುವರು. ನೈವೇದ್ಯ ಮುಗಿದ ಮರುದಿವಸ ಮುಂಜಾನೆ ಯಿಂದ ಮಾತ್ರ ಜಾತ್ರೆ ಒಡೆದು ಹೋಗಲಿಕ್ಕೆ ಅಡ್ಡಿಯಿಲ್ಲ. ಆದರೆ ಈ ಮೊದಲು ಜಾತ್ರೆ ಒಡೆದು ಹೋಗುವಂತಿಲ್ಲ.

ಜಾತ್ರೆ ನಡೆಯುವ ಮೊದಲನೆಯ ರಾತ್ರಿ ಡೊಳ್ಳಿನ ಹಾಡುಗಳನ್ನು ದೇವರೆದುರಿನಲ್ಲಿ ಮತ್ತು ಉಳಿದೆಡೆಗಳಲ್ಲಿಯೂ ಸ್ಥಳಾಭಾವದಿಂದಾಗಿ ಜನರು ಅಲ್ಲಲ್ಲಿ ಗುಂಪುಕೂಡಿ ಹಾಡು ತ್ತಾರೆ. ಹಾಲುಮತದ ಪೂರ್ವಾಚಾರ, ಈ ಕ್ಷೇತ್ರದ ಮುರೆಪ್ಪ ಮತ್ತು ವಿಠಲ ಇವರ ಲೀಲೆಗಳಿಗೆಯೇ ಸಂಬಂಧಿಸಿದವು ಗಳಿರುತ್ತವೆ. ಎರಡನೆಯ ದಿನ ರಾತ್ರಿ ಕುರುಬರ ಸಾಂಸ್ಕೃತಿಕ ಕಲೆಯಾದ ಕೈಪಟ್ಟು ಬಾರಿಸುವ ಕಾರ್ಯಕ್ರಮ ನಡೆಯುತ್ತದೆ. ಕನ್ನಡ ನಾಡಿನ ಬೇರೆ ಬೇರೆ ಭಾಗಗಳಿಂದ ಬಂದ ಅನೇಕ ಮೇಳದವರು ಜನ ತಲೆದೂಗುವಂತೆ ಬಾರಿಸುತ್ತಾರೆ. ಕಿವಿಗಡ ಚಿಕ್ಕುವಂತೆ ದೊಡ್ಡನಾದ ಹೊರಡಿಸಿ ಶಹುಡೊಳ್ಳಿನಂಥ ವಾದ್ಯ ವನ್ನು ಸಡಕ್ಕೆ ಕಟ್ಟಿಕೊಂಡು ಕೈಗಳಿಂದಲೇ ಬಾರಿಸುತ್ತ ಮೃದು ಮಧುರ ಧ್ವನಿ ಹೊರಡಿಸಿ ರಾಗತಾಳಗಳೊಂದಿಗೆ ಮೇಳೈಸಿ ಕೊಂಡು ಮೈಮರೆತು ವಾದನದಲ್ಲಿ ತಲ್ಲೀನನಾದಾಗ ಜನರೂ ತಲೆದೂಗುತ್ತಾರೆ. ಕೊನೆಯ ಮೂರನೆಯ ದಿನ ರಾತ್ರಿ ಇವರದೇ ಮತ್ತೊಂದು ಸಾಂಸ್ಕೃತಿಕ ಕಲೆಯಾದ ದಟ್ಟಿ ಕುಣಿಯು ವುದು, ಕಸರತ್ತು ಪ್ರದರ್ಶನ ಮಾಡುವ ಕಾರ್ಯಕ್ರಮನಡೆಯುತ್ತದೆ. ಒಂದು ವಿಶಿಷ್ಟ ವೇಷ ಹಾಕಿಕೊಂಡು ಕೈಪಟ್ಟು ಬಾರಿಸುವವನ ತಾಳಗತಿಯ ಸಂಜ್ಞೆಗೆ ಸರಿಯಾಗಿ ವಿವಿಧ ರೀತಿಯಿಂದ ಕುಣಿಯುವದಕ್ಕೆಯೇ ದಟ್ಟಿ ಕುಣಿಯುವ ಇವರು ಮೈಮರೆತು ಕುಣಿಯುತ್ತಿರುವಾಗ ಶಿವನು ತನ್ನ ಗಣದೊಂದಿಗೆ ಭರತ ನಾಟ್ಯದಲ್ಲಿ ತೊಡಗಿರುವನೋ ಎಂಬ ಭಾವನೆ ಮೊಳೆಯುತ್ತದೆ. ಈ ಹಾಲುಮತದವರು ವೀರ ಬೀರದೇವರ ಭಕ್ತರಲ್ಲವೇ. ಅಂತೆಯೇ ಈ ದಟ್ಟಿ ಕುಣಿಯುವ ಭಂಗಿ ಭರತನಾಟ್ಯಕ್ಕೆ ಸಮೀಪವಾಗಿದೆಯೆಂದು ನಾನು ಅನ್ನುವುದು. ಈ ತೆರನಾಗಿ ಮೂರು ದಿವಸಗಳೂ ರಾತ್ರಿಯಲ್ಲಿ ವಿವಿಧ ಕಾರ್ಯಕ್ರಮಗಳು ಜರುಗುವವು."[3] ಇದು ನಾಲ್ಕು ದಶಕಗಳ ಹಿಂದೆ ನಡೆಯುತ್ತಿದ್ದ ಜಾತ್ರೆಯ ಆಚರಣೆಗಳು. ಆಧುನಿಕ ಜೀವನ ಪದ್ಧತಿಯಿಂದಾಗಿ ಈ ಆಚರಣೆಗಳಲ್ಲಿ ಕೆಲವು

ಇಂದು ಮಾಯವಾಗಿವೆ. ಆದರೂ ಸಹಿತ ಈಗಲೂ ಬೆಳಗಾವಿ ಭಾಗದ ಅನೇಕ ಕುರುಬರು ಪ್ರತಿ ವರುಷ ಜಾತ್ರೆಯಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಾರೆ.

ಇಟ್ಟಪ್ಪನ ಮತ್ತೊಂದು ಮಹತ್ವದ ಶ್ರದ್ಧಾಕೇಂದ್ರ, ಸೊಲ್ಲಾಪುರ ಜಿಲ್ಲೆಯ ಮೊಹೋಳ ತಾಲೂಕಿನ ಪೋಖರಾಪುರ. ಇಲ್ಲಿ ಬೀರದೇವ ಮತ್ತು ವಿಠ್ಠಲನ ಎರಡು ದೇವಾಲಯಗಳಿವೆ. ಒಂದು ಹಳೆಯದು ಮತ್ತೊಂದು ಹೊಸದು. ಪೋಖರಾಪುರದಿಂದ ಎರಡು ಮೈಲುಗಳ ಅಂತರದಲ್ಲಿ ದಕ್ಷಿಣ ಭಾಗಕ್ಕಿರುವುದು ಹಳೆಯದು. ಪೋಖರಾಪುರ ಸಹಿತ ನಾಲ್ಕು ಊರಿನ ಸೀಮೆ ಇಲ್ಲಿ ಬಂದು ಕೂಡಿವೆ. ಕೆಲವು ವರ್ಷಗಳ ಹಿಂದೆ ದೇವಾ ಲಯದ ಒಡೆತನಕ್ಕಾಗಿ ಜಗಳ ಬಂದಿತು. ಅದಕ್ಕಾಗಿ ಈ ಊರಿನ ಜನ ತಮ್ಮ ಸೀಮೆಯೊಳಗೆ ಹೊಸ ದೇವಾಲಯ ವನ್ನು ಕಟ್ಟಿಸಿದರು. ಹಳೆಯ ದೇವಾಲಯದೊಳಗೆ ದೇವರ ಶಿಲಾರೂಪವಿದೆ. ಶಿವಲಿಂಗ ಧರಿಸಿರುವ ಅದಕ್ಕೆ ಬೆಳ್ಳಿಕಣ್ಣು ಗಳಿವೆ. ಇಲ್ಲಿಯೂ ರವಿವಾರ ವಿಶೇಷ ದಿನವಾಗಿದ್ದು, ಶಾಖಾ ಹಾರಿ ನೈವೇದ್ಯವನ್ನು ಅರ್ಪಿಸಲಾಗುತ್ತದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ದೇವರ ಕಡಬಿ ಗ್ರಾಮದ ಹೊರವಲಯದಲ್ಲಿ ಇಟ್ಟಪ್ಪನ ದೇವಾಲಯ ವಿದೆ. ಕುರುಬರೇ ಈ ದೇವಾಲಯದ ಪೂಜಾರಿಗಳು. ಪ್ರತಿ ಅಮಾವಾಸ್ಯೆ ದಿವಸ ಮಳೆಬೆಳೆ ಕುರಿತಾದ ಹೇಳಿಕೆಗಳನ್ನುಪೂಜಾರಿಗಳು ನುಡಿಯುತ್ತಾರೆ. ಸುತ್ತಮುತ್ತಲ ಗ್ರಾಮದ ಬೀರಪ್ಪನ ಪಾಲಕಿಗಳು ಬರುತ್ತವೆ. ಬಂದ ಭಕ್ತರು, ಡೊಳ್ಳು ಮೇಳದವರು ಇಟ್ಟಪ್ಪನನ್ನು ಸ್ತುತಿಸುವ, ವೀರತನವನ್ನು ತಿಳಿ ಸುವ ಹಾಡುಗಳನ್ನು ಹೇಳುವುದನ್ನು ನಾವು ನೋಡಬಹುದು.

ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗೊರವ ಗುಂಡಗಿ ಗ್ರಾಮದ ಹೊರವಲಯದಲ್ಲಿ ಚಿಕ್ಕದಾದ ಇಟ್ಟಪ್ಪನ ಗದ್ದುಗೆಯೊಂದಿದೆ. ಇದಕ್ಕೆ ಇಟ್ಟಪ್ಪನ ದಿನ್ನೆ ಎಂದೂ ಕರೆಯುತ್ತಾರೆ. ಈ ಊರಿಗೆ ಯಾವುದೇ ಊರಿನ ಪಲ್ಲಕ್ಕಿಗಳು ಬಂದರೆ ಮೊದಲು ತಂಗುವುದು ಇಲ್ಲಿಯ ಆವರಣದಲ್ಲಿಯೇ. ಈಪ್ರದೇಶದ ಕುರುಬರು ಹುಣ್ಣಿಮೆ ಅಥವಾ ಅಮವಾಸ್ಯೆಗೊಮ್ಮೆ ಈ ಗದ್ದುಗೆಗೆ ಬಂದು ಪೂಜೆ ಸಲ್ಲಿಸುತ್ತಾರೆ. ಇಲ್ಲಿ ಯಾವುದೇ ರೀತಿಯ ಉತ್ಸವ ಅಥವಾ ಜಾತ್ರೆಗಳಾಗಲಿ ಏರ್ಪಡುವುದಿಲ್ಲ.

ದೇವಾಲಯಗಳು ಮತ್ತು ವಾಸ್ತುಶಿಲ್ಪ

ಇಟ್ಟಪ್ಪನ ದೇವಾಲಯಗಳು ಗದ್ದುಗೆಯ ಆಕಾರದಲ್ಲಿರುವುದೇ ಹೆಚ್ಚು. ಗ್ರಾಮದ ಹೊರವಲಯದಲ್ಲಿ ಚೌಕಾಕಾರದ ಕಲ್ಲಿನ ಕಟ್ಟೆಯ ಮೇಲೆ ಎರಡು ಗುಂಡುಕಲ್ಲುಗಳಿರುತ್ತವೆ. ಜನರು ಇವುಗಳನ್ನೇ ಬೀರಪ್ಪ ಮತ್ತು ಇಟ್ಟಪ್ಪನ ಮೂರ್ತಿ ಗಳೆಂದು ಭಾವಿಸಿ ಪೂಜಿಸಿ ತಮ್ಮ ಭಕ್ತಿಯನ್ನು ಅರ್ಪಿಸುವುದನ್ನುನಾವು ಕಾಣಬಹುದು. ಆದರೆ ಪಟ್ಟಣ ಕಡೋಲಿಯ ಇಟ್ಟಪ್ಪ ಬೀರಪ್ಪರ ದೇವಾಲಯ ಮಾತ್ರ ವಿಶಿಷ್ಟವಾದುದು. ಇತ್ತೀಚೆಗೆ ಈ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಹಳೆಯ ಕಲ್ಲಿನ ದೇವಾಲಯದೆದುರು ದೊಡ್ಡದಾದ ಹಾಗೂ ಎತ್ತರವಾದ ಮಂಟಪವನ್ನು ಕಟ್ಟಲಾಗಿದೆ. ದೇವಾಲಯದ ಮಹಾದ್ವಾರದ ಎದುರಿನ ರಸ್ತೆಯ ಬದಿಗೆ ಹುಣಸೆ ಮರಗಳಿವೆ. ಗ್ರಾಮದಿಂದ ದೇವಾಲಯಕ್ಕೆ ಹೋಗುವಾಗ ಬಲಬದಿಗೆ ಕುರುಬರ ಪೂರ್ವಜರ ಕೆಲವು ಸ್ಮಾರಕಗಳನ್ನು ನೋಡಬಹುದು. ಈ ಸ್ಮಾರಕಗಳಲ್ಲಿ ಈ ದೇವಾಲಯದ ಆದ್ಯ ಪೂಜಾರಿ ನಾರಾಯಣ ಗಾವುಡ ಮತ್ತವನ ಮೂರು ಮಕ್ಕಳ ಸ್ಮಾರಕಗಳಿವೆ. ಸಮತಟ್ಟಾದ ಕಲ್ಲಿನ ಮೇಲೆ ಉಬ್ಬುಶಿಲ್ಪದಲ್ಲಿ ಈ ಮೂರು ಮೂರ್ತಿಗಳನ್ನು ಕೊರೆಯಲಾಗಿದೆ. ಇವುಗಳಲ್ಲಿ ಎರಡು ಮೂರ್ತಿಗಳ ಪುರುಷರ ಎರಡು ಕೈಗಳಲ್ಲಿ ಒಂದು ಸೊಂಟದ ಮೇಲಿದ್ದರೆ ಮತ್ತೊಂದು ಸರಳವಾಗಿದೆ.

ದೇವಾಲಯವನ್ನು ಪ್ರವೇಶಿಸಿದ ಕೂಡಲೇ ಹೊಸದಾಗಿ ಕಟ್ಟಿದ ಮಂಟಪದ ಅಕ್ಕಪಕ್ಕದಲ್ಲಿ ಎರಡು ಗರ್ಭಗೃಹಗಳಿವೆ. ಬಲಬದಿಯ ಗರ್ಭಗುಡಿಯ ಕಮಾನು ಮಂಟಪದಲ್ಲಿ ಬೀರ ದೇವ ಮತ್ತು ವಿಠ್ಠಲರ ಉದ್ಭವ ಲಿಂಗಗಳಿವೆ. ಹಿತ್ತಾಳೆಯ ಕುದುರೆಗಳು, ಮೊಗವಾಡಗಳು, ಕಟ್ಟಿಗೆಯ ನಾಗಗಳನ್ನು ಇಲ್ಲಿ ನೋಡಬಹುದು. ಹಿತ್ತಾಳೆ ಮಂಟಪದಲ್ಲಿ ಒಂದು ಕಂಬಳಿಯನ್ನು, ಗರ್ಭಗುಡಿಯಲ್ಲಿರುವ ದೇವರ ಎರಡೂ ಬದಿಗೆ ಎರಡು ಕೋಲುಗಳನ್ನು ಇಡಲಾಗಿದೆ. ಎಡಭಾಗದಲ್ಲಿ ವಿಠಲನ ಮಗಳಾದ ಭಾಗೂ ಅಥವಾ ಭಾಗೀರಥಿಯ ಗರ್ಭ ಗುಡಿಯಿದೆ. ಅದು ಮುಸ್ಲಿಮರ ಮದ್ರಸಾದಂತಿದೆ. ಅದರ ಹಿಂಭಾಗದಲ್ಲಿ ವಿಠ್ಠಲನ ನಿರಾಕಾರ ಶಿಲೆಯಿದೆ.

ಊರಲ್ಲಿಯ ಗೌರವಾನ್ವಿತ ಕುರುಬನ ಮನೆಯಲ್ಲಿ ದೇವರ ಹಿತ್ತಾಳೆಯ ಉತ್ಸವಮೂರ್ತಿ ಹಾಗೂ ಮೆರವಣಿಗೆ ಗಾಗಿ ಬಳಸುವ ಹಿತ್ತಾಳೆಯ ಕುದುರೆ ಇತ್ಯಾದಿ ಮೂರ್ತಿ ಗಳನ್ನು ಇಡಲಾಗಿರುತ್ತದೆ. ಬೀರದೇವರ ಉತ್ಸವ ಮೂರ್ತಿಯು ಅಶ್ವಾರೂಢವಾಗಿದ್ದರೆ, ವಿಠ್ಠಲನದು ಗರುಡಾರೂಢವಾಗಿದೆ. ಜಾತ್ರೆ ಉತ್ಸವದ ಸಂದರ್ಭದಲ್ಲಿ ಅವುಗಳನ್ನು ದೇವಾಲಯಕ್ಕೆ ಅದ್ದೂರಿಯಿಂದ ಮೆರವಣಿಗೆ ಮೂಲಕ ತರಲಾಗುತ್ತದೆ.

ಸಾತಾರ ಜಿಲ್ಲೆಯ ಕಡೋಲಿ ಸಿದ್ಧೇಶ್ವರದಲ್ಲಿರುವ ವಿಠ್ಠಲ ಬೀರಪ್ಪನ ದೇವಾಲಯದ ವಾಸ್ತುವಿನ್ಯಾಸವು ಅತ್ಯಂತ ಸುಂದರ ವಾದುದು. ರಾ.ಚಿಂ. ಢೇರೆ ಅವರು ಹೇಳುವಂತೆ "ದೇವಾಲಯದ ದಕ್ಷಿಣ, ಪೂರ್ವ ಮತ್ತು ಉತ್ತರಕ್ಕೆ ಕಲ್ಲಿನ ಕಮಾನಿನಪ್ರವೇಶದ್ವಾರವಿದೆ. ಉತ್ತರದ ಕಮಾನು ಹತ್ತು ಅಡಿ ಅಗಲ ಮತ್ತು ಹದಿನೈದು ಅಡಿ ಎತ್ತರವಿದೆ. ಕಮಾನು ಕಲ್ಲಿನ ಮೇಲೆ ಗಜಮುಖ ಕೆತ್ತಲಾಗಿದೆ. ಮಂದಿರದ ಪ್ರಾಕಾರವು ಸುಮಾರು ಒಂದೆಕರೆಯಷ್ಟಿದ್ದು, ಹತ್ತು ಅಡಿ ಎತ್ತರದ ಕಲ್ಲಿನ ಗೋಡೆ ಯಿಂದಾವೃತ್ತಗೊಂಡಿದೆ. ಒಳಗೆ ಹನ್ನೊಂದು ಅಡಿ ಎತ್ತರದ ಮೂವತ್ತು ದೀಪಮಾಲೆಯಿದೆ. ಪೂರ್ವಕ್ಕೆ ಹದಿನೈದು ಅಡಿ ಎತ್ತರದ ಮುಖ್ಯ ದೀಪಮಾಲೆಯಿದೆ. ಆವಾರದ ಕಲ್ಲುಗೋಡೆ ಯಲ್ಲಿ ಕೋಣೆಗಳಿವೆ. ಅಲ್ಲದೆ ಬಿಲ್ವಪತ್ರೆಯ ಮೂರು ಮತ್ತು ಬೇವಿನ ಎರಡು ಗಿಡಗಳಿವೆ.

ದಕ್ಷಿಣದ ಬಾಗಿಲ ಹೊರಗೆ ಮಾಕುಬಾಯಿಯ ದೇವಾಲಯವನ್ನು ಒಬ್ಬ ಭಕ್ತನು ಕಟ್ಟಿಸಿದ್ದಾನೆ. ಅಲ್ಲಿ ಎರಡು ಅಮೃತಶಿಲೆಯ ಮೂರ್ತಿಯಿದ್ದು ಮೂರ್ತಿಯ ಕೈಗಳು ಜೋಡಿಸಲ್ಪಟ್ಟಿವೆ. ಇವೆರಡೂ ಸ್ತ್ರೀಮೂರ್ತಿಯಾಗಿದ್ದು, ಅವು ಮಾಕುಬಾಯಿ ಹಾಗೂ ಅವಳ ಶಿಷ್ಯೆಯದ್ದು. ಪ್ರಾಕಾರದ ಮಧ್ಯಭಾಗದಲ್ಲಿ ಮುಖ್ಯಮೂರು ದೇಗುಲಗಳಿವೆ. ಮುಖ್ಯ ದೇವಾಲಯದ ಪ್ರವೇಶ, ಪಡಸಾಲೆ 10'×5'ಯಿದ್ದು ಗರ್ಭ ಗುಡಿಯು 15'×10'ಯ ಕಲ್ಲಿನದಿದೆ. ಅಲ್ಲಿ ಪೂರ್ವಾಭಿಮುಖ ಒಂದು ಕಮಾನು ಇದ್ದು, ಕಮಾನಿನಲ್ಲಿ ಮುಖವಾಡ ಹಾಕಿದ ಮೂರು ಕಲ್ಲಿನ ಲಿಂಗಗಳಿವೆ. ಮುಖವಾಡದ ಕಣ್ಣು ಬೆಳ್ಳಿಯದು. ಎರಡು ಮುಖವಾಡ ಗಂಡಸರದಿದ್ದು, ವಿಶೇಷ ವೆಂದರೆ ಅವುಗಳಿಗೆ ಮೀಸೆಗಳಿವೆ. ಆ ಎರಡು ಮುಖವಾಡ ಗಳಲ್ಲಿ ಒಂದು ವಿಠ್ಠಲನದು, ಮತ್ತೊಂದು ಬೀರಪ್ಪನದು.ನಡುವಿನ ಚಿಕ್ಕಮುಖವಾಡ ಸ್ತ್ರೀಯದಾಗಿದ್ದು ಅದು ಕಾಮು ಬಾಯಿಯದು. ಮಂದಿರದ ಆವಾರದ ಎಲ್ಲ ಗೋಡೆಗಳಿಗೆ ಸುಣ್ಣ ಬಳಿಯಲಾಗಿದ್ದು, ಎಲ್ಲ ದೇವರಿಗೂ ಸಾಕಷ್ಟು ಸಿಂಧೂರ ಲೇಪಿಸಲಾಗಿದೆ. ಮುಖ್ಯಮಂದಿರದ ದಕ್ಷಿಣಕ್ಕೆ ಪುಟ್ಟದೊಂದು ಧರ್ಮಶಾಲೆಯಿದೆ. ಅದರ ದಕ್ಷಿಣಕ್ಕೆ ಒಂದು 10'×10' ಅಡಿಯ ದೇವಾಲಯವಿದೆ. ಅಲ್ಲಿ ಬೀರಪ್ಪನ ಜೊತೆಗೆ ವಿಠ್ಠಲ ರುಕ್ಮಿಣಿಯ ಸುಮಾರು ಎರಡೂವರೆ ಅಡಿ ಎತ್ತರದ ಮೂರ್ತಿ ಗಳಿವೆ. ಹಾಗೆಯೇ ಈ ದೇವಸ್ಥಾನದಲ್ಲಿ ಒಂದು ಮಧ್ಯಮ ಆಕಾರದ ಶಿವಲಿಂಗವೂ ಇದೆ."4

ಇಟ್ಟಪ್ಪನನ್ನು ಕುರಿತು ಸಾಹಿತ್ಯ

ಕನ್ನಡ ಮತ್ತು ಮರಾಠಿ ಭಾಷೆಗಳೆರಡರಲ್ಲಿಯೂ ಈತನನ್ನು ಕುರಿತು ಸಾಹಿತ್ಯ ರಚನೆಗೊಂಡಿದೆ. ಇದು ಹೆಚ್ಚಾಗಿ ಮೌಖಿಕ ರೂಪದಲ್ಲಿರುವಂಥದ್ದು. ಕನ್ನಡದಲ್ಲಿ ಡೊಳ್ಳಿನ ಹಾಡುಗಳಲ್ಲಿ ಇಟ್ಟಪ್ಪನ ಜೀವನ, ಆತನ ವೀರತನವನ್ನು ಕೊಂಡಾಡಲಾಗಿದೆ. ಮರಾಠಿಯಲ್ಲಿರುವ ಎರಡು ಹಾಡುಗಳು ಇಟ್ಟಪ್ಪ ಮತ್ತು ಬೀರಪ್ಪರು ಪಟ್ಟಣ ಕಡೋಲಿಗೆ ಬಂದ ಸಂದರ್ಭ, ಅಲ್ಲಿ ದೇವಸ್ಥಾನವನ್ನು ನಿರ್ಮಿಸಿದ ವಿವರಗಳನ್ನು ಅತ್ಯಂತ ರೋಚಕವಾಗಿ ನಿರೂಪಿಸುತ್ತವೆ. ಅಲ್ಲದೇ ಈ ಹಾಡು ಗಳಲ್ಲಿ ಇವರಿಬ್ಬರು ಸೋದರರೆಂದು, ಅವರ ಶಿಷ್ಯ ಮಾಳಿಂಗ ರಾಯನೆಂದೂ ಹೇಳಲಾಗಿದೆ. ವಾ.ದಾ. ಮುಂಡಲೆ, ದುರ್ಗಾ ಭಾಗವತ, ರೆವ್ಹರೆಂಡ ದಲರಿ, ಸೊಂಥಾಮಯರ, ರಾ.ಚಿಂ. ಢೇರೆ, ಜ್ಯೋತಿ ಹೊಸೂರು ಮೊದಲಾದ ವಿದ್ವಾಂಸರು ಇಟ್ಟಪ್ಪ ಅಥವಾ ವಿಠಲನ ಬಗ್ಗೆ ಸಂಶೋಧನೆ ಕೈಕೊಂಡು ಅನೇಕ ಹೊಸ ಸಂಗತಿಗಳನ್ನು ಬೆಳಕಿಗೆ ತಂದಿದ್ದಾರೆ. ಢೇರೆ ಅವರಂತೂ ತಮ್ಮ ಶ್ರೀ ವಿಠ್ಠಲ ಒಂದು ಮಹಾಸಮನ್ವಯ ಎಂಬ ಕೃತಿಯಲ್ಲಿ ಇಟ್ಟಪ್ಪನ ಪರಂಪರೆ, ನೆಲೆಗಳು, ಆಚರಣೆ ಗಳ ಕುರಿತು ಸಮಗ್ರವಾಗಿ ಅಧ್ಯಯನ ಮಾಡಿದ್ದಾರೆ. ಜ್ಯೋತಿ ಹೊಸೂರ ಅವರು ಪಟ್ಟಣ ಕಡೋಲಿಯ ವಿಠಲನ ಆರಾಧನೆ ಕುರಿತು ಲೇಖನವೊಂದರಲ್ಲಿ ಚರ್ಚಿಸಿದ್ದಾರೆ. ಇಷ್ಟಾಗಿಯೂ ಕರ್ನಾಟಕದ ಗಡಿಭಾಗದಲ್ಲಿರುವ ಇಟ್ಟಪ್ಪನ ನೆಲೆಗಳು, ಅಲ್ಲಿನಡೆಯುವ ಆಚರಣೆಗಳನ್ನು ಕ್ಷೇತ್ರಕಾರ್ಯದ ಮೂಲಕ ಸಮಗ್ರವಾಗಿ ಪರಿಶೀಲಿಸಿ ಅಧ್ಯಯನಕ್ಕೊಳಪಡಿಸಬೇಕಾಗಿದೆ. ಅಂದಾಗ ಮಾತ್ರ

ಇಟ್ಟಪ್ಪನ ಸಂಸ್ಕೃತಿ, ಇತಿಹಾಸ, ಸಾಹಿತ್ಯಪೂರ್ಣಪ್ರಮಾಣದಲ್ಲಿ ಅನಾವರಣಗೊಳ್ಳುವ ಸಾಧ್ಯತೆಯಿದೆ. ಸಂಶೋಧಕರು ಇಂಥ ಪರಂಪರೆಗಳತ್ತ ಆಸಕ್ತಿ ವಹಿಸ ಬೇಕಾಗಿದೆ.

ಪ್ರಭಾವ

ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗಗಳಲ್ಲಿ ಇಟ್ಟಪ್ಪನ ಪ್ರಭಾವ ದಟ್ಟವಾಗಿರುವುದನ್ನು ಗುರುತಿಸಲು ಸಾಧ್ಯವಿದೆ. ಕರ್ನಾಟಕದ ಬಹಳಷ್ಟು ಕುರಿಗಾರರು ಪ್ರತಿವರ್ಷಪಟ್ಟಣ ಕಡೋಲಿಯಲ್ಲಿ ನಡೆಯುವ ಜಾತ್ರೆಗೆ ತಪ್ಪದೆ ಹೋಗು ತ್ತಾರೆ. ಅಲ್ಲಿಯ ಪೂಜಾರಿಗಳ ಮನೆಯಲ್ಲಿದ್ದುಕೊಂಡು ಭಕ್ತಿ ಯನ್ನು ಸಮರ್ಪಿಸಿ ಕಾಣಿಕೆಗಳನ್ನು ಸಲ್ಲಿಸಿ ಬರುತ್ತಾರೆ. ಹಾಗೆಯೇ ಅಲ್ಲಿಯ ಪೂಜಾರಿಗಳು ಆಯಾ ಭಕ್ತರ ಊರಿಗೆ ಹೋಗಿ ಕಾಣಿಕೆಗಳನ್ನು ತೆಗೆದುಕೊಂಡು ಬರುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ಆ ಎಲ್ಲ ಕುರುಬರು ವಿಠ್ಠಲ ಎನ್ನದೆ ಇಟ್ಟಪ್ಪ ಎಂದೇ ಕರೆಯುತ್ತಾರೆ. ಹೀಗೆ ಬೆಳಗಾವಿ ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಇಟ್ಟಪ್ಪನು ಆರಾಧನೆ ಗೊಳ್ಳುತ್ತಿದ್ದಾನೆ. ಕುರುಬರ ಮನೆತನಗಳಿಗೆ ಈತ ಮನೆದೇವರಾಗಿ ಸಾಕಷ್ಟು ಪ್ರಭಾವ ಬೀರಿದ್ದಾನೆ. ಉದಾಹರಣೆಗೆ ನವಲ ಗುಂದ ತಾಲೂಕಿನ ನಾವಳ್ಳಿ ಗ್ರಾಮವೊಂದರಲ್ಲಿಯೇ ಹಿರೇ ಹೊಳಿ ಹೆಸರಿನ ಸುಮಾರು ಮೂವತ್ತು ಮನೆತನಗಳಿವೆ. ಆ ಎಲ್ಲ ಮನೆತನಗಳ ಮನೆದೇವರು ಇಟ್ಟಪ್ಪ. ಪ್ರತಿಯೊಂದು ಮನೆತನದಲ್ಲಿ ಒಬ್ಬರಿಗಾದರೂ ಇಟ್ಟಪ್ಪ, ಇಟ್ಟವ್ವ, ವಿಟ್ಟಪ್ಪ ಎಂಬ ಹೆಸರನ್ನಿಡಲಾಗಿದೆ. ಇವರೆಲ್ಲ ಪ್ರತಿವರ್ಷ ಬೆಳಗಾವಿ ಜಿಲ್ಲೆಯ ರಾಮದುರ್ಗದಿಂದ ಐದು ಕಿ.ಮೀ. ಅಂತರದಲ್ಲಿರುವ ತುರುವನೂರ ಗ್ರಾಮದ ಹೊರವಲಯದಲ್ಲಿರುವ ಇಟ್ಟಪ್ಪನ ದೇವಾಲಯಕ್ಕೆ ಹೋಗುತ್ತಾರೆ. ಅಲ್ಲಿ ನಾಲ್ಕೈದು ದಿವಸನಡೆಯುವ ಉತ್ಸವದಲ್ಲಿ ಪಾಲ್ಗೊಂಡು ತಮ್ಮ ಸೇವೆಯನ್ನು ಸಲ್ಲಿಸಿಬರುತ್ತಾರೆ. ಅಲ್ಲದೇ ಇಟ್ಟಣ್ಣವರ, ಈಟಿ ಇತ್ಯಾದಿ ಹೆಸರುಗಳು ಕೆಲವು ಕುರುಬರ ಮನೆತನದ ಅಡ್ಡಹೆಸರುಗಳಾಗಿವೆ.

ಹೀಗೆ ಹಾಲುಮತ ಸಮಾಜದ ಸಾಂಸ್ಕೃತಿಕ ವೀರನಾಗಿದ್ದ ಇಟ್ಟಪ್ಪನ ಇತಿವೃತ್ತ ಆತನ ವಿಶಿಷ್ಟತೆ, ಆತನ ಹೆಸರಿನಲ್ಲಿನಡೆಯುವ ಜಾತ್ರೆ ಉತ್ಸವಗಳ ಬಗ್ಗೆ ಆಳವಾದ ಅಧ್ಯಯನನಡೆಯಬೇಕಾಗಿದೆ. ಜಾಗತೀಕರಣದ ಈ ಹೊತ್ತಿನಲ್ಲಂತೂ ಇಂಥ ಸಾಂಸ್ಕೃತಿಕ ವೀರರ ಕುರಿತು ದಾಖಲೀಕರಣ ಮತ್ತು ಸಂಶೋಧನೆ ನಡೆಯಬೇಕಾದುದು ಅಗತ್ಯವಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ರಾ.ಚಿಂ. ಢೇರೆ., ಶ್ರೀ ವಿಠ್ಠಲ ಒಂದು ಮಹಾಸಮನ್ವಯ, ಪುಟ 138.
2. ಶಂಬಾ ಕೃತಿ ಸಂಪುಟ 3, ಪುಟ 466.
3. ಜ್ಯೋತಿ ಹೊಸೂರು, ಪಂಡರಾಪುರ ವಿಠಲನೂ ಕನ್ನಡಿಗರ ಕೈಬಿಟ್ಟ, ಕಡೋಲಿಯ ವಿಠಲನೂ ಕನ್ನಡಿಗರಿಗೆ ಕೈಕೊಟ್ಟ, ಪ್ರಪಂಚ (ವಾರಪತ್ರಿಕೆ, ಸಂ. ಪಾಟೀಲ ಪುಟ್ಟಪ್ಪ, ಹುಬ್ಬಳ್ಳಿ), ಅಕ್ಟೋಬರ 3, 1965.
4. ರಾ.ಚಿಂ. ಢೇರೆ., ಅದೇ., ಪುಟ 314.

ಕರ್ನಾಟಕ ಏಕೀಕರಣದಲ್ಲಿ ಕರ್ನಾಟಕ ಸಂಘಗಳ ಪಾತ್ರ

– ಜಯದೇವಪ್ಪ ಜೈನಕೇರಿ

ಎರಡು ಸಾವಿರ ವರ್ಷಗಳ ದೀರ್ಘ ಇತಿಹಾಸ ಹೊಂದಿರುವ ಕನ್ನಡ ಭಾಷೆ, ಕರ್ನಾಟಕ ರಾಜ್ಯ, ಸಾಂಸ್ಕೃತಿಕವಾಗಿ ಅಖಂಡವಾದದ್ದು ಆದರೆ ರಾಜಕೀಯವಾಗಿ ಅನೇಕ ಏರಿಳಿತಗಳನ್ನು ಕಂಡಿದೆ. ಭಾರತದ ಇತಿಹಾಸ ದೊಂದಿಗೆ ಅನೇಕ ರಾಜರ, ಆಳ್ವಿಕೆಗೆ ಒಳಪಟ್ಟರೂ ಸಂಸ್ಕೃತಿ ಮತ್ತು ಭಾಷೆ ಮೂಲಕ ತನ್ನ ಅಸ್ಮಿತೆಯನ್ನು ಇಂದಿಗೂ ಕಾಪಾಡಿಕೊಂಡು ಬಂದಿದೆ. ಉತ್ತರದಲ್ಲಿ ಬಹುಮನಿ ಸುಲ್ತಾನರು, ದಕ್ಷಿಣದಲ್ಲಿ ವಿಜಯನಗರ ರಾಜ್ಯ ಸ್ಥಾಪನೆ ಗೊಂಡಾಗ ಸ್ವಲ್ಪಮಟ್ಟಿಗೆ ವಿಭಿನ್ನತೆ ಕಾಣಿಸಿದರೂ ವಿಜಯನಗರ ಪತನಾನಂತರ ಕನ್ನಡ ನಾಡು ಅನೇಕ ಪಾಳೆಪಟ್ಟುಗಳಾಯಿತು. ಟಿಪ್ಪುವಿನ ಕಾಲದಲ್ಲಿ ಈ ತುಂಡರಸರ ಪ್ರಾಬಲ್ಯ ಕಡಿಮೆಯಾಗಿದ್ದು ಕಂಡುಬರುತ್ತದೆ. ನಂತರ ಬಂದ ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ, ಕನ್ನಡನಾಡನ್ನು 22 ಭಾಗಗಳನ್ನಾಗಿಸಿದರು. ರಾಜಕೀಯವಾಗಿ ಈ ಎಲ್ಲ ದೌರ್ಜನ್ಯಗಳನ್ನು, ಎದುರಿಸಿಯೂ ಕನ್ನಡ ಭಾಷೆ ತನ್ನತನವನ್ನು ಉಳಿಸಿಕೊಂಡು ಬಂದಿತು.

ಭಾರತದ ಸಂದರ್ಭದಲ್ಲಿ ಭಾಷಾವಾರು ಪ್ರಾಂತ್ಯರಚನಾ ಚಳುವಳಿ 1850 ರಿಂದಲೇ ಕಂಡುಬರುತ್ತದೆ, 1874ರಿಂದ ಬಂಗಾಳ, ಅಸ್ಸಾಂ, 1876ರಿಂದ ಒರಿಸ್ಸಾದಲ್ಲಿ, ಭಾಷಾಚಳುವಳಿಗಳು ಆರಂಭವಾದವು. ಕರ್ನಾಟಕದಲ್ಲಿ 1856ರಲ್ಲಿಯೇ ಕರ್ನಾಟಕದ ಏಕೀಕರಣ ಚಳುವಳಿಗೆ ಚಾಲನೆ ನೀಡಿದವರು ಡೆಪ್ಯೂಟಿ ಚನ್ನಬಸಪ್ಪನವರು. ಧಾರವಾಡವನ್ನು ಕೇಂದ್ರವನ್ನಾಗಿ, ಉತ್ತರ ಕನ್ನಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿ ಏಕೀಕರಣ ಚಳುವಳಿ ಪ್ರಾರಂಭ ವಾಯಿತು. 1890ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯೊಂದಿಗೆ ಏಕೀಕರಣ ಚಳುವಳಿಗೆ ಸಂಘಟನಾತ್ಮಕ ಬೆಂಬಲ ದೊರಕಿತು. ಬೆನಗಲ್ ರಾಮರಾಯರು ಆಲೂರು ವೆಂಕಟರಾಯರು ಕರ್ನಾಟಕ ಏಕೀಕರಣ ಕುರಿತು ಉಪನ್ಯಾಸಗಳು ಲೇಖನಗಳ ಮೂಲಕ ಜನಜಾಗೃತಿ ಮೂಡಿಸುವ ಪ್ರಯತ್ನ ನಡೆಸಿದರು. 1898ರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ರಾಯಲ್ ಕಮಿಷನ್ ಮುಂಬೆ ಭಾಷಾವಾರು ಪ್ರಾಂತ್ಯ ರಚನೆಯ ಅಗತ್ಯತೆಯನ್ನು ಮಂಡಿಸಿದರು.

1915ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ರಚನೆಯೊಂದಿಗೆ ದಕ್ಷಿಣ ಕರ್ನಾಟಕದಲ್ಲಿಯೂ ಏಕೀಕರಣ ಚಳುವಳಿಗೆ ಚಾಲನೆ ದೊರಕಿತು. ಕನ್ನಡ ಮಾತಾಡುವ ಎಲ್ಲಾ ಪ್ರಾಂತ್ಯಗಳ ಸದಸ್ಯರನ್ನು ಹೊಂದುವ ಮೂಲಕ ಅಖಂಡ ಕರ್ನಾಟಕದ ಕಲ್ಪನೆಗೆ ದಾರಿಯಾಯಿತು. ಕರ್ನಾಟಕ ಚಳುವಳಿಗೆ ಸಾಂಸ್ಕೃತಿಕ ಸ್ವರೂಪ ಬಂದಿತು. ಕನ್ನಡ ಸಾಹಿತ್ಯ ಪರಿಷತ್ತಿನ ಮೊಟ್ಟ ಮೊದಲ ಸಮ್ಮೇಳನ ದಲ್ಲಿಯೇ ಕರ್ನಾಟಕ ಪ್ರಾಂತ್ಯ ರಚನೆಗೆ ಬಲವಾದ ಒತ್ತಾಯ ಕಂಡುಬಂದಿತು. ಎಲ್ಲರ ಗುರಿ ಏಕೀಕರಣದತ್ತ ಹರಿಯು ವಂತಾಯಿತು. 1917ರಲ್ಲಿ ಈ ಉದ್ದೇಶ ಸಾಧನೆಗೆ ಕರ್ನಾಟಕ ಸಭೆ ಸ್ಥಾಪನೆಯಾಯಿತು. ಕರ್ನಾಟಕ ಪ್ರಾಂತ್ಯ ರಚನೆಗೆ ಅಂದಿನ ಬ್ರಿಟಿಷ್ ಕಾರ್ಯದರ್ಶಿ ಮಾಂಟಿಗ್ಯೂ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಕರ್ನಾಟಕ ವಿದ್ಯಾವರ್ಧಕ ಸಂಘ (1890) : ಕಳೆದ 119 ವರ್ಷಗಳಿಂದ ಕನ್ನಡ-ಕನ್ನಡಿಗ-ಕರ್ನಾಟಕದ ನಾಡಿನ ಸರ್ವತೋಮುಖ ಉನ್ನತಿಗಾಗಿ ಶ್ರಮಿಸುತ್ತಾ ಬಂದಿರುವ ಇಂದಿಗೂ ಕ್ರಿಯಾಶೀಲವಾಗಿರುವ ಏಕೈಕ ಸಂಸ್ಥೆ : ಕರ್ನಾಟಕ

ವಿದ್ಯಾವರ್ಧಕ ಸಂಘ ಧಾರವಾಡ. ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ. ಕವಿ-ಸಾಹಿತಿ, ಕಲಾವಿದರನ್ನು ಬೆಳೆಸುತ್ತಾ ಬಂದಿದೆ. ನಾಡಿನಾದ್ಯಂತ, ಹೊರನಾಡುಗಳಲ್ಲಿಯೂ ಕನ್ನಡ ಡಿಂಡಿಮ ವನ್ನು ವಿಸ್ತಾರಗೊಳಿಸಿರುವ ಸಂಘ, ಗ್ರಂಥ ಪ್ರಕಟನೆಯಲ್ಲಿಯೂ ತೊಡಗಿದೆ. ಸುಮಾರು 100ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ಧಾರವಾಡದ ಕೇಂದ್ರ ಸ್ಥಳದಲ್ಲಿರುವ ಸಂಘದ ಸಭಾಭವನಗಳು, ಕಛೇರಿ, ಗ್ರಂಥಾಲಯ ಎಲ್ಲರ ಗಮನ ಸೆಳೆದಿವೆ. ಅದು ರಾಜ್ಯ ಸರ್ಕಾರದ ಅನುದಾನ ಹೊಂದಿರುವ, ತನ್ನದೆ ಆದ ಸ್ವಂತ ಭವನ, ವಾಣಿಜ್ಯ ಸಂಕೀರ್ಣ ಹೊಂದಿರುವ ಸಂಸ್ಥೆಯಾಗಿದೆ. ಕರ್ನಾಟಕ ವಿದ್ಯಾವರ್ಧಕ ಸಂಘವು ರಾಜ್ಯದ ಮಾತ್ರವಲ್ಲದೆ ರಾಷ್ಟ್ರದಲ್ಲೇ ಘನತೆವೆತ್ತ ಸಂಸ್ಥೆಯಾಗಿದೆ. ಅತ್ಯಂತ ಹಿರಿದಾದ ಸಾಹಿತ್ಯಕ ಸಂಸ್ಥೆ, ಸ್ವಾತಂತ್ರ್ಯ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿ, ಗೋಕಾಕ್ ಚಳುವಳಿ, ಸಂದರ್ಭಗಳಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪನೆಯಾಗಲು, ಧಾರವಾಡ ಆಕಾಶವಾಣಿ ನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಸ್ಥಾಪನೆಗೊಳ್ಳಲು ವೇದಿಕೆಯಾಗಿ ದುಡಿದಿದೆ. ನಾಡಿನ ಹೊರನಾಡಿನ ಸಂಘ ಸಂಸ್ಥೆಗಳಿಗೆ ಮಾದರಿಯೆನಿಸಿದೆ, ಸ್ಪೂರ್ತಿ ನೀಡಿದೆ. ನಾಡಿನ ಹೊರನಾಡಿನ ಕನ್ನಡ ಸಂಸ್ಥೆಗಳಿರುವಲ್ಲಿಗೇ ಹೋಗಿ ಸಂಯುಕ್ತ ಆಶ್ರಯದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಕನ್ನಡ ಕಟ್ಟುವ ಕೆಲಸದಲ್ಲಿ ಮುಂಚೂಣಿಯಲ್ಲಿದೆ. ಅದಕ್ಕೆ 2006ರಲ್ಲಿ ಕರ್ನಾಟಕ ಏಕೀಕರಣ ಪ್ರಶಸ್ತಿ ಮತ್ತು ಬಂಗಾರದ ಪದಕ ದೊರಕಿದೆ.

ಶ್ರೀ ರಾ.ಲ. ದೇಶಪಾಂಡೆ ಅಧ್ಯಕ್ಷರಾಗಿ ಆರಂಭವಾದ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಸ್ತುತ ಅಧ್ಯಕ್ಷರಾಗಿ ನಾಲ್ಕು ದಶಕಗಳಿಂದ ನಾಡೋಜ ಪಾಟೀಲ ಪುಟ್ಟಪ್ಪನವರು, ಉಪಾಧ್ಯಕ್ಷರಾಗಿ ಶ್ರೀ ಎಂ.ಎಂ. ಹೂಲಿ ವಕೀಲರು ಹುಬ್ಬಳ್ಳಿ, ಗೌರವ ಕಾರ್ಯದರ್ಶಿಯಾಗಿ ಪ್ರೊ. ಬಿ.ವಿ. ಗುಂಜೆಟ್ಟಿ ಅವರು ಸಂಘವನ್ನು ಮುನ್ನಡೆಸುತ್ತಿದ್ದಾರೆ.

1918ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಮೊದಲ ಕರ್ನಾಟಕ ಸಂಘದ ಸ್ಥಾಪನೆಯಾಯಿತು. ನಂತರ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕರ್ನಾಟಕ ಸಂಘ ಸ್ಥಾಪನೆಯಾಯಿತು. ಇದರಿಂದಾಗಿ ನಾಡು ನುಡಿಗಳ ಸೇವೆಗೆ ಚಾಲನೆ ದೊರೆಯಿತು. ನಂತರದಲ್ಲಿ ಒಂದು ಚಳುವಳಿಯೋಪಾದಿಯಲ್ಲಿ ಹಳೆ ಮೈಸೂರಿನ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕರ್ನಾಟಕ ಸಂಘಗಳು ಸ್ಥಾಪನೆಯಾದವು. ಕನ್ನಡ ಸಾಹಿತ್ಯ ಪರಿಷತ್ತು ಅಂದಿನ ನಾಲ್ವಡಿ ಕೃಷ್ಣರಾಜ ಒಡೆಯರಿಂದ ಸ್ಥಾಪನೆಯಾಗಿ ರಾಜ ಪೋಷಿತ ವಾಗಿದ್ದರಿಂದಾಗಿ, ಜನ ಸಾಮಾನ್ಯರು ಮತ್ತು ವಿದ್ಯಾರ್ಥಿಗಳು, ಸಾರ್ವಜನಿಕರ ದೇಣಿಗೆಯಿಂದ ಮತ್ತು ತಮ್ಮದೇ ಆದ ಸಂಪನ್ಮೂಲಗಳಿಂದ ಕನ್ನಡ ಭಾಷಾ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳಲು ಕರ್ನಾಟಕ ಸಂಘಗಳು ವೇದಿಕೆಗಳಾದವು. ಅಂದಿನ ಖ್ಯಾತ ಸಾಹಿತಿಗಳ, ಭಾಷಾ ವಿದ್ವಾಂಸರ ಬೆಂಬಲವೂ ಕರ್ನಾಟಕ ಸಂಘಗಳಿಗೆ ದೊರಕಿತು.

ಭಾರತದ ಸ್ವಾತಂತ್ರ್ಯ ಚಳುವಳಿಯ ಜೊತೆಗೆ ಕರ್ನಾಟಕ ಏಕೀಕರಣ ಚಳುವಳಿಯೂ 1920ರಲ್ಲಿ ನಾಗಪುರ ಕಾಂಗ್ರೆಸ್ ಅಧಿವೇಶನದ ಮುಖ್ಯ ವಿಷಯಗಳಾದವು. ಕಡಪ ರಾಘವೇಂದ್ರ ರಾಯರ ನೇತೃತ್ವದಲ್ಲಿ ಕನ್ನಡನಾಡಿನ ಎಲ್ಲ ಪ್ರಾಂತ್ಯಗಳಿಂದ 80 ಪ್ರತಿನಿಧಿಗಳು ಭಾಗವಹಿಸಿದ್ದು ವಿಶೇಷ. 1924ರಲ್ಲಿ ಮಹಾತ್ಮಾಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚಿತವಾಗಿ ಕರ್ನಾಟಕ ಏಕೀಕರಣ ಸಭಾ ಅಸ್ತಿತ್ವಕ್ಕೆ ಬಂದಿತು. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿ ಸಹ ಏಕೀಕರಣ ಚಳುವಳಿ ನೇತೃತ್ವ ವಹಿಸಿತು. ನಂತರದಲ್ಲಿ ಚಳುವಳಿ ತೀವ್ರರೂಪ ಪಡೆಯಿತು. 1836ರಿಂದ 40 ರವರೆಗೆ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನಗಳನ್ನು ಬೆಳಗಾವಿ, ಧಾರವಾಡ ಮತ್ತು ಸೊಲ್ಲಾಪುರಗಳಲ್ಲಿ ನಡೆಸಿ ಜನಜಾಗೃತಿ ಮೂಡಿಸುವ ಪ್ರಯತ್ನ ನಡೆಯಿತು. 1936ರಲ್ಲಿ ಸಿಂಧ್ ಮತ್ತು ಒರಿಸ್ಸಾ ಪ್ರಾಂತ್ಯ ರಚನೆಯೊಂದಿಗೆ, ದಕ್ಷಿಣದಲ್ಲಿ ಆಂಧ್ರ, ಕೇರಳ, ಕರ್ನಾಟಕಗಳಲ್ಲಿ ಭಾಷಾವಾರು ಪ್ರಾಂತ್ಯ ಚಳುವಳಿಗೆ ಹೆಚ್ಚಿನ ಬೆಂಬಲ ದೊರಕಿತು. ಮುಂಬಯಿ ಮತ್ತು ಮದ್ರಾಸ್ ಶಾಸನ ಸಭೆಗಳಲ್ಲಿ ಕಾಂಗ್ರೆಸ್ ಬಹುಮತ ಪಡೆಯಿತು. ಈ ಎರಡೂ ಕಡೆ ಭಾಷಾವಾರು ಪ್ರಾಂತ್ಯ ರಚನೆಗೆ ಗೊತ್ತುವಳಿಯನ್ನು ಕಾಂಗ್ರೆಸ್ ಅಂಗೀಕರಿಸಿತು.

ಕಾಂಗ್ರೆಸ್‌ನ ಈ ಕರೆಗೆ ವಿವಿಧ ಭಾಗಗಳಲ್ಲಿ ಹಂಚಿಹೋಗಿದ್ದ ಕನ್ನಡಿಗರು ತೀವ್ರವಾಗಿ ಸ್ಪಂದಿಸಿದರು. ರಾಜಕೀಯವಾಗಿ ಮಾತ್ರವಲ್ಲದೆ ಧಾರ್ಮಿಕ ಮುಖಂಡರು ಸಾಹಿತಿಗಳು, ಕಲಾವಿದರು ಕರ್ನಾಟಕ ಏಕೀಕರಣದ ಕನಸು ಕಂಡರು. ಸಾಮಾನ್ಯರು, ಕೃಷಿಕರು ಕಾರ್ಮಿಕರು ತಮ್ಮದೇ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಕವಿಗಳು ಕವನಗಳ ಮೂಲಕ ಜನತೆಯಲ್ಲಿ ಸ್ಫೂರ್ತಿ ತುಂಬಿದರು. ಡಾ. ಡಿ.ಎಸ್. ಕರ್ಕಿ ಅವರ "ಹಚ್ಚೇವು ಕನ್ನಡದ ದೀಪ ಸಿರಿನುಡಿಯ ದೀಪ" ಜನಪ್ರಿಯವಾಯಿತು. ಹುಯಿಲುಗೋಳ ನಾರಾಯಣರಾಯರ "ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು", ಗೀತೆಯಂತೂ ಪ್ರತಿಯೊಬ್ಬ ಕನ್ನಡಿಗರ ಮಂತ್ರವಾಯಿತು. ರಾಷ್ಟ್ರಕವಿ ಕುವೆಂಪು ಅವರ "ಬಾರಿಸು ಕನ್ನಡ ಡಿಂಡಿಮವ" ಕವನ ಕನ್ನಡ ಭಾಷಿಕರ ಸ್ಫೂರ್ತಿಯ ಚಿಲುಮೆಯಾಯಿತು. ನೂರಾರು ಕವಿಗಳು, ಸಾಹಿತಿಗಳು ಕನ್ನಡ ಏಕೀಕರಣದ ಕನಸನ್ನು ನನಸಾಗಿಸುವ ಕವನಗಳನ್ನು ರಚಿಸಿ ವೇದಿಕೆಗಳಲ್ಲಿ ವಾಚಿಸಿದರು. ಈ ಎಲ್ಲ ಕಾರ್ಯಗಳಿಗೆ ವೇದಿಕೆಯಾಗಿದ್ದು 1890ರಲ್ಲಿ ಆರಂಭವಾದ ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ. 1914–15ರಲ್ಲಿ ಆರಂಭವಾದ ಕನ್ನಡ ಸಾಹಿತ್ಯ ಪರಿಷತ್ತು. 1916ರಲ್ಲಿ ಕನಸಿನ "ಕರ್ನಾಟಕ" ಹೆಸರನ್ನು ಹೊತ್ತು ಕನ್ನಡ ನಾಡಿನ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ, ಗ್ರಾಮ ಮಟ್ಟದಲ್ಲಿ ಆರಂಭವಾದ ಕರ್ನಾಟಕ ಸಂಘಗಳು, 1918ರಲ್ಲಿ ಪ್ರಾರಂಭವಾದ ಬೆಂಗಳೂರು ಸೆಂಟ್ರಲ್ ಕಾಲೇಜು ಕರ್ನಾಟಕ ಸಂಘವೇ ದಾಖಲೆಗಳ ಪ್ರಕಾರ ಮೊದಲನೆಯದು ಎಂದು ಗುರುತಿಸಲಾಗಿದೆ. ಇದರಿಂದ ಸ್ಫೂರ್ತಿಗೊಂಡ ಅನೇಕ ಕರ್ನಾಟಕ ಸಂಘಗಳು ನಾಡಿನಾದ್ಯಂತ ಜನತೆಯನ್ನು ಏಕೀಕರಣಕ್ಕೆ ಮಾನಸಿಕವಾಗಿ ಸಿದ್ಧಗೊಳಿಸುವುದರಲ್ಲಿ ಮಹತ್ವದ ಪಾತ್ರವಹಿಸಿದವು. ಸ್ವಾತಂತ್ರ್ಯಾಂಧೋಲನದ ಜೊತೆ ಜೊತೆಗೆ ಕರ್ನಾಟಕ ಏಕೀಕರಣಕ್ಕೂ ರಾಜಕೀಯವಾಗಿ ಪ್ರಾಮುಖ್ಯತೆ ದೊರೆಯಿತು.

ಕನ್ನಡ ಸಾಹಿತ್ಯ ಪರಿಷತ್ತು : ಮೈಸೂರು ಮಹಾರಾಜರ ದೂರದೃಷ್ಟಿಯ ಫಲವಾಗಿ ಸ್ಥಾಪಿತವಾದ ಕರ್ನಾಟಕ ಸಾಹಿತ್ಯ ಪರಿಷತ್ತು ದಿನಾಂಕ : 03–05– 1915 ರಂದು ಬೆಂಗಳೂರಲ್ಲಿ ಆರಂಭವಾಯಿತು. ಕಂಠೀರವ ನರಸಿಂಹರಾಜ ಒಡೆಯರ್ ಅದರ ಸ್ಥಾಪಕ ಅಧ್ಯಕ್ಷರಾಗಿದ್ದರು. ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ರಾಜಮಂತ್ರ ಪ್ರವೀಣ ಶ್ರೀ ಹೆಚ್.ವಿ. ನಂಜುಂಡಯ್ಯನವರನ್ನು ಆರಿಸಲಾಯಿತು. ಆರಂಭದಲ್ಲಿ ರಾಜರು ಮಂತ್ರಿಗಳು ಅಧಿಕಾರಿಗಳು ಸಮಾಜದ ಮೇಲ್ವರ್ಗದವರು ಮಾತ್ರ ಪದಾಧಿಕಾರಿಗಳೂ, ಸದಸ್ಯರು ಆಗಿದ್ದರಿಂದ ಜನಸಾಮಾನ್ಯರು ದೂರವೇ ಉಳಿದಿದ್ದರು. ಕಾಲಧರ್ಮಕ್ಕನುಗುಣವಾಗಿ ಪ್ರಸಿದ್ಧ ವಿದ್ವಾಂಸರು, ಸಾಹಿತಿಗಳು, ಸಂಶೋಧಕರು ಸದಸ್ಯರಾದರು. ಮೈಸೂರು ರಾಜ್ಯದ ಆರ್ಥಿಕ ಸಾಂಸ್ಕೃತಿಕ ಅಭಿವೃದ್ಧಿಗಾಗಿ ಸ್ಥಾಪಿತವಾದ ಸಂಸ್ಥೆ ಕ್ರಮೇಣ ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯದ ಸರ್ವತೋಮುಖ ಬೆಳವಣಿಗೆ, ಕನ್ನಡದ ಸ್ಥಾನಮಾನ ಹಾಗೂ ಕನ್ನಡ ಏಕೀಕರಣಕ್ಕಾಗಿ ಜನಜಾಗೃತಿ ಮೂಡಿಸಿ, ಮಹತ್ಕಾರ್ಯಗಳನ್ನು ಸಾಧಿಸುವ ಉದ್ದೇಶ ಹೊಂದಿತ್ತು. ಹಳೆ ಮೈಸೂರು ಪ್ರಾಂತ್ಯದಲ್ಲಿ ಕನ್ನಡ ವಾತಾವರಣ ನಿರ್ಮಿಸುವ ಸಲುವಾಗಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಲು ಆಳುವ ಸರ್ಕಾರದ ಮೇಲೆ ಒತ್ತಡ ತಂದರು. ಶಾಲೆಗಳ ಸ್ಥಾಪನೆಯೊಂದಿಗೆ ಕನ್ನಡ ಭಾಷೆಯ ಹುಟ್ಟು ಪ್ರಾಚೀನತೆ ಕುರಿತು ಜಿಜ್ಞಾಸೆ, ಚರ್ಚೆಗಳು ಆರಂಭವಾದವು. ವಿಚಾರ ಸಂಕಿರಣಗಳು ನಡೆದವು. ಪ್ರಾಚೀನ ಗ್ರಂಥಗಳ ಪರಿಷ್ಕರಣ, ಅನುವಾದ, ಟೀಕುಗಳು, ಪ್ರಕಟವಾದವು. ನಾಡುನುಡಿಯ ಕುರಿತು ಜನ ಸಾಮಾನ್ಯರೂ ಅಭಿಮಾನ ತಾಳುವಂತಹ ಪರಿಸ್ಥಿತಿ ನಿರ್ಮಾಣವಾಯ್ತು. ಕನ್ನಡ ಮಾತನಾಡುವ ಅರ್ಧಕ್ಕಿಂತ ಹೆಚ್ಚು ಕನ್ನಡಿಗರು ಮೈಸೂರು ಸಂಸ್ಥಾನದಿಂದ ಹೊರಗಿದ್ದಾರೆಂಬ ತಿಳುವಳಿಕೆ ಮೂಡಿ ಬಂದಿತು. ವಿದ್ವಾಂಸರ ನೆಲೆಯಲ್ಲಿ, ಸಾಹಿತಿಗಳ ಮನದಲ್ಲಿಯೂ ಏಕೀಕರಣದತ್ತ ಒಲವು ಆರಂಭವಾಯಿತು. ಅನ್ಯಭಾಷೆಗಳಲ್ಲಿ ಉಂಟಾಗಿರುವ ಎಚ್ಚರವನ್ನು ಅರಿಯುವಂತಾಯಿತು. ಸಂಸ್ಕೃತದ ಹಲವಾರು ಗ್ರಂಥಗಳನ್ನು ಕನ್ನಡಕ್ಕೆ ತರುವ ಪ್ರಯತ್ನಕ್ಕೆ ರಾಜಕೀಯವಾಗಿ, ಆರ್ಥಿಕವಾಗಿ ಬೆಂಬಲ ದೊರೆಯಿತು. ಇಂಗ್ಲೀಷ್ ಭಾಷೆಯಲ್ಲಿರುವ ಅಪಾರ ಸಾಹಿತ್ಯ ರಾಶಿ ಕನ್ನಡಕ್ಕೆ ಭಾಷಾಂತರಗೊಂಡಿತು. ಶೇಕ್ಸ್‌ಪಿಯರ್‌ನ ನಾಟಕಗಳನ್ನು, ಆಂಗ್ಲ ಪ್ರಸಿದ್ಧ ಕವಿಗಳ ಗೀತೆಗಳನ್ನು ಕನ್ನಡಕ್ಕೆ ತಂದ ಕೀರ್ತಿ 1920–30ರ ದಶಕದ ನಮ್ಮ ಕವಿಗಳಿಗೆ ಸಲ್ಲುತ್ತದೆ. ಈ ಎಲ್ಲ ಘಟನಾವಳಿಗಳ ಹಿಂದೆ ಕನ್ನಡ ಭಾಷಿಕರನ್ನು ಒಂದೆಡೆ ತರುವ, ರಾಜಕೀಯವಾಗಿ ಕರ್ನಾಟಕ ಏಕೀಕರಣ ಸಾಧಿಸುವ ಉದ್ದೇಶವಿದ್ದುದು ಸ್ಪಷ್ಟ. ಆರಂಭದ ಕಾಲದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಜನಸಾಮಾನ್ಯರ ಬಳಿಗೆ ಬಾರದೆ ರಾಜರ, ಅಧಿಕಾರಿಗಳ, ವಿದ್ವಾಂಸರ ಸೊತ್ತಾಗಿದ್ದರಿಂದಾಗಿ ಜನ ಸಾಮಾನ್ಯರಿಂದ

ಅಲ್ಲಲ್ಲಿ ಸ್ಥಳೀಯವಾಗಿ "ಕನ್ನಡ ಸಂಘಗಳು" "ಕರ್ನಾಟಕ ಸಂಘಗಳು" ತಮ್ಮದೇ ಆದ ಮಿತಿಯಲ್ಲಿ ಸ್ಥಳೀಯರ ನೆರವಿನಿಂದ ಕನ್ನಡ ಭಾಷೆ ಮತ್ತು ಕರ್ನಾಟಕ ಏಕೀಕರಣಕ್ಕಾಗಿ ಕರ್ನಾಟಕ ಸಂಘಗಳನ್ನು ಸ್ಥಾಪಿಸಿ ತನ್ಮೂಲಕ ಜನ ಸಾಮಾನ್ಯರಲ್ಲಿ ಕನ್ನಡ ಪ್ರೀತಿಯನ್ನು ಉದ್ದೀಪನಗೊಳಿಸುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿದ್ದ ಉಲ್ಲೇಖಗಳು ಕಂಡುಬರುತ್ತವೆ. ಸುವರ್ಣ ಕರ್ನಾಟಕ ಏಕೀಕರಣ ಪ್ರಶಸ್ತಿ ದೊರಕಿದೆ.

ಬಳ್ಳಾರಿ ವಿದ್ಯಾವರ್ಧಕ ಸಂಘ : 1909ರಲ್ಲಿ ನಡೆದ 5ನೇ ಅಖಿಲ ಭಾರತ ವೀರಶೈವ ಸಮ್ಮೇಳನದಲ್ಲಿ ತೀರ್ಮಾನವಾದಂತೆ ಪೂಜ್ಯ ಹಾನಗಲ್ ಕುಮಾರಸ್ವಾಮಿಗಳ ಮಾರ್ಗದರ್ಶನದಲ್ಲಿ ಬಳ್ಳಾರಿಯಲ್ಲಿ "ಮದರಾಸು ವೀರಶೈವ ವಿದ್ಯಾವರ್ಧಕ ಸಂಘ" 7–3–1918ರಲ್ಲಿ ಸ್ಥಾಪಿತ ವಾಯಿತು. ಅಧ್ಯಕ್ಷರಾಗಿ ಶ್ರೀ ಕೌತಳಿ ವೀರಭದ್ರಪ್ಪ ಆಯ್ಕೆ ಆದರು. 1933ರಲ್ಲಿ ಸಂಘದ ಹೆಸರನ್ನು "ವೀರಶೈವ ವಿದ್ಯಾವರ್ಧಕ ಸಂಘ"ವೆಂದು ಮರು ನಾಮಕರಣ ಮಾಡಲಾಯಿತು. 1924ರಲ್ಲಿ ಸಂಘವು ಮೊದಲ ಪ್ರಾಥಮಿಕ ಶಾಲೆ ಪ್ರಾರಂಭಿಸಿತು. ಕರ್ನಾಟಕ ಏಕೀಕರಣ ಚಳುವಳಿಗೆ ಚಾಲನೆ ನೀಡಿ ಸಭೆಗಳನ್ನು ನಡೆಸಿತು. 1935ರಲ್ಲಿ ವೀರಶೈವ ಕಾಲೇಜು ಆರಂಭವಾಯಿತು. ಪ್ರೌಢಶಾಲೆಯನ್ನೂ ಆರಂಭಿಸಲಾಯಿತು. 1928ರಲ್ಲಿ ಕಡಪ ರಾಘವೇಂದ್ರರಾವ್ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಸೇರಿಸುವ ಚಳುವಳಿಗೆ ನಾಂದಿ ಹಾಡಿದರು. ಅನಂತರ ಏಕೀಕರಣ ಚಳುವಳಿ ಬಳ್ಳಾರಿ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ತೀವ್ರಗೊಂಡಿತು. ವೈ. ನಾಗೇಶಶಾಸ್ತ್ರಿ, ಅಳವಂಡಿ ಶಿವಮೂರ್ತಿ, ಚಂದ್ರಶೇಖರ ಶಾಸ್ತ್ರಿ, ಅಲ್ಲಂ ಸುಮಂಗಲಮ್ಮ, ಉತ್ತಂಗಿ ಚನ್ನಪ್ಪ, ಕೋ.ಚೆ. ಜಂತಕಲ್ ಗಾದಿಲಿಂಗಪ್ಪ ಮುಂತಾದವರು ಏಕೀಕರಣ ಚಳವಳಿಯ ಮುಂಚೂಣಿ ನಾಯಕರು, "ಬಳ್ಳಾರಿ, ಕರ್ನಾಟಕದ ಗಡಿನಾಡಲ್ಲ, ನಡುನಾಡು, ಅಚ್ಚ ಕನ್ನಡನಾಡು, ಬಳ್ಳಾರಿ ಜಿಲ್ಲೆಯ ತರುಣರೇ ಕನ್ನಡ ಸಂಸ್ಕೃತಿಯನ್ನು ಕಾಪಾಡಲು ನಡುಕಟ್ಟಿ ನಿಲ್ಲಿರಿ" ಎಂಬ ಸಿಂಹಗರ್ಜನೆಯನ್ನು ಮುದುವೀಡು ಕೃಷ್ಣರಾಯರು ಮೊಳಗಿಸಿದ್ದು, ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದಲ್ಲೇ ಎನ್ನುವುದು ವಿಶೇಷ. 14–1–1935ರಲ್ಲಿ ವೈ. ನಾಗೇಶ ಶಾಸ್ತ್ರಿಗಳ ನೇತೃತ್ವದಲ್ಲಿ ಬಳ್ಳಾರಿಯಲ್ಲಿ "ಕರ್ನಾಟಕ ಸಂಘ" ಪ್ರಾರಂಭವಾಯಿತು. ಅಧ್ಯಕ್ಷರಾಗಿ ವೈ. ಮಹಾ ಬಲೇಶ್ವರಪ್ಪ, ಕಾರ್ಯದರ್ಶಿಯಾಗಿ ಸದಾಶಿವಯ್ಯನವರು ಆಯ್ಕೆ ಆದರು. ಏಕೀಕರಣ ಚಳುವಳಿಗೆ ಆಶ್ರಯ ನೀಡಿದರು. ವೀರಶೈವ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಬಳ್ಳಾರಿ ಜಿಲ್ಲಾ ಕನ್ನಡ ಕಲಾ ಪರಿಷತ್ ಸ್ಥಾಪನೆಯೊಂದಿಗೆ ಚಳುವಳಿ ತೀವ್ರಗೊಂಡಿತು. ಬಳ್ಳಾರಿ ಜಿಲ್ಲಾದ್ಯಾಂತ ವಿ.ವಿ. ಸಂಘದ ಶಾಲೆಗಳಲ್ಲಿ ಕನ್ನಡದ ಕಾರ್ಯಕ್ರಮಗಳನ್ನು ನಡೆಸಿ ಜನಜಾಗೃತಿ ಮೂಡಿಸಿದರು. ಏಕೀಕರಣ ಚಳುವಳಿಯ ಫಲವಾಗಿ 1953ರಲ್ಲಿಯೇ ಕರ್ನಾಟಕಕ್ಕೆ ಸೇರ್ಪಡೆಗೊಂಡ ಮೊದಲ ಜಿಲ್ಲೆ ಬಳ್ಳಾರಿ ಎಂಬ ಕೀರ್ತಿಗೆ ಪಾತ್ರವಾಯಿತು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ವೀರಶೈವ ವಿದ್ಯಾವರ್ಧಕ ಸಂಘದ ಪಾತ್ರ ಮಹತ್ವದ್ದು ಎನ್ನಬಹುದು.

ರಾಯಚೂರು ಕರ್ನಾಟಕ ಸಂಘ : 81 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ರಾಯಚೂರಿನ ಕರ್ನಾಟಕ ಸಂಘ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳ, ಕೇಂದ್ರವಾಗಿ ಜನಜೀವನದ ಅವಿಭಾಜ್ಯ ಅಂಗವಾಗಿ ನಾಡು– ನುಡಿಯ ಸೇವೆಯಲ್ಲಿ ತೊಡಗಿದೆ. ರಾಷ್ಟ್ರೀಯ ಜಾಗೃತಿ ಮೂಡಿಸುತ್ತಾ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳಲ್ಲಿ ಮಹತ್ತರವಾದ ಸೇವೆ ಸಲ್ಲಿಸಿದೆ. 1928ರ ರಾಮನವಮಿಯಂದು ಶ್ರೀ ವೀರಣ್ಣ ಮಾಸ್ತರು, ಜಗನ್ನಾಥರಾವ್ ಫಡ್ನಾವೀಸ್, ಡಿ. ಮಾಣಿಕರಾವ್, ರಾ.ಗು. ಜೋಶಿ ಮುಂತಾದ ತರುಣರು ಸೇರಿ ಕರ್ನಾಟಕ ತರುಣ ಸಂಘವನ್ನು ಸ್ಥಾಪಿಸಿದರು. ಮಾಧ್ವರಾವ್ ಮೊದಲ ಅಧ್ಯಕ್ಷರಾಗಿ, ವೀರಣ್ಣ ಮಾಸ್ತರ ಕಾರ್ಯದರ್ಶಿಗಳಾಗಿ ಆಯ್ಕೆ ಆದರು. ಮುಂದೆ ತರುಣ ಸಂಘವನ್ನು ಕರ್ನಾಟಕ ಸಂಘ (ರಿ) ಎಂದು ಹೆಸರಿಸಲಾಯಿತು. ಸಾಹಿತ್ಯ, ಕವಿಗೋಷ್ಠಿ ನಾಟಕ ಗಳನ್ನು ಏರ್ಪಡಿಸಿ, ಉರ್ದುಮಯವಾಗಿದ್ದ ರಾಯಚೂರಿನಲ್ಲಿ ಕನ್ನಡದ ಕಂಪನ್ನು ಹರಡುವ ಕಾರ್ಯದಲ್ಲಿ ತೊಡಗಿತು. ಆರಂಭದಲ್ಲಿ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಂಘ 1934ರಲ್ಲಿ ಪಂಜೆಮಂಗೇಶರಾಯರ ಅಧ್ಯಕ್ಷತೆಯಲ್ಲಿ ನಡೆದ 20ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ರಾಯಚೂರಿನಲ್ಲಿ ಯಶಸ್ವಿಯಾಗಿ ನಡೆಸಿದ ಕೀರ್ತಿ ಕರ್ನಾಟಕದ ಸಂಘಕ್ಕೆ ಸಲ್ಲುತ್ತದೆ. 1955ರಲ್ಲಿ ಶ್ರೀ ಆದ್ಯರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ 38ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಘದ ಹಿಂದಿನ ವಿಶಾಲವಾದ

ಬಯಲಿ ನಲ್ಲಿದ್ದ ಗುಬ್ಬಿ ವೀರಣ್ಣನವರ ನಾಟಕ ಮಂದಿರದಲ್ಲಿಯೇ ನಡೆಸಿತು. ಹೈದ್ರಾಬಾದ್ ಸಂಸ್ಥಾನದ ಮಂತ್ರಿಗಳಾಗಿದ್ದ ಸರ್‌ಮಿರ್ಜಾ ಇಸ್ಮಾಯಿಲ್ ಅವರು 1946ರಲ್ಲಿ ಸಂಘದ ಕಟ್ಟಡದ ಶಂಕುಸ್ಥಾಪನೆ ನೆರವೇರಿಸಿದರು. 1953ರ ಹೊತ್ತಿಗೆ ರಾಯಚೂರು ಕರ್ನಾಟಕ ಸಂಘದ ಭವನ ಸಿದ್ಧವಾಯಿತು. ಮುದುವೀಡು ಕೃಷ್ಣರಾಯರು, ಗರೂಡ ಸದಾಶಿವರಾಯರು, ಆಲೂರು ವೆಂಕಟರಾಯರು, ಬಿ.ಎಂ.ಶ್ರೀ., ಡಿ.ವಿ. ಗುಂಡಪ್ಪನವರು, ದ.ರಾ. ಬೇಂದ್ರೆ, ಜಿ.ಪಿ. ರಾಜರತ್ನಂ ಮುಂತಾದ ಖ್ಯಾತಸಾಹಿತಿಗಳ, ವಿದ್ವಾಂಸರ ಉಪನ್ಯಾಸಗಳನ್ನು ಏರ್ಪಡಿಸಿ, ಕನ್ನಡದ ಕಹಳೆಯನ್ನು ಮೊಳಗಿಸಿದ್ದಾರೆ. ತಮ್ಮ ಸರಳ-ಸಜ್ಜನಿಕೆಗೆಯಿಂದ ಪ್ರತಿಭೆಯಿಂದ ಜನಮನ ಗೆದ್ದ ಬಿ.ಎಂ. ಶ್ರೀಕಂಠಯ್ಯನವರು ಕನ್ನಡನಾಡಿನಾದ್ಯಂತ, ಹೊರನಾಡುಗಳಲ್ಲಿಯೂ ಸಂಚರಿಸಿ ಕರ್ನಾಟಕ ಏಕೀಕರಣದ ರೂವಾರಿ ಎನಿಸಿದ್ದಾರೆ. ಅಲ್ಲಲ್ಲಿ ಕರ್ನಾಟಕ ಸಂಘಗಳನ್ನು ಸ್ಥಾಪಿಸಿ ಹಿಂದೆ ಇದ್ದ ಕನ್ನಡ ಸಂಸ್ಥೆಗಳಿಗೆ ಪುನರ್‌ಚೇತನ ನೀಡಿ, ಕನ್ನಡ ಸಾಹಿತ್ಯ ಪರಿಷತ್‌ನ ಅಂಗಸಂಸ್ಥೆಗಳನ್ನಾಗಿ ಮಾಡಿಕೊಂಡು ಕನ್ನಡ ಪ್ರಜ್ಞೆಯನ್ನು ಮೂಡಿಸಿದರು. ತನ್ಮೂಲಕ ಕರ್ನಾಟಕ ಏಕೀಕರಣಕ್ಕೆ ಜನಮಾನಸವನ್ನು ಅಣಿಗೊಳಿಸಿದರು. ರಾಯಚೂರು ನಗರದ, ಜಿಲ್ಲೆಯ ಹೆಮ್ಮೆಯ ಸಾಂಸ್ಕೃತಿಕ ಕೇಂದ್ರವಾಗಿದೆ.

ರಾಯಚೂರು ಕರ್ನಾಟಕ ಸಂಘ ಏಕೀಕರಣ ಚಳುವಳಿ ಜೊತೆಗೆ ಹೈದರಾಬಾದ್ ವಿಮುಕ್ತಿ ಚಳುವಳಿಕಾರ ರಿಗೂ ಆಶ್ರಯ ನೀಡಿದೆ. ಸಾಹಿತ್ಯದ ಜೊತೆಗೆ ಸಂಗೀತ, ನೃತ್ಯ, ನಾಟಕಗಳಿಗೂ ಪ್ರೋತ್ಸಾಹಿಸಿದೆ. ನಾಟಕ ಪ್ರದರ್ಶನಕ್ಕಾಗಿ ಬಯಲುರಂಗ ಮಂದಿರವನ್ನು ನಿರ್ಮಿಸಿದೆ. ಸುಮಾರು ಹತ್ತು ಸಾವಿರ ಪುಸ್ತಕಗಳ ಗ್ರಂಥ ಭಂಡಾರವನ್ನು ಹೊಂದಿದೆ. 1962ರಲ್ಲಿ ಸಂಘದ ಬೆಳ್ಳಿ ಹಬ್ಬವನ್ನು ಆಚರಿಸಿ ಸ್ಮರಣ ಸಂಚಿಕೆ ಪ್ರಕಟಿಸಿ, ರಾಯಚೂರು ನಗರದ, ಜಿಲ್ಲೆಯ ಹೆಮ್ಮೆಯ ಸಾಂಸ್ಕೃತಿಕ ಕೇಂದ್ರವಾಯಿತು. 1957ರಲ್ಲಿ ಕೇಂದ್ರ ಗೃಹಸಚಿವ ಶ್ರೀ ಬಳಗವಂತರಾವ್ ದಾತಾರ ಕರ್ನಾಟಕ ಸಂಘದ ಕಟ್ಟಡವನ್ನು ಉದ್ಘಾಟಿಸಿದರು. ಪ್ರಸ್ತುತ ರಾಯಚೂರು ಕರ್ನಾಟಕ ಸಂಘದ ಅಧ್ಯಕ್ಷರಾಗಿ ಶ್ರೀ ನರಸಣ್ಣ ಕೆ. ಕುಲಕರ್ಣಿ, ಶ್ರೀಗಟ್ಟು ಶ್ರೀನಿವಾಸ್ ಗೌರವ ಕಾರ್ಯದರ್ಶಿಯಾಗಿ ಸಂಘವನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸಿದ್ದಾರೆ.

ಶಿವಮೊಗ್ಗ ಕರ್ನಾಟಕ ಸಂಘ : 1930ರ ನವರಾತ್ರಿ ಸಮಯದಲ್ಲಿ ಮೈಸೂರಿನಲ್ಲಿ ನಡೆದ 16ನೇ ಕರ್ನಾಟಕ ಸಾಹಿತ್ಯ ಪರಿಷತ್, (ಕನ್ನಡ ಸಾಹಿತ್ಯ ಪರಿಷತ್‌ನ ಮೊದಲ ಹೆಸರು)ನ ಸಮ್ಮೇಳನದಲ್ಲಿ ಭಾಗವಹಿಸಿ ಕನ್ನಡ ಜನಮನ ಗೆದ್ದ ಧಾರವಾಡದ ಪ್ರಸಿದ್ಧ ಕವಿ ಡಾ. ದ.ರಾ. ಬೇಂದ್ರೆ ಅವರನ್ನು ಡಾ. ಮಾಸ್ತಿಯವರು ಶಿವಮೊಗ್ಗಕ್ಕೆ ಕರೆತಂದು ಬೇಂದ್ರೆಯವರ ಕಾವ್ಯವಾಚನ ಏರ್ಪಡಿಸಿದರು. ಆಗ ಈ ಈರ್ವರು ಮಹನೀಯರೂ ಶಿವಮೊಗ್ಗೆಯಲ್ಲಿ "ಕರ್ನಾಟಕ ಸಂಘದ" ಅವಶ್ಯಕತೆಯನ್ನು ಕನ್ನಡದ ಅಭಿಮಾನಗಳಲ್ಲಿ ಮೂಡಿಸಿದರು. ಶ್ರೀ ದೇಶಪಾಂಡೆ ಗುರುರಾವ್, ಸೀತಾರಾಮ್. ಎ. ಕೊಡಲಿ ಚಿದಂಬರಂ, ಭೂಪಾಳಂ ಪುಟ್ಟನಂಜಪ್ಪ ಮುಂತಾದವರು ಪ್ರೇರಿತರಾಗಿ 8.11.1930ರಂದು, ಅಂದಿನ ಯುವಕವಿ ಶ್ರೀ ಕೆ.ವಿ. ಪುಟ್ಟಪ್ಪನವರಿಂದ ಸರ್ಕಾರಿ ಪ್ರೌಢಶಾಲೆಯಲ್ಲಿ ಉದ್ಘಾಟನಾ ಸಮಾರಂಭ ನೆರವೇರಿತು. ಶ್ರೀ ಪುಟ್ಟಪ್ಪನವರು ಭಾಷಣದಲ್ಲಿ ಸಾಹಿತ್ಯ ಸಂಸ್ಕೃತಿ, ಕಲೆ, ನಾಟಕ, ಸಂಗೀತಗಳಿಗೆ ಪ್ರೋತ್ಸಾಹ ನೀಡಲು ಸೂಚಿಸಿದರು. ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಿಕೊಂಡು ಬರಲು ಶ್ರೀ ಕುಕ್ಕೆ ಸುಬ್ರಹ್ಮಣ್ಯ ಶಾಸ್ತ್ರಿಗಳು ಅಧ್ಯಕ್ಷರಾಗಿ, ಶ್ರೀ ಡಿ. ಗುರುರಾವ್ ಪ್ರಥಮ ಕಾರ್ಯದರ್ಶಿಯಾಗಿ ಕಾರ್ಯಕಾರಿ ಸಮಿತಿ ರೂಪಿತವಾಯಿತು. ಕನ್ನಡ ನಾಡಿನ ಶ್ರೇಷ್ಠ ವಿದ್ವಾಂಸರನ್ನು ಶಿವಮೊಗ್ಗಕ್ಕೆ ಬರಮಾಡಿಕೊಂಡು ಉಪನ್ಯಾಸಗಳನ್ನು ಕವಿತಾವಾಚನ, ಕಾವ್ಯವಾಚನ, ಗಮಕವಾಚನ, ಸಂಗೀತಗೋಷ್ಠಿ, ನಾಟಕ ಮುಂತಾದವು ಗಳನ್ನು ಏರ್ಪಡಿಸುವುದು, ಗ್ರಂಥ ಪ್ರಕಟನೆ, ಗ್ರಂಥ ಭಂಡಾರ ಸ್ಥಾಪನೆ, ಕರ್ನಾಟಕ ಏಕೀಕರಣ ಕುರಿತು ವಿಚಾರ ವಿನಿಮಯ ಮಾಡಲಾಯಿತು. ಕನ್ನಡ, ಜೈನ ಸಾಹಿತ್ಯ, ವಚನ ಸಾಹಿತ್ಯ ಕುರಿತು ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲಾಯಿತು. ಆರಂಭದಲ್ಲಿ ಕೆಲಕಾಲ ಜಿಲ್ಲಾಧಿಕಾರಿಗಳು ಗೌರವ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ನಗರಸಭೆಯ ಒಂದು ಕೊಠಡಿಯಲ್ಲಿ ಸಂಘದ ಕಚೇರಿ ನಡೆಯುತ್ತಿತ್ತು. ಅಲ್ಲಿ ಸ್ಥಳ ಸಾಲದ್ದರಿಂದ 1936ರಲ್ಲಿ ನಗರ ಸಭೆಯಿಂದ ಈಗಿರುವ ಸ್ಥಳವನ್ನು ಕರ್ನಾಟಕ ಸಂಘಕ್ಕಾಗಿ ಪಡೆಯಲಾಯಿತು. ಅಡಿಕೆ ಮಂಡಿ ವರ್ತಕರೂ, ಸಾಹಿತ್ಯಾಭಿಮಾನಿಗಳೂ ಆಗಿದ್ದ ಶ್ರೀ ಹಸೂಡಿ ವೆಂಕಟಶಾಸ್ತ್ರಿಗಳ ಉದಾರ ಕೊಡುಗೆಯಿಂದ ಈಗಿರುವ ಸಭಾಭವನವನ್ನು ನಿರ್ಮಿಸಲಾಯಿತು. ಕನ್ನಡದ ಕಣ್ವ ಬಿ.ಎಂ. ಶ್ರೀ ಅವರು 1942ರಲ್ಲಿ ಭವನದ ಶಂಕುಸ್ಥಾಪನೆ

ನೆರವೇರಿಸಿದರು. 11.2.1943ರಂದು ಅಂದಿನ ಮೈಸೂರು ಅರಸು ಶ್ರೀ ಜಯ ಚಾಮರಾಜೇಂದ್ರ ಒಡೆಯರು ಭವನದ ಆರಂಭೋತ್ಸವ ನೆರವೇರಿಸಿದರು. ಕನ್ನಡ ಸಾರಸ್ವತ ಲೋಕಕ್ಕೆ, ಸಾಂಸ್ಕೃತಿಕ ಹಿರಿಮೆಗೆ, ಕರ್ನಾಟಕ ಸಂಘದ ಕೊಡುಗೆ ಅಪಾರವಾದದ್ದು. 1943ರಲ್ಲಿ ಶಿವಮೊಗ್ಗದಲ್ಲಿ ಡಾ. ದ.ರಾ. ಬೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಪೂರ್ಣ ಜವಾಬ್ದಾರಿಯನ್ನು ಕರ್ನಾಟಕ ಸಂಘವೇ ಹೊತ್ತು ಯಶಸ್ವಿಯಾಗಿ ನಡೆಸಿಕೊಟ್ಟಿದೆ. 1976ರಲ್ಲಿ ಶ್ರೀ ಎಸ್.ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆದ 49ನೇ ಕನ್ನಡ ಸಾಹಿತ್ಯ ಸಮ್ಮೇಳನವೂ ಶಿವಮೊಗ್ಗ ಕರ್ನಾಟಕ ಸಂಘದ ಹಿಂದಿನ ಮೈದಾನದಲ್ಲಿ ನಡೆಸಿಕೊಟ್ಟ ಹೆಗ್ಗಳಿಕೆ ಸಂಘದ್ದು. ಸಂಘದ ರಜತ ಮಹೋತ್ಸವ, ಸುವರ್ಣ ಮಹೋತ್ಸವ, ವಜ್ರ ಮಹೋತ್ಸವಗಳನ್ನು ಆಚರಿಸಲಾಗಿದೆ. ಹಸೂಡಿ ವೆಂಕಟಶಾಸ್ತ್ರಿಗಳ ಹೆಸರನ್ನು ಹೊತ್ತ ಸಭಾಭವನದ 60 ವರ್ಷದ ನೆನಪಿನ ಸಂಪುಟ ಪ್ರಕಟವಾಗಿದೆ. ಕರ್ನಾಟಕ ಸಂಘವು ಕರ್ನಾಟಕದ ಹೆಸರಾಂತ ಸಾಹಿತಿಗಳ ಸುಮಾರು 26 ಮೌಲಿಕ ಗ್ರಂಥಗಳನ್ನು ಪ್ರಕಟಿಸಿದೆ. ಕರ್ನಾಟಕ ಸಂಘ ಶಿವಮೊಗ್ಗ ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿರುವುದನ್ನು ಗುರುತಿಸಿ 2006ನೇ ಸಾಲಿನಲ್ಲಿ ಕರ್ನಾಟಕ ಏಕೀಕರಣವಾಗಿ 50 ವರ್ಷ ತುಂಬಿದ ಸಂದರ್ಭದಲ್ಲಿ "ಕರ್ನಾಟಕ ಏಕೀಕರಣ ಪ್ರಶಸ್ತಿ" ಮತ್ತು ಬಂಗಾರದ ಪದಕ ನೀಡಿ ಗೌರವಿಸಿದೆ. 2006ನೇ ಸಾಲಿನ ಡಾ. ದ.ರಾ. ಬೇಂದ್ರೆ ಪ್ರಶಸ್ತಿ ದೊರಕಿದೆ.

ಕರ್ನಾಟಕ ಸಂಘದ ಆರಂಭದ ವರ್ಷಗಳಲ್ಲಿ ಜಿಲ್ಲೆಯಾದ್ಯಂತ ಸಂಚರಿಸಿ, ಉಪನ್ಯಾಸಗಳನ್ನು ಏರ್ಪಡಿಸಿ ಏಕೀಕರಣಕ್ಕೆ ಜನರನ್ನು ಸಜ್ಜುಗೊಳಿಸಿತು. ಸ್ಫೂರ್ತಿಗೊಂಡ ಕನ್ನಡಾಭಿಮಾನಿಗಳು, ಸಾಗರ, ಶಿರಾಳಕೊಪ್ಪ, ಶಿಕಾರಿಪುರ, ಆನವಟ್ಟಿ, ಸೊರಬ, ಹೊನ್ನಾಳಿ, ಕುಂಸಿ, ತೀರ್ಥಹಳ್ಳಿ ಮುಂತಾದ ಸ್ಥಳಗಳಲ್ಲಿ ಕರ್ನಾಟಕ ಸಂಘಗಳನ್ನು ಸ್ಥಾಪಿಸಿದ ಉಲ್ಲೇಖಗಳು ಕಂಡುಬರುತ್ತವೆ. 1956ರಲ್ಲಿ ಕರ್ನಾಟಕ ಏಕೀಕರಣವಾದ ನಂತರ ಶಿವಮೊಗ್ಗ ಕರ್ನಾಟಕ ಸಂಘದ ಬಹುಮುಖಿ ಸೇವೆಯಲ್ಲಿ ತೊಡಗಿದೆ, ಆರ್ಥಿಕವಾಗಿ ಸ್ವಾಯತ್ತ ಸಂಸ್ಥೆಯಾಗಿದೆ. ಪ್ರಸ್ತುತ ಶ್ರೀಮತಿ ವಿಜಯ ಶ್ರೀಧರ್ ಅವರು ಅಧ್ಯಕ್ಷರಾಗಿ, ಶ್ರೀ ಹೆಚ್.ಡಿ. ಉದಯಶಂಕರ ಶಾಸ್ತ್ರಿ ಅವರು ಗೌರವ ಕಾರ್ಯದರ್ಶಿಯಾಗಿ ಶಿವಮೊಗ್ಗ ಕರ್ನಾಟಕ ಸಂಘವನ್ನು ಮುನ್ನಡೆಸಿದ್ದಾರೆ. ವಜ್ರಪಥ, ಕರ್ನಾಟಕ ಭವನ–60 ಮತ್ತು ಅಮೃತವರ್ಷ–75, ಸ್ಮರಣ ಸಂಚಿಕೆಗಳನ್ನು ಪ್ರಕಟಿಸಿದೆ.

ಮಂಡ್ಯ ಕರ್ನಾಟಕ ಸಂಘ : ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ವರ್ಷವೇ ಪ್ರಾರಂಭವಾದ ಮಂಡ್ಯ ಕರ್ನಾಟಕ ಸಂಘಕ್ಕೀಗ 60 ವರ್ಷ, ವಜ್ರಮಹೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಸಂಘ, ಸಂಕ್ಷಿಪ್ತ ಮೌಖಿಕ ಇತಿಹಾಸವನ್ನು ಮಾತ್ರ ಉಳಿಸಿಕೊಂಡಿದೆ. ಸ್ವಂತ ಕಟ್ಟಡ ಹೊಂದಿರುವ ಕರ್ನಾಟಕದ ಕೆಲವೇ ಸಂಘಗಳಲ್ಲಿ ಮಂಡ್ಯ ಕರ್ನಾಟಕ ಸಂಘವೂ ಒಂದು. ಸ್ವಾತಂತ್ರ್ಯ ಪೂರ್ವದಲ್ಲಿಯೇ ಸ್ವಾತಂತ್ರ್ಯಕ್ಕಾಗಿ ಮತ್ತು ಏಕೀಕರಣಕ್ಕಾಗಿ ಹೋರಾಡಿದ ಇಂಡುವಾಳು ಹೆಚ್. ಹೊನ್ನಯ್ಯ ಎಂ. ಮಹಾಬಲರಾವ್, ಶಿಂಗ್ಲಾಚಾರ್ ಮುಂತಾದವರ ದೂರದೃಷ್ಟಿಯ ಫಲವಾಗಿ ಜನ್ಮತಳೆದ ಸಂಸ್ಥೆ "ಮಂಡ್ಯ ಕರ್ನಾಟಕ ಸಂಘ" ಜಿಲ್ಲೆಯ, ಸಾಹಿತ್ಯ ಸಂಸ್ಕೃತಿ, ಕಲೆ ಸಂಗೀತ, ನಾಟಕ, ಭಾಷೆಗಳ ಅಭಿವೃದ್ಧಿಗಾಗಿ ಹೋರಾಟ ನಡೆಸಿದ ಪ್ರಾತಿನಿಧಿಕ ಸಂಸ್ಥೆಯಾಗಿದೆ. ಆ ಕಾಲದ ರಾಜಕೀಯ ಧುರೀಣರಾದ ದಿ. ಎಂ.ಬಿ. ಬೋರೇಗೌಡ, ಕೆ.ವಿ. ಶಂಕರೇಗೌಡ, ಕೆ. ಶಿಂಗಾರಿಗೌಡ ಬಿ.ಪಿ. ನಾಗರಾಜಮೂರ್ತಿ ಪಿ.ಎನ್. ಜವರಪ್ಪ ಗೌಡ ಮುಂತಾದವರು ಕರ್ನಾಟಕ ಸಂಘದ ಪದಾಧಿಕಾರಿಗಳಾಗಿ ಸಂಘವನ್ನು ಮುನ್ನಡೆಸಿದ್ದಾರೆ.

ಭಾರತದ ಸ್ವಾತಂತ್ರ್ಯದೊಂದಿಗೆ, ಮೈಸೂರು ಚಲೋ ಚಳುವಳಿ ಮತ್ತು ನಂತರದ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಸಂಘದ ಸದಸ್ಯರು ಪ್ರತ್ಯಕ್ಷವಾಗಿ ಪಾಲ್ಗೊಂಡು ಅನೇಕರು ಜೈಲು ಸೇರಿದರು. ಕರ್ನಾಟಕ ಸಂಘದ ವೇದಿಕೆ ಮೂಲಕ ಸ್ಫೂರ್ತಿ ಪಡೆದು ಏಕೀಕರಣಕ್ಕೆ ಬೆಂಬಲ ನೀಡಿದ್ದಾರೆ. 1954ರಲ್ಲಿ ಕುವೆಂಪುರವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಾಗ ಅವರನ್ನು ಮಂಡ್ಯಕ್ಕೆ ಆಹ್ವಾನಿಸಿ ಗೌರವಿಸಲಾಯಿತು. "ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ" ಗೀತೆಯನ್ನು ವಾಚಿಸುವ ಮೂಲಕ ಹಳೆ ಮೈಸೂರಿನಲ್ಲಿ ಕರ್ನಾಟಕ ಏಕೀಕರಣದತ್ತ ಜನಾಭಿಪ್ರಾಯ ವನ್ನು ರೂಪಿಸಿದರು. ಡಾ. ಮಾಸ್ತಿ, ಜಿ.ಪಿ. ರಾಜರತ್ನಂ, ಎಸ್.ವಿ. ಪರಮೇಶ್ವರ ಭಟ್ಟರು, ಡಾ. ಡಿ.ವಿ. ಗುಂಡಪ್ಪನವರು, ಡಾ. ಶಿವರಾಮ ಕಾರಂತರು, ಡಾ. ಹಾ.ಮಾ. ನಾಯಕ, ಡಾ. ದೇಜಗೌ ಮುಂತಾದ ಖ್ಯಾತ ಸಾಹಿತಿಗಳು ಮಂಡ್ಯ ಕರ್ನಾಟಕ

ಸಂಘದ ವೇದಿಕೆ ಮೂಲಕ ಕನ್ನಡ ಭಾಷೆಯ ಗೌರವವನ್ನು ಎತ್ತಿಹಿಡಿದು ಕರ್ನಾಟಕ ಏಕೀಕರಣಕ್ಕೆ ಹೋರಾಡಿದ್ದಾರೆ. ಖ್ಯಾತ ವಿದ್ವಾಂಸರಾದ ಡಾ. ಜಿ. ವೆಂಕಟಸುಬ್ಬಯ್ಯನವರು ಮಂಡ್ಯ ಕರ್ನಾಟಕ ಸಂಘದ ಕಾರ್ಯದರ್ಶಿಗಳಾಗಿ ಕೆಲಕಾಲ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಅಧ್ಯಕ್ಷರಾಗಿ ಪ್ರೊ. ಬಿ. ಜಯಪ್ರಕಾಶಗೌಡ ಕಾರ್ಯದರ್ಶಿಯಾಗಿ ಶ್ರೀ ಮಲ್ಲರಾಧ್ಯಪ್ರಸನ್ನ ಕರ್ನಾಟಕ ಸಂಘವನ್ನು ಸಕ್ರಿಯವಾಗಿ ಮುನ್ನಡೆಸಿದ್ದಾರೆ. ಹಲವಾರು ದತ್ತಿ ನಿಧಿ ಸ್ಥಾಪಿಸಿದೆ. "ಅಭಿವ್ಯಕ್ತಿ" ಸಾಹಿತ್ಯ ಮಾಸಿಕ ಪ್ರಕಟಿಸುತ್ತಿದೆ.

ಕರ್ನಾಟಕ ಸಂಘ ಅಂಕೋಲ : 1950ರ ದಶಕದ ಆರಂಭದಲ್ಲಿ ಮುಂಬೈ ಪ್ರಾಂತ್ಯಕ್ಕೆ ಸೇರಿದ್ದ ಅಂಕೋಲೆಯಲ್ಲಿ ಕರ್ನಾಟಕ ಏಕೀಕರಣದ ಚಳುವಳಿಗೆ ಚಾಲನೆ ನೀಡಿದವರು ಹಿರಿಯ ಕವಿ ದಿನಕರ ದೇಸಾಯಿ ಅವರು. ಮುಂಬೈ ಸರಕಾರದಲ್ಲಿ ಉಪಸಚಿವರಾಗಿದ್ದ ಅಂಕೋಲೆಯ ಕವಿ ಸ.ಪ. ಗಾಂವಕಾರ ಅವರು ಸ್ಥಾಪಕ ಅಧ್ಯಕ್ಷರಾಗಿ ಸಂಘ ಸ್ಥಾಪಿತವಾಯಿತು. ಹರಿದು ಹಂಚಿ ಹೋಗಿದ್ದ ಕನ್ನಡ ಪ್ರದೇಶಗಳನ್ನು ಒಟ್ಟಾಗಿಸಿ ಒಂದು ಆಡಳಿತದಡಿ ತರಬೇಕೆಂಬ ಹಿರಿಯರ ಕನಸನ್ನು ಸಾಕಾರಗೊಳಿಸಲು, ಕನ್ನಡ ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಅಭಿವ್ಯಕ್ತಿಸಲು ಒಂದು ವೇದಿಕೆಯನ್ನು ಹುಟ್ಟು ಹಾಕಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ ಅವರು ಅಂಕೋಲೆಗೆ ಬಂದಾಗ ಕರ್ನಾಟಕ ಸಂಘ ಸ್ಥಾಪನೆಗೆ ಎಲ್ಲ ರೀತಿಯ ಸಹಕಾರ ನೀಡುವ ಭರವಸೆ ನೀಡಿದರು. 1952ರಲ್ಲಿ ಖ್ಯಾತ ಸಾಹಿತಿಗಳಾದ ಶ್ರೀ ತೀ.ನಂ. ಶ್ರೀಕಂಠಯ್ಯನವರಿಂದ ಸಂಘದ ಉದ್ಘಾಟನೆ ನಡೆಯಿತು. ಕನ್ನಡ ನಾಡಹಬ್ಬ, ವಸಂತ ಸಾಹಿತ್ಯೋತ್ಸವಗಳನ್ನು ನಡೆಸಿ, ಕನ್ನಡ ಸಾಹಿತ್ಯ ಕಲೆ, ಸಂಸ್ಕೃತಿಗಳ ಕುರಿತು ಪ್ರೀತಿ ಹೆಚ್ಚುವಂತೆ ಮಾಡಿದರು. ಶ್ರೀ ಯು. ರಾಜಗೋಪಾಲಚಾರ್ ಅವರು, ಗೌರವ ಕಾರ್ಯದರ್ಶಿಗಳಾಗಿ ಸಂಘವನ್ನು ಮುನ್ನಡೆಸಿದರು. 1952ರಿಂದಲೂ ಉತ್ತರ ಕನ್ನಡ ಜಿಲ್ಲೆಯ ಸಾಹಿತ್ಯಕ್ಕೆ, ಜೀವ ತುಂಬುವ ಕಾರ್ಯದಲ್ಲಿ ತೊಡಗಿದೆ.

ಕನ್ನಡ ನಾಡಿನ ಕವಿ, ಸಾಹಿತಿ ಕಲಾವಿದರನ್ನು ಅಂಕೋಲೆಗೆ ಆಹ್ವಾನಿಸಿ, ಉಪನ್ಯಾಸಗಳನ್ನು, ನಾಟಕ, ಕವಿಗೋಷ್ಠಿ ಏರ್ಪಡಿಸಿ ಕರ್ನಾಟಕ ಏಕೀಕರಣಕ್ಕೆ ಒತ್ತು ನೀಡಿದರು. 1956ರಲ್ಲಿ ಏಕೀಕರಣವಾದ ನಂತರವೂ ಕ್ರಿಯಾಶೀಲವಾಗಿ ಕನ್ನಡ ಕೈಂಕರ್ಯದಲ್ಲಿ ಅಂಕೋಲೆ ಕರ್ನಾಟಕ ಸಂಘ ತೊಡಗಿದೆ. 1978ರಲ್ಲಿ ಬೆಳ್ಳಿಹಬ್ಬ ಆಚರಿಸಿತು. 2003ರಲ್ಲಿ ಸಂಘದ ಚಿನ್ನದ ಹಬ್ಬ ನೆರವೇರಿತು. ಈ ಸಂದರ್ಭದಲ್ಲಿ "ಚಿನ್ನದ ತೇರು" ಸ್ಮರಣ ಸಂಚಿಕೆ ಪ್ರಕಟಿಸಿದೆ. ಗೋಕಾಕ್ ವರದಿ ಜಾರಿಗೆ ಬರಲಿ ಚಳುವಳಿಯನ್ನು 1982ರಲ್ಲಿ ನಡೆಸಿತು. ಪುಸ್ತಕ ಮೇಳಗಳನ್ನು ಸಂಘಟಿಸಿ ಜನಸಾಮಾನ್ಯರಲ್ಲಿ ಪುಸ್ತಕ ಪ್ರೀತಿಯನ್ನು ಹುಟ್ಟುಹಾಕಿದೆ. ಕನ್ನಡ ರಂಗಭೂಮಿಗೂ ಅನುಪಮ ಸೇವೆ ಸಂದಿದೆ. ಪ್ರಸ್ತುತ ಅಂಕೋಲೆ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಶ್ರೀ ವಿಷ್ಣುನಾಯಕ ಗೌರವ ಕಾರ್ಯದರ್ಶಿಯಾಗಿ ಬಾಲಚಂದ್ರ ನಾಯಕ, ಮಾಜಿ ಅಧ್ಯಕ್ಷರಾಗಿ ಮಹೋತ್ಸವ ಸಮಿತಿ ಸದಸ್ಯರಾಗಿ ಶ್ರೀ ಮೊಹನ ಹಬ್ಬು ಕನ್ನಡ ತಾಯಿಯ ಸೇವೆಯಲ್ಲಿ ಅಂಕೋಲ ಕರ್ನಾಟಕ ಸಂಘವನ್ನು ಮುನ್ನಡೆಸಿದ್ದಾರೆ.

ಮುಂಬೈ ಕರ್ನಾಟಕ ಸಂಘ : ಬದುಕನ್ನು ಅರಸಿ ಮುಂಬಯಿಗೆ ಹೋದ ಬಹುಪಾಲು ಕನ್ನಡಿಗರು ಕನ್ನಡ ಭಾಷೆ, ಸಂಸ್ಕೃತಿಯನ್ನೂ ತಮ್ಮೊಂದಿಗೆ ಕೊಂಡೊಯ್ದಿದ್ದಾರೆ. ದೂರದ ದೆಹಲಿ, ಕಲ್ಕತ್ತಾ, ಪಕ್ಕದ ಚನ್ನೈ, ಮುಂಬಯಿಗಳಲ್ಲಿ ಕರ್ನಾಟಕ ಸಂಘಗಳನ್ನು ಸ್ಥಾಪಿಸಿ, ಕನ್ನಡ ಸಂಸ್ಕೃತಿಯ ರಾಯಭಾರಿಗಳಾಗಿದ್ದಾರೆ. ಮುಂಬಯಿ ಮಹಾನಗರ ಒಂದರಲ್ಲಿಯೇ ನೂರಕ್ಕೂ ಹೆಚ್ಚು ಕನ್ನಡ ಸಂಘಗಳಿವೆ, ಹಲವು ಕರ್ನಾಟಕ ಸಂಘಗಳೂ ಇವೆ. ಅವಕಾಶವಾದಲೆಲ್ಲ ಕನ್ನಡ ರಾತ್ರಿ ಶಾಲೆಗಳನ್ನು ಆರಂಭಿಸಿ ಕನ್ನಡ ಕಟ್ಟಿದ್ದಾರೆ. ಆರಂಭದಲ್ಲಿಯೇ ಮುಂಬಯಿಗರ ನಾಲಿಗೆ ರುಚಿಯನ್ನು ಗೆದ್ದ ಕನ್ನಡಿಗರು, ಹೋಟೇಲ್ ಆರಂಭಿಸಿದರು. ಕೆಲಸಕ್ಕೆ ತಮ್ಮ ನಂಬಿಗೆಯ ಯುವಕರನ್ನು ಕರ್ನಾಟಕದಿಂದಲೇ ಬರಮಾಡಿಕೊಂಡರು. ಇಂದು ಸುಮಾರು 10 ಲಕ್ಷಕ್ಕಿಂತಲೂ ಹೆಚ್ಚು ಕನ್ನಡಿಗರು ಮುಂಬಯಿಯಲ್ಲಿದಾರೆಂದು ತಿಳಿದುಬರುತ್ತದೆ. ವಾಣಿಜ್ಯ ಉದ್ಯಮಗಳಲ್ಲಿಯೂ ಕನ್ನಡಿಗರು 3ನೇ ಸ್ಥಾನದಲ್ಲಿದ್ದಾರೆ. ಹೋಟೇಲ್ ಉದ್ಯಮ, ಟ್ಯಾಕ್ಸಿ ಉದ್ಯಮಗಳಲ್ಲಿ ಕನ್ನಡಿಗರದೇ ಸಿಂಹಪಾಲು. 6000ಕ್ಕೂ ಹೆಚ್ಚು ಹೋಟೆಲ್‌ಗಳ ಒಡೆಯರು ಕನ್ನಡಿಗರು. ತಮ್ಮ ಜೀವಂತಿಕೆಗೆ ಸಾಕ್ಷಿಯಾಗಿ ಕನ್ನಡ ಸಂಘಗಳನ್ನು ಕಟ್ಟಿಕೊಂಡಿದ್ದಾರೆ.

ಇವುಗಳಲ್ಲಿ ಈ ವರ್ಷ ಅಮೃತಮಹೋತ್ಸವ ಆಚರಿಸಿದ ಕರ್ನಾಟಕ ಸಂಘವೆಂದರೆ ಮಾತುಂಗದಲ್ಲಿರುವ ಸರ್. ಎಂ.ವಿ. ಸ್ಮಾರಕ ರಂಗಮಂದಿರ, ಸ್ವಂತ ಕಟ್ಟಡ, ಅಪೂರ್ವ ಗ್ರಂಥಾಲಯ, 800 ಆಸನಗಳ ವಾತಾನುಕೂಲಿ ಸಭಾಭವನ ಹೊಂದಿದೆ. ಅಲ್ಲದೆ ಮೈಸೂರು ಅಸೋಸಿಯೇಷನ್, ಬಿಲ್ಲವರ ಸಂಘ, ಮೊಗವೀರ ಸಂಘ ಮುಂತಾದ ನೂರಾರು ಕನ್ನಡ ಸಂಘಗಳು ಶೈಕ್ಷಣಿಕವಾಗಿ ಸೇವೆ ಸಲ್ಲಿಸುತ್ತಾ ಕನ್ನಡ ಭಾಷೆಯನ್ನು ಹೊರನಾಡಿನಲ್ಲಿಯೂ ಜೀವಂತವಾಗಿರಿಸಿವೆ. ಮುಂದಿನ ಪೀಳಿಗೆಗೆ ಕನ್ನಡ ಭಾಷೆ, ಸಂಸ್ಕೃತಿಯನ್ನು ದಾಡಿಸುತ್ತಿವೆ. 1933ರಲ್ಲಿ ಗಿರ್‌ಗಾಂವ್‌ನ ಸಂಜಯ್ ಸಮರದ ಚಿಕ್ಕಕೋಣೆಯಲ್ಲಿ ಪ್ರಾರಂಭವಾದ ಕರ್ನಾಟಕ ಸಂಘವು ಈಗಿರುವ ಮಾತುಂಗಾ ಸರ್. ಎಂ.ವಿ. ಸ್ಮಾರಕ ಭವನಕ್ಕೆ ನಡೆದು ಬಂದ ದಾರಿ ರೋಚಕವಾದದ್ದು. ಮುಂಬಯಿಯಲ್ಲಿ ನಡೆದ ನಾಲ್ಕು ಸಾಹಿತ್ಯ ಸಮ್ಮೇಳನಗಳನ್ನೂ ಯಶಸ್ವಿಯಾಗಿ ನಡೆಸಿದ ಕೀರ್ತಿ ಸಂಘಕ್ಕೆ ಸಲ್ಲುತ್ತದೆ. ಸ್ವಾತಂತ್ರ್ಯ ಪೂರ್ವದಿಂದಲೂ ಕನ್ನಡ ಅಸ್ಮಿತೆಯನ್ನು ಗಟ್ಟಿಗೊಳಿಸುತ್ತಾ ಕಾಲಕಾಲಕ್ಕೆ ಮುಂಬಯಿ ಕನ್ನಡಿಗರ ಜೊತೆ ಸ್ಪಂದಿಸುತ್ತಾ ವೈವಿಧ್ಯಮಯ ಕನ್ನಡ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿದೆ. ಕರ್ನಾಟಕ ಏಕೀಕರಣ ಚಳುವಳಿಗೆ, ಮುಂಬೈ ರಾಜ್ಯದಲ್ಲಿ ಸೇರಿ ಹೋಗಿದ್ದ ಕನ್ನಡ ಪ್ರದೇಶಗಳನ್ನು ಕರ್ನಾಟಕದಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯಲ್ಲಿ ಗಮನಾರ್ಹ ಸೇವೆ ಸಲ್ಲಿಸಿದೆ. ಏಕೀಕರಣದ ನಂತರವೂ ಕನ್ನಡನಾಡು ನುಡಿಯನ್ನು ಹೊರ ನಾಡಿನಲ್ಲಿ ಅದರಲ್ಲಿಯೂ ಭಾರತದ ಆರ್ಥಿಕ ರಾಜಧಾನಿ ಮುಂಬಯಿಯಲ್ಲಿ ಜೀವಂತವಾಗಿರಿಸಿದ ಸಂಸ್ಥೆಗಳಲ್ಲಿ ಅಗ್ರಸ್ಥಾನದಲ್ಲಿದೆ ಮುಂಬಯಿ ಕರ್ನಾಟಕ ಸಂಘ. ಪ್ರಸ್ತುತ ಶ್ರೀ ಎಂ.ಎಂ. ಕೋರಿ ಅವರು ಅಧ್ಯಕ್ಷರಾಗಿ, ಶ್ರೀ ಓಂದಾಸ್ ಕಣ್ಣಂಗಾರ್ ಗೌರವ ಕಾರ್ಯದರ್ಶಿಯಾಗಿ ಮುಂಬಯಿ ಕನ್ನಡಿಗರ ಹೆಮ್ಮೆಯ ಪ್ರತೀಕವನ್ನಾಗಿಸಿ ಮುಂಬಯಿ ಕರ್ನಾಟಕ ಸಂಘವನ್ನು ಮುನ್ನಡೆಸಿದ್ದಾರೆ. ಭಾರತದ ಸ್ವಾತಂತ್ರ್ಯ ಚಳುವಳಿಗೆ ಕರ್ನಾಟಕ ಏಕೀಕರಣ ಚಳುವಳಿಗೆ ಮುಂಬೈ ಕನ್ನಡ ಸಂಘಗಳು ಮತ್ತು ಕರ್ನಾಟಕ ಸಂಘಗಳ ಕೊಡುಗೆ ಅಪಾರವಾದದ್ದು. 2006ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ. ಸ್ನೇಹ–ಸಂಬಂಧ ಮಾಸಿಕ ಪ್ರಕಟಿಸುತ್ತಿದೆ.

ಹೊರನಾಡಿನಲ್ಲಿರುವ ಕರ್ನಾಟಕ ಸಂಘಗಳು : ಮುಂಬೈ, ಚೆನ್ನೈ, ಮಧುರೈ, ಹೈದ್ರಾಬಾದ್, ಸೇಲಂ, ದೆಹಲಿ, ವಾರಣಾಸಿ, ಪಣಜಿ, ಭೋಪಾಲ್, ಬರೋಡಾ, ಲಖನೌ, ಪುಣೆ, ಕಾಸರಗೋಡು, ಚೆಂಬೂರು, ಪನವೇಲ, ಗೋರೆಗಾಂವ್, ನಾರ್‌ಫರ್, ಕಲ್ಯಾಣ್, ಭಾಂಡುಪ್ ಮುಂತಾದ ಕಡೆ ಕರ್ನಾಟಕ ಸಂಘಗಳು ಕರ್ನಾಟಕ ಏಕೀಕರಣ ಚಳುವಳಿಗೆ ಪೂರ್ವದಲ್ಲಿ ಸ್ಥಾಪಿತವಾಗಿ ಇಂದಿಗೂ ಕಾರ್ಯಶೀಲವಾಗಿದೆ.

ಕನ್ನಡ ನಾಡಿನಲ್ಲಿ ಸ್ಥಾಪಿತವಾದ ಕರ್ನಾಟಕ ಸಂಘಗಳು : ಮೈಸೂರು, ತಿಪಟೂರು, ರಾಯಚೂರು, ಮಂಡ್ಯ, ಪುತ್ತೂರು, ರಾಣಿಬೆನ್ನೂರು, ಅರಸೀಕೆರೆ, ಬೀರೂರು, ಅಂಕೋಲೆ ದಾಂಡೇಲಿ, ಶಿವಮೊಗ್ಗ ಮುಂತಾದ ಸ್ಥಳಗಳಲ್ಲಿ ಕರ್ನಾಟಕ ಸಂಘಗಳು ಸ್ಥಾಪಿತವಾಗಿವೆ. ಕನ್ನಡ ನಾಡಿನಾದ್ಯಂತ ಮತ್ತು ಹೊರನಾಡುಗಳ ನೂರಾರು ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕರ್ನಾಟಕ ಸಂಘಗಳು ಏಕೀಕರಣ ಪೂರ್ವದಲ್ಲೇ ಸ್ಥಾಪಿಸಲ್ಪಟ್ಟು ಕರ್ನಾಟಕ ಏಕೀಕರಣ ಚಳುವಳಿಗೆ ಪೂರಕವಾಗಿ ಸ್ಪಂದಿಸಿವೆ. ಎಲ್ಲ ಕರ್ನಾಟಕ ಸಂಘಗಳನ್ನು ಪರಿಚಯಿಸಬೇಕೆಂಬ ಮಹದಾಸೆಯಿಂದ ವಿಳಾಸ ತಿಳಿದ ಕೆಲವು ಸಂಘಗಳಿಗೆ ಪತ್ರ ಬರೆದು ವಿನಂತಿಸಿದೆ. ಮಾಹಿತಿಗಳು ಲಭ್ಯವಾದ ಕೆಲವು ಕರ್ನಾಟಕದ ಸಂಘಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಿದ್ದೇನೆ. ಏಕೀಕರಣ ಪೂರ್ವದಲ್ಲಿ ಸ್ಥಾಪಿತವಾಗಿ, ಇಂದಿಗೂ ಕ್ರಿಯಾ

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ನಿಜಲಿಂಗಪ್ಪ ಎಸ್., ಕರ್ನಾಟಕದ ಪರಂಪರೆ, ಸಂಪುಟ 2, 1992, ಪ್ರ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
2. ಜಯದೇವಪ್ಪ ಜೈನಕೇರಿ., 2005, (ಸಂ) ಅಮೃತ ವರ್ಷ, 75, ಪ್ರ. ಕರ್ನಾಟಕ ಸಂಘ (ರಿ)., ಶಿವಮೊಗ್ಗ, ವರದಿ 1930 ರಿಂದ 36 ಪುಟ 298–379.
3. ಪ್ರೊ. ಬಿ.ವಿ. ಗುಂಜೆಟ್ಟಿ., (ಸಂ) ಸ್ನೇಹ ಸೌರಭ 2004, ಪ್ರ. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ.
4. ವಿ.ಜೆ. ನಾಯಕ., (ಸಂ) ಚಿನ್ನದ ಗೆರೆ, 2004, ಪ್ರ. ಕರ್ನಾಟಕ ಸಂಘ, ಅಂಕೋಲಾ.
5. ಗಟ್ಟು ಶ್ರೀನಿವಾಸ್, ಗೌರವ ಕಾರ್ಯದರ್ಶಿ, ರಾಯಚೂರು ಕರ್ನಾಟಕ ಸಂಘ.

6. ಪ್ರೊ. ಜಯಪ್ರಕಾಶಗೌಡ., (ಸಂ.) ಅಭಿವ್ಯಕ್ತಿ, ಸಂ. 1, 2008, ಕರ್ನಾಟಕ ಸಂಘ, ಮಂಡ್ಯ.
7. ಟಿ.ಹೆಚ್.ಎಂ. ಬಸವರಾಜ ಅವರ ಲೇಖನ, (ಸಂ.) ಡಾ. ವಿದ್ಯಾಶಂಕರ ಸ್ವಪ್ನಲೋಕ, ಮಾಸಿಕ, ಫೆಬ್ರವರಿ 2009.
8. ಸೀತಾರಾಮಯ್ಯ ಎಂ.ವಿ., (ಸಂ.) ಕೌಸ್ತುಭ, 1997, ಪ್ರ. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.
9. ಶ್ರೀನಿವಾಸ ಜೋಕಟ್ಟೆ, (ಸಂ.) ಸ್ನೇಹ ಸಂಬಂಧ, ಡಿಸೆಂಬರ್ 2008, ಕರ್ನಾಟಕ ಸಂಘ ಮುಂಬೈ.

ಗೋಕರ್ಣದ ಬಂಡಿಕೇರಿಯಲ್ಲಿ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳಿಂದ ಚಿತ್ರಾಪುರ ಸಾರಸ್ವತರ ಮಠ ಸ್ಥಾಪನೆ

– ಡಾ. ಎ.ಕೆ. ಶಾಸ್ತ್ರಿ

ಗೋಕರ್ಣ ಕ್ಷೇತ್ರದ ಬಂಡಿಕೇರಿ1ಯಲ್ಲಿ ಚಿತ್ರಾಪುರ ಸಾರಸ್ವತರ2 ಮಠ ಕ್ರಿ.ಶ. 1708ರಲ್ಲಿ ಸ್ಥಾಪನೆಯಾಯಿತು. ಪ್ರಥಮ ಶ್ರೀ ಪರಿಜ್ಞಾನಾಶ್ರಮ (ಕ್ರಿ.ಶ. 1708–1720) ಸ್ವಾಮಿಗಳು ಅಲ್ಲಿಯ ಪೀಠವನ್ನಲಂಕರಿಸಿದ ಪ್ರಥಮ ಗುರುಗಳು3. ಶ್ರೀ ಪರಿಜ್ಞಾನಾಶ್ರಮದ ನಂತರ, ಭಟ್ಕಳ ತಾಲೂಕಿನ ಶಿರಾಲಿಗೆ ಹೊಂದಿಕೊಂಡಿರುವ ಚಿತ್ರಾಪುರದಲ್ಲಿ ಮಠ ನಿರ್ಮಾಣವಾಯಿತಾದರೂ ಚಿತ್ರಾಪುರ ಸಾರಸ್ವತರಪ್ರಥಮ ಮಠ ಸ್ಥಾಪನೆಯಾಗಿದ್ದು ಗೋಕರ್ಣದ ಬಂಡಿಕೇರಿಯಲ್ಲಿ4. ಕಳೆದ ಮುನ್ನೂರು ವರ್ಷಗಳ ಅವಧಿಯಲ್ಲಿ ಪ್ರಥಮ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳ ನಂತರ ಪೀಠವನ್ನು ಅಲಂಕರಿಸಿದವರು, ಕ್ರಮವಾಗಿ, ಪ್ರಥಮ ಶ್ರೀ ಶಂಕರಾಶ್ರಮ (ಕ್ರಿ.ಶ. 1720–1757), ದ್ವಿತೀಯ ಶ್ರೀ ಪರಿಜ್ಞಾನಾಶ್ರಮ (ಕ್ರಿ.ಶ. 1757–1770), ದ್ವಿತೀಯ ಶ್ರೀ ಶಂಕರಾಶ್ರಮ (ಕ್ರಿ.ಶ. 1770–1785), ಶ್ರೀ ಕೇಶವಾಶ್ರಮ (ಕ್ರಿ.ಶ. 1785–1823), ಶ್ರೀ ವಾಮನಾಶ್ರಮ (ಕ್ರಿ.ಶ. 1823– 1839), ಶ್ರೀಕೃಷ್ಣಾಶ್ರಮ (ಕ್ರಿ.ಶ. 1839–1863), ಶ್ರೀಪಾಂಡುರಂಗಾಶ್ರಮ (ಕ್ರಿ.ಶ. 1863–1915), ಶ್ರೀ ಆನಂದಾಶ್ರಮ (ಕ್ರಿ.ಶ. 1915–1966) ಮತ್ತು ತೃತೀಯ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳು (ಕ್ರಿ.ಶ. 1967–1979).5 ಗುರುಪರಂಪರೆಯಲ್ಲಿ ಹನ್ನೊಂದನೆಯವರಾದ ಇಂದಿನ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮಿಗಳು 1997ರಫೆಬ್ರವರಿ 27ರಂದು ಪೀಠಕ್ಕೆ ಬಂದರು.

ಚಿತ್ರಾಪುರ ಮಠದ ಚರಿತ್ರೆಯ ಮೇಲೆ ಬೆಳಕು ಬೀರುವ ಸಹಸ್ರಾರು ಕಾಗದ ಪತ್ರಗಳು, ಧಾರ್ಮಿಕ ಮತ್ತು ಸಾಹಿತ್ಯಕ ವಿಷಯಗಳಿಗೆ ಸಂಬಂಧಿಸಿದ ಸುಮಾರು 200 ತಾಡೋಲೆ ಕಟ್ಟುಗಳು ಮತ್ತು ಐತಿಹಾಸಿಕ ಮಹತ್ವವುಳ್ಳ ಅಪರೂಪದ ವಿಗ್ರಹ ಮತ್ತು ವಸ್ತುಗಳನ್ನೊಳಗೊಂಡ ವಸ್ತುಸಂಗ್ರಹಾಲಯ, ಇವುಗಳನ್ನೆಲ್ಲ ಶ್ರೀಮಠದಲ್ಲಿ ಕಾದಿರಿಸಲಾಗಿದೆ. ಪ್ರತಿಮಾ ಶಿಲ್ಪಗಳ ಅಧ್ಯಯನ ಮಾಡಲು ಚಿತ್ರಾಪುರ ಮಠದ ವಸ್ತುಸಂಗ್ರಹಾಲಯ ಅತ್ಯಂತ ಉಪಯುಕ್ತವಾಗಿದೆ.

ಕ್ರಿ.ಶ. 1708ರಲ್ಲಿ ಗೋಕರ್ಣದ ಬಂಡಿಕೇರಿಯಲ್ಲಿ ಚಿತ್ರಾಪುರ ಸಾರಸ್ವತರ ಮಠ ಸ್ಥಾಪನೆಯಾದಾಗಿನಿಂದ ಇಂದಿನವರೆಗಿನ, ಅಂದರೆ ಸುಮಾರು 300 ವರ್ಷಗಳ ಚರಿತ್ರೆಯ ಮೇಲೆ ಮಠದಲ್ಲಿ ಲಭ್ಯವಿರುವ ದಾಖಲೆಗಳು ಬೆಳಕು ಚೆಲ್ಲುತ್ತವೆ. ಕುಶಸ್ಥಳಿ ಗೃಹಸ್ಥರು, ಸ್ವಧರ್ಮ, ಗೋಕರ್ಣದಲ್ಲಿ ಶ್ರೀ ಭವಾನಿಶಂಕರ ದೇವರ ಪ್ರತಿಷ್ಠಾಪನೆ, ಭೂವ್ಯವಹಾರ, ಕಂದಾಯ, ಶಿಷ್ಯರ ಆಚಾರವಿಚಾರ,ನಂದಾದೀಪ್ತಿ, ಅಮೃತಪಡಿ, ಮಹಾಸಭೆಯ ಗೊತ್ತುವಳಿಗಳು, ಉತ್ಸವಗಳು, ಚಾತುರ್ಮಾಸ್ಯ ಮತ್ತು ಅನೇಕ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿ ಮಠದಲ್ಲಿಯ ಕಾಗದ ಪತ್ರಗಳು ಮಾಹಿತಿ ನೀಡುತ್ತವೆ. ಹೆಚ್ಚಿನ ಕಾಗದ ಪತ್ರಗಳು ಕನ್ನಡ ಭಾಷೆಯಲ್ಲಿದ್ದು, ಕನ್ನಡ ಮೋಡಿಲಿಪಿಯನ್ನು ಹೊಂದಿವೆ. ಶ್ರೀ ಆನಂದಾಶ್ರಮರ ಕಾಲದ ಅಂತಿಮ ಎರಡು ದಶಕಗಳಿಂದ, ಅಂದರೆ ಸುಮಾರು 1950 ರಿಂದ ಮಠದೊಂದಿಗಿನ ಪತ್ರವ್ಯವಹಾರಗಳೆಲ್ಲ ಇಂಗ್ಲಿಷ್‌ನಲ್ಲಿರುವುದು ಕಂಡುಬರುತ್ತದೆ.6

ಸಂಸ್ಕೃತ ಭಾಷೆ ಮತ್ತು ದೇವನಾಗರಿ ಲಿಪಿಯಲ್ಲಿರುವ ತಾಡೋಲೆಗಳ ಸುಮಾರು 200 ಕಟ್ಟುಗಳು ಇಂದಿನ ಚಿತ್ರಾಪುರ ಮಠದಲ್ಲಿ ಲಭ್ಯವಿರುತ್ತವೆ. ತಿಗಳಾರಿ ಲಿಪಿಯಲ್ಲಿರುವ ಕೆಲವೇ ತಾಡೋಲೆ ಕಟ್ಟುಗಳೂ ಲಭ್ಯವಾಗಿವೆ. ಚಾತುರ್ಮಾಸ್ಯ, ಅಮರಕೋಶ, ಆಶ್ವಲಾಯನಸ್ಮೃತಿ, ಶಿವಪೂಜಾ, ಪುಣ್ಯಾಹ ವಾಚನ, ಬ್ರಹ್ಮಸೂತ್ರ, ವ್ಯಾಸಭಾಷ್ಯ, ದುರ್ಗಾಸಪ್ತಶತೀ, ವಾಲ್ಮೀಕಿ ರಾಮಾಯಣ, ಮಹಾಭಾರತ, ವ್ಯಾಕರಣ, ವಿವೇಕ ಚಿಂತಾಮಣಿ, ಶಿವಗೀತೋಪನಿಷತ್, ನವಗ್ರಹ ಮಂಗಲಾಷ್ಟಕ, ಭಾಗವತ, ಪರಾಶರಸ್ಮೃತಿ, ಸಿದ್ಧಾಂತಕೌಮುದಿ, ವಿಷ್ಣುಸಹಸ್ರನಾಮಾವಳಿ, ಶಿವಸ್ತುತಿ, ಜ್ಯೋತಿಷ್‌ಗ್ರಂಥ, ಹರಿವಂಶ, ಯಾಜ್ಞವಲ್ಕ್ಯ, ಸ್ಕಂದಪುರಾಣ, ಪುರಂದರದಾಸರ ಕೃತಿಗಳು, ಗರ್ಭದಾನ ಪ್ರಯೋಗ, ಅಪಮೃತ್ಯು ಉಪಶಮನಸ್ತೋತ್ರಮ್, ವೇದಾಂತಸೂತ್ರಮ್, ಯಜ್ಞೋಪವೀತಲಕ್ಷಣ, ಸಂಸ್ಕೃತ ವ್ಯಾಕರಣ, ಇತ್ಯಾದಿ ಗ್ರಂಥಗಳ ಹಸ್ತಪ್ರತಿಗಳು ತಾಡೋಲೆಗಳ ಸಂಗ್ರಹದಲ್ಲಿದೆ. ಪ್ರಸ್ತುತ ಲೇಖನವು ಗೋಕರ್ಣದ ಬಂಡಿಕೇರಿಯಲ್ಲಿ ಮಠ ಸ್ಥಾಪನೆ ಮತ್ತು ಪ್ರಥಮ ಶ್ರೀ ಪರಿಜ್ಞಾನಾಶ್ರಮರ ಕಾಲಕ್ಕೆ ಸೀಮಿತವಾಗಿರುವುದರಿಂದ ಇವುಗಳಿಗೆ ಸಂಬಂಧಿಸಿದ ದಾಖಲೆಗಳನ್ನಷ್ಟೇ ಪರಿಶೀಲಿಸು ವುದು ಸೂಕ್ತ.

ಶಾಲಿವಾಹನ ಶಕ ವರುಷ 1642ನೇ ಶಾರ್ವರಿ ಸಂವತ್ಸರದ ಚೈತ್ರ ಶುದ್ಧ 5 (ಶನಿವಾರ, ಏಪ್ರಿಲ್ 2, 1720) ರಂದು ಶ್ರೀಮತ್ ಕೃಷ್ಣಯ್ಯ ಶಾನುಭೋಗರಿಗೆ ಕುಶಸ್ಥಳಿ ಹತ್ತು ಸಮಸ್ತರು ಬರೆಸಿಕೊಟ್ಟ ಭಾಷಾಪತ್ರದ ತಹಾ (ತಹನಾಮೆ: ಒಪ್ಪಂದದ ಪತ್ರ ; ಕರಾರುಪತ್ರ)ದ ಕಾಗದವು, ಲೇಖಕರಿಗೆ ಶ್ರೀಮಠದಲ್ಲಿ ದೊರೆತ ಕಾಗದದ ಹಸ್ತಪ್ರತಿಗಳಲ್ಲಿ ಅತ್ಯಂತ ಹಿಂದಿನ ದಾಖಲೆಯಾಗಿದೆ.7 ಕಾಶಿಯಿಂದ ಶ್ರೀಪರಿಜ್ಞಾನಾಶ್ರಮ ಸ್ವಾಮಿಗಳು ಗೋಕರ್ಣಕ್ಕೆ ತೆರಳಿ ಬಂದ ಸಮಾಚಾರ, ಗೋಕರ್ಣದ ಗೃಹಸ್ಥರು ಅವರನ್ನು ಕಂಡು ವಿಚಾರಿಸಲಾಗಿ, ಅವರು ಗೌಡಸಾರಸ್ವತ ಸನ್ಯಾಸಿಗಳು ಎಂಬುದನ್ನು ನಿಶ್ಚಯ ಮಾಡಿ, ತಮ್ಮ ವರ್ಗದಲ್ಲಿ ಬ್ರಹ್ಮಕರ್ಮಕ್ಕೆ ಸನ್ಯಾಸತನ ಬೇಕೆಂದು ಅವರನ್ನು ಗೋಕರ್ಣದಲ್ಲೇನಿಲ್ಲಿಸಿಕೊಂಡು, ಗೋಕರ್ಣ, ಮಿಡಜೆ, ಹರಿಟೆ ಮತ್ತು ಚಂದಾವರದ ಗೃಹಸ್ಥರು ಕೂಡಿ, ಬಿದರೂರು [ಬಿದನೂರು] ಗೃಹಸ್ಥರಿಗೆ ಬರೆಸಿ ಕಳುಹಿಸಿ, ಅವರು ಹತ್ತು ಪ್ರಮುಖರೂ ಒಪ್ಪಿ, ಶಿಷ್ಯರನ್ನು ಮಾಡಿಸಿ, ಮಠಮಾನ್ಯ ಕಟ್ಟಿಸಿ, ಉತ್ತಾರ (ಉಂಬಳಿ)ವ ಬರೆಸಿ ನಡೆಸಿಕೊಂಡು ಬಂದ ವೃತ್ತಾಂತ ದಾಖಲೆಯಿಂದ ಸ್ಪಷ್ಟವಾಗುತ್ತದೆ. ಈ ಎಲ್ಲ ವೃತ್ತಾಂತವನ್ನು, ಬಿದರೂರಿನ ಗೃಹಸ್ಥರು, ತಿಮ್ಮಾಪಂಡಿತರು, ವೆಂಕಟೇಶಪಂಡಿತರು, ಉಗ್ರಾಣದ ದೇವಪ್ಪನವರು, ಮನೆವಾರ್ತೆ ಅನಂತಯ್ಯನವರು, ಚಿಕ್ಕರಮನೆ ಗಣಪಯ್ಯನವರು, ನಾಗರಕಟ್ಟೆ ದೇವಪ್ಪನವರು, ಬಿಯ್ಯಾರ ಶಾಂತಯ್ಯ ಶೇನಬವರು, ಬೆಳ್ಳಿಮಹಾಲ ಮಂಗೇಶ ಶಾನುಭೊವರು, ಸಶಿಹಿತ್ತಲು ಸಾಂತಯ್ಯ ಶಾನುಬೊವರು, ರಂಗಾಜಿ ಅನಂತಯ್ಯನವರು, ಹಟ್ಟಂಗಡಿ ಅಪ್ಪಯ್ಯ ಶೇನಬೊವರು, ಕಲ್ಯಾಣಪುರದ ದೇವಯ್ಯಶೇನಬೊವರು, ಮುಂತಾದ ಗೃಹಸ್ಥರು ಮಿಡಜೆ, ಗೋಕರ್ಣ, ಹರಿಟೆ, ಚಂದಾವರ, ಗೆರಸೊಪ್ಪೆ, ಶಿರಾಲಿ, ಭಟ್ಕಳ ಮುಂತಾದ ಸ್ಥಳಗಳಲ್ಲಿಯ ಗೃಹಸ್ಥರಿಗೆ ಬರೆಸಿ ಕಳುಹಿದರೆಂದು ತಿಳಿದುಬರುತ್ತದೆ. ಮುಂದೆ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳ ಶಿಷ್ಯರನ್ನಾಗಿ ಮಾಡಲೆಂದು, ಹರಿಟೆ ಅನಂತಯ್ಯನವರ ಮುಖಾಂತರ, ಕೃಷ್ಣಯ್ಯ ಶಾನಭೋಗರಿಗೆ, ತಮ್ಮ ಮಗ ಮರ್ತೆಗೆ ಸನ್ಯಾಸ ಕೊಡುವಂತೆ, ಗೃಹಸ್ಥರೆಲ್ಲ ಕೇಳಿಕೊಳ್ಳಲು, ಮಗನನ್ನು ಸನ್ಯಾಸಿಯಾಗಿ ಮಾಡುವುದರಿಂದ, ತನಗೆ ಏನೂ ಆಧಾರ ಇಲ್ಲದಂತಾಗುತ್ತದೆ ಎಂದು ಕೃಷ್ಣಯ್ಯ ಹೇಳಿದರು. ಈ ಪೂರ್ವೋತ್ತರಗಳನ್ನೆಲ್ಲ ಪುನಃ ಬಿದರೂರ ಗೃಹಸ್ಥರಿಗೆ ಬರೆಸಿ ಕಳುಹಿಸಲು, ಅಲ್ಲಿರುವ ಗೃಹಸ್ಥರೆಲ್ಲ ಪ್ರಸಂಗಿಸಿಕೊಂಡು (ಚರ್ಚಿಸಿ), ಕೃಷ್ಣಯ್ಯ ಶಾನಭೋಗರೊಂದಿಗೆ ಮಾಡಿಕೊಂಡ ಕರಾರುಪತ್ರ ಇಂತಿದೆ :

"...ಯಿಾ ಮಠವ ನಡೆಸುವ ಯಜಮಾನತನಕೆ ನಿಮಗೆನೇಮಕ ಮಾಡಿಸಿ ನಡದು ಬರುವ ಹಾಗೂ ಮುಂದೆ ಶಿಷ್ಯರು ಆಗಬೇಕಾದರೆ ನಿಂಮ ಕುಟುಂಬದವರೇನೋಡಿಕೊಂಡು ಬರಬೇಕೆಂದು ತಾಹಾ ಮಾಡಿಕೊಡುವ ಹಾಂಗೆ ಬರೆದು ಬಂದದರಿಂದ ನಾಂವು ಸಮಸ್ತರ ಕೂಡಿನಿಂಮ ಮಗ ಮರ್ತೆಗೆ ಆಶ್ರಮ ಕೊಡಿಸಿ ಯಜಮಾನತ್ವ ಯೇನಿದ್ದರೂ ನಿಂವೇ ನಿಂದು ಕುಟುಂಬದವರೆನೋಡಿಕೊಂಡು ಬರಬೇಕು. ಮುಂದೆ ಶಿಷ್ಯತನಕೆ ನಿಂಮ ಕುಟುಂಬದೊಳಗೆ ಕೊಡಿಸಿ ನಡಕೊಂಡು ಬರಬೇಕು. ನಿಂಮ ಕುಟುಂಬದೊಳಗೆ ಪ್ರಾಜ್ಞರಾಗಿಲ್ಲವಾದರೆ ನಿಂಮ ಕುಟುಂಬದವರು ತಂದವರಿಗೆ ಆಶ್ರಮ ಕೊಡಿಸಿ ನಡೆಸಿಕೊಂಡು ಬರಬೇಕು. ಯಿ ತಾಹಕ್ಕೆ ಅಳಸಿದರೆ ತಂಮ ತಂಮ ಕುಲದೇವರಿಗೆ ತಪ್ಪಿದವರಾಗಿ ತಂಮ ಹಿರಿಯವರಿಗೆ

ಕಾಶಿಯಲ್ಲು ಹತ್ಯಾ ಮಾಡಿದ ಪಾಪಕ್ಕೆ ಹೋದಾರು ಯೆಂದು ಮಿಡಜೆ ಅನಂತಯ್ಯನ ಬರಪದಲ್ಲಿ ಬರಸಿ ಸಮಸ್ತ ಗ್ರಹಸ್ತರು ಬರಹಾ ಹಾಕಿದ ಭಾಷಾಪತ್ರ". ಇದರಿಂದಾಗಿ, ಕೃಷ್ಣಯ್ಯನವರ ಮಗ ಮರ್ತೆಗೆ ಸನ್ಯಾಸಾಶ್ರಮ, ಕೃಷ್ಣಯ್ಯನವರಿಗೆ ಮಠದ ಯಜಮಾನತ್ವ, ಮುಂದೆ ಸ್ವಾಮಿಗಳಾಗಬೇಕಾದವರು ಕೃಷ್ಣಯ್ಯನವರ ಕುಟುಂಬದವರು, ಪ್ರಾಜ್ಞರಾದವರು ಕೃಷ್ಣಯ್ಯನವರ ಕುಟುಂಬದಲ್ಲಿ ಇಲ್ಲದಿದ್ದರೆ, ಅವರ ಕುಟುಂಬದವರು ಆಯ್ಕೆ ಮಾಡಿದ ಸೂಕ್ತ ವ್ಯಕ್ತಿಯನ್ನು ಸ್ವಾಮಿಗಳನ್ನಾಗಿ ಮಾಡಬೇಕು, ಇತ್ಯಾದಿ ಅಂಶಗಳು ಪ್ರಸ್ತುತ ಕರಾರು ಪತ್ರದಿಂದ ತಿಳಿದುಬರುತ್ತದೆ. ಕರಾರುಪತ್ರದಪ್ರಾರಂಭದಲ್ಲಿ, "ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ ನಗರಾರಂಭ ಮೂಲಸ್ಥಂಭಾಯಶಂಭವೆ" ಎಂಬ ಶಿವಸ್ತುತಿಯ ಪ್ರಾರ್ಥನಾ ಶ್ಲೋಕವಿರುತ್ತದೆ. ಕರಾರು ಪತ್ರದ ಕೊನೆಯಲ್ಲಿ, "...ಯಿ ತಾಹಕ್ಕೆ ಅಳಸಿದರೆ ತಂಮ ತಂಮ ಕುಲದೇವರಿಗೆ ತಪ್ಪಿದವರಾಗಿ ತಂಮ ಹಿರಿಯವರಿಗೆ ಕಾಶಿಯಲ್ಲು ಹತ್ಯಾ ಮಾಡಿದ ಪಾಪಕ್ಕೆ ಹೋದಾರು..." ಎಂಬ ಅಂಶಗಳು, ಆ ಜನರಲ್ಲಿ ದೇವರ ಬಗ್ಗೆ ಮತ್ತು ಪುಣ್ಯಕ್ಷೇತ್ರಗಳ ಬಗ್ಗೆ ಎಷ್ಟೊಂದು ನಂಬುಗೆ ಮತ್ತು ಭಕ್ತಿ ಇದ್ದವೆಂಬುದಕ್ಕೆ ಪುರಾವೆಗಳಾಗಿವೆ.8

ಪ್ರಥಮ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳವರ ಕಾಲಕ್ಕೆ ಸೇರಿದ ಮತ್ತೊಂದು ದಾಖಲೆಯು ಶ್ರೀಮಠದಲ್ಲಿ ಲಭ್ಯವಾಗಿದೆ.9 ಮಂಗರ್ಸ ಪಂಡಿತ, ಉಗ್ರಾಣದ ದೇವಪ್ಪ, ರಾಮಾಪಂಡಿತ, ಗಣಪಯ್ಯಾ ನಾಗರಕಟ್ಟೆ, ಸಾಂತಯ್ಯ, ಮನವಾರ್ತೆ ಅನಂತಯ್ಯ, ಅಚ್ಚುತಯ್ಯ, ದೇವಜ ಶಾನಬೊವ, ಚಂದಾವರದ ರವಳಪ್ಪ, ದಾಸೋಹದ ದೇವಪ್ಪ, ಚೆನ್ನಯ್ಯಶಾನುಬೊವ, ಮಾಳಪ್ಪ ಶಾನುಬೊವ, ವೀಣೆ ನಾರಣಪ್ಪ, ಕವಿ ದೇವಪ್ಪ, ಮಂಗಳೂರ ರವಳಯ್ಯ ಶ್ಯಾನುಬೊವ, ಸುಬ್ಬಣ್ಣ, ಕೊಡಯಾಲದ ಬಪ್ಪಯ್ಯ ಶೇನುಬವ, ಜೆಪ್ತಿನ ಮಂಗಜಿಶ್ಯಾನುಬೊವ, ಶಿರಾಲಿ ದೇವಯ್ಯ ಶೇನಬೊವ, ಕುಂದಾಪುರದ ವಾಸುದೇವ ಶ್ಯಾನುಬೊವ, ಬೈದೂರ ಕಪೀಲಯ್ಯ, ಝುಜರಿ ಮಹಾದೇವಪ್ಪ ಅಪ್ಪಯ್ಯ ಶ್ಯಾನುಬೊವ, ಕಡಲೆ ಲಕ್ಷುಮಯ್ಯಶ್ಯಾನುಬೊವ, ಉಳ್ಳಾಲದ ರಾಮಯ್ಯ ಶ್ಯಾನಬೊವ ಮುಂತಾದ ಕುಶಸ್ಥಳಿ ಮಹಾಜನಂಗಳು ಶ್ರೀ ಪರಿಜ್ಞಾನಾನಂದಾಶ್ರಮ [ಶ್ರೀ ಪರಿಜ್ಞಾನಾಶ್ರಮ] ಸ್ವಾಮಿಗಳಿಗೆ ಬಿನ್ನವತ್ತಳೆಯನ್ನು ಸಮರ್ಪಿಸಿದರು. ಸ್ವಾಸ್ತಿ ಮಠ ಮಾನ್ಯ ಕುರಿತು ಹತ್ತು ಜನರು (ದಹಜನ) ಯೋಚಿಸಿ, ಆದ ಅಭಿಪ್ರಾಯವನ್ನು ಗೋಕರ್ಣದ ಸಾಂತಯ್ಯನು ಬಿನ್ನಹ ಮಾಡಿಕೊಂಡಿದ್ದರಿಂದ ತಿಳಿಯ ಲಾಯಿತು ಎಂದು ಬಿನ್ನವತ್ತಳೆಯಲ್ಲಿ ನಮೂದಿಸಲಾಗಿದೆ. ಸ್ವಜಾತಿ ಗೃಹಸ್ಥರಲ್ಲಿ ಸಂಚರಿಸಿ, ಆಚಾರ ವ್ಯವಹಾರ, ಬೋಧನೆ, ಭಿಕ್ಷೆಗಳ ಸಹ ಮಾಡಿಸಿ, ತೀರ್ಥಪ್ರಸಾದದಿಂದ ಸಹ ಗೃಹಸ್ಥರನ್ನು ಕೃತಾರ್ಥಿಸಿ, ಈ ಪ್ರಾಂತದಲ್ಲಿ ಇರುವಂತೆ ದಯಮಾಡಬೇಕು ಎಂದು ಸಮಸ್ತ ಮಹಾಜನಂಗಳು ಸ್ವಾಮಿಗಳನ್ನು ಬೇಡಿಕೊಂಡರು.

ಈ ರೀತಿಯಾಗಿ, ಪ್ರಥಮ ಶ್ರೀ ಪರಿಜ್ಞಾನಾಶ್ರಮ ಮತ್ತುಪ್ರಥಮ ಶ್ರೀ ಶಂಕರಾಶ್ರಮ ಸ್ವಾಮಿಗಳ ಕಾಲಕ್ಕೆ ಸೇರಿದ ದಾಖಲೆಗಳು, ಗೋಕರ್ಣ ಬಂಡಿಕೇರಿಯಲ್ಲಿ ಚಿತ್ರಾಪುರ ಸಾರಸ್ವತರ ಮಠ ಸ್ಥಾಪನೆ, ಗುರುಪೀಠದಲ್ಲಿ ಪ್ರಥಮರಾದ ಶ್ರೀ ಪರಿಜ್ಞಾನಾಶ್ರಮ, ಕುಶಸ್ಥಳಿ ಸಾರಸ್ವತ ಹತ್ತು ಸಮಸ್ತರು, ಪೀಠಕ್ಕೆ ಗುರುಗಳನ್ನು ಆಯ್ಕೆ ಮಾಡುವ ಮತ್ತು ಯಜಮಾನತ್ವ ವಹಿಸುವ, ಕೃಷ್ಣಯ್ಯ ಶಾನಭೋಗ ಮತ್ತು ಅವರ ಕುಟುಂಬದವರ ಜವಾಬ್ದಾರಿ, ಗುರು ಶಿಷ್ಯರ ಅನ್ಯೋನ್ಯ ಸಂಬಂಧದ ಪ್ರಾರಂಭ ಇತ್ಯಾದಿ ವಿಷಯಗಳ ಮೇಲೆ ಬೆಳಕು ಬೀರುತ್ತವೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಪೂರ್ವದಲ್ಲಿ ಬಂಡಿ [ಚಕ್ಕಡಿ, ಗಾಡಿ]ಗಳನ್ನು ಈ ಕೇರಿ [ಓಣಿ]ಯಲ್ಲಿ ನಿಲ್ಲಿಸುತ್ತಿದ್ದುದರಿಂದ, ಈ ಓಣಿಗೆ ಬಂಡಿಕೇರಿ ಎಂಬ ಹೆಸರುಪ್ರಾಪ್ತವಾಯಿತು.

2. ಚಿತ್ರಾಪುರ ಮಠದಲ್ಲಿ ಲಭ್ಯವಿರುವ ಎಲ್ಲ ಚಾರಿತ್ರಿಕ ದಾಖಲೆಗಳಲ್ಲಿ ಚಿತ್ರಾಪುರ ಸಾರಸ್ವತರನ್ನು 'ಗೌಡ ಸಾರಸ್ವತ' ಎಂದೇ ಉಲ್ಲೇಖಿಸಲಾಗಿದೆ. "... ಉತ್ತರ ಮತ್ತು ದಕ್ಷಿಣ ಹಿಂದುಸ್ಥಾನದಲ್ಲಿ ನೆಲೆಸಿರುವ ಅನೇಕ ಸಾರಸ್ವತರಲ್ಲಿ ಗೋವಾ ಮತ್ತು ಪಶ್ಚಿಮ ಕರಾವಳಿಯಲ್ಲಿ ನೆಲೆಸಿದವರು ಮಾತ್ರ ಗೌಡ ಸಾರಸ್ವತರೆಂದು ಗುರುತಿಸಲ್ಪಡುತ್ತಾರೆ....ಚಿತ್ರಾಪುರ ಸಾರಸ್ವತರು 6 ಗೋತ್ರಗಳಿಗೆ ಸೇರಿದವರಾಗಿರುತ್ತಾರೆ. ಕೌಂಡಿಣ್ಯ, ಕೌಶಿಕ, ವತ್ಸ, ಅತ್ರಿ, ಭಾರದ್ವಾಜ ಮತ್ತು ಶಂಕ-ಪಿಂಗಳ-ಕುತ್ಸ" ಎಂಬುದಾಗಿ ಶ್ರೀ ವಿ.ಎನ್. ಕುಡವ ಅವರು, 'ಹಿಸ್ಟೊರಿ ಆಫ್ ದಿ ದಕ್ಷಿಣಾತ್ಯ ಸಾರಸ್ವತ್ಸ್' (ಸಂಯುಕ್ತ ಗೌಡಸಾರಸ್ವತ ಸಭಾ, ಮದ್ರಾಸ, 1972) ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

ಫ್ರಾಂಕ್ ಎಫ್. ಕಾನ್‌ಲಾನ್ ಅವರ 'ಎ ಕಾಸ್ಟ್ ಇನ್ ಎ ಚೇಂಜಿಂಗ್ ವರ್ಲ್ಡ್' (ಥಾಮಸನ್ ಪ್ರೆಸ್, ನ್ಯೂ ದಿಲ್ಲಿ, 1977) ಎಂಬ ಗ್ರಂಥವನ್ನೂ ಓದಿರಿ.

3. ಶೃಂಗೇರಿ ಜಗದ್ಗುರು ಪರಂಪರೆಯಲ್ಲಿ 27 ನೆಯವರಾದ ದ್ವಿತೀಯ ಶ್ರೀ ಸಚ್ಚಿದಾನಂದ ಭಾರತಿಗಳು (ಕ್ರಿ.ಶ. 1705–1741) ಚಿತ್ರಾಪುರ ಸಾರಸ್ವತರ ಪ್ರಥಮ ಗುರುಗಳಾದ ಶ್ರೀ ಪರಿಜ್ಞಾನಾಶ್ರಮ ಸ್ವಾಮಿಗಳ ಪಟ್ಟಾಭಿಷೇಕ ನೆರವೇರಿಸಿದರೆನ್ನಲಾಗಿದೆ. ಇಂದಿಗೂ ಆ ಸಂಪ್ರದಾಯ ಮುಂದುವರಿದಿರುವುದು ಒಂದು ವಿಶೇಷ. ಪ್ರಸ್ತುತದಲ್ಲಿ ಚಿತ್ರಾಪುರ ಮಠಾಧೀಶರಾದ ಶ್ರೀ ಸದ್ಯೋಜಾತ ಶಂಕರಾಶ್ರಮ ಸ್ವಾಮಿಗಳ ಪಟ್ಟಾಭಿಷೇಕವೂ, ಇಂದಿನ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀ ತೀರ್ಥರ ಸಮ್ಮುಖದಲ್ಲೇ ನಡೆಯಿತು.

4. ಚಿತ್ರಾಪುರದಲ್ಲಿ ಮಠ ಸ್ಥಾಪನೆಯಾಗುವ ಪೂರ್ವದಲ್ಲಿ ಮೊದಲು ಮಠ ಸ್ಥಾಪನೆಯಾಗಿದ್ದು ಗೋಕರ್ಣದ ಬಂಡಿಕೇರಿಯಲ್ಲಿ ಎಂಬುದು ಸರ್ವವಿದಿತ. "ಸಿದ್ಧಾರ್ಥಿ ಸಂವತ್ಸರ ಮಾರ್ಗಶಿರ ಶು. 10 ರಲ್ಲೂ ಶ್ರೀಮಠ ಕೆಳದಿ ಬಸವಪ್ಪ ನಾಯಕರು ಮಾಳಮಲ್ಲಿ ಬರಶಿ ಕಳುಹಿದ ಕಾರ್ಯ...ಕೋಟಿತೀರ್ಥ ಸಮೀಪದಲ್ಲಿ ಬಂಡಿಕೇರಿಯೆಂಬ ಸ್ಥಳದಲ್ಲು ತಂನ ಗುರುಮಠ ಕಟ್ಟಿಸಿ ಪ್ರತಿಷ್ಠೆ ಮಾಡುವ ಭವಾನಿ ಶಂಕರ ದೇವರಿಗೆ..." ಎಂದು ಕೆಳದಿ ಬಸವಪ್ಪ ನಾಯಕರ ಭಾಷಾಪತ್ರದಲ್ಲಿ ಉಲ್ಲೇಖಿಸಲಾಗಿದೆ. ಭಾಷಾಪತ್ರದ ಕಾಲ ಗುರುವಾರ, ನವೆಂಬರ್ 29, 1739, ಡಾ॥ ಎ.ಕೆ. ಶಾಸ್ತ್ರಿ, 'ದಿ ರಿಕಾರ್ಡ್ಸ್ ಆಫ್ ಶ್ರೀ ಚಿತ್ರಾಪುರ ಮಠ', ಚಿ.ದಾ. 5.

5. ಚಿತ್ರಾಪುರ ಮಠದ ಗುರುಪರಂಪರೆ ಕುರಿತು ಹೆಚ್ಚಿನ ಮಾಹಿತಿಗಾಗಿ ಉಮಾಬಾಯಿ ಆರೂರು, 'ಶ್ರೀ ಚಿತ್ರಾಪುರ ಗುರುಪರಂಪರಾ ಚರಿತ್ರ' (ಮರಾಠಿ), ಪ್ರಕಾಶಕರು : ಪಾಂಡುರಂಗರಾವ್ ಶಿವರಾಮ ಮರಬಳ್ಳಿ.

   ಕನ್ನಡ ಅನುವಾದ : ತಡಗಜೆ ನಾಗೇಶರಾವ್, ಪ್ರವ್ಯೆ. ರಾಮರಾವ್ ಆ್ಯಂಡ್ ಕಂಪನಿ, ಮಂಗಳೂರು, 1973.

6. ಕಾಗದ ಪತ್ರಗಳ ಹೆಚ್ಚಿನ ಮಾಹಿತಿಗಾಗಿ ಲೇಖಕರ ಮೇಲ್ಕಾಣಿಸಿದ ದಿ ರಿಕಾರ್ಡ್ಸ್ ಆಫ್ ಶ್ರೀ ಚಿತ್ರಾಪುರ ಮಠ (ಚಿ.ದಾ.) ಓದಿರಿ.

7. ಚಿ.ದಾ. 1.

8. ಪ್ರಸ್ತುತ ಕರಾರು ಪತ್ರದಲ್ಲಿ ನಮೂದಿಸಲಾದ ಕೃಷ್ಣಯ್ಯ ಶಾನಭೋಗರ ಮಗ ಮರ್ತೆ, ಸನ್ಯಾಸ ದೀಕ್ಷೆ ಪಡೆದು, 'ಶ್ರೀ ಶಂಕರಾಶ್ರಮ' ಎಂಬ ಅಭಿಧಾನ ಪಡೆದು, ಗುರುಪರಂಪರೆಯಲ್ಲಿ ದ್ವಿತೀಯರೆನಿಸಿದರು.

9. ಚಿ.ದಾ. 2.

ಗೋಕರ್ಣದಲ್ಲಿ ದೊರೆತ ಕೆಳದಿ ಚೆನ್ನಮ್ಮಾಜಿ ಬಸವಪ್ಪನಾಯಕರ ಕಾಲದ ನಿರೂಪಗಳು

– ಡಾ. ಕೆಳದಿ ವೆಂಕಟೇಶ್ ಜೋಯಿಸ್

ಗೋಕರ್ಣ ಕ್ಷೇತ್ರದಲ್ಲಿ ಶ್ರೀ ಹೆದ್ಲಿ ಅಶೋಕ್, ಶ್ರೀನಿತಿನ್, ಇವರೊಡನೆ ಸರ್ವೇಕ್ಷಣೆ ಕೈಗೊಂಡ ಸಂದರ್ಭದಲ್ಲಿ ಶ್ರೀ ವಿನಾಯಕ ಶಿವರಾಂಭಟ್ ರಮಣಿ ಮನೆ ರಥದ ಬೀದಿ, ಗೋಕರ್ಣ ಇವರಲ್ಲಿ ದೊರೆತ ಕೈಬರಹದ ಪುಸ್ತಕ ಗಮನ ಸೆಳೆಯಿತು. ಇದು ಸುಮಾರು ಹದಿನೆಂಟನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಪ್ರತಿ ಮಾಡಿಕೊಂಡ ಪುಸ್ತಕವಾಗಿತ್ತು. ಈ ಪುಸ್ತಕದಲ್ಲಿ ಸುಮಾರು ಐವತ್ತಕ್ಕೂ ಹೆಚ್ಚು ನಿರೂಪಗಳಿಗೆ. ಎಲ್ಲವೂ ಮೋಡಿ ಅಕ್ಷರದಲ್ಲಿ ಬರೆಯಲ್ಪಟ್ಟಿವೆ. ಎರಡು ಮರಾಠಿ ಮೋಡಿಯಲ್ಲಿ ಮತ್ತು ಎರಡು ಅರೆಬಿಕ್‌ನಲ್ಲಿದೆ. ಇವು ಗೋಕರ್ಣ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹುದಾಗಿವೆ. ಈ ನಿರೂಪಗಳು ಬನವಾಸಿ ಕದಂಬರು, ವಿಜಯನಗರದರಸರು, (ಈ ನಿರೂಪವನ್ನು ಹಂಪಿ ಉತ್ಸವ 2011ರಲ್ಲಿ ನಡೆದ ವಿಜಯನಗರ ಇತಿಹಾಸ ವಿಚಾರ ಸಂಕಿರಣದಲ್ಲಿ ಪ್ರಕಟಿಸಲಾಗಿದೆ) ಚನ್ನಭೈರರಸರು, ಉತ್ತರ ಕನ್ನಡ ಜಿಲ್ಲೆಯಲ್ಲಿ ಆಡಳಿತ ನಡೆಸಿದ ತುಂಡರಸರುಗಳು, ಕೆಳದಿ ಸೋಮಶೇಖರನಾಯಕನ ಕಾಲದ ನಿರೂಪ ಕುರಿತು 2010ರಲ್ಲಿ ಆದಿಚುಂಚನಗಿರಿಯಲ್ಲಿ ನಡೆದ ಕರ್ನಾಟಕ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸಲಾಗಿದೆ. ಈ ನಿರೂಪದಲ್ಲಿ ಉಲ್ಲೇಖವಾಗಿರುವ ಕುಂಭಕರ್ಣೇಶ್ವರ, ರಾವಣೇಶ್ವರ, ವಿಭೀಷಣೇಶ್ವರ ದೇವಾಲಯಗಳು ಇಂದೂ ಅಲ್ಲಿವೆ. ಅವುಗಳು ಪುರೋಹಿತರ ಮನೆಯ ಒಳಭಾಗದಲ್ಲಿ, ಬಚ್ಚಲ ಹಿಂಭಾಗದಲ್ಲಿ ಸೇರಿಹೋಗಿವೆ. ಇಂದೂ ಅವುಗಳಿಗೆ ಪೂಜೆ ನಡೆಯು ತ್ತಿರುವುದು ಕಂಡುಬರುತ್ತದೆ. ಉಳಿದಂತೆ ಕೆಳದಿ ಚೆನ್ನಮ್ಮಾಜಿ ಮತ್ತು ಕೆಳದಿ ಬಸವಪ್ಪನಾಯಕ ಮೊದಲಾದವರುಗಳ ಕಾಲದನಿರೂಪಗಳೂ ಅಲ್ಲಿದ್ದು ಅವುಗಳಲ್ಲಿ ಕೆಲವನ್ನಾಧರಿಸಿ ಇಲ್ಲಿಪ್ರಬಂಧವನ್ನು ಮಂಡಿಸಲು ಪ್ರಯತ್ನಿಸಿದ್ದೇನೆ. ಶಿಲಾ ಶಾಸನದಪ್ರತಿಯೂ ಇದರಲ್ಲಿ ದಾಖಲಾಗಿದೆ. ಈ ಹಳೆಯ ಪುಸ್ತಕವನ್ನುನನ್ನ ಸಂಶೋಧನೆಗೆ ಒದಗಿಸಿದ ಶ್ರೀ ರಮಣಿರವರಿಗೆ ಸಹಕರಿಸಿದ ಎಲ್ಲರಿಗೂ ನಾನು ಅಭಾರಿಯಾಗಿದ್ದೇನೆ. ಇಂತಹ ದಾಖಲೆಗಳು ದೊರೆತಲ್ಲಿ ಇತಿಹಾಸಕ್ಕೆ ಉತ್ತಮ ಆಕರಗಳಾಗುವುದರಲ್ಲಿ ಎರಡು ಮಾತಿಲ್ಲ.

ನಿರೂಪದ ಪಾಠ

ಪುಸ್ತಕದಲ್ಲಿ ದಾಖಲಾಗಿರುವ ಪುಟ ಸಂಖ್ಯೆ 26

ರುದರೊದ್ಗಾರ್ರಿ ಸಂವತ್ಸರ ಫಾಲ್ಗುಣ ಶು 10 ಲು ಶ್ರಿಮತ್ಕೆಳದಿಚೆಂನಂಮಾಜಿಯವರ್ರುದೆವಂಣಗೆ ಬರಶಿಕಳುಹಿದ ಕಾರ್ಯ ಗೊಕರ್ನದ ಶ್ರಿ ಮಹಾಬಲೆಶ್ವರ ದೆವಸ್ಥಾನದ ಪ್ರಾಕಾರದ ಹೊರಗಣ ಆದಿ ಗೊಕರ್ನೆಶ್ವರ ದೆವಸ್ಥಾನದ ಸಮಿಪದಲ್ಲಿಕಳಸಂ ೞ ನಾರಾಯಣನ್ನು ದೆವಸ್ಥಾನ ಕಟ್ಟಿಶಿ।ಕಳಶೆಶ್ವರ ದೆವರ ಪ್ರತಿ ಷ್ಟೆ ಮಾಡಿಶಿ।ಆದೆವತ್ತಾ ವೆಚಕ್ಕೆ। ಮಿಡಿಜೆ ಶಿಮೆ ದೆಶಯಿ ರಾಮನಾಯ್ಕು। ಬಾಬನಾಯ್ಕು । ಮರ್ತು ನಾಯ್ಕನ ಉಂಬಕ್ಕಿ ಉ

ಪುಟ 25

ತ್ತಾರ ದೊಳಗೆ ಅವಂದಿರ ಕೈಯ ಗ 12 ಹಂನ್ನೆರಡು ವರಹಾಂನಾ ಭುವಿಯಂನು ನುರಿಯಿಪತು ವರ ಹೊಂನು ವಿಶ್ವೆಶ್ವರ ದೆವಸ್ತಾನದ ಭಂಡಾರಕ್ಕೆ ಕ್ರಯ ಸಾಧನ ಬರಶಿ।ದೆವತ್ತಾ ವೆಚ್ಚಕ್ಕೆ ನಡದುಬರುಥೆನೆಂದು ಹೆಳಿಕೊಂಡ ಸಂಮಂಧ।ಮಿಡಿಜೆ ಶಿಮೆ ಯಿಂದಾ ಅವರಿಗೆ । ಉಂಬಳಿ ಉತ್ತಾರವಾದ ಬೆಟ್ಟಕುಳಿವಳಗೆ ಹಂಣೆನಾಗರ ಸ್ತಳದಲ್ಲಿ ಗ 12 ಹಂನ್ನೆರಡು ವರಹಾಂನ್ನು ಸ್ವಾಸ್ತೆಯಂನ್ನು ಕಳಶೆಶ್ವರ ದೆವರ ದೆವತ್ತಾ ವೆಚ್ಚಕ್ಕೆ ಶಿವಾರ್ಪಿತವಾಗಿ ಬಿಟ್ಟು ಯಿದೆವೆ।ಸಾಧನ ಪ್ರಮಾಣ ಸ್ವಾಸ್ತೆ ಭುಮಿಯಂನು ಮಹಬಲೆಶ್ವರ ದೆವರ ಸಿಸ್ತಿಗೆ ಕುಡಿಕೊಂಡು ಆ ಕಳಶೆಶ್ವರ ದೆವರ ದೆವತಾ ಸೆವೆನಡೆಸಿ ಬಹ ರಿತ್ತಿ ಕಟು ಮಾಡಿಶಿ ಯಿದೆವೆ।ಯಂತ್ತಾ ಅವರು ವಿಂಗಡಿಸಿಕೊಟು ಭುಮಿಯಂನು ದೆವಸ್ತಾನದ। ಮಣೆಗಾರನ ಹವಾಲೆ ಮಾಡಿ ಕೊಟು ಯಿಾ ಕಾಗದವನು ಸೆನ ಭವರ ಕಡಿತಕ್ಕೆ ಬರಶಿ ತಿರುಗಾ ಯಿವರ ವ್ಸಕ್ಕೆ ಕೊಡಿಸುವದು ಯಂದು ಬರಶಿಕೊಟ ನಿರುಪು । ಯಿ ಅಸಲು ಶಿಖೆ ನಿರು ಪು ವೆಂಕದ್ರಿ ರಾಂಭಟನ ವಶಕೆ ಯಿರುತದೆ ಅದರ ನಖಲು

ಸಾರಾಂಶ : ಕೆಳದಿ ಚೆನ್ನಮ್ಮಾಜಿಯವರು ಗೋಕರ್ನದ ಶ್ರೀ ಮಹಾಬಲೇಶ್ವರ ದೆವಸ್ಥಾನದ ಪ್ರಾಕಾರದ ಹೊರಗಣ ಆದಿ ಗೋಕರ್ಣ್ೇಶ್ವರ ದೇವಸ್ಥಾನದ ಸಮೀಪದಲ್ಲಿ ಇರುವ ಕಳಸಂಣ ನಾಅರಾಯಣ ದೇವಸ್ಥಾನ ಕಟ್ಟಿಸಿ ಕಳಸೇಶ್ವರ ದೇವರ ಪ್ರತಿಷ್ಠೆ ಮಾಡಿಶಿ ಆ ದೇವತಾ ವೆಚ್ಚಕ್ಕೆ ಮಿಡಿಜೆ ಶಿಮೆ ದೇಸಾಯಿ ರಾಮನಾಯ್ಕೆ, ಬಾಬನಾಯ್ಕ ಮರ್ತು ನಾಯ್ಕ ಇವರ ಉಂಬಳಿಯಲ್ಲಿ ಅವರಿಂದ 12 ವರಹಾ ಮತ್ತುನೂರ ಯಿಪ್ಪತ್ತು ಹೊನ್ನು ವಿಶ್ವೇಶ್ವರ ದೇವಸ್ಥಾನಕ್ಕೆ ಬರಸಿ ದೇವತಾ ವೆಚ್ಚಕ್ಕೆ ನಡದು ಬರುವಂತೆ ಕೇಳಿಕೊಂಡ ಸಂಬಂಧ ಹಂಣಿನಾಗರ ಸ್ಥಳದಲ್ಲಿ ಗ 12 ವರಹಾಂನ್ನು ಸ್ವಾಸ್ಥೆಯನ್ನು ಕಳಶೇಶ್ವರ ದೇವರ ದೇವತಾ ವೆಚ್ಚಕ್ಕೆ ಶಿವಾರ್ಪಿತವಾಗಿ ಬಿಟ್ಟ ದಾನದ ವಿವರವನ್ನು ಈ ನಿರೂಪ ಒಳಗೊಂಡಿದೆ.

ಪುಟ ಸಂಖ್ಯೆ: 27

ಆನಂದ ಸಂವತ್ಸರದ ಆಶ್ವಿಜ ಬ 10ಲ್ಲು ಶ್ರೀಮತ್ತು। ಕೆಳದಿಚಂನಂಮಾಜಿಯವರು।ನಾರಣಪ್ಪಗೆ।ಬರ್ಸಿ ಕಳುಹಿದಕಾ ರ್ಯ।ಮಿಡಜೆ ಶಿಮೆ ದೆಸಾಯಿ। ಅಚವೆಚಂದ್ರಾಯಿಣಿ ಹೆ ಬಾರಗೆ।ಮಿಡಜೆ ಶಿಮೆಯೊಳಗಣ।ಅಚವೆ ಗ್ರಾಮದಿಂದಾ ।ರೆಖೆ ಗ 737॥ ೦ ದೆಸಾಯಿಗಳ ಪಟೆ ಗ 13॥೦ ಉಭಯಂ ಗ ರೆಖೆ ಯೆಳನುರ ಆೖವತ್ತ ವಂದು ವರಹಾಕ್ಕೆ। ಉಂಬಳಿ ಉತ್ತಾರವಾಗಿ ಪರಿಧಾವಿ ಸಂವಸ್ತರದಲ್ಲು । ಗ 450।ನುಳದು।ಶುಧ ಅರಮನೆಗೆ ಬಾಹ ಸಿಸ್ತು ಗ 301ಹಾಂ ಮುಂನುರ್ರ ವಂದು ವರಹಾಂನ್ನೂ। ಆ ಶಿಮೆನಾಂಣ್ಯ ವ ನೆ ತ್ತರ್ರಿಶಿ ಕೊಳುತ್ತಾ ಬಾಹದು। ಯಿ ಶಿಸ್ತಿನವಳಗೆ ಪ್ರಾ ಕುನಷ್ಟದಿಂದ ಕುಡಿದ ಭುಮಿಗೆ।ಸಸಿ ಹಾಕಿಕೊಂಡು ಆಉತ್ಪತ್ತಿಯಂನು ಆತನೆ ಅನುಭವಿಶಿಕೊಂಡು ಬಂದಾನು।ಯಿ ಕಾಗದವ। ಶ್ಯಾನುಭೋಗರ್ರಿಗೆ ಬರಶಿ ತ್ತಿರ್ರುಗ್ಗಿ ಯಿತ್ತನ ವಶಕ್ಕೆ ಕೊಡುವದು ಯಂತ್ತಾ ಬರದ ಶಿಕ್ಕೆ ನಿರ್ರುಪಿನ ನಕಲು ಯಿನಿರ್ರುಪ ಕಾಗದ ಉ । ಅಚುವೆ ಹೆಬಾರನ ವಶಕ್ಕೆ ಯಿರ್ರುತ್ತಥೆ.

ಸಾರಾಂಶ : ಆನಂದ ಸಂವತ್ಸರದಲ್ಲಿ ಕೆಳದಿ ಚೆನ್ನಮ್ಮಾಜಿಯವರು ನಾರಣಪ್ಪಗೆ ಬರಸಿ ಕಳುಹಿಸಿದ ಕಾರ್ಯ ಇದಾಗಿದೆ. ಮಿಡಜೆ ಶಿಮೆ ದೇಸಾಯಿ ಅಚವೆ ಚಂದ್ರಾಯಿಣಿ ಹೆಬಾರಗೆ ಅಚವೆ ಗ್ರಾಮದಿಂದ ಏಳುನೂರ ಐವತ್ತು ವರಹಾ ಉಂಬಳಿ ಬಿಟ್ಟದ್ದನ್ನು ಈ ನಿರೂಪ ತಿಳಿಸುತ್ತದೆ.

ಪುಟ ಸಂಖ್ಯೆ : 86

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೆ । ತ್ರೈಲೊ ಕ್ಯ ನಗರಾರಂಭ।ಮೂಲಸ್ತಂಭಾಯ ಶಾಂಭವೆ।ಸ್ವಸ್ತಿ ಶ್ರೀ ಜಯಾಭ್ಯುದಯ ನೃಪ ಶ್ಯಾಲಿವಾಹನ ಶಖ ವರುಷ 1638ನೆಯ ದುರ್ಮುಖಿ ಸಂವತ್ಸರದ। ಕಾರ್ತಿಕ ಶು 10ಲ್ಲು ಶ್ರೀ ಮ್ಮ ದ್ದೆಡವ ಮುರಾರ್ರಿ ಕೊಟೆ ಕೊಳಹಳಾ ! ವಿಶುಧ ದ್ವೈತ ಶಿಧಾ ಂತ್ತ ಪ್ರತಿಷ್ಟಾಪಕ।ಶಿವಗುರು್ರ ಭಕ್ತಿ ಪರಾಯಣರಾದ । ಶ್ರೀಮತ್ಕೆಳದಿ ಸದಾಶಿವನಾಯಕ ರೈಯನವರ। ವಂಶೊ ದ್ಭವರಾದ । ಶಿವಪ್ಪನಾಯಕರ್ರ ಪುತರ್ರು । ಸೊಮಸೆ ಖರ್ರನಾಯಕರ ಧರ್ಮಪತ್ನಿಯರಾದ। ಚಂನಂಮಾಜಿಯ ******ಬಸವಪ್ಪನಾಯಕರೈಯನವರ್ರು।

ಗ 320 ಮುಂನ್ನುರ್‍ರು ಯಿಪತ್ತು ವರಹಾಂನ್ನು ತೆಗೆದುಕೊಂಡು ಮಿಡಿಜೆ
ಶಿಮೆಯೊಗಳಣ ಗೊಕರ್ನ ಮಾಗಣಿ ಬಾರ್‍ರೆಕೊಡಲು ಗ್ರಾಮದಲು ಉತಾರವ
ಕೊಟರು ಗ 32 ಮೂವತೆರಡು ವರಹಾನ ಸ್ವಾಸ್ಥೆಯನ್ನೂ ಶಿವಾ
ರ್ಪಿತವಾಗ್ಯೆ ಬಿಟ್ಟುಕೊಟ್ಟಧೆವೆ । ಗೊಕರ್ನದ ಶ್ರಿಮಹಾಬಲೆಶ್ವರ ದೆವ
ರ್‍ರಿಗೆ ಯಿಡಗುಂಜಿ ವಿಘ್ನೆಶ್ವರ ದೆವರಿಗೆ ಕೊಲ್ಲುರ ಶ್ರಿ ಮುಕಾಂಬಿಕೆ
ಅಂಮನವರ್‍ರಿಗೆ । ಸಹ ಪುಜೆ ಸಾಂಗವಾಗಿ ಸಡಶಿಕೊಂಡು ಬಾಹ
ದುಯಿಾ ಕಾಗದ ಸೆನಬೊವರ ಬರಹಕ್ಕೆ ಬರಶಿ । ತಿರುಗಾ।ನಿನ್ಯು
ತೆಗೆದುಕೊಂಬುವದು ॥ **** ॥ ಯಿದರ ಅಸಲು ಯೆಡವಾರವಾಗಿ
ಹೊಯಿತಂತ್ತೆ । ವಾಲೆಮೆಲೆ ಬರದ ನಖಲಿನ ಪ್ರತಿ । ಯಿ ವಾಲೆ ಗಣ
ಪ ಸಭ್ಯಾತನ ಕೈಯಾ ಅಥೆ ।

ಸಾರಾಂಶ : ವಿಭವ ಸಂವತ್ಸರದ ಚೈತ್ರ ಶು 13ಲೂ ಶ್ರೀಮತ್ಕೆಳದಿ ಬಸವಪ್ಪನಾಯಕರು ವಿಷ್ಣು ಸಭೈತಗೆ ಬರಶಿಕಳುಹಿದ ಕಾರ್ಯ ಇದಾಗಿದೆ. ಗೊಕರ್ನದ ಶ್ರಿ ಮಹಾಬಲೇಶ್ವರ ದೆವರಿಗೆ ಗೆರಸಪ್ಪೆ ಶಿಮೆವಳಗಣ ಯಿಡಗುಂಜಿ ಶ್ರಿ ವಿಘ್ನೆಶ್ವರ ದೆವರಿಗೆ । ಕೊಲ್ಲುರ ಮುಕಾಂಬಿಕೆ ಅಂಮನವರ್‍ರಿಗೆ ಸಹಾ । ನಮಗೆ ಆಲಶ್ಯಾ ಬಂದಾಗ್ಯೆ ಯಿಡುಗುಂಜಿ ವಿಷ್ಣು ಸಭೈಯಿತನ್ನು ಹೆಳಿಕೊಂಡು ಯಿಧಾನೆ ಎಂದು ಸಿವಲಿಂಗಪ್ಪನವರು ಹೆಳಿದ್ದರಿಂದ ವಿಷ್ಣು ಸಭೈಯಿತನಿಂದ ಅರಮನೆಗೆ ಮುಂನ್ನುರ್‍ರು ಯಿಪತ್ತು ವರಹಾಂನ್ನು ತೆಗೆದುಕೊಂಡು ಗೊಕರ್ನ ಮಾಗಣಿ ಬಾರ್‍ರೆಕೊಡಲು ಗ್ರಾಮದಲು ಉತಾರವನ್ನು ಬಿಟ್ಟ ವಿವರವನ್ನು ನಿರೂಪ ಹೇಳುತ್ತದೆ.

ಪುಟ ಸಂಖ್ಯೆ : 34–35

ಧಾತು ಸಂವತ್ಸರದ ಜೆಷ್ಠ ಬ 13ರಲ್ಲು ಶ್ರಿಮತ್ಕೆಳದಿ ಬಸಪ್ಪನಾ
ಯಕರು।ವಿಷ್ಣು ಸಭೈತಗೆ ಬರಶಿ ಕಳುಹಿದ ಕಾರ್ಯ । ನಿನ್ನು ಹುಜುರ್‍ರು
ಬಂದು।ಗೊಕರ್ನಕೆ ಹೊಗುವ ಮಾರ್ಗದಲು ಚಂದಾವರ ಶಿಮೆ ವಳಗಣ
ಅಘನಾಶಿನಿ ಗ್ರಾಮದಲು ದೆವಸ್ತಾನದ ಕಟಿಶಿ ಪ್ರತಿಷ್ಠೆ ಮಾಡಿಸಿದ ಶ್ರಿ ಸ
ದಾಶಿವೆಶ್ವರ ದೆವರಿಗೆ ಕಟ್ಟಲೆ ರಥ ಉತ್ಸಹದ ಬಗ್ಗೆ ಸಹಾಪ್ರಾಕು ಉ
ತ್ತಾರವ ಕೊಟ್ಟ ಸ್ವಾಸ್ಥೆ ಸಾಲದಿದರಿಂದ । ಮಿಡಜಿ ಶಿಮೆಯಲ್ಲು
ಗಜನಿಭುಮಿಗಳ ಸಾಗುಮಾಡುವ ಬಗ್ಯೆ ಉತ್ತಾರವ ಕೊಟ್ಟಿದ್ದು
ಹಿತಲಮಕ್ಕಿ ಗ್ರಾಮದಿಂದಾ ಗ 17॥2॥0 ತ್ತಾರಕ್ಕೆ ಗ್ರಾಮದಿಂದ ಗ 32 ಹಾ 2॥0

ಪುಟ ಸಂಖ್ಯೆ : 33

ಉಭಯಂ ಗ 50 ಹಾ ಅೈವತ್ತವರಹಾಂನ್ನ ಸ್ವಾಸ್ಥೆಯಂನ್ನು ಕಟಲೆ ರಥ
ಉತ್ಸಹದ ಬಗ್ಯೆ ಸಹಾ ಉತ್ತಾರವ ಕೊಡುವರ್‍ರಿತ್ತಿ ಅಪಣೆ ಆಗಬೆಕೆಂ
ದು ಹೆಳಿಕೊಳುತಾನೆಯಂದು ಶಿವಲಿಂಗಪನವರ್‍ರು ಹೆಳಿಕೊಂಡ ಸಂ
ಮ್ಮಂದ್ಧಾ । ಯಿ ವಿಷ್ಣು ಸಭಾಯಿತನ ಕೈಯಾ ಕಾಣಿಕೆ ಗ 50 ಅೈವತ್ತುವ

ಚಂದಾವರದ ಶಿಮೆವಳಗಣ ಅಘನಾಶಿನಿ ನಧಿ ತ್ತಿರದ ಸಮಿಪದಲ್ಲು ದೇವಸ್ಥಾನ ಕಟಿಶಿ। ಪತಿಷ್ಟೆ ಮಾಡಿದ ಶ್ರೀ ಸದಾಶಿವೆಶ್ವರ ದೆವರ್ರಿತೆ ಆಗಶೆ ಗ್ರಾಮದಿಂದಾ। ಪಗುದಿ ಚಕ್ರವಂತ್ತಿಕೆಯಿಂದಾ

ಪುಟ 35

ಸಹಾ ಪ್ರಾಕು ಸಂವತ್ಸರದಲ್ಲು । ಉತ್ತಾರವ ಕೊಟದು ಗ ॥4 ವಂ ಭತ್ತ 11 ಲು ಉತ್ತಾರವಲು। ಸಾಲದು ಯಂದು।ಕ್ರಯ ಕೊಟೆನು ಸ್ವಾಸ್ಥೆ ಉತಾರವ ಕೊಟು ಶಿಲಾಸ್ಥಾಪಿತವ ಮಾಡಿಶಿ ಕೊಟು ನಿರೂಪಕ್ಕೆ ಅಪ್ಪಣೆ ಆಗಬೆಕೆಂದು। ವಿಷ್ಣು ಸಭ್ಯಾಯಿತನು। ಹೆಳಿಕೊಳುತ್ತಾನೆ ಯಂತ್ತಾ । ಶಿವಲಿಂಗಪ್ಪನವ

ರು ಹೆಳಿಕೊಂಡ ಸಂಬಂಧ । ಸಭಾಯಿತನ ಕೈಯಗ 289 ಹಾ ೦ ಯಿಂನುರ ಯೆಂಭತ್ತ ಒಂಬತ್ತು ವರಹಾನ್ನು ಅ

ರಮನೆಗೆ ತೆಗದುಕೊಂಡು । ಉತಾರವ ಕೊಟಿದು । ಮಿಾಡಜೆ ಶಿಮೆಗೆ ಗೊಕರ್ನದ ಮಾಗಣಿಹಾರೊಮಾಸಗೆರ್ರೆ ಗ್ರಾಮದಲ್ಲು।ಗ 24 ಹಾ ೦ ಯಿಾ ಗ ಹೆಚಿದ್ದು ಪಗಡಿ ಚಕ್ರವಂತಿಕೆಯಿಂದ ಗ 4॥೦

ಉಭಯಂ ಗ 28॥೦ ಇಪ್ಪತ್ತಯೆಂಟು ವರ್ರೆ ವರಹಾಂನ್ನ ಸ್ವಾ

ಸ್ಥೆಯನ್ನು । ಗೊಕರ್ನಕ್ಕೆ ಹೊಹ ಮಾರ್ಗದಲ್ಲು । ಅಗನಾಶಿನಿನದಿ ಸಮಿಪದಲ್ಲು । ಚಂದಾವರದ ಶಿಮೆ ಅಗಸೆ ಗ್ರಾಮದಲ್ಲು ದೆವಸ್ಥಾನದ ಕಟಿಶಿ ಪ್ರತಿಷ್ಟೆ ಮಾಡಿದ । ಶ್ರೀ ಸದಾಶಿವೆಶ್ವರ ದೆವ

ತಾವೆಚ್ಚಕೆ ಶಿವಾರ್ಪಿತವಾಗಿ ಕೊಟು । ವಾಮನ ಮುದ್ರೆ ಶಿಲಾಸ್ಥಾಪಿತ ಮಾಡಿಸುವ ಬಗ್ಗೆ । ಹುಜುರ್ರಿಂದ । ಉಳಿಗದ ಶಿದನ ಕಳುಹಿಸಿದೆವೆ । ಚಲು ಗ್ರಾಮದವರ ಕರೆಸಿಕೊಂ ಡು ಗಡಿ ತತ್ವಾರ ಬಾರದಿದ ರ್ರಿತ್ತಿ । ಯಿವನ ಮುಂತಿಟ್ಟು ರೆಖೆ ಪ್ರಮಾಣು ಶಿಲಾಸ್ಥಾಪಿತ ಮಾಡಿಶಿ ಕೊಟು । ಯಿಾ ಕಾಗ

ದ ಶಾನಬೊವರ ಬರಹಕ್ಕೆ ಬರಶಿ ತಿರುಗಾ ನಿನು ತೆಗದುಕೊಂಬುವದಾಗಿ । ಯಿದರ ಅಸಲು ಯಡವಟ್ಟು ಆಯಿತ್ತಂತೆ ವಾಲೆ ಮೆಲೆ ಬರದ ನಖಲು ಪ್ರತಿ ।

ಸಾರಾಂಶ : ಕ್ರೊಧನ ಸಂವತ್ಸರದಲ್ಲಿ ಶ್ರೀಮತ್ ಕೆಳದಿ ಬಸವಪ್ಪನಾಯಕರ್ರು । ವಿಷ್ಣು ಸ್ಸಭಾಯಿತ್ತಗೆ ಬರಶಿ ಕಳುಹಿದ ಕಾರ್ಯ ಇದಾಗಿದೆ. ಗೊಕರ್ನಕ್ಕೆ ಹೊಗುವ ಮಾರ್ಗದಲ್ಲು ಚಂದಾವರದ ಶಿಮೆ ವಳಗಣ ಅಘನಾಶಿನಿ ನಧಿ ತ್ತಿರದಸಮಿಪದಲ್ಲು ದೆವಸ್ಥಾನ ಕಟಿಶಿ । ಪತಿಷ್ಟೆ ಮಾಡಿದ ಶ್ರೀ ಸದಾಶಿವೆಶ್ವರ ದೆವರ್ರಿಗೆ ಅಗಶೆ ಗ್ರಾಮದಿಂದಾ । ಪಗುದಿಚಕ್ರವಂತ್ತಿಕೆಯಿಂದಾ ಈ ಸಂವತ್ಸರದಲ್ಲಿ ಉತ್ತಾರವ ಕೊಟದ್ದು ಸಾಲದಾಗಿದೆ ಎಂದೂ ಕ್ರಯವನ್ನು ಕೊಡುತ್ತೇನೆ ಸ್ವಾಸ್ಥೆ ಉತ್ತಾರವ ಕೊಟ್ಟು ಶಿಲಾಸ್ಥಾಪಿತವನ್ನು ಮಾಡಿಸಿಕೊಡುವನಿರೂಪಕ್ಕೆ ಅಪ್ಪಣೆ ಆಗಬೇಕೆಂದು ವಿಷ್ಣು ಸಭ್ಯಾಯಿತನು । ಹೆಳಿಕೊಳುತ್ತಾನೆಂದು ಶಿವಲಿಂಗಪ್ಪನವರು ಹೆಳಿದ್ದರಿಂದ ಸಭಾಯಿತನ ಕೈಯ ಯಿಂನುರ ಯೆಂಭತ್ತ ಒಂಬತ್ತು ವರಹಾನ್ನು ಅರಮನೆಗೆ ತೆಗೆದುಕೊಂಡು ಉತಾರವ ಕೊಟ್ಟ ವಿವರ ಈನಿರೂಪ ತಿಳಿಸುತ್ತದೆ.

ಪುಟ ಸಂಖ್ಯೆ : 34

ವಿಭವ ಸಂವತ್ಸರದ ಚಯಿತ್ರ ಶು 13ಲೂ ಶ್ರೀಮತ್ಕೆಳದಿ ಬಸವಪ್ಪನಾಯಕರ್ರು । ವಿಷ್ಣು ಸಭೈತಗೆ । ಬರಶಿಕಳುಹಿದ ಕಾರ್ಯ।ನಿನ್ನು ಹುರಹಾಂನ್ನು ಅರಮನೆಗೆ ತೆಗದುಕೊಂಡು ಮಿಡಜೆ ಶಿಮೆಯಲ್ಲಿ ಗಜಿನಿ ಭುಮಿ ಸಾಗು ಮಾಡುವ ಬಗ್ಯೆ ಉತ್ತಾರವ ಬಿಟ್ಟುಕೊಟದು ಹಿತಲಮಕ್ಕಿ ಗ್ರಾಮದಿಂದ ಹದಿನೆಳು ಯೆಳು ಹಣ ಅಡಾ।ತ್ತೊರಕೆ ಗ್ರಾಮದಿಂದಾಮೂವತ್ತೆರಡು ಯಿಷಣ ಅಡಾ । ಉಭಯಂ ಆ್ಯವತ್ತು ವರ ಹೊಂನ್ನು ಶ್ರಿ ಸದಾಶಿವೇಶ್ವರ ದೆವರ್ರಿಗೆ ಕಟಲೆ ರಥ ಉತ್ಸಹದ ಬಗ್ಯೆ ಸಹಾ।ಉತ್ತಾರವ ಕೊಟು ಪ್ರಾಕು ಉತಾರ ಸ್ವಾಸ್ಥೆಯಿಂದ ಸಹಾ ದೆವತ್ತಶೆವೆನ ಡಶಿ ಬರಹೆಳಿಕೊಟಧೆ। ಪ್ರಾಕು ಉತ್ತಾರ ಸ್ವಾಸ್ಥೆಯಿಂದ ಸಹಾ।ದೆವ ತ್ತಾ ಸೆವೆ ಸಾಂಗವಾಗಿ ನಡಸುತ್ತಾ ಬಾಹುದು ಯಿ ಕಾಗದಶ್ಯಾನಬ

ವರ ಬರಹಾಕ್ಕೆ ಬರಶಿ ತಿರ‍್ರುಗಾ ತೆಗದುಕೊಂಬುವದೂ ॥ ॥ ॥ ಯಿದರ ಅಸಲು ಯೆಡವಾರ‍್ತ್ರಲಾಯಿತಂತೆ ವಾಲೆ ಮೆಲೆ ಬರದ ನಖಲಿನಪ್ರತ್ತಿ । ಯಿ ವಾಲೆ ಗಣಪಸಭ್ಯಾತನವ್ವಾಯಿಥೆ।

ಸಾರಾಂಶ : ಧಾತು ಸಂವತ್ಸರದ ಜೆಷ್ಠ ಬ 13ರಲ್ಲಿ ಶ್ರಿಮತ್ಕೆಳದಿ ಬಸಪ್ಪನಾಯಕರು ವಿಷ್ಣು ಸಭೈತಗೆ ಬರಶಿ ಕಳುಹಿದ ಕಾರ್ಯ ಇದಾಗಿದೆ. ಗೊಕರ್ನಕೆ ಹೊಗುವ ಮಾರ್ಗದಲು ಚಂದಾವರ ಶಿಮೆ ವಳಗಣ ಅಘನಾಶಿನಿ ಗ್ರಾಮದಲು ದೆವಸ್ಥಾನದ ಕಟಿಶಿ ಪ್ರತಿಷ್ಠೆ ಮಾಡಿಸಿದ ಶ್ರಿ ಸದಾಶಿವೆಶ್ವರ ದೆವರಿಗೆ ಕಟ್ಟಲೆ ರಥ ಉತ್ಸಹದ ಬಗ್ಗೆ ಸಹಾ ಪ್ರಾಕು ಉತ್ತಾರವ ಕೊಟ್ಟ ಸ್ವಾಸ್ಥೆ ಸಾಲದಿದ್ದರಿಂದ ಮಿಡಜಿ ಶಿಮೆಯಲ್ಲು ಗಜನಿ ಭುಮಿಗಳ ಸಾಗು ಮಾಡುವ ಬಗ್ಯೆ ಉತ್ತಾರವ ಕೊಟಿದ್ದನ್ನು ಈ ನಿರೂಪ ಹೇಳುತ್ತದೆ.

ಹೀಗೆ ಈ ನಿರೂಪಗಳು ಗೋಕರ್ಣ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಲು ಪ್ರಮುಖ ಆಕರಗಳಾಗಿವೆ. ಈ ನಿರೂಪದಲ್ಲಿ ಉಲ್ಲೇಖಗೊಂಡಿರುವ ದೇವಾಲಯಗಳ ಅವಶೇಷಗಳು ಇಂದೂ ಗೋಕರ್ಣದಲ್ಲಿ ಕಾಣಬಹುದಾಗಿದೆ. ಕೆಲವಕ್ಕೆ ಪೂಜೆ ನಡೆಯುತ್ತಿದ್ದರೆ ಇನ್ನು ಕೆಲವು ಪುರೋಹಿತರ ಮನೆಯ ನಡುಮನೆಯಲ್ಲಿವೆ. ಕೆಲ ಕಡೆಗಳಲ್ಲಿ ಹೆಸರು ಮಾತ್ರ ತಿಳಿದುಬರುತ್ತದೆಯಾದರೂ ಲಿಂಗವನ್ನು ತೆಗೆದುಬಿಟ್ಟಿರುವು ದನ್ನು ನೋಡಬಹುದಾಗಿದೆ. ಗೋಕರ್ಣೇಶ್ವರನಿಗೆ ಇರುವಪ್ರಾಶಸ್ತ್ಯ ಈ ದೇವಾಲಯಗಳಿಗೆ ಇರುವುದಿಲ್ಲ.

ಸಾಮಾಜಿಕ ಮತ್ತು ಧಾರ್ಮಿಕ ಅಧ್ಯಯನ ನಡೆಸಲು ಇಂತಹ ನಿರೂಪಗಳು ಉತ್ತಮ ಆಕರಗಳಾಗಿವೆ. ಇಂತಹನಿರೂಪಗಳು ಗೋಕರ್ಣದ ಪ್ರತಿಯೊಬ್ಬರ ಮನೆಯಲ್ಲಿಯೂ ಲಭ್ಯವಿವೆ. ಇವುಗಳನ್ನು ಸಂಗ್ರಹಿಸುವ ಮತ್ತು ಪ್ರಕಟಿಸುವ ಕೆಲಸ ಆಗುತ್ತಿರುವುದು ನಮ್ಮ ಸುದೈವ. ಗೋಕರ್ಣ ಇತಿಹಾಸಕ್ಕೆ ಇದು ಹೊಸ ಸೇರ್ಪಡೆಯಾಗಿದೆ.

ಸ್ವಾತಂತ್ರ್ಯ ಹೋರಾಟಗಾರ ಗುದ್ಲೇಪ್ಪ ಹಳ್ಳಿಕೇರಿ

– ಡಾ. ಸಿದ್ದಲಿಂಗಮ್ಮ ಬಿ.ಜಿ.

ಗುದ್ಲೇಪ್ಪನವರು ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ ಇವೆರಡೂ ಗುರಿಗಳನ್ನು ಜೊತೆಯಾಗಿಟ್ಟುಕೊಂಡು ಹೋರಾಟ ಮಾಡಿದರು. ಇವೆರಡನ್ನೂ ಸಾಧಿಸಿದ ನಂತರ ಕರ್ನಾಟಕದಲ್ಲಿ ಅವರು ವಿಧಾನ ಪರಿಷತ್ ಸದಸ್ಯರಾಗಿ, ಸಭಾಪತಿಯಾಗಿ ದುಡಿದರು.

ಸ್ವಾತಂತ್ರ್ಯ ಚಳುವಳಿಯ ನೇತಾರರಾಗಿ ಗುದ್ಲೇಪ್ಪನವರು

1920ರಲ್ಲಿ ಭಾರತದ ಸ್ವಾತಂತ್ರ್ಯಾಂದೋಲನದ ಮಹಾನಾಯಕತ್ವವನ್ನು ಗಾಂಧೀಜಿ ವಹಿಸಿಕೊಂಡು ತಮ್ಮ ಸರಳ ಜೀವನ, ಶುದ್ಧ ಚಾರಿತ್ರ್ಯ, ಅಪಾರ ದೇಶಪ್ರೇಮ ಮುಂತಾದ ಸದ್ಗುಣಗಳಿಂದ ಜನಸಮೂಹದ ಮೇಲೆ ಅದ್ಭುತಪ್ರಭಾವ ಬೀರಿದರು. ಅಸಹಕಾರ ಆಂದೋಲನ ಆರಂಭವಾಗಿ ಎಲ್ಲ ವರ್ಗದಜನರೂಮುಕ್ತವಾಗಿ ಪಾಲ್ಗೊಂಡರು. ಇದರಿಂದ ಕಾಂಗ್ರೆಸ್ ಸಂಘಟನೆಯು ಜನಸಾಮಾನ್ಯರ ಸಂಘಟನೆ ಯಾಯಿತು.

1920ರ ನಂತರ ಕರ್ನಾಟಕ ಪ್ರದೇಶ ಕಾಂಗ್ರೆಸ್ ರಚನೆಯಾಗಿ ಕಾಂಗ್ರೆಸ್ ಚಟುವಟಿಕೆಗಳು ಹೆಚ್ಚು ಚುರುಕು ಗೊಂಡವು.

1924ರ ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಪೂರ್ವಭಾವಿಯಾಗಿ ಅಲ್ಲಲ್ಲಿ ಸಭೆ ಸಮಾರಂಭ ಗಳು ಏರ್ಪಟ್ಟವು. ಅದರಲ್ಲಿ 1923ರ ನವೆಂಬರನಲ್ಲಿ ಹಾವೇರಿಯಲ್ಲಿ ಧಾರವಾಡ ಜಿಲ್ಲಾ ರಾಷ್ಟ್ರೀಯ ಪರಿಷತ್ತು ಸೇರಿತ್ತು. ಈ ಪರಿಷತ್ತಿನ ಅಧ್ಯಕ್ಷತೆಯನ್ನು ಹರ್ಡೇಕರ್ ಮಂಜಪ್ಪನವರು ವಹಿಸಿದ್ದು, ಈ ಪರಿಷತ್ತಿಗೆ ಹೊಸರಿತ್ತಿಯ ತರುಣ ಗುದ್ಲೇಪ್ಪನವರು, ಕರ್ಜಗಿಯ ಪರಮಣ್ಣ ಹೊಸಮನಿ ಹಾಗೂ ತಾಲೂಕಿನ ಅನೇಕ ಕಾರ್ಯಕರ್ತರು ಆಗಮಿಸಿದ್ದರು. ಈ ಪರಿಷತ್ತಿನ ಪ್ರಭಾವದಿಂದ ಅಹಿಂಸೆ, ವಿದೇಶಿ ವಸ್ತುಗಳ ಬಹಿಷ್ಕಾರ, ಅಸಹಕಾರ ಚಳುವಳಿಗಳನ್ನು ಬೆಂಬಲಿಸುವುದು ಮುಂತಾದ ವಿಧಾಯಕ ಕಾರ್ಯಕ್ರಮಗಳತ್ತ ಜನರು ಗಮನವಿತ್ತರು. ಈ ಪರಿಷತ್ತಿನ ಪ್ರಭಾವದಿಂದಾಗಿ ಹಾವೇರಿಯಲ್ಲಿ ಸಾವಿರಾರು ಜನರು ಕಾಂಗ್ರೇಸ್‌ನ್ನು ಸೇರಿದರು. 1924ರ ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ 40ನೇ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಮಹಾತ್ಮಾ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿನಡೆಯಿತು. ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಈ ಅಧಿವೇಶನವು ಹೊಸ ಹುಮ್ಮಸ್ಸು ಚೈತನ್ಯ ನೀಡಿತು.

ಗಾಂಧೀಜಿಯವರು ತಮ್ಮ ಭಾಷಣದಲ್ಲಿ ಪರದೇಶಿ ವಸ್ತು ಬಹಿಷ್ಕಾರ, ಖಾದಿ, ಹಿಂದು–ಮುಸ್ಲಿಂ ಐಕ್ಯತೆ, ಅಸ್ಪೃಶ್ಯತಾನಿವಾರಣೆ ಕುರಿತು ಹೃದಯಸ್ಪರ್ಶಿಯಾಗಿ ಮಾತನಾಡಿದರು. ತರುಣ ಗುದ್ಲೇಪ್ಪನವರು ಸ್ವಯಂಸೇವಕರಾಗಿ ಅಧಿವೇಶನದಲ್ಲಿಪಾಲ್ಗೊಂಡು ಶಿಸ್ತು, ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಅಧಿವೇಶನದಲ್ಲಿ ಪಾಲ್ಗೊಂಡ ರಾಷ್ಟ್ರೀಯ ನಾಯಕರಾದ ಸರ್ದಾರ ವಲ್ಲಭಬಾಯಿ ಪಟೇಲ್, ಜವಹರಲಾಲ್ ನೆಹರು, ಸಿ. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್, ಅಲಿ ಸಹೋದರರು, ಶೌಕತ್ ಖುರೇಶಿ, ಜಮ್ನಾಲಾಲ ಬಜಾಜ್, ಖಾನ್ ಅಬ್ದುಲ ಗಫಾರ್ ಖಾನ್ ಮುಂತಾದವರನ್ನು ಸನಿಹದಿಂದ ಕಂಡು ಸ್ಫೂರ್ತಿ

ಹೊಂದಿದರು. ಗಾಂಧೀಜಿಯವರ ಭಾಷಣದಿಂದ ಪ್ರೇರಿತರಾಗಿ ಅವರ ತತ್ವಗಳನ್ನು ಸಾಕಾರ ಗೊಳಿಸಲು ಸಂಕಲ್ಪಿಸಿ ಕಾರ್ಯೋನ್ಮುಖರಾದರು.

ರಾಷ್ಟೀಯತೆ, ದೇಶಾಭಿಮಾನ, ದೇಶದ ಸ್ವಾತಂತ್ರ್ಯ ಇವುಗಳನ್ನೇ ತಲೆಯಲ್ಲಿ ತುಂಬಿಕೊಂಡ ತರುಣ ಗುದ್ಲೇಪ್ಪ ತನ್ನಂತಹ ಉತ್ಸಾಹಿ ತೇಜಸ್ವಿ ಯುವಕರನ್ನು ಸಂಘಟಿಸಿ ಮುಂದಾಳುತನ ವಹಿಸಿ, ಧಾರವಾಡದಲ್ಲಿ 1927 ಅಕ್ಟೋಬರ್ 2ರಂದು ಯುವಕರ ತಂಡವೊಂದನ್ನು ಕಟ್ಟಿದರು. ಅದುವೇ "ಭಾರತೀಯ ತರುಣ ಸಂಘ". ಇದರಲ್ಲಿ ನಿಜ ಗುಣಾರ್ಯ ಹಿರೇಮಠ, ಸಿದ್ದಲಿಂಗಸ್ವಾಮಿ ಎಸ್. ಕಜ್ಜರಿ,ಲಿಂಗರಾಜ ಮುದ್ದಣ್ಣವರ, ವೆಂಕಟೇಶ ಮಾಗಡಿ, ಲಂಬಿ, ಕುಂಬಿ, ತಲ್ಲೂರ ರಾಯನಗೌಡ ಪಾಟೀಲ, ಕಂಬಿ ಮಠ, ಸುಬುದ್ಧಿ ಸ್ವಾಮಿ ಹಿರೇಮಠ, ಜವಳಿ, ಪವಾರ ಮಾಸ್ತರ, ಸಿರಿಯಣ್ಣನವರು, ಹೊಂಬಣ್ಣನವರ, ಕೆ.ಎಫ್. ಪಾಟೀಲ ಮುಂತಾದವರು ಇದ್ದರು.

ಗಾಂಧೀಜಿಯವರು ರೂಪಿಸಿದ 15 ರಚನಾತ್ಮಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ಸಲುವಾಗಿ ಭಾರತೀಯ ತರುಣ ಸಂಘಧ ಕಾರ್ಯಕರ್ತರು ಹಳ್ಳಿಹಳ್ಳಿಗಳಿಗೆ ಹೋಗಿ ಜನರಲ್ಲಿ ಬಿತ್ತರಿಸುತಿದ್ದರು. ಅವು ಇಂತಿವೆ: ಜಾತಿ–ಜಾತಿಗಳನಡುವೆ ಸಾಮರಸ್ಯ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನನಿಷೇಧ, ಖಾದಿ ಪ್ರಸಾರ, ಗ್ರಾಮೋದ್ಯೋಗ, ಮೂಲ ಶಿಕ್ಷಣ, ಗ್ರಾಮೋದ್ಧಾರ, ಪ್ರೌಢಶಿಕ್ಷಣ, ಸ್ತ್ರೀಯರ ಉನ್ನತಿ, ಆರೋಗ್ಯ ಮತ್ತು ಸ್ವಚ್ಛತೆ, ರಾಷ್ಟ್ರಭಾಷಾ ಪ್ರಸಾರ ಮುಂತಾದವುಗಳು.

ಸ್ವಾತಂತ್ರ್ಯವೊಂದೇ ಎಲ್ಲರ ಏಳ್ಗೆಯ ಮಾರ್ಗ ವೆಂಬುದನ್ನು ಹಳ್ಳಿಹಳ್ಳಿಗಳಲ್ಲಿಯೂ ಬಿತ್ತರಿಸುವುದು, ಗುಲಾಮ ಗಿರಿಯನ್ನು ಬೋಧಿಸುವ ಶಾಲೆ–ಕಾಲೇಜುಗಳ ಶಿಕ್ಷಣಕ್ಕೆ ಬಹಿಷ್ಕಾರ ಹಾಕುವುದು, ರಾಷ್ಟ್ರಪ್ರಜ್ಞೆ ಜಾಗೃತಗೊಳಿಸುವುದು ಮತ್ತು ಸ್ವಾತಂತ್ರ್ಯ ಸೇನಾನಿಗಳನ್ನು ತಯಾರಿಸುವುದು ಈ ಸಂಘದ ಇನ್ನಿತರ ಕಾರ್ಯಗಳಾಗಿದ್ದವು.

ಗುದ್ಲೇಪ್ಪನವರ ದೃಷ್ಟಿಯಲ್ಲಿ ಕರ್ನಾಟಕದ ರಾಜಕೀಯ ರಂಗದಲ್ಲಿ ಮೊದಲ ನಾಯಕರಾಗಿದ್ದ ಗಂಗಾಧರರಾವ್ ದೇಶಪಾಂಡೆ, ಕಾರ್ನಾಡ ಸದಾಶಿವರಾವ, ಮುದವೀದು ಕೃಷ್ಣರಾವ್, ಆಲೂರು ವೆಂಕಟರಾವ್, ಕೌಜಲಗಿ ಶ್ರೀನಿವಾಸ ರಾವ್, ರಂಗನಾಥ ದಿವಾಕರ ಮುಂತಾದವರ ಗಮನವನ್ನು ಭಾರತೀಯ ತರುಣ ಸಂಘ ತನ್ನತ್ತ ಸೆಳೆಯಿತು. ಕರ್ನಾಟಕದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಸ್ವಾತಂತ್ರ್ಯ ಸೇನಾನಿ ಗಳನ್ನು ನಿರ್ಮಿಸಿದ ಈ ಸಂಘದ ಹೆಸರು ಚಿರಸ್ಥಾಯಿಯಾಗಿದೆ.

ಮೈಲಾರ ಮಹಾದೇವರು ಈ ಸಂಘಕ್ಕೆ ಸೇರ್ಪಡೆ ಗೊಂಡು, ವಿಶೇಷ ತರಬೇತಿಗಾಗಿ ಗಾಂಧೀಜಿಯವರ ಸಾಬರಮತಿ ಆಶ್ರಮಕ್ಕೆ ಹೋಗಿಬಂದರು.

ಭಾರತೀಯ ತರುಣ ಸಂಘದ ಕಾರ್ಯಕರ್ತರುಪೋಲೀಸರ ಕಣ್ಣು ತಪ್ಪಿಸಿ ಭೂಗತರಾಗಿ ರಾಷ್ಟ್ರೀಯ ಕಾರ್ಯ ಗಳನ್ನು ನೆರವೇರಿಸುತ್ತಿದ್ದರು. ಗುದ್ಲೇಪ್ಪನವರ ನೇತೃತ್ವದಲ್ಲಿ ಸಂಘವು ಅತ್ಯಲ್ಪ ಕಾಲದಲ್ಲಿಯೇ ಅದು ಜಯರಾಮದಾಸ್, ದೌಲತರಾಮ, ಕಾಕಾ ಕಾಲೇಲಕರ, 'ಯಂಗ್ ಇಂಡಿಯಾ'ದ ಸಂಪಾದಕ ಕಿಶೋರಲಾಲ ಮಶ್ರೂವಾಲಾ, ನರಹರಿಭಾಯಿಪಾರೀಖರಂಥ ಅಖಿಲ ಭಾರತ ನಾಯಕರ ಗಮನ ಸೆಳೆಯಿತು.

ಭಾರತೀಯ ತರುಣ ಸಂಘದ ಚಟುವಟಿಕೆಗಳನ್ನು ತೀವ್ರಗೊಳಿಸುತ್ತ 1928ರಲ್ಲಿ 'ಕರ್ನಾಟಕ ಯುಥ್ ಲೀಗ್' ಎಂಬ ಸಂಘಟನೆಯನ್ನೂ ಗುದ್ಲೇಪ್ಪನವರು ಸ್ಥಾಪಿಸಿದರು. ಅದರಲ್ಲಿ ಆಲೂರು ವೆಂಕಟರಾವ್, ಮೌಲ್ವಿ ಮುಂತಾದವರು ಸೇರಿ ತಮ್ಮ ಅನುಭವ ಮತ್ತು ಜ್ಞಾನಗಳಿಂದ ಅದನ್ನು ಬಲಪಡಿಸಿದರು.

ವಿಶೇಷವಾಗಿ ಗುದ್ಲೇಪ್ಪನವರು ಸ್ವತಃ ಕಾಂಗ್ರೇಸ್ ಸೇರಿ ಮಾದರಿ ಹಾಕಿಕೊಟ್ಟು, ಮುಂದಾಳುತನ ವಹಿಸಿ ಬಹು ಸಂಖ್ಯೆಯ ಬ್ರಾಹ್ಮಣೇತರ ತರುಣರನ್ನು ಕಾಂಗ್ರೇಸ್ಸಿಗರಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿದರು. ಇದರಿಂದಾಗಿ ಕಾಂಗ್ರೆಸ್ಸಿಗೆ ಹೆಚ್ಚಿನ ಬಲಬಂದು ಸ್ವಾತಂತ್ರ್ಯ ಹೋರಾಟವು ನಗರಗಳಿಂದ ಹಳ್ಳಿಗಳವರೆಗೂ ವ್ಯಾಪಿಸಿತು. ಈ ದಿಸೆಯಲ್ಲಿ ಗುದ್ಲೇಪ್ಪನವರು ಸ್ಥಾಪಿಸಿದ ಭಾರತೀಯ ತರುಣ ಸಂಘದ ಕಾರ್ಯ ಗಮನಾರ್ಹವಾದುದು.

1928ರ ಫೆಬ್ರುವರಿ 3ರಂದು 'ಸೈಮನ್ ಕಮೀಷನ್' ಮುಂಬಯಿಗೆ ಬಂದಿತು. ಅಬಾಲ ವೃದ್ಧರಾದಿಯಾಗಿ ಎಲ್ಲರಿಂದಲೂ 'ಸೈಮನ್ ಹಿಂತಿರುಗಿ' ಎಂಬ ಘೋಷಣೆ, ಹರತಾಳಗಳು ಪ್ರಾರಂಭವಾದವು. ಆಗ ಗುದ್ಲೇಪ್ಪನವರು ಮುಂಬಯಿಯಲ್ಲಿದ್ದರು. ಅಲ್ಲಿ ಜರುಗಿದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಶಾಲೆ–ಕಾಲೇಜುಗಳನ್ನು ತೊರೆದು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಅವರು ಎಲ್ಲ ಫಲಕಗಳನ್ನು ಹಿಡಿದುಕೊಂಡು ಘೋಷಣೆಗಳನ್ನು ಕೂಗುತ್ತ ಸಂಚರಿಸು ತ್ತಿದ್ದರು. ಪ್ರತ್ಯಕ್ಷದರ್ಶಿ ಗುದ್ಲೇಪ್ಪನವರು ಹೀಗೆ ಹೇಳುತ್ತಾರೆ: 'ನಾನು ಮುಂಬೈಯಲ್ಲಿ ನೋಡಿದಂತೆ ಸೈಮನ್ ಕಮೀಷನ್ ಭೇಟಿ ಇತ್ತ ಎಲ್ಲ ಸ್ಥಳಗಳಲ್ಲಿಯೂ ಅದರ ವಿರುದ್ಧ ಪ್ರತಿಭಟನೆ ಗಳು ನಡೆದವು. ಜನರ ಭಾವನೆಗಳಿಗೆ ನಿಸರ್ಗವು ಸ್ಪಂದಿಸಿ ದಂತಿತ್ತು. ಮಳೆಯಿಲ್ಲದ ಸಂದರ್ಭದಲ್ಲಿ ಭೀಕರ ಚಂಡ ಮಾರುತವೆದ್ದು, ಭಾರಿ ಮಳೆ ಸುರಿದು ಕಮೀಷನ್ನಿನ ಭೇಟಿಗೆ ಅಸಂತೋಷವನ್ನು ತೋರ್ಪಡಿಸಿದಂತಾಯಿತು. ಸೈಮನ್ ಕಮೀಷನ್ ವಿರುದ್ಧ ಏರ್ಪಡಿಸಿದ ಪ್ರತಿಭಟನೆ ಮತ್ತು ಮೆರವಣಿಗೆಯಲ್ಲಿ ನಮ್ಮ ಭಾರತೀಯ ತರುಣ ಸಂಘವು ಮಹತ್ವದ ಪಾತ್ರ ವಹಿಸಿತ್ತು. ಭಾಷಾವಾರು ಪ್ರಾಂತ ರಚನೆಯ ಬಗ್ಗೆ ಇತರ ಜನರಲ್ಲಿರುವಂತೆ ತೀವ್ರ ಆಸಕ್ತಿ ಕರ್ನಾಟಕ ಏಕೀಕರಣಕ್ಕಾಗಿ ನಮ್ಮಲ್ಲಿಯೂ ಇತ್ತು'.

ಗುದ್ಲೇಪ್ಪನವರ ನೇತೃತ್ವದಲ್ಲಿ ಭಾರತೀಯ ತರುಣ ಸಂಘವು ಸೈಮನ್ ಕಮೀಷನ್ ವಿರುದ್ದ ಮೆರವಣಿಗೆ, ಸಭೆಗಳನ್ನು ಸಂಘಟಿಸಿ ಪ್ರತಿಭಟನೆ ವ್ಯಕ್ತಪಡಿಸಿತು.

ಮಹಾತ್ಮ ಗಾಂಧೀಜಿಯವರ ವಿಚಾರಗಳನ್ನು, ತತ್ವಗಳನ್ನು ಕಾರ್ಯರೂಪದಲ್ಲಿ ತರಲು ಅನೇಕ ಆಶ್ರಮಗಳು ಸ್ಥಾಪನೆಗೊಂಡಿದ್ದವು. ಗಾಂಧೀಜಿಯವರು ಗುಜರಾತ್ ರಾಜ್ಯದ ಅಹಮದಾಬಾದ ಬಳಿ ಸಾಬರಮತಿ ನದಿ ದಂಡೆಯ ಮೇಲೆ ಸಾಬರಮತಿ ಆಶ್ರಮವೊಂದನ್ನು ಸ್ಥಾಪಿಸಿದರು.

ಗುದ್ಲೇಪ್ಪನವರು ಸಂಕಲ್ಪಿಸಿದಂತೆ ಸಾಬರಮತಿ ಆಶ್ರಮದ ಮಾದರಿಯ ಗಾಂಧಿತತ್ವ ಪ್ರಣಾಲಿಯಂತೆ ವೈವಿಧ್ಯಮಯವಾದ ವಿಧಾಯಕ ಕಾರ್ಯಕ್ರಮಗಳ ಪ್ರಯೋಜನ ತನ್ನ ಗ್ರಾಮೀಣ ಜನರಿಗೆ ಲಭಿಸಲೆಂಬ ಮಹದುದ್ದೇಶದೊಂದಿಗೆ 1928ರಲ್ಲಿ ಹೊಸರಿತ್ತಿಯಲ್ಲಿ 'ಗಾಂಧಿ ಆಶ್ರಮ' ಪ್ರಾರಂಭಿಸಿದರು.

ಅಸ್ಪೃಶ್ಯತಾ ನಿವಾರಣೆ, ಗ್ರಾಮೋದ್ಯೋಗ, ಖಾದಿಉತ್ಪಾದನೆ ಮತ್ತು ಖಾದಿಯನ್ನು ಹಳ್ಳಿಗಳಲ್ಲಿ ಸಂಚರಿಸಿ ಮಾರಾಟ ಮಾಡುವುದು, ಗ್ರಾಮ ನೈರ್ಮಲ್ಯ, ಶಿಕ್ಷಣಪ್ರಸಾರ, ರಾಷ್ಟ್ರಭಾಷೆ ಹಿಂದಿ ಕಲಿಸುವುದು ಇಂಥ ಚಟುವಟಿಕೆಗಳಲ್ಲಿ ಆಶ್ರಮವು ಮಹತ್ವದ ಪಾತ್ರ ವಹಿಸಿತ್ತು. ಸ್ವತಃ ಗುದ್ಲೇಪ್ಪನವರೆ ಆಶ್ರಮದಲ್ಲಿ ತಯಾರಾದ ಖಾದಿ ಬಟ್ಟೆಯನ್ನು ಹಳ್ಳಿಗಳಿಗೆ ತೆರಳಿ ಮಾರಿದರು. ತಳವಾರ ಬಸಪ್ಪ, ನರಗುಂದ ಬಸಪ್ಪ ಇವರೆಲ್ಲ ಅವರ ಜೊತೆಗೆ ಖಾದಿ ಬಟ್ಟೆ ಒಯ್ಯುತ್ತಿದ್ದರು.

ಗುದ್ಲೇಪ್ಪನವರ ಪ್ರಭಾವ ಪ್ರೇರಣೆಯಿಂದ ಸುತ್ತಲಿನ ಹಳ್ಳಿಗಳು ಗಾಂಧಿಗ್ರಾಮಗಳಾಗಿ ಪರಿವರ್ತಿತವಾದವು. ಕಾಂಗ್ರೆಸ್ಸಿನ ಪ್ರಭಾವ ವ್ಯಾಪಕವಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ಸುತ್ತಲಿನ ಹಳ್ಳಿಗಳಿಂದ ಸುಮಾರು ಐದು ಸಾವಿರ ಜನರು ಹಾಗೂ ಹೊಸರಿತ್ತಿಯೊಂದರಿಂದಲೇ ಒಂದು ಸಾವಿರ ಜನರು ಸತ್ಯಾಗ್ರಹಿಗಳಾಗಿ ಪಾಲ್ಗೊಂಡರು. ಇದು ಗುದ್ಲೇಪ್ಪನವರ ಸಂಘಟನಾ ಸಾಮರ್ಥ್ಯಕ್ಕೆ ಉಜ್ವಲನಿದರ್ಶನವಾಗಿದೆ. ಹೊಸರಿತ್ತಿಯ ಗಾಂಧಿ ಆಶ್ರಮದ ಪ್ರಭಾವದಿಂದ ಮುಂದೆ ಮೈಲಾರ ಮಹದೇವಪ್ಪರವರು ಕೊರಡೂ ರಿನಲ್ಲಿ ಆಶ್ರಮವೊಂದನ್ನು ಸ್ಥಾಪಿಸಿದರು.

ಗುದ್ಲೇಪ್ಪನವರು ರೈತಪರಿಷತ್ತನ್ನು ಏರ್ಪಡಿಸಿ ರೈತರಲ್ಲಿ ರಾಷ್ಟ್ರೀಯ ಭಾವನೆ ಬಿತ್ತರಿಸುವ ಭಾಷಣಗಳನ್ನು ಸ್ವತಃ ತಾವು ಮಾಡುತ್ತಿದ್ದರಲ್ಲದೆ ಬೇರೆ ಮುಖಂಡರ ಕಡೆಯಿಂದಲೂ ಮಾಡಿಸಿ ರೈತರಲ್ಲಿ ರಾಷ್ಟ್ರಾಭಿಮಾನ ಬಿಂಬಿಸುತ್ತಿದ್ದರು. ಕೃಷಿ ತಜ್ಞರನ್ನು ಕರೆಯಿಸಿ ಕೃಷಿ ಮತ್ತು ಪಶುಸಂಗೋಪನೆಯ ಬಗ್ಗೆ ಭಾಷಣ ಮಾಡಿಸಿ, ಉತ್ತಮ ತಳಿ ದನಗಳಿಗೆ ಪಾರಿತೋಷಕ ವಿತರಣೆ ಮಾಡಿಸುತ್ತಿದ್ದರು.

ಜನರಲ್ಲಿ ರಾಷ್ಟ್ರೀಯ ಭಾವನೆ ಬೆಳೆಸಲು ಅಕ್ಷರ ಜ್ಞಾನ ಅವಶ್ಯ. ಈ ದೃಷ್ಟಿಯಿಂದ ಗಾಂಧಿ ವಾಚನಾಲಯವು ಸ್ಥಾಪಿತವಾಯಿತು. ಇದು ಹಳ್ಳಿಗರಲ್ಲಿ ಓದುವ ಅಭಿರುಚಿಯನ್ನು ಬೆಳೆಸುವಲ್ಲಿ ಶ್ಲಾಘನೀಯ ಕಾರ್ಯ ಮಾಡಿತು. ವಾಚನಾಲಯ ಕ್ಕಾಗಿಯೇ

ಹಳ್ಳಿಗರಿಗೆ, ಮಕ್ಕಳಿಗೆ, ಮಹಿಳೆಯರಿಗೆ ಬಹಳಷ್ಟುಪುಸ್ತಕಗಳನ್ನು ಗುದ್ಲೆಪ್ಪನವರು ಸಂಗ್ರಹಿಸಿದರು. ಜನರಲ್ಲಿ ವಾಚನಾಭಿರುಚಿ ಹೆಚ್ಚಿದಂತೆ ಸಾಮಾಜಿಕ ಮತ್ತು ರಾಷ್ಟ್ರೀಯಪ್ರಜ್ಞೆ ಜಾಗೃತವಾಯಿತು.

ಬಡರೋಗಿಗಳಿಗೆ ಉಚಿತ ಔಷಧೋಪಚಾರವನ್ನು, ಆರೋಗ್ಯ ಸಲಹೆಗಳನ್ನು ನೀಡುವುದಕ್ಕಾಗಿ ಹಳ್ಳಿಕೇರಿಯವರು ಹೊಸರಿತ್ತಿಯಲ್ಲಿ ಗಾಂಧಿ ಚಿಕಿತ್ಸಾಲಯವನ್ನು ತೆರೆದರು.

1929ರ ಡಿಸೆಂಬರ್ 31ರಂದು ಲಾಹೋರದಲ್ಲಿ ಜವಾಹರಲಾಲ್ ನೆಹರೂ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯ ಸಿಗಬೇಕು ಎಂಬ ನಿರ್ಣಯ ಸರ್ವಾನುಮತದಿಂದ ಸ್ವೀಕೃತವಾಯಿತು. ಇನ್ನು ಮುಂದೆ ಜನವರಿ 26ನೇ ದಿನವನ್ನು ಸ್ವಾತಂತ್ರ್ಯದಿನವೆಂದು ಆಚರಿಸಬೇಕೆಂಬ ನಿರ್ಣಯ ಕೈಗೊಳ್ಳಲಾಯಿತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು 1930ರಫೆಬ್ರವರಿ 14ರಿಂದ 16ರ ವರೆಗೆ ಸಾಬರಮತಿ ಆಶ್ರಮದಲ್ಲಿ ಸೇರಿ ಗಾಂಧೀಜಿಯವರಿಗೆ ಕಾನೂನುಭಂಗ ಚಳುವಳಿ ಕೈಗೊಳ್ಳಲು ಸಂಪೂರ್ಣ ಅಧಿಕಾರ ನೀಡಿತು. ಈ ಚಳುವಳಿಯ ಅಂಗವಾಗಿ ಬ್ರಿಟಿಷ್ ಸರಕಾರವು ಜನಜೀವನದ ನಿತ್ಯ ಬಳಕೆಯ ಉಪ್ಪಿನ ಮೇಲೆ ವಿಧಿಸಿದ್ದ ಕರವನ್ನು ವಿರೋಧಿಸಿ, ಕಾನೂನು ಭಂಗಗೊಳಿಸುವ ಚಳುವಳಿ ಆರಂಭಿಸಲು ಗಾಂಧೀಜಿ ಯವರು ನಿರ್ಧರಿಸಿದರು.

ಗಾಂಧೀಜಿಯವರು ಉಪ್ಪಿನ ಕಾನೂನುಭಂಗ ಮಾಡುವು ದಕ್ಕಾಗಿ ದಂಡಿ ಯಾತ್ರೆ ಕೈಕೊಂಡರು. 79 ಜನ ತರಬೇತಿ ಹೊಂದಿದ ದೇಶದ ಎಲ್ಲ ಪ್ರದೇಶ ಮತ್ತು ಧರ್ಮಕ್ಕೆ ಸಂಬಂಧಿಸಿದ ಸತ್ಯಾಗ್ರಹಿಗಳನ್ನು ಅವರೊಂದಿಗೆ ಕರೆದೊಯ್ಯಲು ಆಯ್ಕೆ ಮಾಡಲಾಯಿತು. ಇವರಿಗೆ ತರಬೇತಿ ನೀಡಲು ಗಾಂಧೀಜಿ ಯವರು ಜಮನಾಲಾಲ್ ಬಜಾಜ್ ಅವರಿಗೆ ವಹಿಸಿ ಕೊಟ್ಟಿದ್ದರು. ಗುದ್ಲೆಪ್ಪನವರು ಮೈಲಾರ ಮಹಾದೇವಪ್ಪರನ್ನು ತರಬೇತಿ ಪಡೆಯಲು ಗಾಂಧೀಜಿಯವರ ಆಶ್ರಮಕ್ಕೆ ಕಳುಹಿಸಿ ದರು.ಬಜಾಜರುಗುದ್ಲೆಪ್ಪನವರಿಗೆಪತ್ರಬರೆದುಮಹಾದೇವರಿಗೆ ಅನಾರೋಗ್ಯವಿರುವುದರಿಂದ ಅವರನ್ನು ಆಯ್ಕೆ ಮಾಡಲಾಗು ವುದಿಲ್ಲವೆಂದು ತಿಳಿಸಿದರು. ಆದರೆ ಗುದ್ಲೆಪ್ಪನವರು ಮತ್ತೆ ಬಜಾಜರಿಗೆ ಪತ್ರ ಬರೆದು ಆಯ್ಕೆ ಮಾಡಲೇಬೇಕೆಂದು ಒತ್ತಾಯಿಸಿದರು. ಆಗ ಮಹಾದೇವಪ್ಪರನ್ನು ಆಯ್ಕೆ ಮಾಡಲಾಗಿ, ದಂಡಿ ಯಾತ್ರೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿ ದರು. ಈ ಯಾತ್ರೆಯಲ್ಲಿ ಅತ್ಯಂತ ಕಿರಿಯ ವಯಸ್ಸಿನವರೆಂದರೆ 18 ವರ್ಷದ ಮೈಲಾರ ಮಹಾದೇವಪ್ಪನವರಾಗಿದ್ದರು. ಅತ್ಯಂತ ಹಿರಿಯ ವಯಸ್ಸಿನವರೆಂದರೆ 61 ವರ್ಷದ ಗಾಂಧೀಜಿಯವರೇ ಆಗಿದ್ದರು.

1930ರ ಮಾರ್ಚ 12ರಂದು ಗಾಂಧೀಜಿ ನೇತೃತ್ವ ದಲ್ಲಿ ಸತ್ಯಾಗ್ರಹಿಗಳು ಸಾಬರಮತಿ ಆಶ್ರಮದಿಂದ ಸುಪ್ರಸಿದ್ಧ ದಂಡಿ ಯಾತ್ರೆ ಕೈಕೊಂಡರು. ಗುಜರಾತಿನ ಪಶ್ಚಿಮ ಕರಾವಳಿ ಯಲ್ಲಿನ ಒಂದು ಹಳ್ಳಿ ದಂಡಿ. ಅಹಮದಾಬಾದಿನಿಂದ 240 ಕಿ.ಮೀ. ದೂರದಲ್ಲಿರುವ ದಂಡಿಯನ್ನು ಕಾಲ್ನಡಿಗೆಯಿಂದ ತಲುಪಲು ಇವರಿಗೆಲ್ಲ 24 ದಿನಗಳು ಬೇಕಾದವು. 1930ರ ಏಪ್ರಿಲ್ 5ರಂದು ದಂಡಿಯನ್ನು ತಲುಪಿದರು. ಸಮುದ್ರ ತೀರವನ್ನು ತಲುಪಿದ ಮರುದಿವಸ ಏಪ್ರಿಲ್ 6ರಂದು ತಯಾರಿಸಿದ ಉಪ್ಪನ್ನು ಕೈಯಿಂದ ಎತ್ತಿಹಿಡಿದು ಏಪ್ರಿಲ್ 12ರವರೆಗಿನ ವಾರವನ್ನು ಉಪ್ಪಿನ ಕಾನೂನುಭಂಗದ ರಾಷ್ಟ್ರೀಯ ವಾರವಾಗಿ ಘೋಷಿಸಿದರು. ಅಂದಿನಿಂದ ದೇಶದ ಎಲ್ಲೆಡೆಯಲ್ಲಿ ಕಾನೂನು ಭಂಗ ಚಳುವಳಿಗಳು ನಡೆದು ಉಪ್ಪನ್ನು ತಯಾರಿಸಿ ಮಾರಾಟ ಮಾಡಲಾಯಿತು.

ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ

ಅಂಕೋಲೆಯಲ್ಲಿ 1930, ಏಪ್ರಿಲ್ 13ರಂದು ಉಪ್ಪಿನ ಸತ್ಯಾಗ್ರಹ ಆರಂಭಿಸಲಾಯಿತು. ಗುಜರಾತ್ ವಿದ್ಯಾಪೀಠದಲ್ಲಿ ಗಾಂಧೀಜಿಯವರ ಮಾರ್ಗದರ್ಶನದಂತೆ ತರಬೇತಿ ಪಡೆದುಕೊಂಡು ಬಂದ ಅದಮ್ಯ ಉತ್ಸಾಹದ ಕಾರ್ಯಕರ್ತ ಗುದ್ಲೆಪ್ಪ ಹಳ್ಳಿಕೇರಿಯವರು ತಮ್ಮ ಸಂಗಡಿಗ ರೊಂದಿಗೆ ಅಂಕೋಲೆಗೆ ಬಂದರು. ರಾಜ್ಯದ ಮೂಲೆ ಮೂಲೆಗಳಿಂದ ಸತ್ಯಾಗ್ರಹಿಗಳು ತಂಡೋಪತಂಡವಾಗಿ ಅಂಕೋಲೆಗೆ ಧಾವಿಸಿದರು. ಅಲ್ಲಿ ಸತ್ಯಾಗ್ರಹಿಗಳನ್ನುದ್ದೇಶಿಸಿ ಸತ್ಯಾಗ್ರಹ ತಂತ್ರಗಳನ್ನು ತಮ್ಮ ಭಾಷಣದಲ್ಲಿ ತಿಳಿಸುತ್ತ ಹುರಿದುಂಬಿಸಿದರು. ಸುಮಾರು ಮೂವತ್ತು ಸಾವಿರಕ್ಕಿಂತಲು ಹೆಚ್ಚಿನ ಜನರು ಇಲ್ಲಿ ಭಾಗವಹಿಸಿದ್ದರು. ಈ

ಚಳುವಳಿಯ ಮುಖಂಡರಾದ ಗುದ್ಲೆಪ್ಪ ಹಳ್ಳಿಕೇರಿ, ಎಂ.ಪಿ. ನಾಡಕರ್ಣಿ, ಸ್ವಾಮಿ ವಿದ್ಯಾನಂದ ಮುಂತಾದವರು ಸಭೆಯಲ್ಲಿ ಸ್ಫೂರ್ತಿಯುತ ಭಾಷಣ ಮಾಡಿ ಜನರಲ್ಲಿ ಪ್ರೇರಣೆ, ಉತ್ಸಾಹ ತುಂಬಿದರು. ಗುದ್ಲೆಪ್ಪನವರು ಮೇ ತಿಂಗಳ ಕೊನೆಯವರೆಗೆ ಅಂಕೋಲೆಯಲ್ಲಿಯೇ ಇದ್ದು ಜನರಲ್ಲಿ ನವಚೈತನ್ಯ ತುಂಬಿದರು.

ಉಪ್ಪಿನ ಸತ್ಯಾಗ್ರಹವು ಮಂಗಳೂರು, ಕುಂದಾಪುರ,ಪಡುಬಿದ್ರೆ, ಉಡುಪಿ, ಕಾರ್ಕಳ, ಪುತ್ತೂರು, ಮಲ್ಪೆ, ಕಾಪು (ಉಡುಪಿ ಜಿಲ್ಲೆ), ಬಿಸನಾಳ (ಬಿಜಾಪುರ ಜಿಲ್ಲೆ), ನವಲಗುಂದ, ಕಿರೇಸೂರು, ಯಾವಗಲ್ಲ (ಧಾರವಾಡ ಜಿಲ್ಲೆ) ಹೀಗೆ ಕರ್ನಾಟಕದ ಸುಮಾರು 30 ಸ್ಥಳಗಳಲ್ಲಿ ನಡೆಯಿತು.

ವಿದೇಶಿ ವಸ್ತುಗಳ ಬಹಿಷ್ಕಾರ

ಗುದ್ಲೆಪ್ಪನವರು ಉತ್ತರ ಕನ್ನಡ ಜಿಲ್ಲೆಯ ತುಂಬ ಸಂಚರಿಸಿ ಮಹತ್ವದ ಸ್ಥಳಗಳಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪಿಸಿದರು. ಹೋರಾಟದ ಸ್ವರೂಪವನ್ನು, ನಿರ್ವಹಿಸುವ ಕರ್ತವ್ಯ ಮತ್ತು ಹೊಣೆಗಾರಿಕೆಯನ್ನು ತಿಳಿಸಿಕೊಟ್ಟರು. ಗುದ್ಲೆಪ್ಪನವರ ಭಾಷಣದಿಂದ ಪ್ರೇರೇಪಿತರಾದ ಜನರು ವಿದೇಶಿ ವಸ್ತುಗಳನ್ನು ಸುಟ್ಟರು. ವಿದೇಶಿ ಸಾಬೂನು, ಸಿಗರೇಟು, ಸಕ್ಕರೆಯನ್ನೂ ಸಹ ಸಮುದ್ರಕ್ಕೆ ಚೆಲ್ಲಿದರು.

ಗುದ್ಲೆಪ್ಪನವರ ಹೊಸರಿತ್ತಿಯ ಗಾಂಧಿ ಆಶ್ರಮವಾಸಿ ಗಳಾಗಿದ್ದ ರಮಾನಂದ ಮನ್ನಂಗಿ, ಶಿವಾನಂದ ಎಲಿ ಇವರು ಗುದ್ಲೆಪ್ಪನವರ ಆದೇಶದಂತೆ ನಲವತ್ತು ಸ್ವಯಂಸೇವಕರನ್ನು ಕರೆದುಕೊಂಡು ಬಂದು ಬ್ಯಾಡಗಿ, ರಾಣೇಬೆನ್ನೂರುಗಳಲ್ಲಿ ಮತ ಪ್ರದರ್ಶನ ಮಾಡಿ ವಿದೇಶಿ ಬಟ್ಟೆಗಳನ್ನು ಮಾಲೀಕರು ಗಂಟು ಕಟ್ಟಿಟ್ಟು ಮಾರಲು ಬಾರದಂತೆ ಮಾಡಿದರು.

ಗುದ್ಲೆಪ್ಪನವರು ಹೊಸರಿತ್ತಿಗೆ ಬಂದು ತರುಣರನ್ನು ಒಗ್ಗೂಡಿಸಿ ಬೃಹತ್ ಪ್ರಮಾಣದಲ್ಲಿ ಈಚಲು ಗಿಡಗಳನ್ನು ಕಡಿಯುವ ಕಾರ್ಯವನ್ನು ವ್ಯಾಪಕವಾಗಿ ಕೈಗೊಂಡರು.

ಕರ ನಿರಾಕರಣೆ ಚಳುವಳಿ

ಗುಜರಾತಿನ ಬಾರ್ಡೋಲಿಯಲ್ಲಿ ನಡೆದ ಕರನಿರಾಕರಣ ಚಳುವಳಿಯು ಯಶಸ್ವಿಯಾದ ನಂತರ ಇದರಪ್ರಭಾವವು ಕರ್ನಾಟಕಕ್ಕೂ ಹಬ್ಬಿತು. ಕರ್ನಾಟಕದಲ್ಲಿ ಈ ಚಳುವಳಿಯನ್ನು ನಡೆಸಲು ಧಾರವಾಡ ಜಿಲ್ಲೆಯ ಹಿರೇಕೆರೂರು, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಶಿರಸಿ, ಸಿದ್ದಾಪುರ ತಾಲ್ಲೂಕುಗಳನ್ನು ಆಯ್ದುಕೊಳ್ಳಲಾಗಿತ್ತು. ಕರನಿರಾಕರಣ ಚಳುವಳಿಯು ಹಿರೇಕೆರೂರು ತಾಲೂಕಿನಲ್ಲಿ ವ್ಯಾಪಕವಾಗಿ ನಡೆದು ಯಶಸ್ಸು ಪಡೆಯಿತು. ಈ ಕಾರ್ಯದಲ್ಲಿ ಗುದ್ಲೆಪ್ಪನವರು ಅತ್ಯಂತ ಉತ್ಸಾಹದಿಂದ ನಾಯಕತ್ವ ವಹಿಸಿ ಚಳುವಳಿಯ ಬಿಸಿಯನ್ನು ಆಡಳಿತಕ್ಕೆ ಮುಟ್ಟಿಸಿದರು.

ಗುದ್ಲೆಪ್ಪನವರ ಬಂಧನ

ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದ ಗುದ್ಲೆಪ್ಪನವರು ಅನೇಕ ಕಡೆ ಭಾಷಣ ಗಳನ್ನು ಮಾಡಿ, ಬ್ರಿಟಿಷರ ವಿರುದ್ಧ ಜನರ ಸಂಘಟನೆ ಮಾಡುತ್ತ 1930ರ ಜುಲೈನಲ್ಲಿ ಗುತ್ತಲಕ್ಕೆ ಬಂದರು. ಅಲ್ಲಿ ಬೃಹತ್ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಸತ್ಯಾಗ್ರಹಿಗಳಾದ ಕೃ.ವೆಂ. ದೇಶಪಾಂಡೆ, ಕೃಷ್ಣಾಬಾಯಿ ಪಂಜೀಕರ, ದಿನಕರ ಗೋಪಾಳ ವಾಟವೆ ಅವರು ಜೊತೆಗಿದ್ದರು. ಈ ಮೊದಲೇ ಗುದ್ಲೆಪ್ಪನವರನ್ನು ಬಂಧಿಸಲು ವಾರಂಟ್ ಹೊರಡಿಸಲಾಗಿತ್ತು. ಆ ಮೇರೆಗೆಪೋಲೀಸರುಗುತ್ತಲದಲ್ಲಿಯೇ ಅವರನ್ನು ಬಂಧಿಸಿ ದರು. ಇದು ಗುದ್ಲೆಪ್ಪನವರ ಹೋರಾಟದ ಜೀವನದಲ್ಲಿನಡೆದ ಪ್ರಥಮ ಬಂಧನ. ಅವರು ಮೂರು ತಿಂಗಳ ಶಿಕ್ಷೆ ಅನುಭವಿಸಿ ಬಿಡುಗಡೆಯಾದರು.

ಬಿಡುಗಡೆಯ ನಂತರ ಮತ್ತೆ ಚಳುವಳಿಯಲ್ಲಿ ಧುಮುಕಿ ದರು. ಅದೇದೆ ವರ್ಷದ ಅಕ್ಟೋಬರ್‌ನಲ್ಲಿ ಎರಡನೇ ಬಾರಿ ಅವರನ್ನು ಬಂಧಿಸಲಾಯಿತು.ಮೂರು ತಿಂಗಳು ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಡಿಸೆಂಬರ್ 17ರಂದು ಬಿಡುಗಡೆ ಹೊಂದಿದರು. ಹೊರಗೆ ಬಂದಾಗ ಶಿಷ್ಯ ಮಹಾದೇವಪ್ಪ ಮೈಲಾರ ಅವರು ಗುದ್ಲೆಪ್ಪನವರನ್ನು ಸ್ವಾಗತಿಸಿದರು.

1931ರಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಕರಾಚಿಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಗುದ್ಲೆಪ್ಪನವರು ಹೋಗಿ ಬಂದರು. ಅದೇ ವರ್ಷ ಅವರು ಧಾರವಾಡ ಜಿಲ್ಲೆಯ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಯಾದರು. 1931ರ ಡಿಸೆಂಬರ್ ಕೊನೆಯ ವಾರದಲ್ಲಿ ಗುದ್ಲೆಪ್ಪನವರು ಜವಾಹರಲಾಲ್ ನೆಹರು ಅವರನ್ನು ಹುಬ್ಬಳ್ಳಿಗೆ ಕರೆಯಿಸಿ ರಾಷ್ಟ್ರೀಯ ಚಳುವಳಿಯನ್ನು ಇನ್ನಷ್ಟು ಪ್ರಬಲಗೊಳಿಸಿದರು.

ಗುದ್ಲೆಪ್ಪನವರು ತಮ್ಮ ಸಂಗಡಿಗರೊಂದಿಗೆ ಭೂಗತ ರಾಗಿದ್ದಾಗ ರಾತ್ರಿ ಹಳ್ಳಿ-ಹಳ್ಳಿಗಳಿಗೆ ಹೋಗಿ ಜನರಲ್ಲಿ ರಾಷ್ಟ್ರೀಯ ಪ್ರಜ್ಞೆ ಬಿಂಬಿಸಿ ಯುವಕರನ್ನು ಹೋರಾಟಕ್ಕೆ ಹುರಿದುಂಬಿಸುತ್ತಿದ್ದರು.

ರಾಷ್ಟ್ರವ್ಯಾಪಿ ಅಹಿಂಸಾತ್ಮಕ ಹೋರಾಟ ಆರಂಭಿಸ ಬೇಕೆಂದು ಕಾಂಗ್ರೇಸ್ ಕಾರ್ಯಸಮಿತಿ ನಿರ್ಣಯಿಸಿ, ಮಹಾತ್ಮಾ ಗಾಂಧೀಜಿಯವರ ನಾಯಕತ್ವದಲ್ಲಿ ನಡೆಯ ಬೇಕೆಂದು ನಿರ್ಧರಿಸಿತು. ಗಾಂಧೀಜಿ ಗೊತ್ತುವಳಿ ಕುರಿತು ಮಾತನಾಡಿ "ಭಾರತೀಯರೆ ಮಾಡು ಇಲ್ಲವೆ ಮಡಿಯಿರಿ" ಎಂದರು. ಬ್ರಿಟೀಷರಿಗೆ "ಕ್ವಿಟ್ ಇಂಡಿಯಾ ಚಲೇ ಜಾವ್" ಎಂದು ಉದ್ಘೋಷಿಸಿದರು. ಅಂದೇ ಸರಕಾರ ಪ್ರಮುಖನಾಯಕರು ಹಾಗೂ ಅವರ ಅನುಯಾಯಿಗಳನ್ನು ಬಂಧಿಸಿತು. ಈ ಚಳುವಳಿ ಮುಗಿಯುವವರೆಗೆ ಗುದ್ಲೆಪ್ಪನವರನ್ನು ಹಿಂಡಲಗಿ ಜೈಲಿನಲ್ಲಿ ಸ್ಥಾನಬದ್ಧ ಕೈದಿಯನ್ನಾಗಿ ಇಡಲಾಗಿತ್ತು. ಸರಕಾರವು ಎರಡು ವರ್ಷಗಳ ಸಶ್ರಮ ಶಿಕ್ಷೆ ವಿಧಿಸಿತು. ಗಾಂಧೀಜಿಯವರ ಬಿಡುಗಡೆಯೊಂದಿಗೆ ಸಾರ್ವತ್ರಿಕವಾಗಿ ಬಂಧಿತರನ್ನು ಬಿಡುಗಡೆ ಮಾಡಿದಾಗ ಗುದ್ಲೆಪ್ಪನವರನ್ನೂ 1944ರ ಮೇ 6ರಂದು ಮುಕ್ತಗೊಳಿಸಲಾಯಿತು.

1945ರಲ್ಲಿ ಬ್ರಿಟನ್ನಿನಲ್ಲಿ ಲೇಬರ್ ಪಕ್ಷವು ಅಧಿಕಾರಕ್ಕೆ ಬಂದ ನಂತರ ಭಾರತಕ್ಕೆ ಸ್ವಾತಂತ್ರ್ಯ ಕೊಡಲು ನಿರ್ಣಯಿಸಿ, ಆ ಬಗ್ಗೆ ಪರಿಶೀಲನೆ ಮಾಡಲು ಲಾರ್ಡ್ ಪ್ಯಾಥಿಕ್ ಲಾರೆನ್ಸ್ ಅಧ್ಯಕ್ಷತೆಯಲ್ಲಿ ಕ್ಯಾಬಿನೆಟ್ ಆಯೋಗವನ್ನು 1946ರ ಮಾರ್ಚ್ 24ರಂದು ಭಾರತಕ್ಕೆ ಕಳುಹಿಸಿತು. 1947 ಮಾರ್ಚ್ 24ರಂದು ಲಾರ್ಡ್ ಮೌಂಟ್ ಬ್ಯಾಟನ್ನರು ಭಾರತಕ್ಕೆ ಗವರ್ನರ್ ಜನರಲ್ ಆಗಿ ಬಂದರು. ದೇಶದ ಮುಖಂಡರೊಡನೆ ಚರ್ಚಿಸಿ ಭಾರತದ ವಿಭಜನೆಯನ್ನು ಒಳಗೊಂಡ ಹೊಸ ಯೋಜನೆಯನ್ನು ಬ್ರಿಟಿಷ್ ಸಂಸತ್ತಿಗೆ ಕಳುಹಿಸಿದರು. ಅದು 1947ರ ಜುಲೈ 4ರಂದು ಭಾರತ ಸ್ವಾತಂತ್ರ್ಯ ಕಾಯ್ದೆಯನ್ನು ಅಂಗೀಕರಿಸಿತು. ಅದರ ಮೇರೆಗೆ ದೇಶ ವಿಭಜನೆಯಾಗಿ 1947ರ ಆಗಸ್ಟ್ 15ರಂದು ಭಾರತ ಮತ್ತು ಪಾಕಿಸ್ತಾನವೆಂಬ ಎರಡು ಸ್ವತಂತ್ರ ರಾಷ್ಟ್ರಗಳು ಉದಯಿಸಿದವು.

ಧಾರವಾಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಗುದ್ಲೇಪ್ಪ ಹಳ್ಳಿಕೇರಿಯವರಿಂದ 1947ರ ಆಗಸ್ಟ 15ರಂದು ಸ್ವಾತಂತ್ರ್ಯ ರಾಷ್ಟ್ರಧ್ವಜಾರೋಹಣವು ಹುಬ್ಬಳ್ಳಿಯ ದರ್ಗದ ಬೈಲಿನಲ್ಲಿ ಬೃಹತ್ ಜನಸ್ತೋಮದ ನಡುವೆ ಹರ್ಷೋದ್ಗಾರ ಗಳ ಮಧ್ಯೆ ನಡೆಯಿತು.

ಹೀಗೆ ಗುದ್ಲೆಪ್ಪನವರು ನಿಸ್ವಾರ್ಥ ಭಾವನೆಯಿಂದ ಅವಿಶ್ರಾಂತವಾಗಿ ದಿಟ್ಟತನದಿಂದ ಹೋರಾಡಿ ಯಶಸ್ವಿಯಾದರು.

ಆಧಾರಸೂಚಿ

1. ಆರ್.ಎಲ್.ಎಂ. ಪಾಟೀಲ್., ಜಿ.ವಿ. ಹಳ್ಳಿಕೇರಿ, ಪ್ರತಿಭಾವಂತ ಸಂಸದೀಯ ಪಟುಗಳ ಬದುಕು ಬರಹ-ಮಾಲಿಕೆ, ಕರ್ನಾಟಕ ವಿಧಾನಸಭೆ ಸಚಿವಾಲಯ, ಬೆಂಗಳೂರು, 1999.
2. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ-1, 2, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1998.
3. ಕುಲಕರ್ಣಿ ಆರ್.ಜಿ., 'ಶ್ರೀ ಜಿ.ವಿ. ಹಳ್ಳಿಕೇರಿಯವರು', ಸಂ: ಗೋಕಾಕ ವಿ.ಕೆ., ಮತ್ತು ಇತರರು. ರತ್ನಶಿಖಾ, ಹಳ್ಳಿಕೇರಿ ಷಷ್ಟ್ಯಬ್ದಿಪೂರ್ತಿ ಸಮಾರಂಭ ಸಮಿತಿ, ಕಾಂಗ್ರೆಸ್ ಭವನ, ಹುಬ್ಬಳ್ಳಿ, 1966.
4. ಸಿದ್ಧಲಿಂಗೇಶ ಸಂ. ಹಂಡಗಿ, ಗುದ್ಲೇಪ್ಪ ಹಳ್ಳಿಕೇರಿ ರಾಜಕೀಯ ಜೀವನ ಮತ್ತು ಸಾಧನೆ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, 2008.

❑

ಹೈದ್ರಾಬಾದ್-ಕರ್ನಾಟಕ ವಿಮೋಚನಾ ಹೋರಾಟದಲ್ಲಿ ಜಗನ್ನಾಥ ಚಂಡ್ರಕಿಯವರ ಪಾತ್ರ

– ಡಾ. ಕಾವ್ಯಶ್ರೀ.ಜಿ., ಕಂಚಿಕೆರೆ ಷಮಿವುಲ್ಲಾ

ಈಗಿನ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಒಳಗೊಂಡಿ ರುವ ಪ್ರದೇಶವನ್ನು ಹೈದ್ರಾಬಾದ ಕರ್ನಾಟಕ ಪ್ರದೇಶ ಎಂದು ಗುರುತಿಸಲಾಗುತ್ತಿದೆ. ಸ್ವಾತಂತ್ರ್ಯ ಪಡೆಯುವ ಸಂದರ್ಭದಲ್ಲಿ ಕನ್ನಡ ಮಾತನಾಡುವ ಪ್ರದೇಶಗಳಾದ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಹೈದ್ರಾಬಾದ ನಿಜಾಮ ಸಂಸ್ಥಾನದ ವ್ಯಾಪ್ತಿಗೆ ಸೇರಿದ್ದರಿಂದ ನಿಜಾಂ ಕರ್ನಾಟಕ ಅಥವಾ ಹೈದ್ರಾಬಾದ ಕರ್ನಾಟಕ ಎಂದು ಕರೆಯಿಸಿಕೊಂಡಿದ್ದವು.

ಈ ಪ್ರದೇಶಗಳು ಮೊದಲು ಟಿಪ್ಪುವಿನ ಹಿಡಿತದಲ್ಲಿದ್ದವು. 1799ರಲ್ಲಿ ಟಿಪ್ಪುವು ಬ್ರಿಟಿಷರ ವಿರುದ್ಧ ಯುದ್ಧದಲ್ಲಿ ಸೋತಾಗ ಬ್ರಿಟಿಷರು ಮತ್ತು ಹೈದ್ರಾಬಾದಿನ ಎರಡನೇ ನಿಜಾಮನಾದನವಾಬ ನಿಜಾಮ ಅಲಿಖಾನ ಬಹಾದ್ದೂರ ನಡುವಿನ ಮೈತ್ರಿಯನ್ವಯ ಈ ಜಿಲ್ಲೆಗಳು ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪ್ಪಟ್ಟವು. ಅದರ ನಂತರ 1948 ರವರೆಗೆ ಐವರು ನಿಜಾಮರು ಇಲ್ಲಿ ತಮ್ಮ ಪ್ರಭುತ್ವ ಸಾಧಿಸಿದರು.

ಭಾರತದಲ್ಲಿ ಬ್ರಿಟಿಷರ ವಿರುದ್ಧ ವಿವಿಧ ರೀತಿಯಲ್ಲಿ ಹೋರಾಟಗಳು ನಡೆಯುತ್ತಿದ್ದರೂ ಇಡೀ ಹೈದ್ರಾಬಾದ ಸಂಸ್ಥಾನದಲ್ಲಿ ಅಂತಹ ಹೋರಾಟಗಳು ನಡೆಯಲಿಲ್ಲ. ಆದಾಗ್ಯೂ 1857ರ ದಂಗೆಯ ವೇಳೆ ನಿಜಾಮನ ಏಳು ಜನ ಮುಸ್ಲಿಂ ಅಧಿಕಾರಿಗಳು ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸುವುದು ಅಗತ್ಯವೆಂದು ಹೇಳಿದ್ದರು. ಆಗಿನನಿಜಾಮನಾಗಿದ್ದ ನವಾಬ ಅಪಜಾಲುದ್ದೌಲಾ ಮತ್ತು ದಿವಾನ ಸರ್ ಸಾಲಾರಜಂಗ ಬ್ರಿಟಿಷರ ಪರ ಇದ್ದುದ್ದರಿಂದ ಅದಕ್ಕೆ ಅವಕಾಶ ಸಿಗಲಿಲ್ಲ.

ಇನ್ನು ಕೊನೆಯ ನಿಜಾಮನಾದ ನವಾಬ ಮೀರ್ ಉಸ್ಮಾನ ಅಲಿಖಾನ ಬಹಾದ್ದೂರ (1911–1948) ಅಧಿಕಾರಕ್ಕೆ ಬಂದಾಗ ಇಲ್ಲಿಯ ಚಿತ್ರಣವೇ ಬದಲಾಗಿ ಹೋಯಿತು. ಈ ಹಿಂದಿನ ನಿಜಾಮರು ರಾಜಕೀಯವನ್ನು ರಾಜಕೀಯದಿಂದ ಮಾತ್ರ ಮಾಡುತ್ತಿದ್ದರೆ 7ನೇ ನಿಜಾಮ ಕಾಸಿಂ ರಜ್ವಿ ಎಂಬಾತನ ಕಪಿಮುಷ್ಟಿಗೆ ಸಿಕ್ಕು ರಾಜಕೀಯಕ್ಕೆ ಧರ್ಮದ ಲೇಪನವನ್ನು ಕೊಟ್ಟಿದ್ದರಿಂದ ಸಂಸ್ಥಾನದಲ್ಲಿ ರಾಜಕೀಯ ತಲ್ಲಣವುಂಟಾಯಿತು.

ನಿಜಾಮನೇನೋ ಆರಂಭದಲ್ಲಿ ಧಾರ್ಮಿಕ ಮದಾಂಧನಾಗಿರಲಿಲ್ಲ. ಆತನು ಹಲವಾರು ಸುಧಾರಣೆಗಳನ್ನು ಜಾರಿಗೆ ತಂದವನಾಗಿದ್ದ. ಈತನು ಪಟ್ಟಕ್ಕೆ ಬಂದ 25ನೇ ವರ್ಷಾಚರಣೆ ಸಂದರ್ಭದಲ್ಲಿ ಗುಲ್ಬರ್ಗಾ ಮತ್ತು ಬೀದರ್ ಮಧ್ಯೆ ರಾಜಮಾರ್ಗ ನಿರ್ಮಿಸಿದ. ಈ ಮಾರ್ಗದಲ್ಲಿ ಬೆಣ್ಣೆತೊರಾ ನದಿಗೆ ಬೃಹತ್ ಕರಿಕಲ್ಲಿನ ಸೇತುವೆ ಕಟ್ಟಿಸಿದ. ಗುಲ್ಬರ್ಗಾ ಮತ್ತು ರಾಯಚೂರು ಮಧ್ಯೆ ನೇರ ಮಾರ್ಗವನ್ನು ರಚಿಸಿದ. ರಸ್ತೆಯುದ್ದಕ್ಕೂ ನೆರಳು ಮತ್ತು ಫಲ ಎರಡನ್ನೂ ಕೊಡಬಹುದಾದ ಮಾವು, ಹುಣಸೆ ಸಾಲು ಮರಗಳನ್ನುನೆಡಿಸಿದ್ದ. ಮಧ್ಯೆ ಪ್ರಯಾಣಿಕರಿಗೆ ದಣಿವಾರಿಸಿಕೊಳ್ಳಲು ಬಾವಿಗಳನ್ನು ನಿರ್ಮಿಸಿದ್ದ. ಗುಲ್ಬರ್ಗಾ-ರಾಯಚೂರು ಜಿಲ್ಲೆಗಳನ್ನು ಬೇರ್ಪಡಿಸುವ ಗಡಿಯಲ್ಲಿರುವ ಕೃಷ್ಣಾ ನದಿಗೆ ದೊಡ್ಡ ಸೇತುವೆಯೊಂದನ್ನು ನಿರ್ಮಿಸಿದ. ಇವುಗಳನ್ನು ಈಗಲೂ ಕಾಣಬಹುದು.

ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವ್ಯಾಪಾರ ಅಭಿವೃದ್ಧಿಗಾಗಿ ಸಗಟು ವ್ಯಾಪಾರದ ಸ್ಥಳಗಳನ್ನು (ಗಂಜ್ ಅಥವಾ ಅಡತಿ) ನಿರ್ಮಿಸಿದ್ದ. ರೈಲು ನಿಲ್ದಾಣದಿಂದ ಗಂಜ್‌ವರೆಗೆ ಸಿಮೆಂಟ್ ರಸ್ತೆಯನ್ನು ನಿರ್ಮಿಸಿದ್ದ. ರಾಜಧಾನಿ ಹೈದ್ರಾಬಾದಿಗೆ ಹೋಗಲು ಸುಸಜ್ಜಿತವಾದ ರಸ್ತೆ ನಿರ್ಮಿಸಿದ್ದ ಎಂಬುದನ್ನು ಮರೆಯುವಂತಿಲ್ಲ.

ಹೀಗಾಗಿ ಜನರು ಕೂಡ ನಿಜಾಮನನ್ನು ಆದರದಿಂದಲೇ ಕಾಣುತ್ತಿದ್ದರು. ಆದರೆ ನಿಜಾಮ ಬ್ರಿಟಿಷರ ಗುಲಾಮನಾದಾಗ ಜನರು ಬಿಟಿಷರ ವಿರುದ್ಧ ಹೋರಾಟಕ್ಕಿಳಿದರು. ಇದು ನಿಜಾಮನ ವಿರುದ್ಧವೇ ನಡೆದ ಹೋರಾಟ ಎಂಬಂತೆ ಆತನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ದ್ವೇಷದ ಬೀಜವನ್ನು ಬಿತ್ತಲಾಯಿತು. ಇದೇ ವೇಳೆಗೆ 'ಮಜ್ಲಿಸ್-ಎ-ಇತ್ತೆಹಾದ್-ಉಲ್-ಮುಸಲ್ಮೀನ್' (ಇದನ್ನು ಸಂಕ್ಷಿಪ್ತವಾಗಿ 'ಇತ್ತೆಹಾದ್' ಎಂದು ಸಂಬೋಧಿಸಲಾಗುತ್ತದೆ) ಸಂಘಟನೆಯನೇತೃತ್ವವನ್ನು ವಹಿಸಿಕೊಂಡ ಕಾಸಿಂ ರಜ್ವಿಯು ನಿಜಾಮನಲ್ಲಿ ಧರ್ಮದ ವಿಷಬೀಜವನ್ನು ಬಿತ್ತತೊಡಗಿದ. ಸಾರ್ವಜನಿಕರನ್ನುನಿಜಾಮರಿಂದ ದೂರ ಮಾಡಿ ರಜಾಕಾರರನ್ನು ಹುರಿದುಂಬಿಸಿ ಇಡೀ ಹೈದ್ರಾಬಾದ್ ಪ್ರಾಂತ್ಯದಲ್ಲಿ ದ್ವೇಷಮಯ ವಾತಾವರಣವಿರುವಂತೆ ಮಾಡಿದ. ಇದರಿಂದ ಹೈದ್ರಾಬಾದ್ ಕರ್ನಾಟಕ ಕೂಡ ಹೊರತಾಗಿರಲಿಲ್ಲ.[1]

ಅತ್ತ ಬ್ರಿಟಿಷ್ ಭಾರತದಲ್ಲಿ ಭಾರತವು ಸ್ವತಂತ್ರ ದೇಶವಾಗಿ ಹೊರ ಹೊಮ್ಮಬೇಕೆಂದು ಭಾರತೀಯರು ಬ್ರಿಟಿಷರ ವಿರುದ್ಧ ಹೋರಾಡುತ್ತಿದ್ದರೆ ಇತ್ತ ಹೈದ್ರಾಬಾದ ಸಂಸ್ಥಾನದಲ್ಲಿ ರಾಜಕೀಯ ಸ್ವಾತಂತ್ರ್ಯ ಕಳೆದುಕೊಂಡಿದ್ದ ಜನತೆ ನಿಸ್ತೇಜ ರಾಗಿದ್ದರು. ಏಕೆಂದರೆ ಇಲ್ಲಿಯ ರಾಷ್ಟ್ರಪ್ರೇಮಿಗಳು ಒಂದೆಡೆನಿಜಾಮ ಸರಕಾರದ ದಮನಕಾರಿ ನೀತಿಗಳಿಂದ ತುಳಿಯಲ್ಪ ಟ್ಟಿದ್ದರೆ ಇನ್ನೊಂದೆಡೆ ರಜಾಕಾರರೆಂಬ ದುಷ್ಟ ಶಕ್ತಿಗಳ ಆಕ್ರಮಣ ಮತ್ತು ಅವರ ದೌರ್ಜನ್ಯಕ್ಕೊಳಗಾಗಿದ್ದರು.

ಇಂತಹ ಸಮಯದಲ್ಲಿ ಹೈದ್ರಾಬಾದ್ ಸಂಸ್ಥಾನದಾದ್ಯಂತ 1938ರಲ್ಲಿ 'ವಂದೇ ಮಾತರಂ' ಚಳುವಳಿ ನಡೆಯಿತು. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅನೇಕ ವಿದ್ಯಾರ್ಥಿಗಳು, ಸ್ವಾತಂತ್ರ್ಯಹೋರಾಟಗಾರರು ಈ ಚಳುವಳಿಯಲ್ಲಿ ಭಾಗವಹಿಸಿ ದರು. ಅಲ್ಲದೆ ನಂತರ 'ಒಕ್ಕೂಟ ಸೇರಿರಿ' ಚಳುವಳಿಯ ಮೂಲಕ ಹೈದ್ರಾಬಾದ ಕರ್ನಾಟಕ ವಿಮೋಚನಾ ಚಳುವಳಿ ತಾರಕಕ್ಕೇರಲು ಕಾರಣರಾದರು. ಅದರಲ್ಲಿ ಜಗನ್ನಾಥರಾವ ಚಂಡ್ರಕಿಯವರು ವಹಿಸಿದ ಪಾತ್ರವನ್ನು ಈ ಪ್ರಬಂಧದ ಮೂಲಕ ವಿವರಿಸಲು ಪ್ರಯತ್ನಿಸಲಾಗಿದೆ.

ಜಗನ್ನಾಥರಾವ್ ಚಂಡ್ರಕಿಯವರು ಈಗಿನ ಯಾದಗಿರಿ ಜಿಲ್ಲೆಯ ಪುಟ್ಟಗ್ರಾಮ ಚಂಡ್ರಕಿಯಲ್ಲಿ (ಮೊದಲು ಗುಲಬರ್ಗಾ ಜಿಲ್ಲೆಗೆ ಸೇರಿತ್ತು) 1916ರ ಆಗಷ್ಟ 16ರಂದು ಕುಲಕರ್ಣಿ ಯಾಗಿಕೆಲಸಮಾಡುತ್ತಿದ್ದ ವೆಂಕಟರಾವ್ ಮತ್ತು ರುಕ್ಮಿಣಿಬಾಯಿ ಯವರ ಮಗನಾಗಿ ಜನಿಸಿದರು. ಇವರು ಹುಟ್ಟಿದ ದಿನ ಜಗನ್ನಾಥರಾಯರ ಆರಾಧನೆ ಇದ್ದ ಕಾರಣವೇ ಇವರಿಗೆ ಜಗನ್ನಾಥ ಎಂದು ನಾಮಕರಣ ಮಾಡಲಾಯಿತು.[2]

ಮಾತೃಭಾಷೆ ಕನ್ನಡ, ಆಂಧ್ರದ ಗಡಿಹಳ್ಳಿಯಾಗಿದ್ದರಿಂದ ತೆಲಗು, ಕಡ್ಡಾಯ ಕಲಿಕಾ ಮಾಧ್ಯಮವಾಗಿದ್ದ ಉರ್ದು ಭಾಷೆಗಳನ್ನು ಯಾವ ಭೇದ-ಭಾವ ಇಲ್ಲದೇ ಕಲಿತರು. ಚಂಡ್ರಕಿಯವರು ತಮ್ಮ ಹುಟ್ಟೂರು ಹಾಗೂ ಯಾದಗಿರಿಯಲ್ಲಿ ಓದಿದರು. 1932ರಲ್ಲಿ ಇಂಟರ ಮಿಡಿಯೇಟ ಅಭ್ಯಾಸಕ್ಕೆ ಹೈದ್ರಾಬಾದಿಗೆ ಹೋಗಿ ಅಲ್ಲಿ ಯಾದಗಿರಿಯ ಇಮಾರತಿ ಭೀಮಸೇನರಾವ್ ಅವರ ಪರಿಚಯದವರ ಮನೆಯಲ್ಲಿದ್ದು ಓದುತ್ತಾರೆ. ಹೈದ್ರಾಬಾದಿನ ಸಿಟಿ ಕಾಲೇಜಿನಲ್ಲಿ ಇವರು ಪ್ರವೇಶಪಡೆಯುತ್ತಾರೆ.

ನಿಜಾಮನ ಮಕ್ಕಳೇ ಸಹಪಾಠಿಗಳು

ಚಂಡ್ರಿಕಿಯವರ ಅದೃಷ್ಟವೋ, ದುರಾದೃಷ್ಟವೋ ಹೈದ್ರಾಬಾದಿನನಿಜಾಮಮೀರ್‌ಉಸ್ಮಾನಅಲಿಖಾನಬಹಾದ್ದೂರರ ಮಕ್ಕಳು ಹಾಗೂ ಸಂಸ್ಥಾನದ ಹಿರಿಯ ಅಧಿಕಾರಿಗಳ ಮಕ್ಕಳು ಜಗನ್ನಾಥರಿಗೆ ಸಹಪಾಠಿಗಳಾಗಿದ್ದರು. ಅಷ್ಟೇ ಅಲ್ಲದೇನಿಜಾಮನ ಮಕ್ಕಳೇ ಇವರ ಬೆಂಚ್‌ಮೇಟ್‌ಗಳೂ ಆಗಿದ್ದರು. ಇವರೆಲ್ಲ ಕೊನೆಯ ಬೆಂಚಿನಲ್ಲಿ ಕೂಡುತ್ತಿದ್ದರು. ನಿಜಾಮನ ಮಕ್ಕಳು ಏನೇ ಕಿತಾಪತಿ ಮಾಡಿದರೂ ಶಿಕ್ಷೆ ಜಗನ್ನಾಥರಿಗೂ ಇರುತ್ತಿತ್ತು. ನಂತರ ಇವರು ಪಿಯುಸಿ ವಿಜ್ಞಾನ ಓದಿದ್ದರೂನಾಗಪುರ

ವಿಶ್ವವಿದ್ಯಾಲಯದಲ್ಲಿ ಪ್ರವೇಶದ ಮಾಹಿತಿ ಸಿಗದೇ ಹೋಗಿದ್ದರಿಂದ ಹೈದ್ರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲ ಯದಲ್ಲಿ ಬಿ.ಎ. ಸೇರಿ ಗಣಿತ ವಿಷಯ ಆಯ್ಕೆ ಮಾಡಿ ಕೊಂಡರು.[3]

ಉಸ್ಮಾನಿಯಾ ವಿಶ್ವವಿದ್ಯಾಲಯಲ್ಲಿ ಓದುತ್ತಿದ್ದಾಗನಾಗಪುರದಲ್ಲಿ 12 ಹೈಸ್ಕೂಲ್ ಮಕ್ಕಳು ರಾಷ್ಟ್ರಧ್ವಜಾರೋಹಣ ಮಾಡಲು ಹೋಗಿ ಗುಂಡಿಗೆ ಬಲಿಯಾದ ವಿಷಯವನ್ನುಪತ್ರಿಕೆಯಲ್ಲಿ ಓದಿದ ಚಂಡ್ರಿಕೆಯವರಿಗೆ ತಳಮಳವುಂಟು ಮಾಡಿತು. ಪುಟ್ಟ ಮಕ್ಕಳ ಬಲಿದಾನದಿಂದ ಪ್ರಭಾವಿತರಾದ ಚಂದ್ರಕಿಯವರು ತಾವೂ ದೇಶದ ಸ್ವಾತಂತ್ರ್ಯಕ್ಕಾಗಿ ನಿಜಾಮ ಸಂಸ್ಥಾನದ ಜನರ ವಿಮೋಚನೆಗಾಗಿ ಹೋರಾಡಬೇಕೆಂಬ ದೃಢ ನಿಲುವು ತಳೆದರು.

ಬ್ರಿಟಿಷ್ ಭಾರತದಲ್ಲಿ ವಂದೇಮಾತರಂ ಚಳುವಳಿ ಬಂಗಾಳ ವಿಭಜನೆ ವಿರೋಧಿಸಿ 30 ವರ್ಷದ ಹಿಂದೆಯೇ ನಡೆದಿದ್ದರೆ ಹೈದ್ರಾಬಾದ ಸಂಸ್ಥಾನದಲ್ಲಿ 'ವಂದೇಮಾತರಂ' 1938ರಲ್ಲಿ ವಿಶಿಷ್ಟ ರೂಪದಲ್ಲಿ ಆರಂಭವಾಗಿ ಹೈದ್ರಾಬಾದ್ ವಿಮೋಚನೆಗೆ ತನ್ಮೂಲಕ ಹೈದ್ರಾಬಾದ್ ಕರ್ನಾಟಕದ ವಿಮೋಚನೆಗೆ ಎರವಾಯಿತು.

ಚಂದ್ರಕಿಯವರು ಉಸ್ಮಾನಿಯಾ ವಿ.ವಿ.ಯಲ್ಲಿ ಎರಡನೇ ಬಿ.ಎ. ಓದುತ್ತಿದ್ದಾಗ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆಯ ಜವಾಬ್ದಾರಿಯನ್ನು ಇವರಿಗೇ ವಹಿಸಲಾಗಿತ್ತು. ಅಲ್ಲಿ ಪ್ರಾರ್ಥನಾ ಕೋಣೆಗೆ ಶೇರ್ವಾನಿ ಧರಿಸಿಕೊಂಡು ಬರಬೇಕೆಂಬ ನಿಯಮವಿತ್ತು. ಇದು ಹಾಸ್ಟೆಲಿನಲ್ಲಿದ್ದ ಹಿಂದೂ ವಿದ್ಯಾರ್ಥಿಗಳಿಗೆ ಮುಜುಗರವೆನಿಸುತ್ತಿತ್ತು. ಅದಕ್ಕಾಗಿ ಅದನ್ನು ರದ್ದುಪಡಿಸಬೇಕೆಂಬ ಮನವಿ ಸಲ್ಲಿಸಬೇಕೆಂದು ವಿದ್ಯಾರ್ಥಿಗಳು ತೀರ್ಮಾನಿಸಿದ್ದರು. ಇದೇ ವೇಳೆ ಪ್ರಾರ್ಥನಾ ಸಮಯದಲ್ಲಿ ತಾವು ವಂದೇಮಾತರಂ ಹಾಡಬೇಕೆಂಬ ಬಯಕೆ ವಿದ್ಯಾರ್ಥಿಗಳದಾಗಿತ್ತು.

ಈ ಸಂದರ್ಭದಲ್ಲಿ ಚಂದ್ರಕಿಯವರು ವಂದೇಮಾತರಂ ಚಳವಳಿಯ ಸಂಘಟನೆಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಹೋರಾಟದ ಯೋಜನೆ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಇವರ ನಾಯಕತ್ವದಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳ ತಂಡದವರು ವಿಶ್ವವಿದ್ಯಾಲಯದ ಮುಂದೆ ಎರಡು ಬೇಡಿಕೆಗಳನ್ನಿಟ್ಟರು. ಮೊದಲನೆಯದು ಶೇರವಾನಿ ಧರಿಸುವ ಕಡ್ಡಾಯ ನಿಯಮವನ್ನು ರದ್ದು ಮಾಡಬೇಕೆನ್ನು ವುದು. ಎರಡನೆಯ ಬೇಡಿಕೆ ರಾಷ್ಟ್ರಪ್ರೇಮದ ಸಂಕೇತವಾಗಿದ್ದ ವಂದೇಮಾತರಂ ಗೀತೆಯನ್ನು ಎರಡು ಪ್ರಾರ್ಥನಾ ಕೊಠಡಿ ಗಳಲ್ಲಿ ಹಾಡಲು ಅನುಮತಿ ಕೊಡಬೇಕೆನ್ನುವುದಾಗಿತ್ತು.[4]

ವಿದ್ಯಾರ್ಥಿಗಳ ಬೇಡಿಕೆಯಿಂದ ಗಂಭೀರವಾದ ವಿಶ್ವವಿದ್ಯಾಲಯ ಇದನ್ನು ಸ್ವಾತಂತ್ರ್ಯ ಚಳವಳಿಯ ಮುನ್ಸೂಚನೆ ಎಂದು ಬಗೆದು ಹಾಸ್ಟೆಲ್ ಮುಚ್ಚುವ ಎಚ್ಚರಿಕೆ ನೀಡಿತು. ಆದರೆ ವಿದ್ಯಾರ್ಥಿಗಳು ಹೆದರದೆ ತಮ್ಮ ಕೋಣೆಗಳಲ್ಲಿ 'ವಂದೇ ಮಾತರಂ' ಹಾಡಲಾರಂಭಿಸಿದರು. ಇದರಿಂದ ಕುಪಿತರಾದ ವಿಶ್ವವಿದ್ಯಾಲಯದ ಅಧಿಕಾರಿಗಳು ರಾತ್ರಿ ಎರಡು ಗಂಟೆ ಸುಮಾರಿಗೆ ವಿದ್ಯಾರ್ಥಿಗಳನ್ನು ಹೊರದಬ್ಬಿ ಕೀಲಿ ಹಾಕಿದರು.

ತ್ರಿಶಂಕುಸ್ಥಿತಿಗೆಬಂದುನಿಂತವಿದ್ಯಾರ್ಥಿಗಳಿಗೆಸಮಾಧಾನ ಹೇಳಿದಚಂದ್ರಕಿಯವರುನಾಗಪುರವಿಶ್ವವಿದ್ಯಾಲಯದಕುಲಪತಿ ಗಳಿಗೆ ಮನವಿ ಸಲ್ಲಿಸಿದರು. ಇಲ್ಲಿಂದ ಹೊರದೂಡಲ್ಪಟ್ಟ ಎಲ್ಲ ವಿದ್ಯಾರ್ಥಿಗಳಿಗೆ ನಾಗಪುರ ವಿಶ್ವವಿದ್ಯಾಲಯದ ಕುಲಪತಿ ಗಳಾದ ಕೇದಾರ ಎನ್ನುವವರು ಓದುವ ಅವಕಾಶ ಒದಗಿಸಿ ಬೇಸಿಗೆಯಲ್ಲಿಯೂ ತರಗತಿಗಳನ್ನು ನಡೆಸಿದರು. ವಿದ್ಯಾರ್ಥಿ ಗಳನ್ನು ಹೊರಹಾಕಿ ಚಳವಳಿ ಹತ್ತಿಕ್ಕಬೇಕೆಂಬ ವಿಶ್ವವಿದ್ಯಾ ಲಯದ ತಂತ್ರವೇ ಲಯವಾಗಿ ಹೋಯಿತು. ಮತ್ತೆ ಆ ಎಲ್ಲ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಪ್ರವೇಶ ದೊರೆಯಿತು.5 ವಂದೇಮಾತರಂ ಹೋರಾಟದ ಸ್ಫೂರ್ತಿ ಎರಡು ವರ್ಷಗಳ ವರೆಗೆ ಇದ್ದು ಹೈದ್ರಾಬಾದ್ ಕರ್ನಾಟಕದ ಕಾಲೇಜು ಗಳಲ್ಲಿಯೂ ಮುಂದುವರೆಯಿತು. ಹೋರಾಟದಲ್ಲಿಯೇ ಬಿ.ಎ., ಎಲ್.ಎಲ್.ಬಿ. ಮುಗಿಸಿದ ಚಂದ್ರಕಿಯವರು ಯಾದಗಿರಿಗೆ ವಾಪಾಸಾಗಿ 1941–42ರಲ್ಲಿ ವಕೀಲಿ ವೃತ್ತಿ ಆರಂಭಿಸಿ ದರು.[6]

ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಜೈಲು

ಇದೇ ವೇಳೆಗೆ ಮಹಾತ್ಮಾ ಗಾಂಧಿಜಿಯವರು 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂದು ಎಚ್ಚರಿಸಿ 'ಕರೋ ಯಾ ಮರೋ' (ಮಾಡು ಇಲ್ಲವೇ ಮಡಿ) ಎಂದು ಭಾರತೀಯ ರಿಗೆ ಕರೆಯಿತ್ತಿದ್ದರು. ಚಂದ್ರಕಿಯವರು ವಕೀಲಿ ವೃತ್ತಿಯಲ್ಲಿದ್ದರೂ

ಅವರ ಅಣ್ಣನವರು ಅವರ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲನೀಡಿದ್ದರಿಂದ ಸ್ವಾತಂತ್ರ್ಯ ಚಳವಳಿಗೆ ಮತ್ತೆ ಧುಮುಕಿದರು. ಹೈದರಾಬಾದಿನಿಂದ ಓದು ಮುಗಿಸಿ ಬರುವಾಗಲೇ ಇವರ ಮೇಲೆ ಪೊಲೀಸರ ಕಣ್ಣು ಬಿದ್ದಿತ್ತು. ನಿಜಾಮ ಸರಕಾರ ಆರ್ಯ ಸಮಾಜ ಸಂಘಟನೆಯನ್ನು ವಿರೋಧಿಸುತ್ತಿತ್ತು. ಅಲ್ಲದೇ ದಸರಾದಂತಹ ಮೆರವಣಿಗೆಗಳನ್ನೂ ನಿಷೇಧಿಸಿತ್ತು.

ಚಂಡ್ರಕಿಯವರು ಗಣೇಶ ಉತ್ಸವ, ದಸರಾದಂತಹ ಕಾರ್ಯಕ್ರಮಗಳ ಮೂಲಕ ಯುವಕರನ್ನು ಸಂಘಟಿಸುತ್ತಿದ್ದರು. ಹೀಗಾಗಿ ಸರಕಾರವು 1942ರಲ್ಲಿ ಇವರನ್ನು ಎರಡು ತಿಂಗಳ ಕಾಲ ಯಾದಗಿರಿಯ ಜೈಲಿನಲ್ಲಿರಿಸಿತು. ಆಮೇಲೆ 15 ದಿನಗಳ ಕಾಲ ಕಲಬುರ್ಗಿಯ ಜೈಲಿನಲ್ಲಿ ವಿಚಾರಾಣಾಧೀನ ಕೈದಿಯನ್ನಾಗಿರಿಸಿತು. ಇವರ ಮೇಲೆ ಇದ್ದ ಆರೋಪಗಳೆಂದರೆ ದಸರಾ ಸಮಯದಲ್ಲಿ ಆರ್ಯಸಮಾಜ ಸಂಘಟಿಸಿದ್ದು ಮತ್ತು ಸರ್ಕಾರದ ವಿರುದ್ಧ ದಸರಾ ಮೆರವಣಿಗೆಯನ್ನು ನಡೆಸಿದ್ದು. ಆರ್ಯ ಸಮಾಜದವರು ಆ ದಿನ ತ್ರಿರಂಗಿ ಧ್ವಜ ಹಾರಿಸಿದ್ದರು. ಅದರ ಫೋಟೋ ಚಂಡ್ರಕಿಯವರ ವಕೀಲರಿಗೆ ಲಭ್ಯವಾಗಿತ್ತು. ಅದರಲ್ಲಿ ಎಲ್ಲಿಯೂ ಚಂಡ್ರಕಿಯವರು ಕಾಣುತ್ತಿರಲಿಲ್ಲ.ನ್ಯಾಯಾಧೀಶರಿಗೆ ವಕೀಲರು ಆ ಫೋಟೋ ತೋರಿಸಿ ತನ್ನ ಕಕ್ಷಿದಾರನ ಮೇಲೆ ಸುಳ್ಳು ಆರೋಪ ಹೊರಿಸಲಾಗಿದೆ ಎಂದು ವಾದಿಸಿದರು. ಆರೋಪ ಸಾಬೀತಾಗದೆ ನ್ಯಾಯಾಲಯವು ಅವರನ್ನು ಬಿಡುಗಡೆಗೊಳಿಸಿತು.[7]

ಕಲಬುರ್ಗಿ ಜೈಲಿನಲ್ಲಿದ್ದಾಗ ಧರ್ಮವೀರ ನೆಲೋಗಿ (ಇವರು ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಧರ್ಮಸಿಂಗ್ ಅವರ ಅಣ್ಣ) ಅವರ ಪರಿಚಯವಾಗಿತ್ತು. ಧರ್ಮವೀರರೂ ಸ್ವಾತಂತ್ರ್ಯ ಹೋರಾಟಗಾರರು. ಬಿಡುಗಡೆ ಯಾದ ನಂತರ ಚಂಡ್ರಕಿಯವರು ಮತ್ತು ಧರ್ಮವೀರ ಅವರಿಬ್ಬರೂ ಹಳ್ಳಿ ಹಳ್ಳಿಗಳಿಗೆ ಹೋಗಿ ಸಭೆ ಸಮಾರಂಭ ಗಳನ್ನು ನಡೆಸಿ ಭಾಷಣ ಮಾಡಿ ಯುವಜನತೆ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸುವಂತೆ ಕರೆಯಿತ್ತರು. ಅವರು ಚಿತಾಪುರ, ಚಿಂಚೋಳಿಗಳಿಗೂ ಹೋಗುತ್ತಿದ್ದರು.8

ಮತ್ತೊಮ್ಮೆ ಬಂಧನ (1946)

ಜಗನ್ನಾಥ ಚಂಡ್ರಕಿಯವರು ಕರ್ನಾಟಕ ಪರಿಷತ್ತಿನ ಸದಸ್ಯರೂ ಆಗಿದ್ದರು. 1946ರಲ್ಲಿ ಯಾದಗಿರಿಯಲ್ಲಿ ನಡೆದಪರಿಷತ್ತಿನ ಸಮ್ಮೇಳನದಲ್ಲಿ ಇವರು ಸ್ವಾಗತಾಧ್ಯಕ್ಷರಾಗಿ ಕೆಲಸನಿರ್ವಹಿಸಿದರು. ಇವರ ಚಟುವಟಿಕೆಗಳನ್ನು ಕಂಡ ಪೊಲೀಸರು ಇವರನ್ನು ಬಂಧಿಸಿದರು. ಇವರಿಗೆ ಹದಿನಾರು ತಿಂಗಳ ಜೈಲು ಶಿಕ್ಷೆಯಾಯಿತು. ಇವರನ್ನು ಪೊಲೀಸ್ ಕಾರ್ಯಾಚರಣೆಯನಂತರವೇ ಬಿಡುಗಡೆಗೊಳಿಸಲಾಯಿತು.9 ಹೈದ್ರಾಬಾದ್ ಕರ್ನಾಟಕದ ವಿಮೋಚನೆಯು ರಾಷ್ಟ್ರದ ಸ್ವಾತಂತ್ರ್ಯ ಹೋರಾಟ ಕ್ಕಿಂತ ಭಿನ್ನವಾದ ನೆಲೆಯಲ್ಲಿದ್ದುದು ಸತ್ಯ. ಇಲ್ಲಿ ಒಂದೆಡೆ ಸರಕಾರ, ಇನ್ನೊಂದೆಡೆ ಸರ್ಕಾರದಂತೆಯೇ ವರ್ತಿಸುತ್ತಿದ್ದ ರಜಾಕಾರರತಂಡದಕಿರುಕುಳಗಳಮಧ್ಯೆ ಸ್ವಾತಂತ್ರ್ಯಹೋರಾಟ ಗಾರರು ಹೋರಾಡಬೇಕಾದ ಸಂಕಷ್ಟ ಸ್ಥಿತಿ ದೇಶಪ್ರೇಮಿ ಗಳದ್ದಾಗಿತ್ತು. ಅದೆಲ್ಲವನ್ನು ಎದುರಿಸಿದ ಜಗ್ನಾಥರಾವ್ ಚಂಡ್ರಕಿ ಯವರಂತಹ ಸಾವಿರಾರು ಹೋರಾಟಗಾರರು ತಮ್ಮ ಗುರಿ ಯನ್ನು ಸಾಧಿಸಿ ಹೈದ್ರಾಬಾದ್ ಕರ್ನಾಟಕವನ್ನು ವಿಮೋಚನೆ ಗೊಳಿಸಿದರು. 1948ರಿಂದ 1956ರವರೆಗೆ ಆಗಿನ ಹೈದ್ರಾಬಾದ್ ರಾಜ್ಯಕ್ಕೆ ಸೇರಿದ್ದ ಹೈದ್ರಾಬಾದ್ ಕರ್ನಾಟಕ 1956 ನವೆಂಬರ್ 1ರಂದು ಕರ್ನಾಟಕ ಏಕೀಕರಣ ಗೊಂಡಾಗ ಕರ್ನಾಟಕ ರಾಜ್ಯಕ್ಕೆ ಸೇರಿತು. [ಈ ಲೇಖನ ಸಿದ್ಧಪಡಿಸುವಾಗ ಹಲವು ಮಾಹಿತಿಗಳನ್ನೊದಗಿಸಿದ ಡಾ. ಪಿ.ನಾಗಭೂಷಣಗೌಡರಿಗೆ ಕೃತಜ್ಞತೆಗಳು.]

ಆಧಾರಸೂಚಿ ಮತ್ತು ಅಡಿಟಿಪ್ಪಣಿ

1. ಎಸ್.ಆರ್.ಮಣೂರು., ಹೈದ್ರಾಬಾದ್ ಕರ್ನಾಟಕ ವಿಮೋಚನೆ, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ, 2006, ಪುಟ 12–13. ರಜಾಕಾರರು ಎಂದರೆ 'ಮಜ್ಲಿಸ್–ಎ–ಇತ್ತೆಹಾದ್–ಉಲ್–ಮುಸಲ್ಮೀನ್' ಸಂಘಟನೆಯ ಸ್ವಯಂಸೇವಕರು. ಸಾಹಿತ್ಯಿಕವಾಗಿ 'ರಜಾಕಾರ' ಪದದ ಅರ್ಥ ದೇವರ ಸೇವೆಗೆ ತನ್ನನ್ನು ತಾನು ಅರ್ಪಿಸಿಕೊಂಡವನು ಎಂದು. ಆದರೆ ಹೈದ್ರಾಬಾದಿನಲ್ಲಿ ಅವರ ವರ್ತನೆ ಇದಕ್ಕೆ ವ್ಯತಿರಿಕ್ತವಾಗಿತ್ತು.
2. ಡಾ. ಸ್ವಾಮಿರಾವ್ ಕುಲಕರ್ಣಿ., ಜಗನ್ನಾಥರಾವ್ ಚಂಡ್ರಿಕೆ, ಚೇತನ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಮೈಸೂರು, 2006, ಪುಟ 3.

3. ಅದೇ. ಪುಟ 7. ಬಿ.ಎ. ವಿದ್ಯಾರ್ಥಿಗಳು ಕೂಡ ಗಣಿತ ತೆಗೆದುಕೊಳ್ಳಬಹುದಾಗಿತ್ತು. ತೀರಾ ಇತ್ತೀಚಿನವರೆಗೂ ಕರ್ನಾಟಕ ವಿ.ವಿ.ಯಲ್ಲೂ ಈ ಅವಕಾಶವಿದ್ದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು.
4. ದೇಸಾಯಿ ವಿ.ಹೆಚ್., ಫ್ರಮ್ ವಂದೇಮಾತರಂ ಟು ಜನಗಣಮನ, ಭಾರತೀಯ ವಿದ್ಯಾಭವನ, ಮುಂಬೈ, 1990, ಪುಟ 2.
5. ಕೆ.ಎಂ.ಮುನ್ಷಿ, ದಿ ಎಂಡ್ ಆಫ್ ಆ್ಯನ್ ಎರಾ, ಭಾರತೀಯ ವಿದ್ಯಾಭವನ, ಮುಂಬೈ, 1998, ಪುಟ 25–26.
6. ನಾಗಭೂಷಣಗೌಡ ಪಿ., ಪ್ರಿನ್ಲೀ ಸ್ಟೇಟ್ಸ್ ಆಫ್ ಮೈಸೂರ್ ಆ್ಯಂಡ್ ಹೈದ್ರಾಬಾದ್ (1935–36) ಅಪ್ರಕಟಿತ ಪಿಹೆಚ್.ಡಿ ಮಹಾಪ್ರಬಂಧ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2000.
7. ಡಾ. ಸೂರ್ಯನಾಥ ಯು. ಕಾಮತ್(ಸಂ)., ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ತೃತೀಯ ಸಂಪುಟ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, 1998, ಪುಟ 928–929.
8. ಗೋಪಾಲರಾವ್ ಹೇಜೀಬ್, ಹೈದ್ರಾಬಾದ್ ಮುಕ್ತಿ ಸಂಘರ್ಷ, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು, 2001, ಪುಟ 51.
9. ಬಸವರಾಜ ಪೊಲೀಸ ಪಾಟೀಲ (ಸಂ.) ಬಿಡುಗಡೆ, ಅಮರ ಪ್ರಕಾಶನ, ಗುಲಬರ್ಗಾ, 2002, ಪುಟ 319–320. ಯಾದಗಿರಿಯಲ್ಲಿ ಕರ್ನಾಟಕ ಪರಿಷತ್ತಿನ ಸಮ್ಮೇಳನ ಶ್ರೀ ಕಕ್ಕೇರಿ ಹಣಮಂತರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

❑

ಕದಂಬ ದೊರೆ ರವಿವರ್ಮ ಮತ್ತು ಮಹಾಮಂಡಳೇಶ್ವರಿ ಚೆನ್ನಭೈರಾದೇವಿಯ ಅಪರೂಪದ ನಾಣ್ಯಗಳು

– ಮಂದರ್ಕೆ ನಿತ್ಯಾನಂದ ಪೈ

ಶಾತವಾಹನರ ಪತನಾನಂತರ ಕರ್ನಾಟಕವನ್ನು ಆಳಿದ ಮೊಟ್ಟ ಮೊದಲನೇಯ ಕನ್ನಡ ರಾಜವಂಶವೆಂದುಪ್ರಸಿದ್ಧವಾಗಿರುವ 'ಕದಂಬ ಕುಲುಲ'ವನ್ನು ಕ್ರಿ.ಶ. 325ರ ಸುಮಾರಿಗೆ ಮಯೂರಶರ್ಮನು ಸ್ಥಾಪಿಸಿ ಬನವಾಸಿ (ವೈಜಯಂತಿ)ಯಿಂದ ಆಳ್ವಿಕೆಯನ್ನು ಪ್ರಾರಂಭಿಸಿದನು.

ಪದ್ಮಟಂಕ ಮಾದರಿಯ ಚಿನ್ನದ ನಾಣ್ಯಗಳನ್ನು ಕರ್ನಾಟಕದಲ್ಲಿ ಮೊದಲಾಗಿ ಟಂಕಿಸಲು ಪ್ರಾರಂಭಿಸಿದವರು ಬನವಾಸಿ ಕದಂಬರೆಂದು ಸಾಮಾನ್ಯವಾಗಿ ನಂಬಲಾಗಿತ್ತು. ಆದರೆ ಬನವಾಸಿ ಕದಂಬ ರಾಜರುಗಳ ಹೆಸರಿರುವ ಯಾವುದೇ ಪದ್ಮಟಂಕ ಮಾದರಿಯ ಚಿನ್ನದ ನಾಣ್ಯಗಳು ಮತ್ತು ಇನ್ನಿತರ ಲೋಹದ ಯಾವುದೇ ನಾಣ್ಯಗಳು ಇತ್ತೀಚಿನ ವರೆಗೂ ಲಭ್ಯವಾಗಿರಲಿಲ್ಲಾ. ಆದರೆ 2005ನೇ ಇಸವಿಯ ವೇಳೆಗೆ ಬನವಾಸಿ ಸಮೀಪದ 'ವರದಾನದಿ'ಯಲ್ಲಿ ಸಾವಿರಾರು ಸಂಖ್ಯೆಯ ಮಿಶ್ರಲೋಹದ (ಕಂಚು) ನಾಣ್ಯಗಳು ಸಿಗಲಾರಂಭಿಸಿದವು. ಇದರಲ್ಲಿ ಮಾನರಾಶಿ, ದೋಷರಾಶಿ, ತದುವರಾಶಿ ಶಶಾಂಕ ಕನ್ನಡ ಲಿಪಿ ಇರುವ ನಾಣ್ಯಗಳಿದ್ದವು. ಇವುಗಳಲ್ಲಿ 'ದೋಷ'ರಾಶಿ ಹೆಸರಿನ ನಾಣ್ಯಗಳನ್ನು ಕದಂಬ ದೊರೆ ಕೃಷ್ಣವರ್ಮ I ಮತ್ತು ಕೃಷ್ಣವರ್ಮ II ನ ನಾಣ್ಯಗಳೆಂದುಪ್ರಕಟಿಸಲ್ಪಟ್ಟಿವೆ. ಮಾತ್ರವಲ್ಲದೇ ಚಕ್ರ, ಶಂಕ, ಪದ್ಮ ಮುದ್ರಾಂಕಿತನಾಣ್ಯಗಳನ್ನು ಹೇರಳವಾಗಿ ದೊರಕಿವೆ.

ಮೂರು ವರ್ಷಗಳ ಹಿಂದೆ ನಾನು ಬನವಾಸಿಗೆ ಹೋದಾಗ ಸಮೀಪದ ಬಂಗಾರದ ಅಂಗಡಿಯಲ್ಲಿ ಇಕ್ಕೇರಿ ವರಹದ ಜತೆ ಕೆಲವು ಬನವಾಸಿ ಕದಂಬರ ನಾಣ್ಯಗಳುನೋಡಲು ಸಿಕ್ಕವು ಇವುಗಳಲ್ಲಿ ಪ್ರಸ್ತುತ ಪ್ರಬಂಧದ ವಿಷಯವಾಗಿರುವ ಅಪರೂಪದ ನಾಣ್ಯವು ಸಹ ಒಂದಾಗಿತ್ತು.

ನಾಣ್ಯದ ವಿವರ

ಲೋಹ : ಮಿಶ್ರಲೋಹ (ಕಂಚು) ತೂಕ : 0.6 ಗ್ರಾಂ ವ್ಯಾಸ : 12 ಮಿ.ಮಿ.

ಮುಂಭಾಗ : 5 ಗೆರೆಗಳ ನಡುವೆ ವೃತ್ತಾಕಾರದಲ್ಲಿ ಶ್ರೀ / ಕಾ / ಮಾ/ ಲ/ ಯ ಎಂಬ 5ನೇ ಶತಮಾನದ ಕನ್ನಡ ಲಿಪಿ ಇದ್ದು, ಈ 5 ಗೆರೆಗಳು ಕೂಡುವಲ್ಲಿ ಚುಕ್ಕೆಗಳಿಂದ ಮಾಡಿದ ಹೂವಿನ ವಿನ್ಯಾಸವಿದೆ.

ಹಿಂಬದಿ : 2 ಸಾಲಿನ ಕನ್ನಡ ಲಿಪಿಯಲ್ಲಿ ಶ್ರೀ ರವಿ/ ವರ್ಮ ಎಂದಿದ್ದು ನಾಣ್ಯದ ಬಲಬದಿಗೆ ಶಂಖದ ವಿನ್ಯಾಸವಿದೆ.

ಕದಂಬ ದೊರೆ ರವಿವರ್ಮನು (ಕ್ರಿ.ಶ. 485–518) ಮೃಗೇಶ ವರ್ಮನ ಮೂವರು ಮಕ್ಕಳಲ್ಲಿ ಓರ್ವನ ತಾಯಿ ಕೇಕಯ ರಾಜಕುಮಾರಿ ಪ್ರಭಾವತಿ ದೇವಿ. ರವಿವರ್ಮನು ಗಂಗ, ಪಲ್ಲವ, ಪುನ್ನಾಟ, ಆಳೂಪ ರಾಜರುಗಳಿಂದ ಕಪ್ಪ ಕಾಣಿಕೆಗಳನ್ನು ಪಡೆಯುತ್ತಿದ್ದನೆಂದು ಶಾಸನಗಳು ಹೇಳುತ್ತಿವೆ. ಬನವಾಸಿಯ ಸಮೀಪದ 'ಗುಡ್ನಾಪುರ'ದ ಶಾಸನವೊಂದು

ರವಿವರ್ಮನು 'ಕಾಮಜಿನಾಯ'ವನ್ನು ಕಟ್ಟಿಸಿದ ವಿಷಯವನ್ನು ದಾಖಲಿಸಿದೆ. 20' ಎತ್ತರ ಈ ಶಾಸನವನ್ನು ಪೇಟಿಕಾ ಶಿರೋಲಿಪಿಯಲ್ಲಿ ಬರೆದಿದ್ದು ಭಾಷೆ ಸಂಸ್ಕೃತವಾಗಿದೆ. 27 ಸಾಲಿನ ಈ ಬೃಹತ್ ಶಾಸನವು ಕದಂಬ ಕುಲದ ಬಗ್ಗೆ ಬೆಳಕನ್ನು ಚೆಲ್ಲಲಿದೆ. ಜಯಂತಿ ಸುರವದು ಮನ್ಮಥ ಕಾಮಿನಿ........ ಎಂದು ಪ್ರಾರಂಭವಾಗುವ ಈ ಶಾಸನದ 17ನೇ ಸಾಲಿನಲ್ಲಿ ಅಥಸ್ಯ ಕಾಮಜಿನಾಲಯಸ್ಯ (ಪೂಜಾ) ಸಂಸ್ಕಾರಾರ್ಥಮಸ್ ಮಹಾರಾಜ ಶ್ರೀ ರವಿವರ್ಮ ಇಡಿವೂರಗ್ರಾಮಮ್... ಎಂದಿದೆ. ಈ ಶಾಸನದ ಪ್ರಕಾರ ರವಿವರ್ಮನು ಮನ್ಮಥನಿಗಾಗಿ ತನ್ನ ಅರಮನೆಯ ಸಮೀಪ 'ಕಾಮಜಿನಾಲಯ'ವನ್ನು ಸ್ಥಾಪಿಸಿ ದೈನಂದಿನ ಪೂಜೆಗಳಿಗಾಗಿ ಹಲವು ಗ್ರಾಮವನ್ನು ಬಿಟ್ಟುಕೊಟ್ಟ ವಿವರಗಳಿವೆ. ಮಾತ್ರವಲ್ಲದೆ ಮಧುಮಾಸದಲ್ಲಿ ಅಥವಾ ಬೇರೆ ಯೋಗ್ಯ ಸಮಯದಲ್ಲಿ ಉತ್ಸವವನ್ನು ನಡೆಸಬೇಕೆಂದು ಅಜ್ಞಾಪಿಸಿದ್ದಾನೆ.

ಇದುವರೆಗೆ ಬನವಾಸಿ ಕಂದಬರ ಬಿರುದುಗಳಿರುವ ಮಿಶ್ರಲೋಹದ ನಾಣ್ಯಗಳು ದೊರಕಿದ್ದು ರಾಜನ ಹೆಸರಿರುವನಾಣ್ಯವೊಂದು ದೊರಕಿರುವುದು ಇದುವೇ ಮೊದಲನೆಯ ದಾಗಿದೆ. ಈ ಸಣ್ಣ ನಾಣ್ಯದಲ್ಲಿ ಸ್ಥಳದ ಅಭಾವವಿರುದರಿಂದ ಜಿನ ಪದವನ್ನು ಬಿಟ್ಟು ಕೇವಲ ಶ್ರೀ ಕಾಮಾಲಯವೆಂದು ಟಂಕಿಸಿರಬಹುದು. ಆದರಿಂದ ಈ ನಾಣ್ಯವು ಕದಂಬದೊರೆ ರವಿವರ್ಮನು ಕಾಮಾಜಿನಾಲಯವನ್ನು ಕಟ್ಟಿಸಿದ ನೆನಪಿಗಾಗಿ ಮುದ್ರಿಸಿದ ಸ್ಮರಣಾರ್ಥ ನಾಣ್ಯವಾಗಿದ್ದು ಕರ್ನಾಟಕದ ನಾಣ್ಯಪರಂಪರೆಗೆ ಮತ್ತೊಂದು ಅಪರೂಪದ ನಾಣ್ಯವು ಸೇರ್ಪಡೆಯಾದಂತಾಯಿತು.

ಚೆನ್ನಭೈರಾದೇವಿಯ ನಾಣ್ಯ

ವಿಜಯನಗರದ ಆಳ್ವಿಕೆಯ ಕಾಲದಲಿ ಬಲಿಷ್ಠರಾಗಿದ್ದ ಸಾಮಂತ ಅರಸು ಮನೆತನಗಳಲ್ಲಿ ಹಾಡುವಳ್ಳಿ (ಸಂಗೀತಪುರ)ಯ ಸಾಳ್ವರು ಮತ್ತು ನಗಿರೆ (ಗೇರು ಸೊಪ್ಪೆ)ಯ ಸಾಳ್ವರು ಪ್ರಮುಖರು. ಹಾಡುವಳ್ಳಿ ಮತ್ತು ಗೇರುಸೊಪ್ಪೆ ಅಕ್ಕಪಕ್ಕದ ಪ್ರಾಂತ್ಯಗಳಾಗಿದ್ದು ಎರಡು ಮನೆತನಗಳ ನಡುವೆ ಸಾಮರಸ್ಯ ವೈವಾಹಿಕ ಸಂಬಂಧಗಳು ನಡೆದಿದ್ದರೂ ಯಾವವಿ ಕಲಹದಿಂದ ಒಂದೇ ಬೇರಿಗೆ ಸೇರಿದ ಇವರುಗಳ ಅಲ್ಲಿ ತಾತ್ಕಾಲಿಕ ಹೊಂದಾಣಿಕೆಗಳಾಗಿದ್ದವು. ಅಂತಿಮವಾಗಿ ಈ ಒಳಜಗಳಕ್ಕೆ ಪೂರ್ಣವಿರಾಮ ಹಾಕಿದ ಕೀರ್ತಿ ಮಹಾಮಂಡಲೇಶ್ವರಿ ರಾಣಿ ಚೆನ್ನಭೈರಾದೇವಿಗೆ ಸೇರಿದೆ. ರಾಣಿ ಪದುಮಲ ದೇವಿ (ಕ್ರಿ.ಶ. 1528–40) ರಾಣಿ ಚೆನ್ನಾದೇವಿ (ಕ್ರಿ.ಶ. 1540–59)ಯ ನಂತರ ಪಟ್ಟಕ್ಕೆ ಬಂದ ಚೆನ್ನಭೈರಾದೇವಿ (ಕ್ರಿ.ಶ. 1554–1603) ಹೀಗೆ ಒಂದೇ ಮನೆತನದ ಮೂವರು ರಾಣಿಯರ ಆಳ್ವಿಕೆ ಒಂದು ಅಪೂರ್ವ ದಾಖಲೆ. ಸತತವಾಗಿ ಧೀಮಂತರಾಗಿ ಆಳಿದ 3 ತಲೆಮಾರಿನ ಈ ಕ್ಷಾತ್ರರಮಣೀಯರ ಸಾಹಸ ಚರಿತ್ರೆಯ ಅಪೂರ್ವ ಅಧ್ಯಾಯ.

ಇದುವರೆಗೆ ಸಾಳುವರ ಬೆಳ್ಳಿಯ ನಾಣ್ಯಗಳು ಸಾಕಷ್ಟು ಸಿಕ್ಕಿದರೂ ತಾಮ್ರದ ನಾಣ್ಯಗಳು ಬಹಳ ಅಪರೂಪ. ಬೆಳ್ಳಿಯನಾಣ್ಯಗಳಲ್ಲಿ ಕನ್ನಡ ಲಿಪಿಯ ಸಾಳುವಮಲ್ಲ, ನಾಗರಿ ಲಿಪಿಯ ರಾಜಾಧಿರಾಜ, ಶ್ರೀ ದೇವರಾಯ ಎಂಬ ಬರಹಗಳಿವೆ. ಇಂತಹ ನಾಣ್ಯಗಳ ಮುಂಭಾಗದಲ್ಲಿ ಸಿಂಹ, ಆನೆಗಳ ಚಿತ್ರವಿದ್ದು, ತಾಮ್ರದ ನಾಣ್ಯಗಳ ಮುಂಭಾಗದಲ್ಲಿ ವಿಜಯನಗರ ತಾಮ್ರದ ನಾಣ್ಯಗಳಲ್ಲಿ ಇರುವಂತಹ ಗಂಡಭೇರುಂಡ ಗರುಡನ ಚಿತ್ರವಿದ್ದು ಹಿಂಬದಿಯಲ್ಲಿ ಕನ್ನಡ ಲಿಪಿಯ ಸಾಳುವಮಲ್ಲ ಅಥವಾ ಸಾಳುವ ಮಲ್ಲನು ಎಂಬ ಬರಹವಿದೆ. ಆದರೆ ದೊರಕಿರುವ 3 ಗ್ರಾಂ.ತೂಕದ ನಿಂತಿರುವ ಗರುಡನ ವಿನ್ಯಾಸವಿರುವ ತಾಮ್ರದ ನಾಣ್ಯವು ದೊರಕಿದ್ದು ಹಿಂಬದಿಲ್ಲಿ ಕನ್ನಡ ಲಿಪಿಯ ಚೆನ್ನಭೈರಾದೇವಿ ಎಂಬ ಕನ್ನಡ ಬರಹವಿದೆ. ಆದರೆ ಈ ನಾಣ್ಯದಲ್ಲಿ ಚೆನ್ನ ಎಂಬ ಪದವು ಮಾತ್ರ ಕಾಣುತ್ತಿದ್ದು ಉಳಿದ ಅಕ್ಷರಗಳು ಅಸ್ಪಷ್ಟವಾಗಿದೆ. ಇತ್ತೀಚೆಗೆ ನನಗೆ ದೊರಕಿದನಾಣ್ಯದ ವಿವರಗಳು ಹೀಗೆವೆ.

ತೂಕ : 9 ಗ್ರಾಂ. ಲೋಹ : ತಾಮ್ರ ವ್ಯಾಸ : 18 ಮಿ.ಮಿ.

ಮುಂಬದಿ : ವೀರಾಸನದಲ್ಲಿ ಕುಳಿತಿರುವ ಗರುಡನ ಚಿತ್ರವಿದ್ದು ಗರುಡನ ಎಡಬದಿಗೆ ಚಕ್ರದ ವಿನ್ಯಾಸವಿದೆ.

ಹಿಂಬದಿ : ಎರಡು ಸಮಾನಾಂತರ ಗೆರೆಗಳು ಈನಾಣ್ಯವನ್ನು 3 ವಿಭಾಗಗಳಾಗಿ ವಿಂಗಡಿಸಿ ಮೇಲಿನ ಭಾಗದಲ್ಲಿ ಸಾಮಾನ್ಯವಾಗಿ ಸಾಳುವರ ಬೆಳ್ಳಿಯ ನಾಣ್ಯದ ಮೇಲಿರುವಂತಹ ಬಿಲ್ವ ಪತ್ರೆಯ ಎಲೆಗಳನ್ನು ಹೋಲುವ 3 ದಳಗಳಿದ್ದು

ಇಕೆಲ್ಲಗಳಲ್ಲಿ ಚಂದ್ರ ಸೂರ್ಯರಿದ್ದಾರೆ. 2ನೇ ಮತ್ತು 3ನೇ ಸಾಲಿನಲ್ಲಿ ಚೆಂನ ಬೈ / ರಾಂಬೆ ಎಂಬ 16ನೇ ಶತಮಾನದ ಕನ್ನಡ ಬರಹ ಇದೆ.

ಚೆನ್ನಭೈರಾದೀ ಅಮ್ಮ, ಚೆಂನಭೈರವ ಮಹಾದೇವಿ, ಚಂನಭೈರಾದೇವಿ, ಇಮ್ಮಡಿ ಚೆನ್ನಭೈರಾದೇವಿಯಮ್ಮ ಎಂದುಶಾಸನಗಳಲ್ಲಿ ಕರೆಸಿಕೊಂಡಿರುವ ಶ್ರೀ ಮನ್ಮಹಾ ಮಂಡಲೇಶ್ವರಿ ರಾಣಿ ಚೆನ್ನಭೈರಾದೇವಿಯು ಕಿರಿ ವಯಸ್ಸಿನಲ್ಲೇ ಪಟ್ಟಕ್ಕೇರಿ ಸುಮಾರು ಅರ್ಧಶತಮಾನಗಳವರೆಗೂ ಆಳಿದ್ದು ಭಾರತೀಯ ಇತಿಹಾಸದಲ್ಲೇ ಸರಿಸಾಟಿಯಿಲ್ಲದೇ ದಾಖಲೆಯಾಗಿದೆ. ಕ್ರಿ.ಶ. 1554–1603ವರೆಗೂ ಆಳಿದ ಚೆನ್ನಭೈರಾದೇವಿಯು ಕ್ರಿ.ಶ. 1556–62ರಲ್ಲಿ ಹಾಡುವಳ್ಳಿ (ಸಂಗೀತಪುರ) ಮತ್ತು 1562ರ ನಂತರ ಗೇರುಸೊಪ್ಪೆಯಿಂದ ಆಳ್ವಿಕೆ ಮಾಡಿದ್ದಳು. ಆದರೆ ಕೊನೆಯ 20 ವರ್ಷಗಳ ಕಾಲ ರಾಣಿಗೆ ತುಂಬಾ ಸಂಕಷ್ಟಮಯವಾಗಿತ್ತು. ಒಂದಡೆ ವಿದೇಶಿ ಪೋರ್ಚುಗೀಸರ ಕಿರುಕುಳ ಮತ್ತೊಂದೆಡೆ ಕೆಳದಿ ನಾಯಕರ ಆಕ್ರಮಣ ಇವರಿಬ್ಬರಿಗೂ ಗೇರುಸೊಪ್ಪೆಯ ಫಲವತ್ತಾದ ಭೂಮಿ ಅದರ ಆದಾಯ ಮತ್ತು ರಾಣಿಯ ವಶದಲ್ಲಿದ್ದ ಮಿರ್ಜಾನ್, ಬಟಕಳ, ಬಸರೂರು, ಹೊನ್ನಾವರ ಬಂದರಿನ ಮೇಲೆ ಕಣ್ಣಿತ್ತು. ಈ ಬಂದರುಗಳಿಂದ ವಿಜಯನಗರದ ಸಾಮ್ರಾಜ್ಯಕ್ಕೆ ಅರೇಬಿಯಾ, ಕೆಂಟಿ, ಪರ್ಶಿಯಾ ದೇಶಗಳಿಂದ ಹಡಗಿನಿಂದ ಬಂದ ಯುದ್ಧದ ಕುದುರೆಗಳನ್ನು ರವಾನಿಸುತ್ತಿದ್ದರು.ಪೋರ್ಚಿಗ್ರಿಸರು ಈ ಬಂದರನ್ನು ವಶಪಡಿಸಿಕೊಳ್ಳುವ ಹುನ್ನಾರ ವಿಜಯನಗರರಾಯ ಸದಾಶಿವರಾಯನಿಗೆ ಗೊತ್ತಿದ್ದರು ಅವನು ಚೆನ್ನಾಭೈರಾದೇವಿಯನ್ನು ಬೆಂಬಲಿಸಿದ್ದನು. ರಾಣಿಯ ನಾಣ್ಯದಲ್ಲಿರುವ ಗರುಡನ ಚಿತ್ರವು ವಿಜಯನಗರದ ಸದಾಶಿವರಾಯರ ಕಾಪ್ಪರದ ನಾಣ್ಯದಲ್ಲಿರುವ ಗರುಡನ ಚಿತ್ರವನ್ನು ಬಹಳಷ್ಟು ಹೋಲುವುದು ಗಮನಾರ್ಹವಾಗಿದೆ. ಸ್ವತಃ ಬಂದೂಕು ಹಿಡಿದು ಪೋರ್ಚುಗೀಸರನ್ನು ಎದುರಿಸಿದ ಕರಿಮೆಣಸಿನ ರಾಣಿಯೆಂದು ಪ್ರಸಿದ್ಧಳಾದ ಚೆನ್ನಭೈರಾದೇವಿಯ ಅಂತ್ಯ ಕೆಳದಿ ನಾಯಕರ ಸಮಯದಲ್ಲಾಯ್ತು. ಕೆಳದಿನೃಪವಿಜಯದ ಉಲ್ಲೇಖದಂತೆ ಕೆಳದಿಯ ಒಂದನೇ ವೆಂಕಟಪ್ಪನಾಯಕನು ತನ್ನ ಸೈನ್ಯವನ್ನು ಕಳುಹಿಸಿ ಗೇರುಸೊಪ್ಪೆ, ಹಾಡುವಳ್ಳಿಯನ್ನು ನಾಶಮಾಡಿ ರಾಣಿಯನ್ನು ಸೆರೆಹಿಡಿದು ಕೆಳದಿಗೆ ಕರೆದೊಯ್ದನು. ತನ್ನ ಜೀವಿತದ ಕೊನೆಕಾಲವನ್ನು ಸೆರೆಮನೆಯಲ್ಲೇ ಕಳೆದ ಮಹಾಮಂಡಲೇಶ್ವರಿ ಚೆನ್ನಭೈರಾದೇವಿಯು ಅಲ್ಲಿಯೇ ಅಸುನೀಗಿದಳು. ಹೀಗೆ ಸಾಳುವರ ರಾಜ್ಯ ಕೆಳದಿಯ ಪಾಲಾಯ್ತು.

ಇಂತಹ ಧೀಮಂತ ರಾಣಿಯ ಅಪರೂಪದ ಈನಾಣ್ಯವು ರಾಣಿಯ ಯಶೋಗಾಥೆಯನ್ನು ನೆನಪಿಸುವ ಒಂದು ಸಾಕ್ಷ್ಯವಾಗಿ ಉಳಿದುಕೊಂಡಿದೆ.

ಆಧಾರ ಗ್ರಂಥಗಳು

1. ಬಿ.ಆರ್. ಗೋಪಾಲ, ಬನವಾಸಿ ಕದಂಬಾಸ್, 1983.
2. ಎ.ವಿ. ನರಸಿಂಹ ಮೂರ್ತಿ, ಕರ್ನಾಟಕ ನಾಣ್ಯ ಪರಂಪರೆ, ಬೆಂಗಳೂರು, 2003.
3. ಸಂಯೋಜ ಪ್ರೊ. ಕಮಲಾ ಹಂಪನ್, ಮಹಾಮಂಡಲೇಶ್ವರಿ ರಾಣಿ ಚೆನ್ನಭೈರಾದೇವಿ.
4. ಡಾ. ಗುರುರಾಜ್ ಭಟ್, ಸ್ಟಡೀಸ್ ಇನ್ ತುಳುವಾ ಹಿಸ್ಟರಿ ಎಂಡ್ ಕಲ್ಚರ್.
5. ಡಾ. ರಮೇಶ್ ಕೆ.ವಿ. ತುಳುನಾಡಿನ ಇತಿಹಾಸ.

❑

ಕಾವಲುವಾಡದ ಪ್ರಾಚ್ಯಾವಶೇಷಗಳು ಅಥವಾ ಕಾವಲುವಾಡದ ಕಲೆ ವಾಸ್ತುಶಿಲ್ಪಗಳು

– ಪ್ರೊ. ಕೆ.ಸಿ. ಮಲ್ಲಿಗವಾಡ

ಸಹ್ಯಾದ್ರಿ ಬೆಟ್ಟಗಳ ಸಾಲಿನಲ್ಲಿ ಮಲೆನಾಡಿನ ಸೆರಗಿನ ಕಾರವಾರ ಜಿಲ್ಲೆ ಹಳಿಯಾಳ ತಾಲೂಕಿನ ಕೊನೆಯ ಹಳ್ಳಿ ಕಾವಲುವಾಡ. ಇಂದು ಇದು ಕಾಲವಾಡವೆಂದು ಕರೆಯಲ್ಪಡು ತ್ತದೆ. ಇದು ಹಳಿಯಾಳ ಕಲಘಲಗಿ ಹೆದ್ದಾರಿಯಲ್ಲಿದ್ದು, ತಾಲ್ಲೂಕಿನಿಂದ ಪೂರ್ವಕ್ಕೆ ಸುಮಾರು 25 ಕಿ.ಮೀ. ಅಂತರದಲ್ಲಿದೆ. ಸುತ್ತಲೂ ಅರಣ್ಯದಿಂದಾವೃತವಾಗಿದ್ದು ಬೆಟ್ಟಗಳ ಮಧ್ಯಭಾಗದಲ್ಲಿ ಗ್ರಾಮ ಪ್ರಚಲಿತವಿದೆ.

ಇಲ್ಲಿ ಕಲ್ಯಾಣ ಚಾಲುಕ್ಯರು, ಗೋವೆಯ ಕದಂಬರು, ಕೊಂಕಣದ ಅರಸರು, ನಾಯಕರು ಆಳಿಕೆ ನಡೆಸಿದ ಕುರುಹು ಗಳಿವೆ. ಪ್ರಮುಖವಾಗಿ ಸೋಮೇಶ್ವರ ದೇವಸ್ಥಾನ, ವೀರಗಲ್ಲು ಗಳು, ಶಿವಲಿಂಗ, ಸ್ಥಾವರಲಿಂಗ, ನಂದಿ, ಗಣೇಶ, ಕೋಡಿ ಬಸವಣ್ಣ, ಹನುಮಂತದೇವರು, ನಾಗರೇಖೆ, ತೊಗರಿಕೊಪ್ಪ, ಪೂಜಾಹೊಂಡ, ದ್ಯಾಮವ್ವ, ಗಣಪತಿಗುಡಿ ಮೊದಲಾದವು.

ಗ್ರಾಮದ ಹೊರವಲಯದಲ್ಲಿರುವ ಶ್ರೀ ಸೋಮೇಶ್ವರ ದೇವರು ಭಕ್ತರ ಆರಾಧ್ಯದೇವರು, ಇದೊಂದು ಪವಾಡಪುರುಷ ದೇವರೆಂದೇ ಖ್ಯಾತಿ ಪಡೆದಿದೆ. ಇದರ ಸುತ್ತಲೂ ಪ್ರಮುಖ ಐತಿಹಾಸಿಕ ಕುರುಹುಗಳು ಕೇಂದ್ರೀಕೃತವಾಗಿರುತ್ತವೆ. ವಿಶಾಲ ವಾದ ಪ್ರದೇಶದಲ್ಲಿ ನಿರ್ಮಾಣವಾಗಿರುವ ಶ್ರೀ ಸೋಮೇಶ್ವರ ದೇವಸ್ಥಾನವು ಉತ್ತರಾಭಿಮುಖವಾಗಿದೆ. ಜೀರ್ಣೋದ್ಧಾರನಡೆಯುತ್ತಿದ್ದು ಇಲ್ಲಿ ಪ್ರವೇಶದ್ವಾರ, ಸಭಾಮಂಟಪ, ಪ್ರದಕ್ಷಿಣೆಪಥ, ನವರಂಗ, ಗರ್ಭಗೃಹ ಸುತ್ತಲೂ ಪ್ರಾಂಗಣಗಳಿದ್ದು ಗರ್ಭಗೃಹದಲ್ಲಿ ಅತ್ಯಾಕರ್ಷಕವಾದ ಶಿವಲಿಂಗವಿದ್ದು, ಎದುರಿನ ಭಾಗದಲ್ಲಿ ಬೃಹದಾಕಾರವಾದ ನಂದಿ ವಿಗ್ರಹ ಸ್ಥಾಪನೆ ಯಾಗಿದೆ. ಮೂಲದೇವರಾದ ಶ್ರೀ ಸೋಮೇಶ್ವರ ಲಿಂಗ ಹಾಗೂ ನಂದಿವಿಗ್ರಹಗಳ ತೃಟಿತವಾಗಿದ್ದರಿಂದ, ಬೇರೆ ಬೃಹತ್‌ನಂದಿ ಹಾಗೂ ಶಿವಲಿಂಗವನ್ನು ಪ್ರತಿಷ್ಠಾಪಿಸಿರುವುದು ಇಲ್ಲಿನ ವಿಶೇಷತೆ. ಮೊದಲಿದ್ದನಂದಿ, ಈಶ್ವರಲಿಂಗಗಳನ್ನು ದೇವಾಲಯದ ಮಧ್ಯಭಾಗದಲ್ಲಿ ಪ್ರತ್ಯೇಕವಾಗಿ ಪ್ರತಿಷ್ಠಾಪನೆಗೈದಿದ್ದಾರೆ.

ಶ್ರೀ ಸೋಮೇಶ್ವರ ದೇಗುಲ ಅಪೂರ್ಣವಾಗಿದ್ದು 24 ಕಂಬಗಳ ಶಿಲಾಮಂಟಪವಾಗಿದೆ. ಮುಂದಿನ ಭಾಗದಲ್ಲಿ ಭಕ್ತರು ಕೆಂಪು ಹೆಂಚಿನ ಛಾವಣಿ ನಿರ್ಮಿಸಿದ್ದಾರೆ. ಸುಮಾರು 29 ಉದ್ದ 20 ಅಗಲವಾಗಿರುವ ದೇವಸ್ಥಾನವು ಗರ್ಭಗೃಹದ ಮೇಲ್ಭಾಗದ ಛತ್ರಿನಲ್ಲಿ ಶಿಖರ ನಿರ್ಮಿಸಿದ್ದಾರೆ. ಪ್ರವೇಶದ್ವಾರ ಅಷ್ಟೊಂದು ಅಲಂಕಾರವಾಗಿರದೇ ಸಭಾಮಂಟಪ 4 ಕಂಬ ಗಳಿಂದ ನಿರ್ಮಾಣವಾಗಿದೆ. ಬೃಹದಾಕಾರದ, ವೃತ್ತಾಕಾರದ ಕಪ್ಪುಶಿಲೆಯಿಂದ ನಿರ್ಮಿಸಿದ ಕಂಬಗಳು ಗಗ್ಗರಿ, ಸುರಳಿಗೆತ್ತನೆ, ಲತೆ, ಪುಷ್ಪಗಳಿಂದ ಕೆತ್ತಲ್ಪಟ್ಟಿವೆ. ಬೋದಿಗೆಗಳು, ತೊಲೆಯ ಮೇಲೆ ಹೇರಲ್ಪಟ್ಟ ಕುದುರೆ ಮುಖದ ಅಲಂಕಾರದೊಂದಿಗೆ ಕಂಗೊಳಿಸುತ್ತಿವೆ. ಸುತ್ತಲೂ ಪ್ರದಕ್ಷಿಣಾ ಪಥವಿದೆ. ಇಲ್ಲಿ ತೃಟಿತ ಸಾಲು ಭಂಜಿಕೆಯರ ವಿಗ್ರಹಗಳನ್ನು, ಗಣಪತಿ ವಿಗ್ರಹಗಳನ್ನುಪ್ರತಿಷ್ಠಾಪಿಸಲಾಗಿದೆ. ಎಡಭಾಗದಲ್ಲಿ ಮಹಿಷಾಸುರ ಮರ್ಧಿನ ವಿಗ್ರಹವನ್ನು ನಿಲ್ಲಿಸಲಾಗಿದೆ.

ದೇವಾಲಯದ ಗರ್ಭಗೃಹದಲ್ಲಿ ಶ್ರೀ ಸೋಮೇಶ್ವರಲಿಂಗವಿದ್ದು ಸುಮಾರು 3.2 ಅಡಿ ಇದೆ. ಈಗ ಭಕ್ತರು ಬೆಳ್ಳಿಯಿಂದ ತಯಾರಿಸಿದ ಮುಖವಾಡವನ್ನು ವಿಗ್ರಹದ ಮೇಲೆ ಅಳವಡಿಸಿದ್ದಾರೆ. ಸುಮಾರು 10 ಉದ್ದಗಲದ ಗರ್ಭಗೃಹ ಯಾವದೇ ಅಲಂಕಾರ ಹೊಂದಿಲ್ಲ. ಮೇಲ್ಛತ್ತಿನಲ್ಲಿ ಸುಂದರ ವಾಗಿ ತಾವರೆ ಹೂ ಬಿಡಿಸಿರುವ ಕೆತ್ತನೆ ಇದೆ. ಗೋಪುರ ಅಂಡಾಕಾರವಾಗಿಸುಮಾರು10ಅಡಿಎತ್ತರವಾಗಿನಿರ್ಮಾಣ ವಾಗಿದೆ. ಸರಳಗೆತ್ತನೆಯಲ್ಲಿ ಶಿಖರವು ಅಲಂಕಾರಗೊಂಡಿದೆ.

ತೃಟಿತ ಗಣೇಶ

ಕಪ್ಪುಮಿಶ್ರಿತಬಳಪದಕಲ್ಲಿನಲ್ಲಿ ಸುಂದರವಾಗಿ ಕೊರೆಯ ಲ್ಪಟ್ಟಿವೆ. ಚತುರ್ಭುಜ, ಬಲಗೈಲಿ ಅಭಯಹಸ್ತ ತ್ರಿಶೂಲ, ಎಡಗೈಲಿ, ಬ್ರಹ್ಮಲೇಖ, ಬೆಣ್ಣೆಉಂಡಿ, ಧರಿಸಿದ್ದಾನೆ. ಕರ್ಣ ಕುಂಡಲ ಎಡಮುರಿ, ತಲೆ ಮೇಲೆ ಕಿರೀಟ ಕಾಲಲ್ಲಿ ಸರಪಳಿ ಗೆಜ್ಜೆ ಇದೆ. ಆರಾಮಾಸನದಲ್ಲಿ ಕೂರಿಸಲಾಗಿದೆ.

ಸಪ್ತಮಾತೃಕೆಯರ ವಿಗ್ರಹ

ಚಾಲುಕ್ಯ ಶೈಲಿಯಲ್ಲಿರುವ ವಿಗ್ರಹಗಳು ತೃಟಿತವಾಗಿವೆ. ಕೆಳಭಾಗದಲ್ಲಿ ವಾಹನಗಳಾದ ನಂದಿ, ಗಜ, ನವಿಲು, ವರಾಹ ಗಳು ಇವೆ. ಲಕ್ಷ್ಮಿ, ಸರಸ್ವತಿ, ಗಿರಿಜೆ, ಪಾರ್ವತಿ ವಿಗ್ರಹಗಳು ತಮ್ಮ ಕಳೆಯನ್ನು ಕಳೆದುಕೊಂಡಿವೆ. ಸುಮಾರು 3ಥ6 ಅಳತೆ ಕಲ್ಲಿದೆ.

ನಿಂತ ಭೈರವ

ತೃಟಿತವಾಗಿವೆ. ಚತುರ್ಭುಜ 2ಥ1 ೪ ಅಳತೆ, ಬ ಲಗೈಲಿ ಡಮರುಗ, ಖಡ್ಗ, ಎಡಗೈಯಲ್ಲಿ ತ್ರಶೂಲ, ಕೆಳಭಾಗದಲ್ಲಿ ಸೇವಕಿಯರು ಸೇವೆಗೆ ಅಣಿಯಾಗಿದ್ದಾರೆ. ಪೀಠದ ಮೇಲೆ ವೃಚ್ಛಿಕವಿದ್ದು, ತಲೆ ಜಠಾಧಾರಿಯಾಗಿದ್ದು, ಕರ್ಣಕುಂಡಲವಿದೆ. ಸುತ್ತಲೂ ಪ್ರಭಾವಳಿ ಸುಂದರವಾಗಿ ಅಲಂಕಾರಿಕವಾಗಿದೆ.

ಬೃಹದಾಕಾರವಾದ ನಂದಿ

ಇದು ಅತ್ಯಾಕರ್ಷಕವಾದ ವಿಗ್ರಹ. ಕಪ್ಪು ಮಿಶ್ರಿತ ಬಳಪದ ಕಲ್ಲಿನಲ್ಲಿ ಕೆತ್ತಲ್ಪಟ್ಟಿದು. ಶಿಲ್ಪಿಯ ಕೈ ಚಳಕದಿಂದ ಸುಂದರವಾಗಿ ಅಲಂಕೃತಗೊಂಡಿವೆ. ಮಲಗಿದ ಭಂಗಿಯಲ್ಲಿರುವ ನಂದಿ ವಿಗ್ರಹ 6 ಅಡಿ ಉದ್ದ 2 ಅಡಿ 5 ಅಂಗುಲ ಎತ್ತರವಾಗಿದೆ. ಎಡಗಾಲು ಮುಂದೆ ಮಾಡಿ ಬಲಗಾಲು ಮಡಿಚಿ, ಹಿಂಗಾಲು ಮಡಿಸಿದ್ದಾನೆ. ಕೊರಳಲ್ಲಿ ಗೆಜ್ಜೆಸರ, ಗಂಟೆ, ಸರಪಳಿ, ಗುಮರಿ, ತತಿಮಲ್ಲಿ ಹಣೆಕಟ್ಟು, ಇಣೆ, ಶಿರಗಂಗೆದೊಗಲು ಬೆನ್ನಿನ ಮೇಲೆ ಜೂಲ ಧರಿಸಿ ಸುತ್ತಲೂ ಜಲಹರಿ ಇದೆ. ಇಂದು ದೇಗುಲದ ಆವರಣದ ಹೊರವಲಯದಲ್ಲಿದೆ.

ಶಿವಲಿಂಗ

ದೇವಾಲಯದ ಹೊರ ಆವರಣದಲ್ಲಿದ್ದು ಕಮಲ ದಾಕಾರವಾದ ಪೀಠದ ಮೇಲೆ ಪ್ರತಿಷ್ಠಾಪನೆಗೊಂಡಿದ್ದಾನೆ. 3 ಅಡಿ ಎತ್ತರ ವೃತ್ತಾಕಾರವಾಗಿದ್ದು ಪೀಠ ಬಾಣ ಜಲಹರಿ ಇದೆ. ಗರ್ಭಗೃಹದ ಬಾಗಿಲವಾಡೆಗಳು ಸುಂದರವಾಗಿ ಅಲಂಕೃತವಾಗಿವೆ. ಚೇಕಲ್ಲಿನ ಎಡಬಲಗಳಲ್ಲಿ ಸುರಳಿ ಕೆತ್ತನೆ ಲತೆ, ಕುಂಜಗಳನ್ನು ಸರಳಗೈಯಲ್ಲಿ ಬಿಡಿಸಲಾಗಿದೆ. ಬಾಗಿಲ ಹಣೆಪಟ್ಟಿಯ ಮಧ್ಯ ಗಜಲಕ್ಷ್ಮಿ ವಿಗ್ರಹವಿದೆ.

ಮಹಿಷಾಸುರ ಮರ್ಧಿನಿ

ಇಂದು ದೇವಸ್ಥಾನದ ಹೊರಭಾಗದ ಕೃತ್ರಿಮ ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿರುವ ಮಹಿಷಮರ್ದಿನಿ ವಿಗ್ರಹ ಚಿತ್ತಾಕರ್ಷಕವಾಗಿದೆ. ವೀರಾವೇಶದಿಂದ ಶುಂಬ, ವಿಶುಂಬ ರನ್ನು ವಧೆ ಮಾಡಲು ತ್ರಿಶೂಲ ಹಿಡಿದ ಖಡ್ಗ, ಡಾಲು, ಕತ್ತಿ, ಪಾಶಗಳಿಂದ ವೈರಿಯ ಮರ್ದನ ಮಾಡುತ್ತಿರುವ ಸಂದರ್ಭದಲ್ಲಿ ವೈರಿಯ ವಾಹನ ಮಹಿಷ (ಕೋಣನ ತಲೆಯನ್ನು ಸಿಂಹವು ಕಚ್ಚಿ ರಕ್ತಮಯವಾದ ಸಂದರ್ಭವು ವಿಗ್ರಹಕ್ಕೆ ವಿಶೇಷ ಮೆರಗು ತರುವಂತಿದೆ. ಅಷ್ಟಭುಜ ಇದ್ದು ಕೆಳಗಡೆ, ವೈರಿಗಳು ತಮ್ಮ ಸಾಹಸ ಮೆರೆಯುತ್ತಿದ್ದಾರೆ.

ಕೆಳಗೆ ಬಿದ್ದ ವೈರಿಯ ಶಿರಚ್ಛೇದ ಮಾಡಿ ಸ್ವರ್ಗಕ್ಕೆ ಕಳಿಸುತ್ತಿರುವ ಮನಮೋಹಕ ಚಿತ್ರವಾಗಿದೆ. ವಿಗ್ರಹದ ಶ್ರೀದೇವಿ ಬಲಗೈಯಲ್ಲಿದ್ದು ತ್ರಿಶೂಲದಿಂದ ವೈರಿಗೆ ತಿವಿಯುತ್ತಿರುವ ಇದು ಕಲ್ಯಾಣ ಚಾಲುಕ್ಯರ ಕಾಲದ್ದಾಗಿದ್ದೂ ಮೇಲ್ಭಾಗದಲ್ಲಿ ಪ್ರಭಾವಳಿಯಲ್ಲಿ ಚಿತ್ತಾಕರ್ಷಕ ಕುಶಲ, ಕಲಾಕುಸುರಿನ ಕೆತ್ತನೆ ಬಿಡಿಸಿದ್ದಾರೆ. ಕೊರಳಲ್ಲಿ ಕಂಠಹಾರ, ಕೇಶರಾಶಿ, ಕರ್ಣಕುಂಡಲ, ಕಿರೀಟ, ಎದೆಪಟ್ಟಿ, ನಡಪಟ್ಟಿ, ಕೈಕಟ್ಟು, ಕೈಬಳೆ, ಮೊದಲಾದವುಗಳಿಂದ ವಿಗ್ರಹ ಅಲಂಕಾರ ಗೊಂಡಿದೆ.

ಆಶೀನ ಭೈರವ

ದೇವಾಲಯದ ಹೊರವಲಯದಲ್ಲಿರುವ ಆಶೀನ ಭೈರವ ವಿಗ್ರಹ 1 ಅಡಿ ಎತ್ತರ, 1 ಅಡಿ ಅಗಲವಿದ್ದು,ದ್ವಿಭುಜ, ಬಲಗೈಲಿ ಪಾಶ, ಎಡಗೈಲಿ ತ್ರಿಶೂಲ, ಕಿವಿಯಲ್ಲಿ ಕರ್ಣಕುಂಡಲ, ಕಂಠಹಾರ ಎದೆಗವಚ, ಸುತ್ತಲೂ ಪ್ರಭಾವಳಿ ಇದೆ. ಬಲಗಾಲು ಮುಂದೆ ಮಾಡಿ ಎಡಗಾಲು ಮಡಿಸಿ ಆರಾಮಾಸನದಲ್ಲಿ ತೊಡೆಮೇಲೆ ಕೈಯೂರಿ ಕುಳಿತಿದ್ದಾನೆ. ಭೂತನಾಥ ಕಲ್ಲು

ಇದೊಂದು ಭಕ್ತರಿಗೆ ಅಚ್ಚರಿಯನ್ನುಂಟು ಮಾಡು ವಂಥಹ ಶಿಲೆ. ಬಾದಾಮಿಯಲ್ಲಿರುವ ಭೂತನಾಥ (ಭೂತೇಶ್ವರ) ದೇವಾಲಯದಲ್ಲಿದ್ದ ವಿಗ್ರಹದಂತೆ ಸುಮಾರು 3ಥ2 ಅಳತೆಯ ಕಲ್ಲಿನಲ್ಲಿ ಚಿಕ್ಕ ಚಿಕ್ಕ ಗೆರೆಗಳನ್ನು ಕೊರೆದು ಭೂತದಾಕಾರದ ವಿಗ್ರಹ ವಿಗ್ರಹವನ್ನು ನಿರ್ಮಿಸಿ ಭೂತ, ಪಿಶಾಚಿಗಳ ಭಯದಿಂದ ಮುಕ್ತರಾಗಲು ಈ ಶಿಲೆ ಹೊರಡಿಸಲಾಗಿದೆ.

ವೀರಗಲ್ಲುಗಳು

ಕಾವಲುವಾಡ ವೈರಿ ಪಡೆಗಳನ್ನು ದೂರದಿಂದಲೇ ವೀಕ್ಷಿಸುವ ವೀಕ್ಷಣಾ ಸ್ಥಳ, ಗೋವಾ ಕದಂಬರ ಹಾಗು ಕಲ್ಯಾಣದ ಚಾಲುಕ್ಯರ ಕಾಲದ ಆಡಳಿತದ ಗಡಿಭಾಗ ಇದಾಗಿದೆ. ದೊಡ್ಡ ಗುಡ್ಡದ ಪಶ್ಚಿಮಕ್ಕೆ ಕದಂಬರು ಗುಡ್ಡದ ಪೂರ್ವಕ್ಕೆ ಕಲ್ಯಾಣದ ಚಾಲುಕ್ಯರು ಆಳಿಕೆ ನಡೆಸಿದ ದ್ಯೋತಕವಾಗಿದೆ. ಕ್ರಿ.ಶ. 12ನೇ ಶತಮಾನದ ಅಂತ್ಯ ಭಾಗದಲ್ಲಿ ಆಳಿಕೆ ನಡೆಸು ತ್ತಿದ್ದು ಅರಸ ಹೋರಾಟದ ವಿಜಯ ದ್ಯೋತಕವಾಗಿ ಇಲ್ಲಿ ಹಲವಾರು ವೀರಗಲ್ಲುಗಳನ್ನು ಹೊರಡಿಸಲಾಗಿದೆ. ಒಟ್ಟು 4 ಬೃಹದಾಕಾರವಾದ ವೀರಗಲ್ಲುಗಳಿವೆ. ಅರಳಿಮರದ ಕೆಳಗೆ ಕಟ್ಟೆಯ ಗೋಡೆಗೆ ಆನಿಸಿ ನಿಲ್ಲಿಸ ಲಾಗಿದೆ. ಪಶ್ಚಿಮಾಭಿಮುಖವಾಗಿರುವ ಶಿಲೆ ಮಹತ್ವಪೂರ್ಣ ವಾಗಿದೆ. ಇದು 3 ಪಟ್ಟಿಕೆಗಳನ್ನು ಹೊಂದಿದೆ. ಮಧ್ಯದ 2 ಚಿಕ್ಕ ಪಟ್ಟಿಕೆಯಲ್ಲಿ 2–3 ಸಾಲುಗಳ ಶಾಸನವಿರುವುದು ಅಸ್ಪಷ್ಟವಾಗಿದೆ. ಕೆಳಭಾಗದ ವೀರನು ಹಾಗು ವೈರಿಗಳ ನಡುವೆನಡೆದ ಹೋರಾಟದ ಚಿತ್ರಣವಿದೆ. ವೀರ ಏಕಾಂಗಿಯಾಗಿದ್ದು, ಕೈಯಲ್ಲಿ ಖಡ್ಗ, ಎಡಗೈಲಿ ಡಾಲು ಹಿಡಿದಿದ್ದಾನೆ. ಎದುರಿಗಿರುವ ವೈರಿ ಸೈನಿಕರನ್ನು ಹೊಡೆದುರುಳಿಸಲು ಬಲಗೈ ಖಡ್ಗದಿಂದ ವೈರಿಯ ಅಶ್ವ ಮುಖಕ್ಕೆ ತಿವಿದಿದ್ದಾನೆ. ವೈರಿ ಪಡೆಯಲ್ಲಿ 7 ಜನ ಸೈನಕರ ಚಿತ್ರಣವಿದ್ದು, ಅವರು ತಮ್ಮ ಕೈಯಲ್ಲಿ ಕಪಾರಿ, ಬಿಲ್ಲು, ಬಾಣ, ಕತ್ತಿ, ಗುರಾಣಿ ಹಿಡಿದು ವೀರನನ್ನು ಹೊಡೆದುರುಳಿಸಲು ಸೆಣಸುತ್ತಿದ್ದಾರೆ. ವೀರನ ಪಾದದ ಅಡಿಯಲ್ಲಿ ವೈರಿಯ ಹೆಣಗಳು ಕಂಡುಬರುತ್ತಿವೆ. ವೀರನ ಹಿಂದೆ ಅಂಗರಕ್ಷಕನಿದ್ದಾನೆ. 2ನೇ ಪಟ್ಟಿಕೆಯಲ್ಲಿ ಸ್ವರ್ಗಾರೋಹಣ ಗೈಯ್ಯುತ್ತಿರುವುದು ತಿಳಿಯುತ್ತದೆ. ದೇವಲೋಕದಿಂದ ದೇವಕನ್ನಿಕೆಯರು ವೀರ ಕುಳಿತಪಲ್ಲಕ್ಕಿಯನ್ನು ಹೊತ್ತೊಯ್ಯುತ್ತಿರುವ ಹೈಮಾಲಡ ಹಿಡಿದು, ಛತ್ರಿ ಚಾಮರ, ಬಾಳೆ ಮಂಟಪಗಳಿಂದಲಂಕೃತವಾಗಿರುವ ದೃಶ್ಯ ಚಿತ್ತಾಕರ್ಷಕವಾಗಿದೆ. ಎಡಬಲಗಳಲ್ಲಿ 2 ಜನ ಒಟ್ಟು 6 ಜನ ಸೇವಕಿಯರು ಸ್ವರ್ಗಕ್ಕೆ ಕರೆದೊಯ್ಯುವ ಚಿತ್ರಣವಿದೆ. ವೀರನು ಪಲ್ಲಕ್ಕಿಯಲ್ಲಿ ಕುಳಿತಿದ್ದಾನೆ. 3ನೇ ಪಟ್ಟಿಕೆಯಲ್ಲಿ ವೀರನು ಸ್ವರ್ಗದಲ್ಲಿದ್ದು, ಮಧ್ಯಭಾಗದಲ್ಲಿ ಶಿವಲಿಂಗವನ್ನುಪೂಜಿಸುತ್ತಿರುವ ಯತಿ ಇದ್ದು ಬಲಕ್ಕೆ ನಂದಿ, ಎಡಕ್ಕೆ ಗೋವುಗಳಿದ್ದು, ಮೇಲೆ ಸೂರ್ಯ ಚಂದ್ರರನ್ನು ಕೊರೆದಿದ್ದಾರೆ.

2ನೇ ವೀರಗಲ್ಲು

ಪಟ್ಟಿಕೆಯಲ್ಲಿರುವ ಶಾಸನಗಳ ಸಾಲಿನಲ್ಲಿ ಗೋವಾ ಕದಂಬರ ಅರಸ ಗೋವಲದೇವನು ಚಾಲುಕ್ಯ ಅರಸ 3ನೇ ಸೋಮೇಶ್ವರನ ಮಾಂಡಲೀಕ ಜನ್ನರಸನ ಗೋವು (ತರು) ಗಳನ್ನು ಕದ್ಯೊಯ್ಯುವಾಗ ಮಾಂಡಲೀಕ ಜನ್ನನು ಸಾಹಸದಿಂದ ವೈರಿಗಳ ಜೊತೆ ಹೋರಾಡಿ ಅವರನ್ನು ಹಿಮ್ಮೆಟ್ಟಿಸಿ ಗೋವು ಗಳನ್ನು ರಕ್ಷಿಸಿದ ಸ್ಮರಣಾರ್ಥ ಈ ಶಾಸನವನ್ನು ಕೊರೆಯಿಸಿರುವದು

ಸಾಕ್ಷಿಯಾಗುತ್ತದೆ. ಈ ಶಿಲೆಯಲ್ಲಿ 3 ಪಟ್ಟಿಕೆಗಳಿದ್ದು, ವೀರನು ಏಕಾಂಗಿಯಾಗಿ ಹೋರಾಡುತ್ತಿದ್ದಾನೆ. ತನ್ನ ಬಲಗೈಯಲ್ಲಿ ಗುರಾಣಿ ಹಿಡಿದು ವೈರಿಯ ಅಶ್ವದ ಮುಖಕ್ಕೆ ಹೊಡೆದಿದ್ದಾನೆ. ಎಡಗೈಯಲ್ಲಿ ಡಾಲು ಹಿಡಿದು ಎದೆಗವಚ, ಭುಜಗವಚ, ನಡಪಟ್ಟಿ, ಖಡ್ಗಕವಚ ತೊಟ್ಟು ಭುಜಬಲದಪರಾಕ್ರಮ ತೋರಿಸುತ್ತಿದ್ದಾನೆ. ವೈರಿಯ ಬೆನ್ನಿಗೆ ಖಡ್ಗದಿಂದ ತಿವಿದ ಕಾರಣ ವೈರಿ ಪಡೆಯಿಂದ ಗೋವುಗಳನ್ನು ರಕ್ಷಿಸಿರುವ ಭಯಾನಕ ದೃಶ್ಯವನ್ನು ಶಿಲ್ಪಿ ಅಚ್ಚುಕಟ್ಟಾಗಿ ಕೊರೆದಿದ್ದಾನೆ. ವೀರನೊಂದಿಗೆ ವೈರಿ ಪಡೆಯಲ್ಲಿ ಆರು ಜನ ಸೈನಿಕರು, ಖಡ್ಗ, ಬಿಲ್ಲು ಬಾಣ, ಗುರಾಣಿಗಳಿಂದ ಹೋರಾಡುತ್ತಿರುವದು ಮನಮೋಹಕ, ಇದೇ ಪಟ್ಟಿಕೆಯಲ್ಲಿ ವೀರನ ಹಿಂಭಾಗದಲ್ಲಿ ಒಂದೇ ಸಾಲಿನಲ್ಲಿ ಆಕಳುಗಳು ನಿಂತ ಭಂಗಿಯಲ್ಲಿ ಚಿತ್ರಿಸಿರುವದು ಗಮನಾರ್ಹ. ಮೇಲಿನ ಭಾಗದಲ್ಲಿ ಚಿಕ್ಕ 4 ಸಾಲಿನ ಶಾಸನವು ಅಸ್ಪಷ್ಟವಾಗಿವೆ. 3ನೇ ಪಟ್ಟಿಕೆಯಲ್ಲಿ ಸಾಮಾನ್ಯವಾಗಿ ಎಲ್ಲ ವೀರಗಲ್ಲಿನಲ್ಲಿರುವಂತೆ ದೇವಕನ್ನಿಕೆಯರು ವೀರನನ್ನು ಚಿಕ್ಕ ಮಂಟಪದಲ್ಲಿ ಕುಳ್ಳಿರಿಸಿ ಎಡಬಲದಲ್ಲಿ ಕೈಗಳಿಂದ ಹಿಡಿದು ಮೇಲಕ್ಕೆ ಕರೆದೊಯ್ಯುತ್ತಿದ್ದಾರೆ. 3ನೇಪಟ್ಟಿಕೆಯಲ್ಲಿ ಸ್ವರ್ಗದ ಸನ್ನಿವೇಶವಿದೆ. ಇಲ್ಲಿ ಯತಿವರರು ಶಿವಲಿಂಗವನ್ನು ಪೂಜಿಸುತ್ತಿದ್ದಾರೆ. ಎದುರುಗಡೆ ವೀರನು ತಪಸ್ಸನ್ನಾಚರಿಸುತ್ತಿರುವದು ಕಂಡುಬರುತ್ತಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರನ ಚಿತ್ರ ಬಿಡಿಸಲಾಗಿದೆ.

3ನೇ ವೀರಗಲ್ಲು

ವೀರನು 7 ಜನ ವೈರಿಸೈನಿಕರೊಡನೆ ವೀರಾವೇಶದಿಂದ ಹೋರಾಡುತ್ತಿರುವ ಸನ್ನಿವೇಶ ಕೊರೆಯಲಾಗಿದೆ. ವೀರನು ಒಬ್ಬ ಯೋಧನನ್ನು ಹೊಡೆದು ಕಾಲು ಬುಡದಲ್ಲಿ ತುಳಿದು ಮುಂದಿನ ಯೋಧರನ್ನು ಚಂಡಾಡಲು ಸನ್ನದ್ಧನಾಗಿರುವದು ಕಂಡುಬರುತ್ತದೆ. ವೀರಾವೇಶದಿಂದ ಹೋರಾಡುವಾಗ ಅವನ ಕೂದಲು ಜಡೆಗಳು ಗಂಟು ಗಂಟಾಗಿರುವಂತೆ ಭಾಸವಾಗುತ್ತದೆ. ಚಿರಛಿದ್ರವಾದ ಜಡೆ ಅವನ ಕ್ರೂರತನಕ್ಕೆ ಸಾಕ್ಷಿಯಾಗಿದೆ. ಮೊದಲಿನ ಕಲ್ಲಿನಲ್ಲಿದ್ದಂತೆ, ಕೈಯಲ್ಲಿ ಖಡ್ಗ, ಡಾಲು ಹಿಡಿದು ವೈರಿಯನ್ನು ಖಡ್ಗದಿಂದ ತಿವಿದು ಎಡೆಯಿಂದ ರಕ್ತ ಸುರಿಯುವಂತೆ ಮಾಡಿದ್ದಾನೆ. ಈ ಕಲ್ಲಿನಲ್ಲಿ ಅರ್ಧಭಾಗ ವೀರ, ವೈರಿಯ ಸನ್ನಿವೇಶ ಅರ್ಧಭಾಗ ಸಾಲು ಆರು ಗೋವುಗಳ ಚಿತ್ರಣವನ್ನು ಕೊರೆಯಲಾಗಿದೆ. ಇದೂ ಕೂಡಾ ತರುಗಳನ್ನು ಕದ್ದೊಯ್ಯುವ ಸನ್ನಿವೇಶದ ಚಿತ್ರ.

3ನೇ ಪಟ್ಟಿಕೆಯಲ್ಲಿ ವೀರನು ಸ್ವರ್ಗಾರೋಹಣಗೈಯ್ಯು ತ್ತಿರುವ ಚಿತ್ರಣ, ವೀರ ಪಲ್ಲಕ್ಕಿಯಲ್ಲಿ ಕುಳಿತಿದ್ದು ಭೂಲೋಕದಿಂದ ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಎಡಬಲಗಳಲ್ಲಿ ದೇವಕನ್ನಿಕೆಯರು, ನಾಲ್ಕುಜನ ಮಹಿಳೆಯರು ಚಾಮರ, ಖಡ್ಗ, ಹೂಮಾಲೆ ಹಿಡಿದು ನಿಂತಿದ್ದಾರೆ.

ವೀರ ಸ್ವರ್ಗಲೋಕ ಪ್ರವೇಶಿಸಿ ತಪಸ್ಸುಗೈಯ್ಯತ್ತಿದ್ದಾನೆ, ಮಧ್ಯದಲ್ಲಿ ಪೂಜಾರಿ ಶಿವಲಿಂಗ ಪೂಜಿಸುತ್ತಿದ್ದಾನೆ. ಎಡಗೈಯಲ್ಲಿ ಘಂಟೆ, ಹಿಡಿದು ಬಲಗೈಯಿಂದ ಭಸ್ಮಧಾರಣೆ ಮಾಡುತ್ತಿದ್ದಾನೆ. ಎಡಭಾಗದಲ್ಲಿ ನಂದಿವಿಗ್ರಹವಿದ್ದು ಮೇಲ್ಭಾಗದಲ್ಲಿ ಸೂರ್ಯ ಚಂದ್ರರನ್ನು ಬಿಡಿಸಲಾಗಿದೆ.

4ನೇ ವೀರಗಲ್ಲು

ಶ್ರೀ ಸೋಮೇಶ್ವರ ದೇವರ ಪೂಜಾ ಹೊಂಡದ ದಂಡೆಯ ಮೇಲೆ ನೆಲೆ ನಿಂತಿದೆ. 5ಥ3 ಅಗಲ, 8 ಅಂಗುಲ ದಪ್ಪ ಅಳತೆಯ ಕಪ್ಪು ಶಿಲೆಯ ವೀರಗಲ್ಲು, ಕಲ್ಯಾಣ ಚಾಲುಕ್ಯಶೈಲಿಯಲ್ಲಿ ಇದನ್ನು ಬಿಡಿಸಲಾಗಿದೆ.

ವೀರನ ಜೊತೆ ಆರು ಜನ ಯೋಧರು ಕುದುರೆ ಮೇಲೆ ಕುಳಿತು ಎದುರಿಗಿದ್ದ ವೈರಿ ಪಡೆಯ ನಾಲ್ಕು ಜನರನ್ನು ಹೊಡೆದುರುಳಿಸುತ್ತಿರುವ ಚಿತ್ರಣ ಇಲ್ಲಿದೆ.

3ನೇ ಪಟ್ಟಿಕೆ ವೀರ ಸ್ವರ್ಗಾರೋಹಣಗೈಯ್ಯುತ್ತಿದ್ದಾನೆ.ಶೂರನು ಮಂಟಪದಲ್ಲಿ ಕುಳಿತು ಮಗ್ನನಾಗಿದ್ದಾನೆ, ಎಂಟು ಜನ ನರ್ತಕಿಯರು ವಾದ್ಯಮೇಳದೊಂದಿಗೆ ವೀರನನ್ನು ಸ್ವರ್ಗಲೋಕಕ್ಕೆ ಕರೆದೊಯ್ಯುತ್ತಿದ್ದಾರೆ.

ಇಲ್ಲಿರುವ 2 ಚಿಕ್ಕ ಪಟ್ಟಿಕೆಯಲ್ಲಿ ಶಿಲಾಶಾಸನಗಳ ಸಾಲುಗಳಲ್ಲಿ ಬೈಯ್ಯಪ್ಪ ಶೆಟ್ಟಿ ಎಂಬುವನು ಮಂಡಲಿಕ ಜನ್ನಪ್ಪನ ಸ್ಮರಣಾರ್ಥ ಹೊರಡಿಸಿರುವ ಈ ವೀರಗಲ್ಲುಗಳು ಈ ಭಾಗದ ಜನರ ಸಾಹಸ ಗಾಥೆಯನ್ನು ಸಾರುತ್ತವೆ.

3ನೇ ಪಟ್ಟಿಕೆ ಇದು ಭಿನ್ನವಾಗಿದ್ದು, ವೀರ ಮಧ್ಯಭಾಗ ದಲ್ಲಿ ಕುಳಿತ ಭಂಗಿಯಲ್ಲಿದ್ದು ಯತಿಯೋರ್ವನು ಶಿವಲಿಂಗ ವನ್ನು ಪೂಜಿಸುತ್ತಿದ್ದಾನೆ. ಎಡಭಾಗದಲ್ಲಿ ಮಲಗಿದ ಭಂಗಿಯಲ್ಲಿ ರುವ ನಂದಿ ವಿಗ್ರಹವಿದೆ. ಕಲ್ಲಿನ ಎಡಭಾಗದ ಅಂಚಿನಲ್ಲಿ ಗೋವು ಗೋಮಾತೆ ಕರುವಿಗೆ ಹಾಲುಣಿಸುತ್ತಿದೆ. ವೀರ, ಯತಿಗಳಿಬ್ಬರೂ ಧ್ಯಾನಾಸಕ್ತರಾಗಿದ್ದಂತೆ ಕಂಡುಬರುತ್ತದೆ. ಕಲ್ಲಿನ ಎಡಬಲಗಳಲ್ಲಿ ಸೂರ್ಯ, ಅರ್ಧ ಚಂದ್ರನ ಚಿತ್ರಗಳನ್ನು ಕೆತ್ತಲಾಗಿದೆ.

ಶ್ರೀ ಸೋಮೇಶ್ವರ ದೇವಾಲಯದ ಎದುರಿನ ಎಡಭಾಗದಲ್ಲಿ ಹೊಂಡ ನಿರ್ಮಾಣವಾಗಿದ್ದು ಆಳವಾಗಿರುವ ಈ ಹೊಂಡ ಸದಾ ಕಾಲವೂ ನೀರಿನಿಂದಾವೃತವಾಗಿರುತ್ತದೆ.

ಕೋಡಿ ಬಸವಣ್ಣ

ಕಾವಲುವಾಡದ ಪಕ್ಕದಲ್ಲಿರುವ ಚೇಚರಾಕ್ ಹಳ್ಳಿ ತೊಗರಿಕೊಪ್ಪ. ಇಲ್ಲೊಂದು ಕೆರೆ ದಂಡೆ ಮೇಲೆ ಬಸವಣ್ಣ ದೇವಸ್ಥಾನವಿದೆ. ಇದಕ್ಕೆ ಕೋಡಿ ಬಸವಣ್ಣನೆಂದು ಕರೆಯಲಾಗಿದೆ. ಇಲ್ಲಿ ಈಶ್ವರ ನಂದಿ ಗಣಪತಿ ವಿಗ್ರಹಗಳಿದ್ದು ಭಕ್ತರು ಇತ್ತೀಚೆಗೆ ದೇವಾಲಯ ನಿರ್ಮಿಸಿದ್ದಾರೆ.

[ಲೇಖನ ತಯಾರಿಸಲು ಸಹಕರಿಸಿದವರು: ಡಾ. ಶ್ರೀನಿವಾಸ ರಿತ್ತಿ, ಡಾ. ರಾಜೇಂದ್ರಪ್ಪ, ಶ್ರೀಮತಿ ಹನುಮಾಕ್ಷಿ, ಶ್ರೀಮತಿ ಅಶ್ವಿನಿ, ಮಂಜುನಾಥ ಕಡ್ಲಿ, ರುದ್ರಮ್ಮ ಕಡ್ಲಿ, ಹನುಮಂತಪ್ಪ ಮತ್ತು ಚನ್ನವೀರಪ್ಪ, ಚ. ಮಲ್ಲಿಗವಾಡ, ಶರಣು ಮಡಿವಾಳದ ಪೂಜ್ಯ ದಯಾನಂದ ಸ್ವಾಮಿಗಳು ಸಿದ್ದಾರೂಡ ಮಠ, ಶ್ರೀ ಸೋಮಣ್ಣ ಹಾನಗಲ್ (ಅರ್ಚಕ) ಗಂಗಾಧರ ಪುಟ್ಟಿ, ವಿನಾಯಕ ಬಿ. ಹಾನಗಲ್ ಡಾ. ಪಕ್ಕೀರೇಶ, ಫ. ನಿಗದಿ, ಡಾ. ಮಾದೇಶ ತಡಸ, ಸೋಮಲಿಂಗ ಹ್ಯಂದರಿ, ಸೋಮಲಿಂಗ ಮಿಸಾಳು, ಪುಂಡಲೀಕನಾರ್ವೇಕರ, ಮಂಜು ಪಾಟೀಲ, ಶ್ರೀ ಶಿವಯೋಗಿ ಹಿರೇಮಠ, ಶಿದ್ವಲಿಂಗೇಶ್ವರ ಹಾನಗಲ ಇವರಿಗೆ ಕೃತಜ್ಞತೆಗಳು.]

❑

ಕೆಳದಿ ಕಾಲದಲ್ಲಿ ಚಿಕ್ಕರಮನೆ ಕುಟುಂಬ ಮತ್ತು ಶ್ರೀ ಭದ್ರಾಂಬಿಕೇಶ್ವರ ದೇವಸ್ಥಾನ

– ಡಾ. ಕೆಳದಿ ವೆಂಕಟೇಶ್ ಜೋಯಿಸ್

ಗೋವಾದಲ್ಲಿ ಪೋರ್ಚುಗೀಸರು ಕ್ರಿ.ಶ. 1560ರ ಅವಧಿಯಲ್ಲಿ ಧರ್ಮ ಪರಿವರ್ತನೆ, ಮತಾಂತರಗಳನ್ನು ಬ ಲಾತ್ಕಾರದಿಂದ ನಡೆಸಿದುದು ಹಿಂದೂ ದೇವಾಲಯಗಳು ಚರ್ಚ್‌ಗಳಾಗಿ ಪರಿವರ್ತಿತಗೊಂಡವು. ಅಲ್ಲಿಯ ಸಾರಸ್ವತರು ಈ ಧಾರ್ಮಿಕ ವಿಪ್ಲವಗಳಿಂದ ಕಂಗೆಟ್ಟುದಲ್ಲದೆ ಅವರು ಬೇರೆಡೆ ನೆಲೆ ಹುಡುಕುವಂತಾಯಿತು. ಪೋರ್ಚುಗೀಸರು ಗೋವಾದಲ್ಲಿ ನಡೆಸಿದ ಈ ಸಂದರ್ಭವನ್ನು ಕುರಿತು ದಿ॥ ಮಂಜೇಶ್ವರ ಗೋವಿಂದ ಪೈರವರು ಕ್ರೈಸ್ತ ಗ್ರಂಥಗಳನ್ನು ಆಧರಿಸಿ–

In the year 1560 AA the jesuits proceeded to evangelize in the province of Salsette. 1. which became thense foreword the chief field of their labors, The village of cortalim being the first to witness the celebration of mass by them. The conversion of the inhabitants of this province was indeed very rapid, hundreds and thousand of them being baptized almost every year. Owing to this several churches wee erected on the ruins of Hindu temples, 280 of which are said to have been razed to the ground in 1567.

Also the ruins of 200 idol temples which Viceroy de Noronha totally demolished that no memory might remain of monuments of such gross idolatry.

There were also jews who had their own synagogues and their own mode of worship but the Hindus were not allowed the public exercise of their religion. 2.

ಹೀಗೆ ಬರೆಯುತ್ತಾರೆ.

ಇಲ್ಲಿ ಉಲ್ಲೇಖಿಸಿರುವ ಗೋವೆಯ ಸಾಸಷ್ಟಿ ಪ್ರಾಂತ ಪೋರ್ಚುಗೀಸರಿಗೂ ಮೊದಲು ಹಿಂದೂಗಳಿಗೆ ಸೇರಿದ್ದಿತು ಈ ಪ್ರಾಂತದಲ್ಲಿದ್ದ ಎಲ್ಲಾ ದೇವಾಲಯಗಳು ಹೆಚ್ಚು ಕಮ್ಮಿ ಗೌಡ ಸಾರಸ್ವತ ಬ್ರಾಹ್ಮಣರ ಕುಲದೇವರ ದೇವಾಲಯಗಳಾಗಿದ್ದವು. ಪೋರ್ಚುಗೀಸರ ನಂತರದಲ್ಲಿ ಅವುಗಳು ಇಗರ್ಜಿಗಳಾಗಿ ಪರಿವರ್ತಿತಗೊಂಡವು. ಈ ಸಂದರ್ಭದಲ್ಲಿ ಗೋವಾದಲ್ಲಿ ಈ ಕೆಳಗಿನ ವೈಸರಾಯಿಗಳು ಆಡಳಿತ ನಡೆಸುತ್ತಿದ್ದುದು ದಾಖಲೆಗಳಿಂದ ತಿಳಿದುಬರುತ್ತದೆ.

1. ಡೊಂ ಕಾಂಸ್ಟಾಂಟಿಂಗ್ ಡಿ ಬ್ರಗಾಂಜಾ 1. ಕ್ರಿ.ಶ. 1558–1561()
2. ಡೊಂ ಫ್ರಾನ್ಸಿಸ್ಕೊ ಕಂಟಿನ್ಹೋ ಕೊಂಡೆ ಡಿ ರೆಡಂಡೋ ಕ್ರಿ.ಶ. 1561–1564.
3. ಡೊಂ ಆಂಟೋನಿಯೋ ಡಿ ನರೋನ್ಹಾ ಕ್ರಿ.ಶ. 1564–1568.

ಕೆಳದಿ ಕಾಲದಲ್ಲಿ ಸಾರಸ್ವತ ಬ್ರಾಹ್ಮಣರು : ಶಿವ ಶಕ್ತಿಯರ ಉಪಾಸಕರಾದ ಮೂಲ ಗೋವಾ ದಾಕ್ಷಿಣಾತ್ಯ ಸಾರಸ್ವತರಲ್ಲಿ ಸಾರಸ್ವತ ವೈಷ್ಣವ, ಗೌಡ ಸಾರಸ್ವತ, ಸ್ಮಾರ್ತ ಮತ್ತು ಚಿತ್ರಾಪುರ ಸಾರಸ್ವತರು ಎಂಬ ವಿಭಾಗಗಳಿವೆ. ಆದರೆ ಸಾಂಸ್ಕೃತಿಕವಾಗಿ

ಇವರುಗಳಲ್ಲಿ ಯಾವ ಭೇದವೂ ಕಂಡುಬರುವುದಿಲ್ಲ. ಹಾಗಾಗಿ ಇವರುಗಳನ್ನು ಗೌಡ ಸಾರಸ್ವತ ಬ್ರಾಹ್ಮಣರೆಂದು ಕರೆಯಲ್ಪಡುತ್ತದೆ. ಕನ್ನಡಿಗರು ಇವರನ್ನು ಕೊಂಕಣಿಗರೆಂದು ಗುರುತಿಸುತ್ತಾರೆ. ಮೂಲತಃ ಇವರು ಕವಳೆ ಮಠದ ಅನುಯಾಯಿಗಳಾಗಿದ್ದು ಕ್ರಿ.ಶ. 1708ರ ಚಿತ್ರಾಪುರ ಮಠದ ಅನುಯಾಯಿಗಳಾದರು. ದಾಕ್ಷಿಣಾತ್ಯ ಸಾರಸ್ವತರಲ್ಲಿ ಕುಶಸ್ಥಳೀಯರು ಹಾಗೂ ಸಾಸ್ಟಿಕರು (ಗೋವಾ ಕಡೆಗಳಲ್ಲಿ ಸಾಸಸ್ಟಿಗಳೆಂದು ಕರೆಯಲ್ಪಡುತ್ತಾರೆ) ಎಂದು ಗುರುತಿಸಲ್ಪಡು ತ್ತಾರೆ. ಕುಶ್ಯಸ್ಥಳಿಯರು ಮೊದಲಿನಿಂದಲೂ ಸ್ಮಾರ್ಥರಾಗಿದ್ದು ಹಾಗೆಯೇ ಉಳಿದುಕೊಂಡು ಬಂದರೆ ಸಾಸಸ್ಟಿಗಳು ಮೊದಲು ಶೈವರಾಗಿ ಮದ್ವಾಚಾರ್ಯರ ಆಗಮನದ ನಂತರದಲ್ಲಿ ವೈಷ್ಣವ ಧರ್ಮವನ್ನು ಅವಲಂಭಿಸಿದರು. ಚಿತ್ರಾಪುರ ಮಠದವರು ಮೊದಲಿನಿಂದಲೂ ಕುಶಸ್ಥಳೀಯ ರಾಗಿಯೇ ಇದ್ದವರಾಗಿದ್ದಾರೆ. ವಿಜಯನಗರ ಅರಸರ ಕಾಲದಲ್ಲಿ ಕರಾವಳಿಯ ಮಂಗಳೂರು ಬಾರ್ಕೂರುಗಳಿಗೆ ಅಧಿಪತಿಯಾಗಿ ಸದಾಶಿವನಾಯಕನು ಆಡಳಿತ ನಡೆಸಿದನು. ಇವನ ಕಾಲದಲ್ಲಿಯೇ 1565ರ ರಕ್ಕಸಗಿ ಯುದ್ಧದಲ್ಲಿ ವಿಜಯನಗರ ಸಾಮ್ರಾಜ್ಯ ಪತನ ಹೊಂದಿತು. ಕೆಳದಿ ಮತ್ತು ಮೈಸೂರು ಸ್ವಾತಂತ್ರ್ಯ ಪಡೆದವು. ಸರಿ ಸುಮಾರಾಗಿ ಪಡುಗಡಲ ಪ್ರಾಂತ್ಯಗಳ ಅಧಿಪತಿಗಳಾಗಿದ್ದ ಕೆಳದಿ ಅರಸರು ಗೋವಾ ಪ್ರಾಂತ್ಯಗಳಿಂದ ವಲಸೆ ಬ ಂದ ಆಗಂತುಕರಿಗೆ ಆಶ್ರಯ ನೀಡಿ ಹೊನ್ನಾವರ, ಭಟ್ಕಳ, ಬಸರೂರು, ಬಾರಕೂರು, ಬ್ರಹ್ಮಾವರ, ಮುಲ್ಕಿ, ಮಂಗಳೂರು, ಉಲ್ಲಾಳ ಮೊದಲಾದ ಊರುಗಳಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟರು. ಇವರುಗಳು ಈ ಮೊದಲು ವೈದಿಕ ಸಂಪ್ರದಾಯ, ಪೌರೋಹಿತ್ಯಗಳಲ್ಲಿ ಹೆಚ್ಚು ತೊಡಗಿಕೊಂಡಿದ್ದರು. ಅಂತಹವರುಗಳಲ್ಲಿ ಹಲವು ವಿಭಾಗಗಳಿದ್ದು ಮುಖ್ಯವಾಗಿ ಚಿಕ್ಕರಮನೆ, ಚಿತ್ತಾರ, ಹೊನಾವರ್, ಕಂದ್ಲುರುಮ್ ಕರ್ಕಿ, ಮನೆವಾರ್ತೆ, ಮಂಕಿ, ವಾಗ್ಲೆ, ನಿಲೆಕಣಿ, ತಲಗೇರಿ, ತವನಂದಿ, ತೊಂಬಟ್, ಉಗ್ರಾಣ ಉಲ್ಮನ್ ಮೊದಲಾದ ಕುಟುಂಬಗಳಿವೆ.

ಪೋರ್ಚುಗೀಸರ ಬರುವಿಕೆಯಿಂದ ಈ ಜನ ತಮ್ಮ ಮೂಲವೃತ್ತಿಯನ್ನು ಬಿಟ್ಟು ಪರಸ್ಥಳಕ್ಕೆ ಹೋಗುವಂತಾಯಿತು. ಹಾಗಾಗಿ ತಮ್ಮ ಜೀವನಾಧಾರಕ್ಕೆ ಬೇರೆ ವೃತ್ತಿಗಳನ್ನು ಹುಡುಕುವಂತಾಯಿತು. ಕೆಳದಿ ಅರಸರು ಅರಮನೆಯ ಉಸ್ತುವಾರಿ, ಲೆಕ್ಕಪತ್ರಗಳ ದಾಖಲೆ, ಊರ ಆಡಳಿತ, ವಾಣಿಜ್ಯೋದ್ಯಮ ವ್ಯವಹಾರಗಳು ಮೊದಲಾದವುಗಳನ್ನು ನೋಡಿಕೊಳ್ಳಲು ಇವರನ್ನು ನೇಮಿಸಿಕೊಂಡರು. ಇವರಲ್ಲಿ ಹಲವರು ದ್ವಿಭಾಷಿಗಳೂ ಇದ್ದರು. ಅಂತಹವರನ್ನು ಕೆಳದಿ ರಾಜ್ಯಕ್ಕೆ ವಿದೇಶದಿಂದ ಬರುವವರಿಗೆ ದ್ವಿಭಾಷಿಗಳಾಗಿ ಕಾರ್ಯನಿರ್ವಹಿಸುವ, ಅವರೊಡನೆ ಒಡಂಬಡಿಕೆಗಳನ್ನು ಏರ್ಪಡಿಸುವುದು ಮೊದಲಾದ ಹುದ್ದೆಗಳನ್ನು ಇವರಿಗೆ ಗೊತ್ತು ಮಾಡಿ ನೇಮಿಸಿಕೊಂಡರು. ಕ್ರಿ.ಶ. 1583–1630ರಲ್ಲಿ ಕೆಳದಿಯನ್ನಾಳಿದ ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ವಿಠ್ಠಲಶಣೈ, ವಿದೇಶೀಯ ವ್ಯವಹಾರದ ಅಧಿಕಾರಿಯಾಗಿ ನೇಮಕವಾಗಿದ್ದನು. ಈತನು ಪೋರ್ಚುಗೀಸ್ ಭಾಷೆಯನ್ನು ಅರಿತಿದ್ದು, ಕೆಳದಿ ರಾಜಧಾನಿಗೆ 1623ರಲ್ಲಿ ಆಗಮಿಸಿದ್ದ ಇಟಲಿ ಪ್ರವಾಸಿ ಪಿಯತ್ರೋ ಡೆಲ್ಲವಲ್ಲೆಗೆ ಈ ರಾಜ್ಯದ ಪರಿಚಯ ಮಾಡಿಕೊಟ್ಟವನಿವನು. ಹೀಗೆ ವ್ಯಾಪಾರ ವ್ಯವಹಾರದ ಜೊತೆಗೆ ಅರಮನೆ ಆಡಳಿತವನ್ನು ನೋಡಿಕೊಳ್ಳಲು ಈ ಸಂದರ್ಭದಲ್ಲಿ ನೇಮಕಗೊಂಡ ಒಂದು ಕುಟುಂಬವೇ ಚಿಕ್ಕರಮನೆ ಕುಟುಂಬ.1 ಗೋವಾದಲ್ಲಿ ಇವರನ್ನು ವಾಗಳೆ ಎಂದು ಕರೆಯುತ್ತಾರೆ. ಈಗ ಈ ಕುಟುಂಬದ ಸುಮಾರು 10ನೇ ತಲೆಮಾರಿನವರು ಇದ್ದಾರೆ. ಇವರಲ್ಲಿ ಸುಮಾರು 13 ಶಾಖೆಗಳಿವೆ. ಇವರ ಗೋತ್ರ ಕೌಂಡಿನ್ಯ, ಮನೆ ದೇವರು ಮಂಗೇಶ. ಮಹಾಲಕ್ಷ್ಮಿ ಮತ್ತು ಶಾಂತದುರ್ಗದೇವರ ಆರಾಧಕರಿವರು. ಈ ಕುಟುಂಬ ಕವಲು ಸುಮಾರು 17ನೇ ಶತಮಾನದಲ್ಲಿ ಕವಲಾಗಿ ಒಡೆದು ಒಂದು ಕುಟುಂಬ ಗೋಕರ್ಣದಲ್ಲಿ ಸೈನಿಕ ವಿಭಾಗದಲ್ಲಿ ಮುಖ್ಯಸ್ಥರಾಗಿದ್ದರೆಂದು ಕ್ರಿ.ಶ. ಸುಮಾರು 1739ರ ದಾಖಲೆ ತಿಳಿಸುತ್ತದೆ. ಈ ಕುಟುಂಬದವರು ಕೆಳದಿ ಆಡಳಿತದಲ್ಲಿ ನಂಬಿಕೆಗೆ ಅರ್ಹರಾದವರಲ್ಲಿ ಪ್ರಮುಖರಾಗಿದ್ದರು. ಇವರ ಇಷ್ಟ ದೇವ ಮಂಕಿಮಡಿಯಲ್ಲಿರುವ ಭದ್ರಾಂಬಿಕೇಶ್ವರ ಆಗಿದ್ದು ಇದನ್ನು ಕ್ರಿ.ಶ. 1724ರಲ್ಲಿ ನಿರ್ಮಿಸಲಾಯಿತು. ಈ ದೇವಾಲಯಕ್ಕೆ ಕೆಳದಿ ಅರಸ ಎರಡನೇ ಸೋಮಶೇಖರ ನಾಯಕನಿಂದ ಇನಾಂ ಆಗಿ ಉಳವರೆ (ಉಳವರೆ)2 ಭೂಮಿಯನ್ನು ಕ್ರಿ.ಶ. 1739ರಲ್ಲಿ ಪಡೆದಿದ್ದರು. ಈ ಕುಟುಂಬದವರೇ ಕೆಳದಿ ಆಡಳಿತದಲ್ಲಿ ಕೆನರಾದಲ್ಲಿ ಸಣ್ಣ ಸೈನ್ಯ ಇದ್ದು ಇದು ರಾಜನಿಗೆ ಅಗತ್ಯವಿದ್ದಾಗ ಸಹಾಯಕ್ಕಾಗಿ ಹೋಗುತ್ತಿದ್ದರೆಂದು ತಿಳಿದುಬರುತ್ತದೆ.

ಚಿಕ್ಕರಮನೆ ಭವಾನಿ ಶಂಕರ ಎಂಬುವವರು ಒಂದು ಸಣ್ಣ ಚಿದಾನಂದೇಶ್ವರ ದೇವಸ್ಥಾನವನ್ನು ಗೋಕರ್ಣದ ಕೋಟಿ ತೀರ್ಥದ ಹತ್ತಿರ ನಿರ್ಮಿಸಿದ್ದಲ್ಲದೆ ಈ ದೇವರಿಗೆ ಗೋಕರ್ಣದ ಭಟ್ಟರನ್ನು ನೇಮಿಸಿದ್ದರು.

ಕ್ರಿ.ಶ. 1724ರಲ್ಲಿ (ಕೆಳದಿ ರಾಜಧಾನಿ ಬಿದನೂರು ನಂತರ ನಗರವಾಯಿತು) ನಗರದಿಂದ ಕೆಳದಿ ಸೋಮಶೇಖರನು ಆಡಳಿತ ನಡೆಸುತ್ತಿದ್ದನು. ಇವನ ಆಡಳಿತಕ್ಕೆ ದಕ್ಷಿಣ ಕನ್ನಡ, ಉತ್ತರ ಕನ್ನಡದ ಹಲವು ಪ್ರದೇಶಗಳು ಒಳಗೊಂಡಿತ್ತು. ಅವನ ಆಡಳಿತದ ಕುರುಹಾಗಿ ಇಂದು ಆ ಜಿಲ್ಲೆಗಳಲ್ಲಿ ಸಾಕಷ್ಟು ಅವಶೇಷಗಳು ಉಳಿದುಬಂದಿವೆ. ಅಂತೆಯೇ ಹೊನ್ನಾವರ ತಾಲೂಕಿನ ಮಂಕಿಮಡಿಯಲ್ಲಿಯೂ ಸಹ ಆ ಕಾಲದ ಕೋಟೆಯ ಅವಶೇಷವಿದೆ. (ಈ ಮಂಕಿಮಡಿಯು ಹೊನ್ನಾವರದಿಂದ ದಕ್ಷಿಣಕ್ಕೆ ಸುಮಾರು 12 ರಿಂದ 15 ಮೈಲು ದೂರದಲ್ಲಿದೆ.) ಇದರ ಜೊತೆಗೆ ಅಂದಿನ ಕಾಲದ ಹಲವು ದೇವಾಲಯಗಳ ಅವಶೇಷಗಳು ಅಲ್ಲಿವೆ. ಅವುಗಳಲ್ಲಿ ಮುಖ್ಯವಾಗಿ ಶ್ರೀ ಭದ್ರಾಂಬಿಕೇಶ್ವರನ ದೇವಸ್ಥಾನವನ್ನು ಉಲ್ಲೇಖಿಸಬೇಕಾಗುತ್ತದೆ. ಸೋಮಶೇಖರ ನಾಯಕನು ಹೊನ್ನಾವರದ ಕಡೆ ಬಂದಾಗ ಈ ಕೋಟೆಯಲ್ಲಿದ್ದ ಅರಮನೆಯಲ್ಲಿ ಉಳಿಯುತ್ತಿದ್ದನೆಂದೂ, ಅಲ್ಲದೆ ತನ್ನ ಹಿತಚಿಂತಕನೂ, ವಿಶ್ವಾಸಿಯೂ ಆದ ಗಣಪಣ್ಣನೆಂಬವನಿಗೆ ತನ್ನ ಈ ಚಿಕ್ಕ ಅರಮನೆಯ ಅಧಿಕಾರವನ್ನು ಕೊಟ್ಟಿದ್ದನೆಂದು ಪ್ರತೀತಿಯಿದೆ. ಅಂದಿನಿಂದ ಚಿಕ್ಕರಮನೆ ಎಂಬ ಉಪನಾಮವು ಗಣಪಣ್ಣನ ಕುಟುಂಬಕ್ಕೆ ಬಂದಿದೆ ಎಂದು ತಿಳಿದುಬರುತ್ತದೆ.

ಒಮ್ಮೆ ಈ ಚಿಕ್ಕರಮನೆಕಾರರು ಕಾಶಿಯಾತ್ರೆಗೆ ಹೋಗಿ ಮರಳಿ ಬರುವಾಗ ಒಂದು ಶಿವಲಿಂಗವನ್ನು ತಂದಿದ್ದರು. ಇಲ್ಲಿ ಅದೇ ಸಮಯದಲ್ಲಿ ಸೋಮಶೇಖರ ನಾಯಕನ ಮೆಚ್ಚಿನ ಮಡದಿಯಾದ ಭದ್ರಾಂಬೆಯು ಅತಿಶಯವಾದ ಬೇನೆಯಿಂದ ಬಳಲುತ್ತಿದ್ದಳು. ಸೋಮಶೇಖರ ನಾಯಕನು ಅನೇಕ ಪಂಡಿತರನ್ನು ಕರೆಸಿ ಔಷದೋಪಚಾರ ಮಾಡಿಸಿದರೂ ಯಾವುದೇ ಪ್ರಯೋಜನ ಕಾಣಲಿಲ್ಲ. ಭದ್ರಾಂಬೆಯ ರೋಗವನ್ನು ಗುಣಪಡಿಸುವುದರಲ್ಲಿ ಅವುಗಳೆಲ್ಲಾ ವಿಫಲವಾಗಿತ್ತು. ಆಗ ಚಿಕ್ಕರಮನೆಕಾರರು ಗಿಡಮೂಲಿಕೆ ಔಷಧಗಳಿಂದ ಆ ಕಠಿಣ ರೋಗವನ್ನು ಗುಣಪಡಿಸಿದರು. ಇದರಿಂದ ಸಂತೋಷಗೊಂಡ ಸೋಮಶೇಖರನಾಯಕನು ಗಣಪಣ್ಣನಿಗೆ ಏನು ಬೇಕಾದರೂ ಕೇಳಿಕೊಳ್ಳಲು ಅವಕಾಶವಿತ್ತನು. ಆಗ ಗಣಪಣ್ಣನು ತಾನು ಕಾಶಿಯಿಂದ ತಂದ ಶಿವಲಿಂಗವನ್ನು ಪ್ರತಿಷ್ಠಾಪನೆ ಮಾಡಬೇಕೆಂದು ಆಶೆಯನ್ನು ವ್ಯಕ್ತಪಡಿಸಿದನಂತೆ. ಅದನ್ನು ಕೇಳಿದ ಸೋಮಶೇಖರನಾಯಕನು ಈಶ್ವರ ಹೆಸರು ಬ ರುವಂತೆ ಅದರ ಮುಂದೆ ತನ್ನ ಹೆಂಡತಿಯ ಹೆಸರಾದ ಭದ್ರಾಂಬೆಯ ಹೆಸರನ್ನು ಮೊದಲ್ಗೊಂಡು ಅವನಿಷ್ಟದೇವರ ಪ್ರತಿಷ್ಠಾಪನೆ ಮಾಡಲು ಒಪ್ಪಿಗೆಯಿತ್ತನು. ಅದರಂತೆ ಗಣಪಣ್ಣನು 'ಶ್ರೀ ಭಧ್ರಾಂಬಿಕೇಶ್ವರ' ಎಂಬ ಹೆಸರಿನಿಂದ ಕಾಶಿಯಿಂದ ತಂದ ಶಿವಲಿಂಗವನ್ನು ಪ್ರತಿಷ್ಠಾಪಿಸಿದರು.

ಭದ್ರಾಂಬಿಕೇಶ್ವರ ದೇವಸ್ಥಾನವು ಪೂರ್ವಾಭಿಮುಖ ವಾಗಿದ್ದು ಪಶ್ಚಿಮಕ್ಕೆ ಸಮುದ್ರ, ದಕ್ಷಿಣೋತ್ತರವಾಗಿ ಪರ್ವತಗಳ ಸಾಲು ಇದೆ. ಸೋಮಶೇಖರ ನಾಯಕನು ದೇವರ ವಿನಿಯೋಗಕ್ಕೆ ಭೂಮಿಯನ್ನು ದಾನ ಮಾಡಿರುವ ಕುರಿತು ನಿರೂಪವೊಂದಿದೆ. ಈ ದೇವಾಲಯವನ್ನು ದಿನಾಂಕ 18.05.1969ರಲ್ಲಿ ಮತ್ತೊಮ್ಮೆ ಚಿಕ್ಕರಮನೆ ಕುಟುಂಬದವ ರಿಂದ ದುರಸ್ತಿಗೊಳಪಡಿಸಲಾಗಿದೆ. ಅಲ್ಲದೆ ಅಷ್ಟಬಂಧ ಕಲಶಾರೋಹಣ ಮೊದಲಾದ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ದೇವಾಲಯ ನಿರ್ಮಾಣವಾದ ಪ್ರಾರಂಭದಲ್ಲಿ ದೇವಾಲಯದ ಅರ್ಚಕರು ಕರ್ಹಾಡ (ಮರಾಠ ಬ್ರಾಹ್ಮಣರು) ಮನೆತನದವರಾಗಿದ್ದರೆಂದು ದೇವಾಲಯದಲ್ಲಿ ಬಳಕೆಯಲ್ಲಿ ರುವ ಪ್ರಾರ್ಥನಾ ಪದ್ಯಗಳಿಂದ ತಿಳಿದುಬರುತ್ತದೆ. ಕಾಲಕ್ರಮ ದಲ್ಲಿ ಯಾವುದೋ ಕಾರಣದಿಂದ ಇವರಲ್ಲೊಬ್ಬರ ನೀತಿಬಾಹಿರ ನಡವಳಿಕೆಗಳು ಚಿಕ್ಕರಮನೆಕಾರರಿಗೆ ಕನಸಿನಲ್ಲಿ ತಿಳಿದುಬಂದು ಆ ಬಗ್ಗೆ ತನಿಖೆ ನಡೆಸಿ ಅದು ಸತ್ಯವೆಂದು ದೃಢವಾದ್ದರಿಂದ, ಅನಂತರದಲ್ಲಿ ಸಾರಸ್ವತ ಅರ್ಚಕರನ್ನು ನೇಮಿಸಿರುವುದಾಗಿ ತಿಳಿದುಬರುತ್ತದೆ. ಇದು ಸುಮಾರು 80 ವರ್ಷಗಳ ಹಿಂದೆ ನಡೆದಿರಬಹುದೆಂದು ತಿಳಿದುಬರುತ್ತದೆ. ಅಲ್ಲಿಂದ ಮುಂದೆ ಅದೇ ಸಾರಸ್ವತ ಅರ್ಚಕರು ವಿರೋಧಿ ಸಂವತ್ಸರದಿಂದ ಸರಾಗವಾಗಿ ನಡೆಸಿಕೊಂಡು ಬರುತ್ತಿರುವುದಾಗಿ ತಿಳಿದುಬರುತ್ತದೆ. ಚಿಕ್ಕರಮನೆಕಾರರು ಹಿಂದಿನಿಂದ ಇಂದಿನ ತನಕ ಶ್ರೀ ಭದ್ರಾಂಬಕೇಶ್ವರನನ್ನು ತಮ್ಮ ಇಷ್ಟದೇವರೆಂದು ಪೂಜಿಸುತ್ತ ಬರುತ್ತಿದ್ದಾರೆ. (ಗಣೇಶ ಮಂಜುನಾಥ ಭಟ್ ಸೌಕೂರ ಮಂಕಿಮಡಿ ಸೌಮ್ಯ ಸಂವತ್ಸರದ ವೈಶಾಖ ಶುಕ್ಲ 14 ಗುರುವಾರ)

ತಾಮ್ರಶಾಸನದ ಯಥಾ ಪ್ರತಿ : ಮೊದಲು ಅವರಲ್ಲಿ ತಾಮ್ರಶಾಸನ ಇತ್ತಂತೆ. ಈಗ ಅದು ಇಲ್ಲವಂತೆ. ಕಾಗದದಲ್ಲಿ ಬರೆದುಕೊಂಡಿರುವ ನಿರೂಪವೊಂದು ಅವರಲ್ಲಿ ಸಿಗುತ್ತದೆ. ಅದೂ ಹೆಚ್ಚು ಕಮ್ಮಿ ಇತ್ತೀಚಿನ ಐವತ್ತು ಅರವತ್ತು ವರ್ಷಗಳ

ಹಿಂದೆ ಬರೆದಿಟ್ಟುಕೊಂಡಿರುವುದು. ಅದರ ಮೂಲ ಪ್ರತಿಯನ್ನು 1873ರಲ್ಲಿ ಚಿಕ್ಕರಮನೆ ಮಂಗೀಶಯ್ಯನವರು ದಾವಾದಲ್ಲಿ ಹೊನ್ನಾವರ ಕೋರ್ಟಿನಲ್ಲಿ ಹಾಜರುಪಡಿಸಿರುವುದಾಗಿ ತಿಳಿದುಬರುತ್ತದೆ.

ನಿರೂಪದ ಪಾಠ : ಕ್ರೋಧಿ ಸಂವತ್ಸರ ಪುಷ್ಯ ಶುದ್ಧ 1 ಶ್ರೀ ಮತ್ಕೆಳದಿಸೋಮಶೇಖರ ನಾಯಕರು ಸುಬ್ಬಗೆ ಬರಸಿ ಕಳುಹಿದ ಕಾಗದ. ಚಿಕ್ಕರಮನೆ ಗಣಪಂಣನು ಹುಜುರು ಬಂದು ಮಂಕಿ ಸೀಮೆ ಹೊನಾಡಗ್ರಾಮದ ಮಡಿಸ್ತಳದಲ್ಲು ಸಮುದ್ರ ತೀರದಲ್ಲಿ ದೇವಸ್ತಾನ ಕಟ್ಟಿಸಿ ಭದ್ರಾಂಬಿಕೇಶ್ವರ ದೇವರ ಪ್ರತಿಷ್ಠೆ ಮಾಡುತ್ತೇನೆ. ಈ ದೇವರ ಅಮೃತಪಡಿ ನಂದಾದೀಪ್ತಿ ಬೇರೆ ತಾನು ನಡೆಸುವ ಧರ್ಮದ ಬಗ್ಯೆ ಸಹಕ್ರಯ ಕೊಟ್ಟೇನು. ಸ್ವಾಸ್ತಿ ಉತಾರವ ಕೊಡಬೇಕೆಂದು ನಿರ್ವಾಣಯ್ಯ ಮಾವನವರು ಹೇಳಿದ ಸಂಬಂಧ ಯಿ ಗಣಪಂಣನ ಕೈಯ ಕ್ರಯ 303 ॥=8॥ ಮುಂನೂರಾ ಮೂರು ವರಹಂನು ಯಂಟು ಹಣ ಮುಪ್ಪಾಗವನ್ನು ಅರಮನೆಗೆ ತೆಗೆದುಕೊಂಡು ಉತಾರವ ಕೊಟ್ಟೆನು. ಮಂಕಿಸೀಮೆ ಸ್ಥಳ ಶೆನಬೋವ ಬರಕೊಟ್ಟ ಚಪ್ಪು ಪ್ರಮಾಣ ಯಿ ಸೀಮೆ ಹೊನಾಡ ಗ್ರಾಮದಿಂದ ಮಡಿಸ್ತಳದ ಶಿಸ್ತಿನಿಂದ ಗ ॥ 1092।0 ಪ್ರಾಕು ನಿಲ್ಲಸ್ತ ನಷ್ಟದಿಂದಾ ಗ 3/3॥= ಉಭಯಂ ಗ 13॥0॥=ಸ್ತಳದಿಂದಾ ಸಿಸ್ತಿನಿಂದ ಗ 15॥3।= ನಿಲ್ಲಿಸ್ತ ಸಷ್ಟದಿಂದ 4॥= ಉಭಯಂ ಗ 16॥ ಉಭಯಂ ಗ 30/3= ಗೆ ವಿವರಾ ಅ ಸಿಸ್ತಿನಿಂದ ಗ 2 ನಿಲಿಸ್ತ ನಷ್ಟದಿಂದ ಗ 4/3 ಉಭಯಂ ಗ 30/3॥= ಮೂವತ್ತು ವರಹಂನಾ ಅ ಮುಪ್ಪಾಗ ಬೆಳೆಯ ಸ್ವಾಸ್ತಿಯನು ಯಿ ಗಣಪಂಣನು ಹೊಸಾಡ ಗ್ರಾಮದ ಮಡಿಸ್ತಳದಲ್ಲಿ ದೇವಸ್ತಾನವ ಕಟ್ಟಿಸಿ ಪ್ರತಿಷ್ಠೆ ಮಾಡುವ ಭದ್ರಾಂಬಿಕೇಶ್ವರ ದೇವರ ಅಮೃತ ಪಡಿ ನಂದಾದೀಪ್ತಿ ಬೇರೆ ನಡಿಸುವ ಧರ್ಮದ ಬಗ್ಗೆ ಸಹ ಶಿವಾರ್ಪಿತವಾಗಿ ಕೊಟ್ಟು ಯಿ ಭೂಮಿಗೆ ವಾಮನಮುದ್ರೆ ಶಿಲಾಸ್ಥಾಪಿತವ ಮಾಡಿಸುವಲ್ಲಿಗೆ ಹುಜುರಿಂದ ಉಳಿಗದ ಸಂದ ಕಳುಹಿಸಿದ್ದೇವೆ ಚೌಗ್ರಾಮದವರ ಕರಿಶಿ ಕೊಂಡು ಗಡಿತಕರಾರು ಬಾರದ ರಿತಿ ಯಿವನ ಮುಂಡಿಟ್ಟು ದೇಶ ಪ್ರಮಾಣ ಭೂಮಿಗೆ ಶಿಲಸ್ತಾಪಿತ ಮಾಡಿಶಿಕೊಟ್ಟು ಯಿ ಕಾಗದ ಶೇನಬವರ ಕಡಿತಕ್ಕೆ ಬರಿಶಿ ತಿರಿಗಿ ಇವನ ಹಸ್ತ ಕೊಡುವದಾಗಿ....

ಗಣಪಣ್ಣ ಸ್ಮಾರ್ತ ಭಾಗವತ ಸಂಪ್ರದಾಯದವರು. ನಿರ್ವಾಣಯ್ಯ ಕೆಳದಿ ಕಿರಿಯ ಸೋಮಶೇಖರ ನಾಯಕನ ಮಂತ್ರಿ ಹಾಗೂ ಮಾವ. ಇವನ ಕಾಲ 1724 (ಸಾ.ಶಿ. ಮರುಳಯ್ಯ, ಸಂಶೋಧನೆ ಪುಟ 454,455,456) ಶಿವಪ್ಪನಾಯಕನ ಹೆಂಡತಿ ಭದ್ರಮ್ಮಾಜಿ. ಈ ಚಿಕ್ಕರಮನೆ ಪೀಳಿಗೆಯವರು ಶೃಂಗೇರಿ ಮಠ ಸಂಪ್ರದಾಯಕ್ಕೆ ಸೇರಿದ ಚಿತ್ರಾಪುರ ಮಠಕ್ಕೆ ಸೇರಿದವರಾಗಿದ್ದಾರೆ.

ಈ ಭದ್ರಾಂಬಿಕೇಶ್ವರ ದೇವಾಲಯದಲ್ಲಿ ಪ್ರಚಲಿತವಿರುವ ಪುಷ್ಪಾಂಜಲಿಗಳು

ಪದ್ಯ 1

ಪೊರೆಯೋ ಶಂಕರ, ಭದ್ರಾಂಬಿಕೇಶ್ವರ ॥ ಪ ॥
ಪೊರೆಯೋ ಶಂಕರ ಭದ್ರಾಂಬಿಕೇಶ್ವರ
ಶರಣಾಗತರ ಕರುಣಾ ನಿಧಿಯೇ ॥ ಅ ॥ ಪ ॥
ನೀಲಕಂಠ ನಿಗಮವಂದ್ಯ । ಶೂಲಡಮರು ಕಪಾಲಧರನೆ
ಭಾಲನಯನ ಇಂದು ಮೌಳೀ । ವ್ಯಾಲಭೂಷಲಾಲಸರಿಕೆ ॥ 1 ॥

ನಗರ ಸಂಸ್ಥಾನದಿಂದ । ಲಗುವೆ ಜಹಾಗೀರಿ ದೊರೆವ
ಜಗದೊಳು ಚಿಕ್ಕರಮನೆಯ । ಗಣಪಣ್ಣನು ಸ್ಥಾಪಿಸಿದರಿಂ ॥ 2 ॥

ಚಂದ್ರ ಚೂಡ ಭೂಪ ಬಂದು । ಭಕ್ತಿಯಿಂದ ನಿನ್ನ ಭಜಿಸಿ
ಕಾಮಿತಾರ್ಥವನ್ನೆ ಪಡೆದ । ಹಾನೆ ನಿನ್ನ ಕೃಪೆಯೊಳು ॥ 3 ॥

ಇಷ್ಟ ದೇವರೆಂದು ನಿನ್ನ । ನಿಷ್ಠೆಯಿಂದ ಭಜಿಸಿ
ನಿತ್ಯ ಶ್ರೇಷ್ಠವಾದ ವಸ್ತ್ರಗಳನು । ಪ್ರೇಮದಿಂದ ಅರ್ಪಿಸಿಹನು ॥4॥

ಕಾಣಿಕೆಯನುಕೊಟ್ಟು ಇಷ್ಟ । ಭೂಪ ಪೌತ್ರರಿಗೆ ತರಿಸಿ
ನಿನ್ನ ಪಾದ ಮೆಚ್ಚುವಂತೆ । ಸೇವೆಗೊಂಡು ಕರುಣಿಸಿರುವ ॥5॥

ಕಪ್ಪು ಗೊರಳ ದೇವದೇವ । ಎನ್ನ ತಪ್ಪುಗಳನು ಕ್ಷಮಿಸು
ಗುರುವಾಗಿಹ ಪಾಂಡುರಂಗನೀ । ನಪ್ಪವಾಗಿ ಕರುಣೆಯಿಂದ ॥6॥

ಪದ್ಯ 2

ಬಣ್ಣಿಸಲ್ಹ್ಯಾಗೆ ನಾ ನಿನ್ನನು, ಕಣ್ಣಿಂದ ನೋಡಿ ನಾ ॥ಪಲ್ಲ॥
ಬಣ್ಣಿಸಲ್ಹ್ಯಾಗೆ ಕಣ್ಣಿಂದ ನೋಡಿ ಪುಣ್ಯ ಮಾರುತಿ ಮುಕ್ಕಣ್ಣ ಸ್ವಾಮಿಯೆ

ನಗರ ರಾಜನಾಗಿ ಮೆರೆದ ಜಗದೊಳ್ ಖ್ಯಾತ ಸೋಮಶೇಖರ
ಅಗಜೆಯಪತಿ ನಿನ್ನನು ಲಗುವೇ ಸ್ಥಾಪಿಸಿದರಿಂ ॥ 2 ॥

ಚಕ್ಕರಮನೆಯ ಗಣಪಣ್ಣಗೆ ಇಕ್ಕರಿಸಿದ ಪಾರುಪತ್ಯ
ತತ್ಕಾಲಕೆಕರ್ಡಾಡಿಭಟರೇ ಚೊಕ್ಕವೆಂದು ಸೇವೆಗೊಂಡಂಥ ॥ 3 ॥

ಸಾರಸ್ವತ ಕುಲದ ವಿಪ್ರ ಮಂಜುನಾಥನಿಂದ ಪೂಜೆ
ವಿರೋಧಿ ಸಂವತ್ಸರದಿಂದ ಸರಾಗವಾಗಿ ನಡೆಸಿ ಕೊಂಬುವ ॥4॥

ಸರ್ವರಿಗೂ ಸನ್ಮತಿ ಇತ್ತು ಸರ್ವದಾ ನೀ ರಕ್ಷಿಸುತಿಹೆ
ಸಾರ್ವಭೌಮ ಭದ್ರಾಂಬಿಕೇಶ ಭುವಿಯೊಳಗೆ ಮಡಿಪುರೇಶ ॥5॥

ಪದ್ಯ 3 ರಾಗ ಆನಂದ ಭೈರವಿ

ನೋಡಿದೆ, ಭದ್ರಾಂಬಿಕೇಶಾ ನಾಡಿಗಧಿಕಮಡಿ ಪುರೇಶ ।
ನೋಡಿದೆ, ಕೀರ್ತಿಯ ಪಾಡಿದೆ ॥ ಪಲ್ಲ ॥
ಹಿಂದೊಮ್ಮೆ ನಿನ್ನದೊಳ್ ನಿಂತು ಪೊಗಳಿದಂತೆ ಜಗದೊಳ್
ಮೆರೆಸಿದೆ । ನೀನೆ ಭರಿಸಿದೆ । 1 ।

ಚಿಕ್ಕರಮನೆಯ ಜನರೊಳೂಕ್ಕಿಹ ಕರುಣಾ ದೃಷ್ಟಿಯೊಳ್
ಕಾವನೇ ಮಹಾದೇವನೇ
ಗಂಗೆಯ ಪೊತ್ತಿಹ ಮಹಾಲಿಂಗ ನೀನೆಯೆಂದು
ಸರ್ವರು ಪೊಗಳುತಿಹರು
ಕಂದುಗೊರಳ ನಂದಿಯೇರಿ ಬಂದಿರ್ಪಂತ ಕಂದರ್ಪಾರಿ
ನೀನೆಂದುನುತಿಸುವೆ ನಾನಿಂದು
ವರಿದೌತಾಂಬರದೊಳ್ನಿಂದ ಗುರುಪಾಂಡುರಂಗನಾನಂದ
ಭರಿತನೇ, ಪುಣ್ಯಚರಿತನೇ

ಪದ್ಯ 5 (ಮಂಗಲ ಪದ್ಯ)

ಮಂಗಲಂ ಭದ್ರಾಂಬಿಕೇಶ್ವರಗೆ । ಮಂಗಲಂ ಸುಜನ ವಂದಿತಪದಗೆ।
ಮಂಗಲಂ ವಿಭುದಾವಳಿ ಪೂಜಿತಗೆ । ಮಂಗಲಂ ಸದ್ಗುರು
ಶಂಕರಗೆ । ಮಂಗಲಂ ಜಯ ಮಂಗಲಂ ॥ 1 ॥

ಕಿಡಿಗಣ್ಣ ಕೆಂಜಡೆ ಹೊತ್ತವಗೆ । ಉಡುಗಣಾಧಿಪನ ಮುಡಿದವಗೆ
ಮಡಿಯೊಳು ನಿಂತು ತಾನೊಲಿದು ಭಕ್ತರ ಕಾಯ್ವಮೃಡನಾಗಿಹ
ಮಹೇಶನಿಗೆ । ಮಂಗಲಂ ಜಯ ಮಂಗಲಂ ॥ 2 ॥
ಪುಲಿದೊಗಲನು ಹೊತ್ತು ಮೆರೆದವರೆ । ಕುಲಭೇದವನರಿಯದವಗೆ।

ಹಲವು ಭೂತಾಳಿಗಳೊಡನಾಡಿ ನಲಿವಗೆ । ಚೆಲುವ ಚಿತಾಭಸ್ಮ ।
ಭೂಷಿತಗೆ । ಮಂಗಲಂ ಜಯ ಮಂಗಲಂ ॥ 3 ॥
ಬಸವನೇರಥಮಾಡಿ ಕುಳಿತವಗೆ । ರತಿ ಪತಿಯನು ಮರ್ದಿನಿವಗೆ
ಸತಿ ಸಹಿತಲೆ ಭೂತಲಕೆ ತಾ ಬಂದು ನಿಜ ಭಕ್ತ ಗಣಪಣ್ಣ
ಗೊಲಿದವಗೆ । ಮಂಗಲಂ ಜಯ ಮಂಗಲಂ ॥ 4 ॥
ನಾಗಚರ್ಮಾಂಬರ ಭೂಷಿತಗೆ । ನಾಗಕುಂಡಲ ವಿಭೂಷಿತಗೆ ।
ನಾಗೇಂದ್ರ ಧ್ವಜನುತ ನಾಗಾನನಪಿತ । ನಾಗೇಂದ್ರಮಣಿ ಹಾರ
ಭೂಷಿತಗೆ । ಮಂಗಲಂ ಜಯ ಮಂಗಲಂ ॥ 5 ॥
ತರತರದಲಿ ಕೀರ್ತಿಯಗೊಂಬಾ । ಗುರುಪಾಂಡುರಂಗನೊಳ್
ಪ್ರೀತಿಬಿಂಬಾ । ಎರಕವಾಗಿಹ ಸೋಮಶೇಖರ ಭೂಪನ ಪೊರೆದ
ಭದ್ರಾಂಬಿಕೇಶ್ವರನಿಗೆ । ಮಂಗಲಂ ಜಯ ಮಂಗಲಂ ॥ 6 ॥

ಹೀಗೆ ಈ ದೇವಾಲಯದಲ್ಲಿ ಹಲವು ಪ್ರಾರ್ಥನಾ ಪದ್ಯಗಳು ಈಗಲೂ ಪ್ರಚಲಿತವಿದೆ.

(ಈ ಲೇಖನವನ್ನು ಸಿದ್ಧಪಡಿಸುವಲ್ಲಿ ನನಗೆ ಶ್ರೀ ಎಸ್.ಎಂ. ಚಿಕ್ಕರಮನೆ, ಐ.ಆರ್.ಎಸ್., ಬೆಂಗಳೂರು ಇವರು ಛಾಯಾಚಿತ್ರವನ್ನು ಹಳೆ ನಗರದ ಕೋಟೆಯ ಹತ್ತಿರ ಇರುವ ಇಂದು ಚರ್ಚ್ ಇರುವ ಸ್ಥಳವನು ಚಿಕ್ಕರಮನೆ ಎಂದು ಕರೆಯುವುದು ರೂಢಿಯಲ್ಲಿದೆ.)

ಆಧಾರಸೂಚಿ ಮತ್ತು ಟಿಪ್ಪಣಿಗಳು

The original stock of these families seems to have settled in Shirali about the fifteenth century A.D One branch of it went to Chittar near Manki in Honavar and settled there and the main family stock removed itself to Kandlur in kundapur in the neighbourhood of Hattiangdi. Some members of the Kandlur family came back to settle at Shirali. One Narnappaya of this branch settled in a hamlet known as Ulman, about one and a half miles from Shirali, For three generations this family retained the name of Kandlur and thereafter it began to be called Ulman.

In the adoption deep made in 1860, executed by Subbaraya of this family his father is described as Kandlur Gopalaya, A member of this Shirali Kandlur family married a girl of the Mankikar family and thereafter settled at Manki and assumed the latter surname. The descendants of this branch now call themselves by the surname Wagle and Row. Another member of this kandlur family by name Rangappaya obtained the Talgeri land in Shirali about the year 1781 and thereafter became known as Talgeri Rangappaya's son became Keshavashram Swami of the Chitrapur Math. Kandlur and Talgeri families jointly owned lands in Shirali showing the relationshiip of the two families. One member of the Talgeri family went to Sagar to practise there as a pleader, but retained his original name. Another member who settled at Tavanandi in Sagar assumed this latter surname.

Some members of this family distinguished themselves as officers under Keladi Kings after the capital was removed to Nagar in 1654. The first member of the Kandlur family who went there became the Manevarte Heggade. (See para 71 of the Introduction to Part 1 for an explanation of the term Heggade.) Later on another member went there and became Ugranada Heggade, and a member of the Chittar branch who also went there became Chickaramane Heggade. After the downfall of the Keladi Kingdom, the Ugran and Manevarte families returned to Kundapur and the Chickermane family to Chittar. There are no members of the original Kandlur family in Kundapur

or any where in South Kanara, their descendants viz, the Ugrankars and Tombatkars only exist there.

Some years after their return from Nagar a few members of the Ugran family returned to Shirali. Thus there are two branches of Ugrdan, one in Kundapur and the other in Shirali. The Tombat family is a branch of the Kundapur ugran, their progenitor being Ugranada Santaya who was a Shanbhog under in Tombat. Branches of the Chickeman family settled at karki in Honavar, at Nilekani in Sirsi and at Gokarn. The first two of these have assumed the local surname of Karki and Nilekani, but the last branch still retains the old name. Some members of the family residing in Chittar call themselves by that name. The Nilekani branch when it had first settled in Honavar was known as

Sthalada Honavar (........) as is seen in some documents relating to the Gopalkrishna Temple of Honavar, this branch having taken a prominent part in establishing this temple. But after it permanently settled in Nilekani, the members have assumed the name of that place as surname. The family has also built a temple at Nilekani. Some members of Karki branch have recently assumed the surname Honavar. Thus the family has the following branches arranged alphabetically : 1. Chickarmane, 2. Chittar, 3. Honavar, 4. Kandlur, 5. Karki, 6. Manevarte, 7. Manki, including Wagle and Row, 8. Nilekani, 9. Talgeri, 10. Tavanandi, 11. Tombat, 12. Ugran and 13. Ulman.

Of these the Manervarte family has left no male issues. One Kandlur Anantaya of this branch materially helped in building up the Gopalkrishna Temple of Hattiangadi about the beginning of the seventeenth century and his grandson known as Manevare Anantaya took prominent part in the appoinment of the first and second Swamis of the Chitrapur Math in the years 1708 and 1720. This branch, it seems, was closely related to the Hattiangdi family of Vatsa Gotra. The Chickermane family seems to have played a prominent part in Nagar. The family temple of their Ishata Deva Bhadrambika at Chittar was built in 1724 with help of a grant received from the Nagar King and the family received an Inam land in Ulvare by a deed of the year 1739 for maintaining a small standing army in Kanara to be placed at the disposal of the King when required.

Mr. Chickarmane Bhavanishankraya built a small Chidanandeshwar Temple near Kotitheerti, in Gokarn. The worship is conducetd by Gokarn Priests by turn. The Ugran family was one of the prominent familis which took part in the apointment of the first two Chitrapur Swamis. Ugranand Devappya was one of the signatories to the writing given to the first and the second Swamis. The original name of the whole group of 13 familis described above was, it seems, "Wagle" according to Goa records of Mangeshi tmple. This name has been assumed by a branch of the family.

Ugran, Chickarmane and other related Families (No. 492)

Chitrapur Sardaswat Series Saraswat Families, Part II by Shripad S. Talmaki Kanara Saraswat Association. Published on 1st Feb 1939.

The crown land in the Uluvari village belonging to the Gerasoppe chief Saluva Krishna also, included garden, house, a house site as known from an epigraph dated A.D. 1550 A.D. (KIVi No. 70. The crown land of Chennabahira Devi of Sangitapur in Batkala comprised Mekke, Suggipady fields as known from an inscription dated in the same year (ibid iii Pt. i No. 14) (western Karnataka - Itts Agrarian Relations 1500-1800 AD p. 79)

Usually, the crown lands were cultivated either by tenants or different individuals who received the lands as balike. For instance, the crown land in the Uluvari village (N.K.) was leased to tenants who paid rent known as Muli Geni.(SII Vii No. 269) In the saka era 1485 A.D. 1562 the Aramaneya Bhandara sthala situated in the place, Gopadi of the Kotesvara village was cultivated by one Anna Hattavara. (Ibid ix Pt. ii No. 675) (Western Karnataka Itts Agrarian Relations 1500-1800 AD p. 79)

The same things followed in the villages of Ulvari, Tonse and Uppuru, Manjesvaraand Kumbala as known from a paper document and a Kadatta dated Siddarti and Raktakshai Samvatsara (1739 and 1748 A.D.) (Chitrapura Basavappa Nayakana Bhasapatra, Heras A Sand of Basavappa Nayaka of Ikkeri PIHRC Xii p. 36-40 (1929). (Western Karnataka - Its Agrarian Relations 1500-1800 AD p. 123)

If an individual wanted to purchase nearby lands for some other purposes, he had to take the permission of the ruler. This has been illustrated in a paper documents belinging to the year A.D. 1739 and 1743. According to paper document dated 1739, one Anantayya of manavarte, personally approached to Keladi ruler) and applied for the Uttara of Jadinasthala in the Uluvari village of Saiganahalli Magani of Medje Sime, for construction of the Bhavani Sankara Matha at Bandageri, near Kotitirtha in Gokarna. (A copy of paper docuent of Basavappa Nayaka found in the Chitrapura Matha at Sirali N.K. Fifty years Bliss (Ed. by H. Gopal Rao) pp. 327-28. and (Western Karnataka-Itts Agrarian Relations 1550-1800 AD p. 79)

ಹೊನ್ನಾವರದಿಂದ ದಕ್ಷಿಣಕ್ಕೆ ಮಂಕಿಮಡಿ ಸುಮಾರು 12–15 ಮೈಲು ದೂರದಲ್ಲಿದೆ.

❑

ಉತ್ತರ ಕನ್ನಡ ಜಿಲ್ಲೆಯ ನೀರಲಗಾ ಗ್ರಾಮದಲ್ಲಿ ಇತ್ತೀಚಿಗೆ ಪತ್ತೆಯಾದ ಜೈನ ಶಿಲ್ಪಗಳು

– ಭರಮಪ್ಪ ಭಾವಿ, ಡಾ. ಎಸ್.ಕೆ. ಮೇಲಕಾರ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನನೀರಲಗಾ ಗ್ರಾಮದ ಬಳರಾಮ ಶೆಟವಪ್ಪಾ ಬೂರ್ಜಿ ಇವರ ಹೊಲದಲ್ಲಿ ನೀರಾವರಿ ಪೈಪ್‌ಲೈನ ಸಲುವಾಗಿ ನೆಲ ಅಗೆಯುವಾಗ ಪತ್ತೆಯಾದ ಪಾರ್ಶ್ವನಾಥ ವಿಗ್ರಹ ಮತ್ತು ಯಕ್ಷ-ಯಕ್ಷಿಣಿಯರ ಶಿಲ್ಪಗಳ ಕುರಿತು ದಿ. 10–2–2015ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಇದರ ಛಾಯಾಚಿತ್ರ ನೀಡಿ ಪ್ರಕಟಿಸಲಾಗಿತ್ತು, ಅದರನ್ವಯ ಶಿಲ್ಪಗಳನ್ನು ಹಾಗೂ ಆ ಪ್ರದೇಶದಲ್ಲಿ ಸಂಶೋಧನ ಕ್ಷೇತ್ರಕಾರ್ಯವನ್ನು ಮಾಡಲಾಗಿ ಆ ಶಿಲ್ಪಗಳ ಕಾಲಮಾನ ಮತ್ತು ಅವುಗಳ ಐತಿಹಾಸಿಕತೆಯನ್ನು ತಿಳಿಸಿ, ನಾಡಿನ ಜನತೆಗೆ ಆ ಶಿಲ್ಪಗಳನ್ನುಪರಿಚಯಿಸುವದೆ ಈ ಲೇಖನದ ಉದ್ಧೇಶವಾಗಿದೆ.

ಸಮಭಂಗಿಯಲ್ಲಿ ನಿಂತ ಈ ಪಾರ್ಶ್ವನಾಥನ ವಿಗ್ರಹ 34 ಇಂಚು ಎತ್ತರ, 20 ಇಂಚು ಅಗಲ, ಹಾಗೂ 7 ಇಂಚು ದಪ್ಪವಾಗಿರುತ್ತದೆ. ಪಾರ್ಶ್ವನಾಥನ ತಲೆಯ ಮೇಲೆ 7 ನಾಗಹೆಡೆಗಳಿವೆ. ಈ ಹೆಡೆಗಳಿಗೆ ಏಕ ದೇಹಾಂಗವೂ ಮೇಲಿನಿಂದ ಕೆಳಗಿನವರೆಗೆ ಸುರುಳಿ ಸುರುಳಿಯಾಗಿ ಆತನ ದೇಹದ ಹಿಂದೆ ಇಳಿಬಿಟ್ಟು ತೋರಿಸಿದ್ದಾರೆ. ತಲೆಯ ಬದಿಗಳಲ್ಲಿ ಚಾಮರಗಳಿವೆ. ತಲೆಯ ಮೇಲೆ ಮುಕ್ಕೊಡೆ (ಛತ್ರಿ) ಇದೆ. ಕೆಳಗಡೆ ಬದಿಗಳಲ್ಲಿ ಕುಳಿತ ಧರಣೇಂದ್ರ ಮತ್ತು ಪದ್ಮಾವತಿ ಯಕ್ಷ-ಯಕ್ಷಿಣಿಯರಿದ್ದಾರೆ. ಪಾರ್ಶ್ವನಾಥನ ಸಮಗ್ರ ದೇಹಾಂಗ ಹಾಗೂ ನಾಗರ ಹೆಡೆಗಳು ಪ್ರಮಾಣಬದ್ಧ ವಾಗಿವೆ. ಮುಖದಲ್ಲಿ ತೇಜಸ್ಸು ಎದ್ದು ಕಾಣುತ್ತಿದ್ದು, ನಿಳವಾದ ಮೂಗು, ಉದ್ಧವಾದ ಕಿವಿಗಳು, ತೆರೆದ ಕಣ್ಣುಗಳಿವೆ. ದೇಹಾಂಗ ರಚನೆ ಶೈಲಿಯಿಂದ ಈ ಶಿಲ್ಪದ ಕಾಲಮಾನ ಕ್ರಿ.ಶ. ಸು. 12ನೆಯ ಶತಮಾನವೆಂದು ಡಾ. ಆರ್.ಎಂ. ಷಡಕ್ಷರಯ್ಯನವರ ಅಭಿಪ್ರಾಯವಾಗಿದೆ. ಸಮಕಾಲೀನವಾಗಿ ಕಲ್ಯಾಣ ಚಾಲುಕ್ಯರಿಗೆ ಸಾಮಂತರಾಗಿ ಆಳುತ್ತಿದ್ದ ಗೋವಾ ಕದಂಬರ ಆಳ್ವಿಕೆಯಲ್ಲಿ ಈ ಶಿಲ್ಪವನ್ನು ರಚಿಸಿರಬೇಕು. ನಾಗಸರ್ಪ ಸುತ್ತಿದ ದೇಹಾಂಗದ ವಿನ್ಯಾಸ, ತೆರೆದ ಕಣ್ಣುಗಳು ಹಾಗೂ ಇಳಿಬಿಟ್ಟ ಕೈಗಳ ಕೆಳಗಡೆ ಹಾಗೂ ಸುತ್ತಿದ ನಾಗದೇಹದ ಭಾಗದಲ್ಲಿರುವ ಪುಷ್ಪದ ಅಲಂಕರಣೆ ವಿಶೇಷ ಗಮನ ಸೆಳೆಯುತ್ತವೆ. ಈ ಸುಂದರ ಶಿಲ್ಪ ಸಿಕ್ಕ ಸ್ಥಳದಲ್ಲಿ ಹಾಳಾದ ಮಣ್ಣಿನ ದಿಬ್ಬವಿರುವು ದರಿಂದ ಅಲ್ಲೊಂದು ಹಾಳಾದ ಬಸದಿ ಮುಚ್ಚಿರುವ ಸಾಧ್ಯತೆ ಹೆಚ್ಚು.

ಪಾರ್ಶ್ವನಾಥ ಶಿಲ್ಪ ದೊರೆತ ಸ್ಥಳದಲ್ಲಿಯೇ ಮತ್ತೊಂದು ಸುಂದರವಾದ ಹಾಗೂ ಅಪರೂಪವಾದ ಯಕ್ಷ-ಯಕ್ಷಿಣಿಯರ ಶಿಲ್ಪವಿದೆ, ಅದರಲ್ಲಿ ದಂಪತಿಗಳಿಬ್ಬರು ತ್ರಿಭಂಗಿಯಲ್ಲಿನಿಂತಿರುವರು. ಯಕ್ಷನು ಚತುರ್ಭುಜದಾರಿ, ಯಕ್ಷಿಯುದ್ವಿಭುಜದಾರಿಯಾಗಿದ್ದು ಯಕ್ಷನ ಕೈಗಳಲ್ಲಿ ಪದ್ಮ, ಪಾಶ, ಅಂಕುಶ, ಮತ್ತು ಫಲಗಳಿವೆ. ಯಕ್ಷಿಯ ಕೈಗಳಲ್ಲಿ ಪದ್ಮಗಳಿವೆ ಈರ್ವರು ಹೆಚ್ಚಿನ ವಸ್ತ್ರಾಭರಣಗಳನ್ನು ಧರಿಸಿರುವರು. ಈರ್ವರ ಕಿರೀಟ ತುದಿಯ ಬದಿಗಳಲ್ಲಿರುವ ರಂದ್ರಗಳ ಸಹಾಯದಿಂದ ಯಕ್ಷ-ಯಕ್ಷಿಣಿಯರಿಗೆ ಪೂಜಾ ಸಂದರ್ಭದಲ್ಲಿ ವಸ್ತ್ರವನ್ನು ಕಟ್ಟಿ ಅಲಂಕರಿಸುತ್ತಿದ್ದರೆಂದು ತಿಳಿಯುತ್ತದೆ. ಇವರ ತಲೆಯ ಮೇಲುಗಡೆ ಇರುವ ಕೀರ್ತಿ ಮುಖದ ಬದಿಗಳಲ್ಲೂ ಅರ್ಧವೃತ್ತಾಕಾರದ ಅಂಚಿನ ಉದ್ದಕ್ಕೂ ಏಕಸಾಲಿನಲ್ಲಿ ಮಣಿಗಳ ಹಾರವನ್ನು

ಕೆತ್ತಲಾಗಿದೆ. ಈ ಮೂರ್ತಿಯ ಕೆಳಭಾಗ ಮುರಿದು ಹೋಗಿದೆ. ಇವರ ದೇಹಾಂಗ ಮತ್ತು ವಸ್ತ್ರಾಭರಣಗಳ ಶೈಲಿಯಿಂದ ಈ ಶಿಲ್ಪದ ಕಾಲಮಾನವೂ ಕ್ರಿ.ಶ. 12ನೆಯ ಶತಮಾನವಾಗಿದೆ. ಈ ಶಿಲ್ಪಗಳು ದೊರೆತಪ್ರದೇಶದಲ್ಲಿ ಉತ್ಖನನ ಕೈಗೊಂಡರೆ ಬಸದಿಯ ಹೆಚ್ಚಿನಪ್ರಾಚ್ಯಾವಶೇಷಗಳು ಇನ್ನೂ ಬೆಳಕಿಗೆ ಬರುವ ಸಾಧ್ಯತೆಯಿರುತ್ತದೆ.

ಈ ರೀತಿ ನೆಲದಡಿಯಲ್ಲಿ ಜೈನ ಶಿಲ್ಪಗಳು ದೊರೆಯು ತ್ತಿರುವದು ಇದೆ ಮೊದಲಲ್ಲ. ಕರ್ನಾಟಕದಲ್ಲಿ ಈ ಮೊದಲು ಕಸಮಳಗಿ, ದೇವಗಿರಿ, ಹಳಿಂಗಳಲ್ಲಿ ದೊರೆತಿರುವುದು ಉಲ್ಲೇಖಾರ್ಹವಾಗಿವೆ. ಹೆಚ್ಚಾಗಿ ಜೈನರ ಭಗ್ನವಾದ ಸ್ವರೂಪದಲ್ಲಿರುವ ಶಿಲ್ಪಗಳು ಜೈನೇತರರ ಆಕ್ರಮಣದಿಂದಲೋ ಅಥವಾ ನಿರ್ಮಾಣ ಹಂತದಲ್ಲಿ ಶಿಲ್ಪಿಯ ದೋಷದಿಂದಲೋನೆಲದಡಿ ಸೆರಿದರೆ, ಭಗ್ನವಾಗದೆ ಇರುವ ರೂಪದಲ್ಲಿ ದೊರೆಯುತ್ತಿರುವ ತೀರ್ಥಂಕರ ಶಿಲ್ಪಗಳು ಅವು ಅನ್ಯರ ದಾಳಿಯ ರಕ್ಷಣೇಗಾಗಿ ಜೈನರಿಂದಲೆ ನೆಲದಡಿ ಸರಿದುದರ ಸುಳಿವನ್ನು ನೀಡುತ್ತವೆ. ಆದರೆ ಹೆಚ್ಚಾಗಿ ಪಾರ್ಶ್ವನಾಥರ ಶಿಲ್ಪಗಳೆ ದೊರೆಯುತ್ತಿರುವದು ಯೋಚಿಸಲೆಬೇಕಾದ ಸಂಗತಿಯಾಗಿದೆ, ಈ ಶಿಲ್ಪ ಸರ್ಪವನ್ನು ಹೊಂದಿರುವುದರಿಂದ ಈ ಶಿಲ್ಪವನ್ನು ಅನ್ಯಮತಿಯರು ಭಗ್ನಗೊಳಿಸಲು ಹಿಂಜರಿದಿರುವ ಸಾಧ್ಯತೆಯನ್ನು ಇಲ್ಲಿ ಗಮನಿಸಬಹುದು. ಜೈನ ಧರ್ಮದಲ್ಲಿ ಮುಖ್ಯವಾಗಿ ಯಕ್ಷ-ಯಕ್ಷಿ ಸಹಿತ ತೀರ್ಥಂಕರ ಶಿಲ್ಪಗಳು, ಯಕ್ಷ-ಯಕ್ಷಿ ರಹಿತ ತೀರ್ಥಂಕರ ಶಿಲ್ಪಗಳು, ಯಕ್ಷ-ಯಕ್ಷಿಯರ ಸ್ವತಂತ್ರ ಶಿಲ್ಪಗಳು, ಯಕ್ಷ-ಯಕ್ಷಿಯರ ಜೋಡಿ ಶಿಲ್ಪಗಳನ್ನು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಇನ್ನು ಅಧ್ಯಯನ ಮಾಡುವ ಅವಶ್ಯಕತೆ ಕಂಡುಬರುತ್ತದೆ.

ಒಟ್ಟಾರೆಯಾಗಿ ಇತಿಹಾಸದ ಪದರುಗಳಲ್ಲಿ ಜೈನ ಧರ್ಮಿಯರು ಅತ್ಯಂತ ಉತ್ಕೃಷ್ಟ ಸಾಹಿತ್ಯ ಹಾಗೂ ಕಲೆ - ವಾಸ್ತುಶಿಲ್ಪವನ್ನು ಹೊಂದಿರುವುದು ಎಷ್ಟು ಸತ್ಯವೂ ಅಷ್ಟೆ ಇಂದು ಅವರು ಭಗ್ನವಾದ ಬಸದಿ, ಮೂರ್ತಿಶಿಲ್ಪಗಳನ್ನು ತಮ್ಮ ಪಾಲಿಗೆ ಹೊಂದಿರುವುದನ್ನು ಎಲ್ಲರೂ ಒಪ್ಪಲೆಬೇಕಾಗಿದೆ. ಸಂರಕ್ಷಿಸುವುದು ಅತೀ ಅವಶ್ಯದ ಕೆಲಸವಾಗಿದೆ.

[ಈ ಮೂರ್ತಿಗಳ ಅಧ್ಯಯನ ಕಾರ್ಯದಲ್ಲಿ ಸಹಕರಿಸಿದ ಹಿರಿಯನಿವೃತ್ತ ಪ್ರಾಧ್ಯಾಪಕರಾದ ಡಾ. ಆರ್.ಎಂ. ಷಡಕ್ಷರಯ್ಯನವರಿಗೂ, ಡಾ.ಶಾಂತಿನಾಥ ದಿಬ್ಬದ ಅವರಿಗೂ, ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದ ಮೇಲ್ವಿಚಾರಕರಾದ ಡಾ. ಎಸ್.ಕೆ. ಮೇಲಕಾರವರಿಗೂ, ಹಾಗೂ ನೀರಲಗಾ ಗ್ರಾಮದ ಜನರಿಗೂ ನನ್ನ ವಂದನೆಗಳೂ.]

ಆಧಾರಸೂಚಿ

1. ಮಿರ್ಜಿ ಅಣ್ಣಾರಾಯ, 1981 : **'ಭಾರತಿಯ ಸಂಸ್ಕೃತಿಗೆ ಜೈನ ಧರ್ಮದ ಕೊಡುಗೆ'**, ಜೈನ ಸಂಸ್ಕೃತಿ ಸಂರಕ್ಷಕ ಸಂಘ, ಸೊಲ್ಲಾಪುರ.
2. ನಾಗರಾಜಯ್ಯ ಹಂಪ, 1976 : 'ಯಕ್ಷ ಯಕ್ಷಿಯರು', ಚಂದ್ರಸಾಗರವರ್ಣೀ ಗ್ರಂಥಮಾಲೆ, ಬೆಂಗಳೂರು.
3. Kamat, Suryanath, 1985 : 'Uttar Kannada District Gazetteer, Govt. of Karnataka, Bengaluru.

ಉತ್ತರ ಕನ್ನಡ ಜಿಲ್ಲೆಯ ಸಾಂಸ್ಕೃತಿಯ ಅಧ್ಯಯನ

– ಡಾ॥ ಡಿ.ಎಂ. ನಾಗರಾಜು

ಒಂದು ಜಿಲ್ಲೆಯ ಇತಿಹಾಸವೆಂದರೆ ಆ ಜಿಲ್ಲೆಯಲ್ಲಿ ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸ ಎಂಬ ಭಾವನೆ ಬಹುಮುಖ್ಯವಾಗಿದೆ. ಇತಿಹಾಸವನ್ನು ಬರೆಯುವ ಆಕರಗಳಲ್ಲಿ ರಾಜಕೀಯ ಇತಿಹಾಸವೇ ಮುಖ್ಯವಾಗಿದ್ದು ನಂತರ ಜಿಲ್ಲೆಯ ಕಲೆ, ಧರ್ಮ, ಸಾಮಾಜಿಕ, ರಾಜಕೀಯ, ಆರ್ಥಿಕ ವಿಷಯಗಳು ಕುರಿತು ಅನುಬಂಧದ ರೀತಿಯೋ ಅಥವಾ ಅವುಗಳನ್ನು ನಿರೂಪಿಸುವ ಕೆಲವು ವಿಷಯಗಳು ಈ ಜಿಲ್ಲೆಯನ್ನು ಆಳಿದ ರಾಜಮನೆತನಗಳು, ಇಲ್ಲಿಯ ಜನತೆಯ ಇತಿಹಾಸ, ಬದುಕಿದ ರೀತಿ, ಅನುಸರಿಸಿದ ಧರ್ಮ, ಕಲೆ, ಜೀವನದ ಸಮಸ್ಯೆಗಳು, ಜೀವನ ಮೌಲ್ಯಗಳು ಇತ್ಯಾದಿ ವಿವರಣೆಯನ್ನು ಈ ಜಿಲ್ಲೆಯ ಇತಿಹಾಸವೆಂದು, ಈ ಜಿಲ್ಲೆಯ ಜನತೆಯ ಜೀವನವನ್ನು ಕುರಿತಾದ ಇಂತಹ ಅಧ್ಯಯನವನ್ನು ಸಾಂಸ್ಕೃತಿಕ ಅಧ್ಯಯನವೆಂದೂ ನಾವು ಕರೆಯಬಹುದು.

ಶಾಸನಗಳನ್ನು ಅಧ್ಯಯನ ಮಾಡುವಾಗ ಒಂದು ನಿಯಮನ್ನು ಅನುಸರಿಸಿದೆ. ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಬಿಟ್ಟು ಉಳಿದ ಸಾಂಸ್ಕೃತಿಕ ಮತ್ತು ಸಾಮಾಜಿಕ ಅಂಶಗಳನ್ನು ಶಾಸನಗಳಿಂದ ಇಲ್ಲಿ ಸಂಗ್ರಹಿಸಲಾಗಿದೆ. ಈ ಅಧ್ಯಯನ ಆಧಾರಗಳಲ್ಲಿ ಶಾಸನಗಳು ಪ್ರಮುಖವಾದವು. ಉತ್ತರಕನ್ನಡ ಜಿಲ್ಲೆಯ ಶಾಸನಗಳ ಮೂಲಕ ಇತಿಹಾಸವನ್ನು ನೋಡುವ ಕ್ರಮ ಇಲ್ಲಿದೆ. ಉತ್ತರಕನ್ನಡ ಜಿಲ್ಲೆಯ ಭೌಗೋಳಿಕವಾಗಿ ಕರ್ನಾಟಕದಲ್ಲಿಯೇ ಒಂದು ವಿಶಿಷ್ಟವಾದ ಜಿಲ್ಲೆ. ಪೂರ್ವಕ್ಕೆ ಅರೆಮಲೆನಾಡು ನಡುವೆ ದಟ್ಟ ದುರ್ಗಮವಾದ ಮಲೆನಾಡು ಹಾಗೂ ಪಶ್ಚಿಮಕ್ಕೆ ಅರಬ್ಬೀಸಮುದ್ರದುದ್ದಕ್ಕೂ ಕರಾವಳಿ ಪ್ರದೇಶ, ಈ ಮೂರೂ ಪ್ರಕಾರದ ಭೌಗೋಳಿಕ ಲಕ್ಷಣಗಳನ್ನು ಮೇಳೈಸಿಕೊಂಡಿರುವುದು ಉತ್ತರಕನ್ನಡ ಜಿಲ್ಲೆ. ಉತ್ತರಕನ್ನಡ ಎಂದು 31.01.1977ರಿಂದ ಪ್ರಾರಂಭವಾಯಿತು. ಈ ಜಿಲ್ಲೆಯು ಒಟ್ಟು 11 ತಾಲ್ಲೂಕುಗಳನ್ನು ಒಳಗೊಂಡಿದೆ. ಅಂಕೋಲ, ಭಟ್ಕಳ, ಹಳಿಯಾಳ, ಹೊನ್ನಾವರ, ಕಾರವಾರ, ಕುಮ್ಮಟ, ಮುಂಡಗೋಡ, ಸಿದ್ಧಾಪುರ, ಶಿರಸಿ, ಸೂಪ, ಯಲ್ಲಾಪುರ. ಈ ಭಾಗವನ್ನು ಆಳಿದವರು ಚುಟು ಶಾತವಾಹನ, ಕದಂಬರು, ಪಲ್ಲವ, ಕಲ್ಯಾಣ ಚಾಳುಕ್ಯ, ಶೇವುಣರು, ಹೊಯ್ಸಳ, ಗೋವ ಕದಂಬ, ಹಾನಗಲ್ ಕದಂಬ, ಕದಂಬ ಚಾಂದವರ, ಆಳುಪ ಮುಸ್ಲಿಮ್, ವಿಜಯನಗರ, ಸಾಳುವ ಗೆರುಸೊಪ್ಪ, ಸಾಳುವ ಹಡವಳ್ಳಿ, ಬೀಳಗಿ ಒಡೆಯರ, ಸೊಂದನಾಯಕರು, ಬಿಜಾಪುರ ಆಳ್ವಿಕೆ, ಮರಾಠರು, ಪೋರ್ಚುಗೀಸ್, ಡಚ್, ಫ್ರೆಂಚ್, ಜರ್ಮನ್, ಇಂಗ್ಲಿಷರು, ಹೈದರ್ ಮತ್ತು ಟಿಪ್ಪು ಆಳಿದರು ಎಂಬುದಕ್ಕೆ ಇವರ ಅನೇಕ ಶಾಸನಗಳು ಸಾಕ್ಷಿಯಾಗಿದೆ. ಹಾಗೂ ಈ ಜಿಲ್ಲೆಯಲ್ಲಿ ದೊರಕಿರುವ ಶಾಸನಗಳನ್ನು ಗಮನಿಸಬಹುದು.

ಸುಮಾರು ಕ್ರಿ.ಪೂ. 2ನೇ ಶತಮಾನದ ಚುಟುವಂಶದ ರಾಜ ವಿಣ್ಹುಕಡ, ಪ್ರಾಕೃತ ಭಾಷೆ ಬ್ರಾಹ್ಮಿಲಿಪಿ ಬನವಾಸಿ ಶಾಸನದಲ್ಲಿ ಅರಸನ ಮಗಳಾದ ಶಿವಸ್ಕಂದನಾಗಶ್ರೀ ಎಂಬುವಳು ಒಂದು ನಾಗಪ್ರತಿಷ್ಠೆಯನ್ನು ಮತ್ತು ಒಂದು ಕೆರೆ ಹಾಗೂ ಒಂದು ವಿಹಾರ ಇವುಗಳ ನಿರ್ಮಾಣವನ್ನು ಮಾಡಿಸಿದಳೆಂದು ತಿಳಿಸುತ್ತದೆ. ಈ ನಾಗವಿಗ್ರಹವನ್ನು ಬನವಾಸಿ (ಸಂಜಯಂತಿ)ಯ ಆಚಾರ್ಯ ಇದಮೊರ್ಕನ ಶಿಷ್ಯನಾದ ನಟಕನೆಂಬುವನು ನಿರ್ಮಿಸಿದನು. ಈ ಧರ್ಮ ಕಾರ್ಯಗಳೆಲ್ಲವೂ ಮಂತ್ರಿಯಾದ ಖಡಸತಿ ಎಂಬುವನ ಮೂಲಕ ನೇರವೇರಿಸಲ್ಪಟ್ಟವು.

ಕದಂಬ ಮನೆತನದ ಮೃಗೇಶವರ್ಮ ಕ್ರಿ.ಶ. 5ನೇ ಶತಮಾನ ದಕ್ಷಿಣಾತ್ಯ ಚೌಕತಲೆಯುಳ್ಳ ಭಾಷೆ. ಇದು ಒಡೆದ ಶಾಸನ ಬನವಾಸಿಯಿಂದ ಸಿದ್ಧ ಪದದಿಂದ ವಿಷ್ಣುದೇವರನು ನೆನಸುತ್ತ ಪ್ರಾರ್ಥನೆ ಮಾಡುತ್ತಾ ವಿಷ್ಣುವನ್ನು ಜೋತಿರಮಯ್ಯ ಪ್ರಪಂಚ ಸೃಷ್ಟಿ ಮಾಡಿದವನು ಎಂದು ದೊಡ್ಡವನು. ಚಲಿಸುವ ಮತ್ತು ಚಲನವಲ್ಲದ ಮತ್ತು ಶಾಂತಿವರ್ಮನ ಮಗ ಕಾಕುಸ್ಥವರ್ಮನ ಬಗ್ಗೆ ತಿಳಿಸುತ್ತದೆ. ಶಾಂತಿವರ್ಮನನ್ನು ರಣಭೀಮ ಎಂದು ನಿರೂಪಿಸುತ್ತದೆ. ಇವನ ಮಗ ಮೃಗೇಶವರ್ಮನ ಬಗ್ಗೆ ತಿಳಿಸುತ್ತದೆ. ಪಲ್ಲವರನ್ನು ಮತ್ತು ಗಂಗರನ್ನು ಗೆದ್ದ ವಿವರವಿದೆ. ದಿನಾಂಕವಿಲ್ಲದ ಗುಡ್ನಾಪುರ 5ನೇ ಶತಮಾನದ ರವಿವರ್ಮನ ಶಾಸನದಲ್ಲಿ ಕದಂಬ ರಾಜ ವಂಶಾವಳಿಯನ್ನು ವಿವರಿಸಿದೆ. ನಂತರ ಅರಸನು ಮನ್ಮಥದೇವಾಲಯವನ್ನು ನಿರ್ಮಿಸಿ ಅದರ ನಿತ್ಯಪೂಜೆ ಮತ್ತು ನೈವೇದ್ಯಕ್ಕಾಗಿ ವೃತ್ತಿಯನ್ನು ಕೊಟ್ಟನೆಂದು ಗುಡ್ಡತಟಾಕವೆಂಬ ಕೆರೆಯನ್ನು ತೋಡಿಸಿದನೆಂದು ತಿಳಿಸುತ್ತದೆ. ಕಾಮಜಿನಾಲಯ ನಿರ್ವಹಣೆ ಮಾಡಿಸಿ, ಕಾಮದೇವಾಲಯ ಹಾಕಿನಿಪಲ್ಲಿಯ ಪದ್ಮಾವತಿ ದೇವಾಲಯ ಮನ್ಮಥನಿಗೆ ಅರ್ಪಿಸಿದನು. ಒಂದು ಮುಖ್ಯವಾದ 1 ರಿಂದ 9ರ ಕನ್ನಡ ಸಂಖ್ಯೆಗಳನ್ನು ಮೊದಲನೆ ಸಲ ಕಂಡುಹಿಡಿದಿದ್ದು ಇದು ದಾಖಲೆಯಿದೆ. ಕುಂತಗಣಿ ರವಿವರ್ಮನ 5–6ನೇ ಶತಮಾನದ ಶಾಸನದಲ್ಲಿ ರಾಜರವಿವರ್ಮ 24 ನಿವರ್ತನಗಳನ್ನು ಭೂಮಿ, ಕೆರೆಯಬಂಡಿಯ ಕಟ್ಟಿಸಲು ವರಿಯಾತ ಗ್ರಾಮವನ್ನು ದಮಯಗೋತ್ರದ ವೇದಗಳನ್ನು ತಿಳಿದವನಾಗಿದ್ದನು. ಇದೇ ರಾಜನ ಅಜ್ಜಬಲ್ ಶಾಸನದಲ್ಲಿ ಪ್ರೀತಿಯ ವೈದ್ಯನಾದ ದೇಶಾಮಾತ್ಯ ನಿಲಕಂಠ ಮಹಾದೇವದೇವಾಲಯದ ರಾಜನು ತನ್ನ ರಾಜಧಾನಿ ವೈಜಯಂತಿಯನ್ನು ನಾಲ್ಕು ನಿವರ್ತನ ಭೂಮಿಯನ್ನು ದಾನನೀಡಿದ ದಾಖಲೆಯಿದೆ. ಇದೇ ಕಾಲದ ಹೊನ್ನಾವರ ಶಾಸನದಲ್ಲಿ ಪ್ರಾರಂಭದಲ್ಲಿ ಬುದ್ಧನ ಬಗ್ಗೆ ಹೊಗಳಿಕೆಯ ಶ್ಲೋಕ ಪದಗಳಿವೆ. ಚಿತ್ರಸೇನಮಹಾಕೆಲ್ಲರವಿ ಆಳುತ್ತಿರುವಾಗ ರಾಜಧಾನಿಯಲ್ಲಿ ಕಣಸಾಪುಕ್ಕೊಳಿ ಎಂಬ ಹೊಲವನ್ನು ಜೊತೆಗೆ ನಾಪಿಟಪಲ್ಲಿ ಹೊಂದಿರುವ ತೋಟ ಸೇನಾಪತಿ ಸಿಂಹ ಸೇನಾಪತಿಯ ಮಗ ಜನನಂದಿ ಬಗ್ಗೆ ವಿವರವಿದೆ. ಈ ಶಾಸನವನ್ನು ಬರೆದವರು ಎರಡನೇ ಕೃಷ್ಣವರ್ಮನ ಕ್ರಿ.ಶ. 6ನೇ ಶತಮಾನ ರಾಜನು ಕರವಣ್ಣಾಗ ಜಿಲ್ಲೆಯಲ್ಲಿರುವ ಗಿರಗಿಡ ಗ್ರಾಮದ ಕಮಕಪಲ್ಲಿ ವಾರಾಹಿಗೋತ್ರದ ಒಬ್ಬ ಬ್ರಾಹ್ಮಣನ ಸೋವಸ್ವಾಮಿನ್ ಹೆಸರಿನ ವಿದ್ಯಾರ್ಥಿ ಋಗ್ವೇದ ಹೇಳುವನು, ಸೋಮತ್ಯಾಗಗಳನ್ನು ಮಾಡುವವನಿಗೆ ದಾನ ನೀಡಿದ ವಿವರವಿದೆ.

ಬೌದ್ಧಧರ್ಮ :– ಸುಮಾರು ಕ್ರಿ.ಪೂ. 2ನೇ ಶತಮಾನದ ಚುಟುವಂಶದ ಅರಸನ ಮಗಳಾದ ಶಿವಸ್ಕಂದನಾಗಶ್ರೀ ವಿಹಾರ ಮಾಡಿಸಿದಳೆಂದು ತಿಳಿಸುತ್ತದೆ. ಬನವಾಸಿ ಒಂದು ದೊಡ್ಡ ಬೌದ್ಧ ಕೇಂದ್ರವಾಗಿತ್ತು. ಸುತ್ತಮುತ್ತ ಬೌದ್ಧ ನೆಲೆಗಳು ಕೆಲವು ಸೂಪ್ತಗಳಂಥ ಅವಶೇಷಗಳು ಬೌದ್ಧ ಶಿಲ್ಪಗಳು ಬೆಳಕಿಗೆ ತಂದಿದ್ದಾರೆ. ಎರಡು ಚೈತ್ಯಾಲಯಗಳು ಬುದ್ಧನ ಪಾತ, ಮಹಾವಂಶ, ಅಶೋಕನ ಬೌದ್ಧ ಬಿಕ್ಕುಗಳಿಗೆ ಚೈತ್ಯಾಲಯಗಳಿವೆ. ಕ್ರಿ.ಶ. 5–6ನೇ ಶತಮಾನದಲ್ಲಿ ಹೊನ್ನಾವರ ಶಾಸನದ ಪ್ರಾರಂಭದಲ್ಲಿ ಬುದ್ಧನ ಬಗ್ಗೆ ಹೊಗಳಿಕೆಯ ಶ್ಲೋಕಗಳಿವೆ. ಶಾತವಾಹನ ಕಾಲದಲ್ಲಿ ಬನವಾಸಿ ಪ್ರಸಿದ್ಧ ಪಟ್ಟಣವಾಗಿತ್ತು. ಬಬ್ರುವಾಡದಲ್ಲಿ ಕದಂಬರ ಕಾಲದ ಬುದ್ಧ ವಿಗ್ರಹವಿದೆ. ಬೌದ್ಧ ಕೇಂದ್ರಗಳಿವೆ. ಕರಾವಳಿ ಭಾಗದಲ್ಲಿ ಹೈಗುಂದ, ಬೋಳೆ, ಬಬ್ರುವಾಡಗಳಲ್ಲಿ ಬೌದ್ಧ ಅವಶೇಷಗಳು ಸಿಕ್ಕಿವೆ. ಕರಾವಳಿ ಕರ್ನಾಟಕದ ಕೆಲವು ಪ್ರಾಚೀನ ಬೌದ್ಧ ಹಾಗೂ ಯಕ್ಷಮೂರ್ತಿಗಳ ಕುರಿತು ಅಧ್ಯಯನಗಳ ಮಹತ್ವಪೂರ್ಣವಾದವುಗಳು.

ಜೈನಧರ್ಮ :– ಕ್ರಿ.ಶ. 5ನೇ ಶತಮಾನದ ರವಿವರ್ಮನ ಶಾಸನದಲ್ಲಿ ಅರಸನು ಮನ್ಮಥದೇವಾಲಯವನ್ನು ನಿರ್ಮಿಸಿ ಅದರ ನಿತ್ಯಪೂಜೆ ಮತ್ತು ನೈವೇದ್ಯಕ್ಕಾಗಿ ವೃತ್ತಿಯನ್ನು ಕೊಟ್ಟನೆಂದು ತಿಳಿಸುತ್ತದೆ. ಕಾಮಜಿನಾಲಯ ನಿರ್ವಹಣೆ ಮಾಡಿಸಿ, ಕಾಮದೇವಾಲಯ ಹಾಕಿ ನಿಪಲ್ಲಿಯ ಪದ್ಮಾವತಿದೇವಾಲಯ ಮನ್ಮಥನಿಗೆ ಅರ್ಪಿಸಿದನು. ಕ್ರಿ.ಶ. 1408ರ ಭಟ್ಕಳ ಶಾಸನದಲ್ಲಿ ಹೈವೆಭೂಪನ ಸುಕುಮಾರ ಬೈರಾದೇವಿ ಗರ್ಭರತ್ನ ಶ್ರೀಸಂಗಿರಾಯವೊಡೆಯರು ಪಟ್ಟಣ ಸಮುದಾಯ ಮಾಡಿಸಿ ನಿಶಿದಿಯ ಶಾಸನ ಬರೆಸಿದ ವಿವರವಿದೆ. ಕ್ರಿ.ಶ. 1416–17ರ ಕೈಕಿಣಿ ಶಾಸನದಲ್ಲಿ ಪಾರ್ಶ್ವನಾಥ ಬಸದಿಗೆ 9 ಮೂಟೆ ಗದ್ದೆಗಳನ್ನು ದಾನಗಳನ್ನು ಮಾಡಿದ್ದಾರೆ. ಜೀನನ ಆದೇಶದಿಂದ ಜಂಭುಮಹಾದ್ವೀಪ ಹಾಗೂ ಶಾಸನ ತುಳುದೇಶದ ಭೌಗೋಳಿಕ ಹಂತಗಳನ್ನು ವಿವರಿಸುತ್ತದೆ. ಜಂಭುಮಹಾದ್ವೀಪ, ಮೇರುಪರ್ವತಗಳು, ದಕ್ಷಿಣಕ್ಕೆ ಭರತಕ್ಷೇತ್ರ ತುಳುದೇಶ, ಆರ್ಯಖಂಡ,

ಸ್ವಾಭಾವಿಕ ಚಿತ್ರಗಳು, ಜೈನಜಿನಸಂಖ್ಯೆಯ ಭವ್ಯಗಳು ಜಿಲ್ಲಾ (ವಿಷಯ) ಶಂಕರಕ್ಷಿತಿಪಾಲಕ ತುಳುದೇಶದ ರಾಜ್ಯಪಾಲರು, ವಿದ್ಯಾನಾಥಯತಿ, ಕೈಕೆಯಲ್ಲಿ ಪಾರ್ಶ್ವನಾಥ ದೇವಾಲಯಕ್ಕೆ ಅನೇಕ ಜನರು ಜಿನದೇವಾಲಯಕ್ಕೆ ದಾನನೀಡಿದ್ದಾರೆ.

1. ಪಾಯಣ್ಣನು 30 ಹಾನೆಗಳ ಗದ್ದೆಯನ್ನು ದಾನ ನೀಡಿದ್ದಾನೆ.
2. ನಗರ ಮುಖ್ಯಸ್ಥ ಸಂಗಿರಾಯನು ಒಂದು ಹಿತ್ತಲು ಜಾಗವನ್ನು ಇದೇ ಜಿನಾಲಯಕ್ಕೆ ದಾನ ನೀಡಿದ್ದಾನೆ.
3. ಕೈಕಿಣಿಯ 7 ಜಂಗಮಗಳು ಭೂಮಿ ದಾನ ನೀಡಿದ್ದಾರೆ.
4. ಶಾಂತಿನಾಥಶೆಟ್ಟಿ ಮತ್ತು ಭಟಕಳ ಕೋಟಿಯಣ್ಣಸೆಟ್ಟಿ ಭೂಮಿ ದಾನ ನೀಡಿದ್ದಾನೆ.
5. ಮಾರನಾಯಕನ ಮಗ ದೇವನಾಯಕ ಪಾರ್ಶ್ವನಾಥ ಬಸದಿಗೆ ದಾನ ನೀಡಿದ್ದಾರೆ.
6. ಕೋಟಿಯಣ್ಣನಾಯಕ ಸಂಗಿರಾಯನಿಂದ ಭೂಮಿ ಕೊಂಡು ದಾನ ನೀಡಿದ್ದಾನೆ.
7. ಸೊಡೆಯ ಭೂಮ್ಮಿಸೆಟ್ಟಿ ಮತ್ತು ಬೊಮ್ಮಣನಾಯಕ ಅವನ ಸಹೋದರ ಲೋಕನಾಯಕ ಇದೇ ದೇವರಿಗೆ ದಾನ ನೀಡಿದ್ದಾರೆ. ಇದೇ ಕಾಲದ ಇದೇ ಊರಿನ ಮತ್ತೊಂದು ಶಾಸನದಲ್ಲಿ ರಾಜನಮಂತ್ರಿ ಶಂಕರಸ್ಥಿತಿಪಾಲ ತುಳುದೇಶ ಆಳುತ್ತಿರುವಾಗ ಚೈತ್ಯಾಲಯ ಕಟ್ಟಿಸಿ ಪಾರ್ಶ್ವನಾಥೇಶ್ವರ ದೇವರ ಪ್ರತಿಷ್ಠಾಪಿಸಿ ದೇವರ ಪೂಜೆ, ನೈವೇದ್ಯಗೋಸ್ಕರ ದಾನಶಾಲೆ, ಬಸದಿಯನ್ನು ನಾಗಿರೆಸಂಗಿರಾಯ ಅರಸನು ಭೂಮಿ ದಾನ ನೀಡಿದ್ದಾನೆ. ಕ್ರಿ.ಶ. 1432ರ ಕೈಕಿಣಿ ಶಾಸನದಲ್ಲಿ ಕಾಯ್ಕಿಣಿ ಪಾರ್ಶ್ವದೇವರ ಬಸದಿಗೆ ಏಳು ಜನ ಜೈನರು 24 ಗುಂಪಿನವರು ದಾನನೀಡಿ ಕೊಂಡು ಭೈರವದೇವ ಒಡೆಯನಿಂದ ಅಜಯನಾಯಕನ ಮಗ ಈಸರಣನಾಯರಿಂದ ಭೂಮಿ ದಾನ ನೀಡಿದ ದಾಖಲೆಯಿದೆ. ಮೂರನೇದಾನ ಇದೇ ದೇವರಿಗೆ ಎಣ್ಣೆ, ಭೈರವದೇವರ ಒಡೆಯ ಸಾತಿಸೆಟ್ಟಿ ಸಣ್ಣನಾಯಕ ಗುಮ್ಮಟದೇವ ಬಸದಿಗೆ ದಾನ ನೀಡಿದ್ದಾನೆ. ಮಯಲುನಾಯಕ ಪಾರ್ಶ್ವನಾಥದೇವರಿಗೆ ಚಿಕ್ಕಭೂಮಿ, ದೇವರಪೂಜೆ, ಗಂಧದ ಎಣ್ಣೆ ಹಾಕಲು ದಾನನೀಡಿದ ವಿವರವಿದೆ.

ತುಳುವ ಮನೆತನದ ಕ್ರಿ.ಶ. 1516ರ ಕೃಷ್ಣದೇವರಾಯನ ಭಸ್ತಿಮಕ್ಕಿ ಶಾಸನದಲ್ಲಿ ನರಸಣ ಅಧಿಕಾರಿ ಮಗ ಸಣ್ಣಿಯಣ ಸುಪರೀಶ್ವರ ತೀರ್ಥೇಶ್ವರ ಚೈತ್ಯಾಲಯ ಕಟ್ಟಿಸಿದ ವಿಷಯ. ಕಣ್ಣಬಲಿಕಾರ ದಾನ ನೀಡಿದ ವಿವರ. ಭೈರವದೇವಿ 208 ಮೂಟೆ ಭತ್ತ, ಕಂಚಿನ ನಾಣ್ಯಗಳನ್ನು, ಬೆಳ್ಳಿ ನಾಣ್ಯಗಳನ್ನು ಕೊಟ್ಟ ವಿವರ, ಸಿಂಗುನಾಯಕನ ಮಣಿಯನಮಗ ಭೈರಹೆಗ್ಗಡೆ ದಾನ ನೀಡಿದ ದಾಖಲೆ 25 ಮೂಟೆ ಭತ್ತವನ್ನು ದಾನನೀಡಿದ ವಿವರ. ಸಾಳುವ ಇಮ್ಮಡಿ ದೇವರಾಯ ಒಡೆಯ ನಗಿರೆ ರಾಜ್ಯ ಹೈವೆ ತುಳು ಕೊಂಕಣ ದೇಶದಿಂದ ಆಳುತ್ತಿರುವ ವಿಷಯವಿದೆ. ನಾಲ್ಕನೆ ದಾನ ಹೊಲೆಯ ಬಳಿಯ ಶಾಂತನಾಯಕ ಜೈನ ಸನ್ಯಾಸಿಗಳಿಗೆ ಭೋಜನಕ್ಕೆ, ನಿತ್ಯಪೂಜೆಗೆ ದಾನನೀಡಿದ ದಾಖಲೆಯಿದೆ. ಸದಾಶಿವರಾಯನ ಕ್ರಿ.ಶ. 1545ರ ಭಟ್ಕಳ ಶಾಸನದಲ್ಲಿ ಪಂಡಿತಚಾರ್ಯ ಜಿನಶಾಸನ ಮತ್ತು ಪಾರ್ಶ್ವನಾಥನನ್ನು ಪೂಜಿಸುವುದನ್ನು ತಿಳಿಸುತ್ತದೆ. ಜೈನಧರ್ಮದ ಬಗ್ಗೆ ತಿಳಿಸುತ್ತದೆ. ಮಹಾದಾನ ಹೆಮಾದ್ರಿ ಮಹಾಮಂಡಳೇಶ್ವರ ಚೆನ್ನಾಭೈರಾದೇವಿ ಆಹಾರದಾನ, ಧರ್ಮಸೇವೆಗಳಿಗೆ ಸೆಟ್ಟಿಗಳಿಂದ ದಾನ, ದೇವುಸೆಟ್ಟಿ 5 ದಾನ, ವ್ಯಾಪಾರಸ್ಥ ಸೆಟ್ಟಿಗಳಿಂದ ದಾನನೀಡಿದ ವಿವರವಿದೆ. ಕ್ರಿ.ಶ. 1549ರ ಇದೇ ಊರಿನ ಭಟ್ಕಳದಲ್ಲಿ ಒಂದು ಬಸದಿಯನ್ನು ಕಟ್ಟಿಸಿ ಚಿಂಮನಚೈತಿಯ ಎಂದು ಹೆಸರಿಸುತ್ತದೆ. ಸಾಳುವ ಆಳ್ವಿಕೆಗಾರನು ವೀರ ಜಿನ ಪ್ರತಿಷ್ಠಾಪಿಸಿದ ದಾಖಲೆಯಿದೆ. ಕ್ರಿ.ಶ. 1551ರ ಇದೇ ಊರಿನ ಶಾಸನದಲ್ಲಿ ಮಹಾಮಂಡಳೇಶ್ವರ ಚಂನ್ನದೇವಮ್ಮ ಸಾಳುವ ಮನೆತನದ ಮಹಾಪ್ರಭು ವೀರಪ್ಪ–ಒಡೆಯನ ಮಗಳು ಸಂಗೀತಪುರ ಮುಡಭಟಕಳದಲ್ಲಿ 24 ತೀರ್ಥಂಕರ ಬಸದಿ ಕಟ್ಟಿಸಿ ಅವಳ ಅಜ್ಜಿಯು ವೀರದೇವಿ ಅಮ್ಮನಿ ಮತ್ತು ಅಜ್ಜ ಗುರುರಾಯ ಒಡೆಯರಿಗೆ ತೆರಿಗೆರಹಿತ ಭೂಮಿ ದಾನ ನೀಡಿದ ದಾಖಲೆಯಿದೆ.

ನಗಿರೆ ಪ್ರಧಾನರುಗಳು :– ಕೃಷ್ಣದೇವರಸ ಒಡೆಯ ಕ್ರಿ.ಶ. 1542ರ ಕೈಕಿಣಿ ಶಾಸನದಲ್ಲಿ ರಾಜನು ಹೈವೆ, ತುಳು, ಕೊಂಕಣ ಬೇರೆ ರಾಜ್ಯ ಆಳುತ್ತಿರುವಾಗ ನೇಮಿಚಂದ್ರ ತೀರ್ಥಂಕರ ಪ್ರತಿಮೆ ಮಾಡಿಸಿ ಭೂಮಿದಾನ ಪಾರ್ಶ್ವದೇವ ಮತ್ತು ಶಿಷ್ಯರು ಬಲತ್ಕಾರಗಣದ ನೇಮಿಚಂದ್ರ ದೇವರ ಹಾಲುಮಜ್ಜನ ಮಾಡಲು ನೇಮಿಚಂದ್ರ ಹಾಗಲೇ ಕೆಲವು ಭೂಮಿ ಬಿಟ್ಟ ವಿವರವಿದೆ.

ಇದೇ ಬಸದಿಗೆ 35 ಹೊನ್ನು ಮಾವಜಿ ಇಮ್ಮಡಿದೇವರಾಯವಡೆಯರಿಂದ ಬಸ್ತಿಗೆ ಹಣಹಾಲುದೆರೆ ವರ್ಗಾವಣೆಯಾಗಿದೆ. ಸಾಳುವ ಕೃಷ್ಣರಾಜವೊಡೆಯರ ಕ್ರಿ.ಶ. 1547ರ ಮಾವಳ್ಳಿ ಶಾಸನದಲ್ಲಿ ಗೇರುಸೊಪ್ಪ ನೇಲವೀಡಿನಿಂದ ಆಳುತ್ತಿರುವಾಗ ಮಾವಳ್ಳಿ ಸಿರುಗುಹೆಗ್ಗಡೆ ಮೊಮ್ಮಗ ಸಂಭುದೇವನಿಂದ ಕೊಂಡು ಚೈತ್ಯಾಲಯ ಸ್ಥಾಪಿಸಿ ದಿನನಿತ್ಯ ಮಸ್ಕದಂತ ತೀರ್ಥಂಕರಸ್ವಾಮಿ ಭೂಮಿ ದಾನ ನೀಡಿದ ವಿವರ. ಪಾರ್ಶ್ವದೇವನಾಯಕನ ಮಗ ಸಂಗೀತನಾಯಕ ದಾನ ನೀಡಿದ.

ಸಾಳ್ವೇಂದ್ರ ಕ್ರಿ.ಶ. 1484ರ ಕೈಕಿಣಿ ಶಾಸನದಲ್ಲಿ ಹಾಡುವಳಿ ಚಂದ್ರಪ್ರಭುತೀರ್ಥಂಕರ ದೇವಸ್ಥಾನ ಕಟ್ಟಿಸಿ, ಮಾನಸ್ಥಂಭ ಸ್ಥಾಪಿಸಿದ ವಿವರ. ಚಂದ್ರನಾಥಗ್ರೀಹಕರ್ಪ್ಪಿಸಿದ ಹೆಚ್ಚಿನ ಸಂಖ್ಯೆ ಪ್ರಭಾವಳಿಗಳನ್ನು ಸ್ಥಾಪಿಸಿ ಸೇವಕರುಗಳಿಗೆ ದೇವಸ್ಥಾನಕ್ಕೆ ಭೂಮಿ ನೀಡಿದ್ದಾನೆ. ಇದೇ ರಾಜನ ಕ್ರಿ.ಶ. 1490ರ ಮುಡಭಟಕಳ ಶಾಸನ ಮಹಾಮಂಡಳೇಶ್ವರ ಚನ್ನರಾಜನಮೀರಾದೇವ ಮತ್ತು ಗುರುರಾಯೇಂದ್ರನ ಮಗ ಹೈವೆರಾಜನು ಚಂಂನ್ನರಾಜನಿಗೆ ಜಿನನಂದ ಆಶೀರ್ವದಿಸಿ ಒಂದು ಸುಂದರ ಪಟ್ಟಸಾಲ ಕಟ್ಟಿಸಿ, ಋಷಿಗಳಿಗೆ ಕೊಠಡಿ ಕಟ್ಟಿಸಿದನ್ನು ಚೈತ್ಯಾಲಯದ ಮುಂದೆ ರಾಣಿ ವಿರಾಂಬ, ಗುರುರಾಯ ಕಟ್ಟಿಸಿದ ಕಟ್ಟಿಸಿದನ್ನು ತಿಳಿಸುತ್ತದೆ.

ಹಾಡುವಳಿ ಸಾಳುವ ಪ್ರಧಾನರು :– ಮಹಾಮಂಡಳೇಶ್ವರ ಚನ್ನಾಭೈರವದೇವಿ ಸಂಗೀತಪುರದಿಂದ ಆಳುತ್ತಿರುವಾಗ ಕ್ರಿ.ಶ. 1549ರ ಭಟ್ಕಳ ಶಾಸನದಲ್ಲಿ ವರ್ದ್ಧಮಾನ ಜೀನೇಂದ್ರನಿಗೋಸ್ಕರ ಭಟ್ಕಳದ ಬಸ್ತಿಗೆ ವರ್ಧಮಾನತೀರ್ಥಂಕರನಿಗೆ ಪೂಜೆ, ನೈವೇದ್ಯ, ಆಹಾರ ದಾನ ಹಲಧಾರೆ ಇತರ ವೀರನಾಯಕನ ಮಗ ನಾರಣನಾಯಕ ಭೂಮಿ ದಾನ ನೀಡಿದ್ದಾನೆ. ಈ ರಾಣಿ ಮಹಾಮಂಡಳೇಶ್ವರನ ಮಗಳು ಬೈರಾದೇವಿ ಸಾಳುವ ಕೃಷ್ಣದೇವನ್ರಿಪ ಸೊಸೆ ಕ್ರಿ.ಶ. 1556 ಚನ್ನಬೈರಾದೇವಿ ಭಟ್ಕಳಪೇಟಾ ಶಾಸನದಲ್ಲಿ ನಾರಣನಾಯಕ ವರ್ಧಮಾನಜೀನೇಂದ್ರ ದೇವಾಲಯ ಕಟ್ಟಲು ಮುಂದಿನ ಸಭಾಂಗಣ ಕಟ್ಟಿ ಸುತ್ತಲೂ ಇರುವ ಹೂವಿನತೋಟ, ದೇವಾಲಯದ ಅಮೃತಪಡಿಗೆ, ಕಾರ್ತಿಕಪೂಜೆ, ಶಿವರಾತ್ರಿ, ಜೀವದಯಾಷ್ಟಮಿ, ಯುಗಾದಿ, ಶ್ರುತಪಂಚಮಿ, ಧಾರ್ಮಿಕ ಅಭಿಷೇಕ, ಶ್ರಾವಣ, ಅಷ್ಟಾಧನಿಕ, ದಶಲಕ್ಷಣದಪೂಜೆ, ಹಾಲದರೆ, ಖಜ್ಜಾಯಸೇವಿಗೆ ದೇವಾಲಯಕ್ಕೆ ದಾನ ನೀಡಿದ ವಿವರಗಳಿವೆ.

ಬೀಳಗಿ ಪ್ರಧಾನರು : – ಎರಡನೆ ವೆಂಕಟ ಕ್ರಿ.ಶ. 1581, ಕ್ರಿ.ಶ. 1592ರ ಬಿಳಗಿ ಶಾಸನದಲ್ಲಿ, ರಂಗಪ್ಪರಾಜಒಡೆಯ, ರತ್ನತ್ರಯ ಬಸದಿ ಕಟ್ಟಿಸಿ ಮಂಡಪ, ಮುನಿವಾಸ, ಚಂದ್ರಶಾಲ ಇತರರು, ಘಟನೇಂದ್ರ ಎಂಬುವನು ಭಟ್ಟ ಅಕಲಂಕ ನಿರ್ದೇಶನದ ಮೇರೆಗೆ ನೇಮಿನಾಥ ವರ್ದ್ಧಮಾನ ವಿಗ್ರಹಗಳನ್ನು ಪ್ರತಿಷ್ಠೆ ಮಾಡಿಸಿ 443 ವರಾಹ, 1 ಹಣ ಮತ್ತು 3 ವೀಸ, ಗ್ರಾಮಗಳ ತೆರಿಗೆಗಳಿಂದ 300 ಖಂಡುಗ ಭತ್ತ ಅನೇಕ ದಾನಗಳು, ಪೂಜೆ ನಿರ್ವಹಣೆಗೆ ಘಂಟೇದ್ರನ ರಾಣಿ ಗಂಡ ಕಟ್ಟಿಸಿದ ಬಸದಿ, ಶಾಂತೇಶ್ವರ ಪೂಜೆಗೋಸ್ಕರ ಘಂಟೀನೆಂದ್ರನಿಂದ ಸಿದ್ಧಾಯ ತೆರಿಗೆಗಳಿಂದ ದಾನನೀಡಿದ ವಿವರವಿದೆ. ಹಳೆಯ ಬೀಳಗಿ ಹತ್ತಿರ ಕೊಪ್ಪಳದಿಂದ ನೇಮಿಶ್ವರನಿಗೆ ಹಾಲು ಮಜ್ಜನ ಮಾಡಿದ ವಿವರವಿದೆ.

ಶೈವಧರ್ಮ :– ರವಿವರ್ಮನ 5–6ನೇ ಶತಮಾನ ಅಜ್ಜಿಬಲ್ ಶಾಸನದಲ್ಲಿ ಪ್ರೀತಿಯ ವೈದ್ಯನಾದ ದೇಶಾಮಾತ್ಯ ನಿಲಕಂಠಮಹಾದೇವ ದೇವಾಲಯದ ರಾಜನು ತನ್ನ ರಾಜಧಾನಿ ವೈಜಯಂತಿಯನ್ನು ನಾಲ್ಕು ನಿವರ್ತನದ ಭೂಮಿಯನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1095–96ರ ತ್ರಿಭುವನಮಲ್ಲನ ಅಗರೆ ಶಾಸನದಲ್ಲಿ ಕುಪ್ಪಗಾವುಂಡ ಇವನ ಹೆಂಡತಿನಾಗಿಯಬ್ಬೆ ಅವನ ಮಗ ಜಕ್ಕಗಾವುಂಡ ಶಿವದೇವಾಲಯ ಕಟ್ಟಿಸಿ ಅರ್ಪಣೆ ಮಾಡಿ ಗದ್ದೆ, ತೋಟ, ನಿವೇಶನವನ್ನು ಜಕ್ಕಜೀಯ ಶಿಷ್ಯ (ಮಗ) ಜನ್ನಯಗಾಳೆಯ ಬೀಳಗಿ ಇವನು ದೇವಾಲಯದ ಸ್ಥಾನಪತಿ, ದಾನ ಕೊಟ್ಟವರು ಅಗ್ಗರೆಯಿಂದ ಕರಬುವಾಲಗೆ– 70 ಭಾಗದವರು, ಈ ಶಾಸನವನ್ನು ಬರೆದವರು ಜನ್ನಮಯ್ಯಪೆರ್ಗ್ಗಡೆ, ಕಾಳಿದಾಸನ ಮಗ ಚನ್ನೊಜ, ಶಾಸನ ಕೆತ್ತಿದವನು ಚೌಡೋಜ, ಮೊಮ್ಮಗ ಮರುಳೋಜ, ಜಾಂಕೋಜನ, ರೂವಾರಿ ಬೇರುಂಡ ಎಂದು ವಿವರಿಸಿದೆ.

ಹೊಯ್ಸಳ ಮೂರನೇ ಬಲ್ಲಾಳನ ಕ್ರಿ.ಶ. 1333ರ ಸಿರಾಲಿ ಶಾಸನದಲ್ಲಿ ಶಾಸನ ಸವೆದಿದೆ. ಸಿರಾಲಿ ಹೊನ್ನಾದೇವಿ ದೇವಾಲಯಕ್ಕೆ ಸರ್ವಮಾನ್ಯ ತೆರಿಗೆಯನ್ನು ಮನ್ನಾ ಮಾಡಿದ ವಿವರ. ಕಿಕ್ಕಿಯಿತಾಯಿ ಹಿರಿಯರಾಣಿ ಎರಡನೇ ಭಾಗದಲ್ಲಿ ವಲ್ಲಭದೇವರಸ 1 ಹಾನೆ, ಅಕ್ಕಿಯನ್ನು ಪೂಜೆ ಮತ್ತು ಸ್ವಾತಿ ಸೇವೆಗೆ ಬಿಟ್ಟ ವಿವರ ಹಾಗೂ ನಂದಾದೀವಿಗೆಗೆ ಇತರ

ಸೇವೆಗಳಿಗೆ ದಾನ ನೀಡಿದ ವಿಷಯವಿದೆ. ವಿಜಯನಗರ ಸಂಗಮ ಮನೆತನದ ಒಂದನೇ ಬುಕ್ಕರಾಯನ ಕ್ರಿ.ಶ. 1368ರ ಬನವಾಸಿ ಶಾಸನದಲ್ಲಿ ವೀರೇಶ್ವರ ದೇವರನ್ನು ಪ್ರತಿಷ್ಠಾಪಿಸಲು ಪ್ರಭುಶಿವದೇವನ ಮಗ ನಾಗರಸ ಹಣ ದಾನ ನೀಡಿದ ಉಲ್ಲೇಖವಿದೆ. ಇದೇಕಾಲದ ಇದೇ ಊರಿನ ಗೋಪಿನಾಥದೇವರ ಜೀರ್ಣೋದ್ಧಾರಕ್ಕೆ ಅನೇಕ ಗವುಡಗಳು ಮತ್ತು ಪ್ರಜೆಗಳು ಬನವಾಸಿಯಲ್ಲಿ ಒಟ್ಟಿಗೆ ಸೇರಿ ಭೂಮಿ ದಾನ ನೀಡಿದ್ದಾರೆ. ಇದೇ ರಾಜನ ಕ್ರಿ.ಶ. 1374ರ ಗೋಕರ್ಣ ಶಾಸನದಲ್ಲಿ ಶಾಸನ ಸವೆದಿದೆ. ಮಲ್ಲಪ್ಪ ಒಡೆಯ [ಹೈ]ವೆ ಪ್ರಾಂತ್ಯದಿಂದ ಆಳುತ್ತಿರುವಾಗ ಮಹಾಬಲದೇವರ ಮುಂದೆ ರಾಣಿ ಹೊನ್ನಾದೇವಿ ಭೂಮಿಯಿಂದ ಬಂದ ಆದಾಯದಿಂದ ಮನೆಯ ಆಹಾರ ಮತ್ತು ದೇವರ ಪೂಜೆಗೆ ದತ್ತಿ ಬಿಟ್ಟ ದಾಖಲೆಯಿದೆ. ಇದೇ ರಾಜನ, ಇದೇ ಊರಿನ ಕ್ರಿ.ಶ. 14ನೇ ಶತಮಾನದ ಶಾಸನ ಸವೆದಿದೆ. ಗೋಕರ್ಣದ ವೇದೇಶ್ವರದೇವರ ಪೂಜೆ, ದೀಪಾಲಂಕಾರಕ್ಕೋಸ್ಕರ [ಬ]ಸವಯ್ಯ ದಂಣಾಯಕ ತೆರಿಗೆರಹಿತ ಭೂಮಿ ಕೊಟ್ಟ ವಿಷಯವಿದೆ. ಇದೇ ರಾಜನ ಕ್ರಿ.ಶ. 1387ರ ಬೆಲಸೆ ಶಾಸನದಲ್ಲಿ ಬಸವದಂಡನಾಯಕ ರಾಜನ ಮಹಾಪ್ರದಾನನಿರಬಹುದು. ಗೋಕರ್ಣಕ್ಕೆ ಕ್ಷೇತ್ರದ ಮಹಾಬಲದೇವರ ಪೂಜೆಗೋಸ್ಕರ ಒಂದು ಗ್ರಾಮವನ್ನು ಕ್ರಿಯಾಶಕ್ತಿಯತೀಶ್ವರನಿಗೆ ದಾನ ನೀಡಿದ್ದಾನೆ. ಎರಡನೇ ಹರಿಹರನ ಕ್ರಿ.ಶ. 1390ರ ಹರುವಸಕೇರಿ ಶಾಸನ ಸವೆದಿದೆ. ಮಹಾಬಲದೇವರ ನೈವೇದ್ಯಗೋಸ್ಕರ ಬೆಳೆಗಳ ಭೂಮಿಯನ್ನು ಸಾತಿಸೆಟ್ಟಿಯಮಗ ಬೊಮ್ಮಣಸೆಟ್ಟಿ ದಾನ ನೀಡಿದ್ದಾರೆ. ಇದೇ ಕಾಲದ ಇದೇ ರಾಜನ ಬೆಳಂಬರ್ ಶಾಸನದಲ್ಲಿ ಶಾಸನ ಸವೆದಿದೆ. ಹೈವೆ, ತುಳು, ಕೊಂಕಣ ಪ್ರಾಂತ್ಯಗಳಿಂದ ಆಳುತ್ತಿರುವಾಗ ಗೋಕರ್ಣದ ಮಹಾಬಲದೇವರ ಮುಂದೆ ಹೈವೆ ರಾಜ್ಯದ ಮಲ್ಲಿನಾಡಿನಲ್ಲಿ ಹೊಂದಿರುವ ಭೂಮಿಯನ್ನು ದಾನ ನೀಡಿದ್ದಾನೆ. ಹಾಗೂ ಚಂದ್ರಗ್ರಹಣ ಪುಣ್ಯ ದಿನ ಒಂದು ಸತ್ರದ ಆಹಾರ ದಾನಕ್ಕೆ ದಾನ ನೀಡಿದ್ದಾನೆ. ಕ್ರಿ.ಶ. 1393ರ ಗೋಕರ್ಣ ಶಾಸನ ಸವೆದಿದೆ. ಕೆಲವು ಸೆಟ್ಟಿಗಳು ಮಹಾಬಲದೇವರ ಮುಂದೆ ಸತ್ರ–ಧರ್ಮದ ಆಹಾರ ದಾನ ನಿರ್ವಹಣೆಗೋಸ್ಕರ ದಾನ ನೀಡಿದ್ದಾರೆ. ಕ್ರಿ.ಶ. 1395ರ ಕಲಕುಣ ಶಾಸನದಲ್ಲಿ ಕಲುಕಣಿ ಗ್ರಾಮದ ಮದುಕನಾಥದೇವರಿಗೆ ಕರವೂರ ಪ್ರಧಾನಿ ಶಾಂತದಂಣಾಯಕ, ಅನೇಕ ಗಾವುಂಡರುಗಳು ಚಂದ್ರಗುತ್ತಿ ಭಾಗದ ಕಬುನಾಲಿಗೆಯ ದೇವರಿಗೆ ದತ್ತಿ ನೀಡಿದ ಬಗ್ಗೆ ಉಲ್ಲೇಖವಿದೆ. ಕ್ರಿ.ಶ. 1401ರ ಬಬ್ಬರವಾಡ ಶಾಸನದಲ್ಲಿ ಮಹಾಬಲರಿಂದ ಭೂಮಿಯನ್ನು ಕೊಂಡು ಮಾದಣ್ಣನ ಮಗಳು ವಿರುಪಾಯಿ ಭೂಮಿದಾನ ನೀಡಿದ ವಿಷಯವಿದೆ. ಸತ್ರದ ಆಹಾರ ದಾನ, ಗೋಕರ್ಣದ ಮಠಕ್ಕೆ ಹೊಂದಿಕೊಂಡಿರುವ ಈ ದಾನದ ಭೂಮಿಯನ್ನು ಗುತ್ತಿಗೆಗೆ ನೀಡಿ ಅಲ್ಲಿಂದ ಬರುವ ತೆರಿಗೆಗಳಿಂದ ಮನ್ನಾ ಮಾಡಿ ದಾಮೋದರಭಟ್ಟನಿಗೆ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1404ರ ಹುಲೆಕಲ್ ಶಾಸನದಲ್ಲಿ ಗೋಕರ್ಣದ ಆದಿತ್ಯಶ್ವರ ದೇವಾಯಲದ ಹೆಬ್ಬಾರುವಣ ಗ್ರಾಮದ ಹೆಸರಿಸಲು ಕರ್ಣಾಟಕದ ಮಹಾಪ್ರದಾನ ಗೋವೆಯ ಎಚಪ್ಪ ಒಡೆಯನು ಗ್ರಾಮಕ್ಕೆ ದತ್ತಿ ಬಿಟ್ಟ ವಿವರವಿದೆ. ಅಂಕೋಲ ಶಾಸನ ಕಾಲ ಸ್ಪಷ್ಟವಿಲ್ಲ. ಶಾಸನ ಸವೆದಿದೆ. ಗೋಕರ್ಣದ ಮಹಾಬಲದೇವರ ಮುಂದೆ ರಾಜನು ಭೂಮಿದಾನ ನೀಡಿದ್ದಾನೆ. ತೇದಿ ಇಲ್ಲದ ಹಾರುಮಸಕೇರಿ ಶಾಸನದಲ್ಲಿ ಗೋಕರ್ಣ ಮಹಾಬಲದೇವರಿಗೆ ಮಾದಿಸೆಟ್ಟಿಮಗ ಬೊಮ್ಮಣಸೆಟ್ಟಿ ಭೂಮಿ ಕೊಂಡು ದಾನ ನೀಡಿದ್ದಾನೆ. ಸಾಯಿಗನಹಳ್ಳಿ ಸೆಟ್ಟಿಕಾರ ವಜ್ರಸೆಟ್ಟಿ ಮಗ ಕಾಮಸೆಟ್ಟಿಗೆ ಗುತ್ತಿಗೆಗೆ ಕೊಟ್ಟು ದಾನ ನೀಡಿ ಎಲ್ಲಾ ತೆರಿಗೆಗಳನ್ನು ಮನ್ನಾ ಮಾಡಿ ಗುತ್ತಿಗೆದಾರ ನಿಗದಿಪಡಿಸಿದ ಭತ್ತ ಹಣವನ್ನು ದೇವಾಲಯಕ್ಕೆ ಕೊಡಬೇಕೆಂದು ತಿಳಿಸಿದ್ದಾರೆ. ಒಂದನೇ ದೇವರಾಯನ ಕ್ರಿ.ಶ. 1410ರ ಗೋಕರ್ಣ ಶಾಸನ ಸವೆದಿದೆ. ಮಹಾಬಲದೇವರ ಮತ್ತು ಒಂದು ಛತ್ರದ ನಿರ್ವಹಣೆಗೋಸ್ಕರ ಸಿದ್ದಪ್ಪನ ಮಗ ವಿಸಣ್ಣನು ಅಮರೇಶ್ವರ ಭಾರತೀಯ ಶ್ರೀ ಶ್ರೀಪಾದರ ಮುಂದೆ ಭೂಮಿ ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1416ರ ಜುಗ್ ಶಾಸನ ಸವೆದಿದೆ. ಗೋಕರ್ಣ ಮಹಾಬಲದೇವರ ಮುಂದೆ ಅನ್ನದಾನ ನಡೆಸಲು ಮಲ್ಲಪಸಾವಂತ, ಬೊಮ್ಮಣನಾಯಕ, ಬೀರಣ ಮತ್ತು ಬೇರೆಯವರು ಭೂಮಿಯನ್ನು ಕೊಂಡು ಸೋಮತಾರಕೂರ, ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. 1416–17ರ ಹಡವಶಾಸನ ಸವೆದಿದೆ. ಗೋಕರ್ಣ ಕ್ಷೇತ್ರದ ಮಹಾಬಲದೇವರ ಮುಂದೆ ಮಧುನಾಯಕ, ಬೀರನಾಯಕ ಮತ್ತು ಬೊಮ್ಮನಾಯಕ ಭೂಮಿ ದಾನ ನೀಡಿದ್ದಾರೆ. ಇದೇ ಕಾಲದ ಗೋಕರ್ಣ ಶಾಸನದಲ್ಲಿ ಗೋಕರ್ಣದ ಮಹಾಬಲದೇವರ ಒಂದು ಛತ್ರದ ನಿರ್ವಹಣೆಗೋಸ್ಕರ ಮಹಾಪ್ರದಾನ ಬಂಕರಸ ಒಡೆಯನ ಮಗ (ಹೆಸರು ಇಲ್ಲ) ಸನ್ಯಾಸಿಗಳಿಗೆ ಮೂರು ಸಮುದಾಯದ (ಪರಿಷತ್‌ಗೆ) ಭೂಮಿ ದಾನ ನೀಡಿದ ವಿವರವಿದೆ. ಕ್ರಿ.ಶ. 1424–1446ರ ಮುರುಡೇಶ್ವರ ದೇವಾಲಯದಲ್ಲಿ

ಪುರಾಣ ಪಠಣ ಮಾಡುವುದಕ್ಕಾಗಿ ವಾಮನ ಉಪಧ್ಯಾಯನಿಗೆ ಭೂಮಿ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1433ರ ಬೈಲೂರ ಶಾಸನ ತೃಟಿತವಾಗಿದೆ. ಸಂಣುನಾಯರು ಬೈದೂರದೇಶದ ಸಮಸ್ತರು ಶ್ರೀಮಡಕೇಶ್ವರ ಪ್ರತಿಷ್ಠೆ ಮಾಡಿಸಿ ನಿತ್ಯಪುರಾಣ ನಡೆವಂತಾಗಿಯೂ ಸರೇಸ್ವರ ಶ್ರೀಪಾದಂಗಳ ಮಠದಲ್ಲಿ ಸೋಣೆ ದಿನ 30 ಪುರಾಣ ನಡೆವಂತಾಗಿ ಶ್ರೀಪಾದಂಗಳು ದೇಸದ ಸಮಸ್ತರು ಗುಜೋಡಿಯ ನಾರಾಯಣಭಟ್ಟ ಧಾರಾಪೂರ್ವಕವಾಗಿ ಮುಲವಎಱೆದು ಕೊಟ್ಟರು. ಕ್ರಿ.ಶ. 1434ರ ಇದೇ ಊರಿನ ಶಾಸನದಲ್ಲಿ ಮಡಕೇಶ್ವರ ದೇವಾಲಯದ ನಿತ್ಯಪುರಾಣಗಳನ್ನು ವ್ಯಾಖ್ಯಾನಿಸುವುದಕ್ಕೆ ಅಭಿವೃದ್ಧಿ ಅಧಿಕಾರಿ ಸಣನಾಯರು ಮತ್ತು ಬೈಲೂರಿನ ಅನೇಕ ಜನರು ಭೂಮಿಗಳನ್ನು ದಾನ ನೀಡಿದರು. ಕ್ರಿ.ಶ. 1424–1446 ಎರಡನೆದೇವರಾಯನಒಡೆಯನ ಮುರುಡೇಶ್ವರ ಶಾಸನದಲ್ಲಿ ಮುರುಡೇಶ್ವರ ದೇವಾಲಯದಲ್ಲಿ ಪುರಾಣ ಪಠಣ ಮಾಡುವುದಕ್ಕೆ ವಾಮನ ಉಪಾಧ್ಯಾಭಟ್ಟನಿಗೆ ಭೂಮಿ ದಾನ ನೀಡಿದ ವಿವರವಿದೆ. ಇದೇ ಕಾಲದ ಮಡೊಳ್ಳಿ ಶಾಸನದಲ್ಲಿ ಗ್ರಾಮದ ತಿಗಳನಾಗಮನೆಯ ವಾಮನ ಉಪಧ್ಯಾಯರ ಮಗ ಪುರುಷೋತ್ತಮಭಟ್ಟರಿಗೆ ಮಂಗಳಮಜ್ಜನ ಮಹೋತ್ಸವದಲ್ಲಿ ಸೋಮಾಪರಾಗ ಪುಂಣ್ಯ ಕಾಲದಲ್ಲಿ ದೇವರಾಯಮಹಾರಾಯರ ಆಯುಷ್ಯಾಭಿವೃದ್ಧಿಗಾಗಿ ದೇವಿಮಹಾಮಾತೆ ಸ್ತೋತ್ರಜಪ ಮಾಡುವುದಕ್ಕೆ ಪುರುಷೋತ್ತಮಭಟ್ಟರಿಗೆ 12 ಹೊನ್ನುಗಳನ್ನು ಮಲ್ಲೆ ಗ್ರಾಮದ ಜನರು ಸೇರಿ ನೀಡಿದ್ದಾರೆ. ಚಿತ್ರಗೆ ಶಾಸನ ತೇದಿ ಇಲ್ಲ. ಶಾಸನ ಸವೆದಿದೆ. ಹೊನ್ನಾವರ ದೇಶದಲ್ಲಿರುವ ರಾಮಚಂದ್ರದೇವರ ದೇವಾಲಯಗೋಸ್ಕರ ಚಿತ್ರಗೆ ಗ್ರಾಮವನ್ನು ದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1454ರ ಮಲ್ಲಿಕಾರ್ಜುನ ತಾನ್ಯ ಗ್ರಾಮದ ಶಾಸನದಲ್ಲಿ ಪದುಮೇಜೀಹೆಗೆ ಕಲಿನಾಥದೇವಾಲಯ ಕಟ್ಟಿಸಿ ನೈವೇದ್ಯಗೋಸ್ಕರ ಭೂಮಿದಾನ ನೀಡಿದ ದಾಖಲೆಯಿದೆ. ಕ್ರಿ.ಶ. 1527ರ ಮೂಡಭಟ್ಕಳ ಶಾಸನದಲ್ಲಿ ಸಿರಿಯಜೋಯಿಸನು ಭಟ್ಕಳ ಈಶ್ವರ ದೇವಾಲಯ ಕಟ್ಟಿಸಿ ಅದಕ್ಕೆ ಪೂಜೆ, ಅಲಂಕಾರ, ಅಂಗರಂಗಭೋಗ ನೈವೇದ್ಯ ಮಠದ ಅನ್ನದಾನಕ್ಕೆ ಭೂಮಿ ದಾನ ನೀಡಿದ ವಿವರ. ಕ್ರಿ.ಶ. 1550ರ ಉಳವರಿ ಶಾಸನದಲ್ಲಿ ಗೋಕರ್ಣದ ಮಹಾಬಲದೇವರ ಪೂಜೆ, ನೈವೇದ್ಯ ದೇವಾಲಯದ ನಿರ್ವಹಣೆಗೆ ಅನ್ನದಾನ ಮನೆ ದಾನ ಮಾಡಿದ ವಿವರವಿದೆ. ಕ್ರಿ.ಶ. 1552ರ ಬನವಾಸಿ ಶಾಸನದಲ್ಲಿ ವನವಾಸಿಯ ಮಧುಕೇಶ್ವರ ದೇವಾಲಯ ಸುತ್ತಲೂ ಇರುವ ಆವರಣವನ್ನು ಕಟ್ಟುವ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1553ರ ಗೋಕರ್ಣ ಶಾಸನದಲ್ಲಿ ವೈಶ್ರಾವಣೇಶ್ವರ ದೇವಾಲಯ ಜೀರ್ಣೋದ್ಧಾರ ಮತ್ತು ಮಠದ ಧಾರ್ಮಿಕ ಮತ್ತು ಬೇರೆ ಉದ್ದೇಶಗಳಿಗೆ ಭೂಮಿಗಳನ್ನು ದತ್ತಿ ನೀಡಿದ ದಾಖಲೆಯಿದೆ. ಕ್ರಿ.ಶ. 15–16ನೇ ಶತಮಾನದ ಬೈಲೂರು ಶಾಸನದಲ್ಲಿ ದೇಶದ ಸಮಸ್ತ ಜನರು ಶ್ರೀಮಡಕೇಶ್ವರ ದೇವಸ್ಥಾನದ ಸಂನಿಧಿಯಲ್ಲಿ ನಿತ್ಯಪುರಾಣ ನಡೆಸಲು ಪಿಟರಿಕಾರ್ಯ, ದೇವರಕಾರ್ಯ, ಮದುವೆ, ಉಪನಯನ, ಧಾರ್ಮಿಕ ಕಾರ್ಯಗಳನ್ನು ನಡೆಸಲು ಅಧಿಕಾರಿ ಮತ್ತು ಜನರು ಒಟ್ಟಿಗೆ ಸೇರಿ ನಾರಾಯಣಭಟ್ಟರಿಗೆ ಭೂಮಿ ದಾನನೀಡಿದ್ದು, ದೇವರಧರ್ಮ, ಅರುಗಡಿ, ಮನೆಹಣ, ನಾಗ–ಹಣ, ವೊಕ್ಕಲುಗುತ್ತಿಗೆ, ಕಾಣಿಕೆ, ಖಡಾಯ, ಬೆಳಕರಣ, ಬೇಳುದಂಡ, ಯಸೆ ಒಸಗೆ, ಬಿಜ್ಜು, ಬಿಡಾರ ವತ್ತುಗಜು ತೆರಿಗೆಗಳ ಬಗ್ಗೆ ತಿಳಿಸುತ್ತದೆ.

ಬಸವಶಂಕರ ವೀರಸೋಮದೇವಾಳಪೇಂದ್ರ ದೇವರಸನ ಕ್ರಿ.ಶ. 1348ರ ಯಿಡಗುಂಜಿ ಶಾಸನದಲ್ಲಿ ಮಹಾಪ್ರಭುನಾರಾಯಣ ಸರ್ವಾತಿತ್ಯರು ತಂನತಂಮನ, ತಂನಮಾಗದಿರ ತನ್ನ ಕಿಱುತಂದೆಯರ ತಂನವೊಡವುಟ್ಟಿದ ಪ್ರಜೆಯ ಯಿಂತಿದವರ ಸೌವಾದರಿಂದ ಧರ್ಮ ಪ್ರತಿಷ್ಠೆ ಮಾಡಿ ಭೂಮಿ ದಾನ ನೀಡಿದ ವಿವರ. ಹಾನಗಲ್ ಕದಂಬ ರಾಜನಾದ ವೀರಕಾವದೇವ 13ನೇ ಶತಮಾನದ ನಾಗೂರು ಶಾಸನ. ಶಾಸನ ಸವೆದಿದೆ. ಊರಿನ ಜನರು ನಾಗಪುರ ಗ್ರಾಮದವರು ದೇವರ ಕಾರ್ಯಕ್ಕೆ ಕೆಲವು ಭೂಮಿ ದಾನ ನೀಡಿದ ಉಲ್ಲೇಖವಿದೆ. ಇದೇ ಗ್ರಾಮದ ಮತ್ತೊಂದು ಶಾಸನ. ಶಾಸನ ಸವೆದಿದೆ. ವಿನಾಯಕ, ಸಿತಾಭಗವತಿದೇವರ ನಿರ್ವಹಣೆಗೆ, ದೀಪಾರಾಧನೆಗೆ, ಪೂಜೆಗೋಸ್ಕರ ಕೆಲವು ಹಣ ನಾಗನೂರ ಪ್ರಭುಗಳು ದಾನ ನೀಡಿದ್ದಾರೆ. ಇದೇ ಊರಿನ ಮತ್ತೊಂದು ಶಾಸನದಲ್ಲಿ ವಿನಾಯಕದೇವರಿಗೆ ಮಾನಿಸಪ್ರಭುಗಳಿಂದ ತೆರಿಗೆ ಹಣ ದಾನನೀಡಿದೆ. ಈ ದಾನವನ್ನು ಪ್ರಕಾಶತೀರ್ಥಶ್ರೀಪಾದರವರಿಗೆ ಒಪ್ಪಿಸಿದೆ.

ನಗಿರೆ ಪ್ರಧಾನರುಗಳು :– ಸಾಳುವ ಕೃಷ್ಣದೇವರಸವೊಡೆಯರ ಕ್ರಿ.ಶ. 1350ರ ಮೇಲ್ ಮಂಜುಗುಣ ಶಾಸನದಲ್ಲಿ ಶಾಸನ ಸವೆದಿದೆ. ಮಹಾಮಂಡಳೇಶ್ವರ ನಗಿರೆ ರಾಜ್ಯ, ಹೈವೆ, ತುಳು, ಕೊಂಕಣ ಆಳುತ್ತಿರುತವಾಗ (ಮಡಲ) ಹೊಳೆಯಲ್ಲಿ

ಛತ್ರ, ಮಠ ಕಟ್ಟಿಸಿ ಭೂಮಿ ದಾನ ನೀಡಿದ್ದಾನೆ. ಕೃಷ್ಣದೇವರಸಒಡೆಯ ಕ್ರಿ.ಶ. 1422ರ ಸಿರಾಣಿ ಶಾಸನ ಸವೆದಿದೆ. ಕಲಾದೇವಿ ದೇವಾಲಯದ ಮುಂದೆ ದೀಪಾಕಂಭ ನಿಲ್ಲಿಸಿ ಅದರ ನಿರ್ವಹಣೆಗೆ ಮಂಜನಾಯಕನ ಮಗ ನಾಗರಸನಾಯಕ ಹಣ ದಾನ ನೀಡಿದ ದಾಖಲೆಯಿದೆ. ಇದೇ ರಾಜನ ಕ್ರಿ.ಶ. 1542ರ ಮರುಡೇಶ್ವರ ಶಾಸನದಲ್ಲಿ ಕೃಷ್ಣದೇವರಸಒಡೆಯ, ಚನ್ನಾದೇವಿಅಮ್ಮನವರು, ಚನ್ನಾಬೈರಾದೇವಿಯರು ಮರುಡೇಶ್ವರದಲ್ಲಿ ನಂದಿಮಂಟಪ ಕಟ್ಟಿಸಲು ನಿಳುವಾರದ ಜಂನಿಗಳು ಯಿಪತಿಗೌಡ ಬಳಮಿನಾಡು ಸಮಸ್ತರು ಕೊಟ್ಟೂರ ನೀರನಾಲ್ವರ ತಾಯಿ ಮಗ ಮಗಳು ಮಾಳುನಾಯಕರು ಗೆಯಿಸಿದರು ಎಂದು ಶಾಸನ ತಿಳಿಸುತ್ತದೆ.

ಬಿಳಗಿ ಪ್ರಧಾನರು :– ಎರಡನೇ ಘಂಟೇಂದ್ರವೊಡೆಯನ ಕ್ರಿ.ಶ. 1651ನೇ ಸಿದ್ದಾಪುರ ಶಾಸನದಲ್ಲಿ ರಾಜನರಾಣಿ ಸಿದ್ಧಾಪುರದಲ್ಲಿ ಸತ್ರ, ಚಂದ್ರಶಾಲ, ವಿಘ್ನೇಶ್ವರ ದೇವಾಲಯ ಕಟ್ಟಿಸಿ ವಿಗ್ರಹ ಪ್ರತಿಷ್ಠಾಪಿಸಿ ರಾಣಿ ತಾಯಿ ಜೆಟ್ಟಮ್ಮ ಅನೇಕ ಬ್ರಾಹ್ಮಣರ ಮತ್ತು ಸೇವೆಗೋಸ್ಕರ ಪೂಜೆ, ಮತ್ತು ನೈವೇದ್ಯ ಆಹಾರ ದಾನ ಪ್ರವಾಸಿಗರಿಗೆ ದೇವಾಲಯಕ್ಕೆ ಭೂಮಿ ದಾನ ನೀಡಿದ ವಿವರವಿದೆ.

ವೈಷ್ಣವ ಧರ್ಮ : – ಕ್ರಿ.ಶ. 1424–1446ರ ಮಂಡೊಳ್ಳಿ ಶಾಸನದಲ್ಲಿ ಭಟ್ಕಳದೊಳಗೆ ನರಸಿಂಹದೇವರಿಗೆ ಮೂರುದತ್ತಿ ಅರ್ಧಹೊನ್ನುಗಳನ್ನು ಮತ್ತು ಹತ್ತು ತಾರಗಳು ಪರಿವ್ರಾಜ ಕಾರ್ಯ್ಯವರ್ಯ್ಯ, ಪದವಾಕ್ಯ ಪ್ರಮಾಣ, ಯೋಗಮುಂಡವಳ್ಳಿಯ ಗ್ರಾಮದವರು ಬಾರಕೂರ ಅರಮನೆ ದೇವರಿಗೆ ಹೊನ್ನು ಕೊಟ್ಟ ವಿವರವಿದೆ. ಕ್ರಿ.ಶ. 1552ರ ಬನವಾಸಿ ಶಾಸನದಲ್ಲಿ ಊಳಿಗದ ಪಡುವಪ್ಪ ಎಂಬುವನು ಪಾರ್ವತಿದೇವಿ, ನರಸಿಂಹ ದೇವಾಲಯಗಳ ವಿನ್ಯಾಸದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1572ರ ಬನವಾಸಿ ಶಾಸನದಲ್ಲಿ ಬನವಾಸಿ ನರಸಿಂಹ ದೇವಾಲಯದ ಅರಸಿದೇವಿ ಮತ್ತು ಅವಳ ಮಗ (ಹೆಸರು ಕೊಟ್ಟಿಲ್ಲ) ಹಿಮ್ಮಡಿ ಅರಸಪ್ಪ ಒಡೆಯ ಸೊಡೆಯ ಮಹಾಪ್ರಭು ಭೂಮಿ ದಾನ ನೀಡಿದ ದಾಖಲೆಯಿದೆ. ವೆಂಕಟಪತಿಮಹಾರಾಯರ ಕ್ರಿ.ಶ. 1583ರ ಸೊಂಡಾ ಶಾಸನದಲ್ಲಿ ಶ್ರೀವಾದಿರಾಜಾತೀರ್ಥ ದೇವಾಲಯ ಕಟ್ಟಿಸಿ ಮತ್ತು ತ್ರಿವಿಕ್ರಮ ವಿಗ್ರಹ ಪ್ರತಿಷ್ಠಾಪಿಸಿ ಅರಸಪ್ಪನಾಯಕ ಸೊಡೆಯಿಂದ ಆಳುತ್ತಿರುವಾಗ ದೇವರ ಸೇವೆಗೋಸ್ಕರ ವಾದಿರಾಜನು ಬೆಳೆ ತೆರಿಗೆಗಳ ಹಣದ ಆದಾಯದಿಂದ ದಾನ ನೀಡಿದ ದಾಖಲೆಯಿದೆ.

ಆಳುಪ ಮನೆತನದ ಬೆಂಕಿಯಣ್ಣ ಅರಸ ಕ್ರಿ.ಶ. 11–12ನೇ ಶತಮಾನದ ತೆಳಕೊಡಶಾಸನ ಬಂಕಿಯಣ್ಣರಸ ನೊಳುಂಬಾಡ ರಾಜ್ಯಗಳಾತ್ತಿರುವಾಗ ನೂರುಹಳ್ಳಿಗಳ ಗುಂಪಿ ಹೊಲೆಯಬೆಯ ಬಳಿಯ ಸಿಂಗಬೊಂಮ ಮಾಡಿದ ಅಗ್ರ ಒನ್ದು ವಿಷ್ಣುದೇವರ ನೈವೇದ್ಯಕ್ಕೆ ಗದ್ಯಾಣ ಇಪ್ಪತ್ತು ದೇವಸ್ಥಾನ ಪೂಜಾರಿಗಳು ಗ್ರಾಮದ ಜನರು ಅಂಕಿತ ಹಾಕಿ ದಾನ ನೀಡಿದ ದಾಖಲೆಯಿದೆ. ಬಸವಶಂಕರವೀರ ಅಜಯದೇವರಸನ ಕ್ರಿ.ಶ. 1331ರ ಶಿರಾಲಿ ಶಾಸನದಲ್ಲಿ ವುಳಗೋಡನರಸಿಂಹದೇವರ ಅಮೃತಪಡಿಗೆ[ತೆ]ಱು ವರಾಹ ಪ 6 ಭತ್ತ 45 ಹಾನೆ ಧಾರೆಯಾಗಿ ಎಱೆದು ಕೊಟ್ಟರು. ತೆರಿಗೆ ರಹಿತವಾಗಿ 6 ಪಣಗಳು ವೊಸಗೆ ಅಕರ ವೈಜಪಸಾಹಣಿಯಪ್ರಧಾನಿ ಅಜಂಣನು ಅಧಿಕಾರದಲ್ಲಿ ಉಳಗೋಡ ನರಸಿಂಹದೇವರ ಅಮೃತಪಡಿಗೆ ಗದ್ದೆ ಹತ್ತು ಮೂಡೆಯ ತೆಱನು ಸರ್ವಮಾನ್ಯವಾಗಿ ಕೊಟ್ಟ ದಾಖಲೆಯಿದೆ. ಹಾನಗಲ್ ಕದಂಬರ ವೀರಕಾವದೇವ 13ನೇ ಶತಮಾನದಲ್ಲಿ ನಾಗನೂರ ಶಾಸನದಲ್ಲಿ ವಿಷ್ಣುದೇವ ಮತ್ತು ಶ್ರೀರಾಮದೇವರ ನಿರ್ವಹಣೆಗೆ, ದೀಪಾರಾಧನೆಗೆ ಪೂಜೆಗೋಸ್ಕರ ಕೆಲವು ಹಣ ನಾಗನೂರು ಪ್ರಭುಗಳು ದಾನ ನೀಡಿದ್ದಾರೆ. ಇದೇ ಊರಿನ ಮತ್ತೊಂದು ಶಾಸನದಲ್ಲಿ ವಿಷ್ಣುದೇವರಿಗೆ ಮಾನಿಸಪ್ರಭುಗಳಿಂದ ತೆರಿಗೆ ಹಣ ನೀಡಿದ ಬೂರಿವಾಳ ಪೆರಿಸೆಯ ಈ ದಾನವನ್ನು ಪ್ರಕಾಶತೀರ್ಥ ಶ್ರೀಪಾದರವರಿಗೆ ಒಪ್ಪಿಸಿದ. ವಿಷ್ಣುದೇವರಿಗೆ ಕೆಲವು ಭೂಮಿ ದಾನ ನೀಡಿದೆ. ಸುರಣವಾರು ಜನರು 10 ಹೈವೆ ಗದ್ಯಾಣವನ್ನು ಪೂಜೆ, ನಂದಾದೀವಿಗೆಗೆ ದಾನ ನೀಡಿದ ದಾಖಲೆಯಿದೆ. ತ್ರಿಭುವನ ಪ್ರತಾಪವೀರ ಬೈರವರಸ ಕ್ರಿ.ಶ. 1224ರ ಚಂದಾವರ ಶಾಸನದಲ್ಲಿ ಪರಿಪೂರ್ಣ ಯೋಗನರಸಿಂಹದೇವರ ನಿತ್ಯ ಅನ್ನ ದಾನಗೋಸ್ಕರ ರಾಜ ಆದಾಯ ಭೂಮಿಗಳನ್ನು ಕೀರ್ತಿನಾರಾಯಣ ದಾನ ನೀಡಿ ಹಾಗೂ ನಾರಣದಂನಾಯಕದೇವ ಇದೇ ದೇವರಿಗೆ ಅಂಗಭೋಗ, ರಂಗಭೋಗಕ್ಕೆ ದಾನ ನೀಡಿದ್ದಾನೆ.

ಕೆಳದಿಯ ವೆಂಕಟಪ್ಪನಾಯಕ ಕ್ರಿ.ಶ. 1660ರ ವೆಂಕಟಪುರ ಶಾಸನದಲ್ಲಿ ಭಟ್ಕಳ ಸೀಮೆಯ ಪಶ್ಚಿಮ ಕುಕನೀರಗ್ರಾಮದವರು ವೆಂಕಟೇಶ್ವರದೇವರ ದೀಪ, ಪೂಜೆ ಅನ್ನದಾನ, ಸತ್ರದ ವೆಚ್ಚಗೋಸ್ಕರ ಒಬ್ಬ ಗಣಪತಿಮಲ್ಲೆ ದೂಣಿದೆರೆ ಭೂಮಿ ದಾನ ನೀಡಿದ ದಾಖಲೆಯಿದೆ.

ವೀರಗಲ್ಲುಗಳು :– ತಮಡಿಕಲ್ಲಾಳ ಶಾಸನದಲ್ಲಿ ಸಿತಿಹಳ್ಳಿ ಸಾಂತಯಗವುಂಡ ಅವನ ಜೀವನ ಅನೇಕ ನಂಬಿದ ಸೇವಕರು ಮಗ ಸಾತಯ್ಯದೇವ ಅನೇಕ ವೈರಿಗಳನ್ನು ಚಿಕ್ಕಯ್ಯಗವುಡ ಸಹೋದರ ಮರಣ ಹೊಂದಿದಬರ್ಮಯ್ಯ ಮಾದಲಿಗೆ ಹಿರಿಯಮಗ ವೀರಗಲ್ಲು ನಿಲ್ಲಿಸಿದ. ಕೆತ್ತಿದವನು ಜಾಕೋಜ ಸಹೋದರ ಕಾವಣಬಣದ ಆತ್ಯವರ್ಮವೋಜ ವೀರನಕುಟುಂಬದ ನಿರ್ವಹಣೆಗೆ ದಾನ ನೀಡಿದ ವಿವರವಿದೆ. ಇದನ್ನು ಬರೆದವನು ಸಂಧಿವಿಗ್ರಹಿ ಕಾದಿಮಯ್ಯ ಕ್ರಿ.ಶ. 1072ರ ಎರಡನೇ ಸೋಮೇಶ್ವರ ತಮಡಿಕಲ್ಲಾಳ ಶಾಸನದಲ್ಲಿ ಮಹಾಮಂಡಳೇಶ್ವರ ತೈಲಪದೇವ ವೀರನಾಗಿ ಯುದ್ಧದಲ್ಲಿ ಮಡಿದ ಕಾರಣ ಕುಟುಂಬದ ನಿರ್ವಹಣೆಗೆ ಬಳೆ ಮಾರುವವರಿಂದ ತೆರಿಗೆಯನ್ನು ಪಡೆದು ಹಿರಿಯಪೆರ್ಗ್ಗಡೆ. ಶಾಸನ ಬರೆದವನು ಕಲ್ಲಿಪಾಳ ದೇವಮಾನಿದ ಲಕ್ಕಣಯ, ಕೆತ್ತಿದವನು ಜಾಕೋಜ ಕಾವಣಬಣದ ಸಹೋದರ ಅಯಿತವರಮೋಜ. ಕ್ರಿ.ಶ. 1148ರ ಕೊಂಡಲಿ ಶಾಸನದಲ್ಲಿ ಆಯಿಪೆಗವುಡನ ಮಗ ವೀರನ ಹೆಸರು ಮಾಚಗವುಡ ಮತ್ತು ಸೋದರ ಕಕ್ಕಡಗವುಡ, ಕೊಂಡಲಿ ಜೋಹಳ್ಳಿ–70, ಬೊಪ್ಪಗವುಡನ ಮಗ ನಿಧನ ವೀರನ ಉತ್ತರಾಕ್ರಿಯಾ ಮಾಡಿದ ನಂತರ ಈ ಶಾಸನವನ್ನು ನಾಡಿಮೋಜನ ಮಗ ಬಂಗೋಜ. ಇದೇ ಕಾಲದ ಇದೇ ಗ್ರಾಮದ ಇದೇ ರಾಜನ ಕದಂಬ ಪ್ರಧಾನನ್ನು ಹೆಸರಿಸುತ್ತದೆ. ಕದಂಬ ತೈಲಪದೇವ ವೀರಮರಣವನ್ನು ತಿಳಿಸುತ್ತದೆ. ತುಯ್ಯಗೌಣ್ಡನ ಮಗ ಬೆಳ್ಳಗೌಂಡಕೊಂಡಳಿ ಸ್ಥಳೀಯ ಹೊಡೆದಾಟದಲ್ಲಿ ಸುರಲೋಕನಾದ ಕ್ರಿ.ಶ. 1184ರ ಕಾವದೇವನ ಹೊಸರು ಶಾಸನ ವೀರಗಲ್ಲು ಕೋಟೆಗೆ ಮುತ್ತಿಗೆ ಹಾಕಿದಾಗ ಯುದ್ಧದಲ್ಲಿ ಮಡಿದ ವೀರನ ಗೌರವಾರ್ಥ ವೀರಗಲ್ಲು ಕೆತ್ತಿದವನು ರೂವಾರಿ ಬಮ್ಮೋಜ ಕ್ರಿ.ಶ. 1192ರ ನಾಲ್ಕನೇ ಸೋಮೇಶ್ವರನ ಅಂಗಡಿ ಶಾಸನದಲ್ಲಿ ಶಾಸನ ಸವೆದಿದೆ. ಮೈಲುನಾಯಕನ ಮಗ ರಾಮನಾಯಕ ವೀರಮರಣವನ್ನಪ್ಪಿದ. ಯುದ್ಧದಲ್ಲಿ ಶಿವಚಿತ್ತವೀರ ಪೆರ್ಮಾಡಿ ದೇವ ಗೋವಕದಂಬ ಪ್ರಧಾನ. ಕ್ರಿ.ಶ. 1398ರ ಕೈಕಿಣಿ ಶಾಸನದಲ್ಲಿ ರಾಜಗುರು ಬೊಂಮಣನಾಯ್ಕನ ಮಗ ಒಂಭತ್ತು ಮಂದಿಯ ದಂಡನಾಥನು ಹಳಚಲು ಹಯಿವ ಭೂಭಜನು ಸ್ವರ್ಗಸ್ತನಾದಲಿ ತಂಮ ತಂಮನಾಯ್ಕನೂ ತಂದೆ ಮಕ್ಕಳೂ ವೀರಗಲ್ಲು ಸ್ಥಾಪಿಸಿದರು. ಕ್ರಿ.ಶ. 1415ರ ದೇವರಾಯ ಒಡೆಯನ ಕೈಕಿಣಿ ಶಾಸನದಲ್ಲಿ ಮಹಾಮಂಡಳೇಶ್ವರ ಸಂಗಿರಾಯ ಒಡೆಯರ ದಳಪತಿ ಭಟ್ಕಳದಲ್ಲಿ ಕೂಡಿದಲ್ಲಿ ಹಳಗೇರಿಯ ಬಾಣಸೀಮೆಯಲ್ಲಿ ಭಾಗಿ ನಗಿರೆ ನಾಲ್ವರು ಕಾದು ಮಗಲೋಕನಾಯಕ ಆಲೋಕನಾಯಕನ ಮಗ ಮಾಬುನಾಯಕ ಮಾಡಿದ ಭಟಕಳದ ಯುದ್ಧದಲ್ಲಿ ಕಾದಾಡಿ ತಂದೆ ಲೋಕನಾಯಕ ಹಾಕಿಸಿದ ವೀರಗಲ್ಲು. ಕ್ರಿ.ಶ. 1422ರ ಹಾಡುಳಿ ಶಾಸನದಲ್ಲಿ ಕೋಟಿಯಣ್ಣ ವೀರಯುದ್ಧದಲ್ಲಿ ಮಡಿದಾಗ ಮಾಬಣ್ಣನಾಯಕ ಮತ್ತು ಬಂಕಿನಾಯಕ ಇವನ ಜ್ಞಾಪಕಾರ್ಥವಾಗಿ ನಿಲ್ಲಿಸಿದ ವೀರಗಲ್ಲು. ಇದೇ ಕಾಲದ ಕೈಕಿಣಿ ಶಾಸನದಲ್ಲಿ ಹಾಡುವಳ್ಳಿ ಸಂಗಿರಾಯ ಒಡೆಯರ ಕೋಸದ ದೇವ ಒಡೆಯರ ತಂಮನಾಯಕನ ಮಗ ಸಂಗಣನಾಯಕ ಹೊಯಿಸಿಕೊಂಡು ಹಯಿವಣನಾಯಕನೂ ಆತನ ಅಳಿಯ ಬೊಂಮನಾಯಕ ಸಂಗಣನಾಯಕನಿಗೆ ವೀರಗಲ್ಲು ನಿಲ್ಲಿಸಿದ ವಿವರವಿದೆ. ಕ್ರಿ.ಶ. 1423ರ ಹಾಡುವಳ್ಳಿ ಶಾಸನ ಸವೆದಿದೆ. ಹಾಡವಳಿಯ ಸಂಗಿರಾಯವೊಡೆಯರು ಶ್ರಿಮನ್ಮಹಾಮಂಡಳೇಶ್ವರ ಹೈವರಸ ಒಡೆಯರ ಮಂಗರಸ ಒಡೆಯರು ಎರಡು ಕೂಲಬಳಿ ವೀರ ಪಾರಿವಾರವ ಕೂಡಕೊಂಡು ಕಾದಿದಲ್ಲಿ ವೀರಗಲ್ಲು, ಎರಡನೇ ದೇವರಾಯನ ಕ್ರಿ.ಶ. 1425ರ ಕೈಕಿಣಿ ಶಾಸನದಲ್ಲಿ ನಗಿರದ ಕೇಶವವೊಡೆಯ ದೇವಣನಾಯಕ ಯುದ್ಧ ಮಾಡಿ ವೀರಮರಣವನ್ನಪಿದ ತಂಮ ವೀರಗಲ್ಲು ನಿಲ್ಲಿಸಿದ ವಿವರ. ಕ್ರಿ.ಶ. 1429ರ ಹಾಡುವಳ್ಳಿ ಶಾಸನದಲ್ಲಿ ಜಯಸೇನ ಮುನೀಶ್ವರ[ಗಂ] ಪ್ರಿಯಸುತ ಮಾಣಿಕ್ಯಸೇನ ಮುನಿಕುಲತಿಲಕಂಬಯಸಿದವ ಸ್ವರ್ಗಲಕ್ಷ್ಮಿಯ ಭಯರಹಿತಾ ಬಾಗೆದು ನಿಂತ ಸಲ್ಲೇಖನಯ ಈ ಶಾಸನ ತಿಳಿಸುತ್ತದೆ. ಕ್ರಿ.ಶ. 1430ರ ಕೈಕಿಣಿ ಶಾಸನದಲ್ಲಿ ಸಂಗಿರಾಜು ವೊಡೆಯರು ತಂಮವೀರಪರಿವಾರಸಹಿತ ಕಾಯಕಣಿಗೆ ಬಂದು ಕೂಡಿದ ಗಡಿಯಲ್ಲಿ ಕಾದಿ ಬೊಂಮನಾಯಕನ ಮಗ ಭೋಗನಾಯಕ ಮಾಡಿದ ಅವಸರವುಭೆಯದಳಹಳಚಿದಲ್ಲಿ ವೀರಸ್ವರ್ಗ ಪಡೆದುದಕ್ಕೆ ಅವರ ತಂಮದಿರು ಕೇಸವನಾಯಕ ಮಳುವನಾಯಕನವರು ಮಾಡಿಸಿದ ವೀರಗಲ್ಲು.

ಕ್ರಿ.ಶ. 1438ರ ಕೈಕಿಣಿ ಶಾಸನದಲ್ಲಿ ಅಂತಪ್ಪವೊಡೆಯರ ಸೈನ ಮತ್ತು ಮಹಾಮಂಡಳೇಶ್ವರ ಬೈರವದೇವವೊಡೆಯರು ನಾಗಿರೆ ಪಟ್ಟಣದ ತನ್ನ ಸೈನ್ಯವನ್ನು ದೊಡ್ಡ ಮಟ್ಟದಲ್ಲಿ ಅನಂತಪವೊಡೆಯನ ಮಣಕಿಯಲ್ಲಿ ಸಂಧಿಸಲು ಈ ಎರಡು ಸೈನ್ಯಗಳು ಯುದ್ಧ ಮಾಡಲು ಸಂಧಿಸಿದವು. ಆ ತಿರುಕುನಾಯಕನ ತಂಮ ಕೋಟಿಯಂಣನು ನಗಿರೆ ಹಾಡುವಳಿ

ಕಾಇಕಣಿಯ ನಾಡೇಳುಮಂದಿ ಇಪ್ಪತ್ತುನಾಲ್ಕು ಬಳಿಯ ಸಮಸ್ತನಾಡು ಮಂಕಿಸಿರಿಯಾಲನಾಡನು ಕೂಡಿ ತಂನ ಅಂಣಗೆ ವೀರಗಲ್ಲು ಸ್ಥಾಪಿಸಿದನು. ಆತನ ತಂಮ ಕೋಟಯಂಣನು. ಕ್ರಿ.ಶ. 1462ರ ಕ್ಯಾಯಿಕಿಣಿ ಶಾಸನದ್ದಲಿ ಸ್ವಾಮಿಕಾರ್ಯದ ಆನೆವಳ್ಳಿವೀರ ಸಿರಿಯನಾಯಕ ಸಂಗೀತಪುರ ಯುದ್ಧದಲ್ಲಿ ಮಡಿದ ವಿವರವಿದೆ. ಕ್ರಿ.ಶ. 1470ರ ಕೈಕಿಣಿ ಶಾಸನದಲ್ಲಿ ಎರಡು ಕೋಲ ಸಮಸ್ತ ವಿದ್ಯೆಯಲ್ಲಿ ಅಂಣತಂಮದಿರು ತಂಮಾಳೆ ತಾಉ ಮಾಗಿಕೊಂಡು ಕದನದಲ್ಲಿ ಮಡಿದ ವೀರಗಲ್ಲು. ಕ್ರಿ.ಶ. 1481ರ ಕೈಕಿಣಿ ಶಾಸನದಲ್ಲಿ ನಿಜಾಮುದ್ದೀನ್ ಮೆಲುಕ ಅನೇಕ ವಜೀಲರು ಸಹವಾಗಿ ಗೋವೆಯ ಮುಖದಿಂದ ದಂಡೆತ್ತಿ ಬಂದು ಮಿಜಡಿಯಲ್ಲಿ ಕಾದಿದಲ್ಲಿ ಮಹಾಮಂಡಳೇಶ್ವರ ದೇವರಸವೊಡೆಯರು ಬಂಟರು ಸೋದೆಯ ಕಲ್ಲುನಾಯಕ ಮಕ್ಕಳು ಜಿಉತಡಿಯಲ್ಲಿ ಹುಟ್ಟಿದ ಹೊಲೆಕಾಳಿಯ ಕಲ್ಲಂಣನಾಯಕ ಆತನ ತಂಮದಿರು ತುರಸಿದಳದ ಕೊಡೆಯಲ್ಲಿ ಕಾದು ಆತನ ತಂಮದಿರು ವೀರಗಲ್ಲು ನಿಲ್ಲಿಸಿದ ವಿವರವಿದೆ. ಇದೇ ಕಾಲದ ಇದೇ ಗ್ರಾಮದ ದೇಬನಾಯಕರು ತಂನಂಣ ರಣಗಬ್ಬ ನಾಯಕರಿಗೆ ದೇವರಸ ವೊಡೆಯರು ಗಡಿ ಹಯಿವೆ ರಾಜ್ಯವಾಳುತ್ತಿರಲು ಮಹಮದರ ಸೈನ್ಯ (ತುಂಕೆಪಾಯದಳ) ಹೈವೆ, ಗೋವೆಯ ಎದುರಿಸುವ ದೇವುನಾಯಕ ಮತ್ತು ಆತನ ತಂಮ ರಂಗಭಿನಾಯಕ ಸ್ವರ್ಗಸ್ಥನಾದ ಹೋರಾಟದಲ್ಲಿ. ಕ್ರಿ.ಶ. 1484ರ ಇದೇ ಊರಿನ ಶಾಸನದಲ್ಲಿ ರಾಜೇಂದ್ರನಳಿಯ ದೇವರಸವೊಡೆಯ ನಗಿರೆ ಸಿಂಹಾಸನಾಧೀಶ್ವನಾಗಿ ತುಳುವ, ಹೈವೆ ರಾಜ್ಯ ವೈರಿಗಳನ್ನು ನಾಶ ಮಾಡಿದ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1522ರ ಕೈಕಿಣಿ ಶಾಸನದಲ್ಲಿ ಯಿಂಮಡಿದೇವರಾಯ ತಂಮ ಸಮಸ್ತ ಯೆರಡು ಕೋಲಬಳಿ ಸಮಸ್ತಪರಿವಾರ ಸಮನ್ನಿತರಾಗಿ ಗೋವೆಯ [ಪೆ]ರಂಗದ ಕಪಿನತ್ತ ಮೇಲೆ ದಂಡೆತ್ತಿ ಹೋದಲ್ಲಿ ಕಪಿತ ಮೋಹರನವರು ಮಡಗೋವೆಯಲ್ಲಿ ಬಂದು ತಂಗಲಾಗಿ ಯುದ್ಧದಲ್ಲಿ ವೀರುನಾಯಕ ಮರಣವನ್ನಪ್ಪಿದ ವೀರ. ತನ್ನ ಸೇವಕರು ಮತ್ತು ಹೆಗ್ಗಡೆ ಕಪಿತಮಾಹರ ಸಿದಣನಾಯಕನ ವೀರಗಲ್ಲು ನಿಲ್ಲಿಸಿದ ವಿವರ. ಇದೇ ಕಾಲದ ಇದೇ ಊರಿನ ಶಾಸನದಲ್ಲಿ ಗೋವೆಯ ಪರಂಗದಕಪಿತನ ಮೇಲೆ ದಂಡೆತ್ತಿ ಹೋಗಿ ಬಯಿರಣನಾಯಕನ ಮಾಂಮಗ[ನ]ಗಿರನಾಲಾಳು ತಾಯಿ ಮಕ್ಕಳಾದ ಹುಲುಗು ನಾಯಕನಳಿಯ ತಂಮೆನಾಯಕನ ಮಗ ತಂ[ಮಿ]ನಾಯಕನ ವೀರಗಲ್ಲು. ಅಚುತರಾಯನ ಕ್ರಿ.ಶ. 1530ರ ಕೈಕಿಣಿ ಶಾಸನದಲ್ಲಿ ಮಹಾಮಂಡಳೇಶ್ವರ ಗುರುರಾಯವೊಡೆಯ ತಮ್ಮ ಸಮಸ್ತ ಯೆರಡು ಕೋಲ ಬಳಿ ವೀರಪರಿವಾರಸಯವಾಗಿ ನಗಿರೆ ರಾಜ್ಯದ ಮೇಲೆ ದಂಡೆತ್ತಿ ಹೋದ ದಾಖಲೆಯಿದೆ. ಕ್ರಿ.ಶ. 1542ರ ಭಟಕಳ ಶಾಸನದಲ್ಲಿ ವೀರಗಲ್ಲು ಶಾಸನ ಜ್ಞಾಪಾಕಾರ್ಥವಾದ, ದೇವರಸವೊಡೆಯರ ಸೊಸೆ ಚಂನಾದೇವಿ ಅಂಮನವರು ಹಾಡವಳಿ ಭಟಕಳ ಮುಂತಾದ ರಾಜ್ಯವಾಳುತ್ತಿರುವಾಗ ಭಟಕಳ ಪರಂಗದ ಕಸಿತಾಮರೆ ಮುತ್ತಿಗೆನಿಕ್ಕಿ ಸುಟ್ಟಯುದ್ಧ. ಲಿಂಗನಾಯಕರ ಅಳಿಯ ನಾರಣದೇವನಾಯಕರ ತಂಮ ಎಂಕಪನಾಯಕರು ಇಜೆದು ಯಿರಿಸಿಕೊಂಡು ಸ್ವರ್ಗಸ್ಥನಾದನು.

ಕದಂಬರು :– ಶಿವಭಕ್ತ ವೀರಕಾವದೇವನ ಕ್ರಿ.ಶ. 1224ರ ಮಾಗಟ ಶಾಸನ ಶಾಸನ ಸವೆದಿದೆ. ವೀರಹೊಡೆದಾಟದಲ್ಲಿ ನಾಗದೇವ ಮರಣವನ್ನಪಿದ ವಿಷಯವಿದೆ.

ಚಂದಾವರ ಕದಂಬರು :– ವೀರಕಾವದೇವನ ಕ್ರಿ.ಶ. 12ನೇ ಶತಮಾನದ ಚಂದಾವರ ವೀರಕಾವದೇವ ಮತ್ತು ನಾರಣದಂಡನಾಯಕ ಹೊನಿಗೆ ಕುಟುಂಬದ ಹಡವಳ ಬೈಚ ವೀರಗಲ್ಲು ನಿಲ್ಲಿಸಿದ ವಿವರವಿದೆ. ಕ್ರಿ.ಶ. 1209ರ ತ್ರಿಭುವನಮಲ್ಲ ಬೀರದೇವರಸನ ಕಾಲದ ಚಂದಾವರ ಶಾಸನದಲ್ಲಿ ಹಿರಿಯ ಪ್ರಧಾನಿ ನಾರಣಸಮಂತಿ ಪ್ರತಾಪ ತ್ರಿಭುವನ ಬೀರದೇವರಸ ಗುತ್ತಿಯ ಮಲ್ಲದೇವನ ವಿರುದ್ಧವಾಗಿ ಹೋಗುತ್ತಿರುವಾಗ ಈ ಯುದ್ಧದಲ್ಲಿ ಕುದುರೆಯ ದಂಡು ಯುದ್ಧ ಹೋರಾಟದಿಂದ ಸಾಲೆಯ ನಾಯಕದೇವರಾಜು ವೀರಮರಣವನ್ನಪ್ಪಿದ ಕಾಲ 12–13 ಶತಮಾನ. ಎರಡನೇ ಕಾವದೇವನ ಕ್ರಿ.ಶ. 1289ರ ಉಸಲೇ ಶಾಸನದಲ್ಲಿ ದುಗ್ಗಲನಾಯಕನ ಮಗ ಅಳಿಯ ದಡಿಕ ಸಾತೆಯನಾಯಕನು ಯುದ್ಧ ಮಾಡುವಾಗ ಗ್ರಾಮ ಉಳಿಸಿಕೊಳ್ಳಲು ವೈರಿಗಳ ಜೊತೆ ಸೆಣಸಾಡುವಾಗ ಮಾಚನಮಗ ಮಾಡಿಸಿದ ವೀರಗಲ್ಲು.

ಕ್ರಿ.ಶ. 1494ರ ಕೈಕಿಣಿ ಶಾಸನದಲ್ಲಿ ಮಹಾಮಂಡಳೇಶ್ವರ ಸಾಳುವ ದೇವರಸಒಡೆಯ ನಗಿರೇ ರಾಜ್ಯ ಹೈವೆ, ತುಳು, ಕೊಂಕಣ ಆಳುತ್ತಿರುವಾಗ ಮಾಕದುಂಬಿನ ಮೇಲೆ ದಂಡೆತ್ತಿ ಹೋಗಲಾಗಿ ಮಾಕದುಂಬಿನ ಹೆಂಡಿನೂಣಲ ತನ್ನ ಸಮಸ್ತ ಪರಿಹಾರವನ್ನು ಕೂಡಿಕೊಂಡು ನಗಿರೆ ತಂಮ್ಮನಾಯಕನ ಮಗ ದೇವರಸನಾಯಕ ವೀರನಾಯಕನ ಮಗಳು ಕಳುವಮುದುನಾಯಕಿ ತಿಮ್ಮನಾಯಕ ಮತ್ತು ತಮ್ಮನಾಯಕ ನಾಲ್ಕು ಮೊಮ್ಮಕಳ ಜ್ಞಾಪಕಾರ್ಥವಾಗಿ ನಿಲ್ಲಿಸಿದ ವೀರಗಲ್ಲುಗಳು.

ಆರ್ಥಿಕ ಪರಿಸ್ಥಿತಿ :– ಎರಡನೇ ದೇವರಾಯನ ಕ್ರಿ.ಶ. 1431ರ ಜುಗ್ ಶಾಸನ ಸವೆದಿದೆ. ಎರಡು ದಾಯಾದಿಗಳ ಮಧ್ಯ ವಡಂಬಡಿಕೆ ಒಪ್ಪಂದ, ಹೊಡಗೇರಿಯ ಬಿರಣ್ಣನಾಯಕ, ಸೋಮತಾರಕೂರ ಗೋಕರ್ಣದ ಮಹಾಬಲೇಶ್ವರದೇವರ ಮುಂದೆ ಅನ್ನದಾನ, ಮನೆಯ ನಿರ್ವಹಣೆಗೆ ಭೂಮಿಸೆಟ್ಟಿ ಅಳಿಯ ಬೊಮ್ಮಣನಾಯಕ ತೆರಿಗೆಗಳನ್ನು ಮನ್ನಾ ಮಾಡಿ ಭೂಮಿ ದಾನ ನೀಡಿದ್ದಾನೆ. ಕ್ರಿ.ಶ. 1433ರ ಬೈಲೂರು ಶಾಸನದಲ್ಲಿ ಶ್ರೀಪಾದಂಗಳು ದೇಸದ ಸಮಸ್ತರು ಗುರ್ಜೋಡಿಯ ನಾರಾಯಣಭಟ್ಟ ಧಾರಾಪೂರ್ವಕವಾಗಿ ಮುಲವ ಎಱೆದು ಕೊಟ್ಟರು. ಹಣ, ಹಣವೊಕ್ಕಲು, ಗುತ್ತಿಗೆ ಕಾಣಿಕೆ ಖಡ್ಡಾಯ, ಬಿಟ್ಟಬಿರಾಡ ಎತ್ತು ಗಾಣ ಮೊದಲಾಗಿ ಸರ್ವಮಾನ್ಯವಾಗಿ ದೇಶದ ಸಮಸ್ತರು ಶ್ರೀಪಾದಂಗಳು ಕೊಟ್ಟರು. ಮಡೊಳ್ಳಿ ಶಾಸನದಲ್ಲಿ ಕ್ರಿ.ಶ. 1424–1446ರಲ್ಲಿ ಮಂಗಳಮಜ್ಜನ ಮಹೋತ್ಸವದಲ್ಲಿ ಸೋಮೋ ಪರಾಗ ಪುಣ್ಯ ಕಾಲದಲ್ಲಿ ಪುರುಷೋತ್ತಮ ಭಟ್ಟರಿಗೆ 12 ಹೊನ್ನುಗಳನ್ನು ಮಲ್ಲಿಗ್ರಾಮದ ಜನರು ಸೇರಿ ನೀಡಿದ್ದಾರೆ. ಸದಾಶಿವರಾಯನ ಕ್ರಿ.ಶ. 1550ರ ಉಳವರಿ ಶಾಸನದಲ್ಲಿ ಕೆಳದಿ ಚವುಡಗವುಡನ ಮಗ ಸದಾಶಿವರಾಯನಾಯಕನಿಗೆ ವರ್ಗಾವಣೆ ಮಾಡಿ ಕೆಲವು ಹಣ ಪಡೆದುದನ್ನು ತಿಳಿಸುತ್ತದೆ. ಕ್ರಿ.ಶ. 15–16ನೇ ಶತಮಾನದ ಬೈಲೂರು ಶಾಸನದಲ್ಲಿ ಮನೆ ಹಣ, ನಾಗಹಣ, ವೊಕ್ಕಲು ಗುತ್ತಿಗೆ, ಕಾಣಿಕೆ, ಖಡಾಯ, ಬೆಳಕರಣ, ಬೀಳುದಂಡ, ಯೊಸೆ, ಒಸಗೆ, ಬಿಜ್ಜು, ಬಿಡಾರ ವತ್ತುಗಯಿ ತೆರಿಗೆಗಳ ಬಗ್ಗೆ ತಿಳಿಸುತ್ತದೆ. ಬೀಳಗಿ ಪ್ರಧಾನರ ಎರಡನೆ ವೆಂಕಟ ಕ್ರಿ.ಶ. 1581, 1592ರ ಬಿಳಗಿ ಶಾಸನದಲ್ಲಿ 443 ವರಹಾ, 1ಹಣ, ಮತ್ತು ವೀಸ ಗ್ರಾಮಗಳ ತೆರಿಗೆಗಳಿಂದ ದಾನ ನೀಡಿದ ವಿವರವಿದೆ.

ನಾಣ್ಯಗಳು :– ಶಾತವಾಹನರ ನಾಣ್ಯಗಳು, ಕದಂಬರ ನಾಣ್ಯಗಳು ಕ್ರಿ.ಶ. 1516ರ ಕೃಷ್ಣದೇವರಾಯನ ಭಸ್ತಿಮಕ್ಕಿ ವರಾಹಿ ಗದ್ಯಾಣ, ರೋಮ್ ನಾಣ್ಯ ಇತ್ಯಾದಿ.

ತೆರಿಗೆಗಳು :– ಕ್ರಿ.ಶ. 1401ರ ಬಬ್ಬರವಾಡ ಶಾಸನದಲ್ಲಿ ಬರುವ ತೆರಿಗೆಗಳಾದ ಅಸಂತಾಯ, ಬಿಟ್ಟ ಬಿರಾಡೆ ತೆರಿಗೆಗಳು. ಕ್ರಿ.ಶ. 1433ರ ಬೈಲೂರು ಶಾಸನದಲ್ಲಿ ಹಣವೊಕ್ಕಲು, ಗುತ್ತಿಗೆ ಕಾಣಿಕೆ, ಖಡ್ಡಾಯ, ಬಿಟ್ಟಬರಾಡ ತೆರಿಗೆಗಳನ್ನು ಸರ್ವಮಾನ್ಯವಾಗಿ ದೇಶದ ಸಮಸ್ತರು ಶ್ರೀಪಾದಂಗಳು ಕೊಟ್ಟರು. ಕ್ರಿ.ಶ. 1550 ಉಳವರಿ ಶಾಸನದಲ್ಲಿ ವೊಸಗೆ, ಅಸಂತಾಯ, ಕಾಣಿಕೆ ಅನೇಕ ತೆರಿಗೆಗಳನ್ನು ಮನ್ನಾ ಮಾಡಿ ದಾನ ನೀಡಿದ ವಿವರವಿದೆ. ಕ್ರಿ.ಶ. 15–16ರ ಬೈಲೂರು ಶಾಸನದಲ್ಲಿ ಖಡಾಯ, ಬೆಳಕರಣ ಬೇಳುದಂಡ, ಯಸೆ, ಒಸಗೆ, ಬಿಜ್ಜು, ಬಿಡಾರ, ವತ್ತುಗಯಿ ತೆರಿಗೆಗಳ ಬಗ್ಗೆ ತಿಳಿಸುತ್ತದೆ. ಕ್ರಿ.ಶ. 1331ರ ಶಿರಾಲಿ ಶಾಸನದಲ್ಲಿ ತೆಜು ವರಾಹ, ಪಣಗಳು ವೊಸಗೆ, ಆಕರ ಬಗ್ಗೆ ತಿಳಿಸುತ್ತದೆ. ಬೀಳಗಿ ಪ್ರಧಾನರು, ಎರಡನೆ ವೆಂಕಟ ಕ್ರಿ.ಶ. 1581, ಕ್ರಿ.ಶ. 1592ರ ಶಾಸನದಲ್ಲಿ ಸಿದ್ಧಾಯ ತೆರಿಗೆಗಳಿಂದ ದಾನ ನೀಡಿದ ವಿವರವಿದೆ.

ಸಾಹಿತ್ಯ :– ಬ್ರಹ್ಮಸಿತ, ಸಂಪಿನ ವಿಕ್ರಮಾರ್ಜುನ ವಿಜಯ, ಚಾಮರಸನ ಪ್ರಭುಲಿಂಗಲೀಲೆ, ಜೈನ ಪುಷ್ಪದಂತೆ, ಇತ್ಯಾದಿ.

ಭಾಷೆಗಳು:– ಪ್ರಾಕೃತ, ದಕ್ಷಿಣಾತ್ಯ ಚೌಕತಲೆಯುಳ್ಳ ಭಾಷೆ, ಸಂಸ್ಕೃತ, ಕನ್ನಡ, ಮರಾಠಿ, ಚೀನಿ, ಅರೇಬಿಕ್, ಪರ್ಷಿಯನ್ ಭಾಷೆ ಶಾಸನಗಳು. ಸಿರಾಲ ಗ್ರಾಮ ತೇದಿಯಿಲ್ಲದ ಈ ಶಾಸನ ಬಸವಶಂಕರ ವೀರಕುಲಶೇಖರ ಬಾರಕೂರ ಆಳುತ್ತಿರುವಾಗ ಹಿರಿಯರ ಮನೆಯಲ್ಲಿ ದೇಶದ ಸಮಸ್ತ ಪ್ರಧಾನರು ಸಿರಲೆ ಗ್ರಾಮದ ಕಡಹು[ಮು]ಟಗರಿಂದ ವೊಳುಗಳ್ ಎರಡು ಭಾಷೆಯ ಗ್ರಾಮದ ಜನರಿಗೆ [ಆ]ಡುವ ಬಿಡಾರ(ಮನೆ) ಜನರಿಂದ ಸಿರಾಲಗ್ರಾಮದ ಜನರಿಂದ ಬಹಳ ಮುಖ್ಯವಾಗಿ ಜನರು ತುಳು ಕನ್ನಡ ಭಾಷೆಗಳನ್ನು ಮಾತನಾಡುತ್ತಿದ್ದರು.

ಕೆರೆಗಳು :– ಬನವಾಸಿಯಲ್ಲಿ ಗುದ್ಧತಟಾಕ ಶಿವಸ್ಕಂದ ನಾಗಶ್ರೀ ಕಟ್ಟಿಸಿದ್ದು ಕ್ರಿ.ಶ. 1144ರಲ್ಲಿ ದೇವಿಕೆರೆ. ಕೆರೆಯ ಜೀರ್ಣೋದ್ಧರ.

ರಾಜಮುದ್ರೆ :– ಹುಲಿ, ಸಿಂಹ ನಾಣ್ಯಗಳ ಮೇಲೆ

ಪ್ರಾಂತ್ಯಗಳು :– ಬನವಾಸಿ–12000, ಸಾತಳಿಗೆ–1000, ಕೊಂಕಣ–900, ಹೈವೆ–500, ಪಾನುಂಗಲ್–500, ಹೈಗುಂದ ಕಲ್ಯಾಣ ಚಾಳುಕ್ಯರ ತೈಲಪ ದೇವನ ಮತ್ತೆ ಜಯಸಿಂಹ ಹಾನಗಲ್ ಕದಂಬರ ಕಾಲದಲ್ಲಿ ಹುಲಿಗೂಡ–12, ಮಂಗಲೇನಾಡು–70

ವ್ಯಾಪಾರ :– ಉತ್ತರ ಕರ್ನಾಟದಲ್ಲಿ ವ್ಯಾಪಾರ ವೈಶಿಷ್ಟ್ಯವಾಗಿತ್ತು. ಕಾಳಮೆಣಸು, ಸಂಬಾರ ಪದಾರ್ಥಗಳು, ಅರಣ್ಯ ಉತ್ಪನ್ನಗಳು, ಅಕ್ಕಿ ಮುಂತಾದ ವಸ್ತುಗಳ ರಫ್ತು, ಆಮದು ಅರಬ್ಬೀ ಕುದುರೆಗಳು ರೋಂ ಸಾಮ್ರಾಜ್ಯದ ವ್ಯಾಪಾರ ಸಂಬಂಧಗಳಿದ್ದವು. ಭಟ್ಕಳ, ರೋಂ, ಮಧ್ಯಪ್ರಾಚ್ಯ ಐರೋಪ್ಯ ರಾಷ್ಟ್ರ ಪೋರ್ಚುಗೀಸ್, ಇಂಗ್ಲಿಷ್, ಫ್ರೆಂಚ್ ಸಂಬಂಧಗಳ ರಫ್ತು ಮತ್ತು ಆಮದು ವ್ಯಾಪಾರದ ಕೇಂದ್ರಗಳೊಂದಿಗೆ ಒಡನಾಟವಿತ್ತು.

ಕೃಷಿ :– ದೂರ ವ್ಯಾಪಾರ ವಾಣಿಜ್ಯ ಬೆಳೆಗಳು ಮೆಣಸು, ಸಾಂಬಾರ ವಸ್ತುಗಳು

ಪ್ರಾಚೀನ ಸ್ಥಳಗಳ ಮುಖ್ಯ ಶಾಸನಗಳು :– ಬನವಾಸಿ, ಗುಡ್ನಾಪುರ, ಬಿಳಗಿ, ಸೋದೆ, ಮಂಜುವಣಿ, ಗೋಕರ್ಣ, ಯಿಡಗುಂಜಿ, ಧಾರೇಶ್ವರ, ಹೈಗುಂದ, ಭಟ್ಕಳ, ಹಾಡುವಳಿ, ಮಿರ್ಜಾನಕೋಟೆ ಸದಾಶಿವಗಡ, ಗೇರುಸೊಪ್ಪ ಇತ್ಯಾದಿ.

ಬಿರುದುಗಳು :– ಹಾನಗಲ್ ಕದಂಬರ ವೀರಕಾವದೇವನ 13ನೇ ಶತಮಾನದ ನಾಗನೂರ ಶಾಸನ ಸವೆದಿದೆ. ಈತನ ಬಿರುದುಗಳು ಪ್ರಧಾನ ಗೋಕರ್ಣ ಮಂಡಲಪುರವರಾಧೀಶ್ವರ, ಮಹಾಬಲವಪ್ರಸಾದಿತ, ಭೂಮಂಡಲ ಗಂಡರದಾವಣ ಕಲಿಗಳಂಮಕುಸ ಮತ್ತು ಕದಂಬಕುಲತಿಲಕ ಎಂಬ ಬಿರುದುಗಳಿದ್ದವು.

ಕದಂಬರು :– ಶಿವಚಿತ್ತವೀರಕಾವದೇವನ ಕ್ರಿ.ಶ. 1234ರ ಮೊಗಟಶಾಸನದಲ್ಲಿ ಶಾಸನ ಸವೆದಿದೆ. ಪ್ರದಾನ ಬಿರುದುಗಳು ಗೋಕರ್ಣ ಮಹಾಬಲೇಶ್ವರದೇವ, ದಿವ್ಯಶ್ರೀ, ಪಾದಪದ್ಮರಾದಕ, ಬನವಾಸಿಪುರವರಾಧೀಶ್ವರ. ಇವನು ಕೂಡ ಪೂಜೆಗಾರ, ಜಯಂತಿಮಧುಕೇಶ್ವರ, ಶಿವಚಿತ್ತ ತ್ರಿಭುವನಮಲ್ಲ, 13ನೇ ಶತಮಾನದ ಕಣಗಿಲ್ ಶಾಸನ. ಶಾಸನ ಸವೆದಿದೆ. ತ್ರಿಭುವನಮಲ್ಲನ ಬಿರುದು ಬನವಾಸಿಪುರವರಾಧೀಶ್ವರ, ಸಪ್ತಕೋಟೇಶ್ವರ ದೇವರ ಆರಾಧಕ. ಬಸವದೇವರಸನ 13ನೇ ಶತಮಾನದ ಅಂಕೋಲ ಶಾಸನ ಒಡೆದಿದೆ. ಹೈವೆ–500 ಮತ್ತು ಬೇರೆ ಭಾಗಗಳು ಪ್ರಧಾನ ಗೋಕರ್ಣ, ಮಹಾಬಲೇಶ್ವರ ಆರಾಧಕ ಮತ್ತು ಜಯಂತಿಮಧುಕೇಶ್ವರ, ಲಬ್ಧವರ ಪ್ರಸಾದ, ಹೊನ್ನಾವರದ ಬಗ್ಗೆ ತಿಳಿಸುತ್ತದೆ. ಕಾವದೇವನ ಬಗ್ಗೆ ಸೂಚಿಸುತ್ತದೆ.

ಕೊನೆಯದಾಗಿ ಈ ಜಿಲ್ಲೆಯ ಇತಿಹಾಸವೆಂದರೆ ಆ ಜನತೆಯ ಇತಿಹಾಸ, ಜನತೆ ಬದುಕಿರ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅದರಲ್ಲಿಯೂ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನವೆಂದೂ ಕರೆಯಬಹುದು. ಈ ಜಿಲ್ಲೆಯ ಇತಿಹಾಸದಲ್ಲಿ ಚುಟು, ಶಾತವಾಹನ, ಕದಂಬ, ಪಲ್ಲವ, ಕಲ್ಯಾಣಚಾಳುಕ್ಯ, ಹೊಯ್ಸಳ, ಗೋವೆಕದಂಬ, ಹಾನಗಲ್‌ಕದಂಬ, ಕದಂಬಚಾಂದವರ, ಆಳುಪ, ವಿಜಯನಗರ ಸಾಳುವಗೆರುಸೊಪ್ಪ, ಸಾಳುವಹಡವಳ್ಳಿ, ಬೀಳಗಿ ಪ್ರಧಾನರು, ಕೆಳದಿ ಇತ್ಯಾದಿ ಮನೆತನಗಳ ಶಾಸನಗಳನ್ನು ಅಧ್ಯಯನ ಮಾಡಿರುವುದನ್ನು ಗಮನಿಸಬಹುದು.

ಗ್ರಂಥಋಣ

1. ಎ.ಆರ್.ಐ.ಇ ರಿಪೋರ್ಟುಗಳು 1929–30, 1935–36, 1939–40, 1942–43, 1945–46, 1957–58, 1965–66, 1970–71, 1977–78, 1980–81, 1981–82, 1996–97
2. ಕೆ.ಆರ್.ಐ. ಸಂಪುಟಗಳು 1, 2,3, 5, 6
3. ಎಫ್. ಇಂಡಿಕ ಸಂ. 34
4. Kadamba Kula – By mores
5. Early Kadamba – By Dr. G.S.Gai
6. Kadamba Inscriptions vol. I – By Dr. B.R. Gopal

❑

ಸೋಂದಾದ ಶ್ರೀವ್ಯಾಸರಾಜ ಮಠ ಹಾಗೂ ಸೋದೆ ನಾಯಕರು

– ಶ್ರೀ ಗೋಪಾಲಕೃಷ್ಣ ಆನವಟ್ಟಿ ಶಿರಸಿ

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನಲ್ಲಿರುವ ಹುಲೇಕಲ್ ಹೋಬಳಿ ಮಠದೇವಳ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಸೋದೆ ಇಂದು ಸಣ್ಣ ಗ್ರಾಮ. ಶಿರಸಿಯಿಂದ ಸುಮಾರು 22 ಕಿ.ಮೀ ದೂರದಲ್ಲಿದ್ದು ಪ್ರಖ್ಯಾತವಾದ ವಾದಿರಾಜಮಠ, ಸ್ವರ್ಣವಲ್ಲಿಮಠ ಹಾಗೂ ಜೈನಮಠಗಳನ್ನು ತನ್ನ ಮಡಿಲಲ್ಲಿಟ್ಟುಕೊಂಡು ರಾಜ್ಯದಾದ್ಯಂತದಿಂದ ಭಕ್ತರನ್ನು ಆಕರ್ಷಿಸುತ್ತಿದೆ.

ಇದೇ ಸೋದೆ ಅಥವಾ ಸ್ವಾದಿ ಗ್ರಾಮವೇ 18 ಶತಮಾನದ ಕೊನೆ ಘಟ್ಟದವರೆವಿಗೂ ಸ್ವಾದಿ ಅರಸು ಮನೆತನದ ರಾಜಧಾನಿಯಾಗಿ ಸುಮಾರು ಲಕ್ಷ ಮೀರಿದ ಜನಸಂಖ್ಯೆ ಇರುವ ಪಟ್ಟಣವಾಗಿ, ದೊಡ್ಡ ವ್ಯಾಪಾರದ ಕೇಂದ್ರವಾಗಿ ಮೆರೆದಿತ್ತು ಎಂದರೆ ಇಂದು ನಂಬುವುದೇ ಕಷ್ಟ.

ಸೋಮದಾಪುರ, ಸೋವದೆ, ಸೋಂದಾ, ಸ್ವಾದಿ ಇತ್ಯಾದಿ ಹೆಸರುಗಳಿಂದ ಕರೆದು ಬರುತ್ತಿರುವ ಈ ಸ್ಥಳಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸೋದೆಯನ್ನು ಆಳ್ವಿಕೆ ನಡೆಸಿದ ಅರಸು ಮನೆತನದವರು ಕೆಲಕಾಲ ಪಾಳೇಗಾರರಾಗಿ, ಸಾಮಂತರಾಗಿ, ಒಂದಷ್ಟು ಕಾಲ ಸ್ವತಂತ್ರ ಅರಸರಾಗಿ ಹೀಗೆ ಕಾಲಘಟ್ಟದ ಪರಿಸ್ತಿತಿಗೆ ಅನುಗುಣವಾಗಿ ಈ ಪ್ರದೇಶವನ್ನು ಆಳಿದ್ದಾರೆ. ಸೋದೆ ಅರಸರು ಎಲ್ಲಾ ಧರ್ಮೀಯರನ್ನು ಗೌರವಿಸುತ್ತಿದ್ದುದರಿಂದ ಅವರ ಕಾಲಕಿರ್ದಿಯಲ್ಲಿ ಜೈನ, ಶೈವ, ಶಾಕ್ತ, ವೈಷ್ಣವ, ಸ್ಮಾರ್ತ, ವೀರಶೈವ ಹೀಗೆ ಎಲ್ಲಾ ಮತ-ಪಂಥಗಳ ಮಠಗಳು ಆಶ್ರಯ ಪಡೆದು ಬೆಳಗಿದ್ದು ಇತಿಹಾಸದ ಅಧ್ಯಯನದಿಂದ ಕಂಡುಬರುತ್ತದೆ.

ಇದೇ ಸೋದೆ ಅರಸರ ಕಾಲಾವಧಿಯಲ್ಲಿ ಸೋದೆಯಲ್ಲಿ ಸ್ಥಾಪನೆಗೊಂಡಿದ್ದ ಆದರೆ ಇಂದು ಮರೆತುಹೋಗಿರುವ ಮಾಧ್ವ ವೈಷ್ಣವ ಪರಂಪರೆಯ ಶ್ರೀ ವ್ಯಾಸರಾಜಮಠ ಸೋದೆಅರಸರೊಂದಿಗೆ ಹೊಂದಿದ್ದ ನಿಕಟ ಸಂಬಂಧ ಕುರಿತು ಬೆಳಕು ಚೆಲ್ಲುವ ಪ್ರಬಂಧ ಇದಾಗಿದೆ.

ಉಡುಪಿಯ ಶ್ರೀ ಮಧ್ವಾಚಾರ್ಯ ಪರಂಪರೆಯಲ್ಲಿ ಬಂದ ಉತ್ತರಾದಿಮಠ ಟಿಸಿಲೊಡೆದು ಸ್ವತಂತ್ರ ಮಠವಾಗಿ ಮೂಡಿಬಂದಿದ್ದು ರಾಜೇಂದ್ರತೀರ್ಥ ಮಠ. ಈ ಮಠ ಪರಂಪರೆಯಲ್ಲಿ 11ನೇಯವರಾಗಿ ರಾಜೇಂದ್ರತೀರ್ಥರ ನಂತರದ ಸಂಖ್ಯೆಯಲ್ಲಿ ನಾಲ್ಕನಯೆವರಾಗಿ ಪೀಠವೇರಿದ ಗುರುಗಳೆಂದರೆ ಶ್ರೀ ಬ್ರಹ್ಮಣ್ಯ ತೀರ್ಥರು. ಚೆನ್ನಪಟ್ಟಣದಿಂದ ಸುಮಾರು 15 ಕಿ.ಮೀ. ದೂರದ ಅಬ್ಬೂರು ಎಂಬಲ್ಲಿ ಶ್ರೀ ಬ್ರಹ್ಮಣ್ಯ ತೀರ್ಥರ ಮೂಲ ವೃಂದಾವನವಿದೆ. 1454 ರಲ್ಲಿ ಬ್ರಹ್ಮಣ್ಯತೀರ್ಥರ ಶಿಷ್ಯರಾಗಿ ಸಂನ್ಯಾಸದೀಕ್ಷೆ ಸ್ವೀಕರಿಸಿದ ಶ್ರೀ ವ್ಯಾಸರಾಜರು 1539 ರ ವರೆಗೆ ಈ ಪೀಠದ ಪೀಠಾಧಿಪತಿಗಳಾಗಿದ್ದು ಅನನ್ಯವಾದ ಸೇವೆ ಸಲ್ಲಿಸಿ ಪ್ರಖ್ಯಾತರಾದರು. ವಿಜಯನಗರದ ಐದು ಜನ ಅರಸರುಗಳಿಗೆ ರಾಜಗುರುಗಳಾಗಿ ಮಾರ್ಗದರ್ಶನ ಮಾಡಿದ್ದ ವ್ಯಾಸರಾಜರು ಕಾಲಘಟ್ಟವೊಂದರಲ್ಲಿ ವಿಜಯನಗರದ ಸಿಂಹಾಸನವನ್ನೇರಿದ್ದು ಇದೆ. ಶ್ರೀ ವ್ಯಾಸರಾಜರು ಪಡೆದ ಪ್ರಖ್ಯಾತಿಯಿಂದಾಗಿ ಈ ಮಠವನ್ನು ಶ್ರೀ ವ್ಯಾಸರಾಜಮಠ ಎಂದೇ ಕರೆಯಲಾಗುತ್ತಿದೆ.

ರಾಜಗುರುಗಳಾಗಿದ್ದ ಶ್ರೀ ವ್ಯಾಸರಾಜರು ಹಾಗೂ ಅವರ ಪರಿವಾರಕ್ಕೆ ಉಡುಪಿಗೆ ಹೋಗುವ ಮಾರ್ಗ ಮಧ್ಯದ ವಿಶ್ರಾಂತಿಗಾಗಿ ಸೋದೆಯಲ್ಲಿ ತಂಗುದಾಣವಾಗಿ ನಿರ್ಮಾಣವಾಗಿದ್ದೆ ಶ್ರೀ ವ್ಯಾಸರಾಜಮಠ ಇಲ್ಲಿ ಸ್ಥಾಪನೆಗೊಳ್ಳಲು ಕಾರಣ. ಶ್ರೀ ವ್ಯಾಸರಾಜರ ರಾಜಕೀಯ ಪ್ರಭಾವ ಹಾಗೂ ತಪೋಬಲ ಎರಡನ್ನು ಅರಿತಿದ್ದ ಸೋದೆಯ ಅರಸರು ಶ್ರೀ ವ್ಯಾಸರಾಜರ ಆಗಮನದ ಸಂದರ್ಭವನ್ನು ತಮ್ಮ ಸಂಸ್ಥಾನದ ಏಳಿಗೆಗಾಗಿಯೂ ಬಳಸಿಕೊಂಡಿದ್ದಾರೆ. ಶ್ರೀ ವ್ಯಾಸರಾಜರ ಅಣತಿಯಂತೆ ಹುಲೇಕಲ್‌ನಲ್ಲಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ ನಿರ್ಮಿಸಿ, ಶ್ರೀ ಲಕ್ಷ್ಮೀ ನಾರಾಯಣನನ್ನೇ ಮನೆಯ ಆರಾಧ್ಯ ದೈವವಾಗಿ ಸ್ವೀಕರಿಸಿ, ದೇವಸ್ಥಾನವನ್ನು ಅರಮನೆಯಿಂದಲೇ ನೂರಾರು ವರ್ಷ ನಿರ್ವಹಣೆ ಮಾಡಿರುವುದು ಶ್ರೀ ವ್ಯಾಸರಾಜರು ಸೋಂದಾ ಸಂಸ್ಥಾನದ ಮೇಲೆ ಬೀರಿದ ಪ್ರಭಾವವನ್ನು ಸೂಚಿಸುತ್ತದೆ.

ಶ್ರೀ ವ್ಯಾಸರಾಜರ ಕಾಲಮಾನ 1447 ರಿಂದ 1539 ಆಗಿದೆ. 1454 ರಲ್ಲಿಯೇ ಬ್ರಹ್ಮಣ್ಯತೀರ್ಥರಿಂದ ಬಾಲ ಸಂನ್ಯಾಸ ಸ್ವೀಕರಿಸಿದ ಶ್ರೀ ವ್ಯಾಸರಾಜರು ಬ್ರಹ್ಮಣ್ಯತೀರ್ಥರ ನಂತರ 1467 ರಲ್ಲಿ ಮಠದ ಪೀಠಾಧಿಪತಿಗಳಾದರು. 1486 ರಿಂದ 12 ವರ್ಷಗಳ ಕಾಲ ತಿರುಪತಿಯ ಅಧಿಪತ್ಯ ವಹಿಸಿಕೊಂಡಿದ್ದು 1501 ರಲ್ಲಿ ಅವರು ವಿಜಯನಗರಕ್ಕೆ ಆಗಮಿಸಿದರು ಎಂಬ ಅಂಶಗಳನ್ನು ಗಮನಿಸಿದಾಗ 1500 ರ ನಂತರವೇ ಸೋದೆಯಲ್ಲಿ ಶ್ರೀ ವ್ಯಾಸರಾಜ ಮಠ ಸ್ಥಾಪನೆಯಾಗಿದೆ ಎಂದು ತರ್ಕಿಸಬಹುದು. 1532–33 ರಲ್ಲಿ ಶ್ರೀ ವ್ಯಾಸರಾಜರು (ತಮ್ಮ 85ನೇ ವಯಸ್ಸಿನಲ್ಲಿ) ಕಟ್ಟಕಡೆಯ ಉಡುಪಿ ಯಾತ್ರೆ ಕೈಗೊಂಡ ದಾಖಲೆ ಶ್ರೀ ಮಠದಲ್ಲಿ ಉಲ್ಲೇಖವಾಗಿದೆ. ಈ ವಿಷಯವನ್ನು ಇಂದಿಗೂ ಮಠದ ಪಂಚಾಂಗದಲ್ಲಿ ಉಲ್ಲೇಖಿಸಲಾಗುತ್ತಿದೆ.

ಶ್ರೀ ವ್ಯಾಸರಾಜರು 1539 ರಲ್ಲಿ ಆನೆಗುಂದಿಯಲ್ಲಿ ಬೃಂದಾವನಸ್ಥರಾದ ನಂತರ ಶ್ರೀನಿವಾಸತೀರ್ಥರು, ಇವರ ನಂತರ ಶ್ರೀ ರಾಮತೀರ್ಥರು ಮಠದ ಪೀಠಾಧಿಕಾರಕ್ಕೆ ಬಂದಿದ್ದು ಈ ಕಾಲಮಾನದಲ್ಲಿ (1539 ರಿಂದ 1584) ಮಠ ಎರಡು ಟಿಸಲಾಗಿ ಸೋಸಲೆ ವ್ಯಾಸರಾಯ ಮಠ ಹಾಗೂ ಕುಂದಾಪುರ ಶ್ರೀ ವ್ಯಾಸರಾಜಮಠ ಎಂದು ಎರಡು ಪ್ರತ್ಯೇಕ ಮಠಗಳಾಗಿವೆ. ಇವುಗಳಲ್ಲಿ ಯಾವುದು ನೇರ ಪರಂಪರೆಯ ಮಠ ಎಂಬುದನ್ನು ನಿರ್ಣಯಿಸಲು (ಈ ಕುರಿತು ಶ್ರೀ ಲಕ್ಷ್ಮೀ ಮನೋಜ್ಞತೀರ್ಥರ ಕಾದಲ್ಲಿ ದಾಖಲಾಗಿದೆ). ವ್ಯಾಜ್ಯವನ್ನು ಅವಲೋಕಿಸಿದ ರಾಜ್ಯ ಉಚ್ಚ ನ್ಯಾಯಾಲಯಕ್ಕೂ ಸಾಧ್ಯವಾಗಿಲ್ಲ.

ಶ್ರೀ ರಾಮತೀರ್ಥರ ಕಾಲಮಾನ ಸರಿಸುಮಾರು 1564–1584 ಎಂದು ಮಠದ ದಾಖಲೆಗಳು ಹೇಳುತ್ತವೆ. ಅದೇ ರೀತಿ ಶ್ರೀಧರ ತೀರ್ಥರು ಕ್ರಿ.ಶ.1583 ರಲ್ಲಿ ಬೃಂದಾವನಸ್ಥರಾದರೆಂದು ಮಠದ ಉಲ್ಲೇಖವಿದೆ. ಈ ಕಾಲಮಾನದ ತಾಳೆಯಲ್ಲಿ ಶ್ರೀರಾಮತೀರ್ಥರು ಹಾಗೂ ಶ್ರೀಧರತೀರ್ಥರು ಸಮಕಾಲೀನರಾಗಿದ್ದರು ಎನ್ನಬಹುದು.

ಸೋದೆಗೆ ಬಂದ ವ್ಯಾಸರಾಜ ಮಠ

1565 ರ ತಾಳಿಕೋಟೆ ಯುದ್ಧದಲ್ಲಿ ವಿಜನಗರ ಪತನವಾದ ನಂತರ ವಿಜಯನಗರ ಸಾಮ್ರಾಜ್ಯದಲ್ಲಿ ಆಶ್ರಯ ಪಡೆದಿದ್ದ ಪಂಡಿತರು, ಮಠಮಾನ್ಯಗಳು ಚದುರಿ ಹೋದವು. ಈ ಕಾಲಘಟ್ಟದದಲ್ಲಿಯೇ ಬಹುಶಃ ಶ್ರೀ ವ್ಯಾಸರಾಜಮಠ ಸೋದೆಯಲ್ಲಿ ಪ್ರವಾಸ ಮಧ್ಯದ ತಂಗುದಾಣವಾಗಿ ಈ ಮೊದಲೆ ಸ್ಥಾಪಿತವಾಗಿದ್ದ ಶ್ರೀ ವ್ಯಾಸರಾಜಮಠಕ್ಕೆ ಸೋದೆ ಅರಸರ ಆಮಂತ್ರಣದ ಮೇರೆಗೆ ವರ್ಗಾವಣೆಗೊಂಡಿರುವ ಸಾಧ್ಯತೆ ಇದೆ.

ಶ್ರೀಧರತೀರ್ಥರು 1583 ರಲ್ಲಿ ಇಂದು ಹಳೇ ಸೋದೆ ಎಂದು ಕರೆಯುವ ಮಠದೇವಳ ಗ್ರಾಮದಲ್ಲಿಯೇ ಬೃಂದಾವನ ಪ್ರವೇಶ ಮಾಡಿರುವುದು ಮಠದ ದಾಖಲೆಯಿಂದ ತಿಳಿಯುತ್ತದೆ. ವಿಕೃತಿ ನಾಮ ಸಂವತ್ಸರ, ಕಾರ್ತಿಕ ಶುದ್ಧ 12ನೇ ದಿನ ಶಾಲಿವಾಹನಶಕ ವರ್ಷ 1513 ರಲ್ಲಿ ಶ್ರೀಧರ ತೀರ್ಥರ ಕರಕಮಲ ಸಂಜಾತರಾದ ಶ್ರೀ ಶ್ರೀ ರಘುಪತಿ ತೀರ್ಥರಿಗೆ ಸೋದೆಯ ಹಿರೇ ಅರಸಪ್ಪ ನಾಯ್ಕ ಬರೆದುಕೊಟ್ಟಿರುವ ಭೂದಾನಶಾಸನದ ತಾಮ್ರ ಪತ್ರದ ದಾಖಲೆ ಇದೆ.

ಹಿರೇ ಅರಸಪ್ಪನ ಶಾಸನ

ನಮಸ್ತುಂಗ, ಶಿರಸ್ತುಂಗ (ಜ್ಚುಂಬಿ) ಚಂದ್ರಚಾಮರ ಚಾರವೇ । ತ್ರೈಲೋಕ್ಯ ನಗರಾರಂ ಭೇಮೂಲ ಸ್ಥಂಖಾಯ ಶಂಭವೇ ॥

ಹರೇರ್ಲೀಲಾವರಾಹಿಸ್ಯ ದೌಷ್ಟ್ರದಂಡ ಸಪಾತುವಃ
ಹೇಮಾದ್ರಿ ಕಲಶಾಯತ್ರ ಧಾತ್ರಿ ಛತ್ರ ಶ್ರೀಯಂದದೌ.

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ 1513 (ಕ್ರಿ. ಶ. 1591) ನೇಯ ವಿಕೃತಿ ನಾಮ ಸಂವತ್ಸರದ ಕಾರ್ತೀಕ ಶುದ್ಧ ಉತ್ಥಾನದ್ವಾದಶಿಯ ಶುಭ ದಿನದಲ್ಲೂ ಶ್ರೀಮದ್ ರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೆಂಕಟಪತಿ ದೇವಮಹಾರಾಯರು ಸಮಸ್ತ ರಾಜ್ಯವನ್ನು ಧರ್ಮದಲ್ಲಿ ಪರಿಪಾಲಿಸುವ ಸಮಯದಲ್ಲಿ ಶ್ರೀಮತ್ ಪರಮಹಂಸ ಪರಿವ್ರಾಜಕಾಚಾರ್ಯ ಶ್ರೀ ಶ್ರೀನಿವಾಸ ತೀರ್ಥರ ಕರಕಮಲ ಸಂಜಾತರಾದ ಶ್ರೀಧರ ತೀರ್ಥರ ಕುಮಾರಕರಾದ ಶ್ರೀ ರಘುಪತಿ ತೀರ್ಥ ಶ್ರೀಪಾದಂಗಳವರಿಗೆ ಸೋಂದೆಯ ಮಹಾಪ್ರಭು ಕೌಶಿಕಗೋತ್ರ ಆಪಸ್ತಂಭ ಸೂತ್ರದ ಹಿರೇ ಅರಸಪ್ಪನಾಯಕರು, ಅವರ ಹಿರಿಯ ಅತ್ತಿಗೆ ಗಿರಿಯಮ್ಮ ಹಾಗೂ ಮಗ ಇಮ್ಮಡಿ ಅರಸಪ್ಪ ನಾಯಕರು ಬರೆದುಕೊಟ್ಟ ದಾನಪತ್ರದ ಕ್ರಮವೆಂತೆಂದರೆ :–

ಬನವಾಸಿ ವಂಶಿ ದಾಸನ ತೆಯೊಳಗಣಗುತ್ತಿಯ 18 ಕಂಪಣದೊಳಗಿರುವ ಸೋದೆ ಸೀಮೆಯಲ್ಲಿನ ಕೆಂಪು ಮಣ್ಣಿನಿಂದ ಕೂಡಿದ ಸಿಂಗನಹಳ್ಳಿ ಗ್ರಾಮ ಕಾನಗೋಡು ಗ್ರಾಮ, ತೋಟದ ಮನೆ ಗ್ರಾಮ ಹೀಗೆ ಒಟ್ಟು ಮೂರು ಗ್ರಾಮಗಳನ್ನು ಶ್ರೀನಿವಾಸತೀರ್ಥ ಶ್ರೀಪಾದಂಗಳ ಕರಕಮಲ ಸಂಜಾತರಾದ ಶ್ರೀ ಶ್ರೀಧರತೀರ್ಥ ಕುಮಾರರಾದ ಶ್ರೀ ರಘುಪತಿ ತೀರ್ಥರಿಗೆ ದಾನವಾಗಿ ಧಾರೆ ಎರೆದುಕೊಡಲಾಗಿದೆ.

ಸೋದೆಯನ್ನಾಳುವ ಮಹಾಪ್ರಭು ಅರಸಪ್ಪ ಒಡೆಯರು ಮತ್ತವರ ಹಿರಿಯ ಅತ್ತಿಗೆ ಗಿರಿಯಮ್ಮ ಮತ್ತು ಅವರ ಪಾರಂಪರಿಕ ವಂಶಸ್ಥರಿಗೆ ಪುಣ್ಯ ಸಂಪಾದನೆಯಾಗಲೆಂದು ಉತ್ಥಾನದ್ವಾದಶಿಯ ಶುಭದಂದು ದಾನ ಕೊಡಲಾಗಿದ್ದು ಗ್ರಾಮಗಳ ಶಪಿ ವಿವರ ಇಂತಿದೆ.

ಸಿಂಗನಹಳ್ಳಿ ಗ್ರಾಮದ ಗಡಿ :

ಪೂರ್ವಕ್ಕೆ : ಗುಂಡೀಮನೆ ನಿರಾರಂಭ ಪಾದಧಾರಿ ಹತ್ತಿರದ ವಾಮನ ಮುದ್ರೆ ಕಲ್ಲೇಗಡಿ .

ದಕ್ಷಿಣಕ್ಕೆ : ಸಿದ್ದನಗದ್ದೆ ನೀರಯ್ಯನ ಕಲ್ಲೇಗಡಿ

ಪಶ್ಚಿಮ : ನದವಾಹನಬ್ಧಿಯ ಹಳ್ಳದ ತಂಡಲೇಗಡಿ

ಉತ್ತರ : ಹರಲೇಗದ್ದೆಲಿಂಗದ ತೋಟವೇ ಗಡಿ .

ಎರಡನೇ ಗ್ರಾಮದಗಡಿ ಕೆಳಗಿನಂತಿದೆ :

ಪೂರ್ವ : ಬತ್ತಲ ಹೆದ್ದಾರಿಯ ನಿರಹಂಕಲೇಗಡಿ

ದಕ್ಷಿಣ : ನೆಗಸ್ಸಾಹಂಬೆ ನೀರಹಂಕಲೆಗಡಿ

ಉತ್ತರ : ಕಾನಗಿರಿ ಹೆದ್ದಾರಿ ಬಳಿಯ ವಾಮನ ಮುದ್ರೆಕಲ್ಲೇ ಗಡಿ .

ಕಾನಗೋಡು ಗ್ರಾಮವು ಒಳಗಣ ನೆತ್ತಿ ನೀರು ಹಂಕಲು ಗಡಿಯ ಸರಹದ್ದು ಹೊಂದಿದೆ.

ಈ ಮೂರು ಗ್ರಾಮಗಳನ್ನು ಇವುಗಳ ಚತುರ್ಗಧಿ ಒಳಗಿನ ಗದ್ದೆ ಬಿದರಮಕ್ಕಿ ಹೆಕ್ಕಲು ಕುರುವು ಕಾನು ಬಂಡಾರಂಭ, ನೀರಾರಂಭ, ನೀರಾವರಿ ನಿಧಿ, ನಿಕ್ಷೇಪ ಜಲಪಾಷಣ, ಅಕ್ಷಿಣೆ ಆಗಮಾಗಿದಿಅಷ್ಟ ಭೋಗಗಳ ಸಹಿತ ನೀವೇ ನಿಮ್ಮ ಶಿಷ್ಯ ಪಾರಂಪರೆಯ ಅನುಭವಿಸಿಕೊಂಡು ಬಹುದು.

(ಈ ಶಾಸನ ಮೈಸೂರು ಸರ್ಕಾರವಿದ್ದಾಗ ಕುಂದಾಪುರ ಶ್ರೀ ವ್ಯಾಸರಾಜಮಠ ಹಾಗೂ ಸೋಸಲೇ ಶ್ರೀ ವ್ಯಾಸರಾಜ ಮಠದ ಮಧ್ಯೆ ಎದ್ದ ತಗಾದೆ ಕುರಿತು ಹೈಕೋರ್ಟನಲ್ಲಿ ದಾಕಲಾದ ವ್ಯಾಜ್ಯದಲ್ಲಿ ಹಾಜರು ಪಡಿಸಲಾಗಿದ್ದು ಇದೊಂದು ಮಹತ್ವದ ಮಾಹಿತಿ ನೀಡುತ್ತದೆ. ಇದು ಎಪಿ ಗ್ರಾಫಿಕಾ ಕರ್ನಾಟಕದಲ್ಲಿ ದಾಖಲಾದಂತೆ ಕಾಣುತ್ತಿಲ್ಲ)

ಈ ಭೂದಾನ ಶಾಸನದಲ್ಲಿ ಹೀರೇ ಅರಸಪ್ಪ ನಾಯಕನ ಹೆಸರು ಉಲ್ಲೇಖವಾಗಿದೆಯಲ್ಲದೆ ಇಮ್ಮಡಿ ಅರಸಪ್ಪ ನಾಯಕ ಈತನ ಮಗ ಎಂಬುದನ್ನು ಖಚಿತವಾಗಿ ಹೇಳಲಾಗಿದೆ. ಹೀರೇ ಅರಸಪ್ಪ ನಾಯಕ ಮಗ ಇಮ್ಮಡಿ ಅರಸಪ್ಪ ನಾಯಕ ಹಾಗೂ ಹಿರೇ ಅರಸಪ್ಪ ನಾಯಕನ ನಾದಿನಿ (ಅತ್ತಿಗೆ) ಗಿರಿಯಮ್ಮ ಅವರುಗಳು ಸೇರಿ ಈ ದಾನಪತ್ರ ನೀಡಿದ್ದಾರೆ. ದಾನಪತ್ರದ ಕಾಲಮಾನ ಕ್ರಿ.ಶ. 1591 ಆಗಿದ್ದು ಈ ಕಾಲಘಟ್ಟದಲ್ಲಿ ಶ್ರೀಧರ ತೀರ್ಥರು ವೃಂದಾವನಸ್ಥರಾಗಿದ್ದು ಅವರ ಶಿಷ್ಯ ಶ್ರೀ ರಘುಪತಿ ತೀರ್ಥರು ಪೀಠವೇರಿದ್ದರು. ಶ್ರೀಧರ ತೀರ್ಥರನ್ನು ಶ್ರೀನಿವಾಸ ತೀರ್ಥರ ಕರಕಮಲ ಸಂಜಾತ ಎಂದು ಈ ಶಾಸನದಲ್ಲಿ ಹೇಳಿರುವುದರಿಂದ ಶ್ರೀಧರತೀರ್ಥರು ಶ್ರೀನಿವಾಸ ತೀರ್ಥರಿಂದಲೇ ಸಂನ್ಯಾಸ ದೀಕ್ಷೆ ಪಡೆದರೇ ಹೇಗೆ ಎಂಬ ಪ್ರಶ್ನೆಯು ಉದ್ಭವಿಸುತ್ತದೆ.

ಶ್ರೀಧರ ತೀರ್ಥರ ಆಗಮನದೊಂದಿಗೆ ಸೋದೆಯಲ್ಲಿ ನೆಲೆಕಂಡ ಶ್ರೀ ವ್ಯಾಸರಾಜಮಠವನ್ನು ಕುಂದಾಪುರ ಶ್ರೀ ವ್ಯಾಸರಾಜ ಮಠ ಅಂತ ಕೆಲವೆಡೆ ಮತ್ತೆ ಕೆಲವೆಡೆ ಶ್ರೀಧರತೀರ್ಥರ ಮಠ ಎಂದೂ ದಾಖಲೆಯಲ್ಲಿ ಉಲ್ಲೇಖಿಸಿರುವುದು ಕಂಡು ಬಂದಿದೆ. ಈಗ ಪ್ರಖ್ಯಾತವಾಗಿರುವ ಶ್ರೀ ವಾದಿರಾಜ ಮಠದ ಪೀಠಾಧೀಶರಾದ ಶ್ರೀ ವಾದಿರಾಜರು ಸೋದೆಗೆ ಆಗಮಿಸಿದ್ದು ಕ್ರಿ.ಶ.1580 ರಲ್ಲಿ, ಅಂದರೆ ಶ್ರೀಧರತೀರ್ಥರು ವೃಂದಾವನಸ್ಥರಾಗುವ 3 ವರ್ಷ ಮೊದಲು ಎಂಬುದು ಉಲ್ಲೇಖಾರ್ಹವಾದುದಾಗಿದೆ. ಕ್ರಿ.ಶ. 1594 ಕಾಲಮಾನದ ಮತ್ತೊಂದು ತಾಮ್ರಪತ್ರದಲ್ಲಿ ಹಿರೇ ಅರಸಪ್ಪ ನಾಯ್ಕರೇ ಭೂದಾನ ನೀಡಿದ ವಿವರವಿದೆ ಆದರೆ ಇದರಲ್ಲಿ ದಾನಪಡೆದ ಗುರುಗಳ ಹೆಸರಲ್ಲಿ ಬದಲು ಶ್ರೀ ವ್ಯಾಸತೀರ್ಥ ಶ್ರೀಪಾದಂಗಳು ಆರಾಧಿಸುತ್ತಿದ್ದ ಶ್ರೀವೇಣುಗೋಪಾಲ ಕೃಷ್ಣ ದೇವರಿಗೆ ಹಾಗೂ ಹುಲೇಕಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ದೇವರಿಗೆ ಎಂದು ಉಲ್ಲೇಖಿಸಲಾಗಿದೆ. ಅಂದರೆ 1594 ರ ಒಳಗಾಗಿಯೇ ಹುಲೇಕಲ್ ಶ್ರೀಲಕ್ಷ್ಮೀನಾರಾಯಣ ದೇವಸ್ಥಾನ ನಿರ್ಮಾಣವಾಗಿತ್ತು ಎಂಬುದು ದೃಡಪಡುತ್ತದೆ.

ಹಿರೇ ಅರಸಪ್ಪನಾಯಕನ ಎರಡನೇ ತಾಮ್ರ ಶಾಸನ

ಕ್ರಿ.ಶಕ. 1594ರ ಕಾಲಮಾನದ ತಾಮ್ರ ಶಾಸನ ಕುಂದಾಪುರ ಶ್ರೀ ವ್ಯಾಸರಾಜ ಮಠದ ಯತಿಗಳಾದ ಶ್ರೀ ರಘುಪತಿ ತೀರ್ಥರ ಕಾಲದ್ದಾಗಿದ್ದು, ಶಾಸನದ ಪಾಠ ಇಂತಿದೆ.

ಶ್ರೀಮದ್ ವ್ಯಾಸರಾಜರು ವೃಂದಾವನಸ್ಥರಾದ 55 ವರ್ಷಗಳ ನಂತರ ಸೋಂದಾಪುರದ ಅರಸು ಕೊಟ್ಟಿರುವ ಈ ಶಾಸನ ಹುಲೇಕಲ್ ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ ವ್ಯಾಸರಾಯ ಕಾಲದ್ದೆಂಬುದಕ್ಕೆ ಪುರಾವೆ ಒದಗಿಸುತ್ತದೆ.

(ಅಬ್ಬೂರು ಶ್ರೀ ವ್ಯಾಸರಾಯ ಮಠದ ಏಜೆಂಟ್ ಹಾಜರು ಪಡಿಸಿದ 1ನೇ ತಾಮ್ರ ಶಾಸನ ಯಥಾ ಪಾಠ)

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ।
ತ್ರೈಲೋಕ್ಯನಗರಾರಂಭೇ ಮೂಲಸ್ತಂಭಾಯ ಶಂಭುವೇ॥

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ಸಾವಿರದ ಐದುನೂರು ಹದಿನಾರನೇ (1516) ಜಯ ಸಂ। ಮಾಘಶು। 5ರಲ್ಲು

ಶ್ರೀ ಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರ ಪ್ರತಾಪ ವೆಂಕಟಪಪತಿದೇವ ಮಹಾರಾಜರು ಸಮಸ್ತ ರಾಜ್ಯವನ್ನು ಪರಿಪಾಲಿಸುವ ಸಮಯದಲ್ಲಿ ಅವರ ಆಜ್ಞಾಧಾರಕರಾದ ಸೋದೆ ಅರಸಪ್ಪನಾಯಕರು ಸೋದೆ ರಾಜ್ಯವನ್ನು ಸದ್ಧರ್ಮದಿಂದ ಪರಿಪಾಲಿಸುವ ಕಾಲದಲ್ಲೂ, ಶ್ರೀ ಮತ್ಪರಮಹಂಸ ಪರಿವ್ರಾಜಕ ಶ್ರೀ ವ್ಯಾಸತೀರ್ಥ ಶ್ರೀಪದಾಂಗಳವರು ಆರಾಧಿಸುವ

ಶ್ರೀ ವೇಣುಗೋಪಾಲಕೃಷ್ಣ ದೇವರಿಗೆ, ಹುಲೇಕಲ್ಲಿನಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ಮುಂತಾದ ದೇವರಿಗೆ ಅಮೃತಪಡಿ ನಂದಾದಿಪ್ತಿ ರಥೋತ್ಸವ, ಪಂಚಪರ್ವ ಮುಂತಾದ ವಿಭವಂಗಳ ನಡೆಸುವ ನಿಮಿತ್ತವಾಗಿ, ದೇವರ ಸೇವೆಗಳು ಆ ಚಂದ್ರರ್ಕವಾಗಿ ನಡವಪ್ರಕಾರ ತಾವು ತಂಮ ವಿದ್ಯಾಬಲದಿಂದ ಕೂಡಿಸಿದ ಗ್ರಾಮಸೀಮೆಗಳ ಶಿಲಾಶಾಸನಗಳ ಕ್ರಮವೆಂತೆಂದರೆ

ಸೋದೆ ಸೀಮೆಗೆ ಸಲ್ಲುವ ಗ್ರಾಮ ಕೊಪ್ಪದ ಗ್ರಾಮ, ಕೆಸುವಿನ ಮನೆ ಸ್ಥಳ, ಅಮಚಿನಮನೆ ಸ್ಥಳ, ಸಿಂಗನಹಳ್ಳಿ ಗ್ರಾಮ,

ಹರಿ ಮನೆ ಸ್ಥಳ, ಹಾನಗೋಡು ಗ್ರಾಮ, ಉಭಯಸ್ಥಳದ ಗ್ರಾಮ, 10ಕ್ಕೆ ಸ್ತಿಸು ಕೊಟ್ಟ, ಶ್ರವಣೂರು 7054 ದ ಸ್ವಾಸ್ಥೆಯನ್ನು ಸಹಿರಣ್ಯೋದಕ ಧಾರಾಪೂರ್ವಕವಾಗಿ ಶ್ರೀಕೃಷ್ಣ ದೇವರ ಮುಂತಾದ ದೇವರಗಳ ಸೇವೆಗೆ ಬಿಟ್ಟೆವಾಗಿ ಈ ಸ್ವಾಸ್ಥೆಯನ್ನು ನಿಮ್ಮ ಶಿಷ್ಯ ಪಾರಂಪರ್ಯವಾಗಿ ಆಳಿ ಅನುಭವಿಸಿಕೊಂಡು ಏಕಾನುಕೂಲದಿಂದ ದೇವತಾ ಸೇವೆಯನ್ನು ನಡೆಸಿಕೊಂಡು ಬಹುದು ಎಂದು ಬರೆಯಿಸಿಕೊಟ್ಟ ತಾಮ್ರ ಶಾಸನಕ್ಕೆ ಆದ ಸಾಕ್ಷಿಗಳು.

ಆದಿತ್ಯ ಚಂದ್ರವನಿಲೋನಲಶ್ಚದ್ಯಾರ್ಭೂಮಿ
ರಾಪೋಹೃದಯಂ ಯಮಶ್ಚ, ಆಹಶ್ಚ, ರಾತ್ರಿಶ್ಚ
ಉಭೇಚ ಸಂಧ್ಯೆ ಧರ್ಮಶ್ಚ ಜಾನತಿ ನರಸ್ಯವೃತ್ತಾಂ॥

ಶಾಸನದ ಪಾಠವನ್ನು ಅವಲೋಕಿಸಿದಾಗ ಸೋದೆಯನ್ನು ಪರಿಪಾಲಿಸುತ್ತಿದ್ದ ಅರಸಪ್ಪ ನಾಯಕರು ಶಾಲಿವಾಹನ ಶಕ ವರುಷ 1516 (ಕ್ರಿ.ಶ.1594)ರಲ್ಲಿ ಈ ತಾಮ್ರ ಶಾಸನ ಬರೆದು ಕೊಟ್ಟಿದ್ದಿದೆ.

ಶಾಸನದಲ್ಲಿ ಶ್ರೀ ಮತ್ಪರಮಹಂಸ ಪರಿವ್ರಾಜಕಾ ಶ್ರೀ ವ್ಯಾಸ ತೀರ್ಥ ಶ್ರೀಪಾದಂಗಳು ಆರಾಧಿಸುತ್ತಿದ್ದ ಶ್ರೀವೇಣು ಗೋಪಾಲಕೃಷ್ಣ ದೇವರಿಗೆ, ಹುಲೇಕಲ್ಲಿನಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ಮುಂತಾದ ದೇವರಿಗೆ ಅಮೃತಪಡಿ, ನಂದಾದೀಪ, ರಥೋತ್ಸವ, ಪಂಚಪರ್ವಗಳನ್ನು ನಡೆಸುವ ಸಲುವಾಗಿ ಗ್ರಾಮಗಳನ್ನು ದಾನ ನೀಡಿದ ವಿವರವಿದೆ.

ಅಂದರೆ ಶ್ರೀ ವ್ಯಾಸರಾಯರೂ ಸಹ ಹುಲೇಕಲ್ ಶ್ರೀ ಲಕ್ಷ್ಮೀನಾರಾಯಣ ದೇವರನ್ನು ಪೂಜಿಸಿದ್ದರು ಎಂಬುದು ಸ್ಪುಟುವಾಗಿರುವುದರಿಂದ ಈ ದೇವಸ್ಥಾನ ನಿರ್ಮಾಣ ವ್ಯಾಸರಾಯರ ಕಾಲಕ್ಕೇ ಆಗಿತ್ತು ಎಂಬುದು ಧೃಡಪಡುತ್ತದೆ. ಶ್ರೀ ವ್ಯಾಸರಾಜರ ಕಾಲಮಾನ 1447ರಿಂದ 1539 ಆಗಿರುವುದರಿಂದ ಈ ಕಾಲಮಾನದೊಳಗೇ ಅಂದು ಇಲ್ಲಿನ ಪಾಳೆಯಗಾರನಾಗಿದ್ದ ಒಂದನೇ ಅರಸಪ್ಪನ ಕಾಲದಲ್ಲಿ ಈ ದೇವಸ್ಥಾನ ನಿರ್ಮಾಣವಾಗಿರಬೇಕು ಎಂದು ಧೃಡವಾಗುತ್ತದೆ.

ವಿಜಯನಗರ ಸಾಮ್ರಜ್ಯದ ಅರಸುಗಳ ಗುರುಗಳಾಗಿದ್ದ ಶ್ರೀ ವ್ಯಾಸರಾಜರು ಹುಲೇಕಲ್‌ಗೆ ಬಂದು ಈ ದೇವಸ್ಥಾನವನ್ನೇಕೆ ಪ್ರತಿಷ್ಠಾಪಿಸಿದರು ಎಂಬುದಕ್ಕೆ ಹಲವು ತರ್ಕಗಳಿವೆ, ಕಥೆಗಳಿವೆ.

ಸೋಂದೆಯ ಅರಸರು ವಿಜಯನಗರ ದೊರೆಗಳ ಸಾಮಂತರು ಹಾಗೂ ಅವರ ಆಜ್ಞಾ ಧಾರಕರಾಗಿದ್ದರು, ಶ್ರೀ ವ್ಯಾಸರಾಜರು ಹಂಪೆಯಿಂದ ಉಡುಪಿಗೆ ಹೋಗುವ ಮಾರ್ಗದಲ್ಲಿ ವಿಶ್ರಮಿಸುವ ಸ್ಥಳ ಇದಾಗಿತ್ತು. ವಿಜಯನಗರ ಅರಸರ ಆದೇಶದಂತೆ ಸೋಂದೆಯ ಅರಸರು ಗುರುಗಳ ಬಿಡಾರಕ್ಕೆ ಇಲ್ಲಿ ಎಲ್ಲಾ ವ್ಯವಸ್ಥೆ ಮಾಡಿಕೊಟ್ಟು ಘಟ್ಟ ಇಳಿಯುವ ಮುಂದಿನ ಕಠಿಣ ದಾರಿ ಕ್ರಮಣಕ್ಕೆ ಅನುವಾಗುತ್ತಿದ್ದರು.

(ಈ ಶಾಸನದ ಕಾಪಿ ಮೈಸುರು ಆರ್ಕಿಯಾಲಜಿಕಲ್ ಡಿಪಾರ್ಟಮೆಂಟ್‌ನ 1925 ಮಾರ್ಚನ ವಾರ್ಷಿಕ ವರದಿಯ ಪುಟ 4 ರಲ್ಲಿ 8 ನೇ ಶಾಸನ ಸಂಖ್ಯೆಯಾಗಿ ಪ್ರಕಟಗೊಂಡಿದೆ. ಈ ಶಾಸನವನ್ನು ಮಂತ್ರಾಲಯದ ಮಾಧ್ವಮಠಗಳ ಶಾಸನಗಳು ಎಂಬ ಪುಸ್ತಕದಲ್ಲಿಯೂ ಪ್ರಕಟಿಸಲಾಗಿದೆ.)

ಶ್ರೀ ವ್ಯಾಸರಾಜರು, ಶ್ರೀನಿವಾಸತೀರ್ಥರು, ಶ್ರೀರಾಮತೀರ್ಥರು, ಶ್ರೀಧರತೀರ್ಥರು, ಶ್ರೀ ರಘುಪತಿ ತೀರ್ಥರು, ಹಯಗ್ರೀವತೀರ್ಥರು ಹೀಗೆ ಅನುಚಾನವಾಗಿ ಬಂದ ಪರಂಪರೆಯಲ್ಲಿ ಶ್ರೀಧರತೀರ್ಥರ ಕಾಲದಿಂದ ಹಯಗ್ರೀವತೀರ್ಥರ ಕಾಲದವರೆಗೆ ಮಠ ಹಳೇ ಸೋದೆಯಲ್ಲಿಯೇ ಇತ್ತು ಎಂಬುದು ದಾಖಲೆಗಳಿಂದ ಅರಿವಿಗೆ ಬರುತ್ತದೆ. ಆದರೆ ವೀರಶೈವ ಅಧ್ಯಯನ ಸಂಸ್ಥೆ ಪ್ರಕಟಿಸಿದ ಸ್ವಾದಿ ಅರಸು ಮನೆತನ ಪುಸ್ತಕದಲ್ಲಿ ಮಠ ಹುಲೇಕಲ್ಲಿನಲ್ಲೆ ಆರಂಭವಾಯಿತು ಎಂಬಂತೆ ಬರೆಯಲಾಗಿದೆ ಇದು ಸರಿಯಲ್ಲ.

ಹಯಗ್ರೀವ ತೀರ್ಥರ ಕಾಲಮಾನದಲ್ಲಿ ಅಂದಿನ ಸೋದೆ ರಾಜನಾಗಿದ್ದ ಶ್ರೀ ರಾಮಚಂದ್ರ ನಾಯಕರು ಶ್ರೀ ಹಯಗ್ರೀವ ತೀರ್ಥರಿಗೆ ಸೋದೆಯಿಂದ ಅಂದರೆ ರಾಜಧಾನಿ ಸ್ಥಳದಿಂದ 7 ಕಿ.ಮೀ. ದೂರದಲ್ಲಿರುವ ಕೋಟೆಯ ಹೊರಪ್ರದೇಶದ ಪೇಟೆಯ ಮಧ್ಯೆ ನಿರ್ಮಿಸಿದ್ದ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನವನ್ನು ಧಾರೆ ಎರೆದುಕೊಟ್ಟ ಬಗ್ಗೆ ವಿವರ ಶಾಸನವಿದೆ.

ಶ್ರೀ ಶಿರಸಿ ತಾಲೂಕಾ ಹುಲೇಕಲ್ಲು – ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನ ದಾನ ನೀಡಿದ ತಾಮ್ರ ಪತ್ರದ ನಕಲು

ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರಚಾರವೆ ತ್ರೈಲೋಕ್ಯನಗರಾರಂಭೇ ಮೂಲಸ್ತಂಬಾಯ ಶಂಭುವೇ ಹರಿರ್ವಾಸ ವರಾಹಿನೀದಂಷ್ಪ ದಂಡಸಪಾದನಂ॥ ಹೇಮಾದ್ರಿ ಕಲಶೋಂಧೃತ್ವಂ॥ ಧಾತ್ರಿರ್ಧರ್ತಶ್ರಿಯಂದದಾಂ ಸ್ವಸ್ತಿ ಶ್ರೀ ವಿಜಯಾಭ್ಯುದಯ ನೃಪಶಾಲಿವಾಹನ ಶಕ ವರ್ಷ 1527 ನೇಯ ಪರಿವರ್ತಮಾನಕ್ಕೆ ವಿಶ್ವಾವಸು ಸಂವತ್ಸರದ ಮಾಘ ಶುದ್ಧ 5ಯು ಸ್ಥಿರವಾರದಲ್ಲು ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀವ್ಯಾಸತೀರ್ಥ, ಶ್ರೀಪಾದಂಗಳವರ ಕರಕಮಲ ಸಂಜಾತರಾದ ಹಂಯಗ್ರೀವತೀರ್ಥ ಶ್ರೀಪದಾಂಗಳವರಿಗೆ ಶ್ರೀಮನ್ನಾರಾಯಣ ಮಹಾಪ್ರಭು ಸೋದೆ ಅರಸಪ್ಪ ನಾಯಕರ ಕುಮಾರಕರಾದ ರಾಮಚಂದ್ರ ನಾಯಕರು ಕೊಟ್ಟ ಹಾರೇಹುಲೇಕಲ್ ಗ್ರಾಮವೊಂದಕ್ಕೆ ಪ್ರತಿನಾಮಕವಾದ ಲಕ್ಷ್ಮೀನಾರಾಯಣಪುರದಲ್ಲಿ ನಮ್ಮ ಅಯ್ಯನವರು ಕಟ್ಟಿಸಿದ ಲಕ್ಷ್ಮೀ ನಾರಾಯಣ ದೇವಸ್ಥಾನದ ಆಧಿಪತ್ಯವನ್ನು ನಿಮಗೆ ದಾರಾದತ್ತವಾಗಿ ಕೊಟ್ಟೇವಾಗಿ ಲಕ್ಷ್ಮೀ ನಾರಾಯಣ ದೇವರಿಗೆ ಧರ್ಮಕ್ಕೆ ಕೊಟ್ಟ ಗ್ರಾಮ ಹುಲೇಕಲ್ ಗ್ರಾಮವೊಂದಕ್ಕೆ ಶಿಸ್ತಾದಾಯಬಿಡಾರ ಸಹಗ 221 (ಇನ್ನೂರಾ ಇಪ್ಪತ್ತೊಂದು) ಭತ್ತದ ಖಂಡ್ಗ 21 1/2, ಇಟ್ಗುಳಿ ಗ್ರಾಮವೊಂದಕ್ಕೆ ಸಿಸ್ತಾದಾಯ ಬಿಡಾರ ಸಹ 104 02 0 ಅನ್ನು, ಗುಬ್ಬಿಗದ್ದೆ ಗ್ರಾಮ ಭತ್ತದ ಖಂಡಗ 25 ಮೇಲೆ ಬಿರಾಡಂಗ 7 ವರಹ ಶಿಂಗನಹಳ್ಳಿ ಗ್ರಾಮದೊಳಗೆ ಭತ್ತ ಖಂಡ್ಗ 85 ಅಂತೂ ಸಲ್ಲುವ ಸಿಸ್ತಾದಾಯ (ಗ) 332॥ 2। 0 ಭತ್ತದ ಖಂಡ್ಗ 221 ವತ್ಸಂವತ್ಸರದ ಮಾಘ ಶುದ್ಧ ಸ್ಥಿರವಾರದಲ್ಲು ಲಕ್ಷ್ಮೀನಾರಾಯಣ ದೇವರಿಗೆ ನಾಮಧಾರೆಯೆರೆದು ನಾವು ಆಳುವ ರಾಜ್ಯದ ಒಳಗಣ ಸುಂಕದ ಮಾಲಿವೀಸ ಸಹಾ ನಡೆ (1) ಇಷ್ಟು ಸ್ವಸ್ತಿಯನ್ನು ನಿಮ್ಮ ಮುಖಾಂತರದಲ್ಲಿ ನೀವೇ ಅನುಭೋಗ ಮಾಡಿಕೊಂಡು ಲಕ್ಷ್ಮೀನಾರಾಯಣ ದೇವರಿಗೆ ನಡೆಸುವ ಕಟ್ಟಲೆ, ಅಭಿಷೇಕ, ಪಂಚಾಮೃತ ಅಮೃತಪಡಿ, ನಂದಾದೀಪ 5 ಅಮೃತಪಡಿ ದಿನ 10ರ ಅಕ್ಕಿ ಪಡಿ 20 ಬರಿ ಅಕ್ಕಿ ಪಡಿ,

1 ವಡೆ ಕಜ್ಜಾಯಕ್ಕೆ ಅಕ್ಕಿ ಪಡಿ1, ಅಂತೂ ಅಕ್ಕಿ ಪಡಿ 22. ವಡೆ ಕಜ್ಜಾಯಕ್ಕೆ ಉದ್ದು ಶಿದ್ದೆ 2, ಮೂರು ಪಡಿಯನ್ನಕ್ಕೆ ಗೋಧಿ ಪಡಿ 1, 1/2 ಬೆಲ್ಲ, ಲ 2, ಅಪ್ಪಾಂಗೆ ಬೆಲ್ಲ ಲ1/2, ತುಪ್ಪ, 1/2, ಹೆಸರು ಅ 1/2, ನಂದಾದೀಪಕ್ಕೆ ಎಣ್ಣೆ ಲ 2, 1/2 ಅಲಂಕಾರ ದೀಪ ಎಣ್ಣೆ, 1/2 , ಶೆರೂವರೆ ಎಣ್ಣೆ ಲ 1/4, ಪಾಲಕಿ ಸೇವೆ, ಕೈಪಾಂಜಿ ಸೇವೆ ಎಣ್ಣೆ ಲ 12, ವಡೆ ಕಜ್ಜಾಯಕ್ಕೆ ಎಣ್ಣೆ 2/4, ಅಪ್ಪಾಂಗೆ ಲ 1/2, ಬಲಿ ದೀಪಕ್ಕೆ ಎಣ್ಣೆ ಲ 1/2 ಅಂತೂ ದಿನವೊಂದರ ಎಣ್ಣೆ ಲ 5 1/2, ಅಡಿಕೆ ದಿನವೊಂದಕ್ಕೆ 10, ವೀಳ್ಯದೆಲೆ ಸರಯಲೆ 25, ಪಂಚಪರ್ವ, ಧನುರ್ಮಾಸ, ಕಾರ್ತೀಕ ದೀಪಾರಾಧನೆ ಕೆರೆಹಬ್ಬ ಗಂಧ ಪರಿಮಣ ವೈಭೊಗದ ಜತಳ, ಪಶ್ಚಿಮ ಜಾಕರ, ಪೂರ್ವ ಜಾಕರ, ಕಂದಾಚಾರಕ್ಕೆ, ಮಂತ್ರಾ ಪುಷ್ಕರ, ಸಮ್ಮುಖ ನಾರಾಯಣ ಭಟ್ಟರಿಗೆ ಗದ್ಯಾಣ 12, ಜಾಯಮ್ಮನ ಕೃಷ್ಣ ಭಟ್ಟರಿಗೆ ಗ. 12, ಸಮ್ಮುಖ ಗೋಪಾಲ ಭಟ್ಟರಿಗೆ ಗ 12., ವೇದೋತ್ತಮ ಭಟ್ಟರಿಗೆ ಗ. 12, ವೆಂಕಟಾದ್ರಿ ಭಟ್ಟರಿಗೆ, ಕೊಂಡೀ ಭಟ್ಟರಿಗೆ ಗ. 12, ಸೂರೇಪಾ ಕೃಷ್ಣ ಭಟ್ಟರಿಗೆ ಗ. 12 ಅಂತೂ ಜನ 6ಕ್ಕೆ 27 ವರ, ಭಾಗವತ ವೆಂಕಟೇಶಯ್ಯನಿಗೆ ಗ. 18 ಪುರಾಣಿಕ ಅನಂತ ಭಟ್ಟರಿಗೆ ಗ. 12, ಸಹಸ್ರನಾಮ ತಿಮ್ಮಣ್ಣ ಭಟ್ಟರಿಗೆ ಗ 12. ಅರ್ಚಕ ತಿಮ್ಮಣ್ಣ ಭಟ್ಟ ಗ126 ಮಾಲೇರ ಜನ 2ಕ್ಕೆ ಗ. 12 ಪಡಿ ಜಲುವ ಸಂಬಂಧ ಭತ್ತದ ಖಂಡ್ಗ 54. ರಾಜಾಂಗಣದ ದೇವಪ್ಪನಿಗೆ ಗ. 2 ಭತ್ತದ ಖಂಡ್ಗ 12, ಚವರದ ಚನ್ನಪ್ಪನಿಗೆ ಗ 112 ಭತ್ತದ ಖಂಡ್ಗ 12. ವಾದ್ಯದವರಿಗೆ ಕೋಳುನಾಗಶ್ವರ, ಶ್ರುತಿಜನ 4ಕ್ಕೆ ಗ. 40 ಮತ್ತು ಕಂದಾಚಾರದವರಿಗೆ ಗ 183 ಭತ್ತದ ಖಂಡ್ಗ 24, ರಾಮದೇವರಿಗೆ ಭತ್ತದ ಖಂಡ್ಗ 12, ಹನುಮಂತ ದೇವರಿಗೆ ಭತ್ತದ ಖಂಡ್ಗ 12 ಉಭಯ ಭತ್ತದ ಖಂಡ್ಗ 24. ರಥೋತ್ಸವದೊಳಗಿನ ನಡಂತಿ ಸಹ ಕಟ್ಟಲೆಯನ್ನು ಕಾಲ ಕಾಲ ಪ್ರತಿಯಲ್ಲಿ ಸಾಂಗವಾಗಿ ನಡೆಸಿಕೊಂಡು ಬರುಹುದು. ಈ ಸ್ವಸ್ತಿ ಗ್ರಾಮಗಳಿಗೆ ಚತುರ್ಸೀಮೆಯ ಗಡಿಯ ವಿವರ : ಹುಲೇಕಲ್ ಗ್ರಾಮವೊಂದಕ್ಕೆ ಮೂಡಲು ಪಾಂಡವರ ಹೊಳೆ ಆಚೆ ದಿಂಬದಲ್ಲಿರುವ ವಾಮನ ಮುದ್ರೆ ಕಲ್ಲೇ ಗಡಿ. ಪಡವಲು ಅಂಚಕಡಿ ಆಚೆ ದಿಂಬದ ಆಣೆ ಮೇಲಿನ ವಾಮನ ಮುದ್ರೆ ಕಲ್ಲುಗಡಿ. ತೆಂಕಲು ಗಂಟ ಮಕುಮರಿ ದೇವನಹಳ್ಳಿಗೆ ನಡೆಯುವ ಮಾರ್ಗದಲ್ಲಿರುವ ವಾಮನ ಮುದ್ರೆ ಕಲ್ಲೇ ಗಡಿ. ಬಡಗಲು ತಾರಗಲ್ಲು ಚಂದ್ರಗಿರಿ ಗದ್ದೆ ಆಚೆದಿಂಬದ ಆಣೆ ಮೇಲಿರುವ ವಾಮನ ಮುದ್ರೆ ಕಲ್ಲೇ ಗಡಿ. ದ್ವಿತೀಯಗ್ರಾಮ: ಇಟ್ಗುಳಿ ಗ್ರಾಮಕ್ಕೆ ಮೂಡಲು ಆಣೆಯ ಮೇಲೆ ದೇವರಕೊಪ್ಪಕ್ಕೆ ಹೋಗುವ ದಾರಿಯಲ್ಲೂ ಆಣೆಯ ಮೇಲಿರುವ ವಾಮನ ಮುದ್ರೆ ಕಲ್ಲೇ ಗಡಿ. ಪಡವಲು ಮಾಡೇಸರವಿನ ಗದ್ದೆ ಈಚೆ

ದಿಬ್ಬದ ಆಣೆ ಮೇಲಿರುವ ವಾಮನ ಮುದ್ರೆ ಕಲ್ಲೇ ಗಡಿ. ಟೆಂಕಲು ನೀರ್ನಳ್ಳಿ ಈಚೆ ದಿಂಬದ ಬಾವಿಸರವಿನ ನೆತ್ತಿ ದಿಂಬದ ವಾಮನ ಮುದ್ರೆ ಕಲ್ಲೇ ಗಡಿ. ಬಡಗು ಹೊನ್ನೆಭೋಗಿಗದ್ದೆ ಆಚೆದಿಂಬದ ಹೊನ್ನೇಮರದ ಬುಡದಲ್ಲೂ ಇದ್ದ ವಾಮನಮುದ್ರೆ ಕಲ್ಲೇಗಡಿ. ತೃತೀಯ ಗ್ರಾಮ ಗುಬ್ಬಿಗದ್ದೆ ಗ್ರಾಮಕ್ಕೆ ಮೂಡಲು ಗೌಡಗುಳಿಗೆ ಹೋಗುವ ಮಾರ್ಗದ ಅಡಿಕೆಯ ಮೇಲಿರುವ ವಾಮನ ಮುದ್ರ ಕಲ್ಲೇಗಡಿ. ಪಡವಲು ಆಚೆದಿಂಬದ ಕುಮುಕೈಯಲ್ಲಿರುವ ವಾಮನ ಮುದ್ರೆ ಕಲ್ಲೇಗಡಿ. ಟೆಂಕಲು ಇಟ್ಗುಳಿಗೆ ಹೋಗುವ ಮಾರ್ಗದ ಮಣ್ಣೂರ ಜಡ್ಡಿ ಆಲದ ಮರದ ಬುಡದಲ್ಲಿರುವ ವಾಮನ ಮುದ್ರೆ ಕಲ್ಲೇಗಡಿ. ಬಡಗಲು ನೆತ್ತಿ ನಿರಯಂಗಲಿ ಆಣೆ ಮೇಲಿರುವ ಮತ್ತಿಮರದ ಬುಡದಲ್ಲಿರುವ ವಾಮನ ಮುದ್ರೆ ಕಲ್ಲೇಗಡಿ. ಇಂತಿಪ್ಪ ತೃತೀಯ ಗ್ರಾಮಗಳ ಚತುರ್ಗಡಿಗಳುಳ್ಳ ಭೂಮಿಯನ್ನು ಕಾಲ ಕಾಲಂಪ್ರತಿಯಲ್ಲಿ ಸಾಗು ಮಾಡಿಕೊಂಡು ಈ ವಾಮನ ಗ್ರಾಮದ ಚತುರ್ಗಡಿ ಒಳಗಾಗಿ ಗದ್ದೆ ಬಿದರಮಕ್ಕಿ ಹೆಕ್ಕಲು ಕುರುಹು ಕಾನು, ಬಂಡಾರಂಭ, ನಿರಾರಂಭ, ನೀರುವಾರಿ, ನಿಧಿ ನಿಕ್ಷೇಪ, ಜಲಾಪಾಷಾಣ, ಅರ್ಕ್ಷಿನಿ, ಆಗಮಸಿದ್ದ ವಾದ್ಯಂಗಳಿಕೆಯ ಅಷ್ಟಭೋಗಗಳೆಂಬ ಹಲಸು, ಮಾವು, ತೆಂಗು, ಶೃಂಗಾರ ಮುಂತಾದ ಕೇಲಿ ಸೌಮ್ಯನ್ನ ನೀವೇ ನಿಮ್ಮ ಶಿಷ್ಯ ಪರಂಪರೆಯಾಗಿ ಕಾಲಕಾಲಂಪ್ರತಿಯಲ್ಲೂ ದೇವರ ವಿನಿಯೋಗವನ್ನು ನಡೆಸಿಕೊಂಡು ಮುಂದೆ ನಿಮ್ಮ ಶಿಷ್ಯ ಪರಂಪರೆಯಾಗಿ ನಮ್ಮ ಪುಣ್ಯಪಾತ್ರವೃದ್ಧಿಯಾಗಬೇಕೆಂದು ಆ ಲಕ್ಷ್ಮೀ ನಾರಾಯಣ ದೇವರನ್ನು ಬೇಡಿಕೊಂಡು ಆ ಲಕ್ಷ್ಮೀ ನಾರಾಯಣ ಸನ್ನಿಧಿಯಲ್ಲಿ ಜಪ ದೇವಮಾರ್ಗೇನ ವ್ಯಾಖ್ಯಾನಗಳನ್ನು ಮಾಡಿಕೊಂಡು ಸುಖದಿ ಇಹುದು ಎಂದು ಕೊಟ್ಟ ಲಕ್ಷ್ಮೀನಾರಾಯಣ ದೇವರ ಮೂಲ ಶಾಸನದ ಪಟ್ಟಿ. (ಸಾಕ್ಷಿ ಶ್ಲೋಕ ಇದೆ.)

(ಪಿ.ಬಿ. ದೇಸಾಯಿ ಅವರ ಸೋದೆಯ ಎರಡು ತಾಮ್ರ ಶಾಸನಗಳು ಎಂಬ ತಲೆ ಬರಹದಲ್ಲಿ ಶರಣ ಸಾಹಿತ್ಯ ಸಂಪುಟ –20ರ ಪುಟ –9 ರಲ್ಲಿ ಪ್ರಕಟವಾಗಿದೆ ಎಂಬ ಉಲ್ಲೇಖವಿದೆ)

ಹುಲೇಕಲ್ ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನವನ್ನು ಶ್ರೀ ವ್ಯಾಸರಾಜರ ಅನುಗ್ರಹ ಅದೇಶದಂತೆ ಹಿರೇ ಅರಸಪ್ಪ ನಾಯಕನ ಕಾಲಕ್ಕೆ ನಿರ್ಮಿಸಲಾಗಿದ್ದು ಅರಮನೆಯಿಂದಲೇ ನಿರ್ವಹಿಸಲ್ಪಡುತ್ತಿತ್ತು ಎಂದೂ ಆಕರ ಸಾಕ್ಷಿಗಳಿಂದ ತರ್ಕಿಸಬಹುದಾಗಿದೆ. ರಾಮಚಂದ್ರ ನಾಯಕನ ಕಾಲಕ್ಕೆ ಸೋದೆ ಅರಸರು ಬನವಾಸಿಯ ಶ್ರೀ ಮಧುಕೇಶ್ವರನ ಆರಾಧಕರಾಗಿ ವೀರಶೈವ ದೀಕ್ಷೆ ಸ್ವೀಕರಿಸಿದರು. ಈ ಕಾರಣದಿಂದಾಗಿ ವೈಷ್ಣವ ದೇವಸ್ಥಾನವಾದ ಹಾಗೂ ಶ್ರೀ ವ್ಯಾಸರಾಜರಿಂದ ಪ್ರತಿಷ್ಠಾಪಿತ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ಅಧಿಪತ್ಯವನ್ನು ಅವರ ಪರಂಪರೆಯ ಶಿಷ್ಯರಾದ ಶ್ರೀ ಹಯಗ್ರೀವ ತೀರ್ಥರಿಗೆ ವಹಿಸಲಾಯಿತು ಎಂದು ತರ್ಕಿಸಿದರೆ ತಪ್ಪಾಗುವುದಿಲ್ಲ.

ಹುಲೇಕಲ್‌ನಿಂದ ಇಟಗುಳಿಯವರೆಗಿನ ಸುಮಾರು 400 ಎಕರೆಯಷ್ಟು ಪ್ರದೇಶವನ್ನು ದೇವಸ್ಥಾನದ ಆಡಳಿತ ಹಾಗೂ ಪೂಜಾ ವ್ಯವಸ್ಥೆಗಾಗಿ ದೇವಸ್ಥಾನದೊಂದಿಗೆ ಬಿಟ್ಟುಕೊಟ್ಟಿರುವುದು ಶಾಸನದ ವಿವರಣೆಯಿಂದ ತಿಳಿಯುತ್ತದೆ. ದೇವಸ್ಥಾನವನ್ನು ದಾನವಾಗಿ ಪಡೆದ ಶ್ರೀ ವ್ಯಾಸರಾಯಮಠ ವಾಸ್ತವ್ಯವನ್ನು ಹಳೇ ಸೋದೆಯಿಂದ ಹುಲೇಕಲ್‌ಗೆ ವರ್ಗಾಯಿಸಿತು. ಪೀಠ ಪರಂಪರೆಯಲ್ಲಿ ಹಯಗ್ರೀವ ತೀರ್ಥರು 17ನೇಯವರಾಗಿದ್ದು ತದನಂತರದ ಹನ್ನೆರಡು ಪೀಠಾಧಿಪತಿಗಳು ಅಂದರೆ ಶ್ರೀ ಲಕ್ಷ್ಮೀನಿವಾಸ ತೀರ್ಥರ ವರೆಗೂ ಹುಲೇಕಲ್ ಸ್ಥಳವನ್ನೇ ತಮ್ಮ ಮಠದ ಕೇಂದ್ರ ಸ್ಥಳವಾಗಿ ಹೊಂದಿದ್ದರು. ಇಂದಿಗೂ ಈ ಜಮೀನಿಗೆ ಸಂಬಂಧಿಸಿದ ವರ್ಷಾಸನ ಸರ್ಕಾರಿಂದ ಮಠಕ್ಕೆ ಬರುತ್ತಿದೆ.

ಈ ಮಠಕ್ಕೆ ಯಲ್ಲಾಪುರ ತಾಲ್ಲೂಕಿನಲ್ಲಿ ಸುಮಾರು 200 ಎಕರೆ ಇನಾಂ ಜಮೀನು ಇದೆ. ಇದಲ್ಲದೇ ಈ ಮಠಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿಯೂ ಇನಾಂ ಜಮೀನುಗಳಿವೆ.

ಶ್ರೀ ಲಕ್ಷ್ಮೀನಿವಾಸ ತೀರ್ಥರು ಹುಲೇಕಲ್ ಮಠದ ಜೀರ್ಣೋದ್ಧಾರ ಮಾಡಿದ ಬಗ್ಗೆ ದೇವಸ್ಥಾನದ ಕಂಬದ ಮೇಲೆ ಕೆತ್ತಲಾಗಿದೆಯಲ್ಲದೆ ಶ್ರೀಲಕ್ಷ್ಮೀನಿವಾಸತೀರ್ಥರ ಮೂಲ ವೃಂದಾವನವು ಹುಲೇಕಲ್‌ನಲ್ಲಿದೆ.

ಇಂದೂ ಸಹ ಕಂದಾಯ ದಾಖಲೆಯಲ್ಲಿ ಶ್ರೀ ವ್ಯಾಸರಾಜಮಠ ವೃಂದಾವನಗದ್ದೆ ಎಂದು ಉಲ್ಲೇಖವಿರುವ ಹಳೇ ಸೋದೆಯ ಜಾಗೆಯಲ್ಲಿ ಶ್ರೀಧರತೀರ್ಥರು, ಶ್ರೀ ರಘುಪತಿತೀರ್ಥರು ಹಾಗೂ 24ನೇ ಪೀಠಾಧಿಪತಿಗಳಾದ ಶ್ರೀ ಲಕ್ಷ್ಮೀವಲ್ಲಭತೀರ್ಥರ ಮೂಲ ಬೃಂದಾವನವಿರುವ ಉಲ್ಲೇಖ ಮಠದಲ್ಲಿದೆ. ಆದರೆ ಸ್ಥಳ ವೀಕ್ಷಣೆಗೆ ಹೋದಾಗ ವೃಂದಾವನದ

ಕಲ್ಲುಗಳು ಚದುರಿ ಬಿದ್ದಿರುವುದು ಕಂಡು ಬಂದಿತು. ಸ್ನಾನಕ್ಕೆಂದು ನಿರ್ಮಿಸಿದ ಕಲ್ಲಿನ ಕಟ್ಟಡದ ಕೊಳ ವ್ಯಸ್ಥಿತವಾಗಿದ್ದುದು ಕಂಡು ಬಂದಿತಲ್ಲದೆ ಅಲ್ಲಿ ಈ ಮೊದಲು ಇದ್ದಿರಬಹುದಾದ ಮಠದ ಕಟ್ಟಡ ಕುಸಿದು ರಾಶಿಯಾಗಿ ಮಣ್ಣಿನ ಗುಡ್ಡೆಯಾಗಿರುವುದು ಕಂಡುಬಂದಿತು.

ಕುಂದಾಪುರ ಶ್ರೀ ವ್ಯಾಸರಾಜಮಠ ಎಂದು ಕರೆಯಲಾಗುವ ಈ ಮಠದ ಶಾಖೆಗಳು ಜಿಲ್ಲೆಯ ವಿವಿಧೆಡೆ ಇವೆ. ಕುಂದಾಪುರದಲ್ಲೂ ಮಠವಿದ್ದು ಆ ಮಠದಲ್ಲಿ ಶ್ರೀಲಕ್ಷ್ಮೀನಾರಾಯಣ ದೇವಸ್ಥಾನವನ್ನು ರಾಮಚಂದ್ರನಾಯಕ ನಿಂದ ದಾನವಾಗಿ ಪಡೆದ ಶ್ರೀ ಹಯಗ್ರೀವತೀರ್ಥರು ಹಾಗೂ ಶ್ರೀ ರಾಮಚಂದ್ರತೀರ್ಥರ ಮೂಲ ವೃಂದಾವನವಿದೆ.

3–10–1783 ರಂದು ವೃಂದಾವನಸ್ಥರಾದ ಶ್ರೀ ಲಕ್ಷ್ಮೀವಲ್ಲಭತೀರ್ಥರ ಬೃಂದಾವನ ಹಳೇ ಸೋದೆಯಲ್ಲಿರುವುದರಿಂದ ಮಠ ಹುಲೇಕಲ್‌ಗೆ ವರ್ಗಾವಣೆಗೊಂಡಿದ್ದರೂ ಹಳೆ ಸೋದೆಯ ಮಠ 1800 ರ ವರೆಗೂ ಊರ್ಜಿತದಲ್ಲಿತ್ತು ಎಂದು ಹೇಳಬಹುದಾಗಿದೆ. ಮಠ ಪರಂಪರೆ ಈಗಲೂ ಮುಂದುವರೆದಿದೆ. ಮಠದ ಈಗಿನ ಪೀಠಾಧಿಪತಿಗಳಾದ ಶ್ರೀ ಶ್ರೀ ಲಕ್ಷ್ಮೀಂದ್ರತೀರ್ಥರು ಬೆಂಗಳೂರಿನ ಹನುಮಂತನಗರದಲ್ಲಿರುವ ಶಾಖಾ ಮಠದಲ್ಲಿರುತ್ತಾರೆ. ಶ್ರೀ ವ್ಯಾಸರಾಜರ ಆರಾಧನೆಗೆ ಹುಲೇಕಲ್‌ಗೆ ಬರುವ ಸಂಪ್ರದಾಯವಿದ್ದು ಸಾವಿರಕ್ಕೂ ಅಧಿಕ ಭಕ್ತರು ಆರಾಧನೆಯಲ್ಲಿ ಭಾಗವಹಿಸುತ್ತಾರೆ.

ಹುಲೇಕಲ್‌ನ ಮಠದಲ್ಲಿ ಈಗ್ಗೆ ಸುಮಾರು ಮೂರು ಶತಮಾನಗಳ ಹಿಂದೆಯೇ 1539 ರಲ್ಲಿ ಆನೆಗುಂದಿಯಲ್ಲಿ ವೃಂದಾವನಸ್ಥರಾದ ಶ್ರೀ ವ್ಯಾಸರಾಜರ ಮೃತ್ತಿಕಾ ವೃಂದಾವನವನ್ನು ನಿರ್ಮಿಸಲಾಗಿದೆ. ಈ ಮೃತ್ತಿಕಾ ವೃಂದಾವನ ಯಾವ ಪೀಠಾಧಿಕಾರಿಗಳ ಕಾಲಘಟ್ಟದಲ್ಲಿ ನಿರ್ಮಾಣವಾಯಿತು ಎಂಬುದು ಖಚಿತವಾಗಿಲ್ಲ. ವೃಂದಾವನ ಸರಳ ಸುಂದರವಾಗಿದೆ. ಬೃಂದಾವನ ನಿರ್ಮಾಣವಾಗಿ ನೂರಾರು ವರ್ಷಗಳೇ ಸಂದಿವೆ ಎಂಬುದು ಖಚಿತ. ಶ್ರೀ ವ್ಯಾಸರಾಜರ ಬೃಂದಾವನದ ಎದುರಿಗೆ ಶ್ರೀ ಲಕ್ಷ್ಮೀನಿವಾಸ ತೀರ್ಥರ ಮೂಲ ಬೃಂದಾವನವಿದೆ. ಇವರು 1–10–1859 ರಂದು ವೃಂದಾವನಸ್ಥರಾಗಿದ್ದಾರೆ. ಇವರ ಕಾಲದಲ್ಲಿಯೇ ಹುಲೇಕಲ್ ಮಠ ಹಾಗೂ ದೇವಸ್ಥಾನ ಜೀರ್ಣೋದ್ದಾರಗೊಂಡಿದೆ. ಈ ಕುರಿತು ದೇವಸ್ಥಾನದ ಶಿಲಾ ಕಂಬದ ಮೇಲೆ ಕನ್ನಡ ಲಿಪಿ ಹಾಗೂ ಕನ್ನಡ ಬಾಷೆಯಲ್ಲಿ ಈ ಕೆಳಗಿನಂತೆ ಕೊರೆಯಲಾಗಿದೆ.

ಸನ್01266 ನೇ ಫಸಲಿ ಪಯಿಂಗಳ ಸಂ॥
ಚೈತ್ರ ಶುದ್ದ 2 ರಲ್ಲಿ ವ್ಯಾರಾಜ ಸವುಸ್ಥಾನದ ಶ್ರೀಮತ್
ಲಕ್ಷ್ಮೀನಿವಾಸ ತೀರ್ಥ ಶ್ರೀಪಾಂದಗಳವರು ಜೀರ್ಣೋದ್ಧಾರವಾಗಿ
ಕಟ್ಟಿಸಿದ್ದು॥ ಪೂರ್ವಾಶ್ರಮ ಸ್ಥಳ ಬೆಂಗಳೂರು ಡಿವಿಜನ್
ನೆಲಮಂಗಲ ತಾಲೋಕು ಪೈಕಿ ಪೋಗುಂದ ಮಾರ್ಗದ
ನರಶೀಪುರ ಸ್ಥಳ ಜೋಯಿಸರ ಮನೆತನ ॥ಶ್ರೀಕೃಷ್ಣ॥

ಭೂಸುಧಾರಣಾ ಕಾಯಿದೆ ಜಾರಿಯಿಂದಾಗಿ ಉ.ಕ.ಜಿಲ್ಲೆಯಲ್ಲಿ ಮಠಕ್ಕೆ ಉಂಬಳಿಯಾಗಿ ಬಂದಿದ್ದ ಸಾವಿರಾರು ಎಕರೆ ಜಮೀನು ಮಠದ ಕೈಬಿಟ್ಟಿತು. ಬರುತ್ತಿದ್ದ ಹೇರಳ ಆದಾಯ ಕುಗ್ಗಿಹೋಗಿ ಸಂಸ್ಥಾನ ನಡೆಸುವುದು ಕಷ್ಟ ಎನ್ನುವ ಪರಿಸ್ಥಿತಿ ಎದುರಾದಾಗ ಮಠದ ಆಡಳಿತ ಕೇಂದ್ರ ಪುನಃ ಅಬ್ಬೂರಿಗೇ ಸ್ಥಳಾಂತರಗೊಂಡಿದೆ. ಮಾಧ್ವ ಪರಂಪರೆಯ ಲಕ್ಷಾಂತರ ಅನುಯಾಯಿಗಳು ನೆಲೆಯಾಗಿರುವ ಬೆಂಗಳೂರಿನ ಹನುಮಂತನಗರದ ಮಠದಲ್ಲಿ ಇಂದಿನ ಪೀಠಾಧಿಪತಿಗಳು ನೆಲೆಯಾಗಿದ್ದಾರೆ.

ಒಂದು ಕಾಲದಲ್ಲಿ ವೈಭವದಿಂದ ಮೆರೆದಿದ್ದ ಹುಲೇಕಲ್ ಮಠ ಹಾಗೂ ಹಳೇ ಸೋದೆಯ ಮಠ ದೇಖರೇಖೆ ಇಲ್ಲದೆ ಶಿಥಿಲಗೊಂಡವು. ಹಳೇ ಸೋದೆಯಲ್ಲಿದ್ದ ಮಠದ ಮೂಲ ಗುರುಗಳ ಮಣ್ಣಿನಿಂದ ನಿರ್ಮಿಸಿದ್ದ ಗುಡಿಗಳು ಧರಾಶಾಯಿಯಾಗಿ ಮಣ್ಣುಗುಡ್ಡೆಗಳಾದವು. ಬೃಂದಾವನದ ಕಲ್ಲುಗಳನ್ನು ಕಿಡಿಗೇಡಿಗಳು ಕಿತ್ತು ಹಾಕಿದರು. ಬೃಂದಾವನ ಗದ್ದೆ, ವ್ಯಾಸರಾಯಮಠ ಎಂದು ಇಂದೂ ದಾಖಲೆಯಲ್ಲಿರುವ ಜಾಗೆಯನ್ನು ಗೇಣಿ ಹಕ್ಕಿನವರೆಂಬ ವ್ಯಕ್ತಿಯೊಬ್ಬರು ತಮ್ಮ ಹೆಸರು ಹಚ್ಚಿಸಿಕೊಂಡಿದ್ದಾರೆ. ಅದನ್ನೀಗ ವಾಪಸ ಪಡೆದು ಬೃಂದಾವನ ಜೀರ್ಣೋದ್ದಾರ ಮಾಡುವ ಪ್ರಯತ್ನ ನಡೆದಿದೆ.

ಹುಲೇಕಲ್ ಮಠದ ಕಟ್ಟಡವೂ ಸಹ ಶಿಥಿಲವಾಗಿ ಮಠದ ಜಾಗೆಗಳು ಯಾರಾರದೋ ಪಾಲಾಗಿದೆ. ಮೊದಲು ಮಠವಿತ್ತು ಎಂಬ ಸ್ಥಳದಲ್ಲಿ ಗೋಸಾಸ ಕಲ್ಲುಗಳಿರುವುದು ಗಮನಾರ್ಹ. ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ ಹಾಗೂ ಶ್ರೀ ವ್ಯಾಸರಾಜ ಮೃತ್ತಿಕಾ ವೃಂದಾವನ, ಶ್ರೀ ಲಕ್ಷ್ಮೀನಿವಾಸತೀರ್ಥರ ಮೂಲ ವೃಂದಾವನವಿದ್ದ ಜಾಗೆಗಳು ಸಹ ಶಿಥಿಲಗೊಂಡಿತ್ತು.

ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನ ಶಿಲಾಮಯ ದೇವಸ್ಥಾನವಾಗಿದ್ದು, ಶ್ರೀ ಲಕ್ಷ್ಮೀನಾರಾಯಣರ ಶಿಲಾ ಪ್ರತಿಮೆ ಅತ್ಯಂತ ಸುಂದರವಾಗಿದೆ. ದೇವಸ್ಥಾನ ಈ ಭಾಗ ಉಳಿದೆಲ್ಲಾ ದೇವಸ್ಥಾನಗಳಿಗಿಂಥ ವಿಶಾಲವಾಗಿದೆ. ದೇವಸ್ಥಾನ ಪಕ್ಕದಲ್ಲಿದ್ದ ಮಣ್ಣಿನ ಗೋಡೆಗಳಿಂದ ನಿರ್ಮಿತವಾಗಿದ್ದ ಶ್ರೀ ವ್ಯಾಸರಾಜರ ಗುಡಿಯ ಮಣ್ಣಿನ ಗೋಡೆ ಮೇಲೆ ಹುತ್ತಗಳು ಬೆಳೆದು ಕಿಟಕಿ, ಬಾಗಿಲುಗಳು ಕೀರ್‌ಗುಟ್ಟುವಷ್ಟು ಜೀರ್ಣಾವಸ್ಥೆ ತಲುಪಿತ್ತು. ದೇವಸ್ಥಾನದ ಪ್ರಾಕಾರದಲ್ಲಿ ಬಿದ್ದ ಮಳೆ ನೀರು ಹೊರ ಹೋಗಲು ನಿರ್ಮಿಸಿದ್ದ ಒಳಚರಂಡಿ ವ್ಯವಸ್ಥೆ ಕುಸಿದು ಮಳೆ ನೀರು ದೇವಸ್ಥಾನದ ಸುತ್ತ ನಿಂತು ದೇವಸ್ಥಾನದ ಅಸ್ತಿತ್ವಕ್ಕೆ ಆತಂಕವೊಡ್ಡಿತ್ತು.

ಅಧ್ಯಯನ ಕಾಲದಲ್ಲಿ ಇದೆಲ್ಲವನ್ನೂ ಗಮನಿಸಿದ ಈ ಪ್ರಬಂಧದ ಲೇಖಕರಾದ ಗೋಪಾಲಕೃಷ್ಣ ಆನವಟ್ಟಿ ಮಠದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಶ್ರೀ ಶ್ರೀ ಲಕ್ಷ್ಮೀಂದ್ರ ತೀರ್ಥರ ಅಪ್ಪಣೆ ಪಡೆದು ಸಾಮಾಜಿಕ ನೆರವಿನೊಂದಿಗೆ ಕೋಟಿ ರೂಪಾಯಿಗೂ ಅಧಿಕ ದೇಣಿಗೆಯೊಂದಿಗೆ ಈ ಪುರಾತನ ದೇವಸ್ಥಾನ ಹಾಗೂ ಮಠದ ಜೀರ್ಣೋದ್ಧಾರ ಮಾಡಿದ್ದಾರೆ.

ಕುಸಿದು ಬೀಳುವಂತಿದ್ದ ಶ್ರೀ ವ್ಯಾಸರಾಜರ ಗುಡಿಯನ್ನು ಶ್ರೀ ಶ್ರೀಗಳವರ ಅಪ್ಪಣೆಯಿಂದ ಕೆಡವಿ ನೂತನ ಆರ್.ಸಿ.ಸಿ.ಕಟ್ಟಡ ಕಟ್ಟಿಸಿದ್ದಾರೆ. ದೇವಸ್ಥಾನದ ಒಳಚರಂಡಿ ವ್ಯವಸ್ಥೆಯನ್ನು ಲಕ್ಷಾಂತರ ರೂಪಾಯಿಗಳ ವೆಚ್ಚದಲ್ಲಿ ಪುನರ್ ನಿರ್ಮಿಸಿ ದೇವಸ್ಥಾನಕ್ಕಿದ್ದ ಅಪಾಯವನ್ನು ತಪ್ಪಿಸಿದ್ದಾರೆ. ದೇವಸ್ಥಾನದ ಕುರಿತು ಪುಸ್ತಿಕೆಯೊಂದನ್ನು ಬರೆದು ಕ್ಷೇತ್ರದ ಬಗ್ಗೆ ಪ್ರಚಾರ ಮಾಡಿ ಹತ್ತಾರು ಸಾವಿರ ಭಕ್ತರು ಬಂದು ಹೋಗುವಂತೆ ಮಾಡಿದ್ದಾರೆ. ದೇವಸ್ಥಾನದ ಬಗ್ಗೆ ಬರೆದ ಪುಸ್ತಕದ 4000 ಪ್ರತಿಗಳು ಖರ್ಚಾಗಿವೆ ಎಂಬುದು ಉಲ್ಲೇಖಾರ್ಹ. ಭಕ್ತಾದಿಗಳಿಗಾಗಿ ದೊಡ್ಡ ಸೇವಾ ಭವನ, ಚಂದ್ರಶಾಲೆ, ಯಾಗ ಶಾಲೆಗಳನ್ನು ಮಠದ ಶಿಷ್ಯರ ದೇಣಿಗೆ ನೆರವಿನಿಂದ ನಿರ್ಮಿಸಿದ್ದು ಇದೀಗ ಈ ಕೇಂದ್ರ ಮತ್ತೆ ಚಟುವಟಿಕೆಯ ತಾಣವಾಗಿದೆ.

ಇಮ್ಮಡಿ ಸದಾಶಿವ ನಾಯಕ ತಾಮ್ರ ಶಾಸನವೂ ಸಹ ಪಿ. ಬಿ. ದೇಸಾಯಿ ಅವರಿಂದ ಪ್ರಕಟವಾಗಿದೆ. ಕ್ರಿ. ಶ. 1763ರಲ್ಲಿ ನಡೆದ ಹೈದರಾಲಿ ದಾಳಿಯಲ್ಲಿ ಸೋದೆರಾಜ್ಯದ ಆಡಳಿತ ಅಂತ್ಯ ಕಂಡಿತು. ಸೋದೆ ಅರಸರ ವಂಶಸ್ಥರು ಈಗಲೂ ಗೋವಾದ ಪೊಂಡಾದಲ್ಲಿ ವಾಸವಾಗಿದ್ದಾರೆ. ಹೈದರಾಲಿ ದಾಳಿಯ ಕೇವಲ ಒಂದು ವರ್ಷಕ್ಕೆ ಮೊದಲು ಆಗಿನ ಸೋದೆಯ ರಾಜ ಇಮ್ಮಡಿ ಸದಾಶಿವ ರಾಜ ಕುಂದಾಪುರ ವ್ಯಾಸರಾಜಮಠಕ್ಕೆ ಭೂದಾನ ನೀಡಿದ ದಾಖಲೆ ಇದೆ. ಇದಕ್ಕೆ ಸಂಬಂಧಿಸಿದ ತಾಮ್ರ ಪತ್ರ ಶರಣ ಸಾಹಿತ್ಯ ಸಂಪುಟದಲ್ಲಿ ಪ್ರಕಟವಾಗಿದೆ.

ಗೋಸಾಸ ಕಲ್ಲುಗಳು

ಇಲ್ಲಿನ ಶ್ರೀ ರಾಮೇಶ್ವರ ದೇವಸ್ಥಾನದ ಬಯಲಿನಲ್ಲಿ ಆರಕ್ಕೂ ಅಧಿಕ ಗೋಸಾಸ ಕಲ್ಲುಗಳಿವೆ. ಗೋಸಾಸ ಕಲ್ಲು ಈ ಭಾಗದಲ್ಲಿ ದೊರೆತಿರುವುದು ಆಶ್ಚರ್ಯವೇ ಆಗಿದೆ. ಚಿನ್ನದ ಹಸುವಿನೊಂದಿಗೆ ಒಂದು ಸಾವಿರ ಗೋವುಗಳನ್ನು ಶಾಸ್ತ್ರ ವಿಧಿಯಂತೆ ದಾನ ಮಾಡಿದ ನೆನಪಿಗಾಗಿ ಒಂದು ಗೋಸಾಸ ಕಲ್ಲು ನೆಡಲಾಗುತ್ತದೆ. ಅಂದರೆ ಇಲ್ಲಿ ಎಷ್ಟು ಕಲ್ಲುಗಳಿವೆಯೋ ಅಷ್ಟು ಸಹಸ್ರ ಗೋವುಗಳನ್ನು ದಾನ ಮಾಡಲಾಗಿದೆ ಎಂಬುದು ಖಚಿತವಾಗುತ್ತದೆ. ಇಂಥಹುದೇ ಗೋಸಾಸ ಕಲ್ಲುಗಳು ಶಿರಸಿ ಸಮೀಪದ ಎಸಳೆ ಗ್ರಾಮದಲ್ಲಿ ಕಂಡು ಬರುತ್ತದೆ. ಇವು ಯಾವ ಕಾಲಮಾನಕ್ಕೆ ಸೇರಿದ್ದು ಎಂಬುದು ಸ್ಪಷ್ಟವಾಗುವುದಿಲ್ಲ. ಮಹಾದಾನಿಗಳ ಬೀಡು ಇದಾಗಿತ್ತು ಎಂಬುದನ್ನು ಈ ಕಲ್ಲುಗಳು ಸಾರಿ ಹೇಳುತ್ತವೆ.

ಒಂದು ಕಾಲಕ್ಕೆ ಈ ಪ್ರದೇಶವು ಕುಂದಾಪುರ ಶ್ರೀ ವ್ಯಾಸರಾಯರ ಮಠಕ್ಕೆ ಸೇರಿದ್ದಾದ್ದರಿಂದ ಈ ಗೋದಾನಗಳು ಮಠದಲ್ಲಿಯೇ ನಡೆದಿರಬಹುದು ಎಂದು ಭಾವಿಸಲು ಅವಕಾಶವಿದೆ.

ಈ ದೇವಸ್ಥಾನದ ಒಂದು ಪಾರ್ಶ್ವದಲ್ಲಿ ಹಲವು ಶಾಸನ ಕಲ್ಲುಗಳನ್ನು ನೆಡಲಾಗಿದ್ದು, ವಿವಿಧೆಡೆ ಬಿದ್ದಿದ್ದ ಕಲ್ಲುಗಳನ್ನು ಇಲ್ಲಿ ಇತ್ತೀಚೆಗೆ ಒಂದೆಡೆ ನಿಲ್ಲಿಸಲಾಗಿದೆ ಎಂದು ಹೇಳಲಾಗಿದೆ.

ಹಳೇ ಸ್ವಾದಿಯಲ್ಲಿ ಶ್ರೀವ್ಯಾಸರಾಯರ ಮಠ (ಈ ಪ್ರಬಂಧದ ಲೇಖಕರು ಸ್ಥಳಕ್ಕೆ ಭೇಟಿ ಕೊಟ್ಟಾಗ ಇದ್ದ ಸ್ಥಿತಿ)

ಶ್ರೀ ವ್ಯಾಸರಾಜರ ಮಠ ಈಗಿನ ವಾದಿರಾಜ ಮಠವಿರುವ ಸಮೀಪವೇ ಇದ್ದ ಹಳೇ ಸೋದೆ ಎಂದೇ ಕರೆಯಲಾಗಿರುವ ಜಾಗೆಯಲ್ಲಿತ್ತು.(ಮಠ ದೇವಳ ಗ್ರಾಮದ ಸ.ನಂ. 63)ಆ ಜಾಗೆಯಲ್ಲಿ ಶ್ರೀ ಶ್ರೀಧರ ತೀರ್ಥರ, ಶ್ರೀ ಲಕ್ಷ್ಮೀವಲ್ಲಭ ತೀರ್ಥರ ಹಾಗೂ

ಶ್ರೀ ರಘುಪತಿ ತೀರ್ಥರ ಮೂಲ ವೃಂದಾವನವಿತ್ತು. ಆದರೆ ಇಂದು ಈ ಯಾವುದೇ ಒಂದು ವೃಂದಾವನವೂ ಇಲ್ಲ. ವೃಂದಾವನದ ಅವಶೇಷ ಮಾತ್ರ ಇದೆ. ಸುಂದರವಾದ ಕಲ್ಲು ಕಟ್ಟಡದ ಸರೋವರವಿದೆ. ಕಟ್ಟಡವಿದ್ದ ಕುರುಹಾಗಿ ಮಣ್ಣಿನ ಗುಡ್ಡೆಯಿದೆ. ಸೋದೆಯ ಹಳೆಯ ಭೂಪಟಲ್ಲಿ ಈ ಜಾಗೆಯನ್ನು ಶ್ರೀ ವ್ಯಾಸರಾಯ ಮಠ ಎಂದೇ ಗುರುತಿಸಿರುವ ಐತಿಹಾಸಿಕ ದಾಖಲೆಯೂ ಇದೆ.

(ಹಳೇ ಸೋದೆಯಲ್ಲಿ ಪಾಳು ಬಿದ್ದ ಬೃಂದಾವನದ ಶಿಲೆಗಳು ಹಾಗೂ ಕೊಳ. ಇದು ಶ್ರೀಧರ ತೀರ್ಥರಿಗೆ ಸಂಬಂಧಿಸಿದ್ದು ಎನ್ನಲಾಗಿದೆ. ಜಾಗೆ ಕುಂದಾಪುರ ಶ್ರೀ ವ್ಯಾಸರಾಯರ ಮಠಕ್ಕೆ ಸೇರಿತ್ತು ಎಂಬುದು ದಾಖಲೆಯಿಂದ ಶ್ರುತ ಪಡುತ್ತದೆ.)

ಶ್ರೀ ಕುಂದಾಪುರ ವ್ಯಾಸರಾಜಮಠದ ಗುರುಪರಂಪರೆ (ಮಠದ ಫಲಕದಲ್ಲಿ ಉಲ್ಲೇಖಿಸಿದಂತೆ)

1.	ಶ್ರೀಮದ್ ಆನಂದ ತೀರ್ಥ ಭಗವತ್ಪಾದರು, ಬದರಿಕಾಶ್ರಮ	
2.	ಶ್ರೀ ಪದ್ಮನಾಭ ತೀರ್ಥರು	– ನವವೃಂದಾವನ
3.	ಶ್ರೀ ನರಹರಿ ತೀರ್ಥರು	– ಚಕ್ರತೀರ್ಥ
4.	ಶ್ರೀ ಮಾಧವತೀರ್ಥರು	– ಮಾಣೂರು
5.	ಶ್ರೀಮದ್ ಅಕ್ಷೋಭ್ಯತೀರ್ಥರು	– ಮಳಖೇಡ
6.	ಶ್ರೀ ಜಯತೀರ್ಥರು	– ಮಳಖೇಡ
7.	ಶ್ರೀ ವಿಧ್ಯಾಧಿರಾಜತೀರ್ಥರು	– ಯರಗೊಳ
8.	ಶ್ರೀ ರಾಜೇಂದ್ರ ತೀರ್ಥರು	– ಕುಂಭಕೋಣ
9.	ಶ್ರೀ ಜಯಧ್ವಜತೀರ್ಥರು	– ಬದರಿಕಾಶ್ರಮ
10.	ಶ್ರೀ ಪುರುಷೋತ್ತಮತೀರ್ಥರು	– ಅಬ್ಬೂರುಗುಹಾ
11.	ಶ್ರೀ ಬ್ರಹ್ಮಣ್ಯ ತೀರ್ಥರು (1460–1476)	– ಅಬ್ಬೂರು
12.	ಶ್ರೀ ವ್ಯಾಸರಾಜತೀರ್ಥರು(1476–18–03–1539)	–ನವವೃಂದಾವನ
13.	ಶ್ರೀ ಶ್ರೀನಿವಾಸತೀರ್ಥರು (1539–1564)	– " –
14.	ಶ್ರೀ ರಾಮತೀರ್ಥರು (1564–1584)	– " –
	ಇವರ ಕಾಲದಲ್ಲಿ ಮಠ ಎರಡು ಟಿಸಿಲಾಯಿತು	
	ಕುಂದಾಪುರ ವ್ಯಾಸರಾಯ ಮಠ	ಸೊಸಲೆವ್ಯಾಸರಾಯಮಠ
	ಶ್ರೀಧರ ತೀರ್ಥರು	ಶ್ರೀ ಲಕ್ಷ್ಮೀಕಾಂತತೀರ್ಥರು
1.	ಶ್ರೀಧರತೀರ್ಥರು 7–10–1583	– ಹಳೇಸೋದೆ
2.	ಶ್ರೀ ರಘುಪತಿತೀರ್ಥರು 1–8–1604	– ಹಳೇಸೋದೆ

3. ಶ್ರೀ ಹಯಗ್ರೀವತೀರ್ಥರು15–4–1647 – ಕುಂದಾಪುರ
4. ಶ್ರೀ ಲಕ್ಷ್ಮೀಪತಿ ತೀರ್ಥರು 5–11–1650 – ಅಬ್ಬೂರು
5. ಶ್ರೀ ಲಕ್ಷ್ಮೀನಾರಾಯಣ ತೀರ್ಥರು 29–9–1658 – ಅಬ್ಬೂರು
6. ಶ್ರೀ ರಘುನಾಥ ತೀರ್ಥರು24–8–1678 – ಅಬ್ಬೂರು
7. ಶ್ರೀ ರಾಮಚಂದ್ರ ತೀರ್ಥರು 18–10–1702 – ಕುಂದಾಪುರ
8. ಶ್ರೀ ಲಕ್ಷ್ಮೀ ಮನೋಹರತೀರ್ಥರು 7–11–1726 – ಅಬ್ಬೂರು

(ಗುರುಪರಂಪರೆಯ ಮುಂದಿರುವ ದಿನಾಂಕಗಳನ್ನು ಅಲ್ಲಿ ಉಲ್ಲೇಖಿಸಿದ ತಿಥಿ–ಸಂವತ್ಸರಗಳನ್ನ ಆಧರಿಸಿ ನಾವು ಲೆಕ್ಕ ಹಾಕಿ ಬರೆದಿದ್ದಾಗಿದೆ.)

ಗ್ರಂಥಋಣ

(1) ಮಿಥಿಕ ಸೊಸೈಟಿಯ ತ್ರೈಮಾಸಿಕ ಚಾನೆಲ್ – 1974, ಏಪ್ರಿಲ್–ಜೂನ್‌ರಲ್ಲಿ ಪ್ರಕಟವಾದ ಸೆವೆರಿನ ಸಿಲ್ವಾ ಅವರ ಸೋಂದಾನಾಯಕರು ಲೇಖನ
(2) ಸ್ವಾದಿ ಅರಸುಮನೆತ, ಎಸ್.ಎನ್.ಮಾಳವಾಡ
(3) ಕಾರವಾರ ಜಿಲ್ಲೆಯ ಶಾಸನಗಳು.
(4) ವೀರಶೈವ ಅಧ್ಯಯನಪೀಠದಿಂದ ಪ್ರಕಟಿತ – ಸ್ವಾದಿ ಅರಸು ಮನೆತನ

❑

ಉತ್ತರ ಕನ್ನಡ ಜಿಲ್ಲೆಯಲ್ಲಿ ಪೋರ್ಚುಗೀಸರು

– ಡಾ. ಆರ್. ಮಂಜನಾಯ್ಕ, ಶ್ರೀ ಎಂ. ಲೋಕೇಶ

ಭಾರತಕ್ಕೆ ಬರಲು ಜಲಮಾರ್ಗವನ್ನು ಹುಡುಕುವ ಐರೋಪ್ಯರ ಯತ್ನ ಜಗತ್ತಿನಾದ್ಯಂತ ಐರೋಪ್ಯರ ಪ್ರಾಬಲ್ಯ ಬೆಳೆಯಲು ನಾಂದಿ ಮಾಡಿತ್ತು. ಆಗ 1498ರಲ್ಲಿ ಪೋರ್ಚಗಲ್‌ನ ವಾಸ್ಕೊಡಿ ಗಾಮಾ ಭಾರತದ ಕರಾವಳಿಯನ್ನು ತಲಪಿದ. 17–5–1498 ರಂದು ವಾಸ್ಕೋಡಿ ಗಾಮನು ಅಟ್ಲಾಂಟಿಕ್ ಮಾರ್ಗವಾಗಿ ಮೂರು ಹಡಗುಗಳೊಂದಿಗೆ ಕಾಲಿಕತ್ ಸಮೀಪ ಬಂದು ತಲುಪಿದುದರಿಂದ ಭಾರತದ ನೆಲದಲ್ಲಿ ಪೋರ್ತುಗೀಜರ ಅಧ್ಯಾಯವಾರಂಭವಾಯಿತು. ರಾಬರ್ಟ್ ಸೀವೆಲ್ 26–8–1498 ಬ್ಯಾರೋಸ್‌ನು 20–5–1498ರಂದು ಇದು ಜರುಗಿತೆಂದು ಉಲ್ಲೇಖಿಸಿದ್ದಾರೆ. ಅನುವಂಶಿಕವಾದ ಝೋಮೋರಿನ್ ಎಂಬ ಬಿರುದು ಹೊಂದಿದ್ದ ಕಾಲಿಕತ್‌ನ ರಾಜನು ವಾಸ್ಕೋಡಿ ಗಾಮ ಹಾಗೂ ಅವನ ಸಿಬ್ಬಂದಿಗೆ ಸ್ವಾಗತ ನೀಡಿದನು. ಆದರೆ ಝೋಮೋರಿನ್–ಪೋರ್ತುಗೀಜ್ ನಾಯಕನಿಗೆ ಭಿನ್ನಾಭಿಪ್ರಾಯವಂಕುರಿಸಿ ಕಾಲಿಕತ್‌ನಿಂದ ಕೊಚ್ಚಿನ್‌ಗೆ ತೆರಳುವಂತಾಯಿತು. ಕಿ.ಶ. 1505ರಲ್ಲಿ ಪೋರ್ತುಗೀಜ–ಭಾರತದ ಇತಿಹಾಸದಲ್ಲಿ ಹೊಸಯುಗ ಆರಂಭವಾಯಿತು. ತಮ್ಮ ಸ್ಥಾನವನ್ನು ಭದ್ರಪಡಿಸುವ ಏಡನ್, ಅರ್ಮುಝು ಮತ್ತು ಮಲಕ್ಕಗಳನ್ನು ವಶಪಡಿಸಿಕೊಂಡು ತುರುಕರ ವ್ಯಾಪಾರವನ್ನು ನಾಶಪಡಿಸುವ ಉದ್ದೇಶದಿಂದ ಸಾಕಷ್ಟು ಸೈನಿಕ ಬಲದೊಂದಿಗೆ ಮೂರು ವರ್ಷ ಅವಧಿಯವರೆಗೆ ಒಬ್ಬ ರಾಜ್ಯಪಾಲನನ್ನು ನಿಯಮಿಸಲು ಪೋರ್ತುಗೀಜ ರಾಜನು ನಿಶ್ಚಯಿಸಿದನು. ಈ ಮೇರೆಗೆ ಫ್ರಾನ್ಸಿಸ್ಕೋ ಡಿ ಆಲ್ಮೆಡಾ ಮೊದಲನೆಯ ರಾಜ್ಯಪಾಲನಾದನು. 1505ರಲ್ಲಿ ಈತನು ಭಾರತವನ್ನು ತಲುಪಿ ಅರಬ್ ಶಕ್ತಿಗಳೊಡನೆ ಹೋರಾಟ ನಡೆಸಿದನು. ಈಜಿಪ್ತಿನ ಸುಲ್ತಾನನು ತನ್ನ ಹಡಗು ಮತ್ತು ಸೇನಾಪಡೆಗಳನ್ನು ಪೋರ್ತುಗೀಜರನ್ನು ಹಿಮ್ಮೆಟ್ಟಿಸಲು ಕಳುಹಿಸಿದನು. 1508ರ ಜನವರಿಯಲ್ಲಿ ಪೋರ್ತುಗೀಜರಿಗೆ ಸೋಲುಂಟಾದರೂ ಫೆಬ್ರವರಿ 1509ರಲ್ಲಿ ಆಲ್ಮಡಾನು ಮುಸಲ್ಮಾನರ ಹಡಗು ಪಡೆಗಳನ್ನು ಸೋಲಿಸಿ ಜಯಗಳಿಸಿದನು. 1509 ನವೆಂಬರ್ 5 ರಂದು ಆಲ್ಮೆಡಾನ ತರುವಾಯ ಅಪೋನ್ಸೋ–ಡಿ–ಆಲ್ಬುಕರ್ಕನು ಅಧಿಕಾರಕ್ಕೆ ಬಂದು ಈತನೇ ಭಾರತದಲ್ಲಿ ಪೋರ್ತುಗೀಜರ ನಿಜವಾದ ಸಂಸ್ಥಾಪಕನೆಂದು ಪರಿಗಣಿಸಲ್ಪಟ್ಟನು. 1510ರಲ್ಲಿ ಬಿಜಾಪುರ ಆದಿಲ್‌ಷಹನ ವಶದಲ್ಲಿದ್ದ ಗೋವೆಯನ್ನು ಜಯಿಸಿ ಅದನ್ನು ಕೇಂದ್ರವನ್ನಾಗಿಸಿಕೊಂಡನು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಪೋರ್ಚುಗೀಸರು

1498ರಲ್ಲಿ ಪೋರ್ಚಗಲ್‌ನ ವಾಸ್ಕೊಡಿ ಗಾಮಾ ಭಾರತದ ಕರಾವಳಿಯನ್ನು ತಲಪಿದ ಕಾಲದಿಂದಲೇ ಕರ್ನಾಟಕ ಮತ್ತು ಪೋರ್ಚಗೀಸರ ನಡುವೆ ನಿಕಟ ಸಂಪರ್ಕ ಆರಂಭವಾಯಿತು. ಇವರ ಜಾವೂ ಡಿ ನೋವಾ 1501ರಲ್ಲಿ ಭಟ್ಕಳಕ್ಕೆ ಭೇಟಿ ನೀಡಿದನು. 1502ರಲ್ಲಿ ವಾಸ್ಕೊ ಡಿ ಗಾಮಾನೆ ಅಂಜದೀವ ದ್ವಿಪಕ್ಕೆ ಭೇಟಿ ನೀಡಿ ಭಟ್ಕಳ (ಹಾಡುವಳ್ಳಿ) ಅರಸನಿಂದ ಹಡಗು ಕಟ್ಟೆಗಾಗಿ ಭೂಮಿಯನ್ನು ಪಡೆದನು.

ಕ್ರಿ.ಶ. 1504ರಲ್ಲಿ ಗಾಮಾ ಭಾರತದ ಎರಡನೇ ಯಾತ್ರೆ ಕೈಕೊಂಡಾಗ ಗೇರಸೊಪ್ಪೆಯ ಬಳಿಯ ಕರಾವಳಿಯಲ್ಲಿನ ತಿಮ್ಮೋಜ ಎಂಬ ನಾವಿಕನೊಡನೆ ಸೆಣಸಿದನೆಂದೂ ಭಟ್ಕಳದ(ಹಾಡುವಳ್ಳಿ) ದೊರೆಯೊಡನೆ ಹೋರಾಡಿ, ಕೊನೆಗೆ ಅವನ

ಜೊತೆ ಒಪ್ಪಂದ ಮಾಡಿಕೊಂಡನೆಂದೂ ತಿಳಿಯುತ್ತದೆ.1 1505ರಲ್ಲಿ ಇದೇ ರೀತಿ ಹೊನ್ನಾವರದ ಮೇಲೆ ದಾಳಿಮಾಡಿ ಪೋರ್ಚುಗೀಸರು ಆ ಬಂದರಿನಿಂದ ಕಪ್ಪ ಸಂಗ್ರಹಿಸಿದರು.2 1505ರಲ್ಲಿ ಡಾಮ್ ಪ್ರಾನ್ಸಿಸ್ಕೊ ಡಿ ಅಲ್ಮೇಡಾ ಪೋರ್ಚುಗೀಸರ ಭಾರತಿಯ ವೈಸರಾಯ ಹೊನ್ನಾವರಕ್ಕೆ ಬಂದಿದ್ದನು. ನಂತರ 1509ರಲ್ಲಿ ವಿಜಯನಗರದ ಅರಸು ವೀರ ನರಸಿಂಹನಿಂದ ಭಟ್ಕಳದಲ್ಲಿ ವ್ಯಾಪಾರಿ ಕೋಠಿಯನ್ನು ಸ್ಥಾಪಿಸಲು ಅನುಮತಿ ಕೇಳಿದನು.

ತುರುಕರ ವೈರಿಗಳಾದ ಪೋರ್ಚುಗೀಸರ ಜೊತೆ ತಿಮ್ಮೋಜನು ಸ್ನೇಹ ಮಾಡಿಕೊಂಡ. ತಿಮ್ಮೋಜನು ವಿಜಯನಗರದ ದೊರೆಗಳ ಸೇವೆಯಲ್ಲಿರುವ ಒಬ್ಬ ನಾವಿಕನಾಗಿದ್ದು, ವಿಜಾಪುರದ ಅದಿಲಶಹನ ವಿರುದ್ಧ ಹೋರಾಡಲು ನೇಮಿಸಲ್ಪಟ್ಟ ವ್ಯಕ್ತಿಯೆಂದು ರೆ. ಹೆರಾಸರ ಅಭಿಪ್ರಾಯವಾಗಿದೆ. ಈ ತಿಮ್ಮೋಜನ ನೆರವಿನಿಂದಲೇ 1510ರಲ್ಲಿ ಪೋರ್ಚುಗೀಸ್ ಮಂಡಲಾಧಿಕಾರಿ ಅಲ್ಬುಕರ್ಕ್ ಗೋವೆಯನ್ನು ಅದಿಲಶಹನಿಂದ ವಶಪಡಿಸಿಕೊಂಡ.[3]

ಗೆರಸೊಪ್ಪೆ ರಾಜ್ಯದಲ್ಲಿ ಉತ್ತರಾಧಿಕಾರಕ್ಕಾಗಿ ಜಗಳವಾದಾಗ, 'ಮೆಲ್ಲವೊ' ಎಂದು ಉಲ್ಲಿಖಿತದಾದ ಗೆರಸೊಪ್ಪೆಯ ನ್ಯಾಯಬದ್ಧ ಉತ್ತರಾಧಿಕಾರಿ ಪೋರ್ಚುಗೀಸರ ಆಶ್ರಯ ಪಡೆದ; ಗೋವೆಯಲ್ಲಿ ಅವನಿಗೆ ಹಿರಿಯ ಅಧಿಕಾರ ಕೊಡಲಾಯಿತು. ಮುಂದೆ ಈ ರಾಜಕುಮಾರ ಗೋವೆಯನ್ನು ತ್ಯಜಿಸಿ ಮತ್ತೆ ತನ್ನ ಸಿಂಹಾಸನ ಗಳಿಸಿಕೊಂಡ.4 ಅದಿಲಶಹನಿಂದ ಗೋವೆಯನ್ನು ವಶಪಡಿಸಿಕೊಂಡ ಪೋರ್ಚುಗೀಸರ ಜೊತೆ ಸ್ನೇಹ ಬೆಳೆಸಲು ವಿಜಯನಗರದ ದೊರೆ ಕೃಷ್ಣದೇವರಾಯನು ಉತ್ಸುಕನಾಗಿದ್ದ. ಪೋರ್ಚುಗೀಸರಿಗೂ ಮುಸಲ್ಮಾನರಿಗೂ ಇದ್ದ ಪಾರಂಪರಿತ ದ್ವೇಷದ ವಿಚಾರ ವಿಜಯನಗರಕ್ಕೆ ತಿಳಿದಿತ್ತು. ಪರ್ಸಿಯಾ ದೇಶದಿಂದ ಉತ್ತಮ ಯುದ್ಧಾಶ್ವಗಳನ್ನು ಭಾರತಕ್ಕೆ ತರುತಿದ್ದ ಅರಬ್ಬರು ಆ ಕುದುರೆಯನ್ನು ಹೆಚ್ಚಾಗಿ ಬಿಜಾಪುರಕ್ಕೆ ಮಾರುತ್ತಿದ್ದರು. ಅರಬ್ಬರ ವೈರಿಗಳಾದ ಪೋರ್ಚುಗೀಸರನ್ನು ಒಲಿಸಿಕೊಂಡಲ್ಲಿ ಈ ಅಶ್ವಗಳು ತಮಗೇ ಸಿಗುವುದೆಂದು ವಿಜಯನಗರ ನಂಬಿತ್ತು. ವಿಜಯನಗರಕ್ಕೆ ಪೋರ್ಚುಗೀಸ್ ವ್ಯಾಪಾರಿಗಳ ಯಾತಾಯಾತ ಹೆಚ್ಚಿತು.

ಜಗಳಗಂಟತನಕ್ಕೆ ಹೆಸರಾದ ಪೋರ್ಚುಗೀಸರು, ವಿಜಯನಗರದ ಈ ಸ್ನೇಹದ ನೀತಿಯ ದುರುಪಯೋಗ ಪಡೆದು, ಶೀಘ್ರವೇ ತಾವು ಪಶ್ಚಿಮ ಕರಾವಳಿಯ ವ್ಯಾಪಾರದ ಸರ್ವಸ್ವಾಮಿಗಳೆಂಬಂತೆ ವರ್ತಿಸತೊಡಗಿದರು. ಕುಂದಾಪುರ(ಬಾರ್ಸೆಲೂರ್), ಬಾರ್ಕೂರು, ಮಂಗಳೂರು, ಮಂಜೇಶ್ವರ, ಕುಂಬ್ಳೆ, ಮೂಲ್ಕಿ, ಕಾರ್ನಾಡ್, ಚಿತ್ತಾಕುಲ(ಕಾರವಾರ ಬಳಿ), ಅಂಕೋಲೆ, ಗೋಕರ್ಣ, ಮಿರ್ಜಾನ್, ಹೊನ್ನಾವರ ಮುಂತಾದ ಕನ್ನಡ ಬಂದರುಗಳಿಂದ ವಾರ್ಷಿಕ ಕಪ್ಪ ಸಂಗ್ರಹಿಸತೊಡಗಿದರು.5 ಕರಾವಳಿಯ ಬಂದರುಗಳ ವ್ಯಾಪಾರಿಗಳನ್ನು ಸದೆಬಡಿದು, ಪಟ್ಟಣಗಳನ್ನು ಸೂರೆ ಮಾಡಿ ಹಾಗೂ ನಾನಾ ವಿಧದ ಹಿಂಸಾಚಾರಗಳಿಂದ ಅವರು ಈ ಸಂಗ್ರಹಣ ಪದ್ಧತಿಯನ್ನು ಮಾಮೂಲಾಗಿ ಮಾಡಿಕೊಂಡಿದ್ದರು. 1515ರಲ್ಲಿ ಮಂಗಳೂರು ಪಟ್ಟಣವನ್ನು ಅವರು ಸುಟ್ಟ ವಿಚಾರ ದಾಖಲೆಗಳಲ್ಲಿ ಕಾಣಿಸುತ್ತದೆ.6 ಅದೇ ವರ್ಷ ಬಾರ್ಕೂರನ್ನೂ ಅವರು ಸೂರೆ ಮಾಡಿದರು.7 1530ರಲ್ಲಿ ಮಂಗಳೂರನ್ನು ಮತ್ತೆ ಇದೇ ರೀತಿ ಸುಟರು.

1542ರಲ್ಲಿ ಮಾರ್ಟಿನ್ ಅಲ್ಫಾನ್ಸೊ ಡಿಸೋಜಾ ಭಟ್ಕಳ ಮೇಲೆ ದಾಳಿಮಾಡಿದಾಗ ಚೆನ್ನಭೈರಾದೇವಿ ಅವನೊಡನೆ ಒಪ್ಪಂದ ಮಾಡೊಕೊಂಡಳು. 1542ರಲ್ಲಿ ಭಟ್ಕಳವನ್ನು ಇವರು ಸುಟ್ಟು ನಾಶ ಮಾಡಿದ ವಿಚಾರ, ಹಾಡುವಳ್ಳಿಯ ಇತಿಹಾಸದಲ್ಲಿ ಉಲ್ಲೇಖಿಸಿದೆ. ಈ ರೀತಿ ಪೋರ್ಚುಗೀಸರ ವ್ಯವಹಾರವೆಲ್ಲ ದುಂಡಾವರ್ತಿಯದೇ ಆಗಿತ್ತು. ("ಪೋರ್ಚುಗೀಸ್" ಎಂದರೆ 'ಜಗಳಗಂಟ' ಎಂಬ ಅರ್ಥ ಕನ್ನಡ ಕರಾವಳಿಯಲ್ಲಿ ರೂಢಿಯಲ್ಲಿದೆ).

1947ರಲ್ಲಿ ಪೋರ್ಚುಗೀಸರು ವಿಜಯನಗರದ ಸಮ್ರಾಟರ ಜೊತೆ ಒಂದು ವ್ಯಾಪಾರ ಒಪ್ಪಂದ ಮಾಡಿಕೊಂಡರು. ಇದರಂತೆ, ಗೋವೆಯಲ್ಲಿ ಬಂದಿಳಿದ ಎಲ್ಲ ಯುದ್ಧಾಶ್ವಗಳನ್ನು ಪೋರ್ಚುಗೀಸರು ವಿಜಯನಗರಕ್ಕೆ ಮಾರಬೇಕು; ಸಾಮ್ರಾಜ್ಯದೊಳಗಿನ ಎಲ್ಲ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಕುಂದಾಪುರ(ಬಾರ್ಸೆಲೂರ್) ಮತ್ತು ಹೊನ್ನಾವರ ಬಂದರುಗಳ ಮೂಲಕ ಪೋರ್ಚುಗೀಸರಿಗೆ ಮಾರಬೇಕು ಎಂದು ಕರಾರಾಯಿತು.8

ಕನ್ನಡ ನಾಡಿನ ಕಾಡುತ್ಪತ್ತಿ (ಕರಿಮೆಣಸು, ಶುಂಠಿ, ಮಸಾಲೆಸಾಮಾನು), ಅಕ್ಕಿ, ಸಕ್ಕರೆ, ಕೊಬ್ಬರಿಗಳನ್ನು ವಿಶೇಷವಾಗಿ ಪೋರ್ಚುಗೀಸರು ಕೊಳ್ಳುತ್ತಿದ್ದರು. ವಿಜಯನಗರ ಸಾಮ್ರಾಜ್ಯಕ್ಕೆ ಬೇಕಾದ ಯುದ್ಧ ಸಾಮಗ್ರಿಗಳು, ವಿಲಾಸದ ವಸ್ತುಗಳು.–

ಇವನ್ನು ಯೂರೋಪಿನಿಂದ ಪೂರೈಸುತ್ತಿದ್ದರು. ವಿಜಯನಗರ ರಾಜಧಾನಿಗೆ ನಿಕಟವಾಗಿದ್ದುದರಿಂದ ಗೋವೆ ಲಿಸ್ಬನ್‌ನಷ್ಟೇ ಘನವಂತಿಕೆಯ ನಗರವಾಗಿ ಬೆಳೆಯಿತು. ಆದರೆ 1565ರಲ್ಲಿ ವಿಜಯನಗರ ನಾಶವಾದಾಗ, ಗೋವೆಯ ವ್ಯಾಪಾರ ಭಾರಿ ದೊಡ್ಡ ಆಘಾತವನ್ನು ಎದುರಿಸಿತು. ಪೋರ್ಚುಗೀಸ್ ಮೂಲಗಳನ್ನು ಉದಾಹರಿಸುತ್ತ, "ಗೋವೆಯ ನಿವಾಸಿಗಳ ಸಂಖ್ಯೆ ಕಡಿಮೆಯಾಗುತ್ತ ಹೋಯಿತು. ಮತ್ತೊಮ್ಮೆ ಗೋವೆ ಚೇತರಿಸಿಕೊಳ್ಳಲಿಲ್ಲ" ಎಂದು ರೆ. ಹೆರಾಸ್ ಹೇಳಿದ್ದಾರೆ.9 ಸಿವೆಲ್ಲರೂ ಇದೇ ಮಾತನ್ನು ಉಚ್ಚರಿಸಿದ್ದಾರೆ.

ಆದರೆ ಕೃಷ್ಣಾತೀರದ ಕಾಳಗದ (ತಾಳಿಕೋಟೆ 1565) ಅನಂತರ ಕರಾವಳಿ ಮೇಲಣ ವಿಜಯನಗರದ ಹಿಡಿತ ಸಡಿಲಾದಾಗ ಪೋರ್ಚುಗೀಸರ ದುಂಡಾವರ್ತನೆಯೂ ಹೆಚ್ಚಿತು. ಗೋವೆಯ ದಕ್ಷಿಣಕ್ಕೆ ಕೆಲವು ಮಳಿಗೆಗಳನ್ನು ಸ್ಥಾಪಿಸಲು ಅವರು ಯತ್ನಿಸಿದರು. 1567ರಲ್ಲಿ ಅವರು ಮಂಗಳೂರಿನ ಕೆಲ ಭಾಗಗಳನ್ನು ವಶಪಡಿಸಿಕೊಂಡು, ಸೆಂಟ್ ಸೆಬೆಸ್ಟಾವು ಎಂಬ ಕೋಟೆಯನ್ನು ಕಟ್ಟಿಕೊಂಡರು.10 1569ರಲ್ಲಿ ಹೊನ್ನಾವರ (ಓನೋರ್) ವನ್ನು ಗೆದ್ದು ಅಲ್ಲೂ ಒಂದು ಕೋಟೆ ಕಟ್ಟಿದರು.11 ಅದೇ ವರ್ಷ ಕುಂದಾಪುರ (ಬಾರ್ಸೆಲೋರ್) ವಶಪಡಿಸಿಕೊಳ್ಳಲು ಯತ್ನಿಸಿ ವಿಫಲರಾದರೂ 1570ರಲ್ಲಿ ಅದನ್ನು ಜಯಿಸಿ, ಅಲ್ಲಿದ್ದ ಹಳೆಯ ಕೋಟೆಯನ್ನು ದುರುಸ್ತಿಮಾಡಿದರು.12 ಡಚ್ ಪ್ರವಾಸಿ ಲಿನ್ಸ್‌ಕೊತಿನ್ ಹೇಳವಂತೆ, 1595ರಲ್ಲಿ ಪೋರ್ಚುಗೀಸರು ಪಶ್ಚಿಮ ಕರಾವಳಿಯಲ್ಲಿ ಅತಿಶಯ ಪ್ರಬಲರಾಗಿದ್ದರು. ಅವರಿಂದ ರಹದಾರಿ ಪಡೆಯದ ಯಾವ ನೌಕೆಯೂ ಅರಬಿಸಮುದ್ರದಲ್ಲಿ ಓಡಾಡುವಂತಿರಲಿಲ್ಲ.13 ಆದರೆ ಅನಂತರ ಮೆಲ್ಲಮೆಲ್ಲನೆ ಪೋರ್ಚುಗೀಸರ ಪ್ರಭಾವ ಕುಂದತೊಡಗಿತು. 1580ರಲ್ಲಿ ಪೋರ್ಚುಗಲ್ ಸ್ಪೇನ್‌ನ ದೊರೆಯ ಒಡೆತನಕ್ಕೆ ಸೇರಿಹೋಗಿತ್ತು. ಆಗ ಸಾಗರದ ಮೇಲೆ ಸ್ವಾಮ್ಯವನ್ನು ಪಡೆದಿದ್ದ ಸ್ಪೇನ್ 1588ರಲ್ಲಿ ಮತ್ತು ಅನಂತರ ಇಂಗ್ಲಂಡಿನ ನೌಕಾಸೇನೆಯ ಕೈಯಲ್ಲಿ ಸೋಲನ್ನುಂಡಿತು. ಹೀಗಾಗಿ ಸ್ಪೇನ್ ಹಾಗೂ ಪೋರ್ಚುಗಲ್‌ಗಳ ನೌಕಾಬಲ ದುರ್ಬಲವಾಯಿತು. ಇದೇ ಕಾಲಕ್ಕೆ ಕರ್ನಾಟಕದಲ್ಲಿ ಕೆಳದಿದೊರೆಗಳು ಪ್ರಬಲರಾಗಿ ಕನ್ನಡ ಕರಾವಳಿಯ ಮೇಲಣ ತಮ್ಮ ಹಿಡತವನ್ನು ಬಲಗೊಳಿಸಿದರು. ಇದರ ಜೊತೆ, ಇಂಗ್ಲೀಷರ, ಡಚ್ಚರ ಮತ್ತು ಫ್ರಂಚರ್ ಸ್ಪರ್ಧೆಯೂ ಹೆಚ್ಚಿ, ಪೋರ್ಚುಗೀಸರ ಭಾರತದಲ್ಲಿನ ವ್ಯಾಪಾರ ಕುಂದಿತು.

1598ರಲ್ಲಿ ಗೇರೊಸೊಪ್ಪೆಯ ರಾಣಿ ಅವರಿಗೆ ಕಪ್ಪ ನೀಡಲು ನೀರಾಕರಿಸಿದಳು. 1606ರಲ್ಲಿ ಗೇರುಸೊಪ್ಪೆ ಕೆಳದಿಯಿಂದ ನಾಶವಾಗಿ ಕಾರವಾರ ಕೆಳದಿಯರ ವಶವಾಯಿತು.

1618ರಲ್ಲಿ ಪೋರ್ಚುಗೀಸರನ್ನು ಕೆಳದಿ ವೆಂಕಟಪ್ಪ ನಾಯಕನು ಮಂಗಳೂರಲ್ಲಿ ಸೋಲಿಸಿ, ಅವರ ಕೋಟೆಯ ಹೊರತು ಪಟ್ಟಣದ ಬಹುಭಾಗಗಳನ್ನು ಗೆದ್ದುಕೊಂಡ.14 ಕನ್ನಡ ಕರಾವಳಿಯಲ್ಲಿ ಪೋರ್ಚುಗೀಸರ ನೌಕಾಪಡೆಗೆ (ಕೆಳದಿ ದೊರೆಗಳ ಕೈಯಲ್ಲಿ) ಆದ ಭಾರಿ ಸೋಲೊಂದನ್ನು (1630) ಇಂಗ್ಲಿಷ್ ದಾಖಲೆಗಳು ವರದಿಮಾಡಿವೆ.15 ಮುಂದೆ 1633ರಲ್ಲಿ ಪೋರ್ಚುಗೀಸರಿಗೂ ಕೆಳದಿನಾಯಕರಿಗೂ ಆದ ಒಂದು ಒಪ್ಪಂದದಂತೆ ಗಂಗೊಳ್ಳಿ (ಕ್ಯಾಂಬೊಲಿಂ)ಯನ್ನು ಪೋರ್ಚುಗೀಸರಿಗೆ ಒಪ್ಪಿಸಲು ನಾಯಕರು ಸಮ್ಮತಿಸಿದರು.16

ಕೆಳದಿಯ ಅಪ್ರತಿಮ ದೊರೆ ಶಿವಪ್ಪನಾಯಕನು ಮಾತ್ರ 1652ರ ಹೊತ್ತಿಗೆ ಪೋರ್ಚುಗೀಸರನ್ನು ಕನ್ನಡ ಕರಾವಳಿಯಿಂದ ಪೂರ್ತಿಯಾಗಿ ಓಡಿಸಿಬಿಟ್ಟು, ಪಶ್ಚಿಮ ಕರಾವಳಿಯ ಮೇಲೆ ತನ್ನ ಪೂರ್ತಿ ಸ್ವಾಮ್ಯವನ್ನು ಸ್ಥಾಪಿಸಿದನೆಂದು 'ಕೆಳದಿನೃಪವಿಜಯಂ' ಹಾಗೂ ಇತರ ಮೂಲಗಳು ತಿಳಿಸುತ್ತವೆ. 1652ರಲ್ಲಿ ಮಂಗಳೂರನ್ನು ಕಳೆದುಕೊಂಡು ಪೋರ್ಚುಗೀಸರು ಅದರ ಜೊತೆ ಕನ್ನಡ ಕರಾವಳಿಯಲ್ಲಿನ ಎಲ್ಲ ನೆಲೆಗಳನ್ನೂ ಕಳೆದುಕೊಂಡರೆಂದು ಡಾ॥ ಮೊರೇಸ್ ಹೇಳಿದ್ದಾರೆ.17

ಹೀಗಿದ್ದರೂ ಸುಮಾರು 17ನೆಯ ಶತಮಾನದ ಕೊನೆಯವರೆಗೆ ಮಂಗಳೂರಿನ ಒಳನಾಡಿನ ಅಡ್ಯಾರ್‌ನಲ್ಲಿ (ಫರಂಗಿಪೇಟೆ) ಪೋರ್ಚುಗೀಸರು ಮಳಿಗೆಯೊಂದನ್ನು ಇಟ್ಟುಕೊಂಡಿದ್ದರೆಂದು ಶ್ರೀಗೋವಿಂದ ಪೈ ಹೇಳಿದ್ದಾರೆ. (ತೆಂಕನಾಡು ಪು.30). ಆದರೆ ಅವರ ರಾಜಕೀಯ ಅಧಿಕಾರ ಮಾತ್ರ ಕರ್ನಾಟಕದಲ್ಲಿ ಉಳಿಯಲಿಲ್ಲ.

ಹೈದರ್‌ನ ಕಾಲದಲ್ಲಿ ಪಿಕ್ಟೊತೊ ಎಂಬ ಒಬ್ಬ ಪೋರ್ಚುಗೀಸ್ ಸಾಹಸಿಗ ತನ್ನ ಕೆಲ ಪೋರ್ಚುಗೀಸ್ ಸಹಚರರೊಂದಿಗೆ ಮೈಸೂರಿನ ಸೇನೆಯಲ್ಲಿ ಸೇವೆಸಲ್ಲಿಸುತ್ತಿದ್ದ. 1764ರಲ್ಲಿ ಹೈದರ್ ಸೋದೆಯನ್ನು ಗೆದ್ದಾಗ ಸೋದೆಯ ದೊರೆ ಸದಾಶಿವನಾಯಕ

ಪೋರ್ಚುಗೀಸರ ಆಸ್ರಯ ಪಡೆದು ಪೋಂಡಾದಲ್ಲಿ ನೆಲಸಿದ. ಪೋರ್ಚುಗೀಸರ ಸಂಪರ್ಕದ ಪರಿಣಾಮ ಮಾತ್ರ ಕರ್ನಾಟಕದ ಮೇಲೆ ಅಚ್ಚಳಿಯದಂತೆ ಉಳಿದಿದೆ. ಕರ್ನಾಟಕಕ್ಕೆ ಕ್ರಿಸ್ತ ಧರ್ಮವನ್ನು ಜನಪ್ರಿಯಗೊಳಿಸಿದವರು ಪೋರ್ಚುಗೀಸರು. ಮಂಗಳೂರು, ಹೊನ್ನಾವರ, ಕುಂದಾಪುರಗಳಲ್ಲಿನ ತಮ್ಮ ಕೋಟೆಗಳ ಜೊತೆ ಅವರು ಇಗರ್ಜಿಗಳನ್ನು ಕಟ್ಟಿದರು. ಮತಾಂತರವನ್ನೂ ಆರಂಭಿಸಿದರು. ಕರಾವಳಿಯ ಜನಕ್ಕೆ ಕೃಷಿ, ಪಶುಸಂಗೋಪನಗಳ ಸುಧಾರಿತ ವಿಧಾನಗಳನ್ನು ಕಲಿಸಿದರು. ವಿಲಾಯಿತಿ ಹಂದಿ, ಕುಕ್ಕಟಗಳ ತಳಿಗಳನ್ನು ಜನಪ್ರಿಯಗೊಳಿಸಿದರು. ಬಸಳೆ, ಪಪ್ಪಾಯಿ(ಫರಂಗಿಹಣ್ಣು), ಅನನಾಸು, ಬಟಾಟೆ, ತಂಬಾಕು, ಗೋಡಂಬಿ, ಮುಸುಕಿನ ಜೋಳಗಳನ್ನು ಭಾರತಕ್ಕೆ ತಂದವರು ಅವರೇ.

'ಸಾಬೂನು' 'ತಂಬಾಕು' 'ಮೇಜು' 'ಇಸ್ತ್ರಿ' 'ಕಾಡತೂಸು' 'ಲೀಲಾವು' ಮುಂತಾದ ಪೋರ್ಚುಗೀಸ್ ಶಬ್ದಗಳು ಇಂದಿಗೂ ಕನ್ನಡ ಭಾಷೆಯಲ್ಲಿವೆ. ಪೋರ್ಚುಗೀಸರು ಕಟ್ಟಿದ ಐಒಪ್ಯ ಶೈಲಿಯ ಕಟ್ಟಡಗಳು (ಚರ್ಚ್ ಇತ್ಯಾದಿ) ನಮ್ಮ ವಾಸ್ತು ಶಿಲ್ಪದ ಮೇಲೆ ಪ್ರಭಾವ ಬೀರಿವೆ. ಕರ್ನಾಟಕದ ಇತಿಹಾಸರಚನೆಗೆ ಪೋರ್ಚುಗೀಸ್ ಕಾಗದ ಪತ್ರಗಳು, ಗ್ರಂಥಗಳು ಅಮೂಲ್ಯ ಮೂಲಾಧಾರಗಳಾಗಿವೆ. ಕರ್ನಾಟಕದ ಗಡಿಯಲ್ಲಿದ್ದ ಪೋರ್ಚುಗೀಸರ ವಸಾಹತಾಗಿದ್ದ ಗೋವೆ ಕರ್ನಾಟಕದ ಜನಜೀವನ ಸಂಸ್ಕೃತಿಗಳ ಮೇಲೆ ತನ್ನದೇ ಆದ ಪ್ರಭಾವ ಬೀರಿದೆ.

1671 ರಲ್ಲಿ ತಮ್ಮ ವ್ಯಾಪಾರದಲ್ಲಿ ಇಳಿಮುಖ ಕಂಡ ಪೋರ್ಚುಗೀಸರಿಗೆ ಮತ್ತೆ ಹೊನ್ನಾವರದಲ್ಲಿ ಕೋಠಿ ಸ್ಥಾಪಿಸಲು ಸೋಮಶೇಕರನಾಯಕ ಅನುಮತಿಸಿದ. ಡಚ್ಚರಿಗೆ 1658ರಲ್ಲಿ ಶಿವಪ್ಪನಾಯಕ ಹೊನ್ನಾವರದಲ್ಲಿ ತಮ್ಮ ವ್ಯಾಪಾರಿ ನೆಲೆಯನ್ನು ತೆರೆಯಲು ಅನುಮತಿಸಿದರು ಆಂಗ್ಲರ, ಮರಾಠರ ಹಾಗೂ ಹೈದರನ ಏಳಿಗೆ ಅವರನ್ನು ಈ ಪ್ರದೇಶದಲ್ಲಿ ಪ್ರಭಲವಾಗಲು ಅವಕಾಶ ನೀಡಲಿಲ್ಲ. ಆದರೆ ಅರಬ್ಬರು, ಡಚ್ಚರು ಹಾಗು ಆಂಗ್ಲರ ಏಳಿಗೆ ಪೋರ್ಚುಗೀಸ ಅಧಿಕಾರಿಗಳ ಅಸಮರ್ಥತೆ ಪೋರ್ಚುಗೀಸರ ಅವನತಿಗೆ ಕಾರಣವಾಯಿತು.

ಅಡಿಟಿಪ್ಪಣಿಗಳು

1. Correia, G., Three Voyages of Gama, III P. 309; Danvers, C.F., Portuguese in India, P.81-82
2. Heras, H., Aravidu Dynasty, P.213-14
3. Faria y Sousa, Asia Portuguess, I, P. 304; Whiteway, R.S. The Rise of Portuguese Power in India, 138-140
4. Whiteway, P. 140; Danvers, I, 242-3
5. Sturrock, South Kanara Gazetteer, PP.68-69; Bombay Gazetteer, Kanara, II, P.114
6. Faria, II, P.109
7. Faria, II, 118-19
8. Bombay Gazetteer, Kanara, II, 115; quoting Subsidios, II, 255-57
9. Aravidu Dynasty, p.240
10. Faria, II, 435-8; Sewell, p.190
11. Danvers, I, p.547
12. Danvers, p.547
13. Greenlee, Voyages of Linschoten to East Indies, II, p.67
14. Faria, III, 326
15. Foster, W., The English Factories in India, 1630-36, p.98-99
16. K.D. Swaminathan: Nayakas of Ikkeri, p.76; quoting Pizes-e-Tratados, 1671, Folio, 17-19
17. ಲಿಂಗಣ್ಣ : ಕೆಳದಿನೃಪವಿಜಯಂ VII, 7, 8; Moraes, G., Mangalore, quoting Souza, Orienta Conquistrado, III, 19

❑

ವಿಜಯನಗರದ ಮಾತೃಸ್ಥಾನ ಹಿರೇಗುತ್ತಿಯ ಚಿಕ್ಕಗುತ್ತಿ

– ಗಣಪತಿ ಕೆರೆಮನೆ

ಭಾರತ ಸರ್ಕಾರವು ವಿಜಯನಗರ ಸಾಮ್ರಾಜ್ಯದ ಹಂಪೆಯನ್ನು ವಿಶ್ವಪರಂಪರೆಯ ಇತಿಹಾಸ ತಾಣಗಳ ಪಟ್ಟಿಗೆ ಸೇರಿಸಿದೆ. ಹೀಗಿದ್ದರೂ ವಿಜಯನಗರದ ಇತಿಹಾಸವನ್ನು ಬಹುಹಿಂದೆಯೇ ವಿಮರ್ಷೆ ಮಾಡಿದ ಇತಿಹಾಸಕಾರ ಪ್ರವಾಸಿಗ ನ್ಯೂಜಿನಿ ತನ್ನ ಡೈರಿಯಲ್ಲಿ ಬಹುಹಿಂದೆಯೇ ಪ್ರಶ್ನಿಸಿ ಹೇಳಿಕೆಕೊಟ್ಟಿದ್ದಾನೆ. ಕ್ರಿ.ಶ. 1336ರಲ್ಲಿ ಹರಿಹರ ಬುಕ್ಕಣ್ಣ ಯೋಧ ಪರಂಪರೆಯ ಕುಟುಂಬದವರು ಎಲ್ಲಿಂದ ಬಂದರು? ಆ ಸ್ಥಳವು ವಿಜಯ ನಗರಕ್ಕೆ ಮಾತೃಸ್ಥಾನವಾಗಿರುತ್ತದೆ ಎಂದು ಹೇಳಿದ್ದಾನೆ.

ಐತಿಹಾಸಿಕವಾಗಿ ನ್ಯೂಜಿನಿ ಕೇಳಿದ ಪ್ರಶ್ನೆಯು ಬಹು ಸಮಂಜಸ ಪ್ರಶ್ನೆಯಾಗಿದ್ದರಿಂದ ನಿಖರವಾದ ಉತ್ತರವನ್ನು ಹರಿಹರ ಅರಮನೆಯನ್ನು ಪ್ರತಾಪದೇವರಾಯ ದಾನ ಮಾಡಿದ ದಾನಶಾಸನಾಧಾರವಾಗಿ ಐತಿಹಾಸಿಕ ಹಿನ್ನೆಲೆಯೊಂದಿಗೆ ಅಧೀಕೃತವಾಗಿ ಕೊಡಬೇಕಾಗಿದೆ. ಯಾಕೆಂದರೆ, ಹಂಪೆಯು ವಿಶ್ವಪರಂಪರೆಗೆ ಸೇರಿಸಲಾದ ಅಧಿಕೃತ ಸ್ಥಳವಾಗಿದೆ. ಇತಿಹಾಸಕಾರ ನ್ಯೂಜಿನಿ ಪ್ರಶ್ನೆಗೆ ಉತ್ತರ ಸಿಗಬೇಕಾದಂತ ಇಂಥ ಐತಿಹಾಸಿಕ ಸ್ಥಳಗಳು ಸರ್ಕಾರದ ಅಥವಾ ಖಾಸಗಿ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ರಾಜಕೀಯ ದುರುದ್ದೇಶದಿಂದ ಕಣ್ಮರೆಯಾಗುವ ಸಾಧ್ಯತೆಗಳಿದ್ದುದರಿಂದ ಮೊದಲು ಉತ್ತರ ಕಂಡುಕೊಳ್ಳಬೇಕಾಗಿದೆ. ಯಾಕೆಂದರೆ ಇಂಥ ಬಹುಮುಖ್ಯ ಇತಿಹಾಸ ಶಾಸನ ಕುರುಹುಗಳು ಕಣ್ಮರೆಯಾಗುವುದರಿಂದ ನೈಜ ಇತಿಹಾಸವನ್ನು ಮುಂದೊಮ್ಮೆ ತಾರ್ಕಿಕವಾದದಿಂದಾಗಿ ಅಡ್ಡದಾರಿ ಹಿಡಿಯಬಹುದಾಗಿದೆ. ಹೀಗಿದ್ದರಿಂದ ವಿಜಯನಗರದ ಮಾತೃಸ್ಥಾನವನ್ನು ಹಿರೇಗುತ್ತಿಯೆಂದು ಗುರುತಿಸಿ ದಾಖಲಿಸುವುದು ತೀರ ಅವಶ್ಯಕವಾಗಿದೆ. ಮತ್ತು ಐತಿಹಾಸಿಕ ಕುರುಹು ಮತ್ತು ಶಾಸನಗಳನ್ನು ರಕ್ಷಿಸಬೇಕಾಗಿದೆ.

ಈ ಇತಿಹಾಸ ಪುಟವನ್ನು ಮಂಡಿಸುತ್ತಿರುವ ನಾನು ಇದೇ ಹಳೆಯ 'ನಾಡುಗುತ್ತಿ–12' ಅರಮನೆ ಹಿರೇಗುತ್ತಿಯಲ್ಲಿ ಪ್ರೌಢಶಾಲೆ ಕಲಿಯುತ್ತಿದ್ದ ಕಾಲದಲ್ಲಿ ನನ್ನ ಪ್ರೌಢಶಾಲಾ ಕಟ್ಟಡಕ್ಕೆ ಹೊಂದಿ ಸ್ಥಾಪಿತವಾದಂತ ಈ ಶಿಲಾ ಶಾಸನವನ್ನು ಬಹು ಹಿಂದೊಮ್ಮೆ ನಿಲ್ಲಿಸಿರುವುದನ್ನು ಪ್ರತಿದಿನ ನಾವು ವಿದ್ಯಾರ್ಥಿಗಳು ನೋಡುತ್ತಿದ್ದು ಅದರಲ್ಲಿರುವ ಹಳೆಗನ್ನಡದ ಕೆಲವು ಅಕ್ಷರಗಳನ್ನು ಹುಡುಕಿ–ಹುಡುಕಿ ಸೇರಿಸಿಕೊಂಡು ಕೆಲ ಶಬ್ಧಗಳನ್ನು ಓದುತ್ತಿದ್ದೆವು. ಅದರಲ್ಲಿ ವಿಜಯನಗರ, ದೇವರಾಯ, ರಾಮಚಂದ್ರ ಇಂಥ ಶಬ್ದಗಳನ್ನು ಓದುತ್ತಿದ್ದೆವು. ಅದರಂತೆ ಇಲ್ಲಿರುವ ಇನ್ನೂ ಕೆಲವು ಶಾಸನಗಳಲ್ಲಿ ಐದಾರು ಸಾಲುಗಳು ಯುದ್ಧದಲ್ಲಿ ನಿರತ ಸನ್ನಿವೇಶದ ಉಬ್ಬುಶಿಲ್ಪದ ಗೊಂಬೆಗಳಿದ್ದವು. ಕೆಲವು ಶಾಸನಗಳು ಸಜೀವ ಸತಿಯಾದವುಗಳೆಂದು, ಕೆಲವು ಚಿತೆಯೇರಿ ಸತಿಯಾದ ಶಾಸನಗಳೆನ್ನುತ್ತಿದ್ದುದನ್ನು ಕೇಳಿದ್ದೇನೆ.

ನನ್ನ ಶಿಕ್ಷಕ ವೃತ್ತಿಯ ನಿವೃತ್ತಿ ನಂತರ ವಿಜಯನಗರ ಪ್ರತಾಪ ದೇವರಾಯನ ಈ ಶಾಸನವನ್ನು ಹಂಪೆ ವಿ.ವಿ.ಯಲ್ಲಿ ಓದಿಸಿದ್ದೇನೆ. ಮತ್ತು ಡಾ॥ ಡಿ. ಎಸ್. ಶೆಟ್ಟಿಯವರಿಂದ ಓದಿಸಿದ್ದೇನೆ.

ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಮುಚ್ಛಯ ಮತ್ತು ಇಲ್ಲಿಯ ಐತಿಹಾಸಿಕ ಕುರುಹುಗಳು :

ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸಮುಚ್ಛಯದಲ್ಲಿ ಮಹಾಲಿಂಗೇಶ್ವರ ದೇವಾಲಯ, ಶ್ರೀ ಬ್ರಹ್ಮಜಟಕ ಜಿನಲಾಯ/ದೇವಾಲಯ, ಭೋಜರಾಜ ಅಸಂಖಿತವರ್ಮನ ಕಟ್ಟಿಸಿದ ಬೌದ್ಧ ಭಿಕ್ಷುಗಳ ಧರ್ಮಶಾಲೆ ಇವು 1500 ವರ್ಷ ಪುರಾತನ ನಿರ್ಮಾಣಗಳಾಗಿ ಇಂದಿಗೂ ಉಳಿದುಕೊಂಡಿವೆ. ಈ ಸ್ಥಳದ ಸ್ಥಳನಾಮ ಬಸ್ತಿಕೇರಿ.

ಹಿರೇಗುತ್ತಿ ಶ್ರೀ ಮಹಾಲಿಂಗೇಶ್ವರ ದೇವಾಲಯದ ಆವರಣದಲ್ಲಿ –

1. ಹರಿಹರನ ಪ್ರಿಯಪುತ್ರ ಸಾಮ್ರಾಟ ಪ್ರತಾಪದೇವರಾಯನು ಶಕ 1333 ವಿಕೃತಿ ಸಂವತ್ಸರದಲ್ಲಿ ನಿಲ್ಲಿಸಿರುವ ಶಿಲಾಶಾಸನ ಇದೆ.
2. ಮತ್ತು ಸೋದೆಯ ರಾಜ ಅರಸಪ್ಪನ 9 ರಾಣಿಯವರು ಸತಿಯಾದ ಸಂಸ್ಕಾರದ ಸಚಿತ್ರ ಶಿಲೆ ಇದೆ.
3. ಈ ದೇವಸ್ಥಾನದ ಮೊಕ್ತೇಸರರ ಮನೆಯಲ್ಲಿ ನಾಲ್ಕನೇಯ ಶತಮಾನದ ಕಾಲದ ಭೋಜರ ತಾಮ್ರಪತ್ರ ಶಾಸನವಿದೆ.
4. ಸ್ವಲ್ಪ ಅಂತರದಲ್ಲಿ ಬಸ್ತಿಕೇರಿಯಲ್ಲಿ ಭೋಜರು ನಿರ್ಮಿಸಿದ ಬೌದ್ಧ ಧರ್ಮಶಾಲೆ ಇದೆ.
5. ಶ್ರೀ ಆದಿನಾಥ ಕ್ಷೇತ್ರದಲ್ಲಿ ಪುರಾತನ ಬ್ರಹ್ಮ ಜಿನಾಲಯವಿದೆ.
6. ಚಿಕ್ಕಗುತ್ತಿಯಲ್ಲಿ ಶ್ರೀ ಆದಿನಾಥರ ಶಿಥಿಲ ಬಸದಿ ಇದೆ. ಮತ್ತು ಆದಿನಾಥ ಮೂರ್ತಿ ಇದೆ.
7. ಸಾಮ್ರಾಟ ಬುಕ್ಕನ ಮಹಾರಾಣಿ ಬೊಮ್ಮದೇವಿನಾಯಿಕೆ ಸಲ್ಲೇಖನ ಶಾಸನ ಹಾಗೂ ಮೂರು ಇತರರ ಸಲ್ಲೇಖನ ಶಾಸನಗಳಿವೆ.
8. ಸೋದೆಯ ಮುನಿಯೊಬ್ಬರ ಕ್ರಿ.ಶ. 1032ರ ಸಲ್ಲೇಖನ ಶಾಸನವಿದೆ.
9. ಸಮುದ್ರದ ನೀರು (ಖಜಾನ ಭೂಮಿ) ಗಝನಿ ಹೊಲಗಳಿಗೆ ನುಗ್ಗದಂತೆ ಭೋಜ ಅರಸರು ಕಟ್ಟಿಸಿದ ಮಣ್ಣಿನ ಕಟ್ಟಿನ ಮೇಲೆ (ಭೋಜರು) ಬೊಬ್ರು ದೇವಸ್ಥಾನವಿದೆ.
10. ಭೋಜರ ಮೂರು ತಾಮಪತ್ರ ಶಾಸನದಲ್ಲಿ ಉಲ್ಲೇಖಿತವಾದ ಭೋಜರ ಶಿವಪುರ ರಾಜಧಾನಿ 3 ಕಿ.ಮೀ. ಅಂತರದಲ್ಲಿದೆ.
11. ಭೋಜರು ಬೌದ್ಧ ಧರ್ಮಶಾಲೆಗೆ ದತ್ತಿ ಬಿಟ್ಟ ಗಝನಿಯ ಹೆಚ್ಚು ಭಾಗ ಹಿರೇಗುತ್ತಿಯಲ್ಲಿದೆ.

ಈ ಎಲ್ಲಾ ಐತಿಹಾಸಿಕ ಕುರುಹುಗಳು ಹಿರೇಗುತ್ತಿಯಲ್ಲಿ ಇವೆ.

ವಿಜಯನಗರ ವೀರಪ್ರತಾಪ ದೇವರಾಯನ ಶಕ 1333ರ ಶಾಸನ

ಸ್ಥಳ : ಮಹಾಲಿಂಗ ದೇವಾಲಯ ಆವರಣದಲ್ಲಿ ನಿಲ್ಲಿಸಿದ ಕಲ್ಲು, ಹಿರೇಗುತ್ತಿ, ತಾ॥ ಕುಮಟಾ, ಉತ್ತರ ಕನ್ನಡ ಜಿಲ್ಲೆ.

ತೇದಿ : ಶಕ 1333, ವಿಕೃತಿ ಸಂವತ್ಸರದ ವೈಶಾಖ ಶುದ್ಧ 10, ಸೋಮವಾರ 1410 ಎಪ್ರಿಲ್ ಸೋಮವಾರಕ್ಕೆ ಸರಿ ಹೊಂದುತ್ತದೆ.

ಅರಸ : ವಿಜಯನಗರ ವೀರಪ್ರತಾಪ ದೇವರಾಯ.

ಲಿಪಿ ಮತ್ತು ಭಾಷೆ : ಕನ್ನಡ

ವರದಿ : ಡಾ. ಎಸ್. ಡಿ. ಶೆಟ್ಟಿ, ನಿರ್ದೇಶಕರು, ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ, 20–5–2012 ರಂದು ಶಾಸನದ ಪಡಿಯಚ್ಚು ತೆಗೆದು ಶಾಸನದ ಪಠ್ಯವನ್ನು ತಯಾರಿಸಲಾಗಿದೆ.

ಶಾಸನ ಪಾಠ

1. ಶ್ರೀ ಗಣಾಧಿಪತಯೇ ನಮಃ ನಮಃಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇತ್ಯಯಿ
2. ಲೋಕ್ಯನಗರಾಂಭ ಮೂಲಸ್ತಂಭಾಯ ಶಂಭವೇ ಶ್ರೀ ಮನ್ಮಹಾರಾಜಾಧಿರಾ
3. ಜ ರಾಜ ಪರಮೇಶ್ವರ ಶ್ರೀ ವೀರಪ್ರತಾಪ ದೇವರಾಯ ಮಹಾರಾಯರು ವಿಜಯನಗರಿಯ ಸಾಮ್ರಾಜ್ಯಾಭ್ಯುದಯದಲು
4. ಶ್ರೀ ಮನ್ಮಹಾವ್ರಧಾನಂ ಯಿಚಪ್ಪೊಡೆಯರು ಹೊಂನಾವರದ ರಾಜಧಾನಿಯಲುಯಿದ್ದು ಹಯಿವೆ
5. ತುಳು ಕೊಂಕಣ ರಾಜ್ಯಂಗಳಂ ಪ್ರತಿಪಾಲಿಸುತಂ ವಿದಂದಿನ ಷಕ ವರುಷ 13.3.33ನೆಯ ವಿಕೃತ ಸಂ
6. ವತ್ಸವರದ ವೈಶಾಖ ಶು. 10 ಸೋಮವಾರದಲು ಶ್ರೀಮತು ಯಿಚಪ್ಪೊಡೆಯರು ಆನಂದಾಳುಪರು ತಾ
7. ದೀಕ್ಷಿತರಹ ವಿದ್ಯಾತಿರತ ಶ್ರೀಪಾದಂಗಳ ಶಿಷ್ಯರು ನಾಗೇಂದ್ರತೀರ್ಥ ಶ್ರೀಪಾದಂಗಳಿಗೆ ಕೊಟ್ಟ ಶಾಸನ ಪತ್ರ
8. ದ ಕ್ರಮವೆಂತೆಂದರೆ ರಾಯರ ನಿರೂಪದಿಂದ ನಿಮಗೆ ಎಕ್ಸಾ [ಏಕ] ಸ್ವಾಸ್ತಿಗೆ ಕೊಟ್ಟುದು ಸಯಗನ ಹಳಿಯ
9. ನೂ ಸಾಣಿಯವೊಳಗಣ ಬಂನಣಿ [ಸಹಿತಾ] ನಾಡಗುತ್ತಿಯ 12ರ ವೊಳಗೆ ಉಳ್ಳ ಅರಮನೆಗೆ ನಡದು ಬಹನಯ
10. ...ರದತನ ಹರವರಿ 1ಕ್ಕಂ ಪ್ರಾಶು ಕುಳ ಭತ್ತ ಮುಡೆ ಆಯಿವತ್ತ ನಾಲ್ಕು ಮುಡೆ ಸಿರೆನಿ ಸೆಟ್ಟಿಯ ಹರಿವರಿ 1ಕ್ಕಂ
11. ... ಕುಳಭತ್ತ ಮುಡೆ... ಉಭಯಂ ಹರಿವರಿ [ಅರವತ್ತಂ] ಪ್ರಾಕು ತುಳ ಭತ್ತ ಮುಡೆ ಅಯಿಶನಾ (?)
12. [ಇಂತು] ಅಕ್ಷರದಲು ಸಂಖ್ಯೆ[ಯ]ಂಬತ್ತನಾಲ್ಕು ಮುಡೆ ಬತ್ತವನೂ ವಿರೋಧೀ ಸಂವತ್ಸರದ ಕಾರ್ತಿಕ
13. ಸು. 1. ಆರಭ್ಯವಾಗಿ ಅವರ ಕುಳ ಹರಿವರಿಯ ಸ್ಥಳವನು ಅದಕ್ಕೆ ಸಂದ ಚತುಃಸೀಮೆಯಿಂದ ವೊಳಗುಳ
14. ...ಅದಕ್ಕೆ ಬಂದ ಹಿರಿಯಗುತ್ತಿ ಚಿಕ್ಕಗುತ್ತಿಯ ಬಾಳ ಸ್ಥಳಮನೆ ಮುಂತಾ ಉಗಳು ಧಾರೆ ನಿಕ್ಕಿ ಮುಕ್ಕಿ ಬೆಟ್ಟ
15. ಬೆದ ಹಿತ್ತಲು ಹಡಕಾಳು ... ಆಯ ಸ್ವಸ್ತಿ ಹರಿಯಹುಳು ತೇಜಸಾಂಮ್ಯ ... ಹರೆ
16. ... ಜಲ ಪಾಷಾಣ ಆಕ್ಷಣಿ ಆಗಾಮಿ ಸಿದ್ಧಸ್ವಾಮ್ಯ ಅಷ್ಟಭೋಗ ಸರ್ವ್ವಸ್ವಾಂಮ್ಯ ಸಹಿತವಾಗಿ
17. ... ಪುಂಣ್ಯ ಕಾಲದರಿ ವಿದಳ್ಥರಿ ಶ್ರೀಪಾದಂಗಳ ಶಿಷ್ಯ ಶ್ರೀ ನಾಗೇಂದ್ರತೀರ್ಥ ಶ್ರೀಪಾದಂ
18. [ಗಳಿಗೆ] ರಾಯರ ಸ್ವಹಸ್ತದಿಂ ಯಿಚಪ್ಪೊಡೆಯರು ಧಾರಾಪೂರ್ವಕ ಮೂಲವಾಗಿ ಆ ಚಂದ್ರಾರ್ಕಸ್ಥಾಯಿ ಆಗಿಕೊಟ್ಟರು
19. ನಾಗೇಂದ್ರತೀರ್ಥ ಶ್ರೀಪಾದಂಗಳು ತಂಮ ಸಿಷ್ಯ ಪ್ರಸಿಷ್ಯ ಪರಂಪರೆಯಾಗಿಯೆಂದಿಂಡುಕೊಂಡು ಸುಖದಿಯಾ
20. ಸ್ವದತ್ತಾಂ ಪರದತ್ತಾಂವಾಯೋ ಹರೇತ್ ವಸುಂಧರಾಂ ಸಷ್ಟಿವರುಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕ್ರಿಮಿಃ
21. ದಾನ ಪಾಲನಯೋರ್ಮ್ಮಧ್ಯೇ ದಾನ ಸ್ರೇಯೋನು ಪಾಲನಂ ದಾನಾತುಸ್ವರ್ಗ್ಗಮ ವಾಪ್ನೋತಿ ಪಬಾಲನಾದುಚ್ಯುತ ಪದಂ
22. ಸಾಮಾನ್ಯೋಯಂ ಧರ್ಮಸೇತುರ್ನ್ಯಪಾಣಾಂ ಕಾಲೇ ಕಾಲೇ ಪಾಲನಿಯೋಭವದ್ವಿಃ ಸರ್ವ
23. ನೇತಾನ್ ಭಾವಿನಃ ಪಾರ್ಥ್ಥಿವೇಂದ್ರಾ ಭೂಯೋಭೂಯೋಯಾಚತೇ ರಾಮಚಂದ್ರಃ ಆದಿತ್ಯ
24. ಚಂದ್ರಾವನಿಲೋನಲ ಉತ್ಯೋದ್ಯೌ ಉರ್ಭೂಮಿರಾಪೋ ಹ್ರದಯಂ ಯಮಶ್ಚ ಅಹಶ್ಚ
25. ರಾತ್ರೇಚ ಉಭಯಚ ಸಂಧ್ಯೇ ಧರ್ಮಶ್ಚ ಜಾನಾತಿ ನರಶ್ಚ ಉತ್ತಂ

ಈ ಶಾಸನ ಪಾಠ ಅರಮನೆಗೆ ಹೊಂದಿ ನಿಲ್ಲಿಸಿದ ಶಾಸನಪಾಠದಿಂದ ಶಾಸನಾಧಾರವಾಗಿ ನ್ಯೂಜಿನಿ ಪ್ರಶ್ನೆಗೆ ಹಿರೇಗುತ್ತಿಯಿಂದ ಬಂದರು ಎನ್ನುವ ಉತ್ತರ ಸಿಗುತ್ತದೆ.

ಹರಿಹರ ಬುಕ್ಕರ ಮೊಮ್ಮಗ ಕಂಪಣ್ಣನ ಮಗ ಪ್ರತಾಪದೇವರಾಯನು ವಿಜಯನಗರ ಸಾಮ್ರಾಟನಾದ ಕಾಲಕ್ಕೆ ಸುಮಾರು 75 ವರ್ಷಗಳಿಂದ ಬಳಕೆಯಾಗುತ್ತಿದ್ದಂತಹ ಹಳೆಯದಾಗುತ್ತಿರುವ ಚಿಕ್ಕಗುತ್ತಿಯಲ್ಲಿರುವ ಬಾಳ್ವೆ ಮನೆಯನ್ನು ಮತ್ತು 'ನಾಡಗುತ್ತಿ 12' ಅರಮನೆಯ ಕಟ್ಟಡವನ್ನು ಕ್ರಿ. ಶ. 1410ರಲ್ಲಿ ಹಿರೇಗುತ್ತಿಯ ಮಠದ ಗುರುಗಳಾದ ಶ್ರೀ ವಿದ್ಯಾತೀರ್ಥರು ಮತ್ತು ಶ್ರೀ ನಾಗೇಂದ್ರತೀರ್ಥ ಗುರುಗಳಿಗೆ ದಾನ ಮಾಡುತ್ತಾನೆ ಎಂಬುದು ಅರಮನೆಗೆ ಹೊಂದಿಕೊಂಡು ಸ್ವ-ಹಸ್ತದಿಂದ ನೀರೆರೆದು ದಾನ ಮಾಡಿ ನಿಲ್ಲಿಸಿದ ಶಾಸನದಿಂದ ತಿಳಿದುಬರುತ್ತಿದೆ. ಪ್ರತಾಪ ದೇವರಾಯನು ಅರಮನೆ ಮತ್ತು ಬಾಳ್ವೆ ಮಾಡಿನ ಮನೆಯಲ್ಲಿ ದಾನ ಮಾಡಿದ ಕಾರ್ಯಕ್ಕೆ ಹೊನ್ನಾವರ ರಾಜ್ಯಾಧಿಕಾರಿ ಇಚ್ಚಪ್ಪ ಒಡೆಯನು ನೀರೆರೆದಿದ್ದನು. ವಿಜಯನಗರಕ್ಕೆ ಹರಿಹರ ಬುಕ್ಕ ಯೋಧ ಕುಟುಂಬದವರು ಎಲ್ಲಿಂದ ಬಂದರು? ಎನ್ನುವ ನ್ಯೂಜಿನಿ ಪ್ರಶ್ನೆಗೆ ಈ ಶಾಸನದಿಂದ ಉತ್ತರ ಸಿಗುತ್ತದೆ. ಹರಿಹರ ಬುಕ್ಕ ಕಂಪಣ್ಣ ಮುದ್ದಣ್ಣ ಮಾದಪ್ಪ ಚಿಕ್ಕಗುತ್ತಿಯವರು. ಯೋಧ ಕುಟುಂಬದವರು ಚಿಕ್ಕಗುತ್ತಿಯಲ್ಲಿ ವಾಸವಾಗಿದ್ದರು ಎಂಬುದನ್ನು ಈ ಶಾಸನ ಪಾಠದಲ್ಲಿ ನಿಖರವಾಗಿ ದಾಖಲಿಸಲಾಗಿದೆ. ಕ್ರಿ.ಶ. 1336ಕ್ಕೆ ಮೊದಲು ಅಂದರೆ ಆನೆಗುಂದಿಯಲ್ಲಿ ರಾಜ್ಯಸ್ಥಾಪನೆಗಿಂತ ಮೊದಲು 'ನಾಡುಗುತ್ತಿ 12' ಅರಮನೆ ರಾಜ್ಯವನ್ನು ಹರಿಹರ ಸಹೋದರರು ಹಿರೇಗುತ್ತಿಯಲ್ಲಿ ಆಳುತ್ತಿದ್ದರು. ಇದಕ್ಕೆ ಪೂರಕ ಗೆಜೆಟಿಯರ್ ದಾಖಲೆ ಇದೆ. ಇವರು ಹಿರೇಗುತ್ತಿಯಿಂದ ಆನೆಗುಂದಿ ರಾಜ್ಯದ ಮೇಲೆ ದಾಳಿ ಮಾಡಿ ಆನೆಗುಂದಿ ರಾಜ್ಯವನ್ನು ಗೆದ್ದು ಹಿರೇಗುತ್ತಿಯಿಂದ ಆನೆಗುಂದಿಗೆ ಹೋದರು. ಹರಿಹರ ಸಹೋದರರು ಈ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಾರ್ಕೂರು ರಾಜ್ಯವನ್ನು ಕೂಡಾ ಆಳುತ್ತಿದ್ದರೆಂಬುದು ಇತಿಹಾಸದಿಂದ ತಿಳಿದುಬರುತ್ತದೆ. ಹಿರೇಗುತ್ತಿ 'ನಾಡಗುತ್ತಿ 12' ಆಳಿದ ನಾಯಕ ಅರಸರು ಸೋಂದೆ ಬಾರ್ಕೂರನ್ನು ಆಳಿದ ನಾಯಕ ಅರಸರು ಮತ್ತು ತುಳುವ ಬಂಟರು ಕಾಶ್ಯಪ ಗೋತ್ರದವರು. ಅರಮನೆಯ ಗುರುಗಳು ವಿದ್ಯಾತೀರ್ಥರು ಮತ್ತು ನಾಗೇಂದ್ರತೀರ್ಥರಾಗಿದ್ದರು. ವಿದ್ಯಾತೀರ್ಥರು ಮತ್ತು ನಾಗೇಂದ್ರತೀರ್ಥರ ಶುಭಾಶೀರ್ವಾದದ ಹಾರೈಕೆಯಿಂದ ಆನೆಗುಂದಿಯ ಮೇಲೆ ದಾಳಿ ಮಾಡಿದಾಗ ಬಾರ್ಕೂರು ರಾಜ್ಯದ ಸೇನೆ, ಸೋದೆ ರಾಜ್ಯದ ಸೇನೆ ಸೇನಾಪತಿ ಮಂಗ ಮಹಾಪತಿ ಮತ್ತು ಹಿರೇಗುತ್ತಿಯ ಸೇನೆ ಪಾಲ್ಗೊಂಡಿದ್ದವು. ಆನೆಗುಂದಿ ರಾಜ್ಯವನ್ನು ತುಘಲಕ್‌ನ ಸೇನಾಪತಿ ಆಳ್ವಿಕೆ ಮಾಡುತ್ತಿದ್ದನು. ತುಘಲಕ್‌ನ ಸೇನಾಪತಿಯನ್ನು ಸೋಲಿಸಿದ ಹರಿಹರ ಬುಕ್ಕ ಸಹೋದರರು ಕ್ರಿ.ಶ. 1336ರಲ್ಲಿ ಆನೆಗುಂದಿಯಲ್ಲಿ ರಾಜ್ಯ ಸ್ಥಾಪನೆ ಮಾಡಿದರು.

ಹಿರೇಗುತ್ತಿಯ ಗುರುಗಳಾದ ವಿದ್ಯಾತೀರ್ಥರ ಹೆಸರಿನಲ್ಲಿ ವಿದ್ಯಾನಗರ ರಾಜ್ಯವೆಂದು ಆನೆಗುಂದಿ ರಾಜ್ಯಕ್ಕೆ ನಾಮಕರಣವಾಯಿತು. ಮುಂದೆ ಈ ರಾಜ್ಯವನ್ನು ಸಾಮ್ರಾಟ್ ಬುಕ್ಕನ ಆಳ್ವಿಕೆಯಲ್ಲಿ ವಿಜಯನಗರವೆಂದು ಪುನಃ ನಾಮಕರಣ ಮಾಡಿದರು. ಅಸಂಕಿತವರ್ಮನ್ ಭೋಜ ಮಹಾರಾಜನ ಆಳ್ವಿಕೆ Hiregutti Plates...

ಹರಿಹರ ಕುಟುಂಬದ ಬಾಳ್ವೆ ಮನೆ ಪ್ರದೇಶ ಚಿಕ್ಕಗುತ್ತಿಗೆ ಐತಿಹಾಸಿಕವಾಗಿ ಕ್ರಿ.ಪೂ.ದಿಂದಲೇ 'ಸಯ್ಯಾಪುತ'ವೆಂದು ಹೆಸರಿದೆ. ಚಿಕ್ಕಗುತ್ತಿಯಲ್ಲಿರುವ ಐತಿಹಾಸಿಕ ಜಿನಾಲಯದ ಆದಿನಾಥ ಮೂರ್ತಿಯ ಪೀಠದ ಮೇಲೆ ಸಯ್ಯಾಪುತವೆಂದು ಶಾಸನವನ್ನು ಕೊರೆಯಲಾಗಿದೆ.

ಸಲ್ಲೇಖನ ಫಲಕ 1 –

1. ಶ್ರೀಮತು ಸಯ್ಯಾಪುತದೊಳು ಚಿಕ್ಕಸೆಟ್ಟಿಯರುಂ ಸುಪುತ್ರ
2. ಬಂಮ್ಮಿಸೆಟ್ಟಿಯವರು ಮುಖ್ಯವಾಗಿ ಸದುಸನಗರಂಗಳ (?)
3. ಶ್ರೀ ಮೂಲ ಸಂಘ ಕಾನೂಗ್ಗರ್ಣದಯಾದಿನಾಥ ಸ್ವಾಮಿ
4. ಯ ಪ್ರತುಮೆಯಂ ಮಾಡಿಸಿ ಕೃತಾರ್ತರಾದರು ಮಂಗಳಮ[ಹಾ]
5. ಶ್ರೀ ಶ್ರೀ ಶ್ರೀ

ಸಲ್ಲೇಖನ ಫಲಕ 2 –

ಸಕಲಚಂದ್ರ ಸಿದ್ಧಾಂತಿ ದೇವರ ಗುಡ್ಡಿ ಬೊಮ್ಮದೇ(ವಿ) ನಾಯಕತಿ ಸ್ವರ್ಗಸ್ಥವಾದಳು.

ಸಲ್ಲೇಖನ ಫಲಕ 3 –

ಈಶ್ವರ ಸಂವತ್ಸರದ ಫಾಲ್ಗುಣ ಮಾಸದ ಶುಕ್ಲ ಪಕ್ಷ ಸಪ್ತಮಿ, ಸೋಮವಾರದಂದು ಸೋದೆಯ ಮುಡುಪಿ ಸ್ವರ್ಗಸ್ಥನಾದ ಮಹಾ ಶ್ರೀ ಶ್ರೀ (ಕ್ರಿ. ಶ. 1032)

ಈ ಶಿಲಾಲೇಖದ ಲಿಖಿತವು ಈ ಸ್ಥಳವನ್ನು ಅಶೋಕ ಚಕ್ರವರ್ತಿಯ ಕಾಲದ ಕ್ರಿ.ಪೂ. 3ನೇ ಶತಮಾನದಲ್ಲಿ ಈ ಪ್ರದೇಶಕ್ಕೆ ಸಯ್ಯಾಪುತವೆಂದು ಕರೆಯುತ್ತಿದ್ದರೆಂಬ ಅಭಿಪ್ರಾಯವಿದೆಯೆಂಬುದನ್ನು ಒಪ್ಪಿಕೊಳ್ಳುತ್ತದೆ. ಈ ಹೆಸರು ಕ್ರಿಸ್ತಪೂರ್ವ 3ನೇ ಶತಮಾನದ ಅಶೋಕನ ಪ್ರಾಕೃತ ಶಾಸನದಲ್ಲಿ ಬಂದಿದ್ದು, ಖ್ಯಾತ ಸಂಶೋಧಕರಾದ ಡಿ.ಸಿ. ಸರ್ಕಾರ್, ಸಾಲೆತ್ತೂರ, ವಿನ್ಸೆಂಟ್‌ಸ್ಮಿತ್, ಗೋವಿಂದ ಪೈ ಮುಂತಾದ ವಿದ್ವಾಂಸರು ಈ ಹೆಸರಿನ ಬಗ್ಗೆ ಸಾಕಷ್ಟು ಚರ್ಚೆಯನ್ನು ನಡೆಸಿದ್ದಾರೆ. ಗೋವಿಂದ ಪೈಗಳಂತೂ ಇದರ ಬಗ್ಗೆ ವಿಶೇಷವಾಗಿ ಅಧ್ಯಯನ ನಡೆಸಿ 'ಸತಿಯ ಪುತ್ರ'ವೆಂದರೆ ತುಳುನಾಡಿನ ಗಡಿಯಲ್ಲಿರುವ ಪ್ರದೇಶವೆಂದು ತಿಳಿಸಿದ್ದಾರೆ. ಈ ಆಧಾರದಿಂದ ಹೇಳುವುದಾದರೆ, ಹಿಂದಿನ ತುಳುನಾಡಿನ ಗಡಿಯು ಅಂಕೋಲಾದವರೆಗೂ ವ್ಯಾಪಿಸಿತ್ತೆಂದು ಹೇಳಬಹುದು. ಈ ಶಾಸನದ ಆಧಾರದ ಮೇಲೆ ಕ್ರಿ.ಶ. ಸು. 10–11ನೇ ಶತಮಾನದವರೆಗೂ, ಸತಿಯಪುತ್ರದ ಹೆಸರು ಅಸ್ತಿತ್ವದಲ್ಲಿತ್ತೆಂದು ಹೇಳಬಹುದು. ಈ ಕಾಲದಲ್ಲಿ ಹಿರೇಗುತ್ತಿ ಮತ್ತು ಚಿಕ್ಕಗುತ್ತಿಯು ಜೈನಧರ್ಮೀಯ ಆರಾಧಕರ ಮತ್ತು ನಾಯಕ ಯೋಧರ ನೆಲೆಯಾಗಿದ್ದೆಂದು ಹೇಳಬಹುದಾಗಿದೆ.

ಇಲ್ಲಿಯ ಆದಿನಾಥ ಮೂರ್ತಿಯ ಪೀಠದ ಸುತ್ತಲೂ ಅಲ್ಲಲ್ಲಿ ಜೈನಧರ್ಮೀಯರು ಸಲ್ಲೇಖನ ಮರಣ ವ್ರತ ಆಚರಿಸಿದ್ದರ ನಿಷದಿ ಫಲಕಗಳಿವೆ. ಇದರಿಂದ ಚಿಕ್ಕಗುತ್ತಿಯು ಜೈನರಿಗೆ ಜೈನಧರ್ಮವನ್ನು ಅನುಸರಿಸಿದ ನಾಡವರು, ಬಂಟರು, ತುಳುವ ಶೆಟ್ಟರು ಜನಗಳಿಗೆ ದೈವಾರಾಧನೆಯ ಯಾತ್ರಾಸ್ಥಳವಾಗಿತ್ತೆಂದು ಹೇಳಬಹುದಾಗಿದೆ. ಯಾಕೆಂದರೆ ಮುಖ್ಯವಾಗಿ ಇಲ್ಲಿ ಆದಿನಾಥ ಸ್ವಾಮಿಯ ಮೂರ್ತಿ ನಿಲ್ಲಿಸಿದವನು ಶೆಟ್ಟಿಯಾಗಿದ್ದಾನೆ. ಅದಲ್ಲದೇ ಕೆನರಾ ಗೆಜೆಟಿಯರ್‌ದಲ್ಲಿ ದಾಖಲಿಸಿದ ಕದಂಬ ರವಿವರ್ಮನ ಹೆಂಡತಿ ಮಲ್ಲಿಗೆ ತನ್ನ ಗಂಡನೊಂದಿಗೆ ಜೀವಂತ ಸಮಾಧಿಯಾದ ಕುರಿತು ಉಬ್ಬು ಶಿಲಾ ಶಾಸನವಿರುವುದನ್ನು ಖ್ಯಾತ ಸಂಶೋಧಕ ಡಾ॥ ವಿ. ಎಸ್. ಪಾಡಿಗಾರರವರು ನಾಡಗುತ್ತಿ ಅರಮನೆ ಆವಾರದಲ್ಲಿ ಕಂಡುಹಿಡಿದಿದ್ದಾರೆ ಮತ್ತು ಸೋಂದೆ ಅರಸಪ್ಪ ರಾಜನ ಸತಿಯರು ಚಿತೆಯೇರಿದ ಉಬ್ಬುಶಿಲ್ಪವೂ ನಾಡಗುತ್ತಿ ಅರಮನೆ ಆವಾರದಲ್ಲಿದೆ. ಈ ರೀತಿಯಲ್ಲಿ ಯೋಧ ಪರಂಪರೆ ಹಲವು ಐತಿಹಾಸಿಕ ಘಟನೆಗಳಿಗೆ ದಾಖಲೆ ಕೊಡುವ ಸ್ಥಳವಾಗಿ ನಾಡಗುತ್ತಿ ಅರಮನೆಯ ವಿಜಯ ನಗರದ ಮಾತೃಸ್ಥಾನವಾಗಿದೆ.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸೋಂದೆಯ ರಾಜಸದಾಶಿವ ನಾಯಕ ಎಲ್ಲರಿಗಿಂತ ಮೊದಲಿಗ

– ಗಣಪತಿ ಕೆರೆಮನೆ

ಭಾರತೀಯ ಸ್ವಾತಂತ್ರ್ಯ ಹೋರಾಟದ ಚರಿತ್ರೆಯು ಸ್ವಾತಂತ್ರ್ಯ ಹೋರಟಗಾರರೂ ಈ ನೆಲ ಬ್ರಿಟಿಷರದಲ್ಲ ತಮ್ಮದೆನ್ನುವ ಹಠ ಸಾಧನೆ, ತ್ಯಾಗ–ಬಲಿದಾನ, ಶೌರ್ಯ ಸಾಹಸಗಳ ಚೇತನ ತಲೆಗೇರುವಂತಹ ರೋಮ ರೋಮ ನಿಮಿರೇಳಿಸುವಂಥ ಐತಿಹಾಸಿಕ ಭಂಡಾರವೆನ್ನಬಹುದಾಗಿದೆ.

ಇಂದು ನಾವು 1942ರ ಕ್ವಿಟ್ ಇಂಡಿಯಾ ಚಳುವಳಿಯ ಪುನರ್‌ಸ್ಮರಣೆ ಮಾಡಿಕೊಳ್ಳುತ್ತ ನಮ್ಮ ಮುಂದಿನ ಪೀಳಿಗೆಗಳಿಗೆ ಸ್ಪೂರ್ತಿ ತುಂಬುತ್ತಿದ್ದೇವೆ. ಸ್ಪೂರ್ತಿದಾಯಕ ಇತಿಹಾಸ ಪುಟಗಳಲ್ಲಿ ಕೆಲವನ್ನು ಕೆಳಗೆ ತಳ್ಳುತ್ತಿದ್ದೇವೆ. ಕೆಳಗೆ ತಳ್ಳಲ್ಪಟ್ಟ ಇತಿಹಾಸದಲ್ಲಿ ಸೋಂದೆ ರಾಜಾ ಸದಾಶಿವ ನಾಯಕನ ಇತಿಹಾಸವು ಇಂದಿನ ಪೀಳಿಗೆಗಾಗಿ ತೆರೆದಿಡಬೇಕಾದ ಮಹತ್ವದ ಇತಿಹಾಸವಾಗಿದೆ.

1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿ ನಡೆಯಿತು. 1947 ಅಗಷ್ಟ 15ರಲ್ಲಿ ಬ್ರೀಟಿಷ್ ಧ್ವಜ ಇಳಿಸಿ ಬ್ರಿಟಿಷರನ್ನು ಭಾರತದಿಂದ ತೊಲಗಿಸಿ ಸ್ವಾತಂತ್ರ್ಯವನ್ನು ಪಡೆದೆವು. ಈಗ ಸ್ವಾತಂತ್ರ್ಯೋತ್ಸವ ಆಚರಣೆಯಲ್ಲಿ ಸಂಭ್ರಮಿಸುತ್ತಿದ್ದೇವೆ.

ವಿಜಯ ನಗರ ಸಾಮ್ರಾಜ್ಯದಲ್ಲಿಯ ಸೋಂದೆ ಎಂಬ ಸಣ್ಣ ಪಾಳೆಗಾರಿಕೆಯ ಅರಸ ಸದಾಶಿವ ನಾಯಕ ತನ್ನ ಸೋಂದೆ ರಾಜ್ಯದಿಂದ ಬ್ರಿಟಿಷರನ್ನು ಹೊರದಬ್ಬಿದ್ದು 1725 ಫೆ. 26ರಂದು ಭಾರತದ ದೇಶದಲ್ಲಿ ಮೊಟ್ಟ ಮೊದಲು ಸ್ವಾತಂತ್ರ್ಯ ಗಳಿಸಿದ ಕೀರ್ತಿ ಸೋಂದೆಯ ಸದಾಶಿವ ನಾಯಕ ಎಂಬ

ಚಿಕ್ಕ ಪಾಳೇಗಾರನಿಗೆ ಸಲ್ಲುತ್ತದೆ. 1725 ಫೆ. 26ರ ದಿನವನ್ನು 'ವಿಜಯ ದಿವಸ' ವೆಂದು ಪ್ರತಿ ವರ್ಷ ಆಚರಿಸಲಾಗುತ್ತದೆ.

ಆದರೆ ವಿಜಯನಗರ ಸಾಮ್ರಾಜ್ಯದಲ್ಲಿಯ ಬ್ರಿಟಿಷ್ ಧ್ವಜ ಇಳಿಸಿ ಸೋಂದೆ ಎಂಬ ಸಣ್ಣ ಪಾಳೆಗಾರಿಕೆಯ ಅರಸ ಸದಾಶಿವ ನಾಯಕ ತನ್ನ ಸೋಂದೆ ರಾಜ್ಯದಿಂದ ಬ್ರಿಟಿಷರನ್ನು ಹೊರದಬ್ಬಿದ್ದು 225 ವರ್ಷಗಳಷ್ಟು ಹಿಂದೆ. 1725 ಫೆ. 26ರಂದು ಭಾರತ ದೇಶದಲ್ಲಿ ಮೊಟ್ಟಮೊದಲು ಸ್ವಾತಂತ್ರ್ಯದ ಕಹಳೆ ಊದಿದ ಕೀರ್ತಿ ಸೋಂದೆಯ ಸದಾಶಿವ ನಾಯಕ ಎಂಬ ಪಾಳೇಗಾರನಿಗೆ ಸಲ್ಲುತ್ತದೆ. ಯಾಕೆಂದರೆ ಪ್ಲಾಸಿ ಕದನ 1787, ಮೀರತ್ ದಂಗೆ 1855, ಝಾನ್ಸಿ ರಾಣಿ, ಚೆನ್ನಮ್ಮ ಮುಂತಾದವರು ಸ್ವಾತಂತ್ರ್ಯ ಹೋರಾಟ ಮಾಡಿದ್ದರೂ ಕೂಡ ಸೋಂದೆಯ ಕನ್ನಡಿಗ ಸದಾಶಿವ ನಾಯಕ ಎಲ್ಲರಿಗಿಂತ ಮೊದಲಿಗನು. ಹಾಗೂ ಸದಾಶಿವ ನಾಯಕ ಸಾಮ್ರಾಜ್ಯಶಾಹಿ ಬ್ರಿಟಿಷರನ್ನು ನಂದವಾಡ, ಕಡವಾಡ ಕಾರವಾರ ಬಂದರಿಂದ ನಿರ್ದಾಕ್ಷಿಣ್ಯವಾಗಿ ಹೊರಹಾಕಿದವನಾಗಿದ್ದಾನೆ.

ಇಂಥ ಸಾಹಸಿ ಸದಾಶಿವ ನಾಯಕನ ಹಿನ್ನೆಲೆ ಹುಡುಕುವ ತವಕದಲ್ಲಿ ಇತಿಹಾಸ ಪುಸ್ತಕಗಳನ್ನು ತಡಕಾಡಿದಾಗ ಬಹಳಷ್ಟು ಇತಿಹಾಸ ಅಂಕಶಗಳು ಇವನ ಮೂಲಕ್ಕೆ ಬೆಳೆದುಕೊಳ್ಳುತ್ತವೆ. ಇವನು ಸೋಂದೆಯ ಒಂದನೇಯ ಅರಸಪ್ಪ

ರಾಜನ ಮರಿಮಗನು. ಇವನ ತಂದೆ ಮಧುಲಿಂಗ ನಾಯಕನಿಗೆ ಐದು ಮಂದಿ ಗಂಡು ಮಕ್ಕಳು ಮತ್ತು ಶಿವಾಜಿಯನ್ನು ಬಂಧಿಸಿ ಎಳೆದೊಯ್ದ ಚಾಣಾಕ್ಷ ರಾಣಿ ಬೆಳವಡಿ ಮಲ್ಲಮ್ಮ ಇವನ ತಂಗಿಯಾಗಿದ್ದಾಳೆ. ಇವಳು 16 ಹುಲಿ ಬೇಟೆಯಾಡಿದ ಶ್ರೇಷ್ಠ ಬಿಲ್ಲುಗಾರಳು. 200 ಸೋಂದೆಯ ಸಾಹಸ ವಿದ್ಯಾರ್ಥಿಗಳಲ್ಲಿ ಸರ್ವಶ್ರೇಷ್ಠಳು. ಅಣ್ಣ ತಂಗಿ ಇಬ್ಬರೂ ಸೋಂದೆಯ ಭಟ್ಟಾಕಳಂಕ ಜೈನ ಮುನಿ ಗುರಿವಿನ ಶಿಷ್ಯರು. ಸೋಂದೆಯ ಜೈನ ಗುರು ಮಠಕ್ಕೆ ಅಂದು ಹಿರೇಗುತ್ತಿ ಚಿಕ್ಕಗುತ್ತಿಯ ಆದಿನಾಥನ ಬಸದಿಯು ಜೈನ ಮೂಲ ಗುರುವಿನ ಬಸದಿಯಾಗಿತ್ತು. ಹಿರೇಗುತ್ತಿ ಬಸದಿಗೆ ಜೈನ ಮುನಿಗಳು ಬಂದು ಸಲ್ಲೇಖನ ಮರಣ ವ್ರತಾಚರಣೆ ಮಾಡಿದ ಬಗ್ಗೆ ಶಿಲಾ ಫಲಕಗಳು ಇಂದಿಗೂ ಲಭ್ಯವಿರುತ್ತವೆ. ಬೇಲೂರು ನಂದವಾಡ ರಸ್ತೆಯು ಯುದ್ಧ ಭೂಮಿಯಾಗಿತ್ತು.

ಬುಕ್ಕನ ರಾಣಿ ಬೊಮ್ಮಿ ದೇವಿ ನಾಯಕಿ ಸಲ್ಲೇಖನ ಮರಣ ಹೊಂದಿದ ಶಿಲಾಫಲಕ ಚಿಕ್ಕಗುತ್ತಿ ಬಸದಿಯಲ್ಲಿದೆ. ವಿಜಯನಗರ ಸಾಮ್ರಾಜ್ಯ ಕಟ್ಟಿದ ಹರಿಹರ ಬುಕ್ಕರ ಬಾಳ್ವೆಮನೆ ಚಿಕ್ಕಗುತ್ತಿಯೆಂಬ ಶಿಲಾಶಾಸನವನ್ನು ಹಿರೇಗುತ್ತಿಯ ನಾಡಗುತ್ತಿ ಅರಮನೆಗೆ ಹೊಂದಿ ಸಾಮ್ರಾಟ ಪ್ರತಾಪ ದೇವರಾಯನು ಕ್ರಿ. ಶ. 1410ರಲ್ಲಿ ಸ್ಥಾಪಿಸಿದ್ದಾನೆ ಮತ್ತು ಹರಿಹರನ ಗುರುಗಳು ವಿದ್ಯಾತೀರ್ಥರು ಮತ್ತು ನಾಗೇಂದ್ರ ತೀರ್ಥರು ಎಂದು ಶಾಸನದಲ್ಲಿ ದಾಖಲಿಸಲಾಗಿದೆ.

ಸೋಂದೆಯ ಒಂದನೇ ಅರಸಪ್ಪ ರಾಜನ ರಾಣಿ ಕೃಷ್ಣದೇವರಾಯನ ಅಪ್ಪನ ತಂಗಿ (ಅತ್ತೆ) ಕೃಷ್ಣದೇವರಾಯನ ತಂಗಿಯನ್ನು ಕೃಷ್ಣದೇವರಾಯನ ತಂದೆ ನರಸ ನಾಯಕನು ಸೋಂದೆ ರಾಜಾ ವೆಂಕಟಪತಿಗೆ ಮದುವೆ ಮಾಡಿಕೊಟ್ಟಿದ್ದನು. ವಿಜಯನಗರ ಪತನವಾದಾಗ ಕೃಷ್ಣದೇವರಾಯನ ಕುಟುಂಬ ಬಂಧುಗಳು ಬಂದು ನೆಲೆಸಿದ್ದು ಸೋಂದೆ ಅರಮನೆಯಲ್ಲಿ. ಸೋಂದೆಯ ಅರಸಪ್ಪನ 9 ರಾಣಿಯರು ಚಿತೆ ಏರಿದ್ದನ್ನು ಸ್ಪಷ್ಟವಾಗಿ ಕೆತ್ತಲಾದ ಶಿಲಾ ಫಲಕವನ್ನು ಹರಿಹರನ ನಾಡಗುತ್ತಿ ಅರಮನೆ ಹಿರೇಗುತ್ತಿ ಆವಾರದಲ್ಲಿ ಸ್ಥಾಪಿಸಲಾಗಿದೆ. ಈ ಮೇಲಿನ ಇತಿಹಾಸಗಳಿಂದ ಇವರ ಮೂಲ ಮತ್ತು ಕೌಟುಂಬಿಕ ಸಂಬಂಧ ಚಿಕ್ಕಗುತ್ತಿಯಿಂದ ತಿಳಿದು ಬರುತ್ತದೆ.

ಇಂಥ ಯೋಧ ಕುಟುಂಬ ಸಂಬಂಧದಲ್ಲಿ ಜೈನ ಮುನಿ ಗುರುದರ್ಶನದಲ್ಲಿ ಹುಟ್ಟಿ ಬೆಳೆದ ಸದಾಶಿವ ನಾಯಕನು ಬ್ರಿಟಿಷರನ್ನು ತನ್ನ ಸೋಂದೆ ರಾಜ್ಯದ ಹೊರಗಟ್ಟುವವರೆಗೆ ವಿಶ್ರಮಿಸಲಿಲ್ಲ. ಇವನ ಸೇನಾಶಕ್ತಿ ದಂಡನಾಯಕರು ಗೋವಿಂದ ನಾಯಕ, ಹನುಮ ನಾಯಕ, ತಿಮ್ಮಪ್ಪ ನಾಯಕ, ಕಲ್ಲಪ್ಪ ನಾಯಕ, ಮಲ್ಲಪ್ಪ ನಾಯಕರಾಗಿದ್ದರು.

ಸೋಂದೆ ರಾಜ್ಯವು ಶಿವಮೊಗ್ಗ ಜಿಲ್ಲೆ ಸೊರಬಾದಿಂದ ಹಳಿಯಾಳದವರೆಗೆ ಪಶ್ಚಿಮದಲ್ಲಿ ಅರಬ್ಬಿ ಸಮುದ್ರದವರೆಗೆ ಗೋವಾದ ಕಾಣಕೋಣ ಕೆಪಮ್, ಕೆಂಪೂ ರಾಮಸ್‌ವರೆಗೆ ವಿಸ್ತರಿಸಿದ್ದು, ಈ ರಾಜ್ಯದಲ್ಲಿ ಕಾಳು ಮೆಣಸು ಹೇರಳವಾಗಿ ಬೆಳೆದು ರಫ್ತಾಗುವುದರಿಂದ ಅಡವಿ ಉಪ ಉತ್ಪನ್ನಗಳಿಂದ ಸೋಂದೆ ಅರಮನೆ ಸದಾಶಿವನ ಕಾಲದಲ್ಲಿ ಸಂಪದ್ಭರಿತವಾಗಿತ್ತು.

ಸೋಂದೆ ರಾಜ್ಯದಲ್ಲಿ ಹೇರಳವಾಗಿ ದೊರಕುವ ಸಾಂಬಾರ ಉತ್ಪನ್ನಗಳು ಮತ್ತು ಹುಬ್ಬಳ್ಳಿ ಹಾವೇರಿಯಿಂದ 1000ಕ್ಕೂ ಹೆಚ್ಚು ಚಕ್ಕಡಿ ಗಾಡಿಗಳಿಂದ ಹತ್ತಿಬಟ್ಟೆ ಕಾರವಾರದ ಸಾರ್ವಕಾಲಿಕ ಬಂದರು ಬ್ರಿಟಿಷ್ ವ್ಯಾಪಾರಿ ಕಂಪನಿಗಳನ್ನು ಆಕರ್ಷಿಸಿತು. ಸುಮಾರು 1640ರ ಅವಧಿಯಲ್ಲಿ ಬ್ರಿಟಿಷರು ಕಾರವಾರದಲ್ಲಿ (ನಂದವಾಡ) ತಮ್ಮ ವ್ಯಾಪಾರಿ ಕೋಟೆಯನ್ನು ಕಟ್ಟಿಕೊಂಡರು. 1684ರಲ್ಲಿ ಬ್ರಿಟಿಷ್ ಹಡಗಿನ ಕೆಲಸಗಾರರು, ನಾವಿಕರು ಕಾರವಾರದ ಹಸುಗಳನ್ನು ಕದ್ದೊಯ್ದು ತಿನ್ನಲು ಪ್ರಾರಂಭಿಸಿದ್ದು ತಡವಾಗಿ ಪ್ರಚಾರಕ್ಕೆ ಬಂದುದೇ ರಾಜ ಸದಾಶಿವ ನಾಯಕರಿಗೆ ತಿಳಿದು ಬಂತು. ಇಂಥ ಹಲವು ಘಟನೆಗಳನ್ನು ಹೆಣೆದು ಕಾರವಾರ ಪ್ರಜೆಗಳ ಮನಕರಗುವಂತೆ ಸುದ್ದಿ ಹರಡಲು ರಾಜಾ ಸದಾಶಿವ ನಾಯಕರ ಪ್ರೇರಣೆ ಸಿಕ್ಕಿತು. ಒಂದು ದಿನ ಸೋಂದೆ ಸೈನಿಕರು, ಪಟ್ಟಣದ ಜನರು ಬ್ರಿಟಿಷ್ ಹಡಗನ್ನೇರಿದಾಗ ಹಸುಗಳನ್ನು ಕಡಿಯುವುದು ಮಾಂಸ ಮಾಡುವುದು ಬೆಳಕಿಗೆ ಬಂತು. ಹಡಗಿಗೆ ಮುತ್ತಿಗೆ ಹಾಕಿದ ಜನತೆ ಹಡಗಿಗೆ ತುಂಬಿದ ಮೆಣಸು ಮತ್ತು ಗೋದಾಮುಗಳಲ್ಲಿದ್ದ ಮೆಣಸನ್ನು ಆಕಳುಗಳ ಬೆಲೆಯಾಗಿ– ವಸೂಲಿ ಪಡೆಯಿತು.

ಇದೇ ಮಧ್ಯಂತರ ಅವಧಿಯಲ್ಲಿ ಬ್ರಿಟಿಷರ ವಿರೋಧದ ಚಟುವಟಿಕೆ ಮರಾಠರ ವಿರೋಧಿ ಚಟುವಟಿಕೆಗಳನ್ನೆಲ್ಲ ಸದೆಬಡಿಯುತ್ತಲಿದ್ದ ಸದಾಶಿವ ನಾಯಕ ಸಮುದ್ರ ಮಧ್ಯದ ಕುರುಂಗಡ ಕೋಟೆಯನ್ನು 1705ರಲ್ಲಿ ಕಟ್ಟಿ ನಿಲ್ಲಿಸಿ ಕಾವಲು

ಗೋಪುರ ಸ್ಥಾಪಿಸಿದನು. ಅದೇರೀತಿ 1915ರಲ್ಲಿ ಕಾಳಿ ನದಿ ಸಮುದ್ರ ಸೇರುವ ನೀಲ ರಂಗಿನ ರಮಣೀಯ ಸೌಂದರ್ಯ ರಾಶಿಯ ಅಂಚಿನ ಗುಡ್ಡದ ಮೇಲೆ ಸದಾಶಿವಗಡದ ಕೋಟೆಯನ್ನು ನಿರ್ಮಾಣ ಮಾಡಿದನು. ಈ ಎರಡೂ ಕೋಟೆಗಳ ಮೇಲೆ ಅರಬ್ಬಿ ಸಮುದ್ರ ಅಳವೆ ಮತ್ತು ಕಾಳಿ ನದಿಗೆ ಗುರಿ ಹೊಡೆಯುವ ಹಲವು ದೊಡ್ಡ ದೊಡ್ಡ ತೋಪುಗಳನ್ನು ಸ್ಥಾಪಿಸಿದನು. ಋಣಣಚಿಇಣಟಚಿ ಏಚಿಡಿತಿಚಿಡಿ ಚಿ ಊಘಣಾಡಿಥಿ ದೇಸಾಯಿ ಒ.೦. ಅಡಿ ಟಿಪ್ಪಣಿ ಸೋದೆ ಅರಸು ಮನೆತನ – ಆಡಿ. ಒ. ಉ. ವಾರಿ.)

ಈ ಹಂತದಲ್ಲಿ ಸದಾಶಿವರಾಯನು ಇಂಗ್ಲೀಷರೊಡನೆ ನಡೆಸುವ ಮೆಣಸು ಸಾಂಬಾರ ವ್ಯಾಪಾರವನ್ನು ನಿಷೇಧಿಸಿದೆಯೆಂಬ ರಾಜಾಜ್ಞೆ ಸಾರಿದನು. ಅಡಕತ್ತಿನಲ್ಲಿ ಸಿಲುಕಿದ ಇಂಗಿಷರು ಕ್ರಿ. ಶ. 1698 ಮೇ 27ರಂದು ಮುಂಬೈ ಬ್ರಿಟಿಷ್ ಅಧಿಕಾರಿಗೆ ಈ ಸಮಸ್ಯೆ ವಿವರಿಸಿ ಪತ್ರ ಬರೆದರು. ಇದರಿಂದಾಗಿ ನಂದವಾಡ ಕೋಟೆಯಲ್ಲಿ ಬ್ರಿಟಿಷರು ಸಂಗ್ರಹಿಸಿದ ಸರಕುಗಳು ವ್ಯಾಪಾರವಿಲ್ಲದೇ ಲಕ್ಷಲಕ್ಷ ನಷ್ಟವಾಗುತ್ತಿದ್ದವು. ಕ್ರಿ. ಶ. 1716ರಲ್ಲಿ ಇಂಗ್ಲೆಂಡ್‌ನ ಕಂಪನಿ ಅಧಿಕಾರಿ ಜಾರ್ಜ್ ಟೇಲರ್‌ಗೆ ಪತ್ರ ಬರೆದು ತಿಳಿಸಿ ತುರ್ತು ಸಹಾಯಕ್ಕೆ ಕಾರವಾರಕ್ಕೆ ಬಂದು ಸದಾಶಿವರಾಯನನ್ನು ನಿಗ್ರಹಿಸುವಂತೆ ಕಾರವಾರದ ಇಂಗ್ಲೀಷ್ ಅಧಿಕಾರಿಗಳು ಮೊರೆಯಿಟ್ಟಿದ್ದರು.

ಇಂಗ್ಲಿಷರು ಸಕಲ ಸೇನೆ ಸಿದ್ಧತೆಯೊಂದಿಗೆ ಕಾರವಾರ ಬಂದರಿಗೆ ಮುನ್ನುಗ್ಗುವುದಕ್ಕೆ ಪ್ರಾರಂಭಿಸಿದರು. ಕಾರವಾರದ ಕೋಮಾರಪಂತರ ನೌಕಾ ಸೇನೆಯೊಂದಿಗೆ ಸದಾಶಿವರಾಯನು 3000 ನಾಡವರ ಮತ್ತು ಇತರ ಬಿಲ್ಲುಗಾರ ಪಡೆ, 12000 ಕಾಲ್ದಳದ ಸೈನಿಕರನ್ನು ಹೊಂದಿದ್ದನು. ಭೂ ಸೇನೆ ಯುದ್ಧ ನಡೆಯುವ ಮೊದಲೇ ಕುರುಂಗಡ ಕೋಟೆಯ ತೋಪುಗಳು ಸದಾಶಿವಗಡ ಕೋಟೆಯ ತೋಪುಗಳು ಸಿಡಿಸಿದ ಗುಂಡಿನ ಮಳೆಯನ್ನು ತಡೆಯಲಾರದೇ ಇಂಗ್ಲೀಷ್ ಸೇನೆ ಅರಬ್ಬೀ ಸಮುದ್ರದಿಂದಲೇ ಪಲಾಯನಗೈದಿತ್ತು. ಕ್ರಿ. ಶ. 1725 ಫೆ. 26ರಂದು ಸದಾಶಿವರಾಯನು ಬ್ರಿಟಿಷರ ನಂದವಾಡ ಕೋಟೆಯ ಕಾವಲು ಗೋಪುರದಲ್ಲಿ ಹಾರುತ್ತಿದ್ದ ಬ್ರಿಟಿಷ್ ಧ್ವಜವನ್ನು ಕೆಳಗಿಳಿಸಿದನು. ಬ್ರಿಟಿಷರು ಕಾರವಾರವನ್ನು ಬಿಟ್ಟು ತೊಲಗುವಂತೆ ರಾಜಾಜ್ಞೆ ಹೊರಡಿಸಿದನು. ಟೈಟ್ಲರ್ ನೇತೃತ್ವದ ಬ್ರಿಟಿಷ್ ಸೇನೆಯು ಸಕಲ ಸರಂಜಾಮುಗಳನ್ನು ಹಡಗಿಗೆ ಏರಿಸಿಕೊಂಡು ಮುಂಬೈಗೆ ಪಲಾಯನ ಗೈದಿತ್ತು. ಈ ರೀತಿ ಭಾರತ ದೇಶದಲ್ಲಿ ಮೊಟ್ಟ ಮೊದಲು ಸ್ವಾತಂತ್ರ್ಯ ಗಳಿಸಿದ ಸ್ಥಳವು ಸದಾಶಿವರಾಯನ ಸೋಂದೆ ರಾಜ್ಯವಾಗಿದೆ. ಇದರಿಂದ ಬ್ರಿಟಿಷರ ಗೌರವ ಪ್ರತಿಷ್ಠೆಗೆ ಹೊಡೆತ ಬಿದ್ದಿದ್ದರಿಂದ ಸದಾಶಿವರಾಯನೊಂದಿಗೆ ರಾಜಿಮಾಡಿಕೊಂಡರು. ಇಂಗ್ಲಿಷರು ನಂದವಾಡ, ಹಳೇ ಕೋಟೆ, ಕಾರವಾರ ಕೋಟೆ ಕಾರ್ಖಾನೆ ಬಂದ್ ಮಾಡಿ ಕಾರವಾರ ನೆಲ ಬಿಟ್ಟು ಮುಂಬೈಗೆ ಹೊರಟು ಹೋದರು.

1742ರಲ್ಲಿ ಪೋರ್ಚುಗೀಸರು ಇಮ್ಮಡಿ ಸದಾಶಿವರಾಯನೊಂದಿಗೆ ಮಿತ್ರತ್ವ ಸಾಧಿಸಿ ಒಪ್ಪಂದ ಮಾಡಿಕೊಂಡು ಸೋಂದೆ ರಾಜ್ಯದಲ್ಲಿ ವ್ಯಾಪಾರ ಪ್ರಾರಂಭಿಸಿದರು.

❑

ಗೇರುಸೊಪ್ಪ ಮತ್ತು ಹಾಡುವಳ್ಳಿಯಲ್ಲಿರುವ ಜೈನ ಧರ್ಮದ ಕಲೆ ಮತ್ತು ವಾಸ್ತುಶಿಲ್ಪ

– ಪ್ರೊ. ಜಿ.ಎಸ್. ಹೆಗಡೆ

ಮಧ್ಯಯುಗದಲ್ಲಿ ಕರ್ನಾಟಕದ ಕರಾವಳಿ ಭಾಗದಲ್ಲಿ ಪ್ರವರ್ಧಮಾನಕ್ಕೆ ಬಂದ ಜೈನಧರ್ಮವು ಸಾಹಿತ್ಯ, ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ. ಇದರಿಂದಾಗಿ ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಶ್ರೀಮಂತಗೊಂಡಿದೆ. ಕ್ರಿ. ಶ. 12ನೇ ಶತಮಾನದಿಂದ 18ನೇ ಶತಮಾನದವರೆಗೆ ಜೈನ ಧರ್ಮವು ಇಲ್ಲಿಯ ಸಾಂಸ್ಕೃತಿಕ ಮತ್ತು ರಾಜಕೀಯ ಚಟುವಟಿಕೆಯ ಮೇಲೆ ಪ್ರಭಾವವನ್ನು ಬೀರಿತ್ತು. ಈ ಕಾಲದಲ್ಲಿಯೇ ಇಲ್ಲಿ ಹಲವಾರು ರಾಜಮನೆತನಗಳು ಆಳಿದವು.

ಇವರಲ್ಲಿ ಸಾಳ್ವ ಅರಸರು ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದಲ್ಲಿರುವ ಗೇರುಸೊಪ್ಪ ಮತ್ತು ಹಾಡುವಳ್ಳಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಇವರು ಕಲೆ ಮತ್ತು ವಾಸ್ತುಶಿಲ್ಪಕ್ಕೆ ನೀಡಿದ ಪ್ರೋತ್ಸಾಹದಿಂದಾಗಿ ಗೇರುಸೊಪ್ಪ ಮತ್ತು ಹಾಡುವಳ್ಳಿಯಲ್ಲಿ ಜೈನ ಧರ್ಮದ ಪ್ರಾಚೀನ ಸಾಂಸ್ಕೃತಿಕ ವೈಭವವನ್ನು ಸಾರುವ ಹಲವು ಅವಶೇಷಗಳನ್ನು ನೋಡಬಹುದು. ಇವು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಜೈನ ಧರ್ಮದ ಕೊಡುಗೆಯ ಬಗ್ಗೆ ಸಾಕ್ಷಿಯಾಗಿ ನಿಲ್ಲುತ್ತವೆ. ಇಲ್ಲಿರುವ ವಾಸ್ತುಶಿಲ್ಪ ಕಲಾಕೃತಿಗಳ ಅವಲೋಕನದಿಂದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಈ ಭಾಗದ ಜೈನ ಧರ್ಮದ ಕೊಡುಗೆಯ ಬಗ್ಗೆ ಅರಿವು ಮೂಡುತ್ತದೆ. ಆದ್ದರಿಂದ ಈ ಸ್ಥಳದಲ್ಲಿರುವ ಜೈನ ಧರ್ಮದ ಪ್ರಮುಖ ವಾಸ್ತುಶಿಲ್ಪ ಕಲಾಕೃತಿಗಳ ವಿವರಗಳನ್ನು ತಮ್ಮ ಮುಂದಿಡುತ್ತಿದ್ದೇನೆ.

1) ಗೇರುಸೊಪ್ಪ : ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲೂಕಿನಲ್ಲಿರುವ ಗೇರುಸೊಪ್ಪ 14–15ನೇ ಶತಮಾನದಲ್ಲಿ ಸಾಳ್ವ ಅರಸರ ರಾಜಧಾನಿಯಾಗಿ ಮೆರೆದಿತ್ತು. ಇಂದು ಇದು ಒಂದು ಚಿಕ್ಕ ಗ್ರಾಮವಾಗಿದೆ. ಇದು ಹೊನ್ನಾವರದಿಂದ ಪೂರ್ವಕ್ಕೆ 34 ಕಿ.ಮೀ. ದೂರದಲ್ಲಿ ಬೆಂಗಳೂರು–ಹೊನ್ನಾವರ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಶರಾವತಿ ನದಿಯ ಪಕ್ಕದಲ್ಲಿದೆ. ಹಿಂದೆ ಈ ಪ್ರದೇಶ ಕ್ಷೇಮಪುರ ಮತ್ತು ಬಲ್ಲಾತಕೀಪುರವೆಂದು ಪ್ರಸಿದ್ಧವಾಗಿತ್ತು. ಗೇರು ಮರಗಳು ಈ ಪ್ರದೇಶದಲ್ಲಿ ಹೆಚ್ಚಾಗಿದ್ದುದರಿಂದ ಇದಕ್ಕೆ ಗೇರುಸೊಪ್ಪಾ ಎಂಬ ಹೆಸರು ಬಂದಿರಬೇಕು. ಹಿಂದೆ ರಾಜಧಾನಿಯಾಗಿ ಮೆರೆದ ಪ್ರದೇಶವು ಇಂದು ನಗರಬಸ್ತಿಕೇರಿ ಎಂದು ಕರೆಯಲ್ಪಡುತ್ತಿದ್ದು, ಶರಾವತಿ ನದಿಯ ಆಚೆ ದಂಡೆಯ ಮೇಲಿದೆ. ಹಿಂದಿನ ವೈಭವವನ್ನು ಸಾರುವ ಹಲವು ಅವಶೇಷಗಳು ಇಲ್ಲಿವೆ.

ನಗರಬಸ್ತಿಕೇರಿಯನ್ನು ಪ್ರವೇಶಿಸಿದಂತೆ ಕಾಣುವದೇ ಮೂಡೇ ಜೈನಬಸದಿ. ಈ ಬಸದಿಯಲ್ಲಿ 5 ಅಡಿ ಎತ್ತರದ ಸುಂದರವಾದ ನೇಮಿನಾಥನ ವಿಗ್ರಹವಿದೆ. ಈ ಕಾರಣದಿಂದ ಇದಕ್ಕೆ ನೇಮಿನಾಥ ಬಸದಿ ಎಂಬ ಹೆಸರೂ ಇದೆ. ಕರಿಮೆಣಸಿನ ರಾಣಿಯೆಂದು ಪ್ರಸಿದ್ಧಳಾದ ಚನ್ನಭೈರಾದೇವಿ ಈ ವಿಗ್ರಹವನ್ನು ಪ್ರತಿಷ್ಠಾಪಿಸಿದಳೆಂದು ಪ್ರತೀತಿ.

ನಂತರ ಇರುವದೇ ವರ್ಧಮಾನ ಬಸದಿ ಇಲ್ಲಿ ಕುಳಿತ ಬಂಗಿಯಲ್ಲಿರುವ ವರ್ಧಮಾನ ತೀರ್ಥಂಕರನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ವಿಗ್ರಹ ಕಪ್ಪು ಕಲ್ಲಿನದಾಗಿದ್ದು ಅತ್ಯಂತ ಸುಂದರವಾಗಿದೆ. ಈ ಬಸದಿಯ ಪಕ್ಕದಲ್ಲಿ ಒಂದು

ಶಾಸನವಿದೆ. ಇದು 1378 ರಲ್ಲಿ ಬರಸಲ್ಪಟ್ಟಿದ್ದು ಹೊನ್ನಪ್ಪ ಶೆಟ್ಟಿ ದಾನ ಬಿಟ್ಟಿದ್ದನ್ನು ತಿಳಿಸುತ್ತದೆ. ಇದರ ಮುಂದುಗಡೆ ಪಾರ್ಶ್ವನಾಥನ ಬಸದಿ ಇದೆ. ಇಲ್ಲಿ ಪಾರ್ಶ್ವನಾಥನ ನಿಂತ ಭಂಗಿಯಲ್ಲಿರುವ ವಿಗ್ರಹ ಇದೆ. ಈ ವಿಗ್ರಹ ಕೂಡ ತುಂಬಾ ಸುಂದರವಾಗಿದೆ.

ನಂತರ ಸಿಗುವದೇ ಜ್ವಾಲಮಾಲಿನಿ ದೇವಾಲಯ ಇಲ್ಲಿ ಜ್ವಾಲಮಾಲಿನಿ ಮತ್ತು ಪದ್ಮಾವತಿ ಮೂರ್ತಿ ಇದೆ. ಜ್ವಾಲಮಾಲಿನಿ ದೇವಾಲಯದ ಹಿಂದೆ ಶಿಲ್ಪಗಳ ಸಂಗ್ರಹ ಇದೆ. ಇಲ್ಲಿ ನಿಂತಿರುವ 8 ತೀರ್ಥಂಕರರ ವಿಗ್ರಹಗಳಿವೆ. ಈ ದೇವಾಲಯದ ಪಕ್ಕದಲ್ಲಿ ಮೂರ್ತಿಗಳನ್ನು ತಯಾರು ಮಾಡುವ ಶಿಲ್ಪಶಾಲೆ ಇದ್ದ ಕುರುಹುಗಳನ್ನು ನೋಡಬಹುದು ಇಲ್ಲಿರುವ ಪಾರ್ಶ್ವನಾಥನ ಮೂರ್ತಿ ಅತ್ಯಂತ ಸುಂದರವಾದುದು. ಸರ್ವಾಲಂಕರ ಭೂಷಿತೆಯರಾದ ಚಾಮರಧಾರಿಣಿಯರ ನಡುವೆ ಪದ್ಮಾಸನ ಹಾಕಿ ಕುಳಿತಿರುವಂತೆ ನಿರ್ಮಿಸಿರುವ ಈ ಪಾರ್ಶ್ವನಾಥನ ವಿಗ್ರಹ ನಮ್ಮನ್ನು ಆಕರ್ಷಿಸುತ್ತದೆ. ಇದರ ತಲೆಯ ಮೇಲೆ ಏಳಿಹೆಡೆಯ ಸರ್ಪ ಇದೆ. ಅದರ ಮೇಲೆ ಸುಂದರಾದ ಮುಕ್ಕೊಡೆಯಿದೆ. ಈ ಮೂರ್ತಿಯ ಹಿಂದುಗಡೆ ಪ್ರಭಾವಳಿಯಿದ್ದು ಅದರಲ್ಲಿ ತೀರ್ಥಂಕರರ ಬಿಂಬಗಳನ್ನು ಪದ್ಮಾಸನದಲ್ಲಿರುವಂತೆ ಕೆತ್ತಲಾಗಿದೆ.

ಇಲ್ಲಿರುವ ಪ್ರಮುಖ ಆಕರ್ಷಣೆ ಎಂದರೆ ರಾಣಿ ಚನ್ನಭೈರಾದೇವಿ ಕಟ್ಟಿಸಿದ ಚತುರ್ಮುಖ ಬಸದಿ ದಟ್ಟಡವಿಯ ಮಧ್ಯೆ ಎತ್ತರವಾದ ಜಗಲಿಯ ಮೇಲೆ ನಿಂತಿರುವ ಈ ಬಸದಿ ಅತ್ಯಂತ ಆಕರ್ಷಕ ಕಟ್ಟಡವಾಗಿದ್ದು ವಾಸ್ತುಶಿಲ್ಪ ದೃಷ್ಟಿಯಿಂದ ಮಹತ್ವದ್ದಾಗಿದೆ. ಇದನ್ನು ವಿಯಜನಗರ ಶೈಲಿಯಲ್ಲಿ ಗ್ರೇ ಗ್ರಾನೈಟ ಕಲ್ಲಿನಿಂದ ನಿರ್ಮಿಸಲಾಗಿದೆ.

ನಿರ್ಮಾಣ ಹಂತದಲ್ಲಿರುವಂತೆ ಕಾಣುವ ಈ ಕಟ್ಟಡದಲ್ಲಿ ನಾಲ್ಕೂ ದಿಕ್ಕಿನಲ್ಲಿ ನಾಲ್ಕು ಬಾಗಿಲುಗಳಿವೆ ಮತ್ತು ನಡುವೆ ನಾಲ್ಕು ದಿಕ್ಕಿಗೆ ನಾಲ್ಕು ಗರ್ಭಗುಡಿಗಳಿವೆ. ಈ ಗರ್ಭಗುಡಿಗಳಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಆದಿನಾಥ, ಅಜಿತನಾಥ ಶಾಂಭವ ಮತ್ತು ಅಭಿನಂದನೆ ಎಂಬ ನಾಲ್ಕು ವಿಗ್ರಹಗಳು ಅತ್ಯಂತ ಸುಂದರವಾಗಿವೆ. ಒಂದು ವಿಗ್ರಹವನ್ನು ಕಳ್ಳರು ವಿರೂಪಗೊಳಿಸಿದ್ದಾರೆ. ಅದನ್ನು ದುರುಸ್ತಿಗೊಳಿಸಲಾಗಿದೆ. ಈ ವಿಗ್ರಹಗಳ ಬುಡದಲ್ಲಿ ಆಯಾ ತೀರ್ಥಂಕರರ ಲಾಂಛನಗಳಾದ ವೃಷಭ, ಆನೆ, ಕುದುರೆ ಮತ್ತು ಕಪಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ತೀರ್ಥಂಕರರ ವಿಗ್ರಹಗಳ ತಲೆಯ ಮೇಲೆ ಗೋಪುರದಂತಿರುವ ಕಿರೀಟವಿದೆ. ಹಿಂಬದಿಯಲ್ಲಿ ಪ್ರಭಾವಳಿಯಿದೆ. ಈ ಮೂರ್ತಿಗಳ ಮುಖದಲ್ಲಿರುವ ಅಂತರಮುಖಿತ್ವ, ವೈರಾಗ್ಯಭಾವ, ದೈವಿಕಳೆ ಮತ್ತು ಕುಳಿತಿರು ಬಂಗಿ ಎಲ್ಲವೂ ಅತ್ಯಂತ ಮನೋಜ್ಞವಾಗಿದ್ದು, ಶಿಲ್ಪಿಯ ಕಲಾಚಾತುರ್ಯ ಮತ್ತು ಶ್ರದ್ಧೆಯನ್ನು ತೋರಿಸುತ್ತದೆ.

ಚತುರ್ಮುಖ ಬಸದಿಯ ಪ್ರತಿಯೊಂದು ಗರ್ಭಗೃಹದ ಎದುರಿಗೆ ಚೌಕಾಕಾರದ ದಪ್ಪನೆಯ ಕಂಬಗಳು ಹೊತ್ತು ನಿಂತ ಮಂಟಪ ಇದೆ. ಮೇಲ್ಛಾವಣಿಯ ಒಳಗಡೆ ಕಮಲದ ಕೆತ್ತನೆ ಇದೆ. ಹೊರಗಡೆ ಕಂಬಗಳು ಮಾತ್ರ ಇವೆ. ಕಂಬಗಳ ಮೇಲೆ ಏನೂ ಇರುವದಿಲ್ಲ. ಇದು ಕಟ್ಟಡ ಪೂರ್ತಿಯಾಗದಿರುವದನ್ನು ತೋರಿಸುತ್ತದೆ. ಗೋಡೆಯ ಹೊರಬದಿಯ ತಳದಲ್ಲಿ ಮಕರ ಮತ್ತು ಹಂಸಗಳನ್ನು ಕೆತ್ತಲಾಗಿದೆ.

ಚತುಮುರ್ಖ ಬಸದಿಯ ನಾಲ್ಕೂ ಬಾಗಿಲುಗಳ ಅಕ್ಕಪಕ್ಕಗಳಲ್ಲಿ, ಉದ್ದನೆಯ ಕಿರೀಟ ಧರಿಸಿರುವ ಒಂದು ಕೈಯಲ್ಲಿ ಹಾವನ್ನು ಮತ್ತೊಂದು ಕೈಯಲ್ಲಿ ಹಾವಿನಿಂದ ಸುತ್ತವರಿದಿರುವ ದಂಡವನ್ನು ಹಿಡಿದಿರುವ ದ್ವಾರಪಾಲಕರ ವಿಗ್ರಹಗಳಿವೆ. ಇವುಗಳ ಪಕ್ಕದ ಗೋಡೆಗಳಲ್ಲಿ ವಿವಿಧ ರೀತಿಯ ಶಿಖರವಿರುವ ದೇವಾಲಯದ ಮಾದರಿಯ ಖಾಲಿಗೂಡಗಳಿವೆ. ಇವುಗಳಲ್ಲದೇ ಇನ್ನೂ ಅನೇಕ ಕಟ್ಟಡ ಅವಶೇಷಗಳು ಮೂರ್ತಿಗಳು, ಸಣ್ಣಸಣ್ಣ, ಶಿಲಾ ಫಲಕಗಳು, ಕಲ್ಲಿನ ಶಾಸನಗಳೂ ಇವೆ.

ಇಲ್ಲಿ ಇನ್ನೂ ಅನೇಕ ಬಸದಿಗಳಿದ್ದವೆಂದು ಶಾಸನಗಳಿಂದ ತಿಳಿದುಬರುತ್ತದೆ. 1392ರ ಒಂದು ಶಾಸನದಿಂದ ಇಲ್ಲಿ ಅನಂತ ತೀರ್ಥಂಕರನ ಬಸದಿ ಇತ್ತೆಂದು ತಿಳಿಯುತ್ತದೆ. ಈ ಬಸದಿಯನ್ನು ಯೋಜನ ಶ್ರೇಷ್ಠಿಯ ಪತ್ನಿ ರಾಮಕ್ಕ ಕಟ್ಟಿಸಿದಳು ಅಂತ ಇದೆ. 1421 ರ ಒಂದು ಶಾಸನದಿಂದ ಪಾರ್ಶ್ವನಾಥ ದೇವರ ಸೇವೆಗೆ ಮತ್ತು ಬಸದಿಯ ಜೀರ್ಣೋದ್ಧಾರಕ್ಕೆ ಪದ್ಮಣ್ಣರಸ ಭೂಮಿಯನ್ನು ದಾನ ಮಾಡಿದ ವಿಚಾರ ತಿಳಿದುಬರುತ್ತದೆ.

ಜಿನಬಿಂಬದ ಪಾದ ಪೀಠದಲ್ಲಿರುವ ಬರಹವು ಶ್ರೀ ದೇವೇಂದ್ರ ಸೂರಿಯ ಉಪದೇಶದಿಂದ ಓಜಣಶ್ರೇಷ್ಠಿಯ ಪುತ್ರ ಕಲ್ಲಪ್ಪ ಶ್ರೇಷ್ಠಿಯ ಮಗ ಓಣನೇಮಿಯು ಜಿನಬಿಂಬ ಮಾಡಿಸಿದ ಎಂದು ತಿಳಿಸುತ್ತದೆ.

14ನೇ ಶತಮಾನದಿಂದ 16ನೇ ಶತಮಾನದವರೆಗೆ ಸುಮಾರು 200 ವರ್ಷಗಳ ಕಾಲ ವೈಭವದಿಂದ ಮೆರೆದ ಈ ಪಟ್ಟಣದಲ್ಲಿ ಇಂದು ದಟ್ಟ ಕಾಡು ಬೆಳೆದಿದೆ. ಇಲ್ಲಿಯ ಅವಶೇಷಗಳು ಕಾಲನ ಆಟವನ್ನು ನೋಡುತ್ತ ಮೂಕಪೇಕ್ಷರಂತೆ ಬಿದ್ದುಕೊಂಡಿವೆ. 1623 ರಲ್ಲಿ ಇಲ್ಲಿಗೆ ಬೇಟಿ ನೀಡಿದ್ದ ಇಟಲಿಯ ಪ್ರವಾಸಿ "ಪಿಯಟ್ರೊಡೆಲ್ಲಾ ವೆಲ್ಲೆ" ಇದು ಅತ್ಯಂತ ಪ್ರಸಿದ್ಧ ನಗರವೆಂದೂ ಶರಾವತಿ ನದಿಯು ಅತ್ಯಂತ ಸುಂದರ ನದಿಯೆಂದು ಹೇಳಿದ್ದಾನೆ.

ಇಲ್ಲಿ ಆಳಿದ ಸಾಳ್ವ ಮನೆತನದ ಅರಸರಲ್ಲಿ, ರಾಣಿ ಚೆನ್ನಭೈರದೇವಿ ಅತ್ಯಂತ ಹೆಚ್ಚು ಪ್ರಸಿದ್ಧಳಾದವಳು. ಇವಳು ತನ್ನ ಪರಾಕ್ರಮದಿಂದ ರಾಜ್ಯವನ್ನು ವಿಸ್ತರಿಸಿರಿ. ಆರ್ಥಿಕಾಭಿವೃದ್ಧಿ ಸಾಧಿಸಿದಳು. ಜೇನಧರ್ಮದವಳಾಗಿದ್ದರೂ ಎಲ್ಲ ಧರ್ಮವನ್ನು ಸಮಾನವಾಗಿ ಕಂಡು ಧಾರ್ಮಿಕ ಸಾಮರಸ್ಯ ಸಾಧಿಸಿದ್ದಳು. ಸಾಂಸ್ಕೃತಿಕ ಮನಸುಳ್ಳ ಇವಳು ಕಲೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುವದರ ಮೂಲಕ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣಳಾದಳು. ಇವಳ ಸಾಧನೆಗೆ ಸಾಕ್ಷಿಯಾಗಿ ಬಸದಿಗಳು, ಶಾಸನಗಳು ಮತ್ತು ವಿದೇಶಿ ಬರಹಗಳು ಇವೆ.

ಒಟ್ಟಿನಲ್ಲಿ ಗೇರುಸೊಪ್ಪೆಯ ನಗರಬಸ್ತಿಕೇರಿಯಲ್ಲಿರುವ ವಾಸ್ತುಶಿಲ್ಪ ಕಲಾಕೃತಿಗಳು ಜೈನರ ಕೊಡುಗೆಯ ಮೇಲೆ ಬೆಳಕು ಚೆಲ್ಲುತ್ತವೆ.

ಹಾಡುವಳ್ಳಿ

ಉತ್ತರ ಕನ್ನಡ ಜಿಲ್ಲೆಯ, ಭಟ್ಕಳ ತಾಲೂಕಿನಲ್ಲಿರುವ ಹಾಡುವಳ್ಳಿ 14–15 ನೇ ಶತಮಾನದಲ್ಲಿ ಸಾಳ್ವ ಅರಸರ ರಾಜಧಾನಿಯಾಗಿತ್ತು. ಹಿಂದೆ ಇದು ಸಂಗೀತ, ನೃತ್ಯ ಮತ್ತು ಶಿಲ್ಪಕಲೆಯ ನೆಲೆವೀಡಾಗಿದ್ದು, ಸಂಗೀತಪುರವೆಂದು ಪ್ರಸಿದ್ಧವಾಗಿತ್ತು. ಇದು ಪ್ರಸಿದ್ಧ ಜೈನಕೇಂದ್ರವಾಗಿ ಬೆಳೆದಿತ್ತು.

ಪ್ರಸಿದ್ಧ ಜೈನ ಕ್ಷೇತ್ರವಾದ ಈ ಸ್ಥಳದಲ್ಲಿ ಪ್ರಮುಖವಾಗಿ ಚಂದ್ರನಾಥ ಬಸದಿ, ಪದ್ಮಾವತಿ ದೇವಾಲಯ ಮತ್ತು ಚಂದ್ರಗಿರಿಯ ಮೇಲೆ ಚಂದ್ರನಾಥ ಬಸದಿ ಇದೆ. ಚಂದ್ರನಾಥ ಬಸದಿಯಲ್ಲಿ ಕಲ್ಲಿನ ಹಲಗೆಯನ್ನು ಜೋಡಿಸಿ ಇಳಿಜಾರಾದ ಮೇಲ್ಛಾವಣಿಯನ್ನು ನಿರ್ಮಿಸಲಾಗಿದೆ. ಈ ಬಸದಿಯಲ್ಲಿ ಸಭಾಮಂಟಪ, ನವರಂಗ ಮತ್ತು ಗರ್ಭಗೃಹಗಳಿವೆ. ಬಸದಿಯ ಎದುರಿಗೆ ಧ್ವಜ ಕಟ್ಟೆಯಿದೆ. ಸುತ್ತಲೂ ಮೇಲ್ಛಾವಣಿಗೆ ಆಧಾರವಾಗಿ ಚೌಕಾಕಾರದ 24 ಕಂಬಗಳಿವೆ. ಸಭಾ ಮಂಟಪದಲ್ಲಿ ಸುಂದರವಾಗಿ ಕೆತ್ತಿದ 16 ಕಂಬಗಳಿವೆ. ಒಂದೊಂದು ಕಂಬದಲ್ಲೂ ಮಡಕೆ, ಬಳೆ, ಕಾಲಿನ ಕಡಗದ ರೀತಿಯ ಕೆತ್ತನೆ ಇದೆ. ವಿವಿಧ ರೀತಿಗಳ ವಿನ್ಯಾಸಗಳ ಕೆತ್ತನೆಗಳಿದ್ದು ತುಂಬಾ ಆಕರ್ಷಕವಾಗಿದೆ. ಸಭಾ ಮಂಟಪದಲ್ಲಿ ಒಂದು ಶಾಸನವಿದೆ. ಬಾಗಿಲಿನ ಮೇಲೆ ಸೂಕ್ಷ್ಮ ಕುಸುರಿನ ಕೆತ್ತನೆ ಇದ್ದು, ಶಿಲ್ಪಿಯ ಕಲಾ ಚಾತುರ್ಯವನ್ನು ತೋರಿಸುತ್ತದೆ.

ಸಭಾ ಮಂಟಪದ ಮತ್ತು ನವರಂಗದ ಮೇಲ್ಛಾವಣಿಯಲ್ಲಿ ಸುಂದರವಾದ ಹೂವಿನ ಚಿತ್ರಗಳನ್ನು ಕೆತ್ತಲಾಗಿದೆ. ಇದರ ಗರ್ಭಗೃಹದಲ್ಲಿ ಸುಂದರವಾದ ಚಂದ್ರನಾಥನ ವಿಗ್ರಹವಿದೆ.

ಸುಮಾರು 4ಳಿ ಅಡಿ ಎತ್ತರದ ಕಪ್ಪು ಶಿಲೆಯ ದುಂಡುಶಿಲ್ಪದ ಈ ಮೂರ್ತಿಯು ನಯವಾಗಿದ್ದು ಕಣ್ಮನವನ್ನು ಸೆಳೆಯುತ್ತದೆ. ಇದರ ಪ್ರಭಾವಳಿಯ ಕೆತ್ತನೆ ಕೂಡ ತುಂಬಾ ಆಕರ್ಷಕವಾಗಿದೆ. ಎದುರುಗಡೆ ಬ್ರಹ್ಮಯಕ್ಷನ ಮೂರ್ತಿಯಿದೆ.

ಚಂದ್ರನಾಥ ಬಸದಿಯ ಆವಾರದಲ್ಲಿಯೆ ಬಲಕ್ಕೆ ಶಿಥಿಲವಾಗಿರುವ ನೇಮಿನಾಥನ ಸಣ್ಣಗುಡಿ ಇದೆ. ಇಲ್ಲಿ ನೇಮಿನಾಥನ ನಿಂತಭಂಗಿಯಲ್ಲಿರುವ ಸುಂದರವಾದ ವಿಗ್ರಹವಿದೆ. ಎಡಬದಿಗೂ ಒಂದು ಸಣ್ಣಗುಡಿಯಿದ್ದು ಎರಡು ಅಡಿ ಎತ್ತರದ ವರ್ಧಮಾನ ಮಹಾವೀರನ ವಿಗ್ರಹವಿದೆ. ಇದರ ಪ್ರಭಾವಳಿಯಲ್ಲಿ 23 ತೀರ್ಥಂಕರರ ಮೂರ್ತಿಗಳನ್ನು ಕೌಶಲ್ಯಪೂರ್ಣವಾಗಿ ಕೆತ್ತಲಾಗಿದೆ.

ಚಂದ್ರನಾಥ ಬಸದಿಯ ಪಕ್ಕದಲ್ಲಿಯೆ ಪದ್ಮಾವತಿ ದೇವಾಲಯವಿದೆ. ಇದರಲ್ಲಿರುವ 24 ತೀರ್ಥಂಕರರ ವಿಗ್ರಹ ನಮ್ಮನ್ನು ಆಕರ್ಷಿಸುತ್ತದೆ. ಈ ಮೂರ್ತಿಗಳನ್ನು ಕಪ್ಪು ಸಂಗಮರಿ ಕಲ್ಲಿನಲ್ಲಿ ಕೆತ್ತಲಾಗಿದ್ದು ಪೀಠದಲ್ಲಿ ಒಂದೇ ಸಾಲಿನಲ್ಲಿ ಪ್ರತಿಷ್ಠಾಪಿಸಲಾಗಿದೆ. ಅರ್ಧ ಮೀಟರ ಎತ್ತರವಿರುವ ನಿಂತ ಭಂಗಿಯಲ್ಲಿ ಧ್ಯಾನಾಸಕ್ತರಾಗಿರುವಂತೆ ಕೆತ್ತಿರುವ ತೀರ್ಥಂಕರರ ಈ ವಿಗ್ರಹಗಳು, ಜಗತ್ತಿನ ಬಗ್ಗೆ ವೈರಾಗ್ಯ ತಾಳಿ, ಕಾಲದ ಪರಿವೆ ಇಲ್ಲದೆ ನಿಂತಿರುವಂತೆ ಕಾಣುತ್ತವೆ. ಈ ದೇವಾಲಯದಲ್ಲಿರುವ ಪದ್ಮಾವತಿಯ ವಿಗ್ರಹ ಕೂಡ ಸುಂದರವಾಗಿದೆ.

ಪದ್ಮಾವತಿ ದೇವಾಲಯದ ಎದುರಿಗೆ ಇತ್ತೀಚೆಗೆ ಜೀರ್ಣೋದ್ಧಾರ ಮಾಡಿ ನಿರ್ಮಿಸಿರುವ ಹೆಂಚಿನ ಮಾಡಿರುವ ಒಂದು ಬಸದಿ ಇದೆ. ಇದರಲ್ಲಿ ಅಮೃತ ಶಿಲೆಯಲ್ಲಿ ನಿರ್ಮಿಸಿದ ಸುಂದರವಾದ ಚಂದ್ರನಾಥನ ವಿಗ್ರಹವಿದೆ.

ಹಾಡುವಳ್ಳಿ ಇರುವದೇ ಚಂದ್ರಗಿರಿ ಮತ್ತು ಇಂದ್ರಗಿರಿ ಎಂಬ ಎರಡು ಪರ್ವತಗಳ ಬುಡದಲ್ಲಿ. ಚಂದ್ರಗಿರಿಯ ತುದಿಯಲ್ಲಿ ಒಂದು ಚಂದ್ರನಾಥ ಬಸದಿ ಇದೆ. ವಿಜಯನಗರದ ಶೈಲಿಯಲ್ಲಿ ಕಟ್ಟಿದ ಈ ಬಸದಿಯಲ್ಲಿ ಮುಖ ಮಂಟಪ, ರಂಗಮಂಟಪ, ನವರಂಗ ಮತ್ತು ಗರ್ಭಗೃಹಗಳಿವೆ. ಮುಖ ಮಂಟಪದಲ್ಲಿರುವ ನಾಲ್ಕು ಕಂಬಗಳು ನಮ್ಮನ್ನು ಆಕರ್ಷಿಸುತ್ತವೆ. ಇವು ಬುಡದಲ್ಲಿ ಚೌಕಾಕಾರವಾಗಿದ್ದು, ಮೇಲ್ಗಡೆ ದುಂಡಾಗಿವೆ. ಇವುಗಳ ಮೇಲೆ ವೈವಿಧ್ಯಮಯವಾದ ವಿನ್ಯಾಸಗಳನ್ನು ಕೆತ್ತಲಾಗಿದೆ. ಮೇಲ್ಛಾವಣಿಯ ಒಳಗೆ ಸುಂದರವಾದ ಹೂವಿನ ಕೆತ್ತನೆ ಇದೆ. ರಂಗಮಂಟಪಕ್ಕೆ ಹೋಗುವ ಬಾಗಿಲಿನ ಅಕ್ಕಪಕ್ಕದಲ್ಲಿ ಚಾಮರಧಾರಿಣಿಯರ ಉಬ್ಬು ಶಿಲ್ಪವಿದೆ. ಇವುಗಳ ಪಕ್ಕದಲ್ಲಿ ವಾದ್ಯಬಾರಿಸುವವರ ಮತ್ತು ದ್ವಾರಪಾಲಕರ ಶಿಲ್ಪಗಳಿವೆ. ಗರ್ಭಗೃಹ ಸರಳವಾಗಿದ್ದು ಅದರಲ್ಲಿ ವಿಗ್ರಹವಿಲ್ಲ, ಪೀಠಮಾತ್ರ ಇದೆ. ಈ ಬಸದಿಯ ಗೋಡೆಯ ರಚನೆ ಸರಳವಾಗಿದೆ. ಗೋಡೆಯ ಹೊರಭಾಗದಲ್ಲಿ 24 ತೀರ್ಥಂಕರರನ್ನು ಚಿಕ್ಕದಾಗಿ ಉಬ್ಬು ಶಿಲ್ಪದಲ್ಲಿ ಕೆತ್ತಲಾಗಿದೆ. ಗೋಡೆಯ ಬುಡದಲ್ಲಿ ಒಂದು ಚಿತ್ರಪಟ್ಟಿಕೆ ಇದೆ. ಇದರಲ್ಲಿ ಹೂವುಗಳು ಮತ್ತು ಪ್ರಾಣಿಗಳ ಕೆತ್ತನೆ ಇದೆ. ಬಸದಿಯ ಬಲಕ್ಕೆ ಕಲ್ಲಿನ ಹಲಗೆಯ ಮೇಲೆ ಉಬ್ಬು ಶಿಲ್ಪದಲ್ಲಿ ಕೆತ್ತಿದ ಕುದುರೆಯ ಮೇಲೆ ಯುದ್ಧಕ್ಕೆ ಹೊರಟಿರುವ ವೀರನ ಶಿಲ್ಪ ಇದೆ. ಹಾಡುವಳ್ಳಿಯ ಪರಿಸರದಲ್ಲಿ ಒಟ್ಟೂ 20 ಬಸದಿಗಳಿದ್ದವೆಂದು ಸ್ಥಳೀಯರು ಹೇಳುತ್ತಾರೆ. ಇದ್ದ ಬಗ್ಗೆ ಅನೇಕ ಕುರುಹುಗಳನ್ನು ಕಾಣಬಹುದು.

ಹಾಡುವಳ್ಳಿಗೆ ಪ್ರಾಚೀನ ಇತಿಹಾಸವಿದೆ. 15ನೇ ಶತಮಾನದಿಂದಲೇ ಇದು ಪ್ರತಿಷ್ಠಿತ ನಗರವಾಗಿತ್ತು. ಇಲ್ಲಿ ಆಳಿದವರು ಸಾಳ್ವವಂಶದವರು. ಯಾದವಿ ಕಲಹದಿಂದ ಗೇರುಸೊಪ್ಪ ಮತ್ತು ಸಂಗೀತಪುರವೆಂಬ ಎರಡು ರಾಜ್ಯವಾಯಿತು. ನಂತರ 1561 ರ ಸುಮಾರಿಗೆ ಕರಿಮೆಣಸಿನರಾಣಿ ಎಂದು ಪ್ರಖ್ಯಾತಳಾದ ಚನ್ನಭೈರಾದೇವಿ ಸಂಗೀತಪುರ ಮತ್ತು ಗೇರುಸೊಪ್ಪ ಎರಡಕ್ಕೂ ರಾಣಿಯಾದಳು. ಪೋರ್ಚುಗೀಸರ ಅಕ್ರಮ ಚಟುವಟಿಕೆಯ ವಿರುದ್ಧ ಸತತವಾಗಿ ಹೋರಾಟ ನಡೆಸಿದ ಮತ್ತು ರಾಜ್ಯದ ಆರ್ಥಿಕ ಮತ್ತು ಸಾಂಸ್ಕೃತಿಕ ಉನ್ನತಿಗೆ ಕಾರಣಳಾದ ಚನ್ನಭೈರಾದೇವಿ ಕೆಳದಿಯ ವೆಂಕಟಪ್ಪ ನಾಯಕನ ಆಗ್ರಹಕ್ಕೆ ತುತ್ತಾಗಿ ಅಂತ್ಯವಾದಳು. ಅವಳ ಅಂತ್ಯದೊಂದಿಗೆ ಗೇರುಸೊಪ್ಪ ಮತ್ತು ಹಾಡುವಳ್ಳಿಯ ಅಂತ್ಯವಾಯಿತು. ಕನ್ನಡದ ಪಾಣಿನಿ ಎಂದೆ ಹೆಸರಾದ ಗುರು ಭಟ್ಟಾಕಳಂಕನ ವಾಸಸ್ಥಳ ಹಾಡುವಳ್ಳಿಯಾಗಿತ್ತು ಎಂಬುದು ಹೆಮ್ಮೆಯ ಸಂಗತಿ.

ಒಟ್ಟಿನಲ್ಲಿ ಸಾಳ್ವಅರಸರು ನೀಡಿದ ಪ್ರೋತ್ಸಾಹದಿಂದಾಗಿ ಅನೇಕ ವಾಸ್ತು ಮತ್ತು ಶಿಲ್ಪ ಕಲಾಕೃತಿಗಳು ನಿರ್ಮಾಣಗೊಂಡವು. ಇವು ಜೈನರು ಈ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ತಿಳಿಸುತ್ತವೆ.

❑

ಬನವಾಸಿಯ ಮರಿಶಾಂತ ಬಸವದೇವನ ಸಾಹಿತ್ಯ ಸೇವೆ

– ಡಾ. ಬಿ. ನಂಜುಂಡ ಸ್ವಾಮಿ

ಅಖಿಲ ಕರ್ನಾಟಕದಲ್ಲಿ ನಡೆದ ಸಾಹಿತ್ಯ ಚಟುವಟಿಕೆಗೆ ಬಗ್ಗೆ ಕನ್ನಡನಾಡಿನ ಮೂಲೆಮೂಲೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿ ದಾಖಲಿಸ ಬೇಕಾದ ತುರ್ತು ಸಮಯ ಬಂದಿದೆ. ಪ್ರಕಟವಾದ ಸಾಹಿತ್ಯದಲ್ಲಿ ಸ್ಥಳೀಯ ಇತಿಹಾಸದ ಬಗ್ಗೆ ಸಾಕಷ್ಟು ಮಾಹಿತಿ ಇರುತ್ತವೆ. ಅದನ್ನು ನಾವುಗಳು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕು. ಮರಿಶಾಂತ ಬಸವದೇವನ ಸ್ವರವಚನಗಳ ಹಸ್ತಪ್ರತಿ ಇರುವುದು ಬೆಂಗಳೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದಲ್ಲಿ. ಕೆ.513ನೆಯ ಹಸ್ತಪ್ರತಿಯಲ್ಲಿ 74 ಸ್ವರವಚನಗಳು ಲಿಖಿಸಲ್ಪಟ್ಟಿವೆ. ಈ ಎಲ್ಲಾ ಸ್ವರವಚನಗಳನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಹಸ್ತಪ್ರತಿ ಭಂಡಾರದ ಸಂಪಾದಕರಾಗಿದ್ದ ಲಿಂ॥ ಎಸ್. ಶಿವಣ್ಣನವರು ಸಂಪಾದಿಸಿ ಗದಗಿನ ವೀರಶೈವ ಅಧ್ಯಯನ ಸಂಸ್ಥೆಯಿಂದ 1988ರಲ್ಲಿ "ಮರಿಶಾಂತ ಬಸವದೇವನ ಸ್ವರವಚನಗಳು" ಎಂದು ಪ್ರಕಟವಾಗಿದೆ. ಇದೇ ಹಸ್ತಪ್ರತಿಯಲ್ಲಿ ಇದ್ದ ಲಘುಕೃತಿ "ಶ್ರೀ ಸೋದೆ ಬಸವಲಿಂಗರಾಜನ ಭಕ್ತಿ ಚಂದ್ರೋದಯ" ಲಘು ಕೃತಿ ಬಸವಪಥ ಸಂಪುಟ 4 ಸಂಚಿಕೆ 10 ಜನವರಿ 1982ರಲ್ಲಿ ಪ್ರಕಟವಾಗಿದೆ.

ಮರಿಶಾಂತಬಸವದೇವನ ಗುರು ಬನವಸೆ ಮಠಾಧೀಶ ಮಳೆಯ ಮಲ್ಲೇಶ ಈತ ಕವಿಯ ಕಾಲದಲ್ಲಿಯೆ ಮಳೆಯ ಮಲ್ಲೇಶನಲ್ಲಿ ಬೆರದ ಸಂಗತಿ ಅರ್ಥಾತ್ ಶಿವೈಕ್ಯನಾದ ವಿಷಯವನ್ನು ತಿಳಿಸುತ್ತದೆ. ಮರಿಶಾಂತಬಸವದೇವ ತನ್ನ ಸ್ವರವಚನಗಳಲ್ಲಿ ಸೋದೆ ಸದಾಶಿವರಾಜ (1674–1697) ಸೋದೆ ಬಸವಲಿಂಗರಾಜ (1697– 1745) ಕೆಳದಿ ಬಸವೇಂದ್ರ (1697–1714) ಕೆಳದಿ ಸೋಮಶೇಖರ (1697–1714) ರನ್ನು ಸ್ವರವಚನದಲ್ಲು ಪ್ರಸ್ತಾಪಿಸಿದ್ದಾನೆ. 53ನೇ ಸ್ವರವಚನದಲ್ಲಿ ಪರಾಭವ ಸಂವತ್ಸರದಲ್ಲಿ ಅಂದರೆ ಕ್ರಿ.ಶ. 1726 ರಲ್ಲಿ ಉಂಟಾದ ಬರದ ಹಾವಳಿಯ ಬಗ್ಗೆ ವಿವರವಾಗಿ ಕವಿ ನಮಗೆ ತಿಳಿಸಿದ್ದಾನೆ. ಸೋದೆ ಬಸವಲಿಂಗರಾಜಲಿಂಗೈಕ್ಯನಾದ ವಿಷಯ ಸ್ವರವಚನ 56 ರಲ್ಲಿ ಉಲ್ಲೇಖವಾಗಿದೆ. ನಮಗೆಲ್ಲಾ ಗೊತ್ತಿರುವಂತೆ ಕ್ರಿ.ಶ. 1745ರಲ್ಲಿ ಸೋದೆ ಬಸವಲಿಂಗರಾಜ ಲಿಂಗೈಕ್ಯನಾದದ್ದು ಆದ್ದರಿಂದ ಈ ಅಂಶವನ್ನು ಉಲ್ಲೇಖಿಸಿರುವ ಮರಿಶಾಂತ ಬಸವದೇವ ಕ್ರಿ.ಶ. 1745ರ ನಂತರವೂ ಜೀವಿಸಿದ್ದ ಎಂಬುದರಲ್ಲಿ ಸಂಶಯವಿಲ್ಲ. ಹೀಗಾಗಿ ಮರಿಶಾಂತ ಬಸವದೇವನ ಕಾಲವನ್ನು ಹದಿನೇಳನೆಯ ಶತಮಾನದ ಉತ್ತರಾರ್ಧ ಕೊನೆಯ .... ಹಾಗೂ ಹದಿನೆಂಟನೆಯ ಶತಮಾನದ ಪೂರ್ವಾರ್ಧಗಳೆಂದು (1676–1750) ಸದ್ಯದಲ್ಲಿ ನಿರ್ಧರಿಸಬಹುದು. ಮರಿಶಾಂತಬಸವದೇವನ ಬಹುಪಾಲು ಸ್ವರವಚನಗಳು ವಸ್ತು ಶೃಂಗಾರಕ್ಕೆ ಸಂಬಂಧಿಸಿದೆ ಈತ ಗೃಹಸ್ಥನಾಗಿದ್ದನಾ ಆ ಕಾಲದ ಪುತ್ರವರ್ಗ ಪರಂಪರೆ ಮಠದ ಸ್ವಾಮಿಯಾಗಿದ್ದನಾ? ಈತನ ಗುರುವಿನ ಬಗ್ಗೆ ಮೊದಲ ಸ್ವರವಚನದ ಮೂರನೇ ನುಡಿಯಲ್ಲಿ ಸ್ಪಷ್ಟವಾದ ಮಾಹಿತಿ ಇದೆ. ಅವನ್ನು ಯಥಾವತ್ತಾಗಿ ಕೊಡಲಾಗಿದೆ.

ಧರೆಗೆ ದಕ್ಷಿಣಕಾಶಿಯೆನಿಸುತಿಹ ಬನವಸೆಯ
ಪುರದೊಳಗೆ ಹಿರಿಯಮಠದೊಳು ನೆಲಸಿಹ

ಗುರು ಮಳೆಯಮಲ್ಲೇಶ ಬಾರೆಂದು ಹರುಷದೊಳು
ಕರದು ಮನ್ನಿಸಿ ನೆರೆವ ಕಾಂತೆ ಗುಣವಂತೆ ॥ 3 ॥

ಭೂಮಿಯ ಮೇಲೆ ದಕ್ಷಿಣಕಾಶಿ ಎಂದು ಕರೆಸಿಕೊಳ್ಳುವ ಬನವಾಸಿಯ ನಗರದ ಹಿರಿಯಮಠದೊಳುನೆಲೆಸಿಹ ಗುರು ಮಳೆಯಮಲ್ಲೇಶ ಎಂದು ಕವಿ ಸ್ಪಷ್ಟವಾಗಿ ಹೇಳಿದ್ದಾನೆ. ಬನವಾಸಿಯ ಹಿರೇಮಠದ ಮಳೆಯಮಲ್ಲೇಶ ಕವಿಯ ಗುರು.

ಎರಡನೇ ಸ್ವರವಚನದ ಮೂರನೇ ನುಡಿಯಲ್ಲಿ ಇನ್ನು ಸ್ವಲ್ಪ ಹೆಚ್ಚಿನ ಮಾಹಿತಿ ಲಭ್ಯವಿದೆ. ಆ ಭಾಗವನ್ನು ಯಥಾವತ್ತಾಗಿ ಕೊಡಲಾಗಿದೆ.

ಧರೆಗೆ ದಕ್ಷಿಣ ಕಾಶಿಯೆನಿಪ ಬನವಸೆಯ
ಹಿರಿಯಮಠದಿ ನೆಲೆಸಿಹ ಪಟ್ಟದ
ವರ ಗುರು ಮಳೆಯಮಲ್ಲೇಶ ನಿನಗೆ ಮೆಚ್ಚಿ
ಪರಿಪರಿ ಕಲೆಗಳ ತೋರಿ ನೆರೆದವನಂತೆ ॥ 3 ॥

ಕವಿಸ್ಪಷ್ಟವಾಗಿ ಬನವಸೆಯ ಹಿರಿಯಮಠದಿ ನೆಲೆಸಿಹ ಪಟ್ಟದ ವರಗುರು ಮಳೆಯಮಲ್ಲೇಶ ಎಂದಿದ್ದಾನೆ.ಪಟ್ಟದ ಶಬ್ದದಿಂದ ಬನವಸಿಯ ಹಿರಿಯಮಠ ಗುರುವರ್ಗದ ಮಠ ಎಂದು ಸ್ಪಷ್ಟವಾಗಿ ತಿಳಿದು ಬರುತ್ತದೆ. 23ನೇ ಸ್ವರವಚನದ ಮೂರನೇ ನುಡಿಯಲ್ಲಿ

ವರದಾನದಿಯ ತೀರವಾಸ ಚೆಲ್ವ
ಪುರ ಬನವಾಸಿಯ ಹಿರಿಯಮಠಧೀಶ
ವರ ಗುರು ಮಳೆಯ ಮಳೆಯಮಲ್ಲೇಶ ದೊಡ್ಡ
ದೊರೆಯೆಂದು ನಂಬಿದೆ ನಿನ್ನ ಪ್ರಾಣೇಶ ॥ 3 ॥

ಬನವಾಸಿಯಲ್ಲಿ ವರದಾನದಿ ಹರಿಯುವುದನ್ನು ಕವಿ ಇಲ್ಲಿ ದಾಖಲಿಸಿದ್ದಾನೆ.

ಈ ಮುಂದಿನ ಸ್ವರವಚನ ಬಹಳ ಐತಿಹಾಸಿಕ ಮಹತ್ತ್ವವುಳ್ಳದ್ದು ಅದನ್ನು ಯಥಾವತ್ತಾಗಿ ಕೊಡಲಾಗಿದೆ.

ಮರೆಯಲರಿದಯ್ಯ ನಿನ್ನಯ ಚರಿತೆಯ ಚೆಲ್ವ
ದೊರೆ ಬಸವಲಿಂಗ ಭೂಪಾಲ ಗುಣಶೀಲ ॥ ಪಲ್ಲವಿ ॥

ಪರಮ ಶ್ರೀಗುರು ಮಳೆಯನಂದೀಶ್ವರನ
ವರದಿ ಧರೆಯೊಳಗೆ ಶ್ರೀ ಸದಾಶಿವಭೂಪನ
ವರಪತ್ನಿ ಶಾಂತಮ್ಮಾಜಿಯ ಗರ್ಭದೊಳು ಜನಿಸಿ
ಉರುತರದ ಭಕ್ತಿಯನು ಮಾಡಿದಂದವನಿನ್ನು ॥ 1 ॥

ಗುರು ಚರ ಪರಸ್ಥಲದ ಜಂಗಮವನರ್ಚಿಸುತ
ಹರುಷದಲಿ ಷಡುರಸಾನ್ನವ ನೀಡಿಸಿ
ಪರಿಪರಿಯ ವಸ್ತು ವಾಹನವಿತ್ತು ಕೀರ್ತಿಯನು
ನೆರೆ ಪಡೆದೆ ನಿನಗೆ ಸರಿಯಾರಯ್ಯ ಜೀಯ ॥ 2 ॥

ಬಡವರಿಗೆ ಕಡವರದ ಕಣಜ ನೀನೆಂದೆನಿಸಿ
ಅಡಿಗಡಿಗೆ ಮದುವೆ ಮುಂಜಿಯ ಮಾಡಿಸಿ
ಕೊಡುವೆಡೆಗೆ ಕರ್ಣ ನಿಮ್ಮಡಿಯೆನಿಸಿ ರಾಜಿಸಿದೆ
ಪೊಡವಿಪತಿಗಳ ಶಿರೋಮಣಿಯೆ ಪರುಷದ ಖಣಿಯೆ ॥ 3 ॥

ಹಿಡಿದ ಛಲವನು ಬಿಡದೆ ನಡಸಿ ಕ್ಷುದ್ರರನೆಲ್ಲ
ಕೆಡೆಮೆಟ್ಟಿ ಖಳರಿಗಾಸ್ಪದವ ಕೊಡದೆ

ಎಡೆಬಿಡದೆ ನಂಬಿದರ ಕಡುದಯದಿ ರಕ್ಷಿಸುವ
ದೃಢವುಳ್ಳ ಶಿವಭಕ್ತ ಕುಲತಿಲಕ ನಿನ್ನ ॥ 4 ॥

ವರ ಬಸವದಂಡೇಶ ನೀಲಾಂಬಿಕೆಯ ತೆರದಿ
ಕರದಿಷ್ಟಲಿಂಗವ ನಿರೀಕ್ಷಿಸುತಲಿ
ಸರಸಕೋವಿದ ಸೋದೆ ಬಸವಭೂಪಾಲ ನೀ
ಗುರು ಮಳೆಯ ಮಲ್ಲೇಶನೊಡವೆರದ ಪರಿಯ ॥ 5 ॥

ಸೋದೆ ಬಸವಲಿಂಗರಾಜನ ಬಗ್ಗೆ ವಿವರವಾಗಿ ಈ ಸ್ವರವಚನದಲ್ಲಿ ತಿಳಿದುಬರುವಂತಹದು. ಬನವಾಸಿ ಹಿರೇಮಠದ ಮೊದಲಸ್ವಾಮಿ ಅರ್ಥಾತ್ ಕರ್ತೃ "ಶ್ರೀಗುರು ಮಳೆಯನಂದೀಶ್ವರನ" ಸೋದೆ ಸದಾಶಿವಭೂಪಾಲ ಮತ್ತು ಶಾಂತಮ್ಮಾಜಿ ಅವರ ಪುತ್ರನಾಗಿ ಜನಿಸಿದವನು ಸೋದೆ ಬಸವಲಿಂಗರಾಜ. ಆತ ಗುರುಗಳನ್ನು, ಚರಮೂರ್ತಿಗಳನ್ನು ಪರಸ್ಥಳದ ಜಂಗಮಮೂರ್ತಿಗಳನ್ನು ಅರ್ಚಿಸುತ್ತ ಪರಮ ಸಂತೋಷದಲ್ಲಿ ಅವರಿಗೆ ಷಡುರಸ್ನಾನವ ನೀಡಿಸಿ ಎಂದರೆ ಮಧುರ, ಆಮ್ಲ, ಲವಣ, ಕಟು, ತಿಕ್ತ,ಕಷಾಯರಸ ಪ್ರಧಾನವಾದ ಆಹಾರಗಳನ್ನು ತಯಾರಿಸಿ ಅವರಿಗೆ ದಿನನಿತ್ಯ ಬಳಕೆಗೆ ಬೇಕಾದ ವಸ್ತುಗಳನ್ನು, ವಾಹನ ಅಂದರೆ ಪಲ್ಲಕ್ಕಿ, ಕುದುರೆ, ಎತ್ತು, ಆನೆಗಳನ್ನು ನೀಡಿದ, ಬಡವರಿಗೆ ಕಡವರದ ಕಣಜ ಎಂದರೆ ಕಣಜದಲ್ಲಿ ತುಂಬಿದ ಧಾನ್ಯಗಳು ಮುಗಿಯುವುದೇ ಇಲ್ಲ ಎಂದರೆ ಅವರು ಸಾಕು ಸಾಕು ಅನ್ನುವಷ್ಟು ನೀಡಿದ. ಅಂದಿನ ದಿನ ಮಾನವ ಸಮಸ್ತ ಜನಾಂಗದವರಿಗೆ ಮದುವೆ, ಮುಂಜಿ ಮಾಡಿಸಿದ 'ಕೊಡುವೆಡೆಗೆ ಕರ್ಣ ನಿಮ್ಮಡಿಯೆನಿಸಿ ರಾಜಿಸಿದೆ' ಕರ್ಣನಂತೆ ಮಹಾಜನತೆಗೆ ದಾನವನ್ನು ಮಾಡಿದ್ದು ಮರಿಶಾಂತ ಬಸವದೇವ ದಾಖಲಿಸಿದ್ದಾನೆ. "ಪೊಡವಿಪತಿಗಳ ಶಿರೋಮಣಿಯೆಪರುಷದ ಖಣಿಯೆ" ಸೋದೆ ಬಸವಲಿಂಗರಾಜ ಅಂದಿನ ದಿನಮಾನದ ರಾಜರುಗಳ ಪೈಕಿ ಶಿರೋಮಣಿ ಎಂತೆ ಇದ್ದ, ಪರುಷದ ಖಣಿಯೆ ಅಂದರೆ ಬೇರೆ ಯಾವುದೇ ಲೋಹಕ್ಕೆ ಪರುಷ ಪಾತ್ರೆ ಮುಟ್ಟಿದರೆ ಅದು ಚಿನ್ನದ ಸ್ವರೂಪ ಪಡಿಯುವದಂತೆ ಅಂತಹ ವ್ಯಕ್ತಿ ನಮ್ಮ ಸೋವೆ ಬಸವಲಿಂಗರಾಜ ಎಂದಿದ್ದಾನೆ ಕವಿ.

ಸೋದೆ ಬಸವಲಿಂಗರಾಜನ ಗುಣವನ್ನು ವರ್ಣಿಸುತ್ತ ಹಿಡಿದ ಛಲವನ್ನು ಬಿಡದ, ಕ್ಷುದ್ರರನೆಲ್ಲ ನಿಗ್ರಹಿಸಿ, ಖಳರಿಗೆ ಆಸ್ಪದ ಕೊಡದೆ, ತನ್ನನ್ನು ನಂಬಿದವರ ಕಡುದಯದಿ ರಕ್ಷಿಸುವ ಧೃಡವುಳ್ಳ ಶಿವಭಕ್ತ ಕುಲತಿಲಕನೀನು ಎಂದು ಕವಿ ಹೊಗಳಿದ್ದಾನೆ.

ವರ ಬಸವದಂಡಾದೀಶ ಮತ್ತು ನೀಲಾಂಬಿಕೆ ತಾಯಿಯವರು ಕರಿದಿಷ್ಟಲಿಂಗವನ್ನು ನಿರೀಕ್ಷಿಸುತ್ತಾ ಮಹಾಲಿಂಗದಲ್ಲಿ ಲೀನರಾದ ರೀತಿ ಸರಸಕೋವಿದ ಸೋದೆ ಬಸವಭೂಪಾಲ ನೀ ಗುರು ಮಳೆಯಮಲ್ಲೇಶನೇಡ ವೆರೆದ ಪರಿಯ ಎಂದರೆ ಮಳೆಯಮಲ್ಲೇಶನಲ್ಲಿ ಐಕ್ಯವಾದುದ್ದನ್ನು ಸ್ಪಷ್ಟವಾಗಿ ಕವಿ ಹೇಳಿದ್ದಾನೆ.

ಕೆಳದಿ ಬಸವೇಂದ್ರ (1694–1714) ರಲ್ಲಿ ಆಳಿದ ಕೆಳದಿ ಸಂಸ್ಥಾನದ ದೊರೆ ಕುರಿತು ಒಂದು ಸ್ವರವಚನ ರಚಿಸಿದ್ದು ಅದರಲ್ಲಿ ಆತನ ಗುಣ ವಿಶೇಷಣಗಳನ್ನು ವರ್ಣಿಸಿದ್ದಾನೆ.

ಕಂಡನು ಸೋಮಭೂಪಾಲನ ಸುಪ್ರ
ಚಂಡನಿಮಿತ ಭೂಪಾಲನ
ಮಂಡಳೇಶ್ವರರ ಶಿರೋಮಣಿಯೆನಿಸಿ
ಖಂಡತೇಜೋಮೂರ್ತಿಯೊಳು ಮನವೆರದನ ॥ ಪಲ್ಲವಿ ॥

ವರ ಸದಾಚಾರ ಸದ್ಗುಣಶೀಲ ಘನ
ಗುರು ಜಂಗಮದಲಿ ಲೋಲ
ನಿರುತಾಷ್ಟಾವರಣಾಂಗ ಶರಣಜನರ ಸಂಗ
ಹೆರೆಹಿಂಗ ಸಲೆ ಸುಪ್ರಸಂಗವ ಹರುಷದಿಂ ॥ 1 ॥

ಮಾರನಿಂದತಿ ಚೆಲ್ವ ರೂಪನ ಮಿಗೆ
ಸಾರ ಸತ್ಕೀರ್ತಿ ಕಲಾಪನ
ಧೀರನ ಶರಧಿಗಂಭೀರನ ಶೃಂಗಾರ
ಹಾರನ ಪರಮ ಉದಾರನ ಹರುಷದಿಂ ॥ 2 ॥

ದೊರೆ ಕೆಳದಿಯ ಬಸವೇಂದ್ರನ
ಉರುತರ ಉದರಾಬ್ಧಿಗೆ ಚಂದ್ರನ
ವರ ಗುರು ಮಳೆಯಮಲ್ಲೇಶನ ಕೃಪೆಯಿಂದ
ಹರುಷದಿ ಸಾಮ್ರಾಜ್ಯ ಸ್ಥಿರವಾಗಿ ಆಳ್ದನ ॥ 3 ॥

ಈ ಸ್ವರವಚನದಲ್ಲಿ ಸೋಮಭೂಪಾಲನ ಮಗ ಕೆಳದಿಯ ಬಸವೇಂದ್ರ ಅಂದಿನ ದಿನಮಾನದ ಮಂಡಳೇಶ್ವರರ ಪೈಕಿ ಶಿರೋಮಣಿಯಂತೆ ಇದ್ದವನು ಆತನಲ್ಲಿ ಸದಾಚಾರ, ಸದ್ಗುಣಶೀಲನಾಗಿದ್ದ, ಘನ ಅಂದರೆ ಉನ್ನತವಾದ ವ್ಯಕ್ತಿತ್ವವುಳ್ಳವನು ಗುರು–ಲಿಂಗ–ಜಂಗದಲ್ಲಿ ಭಕ್ತಿ, ಅಷ್ಟಾವರಣ, ಪಂಚಾಚಾರ ಷಡುಸ್ಥಲದಲ್ಲಿನಿಷ್ಠೆ ಉಳ್ಳವನು. ಶರಣರ ಜೊತೆ ಶಿವಾನುಭವಿಗಳ ಜೊತೆ ಸದಾ ಶಿವಾನುಭವವನ್ನು ಕುರಿತು ಚರ್ಚೆ ಮಾಡಲು ಆಸಕ್ತಿ ಉಳ್ಳವನು. ನೋಡಲು ಮನ್ಮಥನಿಗಿಂತ ಸುಂದರವಾಗಿದ್ದ ಬಹಳ ಕೀರ್ತಿವಂತನಾಗಿ ಪ್ರಸಿದ್ಧನಾಗಿದ್ದ ಧೀರ, ಸಮುದ್ರದಷ್ಟು ಗಂಭೀರವಾದ ನಡೆ ನುಡಿ, ಜೀವನಕ್ಕೆ ಬೇಕಾದಷ್ಟು ರಸಿಕತೆಯ ಅವನಲ್ಲಿ ಇತ್ತು. ಇದನ್ನು ಕವಿ "ಶೃಂಗಾರ ಹಾರವ" ಎಂದು ಕರೆದಿದ್ದಾನೆ. ಜೊತೆಗೆ ಉದಾರಿಯು ಆಗಿದ್ದ ಎಂದಿದ್ದಾನೆ.

ದೊರೆ ಕೆಳದಿಯ ಬಸವೇಂದ್ರ ಉರುತರ ಅರ್ಥಾತ್ ಕೆಳದಿ ರಾಜರ ಪೈಕಿ ಚಂದ್ರನಂತೆ ಶೋಭಿಸುತ್ತಿದ್ದ ಇಂತಹ ರಾಜನ ಸಾಮ್ರಾಜ್ಯ ಅರ್ಥಾತ್ ರಾಜ್ಯವನ್ನೂ ಸ್ಥಿರವಾಗಿ ಆಳ್ದನ ಎಂದರೆ ಪ್ರಜೆಗಳು ಮೆಚ್ಚುವಂತೆ ರಾಜ್ಯಭಾರ ಮಾಡಿದವನು.

ಕೆಳದಿ ಸೋಮಶೇಖರನ ಕುರಿತು ಸ್ವರವಚನ 57, 58, 59, 60 ರಲ್ಲಿ ಉಲ್ಲೇಖಿಸಿದ್ದಾನೆ.

ಉಡುಪತಿಯ ಜಲಜಸಬ ಎಡೆವಿಡದೆ ಚರಿಸುತಿವೆ
ಪೊಡವಿಪತಿ ಸೋಮಶೇಖರಭೂಪನ
ಮೃಡಮೂರ್ತಿ ಮಳೆಯಮಲ್ಲೇಶ್ವರನ ಕೃಪೆಯಿಂದೆ
ಒಡಗೋಡಿದಂದ ಕಡು ಬೆಡಗಾಯ್ತು ರಮಣಿ
(58ನೇ ಸ್ವರವಚನ – 3ನೇ ಮಡಿ)

ಸರೋವರದಲ್ಲಿರುವ ಕಮಲಪುಷ್ಪ ಚಂದ್ರನ ಚಲುವನ್ನು ಅನುಸರಿಸುವಂತೆ ಈ ಧರೆಗೆ ದೊರೆಯಾದ ಸೋಮಶೇಖರಭೂಪ ಮಳೆಯಮಲ್ಲೇಶನ ಕೃಪೆಯಿಂದ ಬೆಳಗುತ್ತಿದ್ದಾನೆ ಎಂದು ವರ್ಣಿಸಿದ್ದಾನೆ.

ಅರಿತಿಮರ ಮಾರ್ತಾಂಡ ಆಡಿತಪ್ಪುವರಗಂಡ
ದೊರೆ ಸೋಮಶೇಖರೇಂದ್ರ ಧರೆಯೊಳ್ ಭೋಗ ದೇವೇಂದ್ರ
ಹರುಷದಿಂದಲಿ ಎನ್ನನು ಕೂಡಿದುದನು ವಿರಚಿಸಲರಿದವನು
ಕಮಳೆಯಮಲ್ಲೇಶ್ವರನ ಕರುಣದಿಂದ ಮೆಚ್ಚಿದ ಬಗೆಯ ಛಂದ
"59ನೇ ಸ್ವರವಚನ 3ನೇ ಪದ್ಯ"

ಶತ್ರುಗಳಿಗೆ ಅರಿತಿಮಿರಮಾರ್ತಂಡ, ಹೇಳಿದ್ದನ್ನು ನಡೆಸಿಕೊಡದೆ ಇರುವವರಿಗೆ ಆಡಿತಪ್ಪುವರಗಂಡನಮ್ಮ ಕೆಳದಿ ಸೋಮಶೇಖರೇಂದ್ರ, ಭೂಮಿಯ ಮೇಲೆ ದೇವಲೋಕದ ದೇವೇಂದ್ರನಂತೆ ಬದುಕಿ ಬಾಳುತ್ತಿದ್ದಾರೆ.

ನಮ್ಮ ಕೆಳದಿ ರಾಜ ಇಂತಹ ರಾಜನನ್ನು ಕೂಡಿದುದು ವಿರಚಿಸಲರಿದದನು ಮಳೆಯಮಲ್ಲೇಶ್ವರನ ಕರಣದಿಂದ ಮೆಚ್ಚಿದ ಬಗೆಯು ಛಂದ ಎಂದು ಕೋರಿದ್ದಾನೆ ಕವಿ.

ತರಹರಿಸದು ಮನವಿಂದು ತವಕದಿ ಬಂದು
ದೊರೆ ಸೋಮಶೇಖರ ಬಾರೆಂದು
ವರ ಗುರು ಮಳೆಯ ಮಲ್ಲೇಶ್ವರನ ಕೃಪೆಯಿಂ
ದಿರದೆ ನೀ ಎನ್ನ ನೆರೆವ ಸುಜಾಣೆ ನೀ

(90ನೇ ಸ್ವರವಚನ – 7ನೇ ಪದ್ಯ)

ಶೃಂಗಾರರಸದಿಂದ ಕೂಡಿರುವ ಈ ಸ್ವರವಚನ ಅಂದಿನ ರಾಜಕುಮಾರರ ಶೃಂಗಾರಚೇಷ್ಠೆಯ ವಿವರವನ್ನುನೀಡುತ್ತದೆ ಕೆಳದಿ ಸೋಮಶೇಖರನ ನೆನೆದು ಹೇಳುವಂತಹ ಶೃಂಗಾರರಸಯುಕ್ತ ಸ್ವರವಚನ.

ಮರಿಶಾಂತ ಬಸವದೇವ ವೀರಶೈವಧರ್ಮ, ತನ್ನಗೆ ಆಶ್ರಯ ಕೊಟ್ಟ ಸ್ವಾದಿ ಅರಸರಾದ ಸೋದೆ ಸದಾಶಿವರಾಜ (1974–1697) ಸೋದೆ ಬಸವಲಿಂಗರಾಜ (1697–1745) ಸಮಕಾಲೀನ ರಾಜರಾದ ಕೆಳದಿ ಬಸವೇಂದ್ರ (1696–1714) ಕೆಳದಿ ಸೋಮಶೇಖರ (1714–1736) ರ ಬಗ್ಗೆ ವಿಶೇಷ ಮಾಹಿತಿ ನೀಡಿದ್ದಾನೆ.

ಕವಿಯ ಕಾಲದಲ್ಲಿ ಕ್ರಿ.ಶ. 1726ರಲ್ಲಿ ಉಂಟಾದ ಬರದ ಹಾವಳಿಯನ್ನು ಕುರಿತು ರಚಿತವಾಗಿದೆ. ಈ ಬರ ಸೋದೆ ಬಸವಲಿಂಗರಾಜನ ಕಾಲಾವಧಿಗೆ (1697–1745) ಸಂಬಂಧಿಸಿದೆ. ಅಂದಿನ ಬರದ ವಿವರವನ್ನು ಈ ಸ್ವರವಚನದಲ್ಲಿ ವಿವರವಾಗಿ ನೀಡಿದ್ದಾನೆ.

ಕರುಣಿಸು ಮಳೆಯನು ಕರುಣಸಾಗರನೆ
ಧರಿಣಿಯೆಲ್ಲವು ಉರಿವುತಲಿದೆ ಹರನೆ ॥ ಪಲ್ಲವಿ ॥

ಪರಾಭವನಾಮ ವರುಷ ಬರಲೆಲ್ಲ
ಧರೆಗೆಲ್ಲಿ ಬರಗಾಲವು ಬಂದಿತಲ್ಲ
ಪರಿಪರಿ ಗೆಡ್ಡೆ ಗೆಣಸು ಸೊಪ್ಪನೆಲ್ಲ
ಉರಿಯೆದ್ದು ಒಡಲಗಿಚ್ಚಿಗೆ ತಿಂದರಲ್ಲ ॥ 1 ॥

ನಾವೆ ಮೂಗುತಿ ಕಂಠಮಾಲೆಯನೆಲ್ಲ
ಮೇಲಾದ ಹರದರಲ್ಲಡವಿಟ್ಟರಲ್ಲ
ಸಾಲವ ಬೇಡ ಹೋದರೆ ಹುಟ್ಟದಲ್ಲ
ಬಾಲೆಯರುಗಳ ಹಂಬಲ ಬಿಟ್ಟರೆಲ್ಲ ॥ 2 ॥

ರೊಕ್ಕವ ಕೊಟ್ಟು ಕೊಂಬರೆ ಗತಿಯಿಲ್ಲ
ಮಕ್ಕಳ ಮಾರಿಕೋಂಡರು ಜನರೆಲ್ಲ
ಸೊಕ್ಕಿದವರ ಹಲ್ಲ ಮುರಿಸಿದೆಯಲ್ಲ
ಮುಕ್ಕಣ್ಣ ಶಿವ ಮಡದೀತು ಲೋಕವೆಲ್ಲ ॥ 3 ॥

ದಾರಿ ಬಟ್ಟೆಯಲಿ ಕಳವು ಹೆಚ್ಚೀತಲ್ಲ
ಮಾರುವ ಕಾಳ ಬೇಡಲು ಕೊಡರಲ್ಲ
ಊರೂರದಪ್ಪ ತಿರಿಯೆ ಹುಟ್ಟದಲ್ಲ
ಬಾಲೆಯರುಗಳ ಹಂಬಲ ಬಿಟ್ಟರೆಲ್ಲ ॥4॥

ಪಸುವಧೆ ಶಿಶುಹತ್ಯೆಗಳು ಆಯಿತಲ್ಲ
ಹಸಿಯ ಖಂಡವ ತಿಂಮ ಲಯವಾದರೆಲ್ಲ
ಬಸವಗಳ್ ತೃಣವ ಕಾಣದೆ ಹೋದವಲ್ಲ
ಉಸುರಬಹುದೆ ಮಂದಿ ಪಡಿಪಾಲನೆಲ್ಲ ॥ 5 ॥

ಚರಪಾಡಿ ನೋಡಿ ದೇಶಂಗಳನೆಲ್ಲ
ಪುರ ಬನವಾಸಿಯ ಕ್ಷೇತ್ರಕೆ ಸರಿಯಿಲ್ಲ
ದಿರೆ ಕಂಡು ಹಿರಿಯಮಠದಿ ನಿಂದೆಯಲ್ಲ
ವರ ಗುರು ನಿನ್ನ ಸೂತ್ರವು ಹೊರತಿಲ್ಲ ॥ 6 ॥

ಪೊಡವಿಯೊಳ್ ಮಳೆಯಮಲ್ಲೇಶ ನೀನಲ್ಲ
ದಡಿಗಡಿಗೆಯು ಕಾಯ್ವ ದೈವವಿನ್ನಿಲ್ಲ
ಮೃಡ ನಿಮ್ಮ ಪಾದ ಧ್ಯಾನದೊಳಿಹರೆಲ್ಲ
ಕುಡು ಬೇಗ ಮೇಘವೃಷ್ಟಿಯ ಮರ್ತ್ಯಕೆಲ್ಲ ॥ 7 ॥

ಕರುಣಿಸು ಮಳೆಯನು ಕರುಣಾಸಾಗರನೆ ಭೂಮಿಯೆಲ್ಲ ಉರಿವುತಲಿದೆ ಹರನೆ ಎಂದು ಆರ್ತನಾದದಿಂದ ಕೂಗುತ್ತಾ ಇದ್ದಾನೆ.

ಪರಾಭವನಾಮ ವರುಷ ಬರವೆಲ್ಲ ಭೂಮಿಯು ಬರಗಾಲವು ಬಂದಿತಲ್ಲ. ಜನ ಪರಿಪರಿ ಗೆಡ್ಡೆ ಗೆಣಸು ಸೊಪ್ಪನೆಲ್ಲ ಉರಿಯೆದ್ದು ಒಡಲಗಿಚ್ಚಿಗೆ ತಿಂದರಲ್ಲ. ಇಲ್ಲಿ ಕವಿ ಮನುಷ್ಯರು ಹಸಿವಿನ ಉರಿಯೆದ್ದು ತಡೆಯಲಾರದೆ ಏನೇನು ತಿಂದರು ಎಂಬುದನ್ನು ವಿವರವಾಗಿ ತಿಳಿಸಿದ್ದಾನೆ. ಜನ ಹಸಿವಿಗೋಸ್ಕರ ಏನೆಲ್ಲ ಅಡವಿಟ್ಟರು ಎಂಬುದನ್ನು ಕವಿ ಪಟ್ಟಿ ಮಾಡಿದ್ದಾನೆ. ಓಲೆ, ಮೂಗುತಿ, ಕಂಠಮಾಲೆಯನ್ನು ವ್ಯಾಪಾರಸ್ಥರಲ್ಲಿ ಅಡ ಇಟ್ಟು ಪಡೆದ ಹಣದಿಂದ ಬದುಕಿದರು. ಜನ ಸಾಲವ ಬೇಡ ಹೋದರೆ ಹುಟ್ಟುತಾ ಇಲ್ಲ. ಸಾಮಾನ್ಯ ಜನರು ಬಾಲೆಯರ ಹಂಬಲ ಬಿಟ್ಟರೆಲ್ಲ ಎಂದಿದ್ದಾನೆ ಕವಿ. ಹಣವನ್ನು ಕೊಟ್ಟು ವ್ಯಾಪಾರ ಮಾಡುವವರು ಗತಿಯಿಲ್ಲ. ಮಕ್ಕಳ ಮಾರಿಕೊಂಡರು ಜನರೆಲ್ಲ. ಹೊಟ್ಟೆಗೆ ಹಿಟ್ಟು ಇಲ್ಲದೆ ಅನ್ನಕ್ಕೋಸ್ಕರ ಮಕ್ಕಳನ್ನು ಮಾರಿ ಕೊಂಡದ್ದು ಕವಿ ದಾಖಲಿಸಿದ್ದಾನೆ. ಹಣದಮದ, ಯೌವನ ಮದ, ಜಾತಿಮದದಿಂದ ತುಂಬಿ ಜನರ ಸೊಕ್ಕಿದವರ ಹಲ್ಲ ಮುರಿಸಿದೆಯಲ್ಲ ಮುಕ್ಕಣ್ಣ ಶಿವ ಮಡದೀತು ಲೋಕವೆಲ್ಲ ಎಂದಿದ್ದಾನೆ ಕವಿ.

ದಾರಿಯಲ್ಲಿ ಬರುವಾಗ ಕಳವು ಹೆಚ್ಚೀತಲ್ಲ. ಮಾರವ ಕಾಳ ಬೇಡಲು ಕೊಡುವವರಿಲ್ಲ. ಹೊಟ್ಟೆಗೆ ಬೇಕಾದ ಆಹಾರವನ್ನು ಊರೂರು ತಿರುಗಿದರು ಹುಟ್ಟುತ್ತಾ ಇಲ್ಲ. ಬಾಲೆಯರುಗಳ ಹಂಬಲ ಬಿಟ್ಟರಲ್ಲ.

ಬರಗಾಲ ದೆಸೆಯಿಂದ ಪಶುವಧೆ, ಶಿಶುಹತ್ಯೆಗಳು ಆಯಿತಲ್ಲ. ಹಸಿಯ ಖಂಡವ ತಿಂದು ಲಯವಾದರೆಲ್ಲ ಅರ್ಥಾತ್ ಹಸಿಯ ಮಾಂಸವನ್ನು ತಿಂದು ಅನಾರೋಗ್ಯ ಉಂಟಾಗಿ ಜನರು ಸತ್ತಿದ್ದನ್ನು ಕವಿ ದಾಖಲಿಸಿದ್ದಾನೆ. ಬ ಸವಗಳ ತೃಣವ ಕಾಣದೆ ಹೋದನಲ್ಲ. ಅರ್ಥಾತ್ ಎತ್ತುಗಳಿಗೆ ಹುಲ್ಲು ಸಿಗದೆ ಬಡುಕಲು ಆದವು. ಈ ರೀತಿ ಸಾಮಾನ್ಯ ಜನತೆ ತೊಂದರೆ ಅನುಭವಿಸಿದನ್ನು ಕವಿ ಉಸುರಬಹುದೆ ಮಂದಿ ಪಡಿಪಾಟನೆಲ್ಲ ಎಂದು ಕವಿ ಹಪಹಪಿಸಿದ್ದಾನೆ. ಚರಿಸಾಡಿ ನೋಡಿ ದೇಶಂಗಳನೆಲ್ಲ ಪುರ ಬನವಾಸಿಯ ಕ್ಷೇತ್ರಕ್ಕೆ ಸರಿಯಿಲ್ಲದಿರೆ ಕಂಡು ಹಿರಿಯಮಠದಿ ನಿಂದೆಯಲ್ಲವರ ಗುರು ನಿನ್ನ ಸೂತ್ರವು ಹೊರೆತಿಲ್ಲ.

ಕಡೆಯಲ್ಲಿ ಕವಿ ಪರಮೇಶ್ವರನನ್ನು ಈ ರೀತಿ ಸ್ತೋತ್ರ ಮಾಡಿದ್ದಾನೆ. "ಪೊಡವಿಯೊಳ್ ಮಳೆಯಮಲ್ಲೇಶನೀನಲ್ಲ ದಡಿಗಡಿಗೆಯು ಕಾಯ್ವ ದೈವವಿನ್ನಿಲ್ಲ" ಮುಂದುವರೆದು ಕವಿ ಪರಮೇಶ್ವರ ನಿಮ್ಮ ಪಾದ ಧ್ಯಾನದೊಳಿಹರೆಲ್ಲ ಕೊಡು ಬೇಗ ಮೇಘವೃಷ್ಟಿಯ ಮರ್ತ್ಯಕೆಲ್ಲ ಎಂದಿದ್ದಾನೆ. ಅಂದಿನ ದಿನದ ಬರಗಾಲ ಚಿತ್ರವನ್ನು ಕವಿ ಕಣ್ಣಿಗೆ ಕಾಣುವಂತೆ ಚಿತ್ರಿಸಿದ್ದಾನೆ. ಇಂತಹ ಮಾಹಿತಿಯನ್ನು ಇತಿಹಾಸಜ್ಞರು, ಕನ್ನಡ ವಿದ್ವಾಂಸರು ಸೂಕ್ಷ್ಮವಾಗಿ ಗಮನಿಸಬೇಕು.

ಶಾಂತ ಬಸವರಾಜೇಂದ್ರ ಅಥವಾ ಮರಿಶಾಂತಬಸವದೇವ ವಿರಚಿತ ಶ್ರೀ ಸೋದೆ ಬಸವಲಿಂಗರಾಜನ ಭಕ್ತಿ ಚಂದ್ರೋದಯ

ಸೋದೆ ಸದಾಶಿವರಾಯನ (1674-1697) ಶಿವೈಕ್ಯರಾದ ನಂತರ ಸೋವೆ ಬಸವಲಿಂಗರಾಜ (1697-1745) ತನ್ನ ತಂದೆಯ ಅಂತ್ಯಕ್ರಿಯೆ ನೆರವೇರಿಸಿದ ರೀತಿ ಆಗ ನಡೆದ ಧಾರ್ಮಿಕ ಆಚರಣೆಗಳನಿರೂಪಣೆ ಕೃತಿಯ ವಸ್ತು. ಕೃತಿಯ ಆದಿಯಲ್ಲಿ ಪಲ್ಲವಿಯೊಂದಿದ್ದು ಅನಂತರ 16 ವಾರ್ಧಕ ಷಟ್ಪದಿಗಳಿವೆ. ಕೃತಿಯ ಕೊನೆಯಲ್ಲಿ ಕಂದವೊಂದಿದೆ. ಕೃತಿಯಲ್ಲಿ ಅಂದಿನ ಕಾಲದಲ್ಲಿ ಅರಮನೆಯಲ್ಲಿ ಅಚರಿಸುತ್ತಿದ್ದ ಧಾರ್ಮಿಕ ವಿಧಿ-ವಿಧಾನಗಳನ್ನು ಕುರಿತು ಒಂದು ಅಪರೂಪದ ಚಿತ್ರಣವನ್ನು ಒಳಗೊಂಡಿದೆ. ಅಲ್ಲದೆ ಆ ಕಾಲದ ಊಟ ಉಪಚಾರಗಳಿಗೆ ಸಂಬಂಧಿಸಿದ ಒಂದು ಸಾಹಿತ್ಯಕ ದಾಖಲೆ ಇಲ್ಲಿ ಲಭಿಸುತ್ತದೆ. ಈ ಲಘುಕೃತಿಯನ್ನು ಲಿಂ॥ಎಸ್. ಶಿವಣ್ಣನವರು ಸಂಪಾದಿಸಿದ್ದು ಬಸವ ಪಥ ಸಂಪುಟ 4 ಸಂಚಿಕೆ 10 ಜನವರಿ 1682 ರಲ್ಲಿಪ್ರಕಟವಾಗಿದೆ.

ಶ್ರೀ ವಿಮಲ ಗುರು ಮಳೆಯ ನಂದೀಶ್ವರನ ಚರಣ ಸೇವಾ ದುರಂದರನಾದ ಪರಮ ಪಾವನ ಚರಿತ್ರವೆನಿಸಿದ ಸದಾಶಿವರಾಯನ ಉದರದಲ್ಲಿ ಜನಿಸಿದ ಬಸವಲಿಂಗಭೂಪಾಲ, ಸದ್ಗುಣಶೀಲ, ಚರಲಿಂಗ ದಾಸೋಹಿ ಕರದಲ್ಲಿ ಆರಾಧನೆ ಮಾಡುವ ಇಷ್ಟಲಿಂಗ ಮೋಹಿ, ಸದಾ ಪರಮೇಶ್ವರನ ಪಾದಗಳ ಸೇವೆಯನ್ನು ಮಾಡಲು ಇಷ್ಟಪಡುವ ಮಹಾನ್ ಭಕ್ತಿವಂತ ಇವನ್ನು ಕವಿ 'ಹರಪದಾಂಬುಜಭೃಂಗ' ಎಂದು ಕರೆದಿದ್ದಾನೆ ಮುಂದುವರೆದು ಶರಣಜನರೊಳುಸಂಗ ಹರೆಹಿಂಗ ಸುಪ್ರಸಂಗ ಎಂದು ಹೊಗಳಿದ್ದಾನೆ. ಸದಾ ಅಷ್ಟಾವರ್ಣಗಳ ಬಗ್ಗೆ ಅತಿಯಾದ ಶ್ರದ್ಧೆ, ಪರಮ ಕರುಣಾಪಾನ, ನೆರೆ ನಂಬಿದವರ ಕಾಯ್ವ ಧೀರ, ಪರೋಪಕಾರಿ ದೊರೆ ಸದಾಶಿವನನುಜ್ಞೆಯ ಭಕ್ತಿಯುತ್ಸವಹವ ಒರವೆವಾನಂದದಿಂದ ಶ್ರೀ ಸದಾಶಿವರಾಯ ಶಿವನೊಳಗೆ ಬೆರೆಯಲು ಅರ್ಥಾತ್ ಶಿವೈಕ್ಯನಾಗಲು ಮಹೇಶ್ವರ ಚರಣಮಂ ಪಿಡಿದು ಸಂತೋಷದಿಂದ ಬಹು ಲೇಸಾಗಿ ಅರ್ಘ್ಯಪಾದ್ಯಾಚಮನವನ್ನು ಕೊಟ್ಟು ತದ ನಂತರ ಜಲ ಎರೆದು ಭಸ್ಮವನ್ನು ಧರಿಸಿ ಗಂಧಾಕ್ಷತೆಯ ಪುಷ್ಪಗಳನ್ನು ಧರಿಸಿ, ಧೂಪ, ದೀಪಗಳನ್ನು ಬೆಳಗಿ ಈಶ ಓಂ ಜಯ ಜಯವೆನುತ್ತ ಘಂಟೆಯ ನುಡಿಸಿ ದರ್ಪಣವ ಪಿಡಿದರ್ಪಿಸಿ ನಂತರ ಛತ್ರ, ಚಾಮರ, ಬೇರುತಿಹ ಕಹಳೆ, ಸಪ್ತಸ್ವರಗಳಿಂದುಲಿವ ಶಬ್ದ, ನಾರಿಯರ ಶೋಭಾನಪಾಠಕರು ಕೈಯೆತ್ತಿ ಪೊಗಳಲಾನಂದದಿಂದ ಮುಂದುವರೆದು ನಾರಾಯಣಾಕ್ಷಿ ಚರಣದೊಳು ರಾಜಿಸುವ ಗಂಭೀರ ಶಿವ ಬಿರುದನೋದವಾ ಕಲಕೇತುರೆ ಸಾರಿ ಡಂಗುರ ಹೊಯ್ಯಲು ಸರ್ವ ಸಂತೋಷದಿಂದ ಭೂರಿಜನ ನೋಡತಿಹರು. ಇಲ್ಲಿ ಕವಿ ನಾರಿಯರು ಶೋಭಾನ ಹೇಳುತ್ತಿದ್ದರು ಅಂದರೆ ಶಿವ ಪಾರಮ್ಯವಾದ ಭಕ್ತಿಗೀತೆಗಳ ಗಾಯನ ಇರಬಹುದು. ಅದನ್ನು ಕವಿ ಶೋಭಾನೆ ಎಂದು ಕರೆದಿರಬಹುದು.

ಲಿಂಗದೇಹವನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುವಾಗ ಜಾಗಟೆ, ಗಂಟೆ, ಕರಡೆ, ಕೈತಾಳ, ಸಮ್ಮೇಳ, ತುಂಬರುವೀಣೆ, ನಾನಾ ವಾದ್ಯಗಳನ್ನು ನುಡಿಸುತ್ತಾ ನೃತ್ಯಗಾತಿಯರು ನೃತ್ಯ ಮಾಡುತ್ತ. ಆ ನೃತ್ಯದ ಗತಿಯ ತಕ್ಕಂತೆ ಮದ್ದಳೆಯನ್ನು ಬಾರಿಸುತ್ತ ಅಲ್ಲಲ್ಲಿ ಪುಷ್ಪಾಂಲಿಯನ್ನು ಲಿಂಗದೇಹಕ್ಕೆ ಸಲ್ಲಿಸುತ್ತಾ ಬಿರಿಸು ಬಾಣಗಳ ಭೋರ್ಗರೆಯುತ್ತಾ ಸಂಭ್ರಮದಲ್ಲಿ ಲಿಂಗದೇಹವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗುತ್ತಾ ಇದ್ದುದನ್ನು ಕವಿ ದಾಖಲಿಸಿದ್ದಾನೆ. ಪರಶಿವನ ತದ್ರೂಪ ಅವತಾರಿಗಳಾದ ಜಂಗಮ ಪುಂಗವರಿಗೆ ಒಂದೊಂದುಪರಿಯ ವಾಹನಗಳಲ್ಲಿ ಕುಳ್ಳಿರಿಸಿಕೊಂಡು ಲಿಂಗದೇಹದ ಮುಂಭಾಗ ಮೆರವಣಿಗೆ ಮುಖಾಂತರ ಹೊರಟು ಸೋದೆ ಸದಾಶಿವರಾಯ ಲಿಂಗದೇಹದ ಕ್ರಿಯಾಸಮಾಧಿ ಸ್ಥಳದಲ್ಲಿ ಲಿಂಗದೇಹವನ್ನು ಸಮಾಧಿಯಲ್ಲಿ ಗದ್ದುಗೆ ಮಾಡಿದರು. ರಾಜಪುತ್ರರು, ಸೋದೆ ರಾಜವಂಶಸ್ಥರು, ಇತರೆ ರಾಜಪರಿವಾರದವರು ಮಂತ್ರಿಗಳು, ಸೇನಾಧಿಪತಿಗಳು,ಶರಣಜನ ಬಂಧುಗಳು ಜಂಗಮರ ಚರಣಕ್ಕೆ ಪೊಡಮಟ್ಟು ಕರವೆತ್ತಿ ಪುಷ್ಪಾಂಜಲಿ ಮಾಡಿ ಬೇಗ ಅರಮನೆಗೆ ಬಿಜಂಗೈಯಿಸಿದರು.

ಅರಮನೆಗೆ ಬಂದ ಜಂಗಮ ಪುಂಗವರ ಪಾದಾರ್ಚನೆ ಅರ್ಥಾತ್ ದೂಳಿಪಾದಪೂಜೆ ಮಾಡಿ ಒಳಗೆ ಕರೆದುಕೊಂಡು ಹೋಗಿ ಚರಣಾಂಬುಜಕ್ಕೆ ನಮಸ್ಕಾರ ಮಾಡಿ ತದನಂತರ ಸ್ನಾನ ಶಿವಪೂಜೆ, ಪಾದೋದಕ-ಪ್ರಸಾದ ಕ್ರಿಯೆ ಮುಗಿದ

ಮೇಲೆ ಅವರಿಗೆ ನಾನಾ ವಿಧವಾದ ಭಕ್ಷ್ಯಗಳನ್ನು ನಿವೇದನೆ ಮಾಡಿದ್ದು ಉಪ್ಪು, ಉಪ್ಪಿನಕಾಯಿ ಪರಿಪರಿಯ ಶಾಖಹಪ್ಪಳ ಅರ್ಥಾತ್ ಸುಟ್ಟಹಪ್ಪಳಗಳು, ಸಂಡಿಗೆಗಳು ನಾನಾವಿಧವಾದ ಪಾಯಸಗಳು ಅಕ್ಕಿಪಾಯಸ, ಪರಡಿಪಾಯಸ, ಗೌಲೆಪಾಯಸ, ಗುಳಿಗೆಯಾಪಾಯಸ, ಸಣ್ಣ ಸುರ್ಜುಕದ ಪಾಯಸಣ್ಣಿಪಾಯಸ, ಆನಿಕಲ್ಲಪಾಯಸ, ಸೇವಗೆಪಾಯಸ, ಅವಲಕ್ಕಿಪಾಯಸ, ಕಳಿಲೆಯಾಪಾಯಸ, ಹೀಗೆ ಹಲವು ಪಾಯಸಗಳನ್ನು ಎಡೆಮಾಡಿದರು.

ಗಾರಿಗೆಯ ಬಿಸಿಹೋಳಿಗೆ, ಉದ್ದಿನವಡೆ, ಸಾರತರ ತುಪ್ಪರೊಟ್ಟಿ ಸುರುಳಿ ಕಜ್ಜಾಯ, ಕ್ಷೀರಗಡಬು, ಶಿರಾ, ಸಜೇನ, ಸಕ್ಕರೆ ಕರಜಿಕಾಯಿ, ಲಡ್ಡಿಗೆ, ಚಕ್ಕುಲಿ, ಹೂರಣದ ಕಡಬು, ಘೃತ, ಕದಳಿಯಸಾರ, ತನಿವಣ್ಣು, ತೆಂಗಿನಕಾಯಿ ಸಕ್ಕರೆಯನ್ನು ವೀರಮಾಹೇಶ್ವರರಿಗೆ ಎಡೆಮಾಡಿ ಕರ್ಪೂರ ಹಚ್ಚಿ ನಮಸ್ಕಾರ ಮಾಡಿ ಶರಣಾರ್ಥಿ ಸಲ್ಲಿಸಿದರು. ತದನಂತರ ಅವರಿಂದ ಶಿವಭಕ್ತರು ಕರುಣಪ್ರಸಾದ ಪಡೆದರು. ಮಹಾಪ್ರಸಾದದ ನಂತರ ಚಿಗುರು ವೀಳೆದೆಲೆ, ಅಷ್ಟಭಾಗ ಕಾಯಿಪತ್ರೆ, ಲವಂಗ ಬೇರದ ಗುಳಿಗೆ (ಲಾಮಂಚದ ಸಾರದ ಗುಳಿಗೆ?) ತದನಂತರ ಅವರ ದೇಹಕ್ಕೆ ಪೂಸಲು ಪರಿಮಳ ಸುಗಂಧ, ಕಸ್ತೂರಿ, ಪ್ರಣುಗು, ಜವ್ವಾದಿ ಸುರಗಿ, ಸುರಹೊನ್ನೆ ಮಲ್ಲಿಗೆ ಜಾಜಿ ಸರಗಳು ಜಂಗಮಕ್ಕೆ ನೀಡಿ ಸಂತಸಪಟ್ಟರು.

ಜಂಗಮರಿಗೆ ಶಿವದಾರ, ಸೆಚ್ಚ, ಹುದುಗಿನ ಪಾವಡ ವಸ್ತ್ರ, ನವನೂತನದ ವೇಲು, ಪಡಲಾತಿ ಕರಿಬಳಿ, ಸುಂದರವಾದ ಹೊದ್ದಿಯುವ ಶಾಲು, ಕಂಥೆ (ಬಟ್ಟೆ) ಕಪಿನಿ ಅರ್ಥಾತ್ ವಿರಕ್ತಮೂರ್ತಿಗಳ ಧರಿಸುವನಿಲವಂಗಿ, ಮುಂಡಾಸ, ಧೋತ್ರ, ಧವಳಾಂಬರದ ಗುಬ್ಬು ಕಟ್ಟು ಅಂಗಿ, ಕೌಪ, ನವರತ್ನಾಭರಣ, ವಿಭೂತಿ, ಮುಂತಾದ ವಸ್ತುಗಳನ್ನು ತರತಮವರಿತು ಜಂಗಮ ಪುಂಗವರಿಗೆ ದಾನ ಮಾಡಿದರು.

ರಸದಾಳಿಕಬ್ಬು, ಸೀಯಾಳ ಅರ್ಥಾತ್ ಎಳನೀರು, ಮಾವಿನಹಣ್ಣು, ಹಸನಾದ ಕಲ್ಯಾಣಸೇವೆ, ಹುರುಕಡಲೆ ತನಿರಸವಾಂತ ಖರ್ಜೂರ, ದ್ರಾಕ್ಷೆ, ಉತ್ತುತ್ತಿ, ಕೊಬರಿ, ಕೊಡಬೀಜ ಭೂಮಿಯ ಮೇಲೆ ಯೋಗಿಗಳು ಮತ್ತು ಭೋಗಿಗಳು ಇಷ್ಟಪಡುವ ಭಂಗಿಸೊಪ್ಪು, ಪೊಗೆಯಸೂಪ್ಪು, ಮದ್ದಿನ ಕುರುಜು ಈ ಎಲ್ಲವನ್ನು ಜಂಗಮರ ಇಚ್ಛಾ ಭೋಜನಾ ನಂತರ ರಾಜನು ಅರ್ಪಿಸಿದನು.

ಜಂಗಮಪುಂಗವರಿಗೆ ಪಾದರಕ್ಷೆ, ಪಟ್ಟೆಮಂಚ, ಸುಪ್ಪತ್ತಿಗೆ ಗೋದಾನ, ಭೂದಾನ, ಅನ್ನದಾನ, ನಾಲ್ಕುವೇದ ವಿದ್ಯಾದಾನ ಕನ್ಯಾದಾನಗಳನ್ನು ದಾನಪಾತ್ರರಿಗೆ ನೀಡಿದರು. ಆ ದಿವ್ಯ ಗುರುಲಿಂಗ ಜಂಗಮವನರ್ಚಿಸಿ, ಸಂತೋಷದಿಂದ ಮಠಗಳನ್ನು ಮನೆಗಳನ್ನು ಕಟ್ಟಿಸಿ ನೀಡಿದರು.

ಲಿಂಗದಾನ, ಬಸವದಾನ, ತಿಲದಾನ, ಅಭ್ಯಂಗದ ತೈಲದಾನ ಸುವರ್ಣದಾನ, ಮಾಂಗಲ್ಯದಾನ, ಅಶ್ವದಾನ, ಶಾಸ್ತ್ರದಾನ, ನವಧಾನ್ಯಗಳನ್ನು ದಾನ ಮಾಡಿದರು. ಅಲ್ಲದೆ ಭೂಸುರರ ಇಂಗಿತವನರಿತು ದಾನ ಮಾಡಿ ತನು-ಮನ-ಧನವನ್ನು ತ್ರಿವಿಧ ಲಿಂಗಕ್ಕೆ ಸಮರ್ಪಿಸಿದರು. ಈ ಹಿಂದೆ ಕಲ್ಯಾಣ ಪಟ್ಟಣದಲ್ಲಿಪ್ರಮಥಗಣವೃಂದಕ್ಕೆ ಬಸವಣ್ಣನವರು ಬೇಡಿದನ್ನು ನೀಡಿದಂತ ವಿಷಯವನ್ನು ಕಾವ್ಯಮುಖದಿಂದ ಅರ್ಥಾತ್ ಬಸವಪುರಾಣದ ಅಧ್ಯಯನದಿಂದ ತಿಳಿದ ಸೋವೆ ಬಸವಲಿಂಗರಾಜ ಅದರಂತೆ ಇಂದುಶೇಖರನ ಭಕ್ತರಿಗೆ ನೀಡದನ್ನು ಕವಿ ಇಲ್ಲಿ ದಾಖಲಿಸಿದ್ದಾನೆ.

ಆರುದರುಶನಗಳಿಗೆ ಕೊಡುವ ಧರ್ಮದ ಕೀರ್ತಿ ಸಾರುತಿವೆ ಕಾಶಿ, ಕೇದಾರ, ರಾಮೇಶ್ವರಾದಿ ವೀರಶೈವಾಚಾರ ಸಂಪನ್ನ ನಿರ್ಭಿನ್ನ ರಾಜೇಂದ್ರ ಚಂದ್ರ ಎಂದಿದ್ದಾನೆ ಮುಂದುವರೆದು "ಮುರಿಗೆ ಗುರುಸಿದ್ಧೇಶ್ವರನಪದವ ಸಾರಿ ಭುಜಿಸುತ ಸುಧಾನಗರಕಧಿಪತಿಯಾದ ಭೊರಮಣ ಬಸವಲಿಂಗೇಂದ್ರ ನಿಮ್ಮನು ಮಳೆಯ ಮಲ್ಲೇಶ್ವರನು ಸಲಹಲಿ ಎಂದಿದ್ದಾನೆ. ಇಲ್ಲಿ ಕವಿ ಸ್ತೋತ್ರ ಮಾಡಿರುವುದು ಇಮ್ಮಡಿ ಮುರಿಗೆ ಗುರುಸಿದ್ಧೇಶ್ವರನ ಇವರು ಚಿತ್ರದುರ್ಗ ಬೃಹನ್‌ಮಠದ ಎರಡನೇ ಜಗದ್ಗುರುಗಳು ಸುಧಾನಗರಕಧಿಪತಿ ಅಂದರೆ ಸೋದೆಗೆ ಇನ್ನೊಂದು ಹೆಸರು ಸುಧಾನಗರ ಎಂದು.

ಧರೆಗೆ ದಕ್ಷಿಣಕಾಶೀಯೆನಿಸುವ ಬನವಸೆಯ ಹಿರಿಯ ಮಠದಲ್ಲಿ ಇರುತಿಹ ಶ್ರೀಗುರು ಮಳೆಯ ಮಲ್ಲೇಶನ ವರದಿಂದ ಶ್ರೀಶಾಂತಬಸವರಾಜೇಂದ್ರದೇವರು ರಚಿಸಿದ ಷಟ್ಪದವ ಎಂದಿದ್ದಾನೆ ಕವಿ.

ಮಕ್ಕಳು ಮಾಡಿದ ತಪ್ಪನ್ನು ತಾಯಿ ಕ್ಷಮಿಸಿ ಹಾಲು ನೀಡುವಂತೆ ಹರಕವಿಗಳು ನಿಮ್ಮ ಕರುಣದಿ ಇಲ್ಲಿ ಉಂಟಾದ ತಪ್ಪನ್ನು ತಿದ್ದಿ ಸರಿ ಮಾಡುವುದು ಎಂದು ವಿನಂತಿಸಿಕೊಂಡಿದ್ದಾನೆ.

ನಾನು ಈ ಹಿಂದೆ ಕಾಗದದ ಹಸ್ತಪ್ರತಿಯಲ್ಲಿ **"ಅರವತ್ತು ಮೂರು ಪುರಾತ್ನರ ಸ್ತೋತ್ರವೆಂಬ ಗಣಾಷ್ಟಕವೂ" "ಗಣಾಷ್ಟಕ ಸ್ತೋತ್ರ"**

ಆದಿ : ರಾಗ ನಾದ ನಾಮಕ್ರಿಯೆ

> **ಸ್ತುತಿಸೆ ಬಾಳ್ವೆನು ಪ್ರಮಥರೆಲ್ಲರ ಪೃಥ್ವಿಯೊಳಗತಿ ಮೆರದರಂ ।**
> **ಅತಿಶಯದಿ ಶ್ರೀ ಸಾಂಬ ಲೋಕವನಾಳ್ದಾರಾ ಸಲ್ ಬಾಳ್ದರಂ ॥ 1 ॥**
> **ಯೋಗಿ ಹೃದಯ ನಿವಾಸ ಮಳೆಯ ಮಲ್ಲೇಶನಂ ಅಘನಾಶನಂ ॥ 6 ॥**
> **ಗಣಾಷ್ಟಕ ಸ್ತೋತ್ರ ಸಂಪೂರ್ಣ**

ಶಿವಮೊಗ್ಗ ಜಿಲ್ಲೆ ಆನಂದಪುರ ಮಠದ ಸಂಗ್ರಹದಲ್ಲಿ ಇರುವ "ವೈಷ್ಣವರಾದ ಖಂಡನ" ಹಸ್ತಪ್ರತಿಯ ಅಂತ್ಯದಲ್ಲಿ "ಧುಮ್ಮತಿಶಂವಛ್ಚರದ ಕಾರ್ತ್ತಿಕ ಸುದ್ಧ 2ಗೆಯ ಬುಧವಾರದಲ್ಲು ಶ್ರೀಮತು ವಿರಕ್ತ ಷಟ್ಥ್ಸಲಮೂರ್ತಿಗಳಾದಂತಾ ಮರಿಶಾಂತಸ್ವಾಮಿಯವರಿಗೆ ಯಂಳಪ್ಪವಲಿಂಗದೇವರ ಪ್ರತ್ಯೂತ್ಸತ್ಯವಾದಂತಾ ಮಲ್ಲೇದೇವರು

> **ಭಕ್ತಿಯಿಂದ ಬರದು । ಸಾಷ್ಟಾಂಗವೆರಗಿ ಪೊಡಮಟ್ಟು**
> **ನಮಸ್ಕಾರ ಮಾಡಿದ ವೈಷ್ಣವಾದ ಖಂಡನಕ್ಕೆ**
> **ಸುಭಮಸ್ತು । ಶ್ರೀ ಶ್ರೀ ಶ್ರೀ ಶ್ರೀ ಶ್ರೀ**

ಈ ಪುಷ್ಪಿಕೆಯನ್ನು ನನ್ನ ಗಮನಕ್ಕೆ ತಂದ ಡಾ. ಜಗದೀಶ್ ಅಗಸಿ ಬಾಗಲವಾರ್‌ರವರಿಗೆ ವಂದನೆಗಳು.

❑

ಅಂಕೋಲೆ ಕೋಟೆ : ಚಾರಿತ್ರಿಕ ಅವಲೋಕನ

– ಶ್ಯಾಮಸುಂದರ ಟಿ. ಗೌಡ

ಪ್ರಾಸ್ತಾವಿಕ :

ವರಕವಿ ಬೇಂದ್ರೆಯವರು ಅಭಿಪ್ರಾಯಪಟ್ಟಂತೆ, 'ಕೋಟೆಗಳೆಂದರೆ ಕೇವಲ ಗಡುತರವಾದ ಗೋಡೆಗಳಿಂದಾದ ಒಂದು ಭೂಮಿತಿ ವಿನ್ಯಾಸದ ನಿರ್ಮಿತಿಗಳಲ್ಲ. ಸಹಜೀವನದ, ಸಹೋದ್ದೇಶಗಳ ಜನಗಳಿಂದ ಕೂಡಿದ ಒಂದು ಕೂಟ'. ವೈಭವದ, ಶೌರ್ಯದ, ಕ್ರೌರ್ಯದ, ಒಲವಿನ, ಭೋಗದ, ಬಲಿದಾನದ, ನೋವಿನ, ತ್ಯಾಗದ, ಸಾವಿನ, ಅಸೂಯೆಯ, ಆಮಿಷದ, ಸತ್ಯದ, ಸೌಂದರ್ಯದ ಮಾನವಿಕ ಭಾವಗಳ, ವ್ಯಕ್ತಿಗಳ ಕಥೆ ಹೇಳುವ ರಕ್ಷಣಾ ಗೋಡೆಗಳು. ಈ ಗೋಡೆಗಳ ಒಳ ಆವರಣದಲ್ಲಿ ಆಯಾ ಸ್ಥಳಗಳ ನಾಗರಿಕತೆ ಬೆಳೆದು ಬಂದಿದೆ.[1]

ಕರ್ನಾಟಕವು ನಿಸರ್ಗ ನೀಡಿದ ಮೂರು ಪ್ರಾಕೃತಿಕ ಪಟ್ಟಿಗಳನ್ನು ಹೊಂದಿದೆ. ಕರಾವಳಿ ಪಟ್ಟಿ, ಸಹ್ಯಾದ್ರಿ ಪಟ್ಟಿ ಹಾಗೂ ಪೂರ್ವದ ಬಯಲು ನಾಡಿನ ಬೆಳುವಲದ ಪಟ್ಟಿ. ಹೀಗೆ ನಿಸರ್ಗದತ್ತವಾದ ಈ ಮೂರು ಪಟ್ಟಿಗಳಿಂದ ಕೂಡಿದ ಈ ನಾಡಿನಲ್ಲಿ ಅದು ನೀಡಿದ ಪದಾರ್ಥಗಳನ್ನು ಮತ್ತು ಪರಿಸರಗಳನ್ನು ಕೋಟೆಗಳ ನಿರ್ಮಾಣದಲ್ಲಿ ಸಾನುಕೂಲಕರವಾಗಿ ಉಪಯೋಗಿಸಿಕೊಳ್ಳಲಾಗಿದೆ. ಕರಾವಳಿಯಲ್ಲಿ ಸರ್ವದಾ ಲಭ್ಯವಿರುವ ನೀರನ್ನು ಬಳಸಿಕೊಂಡು 'ಜಲದುರ್ಗ'ಗಳನ್ನು, ಸಹ್ಯಾದ್ರಿ ಬೆಟ್ಟಗಳನ್ನು ಉಪಯೋಗಿಸಿಕೊಂಡು 'ಗಿರಿದುರ್ಗ'ಗಳನ್ನು, ಪೂರ್ವದ ಬಯಲು ನಾಡಿನಲ್ಲಿ 'ಸ್ಥಳದುರ್ಗ'ಗಳನ್ನು ಆಯಾ ಕಾಲದಲ್ಲಿ ಆಳಿದ ವಿವಿಧ ಅರಸರುಗಳು ನಿರ್ಮಿಸಿದ್ದಾರೆ. ಕೋಟೆಗಳ ನಿರ್ಮಾಣದ ಈ ಪ್ರಕ್ರಿಯೆ ಕ್ರಿ.ಶ. 200 ರಿಂದ ಅರಂಭಿಸಿ ಕ್ರಿ.ಶ.1800 ರವರೆಗೂ ಮುಂದುವರಿದಿದೆ.

ಕೋಟೆಗಳ ವಿಧಗಳು :

ಕೋಟೆಗಳ ನಿರ್ಮಾಣಕ್ಕೆ ಬಳಸಿದ ಪದಾರ್ಥಗಳ ದೃಷ್ಟಿಯಿಂದ 'ಮೃದ್‌ಕೋಟೆ', 'ಪಾಷಾಣಕೋಟೆ' ಹಾಗೂ 'ಕಾಷ್ಠದುರ್ಗ'ಗಳು ಎಂದು ವಿಂಗಡಿಸಬಹುದು. ಪ್ರಾಚೀನ ಕಾಲದಲ್ಲಿ ಬಹು ಸಂಖ್ಯೆಯಲ್ಲಿ ಮಣ್ಣಿನ ಕೋಟೆಗಳು ಹಾಗೂ ಮಧ್ಯಯುಗದಲ್ಲಿ ಕಲ್ಲಿನ ಕೋಟೆಗಳು ಸ್ಥಳಾನೂಕೂಲದಂತೆ ನಿರ್ಮಾಣವಾದುದು ಕಂಡುಬರುತ್ತದೆ. ಕರ್ನಾಟಕದ ಕೋಟೆಗಳ ರಚನಾ ವಿನ್ಯಾಸದಲ್ಲಿ ಪ್ರಾಚೀನದಿಂದ ಹನ್ನೆರಡನೇ ಶತಮಾನದವರೆಗೆ 'ಹಿಂದೂ ರಕ್ಷಣಾ ವಾಸ್ತು' ವಿನ್ಯಾಸಗಳ ಅಳವಡಿಕೆ ಕಂಡುಬರುತ್ತದೆ. ಮಧ್ಯಯುಗದ ಕಾಲದೊಂದಿಗೆ ಉತ್ತರ ಭಾರತದ ಕಡೆಯಿಂದ ಬಂದ ಮುಸ್ಲಿಂ ದಾಳಿಗಳಿಂದ ಯುದ್ಧಕಲೆ ಹಾಗೂ ಯುದ್ಧೋಪಕರಣಗಳಲ್ಲಾದ ಬದಲಾವಣೆಯಿಂದ ಕೋಟೆಗಳ ವಾಸ್ತುಕಲೆಯಲ್ಲಿಯೂ ಬದಲಾವಣೆಯಾಯಿತು. ಕಲ್ಲಿನ ದುರ್ಗಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆತು ಮಣ್ಣಿನ ಕೋಟೆಗಳು ಕಡಿಮೆಯಾಗತೊಡಗಿದವು. ಮೇಲಟ್ಟಣೆಗಳು, ಕಾವಲು ಕಟ್ಟೆಗಳು, ದೀಪಕಂಬಗಳು, ಆಳಗಳ ವಿಸ್ತಾರ, ಕಳ್ಳಕಿಂಡಿಗಳು, ವಿರಸೇತುಗಳು, ತೋಪುಗಳ ಬುರುಜುಗಳು, ಮದ್ದುಗುಂಡುಗಳ ಸಂಗ್ರಹಕ್ಕೆ ವ್ಯವಸ್ಥೆ ಮುಂತಾದವುಗಳು ಹೊಸದಾಗಿ ಸೇರುತ್ತ ಕೋಟೆಗಳು ಭದ್ರವಾಗಿ ಹಾಗೂ ಬಹುವಾಗಿ ಬೆಳೆಯುತ್ತ ಹೋದವು.2 ರಕ್ಷಣಾ ವ್ಯವಸ್ಥೆಯ ಈ ಸೂತ್ರಕ್ಕೆ ಅನುಗುಣವಾಗಿ ಕರ್ನಾಟಕದ ರಾಜರೂ ಕೂಡ,

ಇನ್ನುಳಿದ ಅರಸರುಗಳಂತೆ ರಾಜ್ಯ ಕಟ್ಟುವ ಹವ್ಯಾಸದಲ್ಲಿ ಘೋರಯುದ್ಧಗಳನ್ನೆಸಗಿ, ಜಯಿಸಿದ ನಾಡ ನೆಲದ ರಕ್ಷಣೆಗಾಗಿ ಅಲ್ಲಲ್ಲಿ ಕೋಟೆ-ಕೊತ್ತಲಗಳನ್ನು ಕಟ್ಟಿಸಿದರು. ಆ ರಕ್ಷಣಾ ನಿರ್ಮಿತಿಗಳು ನೆಲದ ಹಾಗೂ ಜನಪದದ ರಕ್ಷಣೆ ಮಾಡಿದ್ದಲ್ಲದೇ ಮಾನವ ಜೀವನದ ಗುಣ ಮೌಲ್ಯಗಳನ್ನು ತಮ್ಮ ರಕ್ಷಣಾ ರೆಕ್ಕೆಯಲ್ಲಿ ತಬ್ಬಿಕೊಂಡವು ಹಾಗೂ ಅವುಗಳನ್ನು ಉಳಿಸಿ ಬೆಳೆಸಿಕೊಂಡು ಬಂದವು.

ಅಂಕೋಲೆಯ ಕೋಟೆ :

ಪ್ರಸ್ತುತ ಚರ್ಚಿಸಲಿರುವ 'ಅಂಕೋಲೆಯ ಕೋಟೆ'ಯು ಮಧ್ಯಯುಗದ ಆರಂಭ ಕಾಲದಲ್ಲಿಯೇ ರಚಿತವಾಗಿರುವುದರಿಂದ ಪರಿವರ್ತನಕಾಲದ ರಕ್ಷಣಾ ವಾಸ್ತುವಿನ ಲಕ್ಷಣಗಳನ್ನು ಇಲ್ಲಿ ಕಾಣಬಹುದು. ಗತಕಾಲದಲ್ಲಿ ಐತಿಹಾಸಿಕ ಹೆದ್ದೆರೆಗಳ ಹೊಡೆತದಿಂದ ಹಾಗೂ ಆಧುನೀಕರಣದ ನಗರ ಬೆಳವಣಿಗೆಯ ಪರಿಣಾಮದಿಂದ ಅಂಕೋಲೆಯ ಕೋಟೆಯು ತನ್ನ ಮಹತ್ತರ ಅಸ್ತಿತ್ವವನ್ನು ಕಳೆದುಕೊಂಡಿದೆ. ಈಗ ಅಳಿದುಳಿದುದು ಅಲ್ಲಲ್ಲಿ ನೀರಿನ ಆಗುಳಗಳ ಭಾಗ, ಗೋಡೆಯ ಕೆಲ ಅಂಶ, ಬಿದ್ದೂ ಬೀಳದ ಒಂದೆರಡು ವೀಕ್ಷಕ ಬುರುಜುಗಳ ಭಾಗ, ನೀರಿನ ಬಾವಿ ಮುಂತಾದವುಗಳು ಮಾತ್ರ.

ಅಂಕೋಲೆಯ ಕೋಟೆಯು ಪಟ್ಟಣದ ಪೂರ್ವ ಭಾಗಕ್ಕೆ 400 ಗಜ ದೂರದಲ್ಲಿ ಸ್ವಲ್ಪ ಎತ್ತರದ ಪ್ರದೇಶಲ್ಲಿದೆ. ಕರಾವಳಿ ಭಾಗದಲ್ಲಿ ಹೇರಳವಾಗಿ ಸಿಗುವ ಜಂಬಿಟ್ಟಿಗೆ (ಲೆಟರೈಟ್) ಕಲ್ಲುಗಳಿಂದ ಕಟ್ಟಿರುವ ಕೋಟೆಯ ಆಯತಾಕೃತಿಯ ವಿನ್ಯಾಸ ಹೊಂದಿದೆ. ಈ ಕೋಟೆಯ ಆವರಣವು ಸುಮಾರು 13 ಎಕರೆ ವಿಶಾಲವಿದೆ. ಗೋಡೆಗಳ ಎತ್ತರ ಸುಮಾರು 25 ಅಡಿಗಳಷ್ಟಿದೆ. ಸುತ್ತಳತೆಯಲ್ಲಿ 14 ಬುರುಜುಗಳಿದ್ದವು. ಕೋಟೆಯ ಹೊರ ಆವರಣದ ಸುತ್ತಲೂ ಆಳವಾದ, ಅಗಲವಾದ ಕಂದಕವಿದೆ. ಈ ಕಂದಕಗಳು ಸದಾ ನೀರಿನಿಂದ ತುಂಬಿರುತ್ತಿದ್ದು, ಅದರ ಮೇಲೆ ಒಂದೇ ದಾರಿಯಿದ್ದಂತೆ ಕಂಡುಬರುತ್ತದೆ. ಕಂದಕಗಳು ಹಲವೆಡೆ ಸಂಪೂರ್ಣ ಮುಚ್ಚಿಹೋಗಿವೆ. ಇಂದು ಕೋಟೆಯು ಸಂಪೂರ್ಣ ಜೀರ್ಣವಾಗಿರುವುದರ ಜೊತೆಗೆ ಹಲವು ಕಡೆಗಳಲ್ಲಿ ಗೋಡೆಗಳನ್ನು ಬೀಳಿಸಿ ರಸ್ತೆಗಳನ್ನೂ, ಕಟ್ಟಡಗಳನ್ನೂ ನಿರ್ಮಿಸಿರುವುದರಿಂದ ಕೋಟೆ ದ್ವಾರದ ಸ್ಥಳವನ್ನೂ ಅದರ ರಚನಾ ರೂಪ-ಲಕ್ಷಣಗಳನ್ನೂ ಸ್ಪಷ್ಟವಾಗಿ ಗುರುತಿಸುವುದು ಸಾಧ್ಯವಿಲ್ಲದಾಗಿದೆ. ಗೋಡೆಯ ಒಂದಿಷ್ಟು ಭಾಗ ಇಂದಿಗೂ ಭದ್ರವಾಗಿದೆ. ಗೋಡೆಯ ಒಳ ಆವರಣದ ಮೇಲಿರುವ ಇಳಿಜಾರು ಕಿಂಡಿಗಳ ಮೂಲಕ ತುಬಾಕಿ ಇಡಲು ಮತ್ತು ಕೆಲವು ಕಳ್ಳಗಿಂಡಿಗಳಿಂದ ವೈರಿಗಳ ಚಲನವಲನಗಳನ್ನು ವೀಕ್ಷಣೆ ಮಾಡಲು ಶಕ್ಯವಿತ್ತು. ಇಂಥ ರಚನೆಗಳು ಕೋಟೆಯ ನಿರ್ಮಾಣ ಕಾಲದಲ್ಲಿ ಮಾಡದೇ ಅನಂತರದಲ್ಲಿ ನಿರ್ಮಿಸಿರಬೇಕು. ಕೋಟೆಯ ಬುರುಜುಗಳಲ್ಲಿ ತೋಪುಗಳನ್ನಿಡಲು ವ್ಯವಸ್ಥೆಯಿದ್ದಂತೆ ಕಾಣುವುದಿಲ್ಲ. ಕೋಟೆಯೊಳಗೆ ಭೂಗತವಾಗಿ ಹೊರಸಾಗಲು ಅನುಕೂಲವಾಗಿರುವ ಎರಡು ಮಾರ್ಗಗಳನ್ನು ಇಲ್ಲಿ ಕಾಣಬಹುದು. ಈ ಮಾರ್ಗಗಳ ಬಗ್ಗೆ ಸ್ಥಳೀಯವಾಗಿ ಅನೇಕ ಕತೆಗಳಿದ್ದು, ಆ ಕತೆಗಳ ಪ್ರಕಾರ ಒಂದು ಮಾರ್ಗವು ಮಿರ್ಜಾನ ಕೋಟೆಯನ್ನು ಹಾಗೂ ಇನ್ನೊಂದು ಮಾರ್ಗವು ಬಸಾಕಲ್ಲು ಗುಡ್ಡದ ಭಾಗದಲ್ಲಿ ಸಮುದ್ರವನ್ನು ಸೇರುತ್ತದೆ ಎನ್ನಲಾಗುತ್ತದೆ. ಈ ಬಗ್ಗೆ ಇನ್ನೂ ಯಾವುದೇ ನಿಖರವಾದ ಸಂಶೋಧನೆಗಳು ನಡೆದಿಲ್ಲ.

ಕೋಟೆಯ ಒಳಗಡೆ ರಾಜನ ಅರಮನೆ ಶಯ್ಯಾಗೃಹ, ಟಂಕಸಾಲೆ, ಸಭಾಂಗಣ, ವೈರಿಗಳ ಸೆರೆಮನೆ, ಮಂತ್ರಾಲೋಚನೆಯ ಮನೆಗಳಿದ್ದವು. ಅಲ್ಲದೇ ಅರಸರ ಅಡಳಿತಕ್ಕೆ ಸಂಬಂಧಪಟ್ಟ ಅವಶೇಷಗಳು ಅಲ್ಲಿ ಕಂಡುಬರುತ್ತವೆ. ಒಳಗಡೆ ಎರಡು ಬಾವಿಗಳಿವೆ. ಒಂದು ಪೂರ್ತಿಯಾಗಿ ಹಾಳಾಗಿದೆ. ವಿಶಾಲವಾದ ಇನ್ನೊಂದನ್ನು ಇಂದಿಗೂ ಕಾಣಬಹುದಾಗಿದೆ. ಹಿಂದೆ ಈ ಬಾವಿಯಲ್ಲಿ ಕುದುರೆಗಳನ್ನು ಇಳಿಸಿ ನೀರು ಕುಡಿಸುವ ಪದ್ಧತಿ ಇತ್ತೆಂದು ಹೇಳುತ್ತಾರೆ. ಇದಕ್ಕೆ ಅನುಕೂಲವಾಗುವಂತೆ ಬಾವಿಯ ತಳಮಟ್ಟದವರೆಗೂ ಕಟ್ಟಿರುವ ಅಗಲವಾದ ಮೆಟ್ಟಿಲುಗಳ ಸುರಂಗದಂತಹ ವ್ಯವಸ್ಥೆಯಿದ್ದು ಬಾವಿಯು ಕೋಟೆಯ ಹೊರ ಕಾಲುವೆಯೊಂದಿಗೆ ಸಂಪರ್ಕ ಹೊಂದಿದೆ. (ಈಗ ಹೊರ ಕಾಲುವೆಗಳಲ್ಲಿ ಮಣ್ಣು ತುಂಬಿರುವುದರಿಂದ ಈ ಸಂಪರ್ಕ ವ್ಯವಸ್ಥೆ ಪೂರ್ತಿಯಾಗಿ ಮುಚ್ಚಿಹೋಗಿದೆ.) ಹೀಗೆ ಕೋಟೆಯೊಳಗಿನ ಆಡಳಿತಗಾರರು ವೈರಿಗಳ ಆಕ್ರಮಣದ ವೇಳೆ ಬಾವಿಯಿಂದ ಕಾಲುವೆಯ ಮೂಲಕ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಯೋಜಿಸಿದ ರಕ್ಷಣಾ ವ್ಯವಸ್ಥೆಯಾಗಿರಬಹುದು ಅಥವಾ ಕೋಟೆಯ ಒಳಗಡೆ ನೀರಿನ ಅಭಾವ ಉಂಟಾದಾಗ ಕಾಲುವೆಯ ಮೂಲಕ ಬಾವಿಗೆ

ನೀರು ಸರಬರಾಜಾಗುವ ವ್ಯವಸ್ಥೆಯಾಗಿರಬಹುದು. ಜನರು ಇದನ್ನು ಕುದುರೆ ಬಾವಿ ಎಂದೇ ಕರೆಂಯುತ್ತಾರೆ. ಮಿರ್ಜಾನ ಕೋಟೆಯಲ್ಲಿನ ಬಾವಿಗಳು ಸಹ ಇಂತಹುದೇ ತಾಂತ್ರಿಕತೆಯಲ್ಲಿ ರಚಿತವಾಗಿದೆ.

ಅಂತೆಯೇ ಅಂಕೋಲೆ ಕೋಟೆಯು ಇನ್ಯಾವುದೇ ವಿಶೇಷ ರಚನಾ ಕೌಶಲ್ಯ ಹೊಂದಿರದೇ ಸಾಮಾನ್ಯ ರಕ್ಷಣಾ ವಾಸ್ತು ವಿನ್ಯಾಸದಲ್ಲಿ ಕಟ್ಟಲ್ಪಟ್ಟಿದೆ. ಆದರೂ ಸಹ ಇದೊಂದು ಬೃಹತ ನಿರ್ಮಾಣವಾಗಿರುವುದರ ಜೊತೆಗೆ, ಇತಿಹಾಸದ ಹಲವು ತಿರುವುಗಳ ಕೇಂದ್ರವೂ, ಎದ್ದು-ಬಿದ್ದ ರಾಜರ ಹೆಜ್ಜೆಯ ಗುರುತಾಗಿಯೂ ಇರುವುದರಿಂದ ಕರಾವಳಿ ಕರ್ನಾಟಕದ ಚರಿತ್ರೆಯ ನಿರ್ಮಾಣ ಮತ್ತು ಅಧ್ಯಯನದಲ್ಲಿ ಅಭ್ಯಸಿಸಲೇಬೇಕಾಗಿದೆ. ಹಾಗೆ ನೋಡಿದರೆ ಅಂಕೋಲೆ ಯಾವುದೇ ರಾಜನ ರಾಜದಾನಿಯಾಗಿ ಮೆರೆದದ್ದರ ಬಗ್ಗೆ ಎಲ್ಲಯೂ ಇತಿಹಾಸವು ದಾಖಲಿಸದಿದ್ದರೂ, ಪ್ರಾಚೀನದಿಂದ ಅರ್ವಾಚೀನದವರೆಗೆ ಇದೊಂದು ಆಯಕಟ್ಟಿನ ಸ್ಥಳವಾಗಿ ಗುರುತಿಸಲ್ಪಟ್ಟಿದೆ.

ಅಂಕೋಲೆ ಕೋಟೆಯ ನಿರ್ಮಾಣ :

ಚರಿತ್ರೆಯ ಅಜ್ಞಾತ ಪುಟಗಳಲ್ಲಿ ತನ್ನದೇ ಆದ ಮಹತ್ವದ ವೈಶಿಷ್ಟ್ಯಗಳನ್ನು ಹೊಂದಿರುವ ಅಂಕೋಲೆಯ ಕೋಟೆಯ ಬಗ್ಗೆ ಹೆಚ್ಚಿನ ಸಂಶೋಧನೆಗಳು ನಡೆದಿಲ್ಲ. ವಿದ್ವಾಂಸರ ದಿವ್ಯ ನಿರ್ಲಕ್ಷಕ್ಕೆ ಗುರಿಯಾಗಿರುವ ಈ ಕೋಟೆಯ ನಿರ್ಮಾತೃರ ಕುರಿತು ನಿಷ್ಕರ್ಷೆಯಾದ ನಿರ್ಣಯಗಳು ಇಲ್ಲ.

'ಸರ್ಪಮಲ್ಲಿಕನ ಕೋಟೆ' ಎಂದು ಪ್ರಸಿದ್ಧವಾದ ಅಂಕೋಲೆಯ ಕೋಟೆ 'ಸರ್ಪಮಲ್ಲಿಕ' ಎನ್ನುವವನಿಂದ ನಿರ್ಮಾಣವಾಯಿತೆಂದು ಒಂದು ಜನಪದ ಕತೆಯು ಹೇಳುತ್ತದೆ. ಈ ಜನಪದ ಕತೆಯ ಪ್ರಕಾರ "ಅಚವೆ ಊರಿನ ಹೆಬ್ಬಾರರ ಮನೆಯಲ್ಲಿ ದನಕಾಯುವ ಹುಡುಗನು, ದನಗಳನ್ನು ಮೇಯಿಸುತ್ತ ಗೋಮಾಳದಲ್ಲಿ ಮಲಗಿದಾಗ ಹಿರಿ ನಾಗರ ಹಾವೊಂದು ಆತನ ತಲೆ ಭಾಗದಲ್ಲಿ ಹೆಡೆ ಬಿಚ್ಚಿ ನಿಂತು ಸೂರ್ಯನ ಬಿಸಿಲು ತಾಗದಂತೆ ನೆರಳು ನೀಡುತಿತ್ತಂತೆ. ಇದನ್ನು ಗಮನಿಸಿದ ಹೆಬ್ಬಾರರು ಈ ಸಂಗತಿಯನ್ನು ಜ್ಯೋತಿಷಿಯಲ್ಲಿ ವಿವರಿಸಲಾಗಿ, ಜ್ಯೋತಿಷಿಯು ಅವನು ಮುಂದೆ ಅರಸನಾಗುವ ಯೋಗ ಹೊಂದಿದ್ದಾನೆಂದು ಭವಿಷ್ಯ ನುಡಿಯಲು, ಹೆಬ್ಬಾರರು ಹುಡುಗನಿಗೆ ವಿದ್ಯಾಭ್ಯಾಸ ಮಾಡಿಸಿದರು. ಮುಂದೆ ಆತನೇ 'ಸರ್ಪಮಲ್ಲಿಕ'ನೆಂಬ ರಾಜನಾಗಿ ಅಂಕೋಲೆಯ ಕೋಟೆ ಕಟ್ಟಿಸಿದ ಹಾಗೂ ಹೆಬ್ಬಾರರಿಗೆ ಜಮೀನುಗಳನ್ನು ದಾನ ನೀಡಿ ತಾಮ್ರಪಟವನ್ನು ಬರೆದುಕೊಟ್ಟ".[3] (ಮಿರ್ಜಾನ ಕೋಟೆಯ ನಿರ್ಮಾಣದ ಬಗ್ಗೆಯೂ ಇದೇ ಕತೆಯನ್ನು ಹೇಳಲಾಗುತ್ತದೆ.) ಕೆಲವು ಪ್ರಾಜ್ಞರ ಪ್ರಕಾರ ಜಾನಪದ ಕತೆಯ ಸರ್ಪಮಲ್ಲಿಕನೇ ಬಿಜಾಪುರ ಸುಲ್ತಾನರ ಸೈನ್ಯಾಧಿಕಾರಿಯಾದ 'ಶರೀಫ-ಉಲ್-ಮುಲ್ಕ' ಎಂದು ಗುರುತಿಸುತ್ತಾರೆ ಮತ್ತು ಈತನಿಂದಲೇ ಅಂಕೋಲೆ ಮತ್ತು ಮಿರ್ಜಾನ ಕೋಟೆಗಳು ರಚಿತವಾದುವೆಂದು ನಿರ್ಣಯಿಸುತ್ತಾರೆ.[4]

ಆದರೆ 'ಶರೀಫ-ಉಲ್-ಮುಲ್ಕ' ಎನ್ನುವುದು ಒಬ್ಬ ವ್ಯಕ್ತಿಯ ಹೆಸರೋ? ಅಥವಾ ಒಂದು ಹುದ್ದೆಯ ಹೆಸರೋ? ಎನ್ನುವುದರೊಂದಿಗೆ, ಈತನ ಆಡಳಿತದ ಕಾಲಾವಧಿಯ ಬಗ್ಗೆ ಸರ್ವಸಮ್ಮತವಾದ ಯಾವುದೇ ದಾಖಲೆಗಳಿಲ್ಲ. ಕೋಟೆಯ ಒಳಭಾಗದಲ್ಲೂ ಮುಸ್ಲಿಂ ಆಳ್ವಿಕೆ ಕುರುಹುಗಳೂ ಗೋಚರಿಸುವುದಿಲ್ಲ. 'ಸರ್ಪಮಲ್ಲಿಕ'ನ ಕತೆಯ ಕೊನೆಯಲ್ಲಿ ಹೆಬ್ಬಾರರಿಗೆ ಜಮೀನುಗಳನ್ನು ದಾನ ನೀಡಿ ತಾಮ್ರಪಟವನ್ನು ಬರೆದು ಕೊಟ್ಟ ಬಗ್ಗೆ ಹೇಳಲಾಗುತ್ತದೆ. ವಾಸ್ತವದಲ್ಲಿ ಅಚವೆ ಸಮೀಪದ ಕುಂಟಗಣಿಯಲ್ಲಿ ಒಂದು ತಾಮ್ರಶಾಸನ ದೊರೆತಿದ್ದು, ಅದರ ಸಾರಾಂಶ ಈ ರೀತಿ ಇದೆ. ಕದಂಬ ರವಿವರ್ಮನು ತನ್ನ ಆಳ್ವಿಕೆಯ 12ನೇ ವರ್ಷದಲ್ಲಿ ಶ್ರಾವಣ ತಿಂಗಳ ಹುಣ್ಣಿಮೆಯ ದಿನದಂದು ವೇದಗಳಲ್ಲಿ ಪರಿಣಿತನಾಗಿದ್ದ ಧೌಮ್ಯ ಗೋತ್ರದ ಭವಸ್ವಾಮಿಗೆ ಕರ್ಪಟೇಶ್ವರ ಎಂಬ ಇಪ್ಪತ್ನಾಲ್ಕು ನಿರ್ವತನಗಳಷ್ಟು ಭೂಮಿಯನ್ನು ದಾನವಾಗಿ ನೀಡಿದನು. ಈ ಭೂಮಿಯು ವರಿಯಕಾ ಗ್ರಾಮದಲ್ಲಿ ರಾಜನು ಕಟ್ಟಿದ ನೀರಿನ ಕೆರೆಯ ಅಕ್ಕ-ಪಕ್ಕದಲ್ಲಿತ್ತು. ಇದರಲ್ಲಿ ಒಂದು ನಿರ್ವತನದಷ್ಟು ನಿವೇಶನ ಭೂಮಿಯೂ ಇತ್ತೆಂದು ತಿಳಿಸುತ್ತದೆ. ಈ ದಾನ ಶಾಸನವು ವಿಜಯ ಪಂಣಕ್ತಿಪುರದಿಂದ ಹೊರಡಿಸಲ್ಪಟ್ಟಿತು. ವಿಜಯ ಪಂಣಕ್ತಿಪುರದಿಂದ ಇಂದಿನ ಹಾವೇರಿ ಜಿಲ್ಲೆಗೊಳಪಟ್ಟ ಹಾನಗಲ್ ಎಂದು ಗುರುತಿಸಲಾಗಿದೆ.5 ಈ ಕುಂಟಕಣಿ ತಾಮ್ರಶಾಸನದೊಂದಿಗೆ 'ಶರೀಫ-ಉಲ್-ಮುಲ್ಕ' ಹೆಸರು ಸೇರಿ ಅಪಭ್ರಂಶಗೊಂಡು 'ಸರ್ಪಮಲ್ಲಿಕ'ನ ಜನಪದ ಐತಿಹ್ಯ

ಹುಟ್ಟಿಕೊಂಡಿರಬಹುದು. ಒಂದು ವೇಳೆ 'ಸರ್ಪಮಲ್ಲಿಕ'ನ ಜನಪದ ಕತೆಯಲ್ಲಿ ಸತ್ಯಾಂಶವಿದೆ ಎಂದೂ ಕತೆಯಲ್ಲಿ ಬರುವ ತಾಮ್ರಪಟವು ಕುಂಟಗಣಿ ತಾಮ್ರಶಾಸನವೇ ಆಗಿದೆ ಎಂದೂ ನಂಬುವುದಾದರೆ ಸರ್ಪಮಲ್ಲಿಕನು ಬಿಜಾಪುರ ಸುಲ್ತಾನರ ಸೈನ್ಯಾಧಿಕಾರಿ 'ಶರೀಫ-ಉಲ್-ಮುಲ್ಕ' ಆಗಿರದೇ ಆತ ಕದಂಬ 'ರವಿವರ್ಮ'ನೆಂದು ಗುರುತಿಸಬೇಕಾಗುತ್ತದೆ. ಸಹಜವಾಗಿಯೇ ಅಂಕೋಲೆಯ ಕೋಟೆಯ ನಿರ್ಮಾಣ ಕದಂಬರ ಕಾಲಾವಧಿಯಾಗುತ್ತದೆ. ಆದರೆ ಕೋಟೆಯ ವಾಸ್ತುವಿನ್ಯಾಸ ಕದಂಬರ ನಂತರದ ಅವಧಿಯಾಗಿರುವುದು ಈ ವಾದವನ್ನು ಪುಷ್ಟೀಕರಿಸುವುದಿಲ್ಲ. ಇದಕ್ಕೆ ಪೂರಕವಾದ ಬೇರೆ ದಾಖಲೆಗಳೂ ಸಿಗದಿರುವುದರಿಂದ ನಾವು ಅಂಕೋಲೆಯ ಕೋಟೆಯ ನಿರ್ಮಾತೃರ ಮತ್ತು ನಿರ್ಮಾಣ ಕಾಲದ ಬಗೆಗಿನ ಇತರ ಸಾಧ್ಯತೆಗಳ ಬಗ್ಗೆ ಪರಿಶೀಲಿಸಬೇಕಾಗುತ್ತದೆ.

ಕೆಲವು ಇತಿಹಾಸಕಾರರ ಪ್ರಕಾರ 'ಶರೀಫ-ಉಲ್-ಮುಲ್ಕ'ನ ಕಾಲಾವಧಿಯನ್ನು ಕ್ರಿ.ಶ. 1610 ಎಂದು ಇನ್ನು ಕೆಲವರು ಕ್ರಿ.ಶ.1650-70 ಎಂದು ಅಭಿಪ್ರಾಯ ಪಡುತ್ತಾರೆ. ಅಂದರೆ ವಿಜಯನಗರ ಸಾಮ್ರಾಜ್ಯದ ಪತನಾನಂತರ 'ಶರೀಫ-ಉಲ್-ಮುಲ್ಕ' ಅಂಕೋಲೆಯಲ್ಲಿ ಕೋಟೆ ಕಟ್ಟಿದನೆಂದಾಗುತ್ತದೆ. ಈ ಮಧ್ಯೆ ಕ್ರಿ.ಶ.1471 ರಲ್ಲಿ ಬಹಮನಿ ಸುಲ್ತಾನರ ದಂಡನಾಯಕರಾದ ಕೇಸರಿ ಖಾನ ಮತ್ತು ನಿಜಾಮ-ಉದ್-ದಿನ-ಉಲ್-ಮುಲ್ಕ ಎನ್ನುವವರು ಗೋವೆಯನ್ನು ವಶಪಡಿಸಿಕೊಂಡು ಮಿರ್ಜಾನಿನ ಮೇಲೆ ದಾಳಿ ಮಾಡುತ್ತಾರೆ.6 ಇತಿಹಾಸ ಅಧ್ಯಯನದ ಯಾವುದೋ ಸಂದರ್ಭದಲ್ಲಾದ ತಪ್ಪು ಗ್ರಹಿಕೆಯಿಂದಾಗಿ ಈ 'ನಿಜಾಮ-ಉದ್-ದಿ-ಉಲ್-ಮುಲ್ಕ'ನನ್ನು 'ಶರೀಫ-ಉಲ್-ಮುಲ್ಕ' ಎಂದು ಗುರುತಿಸಿರುವ ಸಂಭವವಿದೆ. ಹಾಗೆಯೇ ಕ್ರಿ.ಶ.1471ರ ವೇಳೆಗಾಗಲೇ ಮಿರ್ಜಾನಿನಲ್ಲಿಯೂ ಕೋಟೆ ನಿರ್ಮಾಣವಾಗಿತ್ತು ಎನ್ನುವುದ ತಿಳಿಯುತ್ತದೆ. ವಿಜಯನಗರದ ಆರಂಭದ ಕಾಲದಲ್ಲಿಯೇ ಅಂಕೋಲೆಯಲ್ಲಿ ಕೋಟೆಯಿದ್ದ ಬಗ್ಗೆ ಹಲವು ಸುಳಿವುಗಳು ದೊರೆಯುತ್ತದೆ. ಅದ್ದರಿಂದ ಜನಪದ ಕತೆಯಲ್ಲಿನ ಸರ್ಪಮಲ್ಲಿಕ ಯಾರು? ಅನ್ನುವುದನ್ನು ನಾವು ವಿಜಯನಗರದ ಆರಂಭ ಕಾಲದಲ್ಲಿ ಅಥವಾ ಅದಕ್ಕಿಂತ ಮೊದಲು ಹುಡುಕಬೇಕಾದದ್ದು ಅನಿವಾರ್ಯ.

ವಿಜಯನಗರದ ದೊರೆ ಮೊದಲನೆ ಬುಕ್ಕರಾಯನ ಕಾಲದ (ಕ್ರಿ.ಶ.1362) ಭಾವಿಕೇರಿಯಲ್ಲಿ ದೊರೆತ ಶಿಲಶಾಸನವು ಈ ಪ್ರದೇಶವನ್ನು 'ಅಂಕೋಲೆನಾಡು' ಎಂದು ಉಲ್ಲೇಖಿಸಿದೆ.[7] ಎರಡನೇ ಹರಿಹರ ದೊರೆಯ (ಕ್ರಿ.ಶ.1401) ಬೊಬ್ರುವಾಡೆಯ ಶಾಸನವು 'ಗೋವಿಂದದೇವ' ಎನ್ನುವವನು ವಿಜಯನಗರದ ರಾಜ್ಯಪಾಲನಾಗಿ ಹೊನ್ನಾವರ ಈ ಕೇಂದ್ರದಿಂದ ಈ ಭಾಗದ ಆಡಳಿತ ನೋಡಿಕೊಳ್ಳುತ್ತಿದ್ದ8 ಕುರಿತು ವಿವರಣೆ ನೀಡುತ್ತದೆ. ಕ್ರಿ.ಶ.1350ರ ಸಾಳ್ವ ಕೃಷ್ಣದೇವರಸ ಒಡೆಯನ ಮಂಜಗುಣಿ ಶಾಸನವು 'ಕೋಟೆಯ ಒಳಗಣ ನಮ್ಮ ಅರಮನೆಗೆ....' [8] ಎಂದು ಉಲ್ಲೇಖಿಸುತ್ತದೆ. ಕೋಟೆಯ ಹನುಮಂತ ದೇವಾಲಯದ ಪಕ್ಕದಲ್ಲಿರುವ ಒಂದು ಜೀರ್ಣವಾದ ಶಿಲಾಲೇಖವು ಚಂದಾವರ ಕಾದಂಬ ಅರಸ ಶಿವಚಿತ್ತ ಇಮ್ಮಡಿ ವೀರಬಸವಿದೇವರಸನ ಮತ್ತು ಆತನ ಮಗ ಶಿವಚಿತ್ತ ವಿರಕಾವ(ಮ)ದೇವರಸನು ಹೈವೆ-500ನ್ನು ಜಂಟಿ ಆಳ್ವಿಕೆ ಮಾಡಿದ್ದನ್ನು ಹೇಳುತ್ತಿದೆ.[9] ಈ ಶಿಲಾಲೇಖದ ಕಾಲ ನಿರ್ದಿಷ್ಟವಿಲ್ಲದಿದ್ದರೂ ಇಮ್ಮಡಿ ವೀರಬಸವಿದೇವರಸನ ಆಳ್ವಿಕೆಯ ಅವಧಿ ಕ್ರಿ.ಶ.1354-1385 ಮತ್ತು ಆತನ ಮಗ ಶಿವಚಿತ್ತ ವೀರಕಾವ(ಮ)ದೇವರಸನ ಆಳ್ವಕೆಯ ಅವಧಿ ಕ್ರಿ.ಶ. 1385-1410 ಎನ್ನುವುದು ಸ್ಪಷ್ಟ.10 ಇವೆಲ್ಲವನ್ನು ಗಮನಿಸಿದಾಗ ಹದಿನಾಲ್ಕನೇ ಶತಮಾನದ ಕೊನೆಯ ವರ್ಷಗಳಲ್ಲಿ ಅಂಕೋಲೆ 'ಹೈವೆ-500'ರ ಭಾಗವಾಗಿ ಒಂದು ಪ್ರಮುಖ ಆಡಳಿತ ವಿಭಾಗವಾಗಿ ರೂಪುಗೊಂಡಿರುವುದು ಖಚಿತವಾಗುತ್ತದೆ. ಇದರೊಟ್ಟಿಗೆ ಈ ಆವಧಿಯಲ್ಲಾಗಲೇ ಅಧಿಕಾರ ಚಲಾಯಿಸುವ ಕೇಂದ್ರವಾಗಿ ಅಂಕೋಲೆಯಲ್ಲಿ ಒಂದು ಸುಭದ್ರ ಕೋಟೆ ಇತ್ತೆಂದು ಊಹಿಸಬಹುದಾಗಿದೆ.

ವಿಜಯನಗರದ ಸ್ಥಾಪನೆಗಿಂತ ಮೊದಲು ಕ್ರಿ.ಶ. 1327-28ರಲ್ಲಿ ದೆಹಲಿ ಸುಲ್ತಾನರ ಸೈನ್ಯವು ದ್ವಾರಸಮುದ್ರ ಮತ್ತು ಮಧುರೈಯ ಮೇಲೆ ದಾಳಿ ಮಾಡಿ ಪಶ್ಚಿಮ ಕರಾವಳಿಯ ಮೂಲಕ ಹಾದು ಕೊಂಕಣ ಮತ್ತು ಗೋವೆಯ ಭಾಗಗಳನ್ನು ವಶಪಡಿಸಿಕೊಂಡು ಸಾಗುತ್ತದೆ. ಹೀಗೆ ಸುಲ್ತಾನರ ಸೈನ್ಯವು ವಶಪಡಿಸಿಕೊಂಡ ಹೊನ್ನಾವರದಿಂದ ಗೋವೆಯವರೆಗಿನ ಭಾಗಗಳ ಆಡಳಿತವನ್ನು 'ತಿಮ್ಮ ಮಂತ್ರಿ' ಎನ್ನುವವನು ನೋಡಿಕೊಳ್ಳುತ್ತಿದ್ದನು. ಈತನಿಗೆ 'ಮಲ್ಲಿಕ ಬಹದ್ದೂರ' ಎನ್ನುವ ಬಿರುದಿದಿತ್ತು. ಕ್ರಿ.ಶ. 1348ರ ಗೋವೆಯ ಶಾಸನವು ಇದನ್ನು ದೃಢೀಕರಿಸುತ್ತದೆ.[11] ಈತನು ಮುಸ್ಲಿಂ ರಾಜನ ಸ್ಥಾನಿಕ

ಅಧಿಕಾರಿ ಎಂದು ತಿಳಿಸುತ್ತದೆ. ಈ ತಿಮ್ಮ ಮಂತ್ರಿಯು ಹಿಂದೂವಾಗಿದ್ದು ಮುಸ್ಲಿಂ ಅರಸರ ಬಿರುದು ಅಥವಾ ಹುದ್ದೆ ಹೊಂದಿ 'ಮಲ್ಲಿಕ ಬಹದ್ದೂರ ತಿಮ್ಮ ಮಂತ್ರಿ'ಯಾಗಿದ್ದನು. ಕೆಲ ಸಮಯವಾದರೂ ಈ ಭಾಗದ ಆಡಳಿತವನ್ನು ದಕ್ಷ ರೀತಿಯಲ್ಲಿ ನಿಭಾಯಿಸಿರುವ ಈ 'ಮಲ್ಲಿಕ ಬಹದ್ದೂರ ತಿಮ್ಮ ಮಂತ್ರಿ'ಯೇ ಜನಪದ ಐತಿಹ್ಯದಲ್ಲಿ ಅಂಕೋಲೆಯ ಕೋಟೆ ಕಟ್ಟಿದ 'ಸರ್ಪಮಲ್ಲಿಕ'ನಾಗಿರುವ ಎಲ್ಲ ಸಾಧ್ಯತೆಗಳಿವೆ. ಏಕೆಂದರೆ ಈತನಿಗಿಂತ ಮೊದಲು ಈ ಪ್ರದೇಶವನ್ನಾಳಿದ ಶಿಸುಗಲಿ ಪಾಂಡ್ಯರ ಮೊದಲನೆ ಮಲ್ಲಿದೇವ (ಕ್ರಿ.ಶ.1113–1119) ಹಾಗೂ ಇಮ್ಮಡಿ ಮಲ್ಲಿದೇವ (ಕ್ರಿ.ಶ.1125–1145)ರು ಸರ್ಪಮಲ್ಲಿಕ ಹೆಸರಿನೊಂದಿಗೆ ಮೇಲ್ನೋಟಕ್ಕೆ ಸಾಮ್ಯತೆಯಿದ್ದರೂ, ಇವು ಅರಸು ಮನೆತನದ ಹಿನ್ನಲೆಯಿಂದ ವಂಶಪಾರಂಪರ್ಯವಾಗಿ ರಾಜ ಗದ್ದುಗೆಯನ್ನೇರಿದವರು. ಜನಪದ ಕತೆಯಲ್ಲಿ ಸರ್ಪಮಲ್ಲಿಕ ಜನ್ಮದಿಂದ ರಾಜ ವಂಶಸ್ಥನಾಗಿರದೇ ಒಬ್ಬ ದನಗಾಹಿ ಹುಡುಗನಾಗಿದ್ದಾನೆ. ತಿಮ್ಮ ಮಂತ್ರಿಯೂ ಸಹ ಹುಟ್ಟಿನಿಂದ ಅರಸು ಮಗನಲ್ಲ ಎನ್ನುವುದು ಇಲ್ಲಿ ಗಮನಾರ್ಹ.

ಅಲ್ಲಾವುದ್ದೀನ್ ಖಿಲ್ಜಿಯ ದಾಳಿಗೆ ತುತ್ತಾಗಿ ದಕ್ಷಿಣ ಭಾರತದ ಪ್ರಮುಖ ಸಾಮ್ರಾಜ್ಯಗಳೆಲ್ಲ ಧ್ವಂಸಗೊಂಡ ನಂತರ ಸ್ಥಾನಿಕ ರಾಜಕೀಯ ಪರಿಸ್ಥಿತಿ ಗೊಂದಲದ ಗೂಡಾಯಿತು. ಖಿಲ್ಜಿಯ ನಂತರ ಆರಂಭವಾದ ತುಘಲಕರ ಆಕ್ರಮಣ ದಕ್ಷಿಣ ಭಾರತದ ರಾಜಕೀಯ ವ್ಯವಸ್ಥೆಗೆ ಬಲವಾದ ಪೆಟ್ಟು ಕೊಟ್ಟಿತು. ಇಂತಹ ಸಂದರ್ಭದಲ್ಲಿ ತಿಮ್ಮ ಮಂತ್ರಿ ಸಿಕ್ಕಿದ ಅವಕಾಶವನ್ನು ಬಳಸಿಕೊಂಡು ಉನ್ನತ ಹುದ್ದೆಗೇರಿರಬಹುದು. ಅಂತೆಯೇ ದೆಹಲಿಯ ಸುಲ್ತಾನರು ತಾವು ಗೆದ್ದ ದಕ್ಷಿಣದ ಪ್ರದೇಶಗಳ ಆಡಳಿತ ನಿರ್ವಹಣೆಗೆ ಗಮನ ನೀಡದಿದ್ದುದು ತಿಮ್ಮನಂತಹ ವ್ಯಕ್ತಿಗಳಿಗೆ ಸ್ವತಂತ್ರವಾಗಿ ಅಧಿಕಾರ ನಡೆಸಲು ಅನುಕೂಲವಾಗಿರಬೇಕು. ತನ್ನ ಶೌರ್ಯ ಸಾಹಸಗಳಿಂದ ಅಧಿಕಾಶಾಹಿಯ ಮನ್ನಣೆ ಗಳಿಸಿದಂತೆ ತಿಮ್ಮ ಮಂತ್ರಿ ತಾನು ಮಾಡಿರಬಹುದಾದ ಜನೋಪಯೋಗಿ ಕೆಲಸಗಳಿಂದ ಜನಮಾನಸದಲ್ಲಿಯೂ ಸ್ಥಾನ ಗಳಿಸಿಕೊಂಡಿರಬೇಕು. ಒಬ್ಬ ಸಭ್ಯ ಸಂಪನ್ನ ನಡಾವಳಿಯ ವ್ಯಕ್ತಿಯ ಸುತ್ತ ಕ್ರಮೇಣ ಪವಾಡ ಸದೃಶ್ಯ ದಂತ ಕತೆಗಳು ಹುಟ್ಟಿಕೊಂಡಿರಬೇಕು. ತಿಮ್ಮ ಮಂತ್ರಿ ಬಗ್ಗೆ ಗೋವೆಯ ಶಾಸನದ ಹೊರತು ಹೆಚ್ಚಿನ ಮಾಹಿತಿಗಳು ಲಭ್ಯವಾಗದಿರುವುದು ನಮ್ಮ ದುರ್ದೈವವಾಗಿದೆ.

ಅವಲೋಕನ :

ಅನೇಕ ಸಾಧ್ಯತೆಗಳನ್ನು ಅಭ್ಯಸಿಸಿದ ನಂತರವೂ ಅಂಕೋಲೆಯ ಕೋಟೆ ಕಟ್ಟಿದ ಸಂದರ್ಭವನ್ನು ನಿಷ್ಕರ್ಷೆಯಾಗಿ ತಿಳಿಸುವಲ್ಲಿ ಆಧಾರಗಳು ಸೋಲುತ್ತಿವೆ. ಈ ಕೋಟೆ ಇತಿಹಾಸದ ಯಾವುದೋ ಕಾಲಘಟ್ಟದಲ್ಲಿ ನಿರ್ಮಾಣವಾಗಿ ಆಯಾ ಕಾಲಗಳಲ್ಲಿ ನವೀಕರಣಗೊಂಡಿರುವುದು ಸತ್ಯ. ಮಧ್ಯಯುಗದ ಆರಂಭದ ಸಮಯದಲ್ಲಿಯೇ ನಿರ್ಮಾಣವಾದ ಕೋಟೆ ತನ್ನದೇ ಮಹತ್ವವನ್ನು ಹೊಂದಿದ್ದರೂ ಇದು ಒಂದು ದೀರ್ಘಕಾಲ ಆಡಳಿತದ ಕೇಂದ್ರವಾಗಿದ್ದು ಕಡಿಮೆ. ಅಂಕೋಲೆಯ ಭಾಗವನ್ನಾಳಿದ ಪ್ರತಿಯೊಬ್ಬರೂ ಇದನ್ನು ಸಂದರ್ಭಾನುಸಾರ ಬಳಸಿಕೊಂಡಿದ್ದೇ ಹೆಚ್ಚು. ಅಂಕೋಲೆ ಹಾಗೂ ಮಿರ್ಜಾನ ಕೋಟೆಗಳು ರಚನಾ ತಾಂತ್ರಿಕತೆಯಲ್ಲಿ ಬಹುವಾಗಿ ಹೋಲುತ್ತವೆ. ಈ ಎರಡು ಕೋಟೆಗಳು ಬಹುತೇಕ ಒಂದೇ ಸಮಯದಲ್ಲಿ ಕಟ್ಟಲ್ಪಟ್ಟಂತೆ ತೊರುತ್ತವೆ. ಮೊದಲು ಅಂಕೋಲೆಯಲ್ಲಿ ಅನಂತರ ಮಿರ್ಜಾನಿನಲ್ಲಿ ಕೋಟೆ ನಿರ್ಮಾಣವಾದದ್ದು ಸ್ಪಷ್ಟ. ಮಿರ್ಜಾನ ಕೋಟೆ ನಿರ್ಮಾಣವಾದ ನಂತರ ಅಂಕೋಲೆಯ ಕೋಟೆಯು ಸಾಂದರ್ಭಿಕ ಬಳಕೆಗೆ ಮಾತ್ರ ಸೀಮಿತವಾಯಿತು. ಹದಿನಾರನೇ ಶತಮಾನದಲ್ಲಿ ಸೋದೆಯ ಅರಸರು ಕರಾವಳಿಯ ಮೇಲಿನ ನಿಯಂತ್ರಣಕ್ಕಾಗಿ ಸದಾಶಿವಗಡದಲ್ಲಿಯೂ, ಪೋರ್ಚುಗೀಸರು ಅಂಜದೀವದಲ್ಲಿಯೂ ಕೋಟೆಗಳನ್ನು ಕಟ್ಟಿಕೊಂಡರು. ಒಂದಿಷ್ಟು ಕಾಲ ರಾಜಸತ್ತೆಗಳ ಅಳಿವು ಉಳಿವಿನಲ್ಲಿ ಮುಖ್ಯ ಭೂಮಿಕೆ ನಿಭಾಯಿಸಿದ ಅಂಕೋಲೆ ಕೋಟೆ ನಿಧಾನವಾಗಿ ನಿರ್ಲಕ್ಷ್ಯಕ್ಕೆ ತುತ್ತಾಯಿತು. ಕ್ರಿ.ಶ.1763ರಲ್ಲಿ ಹೈದರಾಲಿಯ ಸರದಾರ ಹೈಬತ್ ಜಂಗ್ ಕೋಟೆಯನ್ನು ದುರಸ್ಥಿಗೊಳಿಸಿದ.[12] ಕ್ರಿ.ಶ.1783ರಲ್ಲಿ ಬ್ರಿಟಿಷ್ ತುಕಡಿಯೊಂದು ಕೋಟೆಯನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸುತ್ತದೆ. ಕ್ರಿ.ಶ.1799ರಲ್ಲಿ ಟಿಪ್ಪುವಿನ ಸೈನ್ಯ ಕೋಟೆಯಲ್ಲಿತ್ತು. ಕ್ರಿ.ಶ.1801ರಲ್ಲಿ ಇದೊಂದು ಜೀರ್ಣವಾದ ಕೋಟೆಯೆಂದು ಫ್ರಾನ್ಸಿಸ್ ಬುಕಾನನ್ ದಾಖಲಿಸಿದ್ದಾನೆ.

ಸುದೀರ್ಘ ಐತಿಹಾಸಿಕ ವಾಸ್ತವತೆಯಲ್ಲಿ ಈ ಕೋಟೆ ಬರಿ ಕಲ್ಲು–ಮಣ್ಣು–ಗಚ್ಚು–ಗಾರೆಗಳ ಗೋಡೆಯಾಗಿ ನಿಂತಿಲ್ಲ. ಅದರಲ್ಲಿ ಈ ನೆಲದ ಕ್ಷಾತ್ರವಿದೆ, ತೇಜವಿದೆ, ಸ್ಪಂದನವಿದೆ, ತ್ಯಾಗವಿದೆ, ಬಲಿದಾನವಿದೆ. ಅಂಕೋಲೆಯ ಇತಿಹಾಸ ನಿರ್ಮಾಣ

ಮಾಡಿದ ಆಂತರ್ಯದ ಶಕ್ತಿಯಿದೆ. ಸಂಸ್ಕೃತಿ ಸಂಸ್ಕರಿಸಿದ ಚೇತನವಿದೆ. ಇಂದು ನನ್ನಂಥವರೊಂದಿಗೆ ಯಾವುದೋ ಜನ್ಮದ ಭಾವನಾತ್ಮಕ ಸಂಬಂಧ ಹೊಂದಿದ ಈ ಕೋಟೆ ತನ್ನ ಕಾಲಚಕ್ರದ ತಿರುವಿನಲ್ಲಿ ನುಸುಳಿ-ನರಳಿ, ಉನ್ನತಿ-ಅವನತಿಗಳನ್ನು ಕಂಡುಂಡು ಅಳಿದುಳಿದ ತನ್ನ ಕೆಲ ಅಂಗಗಳೊಂದಿಗೆ ಇತಿಹಾಸದಲ್ಲಿ ಲೀನವಾಗಿದೆ. ಮೆರೆದವರೆಲ್ಲ ಮೈಚೆಲ್ಲಿ ಮಲಗಿದ ಕತೆಯನ್ನು ಹೇಳುತ್ತಲೇ ತಾನೂ ಮಲಗಿಬಿಟ್ಟಿದೆ. ಜೊಂಡು, ಪಾಚಿ, ಹುಲ್ಲುಗರಿಕೆಗಳೆಲ್ಲ ಸೇರಿ ಗೋಡೆಗಳಗೆ ಮುದಿತನ ತಂದಾಗ ಅದೆಲ್ಲಿಂದಲೋ ಬಂದು ಬಿದ್ದ ಆಲ-ಅಶ್ವತ್ಥದ ಗಿಡಗಳು ಗೋಡೆ ಬುರುಜುಗಲ್ಲಿ ಬೇರು ಬಿಟ್ಟು, ಬೀಳಲು ಬಿಟ್ಟು ಸೋಂಪಾಗಿ ಬೆಳೆದಿದೆ. ಸ್ವಾರ್ಥಪರ ಮನುಷ್ಯನ ಹಸ್ತಕ್ಷೇಪದೊಂದಿಗೆ ಇತಿಹಾಸ ಸೀಳುವ ಕೊನೆಯ ಕೆಲಸಕ್ಕೆ ಉಳಿ ಹೊಡೆದು ಸ್ಮೃತಿಯನ್ನು ವಿಸ್ಮೃತಿಯನ್ನಾಗಿಸಿವೆ.

ಅಡಿಟಿಪ್ಪಣಿ :

1. ಡಾ|| ಎಸ್.ಕೆ.ಜೋಶಿ - ಕರ್ನಾಟಕದ ಕೋಟೆಕೊತ್ತಲಗಳು - ಪುಟ 19
2. ಪೂರ್ವೋಕ್ತ, ಪುಟ 20
3. ಶ್ಯಾಮಸುಂದರ ಗೌಡ - ಅಂಕೋಲೆ; ಒಂದು ಸ್ಥೂಲ ಚಾರಿತ್ರಿಕ ಹಿನ್ನೆಲೆ, ಪುಟ 7
4. ಕರ್ನಾಟಕ ಸ್ಟೇಟ್ ಗೆಜೆಟೀರ್ (ಉತ್ತರ ಕನ್ನಡ ಜಿಲ್ಲೆ) 1985, ಸಂ-ಸೂರ್ಯನಾಥ ಕಾಮತ, ಪುಟ-884
5. ಎ.ಇ. ಸಂ. XXXII, ಪುಟ 217-219, ಕಾರ್ಪಸ್ ಆಫ್ ಕದಂಬ ಇನ್ಸ್‌ಕ್ರಿಪ್ಶನ್ 1985, ಪುಟ: 66-69
6. ಪೂರ್ವೋಕ್ತ 4, ಪುಟ - 127
7. ರಘುನಾಥ ಭಟ್ ಎಚ್. ಆರ್. - ಎ ನ್ಯೂ ಇನ್ಸ್‌ಕ್ರಿಪ್ಶನ್ ಆಫ್ ದಿ ಟೈಮ್ ಆಫ್ ಬುಕ್ಕ 1 ಫ್ರಾಮ್ ಭಾವಿಕೇರಿ ಇಎಸ್ಐ ಸಂಪುಟ XIII (1985), ಪುಟ: 87-89
8. ಕೆ.ಐ. ಸಂಪುಟ VI, ಸಂಖ್ಯೆ 62, ಪುಟ : 167

8ಅ. ಪೂರ್ವೋಕ್ತ, ಸಂಖ್ಯೆ 79 ಪುಟೆ : 249

9. ಪೂರ್ವೋಕ್ತ, ಸಂಖ್ಯೆ 78, ಪುಟ : 243
10. ಡಾ|| ಗಣಪತಿ ಗೌಡ-ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕದಂಬರು, ಪುಟ : 57-59
11. ಪೂರ್ವೋಕ್ತ 4, ಪುಟ - 123
12. ಬಾಂಬೆ ಗೆಜೆಟೀರ್ (ಕೊಂಕಣ) 1883 Vol. II, ಪುಟ-259

❑

ಅಂಕೋಲೆ ಪರಿಸರದ ಬೀರ ಮತ್ತು ಬೊಮ್ಮಯ್ಯ ದೇವರು : ಒಂದು ವಿಶ್ಲೇಷಣೆ

– ಶ್ಯಾಮಸುಂದರ ಟಿ. ಗೌಡ

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಪರಂಪರೆಗಳ ಅಧ್ಯಯನಕ್ಕೆ ಹೆಚ್ಚಿನ ಮಹತ್ವವಿದೆ. ಪರಂಪರೆಗಳು ಇದ್ದಕ್ಕಿದ್ದ ಹಾಗೆ ಪ್ರಾರಂಭವಾಗುವುದಿಲ್ಲ ಮತ್ತು ಇದ್ದಕ್ಕಿದ್ದಂತೆ ಮಾಯವಾಗುವುದಿಲ್ಲ, ಹೊಸ ಸಂಪ್ರದಾಯಗಳು ಬಂದರೂ ಹಳೆಯ ಸಂಪ್ರದಾಯಗಳೊಡನೆ ಬೆರೆತು ಮುಂದುವರಿಯುತ್ತವೆ. ಇಂತಹ ಸಂಪ್ರದಾಯಗಳಲ್ಲಿ ಪರಂಪರೆಯಲ್ಲಿ ಯಾವುದು ಪ್ರಾಚೀನ ಯಾವುದು ಆರ್ವಾಚೀನ ಎಂದು ಬೇರ್ಪಡಿಸುವುದು ಕಷ್ಟದ ಕೆಲಸ. ಆದರೂ ಸಾಹಿತ್ಯ ಮತ್ತು ಶಾಸನಾಧಾರಗಳಿಂದ ಸ್ವಲ್ಪ ಮಟ್ಟಿಗೆ ತಿಳಿಯಲು ಸಾಧ್ಯ. ಪರಂಪರೆಗಳು, ಸಂಪ್ರದಾಯಗಳು ಯಾವಾಗ ಹೇಗೆ ? ಏಕೆ ? ಪ್ರಾರಂಭವಾದವು ಎಂಬ ಸಂಗತಿಯನ್ನು ಸೂಕ್ಷ್ಮವಾಗಿ ವಿಚಾರಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂಕೋಲಾ ತಾಲೂಕು ಹಾಗೂ ಸುತ್ತಮುತ್ತಲಿನ ಪರಿಸರದಲ್ಲಿ ಪೂಜಿಸಲ್ಪಡುವ 'ಬೀರ' ಮತ್ತು 'ಬೊಮ್ಮಯ್ಯ' ಎಂಬ ಎರಡು ದೇವರುಗಳ ಪರಂಪರೆಯನ್ನು ಅವಲೋಕಿಸಲಾಗಿದೆ.

ಅಂಕೋಲೆಯಲ್ಲಿ ಶಿಷ್ಟ ಸಂಪ್ರದಾಯದ ದೇವರುಗಳಿಗಿಂತ ಜನಪದ ದೇವರುಗಳ ಸಂಖ್ಯೆ ಅಧಿಕವಾದುದು. ಬೀರ, ಬೊಮ್ಮಯ್ಯ, ಮುರ್ಕುಂಡಿ, ಹೊನ್ನಾರಾಕಾ, ಹಿರೇಹೊನ್ನಪ್ಪ, ಹೊಲೆವಟರ, ರಾಕೇಶ, ಅಮ್ಮನವರು, ಕನ್ನೆ, ಅಚ್ಚಕನ್ನೆ, ಚೌಡಿ ಹೀಗೆ ಈ ಪಟ್ಟಿ ಬೆಳೆಯುತ್ತದೆ. ಇಂಥ ದೈವಗಳ ಉಗಮ, ವಿಕಾಸ, ಸಂಸ್ಕೃತಿ, ಭೌಗೋಳಿಕ ಪರಿಸರದ ಜೊತೆಗಿನ ಪರಸ್ಪರ ಸಂಬಂಧ ಇತ್ಯಾದಿಗಳ ಕುರಿತು ಈವರೆಗೆ ಸಮಗ್ರ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಬೀರಪ್ಪ ಮತ್ತು ಬೊಮ್ಮಯ್ಯ ದೇವರುಗಳ ಕುರಿತು ಕೆಲವು ಸಂಗತಿಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಅಂಕೋಲೆಯ ಪರಿಸರದಲ್ಲಿ ಬಹುಸಂಖ್ಯಾತ ಜನಪದರ ಆರಾಧ್ಯ ದೈವವಾಗಿರುವ 'ಬೀರದೇವ' ಮತ್ತು 'ಬೊಮ್ಮಯ್ಯದೇವ'ರ ಉಗಮ ಮತ್ತು ವಿಕಾಸದ ಕುರಿತು ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವುದು ಅಷ್ಟು ಸುಲಭವಲ್ಲ. ಆದರೂ ಉಪಲಬ್ಧವಿರುವ ಆಕರಗಳ ನೆರವಿನಿಂದ ಪುರಾಣ ಮತ್ತು ಚಾರಿತ್ರಿಕ ಹಿನ್ನಲೆಯಲ್ಲಿ ಈ ಎರಡು ದೇವರುಗಳ ಮೂಲ ಪರಂಪರೆಯನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.

ಬೀರದೇವರ ಪರಂಪರೆ :

'ಬೀರ' ಎನ್ನುವ ದೇವರು ಅಂಕೋಲೆಯ ಪ್ರತಿ ಹಳ್ಳಿಯಲ್ಲೂ ಕಾಣಸಿಗುತ್ತದೆ. ಬಹುತೇಕ ಸಂದರ್ಭದಲ್ಲಿ ಈ ಹೆಸರಿನ ಜೊತೆ ಒಂದು ವಿಶೇಷಣವೂ ಸೇರಿರುತ್ತದೆ. ಇದರಿಂದ 'ಬೀರದೇವ'ನನ್ನು 'ಮಾಣಿಬೀರ', 'ಊಲಿಬೀರ', 'ಗುಂಡುಬೀರ', 'ಬೇಟೆಬೀರ' 'ಜೈನಬೀರ', 'ಕಾನಬೀರ', 'ಕುಂಟಬೀರ' 'ಚಂಡಕಿಬೀರ', 'ದೊಡ್ಡ ಚಂಡಕಿಬೀರ', 'ಸಣ್ಣಚಂಡಕಿಬೀರ', 'ಜಡೆಬೀರ', 'ಕತ್ತಿಬೀರ', 'ಕೋಡಿಬೀರ' ಇತ್ಯಾದಿ ರೂಪಗಳಲ್ಲಿಯೂ ಪೂಜಿಸಲಾಗುತ್ತದೆ. 'ಬೀರ' ಇದು 'ವೀರ' ಪದದ ತದ್ಭವ ರೂಪ. ಅಂಕೋಲೆಯ ಪರಿಸರದಲ್ಲಿ ದಂಡಿನ ಕಾಳಗದಲ್ಲಿ, ಕಳ್ಳಕಾಕರ ವಿರುದ್ಧ, ಗೋವುಗಳ ರಕ್ಷಣೆಗಾಗಿ, ಗ್ರಾಮಗಳ ರಕ್ಷಣೆಗಾಗಿ, ಸ್ತ್ರೀಯರ ಮಾನ ಕಾಪಾಡುವುದಕ್ಕಾಗಿ ಹೀಗೆ ವಿವಿಧ ಕಾರಣಗಳಿಗಾಗಿ ಹೋರಾಡಿ ಪ್ರಾಣತ್ಯಾಗಮಾಡಿದ ವೀರರ ಸ್ಮಾರಕಗಳು ಈ 'ಬೀರದೇವ'ರ ಗುತ್ತುಗಳು. 'ಮಾಣಿಬೀರ', 'ಊಲಿಬೀರ', 'ಗುಂಡುಬೀರ', 'ಬೇಟೆಬೀರ' 'ಜೈನಬೀರ', 'ಕಾನಬೀರ',

'ಕುಂಟಬೀರ' 'ಚಂಡಕಿಬೀರ', 'ದೊಡ್ಡ ಚಂಡಕಿಬೀರ', 'ಸಣ್ಣಚಂಡಕಿಬೀರ', 'ಜಡೆಬೀರ', 'ಕತ್ತಿಬೀರ', 'ಕೋಡಿಬೀರ' ಮೊದಲಾದವರು ಈ ಭಾಗದ ಸಾಂಸ್ಕೃತಿಕ ನಾಯಕರುಗಳು. ಈ ನಾಯಕರು ತಮ್ಮ ಅಗಾದ ಶೌರ್ಯ, ಸಾಹಸಗಳಿಂದ, ಸಮಷ್ಟಿಯ ಹಿತಕ್ಕಾಗಿ ತಮ್ಮ ಬದುಕನ್ನೇ ಧಾರೆಯೆರೆದಂತ ಸಾಧನೆಗಳಿಂದ ಜನಮಾನಸದಲ್ಲಿ ನೆಲೆನಿಂತು ದೈವತ್ವಕ್ಕೇರಿ ಪೂಜಿಸಲ್ಪಟ್ಟಿದ್ದಾರೆ. ಬೀರದೇವನ ಜೊತೆಗಿರುವ ವಿಶೇಷಣಗಳು ಆಯಾ ವೀರರ ಹೆಸರು, ಬಿರುದು, ವ್ಯಕ್ತಿತ್ವ, ರೂಪ, ವೀರನ ಪ್ರಾದೇಶಿಕತೆ, ವಂಶ ಅಥವಾ ಮನೆತನ ಇತ್ಯಾದಿಗಳನ್ನು ತಿಳಿಸುತ್ತವೆ. ಭಾವಿಕೇರಿ[1] ಹಾಗೂ ಮೊಗಟಾ ಗ್ರಾಮದಲ್ಲಿರುವ ವೀರಗಲ್ಲುಗಳು, 'ಸೋದೆ ಶೂರ'ನ ವಿವರಣೆ ನೀಡುವ ಜನಪದ ಕಥನ ಕಾವ್ಯಗಳು ಈ ಅಭಿಪ್ರಾಯಕ್ಕೆ ಬಲ ಒದಗಿಸುತ್ತವೆ. ಕೆಲವು ಕಡೆಗಳಲ್ಲಿ ವಿಶೇಷಣಗಳು ಗೌಣವಾಗಿ ಅಥವಾ ಕ್ಷೀಣವಾಗಿ ಕೇವಲ 'ಬೀರದೇವ'ಎನ್ನುವುದಷ್ಟೇ ಉಳಿದಿದೆ.

ಬೀರ ದೇವರುಗಳ ಗುತ್ತುಗಳು ಅಥವಾ ಪೂಜಾ ಸ್ಥಾನಗಳು ಅಂಕೋಲೆಯ ಪರಿಸರದಲ್ಲಿ ವ್ಯಾಪಕವಾಗಿ ಕಂಡುಬಂದರೂ, ಒಬ್ಬ ವೀರನನ್ನು ದೇವರಾಗಿ ಆರಾಧಿಸುವ ಪರಂಪರೆ ಎಂದಿನಿಂದ? ಹೇಗೆ? ಆರಂಭವಾಯಿತೆನ್ನುವುದು ತಿಳಿಯಲು ಸ್ಥಳೀಯವಾಗಿ ಸಿಗುವ ಆಧಾರಗಳು ವಿರಳ. ಶಾಸನದಂತ 'ದಾಖಲು ಸಾಹಿತ್ಯ'ದಲ್ಲಿ ಉಲ್ಲೇಖವಾಗಿರುವ "ಬರದೋಂ ಬೀರಯ್ಯ"(ಕ್ರಿ.ಶ. 930), "ಯೀ ಬೀರಲಿಂಗಕ್ಕೆ ಹೊಲಬಾವಿ ಕಳೆಕೊಟ್ಟರು" (ಕ್ರಿ.ಶ. 1061) ಇಂಥ ಸಾಲುಗಳು ಬೀರ ದೇವರ ಪ್ರಾಚೀನತೆಯನ್ನು ತಿಳಿಯಲು ಸಹಕಾರಿಯಾಗುತ್ತವೆ.[2] ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ಸಾಂದರ್ಭಿಕವಾಗಿ 'ಬೀರಪ್ಪ', 'ಬೀರದೇವ'ರ ಕುರಿತಾಗಿ ತಿಳಿಸುತ್ತವೆ. ಶಿವ ಶರಣರ ವಚನಗಳಲ್ಲಿಯೂ 'ಮಾರಯ್ಯ', 'ಬೀರಯ್ಯ', 'ಕೇತಯ್ಯ' ಎಂಬ ದೈವಗಳನ್ನು ದಾಖಲಿಸಿದ್ದಾರೆ.3 ಕರ್ನಾಟಕದ ಸಾಂಸ್ಕೃತಿಕ ಇತಿಹಾಸವನ್ನು ಅವಲೋಕಿಸಿದಾಗ ಹಾಲುಮತ ಕಾವ್ಯ ಪುರಾಣಗಳು ಬೀರದೇವನ ಉಗಮದ ವಿಷಯವನ್ನು ತಿಳಿಸುತ್ತವೆ. ಇದರ ಪ್ರಕಾರ ಬರಮದೇವ(ಬ್ರಹ್ಮದೇವ) ಮತ್ತು ಸುರಾವಿತಿ(ಸರಸ್ವತಿ) ಬೀರದೇವನ ತಂದೆ-ತಾಯಿಗಳು. ಕಾಳಿನಾರಾಯಣ ಎನ್ನುವವ ಈತನ ಸೋದರಮಾವ. ಅಕ್ಕ ಮಾಯವ್ವಳು ಬೀರದೇವನನ್ನು ಸಾಕಿ ಬೆಳೆಸುತ್ತಾಳೆ. ಅಪ್ರತಿಮ ಪರಾಕ್ರಮಶಾಲಿಯಾದ ಬೀರದೇವನು ದೈತ್ಯ ಕೋಣಾಸುರನ ಸಂಹಾರ ಮಾಡುತ್ತಾನೆ. ಹಾವನ್ನು ಮರ್ಧಿಸಿ ಅದರ ಹೆಡೆ ಏರುತ್ತಾನೆ. ಸೋದರಮಾವ ಕಾಳಿನಾರಾಯಣನ ಅನೇಕ ಕುತಂತ್ರಗಳನ್ನು ಹಿಮ್ಮೆಟ್ಟಿಸುತ್ತಾನೆ.[4] ಇತ್ಯಾದಿಯಾಗಿ ಹಾಲುಮತ ಪುರಾಣಗಳು ವಿವರಿಸುತ್ತವೆ. ಇಂಥ ಪರಾಕ್ರಮಶಾಲಿಯಾದ 'ಬೀರ'ನನ್ನು ಕುರುಬರು ಆರಾಧನೆ ಮಾಡುತ್ತ ಬಂದರು. ಈ ಕಾರಣವಾಗಿ ದೈವತ್ವಕ್ಕೇರಿ ಜನಮಾನಸದಲ್ಲಿ ಪ್ರಸಿದ್ಧನಾಗಿ 'ಬೀರಪ್ಪ', 'ಬೀರಲಿಂಗ'-'ಬೀರಲಿಂಗೇಶ್ವರ', 'ಸಿದ್ಧಬೀರ'-'ಸಿದ್ಧಬೀರೇಶ್ವರ', 'ಕರಿಸಿದ್ಧ'- 'ಕರಿಸಿದ್ಧೇಶ್ವರ' ಹೆಸರಿನಿಂದ ಆರಾಧನೆಗೊಳ್ಳುತ್ತಿದ್ದಾನೆ. ಹೀಗಾಗಿ ನಾಡಿನಾದ್ಯಂತ ಈತನ ಹೆಸರಿನಲ್ಲಿ ಗುಡಿ-ಗುಂಡಾರಗಳು, ದೇವಾಲಯಗಳು ಸ್ಥಾಪನೆಗೊಂಡಿವೆ. ಕೋಣಗನೂರು, ಮುರಗುಂಡಿ, ಅಲಕನೂರು, ರಾಯಭಾಗ, ಹಾರೂಗೇರಿ, ತಾಳಿಕಟ್ಟೆ ಮೊದಲಾದವು ಈತನ ಪ್ರಸಿದ್ಧ ನೆಲೆಯಾಗಿವೆ. ಕರುಬರ ಪ್ರತಿಯೊಂದು ಮನೆಯಲ್ಲಿ ವ್ಯಕ್ತಿಗಳಿಗೆ ಬೀರಪ್ಪ, ಬೀರಯ್ಯ, ಬೀರೇಶ, ಬೀರಲಿಂಗ, ಬೀರಮ್ಮ ಎಂಬ ಹೆಸರಿಡುವ ಪದ್ಧತಿ ಈಗಲೂ ಕಾಣಬಹುದು. ಕುರುಬರು ಈತನನ್ನು ನಾನಾ ರೀತಿಯಾಗಿ ಆರಾಧನೆ ಮಾಡುತ್ತಾರೆ.[5]

ಅಂಕೋಲೆಯ ಸಂದರ್ಭದಲ್ಲಿ ಈ ಕುರುಬರನ್ನು ನಾವು ಕುರುಬರು ಎನ್ನುವುದಕ್ಕಿಂತ ಪಶುಪಾಲಕ ವೃತ್ತಿಯ ಕೃಷಿಕರಾಗಿ ಗುರುತಿಸುವುದು ಹೆಚ್ಚು ಸೂಕ್ತ. ಇಂಥ ಒಂದು ಸಮುದಾಯ ಯಾವುದೋ ಒಂದು ಹಂತದಲ್ಲಿ ಅಂಕೋಲೆ ಪರಿಸರಕ್ಕೆ ಬಂದು ನೆಲೆಸಿರಬೇಕು. ಇಲ್ಲಿನ ಪ್ರಕೃತಿಯ ಮಿತಿಯಲ್ಲಿ ತಮ್ಮ ಕಸುಬನ್ನು ಹೊಂದಿಸಿಕೊಂಡು[6] ಶಾಶ್ವತವಾಗಿ ಇಲ್ಲಿನ ಮಣ್ಣಿನೊಡನೆ ತಮ್ಮ ಸಂಬಂಧವನ್ನು ಗಟ್ಟಿಗೊಳಿಸಿರಬೇಕು. ಜೊತೆಯಲ್ಲಿ ತಾವು ಆರಾಧಿಸುವ ದೇವರನ್ನ, ತಮ್ಮ ಸಂಪ್ರದಾಯ-ಪರಂಪರೆಗಳನ್ನು ಈ ನೆಲದ ಗುಣವಾಗಿಸಿರಬೇಕು. ನಂತರದ ತಲೆಮಾರುಗಳು ಈ ಪರಂಪರೆಗಳನ್ನು ಮುಂದುವರೆಸಿದಾಗ ಅದು ಮೂಲ ಸ್ವರೂಪದಿಂದ ಸ್ವಲ್ಪ ಸಲ್ಪವೇ ಬದಲಾಗುತ್ತ ಇಲ್ಲಿನ ಪ್ರಾದೇಶಿಕ ವೈಶಿಷ್ಟ್ಯವನ್ನು ಮೈಗೂಡಿಸಿಕೊಂಡು ವ್ಯಾಪಕವಾಗಿ ರೂಢಿಯಾಗಿರುವಂತೆ ತೋರುತ್ತದೆ. ಅಲ್ಲದೇ ಅಂಕೋಲಾ-ಕುಮಟಾ ಭಾಗದಲ್ಲಿ ಆಗಿಹೋದ ವೀರರ ಮೂರ್ತಿಮಾಡಿಸಿ ಪೂಜಿಸಿರುವುದು ಸರ್ವೇ ಸಾಮಾನ್ಯವಾಗಿದೆ.[7] ಈ ರೀತಿ ಅಂಕೋಲೆಯ ಸಾಂಸ್ಕೃತಿಕ ಚರಿತ್ರೆಯ ಆರಂಭಿಕ ದಿನಗಳಿಂದಲೇ ಬೀರ(ವೀರ)ರನ್ನು ದೈವತ್ವಕ್ಕೇರಿಸಿ ಆರಾಧಿಸುವ ಪರಂಪರೆಯನ್ನು ಗುರುತಿಸಬಹುದಾಗಿದೆ.

ಬೊಮ್ಮಯ್ಯ ದೇವರ ಪರಂಪರೆ :

ಅಂಕೋಲೆಯಲ್ಲಿ ಬೀರದೇವರಷ್ಟೇ ಸಂಖ್ಯೆಯಲ್ಲಿ ಭಕ್ತರನ್ನು ಹೊಂದಿರುವ ಇನ್ನೊಂದು ದೇವರೆಂದರೆ 'ಬೊಮ್ಮಯ್ಯ' ದೇವರು. ಎಲ್ಲಿ ಬೀರ ದೇವರ ಗುತ್ತಿದೆಯೋ ಬಹುತೇಕ ಅಲ್ಲೆಲ್ಲ ಬೊಮ್ಮಯ್ಯದೇವರಿದ್ದಾನೆ. ಆದರೆ ಬೀರ ದೇವನಿಗಿಂತ ಭಿನ್ನವಾಗಿ ಹಾಗೂ ವಿಶಿಷ್ಟವಾಗಿ ಗುರುತಿಸಿಕೊಂಡಿದ್ದಾನೆ. ಬೀರದೇವನಂತೆ ಬೊಮ್ಮಯ್ಯ ದೇವನು ಬಿಲ್ಲು ಬಾಣಗಳನ್ನಾಗಲಿ, ಕತ್ತಿಯನ್ನಾಗಲಿ ಹಿಡಿದುಕೊಂಡು ಕುದುರೆ ಅಥವಾ ಆನೆಯ ಮೇಲೆ ಸವಾರಿ ಹೊರಟಂತ್ತಿದ್ದರೂ ಬೀರದೇವರಂತೆ ವೀರರ ನೆನಕೆಯಾಗಿ ಕಾಣದೆ ಪ್ರತ್ಯೇಕವಾಗಿ ಗುರುತಿಸಿಕೊಳ್ಳುತ್ತದೆ. ಕೆಲವು ಪ್ರಾಜ್ಞರು ಬೊಮ್ಮಯ್ಯನ ಕುರಿತು "ಭೂಮಿಯ ಅಯ್ಯ ಬೊಮ್ಮಯ್ಯ, ಎತ್ತರದಲ್ಲಿ ಕುಳಿತು ಹೊಲ-ಗದ್ದೆಗಳನ್ನು ಕಾಯುವ ದೇವರು" ಇತ್ಯಾದಿಯಾಗಿ ಅಭಿಪ್ರಾಯ ಪಡುತ್ತಾರೆ. ಬೊಮ್ಮಯ್ಯ ಹೆಸರನ್ನು ಸರಿಯಾಗಿ ಒಡೆದು ಬೆರದಾಗ ಬೊಮ್ಮ + ಅಯ್ಯ ಎಂದಾದದ್ದು ಕಾಣುತ್ತೇವೆ ಬೊಮ್ಮ ನಾಮ ಪದದ ಮುಂದೆ ಅಯ್ಯ ಪ್ರತ್ಯೇಯ ಸೇರಿ ಬೊಮ್ಮಯ್ಯ ಆಗಿದೆ. ಬೊಮ್ಮ ಇದು ಬ್ರಹ್ಮ ಪದದ ತದ್ಭವ ರೂಪ. ಅಂತೆಯೇ ಬ್ರಹ್ಮಯ್ಯದ ತದ್ಭವ ರೂಪವೇ ಬೊಮ್ಮಯ್ಯ.8 ಬ್ರಹ್ಮ ಅಥವಾ ಬೊಮ್ಮದ ಜೊತೆಯಲ್ಲಿ ಅಯ್ಯ ಪ್ರತ್ಯಯ ಸೇರಿರುವುದು ಕಂಡಾಗ ಈತ ಸ್ಥಾನಮಾನದಲ್ಲಿ ಬೀರದೇವನಿಗಿಂತ ಮೇಲಿರುವುದನ್ನೂ ಗುರುತಿಸಬಹುದು.

ಅಂಕೋಲೆಯ ವೀರ ಪಂಪರೆಯ ದೇವರುಗಳ ಜೊತೆ ಜೊತೆಯಲ್ಲಿಯೇ ಇದ್ದು ಆ ದೇವರುಗಳ ಅನುಯಾಯಿಗಳನ್ನೇ ತನ್ನ ಭಕ್ತರನ್ನಾಗಿ ಹೊಂದಿಯೂ ಪ್ರತ್ಯೇಕವಾಗಿ ಅಸ್ಥಿತ್ವ ಪಡೆದಿರುವ ಬೊಮ್ಮಯ್ಯ ದೇವ ಯಾರು? ಅಂಕೋಲೆಯಲ್ಲಿ ಬೊಮ್ಮಯ ದೇವಾರಾರಾಧನೆ ಹೇಗೆ ಆರಂಭವಾಯಿತು? ಇತ್ಯಾದಿ ಪ್ರಶ್ನೆಗಳನ್ನು ಎದುರಲ್ಲಿಟ್ಟುಕೊಂಡು ಉತ್ತರ ಕಂಡುಕೊಳ್ಳಲು ಚರಿತ್ರೆಯ ಮೂಲಾಧಾರಗಳನ್ನು ಪರಿಶೀಲಿಸಿದಾಗ ಈ ಮುಂದಿನ ವಿಷಯಗಳು ತಿಳಿದುಬರುತ್ತವೆ.

ಕ್ರಿ.ಶ. 1184ರ ಹೊಯ್ಸಳ ಎರಡನೇ ವೀರಬಲ್ಲಾಳನ ಕಾಲಾವಧಿಯ ಒಂದು ಶಾಸನ ಪದ್ಯ ಈ ರೀತಿಯಾಗಿ ಪ್ರಾರಂಭವಾಗುತ್ತದೆ.

> **"ಕತ್ತುರಿಯ ಕಂಪು ಕೈಸುರಿಗೆ ಹಟ್ಟಿಗೆ ಸಣ್ಣಗಗರಂ**
> **ಮುತ್ತಿನ ದಂಡೆ ತೋಳಮಣಿ ಬೈತಲೆ**
> **ಬೆತ್ತದ ಸೆಂಡುಕೋಲು ತೂಲಜನ್ನುರಂ ಮೊರೆವ ದಂತದ ಪಾವುಗೆ**
> **ಬ್ಯಂಗದೋಲೆ ಮೈಯಿ**
> **ವೆತ್ತಿರೆ ರಾತ್ರಿಯೊಳು ಸುಳಿವ ಬ್ರಹ್ಮಯ್ಯನೀಗೆ ಯಮಗಿಷ್ಟ ಸಿದ್ಧಿಯಂ"**[9]

ಎಂದು ಪ್ರಾರ್ಥಿಸಿ ಅನಂತರ ಎರಡನೇ ವೀರಬಲ್ಲಾಳನವರೆ ಹೊಯ್ಸಳ ರಾಜಮನೆತನದ ವಿವರಗಳನ್ನೂ, ಹೆಗ್ಗಡೆ ಕೇತುಮಲ್ಲನು ಬ್ರಹ್ಮದೇವನಿಗೆ ಮಂಟಪ ಕಟ್ಟಿಸಿದ ವಿವರಗಳನ್ನು ತಿಳಿಸುತ್ತದೆ. ಈ ವಿವರಗಳಲ್ಲಿ ಮುಖ್ಯವಾಗಿ ಗುರುತಿಸಬೇಕಾದದ್ದು ಬ್ರಹ್ಮದೇವರ ಪ್ರತಿಮೆಯ ವರ್ಣನೆ. ಈ ಶಾಸನ ಪದ್ಯದಲ್ಲಿ ವರ್ಣಿಸಿರುವ ಬ್ರಹ್ಮ ಚತುರ್ಮುಖ ಬ್ರಹ್ಮನಲ್ಲ. ಕತ್ತುರಿಯ ಕಂಪಿನಿಂದ ಕೂಡಿದ ಬೈತಲೆ ಬಾಚಿಕೊಂಡಿದ್ದಾನೆ. ಕೈಸುರಿಗೆಯನ್ನು ಹಿಡಿದಿದ್ದಾನೆ. ಕಿವಿಯಲ್ಲಿ ಓಲೆಯನ್ನು ಧರಿಸಿದ್ದಾನೆ. ಕೈಸುರಿಗೆಯನ್ನು ಇಡಲು ಹೊನ್ನಿನ ಹೊರೆಯನ್ನು ಸೊಂಟಕ್ಕೆ ಕಟ್ಟಿಕೊಂಡಿದ್ದಾನೆ. ಈ ಹೊನ್ನಿನ ಹೊರೆಗೆ ಸಣ್ಣಗುಗ್ಗರಗಳನ್ನು ಕಟ್ಟಿಕೊಂಡಿದ್ದಾನೆ. ಕೊರಳಲ್ಲಿ ಮುತ್ತಿನ ದಂಡೆಯನ್ನು ತೋಳಿನಲ್ಲಿ ತೋಳ ಮಣಿಯನ್ನು ಹಾಕಿಕೊಂಡಿದ್ದಾನೆ. ಅವನು ಹಾಕಿಕೊಂಡಿರುವ ಜನಿವಾರ ಹೆಗಲಿನಿಂದ ತೂಗಾಡುತ್ತಿದೆ. ಮತ್ತೊಂದು ಕೈಲಿ ಬೆತ್ತದ ಸಂಡುಗೋಲು ಹಿಡಿದಿದ್ದಾನೆ. ಮೊರ ಮೊರ ಶಬ್ಧಮಾಡುವ ದಂತದ ಹಾವಿಗೆಯನ್ನು ಮೆಟ್ಟಿದ್ದಾನೆ ಮತ್ತು ರಾತ್ರಿಯ ವೇಳೆಯಲ್ಲಿ ಸಂಚರಿಸುತ್ತಾನೆ. ಈ ಎಲ್ಲ ಲಕ್ಷಣಗಳು ಚತುರ್ಮುಖ ಬ್ರಹ್ಮನಿಗೆ ಇಲ್ಲಾ. ಹಾಗಾದರೆ ಈ ಬ್ರಹ್ಮ ಯಾರು? ಎನ್ನುವ ಪ್ರಶ್ನೆ ಎದುರಾಗುತ್ತದೆ.

ಈ ನಾಡಿನ ಪ್ರಾಚೀನ ಮತಧರ್ಮಗಳಲ್ಲಿ ಪ್ರಮುಖವಾಗಿರುವವೆಂದರೆ ಬೌದ್ಧ, ಜೈನ, ಮತ್ತು ವೈದಿಕ ಧರ್ಮಗಳು. ವೈದಿಕ ಧರ್ಮದಲ್ಲಿ ಬ್ರಹ್ಮನಿಗೆ ಪೂಜೆ ಇಲ್ಲಾ. ಬೌದ್ಧಧರ್ಮದಲ್ಲಿ ತ್ರಿಮೂರ್ತಿಗಳ ಪೂಜೆಯೇ ಇಲ್ಲಾ. ಜೈನ ಧರ್ಮದಲ್ಲಿ ಬ್ರಹ್ಮನೆಂಬ ಒಬ್ಬ ಯಕ್ಷನ ಪೂಜೆಯಿದೆ. ಯಕ್ಷ, ಯಕ್ಷಿಯರು ಜೈನ ತೀರ್ಥಂಕರರ ಸಹಾಯಕರು ಯಕ್ಷನಾದ ಬ್ರಹ್ಮನು

ಜೈನರ ಹತ್ತನೇ ತೀರ್ಥಂಕರನಾದ ಶಿತಲನಾಥನ ಯಕ್ಷನೆಂದು ಪೂಜೆಗೊಳ್ಳುತ್ತಿದ್ದಾನೆ.[10] ಜೈನಧರ್ಮದಲ್ಲಿ ಬ್ರಹ್ಮದೇವನು ಮೋಕ್ಷ ನೀಡುವ ದೇವರಾಗಿರದೇ ಕೇವಲ ಕ್ಷೇತ್ರಪಾಲನಷ್ಟೇ ಆಗಿದ್ದಾನೆ.

ಈ ಹಿನ್ನೆಲೆಯಲ್ಲಿ ಅಂಕೋಲೆ ಪರಿಸರದ ಬೊಮ್ಮಯ್ಯ ದೇವರುಗಳನ್ನು ಜೈನ ಯಕ್ಷ ಬ್ರಹ್ಮನೊಡನೆ ಸಮನ್ವಯಿಸಿ ನೋಡಿದಾಗ ಇವು ಕೂಡ ಜೈನ ಮೂಲದ್ದೇ ಎಂದು ಬಲವಾಗಿ ಸಮರ್ಥಿಸಬಹುದು. ಈ ಹಿಂದೆ ಉಲ್ಲೇಖಿಸಿದ ಶಾಸನ ಪದ್ಯ ವರ್ಣಿಸುವ ರೀತಿಯಲ್ಲೇ ಇರುವ ಕುದುರೆಯ ಮೇಲೆ ಕೆಲವು ಕಡೆಗಳಲ್ಲಿ ಆನೆಯ ಮೇಲೆ ಕುಳಿತಿರುವ ಇಲ್ಲಿನ ಬೊಮ್ಮಯ್ಯ ದೇವರುಗಳು ಇಂದಿಗೂ ಜನಪದರ ರಕ್ಷಕ ದೇವರಾಗಿ ಗುರುತಿಸಲ್ಪಡುತ್ತವೆ. ಅಂಕೋಲೆಯಲ್ಲಿ ಜೈನಧರ್ಮ ಸಾಕಷ್ಟು ಪ್ರಭಾವಶಾಲಿಯಾಗಿತ್ತೆಂದು ತಿಳಿಸುವ ಅನೇಕ ಸಾಕ್ಷ್ಯಾಧಾರಗಳು ನಮಗೆ ಲಭ್ಯವಿದೆ. ಈ ಪ್ರದೇಶವನ್ನಾಳಿದ ಶಿಸುಗಲಿ ಪಾಂಡ್ಯರು, ಚಂದಾವರದ ಕಾದಂಬರು, ಗೇರುಸೊಪ್ಪೆ ಮತ್ತು ಹಾಡುಹಳ್ಳಿಯ ಸಾಳುವರು ಜೈನಧರ್ಮಕ್ಕೆ ರಾಜಾಶ್ರಯ ಕೊಟ್ಟು ಪೋಷಿಸಿದ್ದಾರೆ. ಮಾರುಗದ್ದೆ, ಹಿರೇಗುತ್ತಿ[11] ಮುಂತಾದೆಡೆಯಲ್ಲಿ ಜೈನ ಬಸದಿಗಳ ಅವಶೇಷಗಳು ದೊರೆತಿವೆ. ಜೈನಧರ್ಮೀಯರಿಗೆ ಬ್ರಹ್ಮ ಅಥವಾ ಬ್ರಹ್ಮಯ್ಯ ಮನೆದೇವರು ಕೂಡ ಆಗಿದ್ದಾನೆ.[12] ಯಾವುದೋ ಒಂದು ಹಂತದಲ್ಲಿ ಜೈನ ಮತ ತನ್ನ ಪ್ರಾಬಲ್ಯವನ್ನು ಕಳಕೊಂಡು ಅವನತಿಯತ್ತ ಸಾಗಿದಾಗ, ಇಲ್ಲಿನ ಜೈನರು ಪ್ರಬಲವಾಗುತ್ತಿರುವ ಶೈವ, ವೈಷ್ಣವ ಮತಗಳನ್ನು ಅನುಸರಿಸಿರಬೇಕು. ಇವರ ಮನೆದೇವರಾದ ಬ್ರಹ್ಮಯ್ಯನು ವೈದಿಕ ಮತದಲ್ಲಿ ವಿಲೀನನಾಗಿರಬೇಕು. ನಂತರದ ಪೀಳಿಗೆಗಳು ಈ ಹೊಸ ಪರಂಪರೆಯನ್ನೇ ಬದಲಾದ ಸನ್ನಿವೇಷಗಳಲ್ಲಿ ಮಾರ್ಪಾಡುಗಳನ್ನು ಮಾಡುತ್ತ ಮುಂದುವರೆಸಿಕೊಂಡು ಬಂದು ಇಂದಿನ ಬೊಮ್ಮಯ್ಯ ದೇವನನ್ನು ಕಾಣಬಹುದಾಗಿದೆ.

ಬೀರ ಮತ್ತು ಬೊಮ್ಮಯ್ಯ ದೇವರ ಸಂಕೀರ್ಣಗಳು :

ಅಂಕೋಲಾ ತಾಲೂಕಿನ ಬಹುತೇಕ ಹಳ್ಳಿಗಳಲ್ಲಿ ಬೀರ ಮತ್ತು ಬೊಮ್ಮಯ್ಯ ದೇವರು ಒಟ್ಟೊಟ್ಟಿಗೆ ಇವೆ. ಕೊಗ್ರೆ, ಹೊನ್ನೇಬೈಲು, ಶಿರಗುಂಜಿ, ವಾಸರೆ-ಕುದ್ರಿಗೆ ಇತ್ಯಾದಿಗಳನ್ನು ಹೆಸರಿಸಬಹುದು. ಅಂತೆಯೇ ಎಲ್ಲಿ ಬೀರ ಮತ್ತು ಬೊಮ್ಮಯ್ಯ ಒಟ್ಟಿಗೆ ಇದ್ದಾರೋ ಅಲ್ಲಿ ಒಂದು ಹೆಣ್ಣುದೇವತೆಯೂ ಇರುವುದು ಕಂಡುಬರುತ್ತದೆ. ಬಹುತೇಕ ಹಳ್ಳಿಗಳಲ್ಲಿ ಹೆಣ್ಣು ದೇವತೆಯನ್ನು ಅಮ್ಮನವರು ಎಂದೇ ಕರೆಯುತ್ತಾರೆ. ಈ ವಿಗ್ರಹಗಳ ಅಸ್ಥಿತ್ವ ಹೇಗೆ ಪ್ರಾರಂಭವಾಯಿತೆನ್ನಲು ಮಾಹಿತಿಗಳಿಲ್ಲ.

ಅಂಕೋಲೆಯ ಜನಪದರು ಮೊದಲಿಗೆ ಆರಾಧಿಸಿದ್ದು ಬೀರದೇವರನ್ನೇ. ಜೈನಧರ್ಮ ರಾಜಾಶ್ರಯ ಪಡೆದು ಪ್ರಭಲವಾದಾಗ ಬ್ರಹ್ಮಯ್ಯ ದೇವರ ಆರಾಧನೆಯೂ ಈ ಪ್ರದೇಶದಲ್ಲಿ ಪ್ರಚಲಿತವಾಯಿತು. ಇಲ್ಲಿ ಮುಖ್ಯವಾಗಿ ಗಮಸಿಸಬೇಕಾದ ಸಂಗತಿ ಎಂದರೆ ಅಂಕೋಲೆಯ ಜನಪದರು ಬೇರೆ ಬೇರೆ ಮತಗಳ ಅನುಯಾಯಿಗಳಾದರೂ ತಮ್ಮ ಪೂರ್ವಮತದ ದೇವರಗಳನ್ನು ತ್ಯಜಿಸಲಿಲ್ಲ. ಹೊಸ ಸಂಪ್ರದಾಯದೊಂದಿಗೆ ಹಳೆಯ ಪರಂಪರೆಯನ್ನೂ ಮುಂದುವರೆಸಿದರು. ನಿನ್ನೆಯ ಜೊತೆ ಇಂದಿನ ಸಂಪ್ರದಾಯಗಳನ್ನೂ ಒಟ್ಟಿಗೆ ಸೇರಿಸಿ ಹೊಸ ಪರಂಪರೆಗೆ ನಾಂದಿಯಾದರು.[13] ಇದರ ಪರಿಣಾಮವೇ ಇಂಥ ದೇವರುಗಳ ಸಂಕೀರ್ಣ ಹುಟ್ಟಿಕೊಂಡಿವೆ. ಇದರಲ್ಲಿ ಪೌರಾಣಿಕ ಹಿನ್ನಲೆಯ ಬೊಮ್ಮಯ್ಯ(ಬ್ರಹ್ಮಯ್ಯ) ಹಿರಿಯ ಸ್ಥಾನವನ್ನು ಅಲಂಕರಿಸಿದ್ದಾನೆ. ಅಲ್ಲದೇ ಹಾಲುಮತ ಪುರಾಣ ಕಾವ್ಯಗಳ ಪ್ರಕಾರ ಬೀರದೇವನ ತಂದೆ ಬರಮದೇವ(ಬ್ರಹ್ಮದೇವ) ಎನ್ನುವುದೂ ಕಾರಣವಿರಬಹುದು.

ಇನ್ನೂ ಬೀರ ಮತ್ತು ಬೊಮ್ಮಯ್ಯ ದೇವರ ಸಂಕೀರ್ಣದಲ್ಲಿ ಹೆಣ್ಣು ದೇವರ(ಅಮ್ಮನವರು) ಸಂಬಂಧದ ಕುರಿತು ಹುಡುಕಹೋದಾಗ ದೊರೆಯುವ ಮಾಹಿತಿಯೂ ಕುತೂಹಲಕಾರಿಯಾದದ್ದು. ಸಾಮಾನ್ಯವಾಗಿ ಅಮ್ಮನವರನ್ನು ಬೀರ ಮತ್ತು ಬೊಮ್ಮಯ್ಯ ದೇವರ ಸಹೋದರಿ ಎನ್ನುವುದು ಅಂಕೋಲೆಯ ಈಚಿನ ಜನಪದರ ನಂಬಿಕೆ. ಆದರೆ ಚಾರಿತ್ರಿಕ ಆಧಾರಗಳನ್ನು ವಿಶ್ಲೇಷಿಸಿದಾಗ ಬೇರೆಯದೇ ಕೆಲವು ಹೊಸ ಸಂಗತಿಗಳು ದೊರೆಯುತ್ತವೆ. ಜೈನಧರ್ಮದಲ್ಲಿ ಪ್ರತಿಯೊಬ್ಬ ತೀರ್ಥಂಕರನಿಗೂ ಸಹಾಯಕರಾಗಿ ಒಬ್ಬ ಯಕ್ಷ ಮತ್ತು ಯಕ್ಷಿ ಇರುತ್ತಾರೆ.[14] ಜೈನರ 10ನೇ ತೀರ್ಥಂಕರನಾದ ಶೀತಲನಾಥನ ಯಕ್ಷ ಬ್ರಹ್ಮ ಮತ್ತು ಯಕ್ಷಿ ಮಾನವಿ. ಬ್ರಹ್ಮನ ವಿಗ್ರಹಗಳನ್ನು ಕುದುರೆಯ ಮೇಲೆ ಕುಳಿತು ಕತ್ತಿ ಹಿಡಿದಿರುವಂತೆ ನಿರ್ಮಿಸಲಾಗಿದೆ.

ಕರ್ನಾಟಕದಲ್ಲಿರುವ ಕೆಲವು ಮೈಲಾರ ಲಿಂಗನ ವಿಗ್ರಹಗಳೂ ಇದೇ ಮಾದರಿಯದಾಗಿವೆ. ಹಾಲುಮತ ಪುರಾಣ ಕಾವ್ಯಗಳ ಪ್ರಕಾರ ಈ ಮೈಲಾರಲಿಂಗ ಮತ್ತು ಬೀರದೇವ ಇಬ್ಬರೂ ಒಬ್ಬರೇ. ಮತ್ತು ಮೈಲಾರನ ಹೆಂಡತಿಯ ಹೆಸರು ಮಾಳಮ್ಮ. ಇಲ್ಲಿ ಬ್ರಹ್ಮ ಯಕ್ಷನ ಜೊತೆಯಲ್ಲಿನ ಯಕ್ಷಿ ಮಾನವಿ ಹೆಸರು ಮಾಳವಿಯಾಗಿ ಮಾಳಮ್ಮನಾಗಿರಬಹುದು ಅಥವಾ ಮಾಳಮ್ಮ ಸಂಸ್ಕೃತೀಕರಣಗೊಂಡು ಮಾನವಿಯಾಗಿರಬಹುದು.[15] ಇಲ್ಲಿ ಮತ್ತೊಂದು ಊಹೆಗೂ ಅವಕಾಶವಿದೆ. ಹಾಲುಮತ ಪುರಾಣ ಕಾವ್ಯಗಳೇ ತಿಳಿಸುವಂತೆ ಬೀರ ದೇವನ ಅಕ್ಕ ಮಾಯವ್ವ. ಈ ಮಾಯವ್ವಳೇ ಅಮ್ಮನಾಗಿ ಬೀರದೇವರ ಸಂಕೀರ್ಣದಲ್ಲಿ ನೆಲೆಸಿರಬಹುದು. ಅಮ್ಮ ಬೀರದೇವನ ಸಹೋದರಿ ಎನ್ನುವ ನಮ್ಮ ಜನಪದರ ನಂಬಿಕೆಯೂ ಇದಕ್ಕೆ ಪುಷ್ಟಿನೀಡುತ್ತದೆ. ಹೀಗೆ ಬೀರ ಬೊಮ್ಮಯ್ಯ ದೇವರ ಸಂಕೀರ್ಣದಲ್ಲಿ ಅಮ್ಮನೂ ಸಮಾನ ಸ್ಥಾನಮಾನಗಳನ್ನು ಪಡೆದಿದೆ. ಈ ಹಿನ್ನಲೆಯಲ್ಲಿ ಅಂಕೋಲೆಯ ಶಾಂತಾದುರ್ಗಾ ದೇವರ ಆವರಣವೂ ಬೀರ–ಬೊಮ್ಮಯ್ಯರ ಸಂಕೀರ್ಣವೇ ಆಗಿದೆ. ಶೈವ ಮತದ ಪ್ರಾಬಲ್ಯದ ದಿನಗಳಲ್ಲಿ ಪೂರ್ವ ಪರಂಪರೆಯ ಅಮ್ಮನನ್ನು[16] ದುರ್ಗೆಯ ಅವತಾರವಾಗಿ, ಬೀರ ಮತ್ತು ಬೊಮ್ಮಯ್ಯ ದೇವರುಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಆರಾಧಿಸಿದ್ದರಿಂದ ಇಂದು ಶಾಂತಾದುರ್ಗೆ ಭೂಮ್ತಾಯಿಯಾಗಿ ಪ್ರಖ್ಯಾತಳಾಗಿದ್ದಾಳೆ.

ಈವರೆಗಿನ ವಿವೇಚನೆಯಿಂದ ಕಂಡು ಬರುವ ಸಂಗತಿ ಎಂದರೆ, ಪ್ರಾಚೀನ ಕಾಲದಲ್ಲಿ ಅಂಕೋಲೆಯಲ್ಲಿ ನೆಲೆಯಿದ್ದ ಪಶುಪಾಲಕ ವೃತ್ತಿಯ ಜನಪದರು ತಮ್ಮ ಹಿರಿಯರನ್ನು ಅಥವಾ ವೀರ ನಾಯಕರನ್ನು ದೈವತ್ವಕ್ಕೇರಿಸಿ ಪೂಜಿಸಿದ ಪರಂಪರೆಯ ದೇವರು "ಬೀರದೇವರು". ಜೈನಧರ್ಮದಿಂದ ಪ್ರಾರಂಭವಾದ ಯಕ್ಷ ಬ್ರಹ್ಮನ ಪೂಜೆ ಪೌರಾಣಿಕ ಕಟ್ಟಲೆಗಳನ್ನು ಕಳಚಿಕೊಂಡ ಆರಾಧನೆಯ ಪರಂಪರೆಯ ದೇವರು "ಬೊಮ್ಮಯ್ಯ ದೇವ" ಈ ಎರಡೂ ದೈವಗಳ ಸಂಪ್ರದಾಯ, ನಂಬಿಕೆ, ಆಚರಣೆಗಳಲ್ಲಿ ಸಾಕಷ್ಟು ಸಾಮ್ಯತೆಗಳನ್ನು ಕಾಣಬಹುದಾಗಿದೆ. ಸಾವಿರಾರು ವರ್ಷಗಳ ಹಿಂದೆ ಆರಂಭವಾದ ಇಂಥ ಆರಾಧನೆಗಳು ಇಂದು ಕೂಡ ನಡೆಸಿಕೊಂಡು ಬರುತ್ತಿರುವುದು ಪರಂಪರೆಗಳು, ಸಂಪ್ರದಾಗಳು ಜನರ ಜೀವನ ವಿಧಾನದಲ್ಲಿ ಸಾಂಸ್ಕೃತಿಕ ಕಟ್ಟುಪಾಡುಗಳನ್ನು ಮೀರಿ ಮುಂದುವರೆಯುತ್ತಿರುವುದು ಕಂಡುಬರುತ್ತದೆ.

ಅಡಿಟಿಪ್ಪಣಿ :

1. ಕ್ರಿ.ಶ. 1113ರ ಭಾವಿಕೇರಿಯ ಒಂದು ಶಿಲಾಲೇಖವು 'ರಕ್ಕಸರಿದ' ಎನ್ನುವ ವೀರನ ವೀರ ಮರಣದ ವಿಷಯವನ್ನು ತಿಳಿಸುತ್ತದೆ. ಅಂಕೋಲೆಯ ಪರಿಸರದಲ್ಲಿ ಬಿಲ್ಲು ಬಾಣ ಅಥವಾ ಖಡ್ಗ–ಢಾಳು ಹಿಡಿದ ಅನೇಕ ಮೂರ್ತಿಗಳನ್ನು 'ರಾಕ್ಷಸ ಬೀರ', ರಾಕೇಶ, ಅಥವಾ 'ರಾಕೇಶ್ವರ' ಎನ್ನುವ ದೇವರನ್ನು ಪೂಜಿಸುವುದು ಕಾಣುತ್ತೇವೆ.
2. 'ಶಾಸನಗಳಲ್ಲಿ ಕುರುಬರು' ಹಾಲುಮತ ಸಂಸ್ಕೃತಿ ಸಂಪುಟ–1, ಪುಟ–1
3. ಬಸವಣ್ಣನವರ ವಚನಗಳು, ಸಂಪಾದಕ: ಆರ್.ಸಿ. ಹಿರೇಮಠ, ಪುಟ ಸಂಖ್ಯೆ 223
4. ರಸ್ತಾಪುರ ಭೀಮಕವಿಯ ಹಾಲುಮತೋತ್ತೇಜಕ ಪುರಾಣದಲ್ಲಿ ಬೀರಪ್ಪನ ಚರಿತ್ರೆ ನಿರೂಪಗೊಂಡಿದೆ. ಸಿದ್ಧಪ್ಪ ಮೇಟಿ ಹಾಡಿದ ಜನಪದ ಹಾಲುಮತ, ಮಹಾರಾಷ್ಟ್ರ
5. ಬೀರಪ್ಪ–ವಿರಭದ್ರರ ಸಮನ್ವಯ ಸಂಗತಿಗಳು, ಡಾ.ಎಫ್.ಟಿ. ಹುಕ್ಕೇರಿ, ಇತಿಹಾಸ ದರ್ಶನ, ಸಂ:27,ಪು.ಸಂ:308
6. ಅಂಕೋಲೆಯ ವಾಯುವ್ಯದಲ್ಲಿರುವ ಅಂಜದೀವದಲ್ಲಿ ಹಿಂದೆ ಬಹಳ ಸಂಖ್ಯೆಯಲ್ಲಿ ಕುರಿಗಳು ಇದ್ದ ಬಗ್ಗೆ ದಾಖಲೆಗಳಿಂದ ತಿಳಿದುಬರುತ್ತದೆ. ಆ ಕಾರಣಕ್ಕಾಗಿಯೇ ಈ ದ್ವೀಪವನ್ನು ಅಜಾದ್ವೀಪ ಎಂದು ಕರೆಯಲಾಗುತ್ತಿತ್ತಂತೆ.
7. ಉತ್ತರ ಕನ್ನಡ ಜಿಲ್ಲೆಯ ಕೆಲವು ಅಪೂರ್ವ ಶಿಲ್ಪಗಳು, ಡಾ. ಅ.ಸುಂದರ
8. ಇತಿಹಾಸ ಮತ್ತು ಶಾಸನಗಳಲ್ಲಿ ಬ್ರಹ್ಮ ದೇವಯ್ಯ, ಬ್ರಹ್ಮರಾಯ, ಬ್ರಹ್ಮದಂಡಾದೀಶ, ಕರಿಬ್ರಹ್ಮ, ಬ್ರಹ್ಮಪ್ಪ, ಬ್ರಹ್ಮಯ್ಯ ಇತ್ಯಾದಿಯಾಗಿ ಗುರುತಿಸಲಾಗಿದೆ. ಆಯಾ ಸಂದರ್ಭ ಮತ್ತು ಪ್ರದೇಶಾನುಸಾರ ಬ್ರಹ್ಮನನ್ನು ವಿವಿಧ ಉಪನಾಮಗಳಿಂದ ಕರೆಯಲಾಗಿದೆ.
9. ಎಪಿಗ್ರಾಫಿಯ ಕರ್ನಾಟಿಕ ಸಂಪುಟ–10 (ಪರಿಷ್ಕೃತ), ಅರಸೀಕೆರೆ 39
10. ಕರ್ನಾಟಕದಲ್ಲಿ ಬ್ರಹ್ಮದೇವರ ಆರಾಧನೆ, ಎಸ್. ಪರಶಿವಮೂರ್ತಿ, ಇತಿಹಾಸ ದರ್ಶನ ಸಂ : 28 ಪು.ಸಂ. 393. ಬ್ರಹ್ಮ ಯಕ್ಷನು ಶೀತಲನಾಥನೊಬ್ಬನಿಗೆ ಮೀಸಲಾಗಿರದೇ ಎಲ್ಲಾ ಜೈನ ಕ್ಷೇತ್ರಗಳನ್ನು, ಬಸದಿಗಳನ್ನು ಕಾಯುವ ಹೊಣೆಹೊತ್ತಿದ್ದಾನೆ.

ಸಾಮಾನ್ಯವಾಗಿ ಎಲ್ಲ ಬಸದಿಗಳ ಪೌಳಿಗಳಲ್ಲಿ ತೀರ್ಥಂಕರರ ಎಡಭಾಗದಲ್ಲಿ 5-6 ಅಡಿ ಎತ್ತರದ ಕಂಬದ ಮೇಲೆ ಬ್ರಹ್ಮ ಯಕ್ಷನ ವಿಗ್ರಹವಿರುತ್ತದೆ. ಈ ಕಾರಣದಿಂದ ಬ್ರಹ್ಮನಿಗೆ ಕ್ಷೇತ್ರಪಾಲ ಎಂಬ ಮತ್ತೊಂದು ಹೆಸರಿದೆ. ಜಟಿಂಗರಾಯ ಎನ್ನುವ ಹೆಸರುಕೂಡ ಇದೆ.

11. ಕೇವಲ ಇಂದಿನ ಕಂದಾಯ ಗಡಿಯನ್ನು ಪರಿಗಣಿಸದೇ ಕಾಳಿನದಿಯ ದಕ್ಷಿಣ ದಡದಿಂದ ಅಘನಾಶಿನಿ ನದಿಯ ಉತ್ತರ ದಡದವರೆಗಿನ ಚಾರಿತ್ರಿಕ ಅಂಕೋಲೆ ನಾಡನ್ನು ಪರಿಗಣಿಸಲಾಗಿದೆ.
12. ಕರ್ನಾಟಕದಲ್ಲಿ ಬ್ರಹ್ಮದೇವರ ಆರಾಧನೆ, ಎಸ್. ಪರಶಿವಮೂರ್ತಿ, ಇತಿಹಾಸ ದರ್ಶನ ಸಂ:28 ಪು.ಸಂ. 393
13. ಇದಕ್ಕೆ ಕೆಲವು ಅಪವಾದಗೂ ಇವೆ. ಉದಾ: ಬೇಲೆಕೇರಿ ಗ್ರಾಮದಲ್ಲಿ ಬೀರದೇವರಿದ್ದಾನೆ. ಅಮ್ಮನ ಸ್ಥಾನವೂ ಇದೆ. ಆದರೆ ಬೊಮ್ಮಯ್ಯ ದೇವರಿಲ್ಲ. ಈ ಊರಿನಲ್ಲಿರುವ ಬೀರದೇವನಿಗೆ "ಜೈನಬೀರ" ಎಂದು ಹೆಸರು. ಜೈನಬೀರ ಅಂದರೆ ಜೈನರನ್ನು ಗೆದ್ದವ ಎಂದರ್ಥ. ಹಿಂದೆ ಬೇಲೆಕೇರಿಯಲ್ಲಿ ಸ್ಥಳಿಯರಿಗೂ ಜೈನರಿಗೂ ನಡೆದ ಯುದ್ಧದಲ್ಲಿ ಜೈನರು ಸೋತು ಪಲಾಯನಗೈದದ್ದಾಗಿಯೂ, ಸಮುದ್ರ ಮಾರ್ಗದ ಮೂಲಕ ಜೈನರೂ ತಪ್ಪಿಸಿಕೊಳ್ಳುವಾಗ ಬೀರದೇವನು ಅವರನ್ನು ಕಲ್ಲನ್ನಾಗಿ ಮಾಡಿದನೆಂದೂ, ಈ ಕಲ್ಲಿನ ರಾಶಿಯೇ ಕುಕ್ಕುಡ ಗುಡ್ಡ(ಬೇಲೇಕೇರಿ ಸಮುದ್ರ ತೀರದ ಸಮೀಪವಿರುವ ಒಂದು ದ್ವೀಪ) ಎಂಬುದಾಗಿಯೂ, ಜೈನರನ್ನು ಸೋಲಿಸಿ ಓಡಿಸಿದ್ದರಿಂದ ಬೀರದೇವನು ಜೈನ ಬೀರನಾದನೆಂದೂ ಐತಿಹ್ಯವಿದೆ. ಈ ಐತಿಹ್ಯದಿಂದ ತಿಳಿದುಬರುವ ಸಂಗತಿಯೆಂದರೆ ಮೂಲ ಪರಂಪರೆಯ ಜನಪದರಿಗೂ (ಬೀರದೇವ) ಜೈನ (ಬ್ರಹ್ಮಯ್ಯ) ಪರಂಪರೆಯವರಿಗೂ ನಡೆದ ಯುದ್ಧದಲ್ಲಿ(ಸಾಂಸ್ಕೃತಿಕ ಸಂಘರ್ಷದಲ್ಲಿ) ಜೈನರು ಊರನ್ನೇ ತ್ಯಜಿಸಬೇಕಾಗಿ ಬಂದಾಗ ಅವರು ತಮ್ಮ ಆರಾಧ್ಯ ದೇವರನ್ನೂ ತಮ್ಮೊಂದಿಗೆ ತೆಗೆದುಕೊಂಡು ಹೋಗಿರಬೇಕು. ಈ ಕಾರಣದಿಂದಾಗಿ ಬೇಲೇಕೆರಿ ಗ್ರಾಮದಲ್ಲಿ ಬೊಮ್ಮಯ್ಯ ದೇವರು ಇಲ್ಲದೇ ಇರಬಹುದು.
14. ಡಾ. ಷ.ಶಟ್ಟರ್ ಅವರು ತಮ್ಮ ಶ್ರವಣಬೆಳಗೊಳ ಸಚಿತ್ರ ಸಂಪುಟದಲ್ಲಿ ಜೈನರ 24 ತೀರ್ಥಂಕರರ ಹೆಸರು ಮತ್ತು ಅವರಿಗೆ ಮೀಸಲಾದ ಯಕ್ಷ-ಯಕ್ಷೀಯರ ಪಟ್ಟಿಯನ್ನು ನೀಡಿದ್ದಾರೆ.
15. ಮೂಲ ಸಂಪ್ರದಾಯದ ಬೀರದೇವನ ಮೈಲಾರ ಲಿಂಗ ರೂಪವೇ ಜೈನರಲ್ಲಿ ಬ್ರಹ್ಮ ಯಕ್ಷನಾಗಿ ಸಂಸ್ಕೃತೀಕರಣವಾಗಿರುವ ಸಾಧ್ಯತೆ ಇಲ್ಲಿ ಕಾಣುತ್ತದೆ. ಅಂತೆಯೇ ಮಾಳಮ್ಮನನ್ನು ಮುಂದೆ ಶೈವ ಕೌಳರು (ಕಪಾಲಿಕರು ಅಥವಾ ಕಾಳಾಮುಖರು) ಆರಾಧಿಸಿ ಮಾಳಮ್ಮ ಕಾಳಮ್ಮ ಆಗಿರುವ ಸಾಧ್ಯತೆಯೂ ಇದೆ.
16. ಅಂಕೋಲೆಯ ಶಾಂತಾದುರ್ಗಾ ದೇವಿಯ ಅಲಂಕಾರ ರಹಿತ ಮೂಲ ಶಿಲಾ ವಿಗ್ರಹವನ್ನು ಪರಿಶೀಲಿಸಿದಾಗ ಅದು ಅಪ್ಪಟ ಜನಪದ ಶೈಲಿಯಲ್ಲಿ ನಿರ್ಮಾಣವಾಗಿರುವುದು ಕಾಣುತ್ತದೆ. ಅಲ್ಲದೇ ಇತರ ಬೀರ-ಬೊಮ್ಮಯ್ಯ ದೇವರ ಸಂಕೀರ್ಣದಲ್ಲಿರುವ ಇತರ ಅಮ್ಮನವರ ವಿಗ್ರಹಕ್ಕೂ ಸಾಮ್ಯತೆಯಿರುವುದನ್ನು ಗುರುತಿಸಬಹುದು.

❑

ಗೋವೆ ಕಾದಂಬ ಶಿವಚಿತ್ತ ವೀರ ಹೆಮ್ಮಾಡಿ ದೇವನ ಅಪ್ರಕಟಿತ ವೀರಗಲ್ಲು ಶಾಸನ

– ಶ್ಯಾಮಸುಂದರ ಟಿ. ಗೌಡ

ಪ್ರಸ್ತಾವನೆ :

ಸ್ವಾತಂತ್ರ ಆಂದೋಲನ, ರೈತ ಚಳುವಳಿ, ಸರಾಯಿ ವಿರೋಧಿ ಹೋರಾಟ.... ಹೀಗೆ ಒಂದಕ್ಕೊಂದು ಹೆಣೆದುಕೊಂಡು ಸಾಮಾಜಿಕ ನ್ಯಾಯಕ್ಕಾಗಿ ಹೋರಾಡಿ ದಾಸ್ಯದ ಸಂಕೋಲೆಗಳನ್ನು ಕಿತ್ತೆಸೆದು ನಾಡಿನಾದ್ಯಂತ ಖ್ಯಾತಿ–ವಿಖ್ಯಾತಿಯನ್ನು ಗಳಿಸಿಕೊಂಡ ಸಿದ್ಧ–ಪ್ರಸಿದ್ಧವಾದ ಊರು ನನ್ನ ಅಂಕೋಲೆ. ಚಾರಿತ್ರಿಕವಾದ ಬೇರೆ–ಬೇರೆ ಕಾರಣಗಳಿಗಾಗಿ ನಾಡಿನಲ್ಲೂ, ದೇಶದಲ್ಲೂ ಹೆಸರು ಮಾಡಿದ ತಾಲೂಕು ಅಂಕೋಲೆ.

ಭೌಗೋಳಿಕವಾಗಿ ಅಂಕೋಲೆ 918.7 ಚದರ ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ಇದು740 1800 ರಿಂದ 740 4300 ರೇಖಾಂಗಳಷ್ಟು ಪೂರ್ವಕ್ಕೂ, 140 2900 ದಿಂದ 140 4800 ಅಕ್ಷಾಂಶಗಳಷ್ಟು ಉತ್ತರಕ್ಕೂ ವಿಸ್ತರಿಸಿದೆ. ತಾಲೂಕಿನ ಪಶ್ಚಿಮಕ್ಕೆ ಅರಬ್ಬಿ ಸಮುದ್ರವಿದ್ದರೆ, ಪೂರ್ವ ಭಾಗದಲ್ಲಿ ಶಿರಸಿ ಮತ್ತು ಯಲ್ಲಾಪುರ ತಾಲೂಕುಗಳು ಹರಡಿಕೊಂಡಿವೆ. ಉತ್ತರಕ್ಕೆ ಕಾರವಾರ ಮತ್ತು ಯಲ್ಲಾಪುರ, ದಕ್ಷಿಣಕ್ಕೆ ಕುಮಟಾ ತಾಲೂಕುಗಳಿವೆ.

ಕ್ರಿ.ಶ.1799ರಲ್ಲಿ ಶ್ರೀರಂಗಪಟ್ಟಣದ ಯುದ್ಧದಲ್ಲಿ ಟಿಪ್ಪು ಸುಲ್ತಾನನು ಬ್ರಿಟಿಷರಿಗೆ ಸೋತು ಸತ್ತ ನಂತರ ಅವನ ಮೈಸೂರು ರಾಜ್ಯವೆಲ್ಲ ಬ್ರಿಟಿಷ್ ಸರ್ಕಾರದ ಅಧೀನಕ್ಕೆ ಬಂತು. ಬ್ರಿಟಿಷರು ಟಿಪ್ಪುವಿನ ಮೈಸೂರು ರಾಜ್ಯದ ಭಾಗವಾಗಿದ್ದ ಇಂದಿನ ದಕ್ಷಿಣೋತ್ತರಕನ್ನಡ ಜಿಲ್ಲೆಗಳನ್ನು ಕೂಡಿಯೇ ಕನ್ನಡ ಕರಾವಳಿಯ ಒಂದು ಅಖಂಡ ಸೀಮೆಯಾಗಿ 'ಕೆನರಾ ಡಿಸ್ಟ್ರಿಕ್ಟ್' ಎಂಬ ಹೆಸರಿನಡಿಯಲ್ಲಿ ಮದ್ರಾಸ ಪ್ರೆಸಿಡೆನ್ಸಿಗೆ ಸೇರಿಸಲಾಯಿತು. ಈ ಸಮಯದಲ್ಲಿ (ಕ್ರಿ.ಶ.1800) ಅಂಕೋಲೆಯನ್ನು ತಾಲೂಕು ಕೇಂದ್ರವನ್ನಾಗಿ ಘೋಷಿಸಲಾಯಿತು. 1859ರಲ್ಲಿ ಅಂಕೋಲೆಯನ್ನು ಒಂದು ಮಹಲ್ ಎಂದು (ಉಪತಾಲೂಕು) ವಿಂಗಡಿಸಿ ಕುಮಟಾ ತಾಲೂಕಿಗೆ ಸೇರಿಸಲಾಯಿತು. ನಂತರ 1880ರಲ್ಲಿ 21 ಹಳ್ಳಿಗಳನ್ನು ಒಳಗೊಂಡಿರುವ ಅಂಕೋಲೆಯನ್ನು ಸ್ವತಂತ್ರ್ಯ ತಾಲೂಕನ್ನಾಗಿ ಘೋಷಿಸಲಾಯಿತು.

ನಿಸರ್ಗದ ಚೆಲುವು, ಶ್ರೀಮಂತಿಕೆ ಹಾಗೂ ಭವ್ಯತೆ ಎಲ್ಲವನ್ನೂ ಒಟ್ಟಿಗೆ ಹೊಂದಿರುವ ಅಂಕೋಲಾ ತಾಲೂಕಿಗೆ ಒಂದು ದೀರ್ಘವಾದ ಇತಿಹಾಸವಿದೆ. ರಾಜನೀತಿಯ ತಂತ್ರ–ಕುತಂತ್ರಗಳ, ಕದನ–ಕ್ರಾಂತಿಗಳ ಉಜ್ವಲ ಚರಿತ್ರೆಯಿದೆ. ಬದಲಾದ ಚತ್ರಾಧಿಪತ್ಯಗಳ ಕಥೆಯಿದೆ. ಹತ್ತಿರ–ಹತ್ತಿರ ಎರಡು ಸಾವಿರ ವರ್ಷಗಳಷ್ಟು ಸುದೀರ್ಘ ಐತಿಹಾಸಿಕ ಪರಂಪರೆಯನ್ನು ಹೊಂದಿರುವ ಸಂಗತಿಯನ್ನು ಸಾಕ್ಷೀಕರಿಸುವ ಹಲವಾರು ವೀರಗಲ್ಲುಗಳು, ಅವನ್ನು ದಾಖಲಿಸಿಕೊಂಡ ಶಾಸನಗಳು ಇಲ್ಲಿವೆ.

ನಾಡಿನ ಇತಿಹಾಸವೆಂದರೆ ಆ ನಾಡನ್ನೂ ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸ ಎನ್ನುವ ಭಾವನೆ ಪ್ರಚಲಿತವಾಗಿವೆ. ಸಾಮಾನ್ಯವಾಗಿ ಪ್ರಮುಖ ರಾಜ ಮನೆತನಗಳ ವಂಶಾವಳಿಗಳ ಚರಿತ್ರೆಯೇ ಇತಿಹಾಸವೆಂದು ತಿಳಿಯುವಂತಾಗಿದೆ. ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ, ಅಲ್ಲಿ ಬದುಕಿದ ಜನ. ಒಂದು ಪ್ರದೇಶದ ನಿಜವಾದ ಇತಿಹಾಸ ಎಂದರೆ

ಆ ಜನತೆಯ ಇತಿಹಾಸ. ಅಲ್ಲಿಯ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು, ಅವರ ಜೀವನ ಮೌಲ್ಯಗಳು ಇತ್ಯಾದಿ ವಿವರಣೆಗಳೇ ಆ ಪ್ರದೇಶದ ಇತಿಹಾಸ. ಇಂತಹ ಸಂದರ್ಭದಲ್ಲಿ ತತ್ಕಾಲಿನ ರಾಜಕೀಯ ಆಡಳಿತದ ಜೊತೆಗೆ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ಅಧ್ಯಯನವೂ ಕೂಡ ಮುಖ್ಯವಾಗಿರುತ್ತದೆ. ಈ ಅಂಶಗಳ ಸಮಗ್ರ ತಿಳುವಳಿಕೆಗೆ ಶಾಸನಗಳ ಅಧ್ಯಯನ ತೀರಾ ಅವಶ್ಯಕ ಮತ್ತು ಅನಿವಾರ್ಯ.

ಕ್ರಿ.ಶ.ದ ಆರಂಭ ಕಾಲದಿಂದ ಇಂದಿನವರೆಗೆ ಚರಿತ್ರೆಯ ಪುಟಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನಗಳನ್ನು ಹೊಂದಿರುವ ಅಂಕೋಲಾ ತಾಲೂಕಿನ ಭವ್ಯ ಐತಿಹಾಸಿಕ ವಾಸ್ತವತೆಯನ್ನು ಅಭ್ಯಾಸ ಮಾಡುವ ಪ್ರಯತ್ನಗಳು ನಡೆದೇ ಇಲ್ಲ. ಅಂಕೋಲೆ ಸೀಮೆಯುದ್ದಕ್ಕೂ ಅಲ್ಲಲ್ಲಿ ನಿಂತಿರುವ ಗುಡಿಗಳು, ಶಾಸನಗಳು, ವೀರಗಲ್ಲುಗಳು, ಕೋಟೆಗಳು ಇಲ್ಲಿನ ಸುದೀರ್ಘ ಇತಿಹಾಸದ ಮುಖ್ಯ ಘಟ್ಟಗಳನ್ನು ಸೆರೆಹಿಡಿದಿಟ್ಟುಕೊಂಡಿರುವ ಸಾಕ್ಷಿಗಳು. ಇಲ್ಲಿನ ಶಾಸನಗಳ ಕುರಿತು ಯಾವುದೇ ಗಂಭೀರ ಅಧ್ಯಯಗಳು ನಡೆಯಲಿಲ್ಲ. ಅವು ಹಿಡಿದಿಟ್ಟುಕೊಂಡಿರುವ ಸಂಗತಿಗಳು ಬೆಳಕಿಗೆ ಬಾರದೇ ಅವಜ್ಞೆಗೆ ಗುರಿಯಾಗಿವೆ.

ಈವರೆಗೆ ಕರ್ನಾಟಕ ಇನ್ಸ್‌ಕ್ರಿಪಶನ್ ಸಂಪುಟಗಳಲ್ಲಿ 9 ಶಾಸನಗಳು, ಇಪಿಗ್ರಾಫಿಯಾ ಇಂಡಿಕಾ ಸಂಪುಟ 32 ರಲ್ಲಿ 1, ಎ.ಆರ್.ಎಸ್.ಐ.ಇ. 1949-50 ರಲ್ಲಿ 1, ಇ.ಎಸ್.ಐ. ಸಂಪುಟ 13 ರಲ್ಲಿ 1 ಹಾಗೂ ಅಪ್ರಕಟಿತ ಪಿ.ಎಚ್‌ಡಿ. ಮಹಾಪ್ರಬಂಧಗಳಲ್ಲಿ 5 ಹೀಗೆ ಅಂಕೋಲಾ ತಾಲೂಕಿನ ಒಟ್ಟೂ ಹದಿನೇಳು ಶಾಸನಗಳು ಪ್ರಕಟವಾಗಿವೆ. ಇತ್ತಿಚೀನ ವರ್ಷಗಳಲ್ಲಿ ನಾನು ನಡೆಸಿದ ಕ್ಷೇತ್ರಕಾರ್ಯದಲ್ಲಿ ಹೊಸದಾಗಿ 26 ಅಪ್ರಕಟಿತ ಶಾಸನಗಳನ್ನು ಪತ್ತೆಮಾಡಿದ್ದೇನೆ. ಅವುಗಳಲ್ಲಿ ಒಂದು ಶಾಸನಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ನಮಗೆ ತಿಳಿದಂತೆ ಈ ಶಾಸನಗಳ ಪಠ್ಯಗಳು ಈವರೆಗೆ ಎಲ್ಲೂ ಪ್ರಕಟವಾಗಿಲ್ಲ.

ಶಾಸನ ಸಂಖ್ಯೆ – 1

ಸ್ಥಳ : ಸುಂಕಸಾಳ ಗ್ರಾಮ ಅಂಕೋಲಾ ತಾಲೂಕು

ಕಾಲ : 27-09-1191 ಮಂಗಳವಾರ

ಪ್ರಕಟಣೆ : ಅಪ್ರಕಟಿತ

ರಾಜ : ಶಿವಚಿತ್ತ ವೀರಹೆಮ್ಮಾಡಿ ದೇವ　　ವಂಶ : ಗೋವೆಯ ಕಾದಂಬ

ಭಾಷೆ : ಕನ್ನಡ　ಲಿಪಿ : ಕನ್ನಡ　　ಪ್ರಕಾರ : ವೀರಗಲ್ಲು ಶಾಸನ

ಪಾಠ

1. ಶ್ರೀ ಸ್ವಸ್ತಿ ಸಮದಿಗತ ಪಂಚಮಹಾಸಬ್ದ ಮಹಾಮಹೇಸ್ವರಂ ಬನವಾಸೆ ಪುರವರಾಧೀಸ್ವರಂ ಶ್ರೀ ಸಪ್ತಕೋಟೇಸ್ವರ ದೇವರ ವರಲಬ್ದ ವರ ಪ್ರ
2. ಸಾದ ಸಂಪ್ಪಂನರಪ್ಪ ಕಾದಂಬ ಚಕ್ರವರ್ತಿ ರಣರಂಗ ಹನುಮ ಪಶ್ಚಿಮ ಸಮುದ್ರದಿ(ಪತಿಯ ವು)ಮಪ್ಪ ಶ್ರೀ ಶಿವಚಿತ್ತ ವೀರ ಹೆಮ್ಮಾಡಿದೇವ
3. ಶ್ರೀಮತ್ ತ್ರಿಭುವನ ಮಲ್ಲಿದೇವರ್ಸರ ವಿಜ್ಯೇಯ ರಾಜ್ಯೋದಯದ ವಿರೋಧಿ ಸಂವತ್ಸರ..॥ ಸ್ವಸ್ತಿ ಸಮಸ್ತ ಪ್ರಶಸ್ತಿಸಹಿತಂ
4. ಶ್ರಿಮನು ಮಹಾಮಂಡಳೇಸ್ವರಂ ಚಂದ್ರಕ.. ಪುರಾಧೀಸ್ವರಂ ಶ್ರೀ ಕಲಿನಾಥ ದೇವರ ಪಾದಪದ್ಮಾರಾದ ಶಿಶುಮಪ್ಪ ಮೂಱುಲೋಕದಗಂಡ ಮೂಱು
5. ಲೋಕ ಜಗದಳವ್ವೆರಿ (ಮಂಳಿ) ಮದನಮೂರ್ತ್ತಿಂದನುಪ್ಪ ಮಹಾಬಳ ಮಂಡಳೇಶನು (ವಳಿತಂಗೇಯ್ಯತಿಳೋ), 22
6. ನೆಯ ವಿರೋಧಿ ಸಂವತ್ಸರದ ಆಸ್ವೀಜ ಸುಧ 4 ಆದಿವಾರದಲು ಮಹಾಮಂಡಳಿಕ ಮಂಕಡಲ ಜಂರ 12 ಮನೇಯ ಗಾ

7. ವಣಿಗ ಮಹೋಲಿಯ ಅರಸು ರಾಮರ್ಸನು ಯೋರ್ತ್ತಿನ ... ದಿಲಿ ಮಂಡಳಿಕನ ಲೆಂಕ ಮಾಳಿಕೆಯ ಓಮನನು
8. ರಗುಲಯ ಕಾಳಗದಲು ಮಾಡಿದ ಪವುತ ಸುಕವುರ ಕಾಳಗದಲು ಯಾ .... ಡುತಯವಣ ಕಬಗ್ವಿತುಜು
9. -- ಸ್ಪಷ್ಟವಾಗಿಲ್ಲ --
10. ---- ಮಂಗಳ ಮಹಾ ಶ್ರೀ ಶ್ರೀ ಶ್ರೀ

ಸಾರಾಂಶ

ಗೋವೆಯ ಕದಂಬ ಮನೆತನದ ಬಿರುದುಗಳೊಂದಿಗೆ ಆರಂಭವಾಗುವ ಈ ಶಾಸನವು ಶಿವಚಿತ್ತ ವೀರ ಹೆಮ್ಮಾಡಿ ದೇವನ ಆಡಳಿತಾವಧಿಯಲ್ಲಿ ತ್ರಿಭುವನ ಮಲ್ಲಿದೇವರಸರ ವಿಜಯರಾಜ್ಯೋದಯದ ವಿರೋಧಿ ಸಂವತ್ಸರ, ಮಹಾಬಳ ಮಂಡಲೇಶನ ಆಳ್ವಿಕೆಯ 22ನೇ ವರ್ಷದ ವಿರೋಧಿ ಸಂವತ್ಸರದ ಆಶ್ವೀಜ ಶುದ್ಧ 4 ಆದಿವಾರ ಎಂದು ತಿಥಿಯನ್ನು ತಿಳಿಸುತ್ತದೆ. ಇದು ಕ್ರಿ.ಶ. 1192ರ ಸಪ್ಟೆಂಬರ್ 27, ಮಂಗಳವಾರಕ್ಕೆ ಸರಿ ಹೊಂದುತ್ತದೆ. '12 ಮನೆಯ ಗಾವಣಿಗ' ಮಹೋಲಿಯ ಅರಸು ರಾಮರ್ಸನನು, ಲೆಂಕಮಾಳಿಕಿಯ ಓಮನನ್ನನು ಹೆಸರಿಸಿ ಸಕವುರ ಕಾಳಗವನ್ನು ಪ್ರಸ್ತಾಪಿಸುತ್ತದೆ. ಶಾಸನದ 8ನೇ ಸಾಲು ಭಾಹಶಃ ಮತ್ತು 9ನೇ ಸಾಲು ಪೂರ್ತಿಯಾಗಿ ತ್ರುಟಿತವಾಗಿರುವುದರಿಂದ ಮಡಿದ ವೀರನ ವಿವರಗಳು ನಷ್ಟವಾಗಿವೆ. ಪ್ರಸ್ತುತ ಶಾಸನದಲ್ಲಿ ಶಾಪಾಶಯಗಳು ಇದ್ದಂತೆ ತೋರುವದಿಲ್ಲ.

ಪ್ರಸ್ತುತ ಶಾಸನವು ಅಂಕೋಲಾ-ಹುಬ್ಬಳ್ಳಿ ಹೆದ್ದಾರಿಯಲ್ಲಿ ಸುಂಕಸಾಳ ಗ್ರಾಮದ ಕೋಟಿಪಾಲ ತಿರುವಿನಲ್ಲಿ, ಹೆದ್ದಾರಿಯಿಂದ 100ಮೀ ದೂರದಲ್ಲಿ ಇದೆ. ಇದೊಂದು ವೀರಗಲ್ಲು ಶಾಸನವಾಗಿದ್ದು, ಶಾಸನದ ಆರಂಭದಲ್ಲಿ ಹೇಳಿರುವ 'ಶ್ರೀ ಸ್ವಸ್ತಿ ಸಮದಿಗತ ಪಂಚಮಹಾಸಬ್ದ ಮಹಾಮಹೇಸ್ವರಂ ಬನವಾಸೆಪುರವರಾಧೀಸ್ವರಂಶ್ರೀ ಸಪ್ತಕೋಟೇಸ್ವರ ದೇವರ ವರಲಬ್ದ ವರ ಪ್ರಸಾದ ಸಂಪ್ಪಂನರಪ್ಪ ಕಾದಂಬ ಚಕ್ರವರ್ತಿ ರಣರಂಗ ಹನುಮ ಪಶ್ಚಿಮ ಸಮುದ್ರದಿ(ಪತಿಯ ವು)ಮಪ್ಪ..' ಬಿರುದುಗಳು ಗೋವೆಯ ಕಾದಂಬ ಮನೆತನಕ್ಕೆ ಸೇರಿದ ಬಿರುದುಗಳು.01 ಕಾರಣ ಈ ಶಾಸನವನ್ನು ಗೋವೆ ಕಾದಂಬರದ್ದು ಎಂದು ಗುರುತಿಸಲಾಗಿದೆ.

ಇಂದಿನ ಗೋವಾ, ಧಾರವಾಡ, ಮತ್ತು ಉತ್ತರ ಕನ್ನಡ ಜಿಲ್ಲೆಯ ಉತ್ತರ ಭಾಗಗಳ ಪ್ರದೇಶದಲ್ಲಿ ಸುಮಾರು ಎರಡು ಶತಮಾನಗಳ ಕಾಲ ಆಡಳಿತ ನಡೆಸಿದ ಗೋವೆಯ ಕಾದಂಬರು ತಾವು ತ್ರೀಲೋಚನ ಕಾದಂಬ02ನ ವಂಶಸ್ಥರೆಂದು ಹೇಳಿಕೊಂಡಿದ್ದಾರೆ. ಈಗ ತಿಳಿದ ಮಟ್ಟಿಗೆ ಒಂದನೇ ಪ್ರಷ್ಠನು ಗೋವೆ ಕದಂಬ ವಂಶದ ಮೋದಲ ಅರಸ.03 ಈ ವರೆಗೂ ದೊರೆತ ಇವರ 50ಕ್ಕೂ ಮಿಕ್ಕ ಶಾಸನಗಳೆಲ್ಲವನ್ನೂ ಒಟ್ಟಿಗೆ ಅಭ್ಯಾಸಮಾಡಿದಾಗ ಮೂವತ್ತಕ್ಕೂ ಮಿಕ್ಕಿ ಶಾಸನಗಳು ಉಪೇಕ್ಷಿಸುವ ರೀತಿಯಲ್ಲಿ ಚಕ್ರವರ್ತಿಯ ಬಗ್ಗೆ ಮೌನ ತಾಳಿ ಕಾದಂಬ ಕೀರ್ತಿಯನ್ನು ಉದ್ಘೋಷಿಸುತ್ತ ಪ್ರಾರಂಭವಾಗುತ್ತವೆ. ಧಾರವಾಡ ತಾಲೂಕಿನ ನಿರದಿ ಶಾಸನ(1111) ಕಾದಂಬ ಗೂವಲದೇವನನ್ನು ಪ್ರಸ್ತಾಪಿಸಿ ನಂತರ 6ನೇ ವಿಕ್ರಮಾದಿತ್ಯನ್ನನು ಹೆಸರಿಸುವ ಸಾಹಸಮಾಡಿದೆ.04 ಹೀಗೆ ಕೆಲವು ಸಲ ಕಲ್ಯಾಣ ಚಾಲುಕ್ಯರ ಅಧಿನಾಯಕತ್ವವನ್ನು ಸೂಚಿಸುವುದು. ಕೆಲವು ಸಲ ಸೂಚಿಸದಿರುವುದು, ಮತ್ತೆ ಕೆಲವು ಸಲ ತಮ್ಮ ಹೆಸರಿನ ಕೆಳಗೆ ಸೂಚಿಸುವುದು ಗೋವೆಯ ಕದಂಬರ ಮಹತ್ವಾಕಾಂಕ್ಷೆಯನ್ನು ಎತ್ತಿತೋರಿಸುತ್ತದೆ.

ಪ್ರಸ್ತುತ ಶಾಸನದಲ್ಲಿಯೂ ಸಹ ಮೊದಲೂ ಪೆರ್ಮಾಡಿದೇವ ಹೆಸರು ಸೂಚಿಸಿ ನಂತರ ಶ್ರೀಮತ್ ತ್ರಿಭುವನಮಲ್ಲಿದೇವರ್ಸರ ಹೆಸರನ್ನು ಸೂಚಿಸುತ್ತದೆ. ಈ ತ್ರಿಭುವನ ಮಲ್ಲಿದೇವರಸನನ್ನು ಕಲ್ಯಾಣ ಚಾಲುಕ್ಯ 4ನೇ ಸೋಮೇಶ್ವರ ಎಂದು ಗುರುತಿಸಲಾಗಿದೆ.05 ಪ್ರಸ್ತುತ ಶಾಸನವು ತ್ರಿಭುವನಮಲ್ಲಿದೇವರ್ಸರ ಆಳ್ವಿಕೆಯ ವಿರೋಧಿ ಸಂವತ್ಸರ ಎಂದು ಹೇಳುತ್ತಿದ್ದು ಅದು ಎಷ್ಟನೇ ವರ್ಷ ಎಂದು ತಿಳಿಸುವುದಿಲ್ಲ. ಆದರೆ ಕಾರವಾರ ತಾಲೂಕಿನ ಅಂಗಡಿ ಗ್ರಾಮದ 1192ರ ಶಾಸನವು 'ಸಿವಚಿತ್ತ ವೀರ ಪೆರ್ಮ್ಮಾಡಿ[ದೇವ]ರು ತ್ರಿಭುವನ ಮಲ್ಲದೇವರ ರಾಜ್ಯೋದಯದ [ವ]ಷ[ರ್]ದ 4ನೇಯ ವಿರೋಧಿಕೃತ06 ಸಂವತ್ಸರದ..' ಎಂದು ಹೇಳಿರುವುದರಿಂದ, ನಮ್ಮ ಚರ್ಚೆಯ ಶಾಸನವೂ ಸಹ ಅದೇವರ್ಷ ಹೊರಟಿರುವುದು ತಿಳಿದುಬರುತ್ತದೆ. ಪ್ರಸ್ತುತ ಶಾಸನವು ಕಾದಂಬ

ರಾಜನನ್ನು ಶಿವಚಿತ್ತ ವೀರ ಹೆಮ್ಮಾಡಿದೇವ ಎಂದು ಉಲ್ಲೇಖಿಸುತ್ತದೆ. ಗೋವೆಯ ಕಾದಂಬರ ಉಳಿದ ಯಾವುದೇ ಶಾಸನದಲ್ಲಿಯೂ ಈ ರಾಜನ ಉಲ್ಲೇಖವಿಲ್ಲ. ಆದರೆ ಇದೇ ಕಾಲಾವಧಿಯ ಮತ್ತು ಇವೇ ಬಿರುದುಗಳನ್ನು ಹೊಂದಿರುವ ಕಾರವಾರ ತಾಲೂಕಿನ ಮಾಜಾಳಿ, ಅಂಗಡಿ, ಖಾನಾಪುರ ತಾಲೂಕಿನ ಹಲಸಿ07 ಧಾರವಾಡ ತಾಲೂಕಿನ ಸಿದ್ಧಾಪುರ, ಬೊಕ್ಯಾಪುರ, ಅಮ್ಮಿನಬಾವಿ, ರಾಯಪುರ08 ಮೊದಲಾದೆಡೆ ದೊರೆತ ಶಾಸನಗಳು ರಾಜನನ್ನು ಪೆರ್ಮಾಡಿದೇವನೆಂದು ಉಲ್ಲೇಖಿಸುತ್ತವೆ. ಈ ಆಧಾರಗಳಿಂದ ಪ್ರಸ್ತುತ ಶಾಸನದ ಹೆಮ್ಮಾಡಿ ದೇವನನ್ನು ಪೆರ್ಮಾಡಿ ದೇವನೆಂದು ಭಾವಿಸಬೇಕಾಗುತ್ತದೆ. ಪ್ರಸ್ತುತ ಶಾಸನದ 8 ರಿಂದ 10ರವರೆಗಿನ ಸಾಲುಗಳು ತೃಟಿತವಾಗಿರುವುದರಿಂದ ಈ ಪ್ರಬಂಧದ ಸಿದ್ಧತೆಯ ಸಮಯದಲ್ಲಿ ಅವುಗಳನ್ನೂ ಸರಿಯಾಗಿ ಓದಲಾಗದೇ ಇರುವುದರಿಂದ 8 ರಿಂದ 10 ವರೆಗಿನ ಸಾಲುಗಳ ಪಾಠದ ಪರಿಷ್ಕರಣೆಯ ಅಗತ್ಯವಿದೆ.

ಕದಂಬ – ಕಾದಂಬ :

ಕದಂಬರು ಕನ್ನಡದ ಮೊದಲ ರಾಜ ಮನೆತನ. ಇವರು ಕ್ರಿಶ. ಮೂರನೇ ಗುರುತಿಸಿಕೊಂಡಿದ್ದಾರೆ. ಹೀಗೆ ಹೇಳಿಕೊಂಡವರಲ್ಲಿ ಪ್ರಮುಖರೆಂದರೆ, ಗೋವಾ ಕದಂಬರು,ಹಾನುಗಲ್ಲು ಕದಂಬರು, ನುರುಂಬವಾಡದ ಕದಂಬರು, ಕರಡಿಕಲ್ಲಿನ ಕದಂಬರು, ರಟ್ಟಿಹಳ್ಳಿ ಕದಂಬರು, ಬೇಲೂರು ಕದಂಬರು, ಉಚ್ಚಂಗಿ ಕದಂಬರು ನಾಗರ ಖಂಡದ ಕದಂಬರು, ಮುಂಜುರಾಬಾದ ಕದಂಬರು, ಲುಂಕೆ ಕದಂಬರು, ಚಂದಾವರ ಕದಂಬರು, ಕೋಳಿಗ 500ರ ಕದಂಬರು, ಕೊಟ್ಟೂರಿನ ಕದಂಬರು, ಬಳ್ಳಾರಿಯ ಕದಂಬರು ಮೊದಲಾದವರು.[9]

ಇಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವೆಂದರೆ, ಬನವಾಸಿ ಕದಂಬರ ಶಾಸನಗಳನ್ನು ಹೊರತುಪಡಿಸಿ, ಆದ್ಯ ಕದಂಬರ ವಂಶಸ್ಥರೆಂದು ಕರೆದುಕೊಂಡ ಎಲ್ಲ ಮನೆತನಗಳೂ ಶಾಸನದಲ್ಲಿ ತಮ್ಮನ್ನು "ಕದಂಬ"ರೆಂದು ಕರೆದುಕೊಳ್ಳದೇ "ಕಾದಂಬ" ಎಂದು ಕರೆದುಕೊಂಡಿದ್ದಾರೆ. ಪ್ರಸ್ತುತ ಶಾಸನದಲ್ಲಿಯೂ ಸಹ "ಶ್ರೀಮತ್ರಿಭುವನಪ್ರತಾಪ ಕಾದಂಬಚಕ್ರವರ್ತಿ ಕಲಿ......... [ದೇ]ವರ್ಸರುಂ ಬಸವಿದೇವರ್ಸರುಂ" ಎಂದು ಹೇಳಲಾಗಿದೆ. ಯಾಕೆ ಇವರು ತಾವು ಕದಂಬ ಕುಲದವರಾದರೂ ಎಂದೂ ಸಹ ತಮ್ಮನ್ನು ಕದಂಬರೆನ್ನದೆ, "ಕಾದಂಬ" ರೆಂದು ಸ್ಪಷ್ಟವಾಗಿ ಕರೆದುಕೊಳ್ಳಬೇಕಾದರೆ ಬಲವಾದ ಕಾರಣ ಇರಲೇಬೇಕು.[10] ಇಲ್ಲಿ ಕಾದಂಬ ಎಂದರೆ ಕದಂಬ ಪುಷ್ಪ ಎಂದರ್ಥ. ಅಂದರೆ ಕದಂಬ ಎನ್ನುವ ಬೃಹತ್ ವೃಕ್ಷಕ್ಕೆ ಇವರು ಹೂವುಗಳೇ ವಿನಃ ಮೂಲ ವೃಕ್ಷಕ್ಕೆ ಸರಿಸಮಾನರಲ್ಲ ಎನ್ನುವ ಅರ್ಥ ಇರಬಹುದು. ಅಥವಾ ಈ ರೀತಿ ತಮ್ಮ ಪೂರ್ವಜರನ್ನು ಗೌರವಿಸುವುದು ಅವರ ಉದ್ದೇಶವಾಗಿರಲೂ ಬಹುದು.[11] "ಕಾದಂಬ" ಎಂದರೆ ಕದಂಬ ವಂಶಕ್ಕೆ ಸೇರಿದವ ಎನ್ನುವ ಇನ್ನೊಂದು ಅರ್ಥವೂ ಸಹ ಇದೆ. ಏನೇ ಇರಲಿ ಬನವಾಸಿ ಕದಂಬರ ಮೂಲದೊಂದಿಗೆ ತಮ್ಮ ಸಂಬಂಧವನ್ನು ಕಲ್ಪಿಸಿಕೊಂಡು ತದನಂತರ ಆಳ್ವಿಕೆ ಮಾಡಿದ ಇವರನ್ನು ನಾವು ಕದಂಬರೆಂದು ಕರೆಯುವ ಬದಲು ಅವರು ತಮ್ಮನ್ನು ಕರೆದುಕೊಂಡಂತೆ ಕಾದಂಬರೆಂದು ಕರೆಯುವುದು ಸೂಕ್ತ.[12]

ಶಾಸನ ಶಿಲೆ

62 ಇಂಚು ಎತ್ತರ 39 ಇಂಚು ಅಗಲವಿರುವ ಶಿಲಾ ಫಲಕದಲ್ಲಿ ಐದು ಪಟ್ಟಿಕೆಗಳಲ್ಲಿ ಕೆತ್ತಲಾಗಿದೆ. ಶಾಸನದಲ್ಲಿ 10 ಸಾಲುಗಳಲ್ಲಿ ಶಾಸನದ ಪಠ್ಯವನ್ನು ಕಂಡರಿಸಲಾಗಿದೆ. ಯುದ್ದದ ದೃಶ್ಯಗಳು, ವೀರನನ್ನು ಅಪ್ಸರೆಯರು ವಾದ್ಯ ವೃಂದದೊಂದಿಗೆ ವಿಮಾನದಲ್ಲಿ ಕುಳಿಸಿಕೊಡು ಸ್ವರ್ಗಕ್ಕೆ ಒಯ್ಯುವ, ಕೈಲಾಸದಲ್ಲಿ ವೀರನು ದೈವ ಸಾನಿಧ್ಯ ಪಡೆದ ಸಂಗತಿಗಳನ್ನು ಸುಂದರವಾಗಿ ಕೆತ್ತಲಾಗಿದೆ. ವೀರಗಲ್ಲಿನ ಶಿರೋಭಾಗವು ಮಕರ ಪಟ್ಟಿಕೆಯ ತೋರಣಗಳಿಂದ ಅಲಂಕರಿಸಲಾಗಿದೆ.

ಅಡಿಟಿಪ್ಪಣಿ

01 ಡಾ. ಎಮ್.ಎಮ್. ಕಲ್ಬುರ್ಗಿ – ಧಾರವಾಡ ತಾಲೂಕಿನ ಶಾಸನಗಳು ಪುಟ viii

02 ಎಪಿಗ್ರಾಫಿಯಾ ಇಂಡಿಕಾ ಸಂ XXIX ಪುಟ 29–32

03 ಎ.ಎಸ್. ಗದ್ರೆ – ಇಂಪಾರ್ಟನಟ್ ಇನ್ಸ್ಕ್ರಪ್ಶನ್ಸ್ ಆಪ್ ಬರೋಡಾ ಸ್ಟೇಟ್ ಸಂ. 1 ಪುಟ 64
04 ಪೂರ್ವೋಕ್ತ 01
05 ಕರ್ನಾಟಕ ಇನ್ಸಕ್ರಪ್ಶನ್ಸ್ ಸಂ5 ಪುಟ 119
06 'ಕೃತ' ಎನ್ನುವುದನ್ನು ಸಾಲಿನ ಮೇಲೆ ಕತ್ತಲಾಗಿದೆ.
07 ಪೂರ್ವೋಕ್ತ 5, ಶಾಸನ ಸಂಖ್ಯೆ 63,64,65
08 ಪೂರ್ವೋಕ್ತ 1, ಶಾಸನ ಸಂಖ್ಯೆ 5, 48, 67, 68
09 ಪಾವಟೆ ಚೆನ್ನಕ್ಕ – ಹಾನಗಲ್ಲು ಕದಂಬರು ಪುಟ 10–20
10 ಗಣಪತಿ ಗೌಡ – ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು. ಪುಟ 7
11 ಪೂರ್ವೋಕ್ತ.
12 ಪೂರ್ವೋಕ್ತ.

❑

ಉತ್ತರ ಕನ್ನಡ ಜಿಲ್ಲೆಯ ಪರಿಸರ, ಜಲವಿಜ್ಞಾನ – ತಂತ್ರಜ್ಞಾನಗಳ ಕೆಲವು ಐತಿಹಾಸಿಕ ವಿಷಯಗಳು

– ಡಾ. ಹರಿಹರ ಶ್ರೀನಿವಾಸರಾವ್

ಉತ್ತರ ಕನ್ನಡ ಜಿಲ್ಲೆಯು ನಮ್ಮ ರಾಜ್ಯದ ಅತೀ ದೊಡ್ಡ ಜಿಲ್ಲೆಗಳಲ್ಲಿ ಒಂದು. ವಿಭಿನ್ನ ಭೌಗೋಳಿಕ ಲಕ್ಷಣಗಳಿಂದ ಕೂಡಿರುವ ಈ ಜಿಲ್ಲೆಯು, ದಟ್ಟ ಅರಣ್ಯ, ಸರ್ವಕಾಲಿಕ ನದಿಗಳು, ವಿಶೇಷ ಸಸ್ಯ ಹಾಗೂ ಪ್ರಾಣಿ ಸಂಕುಲನವನ್ನು ಹೊಂದಿದೆ. ಜೊತೆಗೆ ಸುಮಾರು 140 ಕಿ.ಮೀ. ಉದ್ದದ ಕರಾವಳಿ ತೀರವೂ ಇದೆ. ಉತ್ತರದಲ್ಲಿ ಬೆಳಗಾವಿ ಮತ್ತು ಗೋವಾ ರಾಜ್ಯ, ಪೂರ್ವದಲ್ಲಿ ಧಾರವಾಡ, ದಕ್ಷಿಣದಲ್ಲಿ ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳಿವೆ. ಪಶ್ಚಿಮ ದಿಕ್ಕಿನಲ್ಲಿ ಅರಬ್ಬಿ ಸಮುದ್ರವಿದೆ. ಒಟ್ಟಾರೆ 10.25 ಲಕ್ಷ ಹೆಕ್ಟರ್, ಭೂ ಭಾಗವನ್ನು ಹೊಂದಿರುವ ಈ ಜಿಲ್ಲೆಯಲ್ಲಿ, 8.28 ಹೆಕ್ಟರ್‌ಗಳಷ್ಟು ಅರಣ್ಯವೇ ಇದೆ. ಕೇವಲ 1.2 ಲಕ್ಷ ಹೇಕ್ಟರ್‌ನಷ್ಟು, ಭೂ ಭಾಗ ಮಾತ್ರ (ಸುಮಾರು 10%) ಕೃಷಿ ಮತ್ತು ತೋಟಗಾರಿಕೆಯಿಂದ ಕೂಡಿದೆ. ಜಿಲ್ಲೆಯಲ್ಲಿರುವ 12 ತಾಲ್ಲೂಕುಗಳ ಹೆಸರುಗಳಿವು. ಕಾರವಾರ, ಅಂಕೋಲಾ, ಕುಮಟಾ, ಭಟ್ಕಳ, ಹೊನ್ನಾವರ, ಸಿದ್ದಾಪುರ, ಶಿರಸಿ, ಯಲ್ಲಾಪುರ, ಮುಂಡಗೋಡ, ಸೂಪಾ (ಜೊಯಿಡಾ), ಹಳಿಯಾಳ, ದಾಂಡೇಲಿ. ಇಲ್ಲಿ ಅನೇಕ ಸುಂದರ ಜಲಪಾತಗಳಿರುವುದರಿಂದ "ಜಲಪಾತಗಳ ತವರು"ಎನಿಸಿದೆ.

ಒಂದು ಬದಿ ಸಹ್ಯಾದ್ರಿ, ಒಂದು ಬದಿ ಕಡಲು
ನಡು ಮಧ್ಯದಲಿ ಅಡಕೆ ತೆಂಗುಗಳ ಮಡಿಲು
ಸಿರಿಗನ್ನಡದ ಚಪ್ಪರವೆ ನನ್ನ ಜಿಲ್ಲೆ
ಇಲ್ಲಿಯೇ ಇನ್ನೊಮ್ಮೆ ಹುಟ್ಟುವೆನು ನಲ್ಲೆ – ದಿನಕರದೇಸಾಯಿ

ಭೌಗೋಳಿಕ

ಈ ಜಿಲ್ಲೆಯನ್ನು ಎರಡು ಭೌಗೋಳಿಕ ವಿಭಾಗಗಳನ್ನಾಗಿ ವಿಂಗಡಿಸಬಹುದು. ಸಮುದ್ರದಂಚಿನಿಂದ 10–15 ಕಿ.ಮೀ. ಅಗಲ ಮತ್ತು ಸು. 140 ಕಿ.ಮೀ. ಉದ್ದವಾಗಿರುವ ಕರಾವಳಿ, ಘಟ್ಟದ ಕೆಳಗಿನ ಭಾಗ. ಅದರ ಪೂರ್ವ ದಿಕ್ಕಿನಲ್ಲಿ, ಗೋಡೆಯಂತೆ ದಕ್ಷಿಣೋತ್ತರವಾಗಿ ಹಬ್ಬಿರುವ ಜಂಜುಕಲ್ಲಿನ ಸಹ್ಯಾದ್ರಿ ಶ್ರೇಣಿ. ಬೆಟ್ಟದ ತಪ್ಪಲಿನಿಂದ ಹರಿದು ಸಮುದ್ರ ಸೇರುವ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ನದಿಗಳು ಸುತ್ತಲೂ ಹಸುರು ಹಾಸಿ, ಸೌಂದರ್ಯವನ್ನು ಹೆಚ್ಚಿಸಿವೆ.

ಕಾರವಾರದಿಂದ ಭಟ್ಕಳದವರೆಗೆ ಚಾಚಿಕೊಂಡ ಕರಾವಳಿ ಮರಳುಮಯವಾಗಿದೆ. ಘಟ್ಟದ ಕೆಳಗೆ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲ್ಲೂಕುಗಳಿವೆ. ಘಟ್ಟದ ಮೇಲೆ ಶಿರಸಿ, ಯಲ್ಲಾಪುರ, ಸಿದ್ಧಾಪುರ, ಹಳಿಯಾಳ, ಜೊಯ್ಡ (ಸೂಪ), ಮುಂಡಗೋಡ ತಾಲ್ಲೂಕುಗಳಿವೆ. ಕರಾವಳಿಯ ತಾಲ್ಲೂಕುಗಳಲ್ಲಿ ತೆಂಗು ವಿಪುಲವಾಗಿ ಬೆಳೆದರೆ ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಅಡಕೆ ಬೆಳೆಯುತ್ತದೆ.

ಹವಾಮಾನ

ಇಲ್ಲಿಯ ಹವಾಮಾನ ಹಿತಕರ. ಕರಾವಳಿ ತಾಲ್ಲೂಕುಗಳಲ್ಲಿ ಸೆಕೆ ಹೆಚ್ಚು. ಘಟ್ಟದ ಮೇಲಿನ ತಾಲ್ಲೂಕುಗಳಲ್ಲಿ ಹೆಚ್ಚು ತಂಪಾದ ವಾಯುಗುಣ ಇರುತ್ತದೆ. ಮಳೆಗಾಲವು, ಜೂನ್ ನಲ್ಲಿ ಆರಂಭಗೊಂಡು ಅಕ್ಟೋಬರ್‌ವರೆಗೂ ಇರುತ್ತದೆ. ವಾರ್ಷಿಕ ಸರಾಸರಿ ಮಳೆ 2,836 ಮಿ.ಮೀ. ಕರಾವಳಿಯಲ್ಲಿ 3,500 ಮಿ.ಮೀ. ಸಹ್ಯಾದ್ರಿಯ ಅಂಚಿನಲ್ಲಿ ಅತಿ ಹೆಚ್ಚು; ಅಂದರೆ 5,000 ಮಿ.ಮೀ. ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ.

ಅರಣ್ಯದ ವೈವಿಧ್ಯತೆ :

ಜಿಲ್ಲೆಯ ಶೇ. 80 ರಷ್ಟು ನೆಲ ಅರಣ್ಯಾವೃತ. ಅರಣ್ಯದ ವಿಸ್ತೀರ್ಣ 8,15,057 ಹೆಕ್ಟೇರ್. 10,325 ಹೆಕ್ಟೇರುಗಳಲ್ಲಿ ತಾಳೆ ಬೆಳೆಯುತ್ತಾರೆ. ಸಾಗುವಾನಿ, ಮತ್ತಿ, ಹೊನ್ನೆ, ನಂದಿ ಮೊದಲಾದ ಗಟ್ಟಿ ಮರಗಳಲ್ಲದೆ ಬೆಂಕಿಪೆಟ್ಟಿಗೆಯ ತಯಾರಿಕೆಗೆ ಉಪಯುಕ್ತವಾದ ಮೃದು ಮರಗಳೂ ಶ್ರೀಗಂಧದ ಮರವೂ ಇವೆ. ಬಿದಿರು ಹೇರಳವಾಗಿದೆ. ತೈಲಯುತ ಸಸ್ಯಜಾತಿಗಳೂ ಇವೆ. ಅಳಲೆ, ಸೀಗೆ, ಜೇನು, ಅರಗು, ಗೋಂದು, ಹಾಲ್ಮಡ್ಡಿ ಇವು ಅರಣ್ಯೋತ್ಪನ್ನಗಳು. ರಾಜ್ಯದ ಅರಣ್ಯೋತ್ಪನ್ನದಲ್ಲಿ ಶೇ.65 ಭಾಗ ಈ ಜಿಲ್ಲೆಯಿಂದ ದೊರೆಯುತ್ತದೆ:

ಉತ್ತರ ಕನ್ನಡ ಜಿಲ್ಲೆ, ಜಲಪಾತಗಳಿಗೆ ತವರು ಮನೆ

1. ಸಾತೋಡಿ ಜಲಪಾತ 2. ಉಂಚಳ್ಳಿ ಜಲಪಾತ 3. ಮಾಗೋಡು ಜಲಪಾತ 4. ಬೆಣ್ಣೆಹೊಳೆ ಜಲಪಾತ 5. ವಾಟೆ ಹಳ್ಳ ಜಲಪಾತ

6. ಬುರುಡೆ ಜಲಪಾತ 7. ವಿಭೂತಿ ಜಲಪಾತ 8. ಶಿವಗಂಗೆ ಜಲಪಾತ 9. ಲಾಲ್ಗುಳಿ ಜಲಪಾತ 10. ಅಣಶಿ ಜಲಪಾತ

11. ಅಪ್ಸರಕೊಂಡ ಇತ್ಯಾದಿ

1. ಸಾತೋಡಿ ಜಲಪಾತ

ಕಾಳಿ ಉಪನದಿಯಾದ "ಸೂರಬ್ಬಿ ಹಳ್ಳ" ಈ ಜಲಪಾತ ವನ್ನು ಉಂಟು ಮಡುತ್ತದೆ.ಯಲ್ಲಾಪುರ ತಾಲೂಕಿನಲ್ಲಿರುವ ಈ ಜಲಪಾತ, ಶಿರಸಿಯಿಂದ 73 ಕಿ.ಮೀ., ಯಲ್ಲಾಪುರದಿಂದ ಸುಮಾರು 32 ಕಿ.ಮೀ. ದೂರದಲ್ಲಿದೆ. ಇದು, ದಾಂಡೇಲಿ ರಕ್ಷಿತಾರಣ್ಯದ ವ್ಯಾಪ್ತಿಯಲ್ಲಿ ಬರುವುದಲ್ಲದೆ, ದಟ್ಟ ಕಾನನದ ಮಧ್ಯೆ ಇದೆ. ಹಲವಾರು ಝುರಿಗಳಿಂದ ಸೇರಿದ ನೀರು, ಸುಮಾರು 15 ಮೀಟರ್ ಎತ್ತರದಿಂದ ಧುಮುಕುತ್ತದೆ. ನಂತರ ಕೊಡಸಳ್ಳಿ ಜಲಾಶಯದ ಮೂಲಕ ಕಾಳಿ ನದಿಯನ್ನು ಸೇರುತ್ತದೆ. 'ಸಾತೊಡಿಯ ಜಲಪಾತ'ವನ್ನು ಕಂಡವರು, ಅದನ್ನು ಅಮೆರಿಕದ ನಯಾಗರ ಜಲಪಾತಕ್ಕೆ ಹೋಲಿಸುತ್ತಾ ಇದೊಂದು ಚಿಕ್ಕ ನಯಾಗರ ಎನ್ನುವುದುಂಟು.

ಯಲ್ಲಾಪುರದಿಂದ ಹುಬ್ಬಳ್ಳಿ–ಅಂಕೋಲ ರಾಷ್ಟ್ರೀಯ ಹೆದ್ದಾರಿಯಲ್ಲಿ ಹುಬ್ಬಳ್ಳಿಗೆ ಹೋಗುವ ಮಾರ್ಗದಲ್ಲಿ 5 ಕಿ.ಮೀ. ನಷ್ಟು ಮುಂದೆ ಸಾಗಿ ಎಡಕ್ಕೆ (ಕಲಘಟಗಿ, ಹುಬ್ಬಳ್ಳಿಯಿಂದ ಬರುವವರು ಬಲಕ್ಕೆ ತಿರುಗಬೇಕು) ತಿರುಗಿ 25 ಕಿ.ಮೀ. ಸಾಗಿದರೆ, ಸಾತೋಡಿ ಜಲಪಾತದ ಪ್ರದೇಶವು ಕಾಣಸಿಗುತ್ತದೆ. ಅರಣ್ಯ ಇಲಾಖೆಯ ಅನುಮತಿ ಪತ್ರ ಪಡೆದು 2 ಕಿ.ಮೀ. ನಷ್ಟು ಕಚ್ಚಾರಸ್ತೆಯಲ್ಲಿ ನಡೆದು ಮುಂದೆ ಸಾಗಿದರೆ, ಜಲಪಾತದ ಸೌಂದರ್ಯವು ಎದ್ದು ಕಾಣುತ್ತದೆ.

2. ಉಂಚಳ್ಳಿ ಜಲಪಾತ

ಉಂಚಳ್ಳಿ ಜಲಪಾತ ಅಥವಾ ಲುಷಿಂಗ್ಟನ್ ಜಲಪಾತ 1, ಅಘನನಾಶಿನಿ ನದಿಯಿಂದ ಸೃಷ್ಟಿಯಾಗುವ ಜಲಪಾತ. ಇದರ ಎತ್ತರ ಸುಮಾರು 116 ಮೀಟರ್. ಶಿರಸಿಯಿಂದ 30 ಕಿ.ಮೀ. ದೂರದಲ್ಲಿದೆ. ಕ್ರಿ.ಶ.1845 ರಲ್ಲಿ ಈ ಜಲಪಾತವನ್ನು ಪತ್ತೆ ಹಚ್ಚಿದ ಬ್ರಿಟಿಷ್ ಅಧಿಕಾರಿ ಜೆ.ಡಿ. ಲುಷಿಂಗ್ಟನ್ ಅವರ ಹೆಸರನ್ನು ಇದಕ್ಕೆ ಇಡಲಾಗಿದೆ. ಈ ಜಲಪಾತವು ನೀರು ಬೀಳುವಾಗ

ಮಾಡುವ ಶಬ್ದದಿಂದ, ಸ್ಥಳೀಯರು ಇದನ್ನು "ಕೆಪ್ಪ ಜೋಗ", ಎಂದೂ ಕರೆಯುತ್ತಾರೆ. ಕರಿಬಂಡೆಗಳ ಮೇಲೆ ಹಾಲುನೊರೆಯಂತೆ ಇಳಿದು ಬರುವ ನೀರಿನ ಧಾರೆಯ ಸೊಬಗು ಚೇತೋಹಾರಿಯಾದುದು.

3. ಮಾಗೋಡು ಜಲಪಾತ

ಯಲ್ಲಾಪುರದಿಂದ 20 ಕಿ.ಮೀ ದೂರದಲ್ಲಿದೆ. ಬೇಡ್ತಿ ನದಿಯಿಂದ ಎರಡು ಹಂತಗಳಲ್ಲಿ ಉಂಟಾಗುವ ಈ ಜಲಪಾತದ ಎತ್ತರ 650 ಅಡಿಗಳು. ಜಲಪಾತದ ಹತ್ತಿರದ ವರೆಗೂ ವಾಹನ ಒಯ್ಯಬಹುದು. ಧೈರ್ಯಶಾಲಿಗಳು ಮಾತ್ರ ಜಲಪಾತದ ಕೆಳಗೆ ಇಳಿಯಬಹುದು. ಜಲಪಾತದ ಶಬ್ದ ಸು.13 ಕಿ.ಮೀ. ದೂರದಲ್ಲಿರುವ, ಬಿಳಗಿಯವರೆಗೂ ಕೇಳುವುದು. ಪ್ರಸಿದ್ಧ ಯಾತ್ರಾಸ್ಥಳವಾದ "ಜೇನುಕಲ್ಲುಗುಡ್ಡ"ದ ಹತ್ತಿರವಿದ್ದು ಸೂರ್ಯಾಸ್ತಮಾನದ ಸೊಬಗನ್ನೂ ಸವಿಯಬಹುದು. ಇದೇ ಹಾದಿಯಲ್ಲಿ "ಕವಡಿಕೆರೆ"ಯೂ ಇದೆ.

4. ಬೆಣ್ಣೆ ಹೊಳೆ ಜಲಪಾತ

ಅಘನಾಶಿನಿ ನದಿಯೇ, ಇಲ್ಲಿ ಜಲಪಾತವನ್ನು ಉಂಟು ಮಾಡುತ್ತದೆ. ಜಲಪಾತದ ಎತ್ತರ: 200 ಅಡಿ. ಶಿರಸಿಯಿಂದ ಸುಮಾರು 26 ಕಿ.ಮೀ. ಬೆಂಗಳೂರಿನಿಂದ ಸುಮಾರು 440 ಕಿ.ಮೀ. ನಲ್ಲಿ ಈ ಜಲಪಾತವು ಕಂಡು ಬರುತ್ತದೆ.

5. ವಾಟೆ ಹಳ್ಳ ಜಲಪಾತ

ವಾಟೆ ಹಳ್ಳ ಎಂಬುದು ಅಘನಾಶಿನಿ ನದಿಯ ಇನ್ನೊಂದು ಉಪನದಿ.ವಾಟೆ ಎಂದರೆ ಉತ್ತರ ಕನ್ನಡ ಜಿಲ್ಲೆಯ ಭಾಷೆಯಲ್ಲಿ ಬಿದಿರು. ಈ ಹಳ್ಳದ ಸುತ್ತಮುತ್ತ ಬಿದಿರಿನ ಮೆಳೆ ಚೆನ್ನಾಗಿ ಬೆಳೆಯುವುದರಿಂದ, ಜಲಪಾತಕ್ಕೆ ಆ ನೈಸರ್ಗಿಕ ಹೆಸರು ಬಂದಿದೆ.

ಬಿದಿರನ್ನು ಅರ್ಧಭಾಗ ಸೀಳಿ, ಅದರ ಮೂಲಕ ಸಣ್ಣ ಕಾಲುವೆಯಂತೆ ನೀರನ್ನು ತಮಗೆ ಬೇಕಾದ ದಿಕ್ಕಿಗೆ ಹರಿಸುವ ವಿಧಾನ ಒಂದನ್ನು ಮಲೆನಾಡಿನಲ್ಲಿ ಬಳಸುತ್ತಾರೆ. 'ವಾಟೆ" ಎಂದರೆ ಒಂದು ದಿಕ್ಕಿನಿಂದ ಇನ್ನೊಂದು ದಿಕ್ಕಿಗೆ ತಿರುಗು ಎನ್ನುವ ಇನ್ನೊಂದು ಅರ್ಥವೂ ಕನ್ನಡದಲ್ಲಿ ಇದೆ. ನಾಲ್ಕು ಹಂತಗಳಲ್ಲಿ ನೀರು ಅಂಕು ಡೊಂಕಾಗಿ ಚಲಿಸುತ್ತಿರುವುದನ್ನು ಚಿತ್ರದಲ್ಲಿ ನೋಡಬಹುದು. ಇದು ಶಿರಸಿ ಯಿಂದ 28 ಕಿ.ಮೀ. ದೂರದ ನಿಲ್ಕುಂದ ಗ್ರಾಮದ ಹತ್ತಿರವಿದೆ.

6. ಬುರುಡೆ ಜಲಪಾತ

ಬುರುಡೆ ಜಲಪಾತ ಅಥವಾ ಬುರುಡೆ ಜೋಗ, ಸಿದ್ದಾಪುರದಿಂದ ಸು. 28 ಕಿಲೋಮೀಟರ್ ದೂರದಲ್ಲಿದೆ. ಸುಮಾರು 90 ಮೀ. ಎತ್ತರದಿಂದ ಧುಮುಕುತ್ತದೆ. ಇಲ್ಲಿ "ಇಳ್ಳಿಮನೆ" ಎಂಬ ಹಳ್ಳಿಯಿರುವುದರಿಂದ ಇದಕ್ಕೆ 'ಇಳ್ಳಿಮನೆ ಜಲಪಾತ' ಎಂದೂ ಕರೆಯುತ್ತಾರೆ. ಇಳ್ಳಿಮನೆ (ಇಳಿ ಮನೆ ಅಥವಾ ನೀರು ಬೆಟ್ಟದಿಂದ ನೆಲಕ್ಕೆ ಇಳಿಯುವ ಎಂದೂ ಅರ್ಥೈಸಬಹುದು) ಹೊಳೆಯಿಂದ ಹರಿದು ಬಂದ ನೀರು ಇಲ್ಲಿ ಧುಮ್ಮಿಕ್ಕಿ ನಂತರ ಅಘನಾಶಿನಿ ನದಿ ಸೇರುತ್ತದೆ.

ಭೇಟಿಯ ಕಾಲ

ಈ ಜಲಪಾತಕ್ಕೆ ಹೋಗಲು ಸೂಕ್ತ ಕಾಲವೆಂದರೆ ಚಳಿಗಾಲ ಮತ್ತು ಬೇಸಿಗೆಯ ಆರಂಭ ಕಾಲ. ಮಳೆಗಾಲದಲ್ಲಿ ಕಣಿವೆಯನ್ನು ದಾಟುವುದು ಅಸಾಧ್ಯ. ಅಂದರೆ ಈ ಫಾಲ್ಸ್ ನೋಡಲು ನವೆಂಬರ್‌ನಿಂದ ಮೇ ತಿಂಗಳವರೆಗೆ ಮಾತ್ರ ಸಾಧ್ಯ. ಬೇಸಿಗೆ ಕಾಲದಲ್ಲಿ ಪ್ರವಾಸಿಗರು ಇಲ್ಲಿ ಚಾರಣ ನಡೆಸುವುದಕ್ಕೆ ಅನುಕೂಲವಾಗುವಂತೆ ಸಣ್ಣ ನಾಲೆಯೂ ಇದೆ.

7. ವಿಭೂತಿ ಜಲಪಾತ

ಶಿರಸಿ ಯಿಂದ 40 ಕಿ.ಮೀ. ದೂರದಲ್ಲಿರುವ ವಿಭೂತಿ ಜಲಪಾತವು, ವಿಭೂತಿ ಹೊಳೆಯ ಸೃಷ್ಟಿ. ವಿಭೂತಿ ಗುಡ್ಡಗಳೆಂದೇ ಪ್ರಸಿದ್ಧವಾಗಿರುವ ಯಾಣದ ಹತ್ತಿರದಲ್ಲಿರುವ, ಈ ಜಲಪಾತದ ಎತ್ತರ 100 ಅಡಿಗಳಿಗಿಂತ ಹೆಚ್ಚು. ಎರಡು ಹಂತಗಳಲ್ಲಿ

ಧುಮ್ಮಿಕ್ಕುವ ಈ ಜಲಪಾತ ಮಳೆಗಾಲದಲ್ಲಿ ಬಹು ಸುಂದರವಾಗಿ ಕಾಣುತ್ತದೆ. ವರ್ಷದ ಎಲ್ಲಾ ಸಮಯಗಳಲ್ಲೂ ಈ ಜಲಪಾತ ನೋಡಲು ಸಿಗುತ್ತದೆ.

8. ಶಿವಗಂಗೆ ಜಲಪಾತ

ಜಡ್ಡಿಗದ್ದೆ, ಶಿರಸಿಯಿಂದ 45 ಕಿ.ಮಿ. ದೂರದಲ್ಲಿದೆ. ಜಲಪಾತದ ಸುತ್ತಲೂ ದಟ್ಟವಾದ ಅರಣ್ಯ ಕಂಡುಬರುತ್ತದೆ. ಸಹ್ಯಾದ್ರಿ ಪರ್ವತದಲ್ಲಿ ಕಾಣುವ ಈ ಜಲಪಾತವು ಶಿರಸಿ, ಯಲ್ಲಾಪುರ ಹಾಗೂ ಅಂಕೋಲಾ ತಾಲ್ಲೂಕುಗಳ ಗಡಿ ಪ್ರದೇಶದಲ್ಲಿದೆ. 74 ಅಡಿಎತ್ತರದಿಂದ ಧುಮುಕುತ್ತದೆ. ಈ ನದಿಯ ಮಧ್ಯದಲ್ಲಿ ಗಣೇಶ ದೇವಾಲಯವು ಕಾಣ ಬರುತ್ತದೆ. ಆದ್ದರಿಂದ ಗಣೇಶ್ ಫಾಲ್ಸ್ ಎಂದೂ ಕರೆಯುತ್ತಾರೆ. ಇಲ್ಲಿ ಪ್ರತಿ ವರ್ಷ ಜಾತ್ರೆ ನಡೆಯುತ್ತದೆ.

9. ಲಾಲ್ಗುಳಿ ಜಲಪಾತ

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಿಂದ 13 ಕಿ.ಮೀ ದೂರದಲ್ಲಿದೆ. ಕಾಳಿ ನದಿಗೆ ಬೊಮ್ಮನಹಳ್ಳಿಯ ಬಳಿ ಅಣೆಕಟ್ಟೆಯನ್ನು ಕಟ್ಟುವ ಮೊದಲು, ಇದು ನಿತ್ಯ ಜಲಧಾರೆ ಇತ್ತು. ಅಣೆಕಟ್ಟೆ ಬಂದ ಮೇಲೆ, ಇದಕ್ಕೆ ಹರಿದು ಬರುವ ನೀರು ನಿಂತಿದೆ. ಈ ಜಲಪಾತವು ಮಳೆಗಾಲದಲ್ಲಿ ಮಾತ್ರ ಸ್ವಲ್ಪ ದಿನಗಳು ನೋಡಲು ಸಿಗುತ್ತದೆ.

10. ಅಣಶಿ ಜಲಪಾತ

ಅಣಶಿ ಜಲಪಾತವು, ಅಣಶಿ ರಾಷ್ಟ್ರೀಯ ಉದ್ಯಾನವನದಲ್ಲಿದೆ. ಸುಮಾರು 150 ಅಡಿಗಳಿಗಿಂತಲೂ ಎತ್ತರದಿಂದ ಧುಮುಕುತ್ತದೆ. ಇದು ಕಾರವಾರ–ದಾಂಡೇಲಿ ಹೆದ್ದಾರಿಯಲ್ಲಿ, ಕಾರವಾರದಿಂದ ಸುಮಾರು 32 ಕಿ.ಮೀ ದೂರದಲ್ಲಿ ರಸ್ತೆ ಬದಿಯಲ್ಲಿ ಕಂಡು ಬರುತ್ತದೆ. ಕದ್ರಾ ಅಣೆಕಟ್ಟೆಯಿಂದ ಸುಮಾರು 8 ಕಿ.ಮೀ. ದೂರದಲ್ಲಿದೆ.

11. ಅಪ್ಸರ ಕೊಂಡ

ಇದು ಹೊನ್ನಾವರ ದಿಂದ 7 ಕಿ.ಮೀ. ದೂರದ ಕಾಸರಕೋಡದಲ್ಲಿದೆ. ಅರಬ್ಬಿ ಸಮುದ್ರದ ತಟದಿಂದ 500 ಮೀ. ಪೂರ್ವಕ್ಕಿರುವ ಈ ಪ್ರದೇಶದಲ್ಲಿ ಸುಮಾರು 50 ಅಡಿಯಿಂದ ಧುಮುಕುವ ಸಣ್ಣದಾದ ಮನಮೋಹಕ ಜಲಪಾತವಾಗಿದೆ. ಪುರಾಣ ಕಾಲದಲ್ಲಿ ಇಲ್ಲಿ ಅಪ್ಸರೆಯರು ಸ್ನಾನ ಮಾಡಿರುವರೆಂದು ಪ್ರತೀತಿ. ಹೀಗಾಗಿ ಈ ಪ್ರದೇಶಕ್ಕೆ ಅಪ್ಸರಕೊಂಡ ಎಂದು ಹೆಸರು ಬಂದಿದೆ. ಇಲ್ಲಿನ ಸಮುದ್ರ ತೀರದಲ್ಲಿ ಸೂರ್ಯಾಸ್ತ ನೋಡುವುದೇ ಒಂದು ವಿಶೇಷ ಅನುಭವ.

ಇಷ್ಟೇ ಅಲ್ಲದೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಇನ್ನೂ ಹಲವಾರು ಜಲಪಾತಗಳಿವೆ. ಉ.ದಾ. ತುಂಬ್ರಿ ಕೊಡ್ಲು, ವಜ್ರದುಂಡಿ, ಮುರೇಗಾರ, ಕರೂರು ಇತ್ಯಾದಿ. ಪಶ್ಚಿಮ ಘಟ್ಟಶ್ರೇಣಿಗಳಿಂದಾಗಿ, ಬಿದ್ದ ಮಳೆ ನೀರೆಲ್ಲಾ ಒಂದಲ್ಲಾ ಒಂದು ರೀತಿ ಝುರಿ, ಹಳ್ಳ, ನದಿಗಳಾಗಿ ಹರಿಯುವುದರಿಂದ, ಎಲ್ಲೆಲ್ಲಿ ಕೊರಕಲು, ಗುಂಡಿಗಳು ಇವೆಯೋ ಅಲ್ಲೆಲ್ಲಾ ನೀರು ಜಲಪಾತವಾಗಿ ಧುಮ್ಮಿಕ್ಕುತ್ತದೆ. ಮಳೆಗಾಲದಲ್ಲಿ ಇವುಗಳೆಲ್ಲವೂ ಮೈದುಂಬಿ ಪ್ರಕೃತಿ ಮಾತೆ, ಬಿಳಿ ಸೀರೆಯುಟ್ಟು ಹಸಿರಿನ ಕುಪ್ಪಸ ತೊಟ್ಟ, ನವ ಯುವತಿಯಂತೆ ಕಣ್ಮನಗಳನ್ನು ಸೆಳೆಯುತ್ತಾಳೆ.

ಸಹಸ್ರಲಿಂಗ :

ಇದು ಶಿರಸಿ –ಯಲ್ಲಾಪುರ ರಸ್ತೆಯಲ್ಲಿ ಸುಮಾರು 12 ಕಿ.ಮೀ. ಮುಖ್ಯ ರಸ್ತೆಯಿಂದ 0.5 ಕಿ.ಮೀ. ದೂರದಲ್ಲಿದೆ. ಶಾಲ್ಮಲಾ ನದಿಯಲ್ಲಿಯೇ ಅನೇಕ ಲಿಂಗಗಳು ಕಂಡುಬರುತ್ತವೆ. ಸಹಸ್ರ ಎಂದರೆ ಸಂಸ್ಕೃತದಲ್ಲಿ ಸಾವಿರ ಎಂದು ಅರ್ಥ. ನದಿಯ ಸುತ್ತಮುತ್ತ ಪ್ರದೇಶದಲ್ಲಿಯೂ, ಅನೇಕ ಲಿಂಗಗಳನ್ನು ನೋಡ ಬಹುದಾಗಿದೆ. ಇವುಗಳಲ್ಲಿ ಕೆಲವನ್ನು ಕೆಳದಿ ಅರಸರ ಕಾಲದಲ್ಲಿ ರಚಿಸಲಾಗಿದೆ ಯೆಂದು ಈ ಚಿತ್ರದಲ್ಲಿ ತೋರಿಸಿರುವ, ಲಿಂಗದ ಎಡಭಾಗದ ಬಂಡೆಯಲ್ಲಿ ಕೆತ್ತಲಾಗಿರುವ ಒಂದು ಸಾಲಿನ "ರಾಮಚಂದ್ರ ಲಿಂಗಉ" ಎನ್ನುವ ಬರಹದಿಂದ ತಿಳಿದು ಬರುತ್ತದೆ. ಶಾಲ್ಮಲಾ ನದಿಯ ಒಟ್ಟು ಜಾಗವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ. ಸೋದೆ ಶ್ರೀ ವಾದಿರಾಜರು ರಚಿಸಿರುವ "ತೀರ್ಥಪ್ರಬಂಧ" ಎನ್ನುವ ಸಂಸ್ಕೃತ

ಕೃತಿಯಲ್ಲಿ ಶಾಲ್ಮಲಾ ನದಿಯ ಮಹತ್ವ ವನ್ನು ಮುಂದೆ ವಿವರಿಸಲಾಗಿದೆ. ದಾರಿಯುದ್ದಕ್ಕೂ ಕೇಳಿ ಬರುವ ಅನೇಕ ಬಗೆಯ ಮಲೆನಾಡ ಪಕ್ಷಿಗಳ ಇಂಚರ, ಕಾಡಿನ ಹಣ್ಣುಗಳ ಸವಿರುಚಿ, ಸುವಾಸನೆಯ ಹೂಗಳ ಪರಿಮಳ ಬಹುವಾಗಿ ಮನಸೆಳೆಯುತ್ತವೆ.

ಯಾಣ : ಯಾಣ ದಟ್ಟವಾದ ಕಲ್ಲು ಬಂಡೆ ಅರಣ್ಯ ಪ್ರದೇಶದಿಂದ ಕೂಡಿದ ಹಳ್ಳಿ. ಇದು ಕುಮಟಾ ತಾಲ್ಲೂಕಿಗೆ ಸೇರುತ್ತದೆ. ಇದು ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲೊಂದು. ಪಶ್ಚಿಮ ಘಟ್ಟಗಳ ಸಹ್ಯಾದ್ರಿ ಶ್ರೇಣಿಗಳಿಂದ ಕೂಡಿದೆ. ಇದು ಶಿರಸಿ ಯಿಂದ 45 ಕಿ.ಮಿ., ಕುಮಟಾದಿಂದ 31 ಕಿಲೋಮೀಟರ್ ದೂರದಲ್ಲಿದೆ.

ಯಾಣದ ಪ್ರಮುಖವಾದ ಆಕರ್ಷಣೆ ಎಂದರೆ ಭೈರವೇಶ್ವರ ಮೋಹಿನಿ ಶಿಖರಗಳು. ಈ ಎರಡು ಶಿಖರಗಳು ಕಡಿದಾದ ಕಪ್ಪು ಕಲ್ಲಿನಿಂದ ಕೂಡಿವೆ. ಇವು ಲಾವಾರಸದಿಂದ ರೂಪಿತವಾಗಿರುವ ಕದಂಬ(ಕಂಗ್ಲೊಮಿರೇಟ್) /ಅಗ್ನಿಶಿಲೆಗಳಾಗಿವೆ.

ಭೈರವೇಶ್ವರ ಶಿಖರವು 120 ಮೀಟರ್ (390ಅಡಿ) ಎತ್ತರವಿದೆ. ಮೋಹಿನಿ ಶಿಖರವು 90 ಮೀಟರ್ (270 ಅಡಿ) ಎತ್ತರವಿದೆ. ಯಾಣದ ಶಿಖರ (ದೇವಾಲಯ) ವೆಂದು ಕರೆಯಲ್ಪಡುವ ಹಿರಿಬಂಡೆ 120 ಮೀಟರ್ ಎತ್ತರವಾದ, ಸುಮಾರು ಅಷ್ಟೇ ಅಗಲವಾದ ನೆಲಮುಗಿಲನ್ನು ಜೋಡಿಸುವ ಕಪ್ಪು ಪರದೆಯಂತೆ ಬೃಹದಾಕಾರದ ಶಿಲಾ ರೂಪವಾಗಿದೆ. ಈ ಬಂಡೆಯ ಮಧ್ಯದಲ್ಲಿ ಸೀಳು ಇದ್ದು, ನೆತ್ತಿಯ ಮೇಲೆ ಜಲ ಸಂಚಯವಿದೆ. ಈ ಬಂಡೆಯ ಸೀಳಿನ ಗುಹೆಯಲ್ಲಿ ಭೈರವೇಶ್ವಲಿಂಗ ಎರಡು ಮೀಟರ್ ಎತ್ತರವಾಗಿದೆ. ಈ ಲಿಂಗದ ಮೇಲೆ ಸದಾ, 1 ಅಂಗುಲ ಗಾತ್ರದ ನೀರು ಮೇಲಿನಿಂದ ಒಸರುತ್ತಿರುತ್ತದೆ. ಸ್ಕಾಂದಪುರಾಣದಲ್ಲಿ ಯಾಣದ ಕತೆ ನಿರೂಪಿತವಾಗಿದೆ. ಭಸ್ಮಾಸುರ ಈಶ್ವರನಿಂದ ಉರಿಹಸ್ತದ ವರ ಪಡೆದು, ಕೊನೆಗೆ ಈಶ್ವರನನ್ನೇ ಸುಡುವುದಾಗಿ ಅಟ್ಟಿಸಿಕೊಂಡು ನಡೆದಾಗ ಭೈರವೇಶ್ವರನ ರಕ್ಷಣೆಗಾಗಿ, ಮಹಾವಿಷ್ಣುವು ಮೋಹಿನಿಯಾಗಿ ಬಂದು ಭಸ್ಮಾಸುರನನ್ನು ಒಲಿಸಿ ಕುಣಿಸಿ, ಅವನ ಹಸ್ತವನ್ನೇ ಅವನ ತಲೆಮೇಲಿರಿಸುವಂತೆ ಮಾಡಿ, ಭಸ್ಮಾಸುರನನ್ನು ಭಸ್ಮ ಮಾಡಿದ ಸ್ಥಳವಿದೆಂದು ಪ್ರತೀತಿ. ಶಿವರಾತ್ರಿಯ ದಿನ ಇಲ್ಲಿ ಪೂಜೆ ಸಲ್ಲಿಸಿ ದಂಡಿತೀರ್ಥದ ನೀರನ್ನು ತಂದು, ಗೋಕರ್ಣದ ಮಹಾಬಲೇಶ್ವರನಿಗೆ ಅರ್ಪಿಸಿದರೆ ಹೆಚ್ಚು ಪುಣ್ಯವೆಂಬ ನಂಬಿಕೆ ಇದೆ. ಮಹಾಶಿವರಾತ್ರಿ ಹಬ್ಬ ಹಬ್ಬವು ಇಲ್ಲಿ 10 ದಿನಗಳ ಕಾಲ ನಡೆಯುತ್ತದೆ. ಈ ಸಮಯದಲ್ಲಿ ಸಾವಿರ ಭಕ್ತಾದಿಗಳು ಇಲ್ಲಿಗೆ ಆಗಮಿಸುತ್ತಾರೆ.

ಹೆಬ್ಬಂಡೆಯಿಂದ ಇಳಿದು ಬಂದ ನೀರೇ, ಮುಂದೆ ಚಂಡಿಕಾ ನದಿಯಾಗಿ ಅಘನಾಶಿನಿ ನದಿಯನ್ನು ಸೇರುತ್ತದೆ. ಈ ಬಂಡೆಯಿದ್ದ ಬೆಟ್ಟದ ಕೆಳಗಡೆ ನದಿಯಲ್ಲಿ ಸ್ನಾನಮಾಡಿ ಮೇಲೇರಿ ಹೋಗುವಾಗ ಇನ್ನೊಂದು ಕಿರಿಗಾತ್ರದ "ಹೊಲತಿ ಶಿಖರ" (ಮೋಹಿನಿ ಶಿಖರ) ಕಂಗೊಳಿಸುತ್ತದೆ. ಇಂಥ ಹಲವಾರು ಮಹಾಮಹಾ ಬಂಡೆಗಳು ಯಾಣದ ಪರಿಸರದಲ್ಲಿವೆ. ಪ್ರಕೃತಿಯ ಭವ್ಯತೆಯ ದಿವ್ಯದರ್ಶನದಿಂದ ಪುನೀತನಾದ ಪ್ರವಾಸಿಗೆ ಪ್ರವಾಸದ ಪ್ರಯಾಸದ ಅರಿವಾಗುವದಿಲ್ಲ. ಪೂರ್ವಕಾಲದಲ್ಲಿ ಯಾಣದ ಪ್ರದೇಶ ಸಮೃದ್ಧ ಪ್ರದೇಶವಾಗಿದ್ದು "ಯಾಣದ ಎಪ್ಪತ್ತು ಹಳ್ಳಿ" ತುಂಬಾ ಪ್ರಖ್ಯಾತವಾಗಿತ್ತು. ಕೌಶಿಕ ರಾಮಾಯಣ ಬರೆದ ಬತ್ತಲೇಶ್ವರ ಕವಿ ಇಲ್ಲಿ ವಾಸಿಸಿದ್ದನಂತೆ.

ಬೆಟ್ಟಗಳ ನೀರಿನ ವೈಜ್ಞಾನಿಕ ಪ್ರಾಮುಖ್ಯತೆ

ಬೆಟ್ಟದ ನಡುವೆ ಅನೇಕ ಶಿಲಾಪದರಗಳ ಮುಖಾಂತರ ಹರಿಯುವುದರಿಂದಾಗಿ, ಯಾವುದೇ ರೀತಿಯಿಂದಲೂ ಕಲುಷಿತವಾಗಿಲ್ಲ. ಅಲ್ಲದೇ ಈ ನೀರು ತನ್ನೊಟ್ಟಿಗೆ, ದೇಹಕ್ಕೆ ಬೇಕಾಗುವ ತಕ್ಕಷ್ಟುಮಾತ್ರಾ ಖನಿಜಾಂಶಗಳನ್ನು ಒಳಗೊಂಡಿರುವುದರಿಂದ (ಉದಾಹರಣೆ: ಕ್ಯಾಲ್ಷಿಯಂ ಕಾರ್ಬೋನೇಟ್, ಕಬ್ಬಿಣಾಂಶ ಇತ್ಯಾದಿ) ಅವು ಮನುಷ್ಯನ ದೇಹದಲ್ಲಿಯ ರಕ್ತಕ್ಕೆ ಸುಲಭವಾಗಿ ಸೇರಿಕೊಳ್ಳುತ್ತದೆ. ಇದರಿಂದಾಗಿ ಹಿಮೋಗ್ಲೋಬಿನ್ ಅಂಶವೃದ್ಧಿಯಾಗುತ್ತದೆ. ಹಿಮೋಗ್ಲೋಬಿನ್ ಅಂಶವು ರೋಗ ನಿರೋಧಕ ಶಕ್ತಿಯ ವರ್ಧನೆಗೆ ಬಹು ಮುಖ್ಯವಾದ ಅಂಶ ಎನ್ನುವುದನ್ನು ಔಷಧ ವಿಜ್ಞಾನವೇ ಹೇಳುತ್ತದೆ. ಈ ನೀರು ಕನಿಷ್ಟವೆಂದರೆ ಒಂದು ತಿಂಗಳ ವರೆಗೆ ತನ್ನ ಗುಣಗಳನ್ನು ಹೊಂದಿರುತ್ತದೆ ಎನ್ನುವುದನ್ನು ಓದುಗರು ಗಮನಿಸಿ, ಇದರ ಪ್ರಯೋಜನ ಪಡೆಯಬೇಕೆನ್ನುವುದು ಈ ಲೇಖಕನ ಆಶಯವಾಗಿದೆ.

ಇದೇ ನೀರನ್ನು (ಹೂವು, ಗರಿಕೆ, ಪತ್ರೆ ಗಳಿಂದ ಮುಕ್ತವಾಗಿರುವ) ಶುದ್ಧವಾದ ತೊಳೆದ ಪ್ಲಾಸ್ಟಿಕ್ ಬಾಟಲಿಯಲ್ಲಿ ತುಂಬಿಕೊಂಡು, ಮನೆಗೆ ತೆರಳಿದ ನಂತರ ಗಾಜಿನ ಸೀಸೆಯಲ್ಲಿ ಸಂಗ್ರಹಿಸಿ ಇಟ್ಟು, ಉಪಯೋಗಿಸಿದ ನಂತರ, ಸೀಸೆಯಲ್ಲಿ ಗಾಳಿ ಒಳ ಹೋಗದಂತೆ ಬಿಗಯಾಗಿ ಬಿರಡೆಯನ್ನು ಹಾಕಿಟ್ಟರೆ ಅನೇಕ ದಿನಗಳವರೆಗೆ ನೀರು ತನ್ನ ಔಷಧಿಯ ಗುಣವನ್ನು ಕಳೆದು ಕೊಳ್ಳುವುದಿಲ್ಲ. ಮೇಲೆ ಹೇಳಿರುವ ಪೌರಾಣಿಕ ಕಥೆಯಂತೆ, ಮಹಾವಿಷ್ಣುವು ಮೋಹಿನಿಯಾಗಿ ಭಸ್ಮಾಸುರನ ಭಸ್ಮಮಾಡಿದ ಈ ಸ್ಥಳದಲ್ಲಿ ಅವನ ಭಸ್ಮವೂ ಕೂಡಿದೆ ಎನ್ನವುದು ಸ್ಥಳೀಯರ ನಂಬಿಕೆ. ಇಲ್ಲಿ ಹೇಳಿರುವ ಭಸ್ಮ ಎಂದರೆ ಭೂಮಿಯು ಉಂಟಾಗುವ ಮೊದಲು ಲಾವಾರಸವು ಗಟ್ಟಿಯಾದ ಪದರದ ಬೆಟ್ಟ ಮತ್ತು ಕಪ್ಪು ಮಣ್ಣು ಆ ಬೆಟ್ಟಗಳು ನೂರಾರು ಶತಮಾನಗಳ ಕಾಲ ಮಳೆ, ಗಾಳಿ ಇತ್ಯಾದಿಗಳಿಗೆ ಒಡ್ಡಿಕೊಂಡಾಗ ಉಂಟಾಗುವ ಸವಕಳಿಯ ಭಾಗವೇ ಆಗಿರುತ್ತದೆ. ಇಲ್ಲಿರುವ ಸರಣಿ ಕಲ್ಲು ಬಂಡೆಗಳಲ್ಲಿ ಸುಣ್ಣದ ಕಲ್ಲಿನ ಮತ್ತು ಬೆಸಾಲ್ಟ್ ಅಂಶಗಳು ಹೇರಳವಾಗಿವೆ(ಭೈರವನ ಜಡೆ ಆಕಾರದ ಚಿತ್ರ). ಕಪ್ಪನೆಯ ಬೆಸಾಲ್ಟನ್ನು ಭೂ ವಿಜ್ಞಾನದಲ್ಲಿ ಕದಂಬ (ಕನ್ನಡದಲ್ಲಿ)/ಆಂಗ್ಲ ಭಾಷೆಯಲ್ಲಿ ಕಂಗ್ಲೊಮಿರೇಟ್ ಎನ್ನುತ್ತಾರೆ. ಇವು ಗಡುಸಾದ ಅಗ್ನಿಶಿಲೆಗಳಿಗೆ ಉತ್ತಮ ಉದಾಹರಣೆಗಳು. ತಮ್ಮ ಗಟ್ಟಿತನದಿಂದಾಗಿ ನೀರನ್ನು ಹೀರಿ ಕೊಳ್ಳುವುದಿಲ್ಲ. ಇದು ಜಲ ತಡೆಯುವ ಗುಣವಾಗಿರುವುದರಿಂದ ಜಲ ನೀರೋಧಗಳೆಂದು (ಅಕ್ವಿಟಾರ್ಡ್) ಗಳೆಂದು ಕರೆಯುತ್ತಾರೆ. ಸುಟ್ಟ ಕಲ್ಲು ಮಣ್ಣುಗಳ ಮೇಲೆ ಮಳೆ ಬಿದ್ದಾಗ, ಅವುಗಳಲ್ಲಿ ಇರುವ ಸುಣ್ಣ ಸಂಬಂಧವಾದ ವಸ್ತುವೂ ಬೇರೆಯಾಗಿ ಸುಣ್ಣಶಿಲೆ (ಲೈಮ್ ಸ್ಟೋನ್) ಆಗಿ ಶೇಖರಗೊಳ್ಳುತ್ತದೆ. ಈ ಎಲ್ಲ ಬಗೆಯ ಶಿಲೆಗಳೂ ನೀರಿನಲ್ಲಿ ತಂಗಿ, ಪದರ ಪದರವಾಗಿ, ಹಾಳೆ ಹಾಳೆಯಾಗಿ ಶೇಖರವಾಗುವುದರಿಂದ ಈ ವರ್ಗದ ಶಿಲೆಗಳನ್ನು ಜಲಜ ಶಿಲೆಗಳು(ಸ್ಟ್ರಾಟಿಫೈಡ್ ರಾಕ್ಸ್) ಎನ್ನುತ್ತಾರೆ.

ಜಲವಿಜ್ಞಾನದಲ್ಲಿ ನೀರಿನ ಪೂರಕ ಮತ್ತು ವಿಸರ್ಜಕ ಕ್ರಿಯೆ ಹಾಗೂ ಜಲ ನಿರೋಧ, ಜಲಜ ಶಿಲೆಗಳ ಪಾತ್ರದ ವಿವರಣೆ

ಸಾಮಾನ್ಯವಾಗಿ ಗುಡ್ಡಗಾಡು ಸೀಮೆ, ಅದರ ಮುಂದಿನ ಬಯಲು ಸೀಮೆಯ ಸೆರಗು, ನೀರಿನ ಪೂರಕ ಪ್ರದೇಶಗಳಾಗಿರುತ್ತವೆ. ಇಂಥಹ ಪ್ರದೇಶದ ಮೇಲೆ ಬಿದ್ದ ಮಳೆ ನೀರು, ನೆಲದೊಳಗೆ ಜಿನುಗಿ ನೆಲದ ನೀರು / ಅಂತರ್ಜಲ (ಗ್ರೌಂಡ್ ವಾಟರ್) ವಾಗುತ್ತದೆ. ಈ ನೀರು ತಗ್ಗಾದ ಪ್ರದೇಶಗಳಿಗೆ, ಗುರುತ್ವಾಕರ್ಷಣೆಗೊಳಗಾಗಿ ನಿಧಾನ ಗತಿಯಲ್ಲಿ ಹರಿಯುತ್ತಿರುತ್ತದೆ. ಮೇಲೆ ಹೇಳಿರುವ "ಶಿವನ ಜಡೆ" "ಧಾರಾಭೀಷೇಕ" ಇದಕ್ಕೊಂದು ಉತ್ತಮ ಉದಾಹರಣೆಯಾಗಿದೆ. ಒಂದು ಘನ ಕಿಲೋ ಮೀಟರ್ ಪ್ರದೇಶವು ಎಷ್ಟು ಘನ ಮೀಟರ್ ನೀರನ್ನು ಹೀರಿ ಕೊಳ್ಳಬಹುದು ಎನ್ನುವ ಪ್ರಮಾಣವನ್ನು, ಶಿಲಾವಸ್ತುವಿನ ಪರೀಕ್ಷೆಯಿಂದ ನಿರ್ಧರಿಸ ಬಹುದು. ಈ ಪೂರಕ ಕ್ರಿಯೆಯು ಹೊರಗಿನ ಉಷ್ಣಾಂಶ, ಮಳೆಯ ಪ್ರಮಾಣ, ನೆಲದ ಲಕ್ಷಣಗಳನ್ನು ಅವಲಂಬಿಸಿರುತ್ತದೆ. ದಟ್ಟವಾಗಿ ಬೆಳೆದಿರುವ ಅರಣ್ಯ ಪ್ರದೇಶಗಳಲ್ಲಿ ಪೂರಕ ಕ್ರಿಯೆಯು ಹೆಚ್ಚಾಗಿರುತ್ತದೆ. ಕಣಿವೆಗಳು, ತಗ್ಗಿನ ಪ್ರದೇಶಗಳು ವಿಸರ್ಜಕ ಕ್ರಿಯೆಗೆ ಹೆಚ್ಚು ಅನುಕೂಲವಾಗಿರುತ್ತವೆ. ಪೂರಕ ಪ್ರದೇಶಗಳು ಹೆಚ್ಚು ವಿಸ್ತಾರವಾಗಿರುತ್ತವೆ. ವಿಸರ್ಜಕ ಪ್ರದೇಶಗಳು ಕಣಿವೆಗಳಿಗೆ ಸೀಮಿತವಾಗಿರುತ್ತವೆ. ಇಂತಹ ಪ್ರದೇಶಗಳಲ್ಲಿ "ಸದಾಕಾಲವೂ ಜಲಸಂವೃದ್ಧಿ" ಇರುತ್ತದೆ.

ಇನ್ನೊಂದು ಮುಖ್ಯಾಂಶವೆಂದರೆ ಮಳೆ ಬೀಳುತ್ತಿರುವಾಗ ಮತ್ತು ಮಳೆ ನಿಂತ ಒಡನೆಯೇ, ಮಾತ್ರಾ ಪೂರಕ ಕ್ರಿಯೆಗೆ ಅವಕಾಶವಿರುತ್ತದೆ. ಮಿಕ್ಕಂತೆ ಈ ಕಾರ್ಯವ್ಯಾಪ್ತಿ ಇರುವುದಿಲ್ಲ. ಆದರೆ ವಿಸರ್ಜಕ ಕ್ರಿಯೆ ಮಾತ್ರ ಸದಾಕಾಲವೂ ನಡೆಯತ್ತಲೇ ಇರುತ್ತದೆ. ಮಳೆ ನಿಂತು (ಮಳೆಗಾಲದ ನಂತರವೂ) ಹೋದ ಬಹುಕಾಲದ ನಂತರವೂ ನದಿಗಳಿಗೆ, ಹಳ್ಳಗಳಿಗೆ ನೀರನ್ನು ಒದಗಿಸಿ ಅವು ಹರಿಯುವಂತೆ ಮಾಡಲು ಮೇಲೆ ತಿಳಿಸಿರುವ ಈ ಪೂರಕ ಮತ್ತು ವಿಸರ್ಜಕ ಕ್ರಿಯೆ ಹಾಗೂ ಜಲ ನಿರೋಧ, ಜಲಜ ಶಿಲೆಗಳ ಪಾತ್ರವೇ ಮುಖ್ಯ ಕಾರಣವಾಗಿದ್ದು ಶಿರಸಿಯ ಪರಿಸರ ಇದಕ್ಕೊಂದು ಅತ್ಯುತ್ತಮ ಸಾಕ್ಷಿಯಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. (ಮೇಲಿನ ರೇಖಾ ಚಿತ್ರ ಗಳನ್ನು ನೋಡಿ). ಶಿಲೆಗಳಿಂದ ಜಿನುಗುವ ವಿಶಿಷ್ಟ ಪ್ರದೇಶಗಳು, ಜಲ ಹುಟ್ಟುವ ಸಮಯ, ಉಕ್ಕಿದ ಜಲಸಂಗ್ರಹಣೆಗೆ ಬೇಕಾಗುವಷ್ಟು ಕಟ್ಟಡಗಳು, ಅವುಗಳ ವಿಶೇಷ ವಿನ್ಯಾಸಗಳನ್ನು ನಮ್ಮ

ಪೂರ್ವಿಕರು ಅನೇಕ ಗ್ರಂಥಗಳಲ್ಲಿ ಬರೆದಿಟ್ಟಿದ್ದಾರೆ. ಅಲ್ಲದೇ ಅನೇಕ ಕಡೆ ಜಲಾಕರಗಳ ನಿರ್ಮಾಣವನ್ನು ವಿಶಿಷ್ಟ ರೀತಿಯಲ್ಲಿ ಕೈಗೊಂಡಿದ್ದ ಉದಾಹರಣೆಗಳು ನಮ್ಮಲ್ಲಿ ಸಾಕಷ್ಟಿವೆ. ಮೇಲೆ ತಿಳಿಸಿರುವುದು ಕೆಲವು ಉದಾಹರಣೆಗಳು ಮಾತ್ರ.

ಶಾಲ್ಮಲಿ ನದಿ ನೀರಿನ ವಿಶೇಷತೆ, ಗಂಗಾಷ್ಟಮಿ ಹಾಗೂ ಶ್ರೀ ವಾದಿರಾಜರು[4] ಇದನ್ನು ವಾದಿರಾಜರು (ಕ್ರಿ.ಶ.1480–1600) ತೀರ್ಥಪ್ರಬಂಧದಲ್ಲಿ ಉಲ್ಲೇಖಿಸಿದ್ದಾರೆ. ಶಾಲ್ಮೀಲಿ ನದಿಯು ಶಿರಸಿ ಬಳಿ ಲಿಂಗದಕೋಣ ಎನ್ನುವ ಸ್ಥಳದಲ್ಲಿ ಹುಟ್ಟುತ್ತದೆ. ಸೋದೆ ಹತ್ತಿರ ಹರಿಯತ್ತಾ ಬೇಡ್ತಿ ನದಿಯನ್ನು ಸೇರಿ ಗಂಗಾವಳಿ ಎನ್ನುವ ಹೆಸರನ್ನು ಪಡೆಯುತ್ತದೆ.

ಅನಂತರ ಅಂಕೋಲಾಕ್ಕೆ 8 ಕಿ.ಮೀ. ಉತ್ತರದಲ್ಲಿ ಗಂಗಾವಳಿ ಎಂಬಲ್ಲಿ ಅರಬ್ಬೀ ಸಮುದ್ರ ಸೇರುತ್ತದೆ. ಈ ಕೂಡುಸ್ಥಾನದಲ್ಲಿ (confluence point) ಗಂಗಾದೇವಿಯ ದೇವಸ್ಥಾನ ಇದ್ದು ಗಂಗಾಷ್ಟಮಿ ದಿನ ವಿಶೇಷ ಪೂಜೆ ನಡೆಯುತ್ತದೆ. ಸಂಗಮ ಸ್ಥಾನದಲ್ಲಿ ಸಮುದ್ರ ಜಲದೊಂದಿಗೆ ಸಂಪರ್ಕ ಹೊಂದುವುದರಿಂದ ಶಾಲ್ಮಲಿ ನದಿಯ ನೀರು ಉಪ್ಪಾಗುತ್ತದೆ. ಹೀಗಾಗಿ ಅದು ಸ್ನಾನಪಾನಾದಿಗಳಿಗೆ ಉಪಯೋಗವಾಗುವುದಿಲ್ಲ. ಗಂಗಾಷ್ಟಮಿಯ ದಿನದಂದು, ಗಂಗಾದೇವಿಯ ಆಗಮನದಿಂದ ಬಳಕೆಗೆ ಯೋಗ್ಯವಾಗುವುದರಿಂದ ನೀರನ್ನು ಕುಡಿಯಲು ಸ್ನಾನ, ಬಟ್ಟೆ ಒಗೆಯುವುದು ಇತ್ಯಾದಿಗಳಿಗೆ ಉಪಯೋಗಿಸುತ್ತಾರೆ. ಇದರಿಂದ ನೀರಿನ ಗುಣಮಟ್ಟದಲ್ಲಿ ವ್ಯತ್ಯಾಸವಾಗುತ್ತದೆ ಎನ್ನುವ ವೈಜ್ಞಾನಿಕ ಅಂಶವನ್ನು 500 ವರ್ಷಗಳಷ್ಟು ಹಿಂದೆಯೇ ವಾದಿರಾಜರು ಗಮನಿಸಿದ್ದರು ಎನ್ನುವುದು ಬೆಳಕಿಗೆ ಬರುತ್ತದೆ.

ಉಪ್ಪು ನೀರಿನಲ್ಲಿ ಕರಗಿದ ಲವಣಾಂಶದ ಸಂಖ್ಯೆ 30,000 ಪಿ.ಪಿ.ಎಂ. (ಪಾರ್ಟ್ಸ್ ಪರ್ ಮಿಲಿಯನ್) ಇರುತ್ತದೆ. ಇಂತಹ ನೀರು ಮನುಷ್ಯನ ದೇಹಕ್ಕೆ ಹಾನಿಯನ್ನುಂಟು ಮಾಡುತ್ತದೆ. ಆದ್ದರಿಂದ ಆ ದಿನ ಬಿಟ್ಟು ಉಳಿದ ದಿವಸಗಳಲ್ಲಿ ಸಮುದ್ರ ನೀರಿಗೂ ಮತ್ತು ನದಿಯ ನೀರಿಗೂ ಇರುವ ವ್ಯತ್ಯಾಸವನ್ನು ಅಷ್ಟು ಹಿಂದೆಯೇ ಕಂಡುಕೊಂಡಿರುವುದು ಮುಖ್ಯವೆನಿಸುತ್ತದೆ. ಇನ್ನು ಗಂಗೆ ಬರುವುದು ಎಂದರೆ, ಹೆಚ್ಚಾದ ನೀರು ಇರುವುದು ಎಂದರ್ಥ. ಸಮುದ್ರದ ಲವಣಗಳ ನೀರಿನ ಪ್ರಮಾಣ ಹೆಚ್ಚಾದ ನೀರಿನೊಂದಿಗೆ ಬೆರೆತಾಗ ಅದರಲ್ಲಿ ಕರಗಿದ ಲವಣಾಂಶಗಳ ಸಾಂದ್ರತೆ ಕಡಿಮೆಯಾಗುತ್ತದೆ. ಹೀಗಾಗಿ ನೀರು ಬಳಕೆಗೆ ಯೋಗ್ಯವಾಗುತ್ತದೆ. ಆದರೆ ಶ್ಲೋಕದಲ್ಲಿ ಸಾಂದ್ರತೆಯು ಎಷ್ಟು ಕಡಿಮೆಯಾಗುತ್ತದೆ ಎನ್ನುವ ಬಗೆಗೆ ಹೇಳುವುದಿಲ್ಲ. ಹೀಗಿದ್ದರೂ ಇಂಥದೊಂದು ಘಟನೆ ಜರುಗುತ್ತದೆ ಎಂಬ ಅಂಶವನ್ನು ದಾಖಲಿಸಿದೆ. ಇದನ್ನು ಆಧರಿಸಿ, ಗಂಗಾವಳಿಯ ನೀರನ್ನು ಗಂಗಾಷ್ಟಮಿಯ ದಿವಸ ರಸಾಯನಿಕ ಪರೀಕ್ಷೆಗೆ ಒಳಪಡಿಸಿದಾಗ ಮಾತ್ರ ಈ ಸೂಕ್ಷ್ಮವೀಕ್ಷಣೆಗೆ ಹೆಚ್ಚಿನ ವಿಮರ್ಶೆಗೆ ಅವಕಾಶವಾಗುತ್ತದೆ.

ಭರ್ತುರಗ್ರೇ ಸ್ವಲಾವಣ್ಯ ವಿಸ್ತೃತೇರವಿವೇಕಿನೀಮ್ ।
ಸ್ವ ಸೇವಿತಾಂ ಸಖೀಮೇತಾಂ ಸರ್ವಸೇವ್ಯಾಂ ಕರೋತಿಸಾ ॥

ಅನುವಾದ :

ಸ್ವಾಮಿಯಾದ ಸಮುದ್ರರಾಜನ ಎದುರಿನಲ್ಲಿ ತನ್ನ ಲಾವಣ್ಯದ (ಸೌಂದರ್ಯ ಮತ್ತು ಸಮುದ್ರವನ್ನು ಸೇರಿದ್ದರಿಂದ ಉಂಟಾದ ಲವಣದ ಎಂದು ಅರ್ಥ. ಲಾವಣ್ಯ ಮತ್ತು ಅವಿವೇಕಿನೀ – ಎಂಬಲ್ಲಿ ಶ್ಲೇಷಾಲಂಕಾರವಿದೆ.) ವಿಸ್ತಾರದಿಂದಾಗಿ ವಿವೇಕರಹಿತಳಾಗಿ (ಇದು ನದಿಜಲವೇ ಅಥವಾ ಸಮುದ್ರಜಲವೇ ಎಂದು ಗುರುತಿಸಲು ಅಸಾಧ್ಯವಾದ) ತನ್ನವರಿಂದ ಸೇವಿಸಲ್ಪಡದೇ ಇರುವ, ತನ್ನ ಸಖಿಯಾದ ಆ ನದಿಯನ್ನು ಭಾಗೀರಥಿಯು (ತನ್ನ ಸನ್ನಿಧಾನವಿರುವ ಆ ಒಂದು ದಿನದ ಮಟ್ಟಿಗೆ) ಸರ್ವರಿಂದಲೂ ಸ್ನಾನಪಾನಾದಿಗಳ ಸೇವನೆಗೆ ಅರ್ಹಳನ್ನಾಗಿ ಮಾಡುತ್ತಾಳೆ.[5]

ವಾದಿರಾಜರು ತೀರ್ಥಪ್ರಬಂಧವನ್ನು ಭಾರತದ ನದಿ, ಕೆರೆ, ತೀರ್ಥ ಇತ್ಯಾದಿಗಳನ್ನು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಎಂದು ನಾಲ್ಕು ವಿಭಾಗಗಳಾಗಿ ವಿಂಗಡಿಸಿ ತಾವು ಕಂಡ ಪ್ರತಿಯೊಂದು ಕ್ಷೇತ್ರದ ಮಹತ್ವವನ್ನೂ ಮೇಲೆ ಹೇಳಿದ ರೀತಿಯಲ್ಲಿ ಬರೆದಿಟ್ಟಿದ್ದಾರೆ. ಎರಡನೆಯದಾಗಿ ಅವರ ಬೃಂದಾವನವಿರುವ ಸೋದೆಯ ಸುತ್ತಮುತ್ತ ಅನೇಕ ಪುಷ್ಕರಣಿಗಳನ್ನೂ ವಿಜಯನಗರದ ವಿಶಿಷ್ಟ ಶೈಲಿಯ ದೇವಾಲಯಗಳನ್ನೂ ನಿರ್ಮಿಸಿದ್ದಾರೆ. ಇವುಗಳಲ್ಲಿ ಪಂಚಸರೋವರಗಳಾದ ಧವಲಗಂಗಾ,

ಅಮೃತಗಂಗಾ, ಶೀತಲಗಂಗಾ, ಅಂತರಗಂಗಾ, ಪಾತಾಳಗಂಗಾ, ಹಯಗ್ರೀವ ಸರೋವರಗಳು, ತಟಾಕ ವಾಸ್ತುವಿನ ಒಳ್ಳೆಯ ನಿದರ್ಶನಗಳು.[6]

ಗೋಲ್ ಬಾವಿ (ಬೀಳಗಿ)

ಈ ಬಾವಿಯು ಕ್ರಿ.ಶ.16–17ನೇ ಶತಮಾನದಲ್ಲಿ ಕಟ್ಟಲಾಗಿದ್ದು, ಸಿದ್ಧಾಪುರದ ಹತ್ತಿರ ಬೀಳಗಿ ಎಂಬ ಸ್ಥಳದಲ್ಲಿದೆ. ಅರಮನೆಯ ಆವರಣದಲ್ಲಿರುವ ಇದನ್ನು ಜನರು ಗೋಲ್ ಬಾವಿ ಎಂದು ಕರೆಯುತ್ತಾರೆ. ಆದರೆ ಇದು ಇರುವುದು ಚೌಕಾಕಾರವಾಗಿ! ಜಂಬಿಟ್ಟಿಗೆ ಕಲ್ಲು ಮತ್ತು ಗಾರೆಗಳನ್ನು ಉಪಯೋಗಿಸಿ ಬಾವಿಯನ್ನು ಕಟ್ಟಿರುತ್ತಾರೆ. ಪೂರ್ವದಿಕ್ಕಿನಿಂದ ಪ್ರವೇಶದ್ವಾರವು ಇದ್ದು, ಮೂರು ಹಂತದಲ್ಲಿ ಮೆಟ್ಟಿಲುಗಳಿವೆ. ಮೊದಲನೆಯ ದ್ವಾರದಲ್ಲಿ 1.20 ಮೀಟರ್ ಉದ್ದವಿರುವ ಮೆಟ್ಟಿಲುಗಳಿವೆ. ಈ ಭಾಗವೂ ತೆರೆದ ಭಾಗವಾಗಿದೆ. ನಂತರ ಎಡಭಾಗಕ್ಕೆ ತಿರುಗಿದರೆ ಒಂದು ಕೋಣೆಯಿದೆ. ಈ ಕೋಣೆಯು ಮಾಳಿಗೆಯಿಂದ ಕೂಡಿದ್ದು, ಇದರ ಮೇಲ್ಛಾವಣಿಯಲ್ಲಿ ಸುಂದರವಾದ ಕಲ್ಲಿನ ಕಮಾನುಗಳ ಅಲಂಕರಣವಿದೆ. ಪಶ್ಚಿಮ ದಿಕ್ಕಿನ ದ್ವಾರವು 0.90 ಮೀ. ಅಗಲ ಮತ್ತು 3.69 ಮೀ. ಎತ್ತರವಿದೆ. ಬಾವಿಯು 4.68 ಮೀ. ಅಳತೆಯ ಚೌಕ ಆಕಾರದಲ್ಲಿದೆ. ಇದರ ಸುತ್ತಲೂ ನಾಲ್ಕು ದಿಕ್ಕುಗಳಲ್ಲಿ ಪಡಸಾಲೆಗಳಿವೆ. ಪಡಸಾಲೆ ಮತ್ತು ಬಾವಿಗೆ ತೆರೆದುಕೊಂಡಂತೆ ನಾಲ್ಕು ದಿಕ್ಕಿನಲ್ಲಿಯೂ 2 ಮೀ. ಎತ್ತರ ಹಾಗೂ 2.21 ಮೀಟರ್ ಅಗಲದ ಒಂದೊಂದು ಕಮಾನು ಕಿಟಕಿಗಳಿವೆ. ಮೇಲ್ಛಾವಣಿ 4.90 ಎತ್ತರದಲ್ಲಿದ್ದು ಇದನ್ನು ಕಮಾನಿನ ತಂತ್ರಜ್ಞಾನದಲ್ಲಿ ಕಟ್ಟಿದ್ದಾರೆ.

ಸಮಾನಾಂತರದಲ್ಲಿ ಇರುವಂತಹ ತೊಲೆಗಳನ್ನು ಕಮಾನಿನ ಆಕಾರದಲ್ಲಿ ಯೋಜಿಸಲಾಗಿದೆ. ಪಡಸಾಲೆಯ ಗೋಡೆಗಳ ನಾಲ್ಕು ಭಾಗಗಳಲ್ಲಿಯೂ 1.62 ಮೀ. ಅಗಲ 1.82 ಮೀ ಎತ್ತರದ ಎರಡೆರಡು ಸಾದಾ ಕಮಾನಿನ ಗೂಡುಗಳಿವೆ, (ಃಟುಟಿಜ ಓಡಿಛಿ) ಉತ್ತರ ಮತ್ತು ಪಶ್ಚಿಮ ದಿಕ್ಕಿನಲ್ಲಿರುವ ಗೋಡೆಗಳಲ್ಲಿಯ ಗೂಡುಗಳ ಮಧ್ಯದಲ್ಲಿ 68 ಸೆಂ.ಮೀ. ಅಗಲ ಮತ್ತು 1.80 ಮೀ. ಎತ್ತರದ ತರಂಗ ಕಮಾನುಗಳ ಗೂಡುಗಳಿವೆ.

ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿ ಬಾಗಿಲುಗಳಿವೆ. ಪೂರ್ವದ ಬಾಗಿಲು ಪ್ರವೇಶದ್ವಾರವಾದರೆ, ದಕ್ಷಿಣ ಭಾಗದ ಪಡಸಾಲೆಯ ಎರಡು ಸಾದಾ ಕಮಾನಿನ ಗೂಡುಗಳಿವೆ. ಮಧ್ಯದಲ್ಲಿ ಇರುವ ತರಂಗ ಕಮಾನಿನ ದ್ವಾರದ ಮೂಲಕ 1.69 ಮೀ. ಉದ್ದದ ಕೋಣೆಗೆ ಪ್ರವೇಶಿಸಬಹುದು. ಈ ಕೋಣೆಯಲ್ಲಿ ಛಾವಣಿಯ ಎತ್ತರ 3 ಮೀ.ಗಳಾಗಿವೆ. ಕೋಣೆಯ ದಕ್ಷಿಣ ಭಾಗದ ಗೋಡೆಯಲ್ಲಿ 2.35 ಮೀ. ಎತ್ತರದ ಒಂದು ಸಾದಾ ಕಮಾನಿನ ಗೂಡು ಇದೆ.

ಈ ಕೋಣೆಯ ಪಶ್ಚಿಮ ಭಾಗದಲ್ಲಿ ಇದಕ್ಕೆ ಹೊಂದಿಕೊಂಡಂತೆ 1.22 ಮೀ. ಎತ್ತರ ಮತ್ತು 66 ಸೆ.ಮೀ. ಅಗಲದ ಕಮಾನು ದ್ವಾರವುಳ್ಳ ಒಂದು ಆಯತಾಕಾರದ ಕೋಣೆ ಇದೆ. ಇದರ ಉದ್ದ 1.04 ಮೀ. ಮತ್ತು ಅಗಲ 83 ಸೆಂ.ಗಳು. ಇಲ್ಲಿಯ ಮೇಲ್ಛಾವಣಿಯನ್ನು ಕಮಾನಿನ ತಂತ್ರಜ್ಞಾನದಲ್ಲಿ ನಿರ್ಮಿಸಿದ್ದಾರೆ. ಪಡಸಾಲೆಗಳ ಮಧ್ಯದಲ್ಲಿ ಬಾವಿಗೆ ತೆರೆದುಕೊಂಡಂತೆ ಇರುವ ಕಮಾನು ಕಿಟಕಿಗಳ ಮೇಲ್ಭಾಗದಲ್ಲಿ ಬಾವಿಯ ಅಂಕಣದವರೆಗೂ ಪ್ರಸ್ಥಾರದ (ಇಟಣಚಿಛಟಚಿಣಡಿಜ) ಅಲಂಕರಣವನ್ನು ಹಲವು ಸಮಾನಾಂತರ ದಿಂಡುಗಳ ಪಟ್ಟಿಗಳಿಂದ ನಿರ್ಮಿಸಿದ್ದಾರೆ.

ಬನವಾಸಿಯ ನೀರ್ದಾಣಗಳು

ಶಿರಸಿ ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಕದಂಬರ ರಾಜಧಾನಿ ನಬನವಾಸಿ. ಕಸಬೆಯಿಂದ ಆಗ್ನೇಯಕ್ಕೆ, ಸುಮಾರು 22 ಕಿ.ಮೀ.ದೂರದಲ್ಲಿ ವರದಾನದಿಯ ಎಡದಂಡೆಯ ಮೇಲೆ ಇದೆ. ಕನ್ನಡನಾಡಿನ ರಾಜಕೀಯ, ಇತಿಹಾಸ, ಸಂಸ್ಕೃತಿಗಳ ದೃಷ್ಟಿಯಿಂದ ಬನವಾಸಿಯು" ಕರ್ನಾಟಕದ ಮೊದಲ ದೊರೆಗಳ ರಾಜಧಾನಿ". ಪೌರಾಣಿಕಯುಗದಲ್ಲಿ ಇದನ್ನು ವೈಜಯಂತಿ ಎಂದು ಕರೆಯಲಾಗಿದೆ. ಶಾತವಾಹನರ ಸಾಮಂತರಾಗಿದ್ದ ವಿಣ್ಹುಕಡಚುಟುಕುಲಾನಂದ ಸಾತಕರ್ಣಿಯ 12ನೆಯ ವರ್ಷದ ಆಡಳಿತ ಕಾಲದಲ್ಲಿ, ಆತನ ಮಗಳು ಶಿವಸ್ಕಂಧನಾಗಶ್ರೀಯು, ನಾಗಪ್ರತಿಷ್ಠೆಯ ಮಾಡಿಸುವಾಗ, ಒಂದು ಕೆರೆ ಕಟ್ಟಿಸಿ, ಬೌದ್ಧ ವಿಹಾರ ಒಂದನ್ನು ನಿರ್ಮಿಸಿದಳೆಂದು, ಬನವಾಸಿಯ ಮಧುಕೇಶ್ವರ ದೇವಸ್ಥಾನದ ಆವರಣದಲ್ಲಿರುವ ಶಾಸನದಿಂದ ತಿಳಿದು

ಬರುತ್ತದೆ. ಶಾತವಾಹನರ ಕಾಲ ಕ್ರಿ.ಶ. 1–2ನೇ ಶತಮಾನದಲ್ಲಿ ನಿರ್ಮಿಸಲಾಗಿದ್ದ ಕೋಟೆಯ ಸುತ್ತ ಆಳವಾದ ಕಂದಕವಿದೆ. ಪಕ್ಕದಲ್ಲಿಯೇ ಹರಿಯುವ ವರದಾ ನದಿಯಿಂದ ಅಗೆದ ಕಾಲುವೆಗಳಿಂದ ಕಂದಕಕ್ಕೆ ನೈಸರ್ಗಿಕವಾಗಿ ಹರಿಯುವನೀರನ್ನು ಹಾಯಿಸಿ, ಕೋಟೆ ಸಂರಕ್ಷಣೆಗೆಂದು ಬಳಸಿದ್ದ ಜಲ ತಂತ್ರಜ್ಞಾನದ ಕುರುಹುಗಳು ಈಗಲೂ ಕಂಡು ಬರುತ್ತವೆ. ಈಗಿನ ಮಧುಕೇಶ್ವರ ದೇವಸ್ಥಾನದಿಂದ 1 ಕಿ.ಮೀ. ದೂರದಲ್ಲಿ ಆದಿ ಮಧುಕೇಶ್ವರ ದೇವಸ್ಥಾನದ ಬಳಿ ಇರುವ ವಿಶಿಷ್ಟ ತೀರ್ಥವು ವಿಜಯನಗರ ಕಾಲದ ನಿರ್ಮಾಣವಾಗಿದೆ.

ಗೋಕರ್ಣದ ತೀರ್ಥಗಳು

ಸ್ಕಂದ ಪುರಾಣಾಂತರ್ಗತ ಗೋಕರ್ಣ ಖಂಡ ಹೇಳುವಂತೆ ಗೋಕರ್ಣದಲ್ಲಿ ಅನೇಕ ತೀರ್ಥಗಳು ಅನೇಕ ಲಿಂಗಗಳೂ ಪ್ರಸಿದ್ಧವಾಗಿವೆ. ಅವುಗಳಲ್ಲಿ 33 ಪ್ರಧಾನ ಲಿಂಗಗಳು, 33 ತೀರ್ಥಗಳು ಇವೆ.

ಗೋಕರ್ಣ ತೀರ್ಥ : ಗೋಕರ್ಣ ತೀರ್ಥವು ಗೋಕರ್ಣೇಶ್ವರ ದೇವರ ಗರ್ಭ ಗುಡಿಯಲ್ಲಿದೆ. ದತ್ತ ಚರಿತ್ರೆ ಎನ್ನುವ ಗ್ರಂಥದಲ್ಲಿ ಬರುವ ಶ್ರೀ ನರಸಿಂಹ ಸರಸ್ವತಿಗಳು ತಪಸ್ಸು ಮಾಡಿದ ಜಾಗವೆಂದು ಇಂದಿಗೂ ಗುಡಿಯ ಒಂದು ಭಾಗವನ್ನು ತೋರಿಸಲಾಗುತ್ತದೆ. ಅವರು ವಿಶೇಷವಾಗಿ ಇಲ್ಲಿಯ ತೀರ್ಥಗಳ ವರ್ಣನೆ ಮತ್ತು ಮಹತ್ವಗಳನ್ನು ದತ್ತ ಚರಿತ್ರೆ ಗ್ರಂಥದಲ್ಲಿ ವಿವರಿಸಿರುವುದಾಗಿ ತಿಳಿದು ಬರುತ್ತದೆ.

ಗೋಕರ್ಣದ ಬೀಚ್

ಧಾರ್ಮಿಕತೆ, ಆಧುನೀಕತೆ, ಸೌಂದರ್ಯ, ಮೂರೂ ಕೂಡಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ಅಪಾರ ಪ್ರಮಾಣದ ವಿದೇಶಿಗರನ್ನು ಸೆಳೆಯುತ್ತಿರುವ ಕ್ಷೇತ್ರ ಎನ್ನಬಹುದು. ಇಲ್ಲಿಗೆ ಬ್ರಿಟನ್, ಫ್ರಾನ್ಸ್, ಇಟಲಿ, ಸ್ಪೇನ್, ಜರ್ಮನಿ, ಇಸ್ರೇಲ್ ಮತ್ತು ರಷ್ಯಾ ಪ್ರಜೆಗಳು ಬರುವುದು ಮಾಮೂಲು. ಗೋಕರ್ಣದ ಬೀಚ್‌ಗಳಿಗೆ ವಿದೇಶಿಗರು ಬರುವುದು ಮೋಜು, ಮಸ್ತಿ ಮಾಡಲು, ಮಾದಕ ದ್ರವ್ಯ ಸೇವಿಸಲು ಎಂಬ ದೂರು ಬಹುತೇಕ ಇದೆ. ಆದರೆ ಅದಕ್ಕೆ ವಿರುದ್ಧವಾಗಿ ಅವರು ಮಾಡುತ್ತಿರುವ ಕೆಲಸಗಳು ಕುತೂಹಲ ಮೂಡಿಸುತ್ತವೆ. ಇಲ್ಲಿಯ ಜನರೊಂದಿಗೆ ಬೆರೆತು ಸ್ಥಳೀಯ ಉಡುಗೆ ತೊಡುಗೆ ರೂಢಿಸಿಕೊಂಡ ವಿದೇಶಿಗರ ದೊಡ್ಡ ದಂಡೇ ಇಲ್ಲಿದೆ. ರಾಮತೀರ್ಥದ ನೀರಿನಲ್ಲಿ ಸ್ನಾನ ಮಾಡಿ ಯೋಗ, ಧ್ಯಾನ ಮಾಡುವುದನ್ನು ಹೆಚ್ಚಿನ ವಿದೇಶಿಗರು ನಿತ್ಯದ ಕಾಯಕವಾಗಿಸಿಕೊಂಡಿದ್ದಾರೆ.

ಶಂಕರ ಪ್ರಸಾದ ಫೌಂಡೇಶನ್

ಇಲ್ಲಿಯ ಕುಡ್ಲೆ ಕಡಲ ತೀರದ ಪಾದಚಾರಿ ಮಾರ್ಗಗಳಲ್ಲಿ ವಿದೇಶಿಯರೇ ಚಿಕ್ಕಚಿಕ್ಕ ಮಳಿಗೆ ಇಟ್ಟುಕೊಂಡಿದ್ದಾರೆ. ತೆಂಗಿನ ಕರಟದಿಂದ ಮಾಡಿದ ಕರಕುಶಲ ಸಾಮಗ್ರಿಗಳು, ಕಪ್ಪೆಚಿಪ್ಪಿನಿಂದ ತಯಾರಾದ ವಸ್ತುಗಳು, ವಿವಿಧ ಮಣಿಗಳ ಆಭರಣ, ವಿದೇಶಿ ತಿಂಡಿ ತಿನಿಸುಗಳು, ವಿವಿಧ ಸಂಗೀತ ವಾದನಗಳನ್ನು ಅವರು ಮಾರಾಟ ಮಾಡುತ್ತಿದ್ದಾರೆ. ಕೆಲವೊಮ್ಮೆ ಇಲ್ಲಿಯೇ ನೃತ್ಯ, ಸಂಗೀತ ಪ್ರದರ್ಶನವೂ ನಡೆಯುತ್ತದೆ. ಅನೇಕ ಸಲ ಯೋಗ ಪ್ರದರ್ಶನ, ಸರ್ಕಸ್‌ಗಳನ್ನೂ ಮಾಡುತ್ತಾರೆ.

ಸೂರ್ಯನಿಗೆ ಅರ್ಘ್ಯ – ಯೋಗ

ಸೂರ್ಯೋದಯವಾದ ಮೇಲೆ ಸಮುದ್ರದಲ್ಲಿ ಸ್ನಾನ ಮಾಡಿ, ಸೂರ್ಯನಿಗೆ ಅರ್ಘ್ಯ ಪ್ರಧಾನ ಮಾಡಿ ಯೋಗ, ಧ್ಯಾನ ಪೂರ್ತಿಗೊಳಿಸಿದ ನಂತರವೇ ತಮ್ಮ ಇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು. ತಾವು ಕಲಿತ ಯೋಗ, ಧ್ಯಾನವನ್ನು ಯಾವುದೇ ಫಲಾಪೇಕ್ಷೆಯಿಲ್ಲದೇ ಇತರರಿಗೆ ಧಾರೆ ಎರೆಯುತ್ತಿದ್ದಾರೆ. ಗೋಕರ್ಣದ ಧಾರ್ಮಿಕತೆ, ಸಂಸ್ಕೃತಿಯನ್ನು ವಿದೇಶದಲ್ಲೂ ಪಸರಿಸಲು ಪ್ರಯತ್ನಿಸುತ್ತಿದ್ದಾರೆ.[6]

ಕಾಳಿ ಜಲವಿದ್ಯುತ್ ಯೋಜನೆ

ಕಾಳಿನದಿ ಯೋಜನೆ 1971ರಲ್ಲಿ ಆರಂಭವಾಯಿತು. ಮೂರು ಹಂತಗಳಲ್ಲಿ ಈ ಕಾರ್ಯವನ್ನು ಪೂರೈಸ ಬೇಕೆಂದು ಯೋಚಿಸಲಾಗಿತ್ತು. ಮೊದಲನೇ ಹಂತದ ಮುಖ್ಯ ವಿದ್ಯುದಾಗಾರದ ಹೆಸರು ನಾಗಝರಿ. ಇಲ್ಲಿ 135 ಮೆಗಾವ್ಯಾಟ್ ಸಾಮರ್ಥ್ಯದ ಆರು ಘಟಕಗಳು ಕೆಲಸ ಮಾಡುತ್ತಿವೆ. ಒಟ್ಟು ಸಾಮರ್ಥ್ಯ 810 ಮೆಗಾವ್ಯಾಟ್‌ಗಳು. ಇತ್ತೀಚೆಗೆ ಈ ಘಟಕಗಳ ಸಾಮರ್ಥ್ಯವನ್ನು ಇನ್ನೂ 150 ಮೆಗಾವ್ಯಾಟ್ ಗಳಷ್ಟು ಏರಿಸಲಾಗಿದೆ. ಸೂಪಾ ತಾಲ್ಲೂಕಿನಲ್ಲಿ ಸೂಪಾ ಅಣೆಕಟ್ಟನ್ನು ಕಾಳೀ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ. ಅಣೆಕಟ್ಟಿನ ಬಳಿ 50 ಮೆಗಾವ್ಯಾಟ್ ಸಾಮರ್ಥ್ಯದ ಎರಡು ಘಟಕಗಳನ್ನು ಸ್ಥಾಪಿಸಲಾಗಿದೆ. ಕಾಳೀ ನದಿ ಮೊದಲ ಹಂತದ ವಿದ್ಯುಚ್ಛಕ್ತಿ ಉತ್ಪಾದನೆ ವರ್ಷಕ್ಕೆ 4112 ದಶಲಕ್ಷ ಯೂನಿಟ್ ಗಲಷ್ಟು ಇತ್ತು. ಕಾಳಿನದಿ ಎರಡನೆಯ ಹಂತದ ಕೆಲಸವೂ ಮುಗಿದಿದ್ದು, ಈ ಹಂತ ದಲ್ಲಿಯೇ ಕೊಡಸಳ್ಳಿ ಮತ್ತು ಕದ್ರಾ ವಿದ್ಯುದಾಗಾರಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು ವಿದ್ಯುತ್ ಸಾಮರ್ಥ್ಯ 300 ಮೆಗಾ ವ್ಯಾಟ್ ಗಳು. ವರ್ಷಕ್ಕೆ 110 ದಶಲಕ್ಷ ಯೂನಿಟ್ ವಿದ್ಯುತ್ತಿನಗಳಿಕೆ ಇರುವ ಮೊದಲ ಹಂತ ಪೂರೈಸಿದೆ.

ಉತ್ತರ ಕನ್ನಡ ಜಿಲ್ಲೆಯ ಜಲ ವಿದ್ಯುತ್ತ್ ಯೋಜನೆಗಳು ಮತ್ತು ಅವುಗಳಿಂದ ಉತ್ಪತ್ತಿಯಾಗುತ್ತಿರುವ ವಿದ್ಯುತ್‌ಚ್ಛಕ್ತಿ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಜಲಾನಯನ	ಪವರ್ ಹೌಸ್ ಸ್ಥಿತಿ	ಒಟ್ಟು ಸ್ಥಾಪಿತ ಸಾಮರ್ಥ್ಯ ಮೆ.ವ್ಯಾ
1	ಕದ್ರಾ ಪವರ್ ಹೌಸ್	ತಾಪಿಯಿಂದ ಪಶ್ಚಿಕ್ಕೆ ಹರಿಯುವ ನದಿಗಳು	ಕಾರ್ಯ ನಿರ್ವಹಿಸುತ್ತಿದೆ	55
2	ಕಾಳಿನದಿ–ನಾಗಝರಿ ಪವರ್ ಹೌಸ್	ತಾಪಿಯಿಂದ ಪಶ್ಚಿಕ್ಕೆ ಹರಿಯುವ ನದಿಗಳು	ಕ ಾ ಂ ು ੵ ು ್ ನಿರ್ವಹಿಸುತ್ತಿದೆ	855
3	ಕೊಡಸಾಲಿಪವರ್ ಹೌಸ್	ತಾಪಿಯಿಂದ ಪಶ್ಚಿಕ್ಕೆ ಹರಿಯುವ ನದಿಗಳು	ಕಾರ್ಯ ನಿರ್ವಹಿಸುತ್ತಿದೆ	120

ಕೈಗಾ ಪರಮಾಣು ವಿದ್ಯುತ್ ಕೇಂದ್ರ

ಉತ್ತರ ಕನ್ನಡದ ಕಾರವಾರ ಜಿಲ್ಲೆಯ ಕೈಗಾ ಎಂಬಲ್ಲಿ ಭಾರತ ಸರ್ಕಾರದ ನ್ಯೂಕ್ಲಿಯರ್ ಪವರ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಎನ್‌ಪಿಸಿಐಎಲ್) ನಿಂದ ಪರಮಾಣು ವಿದ್ಯುತ್ ಕೇಂದ್ರ ಸ್ಥಾಪಿಸಲಾಗಿದೆ. ಇಲ್ಲಿ 220 ಮೆಗಾವ್ಯಾಟ್ ಎರಡು ಘಟಕಗಳು ಸ್ಥಾಪನೆಯಾಗಿ ಕಾರ್ಯ ಪ್ರವೃತ್ತವಾಗಿವೆ. ಪರಮಾಣುವಿನ ವಿದಳದಿಂದ ಉತ್ಪತ್ತಿಯಾಗುವ ಶಾಖವನ್ನು ವಿದ್ಯುತ್‌ಚ್ಛಕ್ತಿಯನ್ನಾಗಿ ಮಾರ್ಪಡಿಸುವುದು ಇದರ ಮುಖ್ಯ ಉದ್ದೇಶ. ಯುರೇನಿಯಂ, ಥೋರಿಯಂ, ರೇಡಿಯಂ, ಮತ್ತು ಲಿಥಿಯಂ ಎನ್ನುವ ಅಪರೂಪದ ಖನಿಜ (ಖಚಿಡಿಜ ಜಚಿಡಿಣ಍ ಟಚಿಣಜಡುಚಿಟ) ಗಳ ಅಣು ವಿದಳನದಿಂದ ವಿದ್ಯುತ್ತನ್ನು ಈ ವಿಧಾನದಿಂದ ಪಡೆಯಲಾಗುತ್ತದೆ. 2000ನೇ ಇಸವಿಯಲ್ಲಿ ಎರಡನೆಯ ಘಟಕವು ಉತ್ಪಾದನೆಯನ್ನು ಆರಂಭಿಸಿತು. ಇದರಲ್ಲಿ ನಾಲ್ಕು ಘಟಕಗಳಿವೆ. 880 ಮೆಗಾವ್ಯಾಟ್ ಸಾಮರ್ಥ್ಯ ವಿದ್ಯುತ್ ಉತ್ಪಾದಿಸುತ್ತದೆ. ಇಲ್ಲಿ ಇನ್ನೂ ಎರಡು ಯೋಜಿತ ಘಟಕಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು. ಇವು 2024–25ರಲ್ಲಿ ಕಾರ್ಯಾರಂಭಗೊಳ್ಳಲಿವೆ.[7]

ಪರಮಾಣು ವಿದ್ಯುತ್ತಿಗೆ ವಿರೋಧ

ಪಶ್ಚಿಮಘಟ್ಟದಲ್ಲಿ ಸಾಧ್ಯವೇ ಇಲ್ಲ: ಭಾರತ ದೇಶದಲ್ಲಿ ಶೇ.2.5 ರಷ್ಟು ಮಾತ್ರ ಪಶ್ಚಿಮಘಟ್ಟ ಪ್ರದೇಶವಿದೆ. ಅಣು ವಿದ್ಯುತ್ ಸ್ಥಾವರ ನಿರ್ಮಾಕ್ಕೆ ಈ ಸೂಕ್ಷ್ಮ ಪರಿಸರ ವಲಯ ಪ್ರದೇಶವೇ ಯಾಕೆ ಬೇಕು? ದೇಶದ ನೀರು, ಆಹಾರ ಸುಭದ್ರೆಯ ದೃಷ್ಟಿಯಿಂದ ಅಣು ರಿಯಾಕ್ಟರ್ ಗಳ ವಿಸ್ತರಣೆ ಸಾಧ್ಯವೇ ಇಲ್ಲ ಎಂಬುದು ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ

ಡಾ.ಟಿ.ವಿ.ರಾಮಚಂದ್ರ ಅವರ ವಾದ. ಜ್ಞಾನ ಪೀಠ ಪ್ರಶಸ್ತಿ ವಿಜೇತರಾಗಿದ್ದು ಕಡಲತೀರದ ಭಾರ್ಗವ ಎಂದು ಹೆಸರಾಗಿದ್ದ ಡಾ. ಶಿವರಾಮಕಾರಂತರ ಕೈಗಾ ಪರಮಾಣು ವಿದ್ಯುತ್ ಕೇಂದ್ರದ ಸ್ಥಾಪನೆಯ ವಿರುದ್ಧ ಅದರಿಂದ ಆಗುವ ಕಾಡಿನ ನಷ್ಟ, ಪರಿಸರ ಮಾಲಿನ್ಯದ ಬಗೆಗೆ ಜನಾಂದೋಳವನ್ನೇ 70 ದಶಕದಲ್ಲಿ ನಡೆಸಿದ್ದರು. ಅವರು ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂ ಕೋರ್ಟ್‌ಗೂ ಹೋಗಿದ್ದುದು ಈಗ ಇತಿಹಾಸವಾಗಿದೆ.

ಉದ್ದೇಶಿತ 5 ಮತ್ತು 6ನೇ ಘಟಕದಿಂದ ಉತ್ಪಾದನೆಯಾಗುವ 1,400 ಮೆಗಾವ್ಯಾಟ್ ವಿದ್ಯುತ್ ಸಾಗಾಟಕ್ಕೆ ಮತ್ತಷ್ಟು ಮರಗಳ ನಾಶ ಖಚಿತ. ಉತ್ತರ ಕನ್ನಡದಲ್ಲಿ ಶೇ.65ರಷ್ಟಿದ್ದ ನಿತ್ಯ ಹರಿದ್ವರ್ಣ ಕಾಡು ಶೇ 32ಕ್ಕೆ ಇಳಿದಿದೆ. ಪಶ್ಚಿಮ ಘಟ್ಟದ ಮೇಲೆ ಯೋಜನೆಗಳ ಹೇರುವಿಕೆ ಪ್ರಸ್ತುತ ಎದುರಾಗಿರುವ ಜಲಕ್ಷಾಮವನ್ನು ಉಲ್ಬಣಿಸುವಂತೆ ಮಾಡುವುದರಲ್ಲಿ ಅನುಮಾನವಿಲ್ಲ. ದೇಶದಲ್ಲಿ ವಿದ್ಯುತ್ ಕೊರತೆ ನೀಗಿಸಲು ಅಣು ಸ್ಥಾವರವೇ ಬೇಕಾಗಿಲ್ಲ. ಇವುಗಳ ವೆಚ್ಚ ಹೆಚ್ಚು. ಅಲ್ಲದೆ ಅಪಾಯವೂ ಇನ್ನೂ ಹೆಚ್ಚು. ಭಾರತದಲ್ಲಿ ಸೌರ ವಿಕಿರಣ ಹೆಚ್ಚಿನ ಪ್ರಮಾಣದಲ್ಲಿದೆ. ಇದರ ವೆಚ್ಚವೂ ಕಡಿಮೆ ಮತ್ತು ಅಪಾಯ ಬಹು ಕಡಿಮೆ. ಈಗ ಮೂಲಗಳನ್ನು ಬಳಸಿ ಸುಲಭವಾಗಿಯೇ ಹೆಚ್ಚಿನ ನಮಗೆ ಬೇಕಾಗುವಷ್ಟು ವಿದ್ಯುತ್ತನ್ನು ಪಡೆಯಬಹುದಾಗಿದೆ.[7]

ಸಾರಾಂಶ :

ಮೇಲೆ ತಿಳಿಸಿರುವಂತೆ ಉತ್ತರ ಕನ್ನಡ ಜಿಲ್ಲೆಯ ಕರಾವಳಿ, ಬೆಟ್ಟಪ್ರದೇಶ ಹಾಗೂ ನಿತ್ಯಹರಿದ್ವರಣ ಕಾಡಿನ ಪರಿಸರ ಸ್ವಲ್ಪ ಮಟ್ಟಿಗೆ ಇನ್ನೂ ಜೀವಂತವಾಗಿದೆ. ಇಡೀ ವಿಶ್ವಕ್ಕೆ ಶುದ್ಧ ಪರಿಸರವನ್ನು ಇಂದಿಗೂ ಒದಗಿಸುತ್ತಿರುವ ಅಪರೂಪದ ವಿಶಿಷ್ಟ ಮತ್ತು ಸೂಕ್ಷ್ಮ ಪರಿಸರದ ತಾಣಗಳಿವು. ಕೇರಳದ ತುದಿಯಿಂದ ದ್ವಾರಕೆಯವರೆಗೆ ಹಬ್ಬಿರುವ ಸಹ್ಯಾದ್ರಿ ಶ್ರೇಣಿಯನ್ನು ವಿಶ್ವದ "ಬಟ್ಟರ್ ಸ್ಪಾಂಜ್" ಎಂದು ಪರಿಸರ ತಜ್ಞರು ಗುರುತಿಸಿದ್ದಾರೆ. ಇಲ್ಲಿಯ ಪರಿಸರದಲ್ಲಿ ಬದಲಾವಣೆಯಾದರೆ ಅದು ವಿಶ್ವದ ಎಲ್ಲಕಡೆಗೂ ಪರಿಣಾಮ ಬೀರುತ್ತದೆ ಎನ್ನುವ ಎಚ್ಚರಿಕೆಯನ್ನೂ ನೀಡಿರುತ್ತಾರೆ.

ಇಲ್ಲಿಯ ಜಲಪಾತಗಳಿಗೆ ಸ್ಥಳನಾಮಗಳನ್ನು ಇಡುವಾಗ ಅಲ್ಲಲ್ಲಿಯ ಬೌಗೋಳಿಕತೆ, ಸ್ಥಳ ಪುರಾಣ, ಇತ್ಯಾದಿಗಳನ್ನು ನಮ್ಮ ಪೂರ್ವಜರು ಅರಿತಿದ್ದು ಅವರ ಜಾಣ್ಮೆಗೆ ಉದಾಹರಣೆಯಾಗಿ ಬೆಣ್ಣೆ ಹೊಳೆ, ಇಳ್ಳೆ ಮನೆ, ವಾಟೆಹಳ್ಳ, ಅಪ್ಸರಕೊಂಡ ಇತ್ಯಾದಿಗಳನ್ನು ಹೆಸರಿಸ ಬಹುದಾಗಿದೆ.

ಇತ್ತೀಚೆಗೆ ಈ ಲೇಖಕನು ಕಂಡು ಕೊಂಡಿರುವಂತೆ ಉತ್ತರ ಭಾರತದ ಹರಿದ್ವಾರ, ಹೃಷೀಕೇಶದ ಪ್ರಾರಂಭದಿಂದ ಬದರೀನಾಥಕ್ಕೆ ಬಸ್ಸಿನಲ್ಲಿ ಹೋಗುತ್ತಾ, ಅಲ್ಲಿಯ ಪರಿಸರ ವೀಕ್ಷಿಸಿದಾಗ, ಅಲ್ಲಿ ನೂರು ವರ್ಷಗಳಿಗಿಂತ ಹಳೆಯ ಮರಗಳು ಕಂಡು ಬರುವುದಿಲ್ಲ. ಆದರೆ ಮೇಲೆ ಹೇಳಿರುವಂತೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಂದಿಗೂ 200 ವರ್ಷಗಳಿಗೂ ಹಚ್ಚಾಗಿ ಬಾಳಿ ಬದುಕುತ್ತಿರುವ ಮರಗಳಿವೆ. ಇಲ್ಲಿಯೂ ಕಾಡು ದಿನ ದಿನಕ್ಕೆ ಕಾಣೆಯಾಗುತ್ತಿರುವುದಾದರೂ ಇಲ್ಲಿಯ ಪರಿಸರವಾದಿಗಳ, ಸಾರ್ವಜನಿಕರ, ಮಠಮಾನ್ಯರ ಪರಿಸರ ಪ್ರಜ್ಞೆ ಹೋರಾಟದಿಂದಾಗಿ, ಇನ್ನೂ ತಕ್ಕ ಮಟ್ಟಿಗೆ ಉಳಿದುಕೊಂಡು ಬಂದಿರುವುದು ಶ್ಲಾಘನೀಯ.

ರಜಾ ದಿನಗಳು ಬಂದೊಡನೆ ಈ ಪ್ರದೇಶಗಳಿಗಳಿಗೆ ದೌಡಾಯಿಸುವ ಪ್ರಕೃತಿ ಪ್ರೇಮಿಗಳು ತಮ್ಮ ಯಾವುದೇ ರೀತಿಯ ಪ್ಲಾಸ್ಟಿಕ್ ಇತ್ಯಾದಿ ಕೊಳೆತು ಹೋಗದ ತ್ಯಾಜ್ಯಗಳನ್ನು ಎಸೆದು ಹೋಗದಂತೆ ಎಚ್ಚರವಹಿಸಬೇಕೆಂದು ಕಳಕಳಿಯ ಮನವಿ. ಹಲವಾರು ಶತಮಾನಗಳಿಂದಲೇ ಪ್ರಕೃತಿಯನ್ನು ಪೌರಾಣಿಕ, ಸಾಂಸ್ಕೃತಿಕ, ಐತಿಹಾಸಿಕ ಇಂತಹ ಸೂಕ್ಷ್ಮ ಶುದ್ಧ, ಸಿದ್ಧ ಪರಿಸರತಾಣಗಳನ್ನು ಗುರುತಿಸಿ, ಪರಿಸರಕ್ಕೆ ಹಾನಿಯಾಗದಂತೆ ಬಳಸಿಕೊಂಡಿರುವ ಉದಾಹರಣೆಗೆ ಬನವಾಸಿಯ ಶಾತವಾಹನ, ಕದಂಬ ಇತ್ಯಾದಿ ಚರಿತ್ರೆ ಗಳಿಂದ ತಿಳಿದು ಬರುತ್ತಿದೆ.

ಕನ್ನಡದ ಆದಿ ಕವಿ ಪಂಪನೇ ಹೇಳಿರುವಂತೆಯೇ, ಕೋಗಿಲೆಯ ಇಂಪು, ಮರಿ ದುಂಬಿಗಳ, ಹೆಜ್ಜೇನಿನ ಬೀಡಾಗಿ ಇನ್ನೂ ಯಾಣದ ಭೈರವೇಶ್ವರ ತಾಣವಿದೆ.

ಹಿಮಾಲಯವನ್ನು ಸುತ್ತಿ, ಆಗಿನಕಾಲದಲ್ಲಿ ಅಲ್ಲಿರುವ ಪರಿಸರವನ್ನೇ ತಮ್ಮ ಮಹಾಸಮಾಧಿ ಸ್ಥಾನವನ್ನು ನಿರ್ಮಿಸಿಕೊಂಡು

ಅಲ್ಲಿಯ ಹೆಸರಿನ ಕೊಳಗಳಲ್ಲಿ ಒಂದಾದ ಧವಳಗಂಗೆಯಹೆಸರನ್ನೇ ಇಟ್ಟ ಶ್ರೀ ವಾದಿರಾಜರು, ಸ್ವರ್ಣವಲ್ಲಿಯ ಮಹಾನ್ ಗುರುಗಳ ತಪಸ್ಸಿನ ಕೇಂದ್ರಗಳು ಇಲ್ಲಿವೆ.

ಜನಪದರ ನಿತ್ಯ ನೂತನ ತಾಯಿಯಾಗಿ, ಶಕ್ತಿ ದೇವತೆಯ ನೆಲೆವೀಡಾಗಿ ಶಿರಸಿಯ ಮಾರಮ್ಮ ಇನ್ನೂ ವಿಜೃಂಭಿಸುತ್ತಿದ್ದಾಳೆ. ಆದರೆ ಆಗಾಗ ಈ ಪರಿಸರಕ್ಕೆ ಜಲವಿದ್ಯುತ್ತ್ ಯೋಜನೆಗಳ, ಕಾಡುಗಳ್ಳತನ, ಇತ್ಯಾದಿಗಳ ಕಾಟದಿಂದ ಧಕ್ಕೆ ಬರುವ ಪರಿಸ್ಥಿತಿಯಂತೂ ತಲೆಮೇಲಿನ ತೂಗುಕತ್ತಿಯಂತೆ ಯಾವಾಗಲೂ ಇದ್ದೇ ಇರುತ್ತದೆ.

ಇಂತಹ ಅನೇಕ ಮಿತಿಗಳ ಮಧ್ಯದಲ್ಲಿಯೇ ಸೂಕ್ಷ ಪರಿಸರವನ್ನು ಕಾಯ್ದು ಕೊಂಡು ಹೋಗುವ ಜವಾಬ್ದಾರಿಯು ಇಂದಿನ ಮತ್ತು ಮುಂದಿನ ಪೀಳಿಗೆಯ ಮೇಲಿದೆ.

ಈಗಾಗಲೇ ಇರುವ ಐತಿಹಾಸಿಕ ಬಾವಿ, ಕೆರೆ, ಕಟ್ಟೆ, ಬಾವಿಗಳನ್ನು ಮುಚ್ಚಿ ಮನೆ, ಸೈಟು, ಆಟದ ಮೈದಾನ ಇವುಗಳನ್ನು ತಮಗೆ ಇಷ್ಟ ಬಂದಂತೆ ಪರಿವರ್ತಿಸುವ ಇತ್ತೀಚಿನ ಧೋರಣೆಗೆ ಹೊರತಾಗಿ, ಇರುವ ನೀರಿನ ತಾಣಗಳನ್ನೇ ಸ್ವಚ್ಛಗೊಳಿಸಿ ಮನರಂಜನೆ, ಆಯಾ ಜಾಗಗಳಲ್ಲೇ ಆಧುನಿಕ ಸೌಲಭ್ಯಗಳನ್ನು ಉಪಯೋಗಿಸಿ ಕುಡಿಯುವ ನೀರನ್ನಾಗಿ ಮಾರ್ಪಡಿಸುವ ವಿಧಾನಗಳನ್ನು ಅಳವಡಿಸಲು ಬರುತ್ತದೆ.

ಹೀಗಾದಾಗ ನಮ್ಮ ಪಾರಂಪರಿಕ, ಐತಿಹಾಸಿಕ, ಜನಪದೀಯ, ಜಲವಿಜ್ಞಾನ–ತಂತ್ರಜ್ಞಾನದ ವಿವರಗಳಿಗೂ ಹೆಚ್ಚಿನ ಮಹತ್ವ ಬರುತ್ತದೆ. ಅಲ್ಲದೇ ಸ್ಥಳೀಯ ಕಡಿಮೆ ಖರ್ಚಿನ ಪದ್ಧತಿಗಳಿಗೂ ಬೆಲೆ ಬಂದು ಅವುಗಳಿಂದ ಇನ್ನೂ ಹಲವಾರು ಉಪಯೋಗಗಳನ್ನು ಕಂಡು ಕೊಳ್ಳಲು ಸಹಾಯವಾಗುತ್ತದೆ.

ಆಕರಗಳು :

1. ಕನ್ನಡ ವಿಶ್ವಕೋಶ ಮೈಸೂರು ವಿಶ್ವ ವಿದ್ಯಾನಿಲಯ (ಆರ್.ಜಿ.ಆರ್.)
2. ಅನಂತ ಕೃಷ್ಣ ಚರಿತ, ಶ್ರೀಯತ ಡಾ. ಎ.ಕೆ.ಶಾಸ್ತ್ರಿಗಳ ಅಭಿನಂದನಾಗ್ರಂಥ, ಸಂ. ಶ್ರೀಗಣಪತಿ ಭಟ್ಟ ವರ್ಗಾಸರ, ಅಕ್ಷಯ ಪ್ರಕಾಶನ, ಹನುಮಂತ ನಗರ ಬೆಂಗಳೂರು, 2014, ಲೇಖನ :ಶಿರಸಿ, ಬನವಾಸಿ,ಯಾಣ, ಸಿದ್ಧಾಪುರ ಪರಿಸರದ ಐತಿಹಾಸಿಕ ಜಲ–ವಿಜ್ಞಾನ ತಂತ್ರಜ್ಞಾನ ಒಂದು ಪರಿಚಯ–ಲೇ. ಡಾ.ಹರಿಹರ ಶ್ರೀನಿವಾಸರಾವ್ ಪುಟ.493–505
3. ವಿವರಣೆ: ಡಾ.ಬಿ.ಪಿ.ರಾಧಾಕೃಷ್ಣ ಅವರ ಅಂತರ್ಜಲ ಪುಸ್ತಕದಿಂದ
4. ತೀರ್ಥ ಪ್ರಬಂಧಃ ಅನು. ವ್ಯಾಸನಕೆರೆ ಪ್ರಭಂಜನಾಚಾರ್ಯ ಪು.76, ಮೊದಲನೇ ಆವೃತ್ತಿ, ಬೆಂಗಳೂರು
5. ವಾದಿರಾಜರ ತೀರ್ಥ ಪ್ರಬಂಧ– ಜಲ ಶಾಸ್ತ್ರದ ಹಿನ್ನೆಲೆಯಲ್ಲಿ □ಡಾ.ಹರಿಹರ ಶ್ರೀನಿವಾಸರಾವ್, ಇತಿಹಾಸ ದರ್ಶನ ಸಂ.17,ಪು.31,2002
6. ಕಡಲ ತಡಿಯಲಿ ವಿದೇಶಿಗರ ಕಾಯಕ; ರವಿ ಸೂರಿ; 21 ಮಾರ್ಚ, 2017
7. ಸ್ವಾಧ್ಯಾಯ ಇ ಪತ್ರಿಕೆ, ಶಿರಸಿ
8. ಚಿತ್ರಗಳು ಮತ್ತು ಹೆಚ್ಚಿನ ವಿವರಗಳು ಇಂಟರ್‌ನೆಟ್‌ನ ವಿವಿಧ ಬ್ಲಾಗ್‌ಗಳಿಂದ

❑

ಕದಂಬರ ಕಾಲದ ನಾಟ್ಯ ಶಾಲೆಗಳು ಮತ್ತು ಅಪರೂಪದ ವೀರಗಲ್ಲು

– ಡಾ. ಜಗದೀಶ

ನಮ್ಮ ಪ್ರಾಚೀನ ಪರಂಪರೆಯನ್ನು ಅರಿಯುವ ಒಂದು ಸಾಧನ ಉತ್ಖನನ. ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಯವರು ಆಕರಗಳನ್ನು ಆಧರಿಸಿ ಉತ್ಖನನ ಕೈಗೊಳ್ಳುವ ಯೋಜನೆಯೊಂದನ್ನು ರೂಪಿಸಿದರು. ಈ ಯೋಜನೆಯಲ್ಲಿ ಫತೆಪುರ ಸಿರ್ಕಿ, ಗುಡ್ನಾಪುರ ಮತ್ತು ಹಂಪಿ ಪ್ರದೇಶಗಳನ್ನು ಉತ್ಖನನಕ್ಕೆ ಆಯ್ಕೆ ಮಾಡಲಾಯಿತು. ಇಂತಹ ಮಹತ್ವದ ಯೋಜನೆಯಲ್ಲಿ ಕರ್ನಾಟಕದ ಎರಡು ಪ್ರದೇಶಗಳು ಆಯ್ಕೆ ಆಗಿರುವುದು ವಿಶೇಷ. ಹಂಪಿ ಅನ್ವೇಷಣೆ ಮತ್ತು ಉತ್ಖನನ ಇಂದಿಗೂ ಅಲ್ಪ ಪ್ರಮಾಣದಲ್ಲಿ ಮುಂದುವರಿದಿದೆ. ರಾಜ್ಯ ಸರ್ಕಾರದ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರೆಂಪರೆ ಇಲಾಖೆಯ ಉತ್ಖನನ ಕಾರ್ಯವೂ ಮುಂದುವರಿದಿದೆ.

ಕರ್ನಾಟಕದ ಪ್ರಾಚೀನ ಅರಸು ಮನೆತನ ಕದಂಬ ಅರಸರದು. ಇವರ ಆಳ್ವಿಕೆಯ ಕಾಲ ಸುಮಾರು ಕ್ರಿ.ಶ 325 ರಿಂದ 525. ಆಳಿದ ಕೆಲವು ಅರಸು ಮನೆತನಗಳು ಕ್ರಿ.ಶ 9 ರಿಂದ 11ನೆಯ ಶತಮಾನದಲ್ಲಿ ತಮ್ಮನ್ನು ಕೂಡಾ ಕದಂಬ ಅರಸು ಮನೆತನಕ್ಕೆ ಸೇರಿಸಿಕೊಳ್ಳುವುದರಿಂದ ಇವರನ್ನು ಆದಿಕದಂಬರೆಂದು ಗುರ್ತಿಸಲಾಗಿದೆ. ಆದಿ ಕದಂಬರ ಸುಮಾರು 56 ಶಾಸನಗಳು ಮಾತ್ರ ಇಂದು ದೊರಕಿವೆ.

ಬನವಾಸಿಯಿಂದ ಸುಮಾರು ಐದು ಕಿಲೋಮಿಟರು ದೂರದಲ್ಲಿ ಗುಡ್ನಾಪುರ ಇದೆ. ಇಲ್ಲಿ ಕದಂಬರ ಸ್ತಂಭ ಶಿಲಾ ಶಾಸನ ದೊರಕಿದೆ. ಸುಮಾರು 20 ಅಡಿ ಉದ್ದದ ಕಲ್ಲಿನ ಕಂಬವಿದೆ. ಕಂಬದ ತಳಭಾಗವು ಚೌಕಾಕಾರವಾಗಿದ್ದ, ಮುಂದೆ ಅಷ್ಟಕೋನಾಕಾರದಲ್ಲಿದೆ. ಒಟ್ಟು 27 ಸಾಲುಗಳಲ್ಲಿ ಶಾಸನವು ಶಿರಪೇಟಿಕಾ ಲಿಪಿಯಲ್ಲಿದೆ. ಶಾಸನದ ಭಾಷೆ ಸಂಸ್ಕೃತ. ಶಾಸನವು ಕದಂಬರ ವಂಶಾವಳಿಯನ್ನು ನೀಡುತ್ತದೆ. ಮಯೂರಶರ್ಮ ಮತ್ತು ಆತನ ತಂದೆಯಾದ ಬಂಧುಶೇಣನನ್ನು ಶಾಸನವು ಉಲ್ಲೇಖಿಸುತ್ತದೆ. ಅರಸು ರವಿರ್ಮನನ್ನು (ಕ್ರಿ.ಶ. 485–519) ಕೇಕೆಯ ವಂಶದ ಪುತ್ರಿಗೆ ಜನಿಸಿದವನೆಂದು, ವಿಷ್ಣುದಾಸನೆಂಬುವನನ್ನು ಕೊಂದನೆಂದು ಹಾಗೂ ಪುನ್ನಾಟ, ಕೊಂಗಳ, ಪಾಂಡ್ಯ ಅಲುಪರನ್ನು ಸೋಲಿಸಿದವನೂ ಅಲ್ಲದೇ ಗುಡ್ಡ ತಟಾಕವನ್ನು ತೋಡಿದ ವಿಷಯ ಮತ್ತು ಅರಮನೆಯ ಸಮೀಪದಲ್ಲಿ ಮನ್ಮಥನಿಗೆ ಕಾಮಜಿನಾಲಯವನ್ನು ಕಟ್ಟಿಸಿ, ಅಲ್ಲಿ ಪೂಜೆಗಾಗಿ ಹಲವಾರು ಗ್ರಾಮಗಳಲ್ಲಿನ ಭೂಮಿಯನ್ನು ದಾನ ಮಾಡಿದನು. ಮಧುಮಾಸದಲ್ಲಿ ಹಾಗಿಲ್ಲದಿದ್ದರೆ ಮತ್ತಾವಗಲಾದರೂ ಅನುಕೂಲವಾದಾಗ ಉತ್ಸವವನ್ನು ಮಾಡಬೇಕೆಂದು ನಿಯಮಿಸಿದನು. ಶಾಸನದಲ್ಲಿ ಒಂದರಿಂದ ಒಂಭತ್ತರವರೆಗೆ ಅಂಕಗಳನ್ನು ಬಳಸಿರುವುದು ವಿಶೇಷವಾಗಿದೆ. (ಬಾ.ರಾ.ಗೋಪಾಲ್, 1983, ಬನವಾಸಿ ಕದಂಬರು, ಇತಿಹಾಸ ಮಾಲೆ–1, ಕದಂಬ ಸಾಂಸ್ಕೃತಿಕ ಅಧ್ಯಯನ ಸಂಸ್ಥೆ, ಶಿರಸಿ, ಉತ್ತರ ಕನ್ನಡ ಜಿಲ್ಲೆ)

ಶಾಸನದಲ್ಲಿ ಉಲ್ಲೇಖವಾಗಿರುವ ಹಲವು ಕಟ್ಟಡಗಳ ಕುರುಹುಗಳನ್ನು ಪತ್ತೆ ಹಚ್ಚಲು ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಯು 1989 ರಿಂದ ಕೆಲವು ವರ್ಷಗಳ ಕಾಲ ಉತ್ಖನನ ಕೈಗೊಂಡಿತು. ಉತ್ಖನನದ ಪ್ರಮುಖ ಉದ್ದೇಶವು (ಅ) ಹುದುಗಿ ಹೋಗಿರಬಹುದಾದ ಕಟ್ಟಡಗಳ ಅವಶೇಷಗಳನ್ನು ಬೆಳಕಿಗೆ ತರುವುದು (ಆ) ವಿವಿಧ ಕಟ್ಟಡಗಳ ತಳ ವಿನ್ಯಾಸ,

ನಿರ್ಮಾಣ ವಿಧಾನ ಮತ್ತು ಉಪಯೋಗ ಹಾಗೂ (ಇ) ಉತ್ಖನನದಿಂದ ಬೆಳಕಿಗೆ ಬರಬಹುದಾದ ಕಟ್ಟಡಗಳನ್ನು ಶಾಸನದಲ್ಲಿ ಉಲ್ಲೇಖವಾಗಿರುವ ಅಂಶಗಳೊಂದಿಗೆ ತಾಳೆ ನೋಡುವುದು ಸೇರಿತ್ತು. (1990–91, ಇಂಡಿಯನ್ ಆರ್ಕಿಯಾಲಜಿ, ಎ ರಿವಿವ್ಯೂ) ಉತ್ಖನನದಲ್ಲಿ ದೊರೆತಿರುವ ನಾಟ್ಯ ಶಾಲೆಗಳ ಕಟ್ಟಡಗಳ ತಲ ವಿನ್ಯಾಸವನ್ನು ಈ ಪ್ರಬಂಧದಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ.

ಉತ್ಖನನದಲ್ಲಿ ಎರಡು ಹಂತಗಳ ನಿರ್ಮಾಣ ಕಂಡು ಬಂದಿದೆ. ಮೊದಲ ಹಂತದಲ್ಲಿ ಆದಿ ಕದಂಬರ ಕಾಲದ ಇಟ್ಟಿಗೆ ಕಟ್ಟಡ ಮತ್ತು ಎರಡನೆಯ ಹಂತದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಜಂಬಿಟ್ಟಗೆ (ಲ್ಯಾಟರೈಟ್ ಇಟ್ಟಿಗೆ) ಕಟ್ಟಡ. ಉತ್ಖನನವನ್ನು ಎ, ಬಿ ಮತ್ತು ಸಿ ಎಂಬ ಮೂರು ಬ್ಲಾಕ್‌ಗಳಲ್ಲಿ ಪರಿಗಣಿಸಲಾಗಿದೆ. ಉತ್ಖನನದಲ್ಲಿ ದೊರೆತ ತಳ ವಿನ್ಯಾಸದ ನಕ್ಷೆಯನ್ನು 1994–95ರ ವರದಿಯಲ್ಲಿ ನೀಡಲಾಗಿದೆ. ಎ ಬ್ಲಾಕ್ ನಲ್ಲಿ ಮನ್ಮಥ ದೇವಾಲಯ (ಕಟ್ಟಡ 1) ಮತ್ತು ತೆರೆದ ಅಂಕಣ (ಕಟ್ಟಡ 5) ಕಂಡುಬಂದಿವೆ. ಬಿ ಬ್ಲಾಕ್ ನಲ್ಲಿ ನಾಟ್ಯ ಮಂಟಪ 1 (ಕಟ್ಟಡ 3) ಮತ್ತು ನಾಟ್ಯ ಮಂಟಪ 2 (ಕಟ್ಟಡ 4) ಕಂಡುಬಂದಿವೆ. ಸಿ ಬ್ಲಾಕ್ ನಲ್ಲಿ ರಾಜರ ಅಂತಃಪುರ, ಪ್ರಾಕಾರ ಮತ್ತು ಇನ್ನಿತರ ಕಟ್ಟಡಗಳು (ಕಟ್ಟಡ 6, 7, 8, 9 ಮತ್ತು 10) ಕಂಡುಬಂದಿವೆ.

ಡಾ.ಬಾ.ರಾ.ಗೋಪಾಲ್ ಅವರು ಗುಡ್ನಾಪುರ ಶಾಸನದಲ್ಲಿ ಉಲ್ಲೇಖವಾಗಿರುವ ಮನ್ಮಥವೇಶ್ಮವು ಗೊಮ್ಮಟ ಅಥವಾ ಬಾಹುಬಲಿ ದೇವಾಲಯ ಇರಬೇಕೆಂದು ತರ್ಕಿಸಿದ್ದರು. ಡಾ.ಎಸ.ಜಿ.ಸಾಮಕ್ ಅವರು ಗೊಮ್ಮಟ ಸಂಸ್ಕೃತ ಪದ ಮತ್ತು ಮನ್ಮಥ ಎನ್ನುವುದ ಅದರ ತದ್ಭವ. ಶಾಸನದಲ್ಲಿ ಉಲ್ಲೇಖವಾಗಿರುವ ಈ ದೇವಾಲಯದ ಪಕ್ಕದಲ್ಲಿ ಅರಮನೆ, ಅಂತಃಪುರ, ನೃತ್ಯ ಶಾಲೆಗಳು ಮತ್ತು ವರ್ಷಕ್ಕೊಮ್ಮೆ ಆಚರಿಸಲಾಗುತ್ತಿದ್ದ ವಸಂತೋತ್ಸವ ಮತ್ತು ಶಾಸನದಲ್ಲಿ ಉಲ್ಲೇಖವಾಗುವ ಮನ್ಮಥನ ಪಂಚ ಪರ್ವಗಳು (ದಕ್ಷಿಣಾನಿಲಯ, ದುಂಬಿ, ಕೋಗಿಲೆ, ಮಧು ಮತ್ತು ಪುಷ್ಪ) ಈ ದೇವಾಲಯದ ಬಾಹುಬಲಿಗಾಗಿ ಎಂದು ಪರಿಗಣಿಸುವ ಬದಲಿಗೆ ಮನ್ಮಥನಿಗಾಗಿ ಕಟ್ಟಿರಬಹುದೆಂದು ಊಹಿಸಿದ್ದಾರೆ. ವಸಂತೋತ್ಸವದ ಸಂದರ್ಭದಲ್ಲಿ ಕದಂಬರ ರಾಜಪರಿವಾರವು ಬನವಾಸಿಯಿಂದ ಗುಡ್ನಾಪುರಕ್ಕೆ ಬಂದು ನೃತ್ಯ ವಿನೋದಗಳಿಂದ ಮನ್ಮಥನನ್ನು ಆರಾಧಿಸುತ್ತಿರಬೇಕು ಎಂದು ಹೇಳುತ್ತಾರೆ. (ಡಾ. ಎಸ್.ಜಿ. ಸಾಮಕ, 1997, ಕದಂಬ ಅಧ್ಯಯನ, ಗುಡ್ನಾಪುರ ಒಂದು ಪರಿಚಯ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು).

ನೃತ್ಯ ಶಾಲೆಗಳನ್ನು ಉಲ್ಲೇಖಿಸುವ ಶಾಸನದ ಪ್ರಮುಖ ಸಾಲುಗಳಿ ಹೀಗಿವೆ: " . . . . ತೇನ ವೇಶ್ಮ ಮನ್ಮಥಸ್ಸೇದಮ್ ರವಿಣಾ ಕಿಷತಿನ್ದ್ರೇಣ ಕಾರಿತ್ರಮ್ ॥ ದಕ್ಷಣೇಸ್ಯ ರಾಜವಾಸ ಗ್ರರಹಮ್[ವಾ]ಮೇ ತಥಿನ್ಸಃ ಪುರೋಲಲಸ[ತ್]ನೃತ್ತ ಶಾಲೇ ದ್ವೇ ಪ್ರಾಗ್ಭಾಗಮಾತ್ರಿತ್ಯ ವಿಷ್ಟತೇ ಕುಸುಮ ಗಂಧಮಾಹಿಭಿ . . . ."

ದಕ್ಷಿಣದಲ್ಲಿ ರಾಜವಾಸ ಗೃಹ ಮತ್ತು ಎಡ ಭಾಗದಲ್ಲಿ ನೃತ್ಯ ಗೃಹಗಳಿವೆ ಎಂಬುದು ಈ ಸಾಲುಗಳ ಸಾರಾಂಶ. ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಹಾಲಿ ಇರುವ ವೀರಭದ್ರ ದೇವಾಲಯದ ಮುಂಬಾಗದಲ್ಲಿ ಉತ್ತರಕ್ಕೆ ಮುಖ ಮಾಡಿ ನಿಂತಾಗ ಎಡಗಡೆ ದೊರೆತಿರುವ ಕಟ್ಟಡ 1 ನ್ನು ಮನ್ಮಥ ದೇವಾಲಯ ಎಂದು ಪರಿಗಣಿಸಿ ಕಟ್ಟಡ 3 ಮತ್ತು 4 ನ್ನು ನಾಟ್ಯ ಮಂಟಪಗಳೆಂದು ಗುರ್ತಿಸಿದ್ದಾರೆ. ವೀರಭದ್ರ ದೇವಾಲಯದ ದಕ್ಷಿಣಕ್ಕೆ ಇರುವ ಕಟ್ಟಡಗಳನ್ನು ರಾಜನ ಅಂತಃಪುರಕ್ಕೆ ಸೇರಿದ ಕಟ್ಟಡಗಳಾಗಿರಬೇಕು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮನ್ಮಥ ದೇವಾಲಯದ (ಕಟ್ಟಡ 1) ಗರ್ಭಗೃಹ 3.40ಮೀ ಅಗಲ ಮತ್ತು 3.00ಮೀ ಉದ್ದ ಇದರ ಮುಂಬಾಗದಲ್ಲಿ 3.40ಮೀ ಅಗಲ ಮತ್ತು 5.70ಮೀ ಉದ್ದದ ಹತ್ತು ಕಂಬಗಳನ್ನೊಳಗೊಂಡ ತೆರೆದ ಮಂಡಪ ಹಾಗೂ 2.0ಮೀ ಅಗಲ ಮತ್ತು 1.40ಮೀ ಉದ್ದದ ತೆರೆದ ಮುಖಮಂಡಪ ಹೊಂದಿದ ವಿವರ ವರದಿಯಲ್ಲಿದೆ. ಕಟ್ಟಡ 3 ಮತ್ತು 4 ಸರಿ ಸುಮಾರು ಚೌಕಾಕಾರವಾಗಿದ್ದು 5.90ಮೀ ಅಗಲ ಮತ್ತು 6.40 ಮೀ ಉದ್ದ ಇದೆ ಹಾಗೂ ಇವೇ ಎರಡು ನಾಟ್ಯ ಮಂಟಪಗಳಾಗಿರಬಹುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಭರತನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖವಾಗಿರುವ ನಾಟ್ಯಮಂಟಪಗಳ ವಿನ್ಯಾಸವನ್ನು ಗಮನಿಸೋಣ. ಮೂರು ಬಗೆಯ ತಳ ವಿನ್ಯಾಸಗಳಿವೆ. ಅವು ವಿಕೃಷ್ಟ (ಧೀರ್ಘ), ಚತುರಶ್ರ (ಚೌಕಾಕಾರ) ಮತ್ತು ತ್ರಶ್ಯ (ತ್ರಿಕೋಣಾಕಾರ). ಸಾಮಾನ್ಯವಾಗಿ ನಾಲ್ಕು ಅಂಗಗಳಿರುತ್ತವೆ. ನೇಪಥ್ಯ ಗೃಹ, ರಂಗ ಶೀರ್ಷ, ರಂಗ ಪೀಠ ಮತ್ತು ಪ್ರೇಕ್ಷಕರು. 32 ಹಸ್ತ ಅಗಲ ಮತ್ತು 64 ಹಸ್ತ ಉದ್ದದ ಎರಡು ಬಗೆಯ ದೀರ್ಘ ರಚನೆಯ ನಾಟ್ಯ ಮಂಟಪಗಳಿರಬಹುದು. 64 ಹಸ್ತ ಅಗಲ ಮತ್ತು ಉದ್ದವಿರುವ ಚೌಕಾಕಾರ ಅಳತೆಯ ನಾಟ್ಯ ಮಂಟಪವಿರಬಹುದು. 64 ಹಸ್ತ ಅಗಲ ಮತ್ತು 64 ಹಸ್ತ ಎತ್ತರವಿರುವ ತ್ರಿಕೋಣಾಕಾರದ ನಾಟ್ಯ ಮಂಟಪವಿರಬಹುದು. ಮೂರು ಮಾದರಿಯ ತಳ ವಿನ್ಯಾಸಗಳಿಗಾಗಿ ನಕ್ಷೆಯನ್ನು ನೊಡಿ. (ಶ್ರೀರಂಗ, 1982, ನಾಟ್ಯಶಾಸ್ತ್ರದಲ್ಲಿ ನಾಟ್ಯಮಂಡಪ, ನೀನಾಸಮ್ ರಂಗ ಶಿಕ್ಷಣ ಕೇಂದ್ರ, ಅಕ್ಷರ ಪ್ರಕಾಶನ, ಸಾಗರ)

ಗುಡ್ನಾಪುರ ಉತ್ಖನನದಲ್ಲಿ ದೊರೆತಿರುವ ಕಟ್ಟಡಗಳ ತಳ ವಿನ್ಯಾಸ ಮತ್ತು ಭರತನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖವಾಗಿರುವ ನಾಟ್ಯ ಮಂಡಪಗಳ ತಳ ವಿನ್ಯಾಸಗಳನ್ನು ಸಮೀಕರಿಸಿ ಪರಿಶೀಲಿಸಬಹುದು. ಮನ್ಮಥ ದೇವಾಲಯ ಎಂದು ಗುರ್ತಿಸಿರುವ ಎ ಬ್ಲಾಕ್ ನಲ್ಲಿರವ ಕಟ್ಟಡ 1 ಧೀರ್ಘ ಅಳತೆಯ ನಾಟ್ಯ ಮಂಡಪ ಆಗಿರಬೇಕು. ನಾಟ್ಯ ಮಂಡಪದ ಸುತ್ತಲೂ ಸ್ವಲ್ಪ ತರೆದ ಜಾಗದ ನಂತರ ದಪ್ಪ ಗೋಡೆ ಇದೆ. ಪ್ರೇಕ್ಷಕರ ಸ್ಥಳವು ರಂಗಳವು ರಂಗಪೀಠಕ್ಕಿಂತ ತಗ್ಗಾಗಿದೆ. ಪ್ರೇಕ್ಷಕರ ಸ್ಥಳದಲ್ಲಿನ ಗೋಡೆಯಲ್ಲಿ ಅಲ್ಲಲ್ಲಿ ಕಂಬ ನೆಟ್ಟ ಕುರುಹುಗಳನ್ನು ಇಂದೂ ಕಾಣಬಹುದು. ರಾಜನು ಪ್ರಾಯಶಃ ಈ ಕಟ್ಟಡದ ದಕ್ಷಿಣ ಭಾಗದಲ್ಲಿದ್ದ ಅಂತಃಪುರದಿಂದ ಹೊರ ಬಂದು ಈ ಮಂಡಪದಲ್ಲಿ ನಡೆಯುತ್ತಿದ್ದ ಪ್ರದರ್ಶನವನ್ನು ವೀಕ್ಷಿಸುತ್ತಿರಬಹುದು. ಅಂತಃಪುರದ ಕಡೆ (ದಕ್ಷಿಣ ಭಾಗದಲ್ಲಿ) ನಾಟ್ಯಮಂಡಪಕ್ಕೆ ಬರಲು ಮೆಟ್ಟಲುಗಳಿವೆ. ಪ್ರಾಯಶಃ ಇದು ಕೇವಲ ರಾಜ ಮನೆತನದವರಿಗಾಗಿ ಇದ್ದಿರಬೇಕು. ಪ್ರೇಕ್ಷಾಗೃಹದ ಉತ್ತರದಲ್ಲೂ ಮೆಟ್ಟಲುಗಳಿವೆ. ಈ ನಾಟ್ಯ ಮಂಡಪದ ಉತ್ತರಕ್ಕಿರುವ ಚೌಕಾಕಾರವಾಗಿರುವ ತಳ ವಿನ್ಯಾಸವು (ಕಟ್ಟಡ 3) ಎರಡನೆಯ ನಾಟ್ಯ ಮಂಡಪ ಆಗಿರುವ ಸಾಧ್ಯತೆ ಇದೆ. ಪ್ರಾಯಶಃ ಇಲ್ಲಿ ಮಂತ್ರಿ ಮಂಡಲದ ಸದಸ್ಯರು ಮತ್ತು ಆಪ್ತರು ಪ್ರದರ್ಶನವನ್ನು ವೀಕ್ಷಿಸುತ್ತಿರಬಹುದು. ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಯ ವರದಿಯಂತೆ ಕಟ್ಟಡ 3 ಮತ್ತು 4, ಎರಡು ನಾಟ್ಯ ಮಂಡಪಗಳಾಗಿರುವ ಸಾಧ್ಯತೆ ಕಡಿಮೆ. ಪ್ರಾಯಶಃ ಭಾರತದಲ್ಲೇ ದೊರೆತ ಏಕೈಕ ಶಾಸನಾಧಾರಿತ ನಾಟ್ಯ ಮಂಡಪಗಳ ತಳವಿನ್ಯಾಸ ಮತ್ತು ಅವಶೇಷ ಇದಾಗಿದೆ. ಕರ್ನಾಟಕದ ಹೆಮ್ಮೆಯ ಉತ್ಖನನ ಇದಾಗಿದೆ. ಈ ಅವಶೇಷವನ್ನು ಪ್ರಾಕೃತಿಕ ವಿಕೋಪಗಳಿಂದ ರಕ್ಷಿಸಿ ಮತ್ತು ಅದೇ ಸ್ಥಳದಲ್ಲಿ ಮೇಲಿನ ಪದರದಲ್ಲಿ ತಳವಿನ್ಯಾಸಗಳ ಪ್ರತಿರೂಪನ್ನು ಸಾರ್ವಜನಿಕರ ಅನುಕೂಲಕ್ಕೆ ಪ್ರದರ್ಶಿಸಬಹುದಾಗಿದೆ.

* ಡಾ.ಜಗದೀಶ, ನಂ 66,ಮೊದಲ ಅಡ್ಡ ರಸ್ತೆ, ಹೊಸಮನೆ ಬಡಾವಣೆ, ಶಿವಮೊಗ್ಗ 577 201

1994–95) ವರದಿ ಆಧಾರಿತ ಚಿತ್ರ

1) ಮನ್ಮಥ ದೇವಾಲಯ, 3) ಮತ್ತು 4) ಮನ್ಮಥ ದೇವಾಲಯ 5) ತೆರದ ಅಂಕಣ 6,7) ಸೇವಕರ ವಸತಿಗೃಹಗಳು 8) ಅಂತಃಪುರ 9) ರಾಜರ ವಸತಿಗೃಹ 10) ಪ್ರಾಕಾರ

ನಿಜ ಚಿತ್ರಣ

1) ವೀರಭದ್ರ ದೇವಾಲಯ 2) ರಾಜರ ವಸತಿಗೃಹ 3) ನಾಟ್ಯ ಮಂಡಪ (ದೀರ್ಘಾಕಾರ)

4) ನಾಟ್ಯ ಮಂಡಪ (ಚೌಕಾಕಾರ)

ಮೊದಲ ಪಟ್ಟಿಕೆ

1. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಸ ಸಂಭವೆ
2. ಸ್ವಸ್ತಿ ಶ್ರೀ ಮನ್ಮಹಾಮಂಡಲೇಶ್ವರಂ ಬನವಾಸಿ ಪುರವಾದೀಶ್ವರಂ ಜಯಂತಿ ಮಧುಕೇಶ್ವರ ದೇವರ ಲಬ್ಧ . . ಸೂ
3. . . . . ಮ್ರಿಗಯಾದಾಮೋದ ಕದಂಬ ಚಕ್ರವರ್ತಿ ಸ[ತ್ಯುತಾಬ]ಯನುಂ ಸ್ರೀಮತು ಕಲಿಗಳಂಕುಸ
4. ದೇವರಸರ ಹತಿ ದೇವರಸರ ವರ್ತಕೆ ನಿಂದ ಮೂಜಿನೆಯ ಪ್ರಮಾದಿ ಸಂವತ್ಸರದ ವೈಶಾಖ

5. ಶುದ್ಧ ಪಂಚಮಿ ಪ್ರಹ ಸರಸಿಜ ಸೋಮ ಶ್ರೀಯಂ ಚಿಟ್ಟೂರು ಬವರಲಿ ನಡೆವಲ್ಲಿ ಹಂದಿ
6. ಯ ಬೆಡಯನಾಯಕ . . . . ಛಲವೆಂತೆಂದೊಡೆ ॥ ಮುಳಿದಿದಿರಾಂತ ವಾಜಿ ರಥ ಸೈನ್ಯ ದಳಂಗಳ ಸೂ
7. ಖಳ್ಗದೊಂದಿ . . . . ಮುಮಾಗಿರೆ . ಯ್ಯ ಬೆಡೆಯಂದು . ದೊಳು ವಾಜಿ
8. ... ಮುಕುಜುರೆ ಮೋತಿಹ. . . ತಿ . ತಾಗಿ ಸತ್ತದೆಂದರೆ ವಿಪತಿತಮಾಗೆ ಸುರಕಂನೆಯರು . . .

ಎರಡನೆಯ ಪಟ್ಟಿಕೆ

9. ತಾರ್ತನೋ ॥ ಚೆಟ್ಟೂರ ಮುದಲ ಬರದೊಳು ಕಿತ್ತ ಕಠಾರದೊಳು ಹತಿಹ ಹಂದಿಯ ಬೊಂಡಂ ವಡ್ಡಿದ
10. ತುರಂಗ ದಳಮಂ ಅಟ್ಟಿತಗುಳ್ದಟ್ಟಿ [ರಾರ] ರೆಟ್ಟದೊಳು ತಿವಿದ ॥ ಕಟ್ಟಿದಿರೊಳಾಂತ ವೈರಿಯ ಅಟ್ಟಿ .
11. ರೆಮುಜಿರೆ ಕಾಮಭೂಪಾಳನ ಕಟ್ಟಿದ ಕೂಜಿಲಿಗೆನೆ ಕೂಡಿಟ್ಟಳಿವಾದತ್ತುನಯಕ ಬೊಂ
12. ಡನ ವೀರ ॥

❑

ಉತ್ತರ ಕನ್ನಡ ಜಿಲ್ಲೆಯ ಪ್ರಾಗಿತಿಹಾಸ

– ಡಾ. ಸಿ. ಎಸ್. ವಾಸುದೇವನ್

ಉತ್ತರ ಕನ್ನಡ ಜಿಲ್ಲೆಯು ವಿಶೇಷ ಭೌಗೋಳಿಕ ಲಕ್ಷಣಗಳನ್ನು ಹೊಂದಿರುವ ಕರ್ನಾಟಕದ ಒಂದು ಪ್ರಮುಖ ಜಿಲ್ಲೆಯಾಗಿದೆ. ಜಿಲ್ಲೆಯ ಪೂರ್ವಕ್ಕೆ ಅರೆಮಲೆನಾಡು, ನಡುವೆ ದಟ್ಟ ದುರ್ಗಮಯವಾದ ಮಲೆನಾಡು ಮತ್ತು ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿರುವ ಕರಾವಳಿ ಪ್ರದೇಶವಿದೆ, ಈ ಮೂರೂ ಪ್ರಕಾರದ ಭೌಗೋಳಿಕ ಲಕ್ಷಣದಿಂದಾಗಿ ಈ ಜಿಲ್ಲೆಯ ಇತಿಹಾಸ ಮತ್ತು ಸಂಸ್ಕೃತಿಯು ವೈವಿಧ್ಯಮಯವಾಗಿದೆ. ಈ ಜಿಲ್ಲೆಯಲ್ಲಿ ಒಟ್ಟು 10 ತಾಲೂಕುಗಳಿವೆ. ಅವುಗಳು ಅಂಕೋಲ, ಕಾರವಾರ, ಕುಮಟಾ, ಭಟ್ಕಳ, ಮುಂಡಗೋಡ, ಸಿದ್ಧಾಪುರ, ಸಿರ್ಸಿ, ಸೂಪಾ, ಹಳಿಯಾಳ ಮತ್ತು ಹೊನ್ನಾವರ. ಪ್ರಾಚೀನ ಕಾಲದಿಂದಲೂ ದಕ್ಷಿಣ ಭಾರತದ ಸಾಗರೋತ್ತರ ವ್ಯಾಪಾರ ವಹಿವಾಟುಗಳಲ್ಲಿ ಜಿಲ್ಲೆಯ ಬಂದರುಗಳು ಪ್ರಮುಖ ಪಾತ್ರವನ್ನು ವಹಿಸಿ ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಲಯಗಳಲ್ಲಿ ತನ್ನದೇ ಆದ ಕೊಡುಗೆಗಳನ್ನು ನೀಡುತ್ತಲೇ ಬಂದಿದೆ. ಕ್ರಿಸ್ತಶಕದ ಆರಂಭಿಕ ಕಾಲಘಟ್ಟಗಳಲ್ಲಿ ಕದಂಬರ ರಾಜಧಾನಿಯಾಗಿದ್ದ ಬನವಾಸಿಯು ರೋಮ್‌ನೊಂದಿಗೆ ವ್ಯಾಪಾರ ಹೊಂದಿತ್ತು ಎಂಬುದಕ್ಕೆ ಪ್ರಾಕ್ತನ ಆಧಾರಗಳು ಲಭ್ಯವಾಗಿವೆ.

ಪ್ರಾಗಿತಿಹಾಸ ಕಾಲದಿಂದ ಜಿಲ್ಲೆಯ ಇತಿಹಾಸವನ್ನು ಗುರುತಿಸಬಹುದಾಗಿದೆ. ಆದಿ ಹಳೇಶಿಲಾಯುಗ ಕಾಲದ ನೆಲೆಯು ಕಾರವಾರ ತಾಲೂಕಿನ ಕಾಳಿ ನದಿಯ ಎಡದಂಡೆಯ ಮೇಲೆ ಝುಕೇರಿ ಬಳಿ ದೊರೆತಿದೆ[1]. ಜಿಲ್ಲೆಯಲ್ಲಿ ಈ ಒಂದು ನೆಲೆಯಲ್ಲಿ ಮಾತ್ರವೇ ಆದಿ ಹಳೇಶಿಲಾಯುಗ ಸಂಸ್ಕೃತಿಗೆ ಸೇರಿದ ಅವಶೇಷ ಲಭ್ಯವಾಗಿದೆ. ಈ ನೆಲೆಯಲ್ಲಿ ಕೈಗೊಡಲಿಗಳು ಮತ್ತು ಹೆರೆಗತ್ತಿಗಳು ಅಧಿಕ ಸಂಖ್ಯೆಯಲ್ಲಿ ದೊರೆತಿವೆಯಾದರೂ ಅವುಗಳು ಸಾಕಷ್ಟು ಸವೆದಿವೆ. ಮಧ್ಯ ಮತ್ತು ಅಂತ್ಯ ಹಳೇಶಿಲಾಯುಗ ಕಾಲದ ಸಂಸ್ಕೃತಿಗೆ ಸೇರಿದ ಯಾವ ನೆಲೆಯೂ ಇಲ್ಲಿಯವರೆಗೆ ಜಿಲ್ಲೆಯಲ್ಲಿ ಪತ್ತೆಯಾಗಿಲ್ಲ. ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಂಡಲ್ಲಿ ಮುಂದಿನ ದಿನಮಾನಗಳಲ್ಲಿ ಈ ಕಾಲಘಟ್ಟಗಳ ಸೇರಿದ ಅವಶೇಷಗಳು ದೊರಕಬಹುದು.

ಸೂಕ್ಷ್ಮ ಶಿಲಾಯುಗ ಕಾಲಕ್ಕೆ ಸೇರಿದ ಒಟ್ಟು 14 ನೆಲೆಗಳು ಜಿಲ್ಲೆಯಲ್ಲಿ ಪತ್ತೆಯಾಗಿವೆ. ಅಂಕೋಲ ತಾಲೂಕಿನಲ್ಲಿ ಒಟ್ಟು 7 ನೆಲೆಗಳು ಶೋಧಗೊಂಡಿವೆ. ಅವುಗಳು ಕಂಚಿಬೈಲ್[2], ಬೇಲೆಕೇರಿ[3], ಭಾವಿಕೇರಿ[4], ಶಿರಗುಂಜಿ[5], ಸೂಳೇರಬೈಲ್[6], ಹಟ್ಟಿಕೇರಿ[7] ಮತ್ತು ಹೌಸ[8]. ಕುಮಟಾ ತಾಲೂಕಿನಲ್ಲಿ ಒಟ್ಟು 4 ನೆಲೆಗಳು ಪತ್ತೆಯಾಗಿವೆ. ಅವುಗಳು ಕುಮಟಾ, ಗೋಕರ್ಣ, ಮೀರ್‌ಜಾನ್ ಮತ್ತು ಹರ್ನಿತ್[9]; ಭಟ್ಕಳ ತಾಲೂಕಿನಲ್ಲಿ ಎರಡು ನೆಲೆಗಳು ಶೋಧಿತವಾದ ನೆಲೆಗಳೆಂದರೆ ತಲ್ಲನ್ ಮತ್ತು ಹದಹೀರ್[10] ಮತ್ತು ಸಿರ್ಸಿ ತಾಲೂಕಿನ ಮುಂಡಗೆಹಳ್ಳಿಯಲ್ಲಿ ನೆಲೆಯು ಪತ್ತೆಯಾಗಿದೆ[11]. ಈ ಎಲ್ಲಾ ನೆಲೆಗಳಲ್ಲಿ ಈ ಸಂಸ್ಕೃತಿಗೆ ಸೇರಿದ ಶಿಲೋಪಕರಣಗಳು ಹೇರಳವಾಗಿ ದೊರಕಿವೆ. ಬಹುತೇಕ ಉಪಕರಣಗಳನ್ನು ಹಾಲುಗಲ್ಲಿನಿಂದ ರೂಪಿಸಲಾಗಿದೆ. ನೀಳಚಕ್ಕೆ, ಹೆರೆಚಕ್ಕೆ, ಮೊನೆ, ಕೊರಗ ಮತ್ತು ಮೂಲ ಶಿಲಾಗಟ್ಟಿಗಳು ಈ ಶಿಲೋಪಕರಣಗಳಲ್ಲಿ ಅಡಕವಾಗಿವೆ.

ಈ ಸಂಸ್ಕೃತಿಯಲ್ಲಿ ಅತೀ ಸೂಕ್ಷ್ಮ ಶಿಲಾಯುಧಗಳೇ ಪ್ರಧಾನವಾಗಿ ಬಳಕೆಯಲ್ಲಿದ್ದುದರಿಂದ, ಇದಕ್ಕೆ ಸೂಕ್ಷ್ಮ ಶಿಲಾಯುಧ ಸಂಸ್ಕೃತಿಯೆಂದು ಕರೆಯಲಾಗಿದೆ. ಚರ್ಟ್, ಚಾಲ್ಸಿಡೋನಿ, ಅಗೇಟ್ ಮುಂತಾದ ಉತ್ತಮ ಜಾತಿಯ ಶಿಲೆಗಳಿಂದ ಅತೀ ಕಿರಿದಾದ, ಅಂದರೆ ಸುಮಾರು ಒಂದು ಸೆಂ.ಮೀ. ಉದ್ದ, ಮೂರ್‍ನಾಲ್ಕು ಸೆಂ.ಮೀ. ಅಗಲದ ಉಪಕರಣಗಳನ್ನು ಈ ಸಂಸ್ಕೃತಿಯ ಜನ ತಯಾರಿಸಿ ಬಳಸುತ್ತಿದ್ದರು. ಕಟ್ಟಿಗೆಯ ತುಂಡಿಗೆ, ಜಿಂಕೆಯ ಕೋಡಿಗೆ ಗುಳಿ ಕೊರೆದು ಇಂತಹ ಹಲವಾರು ಹರಿತವಾದ ಅಲಗುಗಳನ್ನು ಪಕ್ಕ ಪಕ್ಕದಲ್ಲಿ ಜೋಡಿಸಿ, ಸಸ್ಯದ ಅಂಟಿನಿಂದ ಅಂಟಿಸಿ, ಚಾಕು, ಕುಡುಗೋಲು ಮುಂತಾದ ಕೃಷಿ ಉಪಕರಣಗಳನ್ನು ಸಿದ್ಧಪಡಿಸುತ್ತಿದ್ದರು. ಇವರ ಇತರ ಉಪಕರಣಗಳು ತ್ರಿಕೋನ (triangle), ಚತುರ್ಭುಜ, ಅರ್ಧಚಂದ್ರ (lunate) ಹಾಗೂ ಅನಿರ್ದಿಷ್ಟ ಆಕಾರದ ಸೂಕ್ಷ್ಮ ಉಪಕರಣಗಳಾಗಿದ್ದವು. ಈ ಕಾಲಘಟ್ಟವನ್ನು ಕ್ರಿ.ಪೂ. 10.000–3,000 ವರ್ಷ ಎಂದು ಗಣಿಸಲಾಗಿದೆ.

ಜಿಲ್ಲೆಯಲ್ಲಿ ನವಶಿಲಾಯುಗ ಕಾಲಕ್ಕೆ ಸೇರಿದ ನೆಲೆಗಳು ಕಾರವಾರ, ಕುಮಟಾ, ಸೂಪಾ ಮತ್ತು ಹೊನ್ನಾವರಗಳಲ್ಲಿ ಪತ್ತೆಯಾಗಿವೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ ಒಟ್ಟು 5 ನೆಲೆಗಳು ಪತ್ತೆಯಾಗಿವೆ. ಕಾರವಾರದ ಅನ್ಶಿ (ಅನ್‌ಶಿ)ಯಲ್ಲಿ ಶೋಧಗೊಂಡ ನೆಲೆಯಲ್ಲಿ ವಾಸ್ತು ವಿನ್ಯಾಸದ ಕುರುಹುಗಳು, ನವಶಿಲಾಯುಗ ಕಾಲದ ಕೈಗೊಡಲಿಯ ಭಾಗ ಹಾಗೂ ಅವುಗಳನ್ನು ತಯಾರಿಸುವ ಸ್ಥಳವು ಪತ್ತೆಯಾದವು[12]. ಕುಮಟಾ ತಾಲೂಕಿನ ಗೋಕರ್ಣ ಮತ್ತು ನೀಲಕೊಂಡುವಿನಲ್ಲಿ ಈ ಸಂಸ್ಕೃತಿಗೆ ಸೇರಿದ ನೆಲೆಯು ಪತ್ತೆಯಾದವು. ಗೋಕರ್ಣದ ಬಳಿಯ ಪರಶುರಾಮ ತೀರ್ಥದ ಶಿಲಾಗವಿ ಹಾಗೂ ರಾಮತೀರ್ಥದ ಸಮೀಪ ಪತ್ತೆಯಾದ ನೆಲೆಯಲ್ಲಿ ಮೃತ್ಪಾತ್ರೆಗಳನ್ನು ಸಂಗ್ರಹಿಸಲಾಯಿತು. ಈ ಮೃತ್ಪಾತ್ರೆಗಳು ಮಸ್ಕಿಯ ಮೃತ್ಪಾತ್ರೆಗಳನ್ನು ಹೋಲುತ್ತವೆಯೆಂಬುದು ಅನ್ವೇಷಣಕಾರರ ಅಭಿಪ್ರಾಯವಾಗಿದೆ[13]. ನೀಲಕೊಂಡು ನೆಲೆಯಲ್ಲಿ ಈ ಸಂಸ್ಕೃತಿಗೆ ಸೇರಿ ಶಿಲೋಪಕರಣಗಳು ದೊರಕಿವೆ[14]. ಸೂಪಾ ತಾಲೂಕಿನ ಅನಮೋಡದಲ್ಲಿ ನವಶಿಲಾಯುಗ ಕಾಲದ ಏಕೈಕ ಕೈಗೊಡಲಿ ಉಪಕರಣವು ದೊರತಿದೆ[15]. ಇದೇ ತಾಲೂಕಿನ ಶಿರಪುರದಲ್ಲಿಯೂ ಕೊಡಲಿ ಉಪಕರಣವನ್ನು ಪತ್ತೆ ಹಚ್ಚಲಾಗಿದೆ[16]. ಹೊನ್ನಾವರದಲ್ಲಿ ಉಜ್ಜಿ ನಯಗೊಳಿಸಿದ ಆಯುಧೋಪಕರಣಗಳು ದೊರಕಿವೆ[17].

ಮಾನವವ ವಿಕಾಸದಲ್ಲಿ ಈ ನೂತನ ಶಿಲಾಯುಗವು ಅತ್ಯಂತ ಮಹತ್ವದ ಹಂತವಾಗಿದೆ. ಕೃಷಿ ವಿಸ್ತರಣೆ, ಅಧಿಕ ಆಹಾರ ಉತ್ಪಾದನೆ, ಪಶುಸಂಗೋಪನೆ, ಮಡಿಕೆ ಕುಡಿಕೆಗಳ ತಯಾರಿಕೆಯಲ್ಲಿ ಕುಂಬಾರರು ಗಾಲಿಯ ಬಳಕೆ ಮಾಡಿದರು. ಸಂಘಟಿತ ಸಮಾಜ ಹಾಗೂ ವ್ಯವಸ್ಥಿತ ಗ್ರಾಮೀಣ ಬದುಕನ್ನು ಸಾಧಿಸಿದ ಹಂತವೇ ಇದಾಗಿದೆ. ಚೆನ್ನಾಗಿ ಉಜ್ಜಿ ನಯ ಮಾಡಿದ, ವಿವಿಧ ಪ್ರಮಾಣದ ಆಕರ್ಷಕವಾದ, ಹೊಳೆಯುವ ಕೊಡಲಿಗಳ ತಯಾರಿಕೆ ಈ ಸಂಸ್ಕೃತಿಯ ಆದಿ ಭಾಗದ ಪ್ರಧಾನ ಲಕ್ಷಣವಾಗಿದೆ. ಇದು ಕೃಷಿ ವಿಸ್ತರಣೆ ಹಾಗೂ ಆಹಾರ ಉತ್ಪಾದನೆಗಳಲ್ಲಿ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟಿತು.

ಶಿಲಾ–ತಾಮ್ರಯುಗಕ್ಕೆ ಸೇರಿದ ನೆಲೆಯು ಜಿಲ್ಲೆಯ ಅಂಕೋಲ ತಾಲೂಕಿನ ಬೋಳೆಯಲ್ಲಿ ಪತ್ತೆಯಾಗಿದೆ. ಇದು ಈ ಸಂಸ್ಕೃತಿಗೆ ಸೇರಿದ ಏಕೈಕ ನೆಲೆಯಾಗಿದೆ. ಈ ನೆಲೆಯಲ್ಲಿ ಅ. ಸುಂದರ ಅವರು ಗೀರುಚಿತ್ರಗಳನ್ನು ಶೋಧಿಸಿರುವರು[18]. ನೂತನ ಶಿಲಾಯುಗ ಸಂಸ್ಕೃತಿಯ ಉತ್ತರಾರ್ಧ ಭಾಗದಲ್ಲಿ ಶಿಲಾಯುಧಗಳೊಂದಿಗೆ ಕಂಚು ಮತ್ತು ತಾಮ್ರದ ಚಪ್ಪಟೆ ಕೊಡಲಿ, ಉಳಿ ಮುಂತಾದ ಉಪಕರಣಗಳು ಜೊತೆ ಜೊತೆಯಾಗಿ ಬಳಕೆಯಲ್ಲಿ ಇದ್ದುದರಿಂದ, ಈ ಸಾಂಸ್ಕೃತಿಕ ಘಟ್ಟವನ್ನು 'ಶಿಲಾ–ತಾಮ್ರಯುಗ ಸಂಸ್ಕೃತಿ' ಎಂದು ಕರೆಯಲಾಗಿದೆ. ಲೋಹ ತಯಾರಿಕಾ ತಂತ್ರಜ್ಞಾನದಿಂದ ಕಂಚು ಹಾಗೂ ತಾಮ್ರದ ಆಯುಧೋಪಕರಣ ಹಾಗೂ ಆಭರಣಗಳನ್ನು ತಯಾರಿಸಬಲ್ಲವರಾಗಿದ್ದರು. ಚಾಲ್ಸಿಡೆನಿ ಸೂಕ್ಷ್ಮ ಶಿಲಾ ಉಪಕರಣಗಳೊಂದಿಗೆ ಇತರೆ ಅರೆಪ್ರಶಸ್ತ ಕಲ್ಲುಗಳಿಂದ ಶಿಲೋಪಕರಣಗಳನ್ನು ತಯಾರಿಸುತ್ತಿದ್ದರು.

ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಜನರು, ಸತ್ತವರ ಶವ ಸಂಸ್ಕಾರಕ್ಕೆಂದು ನಾನಾ ಮಾದರಿಯ ಕಲ್ಮನೆಗಳ ನಿರ್ಮಾಣಕ್ಕೆ ಬೃಹತ್ತಾದ ಕಲ್ಲು ಚಪ್ಪಡಿಗಳನ್ನು ಬಳಸುತ್ತಿದ್ದುದರಿಂದ ಇದನ್ನು ಬೃಹತ್ ಶಿಲಾಯುಗ ಸಂಸ್ಕೃತಿ ಎಂದೂ ಕರೆಯುವ ವಾಡಿಕೆಯಿದೆ. ಕಪ್ಪು–ಕೆಂಪು ವರ್ಣದ ಮಡಕೆಗಳು ಈ ಕಾಲದ ಇನ್ನೊಂದು ವೈಶಿಷ್ಟ್ಯ. ಕಬ್ಬಿಣದ ಬಳಕೆಯು ಸಹ ರೂಢಿಯಲ್ಲಿ ಬಂದಿತು. ಕಬ್ಬಿಣ ಲೋಹದ ತಂತ್ರಜ್ಞಾನವು ಅವರ ಆರ್ಥಿಕ ಪ್ರಗತಿಯನ್ನು ಸದೃಢಗೊಳಿಸಿತು.

ಆದರಿಂದಾಗಿ ಇದನ್ನು ಕಬ್ಬಿಣ ಯುಗ ಸಂಸ್ಕೃತಿಯೆಂದೂ ಹೆಸರಿಸಲಾಗಿದೆ. ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ಎರಡು ಸಾವಿರಕ್ಕೂ ಹೆಚ್ಚು ನೆಲೆಗಳು ದಕ್ಷಿಣ ಭಾರತದಲ್ಲಿದೆ. ಕರ್ನಾಟಕದಲ್ಲಿ ಸುಮಾರು 1000 ನೆಲೆಗಳಿವೆ. ಇವುಗಳಲ್ಲಿ ಸುಮಾರು 500 ಕಲ್ಗೋರಿ ನೆಲೆಗಳು ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿರುವುದು ಗಮನಾರ್ಹ.

ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ನೆಲೆಗಳು ಜಿಲ್ಲೆಯ ಸಿದ್ಧಾಪುರ, ಸಿರ್ಸಿ ಮತ್ತು ಹಳಿಯಾಳ ತಾಲೂಕುಗಳಲ್ಲಿ ಪತ್ತೆಯಾಗಿವೆ. ಒಟ್ಟು 6 ನೆಲೆಗಳಲ್ಲಿ 3 ಗೋರಿ ನೆಲೆಗಳಾದರೆ ಉಳಿದ 3 ವಾಸ್ತವ್ಯದ ನೆಲೆಗಳಾಗಿವೆ. ಸಿದ್ಧಾಪುರ ತಾಲೂಕಿನ ಕಿಲಾರದಲ್ಲಿ ಗೋರಿ ನೆಲೆಯು ಪತ್ತೆಯಾಗಿದ್ದು ಕಪ್ಪು ಮತ್ತು ಕೆಂಪು ಮಡಕೆಗಳನ್ನು ಸಂಗ್ರಹಿಸಲಾಗಿದೆ[19]. ಇದೇ ತಾಲೂಕಿನ ಶಿರಳಿಗೆಯಲ್ಲಿ ವಾಸ್ತವ್ಯದ ನೆಲೆಯು ಪತ್ತೆಯಾಗಿದ್ದು ಅಲ್ಲಿಯೂ ಈ ಸಂಸ್ಕೃತಿಗೆ ಸೇರಿದ ಮಡಕೆಗಳು ದೊರಕಿವೆ[20]. ಸಿರ್ಸಿ ತಾಲೂಕಿನ ಕಂತ್ರಾಜಿಯಲ್ಲಿ ವಾಸ್ತವ್ಯದ ನೆಲೆಯು ಶೋಧಗೊಂಡಿದೆ[21]. ತಾಲೂಕಿನ ಮುತ್ತಲ್‌ಕೊಪ್ಪೆಯಲ್ಲಿ[22] ಶಿಲಾವೃತ್ತಗಳು ಮತ್ತು ಸಿರ್ಸಿಯಲ್ಲಿ ಈ ಸಂಸ್ಕೃತಿಗೆ ಸೇರಿದ ಕೋಣೆ ಗೋರಿಗಳು ದೊರತಿವೆ[23]. ಹಳಿಯಾಳ ತಾಲೂಕಿನ ದಾಂಡೇಲಿಯಲ್ಲಿ ಈ ಸಂಸ್ಕೃತಿಗೆ ಸೇರಿದ ಅವಶೇಷಗಳು ದೊರಕಿವೆ[24].

ಇದರ ಕಾಲವು ಕ್ರಿ.ಪೂ. 1200–300 ಎಂದು ನಿರ್ಧರಿಸಲಾಗಿದೆ. ಬೃಹತ್ ಶಿಲಾಯುಗದ ನಂತರ ಆದಿ ಇತಿಹಾಸ ಕಾಲವು ಮೌರ್ಯರ ಆಡಳಿತದೊಂದಿಗೆ ಪ್ರಾರಂಭಗೊಳ್ಳುತ್ತದೆ. ಇತಿಹಾಸ ಆರಂಭ ಕಾಲದ 6 ನೆಲೆಗಳು ಜಿಲ್ಲೆಯಲ್ಲಿ ಪತ್ತೆಯಾಗಿವೆ. ಜಿಲ್ಲೆಯ ಅಂಕೋಲ, ಮುಂಡಗೋಡ, ಸಿರ್ಸಿ ಮತ್ತು ಸೂಪಾ ತಾಲೂಕುಗಳಲ್ಲಿ ಈ ಸಂಸ್ಕೃತಿಗೆ ಸೇರಿದ ನೆಲೆಗಳು ಪತ್ತೆಯಾಗಿವೆ. ಅಂಕೋಲದಲ್ಲಿ ಇತಿಹಾಸ ಆರಂಭ ಕಾಲದ ನೆಲೆಯು ಪತ್ತೆಯಾಗಿದೆ[25]. ಮುಂಡಗೋಡ ತಾಲೂಕಿನ ಇಂದೋರು ಗ್ರಾಮದಲ್ಲಿ ಇತಿಹಾಸ ಆರಂಭ ಕಾಲದ ನೆಲೆಯು ಶೋಧಿತವಾಗಿದೆ[26]. ಸಿರ್ಸಿಯ ಕಡಗೋಡ[27] ಮತ್ತು ನರೂರು[28] ಇತಿಹಾಸ ಆರಂಭ ಕಾಲದ ನೆಲೆಯೆಂದು ಅ. ಸುಂದರ ಅವರು ಅಭಿಪ್ರಾಯಪಟ್ಟಿರುತ್ತಾರೆ. ಇದೇ ತಾಲೂಕಿನ ಗುಡ್ನಾಪುರವು ಇತಿಹಾಸ ಆರಂಭ ಕಾಲದ ಒಂದು ಪ್ರಮುಖ ನೆಲೆಯಾಗಿದೆ. ಇಲ್ಲಿ ಉತ್ಖನನಗಳು ಸಹ ಜರುಗಿದ್ದು ಅದರ ಪೂರ್ಣ ಪ್ರಮಾಣದ ವರದಿಗಳು ದೊರಕಬೇಕಿದೆ. ಈ ನೆಲೆಯಲ್ಲಿ ಕುಟ್ಟಿ ಗೆರೆಗಳನ್ನು ರೂಪಿಸಿರುವ ಚಿತ್ರಗಳು ದೊರಕಿವೆ[29].

1980ರ ದಶಕದಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಗುಡ್ನಾಪುರ ಕೆರೆಯ ಒಡ್ಡಿನ ಸ್ಥಳದಲ್ಲಿ ಟಿ. ಎಂ. ಕೇಶವ ಮುಂತಾದವರ ನೇತೃತ್ವದಲ್ಲಿ ಕದಂಬ ರವಿವರ್ಮನ ಕಾಲದ ಅರಮನೆ, ಅಂತಃಪುರ, ಮನ್ಮಥಗೃಹಗಳ ಅವಶೇಷಗಳನ್ನು ಉತ್ಖನನದ ಮೂಲಕ ಹೊರತಂದಿದೆ. ಬನವಾಸಿಯು ತಾಲೂಕಿನ ಮತ್ತೊಂದು ಪ್ರಮುಖ ನೆಲೆ. ಇಲ್ಲಿ ಉತ್ಖನನಗಳು ನಡೆದಿದ್ದು ಅದರಿಂದ ಇತಿಹಾಸ ಆರಂಭ ಕಾಲಘಟ್ಟದ ಅನೇಕ ಮಾಹಿತಿಗಳು ನಮಗೆ ಲಭ್ಯವಿದೆ. ಈ ನೆಲೆಯಲ್ಲಿ ನಡೆಸಲಾದ ಉತ್ಖನನದಲ್ಲಿ ಅನೇಕ ಮಹತ್ವದ ಅವಶೇಷಗಳು ದೊರಕಿವೆ. ಶಾತವಾಹನದ ಕಾಲದ ಚೈತ್ಯಾಲಯವನ್ನು ಹೊರ ತೆಗೆಯಲಾಯಿತು. ಕೆಂಪು ಲೇಪನದಡಿಯಲ್ಲಿ ಬಿಳಿ ವರ್ಣದ ಚಿತ್ರಗಳಿರುವ ಮಡಕೆ, ಕೆಂಪು ವರ್ಣ, ಕಪ್ಪು–ಕೆಂಪು ವರ್ಣದ ಮಡಕೆಗಳು, ನಕ್ಷಾಂಕಿತ ಮೃತ್ಪಾತ್ರೆಗಳು ಮತ್ತು ವಿವಿಧ ಪ್ರಾಚೀನ ನಾಣ್ಯಗಳು ದೊರಕಿವೆ[30]. '1969 ರಿಂದ 1972ರ ನಡುವೆ ಮೈಸೂರು ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದ ಎಂ. ಶೇಷಾದ್ರಿಯವರು ಬನವಾಸಿಯಲ್ಲಿ ಉತ್ಖನನವನ್ನು ನಡೆಸಿದ್ದರು. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಪ್ರಪ್ರಥಮ ಉತ್ಖನನವಾಗಿದೆ. ಈ ಉತ್ಖನನದಲ್ಲಿ ಕ್ರಿಸ್ತ ಪೂರ್ವ ಕಾಲದಿಂದಲೂ ಬನವಾಸಿಯು ಒಂದು ಪಟ್ಟಣವಾಗಿತ್ತು ಎಂಬ ಕುರುಹುಗಳು ದೊರಕಿವೆ. ಅಲ್ಲಿ ಎರಡು ಚೈತ್ಯಾಲಯಗಳನ್ನು ಗುರುತಿಸಲಾಯಿತು. ಈ ಸ್ಥಳಕ್ಕೂ ರೋಮ್ ಸಾಮ್ರಾಜ್ಯಕ್ಕೂ ವ್ಯಾಪಾರ ಸಂಬಂಧಗಳು ಇತ್ತೆಂಬುದನ್ನು ದೃಢಪಡಿಸುವಂತೆ ರೌಲೆಟೆಡ್ ಮಡಕೆಯ ಅನುಕರಣೆ ಹಾಗೂ ರೋಮ್‌ನ ನಾಣ್ಯದ ಅಚ್ಚುಗಳು ದೊರೆತವು. ಒಂದು ಔತ್ತರೇಯ ಕಪ್ಪು ಹೊಳಪಿನ ಮಡಕೆಯ ಚೂರು ಕೂಡ ವರದಿಯಾಗಿದೆ. ಈ ಉತ್ಖನನದ ವರದಿಯನ್ನು ಎ.ವಿ. ನರಸಿಂಹಮೂರ್ತಿ ಮತ್ತು ಇತರರು ಮುಂತಾದವರು 1997ರಲ್ಲಿ ಹೊರತಂದಿದ್ದಾರೆ.

'1970ರ ದಶಕದ ನಂತರ ಕರ್ನಾಟಕ ವಿಶ್ವವಿದ್ಯಾಲಯದ ಕೆಲವು ವಿದ್ವಾಂಸರು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಾಕ್ತನ ಅನ್ವೇಷಣಾ ಕಾರ್ಯವನ್ನು ನಡೆಸಿ ಸಾಕಷ್ಟು ನೆಲೆಗಳನ್ನು ಬೆಳಕಿಗೆ ತಂದಿದ್ದಾರೆ. ಅವರಲ್ಲಿ ಅ. ಸುಂದರ, ಹೆಚ್.ಆರ್. ರಘನಾಥ ಭಟ್ ಅವರು ಪ್ರಮುಖರು. ಸುಂದರ ಅವರು ಉತ್ತರ ಕನ್ನಡ ಜಿಲ್ಲೆಯ ವಿವಿಧ ಭಾಗಗಳಲ್ಲಿ ತಿರುಗಾಡಿ ಅನೇಕ ಪ್ರಾಕ್ತನ ನೆಲೆಗಳನ್ನು ಅನ್ವೇಷಿಸಿ ಕರ್ನಾಟಕ ಭಾರತಿ ಪತ್ರಿಕೆಯಲ್ಲಿ ಹಾಗೂ ತಮ್ಮ ಇತರ ಲೇಖನಗಳಲ್ಲಿ ಪ್ರಕಟಿಸಿದ್ದಾರೆ. ಬೌದ್ಧ ಪರಂಪರೆಯ ಪ್ರಕಾರ ದಕ್ಷಿಣ ಭಾರತದಲ್ಲಿ ಬನವಾಸಿ ಒಂದು ದೊಡ್ಡ ಬೌದ್ಧ ಕೇಂದ್ರವಾಗಿತ್ತು. ಸುಂದರ ಅವರು ಬನವಾಸಿಯ ಸುತ್ತಮುತ್ತ ಬೌದ್ಧ ಶಿಲ್ಪಗಳನ್ನು ಬೆಳಕಿಗೆ ತಂದಿದ್ದಾರೆ. ಕರಾವಳಿ ಭಾಗದಲ್ಲಿ ಹೈಗುಂದ, ಬೋಳೆ, ಬಬ್ರುವಾಡಗಳಲ್ಲಿ ಬೌದ್ಧ ಅವಶೇಷಗಳನ್ನು ಬೆಳಕಿಗೆ ತಂದಿದ್ದಾರೆ. ಸುಂದರ ಅವರ ಅನ್ವೇಷಣೆ ಈ ಜಿಲ್ಲೆಯ ಕರಾವಳಿಯ ಪ್ರಾಕ್ತನ ಅಧ್ಯಯನದಲ್ಲಿ ಒಂದು ಮಹತ್ವದ ಘಟ್ಟ ಎನ್ನಬಹುದು. ಏಕೆಂದರೆ ಅವರು ತಾವು ಅನ್ವೇಷಿಸಿದ ನೆಲೆಗಳನ್ನು ಶಿಲ್ಪ ಶೈಲಿ ಹಾಗೂ ಅವಶೇಷಗಳನ್ನು ಆಧರಿಸಿ ಕಾಲಮಾನವನ್ನು ತರ್ಕಿಸಿದ್ದಾರೆ. ಹಾಗೂ ಭಾರತ ರೋಮ್ ವ್ಯಾಪಾರ ಸಂಬಂಧದಲ್ಲಿ ಉತ್ತರ ಕನ್ನಡ ಕರಾವಳಿಯ ಮಹತ್ವವನ್ನು ಪ್ರಾಕ್ತನ ಅವಶೇಷಗಳ ಮೂಲಕ ತರ್ಕಿಸಿದರು. ಹೈಗುಂದ ಹಾಗೂ ಬಬ್ರುವಾಡ ಯಕ್ಷ ಮೂರ್ತಿಗಳು, ಇಡಗುಂಜಿ ಹಾಗೂ ಗೋಕರ್ಣದ ಗಣಪತಿ ಮೂರ್ತಿಗಳು, ಹಾಗೂ ಕೊಂತಪಾಲದ ವಿಷ್ಣು ಮೂರ್ತಿಗಳ ಪ್ರಾಚೀನತೆಯ ಕುರಿತಯ ಅವರು ನಮ್ಮ ಗಮನವನ್ನು ಸೆಳೆದ ಮೇಲೆ ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಇತಿಹಾಸ ಪ್ರಾರಂಭ ಕಾಲದ, ಅಂದರೆ ಶಾತವಾಹನ ಕಾಲದ ನಕಾಶೆಯಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿತು. ಭಾರತದ ಇತರ ಭಾಗಗಳ ಜೊತೆಗೆ ಇದರ ಸಾಂಸ್ಕೃತಿಕ ಹಾಗೂ ವಾಣಿಜ್ಯ ಸಂಬಂಧವು ತುಂಬಾ ಗಾಢವಾಗಿದ್ದುದು ಗೋಚರಿಸಿತು. ಭಾರತದಲ್ಲಿಯೇ ಅತೀ ಪ್ರಾಚೀನ ಗಣಪತಿ ಮೂರ್ತಿಗಳು, ವಿಷ್ಣ ಮೂರ್ತಿಗಳು ಉತ್ತರ ಕನ್ನಡ ಕರಾವಳಿಯಲ್ಲಿ ಕಾಣಿಸುತ್ತವೆ ಎಂಬುದು ಕುತೂಹಲಕಾರಿಯಾದ ಸಂಗತಿ. ಒಟ್ಟಿನಲ್ಲಿ ಇಂಥ ಅನೇಕ ಆಸಕ್ತಿಪೂರ್ಣ ಸಂಗತಿಗಳನ್ನು ವಿವರಿಸುವ ಸವಾಲನ್ನು ಸುಂದರ ಅವರು ಪ್ರಾಕ್ತನಶಾಸ್ತ್ರಜ್ಞರೆದುರು ಇಟ್ಟಿದ್ದಾರೆ ಎಂಬುದಂತೂ ಖಚಿತ.'[31] ರಾಜ್ಯ ಪುರಾತತ್ವ ಇಲಾಖೆಯವರು ಬನವಾಸಿ ಉತ್ಖನನದ ವಿಸ್ತೃತ ವರದಿಯನ್ನು ಪ್ರಕಟಿಸಿರುತ್ತಾರೆ[32].

ಅಡಿಟಿಪ್ಪಣಿ ಮತ್ತು ಆಧಾರ ಗ್ರಂಥಗಳು

1. Indian Archaeology - A Review 1992-93, pp. 46-47; ಶಿವತಾರಕ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪು. 43; 1992ರಲ್ಲೇ ಎ.ಕೆ.ಶರ್ಮ ಅವರು ಕಾರವಾರದ ಬಳಿ ಝುಕೇರಿಯಲ್ಲಿ ಹಳೆಯ ಶಿಲಾಯುಗದ ಆಯುಧವನ್ನು ಹಾಗೂ ಅಂಶೀಯಲ್ಲಿ ನವಶಿಲಾಯುಗದ ನೆಲೆಯನ್ನು ಶೋಧಿಸಿ ವರದಿ ಮಾಡಿದ್ದರು. ಅವರು ಉತ್ತರ ಕನ್ನಡದ ಜೋಯಿಡಾದಲ್ಲಿ ಸಿಕ್ಕ ನವಶಿಲಾಯುಗದ ಕೊಡಲಿಯನ್ನು ವರದಿ ಮಾಡಿದ್ದಾರೆ.
2. Ibid, pp. 47–48; ಅದೇ, ಪು. 41
3. Indian Archaeology - A Review 1972-73, p. 25; Ibid 1992-93, pp.47-48; ಅದೇ, ಪು. 41
4. Indian Archaeology - A Review 1992-93, pp. 47-48; ಅದೇ, ಪು. 42
5. Ibid, pp. 47-48; ಅದೇ, ಪು. 42
6. ಅದೇ, ಪು. 42
7. Indian Archaeology - A Review 1972-73, p. 25; ಅದೇ, ಪು. 43
8. Indian Archaeology - A Review 1992-93, pp. 47-48; ಅದೇ, ಪು. 43
9. ಶಿವತಾರಕ್ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪು. 44–45
10. ಅದೇ, ಪು. 45
11. ಅದೇ, ಪು. 48; 1968–69 ರಲ್ಲಿ ಎಸ್. ಆರ್. ರಾವ್ ಅವರು ಈ ಜಿಲ್ಲೆಯ ಕರಾವಳಿಯಲ್ಲಿ ಅನ್ವೇಷಣೆ ಕೈಗೊಂಡಿದ್ದರು. 1973–74ರಲ್ಲಿ ಡೆಕ್ಕನ್ ಕಾಲೇಜಿನ ಆರ್.ವಿ. ಜೋಶಿ ಮುಂತಾದವರು ಕೂಡ ಸಮುದ್ರ ಮಟ್ಟದ ಅಧ್ಯಯನ ಕೈಗೊಂಡು ಗೋಕರ್ಣ ಮತ್ತು ಕಾರವಾರಗಳಲ್ಲಿ ಸೂಕ್ಷ್ಮ ಶಿಲಾಯುಧಗಳನ್ನು ಶೋಧಿಸಿದರು. 1992–94ರಲ್ಲಿ ಕೊಂಕಣ ರೈಲ್ವೆಯ ನಿರ್ಮಾಣಕ್ಕೂ ಮುಂಚೆ ಕರ್ನಾಟಕ ಕರಾವಳಿಯನ್ನು ವಿಸ್ತೃತವಾಗಿ ಅನ್ವೇಷಣೆಗಳೊಪಡಿಸಿದ್ದರು. ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಎಲ್.ಎಸ್. ರಾವ್ ಅವರ ನೇತೃತ್ವದಲ್ಲಿ ಉತ್ತರ ಕನ್ನಡದಲ್ಲಿ ಭಟ್ಕಳ, ಕುಮಟಾ ಹಾಗೂ ಅಂಕೋಲಾ

ತಾಲೂಕುಗಳಲ್ಲಿ ಕೆಲವು ಸೂಕ್ಷ್ಮ ಶಿಲಾಯುಧಗಳನ್ನು, ಮಿರ್ಜಾನ್ ಹತ್ತಿರ ಆ ಕಾಲದ ಕೆಲವು ಕಲ್ಲಿನ ಆಸರೆಗಳನ್ನು ಶೋಧಿಸಿ ವರದಿ ಮಾಡಿದ್ದಾರೆ. ಹೊನ್ನಾವರದ ನೀಲಕೋಡಿನ ಬಳಿ ನವಶಿಲಾಯುಗದ ಎರಡು ಆಯುಧಗಳನ್ನು ಅವರು ಪತ್ತೆ ಹಚ್ಚಿದ್ದರು.

12. Indian Archaeology - A Review 1992-93, pp. 46-47; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 43
13. Indian Archaeology - A Review 1968-69, p. 24; Indian Archaeology - A Review 1992-93, pp. 47-48; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 44
14. Indian Archaeology - A Review 1992-93, pp. 47-48; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 44
15. Indian Archaeology - A Review 1985-86, p. 45; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 48
16. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 48–49; ಕರ್ನಾಟಕ ಭಾರತಿ, ಸಂ. 6, ಸಂ. 3, ಪು. 96
17. Indian Archaeology - A Review 1968-69, p. 24; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 49
18. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 42; ಸುಂದರ ಅ., ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಪು. 67–69, 1994
19. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 46; ಇತಿಹಾಸ ದರ್ಶನ, ಸಂ. 7, ಪು. 5–6
20. ಅದೇ; ಅದೇ
21. Indian Archaeology - A Review 1970-71, pp. 68; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 46–47
22. Indian Archaeology - A Review 1983-84, pp. 46-47; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 47–48
23. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 48
24. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 49; ಇತಿಹಾಸ ದರ್ಶನ, ಸಂ. 7, ಪು. 5–6; ಎಸ್.ಆರ್. ರಾವ್, ಅ. ಸುಂದರ, ಶಿವತಾರಕ್ ಅವರು ಈ ಜಿಲ್ಲೆಯ ನವಶಿಲಾಯುಗದ ಅವಶೇಷಗಳ ಕುರಿತು ವರದಿ ಮಾಡಿದ್ದಾರೆ. ಉತ್ತರ ಕನ್ನಡದಲ್ಲಿ ಕೆಲವು ಬೃಹತ್ ಶಿಲಾಸಮಾಧಿ ಯುಗದ ಸಮಾಧಿಗಳನ್ನು ಬನವಾಸಿಯ ಬಳಿಯ ಕಂತ್ರಾಜೆಯಲ್ಲಿ, ವರದಾ ದಡದ ಮುತ್ತಕೊಪ್ಪದಲ್ಲಿ, ಸಿದ್ಧಾಪುರದ ಬಳಿಯ ಕಿಲಾರದಲ್ಲಿ, ಶಿರಳಗಿಯಲ್ಲಿ ಹಾಗೂ ದಾಂಡೇಲಿಯಲ್ಲಿ ಗುರುತಿಸಲಾಗಿದೆ. ಈ ಶೋಧ ಕಾರ್ಯವನ್ನು ಅ.ಸುಂದರ, ರಘುನಾಥ ಭಟ್, ಎಸ್.ಎಸ್. ನಾಯಕ, ಗಣಪತಿ ಗೌಡ ಮುಂತಾದವರು ಪ್ರತ್ಯೇಕವಾಗಿ ಮಾಡಿದ್ದಾರೆ. ಮುತ್ತಲಕೊಪ್ಪದಲ್ಲಿ ಕಲ್ಲಿನ ವೃತ್ತ ಸಮಾಧಿ ಹಾಗೂ ಕಿಲಾರದಲ್ಲಿ ಜಂಬಿಟ್ಟಿಗೆ ಕಲ್ಲಿನಲ್ಲಿ ಕೊರೆದ ಸಮಾಧಿಗಳು ಸಿಕ್ಕಿವೆ. ಉತ್ತರ ಕನ್ನಡದಲ್ಲಿ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳನ್ನು ಅಂಕೋಲಾ ಬಳಿಯ ಬೋಳೆ, ಸಹಸ್ರಲಿಂಗ, ಮುಂತಾದೆಡೆಗಳಲ್ಲಿ ಶೋಧಿಸಲಾಗಿದೆ.
25. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 41; ಜನತಾ ಶಿಕ್ಷಣ ಸಮಿತಿ, ಪು. 8–17, 1976; ಕರ್ನಾಟಕ ಭಾರತಿ, ಸಂ. 8, ಸಂ.3, ಪು. 95
26. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 45–46
27. ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 46
28. ಅದೇ, ಪು. 47
29. Indian Archaeology - A Review 1983-84, pp. 46-47; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 47; ಸುಂದರ ಅ., ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ, ಪು. 67–69, 1994; ಕರ್ನಾಟಕ ಭಾರತಿ, ಸಂ. 4, ಸಂ. 1, ಪು. 90–95
30. Indian Archaeology - A Review 1968-69, p. 24; Indian Archaeology - A Review 1970-71, pp. 29-34; Indian Archaeology - A Review 1983-84, pp. 46-47; ಶಿವತಾರಕ್, ಕೆ.ಬಿ., ಪೂರ್ವೋಕ್ತ, ಪು. 47
31. ಡಾ. ರಾಜಾರಾಮ ಹೆಗಡೆ ಅವರು ಉತ್ತರ ಕನ್ನಡ ಜಿಲ್ಲೆ ಇತಿಹಾಸ ಮತ್ತು ಪುರಾತತ್ವ ಸಮ್ಮೇಳನದಲ್ಲಿ ನೀಡಿದ ಅಧ್ಯಕ್ಷ ಭಾಷಣದ ಉದ್ಧೃತ ಭಾಗ.
32. Narasimhamurthy, A.V., Devaraj D.V., et.al, Excavations at Banavasi, Department of Archaeology and Museums, Mysore, 1997.

❑

ಕರಾವಳಿಯ ಅದ್ಭುತ ಮಿರ್ಜಾನ ಕೋಟೆ

– ಶ್ರೀ ಗಣಪತಿ ಎನ್ ನಾಯಕ. ಕೋನಳ್ಳಿ

ಪೀಠಿಕೆ

ಹಲವಾರು ಸಂಶೋಧನೆಗಳಿಂದ, ಸರ್ವೇಕ್ಷಣಗಳಿಂದ, ಉತ್ತರಕನ್ನಡ ಜಿಲ್ಲೆಯ ಪುರಾತತ್ವ ಮತ್ತು ಸಾಂಸ್ಕೃತಿಕ ಅಧ್ಯಯನ ದೇಶದ ಇನ್ನಿತರ ಪ್ರದೇಶಗಳಲ್ಲಿ ದೊರೆತಂತೆ ಈ ಜಿಲ್ಲೆಯು ವಿಭಿನ್ನ ರೀತಿಯ ಐತಿಹಾಸಿಕ ಶ್ರೀಮಂತಿಕೆಯಲ್ಲಿ ಇದ್ದುದ್ದು ಈಗಿನ ಇತಿಹಾಸ ತಜ್ಞರ ಸಂಶೋಧ ತಜ್ಞರ ಗಮನಸೆಳೆಯುತ್ತಿದೆ. ಹಲವಾರು ಸಂಶೋಧಕರು ಇತಿಹಾಸ ತಜ್ಞರು ಇಲ್ಲಿ ಸರ್ವೇಕ್ಷಣ ಕಾರ್ಯಗಳನ್ನು ಕೈಗೊಂಡು ಈ ಜಿಲ್ಲೆಯ ಪ್ರಾಚೀನ ಸಂಸ್ಕೃತಯು ಶಿಲಾಯುಗದಿಂದ ಇತ್ತೀಚಿನ ಶತಮಾನಗಳವರೆಗೂ ಆಧಾರದ ಸಹಿತವಾಗಿ ಬೆಳಕು ಚೆಲ್ಲುತ್ತದೆ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿದ ಪವಿತ್ರ ನದಿಗಳಾದ ಕಾಳಿ, ಗಂಗಾವಳಿ, ಶರಾವತಿ, ಅಘನಾಶಿನಿ, ಹಾಗೂ ಇನ್ನಿತರ ಉಪನದಿಗಳು ಅರಬ್ಬಿ ಸಮುದ್ರದ ಕಡೆಗೆ ಹರಿದು ಬಂದು ತನ್ನ ಪರಿಸರದಲ್ಲಿ ದಟ್ಟ ಅರಣ್ಯಗಳು ವಿಶಾಲ ಬಯಲು ಪ್ರದೇಶ ಹೊಂದಿದೆ. ಕೆಲವು ಆಶ್ರಿತ ನದಿಗಳಾದ ವರದಾ ನದಿ ಪೂರ್ವದಿಕ್ಕಿನಲ್ಲಿ ಸಂಚರಿಸುತ್ತಿದೆ. ಈ ನದಿಗಳ ಪ್ರಸ್ತರ ಪ್ರದೇಶ ಮತ್ತು ಗುಡ್ಡಗಾಡುಗಳು ನಮ್ಮ ಪೂರ್ವಜರ ಜನಜೀವನಕ್ಕೆ ಆಶ್ರಿತವಾಗಿದೆ. ಅಷ್ಟೇ ಅಲ್ಲದೇ ಕ್ರಿಪೂ ಕಾಲದಿಂದಲೂ ಕೊನೆಯ ಮಧ್ಯಕಾಲಿನವರೆಗಿನ ಐತಿಹಾಸಿಕ ಅವಶೇಷಗಳು ಮತ್ತು ಸಂಸ್ಕೃತಿಯೂ ನಮ್ಮ ಅಧ್ಯಯನಕ್ಕೆ ಅನುವು ಮಾಡಿಕೊಟ್ಟಿದೆ. ಈ ಜಿಲ್ಲೆಯನ್ನು ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಆಳುಪರು, ಹೊಯ್ಸಳರು, ಕಲ್ಯಾಣಿ ಚಾಲುಕ್ಯರು, ವಿಜಯನಗರದ ಅರಸರು, ಬಿಳಿಗಿಯ ಒಡೆಯರು, ಕೆಳದಿ ರಾಜ ರಾಜಮನೆತನದವರು, ವಿಜಾಪುರದ ಆದಿಲ್ ಶಾಹಿಗಳ, ಮರಾಠರು, ಪೋರ್ಚುಗೀಸರು, ಡಚ್ಚರು, ಫ್ರೆಂಚರು, ಬ್ರಿಟಿಷರು, ಹೈದರ ಟಿಪ್ಪುಸುಲ್ತಾನ, ಹಾಗೂ ಹಲವಾರು ಸಾಮಂತರೂ ಸುಲ್ತಾನರು, ಕೋಟೆಯ ಕೊತ್ತಲಗಳನ್ನು ಕಟ್ಟಿದ್ದುದಕ್ಕೆ ಇಂದು ಅವುಗಳ ಜೀರ್ಣಾವಸ್ಥೆಯ ಅವಶೇಶ ಪ್ರತಿ ತಾಲೂಕಗಳಲ್ಲಿ ಕಂಡುಬರುತ್ತದೆ. ಇವು ನಮ್ಮ ಐತಿಹಾಸಿಕ ಗತವೈಭವದ ಸ್ಪಷ್ಟ ಚಿತ್ರಣವಾಗಿದೆ. ಹಾಗೂ ನಮ್ಮ ಶ್ರೀಮಂತಿಕೆಯ ಪರಂಪರೆಯಾಗಿ ಉಳಿದಿದೆ.

ಉತ್ತರ ಕನ್ನಡ ಜಿಲ್ಲೆಯಿಂದಲೇ ಕನ್ನಡ ಭಾಷೆಯು. ಜನಿಸಿದ್ದಕ್ಕೆ ಈ ಜಿಲ್ಲೆಯಲ್ಲಿ ಸಿಕ್ಕಿರುವ ಹಲವಾರು ಪ್ರಾಕೃತ, ಸಂಸ್ಕೃತ ಭಾಷೆಗಳೊಂದಿಗೆ ಹಾಗೂ ಬನವಾಸಿ ಕದಂಬರ ಕಾಕುಸ್ಥವರ್ಮನ ಹಲ್ಮಿಡಿ ಶಾಸನದಿಂದ ತಿಳಿದು ಬರುತ್ತಿದೆ. ಈ ಶಾಸನದಲ್ಲಿ ಇರುವ ಶಬ್ದ ವೈಭವವು ಇದರ ಪ್ರಾಚೀನತೆ ಮತ್ತು ಉಚ್ಚಾರಯ ಸ್ಥಿತಿಯ ಬಗ್ಗೆ ನಮಗೆ ತಿಳಿದುಬರುತ್ತದೆ. ಈ ವಿಷಯವನ್ನು ಹಲವಾರು ಸಂಶೋಧಕರು ತಮ್ಮ ಅಭಿಪ್ರಾಯದಲ್ಲಿ ವ್ಯಕ್ತಪಡಿಸಿರುತ್ತಾರೆ. ಪ್ರಸ್ತುತವಾಗಿ ನಾನು ಕರಾವಳಿ ಜಿಲ್ಲೆಯ ಸಮೃದ್ಧಿಯತೆ ಹೊಂದಿರುವ ಅದ್ಭುತ ಮಿರ್ಜಾನ ಕೋಟೆಯ ಬಗ್ಗೆ ಅಭ್ಯಸಿಸಿ ಈ ವಿಚಾರಸಂಕಿರಣದಲ್ಲಿ ನನ್ನ ಸಂಶೋದನಾತ್ಮಕ ಅಭಿಪ್ರಾಯವನ್ನು ತಿಳಿಯ ಬಯಸುವುದಕ್ಕೆ ನನಗೆ ಹೆಮ್ಮೆ ಇದೆ. ಈ ಕೋಟೆಯು ಕುಮಟಾದಿಂದ 7 ಕಿ.ಮಿ ಉತ್ತರ ದಿಕ್ಕಿಗಿದ್ದು ರಾಷ್ಟ್ರೀಯ ಹೆದ್ದಾರಿ 66 ಕ್ಕೆ ಹೊಂದಿಕೊಂಡಿರುತ್ತದೆ. ಈ ಕೋಟೆಯು ಮಿರ್ಜಾನ ರಾಷ್ಟ್ರೀಯ ಹೆದ್ದಾರಿಯಿಂದ ಕೆಲವೇ ದೂರ ದಕ್ಷಿಣಕ್ಕೆ ಇದ್ದು ಹಲವಾರು ಪ್ರವಾಸಿಗರನ್ನು ಆಕರ್ಷಿಸುತ್ತದೆ. ಈ ಕೋಟೆಯನ್ನು 11 ಮತ್ತು

12ನೇ ಶತಮಾನದಲ್ಲಿ ಚಂದಾವರ ಕದಂಬರು ಮಣ್ಣಿನ ಗೋಡೆಗಳಿಂದ ಕಟ್ಟಿದ್ದರು ಎಂಬುದಕ್ಕೆ ಅಲ್ಲಿರುವ ಸರ್ವೇಕ್ಷಣ ಮತ್ತು ಅವಶೇಷಗಳಿಂದ ತಿಳಿದುಬರುತ್ತದೆ.

ಈ ಕೋಟೆಯು ಸರ್ವಋತು ಹರಿಯುವ ಜೀವನದಿ ಅಘನಾಶಿನಿ ನದಿ ತೀರದಲ್ಲಿದ್ದು ಚಂದಾವರ ಕದಂಬರು ಆಮೇಲೆ ಬಂದಂತ ರಾಜರು, ಸುಲ್ತಾನರು, ತಮ್ಮ ವಾಣಿಜ್ಯಕ್ಕೆ ಬಳಸಿಕೊಂಡಿರಬಹುದು ಎಂಬುದಕ್ಕೆ ಅಲ್ಲಿರುವ ಅವಶೇಷಗಳು ಮತ್ತು ಕೋಟೆಯ ರಚನೆ ವಾಸ್ತು ಶಿಲ್ಪಗಳಿಂದ ತಿಳಿದುಬರುತ್ತದೆ. ಕರಾವಳಿಯ ಇನ್ನಿತರ ಹಲವಾರು ಕೋಟೆಗಳನ್ನು ಹೋಲಿಸಿದಾಗ ಉದಾಹರಣೆಗೆ ಸದಾಶಿವಗಡ, ಅಂಕೋಲಾ, ಹೊನ್ನಾವರ, ಚಂದಾವರ, ಮೇದಿನಿ, ಮಂಗಳೂರು, ಬೇಕಲ ಕೋಟೆ, ಮಂಜೇಶ್ವರ, ಕೋಟೆ ಇತ್ಯಾದಿ ಈ ಎಲ್ಲಾ ಕೋಟೆಗಳಿಗೆ ಹೋಲಿಸಿದಾಗ ಮಿರ್ಜಾನ್ ಕೋಟೆ ಒಂದು ಅದ್ಭುತವಾದ ಕಲಾ ವಿಸ್ತಾರ ಹೊಂದಿದೆ, ಈ ಗ್ರಾಮದ ಪ್ರಾಚೀನತೆಯೂ ಒಂದನೇ ಶತಮಾನದಿಂದ 19ನೇ ಶತಮಾನದವರೆಗಿನ ಐತಿಹಾಸಿಕ ಬರವಣಿಗೆಗಳಿಂದ ತಿಳಿದುಬರುತ್ತದೆ. ಗ್ರೀಕರು ಮತ್ತು ರೋಮನ್ನರು ಈ ಗ್ರಾಮವನ್ನು "ಮರ್ಘುರಿಸ್ಸ್" ಎಂದು ಕರೆದರು. ತದನಂತರ ಕನ್ನಡದಲ್ಲಿ ಮಿಡಜೆ ಎಂಬುದು ಪ್ರಚಲಿತವಾಗಿತ್ತು. ಕ್ರಿಶ 77ರಲ್ಲಿ "ಪ್ಲೇನಿ". ಕ್ರಿಶ 100 ರಲ್ಲಿ "ಪುಟಂಜರ್" ಕ್ರಿ.ಶ. 150 ರಲ್ಲಿ "ಟಾಲಾಮಿ" ಮತ್ತು ಕ್ರಿಶ 247 ರಲ್ಲಿ ಫೇರಿಪ್ಲಸ್ ರವರ ಇತಿಹಾಸ ಬರಹಗಳು ಈ ಊರಿನ ಬಗ್ಗೆ ಪ್ರಸ್ತಾಪಿಸುತ್ತದೆ. ಇದೊಂದು ಪ್ರಾಚೀನ ಬಂದರು ಆಗಿದ್ದು ಮರ್ಘುರಿಸ್ಸ್ ಎಂಬ ಹೆಸರೇ ಮಿರ್ಜಾನ್ ಎಂದಾಯಿತು. ಆದರೆ ವಿಜಯನಗರ ಕಾಲದ ವರೆಗೂ ಯಾವ ಬರಹಗಳು ಪ್ರಸ್ತುತ ದೊರೆಯದೆ ಹಲವಾರು 15 ಮತ್ತು 16ನೇ ಶತಮಾನದ ಶಿಲಾಶಾಸನಗಳು ಕೆಲವು ವಿವರಣೆಗಳನ್ನು ಕೊಡುತ್ತಿದೆ. ಇಂತಹ ಶಾಸನಗಳು ವಸ್ತುಸಂಗ್ರಾಲಯ ಪಾಲಾಗಿದ್ದು ಎರಡು ಶಿಲಾಶಾಸನಗಳು ಕನ್ನಡ ಸಂಶೋಧನ ಸಂಸ್ಥೆ (K.R.I) ಧಾರವಾಡದಲ್ಲಿದೆ. ಹಲವಾರು ಶಿಲಾ ಅವಶೇಷಗಳು ಭಗ್ನಗೊಂಡ ವೀರಗಲ್ಲುಗಳು ಈ ಕೋಟೆಯೊಳಗೆ ಇಂದಿಗೂ ಇಲ್ಲಿನ ಗತವೈಭವದ ಸಾಕ್ಷಿಯಾಗಿ ಉಳಿದುಕೊಂಡಿದೆ.

ವಿಜಯನಗರದ ಪತನ ನಂತರ ಈ ಕೋಟೆಯು ಗುಲಬರ್ಗದ ಬಹುಮನಿಷಾಹಿಗಳ ಆಡಳಿತಕ್ಕೆ ಒಳಪಟ್ಟು ನಂತರ ವಿಜಾಪುರ ಆದಿಷಾಹಿಗಳು ತಮ್ಮ ವಶಕ್ಕೆ ಪಡೆದುಕೊಂಡರು. ಮೇಲೆ ಹೇಳಿದಂತೆ ಉತ್ತರಕನ್ನಡ ಜಿಲ್ಲೆ ಚಿಕ್ಕ ಅರಸು ಮನೆತನದವರು ಈ ಕೋಟೆಯನ್ನು ತಮ್ಮ ಸುಪರ್ದಿಗೆ ವಹಿಸಿಕೊಂಡು ಹಲವಾರು ಮಾರ್ಪಾಡುಗಳನ್ನು ಮಾಡಿ ಆಮೇಲೆ ಪೋರ್ಚುಗೀಸರ ವಶವಾಯಿತು. ನಂತರ ಹೈದರಾಲಿ ಹಾಗೂ ಟಿಪ್ಪು ಸುಲ್ತಾನರ ಅಧೀನಕ್ಕೆ ಒಳಪಟ್ಟತು. ಆನಂತರ ಆಂಗ್ಲೋ–ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಪತನವಾಗಿ ನಂತರ ಕೊನೆಗೆ ಬ್ರಿಟೀಷರ ಕೈವಶವಾಯಿತು. ಕೋಟೆಯ ಒಳ ಭಾಗ 12 ಎಕರೆಯಷ್ಟು ವಿಸ್ತಾರ ಹೊಂದಿದ್ದು ಅಷ್ಟಕೋನಾಕೃತಿಯಲ್ಲಿ ರಚನೆಯಾಗಿದೆ. ಎತ್ತರವಾದ ಮಣ್ಣಿನ ದಿಬ್ಬದ ಮೇಲೆ ಕೆಂಪು (leterite) ಕಲ್ಲಿನಲ್ಲಿ ಈ ಕೋಟೆ ಕಟ್ಟಲ್ಪಟ್ಟಿದೆ. ನಾಲ್ಕು ದಿಕ್ಕಿಗೆ ನಾಲ್ಕು ಪ್ರವೇಶದ್ವಾರಗಳನ್ನು ಒಳಗೊಂಡಿದ್ದು ಉತ್ತರದಲ್ಲಿ ವಿಶಾಲ ಮತ್ತು ಪ್ರಮುಖವಾದ ದ್ವಾರ ಹೊಂದಿದೆ. ಕೋಟೆಯ ಸುತ್ತಲೂ ಆಳವಾದ ಕಂದಕವಿದೆ. ಇದು ಅಘನಾಶಿನಿ ನದಿಯ ಕುದುರೆ ಹಳ್ಳದ ನೀರಿನಿಂದ ಜೋಡಿಸಿದ್ದು ಸದಾಕಾಲ ಕಂದಕ ತುಂಬಿರುವಂತೆ ವ್ಯವಸ್ತಿತವಾಗಿ ಮಾಡಿರುವದಕ್ಕೆ ಅವಶೇಷಗಳಿಂದ ತಿಳಿದು ಬರುತ್ತದೆ. ಈ ಕುದುರೆ ಹಳ್ಳವು 5 ರಿಂದ 10 ಮೀಟರ್ ಗಳಷ್ಟು ಅಗಲವಾಗಿದ್ದು ನೇರವಾಗಿ ಅಘನಾಶಿನಿ ನದಿಗೆ ಸಂಪರ್ಕ ಹೊಂದಿರುರುತ್ತದೆ. ಸಂಪರ್ಕಕ್ಕೆ ಒಳಗೊಂಡ ಈ ಕುದುರೆ ಹಳ್ಳದ ಎರಡೂ ಬದಿಗೆ ಕಲ್ಲಿನಿಂದ ಕಟ್ಟಿದ ಆಧಾರ ದಂಡೆ ಗೋಡೆಗಳ ಅವಶೇಷಗಳು ಇಂದಿಗೂ ಕಾಣುತ್ತಿವೆ. ಹಳ್ಳದಿಂದ ನೇರವಾಗಿ ನಾವಿಕರು ಕೋಟೆಯ ಕಂದಕದ ಮುಖಾಂತರ ಪ್ರವೇಶಿಸುತ್ತಿದ್ದಿರಬಹುದು ಎಂಬುದರ ಬಗ್ಗೆ ಕೋಟೆಯ ನಾಲ್ಕು ದಿಕ್ಕಿನಲ್ಲಿ ಅಲಂಕೃತ ಗುಪ್ತ ದ್ವಾರಗಳು ಇಂದಿಗೂ ಕಾಣುತ್ತಿದೆ. ಐತಿಹಾಸಿಕ ಹಿನ್ನೆಲೆ ತಿಳಿದುಬರುವುದೇನೆಂದರೆ ಅರಬೀ ಸಮುದ್ರದಲ್ಲಿ ನಿಂತ ದೊಡ್ಡ ಹಾಯ ಕಟ್ಟಿದ ದೋಣಿಯು ತಂಗುತ್ತಿದ್ದು ಸಣ್ಣ ದೋಣಿಳಿಂದ ಕುದುರೆ ಹಳ್ಳದ ಮುಖಾಂತರ ವ್ಯಾಪಾರ ಮತ್ತು ಕುದುರೆ ಸಾಗಾಟ ನಡೆಸುತ್ತಿದ್ದರು ಎಂಬುದಕ್ಕೆ ಭಾರತೀಯ ಪುರಾತತ್ವ ಸರ್ವೇಕ್ಷಣ ನಡೆಸಿದ ಉತ್ಖನನ ಸಂಶೋಧನೆಯಲ್ಲಿ ದೊರೆತ ಕುದುರೆಗೆ ತೊಡಿಸುವ ಕಬ್ಬಿಣದ ಯುದ್ಧ ಆಭರಣಗಳು ದೊಡ್ಡಪ್ರಮಾಣದಲ್ಲಿ ದೊರೆತಿರುವುದಕ್ಕೆ ಪುರಾವೆಗಳು ಇವೆ. ಈ ಕೋಟೆಯ ಒಳಭಾಗದಲ್ಲಿ ಹುದುಗಿ ಹೋದ ಕಲ್ಲಿನಿಂದ ಕಟ್ಟಿದ ಅರಮನೆ ಅವಶೇಷಗಳು ರಾಜರ ದರ್ಬಾರಗಳು ಉತ್ಖನನದಿಂದ ಬೆಳಕಿಗೆ ಬಂದಿದೆ.

ಬೃಹತ್ ಆಕಾರದ ಈ ಕಟ್ಟಡಗಳ ಅವಶೇಷಗಳ ಮಧ್ಯದಲ್ಲಿ ಆಧಾರಸ್ಥಂಭವಾಗಿ ನಿಲ್ಲಲು ಮರದ ಸ್ಥಂಬಕ್ಕಾಗಿ ಗೋಲಾಕಾರದ ಕುಳಿಗಳು ಸಮಾನಾಂತರದಲ್ಲಿ ಇರುವುದು ಕಟ್ಟಡದ ವಿಶೇಷತೆಯನ್ನು ತೋರಿಸುತ್ತದೆ. ಉತ್ಖನನ ನಡೆದ ಸ್ಥಳದಲ್ಲಿ ಬೃಹತ್ ಪ್ರಮಾಣದಲ್ಲಿ ಹಂಚು ಚೂರುಗಳು ಸಿಕ್ಕಿರುವುದರಿಂದ ಅರಮನೆಯ ಮೇಲ್ಛಾವಣಿ ಹಂಚಿನಿಂದ ಹೊದಿಕೆಯಾಗಿರ ಬಹುದು ಎಂದು ತಿಳಿದುಬರುತ್ತದೆ. ಅರಮನೆಯ ಆಡಳಿತಕ್ಕೆ ಸಂಬಂಧಪಟ್ಟ ಸಭಾಂಗಣದ ಅವಷೇಶಗಳು ದೊರಕಿವೆ. ಇಲ್ಲಿ ಕಟ್ಟಡಾವಷೇಶಗಳಲ್ಲಿ ಸುಟ್ಟ ಕರಿಮೆಣಸು, ಭತ್ತ ಅಕ್ಕಿಯ, ಅವಶೇಷಗಳು ಬೀಸುವಕಲ್ಲು ಬೃಹದಾಕಾರದ ಬಂಡಿಗಳು (ತೊವೆ) ಕೆರೆಮಣೆಗಳು ಶಿತಿಲಾವಸ್ಥೆಯಲ್ಲಿ ಸಿಕ್ಕಿವೆ. ವೃತ್ತಾಕಾರದ ನೀರಿನ ತೊಟ್ಟಿ ಧಾನ್ಯ ಸಂಗ್ರಹ ಮಾಡಿರುವ ನೆಲಮಾಳಿಗೆಯ ಕೋಣೆಗಳು, ನೀರಿನ ಕುಳಾಯಿ, ನೀರಿನ ಕಾಲುವೆಗಳು, ರಾಜ ವಾಸ್ತವ್ಯದಕ್ಕೆ ಸಾಕ್ಷಿಯಾಗಿದೆ. ಈ ಕೋಟೆಯು ಕೇವಲ ರಕ್ಷಣಾ ಕೋಟೆಯಾಗಿರದೇ ವ್ಯಾಪಾರ ಮತ್ತು ಆಡಳಿತಕ್ಕೆ ಸಂಭಂದಿಸಿರಬಹುದೆಂದು ತಿಳಿದು ಬರುತ್ತದೆ. ಈ ಕೋಟೆಯನ್ನು ಸಂಶೋಧಿಸಿದಾಗ 75 ಸಂಖ್ಯೆಯಲ್ಲಿ ದೊರೆತ ತೋಪಿನ ಗುಂಡುಗಳು, ತೂಕದ ಕಲ್ಲುಗಳು ನಾಣ್ಯಗಳು, ಸುಟ್ಟ ಮಣ್ಣಿನ ಮುದ್ರೆಗಳು, ಚೀನಾದ ಪಿಂಗಾಣಿ ಪಾತ್ರೆಗಳು, ತಾಮ್ರದ ಉಂಗುರ ಕಬ್ಬಿಣದ ಬಾಚಿ ಕೊಡಲಿ ಸುತ್ತಿಗೆ ಮೊಳೆಗಳು ದೊರೆತಿದ್ದು ಗಮನಾರ್ಹವಾಗಿದೆ. ಪೋರ್ಚುಗೀಸರ ಕಾಲವಧಿಯ ತಾಮ್ರದ ನಾಣ್ಯಗಳು ಗೋವಾದಲ್ಲಿ ಟಂಕಿಸಲಾದ ಕ್ರಿಶ 1652ರ ಬಂಗಾರದ ನಾಣ್ಯಗಳು ಹಾಗೆಯೇ ಸಮಕಾಲೀನ ಮಡಿಕೆ ಕುಡಿಕೆಗಳು ಗೃಹಬಳಕೆಯ ಲೋಹದ ವಸ್ತುಗಳು ಹಲವಾರು ರೀತಿಯ ಮಣಿಗಳು ಇವುಗಳನ್ನು ಗಮನಿಸಿದಾಗ ಈ ಕೋಟಯು ಕೊನೆಯ ಮಧ್ಯಕಾಲೀನ ಯುಗದಲ್ಲಿ ಅಂದರೆ 15 ರಿಂದ 19ನೇ ಶತಮಾನದವರೆಗೆ ಸಾಗರೋತ್ತರ ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದದು ತಿಳಿದುಬರುತ್ತದೆ.

ಈ ಕೋಟೆಯಲ್ಲಿ ವೃತ್ತಾಕಾರದ 11 ಇಳಿಜಾರು ಬುರುಜುಗಳಿದ್ದು ಎತ್ತರವಾದ ಕಮಾನು ಗೋಡೆಯ ಮೇಲೆ ಸುತ್ತಲೂ ರಕ್ಷಣಾ ವೇದಿಕೆಯಂತೆ ಕಟ್ಟಿ ಮಧ್ಯ ಮಧ್ಯ ತುಪಾಕಿ ರಂದ್ರಗಳನ್ನು ಇಡಲಾಗಿದೆ. ಈ ಕಮಾನುಗಳ ಹಿಂದೆ ಕೋಟೆಯ ಗೋಡೆಯ ಮೇಲೆ ಒಂದು ಮೀಟರ್ ಗಿಂತಲೂ ಅಗಲವಾದ ಇಬ್ಬರು ಮನುಷ್ಯರು ಓಡಾಡುವಂತೆ ಸ್ಥಳಾವಕಾಶವನ್ನು ಕಲ್ಪಿಸಲಾಗಿದೆ. ಮುಖ್ಯ ದ್ವಾರದ ಎದುರಿಗೆ ಕಂದಕ ಹಾಗೂ ಪ್ರವೇಶದ್ವಾರಗಳನ್ನು ತೋರಿಸುವ ಸೇತುವೆ ಮಾರ್ಗದ ಅವಶೇಷಗಳಿವೆ. ಮುಸ್ಲೀಂ ಮತ್ತು ಪೋರ್ಚುಗೀಸರ ವಾಸ್ತುಶಿಲ್ಪವನ್ನು ಅಳವಡಿಸಿ ಕಟ್ಟಲಾದ ಈ ಕೋಟೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ದೊಡ್ಡದಾದ ಹಾಗೂ ಬಲಿಷ್ಠವಾದ ಕೋಟೆಯಾಗಿದ್ದು ಅತ್ಯುತ್ತಮ ಸಂರಕ್ಷಣಾ ಅಂಶಗಳನ್ನು ಇಲ್ಲಿ ಅಳವಡಿಸಿ ಕಟ್ಟಲಾಗಿದೆ. ಪ್ರಸ್ತುತ ಕೋಟೆಯೊಳಗೆ ಕಲ್ಲಿನಿಂದ ಕಟ್ಟಲ್ಪಟ್ಟ ಮೂರು ಬೃಹದಾಕಾರದ ಬಾವಿಗಳು ಇಂದಿಗೂ ಜೀವಂತವಾಗಿದೆ. ಈ ಕೋಟೆಯು ಬೇರೆ ಯಾವ ಕೋಟೆಗೂ ಹೋಲಿಸಲಾಗದಷ್ಟು ವಿಶೇಷತೆಗಳನ್ನು ಹೊಂದಿರುವುದರಿಂದ ಇದೊಂದು ಅದ್ಬುತ ಕೋಟೆಯೇ ಸರಿ. ಸಂಶೋಧಕರಿಗೆ ಇತಿಹಾಸ ತಜ್ಞರಿಗೆ ಭವಿಷ್ಯದಲ್ಲಿ ಸಂಶೋಧಿಸಲು ಹಲವಾರು ಅವಕಾಶಗಳಿವೆ ಹಾಗೂ ವಿಶೇಷ ಅದ್ಭುತಗಳು ಕಂಡುಬರುವ ಸಾಧ್ಯತೆಗಳಿವೆ.

❑

ಉತ್ತರ ಕನ್ನಡದ ಕೃಷಿ ಚಟುವಟಿಕೆಗಳು : ಫ್ರಾನ್ಸಿಸ್ ಬುಕಾನನ್ ಕಂಡಂತೆ

ಡಾ. ಬಿ. ಜಗದೀಶ ಶೆಟ್ಟಿ

ಫ್ರಾನ್ಸಿಸ್ ಬುಕಾನನ್‌ನ "Journey From Madras Through the countries of Mysore Canara and Malabar" ಕರಾವಳಿ ಕರ್ನಾಟಕದ ಕುರಿತಾದ ಅಧ್ಯಯನಕ್ಕೆ ಒಂದು ಉತ್ತಮ ಆಕರ ಗ್ರಂಥ. ಈ ಪ್ರಬಂಧದಲ್ಲಿ ಅವನು ತನ್ನ ಪ್ರವಾಸದ ಕಾಲದಲ್ಲಿ ಉತ್ತರಕನ್ನಡ ಜಿಲ್ಲೆಯ ಕೃಷಿ ಚಟುವಟಿಕೆಗಳ ಕುರಿತು ಮಾಡಿರುವ ಉಲ್ಲೇಖವನ್ನು ಅಧ್ಯಯನ ಮಾಡುವ ಪ್ರಯತ್ನವನ್ನು ಮಾಡಲಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅವನು ನೀಡಿರುವ ವಿವರಣೆಯಲ್ಲಿ ಅನೇಕ ವಿಚಾರಗಳು ಒಳಗೊಂಡಿದ್ದರೂ, ಬೇಸಾಯಕ್ಕೆ ಸಂಬಂಧಿಸಿದ ಹೆಚ್ಚು ವಿವರಣೆಗಳು ಕಂಡುಬರುತ್ತಿದ್ದು ಅದರ ಬಗ್ಗೆ ಇಲ್ಲಿ ಹೆಚ್ಚು ಗಮನವನ್ನು ನೀಡಲಾಗಿದೆ.

ಫ್ರಾನ್ಸಿಸ್ ಬುಕಾನನ್ ಉತ್ತರಕನ್ನಡ ಜಿಲ್ಲೆಯ ಭಟ್ಕಳದ ಬಗ್ಗೆ ವಿವರಿಸುತ್ತಾ ಇಲ್ಲಿ ತೆಂಗಿನ ತೋಟವನ್ನು ಉತ್ತಮ ರೀತಿಯಲ್ಲಿ ಬೆಳೆಸಲಾಗಿದ್ದು ಅವುಗಳು ದಕ್ಷಿಣ ಕನ್ನಡಕ್ಕಿಂತ ಉತ್ತಮವಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.[1] ಈ ಭಾಗದಲ್ಲಿ ಮುಸಲ್ಮಾನರು, ಬ್ರಾಹ್ಮಣರು ಹಾಗೂ ಹಳೆಪೈಕರು ಹೆಚ್ಚಿನ ಸಂಖ್ಯೆಯಲ್ಲಿದ್ದ ಬಗ್ಗೆಯೂ ತಿಳಿಸುತ್ತಾನೆ.[2] ಅನಂತರ ಹೊನ್ನಾವರಕ್ಕೆ ಪ್ರಯಾಣ ಬೆಳೆಸಿದ ಅವನು ಅಲ್ಲಿ ಕೆಲವು ಕಡೆ ಮಣ್ಣು ಉತ್ತಮ ಗುಣಮಟ್ಟದ್ದಾಗಿಲ್ಲ. ಮುರ ಕಲ್ಲುಗಳಿಂದ ಕೂಡಿದೆ. ಇತರ ಕಡೆ ಮಣ್ಣು ಉತ್ತಮವಾಗಿದ್ದು ನೆಲ ಸಮತಟ್ಟಾಗಿಲ್ಲ. ಆದರೆ ಅದನ್ನು ಬೆಟ್ಟು ಭೂಮಿಯಾಗಿ ಪರಿಗಣಿಸಲಾಗುತ್ತಿದ್ದು ಅಲ್ಲಿ ಭತ್ತವನ್ನು ಬೆಳೆಯುತ್ತಿದ್ದರು ಎಂದು ತಿಳಿಸುತ್ತಾನೆ. ಶಿರಾಲಿ ನದಿಯ ತಟದ ಭಾಗದಲ್ಲಿ ಹೆಚ್ಚಿನ ಭತ್ತ ಬೆಳೆಯುವ ಭೂಮಿ ಇದ್ದು, ತೆಂಗಿನ ಬೆಳೆಯೂ ಸಮೃದ್ಧವಾಗಿದೆ ಎಂಬುದಾಗಿ ವಿವರಿಸುತ್ತಾನೆ. ಅಲ್ಲಿಂದ ಬೈಲೂರಿಗೆ ಪ್ರಯಾಣ ಬೆಳೆಸಿದಾಗ ಬುಕಾನನ್ ಕಂಡು ಕೊಂಡದ್ದು ದೊಡ್ಡ ಸಂಖ್ಯೆಯಲ್ಲಿ ಬೆಳೆದ ಹೊಂಗೆ ಮರಗಳು. ಹೆಚ್ಚಾಗಿ ಅವುಗಳನ್ನು ಸಮುದ್ರಕ್ಕೆ ತಾಗಿಕೊಂಡು ಹೊಯಿಗೆ ಜಾಗದಲ್ಲಿ ಬೆಳೆಯುತ್ತಿದ್ದರು. ಇದರಿಂದ ದೀಪದ ಎಣ್ಣೆಯನ್ನು ತೆಗೆಯುತ್ತಿದ್ದರು.[3] ಉತ್ತರಕನ್ನಡದ ಬೈಲೂರು ಪ್ರದೇಶದಲ್ಲಿ ತೆಂಗಿನ ತೋಟ ಕಡಿಮೆಯಾದದ್ದನ್ನು ತಿಳಿಸುತ್ತಾನೆ. ಒಂದು ಉತ್ತಮ ತೆಂಗಿನಮರ ವರ್ಷವೊಂದಕ್ಕೆ 50 ಕಾಯಿಗಳನ್ನು ನೀಡುತ್ತದೆ. ಇಲ್ಲಿನ ಭೂಮಿ ತುಂಬಾ ಫಲವತ್ತಾಗಿದೆ. ಹೊನ್ನಾವರವನ್ನು ದಾಟಿ ಹಳದಿಪುರಕ್ಕೆ ಬಂದ ಬಗ್ಗೆ ಉಲ್ಲೇಖಿಸುತ್ತಾ ಅಲ್ಲಿನ ವ್ಯವಸಾಯದ ಬಗ್ಗೆ ತಿಳಿದುಕೊಳ್ಳಲು ಮಾಡಿದ ಪ್ರಯತ್ನವನ್ನು ದಾಖಲಿಸುತ್ತಾನೆ. ಇಲ್ಲಿ ಹೆಚ್ಚಿನ ಬ್ರಾಹ್ಮಣರು ವ್ಯವಸಾಯಗಾರರು ಅವರು ನರಿಗಳಂತೆ ಕುತಂತ್ರಿಗಳು.

ಹೈಗಾ ಭಾಗದಲ್ಲಿ ಹೆಚ್ಚಿನ ಭೂಮಿ ಖಾಸಗಿ ಒಡೆತನದಲ್ಲಿತ್ತು. ಗುಡ್ಡ ಬೆಟ್ಟಗಳು ಹಾಗೂ ಕಾಡುಗಳು ಸರಕಾರಿ ಒಡೆತನದಲ್ಲಿದ್ದವು. ಎಲ್ಲರೂ ಭೂ ತೆರಿಗೆಯನ್ನು ನೀಡಿ ತಮ್ಮ ಮನಬಂದಂತೆ ಬೇಸಾಯ ಮಾಡುತ್ತಿದ್ದರು. ಆದುದರಿಂದ ತನಗೆ ತೆರಿಗೆ ಎಷ್ಟರ ಮಟ್ಟಿಗೆ ನ್ಯಾಯ ಸಮ್ಮತ ಅಥವಾ ಸುಲಿಗೆಯಾಗಿತ್ತು ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗಿಲ್ಲ ಎಂಬುದಾಗಿ ಬುಕಾನನ್ ತಿಳಿಸುತ್ತಾನೆ. ಅವನು ಹೇಳುವ ಇತರ ವಿವರಗಳು ಇಂತಿವೆ. ಭೂಮಾಲಕರು ಮೂಲಗಾರ ಎಂಬುದಾಗಿ ಕರೆಯಲ್ಪಡುತ್ತಿದ್ದರು ಹಾಗೂ ಅವರಲ್ಲಿ ಹೆಚ್ಚಿನವರು ಬ್ರಾಹ್ಮಣರಾಗಿದ್ದರು ಕೆಲವರು ತಾವಾಗಿ ಕೃಷಿ ಮಾಡುತ್ತಿದ್ದರು.

ಉಳಿದವರು ಭೂಮಿಯನ್ನು ಗೇಣಿಗಾಗಿ ನೀಡಿದ್ದರು. ಇಲ್ಲಿನ ಬ್ರಾಹ್ಮಣರು ಹೆಚ್ಚಿನ ಆರ್ಥಿಕ ಜ್ಞಾನವನ್ನು ಹೊಂದಿದ್ದರು.[4] 20 ಜೊತೆ ಉಳುವ ಸಾಧನ ಇಟ್ಟು ಕೊಂಡುವರು ಶ್ರೀಮಂತರು. ಕೆಲವರು –4–6 ಹೊಂದಿದ್ದರು. ಸಾಮಾನ್ಯರು ಒಂದಕ್ಕೆ ಸೀಮಿತವಾಗಿದ್ದರು. ಬ್ರಾಹ್ಮಣರು ಸ್ವತಃ ಕೆಲಸ ಮಾಡುತ್ತಿರಲಿಲ್ಲ. ಬ್ರಾಹ್ಮಣರ ಹೊಲಗಳಲ್ಲಿ ಹೆಚ್ಚಾಗಿ ದುಡಿಯುತ್ತಿದ್ದವರು ಗುಲಾಮರು.[5] ಇವರು ದಿನವೂ 1 1/2 ಹಾನೆ ಅಕ್ಕಿ ಪಡೆಯುತ್ತಿದ್ದರು. ಹೆಂಗಸರು 1 ಹಾನೆ ಪಡೆಯುತ್ತಿದ್ದರು. ಇದರೊಂದಿಗೆ ವರ್ಷಕ್ಕೆ 2 1/2 ರೂಪಾಯಿ ಬಟ್ಟೆಬರೆಗಾಗಿ ಸಿಗುತ್ತಿತ್ತು. ವಾಸಕ್ಕೆ ಅವರ ಹೊಲದಲ್ಲಿ ಒಂದು ಸಣ್ಣ ಗುಡಿಸಲು ಇರುತ್ತಿತ್ತು. ಅವರಿಗೆ ಬೇರೆ ಆದಾಯ ಇರಲಿಲ್ಲ. ಇತರ ಆಳುಗಳಿಗೆ ದಿನ ಒಂದಕ್ಕೆ 2 ಹಾನೆ ಅಕ್ಕಿ ಸಂಬಳ ಸಿಗುತ್ತಿತ್ತು. ಕೆಲಸದ ಸಮಯ ಬೆಳಿಗ್ಗೆ 7 ರಿಂದ ಸಂಜೆ 5ರ ತನಕ. ಮಧ್ಯ 1/2 ಗಂಟೆ ಊಟದ ಸಮಯವಿರುತ್ತಿತ್ತು. ಇದರೊಂದಿಗೆ ಭೂಮಿಯನ್ನು ಗೇಣಿಗೆ ನೀಡುತ್ತಿದ್ದರು.

ಈ ರೀತಿಯಲ್ಲಿ ಗೇಣಿಗೆ ನೀಡಿದ ಭೂಮಿಯ ಗೇಣಿಯ ಅವಧಿ 4–10 ವರ್ಷವಾಗಿತ್ತು. ಗೇಣಿಯ ದರ ಈ ರೀತಿಯಲ್ಲಿತ್ತು. ಪ್ರಥಮ ವರ್ಗದ ಒಂದು ಮೂಡೆ ಬಿತ್ತುವ ಭೂಮಿಗೆ 2 ಮೂಡೆ ಅಕ್ಕಿ, ಮಧ್ಯಮ ವರ್ಗದ ಭೂಮಿಗೆ 1 1/2 ಮೂಡೆ, ಕೆಳಮಟ್ಟದ ಭೂಮಿಗೆ 1 ಮುಡಿ. ತೆರೆಗೆಯನ್ನು ಭೂಮಾಲಕ ಪಾವತಿ ಮಾಡುತ್ತಿದ್ದನು. ಅವನು ಪಾವತಿ ಮಾಡದೆ ಇದ್ದಲ್ಲಿ ಒಬ್ಬ ರೆವೆನ್ಯೂ ಅಧಿಕಾರಿ ಕಟಾವು ಸಮಯದಲ್ಲಿ ಹಾಜರಿದ್ದು ಇಳುವರಿಯನ್ನು ಮಾರಾಟ ಮಾಡಿ ತೆರೆಗೆಯನ್ನು ಕಡಿತ ಮಾಡಿಕೊಳ್ಳುತ್ತಿದ್ದನು. ಅಲ್ಲದೆ ಅವನ ಭತ್ಯೆಯನ್ನು ರೈತರೇ ನೀಡ ಬೇಕಾಗಿತ್ತು.[6] ಭೂಮಿಯ ದರ ಯಾವ ರೀತಿಯಲ್ಲಿತ್ತು ಎಂಬುದನ್ನು ಬುಕಾನನ್ ಉಲ್ಲೇಖಿಸುತ್ತಾನೆ. 20 ಪಗೋಡವನ್ನು ತೆರಿಗೆಯಾಗಿ ಪಾವತಿಸುತ್ತಿದ್ದ ಭೂಮಿ 100 ಪಗೋಡಕ್ಕೆ ಮಾರಾಟವಾಗುತ್ತಿತ್ತು. ಅದೇ ಭೂಮಿಯನ್ನು ಅಡವು ಇಟ್ಟಲ್ಲಿ ಅದು 50ಪಗೋಡಾ ಅದಾಯವನ್ನು ತರುತ್ತಿತ್ತು.[7] ಭೂಮಿಯ ಮೂರು ವರ್ಗಗಳಾಗಿ ವಿಂಗಡಿಸಲ್ಪಟ್ಟಿತ್ತು. ಮೆಕ್ಕಿ ಬಯಲು ಮತ್ತು ಕಾರು ಮೆಕ್ಕೆ ಎತ್ತರದ ಜಾಗ. ಒಂದು ಬೆಳೆಗೆ ಸೀಮಿತವಾಗಿತ್ತು. ಬಯಲು ಎರಡು ಬೆಳೆಗಳನ್ನು ಬೆಳೆಯುವ ಭೂಮಿ. ಅದು ಎರಡು ಭತ್ತದ ಬೆಳೆ ಅಥವಾ ಒಂದು ಭತ್ತ, ಒಂದು ಧಾನ್ಯ, ಕಾರುಭೂಮಿ ತಗ್ಗಾದ ಭೂಮಿಯಾಗಿದ್ದು ಮಳೆಗಾಲದಲ್ಲಿ ಹೆಚ್ಚಾಗಿ ನಿರುಪಯುಕ್ತವಾಗಿದ್ದು, ನಂತರ ಒಂದು ಬೆಳೆ ಬೆಳೆಯಲಾಗುತ್ತಿತ್ತು.[8] ಮೆಕ್ಕೆ ಭೂಮಿಯಲ್ಲಿ ಬೆದೆ (ಮೊಳಕೆ) ಬಂದ ಬೀಜವನ್ನು ಬಿತ್ತುವ ಮೂಲಕ ವ್ಯವಸಾಯ ಮಾಡುತ್ತಿದ್ದರು. ಬಯಲು ಭೂಮಿಯಲ್ಲೂ ಅದೇ ಪದ್ಧತಿ ಹೆಚ್ಚಾಗಿ ಬಳಕೆಯಲ್ಲಿತ್ತು. ಆದರೆ ಸ್ವಲ್ಪ ಭೂಮಿಯನ್ನು ಬೇರೆ ರೀತಿಯಲ್ಲಿ ವ್ಯವಸಾಯಕ್ಕೆ ಒಳಪಡಿಸುತ್ತಿದ್ದರು. ಅಂದರೆ ನೇಜಿಯನ್ನು ತಯಾರು ಮಾಡಿ ನಾಟಿ ಮಾಡುವುದು. ಕಾರು ಭೂಮಿ ಮೊದಲೇ ಹೇಳಿರುವಂತೆ ಮಳೆಗಾಲದಲ್ಲಿ ನಿರುಪಯುಕ್ತ. ಬಿತ್ತುವ ಬೀಜದ ಅಳತೆ ಎಲ್ಲಾ ವರ್ಗದ ಭೂಮಿಗೂ ಒಂದೇ ಆಗಿತ್ತು. ಒಂದು ಮೂಡೆ ಗದ್ದೆಗೆ 2 ಕೊಳಗ ಹೆಸರು ಎಳ್ಳು ಉದ್ದು ಮೊದಲಾದ ಧಾನ್ಯಗಳನ್ನು ಇಲ್ಲಿ ಬೆಳೆಯುತ್ತಿದ್ದರು. ಮೆಕ್ಕೆ ಭೂಮಿಯಲ್ಲಿ ಕಬ್ಬನ್ನು ಬೆಳೆಯಲಾಗುತ್ತಿತ್ತು. ಇಲ್ಲಿ ಬೆಳೆಯುತ್ತಿದ್ದ ಕಬ್ಬು ಬಿಳಿ ಕಬ್ಬು ಅದನ್ನು ಘಟ್ಟದ ಮೇಲೆ ಮರ ಕಬ್ಬು ಎಂಬುದಾಗಿ ಕರೆಯುತ್ತಿದ್ದರು.[9] ಈ ಭಾಗದಲ್ಲಿ ಏತ ನೀರಾವರಿ ಬಳಕೆಯಲ್ಲಿದ್ದುದಾಗಿ ಬುಕಾನನ್ ವಿವರಿಸುತ್ತಾನೆ. ಅವನ ಪ್ರಕಾರ ಒಂದು ಮೂಡೆ ಭೂಮಿಗೆ ನೀರಾವರಿ ಒದಗಿಸಲು 3 ಜನರ ಅವಶ್ಯಕತೆ ಇತ್ತು. ಇನ್ನೂ ಒಂದು ಭೂವರ್ಗ ಹಕ್ಕಲು ವ್ಯವಸಾಯಕ್ಕೆ ಅಗತ್ಯವಾದ ಪ್ರಾಣಿಗಳನ್ನು ಘಟ್ಟದ ಮೇಲೂ ಭಾಗದಿಂದ ತರಿಸಿಕೊಳ್ಳುತ್ತಿದ್ದರು.[10]

ಹೊನ್ನಾವರ ವ್ಯಾಪಾರಿ ಚಟುವಟಿಕೆಗಳಿಗೆ ಪ್ರಸಿದ್ಧವಾಗಿತ್ತು. ಕಾಳುಮೆಣಸು ಪ್ರಮುಖ ವ್ಯಾಪಾರಿ ವಸ್ತು. ಅಲ್ಲದೆ ಹೊನ್ನಾವರ ಅಡಿಕೆ ಕೃಷಿಗೆ ಪ್ರಸಿದ್ಧವಾಗಿತ್ತು. ತೆಂಗಿನಕಾಯಿ ವ್ಯಾಪಾರವೂ ಭರ್ಜರಿಯಾಗಿತ್ತು. ಅದು ಕಾಯಿ ಮತ್ತು ಕೊಬ್ಬರಿ ರೂಪದಲ್ಲಿತ್ತು. ಮೊದಮೊದಲು ಅಕ್ಕಿಯನ್ನು ಹೊರಗಿನಿಂದ ತರಿಸಿಕೊಳ್ಳುತ್ತಿದ್ದರೂ ಈಗ ರಫ್ತಾಗುತ್ತಿತ್ತು.[11] ಬುಕಾನನ್ ಈ ವಿವರಣೆಗಳು ಆ ಭಾಗದಲ್ಲಿ ಆಗ ಏನೆಲ್ಲಾ ಬೆಳೆಯುತ್ತಿದ್ದರು, ಎಂಬುದರ ಬಗ್ಗೆ ಸೂಚಿಸುತ್ತದೆ. ಮುಂದೆ ಕುಮಟಾದಲ್ಲಿನ ವಿವರಣೆ ನೀಡುತ್ತಾನೆ. ತೆಂಗಿನಮರಗಳನ್ನು ಬೆಳೆಯುತ್ತಿದ್ದ ರೀತಿ ಹಾಗೂ ಅವುಗಳಿಗೆ ಮಾಡುತ್ತಿದ್ದ ಆರೈಕೆಯ ವಿವರವನ್ನು ನೀಡುತ್ತಾನೆ. ಅಲ್ಲದೆ ಅವುಗಳಿಂದ ಜ್ಯೂಸ್ ತೆಗೆಯುತ್ತಿದ್ದ ಬಗ್ಗೆಯೂ ಬರೆಯುತ್ತಾನೆ. ಅವನು ನೀಡುವ ಇತರ ವಿವರಗಳು ಇಂತಿವೆ. ಅಡಿಕೆ ಮರಗಳನ್ನು ನದಿ ತಟದಿಂದ ಸ್ವಲ್ಪ ದೂರದಲ್ಲಿ ಬೆಳೆಯುತ್ತಿದ್ದರು. ಕಾಳು ಮೆಣಸು ಗಿಡಗಳನ್ನು ಚೆನ್ನಾಗಿ ಕೃಷಿ ಮಾಡುತ್ತಿದ್ದರು.

ಅಡಿಕೆ ಸಸಿಗಳ ಮಧ್ಯೆ ಬಾಳೆಗಿಡಗಳನ್ನು ನೆಡುತ್ತಿದ್ದರು. 10 ವರ್ಷಗಳ ನಂತರ ಬಾಳೆ ಗಿಡಗಳನ್ನು ತೆಗೆದು ಅಡಿಕೆ ಮರಗಳಿಗೆ ವೀಳ್ಯದೆಲೆ ಬಳ್ಳಿಗಳನ್ನು ಹರಿಯಬಿಡುತ್ತಿದ್ದರು.[12] 10 ವರ್ಷಗಳಲ್ಲಿ ಈ ಅಡಿಕೆ ಮರಗಳು ಫಸಲು ಬಿಡಲಾರಂಭಿಸಿ 15 ವರ್ಷಕ್ಕೆ ಪೂರ್ಣ ಫಸಲನ್ನು ನೀಡುತ್ತಿದ್ದವು. ಅದು 30 ವರ್ಷಗಳವರೆಗೆ ಮುಂದುವರಿಯುತ್ತಿತ್ತು.[13]

ಬುಕಾನನ್ ಸಂದರ್ಶಿಸಿದ ಕೊಂಕಣ ಭಾಗದಲ್ಲಿ ಭತ್ತ ಬೆಳೆಯುವ ಜಾಗ ಜಾಸ್ತಿಯಿತ್ತು. ವರ್ಷಕ್ಕೊಂದು ಭತ್ತದ ಬೆಳೆ ಧಾನ್ಯ ಬೆಳೆಯುತ್ತಿದ್ದರು. ಕೊಂಕಣದ ಒಟ್ಟು ಆದಾಯ 29000 ಪಗೋಡ ಹೊನ್ನಾವರ 51000. ಈ ಕಡಿಮೆ ಆದಾಯಕ್ಕೆ ಕಾರಣ ಈ ಭಾಗದಲ್ಲಿ 1/3 ಅಂಶ ಭೂಮಿ ಬರಡು ಬಿಡಲಾಗಿತ್ತು. ಇದಕ್ಕೆ ಕಾರಣ ನೀಡುವಾಗ ಮರಾಠ ಧಾಳಿಯ ಉಲ್ಲೇಖವಿದೆ. ಮುಂದೆ ಸದಾಶಿವಗಡದ ಬಗ್ಗೆ ಉಲ್ಲೇಖಿಸುತ್ತಾನೆ. ಪೇಟೆಯಲ್ಲಿ 20 ಸಣ್ಣ ಅಂಗಡಿಗಳಿದ್ದವು. ಉಳಿದ ಜನರು ಹಳ್ಳಿಯಲ್ಲಿ ವಾಸಿಸುತ್ತಿದ್ದರು. ಒಂದು ಕಾಲಕ್ಕೆ ಈ ಭಾಗದ ಎಲ್ಲಾ ಭೂಮಿ ಜೈನ ಭೂಮಾಲಕರಿಗೆ ಸೇರಿತ್ತು. ಆದರೆ ಈಗ ಅವರು ಇಲ್ಲಿ ಇಲ್ಲ. ಅವರ ಭೂಮಿ ಸ್ವಲ್ಪ ಸರಕಾರಕ್ಕೆ ಸೇರಿತು. ಉಳಿದದ್ದು ಸ್ಥಳೀಯ ಬ್ರಾಹ್ಮಣರಿಗೆ ನೀಡಲಾಯಿತು. ಅವರಿಗೆ ನೀಡಿದ ಭೂಮಿ ಮೂಲ ಭೂಮಿಯಾಗಿತ್ತು. ಈ ಭೂಮಿಯ ಅಡವಿಗೂ ಅವಕಾಶವಿತ್ತು. ಅಗತ್ಯ ಬಿದ್ದಾಗ ಸಾಲದ ಹಣ ನೀಡಿ ವಾಪಾಸು ಪಡೆಯಬಹುದಾಗಿತ್ತು.

ಮೇಜರ್ ಮನ್ರೊ ಭೂಮಿಯ ಮೇಲಿನ ತೆರಿಗೆಯನ್ನು ಸಾಕಷ್ಟು ಕಡಿಮೆ ಮಾಡಿದನು. ಆದರೆ ಅದನ್ನು ಸಂಗ್ರಹಿಸುವಲ್ಲಿ ಅವನ ಹಿಡಿತ ಇವರು ಮೊದಲಿಗಿಂತ ಹೆಚ್ಚು ಪಾವತಿಸುವ ಹಾಗೆ ಮಾಡಿತ್ತು ಎಂದು ಸ್ಥಳೀಯರು ತಿಳಿಸಿರುವುದಾಗಿ ಬುಕಾನನ್ ಹೇಳಿದ್ದಾನೆ. ಭೂ ವಿವಾದ ಸಾಮಾನ್ಯವಾಗಿತ್ತು. 4 ಪಗೋಡ ಆದಾಯವಿರುವ ಭೂಮಿಯನ್ನು 100 ಪಗೋಡಗಳಿಗೆ ಅಡವು ಇಡಬಹುದಿತ್ತು.[14] ಅಡಮಾನ ಮಾಡಿಕೊಂಡವನು ತೆರಿಗೆ ಪಾವತಿಸುತ್ತಿದ್ದನು. ವರ್ಷಕ್ಕೆ ಎರಡು ಬೆಳೆ ತೆಗೆಯುವ ಭೂಮಿ ಇರಲಿಲ್ಲ. ಈ ವ್ಯವಸಾಯ ಭೂಮಿಗೆ ಕೆರೆಗಳಿಂದ ನೀರನ್ನು ಹಾಯಿಸಲಾಗುತ್ತಿತ್ತು. ಬೀಜವನ್ನು ಮೊಳಕೆ ಬರಿಸಿ ಹಾಗೂ ಬರಿಸಿದ ಬಿತ್ತುವ ಕ್ರಮವಿತ್ತು. ಮನೆಯಲ್ಲಿ ಸಾಕುವ ಜಾನುವಾರುಗಳು ವ್ಯವಸಾಯಕ್ಕೆ ಅಗತ್ಯವಾದ ಗೊಬ್ಬರವನ್ನು ಒದಗಿಸುತ್ತಿದ್ದವು. ಮಳೆಗಾಲದಲ್ಲಿ ಸಿಗುವ ಈ ಗೊಬ್ಬರವನ್ನು ಪ್ರಥಮ ಹಾಗೂ ದ್ವಿತೀಯ ವರ್ಗದ ಮಣ್ಣಿಗೆ ಉಪಯೋಗಿಸುತ್ತಿದ್ದರು. ಈ ಭಾಗದ ಕಾಡುಗಳಲ್ಲಿ ಬೆಳೆಯುತ್ತಿದ್ದ ಮರಗಳ ಪಟ್ಟಿಯನ್ನು (ಸಸ್ಯ ಶಾಸ್ತ್ರೀಯ) ಅವನು ನೀಡುತ್ತಾನೆ. ಬುಕಾನನ್ ಪ್ರಕಾರ ಮೇಜರ್ ಮನ್ರೊ ಆಡಳಿತದ ಆರಂಭ ಕಾಲದಲ್ಲಿ ಆದಾಯ ಜಾಸ್ತಿ ಇತ್ತು. ಆದರೆ ರೀಡ್ ಪ್ರಕಾರ ಸಂಗ್ರಹದ ದರ ಜಾಸ್ತಿ ಮಾಡಿದ್ದು ಇದಕ್ಕೆ ಕಾರಣ.

ಒಟ್ಟಿನಲ್ಲಿ ಬುಕಾನನ್ ಪ್ರವಾಸದ ಅವಧಿಯಲ್ಲಿ ಕಂಡುಕೊಂಡ ಅಂಶಗಳು ಈ ಭಾಗದ ವ್ಯವಸಾಯ ವ್ಯವಸ್ಥೆಯ ಬಗೆಗಿನ ವಿವರವಾದ ಅಧ್ಯಯನಕ್ಕೆ ಪ್ರಾಥಮಿಕ ಆಕರವನ್ನು ಒದಗಿಸುತ್ತವೆ. ಅದರಲ್ಲೂಬುಕಾನನ್ ವರದಿ ಸೂಕ್ಷ್ಮವಾದ ವಿವರವನ್ನು ಒಳಗೊಂಡಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಆದರೆ ಬುಕಾನನ್ ಸ್ಥಳೀಯರಿಂದ ಮಾಹಿತಿ ಸಂಗ್ರಹಿಸುವಾಗ ಭಾಷೆಯ ಸಮಸ್ಯೆಯಿಂದ ಕೆಲವು ನ್ಯೂನ್ಯತೆಗಳು ಇರುವ ಸಾಧ್ಯತೆ ಇದೆ. ಆದರೆ ಮಾಡಿದ ಕೆಲಸ ಶ್ಲಾಘನೀಯ ಹಾಗೂ ಉಪಯುಕ್ತವಾದದ್ದು ಎಂಬುದರಲ್ಲಿ ಎರಡು ಮಾತಿಲ್ಲ.

ಟಿಪ್ಪಣಿಗಳು :

1. ಫ್ರಾನ್ಸಿಸ್ ಬುಕಾನನ್ ಜರ್ನಿ ಫ್ರೊಮ್ ಮದ್ರಾಸ್ ತ್ರೂ ದಿ ಕಂಟ್ರೀಸ್ ಆಫ್ ಮೈಸೂರು ಕೆನರಾ ಆ್ಯಂಡ್ ಮಲಬಾರ್ (ಸಂಪುಟ –3) ದೆಹಲಿ ಮದ್ರಾಸ್ 1988 ಕ 130
2. ಅದೇ. ಪು. 131
3. ಅದೇ. ಪು. 135
4. ಅದೇ. ಪು. 139
5. ಅದೇ. ಪು. 140
6. ಅದೇ. ಪು. 140
7. ಅದೇ. ಪು. 141

8. ಅದೇ. ಪು. 142
9. ಅದೇ. ಪು. 145
10. ಅದೇ. ಪು. 149
11. ಅದೇ. ಪು. 151
12. ಅದೇ. ಪು. 156
13. ಅದೇ. ಪು. 157
14. ಅದೇ. ಪುಟಗಳು. 179 180, 181

❑

ಉತ್ತರ ಕನ್ನಡ ಜಿಲ್ಲೆಯ ಬುಡಕಟ್ಟು ಜನಾಂಗ ಹಾಲಕ್ಕಿ ಒಕ್ಕಲಿಗರು

– ಪ್ರೊ. ಶಕುಂತಲಾ ಸಿಂಧೂರ

ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ವಿಶಿಷ್ಟ ಬುಡಕಟ್ಟು ಜನಾಂಗದವರು ಹಾಲಕ್ಕಿ ಒಕ್ಕಲಿಗರು, ಕಾರವಾರದ ಕಾಳೀನದಿ ತೀರದಿಂದ ಶರಾವತಿ ನದಿ ತೀರದವರೆಗೆ ವಾಸಿಸುತ್ತಿರುವ ಹಾಲಕ್ಕಿ ಒಕ್ಕಲಿಗರು ಕರಾವಳಿ ಪ್ರದೇಶಕ್ಕೆ ಮೊದಲಿಗೆ ಬಂದು ನೆಲಸಿದರು ಎನ್ನಲಾಗಿದೆ. ತಿರುಪತಿ ತಿಮ್ಮಪ್ಪ ಇವರ ಕುಲದೈವವಾಗಿದ್ದರಿಂದ ತಿರುಪತಿ ಕಡೆಯಿಂದ ಇವರು ಇಲ್ಲಿಗೆ ಬಂದಿರಬಹುದೆಂದು ಊಹಿಸಲಾಗಿದೆ, ಹಾಲಕ್ಕಿ ಒಕ್ಕಲಿಗರ ಜನಪದ ಗೀತೆಗಳಲ್ಲಿ ಮೂಡಣ ಸಮುದ್ರವನ್ನು ಉಲ್ಲೇಖಿಸಲಾಗಿದ್ದರಿಂದ ಇವರು ತಿರುಪತಿ ಮೂಲದವರೇ ಇರಬಹುದೆಂಬುದು ಸಂಶೋಧಕ ವಿದ್ವಾಂಸರಾದ ಎಲ್.ಜಿ. ಭಟ್ಟ ಅವರ ಅಭಿಪ್ರಾಯವಾಗಿದೆ. ಇವರು ಹಾಲಿನಂತಹ ಅಕ್ಕಿ ಬೆಳೆಯುವುದರಿಂದ 'ಹಾಲಕ್ಕಿ' ಎಂಬ ಹೆಸರು ಬಂದಿರಬಹುದು. ವ್ಯವಸಾಯವನ್ನೆ ಪ್ರಧಾನ ಕಸುಬುಳ್ಳವರಾಗಿದ್ದರೂ ಪಶುಪಾಲನೆಯನ್ನೂ ಕೈಗೊಂಡಿರುವರು. ಕೃಷಿ ಮತ್ತು ಹೈನುಗಾರಿಕೆಗಳನ್ನು ಉದ್ಯೋಗವನ್ನಾಗಿಸಿಕೊಂಡಿರುವದರಿಂದ ಹಾಲಕ್ಕಿ ಎಂಬ ಹೆಸರು ಬಂದಿರಬಹುದು. ಹವ್ಯಕರ ವಿವಾಹಗಳಲ್ಲಿ ಮದುಮಗ ವಧುವಿನ ಮನೆಗೆ ಹೊರಟಾಗ ದಿಬ್ಬಣದ ಮುಂದೆ ಹಾಲಕ್ಕಿಗಳಿದ್ದು ದಾರಿಯುದ್ದಕ್ಕೂ ಅಕ್ಕಿ ಚೆಲ್ಲುತ್ತಿದ್ದುದರಿಂದ ಇವರಿಗೆ ಹಾಲಕ್ಕಿ ಎಂಬ ಹೆಸರು ಬಂದಿರಬಹುದೆಂದು ತರ್ಕಿಸಲಾಗಿದೆ.

ಹಾಲಕ್ಕಿ ಒಕ್ಕಲಿಗರ ಹುಟ್ಟಿನ ಬಗ್ಗೆ ದಂತ ಕಥೆ ಹೀಗಿದೆ. ಶಿವ ಹಿಂದೆ ಗದ್ದೆ ಊಳುತ್ತಿದ್ದನಂತೆ. ಆತನಿಗೆ ನಿತ್ಯ ಊಟ ಒಯ್ಯುವ ಕೆಲಸ ಪಾರ್ವತಿಯದು. ಊಟ ತೆಗೆದುಕೊಂಡು ಒಯ್ಯುವಾಗ ಒಂದು ದಿನ ಪಾರ್ವತಿ ಎಡವಿದಳು. ಅವಳು ಶಿವನಿಗೆ ತಂದಿದ್ದ ಹಾಲು ಅನ್ನ ಚೆಲ್ಲಿ ಹೋಯಿತು. ಮಣ್ಣುಪಾಲಾದ ಈ ಹಾಲು ಅನ್ನ ಸೇರಿಸಿ ಎರಡು ಗೊಂಬೆಗಳನ್ನು ಮಾಡಿಟ್ಟು ಪಾರ್ವತಿ ಮನೆಗೆ ತೆರಳಿದಳು. ಪಾರ್ವತಿ ಊಟ ತರುವದು ತಡವಾಗಲು ಶಿವ ಅವಳನ್ನು ಅರಸುತ್ತ ಹೊರಡಲು ದಾರಿಯಲ್ಲಿ ಪಾರ್ವತಿ ಮಾಡಿದ ಗೊಂಬೆಗಳು ಕಂಡವು. ಶಿವ ಅವುಗಳನ್ನು ಸ್ಪರ್ಶಿಸಿದಾಗ ಅವಕ್ಕೆ ಜೀವ ಬಂತು, ಪಾರ್ವತಿ ಹಿಂದಿರುಗಿದ್ದೇಕೆಂಬುದು ಗೊಂಬೆಗಳ ಮೂಲಕ ಶಿವನಿಗೆ ತಿಳಿಯಿತು. ಶಿವ ತಮಗೆ ಜೀವ ನೀಡಿದ, ತಮ್ಮ ಬದುಕಿಗಾಗಿ ತಾವೇನು ಮಾಡಬೇಕೆಂದು ಜೀವ ಪಡೆದ ಗೊಂಬೆಗಳು ಕೇಳಲು ತನ್ನ ಕೆಲಸ ಕೃಷಿಯನ್ನೆ ಮುಂದುವರೆಸಲು ಶಿವ ಗೊಂಬೆಗಳಿಗೆ ತಿಳಿಸಿದನು. ಅಂದಿನಿಂದ ಹಾಲಕ್ಕಿಗಳು ಒಕ್ಕಲುತವನ್ನೆ ತಮ್ಮ ಮೂಲ ಉದ್ಯೋಗವನ್ನಾಗಿಸಿಕೊಂಡರು, ಹಾಲು+ಅಕ್ಕಿಗಳ ಮಿಶ್ರಣದಿಂದ ಜನಿಸಿದ್ದರಿಂದ ಹಾಲಕ್ಕಿ ಎಂದು ಹೆಸರು ಬಂದಿರುವದಾಗಿ ತಿಳಿದುಬರುತ್ತದೆ. ಹಾಲಕ್ಕಿ ಒಕ್ಕಲಿಗರಿಗೆ ಅಂಕೋಲ ಕಡವಾಡ ಮಸಿಕೋಟೆ ಹರಿಟ್ಟೆ ಕುಂಬಾರಗದ್ದೆ ಗೋಕರ್ಣ ಚಂದಾಪುರ ಎಂಬ ಏಳು ಸೀಮೆಗಳಿವೆ. 'ಕೊಪ್ಪ' ಇವರ ವಾಸಸ್ಥಳ. (ಅ.ಟಿ. 1 ಕನ್ನಡ ವಿಷಯ ವಿಶ್ವಕೋಶ–ಜಾನಪದ ಕುವೆಂಪು, ಕ.ಅ. ಸಂಸ್ಥೆ ಮೈವಿ..ವಿ–2006, ಪು–1243.) ಈ ಜನಾಂಗದವರ ಉಡುಗೆ ತೊಡುಗೆಗಳ ವೈಶಿಷ್ಟ್ಯಮಯವಾಗಿವೆ.

ಉಡುಗೆ ತೊಡುಗೆ :

ಗಂಡಸರು ಕಚ್ಚೆ ರುಮಾಲು ಹೆಗಲಿಗೊಂದು ಕಂಬಳಿ ಧರಿಸುತ್ತಾರೆ. ಸ್ತ್ರೀಯರು ಕುಪ್ಪಸ ಧರಿಸುವದಿಲ್ಲ. ಸೊಂಟಕ್ಕೆ

ಸೀರೆ ಸುತ್ತಿ ಎದೆ ಮುಚ್ಚುವಂತೆ ಸೆರಗೆಳೆದುಕೊಂಡು ಕೊರಳಿಗೆ ಗಂಟು ಕಟ್ಟುತ್ತಾರೆ. ಮಹಿಳೆಯರ ಕೊರಳತುಂಬ ಕರಿಮಣಿ ಮತ್ತು ಇತರ ಮಣಿಸರಗಳು ಕಂಡು ಬರುತ್ತವೆ. ಕತ್ತು ಬಾಗುವಷ್ಟು ಕರಿಮಣಿ ಹಾಕುತ್ತಾರೆ. ಗಾಜಿನ, ಬೆಳ್ಳಿಯ ಬಳೆಗಳು, ತೋಳುಕಡಗ ಮೂಗುತಿ ಕುಡುಕು– ಇತರ ಆಭರಣಗಳನ್ನು ಧರಿಸುತ್ತಾರೆ. ವಿವಾಹಿತ ನಾರಿಯರು ಕೊರಳಿಗೆ ಬಂದಿ ಧರಿಸುವರು. ಸುಂದರವಾಗಿ ಮುಡಿ ಕಟ್ಟುವರು. ಇವರಿಗೆ ಹೂವೆಂದರೆ ಪಂಚಪ್ರಾಣ. ಸ್ತ್ರೀಯರು ಹಲವಾರು ವಿಧದ ಹೂವುಗಳನ್ನು ಮುಡಿಯುತ್ತಾರೆ.

ಕಿವಿಗೆ ಮುರು ಅಥವಾ ಒಂಟಿ ಕೊಡ್ಕೆ, ಮೀನೊಂಟಿ (ಬಾಬ್ಲಿ), ಕೆಮಿನೊಂಟ, ತಾರೆಬಟ್ಟು, ಸೊಂಟಕ್ಕೆ ಬೆಳ್ಳಿಯ ನೇವಳ, ಉಡುದಾರದಂತಿರುವ ಬೆಳ್ಳಿಯ ಗೋಪಿನದಾರ, ಸರಪಳಿ, ಉಂಗುರ, ಕತ್ತಿಗೆ ಕಪ್ಪುದಾರ, ಅನುಕೂಲಸ್ಥರಾಗಿದ್ದರೆ ಬಂಗಾರದ ಸರ ಧರಿಸುತ್ತಾರೆ.

ಮಕ್ಕಳ ಉಡುಗೆ ತೊಡುಗೆಗಳು :

ಸಾಮಾನ್ಯವಾಗಿ ಚಿಕ್ಕಮಕ್ಕಳು ಬರಿಮೈಯಲ್ಲಿಯೇ ಇರುತ್ತಾರೆ. ಉಡುದಾರವೊಂದೇ ಇವರ ಮೈಮೇಲೆ ಕಂಡುಬರುತ್ತದೆ. ಶ್ರೀಮಂತರ ಮಕ್ಕಳು ಕಾಲ್ಬಳೆ, ಕೈಬಳೆಗಳನ್ನು ಹಾಕಿರುತ್ತಾರೆ. ಹಾಗೂ ಉಡುದಾರಕ್ಕೆ ಬೆಳ್ಳಿಯಿಂದ ಕಟ್ಟಿಸಿದ 'ಹುಲಿಯುಗುರು' ಕಟ್ಟಿರುತ್ತಾರೆ. 'ಹುಲಿಯುಗುರಿ'ನ ಎರಡೂ ಬದಿಗೆ ಬದಾಮಿಯಾಕಾರದ ಎರಡು ಬೆಳ್ಳಿಯ ಕಾಯಿಗಳಿರುತ್ತವೆ. ಇವು ಮೂರು ಸೇರಿರುವ ಈ ಆಭರಣವನ್ನು ಉಡುದಾರದೊಂದಿಗೆ ಕಟ್ಟುವುದರಿಂದ ದೃಷ್ಟಿದೋಷ ತಗುಲುವುದಿಲ್ಲವೆಂಬ ನಂಬಿಕೆಯುಂಟು. ಅಲ್ಲದೆ ಹುಲಿಯುಗುರು ಮಕ್ಕಳಲ್ಲಿ ಧೈರ್ಯ, ಸಾಹಸದ ಭಾವನೆಯನ್ನು ಬೆಳೆಸುತ್ತದೆಂಬ ನಂಬಿಕೆ ಇದೆ, ಈಗ ಆ ಆಭರಣ ಕಣ್ಮರೆಯಾಗುತ್ತಲಿದೆ. 5–6 ವರ್ಷದ ಗಂಡುಮಗು ಸಣ್ಣ ಕಚ್ಚೆಯನ್ನುಟ್ಟರೆ ಹೆಣ್ಣು ಮಗು ತುಂಡು ಪಂಚೆಯಗಲದ ಸಣ್ಣ 'ದಟ್ಟಿ'ಯನ್ನು ಧರಿಸುತ್ತದೆ.

ಮಕ್ಕಳು ಕಿವಿಗೆ ಮುರು ಕೆಮಿಯೊಂಟಿ ಹಾಕಿಸಿಕೊಳ್ಳುವದುಂಟು. ಶ್ರೀಮಂತರ ಮಕ್ಕಳು ಬಂಗಾರದ 'ತಾರೆ ಬಟ್ಟ' ಹಾಗೂ ನಾಲ್ಕಾಣೆ ಪಾವಲಿಯ ಸರ ಹಾಗೂ ಮಣಿಸರಗಳನ್ನು ಹಾಕಿಕೊಳ್ಳುತ್ತಾರೆ.

ಇವರು ಮಾಂಸಾಹಾರಿಗಳು ಅಕ್ಕಿರಾಗಿ ಮೀನನ್ನೂ ಆಹಾರವಾಗಿಸಿಕೊಂಡಿದ್ದು ಖಾರದ ಬಳಕೆ ಹೆಚ್ಚು, ಇವರು ಮಧ್ಯಪಾನವನ್ನು ಮಾಡುವದಿಲ್ಲ.

ಸಂಸ್ಕಾರ ಸಂಪ್ರದಾಯಗಳು :

ಜನನ ಮತ್ತು ನಾಮಕರಣದ ಆಚರಣೆಗಳು ವಿಶೇಷವಾಗಿರುತ್ತವೆ. ಗರ್ಭಿಣಿಗೆ ಪ್ರಸವವೇದನೆ ಆರಂಭವಾದಾಗ ತಾಳೆಗರಿಯ ಹಾಲಕ್ಕಿ ಒಕ್ಕಲಿಗರ ಚಾಪೆಯಿಂದ ಪಡಸಾಲೆಯಲ್ಲಿ ಒಂದು ಕೋಣೆ ನಿರ್ಮಿಸುತ್ತಾರೆ. ಭೂತ–ಪ್ರೇತಗಳ ಅಸ್ತಿತ್ವದಲ್ಲಿ ನಂಬಿಗೆ ಇರುವ ಇವರು ಪ್ರಸವ ವಿಳಂಭವಾದರೆ ಅದಕ್ಕೆ ಕಾರಣ ಭೂತದ ಪೀಡೆ ಎಂದು ಭಾವಿಸುತ್ತಾರೆ. ಮಂತ್ರವಾದಿಯನ್ನು ಕರೆಸಿ ಯಂತ್ರ ಕಟ್ಟಿಸುತ್ತಾರೆ. ಜನನದ ನಂತರ ಮೂರು ದಿನ ಸೂತಕ ಆಚರಿಸುವರು. ಆನಂತರ ಇಡೀ ಮನೆಯನ್ನು ಸಾರಿಸಿ ಶುದ್ಧಗೊಳಿಸಿ ಧೂಪ ಹಾಕುತ್ತಾರೆ. ತಾಯಿ ಮಗುವಿಗೆ ಹೊಸಬಟ್ಟೆ ತೊಡಿಸುತ್ತಾರೆ. 13ನೇ ದಿನ ಬಾಣಂತಿ ಬಾವಿಗೆ ಹೋಗಿ ಮೂರು ಕೊಡ ನೀರು ಸೇದಿ ಆ ನೀರನ್ನು ತೆಂಗಿನಗಿಡಕ್ಕೆ ಹಾಕುತ್ತಾಳೆ. ನಾಲ್ಕನೇ ಕೊಡದ ನೀರನ್ನು ಮನೆಯ ಒಳಗೆ ತಂದು, ಅಡುಗೆಗೆ ಬಳಸುತ್ತಾರೆ. ನಾಮಕರಣದ ದಿನ ಊರಿನಗೌಡ ಪತ್ನಿಯೊಂದಿಗೆ ಬರುತ್ತಾರೆ. ರಾತ್ರಿ ಊಟದ ನಂತರ ಮನೆಯ ಹಿರಿಯ ಯಜಮಾನ ಇಲ್ಲವೆ ಯಜಮಾನತಿ ಮಗುವಿಗೆ ನಾಮಕರಣ ಮಾಡುತ್ತಾರೆ. ಗಂಡು ಮಗುವಿಗೆ ಬೀರಾ, ನಾಗು, ತಿಮ್ಮು, ಶುಕ್ರ ಇಡ್ಕುಪುಟ್ಟ ಗಣಪ ಶಂಭು ಹುಲಿಯ ಇತ್ಯಾದಿ ಹೆಸರು ಇಟ್ಟರೆ ಹೆಣ್ಣುಮಗುವಿಗೆ ತುಳಸಿ ತಿಮ್ಮಿ ನಾಗಿ ಮಾರಿ ಇಡ್ಕಿ ಬೊಮ್ಮಿ ಗಂಗೆ ಅಮ್ಮ ಇತ್ಯಾದಿ ಹೆಸರಿಡುವದು ವಾಡಿಕೆಯಾಗಿದೆ. ಗಂಡಸರ ಹೆಸರಿನ ಹಿಂದೆ ಗೌಡ ಎಂಬ ಪದದ ಬಳಕೆಯುಂಟು. ಮಗುವಿನ ನಾಮಕರಣಕ್ಕೆ ಆಗಮಿಸಿದ ಬಂಧು ಬಾಂಧವರು ಮಗುವಿನ ಹೆಸರು ಹೇಳಿ ತಮ್ಮ ಕಾಣಿಕೆಗಳನ್ನು ತೊಟ್ಟಿಲಿನಲ್ಲಿಟ್ಟು ತೆರಳುತ್ತಾರೆ. ಗಂಡು ಮಗುವಿಗೆ ವರ್ಷ ತುಂಬಿದಾಗ ಕೂದಲು ತೆಗೆಸುವ ಶಾಸ್ತ್ರಕ್ಕೆ

'ಚೋಳಂಗಿ' ಎನ್ನುತ್ತಾರೆ. ಅಕ್ಕಪಕ್ಕದ ಮಕ್ಕಳನ್ನೆಲ್ಲ ಕರೆದು ಊಟ ಮಾಡಿಸುತ್ತಾರೆ. ಚೋಳಂಗಿ ಶಾಸ್ತ್ರವಾದ ಮೇಲೆ ಮದುವೆಯವರೆಗೂ ಗಂಡಸರಿಗೆ ಯಾವ ಸಮಾರಂಭವಿರುವದಿಲ್ಲ.

ಹೆಣ್ಣು ಮಕ್ಕಳಿಗೆ 6 ಅಥವಾ 7 ವರ್ಷ ತುಂಬಿದಾಗ 'ಬಟ್ಟು ಕಟ್ಟುವ' ಶಾಸ್ತ್ರ ಮಾಡುತ್ತಾರೆ. ಕುಂಕುಮ ಹಚ್ಚುವ ಜಾಗವನ್ನು ಮುಳ್ಳಿನಿಂದ ಚುಚ್ಚಿ ನಂತರ ಕಾಡಿಗೆ ಹಚ್ಚುತ್ತಾರೆ. ಮಗುವನ್ನು ದೇವರಮುಂದೆ ಕೂಡ್ರಿಸಿ ತಲೆಬಾಚಿ ಹೂವು ಮುಡಿಸುತ್ತಾರೆ. ಮಹಿಳೆಯರೆಲ್ಲರೂ ತಂತಮ್ಮ ಕೊರಳಿನಿಂದ ಒಂದೊಂದು ಕರಿಮಣಿ ಸರವನ್ನು ಅವಳ ಕೊರಳಿಗೆ ಹಾಕುತ್ತಾರೆ. ಇದಕ್ಕೆ ಗೇಟಿ ಕಟ್ಟುವ ಸಂಪ್ರದಾಯವೆಂದು ಹೆಸರು. ಈ ಸಮಾರಂಭದಲ್ಲಿ ಊರಿನ ಮುತ್ತೈದೆಯರೂ ಅಧಿಕಾರಿಗಳ ಪತ್ನಿಯರೂ ಪಾಲ್ಗೊಳ್ಳುತ್ತಾರೆ. ಸಮಾರಂಭದ ನಂತರ ಹುಡುಗಿ ಕೊಪ್ಪದ ಎಲ್ಲ ಮನೆಗಳಿಗೂ ತೆರಳಿ ಹಿರಿಯರಿಗೆ ಹಾಗೂ ತುಳಸಿಗೆ ನಮಸ್ಕರಿಸಿ ಬರುತ್ತಾಳೆ. ಅಂದಿನಿಂದ ಆ ಹೆಣ್ಣುಮಗುವಿನ ರಕ್ಷಣೆಯ ಹೊಣೆ ಕೊಪ್ಪದವರದಾಗಿರುತ್ತದೆ.

ಹಾಲಕ್ಕಿ ಒಕ್ಕಲಿಗರಲ್ಲಿ ಬಾಲ್ಯ ವಿವಾಹ ಪದ್ಧತಿಯಿದ್ದು ಈಗ ಅದು ಕಡಿಮೆಯಾಗಿದೆ. ಭಿನ್ನಗೋತ್ರ ವಿವಾಹ ಪದ್ಧತಿ ಇವರಲ್ಲಿದೆ ಯಾವುದೇ ಸಂದರ್ಭದಲ್ಲಿ ಬ್ರಾಹ್ಮಣ ಪುರೋಹಿತರನ್ನು ಕರೆಯುವದಿಲ್ಲ. ಹವ್ಯಕ ಬ್ರಾಹ್ಮಣರಲ್ಲಿಗೆ ಹೋಗಿ ವಿವಾಹ ಮುಹೂರ್ತ ನಿರ್ಧರಿಸುತ್ತಾರೆ. ವಿವಾಹದಲ್ಲಿ ಮಾತ್ರ ತಮ್ಮದೇ ಸಂಪ್ರದಾಯ ಆಚರಿಸುತ್ತಾರೆ. ಮದುವೆ ಕೇವಲ ಎರಡು ದಿವಸ ಇರುವಾಗ ಮೂಹೂರ್ತ ಕೇಳುತ್ತಾರೆ. ಗೋಧೂಳಿ ಮೂಹೂರ್ತ ಆರ್ದ್ರಾ ನಕ್ಷತ್ರದಲ್ಲಿ ಪ್ರಶಸ್ತ ಮೂಹೂರ್ತದಲ್ಲಿ ಮದುವೆ ಏರ್ಪಡಿಸುತ್ತಾರೆ.

ಹಾಲಕ್ಕಿಗಳಲ್ಲಿ ಸ್ತ್ರೀಯರ ಸಂಖ್ಯೆ ಕಡಿಮೆ ಇದ್ದುದರಿಂದ ಒಂದು ಕುಟುಂಬಕ್ಕೆ ಗಂಡಿಗೆ ಹೆಣ್ಣು ಕೊಡುವಾಗ ಆ ಕುಟುಂಬದ ಹೆಣ್ಣೊಂದನ್ನು ತಮ್ಮ ಮನೆಗೆ ತುಂಬಿಸಿಕೊಳ್ಳುತ್ತಾರೆ. ಇದಕ್ಕೆ ಪರಸ್ಪರ 'ಹೆಣ್ಣಿಗೆ ಹೆಣ್ಣು' ಕೊಡುವ ಪದ್ಧತಿ ಎನ್ನುತಾರೆ. ಒಂದು ಹೆಣ್ಣು ಹೊರಕ್ಕೆ ಹೋದರೆ ಇನ್ನೊಂದು ಹೆಣ್ಣು ಮನೆಯೊಳಗೆ ಬರಬೇಕು. ವಧುದಕ್ಷಿಣೆ ಪದ್ಧತಿ ಇರುತ್ತದೆ. ಗಂಡಿನ ಮನೆಯವರೇ ಹೆಣ್ಣನ್ನು ಕೇಳಲು ಬರುತ್ತಾರೆ. ಒಮ್ಮೊಮ್ಮೆ ಊರಗೌಡ ಬುದವಂತ ಮುಂದಾಗಿ ಮದುವೆ ಏರ್ಪಡಿಸುವದುಂಟು. ಎರಡು ಊರುಗಳ ಮಧ್ಯೆ ಏರ್ಪಡುವ ಸಂಬಂಧದಲ್ಲಿ ಅಲ್ಲಿಯ ಅಧಿಕಾರಿಗಳದ್ದೇ ಪ್ರಮುಖ ಪಾತ್ರ, ಊರಗೌಡ ಬುದವಂತ ಕೋಲಕಾರ ಈ ಸ್ಥಳೀಯ ಅಧಿಕಾರಿಗಳ ಸಮಕ್ಷಮ ಮದುವೆಯ ಮಾತುಕತೆ ನಡೆಯುತ್ತದೆ. ಮದುವೆ ನಿಶ್ಚಿತವಾಗಲು ಅಲ್ಲಿ ಸೇರಿದವರೆಲ್ಲರೂ ಕಾಯಿ ಬೆಲ್ಲ ತಿನ್ನುತ್ತಾರೆ. ಕಾಯಿ ಬೆಲ್ಲ ತಿಂದ ಬಳಿಕ ವಿವಾಹ ಮುರಿಯುವಂತಿಲ್ಲ. ಊರಗೌಡನ ಮುಂದಾಳತ್ವದಲ್ಲಿ ಗಂಡಸರು ಮಾತ್ರ ಜವಳಿ ಖರೀದಿಸುತ್ತಾರೆ. ಪ್ರತಿ ಮನೆಯಿಂದ ಒಬ್ಬೊಬ್ಬ ಗಂಡಸರು ಜವಳಿ ತರಲು ಬರಲೇಬೇಕೆಂಬುದು ಸಂಪ್ರದಾಯ ಬುದವಂತನದು ಬಾಸಿಂಗ ತರುವ ಜವಾಬ್ದಾರಿ. ಎಲ್ಲರಮನೆಗೂ ಹೋಗಿ ತೆಂಗಿನಕಾಯಿ ಇಟ್ಟು ಮದುವೆಗೆ ಆಮಂತ್ರಿಸಬೇಕು. ತುಳಸಿಗೂ ಹಿರಿಯರಿಗೂ ನಮಸ್ಕರಿಸುತ್ತಾರೆ. ಮದುವೆಯಂದು ಬೆಳಗಿನಿಂದ ಉತ್ಸಾಹ ಸಡಗರ ಸಂಭ್ರಮ ಕಂಡು ಬರುತ್ತದೆ. ಮಹಿಳೆಯರು ಬೆಳಗಿನಿಂದಲೇ ಹಾಡು ಹೇಳಲು ಪ್ರಾರಂಭಿಸುತ್ತಾರೆ. ಬೆಳಿಗ್ಗೆ ಮದುಮಗನ ಕೂದಲು ಕತ್ತರಿಸುವ ಶಾಸ್ತ್ರಕ್ಕೆ 'ಪನ್ನೆ' ಎನ್ನುತ್ತಾರೆ. ಊರಿನ ಕ್ಷೌರಿಕನಿಗೆ ಬಾಳೆ ಎಲೆಯಲ್ಲಿ ಅಕ್ಕಿ ತೆಂಗಿನಕಾಯಿ ಇಡುತ್ತಾರೆ. ಕ್ಷೌರಕ್ಕೆ ಮದುಮಗನೊಂದಿಗೆ ಇನ್ನೊಬ್ಬ ಹುಡುಗ ಕುಳಿತಿರುತ್ತಾನೆ. ಈ ಹುಡಗನಿಗೆ ಪೆಟ್ಗೇಪೋರ ಎನ್ನುತ್ತಾರೆ. ಮದುಮಗನ ನಂತರ ಪೆಟ್ಗೇಪೋರನ ಕೂದಲು ಕತ್ತರಿಸುತ್ತಾರೆ. ಆನಂತರ ಕ್ಷೌರಿಕನಿಗೆ ಉಡುಗೊರೆ ಕೊಡುತ್ತಾರೆ. ವರನಿಗೆ ಅಭ್ಯಂಜನ ಸ್ನಾನ ಮಾಡಿಸುತ್ತಾರೆ.

ವರನಿಗೆ ಬಾಸಿಂಗ ಕಟ್ಟುವವ ಊರಗೌಡ. ಊರಗೌಡನ ನೇತೃತ್ವದಲ್ಲಿ ಎಲ್ಲ ಮಂಗಲ ಕಾರ್ಯಗಳು ನಡೆಯುತ್ತವೆ. ಆನಂತರ ಬಂಧು ಬಾಂಧವರೊಂದಿಗೆ ದಿಬ್ಬಣ ವಧುವಿನ ಮನೆಗೆ ತೆರಳುವದು, ಮದುಮಗನ ಸಹೋದರಿ ಮುಂದೆ ಬಿತ್ತಕ್ಕಿ ಹಿಡಿಯುವಳು. ಒಂದು ತಟ್ಟೆಯಲ್ಲಿ ಅಕ್ಕಿ ಅದರ ಮೇಲೆ ನೀರು ತುಂಬಿದ ತಂಬಿಗೆ ಅದರ ಮೇಲೆ ತೆಂಗಿನಕಾಯಿ ಹಾಗೂ ಕನ್ನಡಿ ಇವು ಬಿತ್ತಕ್ಕಿ ಸಾಮಾಗ್ರಿಗಳು. ಬಿತ್ತಕ್ಕಿ ಹಿಡಿದವಳಿಗೆ 'ತಳ್ಗಿ ಅತ್ತಿಗೆ' ಎನ್ನುತ್ತಾರೆ. ಇವಳ ಪತಿ ಚಂಚೀಭಾವ ಎಲೆ

ಅಡಿಕೆ ತಂಬಾಕು ತುಂಬಿದ ಚೀಲ ಇವನಲ್ಲಿರುತ್ತದೆ. ಜೊತೆಗೆ ಕಾಣಿಕೆ ಪೆಟ್ಟಿಗೆಯೂ ಇರುತ್ತದೆ. ಇದರಲ್ಲಿ ಮದುಮಗಳಿಗೂ ಅವಳ ತಾಯಿಗೂ ನೀಡುವ ಉಡುಗೊರೆ ಆಭರಣಗಳಿರುತ್ತವೆ. ದಾರಿ ಯುದ್ದಕ್ಕೂ ಸ್ತ್ರೀಯರು ಹಾಡುತ್ತ ಹೋಗುತ್ತಾರೆ.

ಹೆಸ್ರೂಟ :

ಹಾಲಕ್ಕಿಗಳಿಗೇ ವಿಶಿಷ್ಟವಾದ ಪದ್ಧತಿ ಇದು, ದಿಬ್ಬಣ ಅರ್ಧದಾರಿ ಕ್ರಮಿಸಿದಾಗ ವರನ ಕಡೆಯ ಇಬ್ಬರು ಮುಂದಾಗಿ ಹೆಣ್ಣಿನ ಮನೆಗೆ ಹೋಗುವರು. ಅಲ್ಲಿ ಹೆಣ್ಣಿನ ಮನೆಯವರಿಗೆ ದಿಬ್ಬಣ ಹೊರಟಿರುವದನ್ನು ತಿಳಿಸುವರು. ನಂತರ ಪರಸ್ಪರ ಹೆಣ್ಣು-ಗಂಡಿನ ಹೆಸರು ಕೇಳಿಕೊಳ್ಳುತ್ತಾರೆ. ಆಮೇಲೆ ಅಲ್ಲಿಯೇ ಊಟ ಮುಗಿಸಿ ದಿಬ್ಬಣ ಕರೆತರುವದಾಗಿ ಹೇಳಿ ಬಂದು ಪುನಃ ಗಂಡಿನ ದಿಬ್ಬಣ ಸೇರುತ್ತಾರೆ. ಗಂಡಿನವರು ಬೇರೆಕಡೆ ದಿಬ್ಬಣ ಒಯ್ಯಬಾರದೆಂಬ ಕಾರಣಕ್ಕಾಗಿ ಹೆಸ್ರೂಟ ಪದ್ಧತಿ ಬಂದಿರಬಹುದು.

ದಿಬ್ಬಣ ಬಂದಾಗ ವಧುವಿನ ತಾಯಿ ಮದುಮಗನನ್ನು ಪಾದತೊಳೆದು, ಬರಮಾಡಿಕೊಳ್ಳುತ್ತಾಳೆ. ನಂತರ ವಧುವಿನ ತಂದೆ ಮದುಮಗನನ್ನು ತುಳಸಿಯ ಎದುರಿಗೆ ಕೂಡ್ರಿಸುತ್ತಾನೆ. ಹೀಗೆ ಮದುಮಗನನ್ನು ಬರಮಾಡಿಕೊಳ್ಳುವದಾಗಲಿ ತಂದು ಕೂಡ್ರಿಸುವದರಲ್ಲಾಗಲಿ ವಿಳಂಬವಾಗುವಂತಿಲ್ಲ. ತಡವಾದರೆ ಹಾಡುಗಾರ್ತಿಯರು ಹಳಿಯುವ ಹಾಡನ್ನು ಪ್ರಾರಂಭಿಸುತ್ತಾರೆ. ವರ ಕುಳಿತ ನಂತರ ಬೀಗರಲ್ಲಿ ಪರಸ್ಪರ ಉಡುಗೊರೆ ವಿನಿಮಯ ಮಾಡುತ್ತಾರೆ. ಬಂದವರಿಗೆಲ್ಲ ಸಿಹಿ ಹಂಚುವ ಕಾರ್ಯವೂ ನಡೆಯುತ್ತದೆ. ಮದುಮಗ ಮಾತ್ರ ಧಾರೆ ಆಗುವವರೆಗೂ ಮಾವನ ಮನೆಯಲ್ಲಿ ಏನನ್ನೂ ಸೇವಿಸಕೂಡದು. ವಧುವನು ಕರೆತರುವಾತ ಸೋದರಮಾವ. ಮದುಮಕ್ಕಳ ನಡುವೆ ಅಂತಃಪಟ ಹಿಡಿದು ಪ್ರಾರ್ಥನೆ ಸಲ್ಲಿಸುತ್ತಾರೆ. ಆ ಮೇಲೆ ಅಂತಃ ಪಟ ತೆಗೆಯುತ್ತಾರೆ. ಗಂಡಿನ ಬಲಹಸ್ತದ ಮೇಲೆ ಹಾಲು ನೀರು ತುಳಸಿ ಇಟ್ಟು ಧಾರೆ ನೀರನ್ನು ಎರೆಯುತ್ತಾರೆ.

ತಿರಿಗಟ್ಟು ತಿಕ್ಕೋಣ :

ಮಲ್ಲಿಗೆ ಹೂ ಅರೆದು ಸಿದ್ಧಪಡಿಸಿದ ಮಿಶ್ರಣವೇ ತಿರಗಟ್ಟು ತಿಕ್ಕೋಣ, ಈ ಮಿಶ್ರಣವನ್ನು ಗಂಡ ಹೆಂಡತಿಯ ಭುಜಕ್ಕೂ ಹೆಂಡತಿ ಗಂಡನ ಭುಜಕ್ಕೂ ಬಳಿಯುತ್ತಾರೆ. ಹೆಂಡತಿಯ ಹೆಗಲಿಗೆ ಧಾರೆ ಸೀರೆ ಹಾಕಿ ಮದುಮಗ ಸಭೆಗೆ ನಮಸ್ಕರಿಸುತ್ತಾನೆ.

ಮರಗಟ್ಟು ಶಾಸ್ತ್ರ :

ಇದು ಹಾಲಕ್ಕಿಗಳ ಉಡುಗೊರೆ ಶಾಸ್ತ್ರಕ್ಕಿರುವ ಹೆಸರು. ವಿವಾಹಕ್ಕೆ ಉಡುಗೊರೆ ತಂದವರೆಲ್ಲ ಅದನ್ನು ಕುಡಿ ಬಾಳೆಯೆ ಮೇಲಿಡುತ್ತಾರೆ. ಪತ್ನಿಯನ್ನು ಕರೆದುಕೊಂಡು ಹೋಗುವಾಗ ಕೆಲವು ಚಡಂಗಳಿವೆ. ಹೆಣ್ಣಿಗೆ ತೆಂಗು, ಅಡಿಕೆ ಸಸಿ ಮತ್ತು ಮಣ್ಣಿನ ಪಾತ್ರೆಗಳನ್ನು ಬಳುವಳಿಯಾಗಿ ನೀಡುತ್ತಾರೆ. ತೆಂಗು ಅಡಿಕೆಗಳು ಫಲಬಿಟ್ಟಾಗ ಮಗಳು ತವರನ್ನು ನೆನೆಯಲಿ ಎಂಬುದೇ ಇದರ ಹಿಂದಿನ ಆಶಯ, ಹಾಗೆಯೇ ಪಾತ್ರೆಗಳು ಅಕ್ಷಯವಾಗಲಿ ಎಂಬ ಹಾರೈಕೆ ಇರಬಹುದು. ಮನೆಯಲ್ಲಿಯೆ ಬೆಳೆದ ತೆಂಗಿನ ಮರಗಳಲ್ಲಿ ಒಂದೆರಡನ್ನು ಮಗಳಿಗೆ ಬಳುವಳಿ ನೀಡುತ್ತಾರೆ. ಆ ಮರದ ಫಲಗಳು ಅವಳಿಗೇ ಸೇರುತ್ತವೆ. 'ಹೋಗೆಂಬೂಕೆ ತಂಗಿ ಮನಸಿಲ್ಲ' ಎಂದು ತುಂಬಿದ ಹೃದಯದಿಂದ ಹೆಣ್ಣನ್ನು ತಂದೆ ತಾಯಿ ಬಂಧು ಬಾಂಧವರೂ ಬೀಳ್ಕೊಡುತ್ತಾರೆ. ಹಾಲಕ್ಕಿಗಳಲ್ಲಿ ಪುನರ್ವಿವಾಹ ಪದ್ಧತಿ ಇದೆ. ಮಕ್ಕಳಾಗುವುದರೊಳಗಾಗಿ ಪತ್ನಿ ತೀರಿಕೊಂಡರೆ ಊರಗೌಡನ ಅನುಮತಿ ಪಡೆದು ವಿವಾಹವಾಗಬಹುದು. ಅಂಥ ಮದುವೆ ನಿರಾಡಂಬರವಾಗಿರುತ್ತದೆ. ಮದುವೆ ಆಗಬಯಸುವವನು ವಸ್ತ್ರ-ಆಭರಣಗಳನ್ನು ನೀಡಿದ್ದನ್ನು ವಧು ಧರಿಸಿ ತವರು ಮನೆಯನ್ನು ಹಿಂಬಾಗಿಲಿನಿಂದ ಬಿಡುವ ಪದ್ಧತಿ ಇದೆ, ಹಿಂದೆ ಬಹು ಪತ್ನಿತ್ವವಿತ್ತು. ವಿಧವೆಯರು ವಿಧುರರೊಡನೆ ಮಾತ್ರ ಮದುವೆಯಾಗಬಹುದು. ಇದಕ್ಕೆ ಸೀರುಡಿಕೆ ಎನ್ನುವರು.

ಸಾಹಿತ್ಯ ಅಧ್ಯಯನ :

ಹಾಲಕ್ಕಿ ಒಕ್ಕಲಿಗರಲ್ಲಿ ಜನಪದ ಸಾಹಿತ್ಯ ಸಮೃದ್ಧವಾಗಿದೆ. ಇವರಲ್ಲಿ ಹಾಡುಬಾರದ ಹೆಂಗಸರಿಲ್ಲ. ಪದಬಾರದ ಗಂಡಸರಿಲ್ಲ ಎನ್ನಬಹುದು. ಜನಪದ ಕಥೆ, ಕವನ, ಗೀತೆ, ಒಗಟು, ಗಾದೆಗಳು ವಿಫುಲವಾಗಿವೆ. ಹಾಲಕ್ಕಿ ಒಕ್ಕಲಿಗರ ಕಥನ

ಕವನಗಳನ್ನು ಎಲ್.ಆರ್.ಹೆಗಡೆ ಅವರು 'ತಿಮ್ಮಕ್ಕನ ಪದಗಳು' ಮತ್ತು 'ಗುಮ್ಮನ ಪದಗಳು' ಎಂಬ ಸಂಕಲನಗಳಲ್ಲಿ ಪ್ರಕಟಿಸಿದ್ದಾರೆ. ಎಲ್.ಆರ್. ಹೆಗಡೆಯವರದೇ ಗುಮಟೇ ಹಾಡುಗಳು ಪ್ರಕಟವಾಗಿದೆ. ಎಲ್.ಜಿ. ಭಟ್ಟ ಅವರು ಹಾಲಕ್ಕಿಗಳ ಸಂಪ್ರದಾಯದ ಹಾಡುಗಳು, ಮದುವೆ ಸಂದರ್ಭದ ಹಾಡುಗಳು ಮತ್ತು ಲಾವಣಿಗಳನ್ನು 'ಹಾಲಕ್ಕಿ ಪಾಯಸ' ಎಂಬ ಪುಸ್ತಕದಲ್ಲಿ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಹಾಲಕ್ಕಿ ಜನಪದ ಜೀವನ ಸಾಹಿತ್ಯ ಕುರಿತಂತೆಯೂ ಅವರು ಪ್ರೌಢಪ್ರಬಂಧ ಬರೆದು ಡಾಕ್ಟರೇಟ್ ಪಡೆದಿದ್ದಾರೆ. ಹಾಲಕ್ಕಿ ಕಥೆಗಳು ಎಲ್.ಆರ್. ಹೆಗಡೆಯವರ ನಮ್ಮ ಜನಪದ ಕಥೆಗಳು, ಉತ್ತರ ಕನ್ನಡದ ಜನಪದ ಕಥೆಗಳು, ಕರಾವಳಿ ಕಥೆಗಳು–ಸಂಗ್ರಹದಲ್ಲಿ ದೊರೆಯುತ್ತವೆ. ಇದಲ್ಲದೆ ಹಾಲಕ್ಕಿ ಒಕ್ಕಲಿಗರನ್ನು ಕುರಿತಂತೆ ಐ.ಬಿ.ಎಚ್. ಪ್ರಕಾಶನ ಎರಡು ಕಿರು ಹೊತ್ತಿಗೆ ಪ್ರಕಟಿಸಿದೆ. ಎನ್.ಆರ್. ನಾಯಕ ಅವರ ಕಾರವಾರ ಜಿಲ್ಲೆಯ ಜನಪದ ಗೀತೆಗಳು ಮತ್ತು ಸುಗ್ಗಿಯ ಪದಗಳಲ್ಲೂ ಹಾಲಕ್ಕಿ ಒಕ್ಕಲಿಗರ ಬಗ್ಗೆ ಮಾಹಿತಿ ದೊರೆಯುತ್ತದೆ. ಉಪಸಂಸ್ಕೃತಿ ಮಾಲಿಕೆಯಲ್ಲಿ ಎನ್.ಆರ್. ನಾಯಕ ಅವರು 'ಹಾಲಕ್ಕಿ ಸಂಸ್ಕೃತಿ; ಕುರಿತಂತೆ ಬರೆದ ಪುಸ್ತಕವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ.

ಸುಗ್ಗಿಕುಣಿತ :

ಹಾಲಕ್ಕಿ ಒಕ್ಕಲಿಗರ ಸುಗ್ಗಿಕುಣಿತ ಹೆಸರವಾಸಿಯಾಗಿದೆ. ಪಾಲ್ಗುಣ ದಶಮಿಯಿಂದ ಹುಣ್ಣಿಮೆವರೆಗೆ ಏಳು ಸೀಮೆಗಳಲ್ಲಿ ಈ ಕುಣಿತ ಏರ್ಪಡಿಸುತ್ತಾರೆ. ಜೀಗಡಿ ಸುತ್ತಿದ ತುರಾಯಿಗಳಿಂದ ಆಕರ್ಷಿತವಾದುದು ಹಿರಿ ಸುಗ್ಗಿ ಕುಣಿತ. ಇದಕ್ಕೆ ತಗಲುವ ಖರ್ಚು ಅಪಾರ, ತುರಾಯಿ, ಕೋಲು, ಕುಂಡಗಳನ್ನು ಕೈಯಲ್ಲಿ ಹಿಡಿದುಕೊಂಡು ಗಂಟೆ ವಾದ್ಯ ತಾಳ, ಮದ್ದಲೆಗಳ ನಾದಕ್ಕೆ ತಕ್ಕಂತೆ ಕಾಲಿಗೆ ಗೆಜ್ಜೆ ಕಟ್ಟಿ ಸೀರೆ ಇಲ್ಲವೆ ಧೋತರ ತೊಟ್ಟು ಹಸಿರು ಇಲ್ಲವೆ ಕೆಂಪು ಬಣ್ಣದ ಅಂಗಿಧರಿಸಿ ಕೊರಳಿಗೆ ಮುತ್ತಿನ ಇಲ್ಲವೆ ಹೂವಿನ ಹಾರ ತುರಾಯಿಗಳನ್ನು ಇಳಿಬಿಟ್ಟು (ತುರಾಯಿಗೆ ಬೆಂಡಿನ ಕಾಗದ ಬಳುಸತ್ತಾರೆ.) ಕೈಯಲ್ಲಿ ನವಿಲುಗರಿಯ ಕುಂಚವನ್ನು ಹಿಡಿದುಕೊಂಡು "ಚೋ ಹೋ ಚೋ" "ಸೋ ಹೋ ಸೋ" 'ಜಾ ವೋ ಸೋ' ಎಂದು ಹೇಳುತ್ತಾ ಕುಣಿಯುತ್ತಾರೆ. ಇದೊಂದು ರಂಗು ರಂಗಿನ ವರ್ಣ ರಂಜಿತ ಕುಣಿತವಾಗಿದ್ದು ನೋಡುಗರ ಕಣ್ಮನಸೆಳೆಯುತ್ತ ಮೈಮನ ತಣಿಸುತ್ತದೆ. ಹಗರಣ ಗುಮಟೆ ಪಾಂಗು ಕೋಲಾಟ ಸುಗ್ಗಿಕುಣಿತ ಇವು ಹಾಲಕ್ಕಿ ಒಕ್ಕಲಿಗರ ಮನರಂಜನೆಗಳು. 'ಕರ್ನಾಟಕದಲ್ಲಿ ಹಾಲಕ್ಕಿ ಒಕ್ಕಲಿಗರ ಸುಗ್ಗಿ ವಿಶಿಷ್ಟವಾದದ್ದು. ಸುಗ್ಗಿಕುಣಿತಕ್ಕೆ ಗುಮಟೆವಾದ್ಯದ ಹಿನ್ನೆಲೆ ಮೆರುಗನ್ನುಂಟು ಮಾಡುತ್ತದೆ. ಅಡ್ಡ ಕುಣಿತ ಕೋಲು ಕುಣಿತ ಕುಂಚ ಕುಣಿತ ಅಲಾವಿಕುಣಿತ ಹೀಗೆ ವಿವಿಧ ಬಗೆಯ ಕುಣಿತಗಳಿವೆ, ಸುಗ್ಗಿಕುಣಿತ ಕರ್ನಾಟಕ ಜನಪದ ನೃತ್ಯಕಲೆಗೆ ಒಂದು ವಿಶೇಷ ಕೊಡುಗೆ. ಹಗರಣ (ಹಗಣ) ಇವರಿಗೊಂದು ವಿಶೇಷ ವಿನೋದ, ಊರಿಗೆ ಊರೇ ಹೋಗಿ ಬೇಟೆಯಾಡುವದು ಇವರದೊಂದು ವಿಶಿಷ್ಠಹವ್ಯಾಸ. ಇವರ ಬೇಟೆಯಲ್ಲಿ ಬಂದೂಕಿಗೆ ಸ್ಥಾನವಿಲ್ಲ. ಈಟಿಯನ್ನು ಬಳಸುತ್ತಾರೆ. ಬಲೆಕಟ್ಟಿ ಬೇಟೆಯಾಡುತ್ತಾರೆ. ಈ ಬೇಟೆಗೆ ಹೊಲ ಎಬ್ಬಿಸುವದು ಎನ್ನುತ್ತಾರೆ. ಆರ್ಥಿಕವಾಗಿ ಹಿಂದುಳಿದವರಾಗಿದ್ದು ಕಷ್ಟದ ಬದುಕನ್ನು ಹಾಡು ಗುಮಟೆಪಾಂಗಿನ ಖುಷಿಯಲ್ಲಿ ಮೈಮರೆಯುತ್ತಾರೆ. (ಅ.ಟಿ. 2. ಕರಕುಶಲ ಕಲೆಗಳು–ಕವಿವಿಶ್ವಕೋಶ–2 ಪ್ರಸಾರಾಂಗ ಕ.ವಿ.ವಿಹಂಪಿ–2000 ಪು–118.)

ದೇವಲೋಕದಲ್ಲಿ ಮೂವತ್ಮೂರು ಕೋಟಿ ದೇವತೆಗಳು ಸುಗ್ಗಿ ಕಟ್ಟಲು ಏಳು ರಾತ್ರಿ ಏಳು ಹಗಲು ನಿರ್ಧರಿಸಿ ಮದ್ದಲೆ ಹೊಡೆಯಲು ಮಾದೇವನಿಗೆ, ಗುಮಟೆ ಹಿಡಿಯಲು ದೇವೇಂದ್ರನಿಗೆ, ಪೈಲ ಹಾಕಲು ಗೋವಿಂದರಾಯನಿಗೆ ಆಮಂತ್ರಣವಿತ್ತರಂತೆ. ಆದರೆ ಸುಗ್ಗಿ ಕುಣಿತ ಮಾಡುವುದು ದೇವತೆಗಳಿಗೆ ಸಾಧ್ಯವಾಗಲಿಲ್ಲ. ಈ ಕಲೆ 'ತಮಗಲ್ಲ' ಎಂದು ಭಾವಿಸಿದ ಅವರು 'ಹಾಲಲ್ಲುಟ್ಟಿದ ಹಾಲಕ್ಕಿ ಗೌಡಗೆ ಈ ಸುಗ್ಗಿ ಕೊಡಬೇಕೆಂಬುದರ ನಿರ್ಣಯಕ್ಕೆ ಬಂದರು. ಹೀಗೆ ಹಾಲಕ್ಕಿಗಳಿಗೆ ಸುಗ್ಗಿ ಕೊಟ್ಟರು ಎನ್ನಲಾಗಿದೆ. ಬ್ರಿಟೀಷ್ ಅಧಿಕಾರಿಯೊಬ್ಬ ಅಂಕೋಲ ಭಾಗದ ಸುಗ್ಗಿಗೆ ಮಾರು ಹೋಗಿ ತಾಲ್ಲೂಕು ಕಛೇರಿ ಎದುರಿಗೆ ಪ್ರತಿವರ್ಷ ಸುಗ್ಗಿ ಕುಣಿತ ಏರ್ಪಡಿಸಬೇಕೆಂದು ಶಾಸನವನ್ನೇ ಮಾಡಿದನಂತೆ.

ಹಗಣ :

ಮೂಲತಃ ಜನಸಾಮಾನ್ಯರು ಅಥವಾ ಅವಿದ್ಯಾವಂತರು ಹಾಕುತ್ತಿದ್ದ ವೇಷವೇ ಹಗಣ ಎಂದು ಎಂ. ಚಿದಾನಂದಮೂರ್ತಿ ಅವರು ಬರೆದಿದ್ದಾರೆ. ವಿನೋದಕ್ಕಾಗಿ ಅಭಿನಯಿಸುವ ಸಂಕೀರ್ಣ ಜನಪದ ದೃಶ್ಯಗಳ ಮೆರವಣಿಗೆಯೇ 'ಹಗಣ; ಎಂಬುದು ಸುಪ್ರಸಿದ್ಧ ಜಾನಪದ ವಿದ್ವಾಂಸ ಎಲ್.ಆರ್. ಹೆಗಡೆ ಅವರ ಅಭಿಪ್ರಾಯ. 'ವಡ್ಡಾರಾಧನೆ' ಗ್ರಂಥದಲ್ಲಿ ಹಗಣದ ಉಲ್ಲೇಖವಿದೆ. ಹಾಲಕ್ಕಿ ಹಗಣ ವಿಶಿಷ್ಟವಾದದ್ದು. ಹಗಣದ ಮೂಲೋದ್ದೇಶ ಮನರಂಜನೆ, ಜಾತ್ರೆ ಹಗಣ, ಸುಗ್ಗಿ ಹಗಣ, ವೀಳ್ಯ ನೀಡಿ ನಡೆಸುವ ಹಗಣ ಹೀಗೆ ಹಗಣದಲ್ಲಿ ಮೂರು ವಿಧ.

ಮದುವೆಯ ಮಾರನೆಯ ದಿನ, ಗೃಹಪ್ರವೇಶದ ದಿನ, ದೇವಕಾರ್ಯದ ದಿನ, ಹಗಣ ಏರ್ಪಡಿಸುತ್ತಾರೆ. ಗುಮಟೆ ಪದಗಳಿಂದ ಹಗಣ ಪ್ರಾರಂಭ. ಐದಕ್ಕೂ ಹೆಚ್ಚು ಜನ ಸಾಲಿನಲ್ಲಿ ನಿಂತು ಗುಮಟೆ ಬಾರಿಸುತ್ತಾರೆ. ಒಬ್ಬ ಪದ್ಯದ ಒಂದು ಸಾಲು ಹೇಳಿದ ಬಳಿಕ ಉಳಿದವರು ಅದನ್ನು ಪುನರುಚ್ಚರಿಸುತ್ತಾರೆ. ಮಧ್ಯೆ ಮಧ್ಯೆ ಹಾಸ್ಯದ ವೇಷಗಳು ಬರುತ್ತವೆ. ಅವು ಸಭಿಕರು ನಗುವಂತೆ ಹಾವ ಭಾವ ಪ್ರದರ್ಶಿಸುತ್ತವೆ. ಗುಮಟೆ ಪದಗಳ ನಡುವೆ ಅಡ್ಡ ವೇಷಗಳೂ ಬರುವುದುಂಟು. ಪೋಲಿಸರು ಕಳ್ಳನನ್ನು ಬಂಧಿಸುವ ದೃಶ್ಯ, ಕೋಡಂಗಿ, ಕುಡುಕ, ಸಿಂಹ, ಹುಲಿದೇವರು, ಗಾರ್ಡ್, ರೈಲುಬಂಡಿ, ಬಲೆಬೀಸುವ ಅಂಬಿಗ, ಮರಕಾಲಿನವರು, ಯಕ್ಷಗಾನ ವೇಷದವರೂ ಬಂದು ಹೋಗುವುದುಂಟು. ಹಾಲಕ್ಕಿ ಜನರ ಸಾಮಾಜಿಕ ಜೀವನ ರೂಪಿಸುವ ಪದ್ಯವೂ ಹಗಣದಲ್ಲಿ ಬರುತ್ತದೆ. ಹಗಣ ಬೆಳಗಿನವರೆಗೂ ನಡೆಯುವ ಮನರಂಜನಾ ಕಾರ್ಯಕ್ರಮ. ಕಣ್ಣಿಗೆ ಮನಮೋಹಕ ವೇಷ. ಇಂಪಾದ ಹಾಡು, ಹಾಸ್ಯ ಹೀಗೆ ಅಬಾಲವೃದ್ಧರನ್ನು ರಂಜಿಸುವಂತಹುದು ಹಾಲಕ್ಕಿ ಹಗಣ.

ತಾರ್ಲೆ :

ಮಳೆ ಬಾರದಿದ್ದಾಗ ಹಾಲಕ್ಕಿ ಹೆಂಗಸರು ಹೇಳುವ ಹಾಡುಗಳಿವೆ. ಒಕ್ಕಲಗಿತ್ತಿಯರು ಎದುರು ಬದುರಾಗಿ ಕುಳಿತು ಹಾಡುತ್ತಾರೆ. ಏಳು ರಾತ್ರಿ ಏಳು ಹಗಲು ಸತತವಾಗಿ ಹಾಡಿದರೆ ಮಳೆ ಬರುತ್ತದೆಂಬುದು ಹಾಲಕ್ಕಿ ಒಕ್ಕಲಿಗರ ನಂಬಿಕೆ. ಒಂದೊಂದು ಹಾಡಿನ ಬಳಿಕವೂ 'ತಾರ್ಲೇ' ಎಂದು ಕೂಗುವರು. 'ಮಳೆ ತಾರಲೇ' ಎಂಬುದೇ 'ತಾರ್ಲೇ' ಎಂಬುದಾಗಿರಬಹುದೆಂಬುದು ಜಾನಪದ ವಿದ್ವಾಂಸ ಎನ್.ಆರ್. ನಾಯಕರ ಅಭಿಪ್ರಾಯ. ತಾರ್ಲೆ ಕುಣಿತದ ಕೆಲವೊಂದು ಸೊಲ್ಲುಗಳು ಹೀಗೆವೆ.

ಉದಾ : **ಚಣಮಾಲೆ ಹೊಯ್ಯಲೆ ಚಣಕೆರೆ ತುಂಬಲೆ**
ಬಯ್ದೀಗೊಳೆಲ್ಲ ಹಯ್ನೂದೋ। ತಾರ್ಲೆ
ಚಾಂಜೀಯ ಬೇರೊ ತಳಮಳಗೊಂಡೇ
ದೇವತ್ತಗೋಳಾ ಮದವೀಯೋ॥ ತಾರ್ಲೆ

ಮಳೆಬಾರದಿದ್ದಾಗ ಹಾಡುತ್ತ ಹಾಲಕ್ಕಿ ನಾರಿಯರು ಈ ಕುಣಿತವನ್ನು ಪ್ರದರ್ಶಿಸುತ್ತಾರೆ. ಈ ಕುಣಿತದ ಒಟ್ಟು ಸ್ವರೂಪವನ್ನು ಗಮನಿಸಿದರೆ ಅವರ ಹಿಂದೆ ಫಲ ಸಮೃದ್ಧಿಯ ಕಲ್ಪನೆಯಿರುವದು ವೈದ್ಯವಾಗುತ್ತದೆ. (ಅ.ಟಿ. 3. ಕರ್ನಾಟಕ ಜನಪದ ಕಲೆಗಳ ಕೋಶ ಸಂ.ಹಿ.ಚಿ ಬೋರಲಿಂಗಯ್ಯ ಪ್ರಸಾರಾಂಗ ಕ.ವಿ. ಹಂಪಿ–1996, ಪು–166).

ಸಂಸ್ಕಾರ :

ಈ ಜನಾಂಗದವರ ಮಕ್ಕಳ (ಸೊಡ್ಲೆ) ಸ್ಮಶಾನ ಪ್ರತ್ಯೇಕವಾಗಿರುತ್ತದೆ. ಇವರು ಹೆಣವನ್ನು ಸುಡುತ್ತಾರೆ. ಸತ್ತ ಮೈಲಿಗೆಯನ್ನು ಊರ ಗೌಡನೇ ನಿರು ಚಿಮುಕಿಸಿ ಶುದ್ಧಿ ಮಾಡುವನು. ತಿರುಪತಿ ಯಾತ್ರೆ ಮಾಡಿ ಬಂದವರಿಗೆ 'ದಾಸರು' ಎಂದು ಕರೆಯುತ್ತಾರೆ. ಅವರು ಸತ್ತಾಗ ಕೊರಳಿಗೆ ತುಳಸಿ ಹಾಕಿ ಆಗೇರ ವಾದ್ಯದೊಡನೆ ಸ್ಮಶಾನಕ್ಕೆ ಒಯ್ಯುತ್ತಾರೆ. ಮರಣ ಸಮೀಪಿಸಿದೆ ಎಂದು ತಿಳಿದಾಗ ಕುಟುಂಬದ ಹಿರಿಯರು ಅಥವಾ ದಾಸರು 'ಹರಿಗೋವಿಂದ' ಭಜನೆ ಮಾಡುವರು. ಮೃತರನ್ನು ಸುಡುವುದು ಪದ್ಧತಿ. ಮೂರುದಿನಗಳ ಬಳಿಕ ಅಸ್ತಿ ಸಂಚಯನ ನಡೆಯುವುದು. ತಿರುಪತಿ ಯಾತ್ರೆ ಮಾಡಿ

ಬಂದು 'ದಾಸ' ನಾದವನಿಗೆ ವಿಶೇಷ ಸಂಸ್ಕಾರ ಮಾಡುವರು. ಸತ್ತವರ ಆತ್ಮವನ್ನು ಸ್ಮಶಾನದಿಂದ ತಂದು ಒಂದು ಸ್ಥಳದಲ್ಲಿ ನಿಲ್ಲಿಸುವ ಕೆಲಸ ತೋಟಗಾರನದು. ಸತ್ತವರ ಆತ್ಮವೆಂದು ಒಂದು ಪುಟ್ಟ ಕಲ್ಲನ್ನು ಸ್ಮಶಾನದಿಂದ ತಂದು ಅದಕ್ಕೆ ನೈವೇದ್ಯಪಿಡುತ್ತಾರೆ. 20ನೇಯ ದಿನ ಭೋಜನ ಏರ್ಪಡಿಸುವದುಂಟು. (ಅ.ಟಿ. 4. ಕನ್ನಡ ವಿಶ್ವಕೋಶ, ಸಂ.14 ಕುವೆಂಪು. ಕ.ಅ. ಸಂಸ್ಥೆ ಮೈ.ವಿ.ವಿ 2004. ಪು–1116).

ಹಾಲಕ್ಕಿ ಒಕ್ಕಲಿಗರಲ್ಲಿ ಕಥೆ ಮತ್ತು ಬೈಠಕ್ಕುಗಳೂ ಇವೆ. ಸಂಗ್ಯಾಬಾಳ್ಯಾ, ಗುಂಡೂಬರಮನ ನಾಟಕಗಳನ್ನು ಆಡುವುದುಂಟು. ಕಥನ ಕವನ, ಗಾದೆ, ಒಗಟು, ಜನಪದ ಕಥೆಗಳು ಇವುಗಳ ಸಮೃದ್ಧ ಕಣಜವೇ ಇದರಲ್ಲಿದೆ. ಮದುವೆ ಸಂದರ್ಭದಲ್ಲಿ ಬತ್ತ ಮೆರೆಯುವಾಗ, ಮಾರ್ಗಯಾಸ ಗೊತ್ತಾಗದಿರಲೆಂದು ಹೆಂಗಸರು ಹಾಡುತ್ತಾರೆ. ಬೇಟೆ ಮತ್ತು ಕೋಳಿಅಂಕಗಳು ಇವರ ಮನರಂಜನೆಗಳಾಗಿವೆ. ಇವರ ಬದುಕು ಬಡತನದ್ದಾದರು ಜಾನಪದದಲ್ಲಿ ಇವರು ಸಿರಿವಂತರು. ಬೆಳಗಿನಿಂದ ಸಂಜೆಯವರೆಗೂ ಹಾಲಕ್ಕಿ ಸ್ತ್ರೀಪುರುಷರಿಬ್ಬರೂ ದುಡಿಯುವರು. ಇವರು ಪ್ರಾಮಾಣಿಕರೂ ನಂಬಿಕೆಗೆ ಅರ್ಹರಾದವರೂ ಆಗಿದ್ದಾರೆ. ಕೃಷಿ, ಪಶುಪಾಲನೆಯೊಂದಿಗೆ ಜೇನು ಸಂಗ್ರಹಣೆ ಇವರ ಹವ್ಯಾಸ. ಕರ್ನಾಟಕದ ಜನಪದ ಕಲೆ–ಸಂಸ್ಕೃತಿಗೆ ಹಾಲಕ್ಕಿ ಒಕ್ಕಲಿಗರು ನೀಡಿರುವ ಕಾಣಿಕೆ ಅಮೂಲ್ಯವಾದ್ದು.

ಹಾಲಕ್ಕಿ ಒಕ್ಕಲಿಗರು ಗಿಡಮೂಲಿಕೆಗಳಿಂದ ಔಷಧ ತಯಾರಿಸುವುದರಲ್ಲಿ ಪ್ರಸಿದ್ಧರು. ಧನಕರುಗಳ ಹಾಗೂ ಮನುಷ್ಯರ ರೋಗಗಳಿಗೆ ಔಷಧ ಕೊಡುವ ಪ್ರಸಿದ್ಧ ವೈದ್ಯಮನೆತನಗಳಿವೆ. ಇದು ವಂಶಪಾರಂಪರ್ಯವಾಗಿ ನಡೆದುಬಂದ ವೃತ್ತಿ. ಪಕ್ಷವಾತ ರೋಗಕ್ಕೆ ಬೆಳ್ಳಬಂರದ ಬೊಮ್ಮಗೌಡರ ಮದ್ದು ನಾಡಿನ ಒಳಹೊರಗೆಲ್ಲ ಪ್ರಸಿದ್ಧವಾಗಿದೆ. ಮಕ್ಕಳ ರೋಗಕ್ಕೆ ಕುಮಟಿದ ವಡಗೇರಿಯ ಗೌಡರು, ಎಲುಬುರೋಗಕ್ಕೆ ಕಾರವಾರದ ತೋಡೂರು ಗೌಡರು ಪ್ರಸಿದ್ಧರು.

ಕರ್ನಾಟಕ ರಾಜ್ಯದ ಪ್ರಮುಖ ಬುಡಕಟ್ಟುಗಳಲ್ಲಿ ಒಂದಾಗಿರುವ ಹಾಲಕ್ಕಿ ಒಕ್ಕಲಿಗರು ಉತ್ತರ ಕನ್ನಡ ಜಿಲ್ಲೆಯ ಕಾರವಾರ ಅಂಕೋಲ ಕುಮಟ ಹೊನ್ನಾವರ ತಾಲೂಕುಗಳಲ್ಲಿ ವಾಸಿಸುತ್ತಾರೆ. ಕೃಷಿಯನ್ನು ಪ್ರಧಾನ ಉದ್ಯೋಗವನ್ನಾಗಿಸಿಕೊಂಡ ದುಡಿತವನ್ನು ಮೆಚ್ಚಿಕೊಂಡ ಶ್ರಮಜೀವಿಗಳಿವರು. ಕಡುಬಡವರಾದ ಇವರಿಗೆ ಭತ್ತ ಪೂರ್ತಿ ಬೆಳೆಯುವವರೆಗೆ ಕಾಯುವ ಆರ್ಥಿಕ ಸಾಮರ್ಥ್ಯವಿಲ್ಲದೆ ಬತ್ತದ ತೆನೆ ಇನ್ನೂ ಹಾಲು ತುಂಬಿರುವಾಗಲೇ ಕೊಯ್ದು ಅರೆದು ಪಾಯಸ (ಹಾಲಕ್ಕಿ ಪಾಯಸ) ಮಾಡಿ ಉಣ್ಣುತ್ತಿದ್ದುದರಿಂದ ಇವರಿಗೆ ಹಾಲಕ್ಕಿಗಳ ಎಂಬ ಹೆಸರು ಬಂದಿರಬಹುದೆಂದು ಹೇಳಲಾಗಿದೆ. ಇವರ ಮೈ ಹಾಲು ಅಕ್ಕಿಯ ಬಣ್ಣದ್ದಾಗಿರುವದರಿಂದ ಇತರ ಒಕ್ಕಲು ಪಂಗಡದವರಿಂದ ಭಿನ್ನ ಎಂದು ಗುರುತಿಸಲು ಇವರಿಗೆ ಹಾಲಕ್ಕಿ ಒಕ್ಕಲು ಎಂದು ಹೆಸರಿರುವದಾಗಿ ಪ್ರತೀತಿ ಇದೆ. ಇವರು ಆದಿವಾಸಿ ಜೀವನ ಪದ್ಧತಿ ಅನುಸರಿಸುತ್ತಾರೆ. ಇವರಲ್ಲಿ ಎಂಟು ಮೂಲ ಪಂಗಡಗಳನ್ನು ಗುರುತಿಸಲಾಗಿದೆ. ಇವುಗಳಿಗೆ ಬಳಿ ಎಂದು ಹೆಸರು ಗುರಾಣಿ ಬಳಿ, ಖಡಿನ ಬಳಿ, ಕೇದಿಗೆಬಳಿ, ಮಂಜಲಿ ಬಳಿ, ಸುಸ್ಕಿನ ಬಳಿ, ದ್ಯಾವನ ಬಳಿ, ಕುಂತಿ ಬಳಿ ಹೀಗೆ ಎಂಟು ಪ್ರಕಾರದ ಪಂಗಡಗಳಾಗಿವೆ. ಮಾಂಸಾಹಾರಿಗಳಾದರೂ ಇವರು ತಮ್ಮ ಬಳಿಯ ಹೆಸರಿನ ಪ್ರಾಣಿಗಳನ್ನು ತಿನ್ನುವದಿಲ್ಲ. ಕೊಲ್ಲುವುದೂ ನಿಷಿದ್ಧ.

ಸಮಾರೋಪ :

ಹಾಲಕ್ಕಿ ಒಕ್ಕಲಿಗರು ತಮ್ಮದೇ ಆದ ವಿಶಿಷ್ಠ ಸಂಸ್ಕೃತಿ ಮತ್ತು ಪರಂಪರೆವುಳ್ಳವರಾಗಿದ್ದಾರೆ. ಈ ಜನಾಂಗದವರು ಶರೀರದ ಪೋಷಣೆ ಹಾಗೂ ಗೌರವಕ್ಕಾಗಿ ಬಟ್ಟೆ ಧರಿಸುತ್ತಾರೆಯೇ ಹೊರತು ಸೌಂದರ್ಯ ವರ್ಧಿಸುವ ಉದ್ದೇಶವಿರುವದಿಲ್ಲ. ಸೌಂದರ್ಯಕ್ಕಿಂತ ಶಾರೀರಿಕ ಬಲವರ್ಧನೆಗಾಗಿ ಸ್ನಾಯುಗಳ ಬೆಳವಣಿಗೆಗಾಗಿ ಆಭರಣ ಧರಿಸುತ್ತಾರೆ. ಹಾಲಕ್ಕಿ ನಾರಿಯರು ತಮ್ಮ ಕೊರಳು ಭಾರಹೊರಲು ಸಮರ್ಥವಾಗಿ ಬೆಳೆಯಲೆಂದು ಕೊರಳಿಗೆ ಭಾರವಾಗುವಷ್ಟು ಬಣ್ಣಬಣ್ಣದ ಮಣಿಸರಗಳನ್ನು ಧರಿಸುತ್ತಾರೆ. ಶರೀರ ರಕ್ಷಣೆ ಬೆಳವಣಿಗೆ ಆರೋಗ್ಯ ಪಾಲನೆ, ಮಾನಸಿಕ ಬೆಳವಣಿಗೆಗಾಗಿ ವೇಷಭೂಷಣ ಧರಿಸುವರು. ಇವರ ಸೃಜನಶೀಲತೆ, ಸೌಂದರ್ಯಪ್ರಜ್ಞೆ, ಸಹನಶೀಲತೆ, ಪರಿಶ್ರಮ, ಮನೋವೈಜ್ಞಾನಿಕ ವೈದ್ಯಕೀಯ ತಿಳುವಳಿಕೆ ಇತರರಿಗೂ ಮಾದರಿಯಾಗಿರುತ್ತವೆ.

ಆಧಾರ ಗ್ರಂಥಗಳು :

1) ಕನ್ನಡ ವಿಷಯ ವಿಶ್ವಕೋಶ-ಜಾನಪದ ಕುವೆಂಪು, ಕ.ಅ. ಸಂಸ್ಥೆ ಮೈವಿ..ವಿ-2006, ಪು-1243.
2) ಕರಕುಶಲ ಕಲೆಗಳು-ಕವಿವಿಶ್ವಕೋಶ-2 ಪ್ರಸಾರಾಂಗ ಕ.ವಿ.ವಿಹಂಪಿ-2000 ಪು-118.
3) ಕರ್ನಾಟಕ ಜನಪದ ಕಲೆಗಳ ಕೋಶ ಸಂ.ಹಿ.ಚಿ ಬೋರಲಿಂಗಯ್ಯ ಪ್ರಸಾರಾಂಗ ಕ.ವಿ. ಹಂಪಿ-1996, ಪು-166.
4) ಕನ್ನಡ ವಿಶ್ವಕೋಶ, ಸಂ.14 ಕುವೆಂಪು. ಕ,ಅ, ಸಂಸ್ಥೆ ಮೈವಿವಿ 2004. ಪು-1116.

❑

ಉತ್ತರ ಕನ್ನಡ ಜಿಲ್ಲೆಯ ನೀರಾವರಿ ವ್ಯವಸ್ಥೆ ಒಂದು ಚಾರಿತ್ರಿಕ ಅವಲೋಕನ

– ಡಾ. ಟಿ.ವಿ ನಾಗರಾಜ

I

ಪ್ರಾಗೈತಿಹಾಸಿಕ ಮಾನವ ತನ್ನ ವಾಸಕ್ಕಾಗಿ ಗುರುತಿಸಿಕೊಂಡ ನೆಲೆಗಳು ಸಾಮಾನ್ಯವಾಗಿ ನೀರು ಸಿಗುವಂತಹ ನೈಸರ್ಗಿಕ ತಾಣಗಳೆ ಆಗಿದ್ದವು. ಕೃಷಿಯನ್ನು ತನ್ನ ಮುಖ್ಯ ಜೀವನಾಧಾರವಾಗಿ ರೂಡಿಸಿಕೊಂಡ ದಿನದಿಂದಲೆ ಮಳೆ ಮತ್ತು ಹೊಳೆಯ ನೀರನ್ನು ಸಾಕಷ್ಟು ಕಾಲ ಹಿಡಿಡಿಟ್ಟುಕೊಳ್ಳುವ ಅವಶ್ಯಕತೆಗೆ ತಕ್ಕ ಹಾಗೆ ಬಳಸಿಕೊಳ್ಳಲು ನಡೆಸಿದ ಪ್ರಯತ್ನಗಳ ಫಲವೆ ಕೆರೆ, ಕುಂಟೆ, ಕಟ್ಟೆಗಳಾಗಿ ರೂಪ ಪಡೆದವು, ಇದುವರೆಗಿನ ಅಧ್ಯಯನಗಳಿಂದ ಕೆರೆ ನಿರ್ಮಾಣ, ದುರಸ್ತಿ, ನಿರ್ವಹಣೆಯಂತಹ ಎಲ್ಲಾ ಜವಾಬ್ದಾರಿಗಳನ್ನು ಕೂಡ ಸ್ಥಳೀಯರೇ ನಿರ್ವಹಿಸುತ್ತಿದ್ದು, ಈ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದ ರಾಜರು ಭೂಮಿ, ಹಣ,ತೆರಿಗೆ ವಿನಾಯಿತಿಗಳ ಮೂಲಕ ಕೆರೆ ನೀರಾವರಿ ವ್ಯವಸ್ಥೆಯಲ್ಲಿ ಪಾಲ್ಗೂಂಡವರಿಗೆ ಮನ್ನಣೆ ನೀಡಿದ್ದನ್ನು ದಾಖಲಿಸಿವೆ. ಈ ರೀತಿಯ ಕೊಡುಗೆ ಹಾಗು ಮಾನ್ಯಗಳು ಕೆರೆ ನೀರಾವರಿ ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡುವುದರ ಜೊತೆಗೆ ಇಂತಹ ಕಾರ್ಯಗಳಲ್ಲಿ ಪಾಲ್ಗೊಂಡವರಿಗೆ ಸಾಮಾಜಿಕ ಹಾಗು ರಾಜಕೀಯ ಮನ್ನಣೆ ದೊರಕಿಸಿಕೊಟ್ಟವು, ಎಲ್ಲಕ್ಕಿಂತ ಮಿಗಿಲಾಗಿ ಇವರ ಕಾರ್ಯಗಳಲ್ಲಿ ತೊಡಗಿಸಿಕೊಂಡವರಿಗೆ, ಇವು ಪುಣ್ಯದ ಕೆಲಸ ಎಂಬ ಗಾಢವಾದ ನಂಬಿಕೆ ಇದ್ದಿತು. ಪ್ರಾಚೀನ ಹಾಗೂ ಮಧ್ಯಕಾಲೀನ ಚಾರಿತ್ರಿಕ ಬೆಳವಣಿಗೆಯಲ್ಲಿ ದೇವಾಲಯಗಳು ಆರ್ಥಿಕ ಕೇಂದ್ರಗಳಾಗಿದ್ದು, ಕೃಷಿ ಮತ್ತು ನೀರಾವರಿ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದವು. ಈ ಹಿನ್ನೆಲೆಯಲ್ಲಿ ಪ್ರಕೃತಿದತ್ತವಾಗಿ ಅಪಾರ ಪ್ರಮಾಣದ ಮಳೆಯಿಂದಾಗಿ ವಿಪುಲ ನೀರಾವರಿ ಸಂಪನ್ಮೂಲ ಹೊಂದಿರುವ ಉತ್ತರಕನ್ನಡ ಜಿಲ್ಲೆಯ ನೀರಾವರಿ ಚೌಕಟ್ಟನ್ನು ಲಭ್ಯವಿರುವ ಆಕರಗಳ ಹಿನ್ನೆಲೆಯಲ್ಲಿ ಚಾರಿತ್ರಿಕ ಅವಲೋಕನ ಮಾಡುವ ಒಂದು ಪ್ರಯತ್ನವೇ ಈ ಲೇಖನ.

II

ಯಾವುದೇ ಒಂದು ಪ್ರದೇಶದ ನೀರಾವರಿ ಕುರಿತಂತೆ ಚರ್ಚಿಸಬೇಕಾದ ಸಂದರ್ಭದಲ್ಲಿ, ಆ ಪ್ರದೇಶದ ಬೌಗೋಳಿಕ ಪರಿಸರ, ಭೂ ಮೇಲ್ಮೈಲಕ್ಷಣಗಳು, ಹವಾಗುಣ ಮಳೆಯ ಪ್ರಮಾಣ ಮತ್ತು ನದಿ ಹರಿವುಗಳ ನೆಲೆಯಲ್ಲಿ ಪರಿಬಾವಿಸಬೇಕಾದುದು ಅಗತ್ಯ. ಈ ಹಿನ್ನಲೆಯಲ್ಲಿ ಕರ್ನಾಟಕದ ಕರಾವಳಿಯ ಉತ್ತರಕನ್ನಡ ಜಿಲ್ಲೆಯ 130 551 211 ಮತ್ತು 150 311 0111 ರ ಉತ್ತರಅಕ್ಷಾಂಶ ಹಾಗು 740 01 3511 ಮತ್ತು 750 101 2311 ಪೂರ್ವರೇಖಾಂಶ ಇವುಗಳ ನಡುವೆ ಹರಡಿಕೊಂಡಿದೆ. ಈ ಜಿಲ್ಲೆ ಗೋವಾ ರಾಜ್ಯ, ಬೆಳಗಾವಿ, ಧಾರವಾಡ, ಶಿವಮೊಗ್ಗ ಹಾಗು ಉಡುಪಿ ಜಿಲ್ಲೆಗಳೊಂದಿಗೆ ತನ್ನ ಗಡಿಗಳನ್ನ ಹಂಚಿಕೊಂಡಿದೆ. ಈ ಜಿಲ್ಲೆಯನ್ನು ಎರಡು ಬೌಗೋಳಿಕ ವಿಭಾಗಗಳಾಗಿ ವಿಂಗಡಿಸಬಹುದು. ಸಮುದ್ರದಂಚಿನಿಂದ 10–15 ಕಿ.ಮೀ ಅಗಲ ಮತ್ತು 130 ಕಿ.ಮೀ ಉದ್ದವಾಗಿರುವ ಕರಾವಳಿ ಘಟ್ಟದ ಕೆಳಬಾಗ, ಅದರ ಪೂರ್ವ ದಿಕ್ಕಿಗೆ ಗೋಡೆಯಂತೆ

ದಕ್ಷಿಣೊತ್ತರವಾಗಿ ಹಬ್ಬದ ಜಂಜುಕಲ್ಲಿನ ಸಹ್ಯಾದ್ರಿ ಶ್ರೇಣಿ ಬೆಟ್ಟದ ತಪ್ಪಲಿನಿಂದ ಹರಿದು ಸಮುದ್ರ ಸೇರುವ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ ನದಿಗಳ ಸುತ್ತಲೂ ಹಸಿರು ಹಾಸಿ ಸೌಂದರ್ಯ ಬೆಳೆಸಿದೆ. ಕಾರವಾರದಿಂದ ಭಟ್ಕಳದವರೆಗೆ ಚಾಚಿಕೊಂಡ ಕರಾವಳಿ ಮರಳು ಮಯವಾಗಿದೆ. ಘಟ್ಟದ ಕೆಳಗೆ ಕಾರವಾರ, ಅಂಕೊಲಾ, ಕುಮಟಾ, ಹೊನ್ನವರ, ಭಟ್ಕಳ ತಾಲ್ಲೂಕುಗಳಿವೆ. ಘಟ್ಟದ ಮೇಲೆ ಶಿರಸಿ, ಯಲ್ಲಾಪುರ, ಸಿದ್ದಾಪುರ, ಹಳಿಯಾಳ, ಜೂಯ್ಡ, ಮುಂಡಗೋಡು ತಾಲ್ಲೂಕುಗಳಿವೆ. ಜಿಲ್ಲೆಯಲ್ಲಿ ವಾರ್ಷಿಕ ಸರಾಸರಿ ಮಳೆ 2836 ಮಿ.ಮಿ, ಕರಾವಳಿಯಲ್ಲಿ 3500 ಮಿ.ಮಿ ಸಹ್ಯಾದ್ರಿಯ ಹಂಚಿನಲ್ಲಿ 5000 ಮಿ.ಮಿ ಮಳೆ, ಹೆಚ್ಚು ಪೂರ್ವಕ್ಕೆ ಹೋದಂತೆ ಮಳೆ ಕಡಿಮೆಯಾಗುತ್ತದೆ. ಜಿಲ್ಲೆಯಲ್ಲಿ ಶೇಖಡ 80 ರಷ್ಟು ಅರಣ್ಯಾವೃತ. ಜಿಲ್ಲೆಯ ಪ್ರಮುಖ ನಾಲ್ಕು ನದಿಗಳು ಸಹ್ಯಾದ್ರಿ ಶ್ರೇಣಿಯ, ಪೂರ್ವಘಟ್ಟ ಪ್ರದೇಶದ ವಿಶಾಲ ಹರಿವು ಪಡೆಯುತ್ತವೆ. ಅವುಗಳೆಂದರೆ ಉತ್ತರದಲ್ಲಿ ಕಾಳಿನದಿ, ದಕ್ಷಿಣದಲ್ಲಿ ಬೇಡ್ತಿ (ಗಂಗಾವಳಿ) ಅಘನಾಶಿನಿ (ತದ್ರಿ) ಮತ್ತು ಶರಾವತಿ (ಗೇರುಸೊಪ್ಪು).

ಕಾಳಿನದಿ:– ಸೊಪ ತಾಲ್ಲೂಕಿನ ಪಿಗ್ಗಿ ಗ್ರಾಮದ ಬಳಿ ಉಗಮಗೊಳ್ಳುತ್ತದೆ. ಸುಮಾರು 184 ಕಿ,ಮೀ ಹರಿವನ್ನು ಹೊಂದಿರುವ ಕಾಳಿ, ವಾಯುವ್ಯ ದಿಕ್ಕಿಗೆ 55 ಕಿ.ಮೀ ಹರಿಯುತ್ತಾ ದೇವಿಕೊಪ್ಪದ ಬಳಿ ನೈಋತ್ಯ ದಿಕ್ಕಿಗೆ ತಿರುವುಪಡೆದು, ಅಲ್ಲಿಂದ ಪಶ್ಚಿಮಾಭಿಮುಖವಾಗಿ ಹರಿದು, ಕಾರವಾರಕ್ಕೆ ಉತ್ತರದ 3 ಕಿ,ಮೀ ದೂರದಲ್ಲಿ ಅರಬ್ಬಿಸಮುದ್ರ ಸೇರುತ್ತದೆ. ನದಿಯ ಮುಖ್ಯ ಹೊಳೆಗಳಲ್ಲಿ ಒಂದಾದ ಪಾಂಡ್ರಿ(ಉಜ್ಜೆ) ಉತ್ತರದ ತುದಿಯಲ್ಲಿ ಉಗಮಗೊಂಡು, ಸೂಪಾದ ಬಳಿ ಕೂಡುತ್ತದೆ. ಕಾಳಿ ನದಿಯ ದಂಡೆಗಳು ಎತ್ತರದಲ್ಲಿದ್ದರೆ. ಪಾಂಡ್ರಿ ದಂಡೆಗಳು ಇಳಿಜಾರಾಗಿವೆ. ಹೀಗಾಗಿ ಮೇಲುನೋಟಕ್ಕೆ ಕಾಳಿ ಕಪ್ಪಾಗಿ, ಪಾಡ್ರಿ ಪ್ರಜ್ವಲವಾಗಿ ಗೋಚರಿಸುತ್ತದೆ. ಸೂಪಾದಿಂದ ಕಾಳಿ ಯಲ್ಲಾಪುರಕ್ಕೆ 12 ಕಿ.ಮೀ ದೂರದವರೆಗೆ, ಸುಮಾರು 32 ಕಿ,ಮೀ ಆಗ್ನೇಯ ದಿಕ್ಕಿಗೆ ಹರಿಯುತ್ತಾ, ಹಳಿಯಾಳದ ಉತ್ತರಕ್ಕೆ ಸುಮಾರು 56 ಕಿ,ಮೀ ದಕ್ಷಿಣಾಭಿಮುಖವಾಗಿ ಸುತ್ತುತ್ತಾ, ತಟ್ಟಿಹಳ್ಳದ ಎಡದಂಡೆಯ ಬಳಿ ಸೇರುತ್ತದೆ. ಇವುಗಳ ಸಂಗಮ ಸ್ಥಳವೇ ಲಾಲ್‌ಗುಳಿ ಜಲಪಾತ. ಗೊವಾದ ಗಡಿಯಿಂದ ಸುಮಾರು 40 ಕಿ,ಮೀ ಆಗ್ನೇಯ ದಿಕ್ಕಿಗೆ ಬಿರುಸಾಗಿ ಹರಿದು ಇಲ್ಲಿಂದ ಕದ್ರಗ್ರಾಮದವರೆಗೆ 66 ಕಿ.ಮೀ ಹರಿಯುತ್ತಾ ತಟ್ಟಹಳ್ಳಿಯಿಂದ 16 ಕಿ.ಮೀ ಪಶ್ಚಿಮಾಭಿಮುಖವಾಗಿ ಹರಿಯುತ್ತ ನದಿಸೇರುತ್ತದೆ. ಕನೇರಿ ಮತ್ತು ವಾಕಿ ಎಂಬ ಎರಡು ಅದರ ಉಪನದಿಗಳು.

ಕಾನೇರಿ ಉಪನದಿ ಸೂಪಾ ತಾಲ್ಲೂಕಿನ ಕುಂದಾಳ್ ಬಳಿ ಉಗಮಗೊಂಡು ಜಾಲಾವಳಿ ಮೂಲಕ ಆಗ್ನೇಯ ದಿಕ್ಕಿಗೆ ಹರಿಯುತ್ತಾ, ಅಂಬೊಳಿ ಬಳಿ ಪುನಃ ಈಶಾನ್ಯದಿಕ್ಕಿಗೆ ತಿರುವು ಪಡೆದು, ಸಣ್ಣಮಗಿ ಗ್ರಾಮದ ದಕ್ಷಿಣಕ್ಕೆ ಕಾಳಿನದಿಗೆ ಕೂಡುತ್ತದೆ. ವಾಕಿ ನದಿಯ ಸೂಪಾ ತಾಲ್ಲೂಕಿನ ನುಜಿಯಿಂದ ಆರಂಭಗೊಂಡು, ಆಗ್ನೇಯ ದಿಕ್ಕಿಗೆ ಹರಿಯುತ್ತಾ, ತುಳಸಗೆರೆಯ ಬಳಿ ಕಾಳಿಗೆ ಸೇರುತ್ತದೆ. ಕುದ್ರಾ ಕೆಳಭಾಗಗಳಲ್ಲಿ ಸುಮಾರು 32 ಕಿ.ಮೀ ಉದ್ದದವರೆಗೆ ಜಲಸಾರಿಗೆಗೆ ಪೂರಕವಾಗಿ ಪರಿಣಮಿಸಿದೆ. ಕದ್ರ ಬಳಿ ಗೋವಾ ಮೂಲದ ತನನಾಲಾ ಸಹ ಕಾಳಿ ನದಿಗೆ ಕೂಡುತ್ತದೆ.

ಬೇಡ್ತಿ : (ಗಂಗಾವಳಿ) ಧಾರವಾಡ ಜಿಲ್ಲೆಯ ದಕ್ಷಿಣಕ್ಕೆ ಇರುವ ಸೋಮೇಶ್ವರ ದೇವಾಲಯದ ಬಳಿ ಉಗಮಗೊಳ್ಳುವ ಶಾಲಮಾಲ ನದಿ, ಹಾಗು ಹುಬ್ಬಳ್ಳಿ ಬಳಿ ಉಗಮಗೊಳ್ಳುವ ಬೇಡ್ತಿಯ ಕೂಡು–ಹೊಳೆಯೇ ಬೇಡ್ತಿ ನದಿ. ಧಾರವಾಡ ಜಿಲ್ಲೆಯ ಕಲಘಟಗಿ ಬಳಿ ಸಂಗಮಗೊಂಡ ಬೇಡ್ತಿ 25 ಕಿ.ಮೀ ವರೆಗೆ ಹರಿದು, ಜಿಲ್ಲೆಯನ್ನು ಪ್ರವೇಶಿಸಿ ನೈಋತ್ಯದಿಕ್ಕಿಗೆ ಸುಮಾರು 32 ಕಿ.ಮೀ ಹರಿವನ್ನು ಪಡೆದು ಸಮುದ್ರ ಸೇರುತ್ತದೆ.

ಸಂಗಮಗೊಂಡ ಹೊಳೆ, ಉತ್ತರಕನ್ನಡ ಜಿಲ್ಲೆಯ ಗಡಿಯಲ್ಲಿ ಆಗ್ನೇಯ ದಿಕ್ಕಿನಲ್ಲಿ ಸುಮಾರು 90 ಕಿ.ಮೀ ಕ್ರಮಿಸುತ್ತಾ ಸಹ್ಯಾದ್ರಿಗೆ ಅಪ್ಪಳಿಸಿ, ಮಾಗೋಡು ಬಳಿ ಜಲಪಾತವಾಗಿ ಹರಿಯುತ್ತದೆ. ಸೋಂದಾ ಎಂಬ ಉಪನದಿ ಹರಿಗದ್ದೆ ಬಳಿ ಇದನ್ನು ಕೂಡುತ್ತದೆ. ಮುಂದೆ 15 ಕಿ.ಮೀ ದೂರದಲ್ಲಿ ಅವೆಗಳನ್ನು ಎದುರಿಸುತ್ತಾ 24 ಕಿ.ಮೀ ದೂರದವರೆಗೆ ಜಲಸಾರಿಗೆಗೆ ಪೂರಕವಾಗಿ ನದಿ ಸೇರುತ್ತದೆ.

ಆಘನಾಶಿಸಿ : (ತದ್ರಿ):– ಸಿರಸಿಯ ಮಂಜಗುಣಿಯ ಬಳಿ ಉಗಮಗೊಂಡು, ಪಶ್ಚಿಮಾಭಿಮುಖವಾಗಿ ಸುಮಾರು 70 ಕಿ.ಮೀಗಳು ತಿರುವುಗಳ ಪಡೆಯುತ್ತಾ ಸಮುದ್ರ ಸೇರುತ್ತದೆ. (ಇದು ತನ್ನ ಹರಿವಿನ ಉದ್ದಕ್ಕೂ ಯಾವುದೇ ಪೂರಕ, ನದಿ

ಉಪನದಿಗಳಿಂದ ನೀರನ್ನು ಪಡೆಯದೆ ಸಾಗುತ್ತದೆ) ಮಂಜುಗುಣಿ ಬಳಿಯ ಹೊಡದ ಬಳಿ ಉಗಮಗೊಳ್ಳುವ ಬಾಕೂರುಹೊಳೆ ಶಿರಸಿಯ ಪಶ್ಚಿಮಕ್ಕೆ 25 ಕಿ.ಮೀ ಹರಿಯುತ್ತಾ ಸಿರಸಿಯ ಬಳಿ ಉಗಮಗೊಳ್ಳುವ ದೋಣಿಹಳ್ಳವನ್ನು ಸಿರಸಿಗೆ 16 ಕಿ.ಮೀ ದೂರದ ಮುತ್ತಿಹಳ್ಳ ಬಳಿ ಸೇರುತ್ತದೆ. ದೋಣಿಹಳ್ಳ ಶಿರಸಿಯ ದಕ್ಷಿಣಕ್ಕೆ 24 ಕಿ.ಮೀ ಪಶ್ಚಿಮಾಭಿಮುಖವಾಗಿ ಹರಿದು, ಹೆಗ್ಗರಣೆಗೆ 5 ಕಿ.ಮೀ ದೂರದ ಉಂಚಳ್ಳಿ ಬಳಿ ಲುಷಿಂಗ್ಟನ್ ಜಲಪಾತವಾಗಿ, ನಂತರ ಬಿಳಿಗಿಯಿಂದ 5 ಕಿ.ಮೀ ಹರಿದು ಹೆಮನ್‌ಬೈಲ್ ಜಲಪಾತವಾಗಿ ಹರಿಯುತ್ತದೆ. ಉಪ್ಪಿನಪಟ್ಟಣದ ಬಳಿ ಅಲೆಗಳಬ್ಬರವ ಸಂಚಿಸುವ ದೋಣಿಹಳ್ಳ ಸುಮಾರಿ 25 ಕಿ.ಮೀ ದೂರದ ಜಲಸಾರಿಗೆಗೆ ಪೂರಕವಾಗಿದೆ. ಮಿರ್‌ಜಾನ್ ತಲುಪುವ ನದಿ, ಕರಾವಳಿಗೆ ಸಮಾನಾಂತರವಾಗಿ ಹಿನ್ನೀರಿನ ಕೊಳವಾಗಿ. (13 ಕಿ.ಮೀ ಉದ್ದ, 2 ರಿಂದ 6 ಕಿ.ಮೀ ಅಗಲ) ಭೂಆಕೃತಿಯಿಂದ ಬೇರ್ಪಟ್ಟಿದ್ದು ಇದು ಎರಡು ದೊಡ್ಡಗುಡ್ಡಗಳ ನಡುವೆ ಇದ್ದು, ಜಲಸಾರಿಗೆಗೆ ಅತ್ಯುಪಯುಕ್ತ ತಾಣವಾಗಿ ಪರಿಣಮಿಸಿದೆ.

ಶರಾವತಿ :– (ಗೇರುಸೊಪ್ಪ/ಬಾಣಗಂಗಾ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಅಂಬುತೀರ್ಥ ಎಂಬಲ್ಲಿ ಉಗಮಗೊಳ್ಳುತ್ತದೆ. ನಗರದಿಂದ ಉತ್ತರಾಭಿಮುಖವಾಗಿ 64 ಕಿ.ಮೀ ಹರಿಯುತ್ತಾ ಉತ್ತರಕನ್ನಡ ಜಿಲ್ಲೆಗೆ 13 ಕಿ.ಮೀ ನಷ್ಟು ಆಗ್ನೇಯ ಗಡಿಯಾಗಿ ನಂತರ 32 ಕಿ.ಮೀ ದೂರ ಹರಿದು ಹೊನ್ನಾವರದ ಬಳಿ ಸಮುದ್ರ ಸೇರುತ್ತದೆ. ಜಗತ್‌ಪ್ರಸಿದ್ಧ ಜೊಗದ ಜಲಪಾತವಾಗಿ, ನಂತರ ಸುಮಾರು 27 ಕಿ.ಮೀ ಹರಿಯುತ್ತಾ ಸಮುದ್ರ ಸೇರುತ್ತದೆ.

ವರದಾ :– ಜಿಲೆಯಲ್ಲಿ ನಾಲ್ಕು ಮುಖ್ಯನದಿಗಳಲ್ಲದೆ, ಹಲವಾರು ಹಳ್ಳಗಳೂ ಇವೆ. ಅವುಗಳಲ್ಲಿ ವರದಾ, (ತುಂಗಭದ್ರಾದ ಉಪ ನದಿ), ಶಿವಮೊಗ್ಗ ಜಿಲೆಯ ಈಶಾನ್ಯ ಭಾಗದಲ್ಲಿ ಉಗಮಗೊಂಡು, ಉತ್ತರ ಮತ್ತು ಪೂರ್ವದಿಕ್ಕುಗಳಲಿ ಹರಿಯುತ್ತಾ, ಬನವಾಸಿ ಬಳಿ ಸಾಗುತ್ತಾ, ಹಾವೇರಿ ಜಿಲೆಯ ಗಳಗನಾಥದ ಬಳಿ ತುಂಗಭದ್ರಾನದಿ ಸೇರುತ್ತದೆ. ಜಿಲ್ಲೆಯಲ್ಲಿ ಮತ್ತೊಂದು ಪೂರ್ವಾಭಿಮುಖವಾಗಿ ಹರಿಯುವ ನದಿಯೆಂದರೆ, ಧರ್ಮನದಿ, ಇದು ಇಸ್ಲೂರು ಬಳಿ ಉಗಮಗೊಂಡು ಮುಂಡಗೋಡು ತಾಲ್ಲೂಕಿನಲ್ಲಿ ಹರಿಯುತ್ತಾ, ಧಾರವಾಡ ಜಿಲ್ಲೆಯಲ್ಲಿ ವರದಾನದಿ ಸೇರುತ್ತದೆ. ಇದು ಜಿಲ್ಲೆಯಲ್ಲಿ ಕೇವಲ 34 ಕಿ.ಮೀ ಹರಿವನ್ನು ಹೊಂದಿದೆ.

ಇತರೆ ಕರಾವಳಿ ಉಪನದಿಗಳೆಂದರೆ, ಬೆಲೆಕೇರಿ, ಅಂಕೋಲಾ, ಕುಮ್ಟಾ, ಬಡಗಣೆ, ವೆಂಕ್ಟಾಪುರ ಮತ್ತು ಬಟ್ಕಳ ಇವು ಬಹುತೇಕ ಹಿನ್ನೀರಿನ ನೆಲೆಗಳಾಗಿದ್ದು, 91 ಮೀಟರ್‌ನಿಂದ 3 ಕಿ.ಮೀನಷ್ಟು ವಿಶಾಲವಾಗಿದ್ದು ಜಲಸಾರಿಗೆಗೆ ಪೂರಕವಾಗಿವೆ.

III

ಜಿಲ್ಲೆಯಲ್ಲಿ ನೀರಾವರಿ ಕುರಿತಂತೆ ಕೇವಲ ಬೆರಳಣಿಕೆಯ ಶಾಸನಗಳಷ್ಟೇ ಬೆಳಕು ಚೆಲ್ಲುತ್ತವೆ. ಉತ್ತರಕನ್ನಡ ಜಿಲ್ಲೆಯ ಬನವಾಸಿಯಲ್ಲಿ ಮಧುಕೇಶ್ವರ ದೇವಾಲಯದಲ್ಲಿ ಒಂದು ಶಿಲಾ ಶಾಸನವಿದೆ. ಚುಟುರಾಜ ವಿಷ್ಣುಕಡೆಚುಟುಕುಟಾನಂದ ಶಾತಕರ್ಣಿಯದು ಅದರಲ್ಲಿ "ಮಹಾರಾಜನ ಕುಮಾರಿ, ಯವರಾಜ ಶಿವಸ್ಕಂದ ನಾಗಶ್ರಿಯ ಪೂಜ್ಯ ಮಾತೆ ಒಂದು ನಾಗವನ್ನು ಕೆತ್ತಿಸಿದಳು, ಒಂದು ಕೆರೆಯನ್ನು ತೋಡಿಸಿದಳು ಹಾಗು ಒಂದು ವಿಹಾರವನ್ನು ಕಟ್ಟಿಸಿದಳು, ಅಮಾತ್ಯಸ್ಕಂದಸತಿ ಈ ಕಾಮಗಾರಿಗಳ ಮೇಲ್ವಿಚಾರಕನಾಗಿದ್ದ." ರವಿವರ್ಮನ ಗುಡ್ನಾಪುರ ಶಾಸನದಲ್ಲಿ ರಾಜರವಿವರ್ಮ (485–519) ನಿರ್ಮಿಸಿದ ಕೆರೆ ಉಲ್ಲೇಖಾರ್ಹ ಆತ ಗುಡ್ಡತಟಾಕ ಎಂಬ ದೊಡ್ಡ ಕೆರೆಯನ್ನು ತೋಡಿಸಿದ. ಗುಡ್ನಾಪುರ ಊರಿನ ಪ್ರವೇಶ ಭಾಗದಲ್ಲಿ ಒಂದು ದೊಡ್ಡಕೆರೆ ಇದೆ. ಉತ್ತರಕನ್ನಡ ಜಿಲ್ಲೆಯ ಅತಿ ದೊಡ್ಡ ಕೆರೆಗಳಲ್ಲಿ ಒಂದು ಎಂದು ಪರಿಗಣಿತವಾಗಿದೆ. ಈ ಶಾಸನದಲ್ಲಿ ಜಿನಾಲಯದ ಪೂಜಾ ಕೈಂಕರ್ಯಗಳು ಹಾಗು ಅಲಂಕಾರ ಸೀಮೆಗಳಿಗಾಗಿ ದಾನ ನೀಡಿದ ಸಂದರ್ಭದಲ್ಲಿ ಗಡಿಯದಕ್ಷಿಣಕ್ಕೆ ನಿರ್ಮಿಸಿದ 'ತಟಾಕ'ದಿಂದ ಹಸಿರಿನ ನೀರಿನಿಂದ ಸಾಗುವಳಿಯಾಗುವ ಕನ್ಯೆ ಭೂಮಿಯನ್ನು ನೀಡಿದ್ದನ್ನು ದಾಖಲಿಸಿದೆ. ಈ ಶಾಸನದಲ್ಲಿ ಕೆರೆಯ ಕೆಳಗಿನ ನಾಲ್ಕು ಅವರ್ತನ ಗೃಹನಿವೇಶನ ಮತ್ತು ನದಿ ಈಸಾಳ ಹರಿವಿನಲ್ಲಿ ಅಭಿವೃದ್ಧಿಪಡಿಸಿದ ಭೂಮಿ ಎಂದು ಪ್ರಸ್ತಾಪ ಇರುವ ಹಿನ್ನಲೆಯಲ್ಲಿ ನದಿ ಅಥವಾ ಹಳ್ಳದ ನೀರನ್ನು ಕೃತಕ ಕಟ್ಟೆಗಳನ್ನು ನಿರ್ಮಿಸಿ, ಕೃಷಿಗೆ ನೀರನ್ನು ಒದಗಿಸಿಕೊಳ್ಳುವ ಪ್ರಕ್ರಿಯೆ ನಿರಂತರವಾಗಿ ನಡೆದಿದೆ.

ಜೈನಧರ್ಮವು ಕ್ರಿ.ಶ 8-9ನೇ ಶತಮಾನದಲ್ಲಿ ಸ್ವಾದಿಯಲ್ಲಿ ನೆಲೆಯೂರಿತ್ತು. ಈ ಕಾಲಘಟ್ಟದಲ್ಲಿ ನಿರ್ಮಾಣವಾದ ಸ್ವಾಧಿಯ ಜೈನ ಮಠದ ಸಮೀಪ ಕಲ್ಲುಕಟ್ಟಿನ ಸುಂದರವಾದ ಕೆರೆ ನಿರ್ಮಾಣಗೊಂಡಿದೆ. ಹೆಸರು ಮುತ್ತಿನಕೆರೆ ಜೈನ ಮಹಾರಾಜನ ಪತ್ನಿ ಬೈರಾದೇವಿ ತನ್ನ ಪತಿಯ ಖಾಯಿಲೆ ವಾಸಿಯಾದಲ್ಲಿ ತನ್ನ ಮೂಗುತಿಯ ಮುತ್ತಿನ ಕಮ್ಮತ್ತಿನಿಂದ ಕೆರೆ ಕಟ್ಟಿಸಿಕೊಡುವುದಾಗಿ ದೇವರಲ್ಲಿ ಹರಕೆ ಹೊತ್ತಳೆಂಬ ಪ್ರತೀತಿ ಇದೆ. ಖಾಯಿಲೆ ವಾಸಿಯಾದ ಪ್ರಯುಕ್ತ ಕೆರೆ ನಿರ್ಮಿಸಿದಳು ಎಂಬ ಕತೆ ಜನಜಿವಿತವಾಗಿದೆ. ಸಾವಿರ ವರ್ಷಗಳ ಕೆರೆ ಇಂದಿಗೂ ಉತ್ತಮ ಸ್ಥಿತಿಯಲ್ಲಿ ಇರುವುದು ಗಮನಾರ್ಹ.

ಜೈನರ ಕಾಲದ ಕೆರೆಬಾವಿಗಳಲ್ಲಿದೆ ಮುಂದೆ 14-17 ನೇ ಶತಮಾನದಲ್ಲಿ ಸೋದೆಯನ್ನಾಳಿದ ವೀರಶೈವದೊರೆಗಳ ಕಾಲದಲ್ಲಿಯೂ ಕೆರೆನಿರ್ಮಾಣ ಪರಂಪರೆ ಮುಂದುವರಿಯಿತು. ಕ್ರಿ.ಶ 1558ರ ಶಾಸನದಂತೆ ಅರಸಪ್ಪನಾಯಕ ಶ್ರೀವಾದಿರಾಜರ ಅಪ್ಪಣೆಯಂತೆ ಇಲ್ಲಿನ ಹುಣಸೆಹೊಂಡದಲ್ಲಿ ವೆಂಕಟ್ರಮಣ ದೇವಾಲಯ ನಿರ್ಮಿಸಿ, ಅದರ ಎದುರು ಅಪರೂಪದ ಕೆರೆ ನಿರ್ಮಿಸಿದರು. ಒಂದೂವರೆ ಎಕರೆ ವಿಸ್ತೀರ್ಣದ ಕೆರೆಯ ಸುತ್ತಲೂ ಕಲ್ಲಿನ ಪಾವಟಿಗಳಿವೆ. ಕೆರೆದಂಡೆಯ ಒಂದು ಪಾರ್ಶ್ವದಲ್ಲಿ ಮಳೆನೀರು ನಿಲ್ಲುವ ಮುಖೇನ ಅಂತರ್ಜಲ ಅಭಿವೃದ್ಧಿಗೆ ನೆರವಾಗುವ ಇಂಗುಕೆರೆ ಹಾಗೂ ಮಳೆ ನೀರು ಹರಿದು ಹೊಗಲು ಅಗಳ ವ್ಯವಸ್ಥೆಯ ಕುರುಹುಗಳೂ ಈಗಲೂ ಗೋಚರಿಸುತ್ತಿವೆ. ವೀರಶೈವರ ಕಾಲದಲ್ಲಿ ಪ್ರಸಿದ್ಧಿಗೆ ಬರುವ ಮಹಂತರಮಠದ ಸನಿಹದಲ್ಲಿ ಎರಡು ಚಿಲುಮೆ ಇದ್ದು, ಇದನ್ನು ಅಕ್ಕತಂಗಿಯರ ಕೆರೆ ಎನ್ನುತ್ತಾರೆ. ಮಠದ ದಕ್ಷಿಣಕ್ಕೆ ಐದಾರು ಎಕರೆ ವಿಶಾಲವಾದಕೆರೆ ನಾಲ್ಕು ಶತಮಾನಗಳ ಹಿಂದೆಯೇ ರಚನೆಯಾಗಿದೆ ಇದಕ್ಕೆ ಒನಕೆತೂಬು ಎಂಬ ವಿಶಿಷ್ಟ ವ್ಯವಸ್ಥೆ ಇದೆ. ತೋಟ- ಮನೆಗಳಿಗೆ ನೀರು ಬಿಡಲು ಈ ತೂಬು ಬಳಕೆಯಾಗುತ್ತಿತ್ತು. ನಿಯಮಿತ ಪ್ರಮಾಣದಲ್ಲಿ ನೀರು ಹಂಚಿಕೆ ವ್ಯವಸ್ಥೆ ಇದಾಗಿದೆ.

ಪ್ರಾನ್ಸಿಸ್ ಬುಖಾನನ್ ಕಂಡಂತೆ- ನೀರಾವರಿ

ಪಶ್ಚಿಮ ಘಟ್ಟದ ಕಾಡು ಕಣಿವೆಯಲ್ಲಿ ಸಂಚರಿಸಿ ಶಿರಸಿಯ ಸೊಂದಾ ಪ್ರದೇಶದಲ್ಲಿ ಬುಖಾನನ್ ಇಲ್ಲಿನ ತೋಟದ ಮುಖ್ಯಕಾಲುವೆಗಳಿಗೆ 'ಕಟ್ಟು' ಹಾಕಿ ಬೇಸಿಗೆಯಲ್ಲಿ ಅಡಿಕೆ ತೋಟಕ್ಕೆ ನೀರಾವರಿ ಮಾಡುವ ವಿಧಾನವನ್ನು ದಾಖಲಿಸಿದ್ದಾನೆ. ಸುಖದಹೊಳೆಯ ಉತ್ತರದಂಡೆಯಲ್ಲಿ ಭಟ್ಕಳ ಎಂಬ ನಗರವಿದೆ. ಗ್ರಾಮೀಣ ಸಮುದಾಯ ತಮ್ಮ ಸ್ವಂತ ಶ್ರಮದಿಂದ ಇದಕ್ಕೆ ಪ್ರತಿವರ್ಷ ನವಂಬರ್ ಹದಿನೇಳರಿಂದ ಡಿಸೆಂಬರ್ ಹದಿನಾರರ ಅವಧಿಯಲ್ಲಿ ಎಂಟು ಮಣ್ಣಿನ ಒಡ್ಡುಗಳನ್ನು ಹಾಕುತ್ತಾರೆ. ಬೇಸಿಗೆಯಲ್ಲಿ ನೀರಾವರಿ ಮುಖೇನ ಇಲ್ಲಿ ಭತ್ತ ಬೆಳೆಯುತ್ತಾರೆ!

ಸೊಂದೆಗೆ ಬೇಟಿ ನೀಡಿದ ಬುಖಾನನ್ "ಇಲ್ಲಿನ ಜಲಸಂಗ್ರಹಾರ ತುಂಬಾ ಸುಂದರವಾಗಿದೆ. ಇದು ನೀರಿಲ್ಲದೆ ಒಣಗುವುದೆ 'ಇಲ್ಲ' ಆದರೆ ಅದು ಈಗ ಹುಲ್ಲು ಜೊಂಡಿನಿಂದ ಪೂರ್ಣವಾಗಿ ಆವೃತ್ತಗೊಂಡಿದೆ ಇದನ್ನು ಸುಸ್ತಿತಿಗೆ ತರಬೇಕಾದರೆ ಸರಿಸಮಾರು ಒಂದುಸಾವಿರ ಪಗೋಡ ಹಣ ಬೇಕಾಗುತ್ತದೆ. ಇದರ ನೀರನ್ನು ಭತ್ತ ಬೆಳೆಯಲು ಉಪಯೋಗಿಸುತ್ತಿರಲಿಲ್ಲ, ಆದರೆ ಕಬ್ಬಿನ ಸಸಿ ಮಡಿಗಳಿಗೆ ಅಗತ್ಯವಾದಾಗ ಬೆಳೆಸಲು ಉಪಯೋಗಿಸಲಾಗುತ್ತಿತ್ತು" ಎಂದು ದಾಖಲಿಸಿದ್ದಾನೆ.

ಶಿರಸಿಯ ಪಶ್ಚಿಮದಿಕ್ಕಿಗೆ, ತೋಟದಿಂದ ಕಂಡಂತೆ ಸಾಲಮಲ ಅಥವಾ ಗಂಗಾವಳಿ ಉಗಮಗೊಳ್ಳುತ್ತದೆ. ಪೂರ್ವದಿಕ್ಕಿಗೆ ಒಂದು ಕೆರೆ ಇದೆ, ಇದರ ಕೆಳಗಿನ ಭಾಗಕ್ಕೆ ಇದೇ ಹೆಸರಿನ ಸಣ್ಣ ನದಿಯೊಂದು ಹರಿಯುತ್ತದೆ, ಅದನ್ನು ತರಿಹೊಳೆ ಎಂದು ಕರೆಯುತ್ತಾರೆ. ಹೊನ್ನಾವರದ ಕೆರೆ ಕುರಿತಂತೆ ಬುಖಾನನ್ ಇದು ಕುಂದಾಪುರದ ಬಳಿ ಕಂಡಂತೆ ಕೆರಯಷ್ಟೆ ವಿಶಾಲವಾಗಿದೆ. ಅನೇಕ ಸಣ್ಣ ದ್ವೀಪಮಾದರಿ ಮಣ್ಣಿನ ಗುಡ್ಡೆಗಳಿವೆ. ಅವುಗಳಲ್ಲಿ ಕೆಲವು ಸಾಗುವಳಿಯಾಗಿವೆ. ಇದು ಘಟ್ಟಪ್ರದೇಶದ ವರೆಗೆ ವಿಸ್ತರಿಸಿದೆ. ಸಣ್ಣಹರಿವು ಹೊಂದಿದ್ದರೂ, ಮಳೆಗಾಲದಲ್ಲಿ ಮುಂಗಾರಿನಲ್ಲಿ ಪ್ರವಾಹದ ಸ್ವರೂಪ ಪಡೆಯತ್ತದೆ.

ಇಲ್ಲಿನ ಕೆರೆಯೊಂದು ಉತ್ತಮವಾಗಿದೆ, ಈ ಭಾಗದಲ್ಲಿ ಗಮನಿಸಬಹುದಾದ ಒಂದೇ ಒಂದು ಕೆರೆಯೆಂದರೆ ಇದು ಮಾತ್ರ.ಗಂಗಾವಳಿಯ ಮಧ್ಯದಾರಿಯಲ್ಲಿ ಅಂಕೋಲಾ ಬಳಿ ಕೊಂಕಣದಿಂದ ಹೈಗಾ ಮತ್ತು ಹೈವೆಯನ್ನು ಪ್ರತ್ಯೇಕಿಸುವ

ಕಡಲಬಳಿಬಾಡು, ಕಿರಿದಾಗಿದ್ದು, ಒಳಸರಿದಂತೆ ಸಣ್ಣ ಸರೋವರ ರೂಪ ಪಡೆದಿದ್ದು, ಸರಿ ಸುಮಾರು ಒಂದುವರೆ ಮೈಲು ವಿಸ್ತಾರವಾಗಿದೆ.

ಜಮೀನಿಗೆ ಸಣ್ಣ ಕೆರೆಗಳಿಂದ ನೀರನ್ನು ಹಾಯಿಸುತ್ತಾರೆ. ಇವು ಬಹುತೇಕ ನೀರಿಲ್ಲದೆ ಒಣಗುವುದಿಲ್ಲ ಭೂಮಟ್ಟದಿಂದ ಕೆಳಗೆ ಒಂದರಿಂದ ಎರಡು ಅಡಿಗೆ ಕುಸಿಯಬಹುದಷ್ಟೆ! ಇಂತಹ ಸಂದರ್ಭದಲ್ಲಿ 'ಏತ' ಮೂಲಕ ನೀರನ್ನು ಎತ್ತಿ ಜಮೀನುಗಳಿಗೆ ಹರಿಸುತ್ತಾರೆ.(ಏತ–ಕಾರ್ಯವೈಖರಿಯ ವಿವರಣೆ ನೀಡುತ್ತಾನೆ).

ಪರ್ವತಶ್ರೇಣಿಗಳ ಭೂಮೇಲ್ಮೈ ಪರಿಸರದ ಹಿನ್ನಲೆಯಲ್ಲಿ ಉತ್ತರಕನ್ನಡ ಜಿಲ್ಲೆಯಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪೂರಕವಾಗಿಲ್ಲ ಹೀಗಾಗಿ ಲಭ್ಯ ನೀರಾವರಿ ಮೂಲಗಳನ್ನು ಪೂರ್ಣವಾಗಿ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಏತ ನೀರಾವರಿ ಕಾಮಗಾರಿಗಳನ್ನು ವ್ಯಾಪಕವಾಗಿ ಜಾರಿಗೊಳಿಸಲು ಇಲ್ಲಿನ ಭೌಗೋಳಿಕ ಲಕ್ಷಣಗಳು ಅನುವುಮಾಡಿಕೊಟ್ಟಿಲ್ಲ ಪಾರಂಪರಿಕವಾಗಿ ಈ ಜಿಲ್ಲೆಯಲ್ಲಿ ಕೆರೆ, ಬಾವಿ, ಕಟ್ಟೆ ಮುಂತಾದವುಗಳೆ ಪ್ರದಾನವಾಗಿ ನೀರಾವರಿ ಚೌಕಟ್ಟನ್ನು ರೂಪಿಸಿವೆ.

IV

ಜಿಲ್ಲೆಯಲ್ಲಿ ಸ್ವಾತಂತ್ರಾನಂತರದ ಕಾಲಘಟ್ಟದಲ್ಲಿ ಹಲವು ಕಿರುನೀರಾವರಿ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗಿದೆ. ಅವುಗಳೆಂದರೆ, ಇಂಗು ಕೆರೆಗಳೂ ಸೇರಿದಂತೆ ಕೆರೆಗಳ ನಿರ್ಮಾಣ ಹಳ್ಳ-ಕೊಳ್ಳಗಳಿಗೆ ಬಂದಾರುಗಳ ನಿರ್ಮಾಣ, ಪ್ರಸ್ತುತ ಕೆರೆಗಳ ದುರಸ್ತಿ, ಕೆರೆಗಳ ಹೂಳು ತೆಗೆಯವ ಕಾರ್ಯ, ಕೆರೆ ನೀರಾವರಿ ವ್ಯವಸ್ಥೆಯ ಆಧುನೀಕರಣ ಮತ್ತು ಏತ ನೀರಾವರಿ.

ಧರ್ಮಯೋಜನೆ :

ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ 67 ಲಕ್ಷ ರೂಗಳ ಅನುದಾನದಿಂದ 1956–57 ರಲ್ಲಿ ಆರಂಭಗೊಂಡು, 1967–68 ರಲ್ಲಿ ಪೂರ್ಣಗೊಂಡಿತು. ಮುಂಡಗೋಡು ತಾಲ್ಲೂಕಿನ ಮುಲ್ಲಿ ಗ್ರಾಮದ ಬಳಿ ನಿರ್ಮಾಣಗೊಂಡ ಯೋಜನೆ ಪೂರ್ಣವಾಗುವ ವೇಳೆಗೆ 132 ಲಕ್ಷಗಳಿಗೆ ಏರಿತು. 97 ಚ.ಕಿ.ಮೀ ಜಲಾನಯನ ಪ್ರದೇಶ ಹೊಂದಿದ್ದು, ಪೂರ್ಣ ನೀರಾವರಿ ಉದ್ದೇಶ ಹೊಂದಿದ್ದಿತು.

ಬಚಂಕಿ ಯೋಜನೆ : ಬಚಂಕಿನಾಲಾಗೆ ಬಚಂಕಿ ಬಳಿ ನಿರ್ಮಿಸಲಾಗಿರುವ ಅಣೆಕಟ್ಟು ಯೋಜನೆ ಮುಂಡಗೋಡು ತಾಲ್ಲೂಕಿನಿಂದ ಮೂರು ಕಿ.ಮೀ ದೂರದಲ್ಲಿ ಟಿಬೇಟಿಯನ್ ನಿರಾಶ್ರಿತರ ಭೂಮಿಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆ ಇದಾಗಿದೆ. 1969 ರಲ್ಲಿ ಆರಂಭಗೊಂಡ ಈ ಯೋಜನೆ 1974ರಲ್ಲಿ ಪೂರ್ಣಗೊಂಡಿತು. ಒಂದು ಕೋಟಿ ಮೂವತ್ತು ಲಕ್ಷರೂಗಳ ಯೋಜನೆಯಾಗಿದ್ದು, 57 ಚ.ಕಿ.ಮೀ ಜಲಾನಯನ ಪ್ರದೇಶ ಇದ್ದು, 1971 ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ ಕಲ್ಪಿಸಿದೆ.

ಅಟ್ಟವರಿ ಯೋಜನೆ : 1984ರಲ್ಲಿ ಆರಂಭಗೊಂಡ ಈ ಯೋಜನೆ ಮುಂಡಗೋಡು ತಾಲ್ಲೂಕಿನ ಅಟ್ಟವೇರಿಯಲ್ಲಿದೆ. ಬೇಡ್ತಿನದಿಯ ಉಪಸರಣಿಯ ಗಂಜುಗುಟ್ಟಿಗೆ ಅಡ್ಡಲಾಗಿ ಅಣೆಕಟ್ಟು ನಿರ್ಮಿಸಲಾಗಿದೆ. ಇದರಲ್ಲಿ ಎಡದಂಡೆ ನಾಲಾದಿಂದ 205 ಹೆಕ್ಟೇರ್ ಮತ್ತು ಬಲದಂಡೆ ನಾಲಾದಿಂದ 145 ಹೆಕ್ಟೇರ್ ಅಚ್ಚುಕಟ್ಟು ಹೊಂದಿದೆ.

ದುರ್ಗದಹಳ್ಳ ಯೋಜನೆ : ಹಳಿಯಾಳ ತಾಲ್ಲೂಕಿನ ದುರ್ಗದಹಳ್ಳಿಯಲ್ಲಿ 1984 ರಲ್ಲಿ ಈ ಯೋಜನೆ ಆರಂಭಗೊಂಡಿತು. ಇದು 32.29 ಚ.ಕಿ.ಮೀ ಜಲಾನಯನ ಪ್ರದೇಶ ಹೊಂದಿದ್ದು, 740 ಹೆಕ್ಟೇರ್ ಪ್ರದೇಶದ ಅಚ್ಚುಕಟ್ಟು ಹೊಂದಿದೆ.

ಪಾರಂಪರಿಕವಾಗಿ ಜಿಲ್ಲೆಯ ನೀರಾವರಿ ಚೌಕಟ್ಟಿನಲ್ಲಿ ಕೆರೆಗಳು ಪ್ರದಾನವಾದ ಪಾತ್ರವಹಿಸಿದೆ. 1910–11ರ ಸಾಲಿಗೆ 5409 ಕೆರೆಗಳು ನೀರಾವರಿಗಾಗಿ, ಮತ್ತು 2708 ಕೆರೆಗಳು ಇತರ ಉದ್ದೇಶಗಳಿಗಾಗಿ ಇದ್ದವು. 2005–06ರಲ್ಲಿ ಇದ್ದಂತೆ

ಜಿಲ್ಲೆಯಲ್ಲಿ 113277 ಹೆಕ್ಟೇರ್ ಸಾಗುವಳಿ ಭೂಮಿಯಿದ್ದು, ಅದರಲ್ಲಿ 25,437 ಹೆಕ್ಟೇರ್ ನೀರಾವರಿಗೆ ಒಳಪಟ್ಟಿದೆ. ಸಾಗುವಳಿ ಭೂಮಿಯ ಶೇ 22% ರಷ್ಟು ಮಾತ್ರ ನೀರಾವರಿಗೆ ಒಳಪಟ್ಟಿದೆ. ಇದರಲ್ಲಿ 94 ಹೆಕ್ಟೇರ್ ಕಾಲುವೆಗಳಿಂದ, 4754 ಹೇಕ್ಟೇರ್ ಕೆರೆಗಳಿಂದ 7032 ಹೆಕ್ಟೇರ್ ತೋಟ ಬಾವಿಗಳಿಂದ ಮತ್ತು 2020 ಹೆಕ್ಟೇರ್ ಕೊಳವೆ ಬಾವಿಗಳಿಂದ ನೀರಾವರಿ ಸೌಲಭ್ಯ ಹೊಂದಿದೆ.

ನೀರಾವರಿ ಬಾವಿಗಳು :– ಜಿಲ್ಲೆಯಲ್ಲಿ ಅಂತರ್ಜಲ ಲಭ್ಯತೆಯನ್ನು ಪೂರ್ಣವಾಗಿ ಬಳಸಿಕೊಳ್ಳುತ್ತಿರುವ ನೀರಾವರಿ ಮೂಲಗಳಾಗಿ ಬಾವಿಗಳು ಪ್ರದಾನವಾಗಿವೆ. ಆದರೆ ಮಲೆನಾಡಿನ ಈ ಜಿಲ್ಲೆಯ ಕೃಷಿಕರು ಮತ್ತು ಜನಸಮುದಾಯಗಳು ಲಭ್ಯವಿರುವ ಅಂತರ್ಜಲವನ್ನು ಉಪಯೋಗಿಸಿಕೊಳ್ಳುವಲ್ಲಿ ಲಕ್ಷಹರಿಸಿಲ್ಲ! 1973 ರವರೆಗೂ ಸೂಪ ತಾಲ್ಲೂಕಿನಲ್ಲಿ ಒಂದು ನೀರಾವರಿ ಬಾವಿಯೂ, ಇರಲಿಲ್ಲವೆಂಬುದೆ ಸೋಜಿಗ! 1983 ರಲ್ಲಿ 12,732 ನೀರಾವರಿ ಬಾವಿಗಳಿದ್ದು, ಅವುಗಳಲ್ಲಿ 3,381 ಐ.ಪಿ.ಸೆಟ್ ಹೊಂದಿದ್ದು 9,811 ಇತರೆ (ಏತ, ಪರ್ಷಿಯನ್ ವೀಲ್ ಇತ್ಯಾದಿ) ಜಿಲ್ಲೆಯಲ್ಲಿ ಪ್ರತಿ ಬಾವಿಗೆ ಒಟ್ಟಾರೆ ನೀರಾವರಿಗೆ ಒಳಪಡುತ್ತಿದ್ದ ಭೂಮಿಯ ಪ್ರಮಾಣ ಕೇಲವ 0.2 ಹೇಕ್ಟೇರ್ ಮಾತ್ರ.

ಪ್ರಸ್ತುತ 2010–11ರ ಸರ್ಕಾರಿ ದಾಖಲೆಗಳ ಪ್ರಕಾರ ಜಿಲ್ಲೆಯಲ್ಲಿ 4 ಹೇಕ್ಟೆರ್‌ಗಿಂತ ಹೆಚ್ಚಿನ ಅಚ್ಚುಕಟ್ಟು ಹೊಂದಿರುವ 81 ಕೆರೆಗಳು, 4 ಹೇಕ್ಟೆರ್‌ಗಿಂತ ಕಡಿಮೆ ಅಚ್ಚುಕಟ್ಟು ಹೊಂದಿರುವ 2290 ಕೆರೆಗಳಿವೆ. 16 ಏತ ನೀರಾವರಿ ಘಟಕಗಳು ಅಸ್ತಿತ್ವದಲ್ಲಿವೆ. ನೀರಾವರಿ ಪಂಪ್‌ಸೆಟ್‌ಗಳಲ್ಲಿ 41737 ವಿದ್ಯುತ್ ಚಾಲಿತ ಹಾಗೂ 2743 ಡಿಸೇಲ್ ಚಾಲಿತವಾಗಿವೆ. ಜಿಲ್ಲೆಯಲ್ಲಿ ಒಟ್ಟಾರೆ 29439 ಹೇಕ್ಟೆರ್ ನೀರಾವರಿಗೆ ಒಳಪಟ್ಟದೆ ಇದರಲ್ಲಿ ಕೆರೆಗಳಿಂದ 5760 ಹೇಕ್ಟರ್, ಬಾವಿಗಳಿಂದ 9969 ಹೇಕ್ಟೆರ್, ಕೊಳವೆಬಾವಿಗಳಿಂದ 2839 ಹೇಕ್ಟೆರ್ ಹಾಗೂ ಇತರ ಮೂಲಗಳಿಂದ 10871 ಹೇಕ್ಟೆರ್ ನೀರಾವರಿಗೆ ಒಳಪಟ್ಟಿದೆ.

ಜೊಟ್ಟಿ ಪದ್ಧತಿ : – ಜೊಟ್ಟೆ ಪದ್ಧತಿ ಉತ್ತರಕನ್ನಡ ಜಿಲ್ಲೆಯಲ್ಲಿದೆ. ನೀರು ನಿರ್ವಹಣೆಯ ಜಾಣ್ಮೆ. ಇದು ಸನ್ನೆ ಸೂತ್ರದ ಆದಾರದಲ್ಲಿ ನೀರೆತ್ತಲು ನಮ್ಮ ಪರಂಪರೆ ಕಂಡುಕೊಂಡಿದ್ದ ಸಾಧನ. ಸುಮಾರು ನಾಲ್ಕೈದು ಬಿಂದಿಗೆಯಲ್ಲಿ ಹಿಡಿಯಬಹುದಾದಷ್ಟು ನೀರನ್ನು ಒಬ್ಬಮನುಷ್ಯ ಅನಾಯಾಸವಾಗಿ ಜೊಟೆಯಲ್ಲಿ ತುಂಬಿ ಎತ್ತಿ ಅವಳೆಗೆ ಹಾಯಿಸುತ್ತಿದ್ದ. ಅಗಲಬಾಯಿ ಇರುವ ತಾಮ್ರದಪಾತ್ರಗೆ ಅಡ್ಡಲಾಗಿ ಒಂದು ಕುಕ್ಕೆಯನ್ನು ಜೊಡಿಸಿರಲಾಗುತ್ತಿತ್ತು, ಅದನ್ನು ಜೊಟ್ಟೆಗಳ ಕೈ ಸಿಕ್ಕಿಸಿ ಕೆರೆಯಲ್ಲಿ ಇಳಿಸಿ ನೀರತ್ತುವುದು ಸುಲಭ. ಗಳದ ತುದಿಯಲ್ಲಿ ಲಂಬವಾಗಿ ಜೊಟ್ಟೆ ಎಳೆ(ಉದ್ದದ ಅಡಿಕೆಮರ) ಕಟ್ಟಲಾಗಿರುತ್ತದೆ. ಅದಕ್ಕೆ ಆಧಾರವಾಗಿ ಎರಡು ಕಂಬಗಳು ಎಳೆಯ ತುದಿಯಲ್ಲಿ ಭಾರದ ಕಲ್ಲು ಕಟ್ಟಿರುತ್ತಿದ್ದರಿಂದ ಇದಕ್ಕೆ ವ್ಯವಸ್ಥೆ ಒಂದು ರೀತಿಯಲ್ಲಿ ಮಕ್ಕಳ ಅರಭಾರ ಆಟದ ರೀತಿಯಲ್ಲಿ ಕೆಲಸ ಮಾಡುತ್ತದೆ.

ಕೆರೆಯ ನಿರ್ದಿಷ್ಟ ಭಾಗದಲ್ಲಿ ನಿರ್ಮಿಸಿಕೊಂಡಿರುವ ಅಟ್ಟಣೆಗೆಯ ಮಧ್ಯದಲ್ಲಿ ಜೊಟ್ಟೆ ಕೆಳಗೆ ಹೋಗಲು ಜಾಗ ಬಿಡಲಾಗಿರುತ್ತದೆ. ಅಟ್ಟಣೆಗೆಗೆ ಅಭಿಮುಖವಾಗಿ ಇದೇ ಏತವ್ಯವಸ್ಥೆಯನ್ನು ನಿರ್ಮಿಸಿಕೊಂಡು. ಅಲ್ಲಿಂದ ಮುಂದಕ್ಕೆ ನೀರು ಸರಾಗವಾಗಿ ಹರಿಯುವಂತೆ ತೋಟದ ಗುಂಟ ಅವಳೆ ತೋಡಲಾಗಿರುತ್ತದೆ. ಅಟ್ಟಣೆಗೆಯ ಮುಂದೆ ಕೆರೆಗೆ ಬೆನ್ನುಮಾಡಿ ನಿಲ್ಲುವ ಮನುಷ್ಯ ಜೊಟ್ಟೆಗಳನ್ನು ಎಳೆದು ಜೊಟ್ಟೆ ಪಾತ್ರೆಯನ್ನು ಕೆರೆಯಲ್ಲಿ ಮುಳುಗಿಸುತ್ತಾರೆ ನೀರು ತುಂಬಿದ ಬಳಿಕ ಕೈ ಸಡಿಲ ಬಿಟ್ಟು ಗಳವನ್ನು ಮೇಲೆಕ್ಕೆತ್ತುತ್ತಾನೆ. ಇದಕ್ಕೆ ಪೂರಕವಾಗಿ ಜೊಟ್ಟೆ ಎಳೆಯ ಇನ್ನೋಂದು ತುದಿಗೆ ಕಟ್ಟಿರುವ ಕಲ್ಲು ಹಿಂಭಾರ ನೀಡುತ್ತದೆ. ಪಾತ್ರೆ ಮೇಲಕ್ಕೆ ಬರುತ್ತಿದ್ದಂತೆ ಕಾಲುವೆಯ ದಿಂಡಿಗೆ ಸರಿಯಾಗಿ ಆನಿಸಿ ಮೊಗಚುತ್ತಾನೆ. ಪುನಃ ಜೊಟ್ಟೆ ಎಳೆದು ನೀರು ತುಂಬಿಸಿಕೊಳ್ಳುತ್ತಾನೆ ಮತ್ತೆ ಮೇಲೆತ್ತೆ ಚೆಲ್ಲುತ್ತಾನೆ. ಅದೇ ಸಮಯಕ್ಕೆ ಇನ್ನೋಬ್ಬ ಕಾಲುವೆಯಲ್ಲಿ ಹರಿದು ಬರುವ ನೀರನ್ನು ಅಲ್ಲಲ್ಲಿ ಕಟ್ಟೆಗಳ ಮೂಲಕ ನಿಲ್ಲಿಸಿಕೊಂಡು ಹಾಳೆಯನ್ನು ಬಳಸಿ ಸಸಿಗಳ ಬುಡಕ್ಕೆ ಹರಿಸುತ್ತಾನೆ. ಸುತ್ತಲಿನ ಎಲ್ಲಾ ಸಸಿಗಳಿಗೆ ನೀರು ಹಾಯಿಸಿ ಮುಗಿದ ಬಳಿಕ ಇನ್ನಷ್ಟು ಮುಂದಕ್ಕೆ ಹೋಗಿ ಪುನಃ ಹೀಗೆಯೇ ಮಾಡುತ್ತಾನೆ. ಅವಳೆಯ ಅಕ್ಕಪಕ್ಕದ ಎಲ್ಲ ಸಸಿಗಳಿಗೆ ನೀರುಣಿಸಿ ಮುಗಿದ ಬಳಿಕ ನೀರನ್ನು ಇನ್ನೋಂದು ಅವಳೆಯತ್ತ ತಿರುಗಿಸಲಾಗುತ್ತದೆ.

ಸಮುದಾಯ ಕೇಂದ್ರಿತ ಜೊಟ್ಟೆ ಪದ್ದತಿಯಲ್ಲಿ ಒಂದು ಕೆರೆ ಸುತ್ತಲಿನ ನಾಲ್ಕಾರು ಕುಟುಂಬಗಳಿಗೆ ಸೇರಿದ ಜಮೀನಿಗೆ ಜಲಾಶ್ರಯವಾಗಿರುತ್ತಿತು. ಕೆರೆ ಯಾರ ಜಮೀನಿನಲ್ಲಿ ನಿರ್ಮಾಣವಾಗಿರುತ್ತದೊ ಅಂಥವರು ಅದರ ಸಂಪೂರ್ಣ ಹಕ್ಕುದಾರರಾಗಿರುತ್ತಾರಾದರೂ, ನೀರಿನ ಬಳಕೆಯ ವಿಷಯದಲ್ಲಿ ಅತ್ಯಂತ ಸಹಕಾರಿ ತತ್ವವನ್ನು ಅನುಕರಿಸಲಾಗುತ್ತಿತ್ತು. ಹಾಗೆಯೆ ಕೆರೆಯ ನಿರ್ವಹಣೆ ಸಹ ಎಲ್ಲಾ ಬಳಕೆದಾರರ ಆದ್ಯ ಹೊಣೆಯಾಗಿರುತ್ತಿತ್ತು. ನೀರಿನ ಬಳಕೆಗೆ ಪ್ರತಿಯಾಗಿ ಕೆರೆಯ ಮಾಲೀಕರಿಗೆ ನಿರ್ದಿಷ್ಟ ಪ್ರಮಾಣದ ಕರ, ಕೃಷಿ ಉತ್ಪನ್ನದ ರೂಪದಲ್ಲಿ ಪ್ರತಿ ವರ್ಷ ಪಾವತಿಯಾಗುತ್ತಿತ್ತು. ಬೇಸಿಗೆಯಲ್ಲಿ ಪಾಳಿ ರೂಪದಲ್ಲಿ ನೀರು ಹಂಚಿಕೆಯಾಗುತ್ತಿದ್ದರಿಂದ ವಿವಾದ ಎಂಬ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ, ಒಂದೊಮ್ಮೆ ಸಣ್ಣ-ಪುಟ್ಟ ಸಮಸ್ಯೆ ತಲೆದೋರಿದರೂ ಎಲ್ಲಾ ಬಳಕೆದಾರರು ಒಂದೆಡೆ ಸೇರಿ ಅದನ್ನು ಸಂಧಾನದ ಮೂಲಕ ಬಗೆಹರಿಸಿಕೊಳ್ಳುತ್ತಿದ್ದರು. ವರ್ಷದ ಆರಂಭದಲ್ಲಿ ಎಲ್ಲರೂ ಕುಳಿತು ನೀರಿನ ಸಂಗ್ರಹದ ಪ್ರಮಾಣ. ಆ ವರ್ಷದ ಮಳೆಯನ್ನುವಲಂಬಿಸಿ ಹಂಚಿಕೊಳ್ಳಬೇಕಾದ ನೀರಿಗೆ ಪಾಳಿಪಟ್ಟಿ ರೂಪಿಸಿಕೊಳ್ಳುತ್ತಿದ್ದರಿಂದ ಕೊರತೆಯೆಂಬುದೇ ಕಾಣಿಸಿಕೊಳ್ಳುತ್ತಿರಲಿಲ್ಲ. ಹೆಚ್ಚು ಜಮೀನುದಾರರಿಗೆ ಹೆಚ್ಚುನೀರು, ಸಹಜವಾಗಿ ಹೆಚ್ಚುಕರ, ಒಂದೊಮ್ಮೆ ಆ ವರ್ಷ ನೀರಿನ ಪ್ರಮಾಣ ಕಡಿಮೆ ಇದೆ ಎಂದೆನಿಸಿದರೆ ದೊಡ್ಡ ಹಿಡುವಳಿದಾರರ ಭಾಗದಲ್ಲಿ ಕಡಿತವಾಗುತ್ತಿತ್ತು ಇದು ಇಳಿಕೆಪದ್ದತಿಯಲ್ಲಿ ಮುಂದುವರಿಯತ್ತಿತ್ತು. ಹೀಗಾಗಿ ಮುಂದಿನ ಮಳೆಗಾಲ ಆರಂಭವಾಗುವವವರೆಗೂ ನೀರಿನ ಸಂಗ್ರಹವನ್ನು ಕಾಯ್ದುಕೊಳ್ಳಲು ಸುಲಭವಾಗುತ್ತಿತ್ತು.

ಜೊಟ್ಟೆ ಪದ್ದತಿಯ ಮತ್ತೊಂದು ಪ್ರಮುಖ ಪ್ರಯೋಜನವೆಂದರೆ ಒಂದಿನಿತೂ ನೀರು ವೃಥಾ ಪೋಲಾಗದಂತೆ ಎಚ್ಚರವಹಿಸುವುದು ಮಾನವ ಶ್ರಮದಿಂದ ನೀರು ಏತ್ತುವುದರಿಂದ ಕೆರೆಯ ಅಂತರ್ಜಲಕ್ಕೆ ದಕ್ಕೆ ಇರಲಿಲ್ಲ ಬದಲಾಗಿ ಕೆರೆಯಮೆಲ್ಮೈಯಲ್ಲಿ ಸಂಗ್ರಹವಾಗುವ ನೀರು ಮಾತ್ರ ಬಳಕೆಯಾಗುತ್ತಿತ್ತು.

ಅಂತರ್ಜಲ ತೇವಾಂಶ ರಕ್ಷಣೆಯಲ್ಲಿ ಮಹತ್ವದ ಪಾತ್ರವಹಿಸುವುದು ಅವಳಗಳು ಇವುಗಳಲ್ಲಿ ಹರಿಯುವ ನೀರಿನಲ್ಲಿ ಸಹಜವಾಗಿಯೇ ಒಂದಿಷ್ಟು ಇಂಗಿ ಸುತ್ತಲಿನ ಪ್ರದೇಶವನ್ನು ತಂಪಾಗಿರುಸುತ್ತದೆ. ಜತೆಗೆ ಇಂತಹ ಅವಳುಗಳ ಕೊನೆಯನ್ನು ವೃತ್ತಾಕಾರದಲ್ಲಿ ತುಸು ದೊಡ್ಡದಾಗಿ ಹೊಂಡದಂತೆ ನಿರ್ಮಿಸಲಾಗುತ್ತದೆ. ಅವಳಗಳಲ್ಲಿ ಹರಿದು ಬರುವ ಹೆಚ್ಚುವರಿ ನೀರು ಇಂಥ ಹೊಂಡಗಳಲ್ಲಿ ಸಂಗ್ರಹಗೊಂಡು ಇಂಗುತ್ತದೆ. ಆದರೆ ಇಂದು ಜೊಟ್ಟೆಗಳು ಮೆರೆಯಾಗಿವೆ.

(ಕೃಪೆ-ರಾಧಾಕೃಷ್ಣ .ಎಸ್. ಬಿದ್ರೆ "ನಶಸುತ್ತಿರುವ ನೀರಿನ ಜ್ಞಾನ" ಕರ್ನಾಟಕದ ಪಾರಂಪರಿಕ ಜಲ ಸಂರಕ್ಷಣಾ ವಿದಾನಗಳು: (ಸಂಪಾದಕ) ಮಲ್ಲಿಕಾರ್ಜುನ ಹೊಸಹಳ್ಳಿ)

ಪಾರಂಪರಿಕ ಕಟ್ಟೆಗಳು:

ನದಿ, ತೋಡು, ಹಳ್ಳ, ಹೊಳೆಗಳಿಗೆ ಅಡ್ಡವಾಗಿ ತಡೆಒಡ್ಡುಗಳನ್ನು ನಿರ್ಮಿಸುವುದಕ್ಕೆ ಕಟ್ಟೆಗಳು ಎನ್ನುತ್ತಾರೆ. ಹರಿಯುವ ನೀರನ್ನು ಹಿಡಿದು ನಿಲ್ಲಿಸುವ ಇವು ತಾತ್ಕಾಲಿಕ ರಚನೆಗಳು ಮಾತ್ರ, ಸ್ಥಳೀಯವಾಗಿ ಲಭ್ಯವಿರುವ ಕಲ್ಲು, ಮಣ್ಣನ್ನು ಬಳಸಿ ನಿರ್ಮಿಸಲಾಗುತ್ತದೆ. ಬೇಸಿಗೆಯಲ್ಲಿ ಮೂರ್ನಾಲ್ಕು ತಿಂಗಳು ಅಸ್ತಿತ್ವದಲ್ಲಿದ್ದರೂ ಆ ಅವಧಿಯಲ್ಲಿ ಅವು ನಿರ್ವಹಿಸುವ ಪಾತ್ರ ಅತ್ಯಂತ ಮಹತ್ವದ್ದು. ಕಟ್ಟೆಗಳು ತಡೆಹಿಡಿದ ನೀರು ಹೊಳೆಯ ಎರಡೂ ಬದಿಯ ಭೂಮಿಯನ್ನು ಹಲವಾರು ತಿಂಗಳುಗಳ ಕಾಲ ನೀರಲ್ಲಿ ತೊಯುವಂತೆ ಮಾಡುತ್ತದೆ.

ಕಟ್ಟುಗಳನ್ನು ಕಟ್ಟಲು ಇಡೀ ಸಮುದಾಯವೇ ಸಂಘಟಿತವಾಗುತ್ತದೆ. ಸಾಮಾಜಿಕ ಜಲ ಸಂರಕ್ಷಣೆಯೂ ಹಲವಾರು ಶತಮಾನಗಳಿಂದ ಪ್ರಚಲಿತವಿದೆ. ಅನೇಕ ಭೂದಾಖಲೆಗಳಲ್ಲಿ ಕಟ್ಟುಗಳ ಪಾಲುದಾರಿಕೆಯ ಬಗ್ಗೆ ಕಟ್ಟುಪಾಡುಗಳನ್ನು ನಮೂದಿಸಿದ್ದಾರೆ.

ಜಿಲ್ಲೆಯಲ್ಲಿ ವಾರ್ಷಿಕ 3500 ಮಿ.ಮಿ ಮಳೆಯಾಗುತ್ತಿದೆ ಇದರಲ್ಲಿ ಹೆಚ್ಚಿನ ಪಾಲು 20-25 ದಿನಗಳಲ್ಲಿ ಸುರಿಯುತ್ತಿದೆ. ಅದರಲ್ಲಿಯೂ ಶೇ.65 ರಷ್ಟು ಕೇವಲ 7 - 10 ದಿನಗಳಲ್ಲೆ ಬರುವುದು ವಾಡಿಕೆ. ಹೆಚ್ಚಿನ ನೀರು ಕೇವಲ 24 ಗಂಟೆಗಳಲ್ಲಿ

ಸಮುದ್ರಸೇರುತ್ತದೆ ಆದುದರಿಂದ ಇಲ್ಲಿನ ನದಿಗಳನ್ನು ಜೀವಂತವಾಗಿರಿಸಲು ಕಟ್ಟೆಗಳು ಬಹು ಮುಖ್ಯ ಕಟ್ಟೆಗಳು ದೊಡ್ಡ ಇಂಗು ಗುಂಡಿಗಳಂತೆ ಕಾರ್ಯ ನಿರ್ವಹಿಸುತ್ತವೆ.

ಜಲತಜ್ಞರಾದ ಶ್ರೀಪಡ್ರೆಯವರ ಮಾತುಗಳಲ್ಲಿ "ನಾಲ್ಕು ತಿಂಗಳ ಕಾಲ ನಿಮ್ಮ ತಲೆಯ ಮೇಲೆ ಸುರಿಯುವ ಮಳೆ ಸುಲಭ ಲಭ್ಯನಿರೇನೆ, ಬೇಕಿದ್ದರೆ ಹಿಡಿದಿಟ್ಟರೂ ಎಂದು ಉಸುರುತ್ತದೆ, ಮತ್ತೆ ನಾಲ್ಕು ತಿಂಗಳ ಕಾಲ ನಮ್ಮ ತೋಡು-ಹಳ್ಳ-ಹೊಳೆಗಳು ಒಂದು ಒಡ್ಡು ಕಟ್ಟಿದರೆ ನಾವು ನಿಮ್ಮವರಾಗುತ್ತೆವೆ. ಬೇಕಿದ್ದರೆ ಹಿಡಿದಿಕೊಟ್ಟುಳ್ಳ ಎಂದು ಉಲಿಯುತ್ತದೆ. ಈ ಎರಡು ಸಂದೇಶಗಳಿಗೆ ಬೆಲೆ ಕೊಡದಿದ್ದರೆ ನೀವು ನಿಮ್ಮ ನಿಷ್ಕ್ರಿಯತೆಗೆ ಮುಂದಿನ ನಾಲ್ಕು ತಿಂಗಳು ಕಾಲ ಬೆಲೆ ತೆರಬೇಕಾಗುತ್ತದೆ." (ಕೃಪ: ಚಂದ್ರಶೇಖರ ಎತಡ್ಕ ಲೇಖನ)

ಅತ್ಯಂತ ಪ್ರಾಚೀನ ಕಾಲದಿಂದಲೂ ಜಿಲ್ಲೆಯಲ್ಲಿ ನೀರಾವರಿ ಮೂಲಗಳಾದ ಕೆರೆ, ಕುಂಟೆ, ಹಳ್ಳ, ಕಟ್ಟುಗಳ ನಿರ್ಮಾಣ, ನಿರ್ವಹಣೆಯ ಪ್ರಕ್ರೀಯೆ ಸ್ಪಷ್ಟವಾಗಿ ಗೋಚರಿಸುತ್ತದೆ. ಇಂತಹ ಪ್ರಕ್ರೀಯೆ ಸ್ಥಳೀಯ ಅಗತ್ಯಗಳಿಗೆ ತಕ್ಕಂತೆ, ವಿನ್ಯಾಸ ವಿಕಸನ ಕ್ರಿಯೆಯೊಂದಿಗೆ ವ್ಯಾಪಕತೆ, ವಿಸ್ತಾರವಾಗುತ್ತ ಬಂದಿರುವುದು ಕಂಡು ಬಂದಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಬೃಹತ್ ನೀರಾವರಿ ಯೋಜನೆಗಳನ್ನು ಅನುಷ್ಠಾನ ಗೊಳಿಸಲು ಬೌಗೋಳಿಕ ಮೇಲ್ಮೈಲಕ್ಷಣಗಳು ಪೂರಕವಾಗಿಲ್ಲ. ಹೀಗಾಗಿ ಅಪಾರ ಪ್ರಮಾಣದ ನೀರಾವರಿ ಸಂಪತ್ತನ್ನು ಹೊಂದಿದ್ದರು ಸಹ ಪೂರ್ಣವಾಗಿ ಕೃಷಿ ಅಭಿವೃದ್ಧಿಗೆ ಬಳಸಿಕೊಳ್ಳಲು ಸಾಧ್ಯವಾಗಿಲ್ಲ. ಇದರಿಂದಾಗಿ ಪಾರಂಪರಿಕವಾಗಿ ಈ ಜಿಲ್ಲೆಯಲ್ಲಿ ಕೆರೆ, ಕಟ್ಟೆ, ಬಾವಿ ಹಾಗೂ ಹಳ್ಳಗಳು ಪ್ರಧಾನವಾಗಿ ನೀರಾವರಿ ಚೌಕಟ್ಟನ್ನು ಹೊಂದಿದೆ.

ಮದಕಗಳು

ಮದಕಗಳು ಕರಾವಳಿಯ ಹಲವೆಡೆಗಳಲ್ಲಿ ಕಂಡುಬರುವ ಪಾರಂಪರಿಕ ಜಲಸಂರಕ್ಷಣೆಯ ವ್ಯವಸ್ಥೆಗಳಲ್ಲಿ ಪ್ರಮುಖವಾದುದು.ಬೌಗೋಳಿಕವಾಗಿ ಮೂರು ಬದಿಗಳಲ್ಲಿ ಎತ್ತರದ ಪ್ರದೇಶವಿದ್ದು,ಒಂದು ಬದಿಯಲ್ಲಿ ತಗ್ಗು ಪ್ರದೇಶವಿರುವ ಕಡೆ ಹೆಚ್ಚಾಗಿ ಇವುಗಳನ್ನು ಕಾಣಬಹುದು.ಬಹುತೇಕ ಪ್ರಾಕೃತಕವಾಗಿರುವ ಈ ಮದಕಗಳನ್ನು ನಿರ್ಮಿಸಲು ಮಾನವ ಶ್ರಮ ಬಹಳ ಕಡಿಮೆ.ಕೆಲವೊಂದು ಕಡೆ ಕೆರೆಗಳನ್ನು ಮದಕಗಳೆಂದು ಕರೆಯುತ್ತಾರೆ.ಕೆರೆ ಮತ್ತು ಮದಕಗಳೆರೆಡು ನೀರನ್ನು ಹಿಡಿದಿಟ್ಟ ಕೊಳ್ಳುವ ರಚನೆಗಳೇ ಆದರೂ ಸಹ ಅವುಗಳಲ್ಲಿ ಬಹು ವ್ಯತ್ಯಾಸವಿದೆ.ಕೆರೆ ಹೆಚ್ಚಿನದಾಗಿ ಮಾನವ ನಿರ್ಮಿತ,ಆದರೆ ಮದಕ ಬಹುಮಟ್ಟಿಗೆ ಪ್ರಾಕೃತವಾಕವಾದದ್ದು.ಅದರಲ್ಲಿ ಒಡ್ಡು ಅಥವಾ ತಡೆಗಟ್ಟೆ ಮಾತ್ರ ಮಾನವ ನಿರ್ಮಿತವಾದುದು.ಅಲ್ಲದೆ ಕೆರೆಗಳಿಂದ ನೀರನ್ನು ನೇರವಾಗಿ ಜಮೀನುಗಳಿಗೆ ಹರಿಸುತ್ತಾರೆ.ಮದಕಗಳಿಂದ ನೇರವಾಗಿ ನೀರನ್ನು ಎತ್ತುವ ಉದಾಹರಣೆಗಳೇ ಇಲ್ಲವೆನ್ನುವಷ್ಟು ಕಡಿಮೆ. ಕೆಲವೊಂದು ಕಡೆಗಳಲ್ಲಿ ಕೃಷಿಕರು ಇದನ್ನು ಇನ್ನೂ ಜೀವಂತವಾಗಿರಿಸಿಕೊಂಡಿದ್ದಾರೆ..ಇದು ಪಾರಂಪರಿಕ ಜಲನಿದಿಗಳ ಮೇಲಿನ ಅಭಿಮಾನ ಹಾಗೂ ಮುಂದಿನ ತಲೆಮಾರಿಗೆ ಜಲಮೂಲ ಸಂರಕ್ಷಣೆಯ ಕಡೆ ಅವರಿಗಿರುವ ಆಸ್ಥೆಯನ್ನು ತೋರಿಸುತ್ತದೆ.

(ಕೃಪೆ; ಹರೀಶ್ ಹಳೆಮನೆ; ಮರೆಯಾಗುತ್ತಿರುವ ಮದಕಗಳು)

ಜಿಲ್ಲೆಯಲ್ಲಿ ಕೇವಲ ಬೆರಳೆಣಿಕೆಯಷ್ಟೆ ಶಾಸನಗಳು ನೀರಾವರಿ ಕಾಮಗಾರಿಗಳನ್ನು ಕುರಿತಂತೆ ಬೆಳಕು ಚೆಲ್ಲುತ್ತವೆ. ರಾಜ್ಯದ ಪ್ರಪ್ರಥಮ ಎನ್ನಬಹುದಾದ ಶಾಸನೋಕ್ತ ಕೆರೆ ಇರುವುದೇ ಈ ಜಿಲ್ಲೆಯಲ್ಲಿ ಎಂಬುದು ಗಮನಾರ್ಹ. ಸಾವಿರಾರು ಕೆರೆಗಳ ಅಸ್ತಿತ್ವ ಕುರಿತಂತೆ ಸರ್ಕಾರಿ ದಾಖಲೆಗಳು ದೊರೆಯುತ್ತವೆ, ಇವುಗಳಲ್ಲಿ ಬಹುತೇಕ ಖಾಸಗಿ ಉದ್ಯಮಿಶೀಲತೆಯ ಫಲಶೃತಿ ಎಂಬುದು ಉಲ್ಲೇಖನಾರ್ಹ. ಇವುಗಳ ನಿರ್ಮಾಣ ದುರಸ್ತಿ, ನಿರ್ವಹಣೆ ಎಲ್ಲಾ ಜವಾಬ್ದಾರಿಗಳನ್ನು ಸ್ಥಳಿಯರೇ ನಿರ್ವಹಿಸಿಕೊಂಡು ಬಂದಿರುವುದು ನೀರಾವರಿ ವ್ಯವಸ್ಥೆಯಲ್ಲಿನ ಪ್ರಧಾನ ಅಂಶ. ಸ್ವಲ್ಪ ಮಟ್ಟಿಗೆ ಪ್ರಭುತ್ವ ಪಾಲುದಾರಿಕೆ ಅಥವಾ ಪ್ರಾಯೋಜಕತ್ವದ ಮಾದರಿಗಳು ಲಭ್ಯವಿದ್ದರು ಅತ್ಯಲ್ಪ. ದಾರ್ಮಿಕ ಕೇಂದ್ರಗಳು ತಮ್ಮ ವ್ಯಾಪ್ತಿಯಲ್ಲಿ ನೀರಾವರಿ ಕೊಳ, ಪುಶ್ಕರ್ಣಿ, ಹೊಂಡ, ಕಟ್ಟುಗಳನ್ನು ಪ್ರಾಯೋಜಿಸಿರುವುದು ಕಂಡು ಬಂದಿದೆ.

ಪಾರಂಪರಿಕ ಜೊಟ್ಟೆ, ಕಟ್ಟು, ಮದಕಗಳು ಜಿಲ್ಲೆಯ ನೀರಾವರಿ ಚೌಕಟ್ಟಿನ ವೈಶಿಷ್ಟಗಳು, ಬಹುತೇಕ ಸ್ಥಳೀಯ ಜನಸಮೂದಾಯಗಳೆ, ತಮ್ಮದೇ ಸಂಪನ್ಮೂಲಗಳಿಂದ ಅಗತ್ಯಕ್ಕೆ ತಕ್ಕ ಹಾಗೇ ನಿರ್ಮಿಸಿಕೊಂಡು ಬಂದಿರುವುದಲ್ಲದೆ ಕಾಲಕಾಲಕ್ಕೆ ದುರಸ್ಥಿ ನಿರ್ವಹಣೆಯಂತಹ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು ಬಂದಿರುವುದಕ್ಕೆ ಈಗಾಲೂ ಸುಸ್ತಿಯಲ್ಲಿದ್ದು, ಕಾರ್ಯನಿರ್ವಹಿಸುತ್ತಿರುವ ಜಲಮೂಲಗಳೆ ಸಾಕ್ಷಿಗಳಾಗಿವೆ.

ಆದರೆ ಕಾಲಕ್ರಮೇಣ ಜಲಸಮೂದಾಯಗಳಲ್ಲಿ ಪಾರಂಪರಿಕ ಜಲಸಂರಕ್ಷಣೆಯ ಕುರಿತಂತೆ ಕಾಳಜಿ ಕ್ಷೀಣಿಸುತ್ತಿದಿಯೇನೋ ಎಂಬ ಜಿಜ್ಞಾಸೆ, ಇಂದಿನ ಜಲತಜ್ಞರನ್ನು ಕಾಡುತ್ತಿರುವುದೆಂತೂ ನಿಜ! ಶಿವಾನಂದ ಕಳವೆ, ಶ್ರೀಪಡ್ರೆ, ಚಂದ್ರಶೇಖರಏತಡ್ಕ, ಆನಂದತೀರ್ಥಪ್ಯಾಟಿ, ರಾಧಾಕೃಷ್ಣ ಎಸ್.ಬಡ್ತಿ....... ಹೀಗೆ ಅನೇಕ ಜಲಸಂರಕ್ಷಣಾ ತಂತ್ರಜ್ಞರು ಪಾರಂಪರಿಕ ಜ್ಞಾನದ ಔಚಿತ್ಯ, ಮತ್ತು ಅಗತ್ಯತೆಯನ್ನು ಮನದಟ್ಟು ಮಾಡಿಕೊಡಲು ನಿರಂತರ ಪ್ರಯತ್ನಶೀಲರಾಗಿದ್ದಾರೆ. ಈ ಆಧುನಿಕ ಭಗೀರತರಿಗೆ ನಮ್ಮ ಜನ ಸಮೂದಾಯಗಳು ಮತ್ತು ಪ್ರಭುತ್ವ ಸ್ಪಂದಿಸಬೇಕಾದ ತುರ್ತು ಅಗತ್ಯವಿದೆ.

(ಈ ಲೇಖನ ಸಿದ್ದಪಡಿಸುವಲ್ಲಿ ಆಕರಗಳ ಲಭ್ಯತೆ ಕುರಿತು ಮಾಹಿತಿ ಮತ್ತು ಮಾರ್ಗದರ್ಶನ ನೀಡಿದ ಸಿರಸಿಯ ಶ್ರಿ.ಮನೋಹರ್ ಹೆಗ್ಗಡೆ ಮತ್ತು ಡಾ.ಪಿ.ವಿ.ಕೃಷ್ಣಮೂರ್ತಿ ಯವರಿಗೆ ಕೃತಜ್ಞತೆಗಳು).

ಆಧಾರಸೂಚಿ ಮತ್ತು ಟಿಪ್ಪಣಿಗಳು :

1. ಜಿ.ಎಸ್. ದೀಕ್ಷಿತ್ ಮತ್ತು ಇತರರು. ಕರ್ನಾಟಕದ ಕೆರೆ ನೀರಾವರಿ (ಕನ್ನಡ ಅನುವಾದ) ನೀಲತ್ತಹಳ್ಳಿ ಕಸ್ತೂರಿ, ಪ್ರಸಾರಾಂಗ. ಕನ್ನಡ ವಿಶ್ವವಿಧ್ಯಾಲಯ ಹಂಪಿ 2010
2. ಬಿ.ಆರ್ ಗೋಪಾಲ್ "ಗುಡ್ನಪುರ ಇನ್‌ಕ್ರಿಷನ್ಸ್ ಆಫ್ ಕದಂಬ ರವಿವರ್ಮ" ಶ್ರೀಕಂಠಿಕಾ (ಸಂ) ಬಿ.ಕೆ. ಗುರುರಾಜರಾವ್.
3. "ನಶಿಸುತ್ತಿರುವ ನೀರಿನಜ್ಞಾನ" ಕರ್ನಾಟಕದ ಪಾರಂಪರಿಕ ಜಲಸಂರಕ್ಷಣ ವಿಧಾನಗಳು (ಸಂ:ಮಲ್ಲಿಕಾರ್ಜುನಾ ಹೊಸಪಾಳ್ಯ)
4. ಟಿ.ವಿ ನಾಗರಾಜ "ಕದಂಬರ ನೀರಾವರಿ ಚೌಕಟ್ಟು" ಇತಿಹಾಸ ದರ್ಶನ, ಸಂಪುಟ–25 ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು 2010.
5. ಕ್ಯಾಂಪ್ಬೆಲ್.ನಾರ್ಥಕೆನರಾ ಡಿಸ್ಟ್ರಿಕ್ಟ್ ಗೆಜೆಟಿಯರ್.

❑

ಬನವಾಸಿಯಲ್ಲಿ ಪ್ರಪ್ರಥಮ ಪುರಾತತ್ವ ಉತ್ಖನನಗಳು : 1970, 1971 – ಸಂಕ್ಷಿಪ್ತ ವರದಿ

– ಡಾ. ಎಂ.ಎಸ್. ಕೃಷ್ಣಮೂರ್ತಿ

ಬನವಾಸಿ, ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಇತಿಹಾಸ ಹಾಗೂ ಪುರಾಣ ಪ್ರಸಿದ್ಧವಾದ ಅತೀ ಪ್ರಾಚೀನ ಪಟ್ಟಣ. ತುಂಗಭದ್ರಾ ನದಿಯ ಉಪನದಿಯಾಗಿ ಹರಿಯುವ ವರದಾ ನದಿಯ ಎಡ ದಂಡೆಯ ಮೇಲೆ ಇದೆ ಈ ನಗರ. ಭೌಗೋಳಿಕವಾಗಿ ಈ ನಗರದ ರೇಖಾಂಶ 740 9। ಮತ್ತು ಅಕ್ಷಾಂಶ 140 33।. ಬನವಾಸಿಯ ಉಲ್ಲೇಖ ಪುರಾಣ ಮತ್ತು ಇತಿಹಾಸಗಳಲ್ಲಿ ದೊರೆಯುತ್ತದೆ. ಇಷ್ಟು ಪ್ರಸಿದ್ಧವಾದ ಪ್ರಾಚೀನ ನಗರದ ಉಲ್ಲೇಖ ಕರ್ನಾಟಕದ ಯಾವುದೇ ಪಟ್ಟಣಕ್ಕೆ ಇಲ್ಲ ಎಂಬುದು ಬನವಾಸಿಯ ವಿಶೇಷತೆ. ಮಹಾಭಾರತದಲ್ಲಿ ಬನವಾಸಿಯನ್ನು ವನವಾಸವೆಂದು ಕರೆಯಲಾಗಿದೆ. ಇದು ಪೌರಾಣಿಕ ಉಲ್ಲೇಖವಾದರೇ, ಐತಿಹಾಸಿಕವಾಗಿ ಪ್ರಾಚೀನ ಶಾಸನಗಳಲ್ಲಿ ಈ ಪಟ್ಟಣವನ್ನು ನಾನಾ ಹೆಸರುಗಳಿಂದ ಕಾಣಬಹುದಾಗಿದೆ. ಜಯಂತಿ (ಜಯಂತೀಪುರ), ವೈಜಯಂತೀ, ವನವಾಸ (ಸಿ), ಕನಕಾವತಿ, ಬನವಾಸಿ, ಇತ್ಯಾದಿಯಾಗಿ ಶಾಸಗಳೇ ಅಲ್ಲದೇ ಸಾಹಿತ್ಯ ಕೃತಿಗಳಲ್ಲೂ ಈ ನಗರದ ಕಾಣಬರುತ್ತದೆ.

ಬನವಾಸಿ ಅಶೋಕನ ಕಾಲಕ್ಕಾಗಲೇ (ಕ್ರಿ.ಪೂ. ಸು. 250) ಪ್ರಸಿದ್ಧವಾದ ಪಟ್ಟಣವಾಗಿತ್ತೆಂದು ತಿಳಿದುಬರುತ್ತದೆ. ಸಿಂಹಳದ ಪ್ರಾಚೀನ ಬೌದ್ಧ ಗ್ರಂಥಗಳಾದ ದೀಪವಂಶ ಮತ್ತು ಮಹಾವಂಶಗಳೆರಡೂ, ಚಕ್ರವರ್ತಿ ಅಶೋಕನು ಬೌದ್ಧಧರ್ಮ ಪ್ರಚಾರಕ್ಕಾಗಿ ಥೇರರಖ್ಖಿತ (ರಕ್ಷಿತ) ಎಂಬ ಮಹಾಮಾತ್ರನನ್ನು ಕಳುಹಿಸಿದನೆಂದು ಏಕಕಂಠದಲ್ಲಿ ಹೇಳುತ್ತವೆ. ಅಂದಮೇಲೆ ಅಶೋಕನ ಕಾಲಕ್ಕಿಂತ ಶತಮಾನಗಳಷ್ಟು ಹಿಂದೆಯೇ ಬನವಾಸಿ ತನ್ನ ಅಸ್ತಿತ್ವವನ್ನು ಸ್ಥಾಪಿಸಿತ್ತೆಂದು ಹೇಳಬಹುದು.

ಬನವಾಸಿಗೆ ಇಷ್ಟು ಪ್ರಾಮುಖ್ಯತೆ ಬರಲು ಕಾರಣ, ಈ ನಗರದ ಭೌಗೋಳಿಕ ನೆಲೆ. ಈ ಪಟ್ಟಣ ಪಶ್ಚಿಮಘಟ್ಟ ಸಾಲಿನಲ್ಲಿ, ಕರಾವಳಿ ತೀರಕ್ಕೆ ಸಮೀಪವಾಗಿ, ಘಟ್ಟದ ಮೇಲಿರುವ ಪಟ್ಟಣ. ವರದಾ ನದಿಯು ಊರಿನ ಪಕ್ಕದಲ್ಲೇ ಹರಿಯುವುದರಿಂದ ಸಮೃದ್ಧವಾಗಿ ನೀರಿದೆ. ಈ ಊರಿಗೆ ನದೀ ಪ್ರವಾಹದ ಭೀತಿಯಿಲ್ಲ, ಏಕೆಂದರೆ ಊರು ಎತ್ತರ ಪ್ರದೇಶದಲ್ಲಿದೆ. ಪ್ರಾಚೀನ ಕಾಲಕ್ಕೆ ಎಲ್ಲಾ ರೀತಿಯಲ್ಲು ಇದು ಬಹಳ ಯೋಗ್ಯವಾದ ಪ್ರದೇಶವಾಗಿತ್ತು. ಬನವಾಸಿಗೆ ಅನತಿ ದೂರದಲ್ಲಿ ಶಿರಸಿ ಪಟ್ಟಣವಿದೆ. ಅಲ್ಲಿಂದ ಪಶ್ಚಿಮಕ್ಕೆ ಘಟ್ಟದ ಇಳಿಜಾರು. ಪೂರ್ವಕ್ಕೆ ಮಲೆನಾಡು ಪ್ರದೇಶ. ಬಯಲು–ಬೆಟ್ಟಗಳು ದಟ್ಟ ಅರಣ್ಯ, ನಂತರ ದಖ್ಖನ್ ಪ್ರಸ್ಥಭೂಮಿ. ಈ ಎರಡು ವಿರುದ್ಧ ರೀತಿಯ ಪ್ರದೇಶಗಳ ಸಂಗಮ ಸ್ಥಾನದಲ್ಲಿ, ದಟ್ಟ ಅರಣ್ಯದ ನಡುವೆ, ಜಲಸಂಪನ್ಮೂಲವುಳ್ಳ, ವಸತಿಯೋಗ್ಯ, ಸುಭದ್ರ ನೆಲೆಯಾಗಿ ಬನವಾಸಿ ಅಭಿವೃದ್ಧಿ ಹೊಂದಿತು. ಇದು ಪೂರ್ವ ದಿಕ್ಕಿನಿಂದ ಪಶ್ಚಿಮ ತೀರಕ್ಕೆ ಹೋಗುವ ಹಾದಿಯ ಮುಖ್ಯಪಟ್ಟಣ. ಪಶ್ಚಿಮದವರಿಗೆ, ಘಟ್ಟವೇರಿ ದಖ್ಖನ್ ಪ್ರಸ್ಥಭೂಮಿಯನ್ನು ಸೇರುವ ಮಹಾದ್ವಾರ. ಇದರಿಂದಾಗಿ ಬನವಾಸಿ ನಗರ ವ್ಯಾಪಾರಿಗಳಿಗೆ, ವರ್ತಕರಿಗೆ ಒಂದು ಬಹಳ ಮುಖ್ಯ ಪಟ್ಟಣವಾಗಿ ಬೆಳೆಯಿತು.

ಕರ್ನಾಟಕದ ಕೋಲಾರ ಜಿಲ್ಲೆಯ ಇಂದಿನ ಮುಳಬಾಗಿಲು ಪಟ್ಟಣ ಎತ್ತರ ಪ್ರದೇಶದಲ್ಲಿದ್ದು, ಏರುಪ್ರದೇಶದಲ್ಲಿದ್ದ ಕರ್ನಾಟಕಕ್ಕೂ ತಗ್ಗು ಪ್ರದೇಶದ ತಮಿಳುನಾಡಿಗು ಸಂಪರ್ಕ ಕಲ್ಪಿಸುವ ಮಾರ್ಗದ ಮುಖ್ಯ ಪಟ್ಟಣವಾಗಿ ಪ್ರಾಚೀನಕಾಲದಿಂದಲೂ ಬೆಳೆಯಿತು. ಇದರಿಂದಾಗಿ ಈ ಊರಿಗೆ ಮೂಡಲಬಾಗಿಲು ಎಂಬ ಹೆಸರು ಬಂದಿತು. ಈ ಮೂಡಲಬಾಗಿಲು ಹೆಸರಿನ ಅಪಭ್ರಂಶವೇ ಮುಳಬಾಗಿಲು ಎಂಬುದು. ಅಂತಯೇ ಬನವಾಸಿ ತಗ್ಗಿನ ಕರಾವಳಿ ಪ್ರದೇಶಕ್ಕೂ ಪೂರ್ವದ ಪ್ರಸ್ಥಭೂಮಿಗು ಸಂಪರ್ಕ ಕಲ್ಪಿಸುವ, ಮಾರ್ಗ ಮಧ್ಯದ, ದಟ್ಟಡವಿಯ ನಡುವಿನ, ಪಡುವಣದ ಬಾಗಿಲಾಗಿತ್ತು. ಈ ಕಾರಣದಿಂದ ಬನವಾಸಿ (ವನವಾಸಿ) ಅಂದರೆ ವನದ ಮಧ್ಯದ ವಾಸಯೋಗ್ಯವಾದ ಸ್ಥಾನ ಎಂಬ ಹೆಸರು ಈ ಪಟ್ಟಣ ಪಡೆಯಿತೆಂದು ಸಹಜವಾಗಿಯೇ ನಿರ್ಧರಿಸಬಹುದು.

ವರ್ತಕರ ಹಾದಿಯ ಪ್ರಾಚೀನ ಪಟ್ಟಣವಾಗಿ ಈ ಊರು ವ್ಯಾಪಾರಿ ಕೇಂದ್ರವಾಗಿತ್ತು. ಬನವಾಸಿಯ ಸುತ್ತಲಿನ ಅರಣ್ಯ ಪ್ರದೇಶದ ಮುಖ್ಯ ಉತ್ಪನ್ನಗಳಾದ ಏಲಕ್ಕಿ, ಲವಂಗ, ಮೆಣಸು, ಅಡಿಕೆ, ಗಂಧಗಳಲ್ಲದೇ ಇನ್ನೂ ಅನೇಕಾನೇಕ ಪ್ರಾಕೃತಿಕ ಉತ್ಪನ್ನಗಳ ನೆಲೆವೀಡಾಗಿತ್ತು. ವಿದೇಶಗಳಿಗೆ ಸಮುದ್ರ ಮಾರ್ಗವಾಗಿ ಈ ಕೃಷಿ, ಅರಣ್ಯ ಉತ್ಪನ್ನಗಳು ರಫ್ತಾಗುತ್ತಿತ್ತು. ಇದರಿಂದಾಗಿ ಪ್ರಸ್ಥಭೂಮಿಯ ಅರಣ್ಯಕ್ಕೂ, ಬಂದರು ಪ್ರದೇಶಕ್ಕು, ಮಾರ್ಗಮಧ್ಯದ ಜನಪ್ರಿಯ ಪಟ್ಟಣವಾಗಿ ಬೆಳೆಯಿತು ಬನವಾಸಿ.

ಬನವಾಸಿ, ಪ್ರಾಚೀನ ಕಾಲದಲ್ಲಿ ಒಂದು ಜನಪ್ರಿಯ, ಜನನಿಬಿಡ, ಮಾರ್ಗಮಧ್ಯದ ಪಟ್ಟಣವಾಗಿ ಇದ್ದುದರಿಂದಲೇ ಅಶೋಕಚಕ್ರವರ್ತಿ ಈ ಪಟ್ಟಣವನ್ನು ವಿಶೇಷವಾಗಿ ಗುರುತಿಸಿ, ಇಲ್ಲಿಗೆ ಬೌದ್ಧಧರ್ಮ ಪ್ರಚಾರಕ್ಕೆಂದು ತನ್ನ ಧರ್ಮ ಮಹಾಮಾತ್ರರನ್ನು ಕಳುಹಿಸಿದನು. ಕ್ರಿ.ಶ. ಸುಮಾರು 150 ರಲ್ಲಿ ನಿರ್ಮಾಣವಾದ ಪ್ರಸಿದ್ಧ ಕಾರ್ಲೆಚೈತ್ಯಾಲಯದ ನಿರ್ಮಾತೃ, ಅಲ್ಲಿಯೇ ಬರೆಸಿರುವ ಶಾಸನವೊಂದರ ಪ್ರಕಾರ, ವೈಜಯಂತಿ ನಗರದ ವಣಿಕ ಭೂತಪಾಲ. ಈ ಗುಹಾಂತರ ಚೈತ್ಯಾಲಯ ಭಾರತದಲ್ಲೇ ಅತೀ ಸುಂದರ, ಅತಿದೊಡ್ಡ ಚೈತ್ಯಾಲಯ. ಇಂತಹ ಒಂದು ಚೈತ್ಯಾಲಯದ ದಾನಿಯಾಗಬೇಕಾದರೆ ಆತ ಆಗರ್ಭ ಶ್ರೀಮಂತನೇ ಆಗಿರಬೇಕು. ಇಂತಹ ಶ್ರೀಮಂತ, ಬನವಾಸಿ ಪ್ರಜೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾದರೆ ಬನವಾಸಿಯ ಪ್ರತಿಷ್ಠೆ ಏನಿರಬೇಕು? ಬನವಾಸಿಯ ವ್ಯಾಪಾರಿ ಪ್ರಾಮುಖ್ಯತೆ ಏನು? ಇವೆಲ್ಲವೂ ಈ ಒಂದು ಶಾಸನದಿಂದ ವಿದಿತವಾಗುತ್ತದೆ.

ಬನವಾಸಿ ನಗರದ ಪ್ರಸ್ತುತ ನೆಲೆ ಏಕೆ ಜನಪ್ರಿಯವಾಯಿತು? ಏಕೆ ಈ ಸ್ಥಳವನ್ನು ಆಯ್ಕೆ ಮಾಡಿಕೊಂಡರು? ಏಕೆ ಈ ಸ್ಥಳ ಒಂದು ಧಾರ್ಮಿಕ ಕ್ಷೇತ್ರವಾಗಿ ಬೆಳೆಯಿತು ಎಂಬುದಕ್ಕೆ ಭೌಗೋಳಿಕ ಹಾಗೂ ಧಾರ್ಮಿಕ ಹಿನ್ನೆಲೆಯನ್ನೂ ನೋಡಬಹುದು. ಭೌಗೋಳಿಕ ಹಿನ್ನೆಲೆಯ ಕೆಲವು ಅಂಶಗಳನ್ನು ಆಗಲೇ ಹೇಳಿದೆ. ಮತ್ತೊಂದು ಮುಖ್ಯ ಅಂಶವೆಂದರೆ ವರದಾ ನದಿ, ಈ ಪಟ್ಟಣದ ಬಳಿ ಉತ್ತರ ಮುಖಿಯಾಗಿ ಪ್ರವಹಿಸುತ್ತದೆ. ಪರಂಪರಾನುಗತವಾಗಿ ಬಂದಿರುವ ದಾಕ್ಷಿಣಾತ್ಯರ ನಂಬಿಕೆಯ ಪ್ರಕಾರ ದಕ್ಷಿಣದ ಯಾವುದೇ ನದಿ ಉತ್ತರಮುಖವಾಗಿ ಪ್ರವಹಿಸಿದರೆ ಆ ಸ್ಥಳಕ್ಕೆ ಧಾರ್ಮಿಕ ಪಾವಿತ್ರ್ಯತೆ ಇದೆ ಎಂಬುದು. ಭಾರತದ ಅನೇಕ ಪ್ರಾಚೀನನಗರಗಳು ಉತ್ತರಮುಖೀ ನದೀಪಾತ್ರಗಳ ದಂಡೆಗಳಲ್ಲಿವೆ. ನದೀ ಸಂಗಮಸ್ಥಾನಗಳೂ ಸಹ ಇಂತಹುದೇ ಪಾವಿತ್ರ್ಯತೆ ಪಡೆದಿವೆ. ಕರ್ನಾಟಕದ ಹಂಪಿ, ಪಟ್ಟದಕಲ್ಲು ಮುಂತಾದ ಪ್ರಸಿದ್ಧ ಪ್ರಾಚೀನ ಸ್ಥಳಗಳು ಅಲ್ಲಿಯ ನದಿಗಳ ಉತ್ತರವಾಹಿನೀ ಸ್ಥಳಗಳಲ್ಲಿವೆ. ಹೀಗಾಗಿ ಬನವಾಸಿ ಪ್ರಾಚೀನ ಕಾಲದಿಂದಲೂ ಒಂದು ಶ್ರೇಷ್ಠ ಧಾರ್ಮಿಕ ನೆಲೆಯಾಗಿ ಬೆಳೆದಿದೆ ಎನ್ನಬಹುದು.

ಬನವಾಸಿ ತನ್ನ ಪ್ರಾಚೀನ ಪ್ರತಿಷ್ಠೆಯಿಂದಾಗಿ ಶಾತವಾಹನರ ಸಾಮಂತ ರಾಜರಾದ ಚುಟುವಂಶದ ರಾಜರಿಗೆ ರಾಜಧಾನಿಯಾಗಿ ಮೆರೆಯಿತು. ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿ ತನ್ನನ್ನು ವೈಜಯಂತೀಪುರದ ರಾಜನೆಂದೇ ಮಳವಳ್ಳಿ ಶಿಲಾಶಾಸನದಲ್ಲಿ ಹೇಳಿಕೊಂಡಿದ್ದಾನೆ. ಇಕ್ಷ್ವಾಕುವಂಶದ ವೀರಪುರಿಸದತ್ತನ ಪುತ್ರಿ ಕೊಡಬಾಲಸಿರಿಯು ತಾನು ಬನವಾಸಿಯ ಮಹಾರಾಜನ ಮಹಾದೇವಿಯೆಂದು ಹೇಳಿಕೊಂಡಿದ್ದಾಳೆ. ಈಕೆ ಶಾಸನದಲ್ಲಿ ತನ್ನ ಗಂಡನ ಹೆಸರನ್ನು ಹೇಳದೇ ಬನವಾಸಿಯ ಮಹಾರಾಜನ ಮಹಾದೇವಿ ಎಂದಷ್ಟೇ ಹೇಳಿಕೊಂಡಿರುವುದು ಒಂದು ವಿಶೇಷ.

ಬದಾಮಿ ಚಾಳುಕ್ಯರ ಕಾಲಕ್ಕೆ ಬನವಾಸಿ ಪ್ರವರ್ಧಮಾನವಾಗಿ ಬೆಳೆದ ಪಟ್ಟಣವಾಗಿತ್ತು. ಬನವಾಸಿಯ ಸಂಪತ್ತು, ಐಶ್ವರ್ಯ ಅಸೂಯೆ ಹುಟ್ಟಿಸುವಂತಿತ್ತು. ಇಮ್ಮಡಿ ಪುಲಿಕೇಶಿಯ ದಂಡಯಾತ್ರೆಯನ್ನು ವರ್ಣಿಸಿರುವ ಆತನ ಪ್ರಧಾನಿ ರವಿಕೀರ್ತಿಯು, ತಾನು ರಚಿಸಿದ ಐಹೊಳೆ ಶಾಸನದಲ್ಲಿ, ಬನವಾಸಿಯನ್ನು ವಿಶೇಷವಾಗಿ ವರ್ಣಿಸಿದ್ದಾನೆ. ಆತನ ಪ್ರಕಾರ ಬನವಾಸಿ ಸ್ಥಲದುರ್ಗವಾಗಿತ್ತು. ಅಲ್ಲದೆ ಬನವಾಸಿಯ ಸಂಪತ್ತು (ಇಂದ್ರನ) ಅಮರಾವತಿಯೊಂದಿಗೆ ಸ್ಪರ್ಧಿಸುವಂತಿತ್ತು.

ಕ್ರಿ.ಶ. ಏಳನೆಯ ಶತಮಾನದ ಮಧ್ಯಭಾಗದಲ್ಲಿ ಬನವಾಸಿಯನ್ನು ಸಂದರ್ಶಿಸಿದ ಪ್ರಖ್ಯಾತ ಚೀನೀ ಯಾತ್ರಿಕ ಹ್ಯೂಯೆನ್‌ತ್ಸಾಂಗನು ಬನವಾಸಿಯ ಬಗ್ಗೆ ಸಾಕಷ್ಟು ವಿವರಗಳನ್ನು ದಾಖಲಿಸಿದ್ದಾನೆ. ಹ್ಯೂಯೆನ್‌ತ್ಸಾಂಗನು ಬನವಾಸಿಯನ್ನು ಕೊಂಕಿನ-ಪೋ-ಲೋ ಅಂದರೆ ಕೊಂಕಣಪುರವೆಂದು ಕರೆದಿದ್ದಾನೆ. ಬನವಾಸಿಯಲ್ಲಿ ಒಂದು ಬೃಹತ್ ಬೌದ್ಧ ಸ್ತೂಪ ನಾಲ್ಕುನೂರು ಸಂಘಾರಾಮಗಳು, ನೂರಾರು ದೇವಾಲಯಗಳು, ವಿವಿಧ ಧರ್ಮದ ಜನರು ವಾಸಿಸುತ್ತಿದ್ದರು. ಅಲ್ಲಿಯ ವಿಹಾರವೊಂದರಲ್ಲಿ ಎರಡು ಅಡಿ ಎತ್ತರದ ಬುದ್ಧನ ಮುಖವೊಂದಿತ್ತು. ಅದನ್ನು ಪ್ರತೀ ಪಕ್ಷದ ದಿನದಂದು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿದ್ದರು. ಅಲ್ಲದೆ ವಿಶೇಷ ಭಯ-ಭಕ್ತಿಯಿಂದ ಅದಕ್ಕೆ ಪೂಜೆ ಸಲ್ಲಿಸುತ್ತಿದ್ದರು. ಮತ್ತೊಂದು ವಿಹಾರದಲ್ಲಿ ಬೃಹದಾಕಾರದ ಮೈತ್ರೇಯನ (ಬುದ್ಧನ ಒಂದು ರೂಪ) ಸುಮಾರು ಹತ್ತು ಅಡಿ ಎತ್ತರದ, ಗಂಧದ ಮರದ, ಪ್ರತಿಮೆ ಇತ್ತು. ಈ ಪ್ರತಿಮೆಯು ಆಗಾಗ್ಗೆ ಮಿಂಚಿನಂತೆ ಹೊಳೆಯುತ್ತಿತ್ತು. ಈ ವಿಗ್ರಹವನ್ನು ಇಪ್ಪತ್ತು ಲಕ್ಷ ಅರ್ಹತರು ಕೂಡಿ ಕಡೆದಿದ್ದರು- ಎಂದು ಹೇಳಿದ್ದಾನೆ. ಬನವಾಸಿಯ ನಿಸರ್ಗ ಸೌಂದರ್ಯವನ್ನು ಕುರಿತು ಹೇಳುವಾಗ ನಗರದ ದಕ್ಷಿಣದಲ್ಲಿ ವಿಶಾಲವಾದ ತಾಳೆಮರಗಳಿಂದ ಕೂಡಿದ ಅರಣ್ಯವಿತ್ತು. ಆ ತಾಳೆಯ ಮರಗಳ ಎಲೆಗಳು ಬಹಳ ಉದ್ದವಾಗಿದ್ದವು ಮತ್ತು ಹೊಳಪಿನಿಂದ ಕೂಡಿರುತ್ತಿದ್ದವು. ಅಲ್ಲಿಯ ಜನರು ಆ ಎಲೆಗಳನ್ನು ಬರವಣಿಗೆಗೆ ಉಪಯೋಗಿಸುತ್ತಿದ್ದರು. ಅಲ್ಲದೆ ಆ ಎಲೆಗಳು ಬಹಳ ದುಬಾರಿಯೂ ಆಗಿದ್ದವು ಎಂದು ಹೇಳಿದ್ದಾನೆ.

ಬನವಾಸಿಯ ಅತ್ಯಂತ ಪ್ರಾಚೀನ ಶಾಸನವೆಂದರೆ ಅಲ್ಲಿಯ ಮಧುಕೇಶ್ವರ ದೇವಾಲಯದ ಪ್ರಾಂಗಣದಲ್ಲಿ ಈಗಲೂ ಸುಸ್ಥಿತಿಯಲ್ಲಿ ಸಂರಕ್ಷಿತವಾಗಿರುವ ನಾಗಶಿಲಾಶಾಸನ. ದೊಡ್ಡದಾದ ನಾಗಮುಚಲಿಂದ ಶಿಲ್ಪದ ಸುತ್ತಲಿನ ಕಟ್ಟಿನ ಮೇಲೆ ಬರೆದಿರುವ, ಕ್ರಿ. ಶ. ಎರಡನೇ ಶತಮಾನದ, ಬ್ರಾಹ್ಮೀಲಿಪಿಯಲ್ಲಿರುವ ಈ ಶಾಸನವು ಚುಟುವಂಶದ ಶಾತಕರ್ಣಿಯ ಮಗಳೂ, ಮಹಾಭೋಜನ ರಾಣಿಯೂ ಆದ ಶಿವಸ್ಕಂದ ನಾಗಶ್ರೀಯು, ಪ್ರಸ್ತುತ ನಾಗಮುಚಲಿಂದ ಶಿಲ್ಪವನ್ನೂ ಅಲ್ಲಿ ಒಂದು ತಟಾಕವನ್ನೂ, ಒಂದು ವಿಹಾರವನ್ನೂ ಮಾಡಿಸಿದುದನ್ನು ತಿಳಿಸುತ್ತದೆ. ಈ ಎಲ್ಲಾ ಕೆಲಸಗಳ ಮೇಲುಸ್ತುವಾರಿಯನ್ನು ಅಮಾತ್ಯ ಖಂಡಸಾತಿ ವಹಿಸಿದ್ದನು. ಶಾಸನವನ್ನು ಕೆತ್ತಿದ ಶಿಲ್ಪಿ ಡಮೊರಕನ (ಧರ್ಮರಕ್ಷಕ) ಶಿಷ್ಯ ನಟಕ. ಈತ ಶಿಲಾವರ್ಧಕಿ, ಅಂದರೆ ಶಿಲಾಶಿಲ್ಪಿ.

ಪ್ರಾಚೀನ ಕಾಲದಿಂದಲೂ ಹೆಸರುವಾಸಿಯಾಗಿದ್ದ ಬನವಾಸಿ ಪಟ್ಟಣ, ಪುರಾತತ್ವ ಉತ್ಖನನಗಳಿಗೆ ಕ್ರಿ.ಶ. 1970 ರವರೆಗೆ ಒಳಗಾಗಿರಲಿಲ್ಲ. ಬನವಾಸಿಯ ಬಳಿ ವರದಾನದಿಗೆ ಮೇಲ್ಸೇತುವೆ ನಿರ್ಮಾಣವಾಗಿ, ಅದನ್ನು ಕೂಡಿಸುವ ರಸ್ತೆ ನಿರ್ಮಾಣ ಕಾಮಗಾರಿ ಪ್ರಾರಂಭವಾದಾಗ ರಸ್ತೆಗೆ ಮಣ್ಣಿನ ದಿಂಡನ್ನು ನಿರ್ಮಿಸಲು ಬಳಿಯಲ್ಲೇ ಇದ್ದ ಒಂದು ಗುಡ್ಡವನ್ನು ಕಡಿದರು. ಆ ಸಮಯದಲ್ಲಿ ಗುಡ್ಡದ ಒಳಗೆ ಹುದುಗಿದ್ದ ಬೃಹತ್ ಇಟ್ಟಿಗೆ ಕಟ್ಟಡದ ಬೆಳಕಿಗೆ ಬಂದಿತು. ನಾಗರಿಕರು ಎಚ್ಚೆತ್ತು ರಾಜ್ಯ ಪುರಾತತ್ವ ಇಲಾಖೆಗೆ ವಿಷಯ ಮುಟ್ಟಿಸಿದರು. ರಾಜ್ಯ ಪುರಾತತ್ವ ಇಲಾಖೆಯ ಅಂದಿನ ನಿರ್ದೇಶಕರಾಗಿದ್ದ ಡಾ.ಎಂ. ಶೇಷಾದ್ರಿಯವರು ಸ್ಥಳ ಪರಿವೀಕ್ಷಣೆಗೆ ಬನವಾಸಿಗೆ ತಲುಪುವ ವೇಳೆಗೆ ಮಣ್ಣಿನ ದಿಬ್ಬದಲ್ಲಿನ ಆ ಕಟ್ಟಡಕ್ಕೆ ಸಾಕಷ್ಟು ಹಾನಿಯುಂಟು ಮಾಡಿದ್ದರು. ಕೂಡಲೇ ಡಾ.ಶೇಷಾದ್ರಿಯವರು ಕೆಲಸವನ್ನು ಸ್ಥಗಿತಗೊಳಿಸಲು ಆದೇಶಿಸಿ ಉತ್ಖನನ ಕೈಗೊಳ್ಳಲು ನಿರ್ಧರಿಸಿದರು.

ಆ ಸಮಯದಲ್ಲಿ ಡಾ.ಶೇಷಾದ್ರಿಯವರು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗದಲ್ಲಿ ಪ್ರಾಧ್ಯಾಪಕರು ಅಲ್ಲದೆ ಕರ್ನಾಟಕ ರಾಜ್ಯ ಪುರಾತತ್ವ ಇಲಾಖೆಯ ಗೌರವ ನಿರ್ದೇಶಕರೂ ಆಗಿದ್ದರು. ಹೀಗಾಗಿ ರಾಜ್ಯ ಪುರಾತತ್ವ ಇಲಾಖೆ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ

ವಿಭಾಗ ಇವೆರಡೂ ಕೂಡಿ 1970 ರ ಮಾರ್ಚ್ ತಿಂಗಳಲ್ಲಿ ಉತ್ಖನನವನ್ನು ಪ್ರಾರಂಭಿಸಿದವು. ಉತ್ಖನನ ಸಣ್ಣ ಪ್ರಮಾಣದಲ್ಲಿ ನಡೆಯಿತು. ತಲಾ ಹದಿನೈದು ದಿನಗಳಂತೆ ಎರಡು ವರ್ಷಗಳಲ್ಲಿ ನಡೆದ ಈ ಉತ್ಖನನ ಬನವಾಸಿಯ ಇತಿಹಾಸದ ದೃಷ್ಟಿಯಿಂದ ಬಹಳ ಮಹತ್ವದ್ದಾಯಿತು. ಅನೇಕ ಹೊಸ ಹೊಸ ವಿಷಯಗಳು ಈ ಉತ್ಖನನಗಳಿಂದ ಪ್ರಕಟಗೊಂಡವು. ಡಾ. ಶೇಷಾದ್ರಿಯವರು 1972 ರ ಕೊನೆಯಲ್ಲಿ ದಿವಂಗತರಾದರು. ಹೀಗಾಗಿ 1973 ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪುರಾತತ್ವವಿಭಾಗವು ಕೇವಲ ಬನವಾಸಿಯ ಸ್ಮಾರಕಗಳ ಸರ್ವೆ ಮತ್ತು ಬನವಾಸಿನಗರದ ಸಂಪೂರ್ಣ ನೆಲ ಸರ್ವೆ ನಡೆಸಿ ಸಿದ್ಧಪಡಿಸಿರುವ ಬನವಾಸಿ ನಗರದ ಸಮಗ್ರ ಭೂವಲಯ ನಕ್ಷೆ ಈಗಲೂ ಕೂಡ ಅನೇಕ ಸಂಶೋಧಕರಿಗೆ ಮಾರ್ಗದರ್ಶಿಯಾಗಿದೆ. ಮೂರು ವರ್ಷಗಳ ಪರ್ಯಂತ ನಡೆದ ಈ ಎಲ್ಲಾ ಉತ್ಖನನ ಮತ್ತು ಸರ್ವೇಕ್ಷಣ ಕಾರ್ಯದಲ್ಲಿ ಪ್ರಸ್ತುತ ಲೇಖನದ ಕರ್ತೃವು ಸಂಶೋಧನಾ ವಿದ್ಯಾರ್ಥಿಯಾಗಿ, ಪ್ರಾಚ್ಯವಸ್ತು ಸಹಾಯಕರಾಗಿ ಕಾರ್ಯ ನಿರ್ವಹಿಸಿದವರಾಗಿದ್ದಾರೆ.

ಡಾ. ಶೇಷಾದ್ರಿಯವರು ಬನವಾಸಿಯಲ್ಲಿ ಉತ್ಖನನ ನಡೆಸಿದ 24 ವರ್ಷಗಳ ಬಳಿಕ 1994–95 ರಲ್ಲಿ ಭಾರತೀಯ ಪುರಾತತ್ವ ಸರ್ವೇಕ್ಷಣ ಸಂಸ್ಥೆ, ಬೆಂಗಳೂರು ವಲಯದ ಪುರಾತತ್ವ ಅಧೀಕ್ಷಕರಾಗಿದ್ದ ಡಾ.ಕೆ.ಪಿ. ಪೂಣಚ್ಚ ಅವರು ಪುನಃ ಪುರಾತತ್ವ ಉತ್ಖನನ ನಡೆಸಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಅನೇಕ ವಸ್ತುಗಳನ್ನು ಬನವಾಸಿಯಲ್ಲಿ ಬೆಳಕಿಗೆ ತಂದರು.

ಇಷ್ಟಾದರೂ ಬನವಾಸಿಯ ಪ್ರಾಚೀನ ಸಂಸ್ಕೃತಿಗೆ ಸಂಬಂಧಿಸಿದಂತೆ ತಿಳಿದು ಬರುವ ವಿಷಯಗಳು ಕೇವಲ ಎಳ್ಳಷ್ಟು ಮಾತ್ರ. ಇದಕ್ಕೆ ಕಾರಣ ಪುರಾತತ್ವ ಉತ್ಖನನ ನಡೆಸಲು ದೊರಕುವ ಸ್ಥಳಾಭಾವ. ಎಲ್ಲರಿಗೂ ತಿಳಿದಿರುವಂತೆ ಪ್ರಾಚೀನ ಬನವಾಸಿಯ ಕೇಂದ್ರಭಾಗ ಇಂದಿನ ಬನವಾಸಿಯ ಕೇಂದ್ರಭಾಗದ ಅಡಿಯಲ್ಲಿದೆ. ಪ್ರಾಚೀನ ಬನವಾಸಿ ನಗರದ ಮೇಲೆ ಇಂದಿನ ಬನವಾಸಿ ನಗರ ಸ್ಥಾಪಿತವಾಗಿದೆ. ಇಂದಿನ ಬನವಾಸಿಯ ಜನಸಾಂದ್ರತೆ ಹೆಚ್ಚಾಗಿದೆ. ಹೊಸ ಹೊಸ ಕಟ್ಟಡಗಳು ನಿರ್ಮಾಣವಾಗಿ ಇಂದಿನ ಬನವಾಸಿಯ ಯಾವುದೇ ಸ್ಥಲ ಉತ್ಖನನಕ್ಕೆ ದೊರಕುವುದು ಕಷ್ಟಸಾಧ್ಯವೇ ಸರಿ. ಈ ಕಾರಣದಿಂದಾಗಿ ಅಲ್ಲಿ ಪುರಾತತ್ವ ಉತ್ಖನನಗಳು ಸ್ಥಗಿತಗೊಂಡಿದೆ ಎಂದರೆ ತಪ್ಪಲ್ಲ.

ಪ್ರಸ್ತುತ ಲೇಖನದಲ್ಲಿ 1970, 1971ರ ಎರಡು ವರ್ಷಗಳಲ್ಲಿ ಡಾ.ಎಂ.ಶೇಷಾದ್ರಿಯವರು ನಡೆಸಿದ ಪುರಾತತ್ವ ಉತ್ಖನನಗಳ ಮಾಹಿತಿಯನ್ನು ಮಾತ್ರ ಸಂಕ್ಷಿಪ್ತವಾಗಿ ನೀಡಲಾಗಿದೆ. ಈ ಉತ್ಖನನಗಳ ಸಮಗ್ರ ಮಾಹಿತಿಯನ್ನು ರಾಜ್ಯ ಪುರಾತತ್ವ ಇಲಾಖೆ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಹೆಚ್ಚಿನ ವಿವರಗಳಿಗೆ ಆಸಕ್ತರು. ಈ ಸಂಪುಟವನ್ನು ಓದಿ ತಿಳಿಯಬಹುದು. ಸಾಮಾನ್ಯರಿಗೆ ತಿಳಿಯುವಂತೆ, ಕನ್ನಡದಲ್ಲಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಇಸವಿ 1970–71ರ ಅವಧಿಯಲ್ಲಿ ಬನವಾಸಿಯಲ್ಲಿ ಒಟ್ಟು ಎಂಟು ಸ್ಥಳಗಳಲ್ಲಿ ಉತ್ಖನನವನ್ನು ನಡೆಸಲಾಯಿತು. ಈ ಎಲ್ಲಾ ಸ್ಥಳಗಳಿಗೂ ಕ್ರಮವಾಗಿ ಬನವಾಸಿ–1, ಬನವಾಸಿ–2 ಹೀಗೆ ಬನವಾಸಿ–8 ರ ವರೆಗೆ ಸಂಖ್ಯೆಗಳನ್ನು ನೀಡಲಾಯಿತು. ಈ ಸಂಖ್ಯೆಗಳನ್ನಾಧರಿಸಿ ಕ್ರಮವಾಗಿ ಉತ್ಖನನ ಗುಂಡಿಗಳ ವಿವರಗಳನ್ನು ನೀಡಲಾಗಿದೆ.

ಬನವಾಸಿ–1 :

ಮಧುಕೇಶ್ವರ ದೇವಾಲಯದ ನೈರುತ್ಯಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ವರದಾ ನದಿಯ ಎಡದಂಡೆಯ ಬಳಿಯ ದೋಣಿಗುಡ್ಡದಲ್ಲಿ ಉತ್ಖನನವನ್ನು ಪ್ರಾರಂಭಿಸಲಾಯಿತು. ಕಾರಣ ಈ ಬೃಹತ್ ಗುಡ್ಡದಲ್ಲಿ ಚಕ್ರವರ್ತಿ ಅಶೋಕ ನಿರ್ಮಿಸಿದ ಸ್ತೂಪವೊಂದರ ಅವಶೇಷಗಳಿವೆ ಎಂದು ಸ್ಥಳೀಯರ ನಂಬಿಕೆಯಾಗಿತ್ತು. ಅಲ್ಲದೆ ಬಳಿಯಲ್ಲೇ ಹಾದುಹೋಗುವ ಮುಖ್ಯರಸ್ತೆಯ ನಿರ್ಮಾಣಕ್ಕೆಂದು ಮಣ್ಣನ್ನು ಪಡೆಯಲು ಈ ದಿಬ್ಬವನ್ನು ಸಾಕಷ್ಟು ಖಾಲಿಮಾಡಲಾಗಿತ್ತು ಎಂದು ಆಗಲೇ ಹೇಳಿದೆ. ಅಳಿದುಳಿದ ಗುಡ್ಡದ ಖಂಡ ಭಾಗದಲ್ಲಿ ದಪ್ಪವಾದ ಇಟ್ಟಿಗೆಯ ಗೋಡೆಗಳು ಸ್ಪಷ್ಟವಾಗಿ ಕಾಣುತ್ತಿದ್ದವು. ಇದರಿಂದಾಗಿ ಉತ್ಖನನವನ್ನು ಈ ಗುಂಡಿಯಿಂದಲೇ ಪ್ರಾರಂಭಿಸಲಾಯಿತು. ಸುದೀರ್ಘ ಉತ್ಖನನದ ನಂತರ ಈ ಸ್ಥಳದಲ್ಲಿ ಇಟ್ಟಿಗೆಯಲ್ಲಿ ನಿರ್ಮಿತವಾದ, ಗಜ ಪೃಷ್ಠಾಕಾರದ ವಿಶಾಲ ಕಟ್ಟಡದ ಅವಶೇಷಗಳು ಬೆಳಕಿಗೆ ಬಂದವು.

ಪ್ರಸ್ತುತ ಕಟ್ಟಡವು ಬಹಳಷ್ಟು ಜಖಂ ಆಗಿದ್ದರೂ ಅದೃಷ್ಟವಶದಿಂದ ಅದರ ತಳವಿನ್ಯಾಸದ ಎಲ್ಲಾ ಅಂಗಗಳೂ ಸ್ಪಷ್ಟವಾಗಿ ಉಳಿದುಕೊಂಡಿದ್ದವು. ಪಶ್ಚಿಮಾಭಿಮುಖವಾಗಿ ನಿರ್ಮಿತವಾಗಿದ್ದ ಈ ಕಟ್ಟಡ ಪೂರ್ವದಲ್ಲಿ ಗಜಪೃಷ್ಠಾಕಾರವನ್ನೂ ಪಶ್ಚಿಮದಲ್ಲಿ ಮುಖ ದ್ವಾರವನ್ನೂ ಹೊಂದಿತ್ತು. ಅರ್ಧವೃತ್ತಾಕಾರದ ಹಿಂಭಾಗದಲ್ಲಿ ಸುಮಾರು ಐದಾರು ಅಡಿಗಳಷ್ಟು ಎತ್ತರಕ್ಕೆ ಗೋಡೆಗಳು ಉಳಿದಿದ್ದವು. ಸಮಾನಾಂತರವಾಗಿ ನಿರ್ಮಿಸಿದ ಮೂರು ಗೋಡೆಗಳಿಗೆ ಕೇಂದ್ರ ಒಂದೇ ಆಗಿತ್ತು. ಈ ಗೋಡೆಗಳಿಂದಾಗಿ ಕಟ್ಟಡಕ್ಕೆ ಒಳ ಹಾಗೂ ಹೊರ ಪ್ರದಕ್ಷಿಣ ಪಥಗಳು ನಿರ್ಮಾಣವಾಗಿದ್ದವು. ಐಹೊಳೆಯ ದುರ್ಗಾ ದೇವಾಲಯದ ತಳವಿನ್ಯಾಸಕ್ಕೆ ಸಮವೆನಿಸುವ ಈ ವಿನ್ಯಾಸ ಪ್ರಾಯಶಃ ಆ ದೇವಾಲಯ ನಿರ್ಮಾಣಕ್ಕೆ ಸ್ಫೂರ್ತಿಯಾಗಿರಬಹುದು. ಗುಡಿಯ ಮುಂಭಾಗದಲ್ಲಿ ಒಂದು ಮುಖಮಂಟಪವಿತ್ತೆಂದೂ ಸಹ ಹೇಳಬಹುದು. ಈ ಮುಖ ಮಂಟಪಕ್ಕೆ ಮಧ್ಯದಲ್ಲಿ ಪ್ರಧಾನ ದ್ವಾರವಿತ್ತೆಂಬುದಕ್ಕೆ ಅಲ್ಲಿ ದೊರೆತ ಚಂದ್ರ ಶಿಲೆ ಮತ್ತು ದ್ವಾರ ನಿಲುವು ಸ್ಥಂಭಗಳೇ ಸಾಕ್ಷಿ. ಗುಡಿಯ ಹಜಾರದ ಮಧ್ಯದಂಕಣದ ಎರಡೂ ಪಾರ್ಶ್ವಗಳಲ್ಲಿ ಮರದ ಕಂಬಗಳ ಸಾಲು ಇದ್ದಿರಬಹುದು. ಲಾಳಾಕಾರದ ಹಿಂಬದಿಯ ಅಂಕಣವು ಗುಡಿಯ ಗರ್ಭಭಾಗವಾಗಿತ್ತು. ಉಳಿದಂತೆ ಇದ್ದ ವಿವಿಧ ಅಂಗಗಳು ಅಸ್ಪಷ್ಟ. ಗುಡಿಗೆ ಎರಡು ಪ್ರದಕ್ಷಿಣ ಪಥಗಳಿದ್ದವು ಎಂದು ಮಾತ್ರ ಹೇಳಬಹುದು. ಪ್ರದಕ್ಷಿಣ ಪಥದ ಅಗಲ ಕೇವಲ 70 ಸೆಂ.ಮೀ ಮಾತ್ರವಿತ್ತು. ಇದು ಕಿರಿದೆನಿಸಿದರೂ ನಂತರದ ಕಾಲದ ರಾಜಘಟ್ಟದ ಚೈತ್ಯಾಲಯದ ಪ್ರದಕ್ಷಿಣ ಪಥದ ಅಗಲವೂ ಸಹ ಕೇವಲ 75 ಸೆಂ.ಮೀ ಆಗಿರುವುದನ್ನು ಗಮನಿಸಿದರೆ, ಈ ವಿಸ್ತೀರ್ಣ ಆ ಕಾಲಕ್ಕೆ ಸರಿಯೆನಿಸಿದ್ದ ರೂಢಿ ಎನ್ನಬಹುದು.

ಗುಡಿಯ ಗೋಡೆಗಳು, ವಿವಿಧ ಭಾಗಗಳಲ್ಲಿ ವಿವಿಧ ಗಾತ್ರಗಳನ್ನು ಅವಶ್ಯಕತೆಗೆ ತಕ್ಕಂತೆ ಹೊಂದಿದ್ದವು. ಸುಮಾರು 60ರಿಂದ 180 ಸೆಂಟಿಮೀಟರ್ ಗಾತ್ರದ ಗೋಡೆಗಳು ಕಂಡು ಬಂದಿವೆ. ಗುಡಿಯ ವಿಸ್ತೀರ್ಣ 26ಥ13.50 ಮೀಟರ್‌ಗಳು. ಹೀಗಾಗಿ, ಇದು ಕರ್ನಾಟಕದಲ್ಲಿ ಮಾತ್ರವಲ್ಲದೆ ಇಡೀ ಭಾರತದಲ್ಲಿ ಇದುವರೆಗೆ ದೊರೆತಿರುವ ಅತ್ಯಂತ ವಿಶಾಲವಾದ ಶಾತವಾಹನ ಕಾಲದ, ಗಜಪೃಷ್ಠಾಕಾರದ, ಇಟ್ಟಿಗೆ ನಿರ್ಮಿತ ಕಟ್ಟಡವೆಂದು ಪರಿಗಣಿತವಾಗಿದೆ.

ಕಟ್ಟಡ ಬಹಳ ಶಿಥಿಲಾವಸ್ಥೆಯಲ್ಲಿತ್ತು ಹಾಗೂ ಯಾವುದೇ ಶಿಲ್ಪಗಳು ದೊರೆಯಲಿಲ್ಲ. ಮುಂದಿನ ಬಾಗಿಲಿನ ಬಳಿಯಲ್ಲಿ ನುಣುಪಾದ ಕಲ್ಲಿನಲ್ಲಿ ಕೆತ್ತಿದ ಚಂದ್ರಶಿಲೆ ಮತ್ತು ದ್ವಾರಬಂಧದ ನಿಲುವು ಮಾತ್ರ ದೊರೆತಿರುವುದರಿಂದ, ಈ ಗುಡಿಗೆ ಕಲ್ಲಿನ ದ್ವಾರಬಂಧವಿತ್ತೆಂದು ತಿಳಿಯುತ್ತದೆ. ಇಟ್ಟಿಗೆಯಿಂದ ನಿರ್ಮಿತವಾದ ಈ ವಿಶಾಲ ಗುಡಿಗೆ ಹೆಂಚಿನ ಛಾವಣಿ ಇತ್ತೆಂದು ಅಲ್ಲಿ ದೊರೆತ ಹೆಂಚಿನ ಚೂರುಗಳು ಖಚಿತಪಡಿಸುತ್ತವೆ.

ಶಿಲ್ಪ ಅಥವಾ ಇತರೆ ಯಾವುದೇ ಧರ್ಮಸೂಚಿ ಆಧಾರಗಳು ಅಲ್ಲಿ ದೊರೆಯದೇ ಇರುವ ಕಾರಣ, ಈ ಗುಡಿ ಯಾವ ಧಾರ್ಮಿಕ ಪಂಥಕ್ಕೆ ಸೇರಿತ್ತು ಎಂಬುದನ್ನು ಖಚಿತವಾಗಿ ತಿಳಿಯಲು ಸಾಧ್ಯವಾಗಿಲ್ಲ.

ಬನವಾಸಿ–2 :

ಮಧುಕೇಶ್ವರ ದೇವಾಲಯದ ಉತ್ತರಕ್ಕೆ ಸುಮಾರು 200 ಮೀಟರ್ ಅಂತರದಲ್ಲಿ ಶ್ರೀ ಚಂದ್ರಶೇಖರ್ ಭಟ್ ಎಂಬುವರಿಗೆ ಸೇರಿದ್ದ ನಿವೇಶನದಲ್ಲಿ ಉತ್ಖನನದ ಗುಂಡಿಯನ್ನು ತೆಗೆಯಲಾಯಿತು. ಈ ಗುಂಡಿಯ ಮಹತ್ವವೆಂದರೆ, ಗುಂಡಿಯ ಐದನೆಯ ಪದರದಲ್ಲಿ ದೊರೆತ, ಕ್ರಿ.ಶ. ಮೊದಲೆರಡು ಶತಮಾನಗಳಿಗೆ ಸೇರಿಸಬಹುದಾದ ಮಡಿಕೆಯ ಚೂರುಗಳು, ನಕಲು ಮಾಡಿದ 'ರೂಲೆಟೆಡ್' ಮಡಿಕೆಯ ಚೂರುಗಳು, ಸುದ್ದೆಮಣ್ಣಿನಿಂದ ಚಿತ್ರಿತ ಮಡಿಕೆಯ ಚೂರುಗಳು, ದೊಡ್ಡಗಾತ್ರದ ಇಟ್ಟಿಗೆಗಳು, ಇತ್ಯಾದಿ. ಇದರಿಂದಾಗಿ ಮಧುಕೇಶ್ವರ ದೇವಾಲಯದ ಆಸುಪಾಸು ಕ್ರಿ.ಶ.ದ ಪೂರ್ವ ಮತ್ತು ಪ್ರಾರಂಭದ ಕಾಲದಿಂದಲೂ ಬನವಾಸಿ ನಗರದ ಕೇಂದ್ರಭಾಗವಾಗಿತ್ತು ಎಂದು ಸ್ಪಷ್ಟವಾಗುತ್ತದೆ.

ಬನವಾಸಿ–3 :

ಮಧುಕೇಶ್ವರ ದೇವಾಲಯದ ಈಶಾನ್ಯಕ್ಕೆ ಸುಮಾರು 300 ಮೀಟರ್ ಅಂತರದಲ್ಲಿ, ಸಮೀಪದ ಜೈನ ಬಸದಿಯಿಂದ ಸು. 100 ಮೀಟರ್ ಅಂತರದ ಬಯಲಿನಲ್ಲಿ ಈ ಗುಂಡಿ ತೋಡಲಾಯಿತು. ಮಹತ್ವದ ಯಾವುದೇ ಪ್ರಾಚ್ಯವಸ್ತು ಇಲ್ಲಿ

ದೊರಕಲಿಲ್ಲ. ಆದರೆ ಆದಿ ಚಾರಿತ್ರಿಕ ಕಾಲದ, ಬಹಳ ಸವೆದು ಹೋದ ಮಡಕೆಯ ಚೂರುಗಳು ಮಾತ್ರ ಗುಂಡಿಯ ಮೂರನೆಯ ಪದರದಲ್ಲಿ ದೊರೆತವು.

ಬನವಾಸಿ–4 :

ಈ ಉತ್ಖನನ ಗುಂಡಿಯನ್ನು ಮಧುಕೇಶ್ವರ ದೇವಾಲಯದ ನೈರುತ್ಯಕ್ಕೆ ಸುಮಾರು ಒಂದು ಕಿ.ಮೀ. ದೂರದಲ್ಲಿ ಕಾಗೆ ಗುಡ್ಡ ಎಂದು ಕರೆಯಲ್ಪಡುವ ಸ್ಥಳದಲ್ಲಿ ತೋಡಲಾಯಿತು. ಈ ಸ್ಥಳವೂ ಸಹ ವರದಾ ನದಿಯ ಎಡದಂಡೆಯ ಮೇಲಿದೆ. ಸಮೀಪದ ದೋಣಿ ಗುಡ್ಡದಲ್ಲಿ ದೊರೆತಂತೆ ಇಲ್ಲಿಯೂ ಸಹ ಯಾವುದಾದರೂ ಕಟ್ಟಡದ ಅವಶೇಷಗಳು ದೊರೆಯಬಹುದು ಎಂಬುದು ಈ ಉತ್ಖನನದ ಉದ್ದೇಶವಾಗಿತ್ತು. ಆದರೆ ಇಲ್ಲಿ ಯಾವುದೇ ಪುರಾತತ್ವ ಮಹತ್ವದ ಕಟ್ಟಡವಾಗಲೀ ಪ್ರಾಚ್ಯವಸ್ತುವಾಗಲೀ ದೊರೆಯಲಿಲ್ಲ.

ಬನವಾಸಿ–5 :

ಮಧುಕೇಶ್ವರ ದೇವಾಲಯದ ಉತ್ತರಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಕೋಟೆ ಗೋಡೆಯ ಅವಶೇಷಗಳ ಹೊರಭಾಗದಲ್ಲಿ, ಕೋಟೆಗೆ ಹೊಂದಿಕೊಂಡಿದ್ದ ಕಂದಕದ ಅಂಚಿನಲ್ಲಿ ಈ ಗುಂಡಿಯನ್ನು ತೋಡಲಾಯಿತು. ಈ ಗುಂಡಿಯಲ್ಲಿ ಎಂಟು ಪದರಗಳನ್ನು ಗುರುತಿಸಲಾಯಿತು. ಆರನೆಯ ಮತ್ತು ಏಳನೆಯ ಪದರಗಳಲ್ಲಿ ಶಾತವಾಹನ ಕಾಲದ ಮಡಕೆ ಚೂರುಗಳು, ಸುದ್ದೆ ಮಣ್ಣಿನಿಂದ ಚಿತ್ರಿತ ಮಡಕೆ ಚೂರುಗಳು, ಇಟ್ಟಿಗೆ ಚೂರುಗಳು ಹೇರಳವಾಗಿ ದೊರೆತವು. ಅಲ್ಲದೆ ಸುಟ್ಟ ಮಣ್ಣಿನ ಬೊಂಬೆಯ ಕಾಲಿನ ಭಾಗ, ನೀಲಿಕಲ್ಲಿನ ಒಂದು ಮಣಿ, ಕಬ್ಬಿಣದ ಚೂರುಗಳು ಸಹ ದೊರೆತವು.

ಬನವಾಸಿ–6 :

ಮಧುಕೇಶ್ವರ ದೇವಾಲಯಕ್ಕೆ ಸುಮಾರು 300 ಮೀಟರ್ ಆಗ್ನೇಯಕ್ಕೆ ಸ್ಥಳೀಯ ನಿವಾಸಿ ಶ್ರೀ ಚಂದ್ರಶೇಖರ ಭಟ್ ಎಂಬುವರ ಮನೆಯ ವಿಶಾಲ ಹಿತ್ತಲಿನಲ್ಲಿ ಈ ಉತ್ಖನನದ ಗುಂಡಿಯನ್ನು ತೋಡಲಾಯಿತು. ಪ್ರಾರಂಭದಲ್ಲಿ ಸಣ್ಣ ಪ್ರಮಾಣದಲ್ಲಿದ್ದ ಈ ಗುಂಡಿ, ಇಟ್ಟಿಗೆ ನಿರ್ಮಿತ ಬೃಹತ್ ದೇವಾಲಯವೊಂದರ, ಲೂಪಾಕಾರದ ಒಂದಂಚಿನ ಭಾಗವನ್ನು ಪ್ರಕಟಪಡಿಸಿತು. ಈ ಕಟ್ಟಡದ ಸಂಪೂರ್ಣ ರೂಪವನ್ನು ತಿಳಿಯಲು ಅವಶ್ಯಕ ಕಡೆಗಳಲಲ್ಲಾ ಗುಂಡಿಯನ್ನು ವಿಸ್ತರಿಸುತ್ತಾ ಹೋಗಲಾಗಿ, ಒಂದು ಬೃಹತ್ ದೇವಾಲಯವೇ ಪ್ರಕಟಗೊಂಡಿತು. ಅದೃಷ್ಟವಶಾತ್ ಅವರ ಮನೆಯ ಹಿತ್ತಲು ವಿಶಾಲವಾಗಿದ್ದುದರಿಂದ ಕಟ್ಟಡವನ್ನು ಸಂಪೂರ್ಣ ಬಿಡಿಸಿ ತಿಳಿಯಲು ಅನುಕೂಲವಾಯಿತು.

ಪ್ರಸ್ತುತ ಉತ್ಖನನದ ಸ್ಥಳ ಮಧುಕೇಶ್ವರ ದೇವಾಲಯದ ರಥಬೀದಿಗೆ ಹೊಂದಿಕೊಂಡಿದ್ದ ಮನೆಯ ಹಿತ್ತಲಾದ್ದರಿಂದ, ಇದು ಬನವಾಸಿ ನಗರದ ಕೇಂದ್ರಸ್ಥಾನವಾಗಿತ್ತು, ಅಂದರೆ ಈ ಸ್ಥಳ ಪ್ರಾಚೀನ ಕಾಲದಿಂದಲೂ ಜನನಿಬಿಡವಾಗಿದ್ದ ಭಾಗ. ಆದ್ದರಿಂದ ಉತ್ಖನನ ಪ್ರಾರಂಭಿಸಿದ ಮೂಲಗುಂಡಿಯನ್ನು ಸಾಕಷ್ಟು ಆಳವಾಗಿ ಅಗೆದು ಸಂಶೋಧಿಸಲಾಯಿತು. ಇದರಿಂದ ಬನವಾಸಿ ಸಂಸ್ಕೃತಿಗೆ ಸಂಬಂಧಿಸಿದ, ಪ್ರಾರಂಭದಿಂದ ಹಿಡಿದು ಇತ್ತೀಚಿನ ವರೆಗಿನ ಸಂಸ್ಕೃತಿಯನ್ನು ತಿಳಿಯುವ ಅವಕಾಶ ಈ ಗುಂಡಿಯಲ್ಲಿ ದೊರೆಯಿತು. ಉಳಿದ ಗುಂಡಿಗಳ ಆಳವನ್ನು ಕಟ್ಟಡದ ಪಾಯದವರೆಗೆ ಮಾತ್ರ ಮಿತಿಗೊಳಿಸಲಾಯಿತು.

ಈ ಗುಂಡಿಯಲ್ಲಿ ಕಂಡುಬಂದ ಬಹಳ ಮುಖ್ಯವಾದ ವಸ್ತುವೆಂದರೆ ಬೃಹದಾಕಾರದ ಇಟ್ಟಿಗೆ ನಿರ್ಮಿತ, ಗಜಪೃಷ್ಠಾಕಾರದ ದೇವಾಲಯದ ತಳಪಾಯ. ದೋಣಿ ಗುಡ್ಡದಲ್ಲಿನ ದೇವಾಲಯದಂತೆ ಈ ದೇವಾಲಯದ ಮತ–ಪಂಥವನ್ನು ತಿಳಿಯಲು ಯಾವುದೇ ಸ್ಪಷ್ಟ ಮಾಹಿತಿ ದೊರೆಯಲಿಲ್ಲ. ಆದರೆ ದೇವಾಲಯದ ಬಲ ಪಾರ್ಶ್ವದ, ಹೊರಗೋಡೆಯ ಮಧ್ಯಭಾಗದ ಒಂದು ಗುಂಡಿಯಲ್ಲಿ ಸುಮಾರು ಮೂರು ಅಡಿ ಆಳದಲ್ಲಿ, ತೃಟಿತವಾದ ಒಂದು ಕಲ್ಲಿನ ವಿಗ್ರಹ ದೊರೆಯಿತು. ಈ ವಿಗ್ರಹವನ್ನು ಬಹಳ ಜನ ವಿದ್ವಾಂಸರು ವಿಧವಿಧವಾಗಿ ಪರಿಶೀಲಿಸಿ, ಅದು ಸ್ಕಂದನ ವಿಗ್ರಹವೆಂದು ತೀರ್ಮಾನಕ್ಕೆ ಬಂದಿದ್ದಾರೆ. ಇದೇ ರೀತಿಯ ವಿಗ್ರಹ ನಾಗಾರ್ಜುನ ಕೊಂಡದ ಉತ್ಖನನದಲ್ಲೂ ಸಹ ದೊರೆತಿರುವುದು ಒಂದು ವಿಶೇಷ. ಹೀಗಾಗಿ ಇದು ಸ್ಕಂದನ ದೇವಾಲಯವಾಗಿತ್ತೆಂದು ಕೆಲವು ವಿದ್ವಾಂಸರ ಅಭಿಮತ.

ಕಟ್ಟಡದ ತಳವಿನ್ಯಾಸ, ರೇಖಾಚಿತ್ರವನ್ನು ನೋಡಿದಾಗ ಸ್ಪಷ್ಟವಾಗುವುದರಿಂದ ಅದರ ವಿವರಣೆಯನ್ನು ಇಲ್ಲಿ ನೀಡಿಲ್ಲ. ಈ ಗುಡಿಯ ಉದ್ದ, 22.5 ಮೀಟರ್ ಮತ್ತು ಅಗಲ 12.5 ಮೀಟರ್. ಪೂರ್ವಾಭಿಮುಖವಾಗಿ ಇದರ ನಿರ್ಮಾಣವಾಗಿದೆ. ವರದಾನದಿ ಇದರ ಮುಂಭಾಗದಲ್ಲಿ ಸಮೀಪದಲ್ಲೇ ಹರಿಯುತ್ತದೆ. ಹೀಗಾಗಿ ಇದು ನದೀದಂಡೆಯ ದೇವಾಲಯವಾಗಿತ್ತು. ಕಟ್ಟಡದ ನಿರ್ಮಾಣ ಬಹಳ ಸೊಗಸಾಗಿದೆ. ಹೊರಗೋಡೆಯ ದಪ್ಪ 1.50 ಮೀಟರ್ ಮತ್ತು ಒಳಗೋಡೆಯ ದಪ್ಪ 1.0 ಮೀಟರ್. ಇವೆರಡರ ನಡುವಣ ಪ್ರದಕ್ಷಿಣ ಪಥ ಒಂದು ಮೀಟರ್ ಇದೆ. ಪ್ರದಕ್ಷಿಣ ಪಥಕ್ಕೆ ಪ್ರವೇಶ ಮುಂದಿನ ಬಾಗಿಲಿನ ಒಳಪಾರ್ಶ್ವಗಳಲ್ಲಿ ಎರಡೂ ಕಡೆ ಬಿಟ್ಟಿರುವ ಜಾಗ. ಮುಂದಿನ ದ್ವಾರ ಸುಮಾರು 1.20 ಮೀಟರ್ ಅಗಲವಾಗಿತ್ತು. ದ್ವಾರದ ಎರಡೂ ಪಾರ್ಶ್ವಗಳಲ್ಲಿ ಕಟಾಂಜನ(ಹಸ್ತಿಹಸ್ತ)ವಿದ್ದುದಕ್ಕೆ ಸಾಕ್ಷ್ಯಾಧಾರಗಳಿವೆ.

ದೇವಾಲಯದ ನಿರ್ಮಾಣ ಕಾಲ ಏನೆಂಬುದಕ್ಕೆ ಸ್ಪಷ್ಟ ಮಾಹಿತಿ ದೊರೆತಿಲ್ಲ. ಕಟ್ಟಡದ ವಿನ್ಯಾಸ, ವಿಧಾನ, ಬಳಸಿರುವ ಇಟ್ಟಿಗೆಗಳ ಗಾತ್ರ (45ಥ26ಥ7.5 ಸೆಂ.ಮೀ.) ಇವುಗಳನ್ನಾಧರಿಸಿ, ಇದರ ಕಾಲ ಕ್ರಿ.ಶ. 3–4ನೇ ಶತಮಾನವೆನ್ನಬಹುದು. ಆಕಾಲಕ್ಕೆ ಶೈವ ಧರ್ಮ ಬನವಾಸಿಯ ಪ್ರಾಂತ್ಯದಲ್ಲಿ ಪ್ರಬಲವಾಗಿತ್ತು. ತಾಳಗುಂದದ ಪ್ರಣವೇಶ್ವರ ಗುಡಿ ಮತ್ತು ಅದರ ಪ್ರಾಚೀನತೆ ಇದಕ್ಕೆ ಸಾಕ್ಷಿ. ಕದಂಬ ವಂಶ ಸ್ಥಾಪಕ ಮಯೂರ (ಶರ್ಮ) ಎಂಬ ಹೆಸರಿನಲ್ಲಿ ಕಾರ್ತಿಕೇಯನ ಸೂಚನೆ/ಅಂಶ ಕಾಣಬರುತ್ತದೆ. ಈ ದೇವಾಲಯದ ಆವರಣದಲ್ಲಿ ಕಾರ್ತಿಕೇಯನ ಶಿಲ್ಪ ದೊರೆತಿದೆ. ಇದರಿಂದಾಗಿ ಮಯೂರ ಶರ್ಮನ ಕಾಲದಲ್ಲಿ ಕಾರ್ತಿಕೇಯನ ಆರಾಧನೆ ಪ್ರಬಲವಾಗಿತ್ತೇ? ಈ ದೇವಾಲಯ ಕಾರ್ತಿಕೇಯನದಾಗಿತ್ತೇ? ಒಂದು ಪಕ್ಷ ನಿಜವಾದಲ್ಲಿ ಈ ದೇವಾಲಯ ಕ್ರಿ.ಶ. 3–4 ನೇ ಶತಮಾನದ್ದಾಗಿರಬಹುದು ಎಂಬ ಊಹೆ ನಿಜವಾಗುತ್ತದೆ.

ಪ್ರಸ್ತುತ ದೇವಾಲಯ ಗಜಪೃಷ್ಠಾಕಾರವಾಗಿದೆ ಎಂದ ಮಾತ್ರಕ್ಕೆ ಅದು ಬೌದ್ಧಪಂಥದ್ದಾಗಿರಬೇಕಾಗಿಲ್ಲ. ಇಂತಹ ತಳವಿನ್ಯಾಸದ ನಿರ್ಮಾಣಗಳು ಕರ್ನಾಟಕದ ಅನೇಕ ಕಡೆ ದೊರೆತಿವೆ. ಬ್ರಹ್ಮಗಿರಿ, ಪಟ್ಟದಕಲ್ಲು, ತಾಳಗುಂದ ಮುಂತಾದೆಡೆ ಇಟ್ಟಿಗೆ ನಿರ್ಮಿತ ಲಾಳಾಕಾರದ ಗುಡಿಗಳು ದೊರೆತಿವೆ. ಐಹೊಳೆಯ ದುರ್ಗ ದೇವಾಲಯ ಸಂಪೂರ್ಣ ಕಲ್ಲಿನದ್ದಾಗಿದ್ದು ಇದು ವೈದಿಕ ಪಂಥದ ದೇವಾಲಯದ ಸ್ಪಷ್ಟ ಕುರುಹುಗಳನ್ನು ಹೊಂದಿದೆ. ಇಷ್ಟಾದರೂ ಬನವಾಸಿಯ ಈ ಗುಡಿಯಲ್ಲಿ ಗರ್ಭಗೃಹದ ಸ್ಪಷ್ಟ ಕುರುಹು ದೊರೆಯದೆ ಇಡೀ ದೇವಾಲಯದ ಮಧ್ಯದಂಕಣ, ಬೌದ್ಧ ಚೈತ್ಯಾಲಯದಂತೆ ಒಂದೇ ಆಗಿತ್ತೇ? ಹಾಗಾದರೆ ಇದು ಬೌದ್ಧ ಧರ್ಮೀಯವೇ? ಎಂಬ ಅನುಮಾನಗಳೂ ಹುಟ್ಟುತ್ತವೆ.

ಪ್ರಸ್ತುತ ಉತ್ಖನನದಲ್ಲಿ ವಾಯುವ್ಯ ಮೂಲೆಯ ಒಂದು ಗುಂಡಿಯನ್ನು ಮಾತ್ರ ಆಳಕ್ಕೆ ಅಗೆದು ಪರಿಶೀಲಿಸಲಾಯಿತು ಎಂದು ಮೇಲೆ ಹೇಳಿದೆ. ಈ ಗುಂಡಿಯಲ್ಲಿ ಒಟ್ಟು, ಮೇಲಿನಿಂದ ಕೆಳಗಿನವರೆಗೂ, ಹನ್ನೊಂದು ಪದರಗಳನ್ನು ಗುರುತಿಸಲಾಯಿತು. ಅತ್ಯಂತ ಮಹತ್ವದ ಮಡಕೆಯ ಚೂರುಗಳು ಆರನೆಯ ಪದರದ ಕೆಳಗಿನ ಗುಂಡಿಯೊಂದರಲ್ಲಿ ದೊರೆತವು. ಈ ಗುಂಡಿಯ ಒಂದು ಭಾಗ ಗುಡಿಯ ಪಾಯದ ಕೆಳಗೂ ವಿಸ್ತರಿಸಿತ್ತು. ಈ ಗುಂಡಿಯಲ್ಲಿ ಶಾತವಾಹನರ ಕಾಲ, ಅಂದರೆ ಕ್ರಿ.ಶ. 1–2 ನೇ ಶತಮಾನಗಳಲ್ಲಿ ಹೇರಳವಾಗಿ ದೊರೆಯುವ ಬಿಳಿ ಮಣ್ಣಿನಿಂದ ಚಿತ್ರಿತ ಕಪ್ಪು–ಕೆಂಪು ಮಡಕೆಯ ಚೂರುಗಳು, ನಕಲು 'ರೂಲೆಟೆಡ್' ಭಾಗಗಳು ಹಾಗೂ ಇನ್ನಿತರ ಸಮಕಾಲೀನ ಮಡಕೆಯ ಭಾಗಗಳು ದೊರೆಯಿತು. ಅವುಗಳನ್ನು ಮುಂದೆ ವಿವರಿಸಲಾಗಿದೆ. ಇವಲ್ಲದೆ ಎಂಟನೆಯ ಪದರದಲ್ಲಿ ಔತ್ತರೇಯ ಕಪ್ಪು ಹೊಳಪಿನ ಮಡಕೆಯ ಚೂರೊಂದು ಸಹ ದೊರೆಯಿತು. ಇದೊಂದು ಬಹಳ ಮುಖ್ಯವಾದ ಶೋಧನೆ. ಇದನ್ನು 'ನಾರ್ದರ್ನ್ ಬ್ಲಾಕ್ ಪಾಲಿಷ್ಡ್ ವೇರ್' ಎಂದು ಇಂಗ್ಲೀಷಿನಲ್ಲಿ ಕರೆಯುತ್ತಾರೆ. ಸಾಮಾನ್ಯವಾಗಿ ಚಿಕ್ಕದಾಗಿ ಎನ್.ಬಿ.ಪಿ. ವೇರ್ ಅಂತಲೂ ಕರೆಯುತ್ತಾರೆ. ಈ ವಿಧದ ಮಡಕೆಗಳು ಉತ್ತರ ಭಾರತದಲ್ಲಿ ಕ್ರಿ.ಶ. ದ ಪ್ರಾರಂಭದವರೆಗೂ ಬಳಕೆಯಲ್ಲಿದ್ದವು ಎಂಬುದು ತೀರ್ಮಾನಿತ ವಿಷಯ. ಆದ್ದರಿಂದ ಈ ಮಡಕೆ ಉತ್ತರ ಭಾರತದಿಂದ ಆಮದಾಗಿದ್ದು ಇದರ ಕಾಲ ಮೌರ್ಯರ ಕಾಲ ಎಂದು ನಿರ್ಧರಿಸಬಹುದು. ಅಶೋಕ ಮೌರ್ಯ, ನಮಗೆ ತಿಳಿದಿರುವಂತೆ, ಬೌದ್ಧ ಭಿಕ್ಷುಗಳನ್ನು, ಬನವಾಸಿಗೆ ಬೌದ್ಧ ಧರ್ಮ ಪ್ರಚಾರಕ್ಕಾಗಿ ಕಳುಹಿಸಿದನು. ಬೌದ್ಧ ಭಿಕ್ಷುಗಳು ಹೊಂದಿರಬಹುದಾದ ಕೆಲವೇ ವಸ್ತುಗಳಲ್ಲಿ ಭಿಕ್ಷಾಪಾತ್ರೆಯೂ ಒಂದು. ಹೀಗಾಗಿ ಬೌದ್ಧ ಭಿಕ್ಷುಗಳೊಂದಿಗೆ ಈ ರೀತಿಯ ಮಣ್ಣಿನ ಪಾತ್ರೆಗಳೂ ಸಹ ಮೌರ್ಯಕಾಲದಲ್ಲಿ ಬನವಾಸಿಗೆ ಬಂದಿರಬಹುದು. ಇದೇ ಕಾಲಕ್ಕೆ ಸೇರುವ

ಒಂದು ಬೆಳ್ಳಿಯ 'ಪಂಚ್-ಮಾರ್ಕ್' ನಾಣ್ಯವೂ ಸಹ, ಶಾತವಾಹನ-ಪೂರ್ವ ಸ್ತರವೊಂದರಲ್ಲಿ ದೊರೆಯಿತು. ಈ ಎರಡೂ ವಸ್ತುಗಳು ಶಾತವಾಹನ-ಪೂರ್ವ ಕಾಲದಲ್ಲೇ ಬನವಾಸಿಯು ಉತ್ತರ ಭಾರತದೊಂದಿಗೆ ಸಂಪರ್ಕವನ್ನು ಹೊಂದಿತ್ತು ಎಂದು ಸ್ಪಷ್ಟವಾಗಿ ನಿರೂಪಿಸುತ್ತವೆ.

ಬನವಾಸಿ-7 :

ಮಧುಕೇಶ್ವರ ದೇವಾಲಯದ ಈಶಾನ್ಯಕ್ಕೆ ಸುಮಾರು ಅರ್ಧ ಕಿ.ಮೀ. ದೂರದಲ್ಲಿ, ನದಿಗೆ ಹೋಗುವ ಮಾರ್ಗದ ಬಲ ಅಂಚಿನಲ್ಲಿ ಕೋಟೆಯ ಗೋಡೆಯ ಅವಶೇಷಗಳು ಕಂಡುಬಂದವು. ನದೀ ಪಾತ್ರಕ್ಕೆ ತೆರಳಲು ಕೋಟೆಯ ಗೋಡೆಯನ್ನು ಕತ್ತರಿಸಿ, ನಂತರದ ಕಾಲದಲ್ಲಿ, ಈ ರಸ್ತೆಯ ನಿರ್ಮಾಣವಾಗಿತ್ತು. ಹೀಗಾಗಿ ಕೋಟೆಯ ಗೋಡೆಯ ನಿರ್ಮಾಣದ ವಿವಿಧ ಹಂತಗಳನ್ನು ತಿಳಿಯಲು, ಕೋಟೆಯ ಈ ಖಂಡ ಭಾಗವನ್ನು ಸಮಪಡಿಸಿ ಅಧ್ಯಯನ ಮಾಡಲಾಯಿತು. ಇದರಿಂದ ತಿಳಿದು ಬಂದ ಅಂಶಗಳೆಂದರೆ ಕೋಟೆಯನ್ನು ಮೂಲತಃ ಶಾತವಾಹನರ ಕಾಲದಲ್ಲಿ (ಕ್ರಿ.ಶ. 1-3ನೇ ಶತಮಾನ) ನಿರ್ಮಿಸಲಾಯಿತು. ಕೆಳಗಿನ ನೈಸರ್ಗಿಕ ಲೆಟರೈಟ್ ನೆಲದ ಮೇಲೆ ಈ ಗೋಡೆ ಇಟ್ಟಿಗೆಯಿಂದ ನಿರ್ಮಾಣವಾಯಿತು. ಇದರ ಕಾಲ ಹೆಚ್ಚೂ ಕಡಿಮೆ ದೋಣಿಗುಡ್ಡದ ಗುಡಿಯ ಮತ್ತು ಬನವಾಸಿ-6ರಲ್ಲಿ ದೊರೆತ ಗುಡಿಗೆ ಸಮಕಾಲೀನವೆನ್ನಬಹುದು. ಕ್ರಿ.ಶ. ಸು. 5 ನೇಶತಮಾನದಲ್ಲಿ ಕದಂಬರ ಕಾಲದಲ್ಲಿ ಈ ಗೋಡೆಯನ್ನು ದುರಸ್ತಿಪಡಿಸಿದಂತೆ ತೋರುತ್ತದೆ. ಆ ಸಮಯದಲ್ಲಿ ಸ್ಥಳೀಯ ಜಂಬಿಟ್ಟಿಗೆ, ಸುಟ್ಟ ಇಟ್ಟಿಗೆ ಮತ್ತು ಮಣ್ಣನ್ನು ಬಳಸಲಾಗಿತ್ತು. ಪುನಃ ಈ ಕೋಟೆಯು ಕ್ರಿ.ಶ. ಸು.12-13ನೇ ಶತಮಾನಗಳಲ್ಲಿ ಜೀರ್ಣೋದ್ಧಾರವಾದಂತೆ ಕಂಡು ಬಂದಿತು.

ಬನವಾಸಿಯ ಈ ಕೋಟೆ ಕರ್ನಾಟಕದ ಅತೀ ಪ್ರಾಚೀನ ಕೋಟೆಗಳಲ್ಲಿ ಒಂದಾಗಿದೆ. ಇದರ ವಿಸ್ತೀರ್ಣ ಸುಮಾರು ಅರ್ಧ ಚದರ ಕಿ.ಮೀಟರ್‌ಗಳು. ಇದರ ಉದ್ದ ಉತ್ತರ ದಕ್ಷಿಣವಾಗಿ 850 ಮೀಟರ್‌ಮತ್ತು ಪೂರ್ವ-ಪಶ್ಚಿಮವಾಗಿ 600 ಮೀಟರ್. ಕೋಟೆಯ ಗೋಡೆಯ ಎತ್ತರ ತಿಳಿಯಲು ಸಾಧ್ಯವಾಗಿಲ್ಲ. ಕೋಟೆಯ ಗೋಡೆಯ ಸುತ್ತಳತೆ ಸು. ಎರಡು ಕಿಲೋಮೀಟರ್‌ಗೂ ಅಧಿಕ. ಇದರ ಸುತ್ತಲೂ, ನದೀತೀರವನ್ನು ಬಿಟ್ಟು, ಕಂದಕವಿದ್ದುದಕ್ಕೆ ಸೂಚನೆ ಇದೆ. ಈ ಕೋಟೆಗೆ ದಕ್ಷಿಣದಲ್ಲಿ ಮತ್ತು ವಾಯುವ್ಯದಲ್ಲಿ ಒಂದೊಂದು ದ್ವಾರಗಳಿದ್ದವು. ದಕ್ಷಿಣ ದ್ವಾರವು ಘಟ್ಟದ ಮೇಲಿನ ಅರಣ್ಯದ ಕಡೆಯ ರಸ್ತೆಗೆ ತೆರೆದಿತ್ತು. ವಾಯುವ್ಯ ದ್ವಾರವು ಸಿರಸಿಯ ರಸ್ತೆಯ ಕಡೆ ತೆರೆದಿತ್ತು. ದಟ್ಟ ಅರಣ್ಯದ ನಡುವೆ ಈ ಕೋಟೆ ಇದ್ದುದರಿಂದ ಈ ಕೋಟೆಯನ್ನು ವನದುರ್ಗ ಎಂದೂ, ಭೂಮಧ್ಯೆ ಇದ್ದುದರಿಂದ ಇದನ್ನು ಸ್ಥಲದುರ್ಗವೆಂದೂ ಕರೆಯುತ್ತಿದ್ದರು. ಇಮ್ಮಡಿ ಪುಲಿಕೇಶಿಯ ಐಹೊಳೆ ಶಾಸನದಲ್ಲಿ ಈ ಕೋಟೆಯನ್ನು ಶಾಸನ ಕರ್ತೃ ರವಿಕೀರ್ತಿ ಸ್ಥಲದುರ್ಗವೆಂದೇ ಕರೆದಿದ್ದಾನೆ.

ಬನವಾಸಿ-8 :

ಮಧುಕೇಶ್ವರ ದೇವಾಲಯದ ಈಶಾನ್ಯಕ್ಕೆ, ಸುಮಾರು ಅರ್ಧ ಕಿ.ಮೀ. ದೂರದಲ್ಲಿ, ನದೀ ತೀರಕ್ಕೆ ಹೋಗುವ ದಾರಿಯ ಎಡ ಪಾರ್ಶ್ವದಲ್ಲಿ ಹಾಗೂ ಬನವಾಸಿ-6ನೆಯ ಗುಂಡಿಯ ದಕ್ಷಿಣಕ್ಕೆ ಬಹಳ ಸಮೀಪದಲ್ಲೇ ಈ ಗುಂಡಿಯನ್ನು ತೋಡಲಾಯಿತು. ಈ ಪ್ರದೇಶವನ್ನು ಸ್ಥಳೀಯರು ಆನೆಗುಂಡಿ ಹಿತ್ತಲು ಎಂದು ಕರೆಯುವುದೂ ಉಂಟು. ಉತ್ಖನನದಲ್ಲಿ ಒಟ್ಟು ನಾಲ್ಕು ಪದರಗಳನ್ನು ಗುರುತಿಸಲಾಯಿತು. ಪದರ 2, 3 ಮತ್ತು 4ರಲ್ಲಿ ಆದಿ ಚಾರಿತ್ರಿಕ ಕಾಲದ ಮಡಕೆ ಚೂರುಗಳು ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬಂದವು. ಉಳಿದಂತೆ ಯಾವುದೇ ಮಹತ್ವದ ಪ್ರಾಚ್ಯವಸ್ತುಗಳು ದೊರಕಲಿಲ್ಲ.

ಮಡಕೆ ವಿಧಗಳ ಅಧ್ಯಯನ/ವಿವರಣೆ :

ಬನವಾಸಿಯ ಉತ್ಖನನದಲ್ಲಿ ಹೇರಳವಾಗಿ ಎಲ್ಲಾ ಗುಂಡಿಗಳಲ್ಲೂ ಆದಿ ಚಾರಿತ್ರಿಕ ಮತ್ತು ನಂತರದ ಕಾಲದ ಮಡಕೆ ಚೂರುಗಳು ದೊರೆತವು ಎಂದು ಈ ಮೊದಲೇ ತಿಳಿಸಿದೆ. ಆದಿ ಚಾರಿತ್ರಿಕ ಕಾಲದ ಮಡಕೆಗಳ ಕಾಲ ಕ್ರಿ.ಶ. 1-3 ಶತಮಾನಗಳು. ಈ ಕಾಲದಲ್ಲಿ ದಖನ್‌ನಲ್ಲಿ ಅಸ್ಥಿತ್ವದಲ್ಲಿದ್ದ ಎಲ್ಲಾ ಚಾರಿತ್ರಿಕ ನೆಲಗಳಲ್ಲೂ ಹೆಚ್ಚೂ ಕಡಿಮೆ ಒಂದೇ ವಿಧದ/

ರೀತಿಯ ಮಡಕೆಗಳು ಕಾಣಬರುತ್ತವೆ. ಈ ಮಡಕೆ ವಿಧಗಳ ಅಧ್ಯಯನ ಸಾಕಷ್ಟು ವಿಸ್ತಾರವಾಗಿ ನಡೆದಿದ್ದು ಎಲ್ಲಾ ಉತ್ಖನನ ವರದಿಗಳಲ್ಲಿ ಪ್ರಕಟಗೊಂಡಿವೆ. ಬನವಾಸಿಯೂ ಸಹ ಆದಿ ಚಾರಿತ್ರಿಕ ಕಾಲದಲ್ಲಿ ಒಂದು ಪ್ರಮುಖ ಜನವಸತಿ ಕೇಂದ್ರವಾಗಿ ಬೆಳೆದಿದ್ದುದರಿಂದ ಇಲ್ಲಿಯೂ ಸಹ ಆದಿಚಾರಿತ್ರಿಕ ಕಾಲದ ಮಡಕೆಗಳು ಹೇರಳವಾಗಿ ಬಳಕೆಯಾಗಿದೆ. ಆದರೆ ಉತ್ಖನನದಲ್ಲಿ ಒಂದೆರಡು ಸಣ್ಣ ಮಡಕೆಗಳನ್ನು ಬಿಟ್ಟು, ಯಾವುದೇ ಸುಸ್ಥಿತಿಯಲ್ಲಿರುವ ಮಡಕೆಗಳು ದೊರೆಯಲಿಲ್ಲ. ದೊರೆತಿರುವುದೆಲ್ಲವೂ ಕೇವಲ ಚೂರುಗಳು ಮಾತ್ರ. ಈ ಚೂರುಗಳ ಆಕೃತಿಯನ್ನಾಧರಿಸಿ ಮಡಕೆಗಳ ಸಂಪೂರ್ಣ ಗಾತ್ರ ಮತ್ತು ಆಕೃತಿಗಳನ್ನು ಊಹಿಸಬೇಕಾಗಿದೆ.

ಬನವಾಸಿ, ಈ ಮೇಲೆ ತಿಳಿಸಿದಂತೆ, ಪ್ರಾಚೀನ ವ್ಯಾಪಾರ ಕೇಂದ್ರ. ದಕ್ಷಿಣ ಭಾರತಕ್ಕೂ ಪಾಶ್ಚಾತ್ಯ ದೇಶಗಳಿಗೂ ನಡೆಯುತ್ತಿದ್ದ ಅಂದಿನ ವ್ಯಾಪಾರ ವಹಿವಾಟಿನಲ್ಲಿ ಪ್ರಧಾನ ಪಾತ್ರ ವಹಿಸಿದ ನಗರ. ಈ ನಗರದ ಮುಖಾಂತರವಾಗಿ ಪೂರ್ವದಿಂದ ಪಶ್ಚಿಮದೆಡೆಗೆ ಮತ್ತು ಅದರ ವಿರುದ್ಧ ದಿಕ್ಕಿನಲ್ಲಿ ನಡೆದಾಡುತ್ತಿದ್ದ ವ್ಯಾಪಾರಿಗಳಿಗೆ ಒಂದು ಉತ್ತಮ ನಿಲ್ದಾಣವಾಗಿತ್ತು. ಹೀಗಾಗಿ ಪಾಶ್ಚಾತ್ಯ ವಸ್ತುಗಳು ಅವುಗಳ ಬಗ್ಗಿನ ಜ್ಞಾನ ಮತ್ತು ಅವುಗಳ ಪ್ರಭಾವ ಬನವಾಸಿ ಸಂಸ್ಕೃತಿಯ ಮೇಲೆ ಸಾಕಷ್ಟಿತ್ತು. ಅದರಲ್ಲೂ ಈ ಪ್ರಭಾವವನ್ನು ಬನವಾಸಿಯ ಕುಂಬಾರಿಕೆಯಲ್ಲಿ ಬಹಳ ಸ್ಪಷ್ಟವಾಗಿ ಕಾಣಬಹುದು. ಬನವಾಸಿಯ ಮಡಕೆಯ ಒಂದು ವಿಧದಲ್ಲಿ ರೋಮನ್ ಮಡಕೆಗಳ ಪ್ರಭಾವ ಕಂಡು ಬಂದಿದೆ. ರೋಮನ್ ಮಡಕೆಯ ವಿಧದಲ್ಲಿ 'ರೊಲೆಟೆಡ್' ಮಡಕೆ ಒಂದು ವಿಧದ ಅಗಲವಾದ ತಟ್ಟೆ. ಇದರ ತಲ ಚಪ್ಪಟೆ ಮತ್ತು ಪಾರ್ಶ್ವಗಳು ಸುಮಾರು 3–4 ಸೆಂ.ಮೀ. ಎತ್ತರವಿರುತ್ತದೆ. ಈ ಪಾರ್ಶ್ವ ದುಂಡಗೆ ಒಳಕ್ಕೆ ಬಾಗಿರುತ್ತದೆ. ಮೇಲಿನ ಏಣು ಚಪ್ಪಟೆಯಾಗಿರುತ್ತದೆ. ಇದರ ಒಳ–ಮಧ್ಯ ಭಾಗದಲ್ಲಿ ವೃತ್ತಾಕಾರದ ಸಮಾನಾಂತರ ಗೀರುಗಳು ಮತ್ತು ವಿಧ–ವಿಧ ಕಚ್ಚುಗಳನ್ನು ಅಲಂಕಾರಕ್ಕಾಗಿ ಮಾಡಿರುತ್ತಾರೆ. ಬನವಾಸಿಯ ಮಡಕೆಯ ಈ ವಿಧದಲ್ಲಿ ಈ ಡಿಜೈನುಗಳು ಸಾಕಷ್ಟು ರೀತಿಯಲ್ಲಿ ಕಾಣ ಬಂದಿವೆ. ಇದು ಕೇವಲ ತಟ್ಟೆಗಳ ಒಳ ಮಧ್ಯಭಾಗದಲ್ಲಿ ಮಾತ್ರ ಕಾಣಬರುತ್ತವೆ. ಈ ತಟ್ಟೆಗಳು ಊಟ–ತಿಂಡಿ ಮಾಡಲು ಬಳಸುವ ತಟ್ಟೆಗಳು. ಹೀಗಾಗಿ ಇದರ ತಳ ತೆಳು ಮತ್ತು ಚಪ್ಪಟೆ. ಮೇಲ್ಮೈ ಕೂಡ ಹೊಳಪಿನಿಂದ ಕೂಡಿರುತ್ತದೆ. ತೆಳು ಚಪ್ಪಟೆ ತಟ್ಟೆಯನ್ನು ಮಾಡಬೇಕಾದರೆ ಅದಕ್ಕೆ ಬಳಸುವ ಮಣ್ಣು ನುಣ್ಣಗೆ ಶುದ್ಧವಾಗಿರಬೇಕು. ಮಡಕೆಯನ್ನು ಹೆಚ್ಚು ಕಾವಿನಲ್ಲಿ ಚೆನ್ನಾಗಿ ಸುಟ್ಟಿರಬೇಕು. ಆಗ ತಟ್ಟೆ ಗಟ್ಟಿಯಾಗಿರುತ್ತದೆ, ಮತ್ತು ಹೊಳಪಿನಿಂದ ಕೂಡಿರುತ್ತದೆ. ತಯಾರಿಕೆಯಲ್ಲಿ ಉತ್ತಮ ಮಣ್ಣು ಬಳಸಿ ಚೆನ್ನಾಗಿ ಸುಟ್ಟಿರುವುದರಿಂದ ದೊಡ್ಡ ದೊಡ್ಡದಾದ ಇದರ ಚೂರುಗಳನ್ನು ಒಂದಕ್ಕೊಂದು ಮೃದುವಾಗಿ ಬಡಿದರೆ ಲೋಹರೀತಿಯಲ್ಲಿ ಶಬ್ದವನ್ನು ಹೊರಸೂಸುತ್ತದೆ. ಈ ಲಕ್ಷಣ 'ರೋಮನ್' ಅಥವಾ 'ಅರಟೈನ್' ತಟ್ಟೆಗಳ ಒಂದು ಲಕ್ಷಣ. ಇದೇ ಗುಣ ಬನವಾಸಿಯ ಹಲವಾರು ಉತ್ತಮ ತಯಾರಿತ ತಟ್ಟೆಗಳಲ್ಲೂ ಕಾಣಬರುವುದರಿಂದ ಇವನ್ನು ನಕಲು 'ಅರಟೈನ್' ಮಡಕೆಗಳೆಂದೂ ಕರೆದಿದ್ದಾರೆ. ಇಂತಹ ಮಡಕೆಗಳ ಇನ್ನೂ ಅಶುದ್ಧ ನಕಲುಗಳು ಕರ್ನಾಟಕದ ಇತರ ಆದಿ ಚಾರಿತ್ರಿಕ ನೆಲೆಗಳಲ್ಲೂ ದೊರೆತಿವೆ. ಉದಾಹರಣೆಗೆ ತಲಕಾಡು. ಆದರೆ ಬನವಾಸಿಯಲ್ಲಿ ದೊರೆತ ನಕಲಿ 'ಅರಟೈನ್' ಮಡಕೆ ಬಹಳ ಒಳ್ಳೆಯ ಗುಣಮಟ್ಟದ್ದು.

ಇವಲ್ಲದೆ ಸುದ್ದೆ ಮಣ್ಣಿನಿಂದ ಅಥವಾ ಬಿಳಿಮಣ್ಣಿನಿಂದ ಚಿತ್ರಿತ ಮಡಕೆಗಳು, ಕಪ್ಪು–ಕೆಂಪು ಮಡಕೆಗಳು, ಕಪ್ಪು ಮಡಕೆಗಳು, ಕೆಂಪು ಮಡಕೆಗಳು, ಕಂದುವರ್ಣ, ಚಾಕೊಲೆಟ್ ಬಣ್ಣದ ಮಡಕೆಗಳು, ಬೂದು ಬಣ್ಣದ ಮಡಕೆಗಳು ಮುಂತಾಗಿ ಮಡಕೆಯ ವರ್ಣಗಳು ಇರುತ್ತವೆ. ಆ ಕಾಲದಲ್ಲಿ ಲೋಹ ಬಹಳ ದುಬಾರಿ. ಹೀಗಾಗಿ ದಿನಬಳಕೆಯ ಪಾತ್ರೆಗಳಿಗೆ ಸಾಮಾನ್ಯ ಜನರು ಮಡಕೆಗಳನ್ನು ಬಳಸುತ್ತಿದ್ದರು. ಆ ಕಾಲದಲ್ಲಿ ಮಡಕೆಗಳಿಗೆ ಹೆಚ್ಚು ಬೇಡಿಕೆ ಇತ್ತು. ಇದರಿಂದ ಕುಂಬಾರಿಕೆ ಒಳ್ಳೆ ಬೇಡಿಕೆಯ ಉದ್ಯಮವಾಗಿತ್ತು. ಕುಂಬಾರರು ವೈವಿಧ್ಯಮಯವಾದ ಬಣ್ಣ, ಆಕೃತಿ, ಗಾತ್ರ, ಉಪಯೋಗ ಮುಂತಾದವುಗಳಿಗೆ ಅನುಗುಣವಾಗಿ ಮಡಕೆ ತಯಾರಿಸುತ್ತಿದ್ದರು. ಮಡಕೆ ಬಹು ಉಪಯೋಗಿ ವಸ್ತು. ಆದರೆ ಶಾಶ್ವತವಲ್ಲ. ಅಲ್ಪಾಯುಷಿ. ಬೇಗ ಒಡೆದು ಹೋಗುತ್ತದೆ. ಒಡೆದ ಮಡಕೆಯನ್ನು ಬಿಸಾಡಬೇಕೇ ಹೊರತು ರಿಪೇರಿಯಾಗುವುದಿಲ್ಲ. ಇದರಿಂದ ವೈವಿಧ್ಯಮಯ ರೀತಿಯ ಮಡಕೆಗಳು/ಚೂರುಗಳು ಹೇರಳವಾಗಿ ಎಲ್ಲಾ ಉತ್ಖನನಗಳಲ್ಲೂ ದೊರೆಯುತ್ತವೆ. ಈ ಮಡಕೆಯ ವಿಧಗಳಿಂದಲೇ ಪ್ರಾಚೀನ ಸಂಸ್ಕೃತಿಗಳನ್ನು ಹೆಸರಿಸುವುದೂ ರೂಢಿಯಲ್ಲಿದೆ.

ಕರ್ನಾಟಕದ ಈ ಮಡಕೆಯ ವಿಧಗಳಲ್ಲಿ ಕಪ್ಪು-ಕೆಂಪು ವರ್ಣದ ಮಡಕೆಗಳ ವಿವರಣೆ ಇಲ್ಲಿ ಅವಶ್ಯಕ. ಏಕೆಂದರೆ ಈ ಮಡಕೆಗಳ ಒಳಮೈ ಕಪ್ಪು ಬಣ್ಣವಿರುತ್ತದೆ. ಹೊರಮೈ ಕೆಂಪು ಬಣ್ಣದ್ದಾಗಿರುತ್ತದೆ. ಇದನ್ನು 'ಬ್ಲಾಕ್ ಅಂಡ್ ರೆಡ್ ವೇರ್' ಎಂದು ಕರೆಯುತ್ತಾರೆ. ಈ ರೀತಿಯ ದ್ವಿವರ್ಣ ಮಡಕೆಗಳನ್ನು ಹೇಗೆ ತಯಾರಿಸುತ್ತಾರೆ ಎಂಬುದನ್ನು ಸಂಶೋಧಕರು ಕಂಡು ಹಿಡಿದಿದ್ದಾರೆ. ಮಡಕೆಯನ್ನು ತಯಾರಿಸಿದಾಗ ಎಲ್ಲವೂ ಮಣ್ಣಿನ ಸಾಧಾರಣ ಕೆಂಪು, ಕಂದು ಬಣ್ಣವನ್ನು ಹೊಂದಿರುತ್ತದೆ. ಇದನ್ನು ನೆರಳಿನಲ್ಲಿ ಒಣಗಿಸಿ ಸುಡುತ್ತಾರೆ. ಸುಡುವ ವಿಧಾನದಲ್ಲಿ ಬದಲಾವಣೆ ಮಾಡುವುದರಿಂದ ಈ ರೀತಿಯ ವರ್ಣ ವ್ಯತ್ಯಾಸಗಳನ್ನು ತರಬಹುದು. ಮಡಕೆಗಳನ್ನು ಒಲೆಗಳಲ್ಲಿ ಬೋರಲಾಗಿ ಇಟ್ಟು ಸುಟ್ಟರೆ ಮಡಕೆ ಬೇಯುವಾಗ ಒಳಭಾಗದಲ್ಲಿ ಆಮ್ಲಜನಕದ (ಗಾಳಿಯ) ಕೊರತೆಯಾಗಿ ಒಳಭಾಗ ಕಪ್ಪಗೆ ಉಳಿಯುತ್ತದೆ. ಹೊರಭಾಗದಲ್ಲಿ ಆಮ್ಲಜನಕದ ಕೊರತೆ ಇಲ್ಲದಿರುವುದರಿಂದ ಮಡಕೆಯ ಮೇಲ್ಮೈ ಕೆಂಪು ಬಣ್ಣಕ್ಕೆ ತಿರುಗುತ್ತದೆ. ಈ ವಿಧಾನದಲ್ಲಿ ಕಪ್ಪು-ಕೆಂಪು ವರ್ಣದ ಮಡಕೆಗಳನ್ನು ತಯಾರಿಸುತ್ತಿದ್ದರು. ಈ ವಿಧದ ಮಡಕೆಗಳು ಆದಿಚಾರಿತ್ರಿಕ ಕಾಲದ ಮಡಕೆಗಳ ಒಂದು ವಿಶಿಷ್ಟ ಲಕ್ಷಣ.

ಅಂದಿನ ಕಾಲದ ಮಡಕೆಗಳ ಇನ್ನೊಂದು ವಿಶೇಷ ಲಕ್ಷಣವೆಂದರೆ ಬಿಳಿಮಣ್ಣಿನಿಂದ ಚಿತ್ರಿತ ಮಡಕೆಗಳು. ಬಿಳಿಮಣ್ಣು ಅಥವಾ ಸುದ್ದೆ/ನಾಮದ ಮಣ್ಣು ವಿರಳವಾಗಿ ಸಿಗುವ ಒಂದು ಜೇಡಿಮಣ್ಣು. ಈ ಮಣ್ಣಿನ ಗಟ್ಟಿ ತಿಳಿಯನ್ನು ಬಣ್ಣದಂತೆ ತಯಾರಿಸಿ ಅದರಿಂದ ಸಣ್ಣ ಸಣ್ಣ ಸಮಾನಾಂತರ ಗೆರೆಗಳನ್ನು, ಪರಸ್ಪರ ಛೇದಿತ ಗೆರೆಗಳನ್ನು ವಿವಿಧ ರೀತಿಯಲ್ಲಿ ಕಂಡರಿಸಿ ಅಲಂಕರಿಸಿರುತ್ತಾರೆ. ಈ ಚಿತ್ತಾರವನ್ನು ಮಡಕೆಗಳ ಭುಜಭಾಗ ಮತ್ತು ಹೊಟ್ಟೆಯ ಭಾಗದಲ್ಲಿ ಮಾತ್ರ ಮಾಡಿರುತ್ತಾರೆ. ಬಿಳಿವರ್ಣದಲ್ಲಿ ಚಿತ್ರಿಸಿ ಅದರ ಮೇಲೆ ಮತ್ತೆ ಕೆಂಪು ಮಣ್ಣಿನ ತೆಳು-ತಿಳಿಯನ್ನು ಬಳಿದು ಸುಡುವುದರಿಂದ ಮಡಕೆಗೆ ಒಳ್ಳೆಯ ಬಣ್ಣ ಹೊಳಪು ಬರುವುದಲ್ಲದೆ, ಬಿಳೀ ಬಣ್ಣದ ಚಿತ್ರವೂ ಸಹ ಚಿರಸ್ಥಾಯಿಯಾಗಿ ಉಳಿಯುವುದು. ಈ ರೀತಿಯ ಚಿತ್ರಿತ ಮಡಕೆಗಳನ್ನು ಇಂಗ್ಲೀಷಿನಲ್ಲಿ 'ರಸೆಟ್ ರೋಲೆಟೆಡ್ ಕೆವಲಿನ್ ಪೇಂಟೆಡ್ ವೇರ್' ಎಂದು ಕರೆಯುತ್ತಾರೆ.

ಅಲಂಕೃತ ಮಡಕೆಗಳಲ್ಲಿ ಮತ್ತೊಂದು ವಿಧ. ಮಡಕೆ ತಯಾರಿಸಿ ಮಣ್ಣು ಇನ್ನೂ ಹಸಿಯಾಗಿರುವಾಗಲೇ, ಅದರ ಮೇಲೆ ಆಳವಾದ ಗೆರೆಗಳು, ಉಬ್ಬುಗಳು, ಬೆರಳಿನಲ್ಲಿ ಚಿವುಟಿ ಮಾಡಿದ ಮಾಲೆಗಳು, ಹಾರಗಳು, ಕಚ್ಚುಗಳು, ಒತ್ತುಗಳು, ಇತ್ಯಾದಿಯಾಗಿ, ಹಲವಾರು ರೀತಿಯ ಅಲಂಕರಣಗಳನ್ನು, ದೊಡ-ದೊಡ್ಡ ಮಡಕೆಗಳ/ಪಾತ್ರೆಗಳ ಭುಜ ಭಾಗದಲ್ಲಿ ಮಾಡಿರುವುದು ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬಂದಿವೆ.

ಮಡಕೆಯ ವಿಧಗಳಲ್ಲಿ ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ವಿಂಗಡಿಸಬಹುದು. ಸಣ್ಣ ಸಣ್ಣ ವಾಟಿಗಳು, ಬಟ್ಟಲುಗಳು, ತಟ್ಟೆಗಳು, ಲೋಟಗಳು, ಮುಚ್ಚುಳಗಳು, ಸಣ್ಣ, ಮಧ್ಯಮ, ದೊಡ್ಡಗಾತ್ರದ ದುಂಡುಮಡಕೆಗಳು, ಅಗಲ ಬಾಯುಳ್ಳ 'ಬೌಲ್'ಗಳು, ಪಾತ್ರೆಗಳು, ಜಾಡಿಗಳು, ಶೇಖರಣಾ ಜಾಡಿಗಳು, ಕೊಕ್ಕುಳ್ಳ ಜಾಡಿಗಳು, ಮಡಕೆಗಳು ಹಾಗೂ ಇನ್ನೂ ಅನೇಕ ವಿಧ ಉಪ-ವಿಧಗಳ ಮಡಕೆಗಳು ಕಂಡು ಬಂದಿವೆ. ಇವುಗಳಲ್ಲೆಲ್ಲಾ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಬಳಸುತ್ತಿದ್ದ ಒಂದು ಮಡಕೆಯ ವಿಧವೆಂದರೆ ಅಗಲ ಬಾಯಿಯ ಬಟ್ಟಲು.

ಈ ಬಟ್ಟಲುಗಳಿಗೆ ಸಾಧಾರಣ 3 ರಿಂದ 5 ಸೆಂ.ಮೀ ವ್ಯಾಸವುಳ್ಳ ದುಂಡಗೆ ದಪ್ಪವಾದ ತಳ. ಇದರ ಮೇಲೆ, ಮೇಲೆ ಹೋದಂತೆಲ್ಲಾ ಅಗಲವಾಗುವ ಮೈ. ತುದಿಯಲ್ಲಿ ಯಾವುದೇ ಅಲಂಕರಣವಿಲ್ಲದ ಏಣು. ಬಟ್ಟಲಿನ ಮೈ ಕೂಡ ಸಾಧಾರಣ ನಯವಾಗಿ, ಹೊಳಪಿಲ್ಲದ ಕಂದು-ಕೆಂಪು ಬಣ್ಣದ್ದು. ಈ ರೀತಿಯ ಬಟ್ಟಲುಗಳು ಹಾಗೂ ಬಟ್ಟಲಿನ ಚೂರುಗಳು ಸಹಸ್ರಾರು ಸಂಖ್ಯೆಯಲ್ಲಿ ದೊರೆತಿವೆ. ಹೀಗಾಗಿ ಇವು ದೈನಂದಿನ ಬಳಕೆಯ, ಅತೀ ಸರಳರೀತಿಯ, ಕಡಿಮೆ ಬೆಲೆಯ, ಪಾನೀಯ ಮತ್ತು ತಿಂಡಿ ಸೇವಿಸುವ, ಬಟ್ಟಲುಗಳಾಗಿರಬೇಕು. ಈ ರೀತಿಯ ಬಟ್ಟಲುಗಳು ಕರ್ನಾಟಕದ ಎಲ್ಲಾ ಆದಿಚಾರಿತ್ರಿಕ ನೆಲೆಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ದೊರೆಯುವುದರಿಂದ, ಅವುಗಳ ಉಪಸ್ಥಿತಿ ಹಲವುಬಾರಿ, ಸಂಸ್ಕೃತಿಗಳ ಅಂದಾಜು ಕಾಲ ನಿರ್ಧರಿಸುವ ನಿಟ್ಟಿನಲ್ಲೂ ಸಹಕಾರಿಯಾಗಿವೆ.

ಮಡಕೆಗಳ ಮತ್ತೊಂದು ವಿಧವೆಂದರೆ ಜಾಲರಿ ಬಟ್ಟಲುಗಳು, ಜಾಲರಿ ಬೌಲ್‌ಗಳು, ವಾಟಿಗಳು, ಮುಚ್ಚುಳಗಳು ಇತ್ಯಾದಿ. ಅನೇಕ ಸಂಖ್ಯೆಯಲ್ಲಿ ವಿವಿಧ ಗಾತ್ರದ ರಂಧ್ರಗಳನ್ನು ಹೊಂದಿರುವ ಮಡಕೆಗಳು, ಉತ್ತಮ ಹಾಗೂ ಸಾಮಾನ್ಯ

ಗುಣಮಟ್ಟದಲ್ಲಿ ದೊರೆತಿವೆ. ಇವಲ್ಲದೆ ಪನ್ನೀರು ದಾನಿಗಳು, ಅವುಗಳ ಕಂಠ, ಬಾಯಿ, ಹೊಟ್ಟೆ ಭಾಗಗಳು ನೂರಾರು ಸಂಖ್ಯೆಯಲ್ಲಿ ದೊರೆತಿವೆ. ಪಾತ್ರೆಗಳ, ಕುಂಭಗಳ, ಜಾಡಿಗಳ ಕೊಕ್ಕುಗಳು ಸಹ ವಿವಿಧ ರೀತಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ. ಇವೆಲ್ಲವನ್ನೂ ಗಮನಿಸಿದಾಗ ಆ ಕಾಲದ ಎಲ್ಲಾ ಗೃಹೋಪಯೋಗಿ ಪಾತ್ರೆ ಪಡಗಗಳು ಇನ್ನಿತರ ಬಹು ಉಪಯೋಗಿ ವಸ್ತುಗಳನ್ನೂ ಮಣ್ಣಿನಲ್ಲಿ ತಯಾರಿಸಿ ಬಳಸುತ್ತಿದ್ದರು ಎಂದು ತಿಳಿಯುತ್ತದೆ. ಲೋಹದ ಬಳಕೆ ಹೆಚ್ಚಿ ಅದು ಹೆಚ್ಚು ಜನಪ್ರಿಯವೂ, ಸುಲಭ್ಯವೂ ಆದ ಮೇಲೆ ಮಡಕೆಗಳ ಉಪಯೋಗ ಕಡಿಮೆಯಾಗಿ, ಕುಂಬಾರಿಕೆಯ ಕಲೆಯೇ ಅವನತಿಯ ಹಾದಿ ಹಿಡಿಯಿತು.

ಬನವಾಸಿಯಲ್ಲಿ ದೊರೆತಿರುವ ಮಡಕೆಗಳಲ್ಲಿ ಹೆಚ್ಚಿನ ಭಾಗ ಕೆಂಪು ಮಡಕೆಗಳು. ಏಕೆಂದರೆ ಇವು ಬಣ್ಣದಲ್ಲಿ ಆಕರ್ಷಕ ಮತ್ತು ತಯಾರಿಕೆಯಲ್ಲಿ ಸುಲಭ ಮತ್ತು ಕೊಳ್ಳಲು ಖರ್ಚೂ ಹೆಚ್ಚಿಲ್ಲ. ಗಾಢ ಕೆಂಪು, ತಿಳಿ ಕೆಂಪು, ಕಂದು ಕೆಂಪು ಮಡಕೆಗಳು ಸಿಕ್ಕಿವೆ. ಇವುಗಳು ನಾಜೂಕಾಗಿವೆ ಹಾಗೂ ಸಾಧಾರಣವೂ ಆಗಿವೆ. ದೊಡ್ಡ ಮಡಕೆಗಳು ಜಾಡಿಗಳು ಈ ಬಣ್ಣದಲ್ಲಿ ಕಡಿಮೆ.

ಕಪ್ಪು–ಕೆಂಪು ಮಡಕೆಗಳು ಹೆಚ್ಚಾಗಿ ಕೆಳಗಿನ ಸ್ತರಗಳಲ್ಲಿ ದೊರೆತಿವೆ. ಇವು ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವ ಮಡಕೆಗಳು. ಇವುಗಳಲ್ಲಿ ನಾಜೂಕಾದ ವಿಧಗಳು ಕಾಣಬರುತ್ತವೆ. ಜಾಡಿಗಳು, ಸಣ್ಣ ಸಣ್ಣ ತಂಬಿಗೆ, ಬಟ್ಟಲು, ವಾಟಿ, ತಟ್ಟೆ, ಮುಚ್ಚುಳ, ಇತ್ಯಾದಿ ಈ ವಿಧಗಳಲ್ಲುಂಟು. ಈ ವಿಧದಲ್ಲಿ 'ರೂಲೆಟೆಡ್' ತಟ್ಟೆಗಳು ಕೆಲವು ಸಂಖ್ಯೆಯಲ್ಲಿ ಮಾತ್ರ ಕಾಣುತ್ತವೆ, 'ರೂಲೆಟೆಡ್' ತಟ್ಟೆಗಳು ನಮ್ಮ ಪ್ರವೃತ್ತಿಗೆ ಹೇಳಿ ಮಾಡಿಸಿದುವಲ್ಲ. ಇದರಲ್ಲಿನ ಚುಕ್ಕೆಗಳ, ಕಚ್ಚುಗಳ ಆಳ ಗುರುತುಗಳಲ್ಲಿ ತಿಂದ ಆಹಾರ ಶೇಖರಣೆಯಾಗುತ್ತದೆ. ತೊಳೆದು ಶುಭ್ರಮಾಡುವುದು ಕಷ್ಟ. ಹೀಗಾಗಿ ಜನರು ಇದನ್ನು ಹೆಚ್ಚು ಬಳಸದಿರುವುದಕ್ಕೆ ಕಾರಣವಿದೆ.

ಕಪ್ಪು ಬಣ್ಣದ ಮಡಕೆಗಳು ಕಡಿಮೆ ಸಂಖ್ಯೆಯಲ್ಲಿ ದೊರೆತಿವೆ. ಇವುಗಳು ಒರಟು ಮಡಕೆಗಳು. ದುಂಡಾದ ಮಡಕೆಗಳು, ಬಾಯಗಲದ ಬಟ್ಟಲುಗಳು, ವಾಟಿಗಳು, ಮುಚ್ಚುಳಗಳು ಕಾಣಬರುತ್ತವೆ. ಇವುಗಳಲ್ಲಿ ಕೆಲವು ಮಾತ್ರ ನಾಜೂಕಾಗಿವೆ.

ಔತ್ತರೇಯ ಹೊಳಪಿನ ಕಪ್ಪು ಮಡಕೆಯು ('ಎನ್.ಬಿ.ಪಿ') ಅಥವಾ 'ನಾರ್ದರ್ನ್ ಬ್ಲಾಕ್ ಪಾಲಿಷ್ಡ್ ವೇರ್' ಎಂದು ಕರೆಯಲ್ಪಡುವ ಉತ್ತರ ಭಾರತದ ಜನಪ್ರಿಯ ಮಡಕೆ. ಇದರ ವಿವರಣೆಯನ್ನು ವಿಸ್ತಾರವಾಗಿ ಮೇಲೆ ತಿಳಿಸಿದೆ. ಇದು ಬಹಳ ಶುದ್ಧವಾದ, ಗಂಗಾನದಿ ಪಾತ್ರದ ಜೇಡಿಮಣ್ಣಿನಿಂದ ತಯಾರಿಸಿ, ಚೆನ್ನಾಗಿ ಸುಟ್ಟು ತಯಾರಿಸಿದ ಮಡಕೆ. ಇದು ಬಹಳ ಗಟ್ಟಿ, ಜೊತೆಗೆ ಇದರ ಹೊಳಪೂ ಸಹ ಅಸಾಧಾರಣ. ದಕ್ಷಿಣ ಭಾರತದ ಕೆಲವಾರು ಪ್ರಾಚೀನ ನಿವೇಶನಗಳಲ್ಲಿ ಇದು ದೊರೆತಿದೆ. ಇದರ ಉಪಸ್ಥಿತಿ ಆ ನೆಲೆಯು ಉತ್ತರ ಭಾರತದೊಂದಿಗೆ ಸಾಂಸ್ಕೃತಿಕ ಸಂಬಂಧವನ್ನು ಹೊಂದಿತ್ತೆಂದು ಸೂಚಿಸುತ್ತದೆ. ಕರ್ನಾಟಕದ ಸನ್ನತಿಯಲ್ಲೂ ಸಹ ಈ ರೀತಿಯ ಮಡಕೆ ಸಾಕಷ್ಟು ಸಂಖ್ಯೆಯಲ್ಲಿ ದೊರೆತಿದೆ. ಸನ್ನತಿ, ಚಕ್ರವರ್ತಿ ಅಶೋಕ ಮೌರ್ಯನೊಂದಿಗೆ ನೇರಸಂಪರ್ಕದಲ್ಲಿದ್ದುದು ಚಾರಿತ್ರಿಕ ಸತ್ಯ. ಅಶೋಕನೊಂದಿಗೆ ಕರ್ನಾಟಕಕ್ಕೆ ವಲಸೆ ಬಂದ ಬೌದ್ಧ ಭಿಕ್ಷುಗಳು ತಮ್ಮೊಂದಿಗೆ ಈ ವಿಧದ ಮಡಕೆಗಳನ್ನು ಅಂದರೆ ಭಿಕ್ಷಾಪಾತ್ರೆಗಳನ್ನು ತಂದಿರುವುದೂ ಸಹಜ. ಈ ಮಡಕೆಗಳು ಎಷ್ಟು ಅಪರೂಪ ಮತ್ತು ಪವಿತ್ರವಾಗಿದ್ದವು ಎಂದರೆ ಆಂಧ್ರ ಪ್ರದೇಶದ ಕೆಲವು ಬೌದ್ಧ ನಿವೇಶನಗಳಲ್ಲಿ ದೊರೆತಿರುವ ಈ ಜಾತಿಯ ಭಿಕ್ಷಾ ಪಾತ್ರೆಗಳ ತುಣುಕುಗಳಲ್ಲಿ, ಕೆಲವನ್ನು ತೂತು ಕೊರೆದು ಲೋಹದ ಪಟ್ಟಿಗಳ ಮೂಲಕ ಮತ್ತೆ 'ರಿವೆಟ್' ಮಾಡಿ ಸೇರಿಸಿ ಬಳಸಿದ್ದಾರೆ. ರಿಪೇರಿ ಮಾಡಿ ಬಳಸಿರುವ ಮಡಕೆ ಎಂದರೆ ಪ್ರಾಯಶಃ ಇದೊಂದೇ ನಿದರ್ಶನ ಎನ್ನಬಹುದು. ಔತ್ತರೇಯ ಹೊಳಪಿನ ಮಡಕೆಗೆ ದಕ್ಷಿಣದಲ್ಲಿ ಎಷ್ಟು ಪ್ರಾಶಸ್ತ್ಯವಿತ್ತು, ಭಾವನಾತ್ಮಕ ಸಂಬಂಧವಿತ್ತು ಎಂಬ ಅಂಶ ಈ ನಿದರ್ಶನದಿಂದ ಸ್ಪಷ್ಟವಾಗುತ್ತದೆ.

ಔತ್ತರೇಯ ಹೊಳಪಿನ ಮಡಕೆ, ಬನವಾಸಿಯಲ್ಲಿ ದೊರೆತಿರುವುದು ಕೇವಲ ಒಂದು ಸಣ್ಣಚೂರು. ಇದು ಬೌದ್ಧ ಭಿಕ್ಷುಗಳ, ಭಿಕ್ಷಾಪಾತ್ರೆಯ ಅನಿರ್ದಿಷ್ಟಾಕಾರದ ಭಾಗವಾಗಿರಲೂಬಹುದು. ಆದರೂ ಸಹ ಇದರ ಇರುವಿಕೆಯೇ ಈ ಸ್ಥಳದ ಒಂದು ವಿಶೇಷತೆ ಎನ್ನಬಹುದು. ಬನವಾಸಿಗೆ ಅಶೋಕ ಚಕ್ರವರ್ತಿ ಬೌದ್ಧ ಭಿಕ್ಷು ರಕ್ಷಿತನನ್ನು ಕಳುಹಿಸಿದನೆಂದು ಬೌದ್ಧ ದಾಖಲೆಗಳು ಹೇಳುತ್ತವೆ. ಹೀಗಾಗಿ ಈ ರೀತಿಯ ಮಡಕೆಗಳು ಬೌದ್ಧಭಿಕ್ಷುಗಳೊಂದಿಗೆ ಬನವಾಸಿಗೆ ಬಂದಿರಬಹುದು.

ಸುಟ್ಟ ಮಣ್ಣಿನ ಬೊಂಬೆಗಳು :

ಬನವಾಸಿಯ ಉತ್ಖನನದಲ್ಲಿ ಸುಮಾರು ಸಂಖ್ಯೆಯಲ್ಲಿ ಸುಟ್ಟ ಮಣ್ಣಿನ ಬೊಂಬೆಗಳ ತುಣುಕುಗಳು ಸಿಕ್ಕಿವೆ. ಇವುಗಳಲ್ಲಿ ಕೇವಲ ಒಂದು ಮಾತ್ರ ಸ್ವಲ್ಪ ಸುಸ್ಥಿತಿಯಲ್ಲಿದೆ. ಸ್ತ್ರೀ ಪುರುಷ ವಿಗ್ರಹಗಳು ಪ್ರಾಣಿಪಕ್ಷಿಗಳು ಈ ಮಣ್ಣಿನ ಬೊಂಬೆಗಳ ವಸ್ತು-ವಿಷಯ. ಈ ಬೊಂಬೆಗಳ ಎತ್ತರ ಹೆಚ್ಚೆಂದರೆ 10 ಸೆಂ.ಮೀ. ಬೊಂಬೆಗಳನ್ನು ಅಚ್ಚಿನಿಂದ ತಯಾರಿಸುತ್ತಿದ್ದರು ಸಮಪಾರ್ಶ್ವಗಳ ಬೊಂಬೆಯ ಎರಡು ಭಾಗಗಳನ್ನು ಕೂಡಿಸಿ ಈ ಬೊಂಬೆಗಳನ್ನು ತಯಾರಿಸುತ್ತಿದ್ದರು. ಇವುಗಳ ಒಳಭಾಗ ಟೊಳ್ಳು. ಕೆಂಪು ವರ್ಣದ ನುಣುಪು ಹೊಳಪನ್ನುಳ್ಳ ಈ ಬೊಂಬೆಗಳಲ್ಲಿ ಹಲವಾರು ಸುಂದರ ಕೃತಿಗಳಿವೆ. ನಮಗೆ ದೊರೆತ ಒಂದು ಸ್ತ್ರೀ ಬೊಂಬೆ ಭಾರತದಲ್ಲಿ ದೊರೆತ ಸುಂದರ ಮಣ್ಣಿನ ಬೊಂಬೆಗಳಲ್ಲಿ ಒಂದು ಎಂದು ಖ್ಯಾತಿಗಳಿಸಿದೆ. ಇದು ಪ್ರಾಯಶಃ ಒಂದು ಯಕ್ಷಿಯ ಬೊಂಬೆ. ಮೇಲ್ಭಾಗ ನಗ್ನ. ಕೆಳಭಾಗ ವಸ್ತ್ರದಿಂದ ಮುಚ್ಚಿದೆ. ಸುಂದರ ಮುಖ, ನೀಳಕೇಶ, ಹಸನ್ಮುಖವನ್ನು ಹೊಂದಿದೆ. ಕುಂಡಲಗಳು, ಹಾರ, ಬಳೆಗಳು ಇವಳು ಧರಿಸಿರುವ ಆಭರಣಗಳು. ಕಾಲಿನಭಾಗ ನಾಶವಾಗಿದೆ. ಇದೇ ರೀತಿಯ ಇನ್ನೊಂದು ಕುಳಿತಿರುವ ಪುರುಷ ಶಿಲ್ಪ. ಭಗ್ನವಾದ ಬೊಂಬೆಗಳ ಕಾಲುಗಳು, ಕೈಗಳು, ಮುಂತಾದುವು ವಿವಿಧ ಸ್ತರಗಳಲ್ಲಿ, ಬೇರೆ ಬೇರೆ ಗುಂಡಿಗಳಲ್ಲಿ, ದೊರಕಿವೆ.

ಮಣಿಗಳು :

ಉತ್ಖನನದಲ್ಲಿ ಸಾಕಷ್ಟು ಪ್ರಮಾಣದಲ್ಲಿ ವಿವಿಧಾಕೃತಿಯ, ವಿವಿಧ ಮಾಧ್ಯಮದಲ್ಲಿ ತಯಾರಿಸಿದ ಮಣಿಗಳು ದೊರಕಿದವು. ಈ ಮಣಿಗಳನ್ನು ಅರೆ ಪ್ರಶಸ್ತ ಕಲ್ಲುಗಳಿಂದ, ಸುಟ್ಟ ಮಣ್ಣಿನಿಂದ, ಗಾಜಿನಿಂದ ತಯಾರಿಸಲಾಗಿದೆ.

ದುಂಡನೆಯ, ಉದ್ದನೆಯ, ಪೀಪಾಯಿ ಆಕಾರದ, ಚಪ್ಪಟೆಯ, ಬಹುಮುಖದ ಮಣಿಗಳು ದೊರಕಿದವು. ಕಾರ್ನೇಲಿಯನ್, ಅಗೇಟ್, ಜಾಸ್ಪರ್, ಕ್ರಿಸ್ಟಲ್, ಲ್ಯಪಿಸ್-ಲಸೂಲಿ, ಬಳಪದ ಕಲ್ಲು ಮುಂತಾದ ಶಿಲೆಗಳಿಂದ ತಯಾರಿಸಿದ ಮಣಿಗಳು ಇವುಗಳಲ್ಲಿವೆ. ಸುಟ್ಟ ಮಣ್ಣಿನ ಮಣಿಗಳು ಸಹ ವಿವಿಧ ಆಕಾರಗಳಲ್ಲಿವೆ. ಗಾಜಿನ ಮಣಿಗಳೂ ಇವೆ. ಈ ಎಲ್ಲಾ ರೀತಿಯ ಮಣಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆತು ಬನವಾಸಿ ಒಂದು ಮಣಿ ಕೈಗಾರಿಕೆಯ ಕೇಂದ್ರವಾಗಿತ್ತೆಂಬುದನ್ನು ಸೂಚಿಸುತ್ತದೆ.

ಬನವಾಸಿಯ ಮಣಿ ಕೈಗಾರಿಕೆ/ಉದ್ದಿಮೆಯ ಸಂಕೇತವೆನಿಸುವಂತೆ ಉತ್ಖನನದಲ್ಲಿ ಬಳಪದ ಕಲ್ಲಿನಲ್ಲಿ ತಯಾರಿಸಿದ ಮಣಿ ತಯಾರಿಕೆಯ ಅಚ್ಚೊಂದರ ಒಂದು ಪಾರ್ಶ್ವ ಮಾತ್ರ ದೊರೆತಿದೆ. ಬನವಾಸಿ-6 ಗುಂಡಿಯಲ್ಲಿ ಇದು ದೊರೆಯಿತು. ಇದರ ಅಳತೆ 5.6x4.2x1.4 ಸೆಂ.ಮೀ. ಚೌಕಾಕಾರದ ಈ ಅಚ್ಚಿಗೆ ಎರಡು ಮುಖಗಳಿವೆ. ಎರಡೂ ಮುಖಗಳಲ್ಲಿ ವಿವಿಧಾಕೃತಿಯ ಮಣಿಗಳ, ತೂಬುಗಳ, ತಾಯಿತದ ರೀತಿಯ ಅರ್ಧಪಾರ್ಶ್ವವನ್ನು ಮಾತ್ರ ಕೊರೆಯಲಾಗಿದೆ. ಈ ವಿವಿಧ ವಿನ್ಯಾಸಗಳು ಆ ಕಾಲದ ಹಿಟ್ಟು-ಕಲ್ಲಿನ ಮಣಿಗಳ ತಯರಿಕಾ ವಿಧಾನವನ್ನೂ, ಕಸುಬನ್ನೂ ನಿರೂಪಿಸುತ್ತದೆ. ಈ ಮುದ್ರೆಯ ಮತ್ತೊಂದು ವಿಶೇಷತೆ ಎಂದರೆ ಇದರ ಒಂದು ತೆಳು ಪಾರ್ಶ್ವ ಮುಖದಲ್ಲಿ. ಅಶೋಕ ಬ್ರಾಹ್ಮೀ ಲಿಪಿಯಲ್ಲಿ, ಎರಡು ಸ್ಪಷ್ಟವಾದ ಅಕ್ಷರಗಳನ್ನು ಕೊರೆದಿದೆ. ಈ ಅಕ್ಷರಗಳು 'ರಾ ಹ' ಎಂದಿವೆ. ಈ ಮುದ್ರೆಯನ್ನು ತಲೆಕೆಳಗು ಮಾಡಿದರೆ ಈ ಅಕ್ಷರಗಳು 'ಖಾ ರ' ಎಂದೂ ಸಹ ಓದಬಹುದಾಗಿದೆ. ಹೀಗಾಗಿ ಇದರ ಅರ್ಥ ಅಸ್ಪಷ್ಟ. ಬರವಣಿಗೆಯ ದಿಕ್ಕನ್ನು ನಿರ್ಧರಿಸುವುದು ಕಷ್ಟ. ಏನೇ ಆಗಲಿ ಈ ಲಿಪಿಯ ಲಕ್ಷಣಗಳು, ಕ್ರಿಸ್ತ ಪೂರ್ವದ ಶತಮಾನಕ್ಕೆ ಸೇರುವುದರಿಂದ ಇದರ ಚಾರಿತ್ರಿಕ ಮೌಲ್ಯ ಬಹಳಷ್ಟಿದೆ ಎನ್ನಬಹುದು.

ಬಳೆಯ ಚೂರುಗಳು :

ತಾಮ್ರ, ದಂತ, ಗಾಜು, ಶಂಖ ಇತ್ಯಾದಿ ಮಾಧ್ಯಮಗಳಲ್ಲಿ ತಯಾರಿಸಿದ ಬಳೆಗಳ ಚೂರುಗಳು ಸಾಕಷ್ಟು ಸಂಖ್ಯೆಯಲ್ಲಿ ಉತ್ಖನನದಲ್ಲಿ ದೊರೆತವು. ಆದರೆ ಇವುಗಳೆಲ್ಲವೂ ಬಹಳ ತ್ರುಟಿತವಾಗಿರುವುದರಿಂದ ಇವುಗಳ ಸಂಪೂರ್ಣ ಲಕ್ಷಣಗಳನ್ನು ತಿಳಿಯುವುದು ಅಸಾಧ್ಯ. ಈ ಬಳೆಗಳಲ್ಲಿ ಕೆಲವು ಸರಳವಾಗಿವೆ, ಸಾಮಾನ್ಯವಾಗಿವೆ. ಕೆಲವು ಆಕರ್ಷಕ ಚಿತ್ತಾರಗಳನ್ನೊಳಗೊಂಡಿವೆ. ಗಾಜಿನ ಬಳೆಗಳಲ್ಲಿ ಹಸಿರು, ನೀಲಿ, ಕೆಂಪು, ಹಳದಿ ವರ್ಣಗಳು ಕಾಣುತ್ತವೆ.

ಹೆಂಚುಗಳು :

ಸುಟ್ಟ ಮಣ್ಣಿನ ಹೆಂಚುಗಳು ಅಪಾರ ಸಂಖ್ಯೆಯಲ್ಲಿ ಉತ್ಖನನದಲ್ಲಿ ದೊರೆತವು. ಪ್ರಾಚೀನ ಕಾಲದಲ್ಲಿ ಹೆಂಚು ತಯಾರಿಕೆ ಉದ್ಯಮ ಬಹಳ ಉತ್ತಮ ಸ್ಥಿತಿಯಲ್ಲಿತ್ತು. ಕಾರಣ ಇದಕ್ಕೆ ಇದ್ದ ಬೇಡಿಕೆ. ಆ ಕಾಲದ ಹೆಂಚಿನ ಆಕಾರವೇ ಒಂದು ವಿಶೇಷ ರೀತಿಯದು. ಇವುಗಳ ದೇಹಭಾಗ ಚಪ್ಪಟೆಯಾಗಿರುತ್ತದೆ. ಮುನ್ತುದಿ ಲಾಳಾಕಾರವಾಗಿ, ಜೋಡಿ ಲಾಳಾಕಾರವಾಗಿ, ತ್ರಿಕೋನಾಕಾರವಾಗಿ ಅಥವಾ ಚೌಕಾಕಾರವಾಗಿ ಇರುತ್ತದೆ. ಹಿನ್ತುದಿ ಚೌಕಾಕಾರವಾಗಿದ್ದು, ಅದರ ಸುಮಾರು 1–2 ಸೆಂ.ಮೀ ಉದ್ದವನ್ನು ಸಮಕೋನದಲ್ಲಿ ಬಾಗಿಸಿರುತ್ತಾರೆ. ಕಾರಣ ಇದನ್ನು ಹೆಂಚಿನ ಪಟ್ಟಿಯ ಮೇಲೆ ಜಾರದಂತೆ ಕೂರಿಸುವುದೇ ಆಗಿರುತ್ತದೆ. ಈ ಹೆಂಚುಗಳ ಸಾಮಾನ್ಯ ಉದ್ದ 25 ಸೆಂ.ಮೀ. ಅಗಲ 12ಸೆಂ.ಮೀ. ದಪ್ಪ ಸು. 1 ಸೆಂ.ಮೀ. ಸಾಮಾನ್ಯವಾಗಿ ಮೇಲ್ಮೈ ಒರಟಾಗಿರುತ್ತದೆ. ಬಣ್ಣ ತಿಳಿಗೆಂಪು ಅಥವಾ ಕಂದು ಕೆಂಪು.

ನಾಣ್ಯಗಳು :

ಬನವಾಸಿಯ ಉತ್ಖನನದಲ್ಲಿ ಹಲವಾರು ನಾಣ್ಯಗಳು ದೊರೆತವು. ಇವುಗಳು ವಿವಿಧ ಕಾಲಮಾನಗಳಿಗೆ ಸೇರಿದವಾಗಿವೆ. ಇವುಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ ಮುದ್ರಾಂಕಿತ ('ಪಂಚ್ ಮಾರ್ಕ್ಡ್') ನಾಣ್ಯ. ಇದಲ್ಲದೆ ಶಾತವಾಹನ, ಶಾತವಾಹನ ಸಾಮಂತರಾದ ಮಹಾರಠಿ, ಚುಟು ವಂಶದವರ ನಾಣ್ಯಗಳು, ಮೈಸೂರು ಅರಸರ ನಾಣ್ಯ, ಈಸ್ಟ್ ಇಂಡಿಯಾ ಕಂಪೆನಿಯ ನಾಣ್ಯಗಳು ದೊರೆತವು. ಇವಲ್ಲದೆ ಸ್ಥಳೀಯರ ಸಂಗ್ರಹಣೆಯಲ್ಲಿ ಬನವಾಸಿಯಲ್ಲಿ ದೊರೆತ ಅನೇಕ ರೀತಿಯ, ವಿಧದ ನಾಣ್ಯಗಳಿವೆ. ಪ್ರಸ್ತುತ, ಉತ್ಖನನದಲ್ಲಿ ದೊರೆತ ಮುಖ್ಯ ನಾಣ್ಯಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ.

'ಪಂಚ್ ಮಾರ್ಕ್ಡ್' ನಾಣ್ಯ : ಬನವಾಸಿಯ ಉತ್ಖನನ ಗುಂಡಿ–6 ರಲ್ಲಿ ಮುದ್ರಾಂಕಿತ ಅಥವಾ 'ಪಂಚ್‌ಮಾರ್ಕ್ಡ್' ನಾಣ್ಯ ದೊರೆಯಿತು. ಈ ನಾಣ್ಯ ಬೆಳ್ಳಿಯದು. ಈ ಗುಂಡಿಯಲ್ಲಿ ಕಂಡು ಬಂದ ಚೈತ್ಯಾಲಯದ ಪಾಯದ ಕೆಳಗಿನ ಹತ್ತನೆಯ ಪದರದಲ್ಲಿ ಈ ನಾಣ್ಯ ದೊರೆತದ್ದರಿಂದ ಈ ನಾಣ್ಯಕ್ಕೆ ಹೆಚ್ಚು ಮಹತ್ವ. ಕರ್ನಾಟಕದಲ್ಲಿ 'ಪಂಚ್‌ಮಾರ್ಕ್' ನಾಣ್ಯಗಳೇ ವಿರಳ. ಅದರಲ್ಲೂ ಉತ್ಖನನದಲ್ಲಿ ನಿರ್ದಿಷ್ಟ ಪದರವೊಂದರಲ್ಲಿ ಇದು ದೊರೆತಿದೆ ಎಂದರೆ ಇದಕ್ಕೆ ಇನ್ನೂ ಹೆಚ್ಚಿನ ಮಹತ್ವ. 'ಪಂಚ್‌ಮಾರ್ಕ್' ನಾಣ್ಯಗಳು, ಉತ್ತರ ಭಾರತದಲ್ಲಿ ಅಪಾರ ಸಂಖ್ಯೆಯಲ್ಲಿ ದೊರೆತಿವೆ. ಅಲ್ಲಿ ಅವುಗಳು ಕ್ರಿ.ಪೂ. 6ನೇ ಶತಮಾನದಿಂದ ಹಿಡಿದು ಕ್ರಿ. ಪೂರ್ವದ ಪ್ರಾರಂಭದವರೆಗೂ ಚಾಲ್ತಿಯಲ್ಲಿ ಇದ್ದವು. ದಕ್ಷಿಣ ಭಾರತದಲ್ಲಿ ಇವು ದೊರೆತರೆ ಅದು ದಕ್ಷಿಣಕ್ಕು ಉತ್ತರಕ್ಕೂ ಆ ಕಾಲದಲ್ಲಿ ಇದ್ದ ಸಂಬಂಧದ ಪ್ರತೀಕವೆನ್ನಬಹುದು. ಬನವಾಸಿ, ಅಶೋಕನ ಕಾಲಕ್ಕಾಗಲೇ ಪ್ರಸಿದ್ಧವಾಗಿದ್ದ ಪಟ್ಟಣ. ಈ ಕಾರಣದಿಂದಾಗಿ ಅಶೋಕನು ಬನವಾಸಿಗೆ ಬೌದ್ಧ ಭಿಕ್ಷುಗಳನ್ನು ಧರ್ಮಪ್ರಚಾರಕ್ಕಾಗಿ ಕಳುಹಿಸಿದ. ಈ ನಾಣ್ಯಗಳು ಬೌದ್ಧ ಭಿಕ್ಷುಗಳ ಮೂಲಕವೂ ಬಂದಿರಬಹುದು. ಆದರೆ ವ್ಯಾಪಾರ ವಹಿವಾಟಿನ ಮೂಲಕ ಬಂದಿದೆ ಎನ್ನುವುದೇ ಹೆಚ್ಚು ಸೂಕ್ತ. 'ಪಂಚ್‌ಮಾರ್ಕ್' ನಾಣ್ಯಗಳು ಉತ್ಖನನದ ಗುಂಡಿಯ ಪದರಗಳಲ್ಲಿ, ಕರ್ನಾಟಕದ ಚಂದ್ರವಳ್ಳಿ, ವಡಗಾಂವ್ ಮಾಧವಪುರ ಮತ್ತು ಸನ್ನತಿಗಳಲ್ಲಿ ದೊರೆತಿವೆ. ಏನೇ ಆಗಲಿ ಬನವಾಸಿಯ ಪ್ರಾಚೀನತೆಯನ್ನು ಮೌರ್ಯಪೂರ್ವ ಕಾಲಕ್ಕೆ ಕೊಂಡೊಯ್ಯುವ ಏಕೈಕ ಭೌತಿಕ ಸಾಕ್ಷ್ಯ ಈ ನಾಣ್ಯ ಎನ್ನಬಹುದು.

ಪ್ರಸ್ತುತ 'ಪಂಚ್‌ಮಾರ್ಕ್' ನಾಣ್ಯ ಆಗಲೇ ಹೇಳಿದಂತೆ ಬೆಳ್ಳಿಯದು. ಇದರ ಆಕಾರ ಚೌಕವಾಗಿದೆ. ಇದರ ವಿಸ್ತೀರ್ಣ 18ಥ15 ಮಿ.ಮೀಟರ್. ಇದು ಒಂದು ಮಿ.ಮೀ. ದಪ್ಪವಾಗಿದೆ. ಇದರ ತೂಕ–3.13 ಗ್ರಾಂ. ಇದರ ಮುಮ್ಮುಖದಲ್ಲಿ ಐದು ಚಿನ್ಹೆಗಳಿವೆ. ಎಲ್ಲವೂ ಮುದ್ರೆಯ ರೂಪದಲ್ಲಿದೆ. ಸೂರ್ಯ (ಅರ್ಧಮಾತ್ರ ಕಾಣುತ್ತದೆ) ಒಂದು ಪ್ರಾಣಿ (ಅನಿರ್ದಿಷ್ಟ) ಒಂದು ವೃತ್ತ (ಚಂದ್ರ?) ಮತ್ತೊಂದು ಅಸ್ಪಷ್ಟ, ಕೊನೆಯದು ಮೂರು ಅಂಡಾಕೃತಿಯ ಸಾಲು.

ಶಾತವಾಹನರ ನಾಣ್ಯಗಳು : ಇವೆಲ್ಲವೂ ಸೀಸದ ನಾಣ್ಯಗಳು. ಬನವಾಸಿ–6 ಪದರ 5 ರಲ್ಲಿ ದೊರೆತ ಒಂದು ನಾಣ್ಯ 1.9 ಸೆಂ.ಮೀ ವಿಸ್ತೀರ್ಣದ ದುಂಡು ನಾಣ್ಯ. ತೂಕ 8.3. ಗ್ರಾಂಗಳು. ಮುಮ್ಮುಖ– ನಿಂತಿರುವ ಸಿಂಹ, ಸುತ್ತಲೂ ಅಸ್ಪಷ್ಟ ಬರವಣಿಗೆ ಇದೆ. ಹಿಮ್ಮುಖ– ಸಂಪೂರ್ಣ ಅಳಿಸಿದೆ.

ಎರಡನೆಯ ನಾಣ್ಯ : ಬನವಾಸಿ–6, ಪದರ–6, ವ್ಯಾಸ–1.8 ಸೆಂ.ಮೀ., ತೂಕ–4.4 ಗ್ರಾಂಗಳು. ಮುಮ್ಮುಖ– ಬೆಟ್ಟದ ಸಂಕೇತ, ಸುತ್ತಲೂ ಬ್ರಾಹ್ಮೀ ಲಿಪಿಯಲ್ಲಿ 'ರಾಞೋ ಗೋತಮೀ ಪುತ...ಯಣ' ಎಂದು ಬರೆದಿದೆ. ಹಿಮ್ಮುಖ– ಬೇಲಿಯ ಒಳಗೆ ಮರ ಮತ್ತು ಬೆಟ್ಟದ ಸಂಕೇತ (ವೃಕ್ಷ ಚೈತ್ಯ).

ಮೂರನೆಯ ನಾಣ್ಯ : ಬನವಾಸಿ–8, ಪದರ–3, ವ್ಯಾಸ–1.7 ಸೆಂ.ಮೀ., ತೂಕ–2.3 ಗ್ರಾಂಗಳು. ಮುಮ್ಮುಖ– ನಿಂತಿರುವ ಗೂಳಿ, ಅಳಿಸಿಹೋಗಿರುವ ಬ್ರಾಹ್ಮೀ ಅಕ್ಷರಗಳು. ಹಿಮ್ಮುಖ– ಸ್ಪಷ್ಟವಾದ 'ಉಜ್ಜಯಿನಿ' ಸಂಕೇತ.

ಮಹಾರಠಿ ನಾಣ್ಯ : ಬನವಾಸಿ–2, ಪದರ–5, ವ್ಯಾಸ–2.8 ಸೆಂ.ಮೀ., ತೂಕ–9.6 ಗ್ರಾಂ. ಮುಮ್ಮುಖ– ನಿಂತಿರುವ ಗೂಳಿ, ಬ್ರಾಹ್ಮೀ ಶಾಸನ 'ಸಡಕಣ....ಮಹಾರಠಿಸ'. ಹಿಮ್ಮುಖ– ಬೇಲಿಯೊಳಗೆ ಮರ (ವೃಕ್ಷ ಚೈತ್ಯ), ಸ್ಪಷ್ಟವಾಗಿ ಕಾಣುವ ಎಲೆಗಳು, ಎರಡು ಹಂತದ ಬೇಲಿ.

ಚುಟುನಾಣ್ಯ : ಎರಡು ನಾಣ್ಯಗಳು ದೊರೆತವು. ಎರಡೂ ಸೀಸದ ನಾಣ್ಯಗಳು. ನಾಣ್ಯ–1. ಬನವಾಸಿ–2 ಪದರ–5, ವ್ಯಾಸ–2.8 ಸೆಂ.ಮೀ., ತೂಕ–11.9 ಗ್ರಾಂ, ದಪ್ಪ 2 ಮಿ.ಮೀ. ಮಮ್ಮುಖ– ಮೂರು ಹಂತದ ಬೆಟ್ಟ, ಬ್ರಾಹ್ಮೀಶಾಸನ 'ರಾಞೋಮುಳಾನಂದಸ'. ಹಿಮ್ಮುಖ– ಬೇಲಿಯೊಳಗಿನ ಮರ (ವೃಕ್ಷ ಚೈತ್ಯ), ಎರಡೂ ಕಡೆ ಬಾವುಟಗಳು, ಚೌಕವಾದ ಬೇಲಿ, ತ್ರಿರತ್ನ ಚಿಹ್ನೆ.

ನಾಣ್ಯ–2. ವ್ಯಾಸ–2.4 ಸೆಂ.ಮೀ., ತೂಕ–7.2 ಗ್ರಾಂಗಳು, ದಪ್ಪ–1.5 ಮಿ.ಮೀ. ಮುಮ್ಮುಖ– ಬೆಟ್ಟ, ಬ್ರಾಹ್ಮೀ ಶಾಸನ '....ನೋಮುಳಾನಂದಸ'.

ಉತ್ಖನನದಲ್ಲಿ ದೊರೆತ ಇತರ ನಾಣ್ಯಗಳು ನಂತರದ ಕಾಲದವು. ಹಾಗೂ ಅವುಗಳಿಗೆ ಯಾವುದೇ ಚಾರಿತ್ರಿಕ ಮಹತ್ವವಿಲ್ಲದಿರುವುದರಿಂದ ಅವುಗಳನ್ನು ಇಲ್ಲಿ ವಿವರಿಸಿಲ್ಲ.

ಇದುವರೆಗೆ ಬನವಾಸಿಯಲ್ಲಿ ಡಾ॥ ಶೇಷಾದ್ರಿಯವರ ನಿರ್ದೇಶನದಲ್ಲಿ 1970 ಮತ್ತು 1971 ರಲ್ಲಿ ನಡೆದ ಪುರಾತತ್ವ ಉತ್ಖನನಗಳ ಒಂದು ಸಂಕ್ಷಿಪ್ತ ಸಮೀಕ್ಷೆಯನ್ನು ನೀಡಿದ್ದೇನೆ. ಹೆಚ್ಚಿನ ವಿವರಗಳಿಗೆ 'ಎಕ್ಸವೇಷನ್ಸ್ ಎಟ್ ಬನವಾಸಿ' ಡಾ. ಎ.ವಿ. ನರಸಿಂಹಮೂರ್ತಿ ಮತ್ತು ಇತರರು ಕೂಡಿ ಬರೆದಿರುವ ಪುಸ್ತಕವನ್ನು ಓದಬಹುದು. ಇದು ಕರ್ನಾಟಕ ಪುರಾತತ್ವ ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು–1997 ರಲ್ಲಿ ಪ್ರಕಟಿಸಿದ ಗ್ರಂಥ. ಲೇಖನ ವಿಪರೀತ ಉದ್ದವಾಗುವುದನ್ನು ತಡೆಯಲು ಕೇವಲ ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ನೀಡಿದ್ದೇನೆ. ಇವಲ್ಲದೆ 1994–95 ರಲ್ಲಿ ಕೇಂದ್ರ ಪುರಾತತ್ವ ಸರ್ವೇಕ್ಷಣ, ನವದೆಹಲಿ, ಬೆಂಗಳೂರು ಕೇಂದ್ರವು ಉತ್ಖನನ ನಡೆಸಿತು. ಅದರ ವಿವರಗಳೂ ಸಹ ಅಲ್ಲಲ್ಲಿ ಪ್ರಕಟಗೊಂಡಿವೆ. ಅವುಗಳನ್ನೂ ಸಹ ನೋಡಬಹುದು. 1970–71 ರಲ್ಲಿ ನಡೆಸಿದ ಉತ್ಖನನದಲ್ಲಿ ನಾನು ಭಾಗಿಯಾಗಿದ್ದೆ. ಅಲ್ಲದೆ 1973 ರಲ್ಲಿ ಮತ್ತೆ ಪುರಾತತ್ವ ಸಮೀಕ್ಷೆ ನಡೆಸಲು ಬನವಾಸಿಯಲ್ಲಿದ್ದೆ. ಆ ಸಮಯದಲ್ಲಿ ಬನವಾಸಿಯ ಮಧುಕೇಶ್ವರ ದೇವಾಲಯದ ಮೊಕ್ತೇಸರ್ ಎಂ.ಸಿ.ವಡೆಯರ್‌ರವರು, ಸ್ಥಳೀಯರಾದ ಶ್ರೀ ದಾ.ರಾ.ಭಟ್ಟರು, ಶ್ರೀ ಗಣಪತಿ ದೀಕ್ಷಿತ್ ರವರು ಹಾಗೂ ಇನ್ನೂ ಅನೇಕರ ಮಧುರ ಮೈತ್ರಿಯ ಸಹವಾಸ ಇನ್ನೂ ನನ್ನ ಮನಸ್ಸಿನಲ್ಲಿ ಸ್ಥಿರವಾಗಿ ನಿಂತಿದೆ. ಅವರೆಲ್ಲರಿಗೂ ನನ್ನ ನಮನಗಳನ್ನು ಸಲ್ಲಿಸಿ ಈ ಲೇಖನವನ್ನು ಮುಕ್ತಾಯಮಾಡುತ್ತೇನೆ. ಶ್ರೀಯುತ ಲಕ್ಷ್ಮೀಶ ಹೆಗ್ಗಡೆ, ಶಿರಸಿ ಅವರು ಒತ್ತಾಯ ಮಾಡಿ ನನ್ನಿಂದ ಈ ಲೇಖನವನ್ನು ಬರೆಸಿರುತ್ತಾರೆ. ಅವರಿಗೂ ಸಹ ನಾನು ಚಿರಋಣಿ.

❑

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಹಿಳಾ ಶಿಕ್ಷಣ 1900 ರಿಂದ 1947 (ಸ್ವಾತಂತ್ರ್ಯ ಪೂರ್ವದಲ್ಲಿ)

– ಡಾ. ಹೆಚ್.ಎಸ್. ಉಷಾರಾಣಿ

ಕರ್ನಾಟಕ ರಾಜ್ಯ ಏಕೀಕರಣಕ್ಕೆ ಮುನ್ನ ಬಾಂಬೆ ಪ್ರಾಂತಕ್ಕೆ ಸೇರಿದ್ದ ಬಿಜಾಪುರ, ಬೆಳಗಾಂ, ಧಾರವಾಡ ಮತ್ತು ಉತ್ತರಕನ್ನಡ ಜಿಲ್ಲೆಯಲ್ಲಿನ ವಿದ್ಯಮಾನಗಳನ್ನು ಮೈಸೂರು ಸಂಸ್ಥಾನದ ಜನರಿಗೆ ತಿಳಿಯುವ ಕುತೂಹಲವಿದೆ.ಅದರಲ್ಲಿ ಉತ್ತರ ಕನ್ನಡ ಜಿಲ್ಲೆ ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿ ನಾಡು.ಈ ಜಿಲ್ಲೆ ಕದಂಬರು, ಹೊಯ್ಸಳರು, ವಿಜಯನಗರದರಸರು, ಸ್ವಾದಿ ಅರಸರು ಮತ್ತು ಕೆಳದಿ ನಾಯಕರ ಆಳ್ವಿಕೆಯನ್ನು ಕಂಡಿತ್ತು.ಬ್ರಿಟಿಷರ ಕಾಲದಲ್ಲಿ ಬಾಂಬೆ ಪ್ರಾಂತಕ್ಕೆ ಸೇರಿದ್ದು ಪರಕೀಯರ ನಿಯಂತ್ರಣಕ್ಕೊಳಪಟ್ಟಿತ್ತು. 1857–58 ರಲ್ಲಿ ಬಾಂಬೆ, ಮದ್ರಾಸ್ ಮತ್ತು ಕಲ್ಕತ್ತಾಗಳಲ್ಲಿ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಿದ್ದವು. ಅಂದ ಮೇಲೆ ಬ್ರಿಟಿಷರ ಮತ್ತು ಸ್ಥಳೀಯರ ಶ್ರದ್ಧೋತ್ಸಾಹಗಳಿಂದ ಶಿಕ್ಷಣ ಅಭಿವೃದ್ಧಿಯ ಪಥದತ್ತ ಸಾಗಿತ್ತೇ? ಈ ದಿಸೆಯಲ್ಲಿ ಲಭ್ಯವಿರುವ ಆಕರ ಸಾಮಗ್ರಿಗಳನ್ನು ಬಳಸಿ, ಈ ಜಿಲ್ಲೆಯ ಮಹಿಳಾ ಶಿಕ್ಷಣದ ಬೆಳವಣಿಗೆಯನ್ನು ಪರಿಶೀಲಿಸುವುದೇ ಪ್ರಸ್ತುತ ಪ್ರಬಂಧದ ಉದ್ದೇಶ.

ಭೌಗೋಳಿಕವಾಗಿ ಕರಾವಳಿ ಮತ್ತು ಮಲೆನಾಡು ಎಂಬ ಎರಡು ಭಾಗಗಳನ್ನೊಳಗೊಂಡಿರುವ ಈ ಜಿಲ್ಲೆಗೆ ಅದರದೇ ಆದ ಇತಿಮತಿಗಳಿರುವುದು ಸಹಜ.ಶಿರಸಿ, ಸಿದ್ಧಾಪುರ, ಮುಂಡಗೋಡು, ಯಲ್ಲಾಪುರ, ಹಳಿಯಾಳ ಮತ್ತು ಸೂಪಾ ಘಟ್ಟದ ಮೇಲಿನ ತಾಲೂಕುಗಳು.ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ, ಕಾರವಾರ ಘಟ್ಟದ ಕೆಳಗಿನ ತಾಲೂಕುಗಳು.ಹೀಗಿರಲು ಬ್ರಿಟಿಷ್ ಸರ್ಕಾರ ಈ ಜಿಲ್ಲೆಯ ಶಿಕ್ಷಣದ ಜವಾಬ್ದಾರಿ ಕೈಗೆತ್ತಿಕೊಳ್ಳುವ ಮುನ್ನ ಪ್ರತಿ ದೊಡ್ಡ ಗ್ರಾಮಗಳಲ್ಲಿ ಶಾಲೆಗಳಿದ್ದವು.ಈ ಶಾಲೆಗಳನ್ನು ಶೆನ್ವಿ ಬ್ರಾಹ್ಮಣ ನಿರ್ವಹಿಸುತ್ತಿದ್ದ.ಈ ಶಾಲೆಗಳಿಗೆ ಪ್ರವೇಶ ಪಡೆಯುತ್ತಿದ್ದ ಬಾಲಕರು 15 ವರ್ಷಕ್ಕೂ ಕೆಳಗಿನವರಾಗಿದ್ದರು[1]. ಇಲ್ಲಿ ಬಾಲಕಿಯರಿಗೆ ಅವಕಾಶ ಇರಲಿಲ್ಲ.

ಜನಸಂಖ್ಯೆಯಲ್ಲಿನ ಮಹಿಳೆಯರಿಗಾಗಿ ಸರ್ಕಾರ ಆಸಕ್ತಿ ವಹಿಸಿರಲಿಲ್ಲವೇ? ಎಂಬ ಪ್ರಶ್ನೆ ಸಂಶೋಧಕರಲ್ಲಿ ಮೂಡುತ್ತದೆ.ಹೌದು 1865–66 ರ ವರೆಗೆ ಬಾಲಕಿಯರಿಗಾಗಿ ಯಾವುದೇ ಶಾಲೆಗಳು ಇರಲಿಲ್ಲ. 1866–67 ರಲ್ಲಿ ಬಾಲಕಿಯರಿಗಾಗಿ ಶಿರಸಿ ಮತ್ತು ಕುಮಟಾಗಳಲ್ಲಿ ಶಾಲೆಗಳು ತೆರೆಯಲ್ಪಟ್ಟವು. 45 ಹೆಸರು ನೋಂದಾಯಿಸಲ್ಪಟ್ಟಿದ್ದು, ಸರಾಸರಿ ಶೇ.45 ಹಾಜರಾತಿ ಇರುತ್ತಿತ್ತೆಂದು ದಾಖಲಾಗಿದೆ[2]. 1867–68 ರಲ್ಲಿ ಬಾಲಕಿಯರಿಗಾಗಿ 4 ಶಾಲೆಗಳಿದ್ದು, 131 ಹೆಸರು ನೋಂದಾಯಿಸಲ್ಪಟ್ಟಿದ್ದು ಸರಾಸರಿ 98 ಹಾಜರಾತಿ ಇತ್ತು.ನಾಲ್ಕು ವರ್ಷಗಳ ತರುವಾಯ 1871–72 ರಲ್ಲಿ ಶಾಲೆಗಳ ಸಂಖ್ಯೆ ಏರಿಕೆಯಾಗಿದ್ದು, 195 ಹೆಸರುಗಳಿದ್ದು 117 ರಷ್ಟು ಸರಾಸರಿ ಹಾಜರಾಗುತ್ತಿದ್ದರು. ಆದರೆ 1872 ರಲ್ಲಿ ಹಾಜರಾತಿ ಕೊರತೆಯಿಂದಾಗಿ ಒಂದು ಶಾಲೆ ಮುಚ್ಚಲ್ಪಟ್ಟು ಉಳಿದ ನಾಲ್ಕು ಶಾಲೆಗಳು ಮುಂದುವರೆದು 179 ಹೆಸರು ಸೇರಿಸಲ್ಪಟ್ಟು 122 ಹಾಜರಾತಿ ಇತ್ತೆಂದು ಹೇಳಲಾಗಿದೆ.ಅಲ್ಲದೆ 1880–81ರಲ್ಲಿ ಶಾಲೆಗಳ ಸಂಖ್ಯೆ ನಾಲ್ಕೇ ಇದ್ದರೂ ಹೆಸರು 208ಕ್ಕೆ ಏರಿದ್ದು ಸರಾಸರಿ 147 ಹಾಜರಾತಿ ಇತ್ತೆಂದು ದಾಖಲಾಗಿದೆ[3].

ನಗರ / ಪೇಟೆ ಶಾಲೆಗಳು :ಈ ಜಿಲ್ಲೆಯಲ್ಲಿ 11 ತಾಲೂಕುಗಳಿವೆ. ಆದರೆ ಕೇವಲ ನಾಲ್ಕು ನಗರಗಳಲ್ಲಿ ಬಾಲಕಿಯರ ಶಾಲೆಗಳಿದ್ದವು ಅವು ಹೀಗಿವೆ[4] :

1) ಕಾರವಾರದಲ್ಲಿ 10 ಶಾಲೆಗಳಿದ್ದು 839 ಮಂದಿ ವ್ಯಾಸಂಗ ಮಾಡುತ್ತಿದ್ದರು ಅವರಲ್ಲಿ 633 ರಷ್ಟು ಸರಾಸರಿ ಹಾಜರಾತಿ ಇತ್ತು. ಈ ಹತ್ತು ಸರ್ಕಾರಿ ಶಾಲೆಗಳಲ್ಲಿ 3 ಕನ್ನಡ ಶಾಲೆಗಳಿದ್ದು, 2 ಬಾಲಕರಿಗೆ 1 ಬಾಲಕಿಯರಿಗೆ ಎಂದು ಮೀಸಲಾಗಿತ್ತು. ಇದಲ್ಲದೆ 3 ಮರಾಠಿ ಶಾಲೆಗಳು, 2 ಉರ್ದು ಶಾಲೆಗಳು, ತಲಾ ಒಂದರಂತೆ ಜೈಲು ಶಾಲೆ ಮತ್ತು ಪೋಲೀಸ್ ಶಾಲೆ ಇತ್ತು. ಅಂದು ಹೆಣ್ಣು ಮಕ್ಕಳು ಶಿಕ್ಷಣಕ್ಕಾಗಿ ಸರ್ಕಾರ ಖರ್ಚು ರೂ.3.

2) ಕುಮಟಾದಲ್ಲಿ 4 ಶಾಲೆಗಳಿದ್ದು 449 ಹೆಸರು ನೋಂದಾಯಿಸಿದ್ದರೂ ಸರಾಸರಿ ಹಾಜರಾತಿ 315 ರಷ್ಟಿತ್ತು. ಈ 4 ಶಾಲೆಗಳಲ್ಲಿ 3 ಬಾಲಕರಿಗೆ, 1 ಬಾಲಕಿಯರಿಗೆಂದು ತೆರೆಯಲಾಗಿತ್ತು. ಈ ಭಾಗದ ಬಾಲಕಿಯರ ಶಿಕ್ಷಣದ ಖರ್ಚಿಗೆಂದು ರೂ.6 ನ್ನು ನಿಗದಿಪಡಿಸಲಾಗಿತ್ತು. ಪ್ರಾಯಶಃ ನೋಂದಾಯಿತರ ಸಂಖ್ಯೆ ಕಡಿಮೆ ಇದ್ದು ಬಾಲಕಿಯರನ್ನು ಶಿಕ್ಷಣದತ್ತ ಆಕರ್ಷಿಸಲು ಹೆಚ್ಚು ಹಣ ವ್ಯಯ ಮಾಡುತ್ತಿದ್ದಿರಬಹುದು.

3) ಶಿರಸಿಯಲ್ಲಿ 4 ಸರ್ಕಾರಿ ಶಾಲೆಗಳಿದ್ದು 341 ಹೆಸರಿದ್ದರೂ 262 ಸರಾಸರಿ ಹಾಜರಾತಿ ಇತ್ತು. ಈ ಶಾಲೆಗಳನ್ನು ವರ್ಗೀಕರಿಸಿರುವುದು ಈ ರೀತಿ ಇದೆ. 1 ಉರ್ದು ಶಾಲೆ, 1 ದ್ವಿತೀಯ ಶ್ರೇಣಿ ಆಂಗ್ಲೋವರ್ನಾಕ್ಯುಲರ್ ಶಾಲೆ ಮತ್ತು 2 ಕನ್ನಡ ಶಾಲೆಗಳಲ್ಲಿ ತಲಾ ಒಂದು ಬಾಲಕರು ಮತ್ತು ಬಾಲಕಿಯರಿಗಾಗಿ ತೆರೆಯಲ್ಪಟ್ಟಿದ್ದವು.

4) ಹಳೆಯಾಳದಲ್ಲಿ 3 ಸರ್ಕಾರಿ ಶಾಲೆಗಳಿದ್ದು ಆಂಗ್ಲೋ ವರ್ನಾಕ್ಯುಲರ್ ಶಾಲೆ, ಬಾಲಕಿಯರ ಶಾಲೆ ಮತ್ತು ಉರ್ದು ಶಾಲೆಗಳಿದ್ದವು.

ಈ ಜಿಲ್ಲೆ ಪ್ರಜಾ ಸಮುದಾಯದಲ್ಲಿ ಹಿಂದುಗಳು, ಕ್ರೈಸ್ತರು, ಪಾರ್ಸಿಗಳು, ಜೈನರು, ಮಹಮದೀಯರು, ಯಹೂದಿಗಳು, ವ್ಯಾಪಾರಿಗಳು, ಕೃಷಿಕರು, ಕುಶಲಕರ್ಮಿಗಳು, ಹಿಂದುಳಿದ ವರ್ಗದವರು, ಮಹಿಳೆಯರು ಶಿಕ್ಷಣ ಕ್ಷೇತ್ರಕ್ಕೆ ಪಾದಾರ್ಪಣ ಮಾಡಿದರು.ಅದರಲ್ಲೂ 224 ಮಂದಿ ಬಾಲಕಿಯರು ವಿದ್ಯಾರ್ಜನೆಯಲ್ಲಿ ತೊಡಗಿದ್ದರೆಂದು ಹೇಳಲಾಗಿದೆ[5].

ಅಂದು ಅಸ್ತಿತ್ವದಲ್ಲಿದ್ದ 104 ಶಾಲೆಗಳಲ್ಲಿ 78 ಶಾಲೆಗಳು ಕನ್ನಡ ಶಾಲೆಗಳಾಗಿದ್ದು ಅದರಲ್ಲಿ 4 ಶಾಲೆಗಳು ಬಾಲಕಿಯರಿಗಾಗಿ ಶ್ರಮಿಸುತ್ತಿದ್ದವು.ಉಳಿದ 74 ಶಾಲೆಗಳಲ್ಲಿ ಬಾಲಕರಿದ್ದರು[6].

ಈ ಅವಧಿಯಲ್ಲಿ ಯಾವುದೇ ಧನಸಹಾಯ ಪಡೆಯುವ ಖಾಸಗಿ ಶಾಲೆಗಳಿರಲಿಲ್ಲ. ಜಿಲ್ಲೆಯ ಸರ್ಕಾರಿ ಶಾಲೆಗಳು ಅಂದು ದಕ್ಷಿಣ ವಿಭಾಗದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಮತ್ತು ಎಜ್ಯುಕೇಷನಲ್ ಇನ್ಸ್‌ಪೆಕ್ಟರ್‌ನ ಅಡಿಯಲ್ಲಿ ಸ್ಥಳೀಯ ಸಿಬ್ಬಂದಿಗಳಾದ ಡೆಪ್ಯುಟಿ ಎಜುಕೇಷನ್ ಇನ್ಸ್‌ಪೆಕ್ಟರ್‌ನ ಉಸ್ತುವಾರಿಯಲ್ಲಿ ನಿರ್ವಹಿಸಲ್ಪಡುತ್ತಿದ್ದವು. ಈತನಿಗೆ ವರ್ಷಕ್ಕೆ ರೂ.1800 ವೇತನ ನಿಗದಿಪಡಿಸಲಾಗಿತ್ತು. ಉಳಿದ ಶಿಕ್ಷಕರು ಮತ್ತು ಸಹಾಯಕ ಶಿಕ್ಷಕರಿಗೆ ರೂ. 36 ರಿಂದ 1800 ರವರೆಗೆ ವೇತನ ನಿಗದಿಯಾಗಿತ್ತು[7].

ಗ್ರಾಮೀಣ ಶಾಲೆಗಳು : ಪ್ರತಿ 15 ಗ್ರಾಮಗಳಿಗೆ ಒಂದರಂತೆ ಶಾಲೆಗಳಿದ್ದವು. ಒಟ್ಟು 74 ಶಾಲೆಗಳನ್ನು ತೆರೆಯಲಾಗಿತ್ತು.ಪ್ರಾಯಶಃ ಇಲ್ಲಿ ಬಾಲಕಿಯರು ಪ್ರವೇಶ ವಂಚಿತರಾಗಿದ್ದರೆಂದು ತೋರುತ್ತದೆ. ಮಲೆನಾಡಿನಲ್ಲಿ ಒಂದು ಗ್ರಾಮದಿಂದ ಮುಖ್ಯ ರಸ್ತೆ ತಲುಪಲು ಕನಿಷ್ಠ 2 ಕಿ.ಮೀ ಕ್ರಮಿಸುವ ಅಗತ್ಯವಿತ್ತು. ಇಂದಿಗೂ ಇದೆ. ಸಾರಿಗೆ ಕೊರತೆ ಹಿನ್ನೆಲೆಯಲ್ಲಿ ಹೆಣ್ಣು ಮಕ್ಕಳನ್ನು ಈ ಗ್ರಾಮೀಣ ಶಾಲೆಗಳಿಗೆ ಸೇರಿಸುವ ಆಸಕ್ತಿ ಇರಲಿಲ್ಲ.

1881–82 ರವರೆಗಿನ ಶೈಕ್ಷಣಿಕ ಹಿನ್ನೆಲೆಯ ಅಧ್ಯಯನದಿಂದ ಬಾಲಕಿಯರ ಶಾಲೆಗಳು ಅದರ ಸರಾಸರಿ ಹಾಜರಾತಿ ಇತ್ಯಾದಿ ಅಂಶಗಳು ಮನದಟ್ಟಾದವು.1895 ರ ನಂತರ ಕಂಡುಬಂದ ಬಾಲಕಿಯರ ಶೈಕ್ಷಣಿಕ ಬೆಳವಣಿಗೆ ಹೀಗಿದೆ[8]. 1895ರಲ್ಲಿ ಜಿಲ್ಲೆಯಲ್ಲಿ 179 ಶಾಲೆಗಳಿದ್ದು 11,232 ವಿದ್ಯಾರ್ಥಿಗಳಲ್ಲಿ 470 ಬಾಲಕಿಯರು ಸೇರಿದ್ದರು.ಆದರೆ 1900ರಲ್ಲಿ 183 ಶಾಲೆಗಳಿದ್ದಾಗಿಯೂ 10,204 ವಿದ್ಯಾರ್ಥಿಗಳಲ್ಲಿ 430 ಬಾಲಕಿಯರು ಕಂಡುಬಂದಿದ್ದು ಸಂಖ್ಯೆಯಲ್ಲಿ ಇಳಿಮುಖವಾದುದು

ಗೋಚರಿಸುತ್ತದೆ.5 ವರ್ಷಗಳ ತರುವಾಯ ಅಂದರೆ 1905ರಲ್ಲಿ 240 ಶಾಲೆಗಳು ತೆರೆಯಲ್ಪಟ್ಟಿದ್ದು 12,616 ವಿದ್ಯಾರ್ಥಿಗಳಲ್ಲಿ 922 ಬಾಲಕಿಯರು ವಿದ್ಯಾರ್ಜನೆಯಲ್ಲಿ ನಿರತರಾಗಿದ್ದರೆಂಬುದು ಸಂತಸದ ವಿಚಾರ.ಮುಂದೆ 1910 ರಲ್ಲಿ 289 ಶಾಲೆಗಳಿದ್ದು 15,571 ವಿದ್ಯಾರ್ಥಿಗಳಲ್ಲಿ 1,156 ವಿದ್ಯಾರ್ಥಿನಿಯರು ವಿದ್ಯಾಭ್ಯಾಸದಲ್ಲಿ ತೊಡಗಿಸಿಕೊಂಡದ್ದು ಆಶಾದಾಯಕ ಬೆಳವಣಿಗೆ. ಇಷ್ಟಾದರೂ 1901 ರ ಸಾಕ್ಷರತೆ ಸಮೀಕ್ಷೆಯ ಅಂಕಿಅಂಶಗಳ ಪ್ರಕಾರ[9], ಶೇ.8 ರಷ್ಟು ಅಕ್ಷರಸ್ಥರಿದ್ದು ಅದರಲ್ಲಿ ಶೇ.15 ರಷ್ಟು ಪುರುಷರು ಮತ್ತು ಕೇವಲ ಶೇ.1 ರಷ್ಟು ಮಹಿಳೆಯರು ಸಾಕ್ಷರರು ಎಂಬುದು ವಿಷಾದದ ಸಂಗತಿಯೇ ಸರಿ.

ರಾಷ್ಟ್ರೀಯ ಕಾಂಗ್ರೆಸ್‌ನ ಉದಯ, ಬಂಗಾಳದ ವಿಭಜನೆ, ಸ್ವದೇಶಿ ಚಳುವಳಿ ಇತ್ಯಾದಿಗಳ ಅವಧಿಯಲ್ಲಿ ಜಿಲ್ಲೆಯ ಶೈಕ್ಷಣಿಕ ಬೆಳವಣಿಗೆಯ ಸ್ಥೂಲ ಚಿತ್ರ ದೊರೆಯಿತು. ಇನ್ನು ಮುಂದಿನ ಬೆಳವಣಿಗೆಯನ್ನು ಪರಿಶೀಲಿಸೋಣ.

ಕಡ್ಡಾಯ ಶಿಕ್ಷಣ : ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿದ್ದ ಶಿಕ್ಷಣ ಎಲಾ ಸಮುದಾಯಕ್ಕೂ ವಿಸ್ತರಿಸಲ್ಪಟ್ಟು ಸಾರ್ವತ್ರಿಕಗೊಳಿಸುವ ಪರಿಣಾಮವಾಗಿ ಜನರಲ್ಲಿ ಜಾಗೃತಿ ಮೂಡತೊಡಗಿತು. ರಾಷ್ಟ್ರೀಯ ರಂಗದಲ್ಲಿ ಬದಲಾಗುತ್ತಿದ್ದ ಚಟುವಟಿಕೆಗಳನ್ನು ವೀಕ್ಷಿಸಲಾರಂಬಿಸಿದರು. ಈ ದಿಶೆಯಲ್ಲಿ 1918 ರಲ್ಲಿ ಜಾರಿಗೆ ತಂದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ[10]ಯನ್ನು ಜಿಲ್ಲೆಯ ಹಳಿಯಾಳ ಮತ್ತು ಹೊನ್ನಾವರದ ಮುನ್ಸಿಪಲ್ ಬೋರ್ಡ್‌ಗಳು ಜಾರಿಗೊಳಿಸಿದ್ದವು. ತದ ನಂತರ 1947 ರಲ್ಲಿ ಮತ್ತೊಮ್ಮೆ ಈ ಕಾಯ್ದೆಯನ್ನು ಜಾರಿಗೊಳಿಸಲಾಗಿ 7 ರಿಂದ 11 ವರ್ಷದ ಎಳೆಯರನ್ನು ಕಡ್ಡಾಯ ಶಿಕ್ಷಣ ನೀತಿಗೆ ಒಳಪಡಿಸಲು ಶ್ರಮಿಸಲಾಯಿತು. ಅಂದರೆ ಅದುವರೆಗೂ ಆಸಕ್ತರಿಗೆ ಶಾಲೆ ಸೇರುವ ಅವಕಾಶವಿತ್ತೆ ವಿನಃ ಶಿಕ್ಷಣ ಕಡ್ಡಾಯಗೊಳಿಸಿರಲಿಲ್ಲ ಎಂದು ವೇದ್ಯವಾಗುತ್ತದೆ.ವಸ್ತು ಸ್ಥಿತಿ ಹೀಗಿರಲು ವ್ಯವಹಾರ ಕುಶಲರಾಗಿ ಬದುಕಲು ಮಹಿಳೆಯರಿಗೆ ಮನೆಯಲ್ಲೇ ತರಬೇತಿ ನೀಡಲಾಗಿತ್ತೇ ವಿನಃ ಶಾಲೆಯಲ್ಲಿ ಅಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ.

ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್ : 1923ರ ಬಾಂಬೆ ಶಿಕ್ಷಣ ಕಾಯ್ದೆ[11] ಪ್ರಾಥಮಿಕ ಶಾಲೆಗಳನ್ನು ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿತು. ಅದೇ ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್.ಇದರ ಕಛೇರಿ ಕಾರವಾರದಲ್ಲಿತ್ತು.ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ಗುರಿ ಹೊಂದಿತ್ತು. ಹಾಗಾಗಿ 1935–36 ವೇಳೆಗೆ ಪ್ರಾಥಮಿಕ ಶಿಕ್ಷಣ ಪ್ರಸಾರ ಮಾಡಲು 853 ಶಾಲೆಗಳಿದ್ದು 23,465 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು 5776 ಮಂದಿ ಬಾಲಕಿಯರಿದ್ದರು. ಈ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಮುಸ್ಲಿಮರ ಶಿಕ್ಷಣಕ್ಕಾಗಿ ವಿಶೇಷ ಗಮನ ನೀಡಲಾಗಿತ್ತು.ರಾವ್ ಬಹದ್ದೂರ್ ಹೊಸಬಯ್ಯ ನಾಯ್ಕ ಟುಂಡನ್[13] ಅವರು ಹೊನ್ನಾವರದ ಕರ್ಕಿ ಗ್ರಾಮದ ಕೊಪ್ಪಲಗೇರಿಯವರಾಗಿದ್ದು ಹಳೇ ಪೈಕ, ದೀವ ಅಥವಾ ನಾಮದಾರಿ ಜನಾಂಗದವರಾಗಿದ್ದು ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್‌ನ ಚೇರ್ಮನ್‌ರಾಗಿ 12 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದರು.ಹಿಂದುಳಿದ ವರ್ಗಗಳ ಜನರಿದ್ದ ಪ್ರದೇಶದಲ್ಲಿ ಹೊಸದಾಗಿ ಶಾಲೆ ತೆರೆದು ಶಿಕ್ಷಣಕ್ಕೆ ಅವಕಾಶ ಮಾಡಿಕೊಟ್ಟರು.ಡಿಸ್ಟ್ರಿಕ್ಟ್ ಸ್ಕೂಲ್ ಬೋರ್ಡ್‌ನ ಮತ್ತೊಬ್ಬ ಕ್ರಿಯಾಶೀಲ ಸದಸ್ಯರಾಗಿ ಕಾರ್ಯ ನಿರ್ವಹಿಸಿದವರು ಭಟ್ಕಳದ ಎಸ್.ಎಂ.ಸಯ್ಯದ್ ಮೊಹಿದ್ದೀನ್ ಅಂಬಾರಿಯವರು[14]. ಇವರು ನವಾಯತ ಮುಸ್ಲಿಮರು 1931–32 ರ ಅವಧಿಯಲ್ಲಿ ಶಿಕ್ಷಣ ಪ್ರಸಾರಕ್ಕಾಗಿ ಅನುಕೂಲಕರ ಅವಕಾಶ ಹಾಗೂ ಆಸಕ್ತಿ ಮೂಡಿಸುವಲ್ಲಿ ಜನರಿಗೆ ನೆರವಾಗಿದ್ದರು.

ಮೂಲಭೂತ ಶಿಕ್ಷಣ : ಬಾಂಬೆ ಪ್ರಾಂತ 1938 ರಲ್ಲಿ ಪ್ರಾಥಮಿಕ ಶಿಕ್ಷಣದಲ್ಲೇ ಮೂಲಭೂತ ಶಿಕ್ಷಣ ಯೋಜನೆಯನ್ನು[15] ಜಾರಿಗೆ ತಂದಿತು. ಪ್ರಾಥಮಿಕ ಶಿಕ್ಷಕರಿಗೆ ಅಲ್ಪಾವಧಿಯ ತರಬೇತಿಗೂ ಅವಕಾಶ ಕಲ್ಪಿಸಿತು.ಇದರಲ್ಲಿ ಕೈಕೆಲಸ, ನೂಲುವುದು, ನೇಯುವುದು, ಕೃಷಿ ಇತ್ಯಾದಿ ಚಟುವಟಿಕೆಗಳನ್ನು ಅಳವಡಿಸಲಾಗಿತ್ತು.ಇದು ಸ್ವದೇಶಿ ಶಿಕ್ಷಣ ಬೆಂಬಲಿಸುವಂತಿತ್ತು.

ಸ್ಕೌಟ್ಸ್ ಮತ್ತು ಗೈಡ್ಸ್ :ತ್ಯಾಗ ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು ಈ ಚಟುವಟಿಕೆಯ ಮುಖ್ಯ ಗುರಿಯಾಗಿತ್ತು. ಅದರಂತೆ ಎಸ್.ಎಂ.ಕಾಯ್ಕಿಣಿ ಮತ್ತು ಎಸ್.ಡಿ.ಗಾಂವ್‌ಕರ್[16] ಅವರ ಶ್ರಮ ಹಾಗೂ ಸ್ಫೂರ್ತಿಯ ಫಲವಾಗಿ 1922 ರಲ್ಲೇ ಬಾಲಕರಿಗೆ ಸ್ಕೌಟ್ಸ್ ಬಾಲಕಿಯರಿಗೆ ಗೈಡ್ಸ್ ಚಟುವಟಿಕೆ ಪ್ರಾರಂಭವಾಯಿತು.ನಗರ ಪ್ರದೇಶಗಳಲ್ಲಿ ಉಲ್ಲೇಖಿತ ಚಟುವಟಿಕೆಗೆ ಹೆಚ್ಚಿನ ಒಲವು ತೋರಿಸಲಾಗಿತ್ತು ಎಂದರೆ ತಪ್ಪಾಗಲಾರದು.

ಶಿಕ್ಷಕಿಯರ ತರಬೇತಿ ಸಂಸ್ಥೆ : ಸ್ತ್ರೀ ಶಿಕ್ಷಣ ಜನಪ್ರಿಯಗೊಳ್ಳುತ್ತಿದ್ದಂತೆ ತರಬೇತಿ ಪಡೆದ ಶಿಕ್ಷಕಿಯರ ಕೊರತೆ ಎದ್ದು ಕಾಣುತ್ತಿತ್ತು. ಅದನ್ನು ಬಗೆಹರಿಸಲು 1895 ರಲ್ಲಿ ಧಾರವಾಡದಲ್ಲಿ ತರಬೇತಿ ಶಾಲೆಯನ್ನು ತೆರೆಯಲಾಯಿತು[17] ಇದು ರಾಜ್ಯದ ಪ್ರಪ್ರಥಮ ಶಿಕ್ಷಕಿಯರ ತರಬೇತಿ ಸಂಸ್ಥೆ ಎಂಬ ಹೆಗ್ಗಳಿಕೆ ಗಳಿಸಿದೆ.ಜಿಲ್ಲೆಯ ಶಿಕ್ಷಣಾಧಿಕಾರಿಯಾಗಿದ್ದ ರೊದ್ದ ಶ್ರೀನಿವಾಸರಾಯರು ಮತ್ತು ಸಹಸ್ರಬುದ್ದೆಯವರ ಮಾರ್ಗದರ್ಶನದಲ್ಲಿ ಟ್ರೇನಿಂಗ್ ಕ್ಲಾಸ್ ಎಂದು ಹೆಸರು ಪಡೆದು 1903 ರಲ್ಲಿ ಫೀಮೆಲ್ ನಾರ್ಮಲ್ ಸ್ಕೂಲ್ ಎಂಬ ಹೆಸರು ಬಂದಿತು. ಈ ಸಂಸ್ಥೆಗೆ ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೂ ಬ್ರಿಟಿಷ್ ಮಹಿಳೆಯರೇ ಪ್ರಾಂಶುಪಾಲರಾಗಿದ್ದರು. 1908 ರಲ್ಲಿ ಇದಕ್ಕೆ ಮಹಿಳೆಯರ ಸರ್ಕಾರಿ ತರಬೇತಿ ಸಂಸ್ಥೆ ಎಂದು ಹೆಸರಾಯಿತು.

ಮುಲ್ಕಿ ಪರೀಕ್ಷೆ : ಪ್ರಾಥಮಿಕ ಶಿಕ್ಷಣ ಏಳನೇ ತರಗತಿಯವರೆಗೆ ಪಡೆಯಬೇಕಾಗಿತ್ತು. 1 ರಿಂದ 4ನೇ ತರಗತಿಯವರೆಗೆ ಕಿರಿಯ ಪ್ರಾಥಮಿಕ ಶಾಲೆ, 5 ರಿಂದ 7ನೇ ತರಗರಿಯವರೆಗೆ ಹಿರಿಯ ಪ್ರಾಥಮಿಕ ಶಾಲೆ ಅಥವಾ ಮಾಧ್ಯಮಿಕ ಶಾಲೆ ವಿದ್ಯಾಭ್ಯಾಸದ ಕೊನೆಯಲ್ಲಿ ಪಬ್ಲಿಕ್ ಪರೀಕ್ಷೆ ಬರೆಯಬೇಕಾಗಿತ್ತು.ಅದೇ ಮುಲ್ಕಿ ಪರೀಕ್ಷೆ[18], ಈ ಪರೀಕ್ಷೆಯ ಪ್ರಮಾಣ ಪತ್ರ ಹೊಂದಿರುವವರು ಮುಂದಿನ ವಿದ್ಯಾಭ್ಯಾಸಕ್ಕೆ ಅರ್ಹರಾಗಿದ್ದು 8ನೇ ತರಗತಿಗೆ ಪ್ರವೇಶ ಪಡೆಯುತ್ತಿದ್ದರು. ಈ ವೇಳೆಗಾಗಲೇ ವಿದ್ಯಾರ್ಥಿಗಳು ಕನ್ನಡ, ಮರಾಠಿ, ಇಂಗ್ಲೀಷ್, ಗಣಿತ, ಸಮಾಜಶಾಸ್ತ್ರ, ವಿಜ್ಞಾನ, ಭೂಗೋಳ, ಹಿಂದಿ ಹಾಗೂ ದೈಹಿಕ ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಗಳನ್ನು ಅಭ್ಯಾಸ ಮಾಡಿರುತ್ತಿದ್ದರು.

ಪ್ರಾಥಮಿಕ ಶಿಕ್ಷಣ ಮುಗಿಸುವ ವೇಳೆಗೆ ಹೆಚ್ಚಿನ ಮಹಿಳೆಯರು ಸಾಂಸಾರಿಕ ಜೀವನಕ್ಕೆ ಕಾಲಿಡುತ್ತಿದ್ದರು.ಕಾರಣ ಆ ವೇಳೆಗಾಗಲೇ ಪ್ರೌಢಾವಸ್ಥೆಗೆ ಕಾಲಿಡುತ್ತಿದ್ದು, ಗೃಹಸ್ಥಾಶ್ರಮ ಸೇರಲು ಮನೆಯಲ್ಲಿ ತಯಾರಿ ನಡೆಸುತ್ತಿದ್ದರು.ಪುರುಷರಿಗೆ ವೃತ್ತಿಯನ್ನವಲಂಬಿಸುವುದು ಅನಿವಾರ್ಯವಾಗಿತ್ತು.'ಉದ್ಯೋಗಂ ಪುರುಷ ಲಕ್ಷಣಂ' ಎನ್ನುತ್ತಿದ್ದ ಕಾಲವದು.ಉದಾಹರಣೆಗೆ ಮುಲ್ಕಿ ಪರೀಕ್ಷೆಯ ನಂತರ 3 ವರ್ಷ ತರಬೇತಿ ಪಡೆದು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಜೀವನಕ್ಕೆ ಕಾಲಿಟ್ಟು ಸಣ್ಣಪ್ಪ ಗಾಂವಕರ್ ಅವರು ನೌಕರಿಯಲ್ಲಿದ್ದು ಮೆಟ್ರಿಕ್ ಪರೀಕ್ಷೆ ಪಾಸು ಮಾಡುತ್ತಿದ್ದರು. ಅಲ್ಲದೇ ತಮ್ಮ 40ನೇ ವಯಸ್ಸಿನಲ್ಲಿ ಬಿ.ಎ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು.ಅಂದು ವಸ್ತು ಸ್ಥಿತಿ ಹೀಗಿದ್ದು, ಮಹಿಳೆಯರು ಶಿಕ್ಷಣ ಮುಗಿಸುವುದೇ ಕಷ್ಟವಾಗಿದ್ದ ದಿನಗಳು, ಕಾರಣ ದೈಹಿಕವಾಗಿ ಪ್ರೌಢಾವಸ್ಥೆಗೆ ಬರುತ್ತಿದ್ದ ಅವಧಿಯದು. ಅಂದರೆ 7ನೇ ವಯಸ್ಸಿಗೆ ಶಾಲೆಗೆ ಸೇರಿದರೆ 7 ವರ್ಷ ಪ್ರಾಥಮಿಕ ಶಿಕ್ಷಣದ ಶಾಲೆಗೆಹೋಗಬೇಕಾಗಿತ್ತು. ಹಾಗಾಗಿ ಬಾಲಕಿಯರು ಋತುಮತಿಯರಾಗುತ್ತಿದ್ದಂತೆ ಅವರಿಗೆ ಸೂಕ್ತ ವರನನ್ನು ಹುಡುಕಿ ಸಾಂಸಾರಿಕ ಬಂಧನದಲ್ಲಿ ಸಿಲುಕಿಸುವ ಸಿದ್ಧತೆ ಮಾಡುತ್ತಿದ್ದರೇ ವಿನಃ ಯಾವುದೇ ಶಿಕ್ಷಣ ಮುಂದುವರೆಸಲು ಪ್ರೋತ್ಸಾಹಿಸುತ್ತಿರಲಿಲ್ಲ.

1925 ರ ವೇಳೆಗೆ ಜಿಲ್ಲೆಯಲ್ಲಿ ಒಟ್ಟು ತರಬೇತಿ ಪಡೆದ ಪದವಿ ಶಿಕ್ಷಕರಲ್ಲಿ 11 ಮಂದಿಯನ್ನು ಮಾತ್ರ ದಾಖಲಿಸಲಾಗಿದೆ[20]. ಮಹಿಳೆಯರು ಗೃಹ ಶಿಕ್ಷಣದಲ್ಲಿ ಮುಂದುವರೆಯುತ್ತಿದ್ದರಷ್ಟೇ.

ಪ್ರೌಢಶಾಲೆ / ಸೆಕಂಡರಿ ಶಾಲೆ :ಬಾಂಬೆ ಪ್ರಾಂತದಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ 4 ವರ್ಷಕ್ಕೆ ನಿಗದಿಯಾಗಿತ್ತು. ಮುಲ್ಕಿ ಪರೀಕ್ಷೆಯಲ್ಲಿ ಉತ್ತೀರ್ಣರಾದವರು 8ನೇ ತರಗತಿಗೆ ಪ್ರವೇಶ ಪಡೆದು 11ನೇ ತರಗತಿಯವರೆಗೆ ವಿದ್ಯಾರ್ಜನೆಯಲ್ಲಿ ತೊಡಗಬೇಕಾಗಿತ್ತು. 1900 ಕ್ಕೆ ಮುನ್ನ ಕಾರವಾರ ಪ್ರೌಢಶಿಕ್ಷಣದ ಕೇಂದ್ರವಾಗಿತ್ತು.ಬಾಂಬೆ ಪ್ರಾಂತದ ಮಾದರಿಯಲ್ಲಿ ಸರ್ಕಾರಿ ಪ್ರೌಢಶಾಲೆ 1864 ರಲ್ಲ ಕಾರವಾರದಲ್ಲಿ ಬೆಳಕು ಕಂಡಿತು.ಸುಮಾರು 14 ವರ್ಷಗಳ ಕಾಲ ಅಂದರೆ 1878 ರವರೆಗೂ ಅದೊಂದೇ ಶಾಲೆ ಜಿಲ್ಲೆಗೆ ಮಾದರಿಯಾಗಿತ್ತು. ಸ್ಥಳೀಯರ ಶ್ರದ್ಧೋತ್ಸಾಹಗಳಿಂದ 1884 ರಲ್ಲಿ ಆನಂದಾಶ್ರಮ ಶಾಲೆ ಬಂಕಿಕೊಡ್ಲದಲ್ಲೂ ಮತ್ತು ಮಾರಿಕಾಂಬ ಪ್ರೌಢಶಾಲೆ ಸಿರಸಿಯಲ್ಲೂ, 1895 ರಲ್ಲಿ ಸದಾಶಿವಘಡ ಶಾಲೆ ಮತ್ತು 1896 ರಲ್ಲಿ ಜೈಹಿಂದ್ ಎಡ್ವರ್ಡ್ ಶಾಲೆ, ಅಂಕೋಲಾದಲ್ಲೂ ಹಾಗೂ 1897 ರಲ್ಲಿ ಹಿಂದೂ ಪ್ರೌಢಶಾಲೆ, ಕಾರವಾರದಲ್ಲೂ ತೆರೆಯಲ್ಪಟ್ಟವು. ಇವು ಸಹಶಿಕ್ಷಣ ಪ್ರಸಾರ ಮಾಡುತ್ತಿದ್ದವು[21].

ಅದೇ ರೀತಿ ಉನ್ನತ ಶಿಕ್ಷಣದ ಬೇಡಿಕೆ ಪೂರೈಸಲು 1900 ರಿಂದ 1946 ರವರೆಗೂ ಹಲವು ತಾಲೂಕುಗಳಲ್ಲಿ ಪ್ರೌಢಶಾಲೆಗಳು ತೆರೆಯಲ್ಪಟ್ಟವು. ಅವುಗಳ ವಿವರ ಹೀಗಿದೆ[22] : 1905 ರಲ್ಲಿ ಸೇಂಟ್ ಥಾಮಸ್ ಪ್ರೌಢಶಾಲೆ ಮತ್ತು 1930

ರಲ್ಲಿ ನ್ಯೂ ಇಂಗ್ಲೀಷ್ ಹೈಸ್ಕೂಲ್ ಹೊನ್ನಾವರದಲ್ಲೂ, 1908ರಲ್ಲಿ ಗಿಬ್ ಪ್ರೌಢಶಾಲೆ ಕುಮಟಾದಲ್ಲೂ, 1921ರಲ್ಲಿ ಶಿವಾಜಿ ವಿದ್ಯಾಲಯ ಹಳಿಯಾಳದಲ್ಲೂ, 1925ರಲ್ಲಿ ನ್ಯೂ ಹೈಸ್ಕೂಲ್ ಮತ್ತು 1940ರಲ್ಲಿ ಶಿವಾಜಿ ಪ್ರೌಢಶಾಲೆ, 1926ರಲ್ಲಿ ಸೇಂಟ್ ಮೈಕೇಲ್ ಕಾನ್ವೆಂಟ್ ಕಾರವಾರದಲ್ಲೂ, 1935ರಲ್ಲಿ ನ್ಯೂ ಇಂಗ್ಲೀಷ್ ಸ್ಕೂಲ್ ಮತ್ತು 1946ರಲ್ಲಿ ಇಸ್ಲಾಮಿಯಾ ಉರ್ದು ಪ್ರೌಢಶಾಲೆ ಭಟ್ಕಳದಲ್ಲೂ, 1936ರಲ್ಲಿ ಶಿವಾಜಿ ಪ್ರೌಢಶಾಲೆ ಮಜಲಿಯಲ್ಲೂ, 1937ರಲ್ಲಿ ಚೆನ್ನಕೇಶವ ಪ್ರೌಢಶಾಲೆ ಗೋಕರ್ಣದಲ್ಲೂ ಸ್ಥಾಪನೆಯಾದವು.

ಹೀಗೆ ಬಂಗಾಳದ ವಿಭಜನೆ, ಸ್ವದೇಶಿ ಚಳುವಳಿ, ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ, ಕರ ನಿರಾಕರಣ ಚಳುವಳಿ, ಅರಣ್ಯ ಸತ್ಯಾಗ್ರಹ, ಕಾನೂನುಭಂಗ ಚಳುವಳಿ ಇತ್ಯಾದಿ ರಾಷ್ಟ್ರೀಯ ಘಟನೆಗಳು, ಚಳುವಳಿ ಸ್ವರೂಪದಲ್ಲಿ ಹೊರಹೊಮ್ಮುತ್ತಿದ್ದ ಕಾಲಘಟ್ಟದಲ್ಲಿ ಒಂದೆಡೆ ಖಾಸಗಿ ಪ್ರೌಢಶಾಲೆಗಳ ಅಗತ್ಯ ಹೆಚ್ಚಾಗಿ ಕಂಡುಬಂದಿತು. ಮತ್ತೊಂದೆಡೆ ರಾಷ್ಟ್ರಪ್ರೇಮ ಮೂಡಿಸುವ, ಸ್ವಾವಲಂಬನೆಯಡಿಯಲ್ಲಿ ಬದುಕುವ ಜೀವನ ಕಲೆ ಶಿಕ್ಷಣದ ಪ್ರಮುಖ ಗುರಿಯಾಗಿದ್ದು ರಾಷ್ಟ್ರೀಯ ಶಾಲೆಗಳ ಉಗಮಕ್ಕೆ ಪ್ರೇರಣೆ ನೀಡಿದವು.

ರಾಷ್ಟ್ರೀಯ ಶಾಲೆಗಳು :ಬಾಂಬೆ ಪ್ರಾಂತಕ್ಕೆ ಒಳಪಟ್ಟ ಜಿಲ್ಲೆಗಳಲ್ಲಿ ಬ್ರಿಟಿಷರ ನೇರ ಆಡಳಿತವಿತ್ತು. ಯಾವುದೇ ಕಾನೂನುಗಳು ಜಾರಿಗೆ ಬಂದಾಗ ಅದು ದೇಶಿಯರ ಹಕ್ಕನ್ನು ಕಸಿಯಲು ಹೂಡಿರುವ ಕುತಂತ್ರಕ್ಕೆ ಎಂಬುದರ ಅರಿವು ಜನ ಜಾಗೃತಿ ಉಂಟುಮಾಡುವ ಸಲುವಾಗಿ ಹಾಗೂ ಜನರಲ್ಲಿ ರಾಷ್ಟ್ರಪ್ರೇಮ, ಸ್ವದೇಶಿ ಬಳಕೆ ಇತ್ಯಾದಿಗಳ ಬಗ್ಗೆ ಶಿಕ್ಷಣ ನೀಡಲು ರಾಷ್ಟ್ರೀಯ ಶಾಲೆಗಳ ಅಗತ್ಯವನ್ನರಿತ ಎಚ್ಚೆತ್ತ ಸುಶಿಕ್ಷಿತ ಭಾರತೀಯರು ರಾಷ್ಟ್ರೀಯ ಶಾಲೆಗಳನ್ನು ಆರಂಭಿಸಿದರು. ಅವು ಅಧಿಕೃತ ಶಾಲೆಗಳಲ್ಲ. ರಾಷ್ಟ್ರೀಯ ಚಳುವಳಿಗಳಿಗೆ ಜನ ಸ್ಪಂದಿಸಲು ತರಬೇತಿ ನೀಡುವ ಕೇಂದ್ರಗಳಂತಿದ್ದವು.ಊರಿನ ದೇವಾಲಯ, ಪ್ರಮುಖರ ಮನೆ ಚಾವಡಿ, ಇತ್ಯಾದಿಗಳೇ ಈ ಶಾಲೆಗಳ ತಾಣಗಳಾಗಿದ್ದವು.ಧಾರವಾಡ, ಬೆಳಗಾವಿ, ಬಿಜಾಪುರ ಜಿಲ್ಲೆಗಳಲ್ಲಿದ್ದಂತೆ ಈ ಜಿಲ್ಲೆಯಲ್ಲೂ ರಾಷ್ಟ್ರೀಯ ಶಾಲೆಗಳಿದ್ದವು.ಅವು ತಾತ್ಕಾಲಿಕ ಶಿಕ್ಷಣ ಪ್ರಸಾರ ಮಾಡುತ್ತಿದ್ದ ಕೇಂದ್ರಗಳು.ಈ ಹಿನ್ನೆಲೆಯಲ್ಲಿ ಆಲೂರು ವೆಂಕಟರಾಯರು, ಗಂಗಾಧರ ದೇಶಪಾಂಡೆಯವರಂಥ ಉದಾತ್ತಧ್ಯೇಯವಾದಿಗಳಿಂದ ಪ್ರಭಾವಿತರಾದ ಈ ಜಿಲ್ಲೆಯ ವಾಮನ ಅನಂತ ಹೊದ್ಕೆ 1920 ರಲ್ಲಿ ಶಿರಸಿಯ ಗೋಪಾಲಕೃಷ್ಣ ದೇವಸ್ಥಾನದಲ್ಲಿ ರಾಷ್ಟ್ರೀಯ ಶಾಲೆ ಪ್ರಾರಂಭಿಸಿದರು[23]. ಇದು ಕರ್ನಾಟಕದಲ್ಲಿ ಪ್ರಪ್ರಥಮ ರಾಷ್ಟ್ರೀಯ ಶಾಲೆಯಾಗಿತ್ತು.ರಾಷ್ಟ್ರೀಯತೆ ಮೂಡಿಸುವ ಗೀತೆಗಳ ರಚನೆ, ಖಾದಿ ಪ್ರಚಾರ, ಹೆಂಡದಂಗಡಿಗಳ ಮುಂದೆ ಪಿಕೆಟಿಂಗ್, ಖಾದಿ ಭಂಡಾರ ಸ್ಥಾಪನೆ, ನೂಲುವುದು, ನೇಯುವುದು ಮುಂತಾದ ಚಟುವಟಿಕೆಗಳಲ್ಲಿ ತೊಡಗಿತ್ತು.ಬಹುತೇಕ ತಾಲೂಕುಗಳಲ್ಲಿ ರಾಷ್ಟ್ರೀಯ ಶಾಲೆಗಳಿದ್ದವು. ಅವುಗಳಲ್ಲಿ ಶಿರಸಿ, ಸಿದ್ಧಾಪುರ, ಗೋಕರ್ಣ, ಕುಮಟಾ ಮತ್ತು ಅಂಕೋಲೆಗಳಲ್ಲಿನ ಶಾಲೆಗಳು ಹೆಚ್ಚು ಪ್ರಭಾವಶಾಲಿಗಳಾಗಿದ್ದವು.

ಈ ಶಾಲೆಗಳು ತಮ್ಮನ್ನಾಳುವ ವಿದೇಶಿಯರ ಕಾನೂನುಗಳ ವಿರುದ್ಧ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಿದ್ದವು. ಔಪಚಾರಿಕ ಶಿಕ್ಷಣದೊಂದಿಗೆ ಅನೌಪಚಾರಿಕ ಶಿಕ್ಷಣ ನೀಡುವ ಕೇಂದ್ರಗಳಂತಿದ್ದವು. ಉದಾಹರಣೆಗೆ 1921 ರಲ್ಲಿ ಹರಿಯಪ್ಪ ವಾಸುದೇವ ಚಂದ್ರಘಟ್ಟಿಯವರು ಸಿದ್ಧಪುರದಲ್ಲಿ ಶಾಲೆ ಪ್ರಾರಂಭಿಸಿದರು. ಈ ಶಾಲೆ ವಿದ್ಯಾರ್ಥಿನಿಯಾಗಿದ್ದ ಗೃಹಿಣಿ ಸೀತಾಬಾಯಿ ರಾಮಚಂದ್ರ ಮಡಗಾಂವ್‌ಕರ್ ಅವರ ಅನಿಸಿಕೆ[24] ಹೀಗಿದೆ : 'ಆಗ ನಾವೆಲ್ಲ ವಿದ್ಯಾರ್ಥಿಗಳು ಸಿದ್ದೇಶ್ವರ ಮಾಸ್ತರರು ಮತ್ತು ಇನ್ನಿಬ್ಬರು ನಮಗೆ ಓದುಬರಹದ ಜೊತೆಗೆ ವ್ಯಾಯಾಮ, ಆಸನಗಳು, ಈಜುವುದು, ಸೈಕಲ್ ಬಿಡುವುದನ್ನು ಕಲಿಸುತ್ತಿದ್ದರು. ಈ ಶಾಲೆಯ ಬಳಿಕ ಮೆಟ್ರಿಕ್ ಪರೀಕ್ಷೆ ಪಾಸು ಮಾಡಿದವರು ಉಂಟೆಂದು' ಹೇಳಿದ್ದಾರೆ.ಇನ್ನು 1921ರಲ್ಲಿ ಸಿದ್ದಾಪುರ ತಾಲೂಕಿನ ಲಂಬಾಪುರದ ನಾರಾಯಣ ಮಾಸ್ತರರು ತಿಲಕರ ಕೇಸರಿ ಪತ್ರಿಕೆಯ ಲೇಖನಗಳು ಗಾಂಧೀಜಿಯವರ ಭಾಷಣಗಳಿಂದ ತೀವ್ರ ಪ್ರಭಾವಿತರಾಗಿದ್ದು, ಗಾಂಧಿ, ತಿಲಕ್, ಮದನ್ ಮೋಹನ ಮಾಲವೀಯ ಅವರ ಸಲಹೆಯ ಮೇರೆಗೆ ಸಿದ್ಧಾಪುರದಲ್ಲಿ ರಾಷ್ಟ್ರೀಯ ಶಾಲೆ ಸ್ಥಾಪಿಸಿದರು. ಇವರು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯ ಜೊತೆಗೆ ಬಿಡುವಿನ ವೇಳೆಯಲ್ಲಿ ನೂಲುವುದು, ದೇಶದ ಆಗುಹೋಗುಗಳ ಬಗ್ಗೆ ಬರಹ ರೂಪದಲ್ಲಿ ಅವ್ಯಕ್ತಗೊಳಿಸಲು ಲೇಖನ ಬರೆಯುವಂತೆ ಪ್ರೋತ್ಸಾಹಿಸುತ್ತಿದ್ದು, ದೇಶ ಸ್ವಾತಂತ್ರ್ಯದ ಚಿಂತನೆಯತ್ತ ಒಲವು ಮೂಡಿಸಿದರು[25].

ಗೃಹ ನೈರ್ಮಲ್ಯ, ಗುಡಿ ಕೈಗಾರಿಕೆ ಮತ್ತು ಸಾಕ್ಷರತಾ ಪ್ರಚಾರದಲ್ಲಿ ತೊಡಗಿದ್ದವರು ಭಾವಾನಿಬಾಯಿ ಕಾನಗೋಡ್ ಸಿದ್ಧಾಪುರ[26] ಅವರು.ಈಕೆ ಕವಿ ತಿಪ್ಪಯ್ಯ ಮಾಸ್ತರರ ಮಗಳು. ಈಕೆಯ ಶ್ರಮದಿಂದಾಗಿ ಗ್ರಾಮೀಣ ಮಹಿಳೆಯರ ದುಡಿಮೆಗೆ ತಕ್ಕ ಪ್ರತಿಫಲ ದೊರೆಯುವಂತಾಗಿತ್ತು.

ಬ್ರಿಟಿಷ್ ಸರ್ಕಾರದ ವಿರುದ್ಧ ಜಿಲ್ಲೆಯ ಮಹಿಳೆಯರು ಇಂತಹ ಶಾಲೆಗಳ ಚಟುವಟಿಕೆಗಳಿಂದ ಪ್ರಭಾವಿತರಾಗಿ ರಾಷ್ಟ್ರದ ಸಮಸ್ಯೆಗೆ ಸ್ಪಂದಿಸುವುದು ಶ್ಲಾಘನೀಯ.ಕ್ವಿಟ್ ಇಂಡಿಯಾ ಚಳುವಳಿ ನಡೆಯುತ್ತಿದ್ದ ಕಾಲದಲ್ಲಿ ಅಂದರೆ 1942ರಲ್ಲಿ ಹುದಲಿಯ ಖಾದಿ ವಿದ್ಯಾಲಯದಲ್ಲಿ ತಾನು 2 ತಿಂಗಳು ಶಿಕ್ಷಣ ಪಡೆದೆ ಎಂದು ಸಿದ್ಧಾಪುರದ ದುರ್ಗಮ್ಮಯಾನೆ ಪ್ರಭು[27] ತಿಳಿಸಿದ್ದಾರೆ.

ಎಷ್ಟೋ ಮಂದಿ ನಿರಕ್ಷರಕುಕ್ಷಿಗಳಾಗಿದ್ದರೂ, ರಾಷ್ಟ್ರೀಯ ಪೇಮ ಹಾಗೂ ತಮ್ಮ ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ನಿರ್ಲಿಪ್ತರಾಗಿರಲಿಲ್ಲ. ಸಾಮಾಜಿಕವಾಗಿ ಆರ್ಥಿಕವಾಗಿ ತಮ್ಮ ಇರುವಿಕೆಗೆ ಧಕ್ಕೆ ಉಂಟಾಗುವ ಸನ್ನಿವೇಶವನ್ನು ಪ್ರತಿಭಟಿಸುವ ಸಾಮರ್ಥ್ಯ ವ್ಯವಹಾರ ಕುಶಲತೆ ಎಲ್ಲ ಸಮುದಾಯದ ಮಹಿಳೆಯರಲ್ಲಿತ್ತು. ಹಾಲಕ್ಕಿ ಗೌಡತಿಯರು ಕುಮಟಾ, ಅಂಕೋಲಾಗಳಲ್ಲಿ ವ್ಯಕ್ತಪಡಿಸಿದ ವಿರೋಧ, ಶಿರಸಿ ಸಿದ್ಧಾಪುರದಲ್ಲಿ ಹವ್ಯಕ ಮಹಿಳೆಯರ ಪ್ರತಿಭಟನೆ, ಜೈಲು ವಾಸ, ಲಾಠಿ ಪ್ರಹಾರಕ್ಕೆ ಬಲಿಯಾದ ಘಟನೆಗಳು ಮಹಿಳೆಯರ ಸಹಭಾಗಿತ್ವ ಸಾರ್ವಜನಿಕ ಕ್ಷೇತ್ರದಲ್ಲಿದ್ದುದು ಕರ್ನಾಟಕದ ಇತಿಹಾಸದಲ್ಲಿ ಸ್ಮರಣೀಯ.

ವಯಸ್ಕರ ಶಿಕ್ಷಣ : ಜಿಲ್ಲೆಯಲ್ಲಿ ರಾತ್ರಿ ಶಾಲೆಗಳು ವಯಸ್ಕರಿಗಾಗಿ ಪ್ರಾರಂಭವಾಗಿದ್ದವು. ಔಪಚಾರಿಕ ಶಿಕ್ಷಣ ಪಡೆಯಲು ಶಾಲೆಗಳಿಗೆ ಹೋಗಲು ಸಾಧ್ಯವಾಗದೇ ಇರುವವರು ವಯಸ್ಕರ ಶಿಕ್ಷಣ ಕೇಂದ್ರಗಳ ಸೌಲಭ್ಯ ಪಡೆದುಕೊಳ್ಳಬಹುದಿತ್ತು. ಇದರ ಪ್ರಯೋಜನ ಪಡೆದವರು ಪುರುಷರೇ ಎಂಬುದು ವಾಸ್ತವ. ಆದಾಗ್ಯೂ ರಾಷ್ಟ್ರೀಯ ಚಳುವಳಿಯತ್ತ ಸಂಘಟಿಸುವ ಸನ್ನಿವೇಶದಲ್ಲಿ ಮಹಿಳೆಯರು ಈ ಕೇಂದ್ರಗಳಲ್ಲಿ ಸಮಾವೇಶಗೊಳ್ಳಲು ಅವಕಾಶವಿತ್ತೆಂದು ಅಂದಾಜು ಮಾಡಬಹುದು.

ಹಿಂದಿ ಶಿಕ್ಷಣ : ಭಾರತೀಯರನ್ನು ಒಗ್ಗೂಡಿಸುವಲ್ಲಿ ಹಿಂದಿ ಭಾಷೆ ಪ್ರಧಾನ ಪಾತ್ರ ವಹಿಸಿತ್ತು. ಬಹುತೇಕ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಹಿಂದಿ ಕಲಿಸಲಾಗುತ್ತಿತ್ತು. 6 ರಿಂದ 10ನೇ ತರಗತಿಯವರೆಗೆ ಕಡ್ಡಾಯವಾಗಿ ಹಿಂದಿ ಕಲಿಯಬೇಕಾಗಿತ್ತು.ಆದರೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ದ್ವಿತೀಯ ಭಾಷೆಯಾಗಿ ಹಿಂದಿ ಕಲಿಯಬೇಕಾಗಿತ್ತು.

1949 ರವರೆಗೂ ಉನ್ನತ ವ್ಯಾಸಂಗಕ್ಕೆ ಜಿಲ್ಲೆಯಲ್ಲಿ ಯಾವುದೇ ವ್ಯವಸ್ಥೆ ಇರಲಿಲ್ಲ. ಹೆಚ್ಚಿನ ವ್ಯಾಸಂಗಕ್ಕೆ ಧಾರವಾಡಕ್ಕೆ ತೆರಳಬೇಕಾಗಿತ್ತು[28].

ಇದುವರೆಗಿನ ಸ್ವಾತಂತ್ರ್ಯ ಪೂರ್ವದ ಜಿಲ್ಲೆಯ ಮಹಿಳಾ ಶಿಕ್ಷಣದ ಸಮೀಕ್ಷೆಯಿಂದ ಈ ಕೆಳಗಿನಂತೆ ತೀರ್ಮಾನಿಸಬಹುದು.

1) ಭೌಗೋಳಿಕವಾಗಿ ಮಲೆನಾಡಿನ ಭಾಗದ ಜನ ತಮ್ಮ ಹೆಣ್ಣು ಮಕ್ಕಳ ಔಪಚಾರಿಕ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದಂತೆ ಕಂಡುಬರುವುದಿಲ್ಲ. ಗೃಹಕೃತ್ಯ, ಗೃಹನೈರ್ಮಲ್ಯ ಕಾಪಾಡಿದರೆ ಸಾಕು ಗುಡಿಕೈಗಾರಿಕೆಯ ಮೂಲಕ ಜೀವನ ಸಾಗಿಸಬಹುದೆಂಬ ಮನೋಪ್ರವೃತ್ತಿ ಸಮಾಜದಲ್ಲಿ ಬಲವಾಗಿ ಬೇರೂರಿತ್ತು.

ಬದಲಾಗುತ್ತಿದ್ದ ಸಮಾಜದಲ್ಲಿ ಶಿಕ್ಷಣದತ್ತ ಒಲವು ಮೂಡುತ್ತಿದ್ದರೂ ಸಾರಿಗೆ ಕೊರತೆಯಿಂದಾಗಿ ಗ್ರಾಮೀಣ ಶಾಲೆಗಳಿಗೆ ಕೆಲವೊಮ್ಮೆ ಸೇರ್ಪಡೆಯಾಗುವುದು ಅಸಾಧ್ಯದ ಮಾತಾಗಿತ್ತು.

ಸಾಮಾಜಿಕ ಸುಧಾರಣೆಗಳು ಜಾರಿಗೆ ಬರುತ್ತಿದ್ದ ಕಾಲವದು.ಅಕದಾಸ ಗಣಪತಿ ಭಟ್ಟರ ಸಾಮಾಜಿಕ ಕಳಕಳಿಯಿಂದಾಗಿ ಬಾಲ ವಿಧವೆಯರ ಮರುವಿವಾಹ, ಮಹಿಳೆಯರ ಸ್ಥಿತಿಗತಿಗಳಲ್ಲಿ ನವ ಚೈತನ್ಯ ಮೂಡಿಸಿತ್ತು. ಹೀಗಿದ್ದಾಗಿಯೂ 'ಎಷ್ಟೇ ಶಿಕ್ಷಣ ಪಡೆದರೂ ಸೌಟ್ ಹಿಡಿಯುವುದು ತಪ್ಪುವುದಿಲ್ಲ' ಎಂಬ ಧೋರಣೆ ಮಹಿಳೆ ಶಿಕ್ಷಣದಿಂದ ದೂರವಿರುವಂತೆ ಮಾಡಿದ್ದೂ ಹಾಗೆಯೇ ಮತ್ತೊಬ್ಬರ ಮನೆ ಬೆಳಗಲು ಹೊರಡುವ ನಾರಿಗೆ ಅಗತ್ಯವಿರುವಷ್ಟು ಶಿಕ್ಷಣ ನೀಡಿದರೆ ಸಾಕು ಎಂಬ ಹಿರಿಯರ ನಿಲುವು ಆಕೆಯ ಗೃಹ ಶಿಕ್ಷಣಕ್ಕೆ ಸೀಮಿತವಾಗಿರುವಂತೆ ಮಾಡಿತು. ಅಲ್ಲದೆ ಅಂದಿನ ದಿನಗಳಲ್ಲಿ 'ಪಾಲಿಗೆ

ಬಂದದ್ದು ಪಂಚಾಮೃತ' ಎಂಬ ಮಾನಸಿಕ ಸಿದ್ಧತೆ ಮತ್ತು ಸ್ವೀಕೃತಿ ಮಹಿಳೆಯರದ್ದೂ ಆಗಿತ್ತು.ಇಂದಿನಂತೆ 'ನನ್ನ ಆಯ್ಕೆಯಂತೆ ನನ್ನ ಜೀವನ' ಮಹಿಳೆಯದ್ದಾಗಿರಲಿಲ್ಲ.

ಮಹಿಳಾ ಶಿಕ್ಷಣ ಪ್ರಸಾರದಲ್ಲಿ ಬೆರಳೆಣಿಕೆಯಷ್ಟು ಬಾಲಕಿಯರ ಶಾಲೆಗಳಿದ್ದುದು ಒಂದೆಡೆಯಾದಲ್ಲಿ ಶಿಕ್ಷಕಿಯರ ಕೊರತೆಯು ಬಾಲಕಿಯರು ಶಾಲೆಗೆ ಪ್ರವೇಶ ಪಡೆಯಲು ಹಿಂಜರಿಯುವಂತೆ ಮಾಡಿತ್ತು.

ಅಂದು ರಾಷ್ಟ್ರದ ವಿದ್ಯಮಾನಗಳು ಸಮಾಜದಲ್ಲಿ 'ಮಹಿಳೆಯರಿಗೆ ಸಮಾನ ಹಕ್ಕುಗಳ' ಬಗ್ಗೆ ಅರಿವನ್ನುಂಟು ಮಾಡಿದವು. ಗೃಹಿಣಿಯರು ಜಾಗೃತರಾಗಿ ತೀವ್ರ ಪ್ರತಿಭಟನೆ ಉಗ್ರ ಶಿಕ್ಷೆಗು ಮಾನಸಿಕರಾಗಿ ಸಿದ್ಧರಾದುದು ಅವರ ಪ್ರೌಢಿಮೆಯನ್ನು ಪ್ರದರ್ಶಿಸುತ್ತದೆ. ಬದುಕಿನ ಶಿಕ್ಷಣವೇ ನಮ್ಮನ್ನು ಸನ್ನಿವೇಶಕ್ಕನುಗುಣವಾಗಿ ಕಾರ್ಯಪ್ರವೃತ್ತರಾಗಲು ಮಾರ್ಗದರ್ಶನ ಮಾಡಿದೆಯೆಂದು ಹೇಳಿಕೊಂಡಿರುವುದು ಅನೌಪಚಾರಿಕ ಶಿಕ್ಷಣದ ಮಹತ್ವವನ್ನು ಎತ್ತಿ ಹಿಡಿದಿತ್ತು.

ಆಧಾರ ಸೂಚಿ :

1. M.James Campbell Bombay Presidency – Kanara gazetteer , Vol. XV, Part I, Reprint 2003, page 210.
2. M.James Campbell (1) page 211.
3. M.James Campbell (1) page 211.
4. M.James Campbell (1) page 215.
5. M.James Campbell (1) page 213.
6. M.James Campbell (1) page 210.
7. M.James Campbell (1)page 210.
8. Suryanath Kamath (Editor), Uttar Kannada District gazetteer 1985, page 738.
9. Suryanath Kamath (8) page 736.
10. Suryanath Kamath (8) page 738.
11. Suryanath Kamath (8) page 737.
12. Suryanath Kamath (8) page 737.
13. ಟಿ.ಕೆ.ಮಹಮೂದ್ ಉತ್ತರ ಕನ್ನಡ ದರ್ಶನ ಪುಟ 297.
14. ಟಿ.ಕೆ.ಮಹಮೂದ್ (13) ಪುಟ 296.
15. Suryanath Kamath (8) page 737-738.
16. Suryanath Kamath (8) page 763.
17. Suryanath Kamath (Editor) Dharavada District gazetteer 1995, page 696-97.
18. Suryanath Kamath (8) page 737.
19. ಟಿ.ಕೆ.ಮಹಮೂದ್ (13) ಪುಟ 289.
20. Suryanath Kamath (8) page 745.
21. Suryanath Kamath (8) page 745.
22. Suryanath Kamath (8) page 745.
23. ಸೂರ್ಯನಾಥ ಕಾಮತ್ (ಸಂ.) ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ 1, ಪುಟ 206
24. ಸೂರ್ಯನಾಥ ಕಾಮತ್ (23) ಪುಟ 282.
25. ಟಿ.ಕೆ.ಮಹಮೂದ್ (13) ಪುಟ 297.
26. ಸೂರ್ಯನಾಥ ಕಾಮತ್ (23) ಪುಟ 280.
27. ಸೂರ್ಯನಾಥ ಕಾಮತ್ (22) ಸಂಪುಟ 3, ಪುಟ 202.
28. Suryanath Kamath (8) page 751.

ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು

– ಡಾ. ಸುಜಾತಾ ಅಸೋದೆ

1. ಸ್ವಾತಂತ್ರ್ಯ ಚಳುವಳಿಯ ಸ್ವರೂಪ :

"ಐತಿಹಾಸಿಕವಾಗಿ ಉತ್ತರ ಕನ್ನಡ ಜಿಲ್ಲೆಯನ್ನು ನೋಡುವುದಾದರೆ ಅದೊಂದು ಪ್ರಾಗ್ಯೈತಿಹಾಸಿಕ ಹಾಗೂ ಐತಿಹಾಸಿಕ ನೆಲೆಗಳನ್ನು ಒಳಗೊಂಡಿರುವ ಪ್ರದೇಶವಾಗಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಾಂತ ಶಾತವಾಹನರು, ಕದಂಬರು, ಬೋಜರು, ಪಾಂಡ್ಯರು, ಪಲ್ಲವ, ರಾಷ್ಟ್ರಕೂಟರು, ಸೇವುಣರು, ಹೊಯ್ಸಳರು, ವಿಜಯನಗರ ಅರಸರುಗಳು ಆಳ್ವಿಕೆಯನ್ನು ಮಾಡಿದರು. ವಿಜಯನಗರ ಅರಸರು ಹಾಗೂ ಅವರ ಸಾಮಂತರಾದ ಬೀಳಗಿ ಅರಸರುಗಳು ಕೂಡಾ ಆಳ್ವಿಕೆಯನ್ನು ಮಾಡಿದರು. ಆಧುನಿಕ ಕಾಲದಲ್ಲಿ ಬ್ರಿಟಿಷರ ವಿರುದ್ಧ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಉತ್ತರ ಕನ್ನಡ ಜಿಲ್ಲೆಯಾದ್ಯಂತ ಪಾಲ್ಗೊಂಡಿದ್ದರು."[1] ಪ್ರಾಕೃತಿಕ ಸೌಂದರ್ಯದ ಜೊತೆ ಜೊತೆಗೆ ಉತ್ತರ ಕನ್ನಡ ಜಿಲ್ಲೆಯು ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ತನ್ನದೇ ಆದ ಇತಿಹಾಸವನ್ನು ಹುದುಗಿಟ್ಟುಕೊಂಡಿದೆ. ಈ ಸಂದರ್ಭದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಹೋರಾಟದ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

"ಉತ್ತರ ಕನ್ನಡ ಜಿಲ್ಲೆಯ ಚಳುವಳಿಯ ಪ್ರಾದೇಶಿಕ ಸ್ವರೂಪವನ್ನು ಗಮನಿಸುವುದಾದರೆ ಜಿಲ್ಲೆಯು 11 ತಾಲೂಕುಗಳನ್ನು ಒಳಗೊಂಡಿದ್ದು, ಮೂರು ವಿಭಾಗಗಳಾಗಿ ಗುರುತಿಸಲ್ಪಟ್ಟಿದೆ. ಮೊದಲನೆ ವಿಭಾಗ ಕರಾವಳಿ ತೀರ ಪ್ರದೇಶವಾಗಿದ್ದು ಅದು ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ ತಾಲೂಕುಗಳನ್ನು ಒಳಗೊಂಡಿದೆ. ಎರಡನೆಯ ವಿಭಾಗ ಸಹ್ಯಾದ್ರಿ ಅಥವಾ ಘಟ್ಟ ಪ್ರದೇಶವಾಗಿದ್ದು ಅದು ಯಲ್ಲಾಪುರ, ಸಿರಸಿ, ಸಿದ್ಧಾಪುರ ತಾಲೂಕುಗಳನ್ನು ಒಳಗೊಂಡಿದೆ. ಇನ್ನುಳಿದಂತೆ ಮೂರನೆಯ ವಿಭಾಗ ಘಟ್ಟದ ಕೆಳಭಾಗ ಅಥವಾ ಅಂಚಿನ ಪ್ರದೇಶ ಮುಂಡಗೋಡ, ಹಳಿಯಾಳ, ಸೂಪಾ ತಾಲೂಕುಗಳನ್ನು ಒಳಗೊಂಡಿದೆ."[2]

ಉತ್ತರ ಕನ್ನಡ ಜಿಲ್ಲೆಯ ಚಳುವಳಿಯನ್ನು ನೋಡುವುದಾದರೆ ಅದು ಕರಾವಳಿ ತಾಲೂಕುಗಳಾದ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳಗಳಲ್ಲಿ ತೀವ್ರತರವಾಗಿತ್ತು. ಇನ್ನೂ ಘಟ್ಟ ಪ್ರದೇಶದ ತಾಲೂಕುಗಳಾದ ಯಲ್ಲಾಪುರ, ಸಿರಸಿ, ಸಿದ್ಧಾಪುರಗಳಲ್ಲೂ ಕರನಿರಾಕರಣೆಯ ತಿವ್ರತೆಯನ್ನು ಕಾಣಬಹುದು. ಅದೇ ರೀತಿಯಾಗಿ ಘಟ್ಟದ ಕೆಳಭಾಗದಲ್ಲಿರುವ ಹಳಿಯಾಳ, ಸೂಪಾಗಳಲ್ಲಿ ಚಳುವಳಿಯು ನಿಧಾನಗತಿಯಾಗಿರುವುದು ಕಂಡುಬರುತ್ತದೆ "1908 ರಲ್ಲಿ ಸೂಪಾಕ್ಕೆ ಹಳಿಯಾಳ ಎಂದು ನಾಮಕರಣ ನೀಡಲಾಯಿತು ಹಾಗೂ 1948 ರಲ್ಲಿ ಮುಂಡಗೋಡ ತಾಲೂಕಾಗಿ ಮಾರ್ಪಾಡಾಯಿತು. ಇನ್ನುಳಿದಂತೆ ಭಟ್ಕಳ, ಸೂಪಾ ತಾಲೂಕುಗಳು 1960 ರಲ್ಲಿ ರಚನೆಗೊಂಡವು"[3] ಆ ಕಾರಣ ಬಹುಷ್ಯ ಇಲ್ಲಿನ ಚಳುವಳಿಯ ಸ್ಮೃತಿಗಳು ನಿಧಾನವಾಗಿರಬಹುದು, ಇಲ್ಲವೆ ಪ್ರಾದೇಶಿಕ ವಿಭಜನೆಯಿಂದಾಗಿ ಚಳುವಳಿಯ ಸ್ಮೃತಿಗಳು ಇತರ ಪ್ರದೇಶಗಳಿಗೂ ಹಂಚಿಕೆಯಾಗಿರಬಹುದು. ಒಟ್ಟಾರೆಯಾಗಿ ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರಾದೇಶಿಕವಾಗಿ ಹೋರಾಟದ ವ್ಯಾಪಿಸುವಿಕೆಯ ಸ್ವರೂಪದಲ್ಲಿ ಅಸಮತೋಲನ ಕಾಣಿಸಿದರೂ ಕೂಡಾ ಜಿಲ್ಲೆಯ ತಾಲೂಕುಗಳೆಲ್ಲವು ಹೋರಾಟದಲ್ಲಿ ಪಾಲ್ಗೊಂಡಿದ್ದವು.

ಭಾರತದಾದ್ಯಂತ ಜರುಗಿದ ಸ್ವಾತಂತ್ರ್ಯ ಚಳುವಳಿಗಳು ಮುಂಬೈ ಕರ್ನಾಟಕದಾದ್ಯಂತ ಹರಡಿದವು. ಮುಂಬೈ ಕರ್ನಾಟಕದ ಪ್ರದೇಶವಾದ ಉತ್ತರ ಕನ್ನಡ ಜಿಲ್ಲೆಗೂ ಸಹ ವ್ಯಾಪಿಸಿಕೊಂಡವು. ಬಹುಷಹ ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ವಹಿಸಿದ ಪಾತ್ರವೇ ಆಂದೋಲನಕ್ಕೆ ಕಾರಣವಾಯಿತು. ಉತ್ತರ ಕನ್ನಡ ಜಿಲ್ಲೆಯ ಹೋರಾಟಗಾರರು ಗಾಂಧಿಜಿಯವರ ತಂತ್ರಗಳಾದ ಅಸಹಕಾರ, ಕಾನೂನುಭಂಗ್ ಚಳುವಳಿ, ಚಲೇಜಾವ್ ಚಳುವಳಿಗಳನ್ನು ಆಚರಣೆಗೆ ತಂದು ದೇಶಕ್ಕೆ ತಮ್ಮದೇಯಾದ ಕೊಡುಗೆಯನ್ನು ಸಲ್ಲಿಸಿದ್ದಾರೆ.

"ಅದರಲ್ಲೂ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಶಿರಸಿ, ಸಿದ್ಧಾಪೂರ, ಭಟ್ಕಳ, ಕಾರವಾರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು ಗಣನೀಯ ಪ್ರಮಾಣದ ಸೇವೆಯನ್ನು ಸಲ್ಲಿಸಿದ್ದಾರೆ. ಮುಂದುವರೆದು ಕುಮಟಾ, ಯಲ್ಲಾಪುರ, ಹೊನ್ನಾವರ ತಾಲೂಕುಗಳು ಕೂಡಾ ಅಂದೋಲನದಲ್ಲಿ ಭಾಗಿಯಾದವು."[4] ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯ ಸ್ವರೂಪವನ್ನು ಗಮನಿಸಿದಾಗ ಅದು ಗಾಂಧಿಜಿಯವರ ಆದೇಶದಂತೆ ಭಾರತದಾದ್ಯಂತ ಹರಡಿದ ಚಳುವಳಿಯ ಸ್ವರೂಪದ ಮಾದರಿಯದ್ದಾಗಿದೆ.

"ಉತ್ತರ ಕನ್ನಡ ಜಿಲ್ಲೆಯ ಅಸಹಕಾರ ಚಳುವಳಿಗಳು"[5]:

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಅಸಹಕಾರಗಳಾದ ವಿದೇಶಿ ವಸ್ತುಗಳ ಬಹಿಷ್ಕಾರ, ಉಪ್ಪು ಲೀಲಾವು, ಕಾಲೇಜು ಬಹಿಷ್ಕಾರ, ಹುಲ್ಲುಬನ್ನಿ, ಜಂಗಲ್ ಸತ್ಯಾಗ್ರಹ, ದಂತಹ ಚಳುವಳಿಗಳು ನಡೆದವು. ಇವುಗಳಲ್ಲಿ ಹೋರಾಟಗಾರರ ಪಾತ್ರ ಮುಖ್ಯವಾಗಿದ್ದು ಅವರ ವಿವರವನ್ನು ನಿರ್ದಿಷ್ಟವಾಗಿ ಹೋರಾಟಗಾರರ ಸಂಚಿಕೆಯಲ್ಲಿ ತೆಗೆದುಕೊಳ್ಳಲಾಗಿದೆ. ಅದರೊಟ್ಟಿಗೆ ಅಸಹಕಾರ ಚಳುವಳಿಗೆ ಸ್ತ್ರೀಯರು ಕೊಡುಗೆಯನ್ನು ನೀಡಿದ್ದಾರೆ. ಅಸಹಕಾರ ಚಳುವಳಿಯಲ್ಲಿ ಶಿರಸಿ, ಸಿದ್ಧಾಪುರ, ಕುಮಟಾ ಮುಂತಾದ ಜಿಲ್ಲೆಗಳ ಕಾಲೇಜು ವಿದ್ಯಾರ್ಥಿಗಳು ಶಾಲೆಯನ್ನು ಬಹಿಷ್ಕರಿಸಿದರು, ಪಿಕೆಟಿಂಗ್ ನಡೆಸಿದರು. ಹೆಚ್ಚಾಗಿ ಚಳುವಳಿಗಳಲ್ಲಿ ನಾಡವ, ಹವ್ಯಕ, ನಾಮಧಾರಿ ಜನಾಂಗಗಳು ಭಾಗವಹಿಸಿದವು. ಸ್ಥಳೀಯ ದೇವಾಲಯಗಳಲ್ಲಿ ಮುರಲೀಧರ ಮಠ ಅವರು ಸಭೆ ಸೇರಿಸಿ ಉಪ್ಪಿನ ಸತ್ಯಾಗ್ರಹದ ಕುರಿತಾಗಿ ಚರ್ಚಿಸುತ್ತಿದ್ದರು. ಚಳುವಳಿಯಲ್ಲಿ ಸಮುದ್ರದ ಉಪ್ಪನ್ನು ತಂದು ಲೀಲಾವು ಮಾಡಲಾಗುತ್ತಿತ್ತು. ಅರಣ್ಯ ಸತ್ಯಾಗ್ರಹಗಳಲ್ಲಿ ಸ್ತ್ರೀ–ಪುರುಷರ ಪಾತ್ರ ಹಿರಿದಾಗಿದ್ದು ಎಕ್ಕಂಬಿಯ ಶ್ಯಾಮಭಟ್ಟ ಬಿಸಿಲಕೊಪ್ಪ ಹಾಗೂ ಅವರ ಪತ್ನಿ ಸೇರಿಕೊಂಡು ಮರ ಕಡಿದು ಹೋರಾಟ ನಡೆಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಹೋರಾಟಗಾರರು ಹಾಗೂ ಅವರೊಟ್ಟಿಗೆ ಸೀತಾಬಾಯಿ, ಆನಂದಿಬಾಯಿ, ಆನವಟ್ಟಿ ಮುಂತಾದ ಸ್ತ್ರೀಯರು ಭಾಗಿಯಾದರು. ಇನ್ನೂ ಹುಲ್ಲುಬನ್ನಿ ಚಳುವಳಿ ಕೂಡಾ ಸಿರಸಿ, ಸಿದ್ಧಾಪುರ, ಹೊನ್ನಾವರ, ಭಟ್ಕಳ, ಅಂಕೋಲಾಗಳಲ್ಲಿ ತೀವ್ರವಾಗಿತ್ತು. ಅದೇ ರೀತಿಯಾಗಿ ಪಾನ ವಿರೋಧಿ ಚಳುವಳಿಯು ಮುಂಚೂಣಿಯಲ್ಲಿದ್ದು ಸಿರಸಿ, ಸಿದ್ಧಾಪುರ, ಹೊನ್ನಾವರಗಳಲ್ಲಿ 36 ಮಧ್ಯದಂಗಡಿಗಳಲ್ಲಿ, 23 ಮಧ್ಯದಂಗಡಿಗಳು ಮುಚ್ಚಲ್ಪಟ್ಟವು.

"ಉತ್ತರ ಕನ್ನಡ ಜಿಲ್ಲೆಯ ಕರನಿರಾಕರಣ"[6] :

ಸ್ವಾತಂತ್ರ್ಯ ಚಳುವಳಿಯ ಮತ್ತೊಂದು ಘಟ್ಟವೇ 1930 ರ ಕರನಿರಾಕರಣೆ ಚಳುವಳಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯಾದ್ಯಂತ ರೈತರ ಶೋಷಣೆ ನಿರತವಾಗಿತ್ತು. ಇದೇ ಸಂದರ್ಭದಲ್ಲಿ ಮಳೆ ಇಲ್ಲದ ಕಾರಣ ರೈತರ ಸ್ಥಿತಿ ಆರ್ಥಿಕವಾಗಿ ಶೋಚನೀಯವಾಗಿತ್ತು, ಕೆಲ ಸ್ಥಳಗಳಲ್ಲಿ ಅಡಕೆ ಗಿಡಕ್ಕೆ ಕೋಳೆ ರೋಗಗಳು ಬಂದಿದ್ದರಿಂದ ಅವರು ಕರವನ್ನು ಸಂದಾಯ ಮಾಡಲಾಗಲಿಲ್ಲ. "ಈ ಕರ ನಿರಾಕರಣ ಚಳುವಳಿಯಲ್ಲಿ ಶಿರಸಿ, ಸಿದ್ಧಾಪುರ, ಅಂಕೋಲಾ ತಾಲೂಕಿನ ರೈತರು ಕರವನ್ನು ಸಂದಾಯ ಮಾಡದ ಕಾರಣ ಬ್ರಿಟಿಷರು ಮನೆ, ಗದ್ದೆಗಳ ಜಪ್ತಿ ಕಾರ್ಯಾಚರಣೆಯನ್ನು ನಡೆಸಿದರು. ಅಂತೆಯೇ ಶಿರಸಿಯಲ್ಲಿ ತಿಮ್ಮಪ್ಪ ನಾಯಕ ಮಾಸ್ತರರು ಕರ ನಿರಾಕರಣ ಚಳುವಳಿಯಲ್ಲಿ ಜನರನ್ನು ಪ್ರೇರೇಪಿಸುವ ಕಾರ್ಯ ಕೈಗೊಂಡರು. ಆ ಮೂಲಕ ಕರನಿರಾಕರಣ ಚಳುವಳಿಯನ್ನು ಯಶಸ್ವಿಗೊಳಿಸಿದರು."

ಉತ್ತರ ಕನ್ನಡ ಜಿಲ್ಲೆಯ ಚಲೇಜಾವ್ ಚಳುವಳಿ :

ಇನ್ನು ಚಳುವಳಿಯ ಕೊನೆಯ ಘಟ್ಟವೇ 1942 ರಡರ ಚಲೇಜಾವ್ ಚಳುವಳಿಯಾಗಿದೆ. ಜಿಲ್ಲೆಯಾದ್ಯಂತ ಎಲ್ಲಾ ತಾಲೂಕುಗಳಲ್ಲಿ ಪೂಲುಗಳ ಧ್ವಂಸ ಮಾಡಲಾಯಿತು. ಅಂಚೇ ಕಚೇರಿ ಸ್ಫೋಟಗೊಳಿಸಲಾಯಿತು, ಪೋಲಿಸ್ ಸ್ಟೇಷನ್, ಡಿಪೋಗಳನ್ನು ಸುಡಲಾಯಿತು, ಟಪಾಲು, ಶಾನುಬೋಗರ ದಪ್ತರ ಕಸಿಯುವ, ತಾರು ತಂತಿ ಕತ್ತರಿಸುವ ಚಟುವಟಿಕೆಗಳೂ ಕೂಡಾ ಜರುಗಿದವು. "ಅಂತೆಯೇ ಹೊನ್ನಾವರದ ಬಳಿಯ ಘೂಲು ಕೆಡವಲಾಯಿತು, ಶಿರಸಿ ಅಂಚೆ ಕಚೇರಿಯಲ್ಲಿ ಸ್ಫೋಟಕ ಹಾಕಲಾಯಿತು, ಬಿಳಗಿ ಪೋಲೀಸ್ ಸ್ಟೇಶನ್ ಬಂದು ಮಾಡಲಾಯಿತು ಹೀಗೆ ಹಲವಾರು ವಿಧ್ವಂಸಕ ಕಾರ್ಯಾಚರಣೆಗಳು ನಡೆದವು."[7]

ಚಲೇಜಾವ ಚಳುವಳಿಯಲ್ಲಿ ಮಹಿಳೆಯರ ಪಾತ್ರ ಕೂಡಾ ಅಷ್ಟೇ ಮುಖ್ಯವಾಗಿತ್ತು. ಮಹಿಳೆಯರು ಊಟ ಉಪಚಾರ ವ್ಯವಸ್ಥೆಯನ್ನೊಳಗೊಂಡಂತೆ ಕರಪತ್ರ ಹಂಚಿಕೆ, ಪಿಕೆಟಿಂಗ್ ನಂಥಹ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. "ಅವರಲ್ಲಿ ಭವಾನಿಬಾಯಿ ಕಾನಗೋಡ, ದುರ್ಗಮ್ಮ ಯಾನೆ ರಮಾಬಾಯಿ ಪ್ರಭು (ಗೋಸಾವಿ) ಪ್ರಮುಖರಾಗಿದ್ದಾರೆ. ಮಹಿಳೆಯರ ಬೆನ್ನೆಲುಬಾಗಿ ಶ್ರೀ ದಯಾನಂದ ಪ್ರಭು, ಶ್ರೀ ವೀರಣ್ಣ ನಾಯಕರಂತಹ ಹೋರಾಟಗಾರರು ಕೂಡ ಚಳುವಳಿಗೆ ಸೇವೆಯನ್ನು ಸಲ್ಲಿಸಿದರು."[8]

"1942 ರಡರ ಚಳುವಳಿಯಲ್ಲಿ ಉತ್ತರ ಕನ್ನಡ ತಾಲೂಕುಗಳಾದ್ಯಂತ 287 ಮಹಿಳೆಯರು ಬಂಧಿತರಾದರು. ಅವರಲ್ಲಿ 120 ಮಹಿಳೆಯರು ತಪ್ಪಿತಸ್ಥರೆಂದು ತಿರ್ಮಾನಿಸಿ ಹಿಂಡಲಗಾ, ಯರವಾಡ, ವಿಸಾಪುರಗಳಲ್ಲಿ ಜೈಲು ಶಿಕ್ಷೆ ನೀಡಲಾಯಿತು. ಅದೇ ರೀತಿಯಾಗಿ ಸಿದ್ಧಾಪುರ ತಾಲೂಕಿನ ಮಾವಿನಗುಂಡಿಯಲ್ಲಿ 37 ಹೆಣ್ಣು ಮಕ್ಕಳು ಅನ್ನ ಸತ್ಯಾಗ್ರಹದಲ್ಲಿ ಭಾಗಿಯಾಗಿದ್ದರು. ಅವರುಗಳೇ ಗೌರಮ್ಮ ವೆಂಕಟ ರಾಮಯ್ಯ, ಸುಬ್ಬಮ್ಮ ಜೊಯಸ, ಕಮಲಮ್ಮ ಚಂಡೂರು, ಮಹಾದೇವಿ ತಾಯಿ ದೊಡ್ಮನೆ, ಸೀತಾಬಾಯಿ ಮಡಗಾಂವಕರ, ದೇವಯಾನಿ"[9] ಯರಾಗಿದ್ದಾರೆ.

"ಈ ಸ್ವಾತಂತ್ರ್ಯ ಚಳುವಳಿಯ ಮತ್ತೊಂದು ಸ್ವರೂಪವೆಂದರೆ ಕೇವಲ ಹವ್ಯಕ ನಾಡವ ಜನಾಂಗಕ್ಕೆ ಸೀಮಿತವಾಗದೆ ಎಲ್ಲ ಸಮುದಾಯಗಳು ಭಾಗಿಯಾಗಿದ್ದವು. ಅದರಲ್ಲಿ ಹೊಲೆಯಪ್ಪ ಗೌಡ ರಾಮದಾಸ ಉಳುವರೆ ಹಾಲಕ್ಕಿ ಒಕ್ಕಲಿಗರಾಗಿದ್ದಾರೆ."[10] "ಇನ್ನೂ ಉತ್ತರ ಕನ್ನಡ ಜಿಲ್ಲೆಯಲ್ಲಿ ದೇವಿ ಎಂಬ ಹರಿಜನ ಮಹಿಳೆ ಕೂಡಾ ಚಳುವಳಿಗೆ ಮೆರಗನ್ನು ತಂದು ಕೊಟ್ಟವಳು. ಕೆಳಗಿನ ಮನೆ ಗ್ರಾಮದವಳಾದ ದೇವಿ ನಾಗೇಶ ಹೆಗಡೆ ಕುಟುಂಬದ ಜೀತದಾಳಾಗಿ ಸೇವೆ ಸಲ್ಲಿಸುತ್ತಿದ್ದು ಅವರ ನಿಧಿಯನ್ನು ಬ್ರಿಟಿಷರಿಂದ ರಕ್ಷಿಸುವಲ್ಲಿ ಪಾತ್ರ ನಿರ್ವಹಿಸಿದಳು. ಮರಳಿ ಬಂಗಾರವನ್ನು ಪಡೆಯದೆ ಹೋರಾಟಕ್ಕೆ ಪ್ರೇರಣೆಯಾಗಿದ್ದಾಳೆ."[11]

"ಮಲಹಳ್ಳಿಯ ರಾಘವೇಂದ್ರ ಹೆಗಡೆ ನೇತ್ರತ್ವದಲ್ಲಿ ಸಿದ್ಧಾಪುರ ತಾಲೂಕಿನ 2–3 ನೇ ವರ್ಗದ ಓದುವ ಮಕ್ಕಳು ಚಳುವಳಿಯಲ್ಲಿ ಭಾಗಿಯಾದರು. ಅವರಿಗೆ ವಾನರ ಸೇನೆ ಎಂದು ಕರೆಯಲಾಯಿತು. ಶಾಲೆ ತ್ಯಜಿಸಿ, ಅಕ್ಕಿ ಸಂಗ್ರಹ, ನಿಧಿ ಸಂಗ್ರಹ, ಪ್ರಭಾತ ಫೇರಿ, ಪಿಕೆಟಿಂಗ್, ಕರಪತ್ರ ಹಂಚಿಕೆ ಯಂಥಹ ಕಾರ್ಯ ಚಟುವಟಿಕೆಗಳಲ್ಲಿ ಭಾಗಿಯಾಗಿ, ಚಳುವಳಿಗೆ ಕೊಡುಗೆಯನ್ನು ಸಲ್ಲಿಸಿದ್ದಾರೆ."[12] ಒಟ್ಟಾರೆಯಾಗಿ ಉತ್ತರ ಕನ್ನಡ ಜಿಲ್ಲೆಯ ಚಳುವಳಿಗಳಲ್ಲಿ ಸ್ತ್ರೀ ಪುರುಷರ, ಎಲ್ಲ ಸಮುದಾಯಗಳ ಹಾಗೂ ಮಕ್ಕಳ ಪಾತ್ರ ಗಮನಾರ್ಹವಾಗಿ ಗೋಚರಿಸಿದೆ.

ಒಂದಾರ್ಥದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಚಳುವಳಿಯು ವಿಶಿಷ್ಟವಾಗಿ ಸ್ತ್ರೀ ಪುರುಷ, ಮಕ್ಕಳ ಹಾಗೂ ಎಲ್ಲ ಸಮುದಾಯದವರ ಪ್ರತಿನಿಧಿತ್ವವನ್ನು ಹೊಂದಿದ್ದು, ಸ್ವಾತಂತ್ರ್ಯ ಚಳುವಳಿಗೆ ಇವರೆಲ್ಲರ ಕೊಡುಗೆ ಚಳುವಳಿಯ ಯಶಸ್ಸಿಗೆ ಕಾರಣವಾದರೆ, ಇನ್ನೊಂದಾರ್ಥದಲ್ಲಿ ಚಳುವಳಿಯ ಸ್ವರೂಪ ಭಾರತ ರಾಷ್ಟ್ರೀಯ ಚಳುವಳಿಯ ಸ್ವರೂಪವನ್ನು ಅಳವಡಿಸಿಕೊಂಡು ನಡೆದದ್ದು ಚಳುವಳಿಯ ಯಶಸ್ಸಿಗೆ ಕಾರಣವಾಗಿದೆ.

2. ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು :

ಕಾರವಾರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಕಾರವಾರ ತಾಲೂಕಿನ ಸ್ವಾತಂತ್ರ್ಯ ಚಳುವಳಿಯಲ್ಲಿ ರಂಗನಾಥ ದೇವಪ್ಪ ಶಾನುಭಾಗ, ಪದ್ಮನಾಭ್ ಎಸ್. ಕಾಮತ್, ಕೃಷ್ಣ ನಾರಾಯಣ ನಾಯಕರು ಭಾಗಿಯಾದರು."[13] ರಂಗನಾಥ ದೇವಪ್ಪ ಶಾನುಭಾಗರು ಗಂಗಾಧರರಾವ್ ದೇಶಪಾಂಡೆಯಿಂದ ಪ್ರಭಾವಿತರಾಗಿ 1921–22 ರ ಚಳುವಳಿಯಲ್ಲಿ ಖಾದಿ ಮಾರಾಟದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. 1932 ರಲ್ಲಿ ಗೋವಾದಿಂದ ಉಪ್ಪನ್ನು ತಂದು ಕಾರವಾರದಲ್ಲಿ ಲೀಲಾವು ಮಾಡುವ ಮೂಲಕ ಕಾಯಿದೆ ಭಂಗ ನಡೆಸಿದರು.

ಗಾಂಧಿಜಿಯವರಿಂದ ಪ್ರಭಾವಿತರಾದ ಪದ್ಮನಾಭರು ಕೂಡಾ ಮುಂಬೈ ಕಾಂಗ್ರೆಸ್ ಕಮಿಟಿಯ ಸದಸ್ಯರಾಗಿದ್ದು, 1942 ರಡರ ಚಳುವಳಿಯಲ್ಲಿ ಭೂಗತ ಚಟುವಟಿಕೆಗಳನ್ನು ನಡೆಸಿದರು. ಸ್ವಾತಂತ್ರ್ಯ ನಂತರದಲ್ಲಿ ಕಾರವಾರ ಆಜಾದ್ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಿದರು. ಹಾಗೆಯೇ ಕಾರವಾರದ ಸುಂಕೇರಿಯವರಾದ ಕೃಷ್ಣ ನಾರಾಯಣರು ಸುಂಕೇರಿಯಲ್ಲಿ ಖಾದಿ ಬಟ್ಟೆ ಪ್ರಚಾರ ಕೈಗೊಂಡರು. 1924 ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲೂ ಭಾಗಿಯಾದರು. ಗೋವಾ ಉಪ್ಪನ್ನು ತಂದು ಕಾಯಿದೆ ಭಂಗ ಮಾಡಿದರು.

"ಇನ್ನುಳಿದಂತೆ ಕಾರವಾರ ತಾಲೂಕಿನಲ್ಲಿ ಹಳದೀಪುರ ಸಹೋದರರು ಪ್ರಮುಖ ಹೋರಾಟಗಾರರಾಗಿದ್ದರು"[14] ಅವರಲ್ಲಿ ಸುಬ್ಬರಾವ ರಾಮಚಂದ್ರ ಹಳದೀಪುರರು ಶಾಂತ ಶೈಣ್ದೆ ಎಂದೇ ಪರಿಚಿತರಾಗಿದ್ದರು. ಮೆಟ್ರಿಕ್ ಮುಗಿಸಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡರು. 1920 ರಲ್ಲಿ ಕಾಂಗ್ರೆಸ್ ಸಮಿತಿಯ ಉಪ ಅಧ್ಯಕ್ಷರಾದರು. 1932 ರಡರ ಉಪ್ಪಿನ ಸತ್ಯಾಗ್ರಹದ ಕಾಲದಲ್ಲಿ ಬಂಧನಕ್ಕೊಳಗಾದರು. ಅನಂತರ ಎಂ.ಎಲ್.ಎ. ಡಿ.ಎಲ್.ಬಿ.ಗಳ ಸದಸ್ಯರಾಗಿ ಡಿ.ಸಿ.ಸಿ. ಅಧ್ಯಕ್ಷರಾಗಿ, ಕೆ.ಪಿ.ಸಿ.ಸಿ. ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು.

ಸುಬ್ಬರಾವ್‌ರ ಸಹೋದರರಾದ ಕೃಷ್ಣರಾವ ರಾಮಚಂದ್ರರು 'ಕೇಸರಿ' 'ಅಮೃತಬಜಾರ'ದಂತಹ ಪತ್ರಿಕೆಗಳಿಂದ ಪ್ರಭಾವಿತರಾಗಿ, ಸ್ವದೇಶಿ ಚಳುವಳಿಯಲ್ಲಿ ಪಾಲ್ಗೊಂಡರು. ರಾಷ್ಟ್ರೀಯ ಚಟುವಟಿಕೆಗಳನ್ನು ನಡೆಸಲು ಮಿತ್ರರ ಜೊತೆ ಸೇರಿ 'ಬಾಲಬಂಧು' ಸಮಾಜ ಸಂಸ್ಥೆಯನ್ನು ಕಟ್ಟಿದರು. ಒಟ್ಟಾರೆಯಾಗಿ ಕಾರವಾರ ತಾಲೂಕಿನ ಹೋರಾಟಗಾರರು ರಾಷ್ಟ್ರೀಯತೆಗೆ ಕೊಡುಗೆಯನ್ನು ಸಲ್ಲಿಸಿದ್ದಾರೆ.

ಅಂಕೋಲಾ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

ಅಂಕೋಲಾ ತಾಲೂಕಿನಾದ್ಯಾಂತ ಹಲವಾರು ಹೋರಾಟಗಾರರು ಭಾಗಿಯಾಗಿದ್ದರು "ಅವರುಗಳೆಂದರೆ ಹರಿ ಅನಂತ ಪೈ, ಬೋಳೆ ಬೊಮ್ಮಯ್ಯ ನಾಯಕ, ಶಂಕರ ದತ್ತಾತ್ರಯ ದೇಸಾಯಿ, ಬಿಕ್ಕು ರಾಮ ಮಹಾಲೆ, ಬೊಮ್ಮಯ್ಯ ಹೊನ್ನಪ್ಪ ನಾಯ್ಕ, ರಾಮಚಂದ್ರ ರಾಮಕೃಷ್ಣ ನಾಯಕ, ಗೋವಿಂದರಾಯ ತಿಮ್ಮಣ್ಣ ನಾಯಕ, ಹಮ್ಮಣ್ಣ ಬೊಮ್ಮಯ್ಯ ನಾಯಕ, ಸಾಂತು ಬೊಮ್ಮಯ್ಯ ನಾಯಕ, ರಾಮಾ ವೆಂಕಟ ನಾಯಕ, ಹಮ್ಮಣ್ಣ ವಿಠೋಬ ನಾಯಕ, ನಾರಾಯಣ ರಾಮ ನಾಯ್ಕ, ಗಾಂವಕರ ದಯಾನಂದ ಅಲಾಯಸ್ ರಾಮಚಂದ್ರ ಎಂ. ಪ್ರಭು (ಶಿರೂರ್‌ಕರ್), ತಿಮ್ಮಪ್ಪ ನಾಯಕ ರಾಗಿದ್ದಾರೆ."[15] ಉಪ್ಪಿನ ಸತ್ಯಾಗ್ರಹದಲ್ಲಿ ಅಂಕೋಲಾ ತಾಲೂಕು ಉನ್ನತ ಸ್ಥಾನವನ್ನು ಅಲಂಕರಿಸಿತ್ತು.

"ಹರಿ ಅನಂತಪೈ ಪೂಜಗೇರಿಯಿಂದ ಉಪ್ಪನ್ನು ತಯಾರಿಸಿ ತಂದು ಅಂಕೋಲೆಯ ಗಾಂಧಿ ಮೈದಾನದಲ್ಲಿ ಹರಾಜು ಮಾಡಿದರು. ಇತರ ತಾಲೂಕುಗಳಲ್ಲೂ ಅರಣ್ಯ ಸತ್ಯಾಗ್ರಹ, ಹುಲ್ಲುಬನ್ನಿ ಸತ್ಯಾಗ್ರಹಗಳಲ್ಲೂ ಭಾಗಿಯಾಗಿದ್ದರು. 1940 ರ ವೈಯಕ್ತಿಕ ಸತ್ಯಾಗ್ರಹದಲ್ಲೂ ಗಂಗಾಧರರ ದೇಶಪಾಂಡೆಯವರ ಅಸಿಸ್ಟಂಟರಾಗಿ ಕಾರ್ಯ ನಿರ್ವಹಿಸಿದರು.

ಬೋಳೆ ಬೊಮ್ಮಯ್ಯ ನಾಯಕರು ಗಾಂಧಿಜಿಯವರ ಪ್ರಭಾವದಿಂದ ಗಂಗಾಧರರೊಟ್ಟಿಗೆ ಉಪ್ಪನ್ನು ಸರಬರಾಜು ಮಾಡುವ ಕಾರ್ಯಕೈಗೊಂಡರು. ಕಾಗದಪತ್ರಗಳ ಹಂಚಿಕೆ, ಜಂಗಲ್ ಸತ್ಯಾಗ್ರಹದಲ್ಲೂ ಪಾಲ್ಗೊಂಡರು. ಇನ್ನೋರ್ವ ಶಂಕರ ದತ್ತಾತ್ರಯ ದೇಸಾಯಿಯವರು ಚಳುವಳಿಯ ಸಂದರ್ಭದಲ್ಲಿ ಕಾಂಗ್ರೆಸ್ ಬುಲೆಟ್‌ನ್ನು ಹೊರಡಿಸುವ ಮೂಲಕ ಜನರನ್ನು

ಎಚ್ಚೆತ್ತುಗೊಳಿಸಿದರು. ಇನ್ನು ಬಿಕ್ಕು ರಾಮ ಮಹಾಲೆಯವರು ತಿಳಕರ ಪ್ರಭಾವದಿಂದ ಅಂಕೋಲೆ ಉಪ್ಪಿನ ಸತ್ಯಾಗ್ರಹ ಜಂಗಲ್ ಸತ್ಯಾಗ್ರಹದಲ್ಲೂ ಭಾಗಿಯಾಗಿ, ಕರಪತ್ರ ಹಂಚಿಕೆಯ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು.

ಮುಂದುವರೆದು ಬೊಮ್ಮಯ್ಯ ಹೊನ್ನಪ್ಪನಾಯ್ಕರು ವಿಧ್ವಂಸಕ ಕ್ರತ್ಯಗಳಲ್ಲಿ ಭಾಗಿಯಾದರು, ಸ್ವಾತಂತ್ರ್ಯ ಹೋರಾಟಗಾರ ರಾಮಚಂದ್ರ ರಾಮಕೃಷ್ಣ ನಾಯಕ ಜನರನ್ನು ಹುರಿದುಂಬಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಗೋವಿಂದರಾಯ ತಿಮ್ಮಣ್ಣ ನಾಯಕ 1942 ರಡರ ಚಳುವಳಿಯಲ್ಲಿ ಭೂಗತ ಚಟುವಟಿಕೆಗಳಲ್ಲಿ ಭಾಗಿಯಾದರು. ಹಮ್ಮಣ್ಣ ಬೊಮ್ಮಯ್ಯ ನಾಯಕರು ತಾರು ತಂತಿ ಕಡಿಯುವ ಕ್ರತ್ಯಗಳನ್ನು, ಸಾಂತು ಬೊಮ್ಮಯ್ಯ ನಾಯಕ ಉಳುವರೆ ಜಂಗಲ್ ಸುಡುವ ಕೃತ್ಯವನ್ನು, ರಾಮಾ ವೆಂಕಣ ನಾಯಕ ಗಂಗಾವಳಿಯಲ್ಲಿ ಮರ ಸುಡುವ ಕಾರ್ಯವನ್ನು, ಹಮ್ಮಣ್ಣ ವಿಠೋಬ ನಾಯಕ ದೋಣಿಗಳನ್ನು ನಾಶಪಡಿಸುವ ಕೃತ್ಯವನ್ನು ಕೈಗೊಂಡರು. ನಾರಾಯಣ ರಾಮನಾಯ್ಕ ಗಾಂವಕರ ಸಭೆಗಳಲ್ಲಿ ಭಾಗವಹಿಸಿ ರಾಷ್ಟ್ರಧ್ವಜ ಹಾರಿಸಿ, ರಾಷ್ಟ್ರಗೀತೆ ಹಾಡುವ ಕಾರ್ಯ ಕೈಗೊಂಡರು. ದಯಾನಂದ ಅಲಾಯಸ್ ರಾಮಚಂದ್ರರು ಮೆರವಣಿಗೆಗಳಲ್ಲಿ ಭಾಗಿಯಾಗಿ ಉಳುವರೆಯಲ್ಲಿ ಫೆರಿ ಹಾಕುವ ಮೂಲಕ ಪೋಲಿಸರನ್ನು ನಿಶ್ಯಸ್ತ್ರಗೊಳಿಸಿದರು. ಇನ್ನೂ ತಿಮ್ಮಪ್ಪ ನಾಯಕ ಗೋಪಾಲ ಕೃಷ್ಣ ಗೋಖಲೆಯಿಂದ ಪ್ರಭಾವಿತರಾಗಿ ಅವರ ಸರ್ವೆಂಟ್ ಆಫ್ ಇಂಡಿಯಾ ಸೇರಬೇಕೆಂದುಕೊಂಡಿದ್ದರು. ಫಲವಾಗಿ 1930ರ ಕರನಿರಾಕರಣ, 1942 ರಡರ ಚಳುವಳಿಗಳಲ್ಲಿ ಭಾಗಿಯಾಗಿ ಸೇವೆಯನ್ನು ಸಲ್ಲಿಸಿದನು.

"ಇನ್ನುಳಿದಂತೆ ಶೆಟಗೇರಿ ಜೋಗಿ ಬೀರಣ್ಣ ನಾಯಕ, ಬಾಸಗೋಡೆ ರಾಮನಾಯಕ, ಸಗಡಗೇರಿ ನಾಯಕ, ಬಾಸಗೋಡೆ ರಾಮನಾಯಕ, ಸಗಡಗೇರಿ ನಾಯಕ ವೆಂಕಟರಮಣ, ಹೊಲೆಯಪ್ಪಗೌಡ ರಾಮದಾಸ ಉಳುವರೆ, ವಾಸರ ಕುದ್ರಗೆ ನಾಯಕ ನಾರಾಯಣ ಸಾತು, ಶೇಣ್ಢಿ ಶ್ಯಾಮರಾವ್‌ರು ಕೂಡಾ ಚಳುವಳಿಯಲ್ಲಿ ಪಾಲ್ಗೊಂಡಿದ್ದರು"[16]

ಶೇಟಗೇರಿ ಜೋಗಿ ಬಿರಣ್ಣ ನಾಯಕರು ಶಟಗೇರಿಯವರಾಗಿದ್ದು ಹರ್ಡೇಕರರ ಜೊತೆ ಸೇರಿ 1921 ರ ಸ್ವದೇಶಿ ಆಂದೋಲನದಲ್ಲಿ ಭಾಗಿಯಾದರು. 1930 ರ ಕರ ನಿರಾಕರಣಾ ಚಳುವಳಿಗೆ ಪ್ರೇರಣೆ ನೀಡಿದರು, 1939 ರಲ್ಲಿ ಗಾಂವಠಿ ಶಾಲೆ ಆರಂಭಿಸಿದರು. 1942 ರಡರ ಚಳುವಳಿಯಲ್ಲಿ ಗುಪ್ತ ಕಾರ್ಯಾಚರಣೆ ನಡೆಸಿದರು. ಬಾಸಗೋಡೆ ರಾಮನಾಯಕರು ನಾಡವ ಸಮಾಜದವರಾಗಿದ್ದು ಅಂಕೋಲಾ ಉಪ್ಪಿನ ಸತ್ಯಾಗ್ರಹದ ಮುಂದಾಳು ಆಗಿದ್ದರು. ಕರನಿರಾಕರಣೆ ಚಳುವಳಿಗೆ ಪ್ರೇರೇಪಿಸಿದರು. ಇನ್ನೂ ಹೊಸ್ಕೇರಿ ಬಾಸಗೊಡೆಯವರು 1942 ರಲ್ಲಿ ತಾರುತಂತಿ ಉರುಳಿಸಿದರು. ಅದೇ ರೀತಿ ಸಗಡಗೇರಿ ನಾಯಕ ವೆಂಕಟರಮಣ ಇವರು ಸುತ್ತಮುತ್ತ ಹಳ್ಳಿಗಳಲ್ಲಿ ಖಾದಿ ಪ್ರಚಾರ ನಡೆಸಿದರು. ಸಾಣಿಕಟ್ಟೆ ಉಪ್ಪನ್ನು ತಂದು ಪೋಲಿಸ್ ಸ್ಟೇಶನ್ ಮುಂದೆ ಮಾರಾಟ ಮಾಡಿದರು. 1942 ರಲ್ಲಿ ಕರಪತ್ರ ಹಂಚುವ ಕಾರ್ಯ ಕೈಗೊಂಡರು. ಹಾಲು ಒಕ್ಕಲಿಗ ಸಮಾಜದವರಾದ ಹೊಲೆಯಪ್ಪಗೌಡ ರಾಮದಾಸ ಉಳುವರೆ, ಉಪ್ಪಿನ ಕರ ಕೊಡದೇ ಕರನಿರಾಕರಣ ಮಾಡಿದರು. ಕರಮರಕರರ ಪ್ರಭಾವ ಪಡೆದು 1942 ರ ಚಳುವಳಿಯಲ್ಲಿ ಹೊಸ್ಕೇರಿ ಉಳುವರೆ, ಶಿರೂರ ಘೂಲು ಧ್ವಂಸ ಮಾಡಿದರು. ವಾಸರ ಕುದ್ರಗೆ ನಾಯಕ ನಾರಾಯಣ ಸಾತು 1980 ರ ನಂತರ, ಶಂಕರ ಗುಲವಾಡಿಯಿಂದ ಜಾಗ್ರತಿಗೊಂಡು, ಗುಂಡುಬಾಳಾ, ಆಚವೆ, ಹಿಲ್ಲೂರುಗಳಲ್ಲಿ ಚಳುವಳಿಯ ಪ್ರಚಾರಕ್ಕಾಗಿ ಪಟೇಲರ ಸ್ಥಾನವನ್ನು ತ್ಯಜಿಸಿದರು. ಗಾಂಧಿಜಿಯ ಅನುಯಾಯಿಯಾದ ಶೆಣ್ದಿ ಶ್ಯಾಮರಾವರು ಸ್ವದೇಶಿ ಆಂದೋಲನದಲ್ಲಿ ಸಕ್ಕರೆ ಬದಲು ಬೆಲ್ಲವನ್ನು ಬಳಸುವಂತೆ, ಸಾಬೂನುಗಳನ್ನು ಬಳಸದಂತೆ ಕರೆಕೊಟ್ಟರು. 1942 ರ ಚಳುವಳಿಯಲ್ಲಿ ಸಾರಿಗೆ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದರು. ಒಟ್ಟಾರೆಯಾಗಿ ಅಂಕೋಲಾ ತಾಲೂಕಿನ ಹೋರಾಟಗಾರರ ಕೊಡುಗೆ ಕರನಿರಾಕರಣೆ ಚಳುವಳಿಯಲ್ಲಿ ಪ್ರಮುಖವಾಗಿತ್ತು.

ಕುಮಟಾ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

ಕುಮಟಾ ತಾಲೂಕಿನಾದ್ಯಂತ ಹಲವು ಸ್ವಾತಂತ್ರ್ಯ ಹೋರಾಟಗಾರರು ಚಳುವಳಿಯಲ್ಲಿ ಪಾಲ್ಗೊಂಡರು. ಅವರುಗಳೆಂದರೆ, "ಕೃಷ್ಣ ಭಟ್ಟ ಪನ್ನಿ, ಸೀತಾರಾಮ ಗಣೇಶ ಟೆಂಗ್ಸೆ, ಗಣೇಶ ಆತ್ಮಾರಾಮ ಭಟ್ಕಳಕರ್, ಶ್ರೀಧರ ಪಾಂಡುರಂಗ ಬಾಳಗಿ, ಪಟ್ಟಣಶೆಟ್ಟಿ, ಸಾಂತಯ್ಯ, ಲಕ್ಷ್ಮಣ ಶ್ಯಾನುಭಾಗ, ಗೋವಿಂದ ನರಸಿಂಹ, ಶಾನುಭಾಗ, ಗಣಪತಿ ಮಂಜಪ್ಪ ಭಂಡಾರಿ, ಗಂಗಾಬಾಯಿ ಎಂ. ಮಿರ್ಜಾನಕರ ಮುಂತಾದವರುಗಳಾಗಿದ್ದಾರೆ."[17]

ಕೃಷ್ಣೆ ಭಟ್ಟ ಪನ್ನಿ ಅವರು ದ್ವಾರಕಾ ಪೀಠದ ಶ್ರೀ ಭಾರತೀ ತೀರ್ಥರಿಂದ ಪ್ರಭಾವಿತರಾಗಿ 1930 ಎಪ್ರಿಲ್‌ನಲ್ಲಿ ವಿದೇಶಿ ಬಹಿಷ್ಕಾರ ಗೋಕರ್ಣ ಉಪ್ಪಿನ ಸತ್ಯಾಗ್ರಹ, ಪಿಕೆಟಿಂಗ್ ಮೆರವಣಿಗೆಯಂತಹ ಚಳುವಳಿಗಳಲ್ಲಿ ಭಾಗಿಯಾದರು. ಸೀತಾರಾಮ ಗಣೇಶ ಟೆಂಗ್ಸೆಯವರು ಕುಮಟಾ ಚಳುವಳಿಯಲ್ಲಿ ಸೇವಾದಳದ ಕ್ಯಾಂಪನ್ನು ಸೇರಿಕೊಂಡ ಕಾರಣ ಬಂಧನಕ್ಕೊಳಪಟ್ಟರು. ಗಣೇಶ ಭಟ್ಕಳ್‌ಕರ್‌ರವರು 1923 ರ ನಾಗಪುರ ದ್ವಜ ಸತ್ಯಾಗ್ರಹ, ಧರಸನ ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದರು. ಶ್ರೀಧರ ಪಾಂಡುರಂಗ ಬಾಳಗಿಯವರು ಹಬೀಬುಲ್ಲಾ, ಗಂಗಾಧರ ರಾವ್ ದೇಶಪಾಂಡೆ ಭಾಷಣದಿಂದ ಪ್ರಭಾವಿತರಾಗಿ 1930 ಜನೇವರಿ 26 ರಂದು ಕುಮಟಾದಲ್ಲಿ ಸ್ವಾತಂತ್ರ್ಯ ದಿನ ಆಚರಿಸಿ ದ್ವಜಾರೋಹಣ ನಡೆಸಿದರು. ಧರಸಣ, ಸಾಣೆಕಟ್ಟೆ, ಉಪ್ಪಿನ ಆಗರಗಳ ಮೇಲೆ ಆಕ್ರಮಣ ನಡೆಸಿ ಕಾರವಾರ ಜೈಲು ಸೇರಿದರು.

ಇನ್ನೂ ಪಟ್ಟಣಶೆಟ್ಟಿ ಸಾಂತಯ್ಯಾ ಲಕ್ಷ್ಮಣ ಶ್ಯಾನುಭಾಗರು ಗಾಂಧೀಜಿ, ರಾಜೇಂದ್ರಪ್ರಸಾದ, ಅಬೀಬುಲ್ಲಾ, ನೆಹರುರವರಿಂದ ಪ್ರಭಾವಿತರಾಗಿ 1930 ರ ದಂಡಿ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಶಿಬಿರಾಧಿಪತಿಯಾದ ಶ್ರೀಧರ ಪಾಂಡುರಂಗ ಬಾಳಗಿಯವರ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು. 1942 ರಡರ ಚಳುವಳಿಗಳಲ್ಲಿ ಕರಪತ್ರ ಹಂಚುವ ಕಾರ್ಯ ಕೈಗೊಂಡು ಬಂಧನಕ್ಕೊಳಗಾದರು. ಗೋವಿಂದ ನರಸಿಂಹ ಶಾನುಭಾಗರು ಗಾಂಧಿಜಿಯಿಂದ ಪ್ರಭಾವಿತರಾಗಿದ್ದದ್ದು 1924 ರ ಬೆಳಗಾವಿ ಕಾಂಗ್ರೆಸ್‌ಗೆ ತೆರಳಿದ್ದರು. ತಮ್ಮ ಸಂಪಾದಕತ್ವದ 'ವೃತ್ತ'ದಲ್ಲಿ ಪ್ರಕಟಣೆಗಳನ್ನು ನೀಡುವ ಮೂಲಕ ಸ್ವಾತಂತ್ರ್ಯ ಚಳುವಳಿಗೆ ಕರೆಕೊಟ್ಟರು. ಗಂಗಾಬಾಯಿ ಎಂ. ಮಿರ್ಜಾನಕರರು ಕೂಡಾ ಗ್ರಹಿಣಿಯಾಗಿದ್ದುಕೊಂಡೆ ಸತ್ಯಾಗ್ರಹಕ್ಕೆ ಬೆಂಬಲವಿತ್ತರು. 1931 ರ ಹೊನ್ನಾವರ ಸತ್ಯಾಗ್ರಹಿಗಳಿಗೆ ಸಹಕರಿಸಿ ಬಂಧನಕ್ಕೊಳಗಾದರು.

ಸಿರಸಿ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

ಸಿರಸಿ ತಾಲೂಕಿನಾದ್ಯಂತ ಕೆಲವು ಹೋರಾಟಗಾರರ ಉಲ್ಲೇಖ ನಮಗೆ ದೊರಕುತ್ತದೆ. "ಅವರುಗಳೇ ತೂಕದಾರ ಕೃಷ್ಣ ಸುಭ್ರ ಮರಾಠೆ, ಮಂಜುನಾಥ ಹೆಗಡೆ, ರಾಘವೇಂದ್ರ ವಾಸುದೇವ್ ಭಟ್, ವಿಘ್ನೇಶ್ವರ ಶರ್ಮ ತದ್ಧಲಸೆ, ಡಾ. ಕಮಲಾಕರ್ ನಾರ್ವೇಕರ್‌ರಾಗಿದ್ದಾರೆ."[18]

ತೂಕದಾರ ಕೃಷ್ಣ ಸುಭ್ರಾ ಮರಾಠೆಯವರು 4 ವರ್ಷದವರಿದ್ದಾಗ ಶಿರಸಿಗೆ ಆಗಮಿಸಿದ ಗಂಗಾಧರ್‌ರಾವ್ ದೇಶಪಾಂಡೆ, ಮುದವೀಡು ಕೃಷ್ಣರಾವ್, ಹನುಮಂತರಾವ್ ಕೌಜಲಗಿ ಅವರಿಂದ ಪ್ರಭಾವಿತರಾಗಿದ್ದರು. 1930 ರ ಚಳುವಳಿಯಲ್ಲಿ ಅಂಕೋಲಾ ಉಪ್ಪನ್ನು ತಂದು ಶಿರಸಿಯ ಬಹಿರಂಗ ಸಭೆಯಲ್ಲಿ ಲೀಲಾವು ಮಾಡಿದರು. 1944 ರ ವರೆಗೂ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು. ಮಂಜುನಾಥ ಹೆಗಡೆಯವರು ಮರಗಳನ್ನು ಕಡಿಯುವ ಹಾಗೂ ಅರಣ್ಯ ಸತ್ಯಾಗ್ರಹದಂತಹ ಚಳುವಳಿಯಲ್ಲಿ ಭಾಗಿಯಾಗಿದ್ದರು. 1947 ರವರೆಗೂ ಮೈಲಾರ ಮಹದೇವಪ್ಪನವರ ಜೊತೆ ಜೊತೆಯಾಗಿಯೇ ಚಳುವಳಿಯಲ್ಲಿ ಸಂಚಲನ ನಡೆಸಿದರು.

1942ರ ಚಳುವಳಿಯಲ್ಲಿ ಗುಪ್ತಕಾರ್ಯವನ್ನು ನಿರ್ವಹಿಸುತ್ತಿದ್ದ ರಾಘವೇಂದ್ರ ವಾಸುದೇವ ಭಟ್‌ರು ಟಪಾಲು ಲೂಟಿ ಹಾಗೂ ಚಾವಡಿಗೆ ಬೆಂಕಿ ಹಚ್ಚುವ ಕಾರ್ಯಗಳಲ್ಲಿ ಭಾಗಿಯಾಗಿದ್ದರು. ವಿಘ್ನೇಶ್ವರ ಶರ್ಮರು ಕೂಡಾ ಭಾರತ ಮಾತೆಯ ಪೊಟೊ ಹಿಡಿದು ಪ್ರಭಾತಪೇರಿಯಲ್ಲಿ ಹಿರಿಯರ ಅಣತಿಯಂತೆ ಪಾಲ್ಗೊಳ್ಳುತ್ತಿದ್ದರು. ತೀರ ಚಿಕ್ಕವರಾದ ಇವರು ಶಾಲೆಗೆ ಹೋಗುವ ಸಂದರ್ಭದಲ್ಲಿ ಬೆಳ್ಳಿಕೇರಿಯ ಸುಬ್ಬರಾಯ ಹೆಗಡೆಯವರಿಂದ ಚಳುವಳಿಗಳ ರಹಸ್ಯಗಳನ್ನು ತಿಳಿದುಕೊಳ್ಳುತ್ತಿದ್ದರು. ಇನ್ನೂ ಕಮಲಾಕರ್ ನಾರ್ವೇಕರರು ಬಾಲಕನಾಗಿರುವಾಗಲೇ ಉತ್ತಮ ಹಾಡುಗಾರರಾಗಿದ್ದರಿಂದ 1930, 1942 ರಡರ ಚಳುವಳಿಗಳಲ್ಲಿ ಹಾಡಿನ ಮೂಲಕ ಜನರನ್ನು ಎದ್ದೇಳಿಸುವಂತಹ ಕಾರ್ಯ ಕೈಗೊಳ್ಳುತ್ತಿದ್ದರು.

ಸಿದ್ಧಾಪೂರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಸಿದ್ಧಾಪೂರ ತಾಲೂಕಿನಾದ್ಯಂತ ಹಲವಾರು ಸ್ವಾತಂತ್ರ್ಯ ಹೋರಾಟಗಾರರು ಚಳುವಳಿಯಲ್ಲಿ ಧುಮುಕಿದರು. ಅವರುಗಳೆಂದರೆ, ಕನ್ನಳ್ಳಿ ಶಿವರಾಮ, ಮಂಜಯ್ಯ ಹೆಗ್ಡೆ, ಗೋಪಾಳ ವಾಮನ ಮಡಗಾಂವಕರ ಶಿರಳಗಿ ಸುಭ್ರಾಯ

ಭಟ್ಟರು, ರಾಮಪ್ಪಾ ನಾರಾಯಣ ಪೈ ಮೂಡ್ಲಗಿರಿ, ಗಣಪತಿ ತಿಮ್ಮಣ್ಣ ಭಟ್, ಬಳಗುಳಿ ನೆಲೆಮಾವ ಗಣಪತಿ ಭಟ್ಟ, ಭವಾನಿ ಬಾಯಿ ಕಾನಗೋಡ, ಸೀತಾಬಾಯಿ ರಾಮಚಂದ್ರ ಮಡಗಾಂವಕರ, ಮಾಧವ ವಿಠಲ ಮಡಗಾಂವಕರ, ಗಣೇಶ ಸುಭ್ರಭಟ್ಟ ಅಡವಿತೊಟ, ಮಹಾಬಲೇಶ್ವರ ತಿಮ್ಮಣ್ಣ ಭಟ್ಟ ಕಲ್ಲಾಳ, ಮಂಜುನಾಥ ರಾಮಚಂದ್ರ ಹೆಗ್ಡೆ, ದೇವು ಸಾಂತಪ್ಪಾ ನಾಗಪ್ಪಾ ನಾಯಕ, ಮಹಾಬಲೇಶ್ವರ ಸೀತಾರಾಮ ಭಟ್ಟ, ಕೆರೆಹೊಂಡ ದುರ್ಗಪ್ಪ ಕೃಷ್ಣಪ್ಪ ಶಾಮೇನ, ಗೋವಿಂದ ಶಾಂತಾರಾಮ ಶಾನುಭಾಗರಾಗಿದ್ದಾರೆ."[19]

ಕನ್ನಳ್ಳಿ ಶಿವರಾಮ ಮಂಜಯ್ಯ ಹೆಗಡೆಯವರು ಹೊಂ ರೂಲ್ ಲೀಗ್‌ನ ಕಾರ್ಯವನ್ನು ಪ್ರಚಾರಗೊಳಿಸುವುದರ ಜೊತೆಗೆ ಜಂಗಲ್ ಸತ್ಯಾಗ್ರಹ, ಹುಲ್ಲುಬನ್ನಿಯಂತಹ ಸತ್ಯಾಗ್ರಹದಲ್ಲಿ ಭಾಗಿಯಾದರು. ಗೋಪಾಳ ವಾಮನ ಮಡಗಾಂವಕರ ಅವರು 'ರಾಜಹಂಸ' ಎಂಬ ವಿಜಯ ಕನ್ನಡ ಪತ್ರಿಕೆಯಿಂದ ಪ್ರಭಾವಗೊಂಡು 1941 ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. 1942 ರಡರ ಚಳುವಳಿಯಲ್ಲಿ 'ನಾವು ಸ್ವಾತಂತ್ರ್ಯರು' ಎಂಬ ಬ್ಯಾಚ್‌ನ್ನು ಹಾಕಿಕೊಂಡು ಅಲೆದಾಡಿದರು. ಶಿರಳಗಿ ಸುಬ್ರಾಯ ಭಟ್ಟರು 1918 ರಲ್ಲಿ ಹೊಂ ರೂಲ್ ಲೀಗಿನ ಸ್ಥಾಪನೆಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಧಿಕ್ಷೆ ಪಡೆದು 1921 ರ ಬಹಿಷ್ಕಾರ ಚಳುವಳಿ, 1932 ರಡರ ಕರನಿರಾಕರಣೆ ಚಳುವಳಿಗಳಲ್ಲಿ ಭಾಗಿಯಾದರು.

ಗಣಪತಿ ತಿಮ್ಮಣ್ಣ ಭಟ್ ಬಳಿಗಳ ಅವರು ಗಾಂಧಿಜಿಯವರ ದಿವ್ಯ ಸಂದೇಶದ ಪ್ರಭಾವ ಪಡೆದುಕೊಂಡು ಕುಟುಂಬ ಸಮೇತ 1932 ರಡರ ಚಳುವಳಿಯಲ್ಲಿ ಭಾಗಿಯಾಗಿ ತಿರ್ವೆ ಕೊಡಲು ನಿರಾಕರಿಸಿ ಸತ್ಯಾಗ್ರಹಕ್ಕೆ ಇಳಿದರು. ನೆಲೆಮಾವ ಗಣಪತಿ ಭಟ್ಟರು 1921 ರಲ್ಲಿ ವಿದೇಶಿ ವಸ್ತುಗಳ ವಿರುದ್ಧ ಹೋರಾಡಿದರು, 1930 ರ ಕರಬಂಧಿ ಚಳುವಳಿಯಲ್ಲಿ ಜೈಲುವಾಸ ಅನುಭವಿಸಿದರು. ಭವಾನಿಬಾಯಿ ಕಾನಗೊಡ ಅವರು ಕೂಡಾ ಕವಿ ತಿಪ್ಪಯ್ಯ ಮಾಸ್ತರರ ಪದ್ಯಗಳಿಂದ ಪ್ರೇರೇಪಿತರಾಗಿ 1930–32 ರ ಸತ್ಯಾಗ್ರಹದಲ್ಲಿ ಕರಪತ್ರ ಹಂಚುವ ಕಾರ್ಯವನ್ನು ಕೈಗೊಂಡರು. ಹೀಗೆ 1942 ರಡರ ವರೆಗೂ ತಮ್ಮ ಕೊಡುಗೆಯನ್ನು ಸಲ್ಲಿಸಿದರು.

ಸೀತಾಬಾಯಿ ರಾಮಚಂದ್ರ ಮಡಗಾಂವಕರ ದೇಶಭಕ್ತ ಮನೆತನದಲ್ಲಿ ಹುಟ್ಟಿದವರಾಗಿದ್ದು ಪಿಕೆಟಿಂಗ್, ಝುಂಡಾವಂದನೆಯಂಥಹ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಮಾಧವ ವಿಠಲ ಮಡಗಾಂವಕರ ಅವರು 1930 ರ ಉಪ್ಪಿನ ಸತ್ಯಾಗ್ರಹ, ಜಂಗಲ್ ಸತ್ಯಾಗ್ರಹ, ಕರಬಂಧಿ ಚಳುವಳಿಗಳಲ್ಲಿ ಭಾಗಿಯಾಗಿ ಜೈಲುಶಿಕ್ಷೆ ಅನುಭವಿಸಿದರು. ಅಸ್ಪೃಶ್ಯತೆ ನಿವಾರಣೆಯಂತಹ ಕಾರ್ಯಗಳನ್ನು ಕೂಡಾ ಕೈಗೊಂಡರು.

ಗಣೇಶ ಸುಭ್ರಬಟ್ಟ ಅಡವಿತೊಟರು ಹಬಿಬುಲ್ಲಾರ ಭಾಷಣಗಳಿಂದ ಪ್ರೇರೆಪಿತರಾಗಿ 1930 ರ ಅಂಕೊಲೆ ಉಪ್ಪಿನ ಸತ್ಯಾಗ್ರಹ, 1932 ರಡರ ಕರಬಂಧಿ ಚಳುವಳಿಯಲ್ಲಿ ಪಾಲ್ಗೊಂಡರು. ಮಹಾಬಲೇಶ್ವರ ತಿಮ್ಮಣ್ಣ ಭಟ್ಟರು ಬ್ರಿಟಿಷ್ ವಿರೋಧಿ ಪ್ರಚಾರ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದರು. ಮಂಜುನಾಥ ರಾಮಚಂದ್ರ ಹೆಗ್ಡೆಯವರು 1930 ರ ಜಂಗಲ್ ಸತ್ಯಾಗ್ರಹ, 1942 ರ ಚಲೇಜಾವ್ ಚಳುವಳಿಯಲ್ಲಿ ಭಾಗಿಯಾಗಿದ್ದರು. ದೇವು ಸಾಂತಪ್ಪಾ ನಾಗಪ್ಪಾ ನಾಯಕರು ರಾಷ್ಟ್ರೀಯ ಚಳುವಳಿಯಲ್ಲಿ ಟಪಾಲು ಮುಟ್ಟಿಸುವಂಥ ಕಾರ್ಯಕ್ರಮಗಳನ್ನು ನಿರ್ವಹಿಸುವದರ ಜೊತೆಗೆ ಜಂಗಲ್ ಸತ್ಯಾಗ್ರಹ ಹಾಗೂ ಚಲೇಜಾವ್ ಚಳುವಳಿಗಳಲ್ಲಿ ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿದ್ದರು.

ಮಹಾಬಲೇಶ್ವರ ಸಿತಾರಾಮ ಭಟ್ಟ ಕೆರೆಹೊಂಡರ 1924 ರಲ್ಲಿ ವೇದ್ಯಾಧ್ಯಯನ ತ್ಯಜಿಸಿ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. ಅಂಕೋಲಾ ಉಪ್ಪನ್ನು ತಂದು ಸಿದ್ಧಾಪುರದಲ್ಲಿ ಲೀಲಾವು ಮಾಡಿದರು. ಫಲವಾಗಿ ಕ್ಯಾದಿಗಿಯಲ್ಲಿ ಬಂಧನಕ್ಕೊಳಪಟ್ಟರು. ದುರ್ಗಪ್ಪ ಕೃಷ್ಣಪ್ಪ ಶಾಮೆನ್‌ರವರು ಸ್ವಯಂ ಸೇವಕರಾಗಿ, ಚಳುವಳಿಗಾರರಿಗೆ ಊಟ ವಸತಿ ವ್ಯವಸ್ಥೆ ನೀಡುವಂತಹ ಕಾರ್ಯ ಕೈಗೊಳ್ಳುತ್ತಿದ್ದರು. ಗೋವಿಂದ ಶಾಂತಾರಾಮ ಶಾನುಭಾಗರು 1942 ರಡರ ಚಲೇಜಾವ್ ಚಳುವಳಿಯನ್ನು ಅಗಸ್ಟ 11 ರಿಂದ ಆರಂಭಿಸಿದರು. ಕೊನೆಯದಾಗಿ ಸಿದ್ಧಾಪುರನ 2–3ನೇ ತರಗತಿಯಲ್ಲಿ ಓದುವ ಮಕ್ಕಳು ಸಹ ಮಲಹಳ್ಳಿ ರಾಘವೇಂದ್ರ ಹೆಗಡೆಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು. ಅವರಿಗೆ ವಾನರ ಸೇನೆ ಎಂದೂ

ಕರೆಯಲಾಗಿತ್ತು. ಮಕ್ಕಳು ಅಕ್ಕಿ ಸಂಗ್ರಹ, ನಿಧಿ ಸಂಗ್ರಹದಂತಹ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಬ್ರಿಟಿಷರು ಮಕ್ಕಳ ಮೇಲೂ ಸಹ ಅನೇಕ ಶೋಷಣೆಗಳನ್ನು ನಡೆಸಿದರು. ಆದರೂ ಹಿಂಜರಿಯದೆ ಮಕ್ಕಳು ದೇಶಕ್ಕೆ ಸೇವೆ ಸಲ್ಲಿಸಿದರು.

ಯಲ್ಲಾಪುರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಯಲ್ಲಾಪುರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಪ್ರಮುಖರಾದವರೆಂದರೆ, ಪರಮೇಶ್ವರ ನಾರಾಯಣ ಭಟ್ಟ, ನೆಲೆಮಾವ ಗೋಪಾಲಕೃಷ್ಣ ನಾರಾಯಣ ಭಟ್ಟ ಪಾಟೀಲ, ಕೃಷ್ಣ ವೆಂಕಟರಮಣ ಭಟ್ಟ, ಚಿಮ್ನಳ್ಳಿ ಸುಬ್ರಾಯ ಪರಮೇಶ್ವರ ಭಟ್ಟ, ಗಣಪತಿ ತಿಮ್ಮಯ್ಯ ಭಟ್ಟ, ರಾಮಾ ವೆಂಕಭಟ್ಟ ಗುಂಟಕಲ್ಲ, ಸುಭ್ರಾಯ ಜನಾರ್ದನ ಭಟ್ಟ ರಾಗಿದ್ದಾರೆ."[20]

ಯಲ್ಲಾಪುರ ತಾಲೂಕಿನಾದ್ಯಂತ ಮಹಾತ್ಮಾ ಗಾಂಧಿಜಿಯವರ ಹೇಳಿಕೆಯ ಮೇರೆಗೆ ಮೈಸೂರಿನಿಂದ ಆಗಮಿಸಿದ ಕಡೆಯ ಕೃಷ್ಣ ಮೂರ್ತಿಯವರ ಪ್ರಚಾರದಿಂದ ಸ್ವಾತಂತ್ರ್ಯ ಹೋರಾಟಗಾರರು ಪ್ರಭಾವಿತರಾದರು. 1930 ನೇ ಸಾಲಿನಲ್ಲಿ ಯಲ್ಲಾಪುರ ತಾಲೂಕಿನ ಹೋರಾಟ ಆರಂಭವಾಗಿರುವುದನ್ನು ಗಮನಿಸಬಹುದು. ಅದರಲ್ಲಿ ಪರಮೇಶ್ವರ ನಾರಾಯಣ ಭಟ್ಟ ನೆಲೆಮಾವ ಅವರು ಪತ್ರಿಕೆಗಳಲ್ಲಿ ಬರುವ ಮಹಾತ್ಮರ ವಿಚಾರಗಳಿಂದ ಪ್ರಭಾವಿತರಾಗಿ ಸರಕಾರ ಜಪ್ತಿ ಮಾಡಿಕೊಂಡ ಭತ್ತವನ್ನು ತಂದು ಕಾನೂನು ಭಂಗ ಮಾಡಿದರು. ಗೋಪಾಲಕೃಷ್ಣ ನಾರಾಯಣ ಭಟ್ಟ ಪಾಟೀಲರು ಕೂಡಾ ರೈತರ ಭತ್ತ ಜಪ್ತಿಯಾದ ಸ್ಥಳದಲ್ಲಿ ಹೋರಾಟದ ಪ್ರಚಾರ ಕಾರ್ಯವನ್ನು ಕೈಗೊಳ್ಳುತ್ತಿದ್ದರು. ಚಳುವಳಿಗೋಸ್ಕರ ಬರಬಳ್ಳಿಯ ಪಾಟೀಲರ ಸೇವೆಗೆ ರಾಜೀನಾಮೆ ಕೊಟ್ಟರು.

ಕೃಷ್ಣ ವೆಂಕಟರಮಣ ಭಟ್ಟ ಚಿಮ್ನಳ್ಳಿ ತೆಲಂಗಾರದವರಾಗಿದ್ದು 1930 ರಲ್ಲಿ ಕೃಷ್ಣಮೂರ್ತಿಯವರಿಂದ ಪ್ರಭಾವಿತರಾಗಿ ಪ್ರಚಾರ ಕಾರ್ಯ ಕೈಗೊಂಡರು. 1937 ರಲ್ಲಿ ಕಾಂಗ್ರೆಸ್ ಚಟುವಟಿಕೆಗಳಲ್ಲಿ ಹಾಗೂ 1941 ರ ವೈಯಕ್ತಿಕ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಸುಬ್ರಾಯ ಪರಮೇಶ್ವರ ಭಟ್ಟರು ತಿಳಕ, ಗಾಂಧಿಜಿಯವರಿಂದ ರಾಷ್ಟ್ರೀಯ ಜಾಗೃತಿ ಮೂಡಿಸಿಕೊಂಡರು. ಚಳುವಳಿಗಳಲ್ಲಿ ಕರಪತ್ರಗಳನ್ನು ಹಂಚುವ, ಬ್ರಿಟಿಷ್ ವಿರೋಧಿ ಘೋಷಣೆ ಕೂಗುವ ಕಾರ್ಯಗಳನ್ನು ಕೈಗೊಂಡರು.

ಗಣಪತಿ ತಿಮ್ಮಯ್ಯ ಭಟ್ಟರು ಗಾಂಧಿಜಿಯವರ ತತ್ವವಾದ ಅಹಿಂಸಾ ದಿಂದ ಪ್ರಭಾವಿತರಾಗಿ ಗಾಂಧಿಜಿಯವರ ಹೋರಾಟದ ಪ್ರಚಾರ ಕಾರ್ಯವನ್ನು ವಜ್ರಳ್ಳಿ, ಇಡಗುಂದಿಗಳಲ್ಲಿ ಕೈಗೊಂಡರು. ರಾಮಾವೆಂಕ ಭಟ್ಟ ಗುಂಟಕಲ್ಲ ಇವರು ತೆಲಂಗಾರದವರಾಗಿದ್ದು ಚಳುವಳಿಯ ಪ್ರಚಾರಕ್ಕಾಗಿ ದೇವಸ್ಥಾನದಲ್ಲಿ ಸಭೆ ಸೇರಿಸಿ ಸರಕಾರಕ್ಕೆ ಕರ ಸಂದಾಯ ಮಾಡದಂತೆ ಪ್ರಚಾರ ಕೈಗೊಂಡರು. ಫಲವಾಗಿ ಬೆಳಗಾಂವ ಹಿಂಡಲಗಿ ಜೈಲಿನಲ್ಲಿ ಬಂದಿಯಾದರು. ಸುಬ್ರಾಯ ಜನಾರ್ದನ ಭಟ್ಟ ಬೆಳಖಂಡ ಅವರು ಗಣಪತಿ ಗಾಂವಕರ ಸಹಕಾರದಿಂದ ಕಾಂಗ್ರೆಸ್‌ನ ಸದಸ್ಯರಾಗಿ, ವೈಯುಕ್ತಿಕ ಸತ್ಯಾಗ್ರಹದಲ್ಲಿ ಭಾಗಿಯಾದರು.

ಸೂಪಾ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಸೂಪಾ ತಾಲೂಕಿನ ಹೋರಾಟಗಾರರಲ್ಲಿ ರಾಮಚಂದ್ರ ಹೆಗಡೆ, ಅನಂತ ಗುಂಡು ಬಾಳೆ ಪ್ರಮುಖರಾಗಿದ್ದಾರೆ."[21] ಯಲ್ಲಾಪುರದ ಬಿರ್ಖೋಲದವರಾದ ರಾಮಚಂದ್ರ ಹೆಗಡೆಯವರು ಯಲ್ಲಾಪುರದ ಶಿವರಾಮ ಭಟ್ಟರೊಂದಿಗೆ ಸೇರಿಕೊಂಡು 1932 ರಡರ ಚಳುವಳಿಗಳಲ್ಲಿ ಕರಪತ್ರ ಹಂಚಿಕೆಯ ಕಾರ್ಯವನ್ನು ನಿರ್ವಹಿಸುತ್ತಿದ್ದರ ಪರಿಣಾಮವಾಗಿ ಬ್ರಿಟಿಷರು ಇವರ ಮನೆಯನ್ನು ಬೆಂಕಿಗೆ ಆಹುತಿ ಮಾಡಿದರು. ಮಹಾತ್ಮಾ ಗಾಂಧಿಜಿಯವರು ಹಳಿಯಾಳಕ್ಕೆ ಬಂದಾಗ ಅವರ ಭಾಷಣದಿಂದ ಅನಂತ ಗುಂಡು ಬಾಳೆಯವರು ಪ್ರಭಾವಿತಗೊಂಡು ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು ಹಾಗೂ ವಿದೇಶಿ ವಸ್ತುಗಳ ಬಹಿಷ್ಕಾರದಂತಹ ಕಾರ್ಯವನ್ನು ಕೈಗೊಂಡಿದ್ದರು. 1947ರ ನಂತರ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿ ಕಾಂಗ್ರೆಸ್ ಚಟುವಟಿಕೆಗಲ್ಲಿನೆ ತಮ್ಮನ್ನು ತೊಡಗಿಸಿಕೊಂಡರು.

ಹಳಿಯಾಳ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಹಳಿಯಾಳ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರಾದ ಜಂಬುರಾವ್ ಪಾಯಪ್ಪ ದೇಸಾಯಿಯವರ ಉಲ್ಲೇಖ ಮಾತ್ರ ನಮಗೆ ದೊರಕುತ್ತದೆ. ಅದೇ ರೀತಿಯಾಗಿ ಧಾರವಾಡದ ಹಳಿಯಾಳ ರಸ್ತೆಯಲ್ಲಿ ಕಂಡು ಬರುವ ಮತ್ತೊಬ್ಬ

ಹೋರಾಟಗಾರ ಸಾಂತು ಬೊಮ್ಮಯ್ಯ ನಾಯ್ಕ ಕರ್ನಮನೆ ಯವರ ಉಲ್ಲೇಖ ಕೂಡಾ ಕಂಡುಬರುತ್ತದೆ."[22] ಹಳಿಯಾಳ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಅಷ್ಟೊಂದು ಮಾಹಿತಿ ನಮಗೆ ಸಿಗುವುದಿಲ್ಲ ಬಹುಷ ಸೂಫಾ ತಾಲೂಕನ್ನು 1908 ರಲ್ಲಿ ಹಳಿಯಾಳ ತಾಲೂಕಾಗಿ ಪುನಃ ನಾಮಕರಣ ಮಾಡಿದ್ದರ ಫಲವಾಗಿ ಪ್ರದೇಶಗಳ ಹಂಚಿಕೆಯಾಗಿ ಹೋರಾಟಗಾರರ ಸ್ಮೃತಿಗಳು ಹಂಚಿಕೆಯಾಗಿರಬಹುದು, ಇಲ್ಲವೇ ಕಣ್ಮರೆಯಾಗಿರಬಹುದು.

ಜಂಬುರಾವ್ ಪಾಯಪ್ಪ ದೇಸಾಯಿಯವರು 1930 ರಲ್ಲಿ ನಡೆದ ಸ್ಥಳೀಯ ನಾಯಕ ಕೃಷ್ಣಾಜಿ ರಾಮಚಂದ್ರ ಫಡ್ನಿಸ್‌ರ ಅಧ್ಯಕ್ಷತೆಯ ಸಭೆಗೆ ಪ್ರೇಕ್ಷಕರಾಗಿ ಹೋದರು. ಅನಂತರ ಸ್ವಾತಂತ್ರ್ಯಕ್ಕಾಗಿ ದುಡಿಯುವ ಹಂಬಲದಿಂದಾಗಿ ಜಂಗಲ್ ಸತ್ಯಾಗ್ರಹವನ್ನು ಕೈಗೊಂಡರು. ಹರಿಜನ ಸೇವಾ ಕಾರ್ಯಗಳನ್ನು ಹಮ್ಮಿಕೊಂಡರು. ಚಳುವಳಿಯ ಬಗ್ಗೆ ಪ್ರಚಾರ ನೀಡುವ ಸಂದರ್ಭದಲ್ಲಿ ಬಂಧಿಯಾದರು.

ಹೊನ್ನಾವರ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಹೊನ್ನಾವರ ತಾಲೂಕಿನ ಹೋರಾಟಗಾರರಾದ ಮಹಾಬಲೇಶ್ವರ ಮಂಜುನಾಥ ಜಾಲಿಸತ್ಗಿ"[23]ಯವರನ್ನು ಹೊರತುಪಡಿಸಿ ಸ್ವಾತಂತ್ರ್ಯ ಸಂಗ್ರಾಮ ಸ್ಮೃತಿಗಳಲ್ಲಿ ಇನ್ನಾವ ಹೋರಾಟಗಾರರ ಉಲ್ಲೇಖಗಳು ನಮಗೆ ದೊರಕುವುದಿಲ್ಲ. ಮಹಾಬಲೇಶ್ವರರವರು ವಕೀಲಿ ವೃತ್ತಿಯಲ್ಲಿ ಸೇವೆಯನ್ನು ಸಲ್ಲಿಸುತ್ತ ರಾಷ್ಟ್ರೀಯ ಚಳುವಳಿಯಲ್ಲಿ ಧುಮುಕಿದರು. ರಾಷ್ಟ್ರೀಯ ಚಳುವಳಿಗೆ ಸಂಬಂಧಿಸಿದಂತೆ ತಮ್ಮ ತಂದೆಯಿಂದಲೇ ಪ್ರೇರಿತರಾಗಿದ್ದರು. 1924 ರಲ್ಲಿ ಖಾದಿ ಬಟ್ಟೆ ಧರಿಸುವ ಮೂಲಕ ದೇಶಸೇವೆಗೆ ಮುಂದಾದರು. 1930 ರ ಸುಮಾರಿಗೆ ಶಾಲೆ ತ್ಯಜಿಸಿ ಚಳುವಳಿಯತ್ತ ಧುಮುಕಿ ಸತ್ಯಾಗ್ರಹದ ಶಿಬಿರಗಳನ್ನು ಕರೆದು ಬುಲೆಟಿನ್ ಹಂಚುವ ಕಾರ್ಯ ನಡೆಸಿಕೊಡುತ್ತಿದ್ದರು. 1937 ರಲ್ಲಿ ನೆಹರು ಭಾಷಣದಿಂದ ಪ್ರಭಾವಿತರಾಗಿ 1942 ರಡರ ಚಳುವಳಿಯಲ್ಲಿ ಭಾಗಿಯಾದರು.

ಭಟ್ಕಳ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರು :

"ಭಟ್ಕಳ ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಜೀವೋತ್ತಮ ಎನ್. ಭಟ್ಟ, ಶೇಷಗಿರಿ ರಾಮಚಂದ್ರ ಪ್ರಭು ಅವರು ಪ್ರಮುಖರಾಗಿದ್ದಾರೆ."[24] ಜೀವೋತ್ತಮರು ಬಡ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಹಬೀಬುಲ್ಲಾರ ಭಾಷಣದಿಂದ ಪ್ರಭಾವಿತರಾಗಿ 1920ರ ಸುಮಾರಿಗೆ ಸ್ವದೇಶಿ ವ್ರತ ಕೈಗೊಂಡರು. ಗಾಂಧಿಜಿಯವರ ಯಂಗ್ ಇಂಡಿಯಾ, ಹರಿಜನ ಪತ್ರಿಕೆಗಳಿಂದ ಪ್ರಭಾವಿತರಾಗಿದ್ದರು. 1924 ರಲ್ಲಿ ಡಾ. ಹರ್ಡಿಕರರನ್ನು ಭೆಟ್ಟಿಯಾಗಿ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡು 2 1/2 ಮೈಲು ದೂರದಲ್ಲಿರುವ ಸಮುದ್ರದ ಉಪ್ಪನ್ನು ತಂದು ಕಾಯಿದೆ ಭಂಗ ಮಾಡಿದರು. 1932 ರಡರ ಚಳುವಳಿಯಲ್ಲಿ ಪ್ರಭಾತ ಫೇರಿ ಹಾಗೂ 1942 ರ ಚಳುವಳಿಯಲ್ಲಿ ತಂತಿ ಕಡಿತದಂತಹ ಕಾರ್ಯಗಳಲ್ಲಿ ಭಾಗಿಯಾಗಿ ಅಂಕೋಲೆ ಜೈಲು ಸೇರಿದರು.

ಶೇಷಗಿರಿ ರಾಮಚಂದ್ರ ಪ್ರಭು ಮಹಾತ್ಮಾಗಾಂಧಿಜಿಯವರ ಪ್ರಭಾವದಿಂದ ವಿದ್ಯಾಭ್ಯಾಸ ಬಿಟ್ಟು ಚಳುವಳಿಯಲ್ಲಿ ಭಾಗಿಯಾದರು. ಸ್ವಯಂ ಸೇವಕರಾಗಿ, ಸ್ವಯಂ ಸೇವಕರ ನಾಯಕನಾಗಿ ಕಾರ್ಯ ನಿರ್ವಹಿಸಿದರು. ಹಳ್ಳಿಗಳಿಗೆ ಹೋಗಿ ಕಾಂಗ್ರೇಸ್ ಮತ್ತು ಖಾದಿ ಪ್ರಚಾರ, ನೂಲು ತೆಗೆಯುವಂತಹ ಕಾರ್ಯಗಳ ಪ್ರಚಾರವನ್ನು ಕೈಗೊಂಡರು. ಜೊತೆಗೆ ಸೆಂಧಿ–ಶರಾಬ ದಂತಹ ಸತ್ಯಾಗ್ರಹಗಳ ಮೆರವಣಿಗೆಯಲ್ಲೂ ಭಾಗಿಯಾದರು.

3. ಉಪಸಂಹಾರ :

ಉತ್ತರ ಕನ್ನಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರ ಸ್ಮೃತಿಗಳ ಪುನರ್ ಅವಲೋಕನದಲ್ಲಿ ರಾಷ್ಟ್ರೀಯ ಚಳುವಳಿಯ ಇತಿಹಾಸವನ್ನು ವಿಶ್ಲೇಷಿಸಲಾಗಿದೆ. ಭಾರತದಾದ್ಯಂತ ಹರಡಿದ ರಾಷ್ಟ್ರೀಯ ಚಳುವಳಿಗಳು ಪರದೇಶಗಳಿಂದ ಮುಕ್ತತೆಯನ್ನು ಬಯಸಿದವು. ರಾಷ್ಟ್ರದ ಮುಕ್ತತೆಗಾಗಿ ಉತ್ತರ ಕನ್ನಡ ಜಿಲ್ಲೆಯು ಹೊರತಾಗಿರಲಿಲ್ಲ. ರಾಷ್ಟ್ರದ ಇತಿಹಾಸದ ಸ್ಮೃತಿಗಳೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಇತಿಹಾಸ ಬೆರೆತು ಹೋಗಿದೆ. ರಾಷ್ಟ್ರದ ಒಂದು ಪ್ರಾದೇಶಿಕ ಭಾಗವಾದ ಉತ್ತರ ಕನ್ನಡ ಜಿಲ್ಲೆ ಪ್ರಾಗೈತಿಹಾಸಿಕ ಕಾಲದಿಂದಲೂ ವಿಭಿನ್ನ ಸಂಸ್ಕೃತಿಗಳನ್ನು ಅಳವಡಿಸಿಕೊಂಡಿದೆ. ಅದರಂತೆ ಆಧುನಿಕ ಕಾಲದ ರಾಷ್ಟ್ರೀಯ

ಚಳುವಳಿಯ ಇತಿಹಾಸಕ್ಕೆ ಸಂಬಂಧಿಸಿದಂತೆ ವಿಭಿನ್ನ ಸ್ವರೂಪಗಳನ್ನು ತೋರ್ಪಡಿಸಿ ಇತಿಹಾಸದ ಪುಟಗಳಲ್ಲಿ ಸೇರ್ಪಡೆಗೊಂಡಿದೆ. ಒಂದು ಹಂತದಲ್ಲಿ ಉತ್ತರ ಕನ್ನಡ ಜಿಲ್ಲೆಯ ಎಲ್ಲ ಸಮುದಾಯಗಳು ಹಾಗೂ ಸ್ತ್ರೀ-ಪುರುಷ ಹೋರಾಟಗಾರರು ಚಳುವಳಿಯ ಯಶಸ್ವಿಗೆ ಕಾರಣಿಕರ್ತರಾದರೆ, ಇನ್ನೊಂದು ಹಂತದಲ್ಲಿ ಮಕ್ಕಳ ಸೈನ್ಯ ಕೂಡಾ ಚಳುವಳಿಗೆ ಮೆರಗನ್ನು ತಂದುಕೊಟ್ಟರು.

ವಿಮರ್ಶಾ ಗ್ರಂಥಗಳು :

1. ರಮೇಶ ಎಸ್. ನಾಯಕ : ಸಿದ್ಧಾಪುರ ಪ್ರದೇಶದ ಪುರಾತತ್ವ, ಎಂ.ಫಿಲ್, ಕೆ.ಯು.ಡಿ., 1995 ಪು.ಸಂ. 5,8,9,12,17.
2. Suryanath U. Kamath : Uttar Kannada District Gazetteer, Government of Karnataka, 1985, P. 3-14
3. ಅದೇ ಪುಟ 5.
4. ಜ್ಯೋತಿ ಗಣಪತಿ ನಾಯಕ ಹೊಸ್ಕೇರಿ : ಅಂಕೋಲಾ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕನ, ಎಂ.ಫಿಲ್, ಇತಿಹಾಸ ಪ್ರಾಚ್ಯಶಾಸ್ತ್ರ ವಿಭಾಗ, 1995, ಪು. 24, 25, 26
5. ಅದೇ, ಪುಟ 34, 35, 36.
6. ಅದೇ ಪುಟ 36, 37
7. ಅದೇ ಪುಟ 37–38.
8. ಉಮಾದೇವಿ ಕಣವಿ : 1942 ರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಮಹಿಳೆಯರ ಪಾತ್ರ ಒಂದು ಐತಿಹಾಸಿಕ ಅಧ್ಯಯನ, ಎಂ.ಫಿಲ್, ಇತಿಹಾಸ ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ 1995, ಪುಟ 28–29, 61–68
9. ರಮೇಶ ನಾಯಕ : ಸಿದ್ಧಾಪೂರ ಪ್ರದೇಶದ ಪುರಾತತ್ವ, ಎಂ.ಫಿಲ್, ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, 1995, ಪುಟ–75.
10. ಜ್ಯೋತಿ ಗಣಪತಿ ನಾಯಕ ಹೊಸ್ಕೇರಿ : ಅಂಕೋಲಾ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕನ, ಎಂ.ಫಿಲ್, ಇತಿಹಾಸ ಪ್ರಾಚ್ಯಶಾಸ್ತ್ರ ವಿಭಾಗ, 1995, ಪು. 107.
11. ಸೂರ್ಯನಾಥ ಕಾಮತ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–1, ಗೀತಾ ಬುಕ್ ಹೌಸ್, ಮೈಸೂರು, ಪುಟ 303–306.
12. ಅದೇ ಪುಟ 300–303.
13. ಅದೇ ಪುಟ 25–27, 30–36, 36–39
14. ಜ್ಯೋತಿ ಗಣಪತಿ ನಾಯಕ ಹೊಸ್ಕೇರಿ : ಅಂಕೋಲಾ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕನ, ಎಂ.ಫಿಲ್, ಇತಿಹಾಸ ಪ್ರಾಚ್ಯಶಾಸ್ತ್ರ ವಿಭಾಗ, 1995, ಪು. 30–31.
15. ಸೂರ್ಯನಾಥ ಕಾಮತ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–1, ಗೀತಾ ಬುಕ್ ಹೌಸ್, ಮೈಸೂರು, ಪುಟ 39–46, 53–57, 66–69, 39–46, 46–57, 66–76, 80–87, 101–112, 195–203
16. ಜ್ಯೋತಿ ಗಣಪತಿ ನಾಯಕ ಹೊಸ್ಕೇರಿ : ಅಂಕೋಲಾ ತಾಲ್ಲೂಕಿನಲ್ಲಿ ಸ್ವಾತಂತ್ರ್ಯ ಹೋರಾಟ ಒಂದು ಅವಲೋಕನ, ಎಂ.ಫಿಲ್, ಇತಿಹಾಸ ಪ್ರಾಚ್ಯಶಾಸ್ತ್ರ ವಿಭಾಗ, 1995, ಪು. 70–76, 97–99, 107–109, 121–125, 128–130.
17. ಸೂರ್ಯನಾಥ ಕಾಮತ : ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂಪುಟ–1, ಗೀತಾ ಬುಕ್ ಹೌಸ್, ಮೈಸೂರು, ಪು. 16–140, 143–148, 153–154)
18. ಅದೇ, ಪು. 57–61, 231–245,
19. ಅದೇ ಪು. 223–231, 246–253, 263–301.
20. ಅದೇ, ಪು. 155–158, 160–165.
21. ಅದೇ ಪು. 159–160, 166–167.
22. ಅದೇ ಪು. 77–80, 166.
23. ಅದೇ, ಪುಟ 168–170.
24. ಅದೇ ಪುಟ 171–173.

❑

ಪಂಚವಟಿಮಳಗಿಯ ವೀರಗಲ್ಲು ಶಾಸನಶಿಲ್ಪ

– ಡಾ. ಕರೆಪ್ಪಗೌಡ ಸಿ. ಪಾಟೀಲ

ಉತ್ತರಕನ್ನಡ ಜಿಲ್ಲೆಯ ಮುಂಡಗೋಡ ತಾಲೂಕಿನಿಂದ 30 ಕಿ.ಮೀ. ದೂರದಲ್ಲಿರುವ ಪಂಚವಟಿಮಳಗಿಯ ಶಿವದೇವಾಲಯದ ಎದುರು ವೀರಗಲ್ಲು ಶಾಸನವಿದೆ. (ಚಿತ್ರನೋಡಿ). ಶಿಲ್ಪಫಲಕವು 68 ಸೆಂ.ಮೀ. ಉದ್ದ, 32 ಸೆಂ.ಮೀ. ಅಗಲವಾಗಿದ್ದು, ಒಂದರ ಮೇಲೊಂದರಂತೆ ಮೂರುಪಟ್ಟಿಕೆಗಳಿವೆ. ಮೊದಲನೆಯ (ಕೆಳಗಿನ) ಪಟ್ಟಿಕೆಯಲ್ಲಿ ವೀರನು ಕೈಯಲ್ಲಿ ಭರ್ಚಿ ಮತ್ತು ಢಾಲು (ಖೇಟಕ) ಹಿಡಿದುಕೊಂಡು ವೈರಿಗಳೊಂದಿಗೆ ಹೋರಾಡುವ ದೃಶ್ಯವಿದೆ. ಎರಡನೆಯಪಟ್ಟಿಕೆಯಲ್ಲಿ ಹೋರಾಟದಲ್ಲಿ ಮಡಿದ ವೀರನನ್ನು ಅಪ್ಸರೆಯರು ಕಂಠಾಶ್ಲೇಷ ರೀತಿಯಲ್ಲಿ ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಮೂರನೆಯ ಪಟ್ಟಿಕೆಯು ಅರ್ಧ ವೃತ್ತಾಕಾರದಲ್ಲಿದ್ದು, ಮಧ್ಯದಲ್ಲಿ ಶಿವಲಿಂಗ, ಇಕ್ಕೆಲಗಳಲ್ಲಿ ಇಬ್ಬರುಪುರುಷರು ಕೈಮುಗಿದು ಕುಳಿತಿದ್ದಾರೆ. ಮತ್ತು ಒಬ್ಬ ಯತಿಯು ಶಿವಲಿಂಗಕ್ಕೆ ಪೂಜೆ ಸಲ್ಲಿಸುತ್ತಿರುವ ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ, ಚಂದ್ರರ ಸಂಕೇತಗಳಿವೆ. ಪ್ರಸ್ತುತ ಶಾಸನವು ಈಪಟ್ಟಿಕೆಗಳ ನಡುವಿನ ಅವಕಾಶದಲ್ಲಿ 5 ಸಾಲುಗಳಲ್ಲಿದೆ.ಶಾಸನದ ಸಾಲುಗಳು ಹೆಚ್ಚು ಕಡಿಮೆ ಸುಸ್ಥಿತಿಯಲ್ಲಿವೆ.

ಶಾಸನವನ್ನು ಕ್ರಿ.ಶ. 12–13ನೆಯ ಶತಮಾನದ ಕನ್ನಡ ಲಿಪಿ ಮತ್ತು ಭಾಷೆಯಲ್ಲಿ ಬರೆದಿದೆ. ತೈಲಹದೇವನು ಕೀರ್ತಿದೇವನ ಮೇಲೆ ದಾಳಿ ಮಾಡಿದಾಗ ಭಚಗೋವೆಯ ಆಲಗಾವುಂಡನ ಮಕ್ಕಳಾದ ಲಕುಮ್ಮಣನು (ಲಕುಮಣ್ಣನು) ಮತ್ತು ಚಟ್ಟಣನು ತುರುಗಳನ್ನು (ಹಸು) ಬಿಡಿಸಿಕೊಳ್ಳಲು ಮತ್ತು ಸ್ತ್ರೀಯರ ಮಾನ ಕಾಪಾಡಲು ಹೋರಾಡುತ್ತ ಸುರಲೋಕ ಪ್ರಾಪ್ತರಾದರು.

ಈ ಶಾಸನದಲ್ಲಿ ತೈಲಹದೇವ ಮತ್ತು ಕೀರ್ತಿದೇವನ ಉಲ್ಲೇಖವಿದ್ದು, ಇವರು ಯಾವ ವಂಶದವರೆಂದು ಸ್ಪಷ್ಟವಿಲ್ಲ. ಮುಂಡಗೋಡ ಪ್ರದೇಶದ ಮೇಲೆ ಕಾದಂಬವಂಶದ ಅರಸರ ಹಿಡಿತವಿತ್ತು. ಈ ಶಾಸನವು ಸುಮಾರು 12–13ನೆಯ ಶತಮಾನದ ಅಕ್ಷರಗಳಲ್ಲಿರುವುದರಿಂದ ಮತ್ತು ಈ ತೈಲಹದೇವ ಮತ್ತು ಕೀರ್ತಿದೇವ ಎಂಬ ಹೆಸರುಗಳು ಹಾನಗಲ್ಲ ಕದಂಬ ಮತ್ತು ಚಂದಾವರ ಕಾದಂಬ ಅರಸರ ವಂಶಾವಳಿಗಳಲ್ಲಿ ಬರುವುದರಿಂದ ಈ ಎರಡು ವಂಶದವರ ನಡುವಣ ಘರ್ಷಣೆಗೆ ಸಂಬಂಧಿಸಿರಬಹುದು.

ಇದೊಂದು ಗೋಗ್ರಹಣ ಮತ್ತು ಪೆಣ್ಬುಯ್ಯಲ್‌ನ ವೀರಗಲ್ಲು ಶಾಸನಶಿಲ್ಪವಾಗಿದ್ದು, ವೀರರ ಜ್ಞಾಪಕಾರ್ಥವಾಗಿನಿಲ್ಲಿಸಿದ ವೀರಗಲ್ಲುಗಳ ವಿಧಕ್ಕೆ ಸೇರುತ್ತದೆ. ಶಾಸನದ ಪಾಠ ಈ ಕೆಳಗಿನಂತಿದೆ.

ಶಾಸನದ ಪಾಠ

ಮೊದಲನೆಯ ಪಟ್ಟಿ

1 ಭಚಗೋವೆಯ ಆಲಗಾಂಉಣ್ಡನ ಮಗಂದಿರು ಲ

2 ಕುಮ್ಮಣನು ಚಟ್ಟಣನು ತೈಲಹದೇವನು

3 ಕೀರ್ತಿದೇವನ ಮೇಲೆ ಎತಿದಾ ಕಾಲ ತು [ಋ]

4 [ಇ]ರಿವಲ್ಲಿ ಪೆಣ್ಣುಡ ಉಡೆಯ ಉಚುವಲಿ ಇ [ಜ಼ಿ]

ಎರಡನೆಯ ಪಟ್ಟಿ

5 ದು ಸುರಲೋಕ ಪ್ರಸಾರ

(ಕಪ್ಪು ಷಾಯಿಂದ ತೆಗೆದ ಶಾಸನದ ಪಡಿಯಚ್ಚನ್ನು ನಾನು ಓದಲು ಈ ಲೇಖನವನ್ನು ಬರೆಯಲು ಸಹಕರಿಸಿದ ನನ್ನ ವಿದ್ಯಾಗುರುಗಳು ಹಾಗೂನನ್ನ ಸಂಶೋಧನ ಮಾರ್ಗದರ್ಶಕರೂ ಆದ ಡಾ. ಶ್ರೀನಿವಾಸ ವ್ಹಿ.ಪಾಡಿಗಾರ, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನವಿಜ್ಞಾನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ನನ್ನ ಕೃತಜ್ಞತೆಗಳು.)

❑

ರಾಣಿ ಚೆನ್ನಭೈರಾದೇವಿ ಮತ್ತು ಇಮ್ಮಡಿ ಅಂಕುಶ ರಾಯನ ನಾಣ್ಯಗಳು

– ಮಂದರ್ಕೆ ನಿತ್ಯಾನಂದ ಪೈ

ಹೊಯ್ಸಳರ ಕೆಳಗೆ ಸಾಮಂತರಾಗಿದ್ದ ಹಲವಾರು ಸಣ್ಣ ರಾಜಮನೆತನಗಳು ಹೊಯ್ಸಳರ ಇಳಿಗಾಲದಲ್ಲಿ ತಾವೇ ಸ್ವತಂತ್ರರಾಗಿ ಆಳಲು ಪ್ರಾರಂಭಿಸಿದರು. ಇಂತಹ ಪರಿವರ್ತನೆಯಲ್ಲಿ ಉದಯಿಸಿದ ರಾಜ್ಯಗಳಲ್ಲಿ 'ನಗಿರೆ' ರಾಜ್ಯವು ಒಂದು.ನಗಿರೆಗೆ ಗೇರುಸೊಪ್ಪೆ, ಭಲ್ಲಾತಕೀಪುರ, ಕ್ಷೇಮಪುರ ಮುಂತಾದ ಹೆಸರುಗಳು ಇವೆ. ಇದರ ಪಕ್ಕದ ರಾಜ್ಯ 'ಹಾಡುವಳ್ಳಿ' ಇದಕ್ಕೆ ಸಂಗೀತಪುರ ಎಂದೂ ಕರೆಯುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ 26 ಕಿ.ಮೀ. ದೂರದಲ್ಲಿರುವ ಗೇರುಸೊಪ್ಪೆ ಮತ್ತು ಭಟ್ಕಳದಿಂದ 19 ಕಿ.ಕೀ. ದೂರದಲ್ಲಿರುವ ಹಾಡುವಳ್ಳಿಯು ಒಂದು ಕಾಲದಲ್ಲಿ ಸಾಳುವರ ರಾಜಧಾನಿಯಾಗಿ ಮೆರೆದಿತ್ತು. ಈ ಎರಡೂ ಮನೆತನಗಳು ಸಾಳುವ ಅಥವಾ ಸಾಳ್ವ ವಂಶಸ್ಥರು, ಜೈನ ಮತಾವಲಂಬಿಗಳು ಇವರು ತಮ್ಮನ್ನು ಸೋಮ ವಂಶದ ಕಾಶ್ಯಪ ಗೋತ್ರದವರೆಂದು ಕರೆದುಕೊಂಡಿದ್ದಾರೆ.

ಈ ಎರಡೂ ಮನೆತನಗಳ ಮಧ್ಯೆ ವೈವಾಹಿಕ ಸಂಬಂಧ, ಹಗೆತನ, ಕಾಳಗ ಆಗಾಗ್ಯೆ ನಡೆಯುತ್ತಿದ್ದರೂ, ಅಂತಿಮವಾಗಿ ಈ ಒಳಜಗಳಕ್ಕೆ ಪೂರ್ಣವಿರಾಮ ಹಾಕಿದ ಶ್ರೇಯಸ್ಸು ಮಹಾಮಂಡಲೇಶ್ವರೀ ಚೆನ್ನಭೈರಾದೇವಿ (ಕ್ರಿ.ಶ. 1554– 1603)ಗೆ ಸೇರುತ್ತದೆ. ಸಣ್ಣ ವಯಸ್ಸಿನಲ್ಲೇ ಪಟ್ಟಕ್ಕೇರಿದ ಈ ರಾಣಿ ಸುಮಾರು ಅರ್ಧ ಶತಮಾನಗಳ ಕಾಲ ಆಳಿದ್ದು ಚರಿತ್ರಾರ್ಹ ದಾಖಲೆ. ಇವಳ ಗಂಡ ಸಾಳುವ ಕೃಷ್ಣದೇವರಸ. ಪ್ರಸ್ತುತ ಈ ಹೊಸ ಮಾದರಿಯ ನಾಣ್ಯದ ವಿವರಗಳು ಹೀಗಿವೆ.

ಲೋಹ : ತಾಮ್ರ ತೂಕ : 9 ಗ್ರಾಂ. ವ್ಯಾಸ : 18 ಮಿ.ಮೀ.

ಮುಂಬದಿ : ಎಡಬದಿಗೆ ಚಲಿಸುತ್ತಿರುವ ಗಂಡಭೇರುಂಡದ ಚಿತ್ರವಿದೆ.

ಹಿಂಬದಿ : ಆಯತಾಕಾರದ ವಿನ್ಯಾಸವನ್ನು ಒಂದು ರೇಖೆಯು 2 ವಿಭಾಗವನ್ನಾಗಿ ಮಾಡಿದ್ದು ಇದರ ಮೇಲೆ ಮತ್ತು ಕೆಳಗೆ ಚಂನ ಬ / ಯಿರಾ ದೇವಿ ಎಂಬ ಕನ್ನಡ ಲಿಪಿ ಇದೆ. ಆಯತಾಕಾರದ ಮೇಲೆ ಚಂದ್ರ ಮತ್ತು ಸೂರ್ಯರಿದ್ದುನಡುವೆ ಸಾಳುವರ ತಾಮ್ರದ ನಾಣ್ಯಗಳಲ್ಲಿ ಸಾಮಾನ್ಯವಾಗಿ ಕಂಡುಬರುವ 3 ದಳಗಳ ವಿನ್ಯಾಸವಿದೆ.

ಶಾಸನಗಳು ಚೆನ್ನಭೈರಾದೇವಿಯನ್ನು ಚಂನ ಭಯಿರಾದೇವಿ, ಚಂನ ಭೈರಾದೇವಿ, ಚೆನ್ನ ಭೈರಾದೇವಿಯಮ್ಮ, ಇಮ್ಮಡಿ ಚೆನ್ನ ಭೈರಾದೇವಿ ಎಂದು ಉಲ್ಲೇಖಿಸುತ್ತವೆ.

ಸಂಪತ್ ಭರಿತವಾದ ತನ್ನ ರಾಜ್ಯವನ್ನು ಕಬಳಿಸಲು ಸನ್ನದ್ದರಾಗಿದ್ದ ಪೋರ್ಚುಗೀಸರನ್ನು ಸ್ವತಃ ಯುದ್ಧದಲ್ಲಿ ಮಣಿಸಿದ ಈ ರಾಣಿಯು ವಿಜಯನಗರದ ದೊರೆಗಳೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಂಡಿದ್ದಳು. 'ಕರಿಮೆಣಸಿನ ರಾಣಿ' (Pepper Queen)ಯೆಂದೇ ಪ್ರಸಿದ್ಧಳಾದ ಮಹಾಮಂಡಲೇಶ್ವರಿ ಚೆನ್ನಭೈರಾದೇವಿಯ ಅಂತ್ಯ ಕೆಳದಿ ನಾಯಕರ ಕೈಯಲ್ಲಾಯಿತು.

ವಿಜಯನಗರದ ದೊರೆ ಅಚ್ಯುತರಾಯ (ಕ್ರಿ.ಶ. 1530–1542) ಗತಿಸಿದ ಕೆಲ ವರ್ಷಗಳ ನಂತರ ಚೆನ್ನ ಭೈರಾದೇವಿಯು ಪಟ್ಟಕ್ಕೆ ಬಂದಳು. ಸ್ವಾಭಾವಿಕವಾಗಿ ಆ ಕಾಲದಲ್ಲಿ ಚಲಾವಣೆಯಲ್ಲಿದ್ದ ಅಚ್ಯುತರಾಯನ ಗಂಡಭೇರುಂಡದ ವಿನ್ಯಾಸವನ್ನು

ತನ್ನ ನಾಣ್ಯಗಳಲ್ಲಿ ಅಳವಡಿಸಿಕೊಂಡು, ನಂತರದ ದಿನಗಳಲ್ಲಿ ಆಳ್ವಿಕೆಯಲ್ಲಿದ್ದ ವಿಜಯನಗರದ ದೊರೆ ಸದಾಶಿವರಾಯನ ತಾಮ್ರದ ನಾಣ್ಯಗಳಲ್ಲಿರುವ ಗರುಡನ ಚಿತ್ರವನ್ನು ತನ್ನ ನಾಣ್ಯಗಳಲ್ಲಿ ಚಂನ ಭೈರಾದೇವಿಯು ಟಂಕಿಸಿದಳು.

ಪ್ರಸ್ತುತ ಈ ನಾಣ್ಯವು ಭಟ್ಕಳದಲ್ಲಿ ದೊರಕಿದ್ದು ಸಾಳುವರ ನಾಣ್ಯ ಶೃಂಖಲೆಗೆ (Chain) ಹೊಸದೊಂದು ನಾಣ್ಯವು ಸೇರಿಕೊಂಡಂತಾಯಿತು.

ಚನ್ನಪಟ್ಟಣ ಪಾಳೇಗಾರರು ರಾಣಾ ವಂಶದವರು. ತೆಲುಗು, ಬಣಜಿಗರು, ಇವರು 14ನೇ ಶತಮಾನದಲ್ಲಿ ಅಧಿಕಾರಕ್ಕೆ ಬಂದರೆಂದು ಬುಖನನ್ ತಿಳಿಸುತ್ತಾನೆ. ಈ ವಂಶದ ಮೂಲ ಪುರುಷ ರಾಣೋಜಿರಾವ್. ಚನ್ನಪಟ್ಟಣದಶಾಸನವು ಈ ವಂಶದ ತಿಮ್ಮ ನಾಯಕನು ಖಜಾನೆಯ ಮುಖ್ಯಸ್ಥನಾಗಿರುವ ವಿಷಯ ಉಲ್ಲೇಖಿಸುತ್ತದೆ. ಇವನ ಮಗ ಜಗದೇವರಾಯ. ಇವನ ನಂತರ ಆಳ್ವಿಕೆಗೆ ಬಂದ ಇಮ್ಮಡಿ ಜಗದೇವರಾಯನು ಈ ವಂಶದ ಅತ್ಯಂತ ಪ್ರಸಿದ್ಧ ದೊರೆ. ಬಿಜಾಪುರ ಅಹಮದ್ ನಗರ ಸುಲ್ತಾನರು ಪೆನುಗೊಂಡೆಯನ್ನು ಆಕ್ರಮಿಸಲು ಇವನು ವಿಜಯನಗರದ ಪರವಾಗಿ ಅಪ್ರತಿಮ ಸಾಹಸದಿಂದ ಕಾದಾಡಿ ಗೆಲುವನ್ನು ತಂದುಕೊಟ್ಟ. ಇದರಿಂದ ವಿಜಯನಗರದ ದೊರೆಗಳು ಇವನಿಗೆ 'ಘನಪೂರಿ ರಕ್ಷಕ' ಎಂಬ ಬಿರುದನ್ನು ನೀಡಿ, ಕೆಲವು ಜಿಲ್ಲೆಗಳನ್ನು ಪ್ರತಿಫಲವಾಗಿ ಕೊಟ್ಟರು. ಆಡಳಿತದ ದೃಷ್ಟಿಯಿಂದ ಚನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿ ಅಲ್ಲಿ ಕೋಟೆಯನ್ನು ಇಮ್ಮಡಿ ಜಗದೇವರಾಯನು ನಿರ್ಮಿಸಿದನು. ಅಂದಿನಿಂದ ಈ ಸ್ಥಾನಿಕಪ್ರಭುಗಳಿಗೆ ಚನ್ನಪಟ್ಟಣ ಪಾಳೇಗಾರರೆಂದು ಹೆಸರು ಬಂತು.

ಇಮ್ಮಡಿ ಜಗದೇವರಾಯನ ನಂತರ ಅಂಕುಶರಾಯನು ಕ್ರಿ.ಶ. 1600ರಲ್ಲಿ ಪಟ್ಟಕ್ಕೆ ಬಂದನು. ಈ ವೇಳೆಗೆ ಚನ್ನಪಟ್ಟಣ ಪಾಳೇಗಾರರು ಸಾಕಷ್ಟು ಪ್ರಬಲರಾಗಿ ವಿಜಯನಗರದ ದೌರ್ಬಲ್ಯದ ಪ್ರಯೋಜನವನ್ನು ಪಡೆದುಕೊಂಡು ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಇವನ ನಂತರ ಕುಮಾರ ಜಗದೇವರಾಯನು ಪಟ್ಟಕ್ಕೆ ಬಂದನು.

ಈ ಸಂತತಿಯ ಕೊನೆಯ ದೊರೆ ಅಂಕುಶ ಜಗದೇವರಾಯ ಅಥವಾ ಅಂಕುಶ ವೆಂಕಟಪತಿ. ಇವನು ಕ್ರಿ.ಶ. 1625ರಲ್ಲಿ ಆಳ್ವಿಕೆಗೆ ಬಂದನು. ಇವನ ಬಗ್ಗೆ ಸಮಕಾಲೀನ ಸಾಹಿತ್ಯದಲ್ಲಿ ಮಾತ್ರ ಉಲ್ಲೇಖ ಬರುತ್ತದೆ. ಸಾಹಿತ್ಯಪ್ರೇಮಿಯಾದ ಇವನ ಆಸ್ಥಾನದಲ್ಲಿ ರೇವೂರಿ ಏಕಾಂಬರನಾಥ ಎಂಬ ಪ್ರಸಿದ್ಧ ಕವಿ ಸಂಸ್ಕೃತದಲ್ಲಿ ಜಾಂಬವತೀ ಕಲ್ಯಾಣಂ ಮತ್ತು ಸತ್ಯವತೀ ಪರಿಣಯಂ ಎಂಬ ಕೃತಿಗಳನ್ನು ರಚಿಸಿ ಇಮ್ಮಡಿ ಅಂಕುಶನಿಗೆ ಸಮರ್ಪಿಸಿದ್ದಾನೆ. ಆದ್ದರಿಂದ ಈ "ಇಮ್ಮಡಿ ಅಂಕುಶರಾಯನು" ಅಂಕುಶ ಜಗದೇವರಾಯ ಅಥವಾ ಅಂಕುಶ ವೆಂಕಟಪತಿಯೇ ಇರಬೇಕೆಂದು ಇತಿಹಾಸ ತಜ್ಞರ ಅಭಿಪ್ರಾಯ.

ಇದುವರೆಗೆ ಜಗದೇವರಾಯ, ಇಮ್ಮಡಿ ಜಗದೇವರಾಯ, ಅಂಕುಶರಾಯನ ನಾಣ್ಯಗಳು ಪ್ರಕಟಿಸಲ್ಪಟ್ಟಿವೆ. ಪ್ರಸ್ತುತ ಇಮ್ಮಡಿ ಅಂಕುಶರಾಯನ ನಾಣ್ಯದ ವಿವರಗಳು ಹೀಗಿವೆ.

ಲೋಹ : ತಾಮ್ರ   ತೂಕ : 32 ಗ್ರಾಂ. ವ್ಯಾಸ : 15 ಮಿ.ಮೀ.

ಮುಂಭಾಗ : ಎರಡು ಅಂಕುಶಗಳ ವಿನ್ಯಾಸವಿದೆ.

ಹಿಂಭಾಗ : ಗೆರೆಗಳ ನಡುವೆ ಮೂರು ಸಾಲಿನ ಯಿಮಡಿ/ಅಂಕುಶ/ರಾಯ ಎಂಬ ಕನ್ನಡ ಲಿಪಿ ಇದೆ.

ಇಮ್ಮಡಿ ಅಂಕುಶ ರಾಯನ ಬಗ್ಗೆ ಇತಿಹಾಸ ಹೆಚ್ಚಾಗಿ ಏನನ್ನೂ ದಾಖಲಿಸಲಿಲ್ಲವಾದರೂ ಈ ನಾಣ್ಯವೂ ಅವನ ಅಸ್ತಿತ್ವವನ್ನು ಸಾರುತ್ತದೆ.

ಚನ್ನಪಟ್ಟಣದ ಪಾಳೇಗಾರರ ರಾಜ್ಯವು ಎಷ್ಟು ವೇಗವಾಗಿ ಅಸ್ತಿತ್ವಕ್ಕೆ ಬಂದಿತೋ ಅಷ್ಟೇ ಕ್ಷಿಪ್ರಗತಿಯಿಂದ ಇತಿಹಾಸದಪುಟಗಳಿಂದ ಕಣ್ಮರೆಯಾಗಿತ್ತು. ಕ್ರಿ.ಶ. 1630ರಲ್ಲಿ ಮೈಸೂರಿನ ಚಾಮರಾಜ ಒಡೆಯರ ದಳಪತಿ ವಿಕ್ರಮ ರಾಯನು ಚನ್ನಪಟ್ಟಣವನ್ನು ಆಕ್ರಮಿಸಿಕೊಂಡು ಈ ಪಾಳೆಯ ಪಟ್ಟವನ್ನು ಮೈಸೂರಿಗೆ ಸೇರಿಸಿಕೊಂಡನು.

ಆಕರ ಗ್ರಂಥಗಳು

1. ನಾಡೋಜ ಪ್ರೊ. ಕಮಲಾ ಹಂಪನಾ, ಮಹಾಮಂಡಲೇಶ್ವರೀ ರಾಣಿ ಚೆನ್ನ ಭೈರಾದೇವಿ.
2. Dr. Gururaj Bhat, Studies in Tuluvas History and Culture.
3. ಡಾ. ರಮೇಶ್ ಕೆ.ವಿ., ತುಳುನಾಡಿನ ಇತಿಹಾಸ.
4. Epigraphica Carnatica Vol IV
5. Venkat Rao N. Southern School of Telugu Literature.
6. ಡಾ. ವಸು ಎಂ.ವಿ., ಸಂಪಾದಿತ ದಕ್ಷಿಣ ಕರ್ನಾಟಕದ ಅರಸ ಮನೆತನಗಳು.

❑

ಸಿದ್ದಾಪುರದ ಅಪ್ರಕಟಿತ ತಾಮ್ರ ಶಾಸನಗಳು

– ಡಾ. ಎಸ್.ಕೆ. ಮೇಲಕಾರ, ಡಾ. ರಮಾ ಜಿ. ಗುಂಡುರಾವ್

ಉತ್ತರ ಕನ್ನಡ ಜಿಲ್ಲೆಯ ಕಾರವಾರದಿಂದ 102 ಕಿ.ಮೀ. ದೂರದಲ್ಲಿರುವ ಸಿದ್ಧಾಪುರ ತಾಲೂಕಿನಲ್ಲಿ ಬಿಳಗಿಯ ಅರಸರು ತಮ್ಮ ಆಳ್ವಿಕೆಯ ಕಾಲದಲ್ಲಿ ಸಕಲ ರೀತಿಯಿಂದ ಸಮೃದ್ಧಿಯನ್ನು ಸಾಧಿಸಿದ್ದರು. ಇಲ್ಲಿ ಸಿದ್ಧಿವಿನಾಯಕನ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಸಿದ್ಧಾಪುರವೆಂದು ಹೆಸರಿಟ್ಟರು. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ ಸಿದ್ಧಾಪುರವು ಪ್ರಸ್ತುತದಲ್ಲಿ ತಾಲೂಕು ಕೇಂದ್ರವಾಗಿ, ವಾಣಿಜ್ಯ, ವ್ಯಾಪಾರ ಧಾರ್ಮಿಕ ಕೇಂದ್ರವಾಗಿ ಹಾಗೂ ಗುಡ್ಡ–ಬೆಟ್ಟಗಳಿಂದ ಸುತ್ತುವರಿದು ವಿವಿಧ ವನಸಿರಿಗಳಿಂದ ಹಸಿರಾಗಿ ಕಂಗೊಳಿಸುತ್ತಿದೆ. ಬೀಳಗಿ ಮತ್ತು ಸಿದ್ಧಾಪುರಗಳ ನಡುವೆ ಭುವನಗಿರಿ ಎಂಬ ಗುಡ್ಡವಿದ್ದು, ಅಲ್ಲಿ ಒಂದು ವಿಷ್ಣು ದೇವಾಲಯವಿದೆ. ಪ್ರಸಿದ್ಧ ಜೋಗಜಲಪಾತವು ಇಲ್ಲಿಂದ 19 ಕಿ.ಮೀ. ಅಂತರದಲ್ಲಿದೆ. ಸಿದ್ಧಾಪುರವು ಮೊದಲು ಕೊಂಡಿಹಳ್ಳಿಯ ಭಾಗವಾಗಿತ್ತು. ಬಿಳಗಿಯ ರಾಣಿ ಜಯಾಂಬೆ ರಾಜಕುಮಾರ ಸಿದ್ಧಪ್ಪನ ಆರೋಗ್ಯಕ್ಕಾಗಿ ಪ್ರಾರ್ಥಿಸಿ ಗುಡಿಯೊಂದನ್ನು ಕಟ್ಟಿ ಉಂಬಳಿಕೊಟ್ಟ ಬಗ್ಗೆ ಕ್ರಿ.ಶ. 1651ರ ಒಂದು ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಹಾಗೆಯೇ ಇನ್ನೂ ಅನೇಕ ಶಾಸನಗಳುಶೈವ, ವೈಷ್ಣವ, ಜೈನ, ವೀರಶೈವ ದೇವಾಲಯಗಳ ನಿರ್ಮಾಣ ಮಾಡಿದ ಕುರಿತು ದಾಖಲಿಸಿವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಲಭ್ಯವಿರುವ ಎರಡು ತಾಮ್ರ ಪಟ ಶಾಸನನಗಳನ್ನು ಅಧ್ಯಯನ ಕ್ಕೊಳಮಾಡಲಾಗಿದೆ. ಇವು ಸಿದ್ಧಾಪುರದ ಹಾಳಿತಕಟ್ಟೆಯ ಶ್ರೀ ಗಂಗಾಧರೇಶ್ವರ ದೇವಸ್ಥಾನಕ್ಕೆ ಬೀಳಗಿಯ ಮಾಪ್ರಭು ಸೋಮಶೇಖರ ನಾಯಕರು ದತ್ತಿಬಿಟ್ಟ ಬಗ್ಗೆ ವಿವರಿಸುತ್ತವೆ. ಈ ಎರಡು ತಾಮ್ರಪಟ ಶಾಸನಗಳು ಬೀಳಗಿ ಅರಸ 3ನೇ ಸೋಮಶೇಖರನ ಕಾಲದ್ದಾಗಿವೆ. ಕ್ರಿ.ಶ. 1770ರ ಶಾಸನ ಗ್ರಾಮ ಹಾಗೂ ಭೂಮಿಗಳನ್ನು ದತ್ತಿಯಾಗಿ ನೀಡಿದ ವಿಷಯವನ್ನು ತಿಳಿಸಿದರೆ, ಮತ್ತೊಂದು ಶಾಸನ ವಿವಿಧ ವ್ಯಾಪಾರಿಗಳು ಸರಕುಗಳ ಮೇಲೆ ಸುಂಕವನ್ನು ವಸೂಲಿಮಾಡಿ ಈ ದೇವಸ್ಥಾನಕ್ಕೆ ಬಿಟ್ಟ ಬಗ್ಗೆ ವಿವರಿಸುತ್ತದೆ.

ಮೊದಲನೆಯ ತಾಮ್ರ ಪಟ ಶಾನವು "ಶುಭಮಸ್ತು ।ನಮಸ್ತುಂಗ ಶಿರಶ್ಚಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯನಗರಾರಂಭ ಮೂಲ ಸ್ತಂಭಾಯ ಶಂಭವೇ । ಎಂಬ ಬಾಣಭಟ್ಟನ ಹರ್ಷಚರಿತ ಕಾವ್ಯದಲ್ಲಿಯ ಶಿವನ ಸ್ತುತಿಪರವಾದಶ್ಲೋಕದಿಂದ ಆರಂಭಗೊಳ್ಳುತ್ತದೆ. ಅನಂತರ ಶಾಸನ ಕಾಲ ಮತ್ತು ವಿಷಯಗಳನ್ನು ದಾಖಲಿಸುತ್ತದೆ. ಸ್ವಸ್ತಿ ಶ್ರೀ ಜಯಾಭ್ಯೂದಯ ಶಾಲಿವಾಹನ ಶಕ ವರುಷ. 1692 ವಿರೋಧಿ ಸಂವತ್ಸರದ ಶ್ರಾವಣ ಶುದ್ಧ 6ಯು ಸೋಮವಾರದ ಪುಣ್ಯಕಾಲದಲ್ಲೂ" ಸಿದ್ಧಾಪುರದ ಹಾಳಿತಕಟ್ಟೆಯ ಸಮೀಪದ ಶ್ರೀಗಂಗಾಧರೇಶ್ವರ ದೇವರ ಶ್ರೀಪಾದ ಪದ್ಮಂಗಳಿಗೆ ಶ್ರೀ ಮನ್ಮಹಾ ಪ್ರಭೂ ಬೀಳಗಿ ಸೋಮಶೇಖರನಾಯಕರು ಬರಸಿಕೊಟ್ಟ ಧರ್ಮಶಾಸನ ವೆಂದು ವರ್ಣಿಸಿದೆ. ಶಾಸನೋಕ್ತ ಕಾಲಮಾನ ಕ್ರಿ.ಶ. 1769 ಅಗಸ್ಟ 7 ಸೋಮವಾರಕ್ಕೆ ಸಮನಾಗುತ್ತದೆ. ಈ ಶಾಸನದನಂತರ 4 ವರ್ಷಗಳ ಬಳಿಕ ಎರಡನೆಯ ಶಾಸನವನ್ನು ಹೊರಡಿಸಲಾಗಿದ್ದು ಆ ಶಾನದಲ್ಲಿ ಶಕವರುಷ 1692 ನೇ ವಿರೋಧಿ ಸಂವತ್ಸರ ಶ್ರಾವಣ ಶುದ್ಧ 10 ರಲ್ಲಿ ಎಂದಿದ್ದು ಅದರ ಕಾಲಮಾನ ಕ್ರಿ.ಶ. 1770 ಅಗಸ್ಟ 12 ಶನವಾರಕ್ಕೆ ಸರಿಹೋಗುತ್ತದೆ.

ಈ ಎರಡು ಶಾಸನಗಳು ಸಿದ್ಧಾಪುರದ ಶ್ರೀ ಗಂಗಾಧರೇಶ್ವರ ದೇವಾಲಯದ ರಥೋತ್ಸವ ನಡೆಯಲು ಈ ಭಾಗದ ಕೆಲವು ಪ್ರದೇಶಗಳನ್ನು ದಾನ ಮಾಡಿದ ವಿಷಯವಲ್ಲದೇ ಅಲ್ಲಿಗೆ ಬರುತ್ತಿದ್ದ ಸರಕುಗಳ ಮೇಲೆ ಆಕರಿಸುತ್ತಿದ್ದ ಸುಂಕವನ್ನು ವಿನಾಯತಿ ಮಾಡಿರುವ ಕುರಿತು ವಿವರಿಸಿದೆ. ಹದಿನಾರು ಹದಿನೆಳನೇ ಶತಮಾನದಲ್ಲಿ ಮಲೆನಾಡಿನ ಈ ಭಾಗ ವಾಣಿಜ್ಯ ವ್ಯಾಪಾರ ಕ್ಷೇತ್ರದಲ್ಲಿ ಹೆಸರು ಮಾಡಿತ್ತೆಂದು ಈ ಶಾಸನಗಳ ಅಧ್ಯಯನದಿಂದ ವ್ಯಕ್ತವಾಗುತ್ತದೆ. ಈ ಭಾಗದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದ್ದ ಎಲೆ– ಅಡಕೆ–ಟೆಂಗು–ಬಾಳೆ–ಮೆಣಸು ಇತ್ಯಾದಿ ಬೆಳೆಗಳೇ ಮುಖ್ಯ ವಾಣಿಜ್ಯ ಬೆಳೆಗಳಾಗಿದ್ದವೆಂದು ತಿಳಿದು ಬರುತ್ತದೆ.

ಶಕವರುಷ 1692ರ ಸೋಮಶೇಖರನಾಯಕನ ಕಾಲದ ಹಾಳಿತಕಟ್ಟೆ ತಾಮ್ರಪಟ ಶಾಸನದಲ್ಲಿ ಗಂಗಾಧರೇಶ್ವರ ದೇವರ ರಥೋತ್ಸವದ ವೆಚ್ಚವನ್ನು ಭರಿಸಲಿಕ್ಕಾಗಿ ಸಿದ್ಧಾಪೂರ– ಸಾಗರ, ಸಿದ್ಧಾಪರ–ಬಡಾಳ–ಕುಮಾಟಾ –ಹೊನ್ನಾವರ ಮಾರ್ಗದ ಆ ದಾರಿಗಳಲ್ಲಿ ಹಾಯ್ದು ಹೋಗುತ್ತಿದ್ದ ಅಡಿಕೆ–ಮೆಣಸುಗಳ ಮೇಲಿನ (ಸರಕುಗಳ ಮೇಲಿನ) ಸುಂಕವನ್ನು ದಾನವಾಗಿ ಬಿಟ್ಟದ್ದನ್ನು ಉಲ್ಲೇಖಿಸಲಾಗಿದೆ. ಅದರಲ್ಲಿ ಒಂದು ಗದ್ಯಾಣ ಬೆಲೆಯ ಸರಕಿಗೆ ಮೂರು ವೀಸದಂತೆ ಸೆಟ್ಟಿ ಸಮಸ್ತರು ದೇವಾಲಯಕ್ಕೆ ನೀಡಬೇಕು ಹಾಗೂ ಆ ಸ್ಥಳದ ಸೇನ ಭೋವರು ಅದನ್ನು ಸಂಗ್ರಹಿಸಬೇಕೆಂದು ವಿವರಿಸುತ್ತದೆ. ಅದನ್ನೇ ಶಾನದಲ್ಲಿ "ಸೀಮೇವಳಗೆ ಸ್ಥಳ ಪರಸ್ಥಳದ ಮಹಾನಾಡವರು, ಸೆಟ್ಟಿ ಸಮಸ್ತರು ತಾವು ಉಭಯ ಮಾರ್ಗದಲು ಹೇರುವ ಅಡಿಕೆ–ಮೆಣಸಿಗೆ ಸಿದ್ಧಾಪುರದ ಹಾಳಿತಕಟ್ಟೆಯಲು ಅನಾದಳೆ ಖಕೇರಥ–ಉತ್ಸವದ ಬಗ್ಗೆ ಶಿವಾರ್ಪಿತವಾಗಿ ಗ–1ಕ್ಕೆ ಹ ಹ ವಂದು ವರಹಾಕಿ ಮೂರು ವೀಸದಲು ಹಾಕಿಕೊಟ್ಟು ಧರ್ಮ ಶಾಸನವ ಬರೆಸಿಕೊಟ್ಟಪ್ರಮಾಣ ಸಿದ್ಧಾಪುರದ ಹಾಳತಕಟ್ಟೆ ಗ–1ಕ್ಕೆ ಹ ಹ ವಂದು ವರಹಾಕೆ ಮೂರು ಮೀಸದಲು ಆ ಸ್ಥಳದ ಸೇನಬೋವರು ಬದಕುಮಾಡುವವರ ಮುಖಾಂತ್ರ ಕಾಲ ಕಾಲಂ ಪ್ರತಿಯಲು ಯತಿಶಿ ತರಿಸಿಕೊಂಡು ರಥ – ಉತ್ಸವದ ಸೇವೆಯಂದುನಡೆಸಿಕೊಂಡು ಬಾಹಾಗೆ ಶಿವಾರ್ಪಿತವಾಗಿ ಬಿಟ್ಟರೆಂದು ವಿವರಿಸಲಾಗಿದೆ.

ಈ ಶಾಸನೋಕ್ತ ನಾಣ್ಯಗಳ ಉಲ್ಲೇಖದಿಂದ ನಮಗೆ ತಿಳಿದುಬರುವದೇನೆಂದರೆ ಭೂಮಿಯ ಕಂದಾಯವನ್ನು ಸುವರ್ಣಾದಾಯದಲ್ಲೇ ಸಂಗ್ರಹಿಸಿ ದೇವಾಲಯಗಳಿಗೆನೀಡುವುದಲ್ಲದೆ, ದೇವಾಲಯದ ಅಗತ್ಯ ವಸ್ತುಗಳ ವೆಚ್ಚವನ್ನು ಹಣದ ರೂಪದಲ್ಲಿ ಲೆಕ್ಕಹಾಕಲಾಗಿದೆ. ಅಡಕೆ, ಎಲೆ, ತೆಂಗು, ಗೋಧಿ, ಬೆಲ್ಲ, ಎಣ್ಣೆ, ಗಂಧ, ಧೂಪ ಇತ್ಯಾದಿಗಳನ್ನು ಹಣದಿಂದಲೇ ಖರೀದಿಸಲಾಗುತ್ತಿರುವುದಾಗಿ ಗೊತ್ತಾಗುತ್ತದೆ.

ಮತ್ತೊಂದು (2ನೇ ತಾಮ್ರಪಟ ಶಾಸನ) ತಾಮ್ರಪಟ, ಶಾಸನದ ಕಾಲಮಾನ ಕ್ರಿ.ಶ. 1770 ಅಗಸ್ಟ 12ಶನವಾರಕ್ಕೆ ಸರಿಹೊಂದುತ್ತಿದ್ದು, ಇದನ್ನು ಶಾಸನದಲ್ಲಿ ಶಕವರುಷ 1692ನೇ ವಿರೋಧಿ ಸಂವತ್ಸರ ಶ್ರಾವಣ ಶುದ್ಧ 10 ರಲ್ಲಿ ಎನ್ನಲಾಗಿದೆ. ಈ ಶಾಸನದಲ್ಲಿ ಸಿದ್ಧಾಪುರದ ಹಾಳಿತಕಟ್ಟೆಯ ಸಮೀಪದ ಶ್ರೀಗಂಗಾಧರೇಶ್ವರ ದೇವಾಲಯಕ್ಕೆ ಮುಮ್ಮಡಿ ಸೋಮಶೇಖರ ನಾಯಕರು ಆ ದೇವರ ಪೂಜೆ–ಪುನಸ್ಕಾರ ನೈವೇದ್ಯ–ರಥೋತ್ಸವ ಮುಂತಾದವುಗಳ ವೆಚ್ಚಕ್ಕಾಗಿ ಕೊಂಡಳಿ ಹೊಬಳಿ–ಶಿರುವಳಿಗೆ ಗ್ರಾಮದ (ಈಗಿನ ಶಿರಳಗಿ) ಕೆಲಗಣ ಕೊಳನಿ ತಿಮ್ಮಣನ ಹೆಸರಲು ಬರೆದು ಅಲ್ಲಿಯ ಬ್ರಾಹ್ಮಣ ವಟು ವರ್ಗಕ್ಕೆ ಮತ್ತು ಅವರಗುಪ್ಪಿ ಗ್ರಾಮದಿಂದಲೂ ಸಹ ವಿವಿಧ ರೀತಿಯ ಭೂಮಿದಾನ ಮಾಡಿದ ಬಗ್ಗೆ ಶಾಸನ ತಿಳಿಸುತ್ತದೆ.

ಈ ಎರಡೂ ಶಾಸನಗಳ ಕೊನೆಗೆ ಸಾಕ್ಷಿಗಳು ಮತ್ತುಶಾಪಾಶಯ ಶ್ಲೋಕಗಳಿವೆ. "ಈ ಧರ್ಮ ಶಾಸನಕ್ಕೆ ಸಾಕ್ಷಿಗಳೆಂದರೆ ಲೋಕ ಸಾಕ್ಷಿಗಳು, ಆದಿತ್ಯ ಚಂದ್ರಾವನ ಲೋನತ್ಯಾಚದೌರ್ಭೂಮಿರಾಘೋಹೃದಯಂ ಯಮಶ್ಯ ಅಹಶ ರಾತ್ರಿ ಶ ಉಭೇಚ ಸಂಧ್ಯಾ ಧರ್ಮಸ್ಯ ಜಾನಾತಿ ನೆರುಸ್ಯ ಉತ್ತಂ। ಎಂದು ಧರ್ಮ ಶಾಸನ ಸಾಕ್ಷಿಗಳಾಗಿ ಲೋಕ, ಸೂರ್ಯಚಂದ್ರ ಮೊದಲಾದವರನ್ನು ಹೇಳಲಾಗಿದೆ. ಕೊನೆಯಲ್ಲಿ ದಾನ ರಕ್ಷಣೆ ಮತ್ತು ಅಪಹರಣದಫಲಾಫಲಗಳನ್ನು ಕುರಿತಾದ ಶ್ಲೋಕಗಳನ್ನು ಹೇಳಿದೆ. ಸ್ವದತ್ತಾದಿಗುಣ ಪುಣ್ಯಂ ಪರದತ್ತಾನು ಪಾಲ ನಂ...॥" ದಾನವು ತಾನೇ ಕೊಟ್ಟದ್ದಾಗಿರಲಿ ಇಲ್ಲವೇ ಇತರರು ಕೊಟ್ಟಿದ್ದಾಗಿರಲಿಅದನ್ನು ರಕ್ಷಿಸಿದರೆ (ಅದು ಮುಮದುವರಿಯುವಂತೆನೋಡಿಕೊಂಡರೆ) ದ್ವಿಗುಣ ಫಲ ಪ್ರಾಪ್ತವಾಗುತ್ತದೆ.

ದಾನ ಮಾಡುವುದು ಮತ್ತು ಮಾಡಿದ ದಾನವನ್ನು ಪಾಲಿಸಿಕೊಂಡು ಹೋಗುವುದುಶ್ರೇಯಸ್ಸು ಮತ್ತು ಸ್ವರ್ಗವನ್ನು ಪ್ರಾಪ್ತಿಸುತ್ತದೆ ಎಂದು ಹೇಳಲಾಗಿದೆ.

ಎರಡು ತಾಮ್ರಪಟ ಶಾಸನಗಳ ಪಠ್ಯ

1. ಸಿದ್ಧಾಪುರದ ಹಾಳಿತಕಟೆ ತಾಮ್ರಪಟ ಶಾಸನ

1. ॥ ಶುಭ ಮಸ್ತು । ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ।
2. ॥ ಚಾರವೇ ತ್ರೈಲೋಕ್ಯ ನಗರಾ ರಂಭ ಮೂಲಸ್ತಂಭಾಯ ಶಂಭವೆ ।
3. ॥ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1692ನೆ ।
4. ॥ ಯ ವಿರೋಧಿ ಸಂವತ್ಸರದ ಶ್ರಾವಣ ಶು. 6 ಯು ಸೋಮವಾರ ಪುಂ ।
5. ॥ ಣ್ಯ ಕಾಲದಲು ಸಿಧಾಪುರದ ಹಾಳಿತಕಟೆ ಸಮೀಪದ ಶ್ರೀ । ಗಂಗಾ ।
6. ॥ ಧರೇಶ್ವರ ದೇವರ ದಿವ್ಯಶ್ರೀ ಪಾದಪದ್ಮಂಗಳಿಗೆ । ಶ್ರೀಮನ್ಮಹಾಪ್ರಭು ।
7. ॥ ಬೀಳಿಗಿ ಸೋಮಶೇಖರ ನಾಯಕರು ಬರಸಿಕೊಟ ಧರ್ಮಶಾಸನದ ।
8. ॥ ಕ್ರಮವೆಂತ್ತೆಂದರೆ ದೇವರ ಕಟಲೆ ಕಂದಾಚಾರ ರಥ ಉತ್ಸಹದ ಬ ।
9. ॥ ಗ್ಯೆ ಸಹಾಶಿವಾರ್ಪಿತವಾಗಿ ಭೂಸ್ವಾಷ್ಠೆ ಬಿಇ ಲಾಳಸವಾಗಿ ಬಿಟು ಧ ।
10. ॥ ರ್ಮ ಶಾಸನವ ಬರಶಿ ಕೊಟೆವಾಗಿ ಯಿ ಬಗ್ಯೆ ಬಿಟ ಸಾಸಿಕೊಂಡಲಿ ।
11. ॥ ಹೋಬಳಿ ಶಿರುವಳಿಗೆ ಗ್ರಾಮದ ಕೆಳಗಣ ಕೊಳನ ತಿಂಮ್ಮಣನ ।
12. ॥ ಹೆಸರಲು ಬರಡು ಬಾಹಾವಟುವರ್ಗದ ಸಿಸ್ತು ಗ 30ಪ=ಕೆಲಿರಮ
13. ॥ ನಿಗೆ ತೆತ್ತು ಬಾಹಾಸಿನ್ತುಗ 6ಪ– ನುಳಿದು ಶುಧ ಸಿಸ್ತುಗ 24 ಯಿ ।
14. ॥ ಪತ್ತನಾಲ್ಕು ವರ ಹಾ ಸಿಸ್ತಿಗೆ ಬಾಹಾ ಕಂದಾಯ ವಟ್ಟವರಾಡಲಿಕಾ ।
15. ॥ ಲಚಕ್ರ ವರಿವರಾಡಸರು ತೆ ಸಾಂಮ್ಯ ಬಿಟೆ ಶಿರುವಳಿಗೆ ವೀ ।
16. ॥ ರಭದ್ರಯನವರಿಗೆ ಅಮರ ಉರಾಕೆ ಬಿಟ ಅವರ ಗುಪಿ ಗ್ರಾ ।
17. ॥ ಮದಿಂದ ಅವರಿಗೆ ಸಲುವ ಬಿಟೆ ಆಳನು ಸಲವಿಡಿಶಿ ಆ ।
18. ॥ ಆಳು ಜ 124 ನೂರಯಿಪತನಾಲ್ಕು ಸಹಾ ಶಿವಾರ್ಪಿತವಾಗಿ
19. ॥ ಬಿಟವಾಗಿ ಯಿ ಬಗ್ಯೆ ನಡಸುವ ವಿವರಾ । ಕಟಲೆ ಕಂದಾಚಾರ,
20. ॥ ದ ಬಗ್ಯೆ ಸಹ ಸಿಸ್ತು ಗ 12 ರಥ ಉತ್ಸವದ ಬಗ್ಯೆ । ಸಿಸ್ತುಗ 12 ಉ
21. ॥ ಭಯಂ ಸಿಸ್ತು ಗ 24 ಯಿಪತು ನಾಲ್ಕುವರಹ ಯಿದಕೆ ಸಲು
22. ॥ ವಕಂದಾಯ ವಟವರಾಡಲ ಕಾಲಚಕ್ರವರಿ ವರಾಡಸರು
23. ॥ ತೆಸಾಂಮ್ಯ ಬಿಟೆ । ಅವರ ಗುಪಿ ಗ್ರಾಮದಿಂದ ವಿಂಗಡಿಸಿದ
24. ॥ ಆಳಜನ 124 ಸಹಾ ಆವಕಲುಗಳಿಂದಶೇವಿಶಿಕೊಂ ।
25. ॥ ಡು ಬಾ ಹಾಗೆ ಶಿವಾರ್ಪಿತವಾಗಿ ಬಿಟುಬರಸಿ ಕೊಟ ಭೂ
26. ॥ ಸ್ವಾಷ್ಠಿ ಧರ್ಮ ಸಾಧನ । ಯಿದಕೆ ದೇವಸಾಕ್ಷಿಗಳು । ಆದಿ ।
27. ॥ ತ್ಯಾ ಚಂದ್ರು ವನಲೋನ ಳೌಚ ದ್ಯೌರ್ಭೂಮಿ ರಾಹಿ ಹೃದಯಂ ।
28. ॥ ಯಮಶೂಲಿ ಪಾಶುರಾರ್ತಿ ಶು ಉಭೆಚ ಸಂಧ್ಯಾ ಧರ್ಮಸ್ಯ ।

29. । ಚಾನಾತಿನರಸ್ಯ ಉಕ್ತಂ । ಸ್ವದತ್ತಾ ದ್ವಿಗುಣಂ ಪುಣ್ಯಂಪ ।
30. । ರದತ್ತಾನುಪಾಲನಂ ಪರದತ್ತಾ ಪ್ರಹರೇಣಾ ಸ್ವದತ್ತಂನಿಷ್ಫ ।
31. । ಲಂಭವೇತ್ । ದಾನ ಪಾಲನಯೋರ್ಮಧ್ಯೆ ದಾನಧ್ರೆಯಾನು ।
32. । ಪಾಲನಂ ದಾನಾತ್ಸ್ವರ್ಗ ಮವಾಪ್ನೋತಿ । ಪಾಲನಾದ (ಚು) ।
33. । ತಂ ಪದಂ। ಶ್ರೀ ಸದಾಶಿವಾ ॥

2. ಸಿದ್ಧಾಪುರದ ಹಾಳಿತಕಟ್ಟೆ ತಾಮ್ರಪಟ ಶಾಸನ

1. 0॥ ಶುಭ ಮಸ್ತು । ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾ
2. ರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯಶಂಭವೇಸ್ವಸ್ತಿ।
3. ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ವರುಷ 1692 ನೆ ।
4. ಯ ವಿರೋಧಿ ಸಂವತ್ಸರದ ಶ್ರಾವಣ ಶು. 10 ಲು ಸಿಧಾಪುರದ ಹಾ।
5. ಳಿತಕಟೆ ಸಮೀಪದ ಶ್ರೀ ಗಂಗಾಧರೇಶ್ವರ ದೇವರದಿವ್ಯ ಶ್ರೀಪಾ
6. ದ ಪದ್ಮಗಳಿಗೆ ಶ್ರೀ ಮನ್ಮಹಾಪ್ರಭು ಬೀಳಿಗಿ ಸೋಮಶೇಖರ
7. ನಾಯಕರು ಬರೆಸಿಕೊಟ್ಟ ಕೊಡ ವೀಸದ ಧರ್ಮಶಾಸನದ ಕ್ರಮ
8. ವೆಂತೆಂದರೆ ನಂಮ ಸೀಮೆವಳಗೆ ಸ್ಥಳ ಪರಸ್ಥಳದ ಮಹಾನಾ
9. ಡವರು ಶೆಟೆ ಸಮಸ್ತರು ತಾಉ ಉಭಯ ಮಾರ್ಗದಲು ಹೇ
10. ರುವ ಅಡಿಕೆ ಮೆಣಸಿಗೆ ಸಹಾ ಸಿದಾಪುರದ ಹಾಳಿತದ ಕ ।
11. ಟೆಯಲು ಆದ ಲೆಖಕೆ ರಥ ಉತ್ಸಹದ ಬಗ್ಯೆ ಶಿವಾರ್ಪಿ।
12. ತವಾಗಿ ಗ 1ಕ್ಕೆ ಹ ಹ ವಂದುವರಹಾಕೆ ಮೂರು ವೀಸದಲು ।
13. ಹಾಕಿಕೊಟು ಧರ್ಮಸಾಧನವ ಬರಸಿಕೊಟ ಪ್ರಮಾಣು ಸಿಧಾ ।
14. ಪುರದ ಹಾಳಿತ ಲೇಖಕೆ ಗ 1 ಕೆ ಹ ಹ ವಂದು ವರಹಾಕೆ ಮೂ
15. ಡ ವೀಸದಲು ಆ ಸ್ಥಳದ ಸೇನಬವರು ಬದುಕು ಮಾಡುವ
16. ವರ ಮುಖಾಂತ್ರ ಕಾಲ ಕಾಲಂಪ್ರತಿಯಲು ಯತಿಶಿ ತರಿಶಿಕೊಂಡು
17. ರಥ ಉತ್ಸವದ ಸೇವೆಯಂನು ನಡಶಿಕೊಂಡು ಬಾಹಾ॥
18. ಗೆ ಶಿವಾರ್ಪಿತವಾಗಿ ಬಿಟೆವಾಗಿಯಂದು ಬರಶಿಕೊಟ।
19. ಡ ವೀಸದ ಧರ್ಮ ಸಾಧನ । ಯಿದಕೆ ಸಾಕ್ಷಿಗಳು ಲೋಕ ಸಾಕ್ಷಿಗ
20. ಳು । ಆದಿತ್ಯ ಚಂದ್ರಾವನ ಲೋನ ತಾ ಚ ದ್ಯೌರ್ಭೂಮಿರಾ ಹೋ ॥
21. ಹೃದಯಂ ಯಮ ಶೂಲಿ ಪಾಶ ರಾತ್ರಿ ಶಉಬೇಚ ಸಂಧ್ಯಾ
22. ಧರ್ಮಸ್ಯ ಜಾನಾತಿನರಸ್ಯ ಉಕ್ತಂ । ಸ್ವದತ್ತಾ ದ್ವಿಗುಣಂಪುಂ ।
23. ಣ್ಯಂ ಪರದತಾನು ಪಾಲನಂ। ಪರದತ್ತಾಪಹಾರೇಣ ಸ್ವದತ್ತಾಂ
24. ನಿರ್ಪ(ಷ್ಪ)ಲಂ ಭ ವೇತ್ । ದಾನಪಾಲನಯೋರ್ಮಧ್ಯೆ ದಾನಾದ್ರೇ(ಶ್ರೇ)ಯೋ
25. ನುಪಾಲನಂ ದಾನಾತ್ಸ್ವರ್ಗಮ ವಾಪ್ನೋತಿ ಪಾಲನಾ।
26. ದಚುತಂ ಪದಂ। ಶ್ರೀಸದಾಶಿವಾ ॥

❑

ಸ್ವರ್ಣವಲ್ಲೀ ಮಠದ ಪತ್ರಾಗಾರದಲ್ಲಿ ವಿಜಯನಗರದ ಮೊದಲನೆಯ ಬುಕ್ಕರಾಯರ ಕಾಲದ ಧರ್ಮಸಾಧನದ ಪ್ರತಿ

– ಡಾ. ಎ.ಕೆ. ಶಾಸ್ತ್ರಿ

ಸುಮಾರು 1200 ವರ್ಷಗಳ ಚರಿತ್ರೆಯಿರುವ, ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಸ್ವರ್ಣವಲ್ಲೀ ಮಠ ಒಂದು ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿರುತ್ತದೆ. ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನದ ಚರಿತ್ರೆಯು ಉತ್ತರಕನ್ನಡ ಜಿಲ್ಲೆಯ ಐತಿಹಾಸಿಕ ಬೆಳವಣಿಗೆಯೊಂದಿಗೆ ಬೆಸೆದುಕೊಂಡು ಬಂದಿದೆ. ಪೂರ್ವದಲ್ಲಿ ಆದಿಶಂಕರರು ಭಾರತದನಾಲ್ಕು ದಿಕ್ಕುಗಳಲ್ಲಿ ಚತುರಾಮ್ನಾಯ ಮಠಗಳನ್ನು ಸ್ಥಾಪಿಸಿ, ತನ್ಮೂಲಕ ಅದ್ವೈತ ಸಿದ್ಧಾಂತವನ್ನು ಪ್ರಕಾಶಿಸಿ, ವೈದಿಕ ಧರ್ಮವನ್ನು ಪ್ರಚುರಪಡಿಸಿ, ದೇಶದ ಐಕ್ಯತೆ ಮತ್ತು ಜನರ ಹಿತಕ್ಕಾಗಿ, ಭಕ್ತಿ, ಕರ್ಮ ಮತ್ತು ಮುಖ್ಯವಾಗಿ ಜ್ಞಾನ ಮಾರ್ಗಗಳನ್ನು ಪ್ರತಿಪಾದಿಸಿದ ಸಂಗತಿ ಐತಿಹಾಸಿಕ ಸತ್ಯ. ಆದಿಶಂಕರರು ಪ್ರತ್ಯಕ್ಷವಾಗಿ ಮತ್ತು ತಮ್ಮ ಶಿಷ್ಯರ ಮೂಲಕಪರೋಕ್ಷವಾಗಿ, ದೇಶದ ವಿವಿದೆಡೆ ಮಠಗಳನ್ನು ಸ್ಥಾಪಿಸಲು ಕಾರಣರಾದರು. ಅಂಥ ಅದ್ವೈತ ಮಠಗಳ ಪರಂಪರೆ ಇಂದಿಗೂ ಸಾಗಿ ಬಂದಿದ್ದು, ಅವಿಚ್ಛಿನ್ನ ಗುರುಪರಂಪರೆಯುಳ್ಳ ಸ್ವರ್ಣವಲ್ಲೀ ಮಠ, ಅವುಗಳಲ್ಲಿ ಒಂದು ಆದಿಶಂಕರಾಚಾರ್ಯ ಮತ್ತು ಸುರೇಶ್ವರಾಚಾರ್ಯರ ಸಮ್ಮುಖದಲ್ಲಿ ಭಾಸ್ಕರೇಂದ್ರ ಸರಸ್ವತಿಗಳಿಂದ ಸನ್ಯಾಸದೀಕ್ಷೆ ಪಡೆದ ವಿಶ್ವವಂದ್ಯ ಸರಸ್ವತಿಗಳು ಕಾಶಿಯ ದಶಾಶ್ವಮೇಧ ಘಾಟಿನಲ್ಲಿ ನಿರ್ಮಾಣವಾದ ಶ್ರೀಮಠದ ಪ್ರಥಮ ಗುರುಗಳು, ನಂತರ ಕ್ರಮವಾಗಿ ಉಜ್ಜಯಿನಿ,ನಾಸಿಕ, ಗೋಕರ್ಣ, ಕಡತೋಕೆ, ಸಹಸ್ರಲಿಂಗ ಮತ್ತು ಕ್ರಿ.ಶ 1556ರಲ್ಲಿ ಇಂದಿನ ಸ್ವರ್ಣವಲ್ಲೀಗೆ ಸ್ಥಳಾಂತರಗೊಂಡ ಸಮಾಚಾರ ಶ್ರೀ ಮಠದಲ್ಲಿ ಲಭ್ಯವಿರುವ ಚಾರಿತ್ರಿಕ ದಾಖಲೆ, ಶಾಸನ ಮತ್ತು ಸಾಹಿತ್ಯಕ ಕೃತಿಗಳಿಂದ ತಿಳಿದುಬರುತ್ತದೆ.[1]

ಪ್ರಸ್ತುತ ಲೇಖನವು ಮಲಪ ವಡೆಯರು ವೇದ ಸಾಂಗರ2 ಶ್ರೀಪಾದಂಗಳಿಗೆ ಕೊಟ್ಟ ಧರ್ಮಸಾಧನಕ್ಕೆ ಸೀಮಿತ ವಾಗಿದ್ದರಿಂದ, ಆ ಧರ್ಮಸಾಧನದ ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ಕೈಯಿಂದ ತಯಾರಿಸಿದ ದಪ್ಪನೆಯ ಉರುಟು ಕಾಗದದಲ್ಲಿರುವ ಶಿಲಾಸಾಧನ [ಶಿಲಾಶಾಸನ]ದ ಈ ಪಟ್ಟಿಪ್ರತಿಯು3, ಸಾಮಾನ್ಯವಾಗಿ ಇನ್ನುಳಿದಶಾಸನಗಳಲ್ಲಿ ಕಂಡು ಬರುವಂತೆ, ಇಲ್ಲಿಯೂ "ಶ್ರೀಗಂಗಾಧಿಪತಯೆ ನಮಃ ನಮಸ್ತುಂಗ ಶಿರಸ್ತು[ಶ್ಚು]ಂಬಿ ಚಂದ್ರಚಾಮರ ಚಾರವೆ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೆ," ಎಂದು ಶ್ರೀಗಣಾಧಿಪತಿಯನ್ನು ಮತ್ತು ಶಂಭುವನ್ನು ಸ್ತುತಿಸುವ ಪ್ರಾರ್ಥನಾ ಶ್ಲೋಕದೊಂದಿಗೆ ಪ್ರಾರಂಭವಾಗುತ್ತದೆ. ನಂತರದಲ್ಲಿ, "ಸ್ವಸ್ತಿ ಶ್ರೀ ಮಹಾ ಮಂಡಲೇಶ್ವರ ತಿರಿರಾಯ ವಿಭಾಡ ಭಾಶೆಗೆ ತಪ್ಪುವರ ಗಂಡ ಶ್ರೀ ವೀರಬುಕ್ಕರಾಯ ಮಹಾರಾಯರ ವಿಜಯ ಸಾಂಬ್ರಾಜ್ಯ ಭೂದಯದ ಮಹಾಪ್ರಧಾನ ಬಸವೈಯ ನಾಯಕರು ಸಕಲ ರಾಜ್ಯವನ್ನು ಪ್ರತಿಪಾಲಿಸುತ್ತವಿದಂ ದಿನ ಶಕವರುಷ 1292ನೆಯ, ಸಉುಮ್ಯ ಸಂವತ್ಸರದ ಪುಷ್ಯ ಬ. 30 ಮು ಮಂಗಳವಾರದಲು ಆರ್ದಾ ನಕ್ಷತ್ರದಲು ಮಿಥುನ ಲಗ್ನದಲು ಸೂರ್ಯಗೃಹಣ ಕಾಲದಲು ಮಲಪ ವಡೆಯರು ತ್ತೆಂಗಿನ ಬಾಡದಲು ಆಘನಾಶಿನಿ ತ್ತಿರದಲು ಶ್ರೀಕಾಮೇಶ್ವರ ದೇವರ್ರಿಗೆ ಜೀರ್ಣೊಧಾರವ ಮಾಡ್ಡಿ

ಶ್ರೀಮತ್ಪರಮಹಂಸಪರ್ರಿವ್ರಾಜಕಾಚಾರ್ಯರ್ವರ್ರಿಯರಾಜ ರಾಜನ ಪುರಿ । ಶ್ರೀ ಪಾದಂಗಳ ಶಿಷ್ಯ । ರಹವೇದಸಾಂಗರ ಶ್ರೀಪಾದಂಗಳಿಗೆ ಕೊಟ ಧರ್ಮಸಾಧನ ಶಿಲಾಸಾಧನದ ಪಟ್ಟೆಯ ಕ್ರಮವೆಂತ್ಯೆಂದರೆ...," ಎಂದು ಶಾಸನ ಮುಂದುವರೆಯುತ್ತದೆ.[4]

ಶ್ರೀ ರಾಮೇಶ್ವರ ದೇವರಿಗೆ ಬಿಟ್ಟ ಭೂಮಿಯ ಗಡಿಗಳನ್ನು ಕಾಣಿಸಲಾಗಿದೆ. ಮೂಡಲು: ವೇದೇಶ್ವರ ದೇವರಿಗೆ ಶ್ರೀ ಬಸವೈಯ ನಾಯಕರು ಸರ್ವಮಾನ್ಯವಾಗಿ ಬಿಟ್ಟ ಭೂಮಿ, ತೆಂಕಲು: ರಾಜಮಾರ್ಗದ ಕಲ್ಲು, ಪಡುವಲು: ಮಹಾಬಲ ಭಂಡಾರಿಯ ಗದ್ದೆಕಂಠ, ಬಡಗಲು : ಹರಿವ ಹೊಲೆ. ಈ ರೀತಿಯಾಗಿ ಚತುಃಸೀಮೆಯೊಳಗಿನ ಭೂಮಿ 8 ಮತ್ತು ಆ ಭಾಗದ ಭಾಗಿಗಳು ದೇವರಿಗೆ ಪ್ರತಿವರ್ಷ ಅಳೆಯುವ ಭತ್ತದ ಮುಡಿಗಳ ವಿವರವನ್ನು ನೀಡಲಾಗಿದೆ. ಒಟ್ಟೂ 114 ಮುಡಿ ಭತ್ತ ದೇವರಿಗೆ ಸಂದಾಯವಾಗುತ್ತಿತ್ತೆಂದು ತಿಳಿದುಬರುತ್ತದೆ. ಹೀಗೆ ಸಂಗ್ರಹವಾದ ಭತ್ತವನ್ನು, ಮಾತಿಗಾರಗೆ ಮತ್ತು ದೇವರ ಅಮೃತಪಡಿಗೆ ಮುಡಿ 30, ಹರಿಯವರಿಗೆ ಮುಡಿ 45, ಶಾಂತಿ ಮಾಡುವ ಹೂಡಿ ಭಟ್ಟಕಳಿಗೆ ಮುಡಿ 30, ಬಂದ ಸ್ವದೇಶಿ ಮತ್ತು ಪರದೇಶಿಗಳಿಗೆ, ಮಠದಲ್ಲಿ ಉಪ್ಪು ಪಾತ್ರವ ನಡಸುವ ಬಗ್ಗೆ ಭತ್ತ ಮುಡಿ 9, ಅಂತೂ ಭತ್ತಮುಡಿ 114, ದೇವರಿಗೆ ಬೇರೆ ಬೇರೆ ಸೇವೆ ಸಲ್ಲಿಸುತ್ತಿದ್ದವರಿಗೆ ನೀಡಲಾಗಿತ್ತು. ಬಾಡದ ನಾಡವರು ಅರಮನೆಗೆ ತೆರುವ ಹೊನ್ನಿನ ಒಳಗೆ, 8 ಹೊನ್ನಿನ ಕುಳವ ಕಡಿದು, ಆ 8 ಹೊನ್ನುಗಳನ್ನು ಮಲಪವಡೆಯರು ದೇವರಿಗೆ ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಧರ್ಮಕ್ಕೆ ಧಾರೆಯನೆರೆದು ಕೊಟ್ಟರೆಂದು ಹೇಳಲಾಗಿದೆ. ದೇವಸ್ವದ 8 ಭಾಗಗಳ ಮೇಲೆ ಬಾಡದನಾಡವರಿಗೆ ಆ ಭಾಗಿಗಳು 8 ಹೊನ್ನುಗಳನ್ನು ತೆರುತ್ತಿದ್ದರೆಂದೂ, ಮಲಪವಡೆಯರು ಆ ನಾಡವರನ್ನು ವಡಂಬಡಿಶಿದ ಸಮಾಚಾರವೂ ಧರ್ಮಸಾಧನದಿಂದ ತಿಳಿದುಬರುತ್ತದೆ. ಆ 8 ಹೊನ್ನುಗಳ ವೆಚ್ಚದ ವಿವರ ಇಂತಿದೆ. ಯತಿಗಳ ಭಿಕ್ಷಕ್ಕೆ ಗ 3 ॥ 0 (ಮೂವತ್ತೈದು ಹಣ), ಮಠದವರಿಗೆ ಗ 2 ॥ (ಇಪ್ಪತ್ತೈದು ಹಣ), ದೇವರ ಗಂಧ, ಧೂಪ, ದೀಪ, ಆಭಿಗಾರ, ಎಣ್ಣೆ ಮತ್ತು ತುಪ್ಪಕ್ಕೆ ಗ 1 '2 (ಹನ್ನೆರಡು ಹಣ), ಸನ್ಯಾಸಿಗಳ ವಸ್ತ್ರ ಮತ್ತು ಕೌಪೀನಕ್ಕೆ ಗ ॥ 0 (ಐದು ಹಣ), ಜೀರ್ಣೋದ್ಧಾರವಾಗಿ ವರುಷಂಪ್ರತಿ ಮಿಗಿಸುವ ಹಣ '3 (ಮೂರು ಹಣ), ಅಂತೂ ಈ ಸ್ಥಳ, ದೇವಾಲಯ, ಮಠ, ಅ ದೇವಸ್ವ ಭೂಮಿ ಮಾಡುವ ಅನಾದ್ಯ ಪಾರುಪತ್ಯ, ಒಳಗಿನ ಜಲ, ಪಾಶಾಣ, ನಿಧಿ, ನಿಕ್ಷೇಪ ಸಹಿತ ಸರ್ವವನ್ನು, ಭೂರಿವಾಳಪರುಪಾಧಿಷ್ಟಿತರಾದಂಥ ವೇದಸಾಂಗರ ಶ್ರೀಪಾದಂಗಳಿಗೆ, ಶಿಲಾಶಾಸನದಲ್ಲಿದ್ದಂತೆ ಮಾರ್ಯದಿಯನ್ನು ಮತ್ತು ಧರ್ಮವೆಚ್ಚವನ್ನು ಆಚಂದ್ರಾರ್ಕ ಸ್ಥಾಯಿತರಾಗಿ, ತಮ್ಮ ಶಿಷ್ಯ ಪಾರಂಪರ್ಯವಾಗಿ ನಡಸುತ್ತ ಬರುವಂತೆ ಭೂದಾನ ಮಾಡಿದರು.

ಶಾಸನದ ಕೊನೆಯಲ್ಲಿ, ಈ ಧರ್ಮಕ್ಕೆ ತಪ್ಪಿದವರಿಗೆ ಯಾವ ಫಲ ಮತ್ತು ಈ ಧರ್ಮವ ಪಾಲನೆ ಮಾಡಿದವರಿಗೆ ಯಾವ ಫಲ ಎಂಬುದನ್ನು ನಮೂದಿಸಲಾಗಿದೆ. "ಸರ್ವಬಾಧಾ ಪರಿಹಾರವಾಗಿ, ಸರ್ವಮಾನ್ಯವೆಂದು ನೆಟ್ಟ ಶಿಲಾಶಾಸನ," ಎಂದು ಕಾಣಿಸುವುದರ ಜೊತೆಗೆ, "ಯಿ ಧರ್ಮಕೆ ತಪಿದವರ್ರಿಗೆ ವಾರಣಾಶಿಯಲ್ಲಿ ಸಹಸ್ರಗೋವುಗಳ ವಧಿಸಿದ ಫಲಾ । ಸಹಸ್ರ ಬ್ರಾಹ್ಮರ ವಧಿಸಿದ ಫಲಾ । ತಂಮ ಮಾತ್ತಾಪಿತ್ರುಗಳ ವಧಿಸಿದ ಫಲ । ಯಿ ಧರ್ಮವ ಪಾಲನೆಯ ಮಾಡಿದವರಿಗೆ ವಾರಣಾಶಿಯಲೂ ಸಹಸ್ರ ಅಲಂಕೃತ್ತವಾದ ಕಪಿಲೆಗಳು (ಕಂದು ಬಣ್ಣದ ಪವಿತ್ರ ಹಸುಗಳು) ವೇದೋಕ್ತಗಳಾದ ಸಹಸ್ರ ಬ್ರಾಹ್ಮರ್ರಿಗೆ ಕೊಟ್ಟ ಫಲಾ । ಯಿದಕ್ಕೆ ಲೋಕಸಾಕ್ಷಿಗಳ ನಿಕಿ ಬರಕೊಟ್ಟ ಶಿಲಾಶಾಸನ । ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ", ಎಂಬುದಾಗಿಯೂ ಅಂತ್ಯದಲ್ಲಿ ಬರೆಯಲಾಗಿದೆ.

ಒಟ್ಟಿನಲ್ಲಿ, ಈ ಶಾಸನದ ಬಗ್ಗೆ ಹೇಳಬೇಕಾದರೆ, ವಿಜಯನಗರ ಸಾಮ್ರಾಜ್ಯದ ಮೊದಲನೆಯ ಬುಕ್ಕರಾಯರು (ಕ್ರಿ.ಶ. 1356–1377) ಮಹಾಮಂಡಲೇಶ್ವರನಾಗಿ ಆಳುತ್ತಿದ್ದಾಗ, ಮಹಾಪ್ರಧಾನರಾಗಿ ಬಸವೈಯ ನಾಯಕರು ರಾಜ್ಯವನ್ನುಪ್ರತಿಪಾಲಿಸುತ್ತಿದ್ದಾಗ, ಮಲಪವಡೆಯರು ಕ್ರಿ.ಶ. 1369ರ ಡಿಸೆಂಬರ್ 29 ರಂದು, ಇಂದಿನ ಕುಮಟಾ ತಾಲೂಕಿನ ಅಘನಾಶಿನೀ ತೀರದಲ್ಲಿರುವ, ತೆಂಗಿನ ಬಾಡ [ಬಾಡ]ದಲ್ಲಿಯ ಶ್ರೀ ಕಾಮೇಶ್ವರದೇವರ ಜೀರ್ಣೋದ್ಧಾರ ಮಾಡಿ, ವೇದಸಾಂಗರ ಶ್ರೀಪಾದಂಗಳಿಗೆ ಭೂದಾನ ಮಾಡಿದಕ್ಕಾಗಿ ಶಿಲಾಶಾಸನ ನೆಟ್ಟ ಸಮಾಚಾರ. ದಾನ ಮಾಡಿದ ಭೂಮಿಯ 8 ಭಾಗಗಳು, ಒಟ್ಟೂ 114 ಮುಡಿ ಭತ್ತ, ದೇವರ ಸೇವೆಗೆ ಸಂಬಂಧಿಸಿದ ವೆಚ್ಚ, ನಾಡವರಿಂದ ಬಂದ 8 ಹೊನ್ನುಗಳ ವೆಚ್ಚ, ಆ

ಚಂದ್ರಾರ್ಕವಾಗಿ ಮತ್ತು ತಮ್ಮ ಶಿಷ್ಯ ಪಾರಂಪರ್ಯವಾಗಿ ಅನುಭವಿಸಲೆಂದು ನೀಡಿದ ಧರ್ಮ ಮತ್ತು ಕೊನೆಯಲ್ಲಿ, ಧರ್ಮಕ್ಕೆ ತಪ್ಪಿದವರಿಗೆ ಮತ್ತು ಧರ್ಮವ ಪಾಲನೆ ಮಾಡಿದವರಿಗೆ ಯಾವ ಯಾವ ಫಲ ಎಂಬುದನ್ನು ಉಲ್ಲೇಖಿಸಲಾಗಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಸ್ವರ್ಣವಲ್ಲೀ ಮಠದ ಚರಿತ್ರೆಗೆ ಸಂಬಂಧಿಸಿ, ಹೆಚ್ಚಿನ ಮಾಹಿತಿಗಾಗಿ ಲೇಖಕರ ಈ ಕೆಳಗಿನ ಗ್ರಂಥಗಳನ್ನು ಓದಿರಿ:
   i. ಶ್ರೀ ಸೋಂದಾ ಸ್ವರ್ಣವಲ್ಲಿ ಮಹಾಸಂಸ್ಥಾನದ ಐತಿಹಾಸಿಕ ದಾಖಲೆಗಳು, (ಸ್ವದಾ), ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಬೆಂಗಳೂರು.
   ii. 'ಶ್ರೀ ಸ್ವರ್ಣವಲ್ಲಿ ಮಹಾಸಂಸ್ಥಾನ', ಶ್ರೀ ಸರ್ವಜ್ಞೇಂದ್ರ ಸರಸ್ವತೀ ಪ್ರತಿಷ್ಠಾನ, 1997.
   iii. 'A History of the Swarnavalli Mahasamsthana, Sri Bhagavatpada Prakasana, Srarnavalli, 2004.
2. ಶಾಸನದ ಕಾಗದ ಪ್ರತಿಯಲ್ಲಿ ಒಂದು ಕಡೆ 'ವೆದಸಾಂಗರ' ಎಂದು ಮತ್ತೆರಡು ಕಡೆ 'ವೆದಸಾಗರ' ಎಂದು ನಮೂದಿಸಲಾಗಿದ್ದು, ಪ್ರಸ್ತುತ ಲೇಖನದಲ್ಲಿ 'ವೇದಸಾಂಗರ' ಎಂಬುದನ್ನೇ ಬರೆಯಲಾಗಿದೆ.
3. ಸ್ವದಾ. 2.
4. ಕಮಟಾ ತಾಲೂಕಿನ ತೆಂಗಿನ ಬಾಡದಲ್ಲಿದ್ದ ಶ್ರೀ ಕಾಮೇಶ್ವರ ದೇವಸ್ಥಾನ ಇಂದಿಗೂ ಅಸ್ತಿತ್ವದಲ್ಲಿದೆ. ಆದರೆ ಅಲ್ಲಿ ಈಗ ಯಾವ ಸ್ವಾಮಿಗಳೂ ಇಲ್ಲ. ಒಬ್ಬ ಭಟ್ಟರ ಕುಟುಂಬ ಮಾತ್ರ ವಾಸ್ತವ್ಯ ಮಾಡಿದೆ. ತೆಂಗಿನ ಮರಗಳಿಂದ ಸಮೃದ್ಧವಾದ ಬಾಡವನ್ನು ಪೂರ್ವದಲ್ಲಿ 'ತೆಂಗಿನ ಬಾಡ' ಎಂದು ಕರೆದಿದ್ದು ಅನ್ವರ್ಥಕವಾಗಿದೆ.
   ಶಾಸನದಲ್ಲಿ ನಮೂದಿಸಲಾದ ರಾಜನಪುರಿ ಶ್ರೀಪಾದಂಗಳ ಬಗ್ಗೆಯಾಗಲಿ, ಅವರ ಶಿಷ್ಯರಾದ ವೇದಸಾಂಗರ ಬಗ್ಗೆಯಾಗಲಿ, ಇಲ್ಲವೆ, ಆ ಮಠದಪರಂಪರೆ ಬಗ್ಗೆಯಾಗಲಿ, ಯಾವ ಹೆಚ್ಚಿನ ಮಾಹಿತಿ ದೊರೆಯುವುದಿಲ್ಲ.
   ಶ್ರೀ ಕಾಮೇಶ್ವರ ದೇವಸ್ಥಾನದ ಸುತ್ತಮುತ್ತ ಎಲ್ಲಿಯಾದರೂ ಇರಬಹುದಾದ ಮೂಲ ಶಿಲಾಶಾಸನದ ಶೋಧನ ಕಾರ್ಯ ಆಗಬೇಕಾಗಿದೆ. ಇನ್ನು, ಈ ಶಾಸನದ ಪ್ರತಿ ಸ್ವರ್ಣವಲ್ಲೀ ಮಠದ ಪತ್ರಾಗಾರದಲ್ಲಿ ದೊರಕಿದ್ದು ಸಹಜ. ಪ್ರಾರಂಭದಲ್ಲಿಯೇ ತಿಳಿಸಿದಂತೆ, ಇಂದಿನ ಸ್ವರ್ಣವಲ್ಲೀ ಮಠ, ಸ್ವರ್ಣವಲ್ಲಿಗೆ ಕ್ರಿ.ಶ. 1556ರಲ್ಲಿ ಸ್ಥಳಾಂತರಗೊಳ್ಳುವ ಪೂರ್ವದಲ್ಲಿ,15–16 ಶತಮಾನದವರೆಗೆ ಸಹಸ್ರಲಿಂಗದಲ್ಲಿದ್ದು, ಅದಕ್ಕಿಂತ ಹಿಂದೆ, 14ನೇಯ ಶತಮಾನದಲ್ಲಿ, ಕಡತೋಕೆ (ಇಂದಿನ ಹೊನ್ನಾವರ ತಾಲೂಕಿನಲ್ಲಿ)ಯಲ್ಲಿ ಇತ್ತು. ಹೀಗಾಗಿ, ಪ್ರಸ್ತುತ ಶಾಸನ ಕ್ರಿ.ಶ. 1369 ರದ್ದಾಗಿರುವುದರಿಂದ, ಸ್ವರ್ಣವಲ್ಲಿಯ ಪೂರ್ಣಮಠ ಕಡತೋಕೆಯಲ್ಲಿದ್ದಾಗಿನ ಕಾಲಕ್ಕೆ ಸೇರಿರಬಹುದಾಗಿದೆ. ಶ್ರೀ ಕಾಮೇಶ್ವರ ದೇವಸ್ಥಾನ ಕಡತೋಕೆ ಮಠದ ತುಂಡು ಮಠ, ಇಲ್ಲವೆ, ಕಾಲು ಮಠವಾಗಿರಲು ಸಾಧ್ಯ, ಕ್ರಿ.ಶ. 1767 ರಲ್ಲಿ ಇಡಗುಂಜಿಯ ವಿಷ್ಣು ಸಭಾಯಿತರಿಗೆ ಸ್ವರ್ಣವಲ್ಲೀ ಮಠದ ಶ್ರೀ ಗಂಗಾಧರೇಂದ್ರ ಸರಸ್ವತಿಗಳು, ಮೂಲ ಗುತ್ತಿಗೆಯಾಗಿ ತಾವು ಅನುಭವಿಸಿ ಬರುತ್ತಿರುವ ಚಂದಾವರದ ಸೀಮೆ ಅಗಸೆ ಗ್ರಾಮದಲ್ಲಿ, ಅಘನಾಶಿನಿ ತೀರದಲ್ಲಿ ದೇವಸ್ಥಾನಕಟ್ಟಿಸಿ, ಶ್ರೀ ಸದಾಶಿವೇಶ್ವರ ದೇವರ ಪ್ರತಿಷ್ಠೆ ಮಾಡಿ, ಸಪರ್ಯಗಳಿಗೋಸುಗ ಭೂದಾನ ಮಾಡಿದರೆಂದು ತಿಳಿದುಬರುತ್ತದೆ. (ಡಾ॥ ಎ.ಕೆ. ಶಾಸ್ತ್ರಿ, 'ಇಡಗುಂಜಿಯ ಶ್ರೀ ಮಹಾಗಣಪತಿ ಮತ್ತು ಸಭಾಹಿತರು, ಲೀಲಾಗಣಪತಿ ಚಾರಿಟೆಬಲ್ ಟ್ರಸ್ಟ್, ಹಳದೀಪುರ, 2004, ಪು. 15). ಹೀಗಾಗಿ ಈ ಅಘನಾಶಿನಿ ಪ್ರದೇಶದಲ್ಲಿಯ ದೇವಸ್ಥಾನಗಳು ಪೂರ್ವದಿಂದಲೂ ಸ್ವರ್ಣವಲ್ಲೀ ಮಠದನಿಯಂತ್ರಣಗಲ್ಲಿದ್ದವೆಂದು ಹೇಳಬಹುದು.

❑

ಉತ್ತರ ಕರ್ನಾಟಕದಲ್ಲಿ ಟಿಪ್ಪುಸುಲ್ತಾನನ ಆಳ್ವಿಕೆ ಹಾಗೂ ಅವನ ಕೊಡುಗೆ

– ಡಾ. ಎಂ.ವೈ. ಸಾವಂತ

ಭವ್ಯ ಇತಿಹಾಸ ಹಾಗೂ ಉಜ್ವಲ ಸಾಂಸ್ಕೃತಿಕ ಪರಂಪರೆವುಳ್ಳ ಉತ್ತರ ಕರ್ನಾಟಕದಲ್ಲಿ ಅನೇಕ ರಾಜಮಹಾರಾಜರು ಆಳಿ ಇತಿಹಾಸದ ಪುಟಗಳಲ್ಲಿ ಸೇರಿಹೋದರು. ಅಂಥವರಲ್ಲಿ ಹೈದರ ಆಲಿ ಹಾಗೂ ಅವನ ಮಗ ಟಿಪ್ಪು ಸುಲ್ತಾನ ಇವರ ಪಾತ್ರ ವಿಶಿಷ್ಟವಾದುದು ಮರಾಠರೊಡನೆ, ಬ್ರಿಟಿಷ್‌ರೊಡನೆ ಮತ್ತು ಹೈದರಾಬಾದಿನ ನಿಜಾಮರೊಡನೆ, ಹೋರಾಡಿ ದಕ್ಷಿಣ ಭಾರತದಲ್ಲಿ ಒಂದು ಸಣ್ಣ ಸಾಮ್ರಾಜ್ಯವನ್ನು ನಿರ್ಮಿಸಿ ಚಾರಿತ್ರಿಕ ಖ್ಯಾತಿಯನ್ನು ಪಡೆದರು. ಕರ್ನಾಟಕ ಇತಿಹಾಸದಲ್ಲಿ ಟಿಪ್ಪು ಸುಲ್ತಾನನ ಸ್ಥಾನ ಹಿರಿದಾದುದು. ತನ್ನ ತಂದೆಯ ಉತ್ತರಾಧಿಕಾರಿಯಾಗಿ ಮೈಸೂರು ಸಂಸ್ಥಾನದ ಸರ್ವಾಧಿಕಾರತ್ವವನ್ನು ವಹಿಸಿಕೊಂಡನು. 'ಮೈಸೂರಿನ ಹುಲಿ' ಎಂದು ಚರಿತ್ರೆಕಾರರಿಂದ ಬಣ್ಣಿಸಲ್ಪಟ್ಟ ಆತನು ಶೂರನೂ ಮಹಾತ್ವಾಕಾಂಕ್ಷಿಯೂ ಆಗಿದ್ದನು. ಇವನಲ್ಲಿ ದೇಶಾಭಿಮಾನ ಮತ್ತು ಸ್ವಾಭಿಮಾನಗಳು ಮನೆ ಮಾಡಿದ್ದವು. ಅವನು ಸ್ವಾತಂತ್ರ್ಯ ವೃಕ್ಷವನ್ನು ತನ್ನ ರಾಜಧಾನಿಯಲ್ಲಿ ನೆಟ್ಟಿದ್ದನಲ್ಲದೆ ಫ್ರಾನ್ಸ್ ದೇಶದ 'ಜೆಕೊಬಿನ್ ಕ್ಲಬ್'ನ ಸದಸ್ಯನಾಗಿದ್ದನು. "ಹೈದರಾಲಿ ಸಾಮ್ರಾಜ್ಯವನ್ನು ನಿರ್ಮಿಸಲು ಜನಿಸಿದನು. ಟಿಪ್ಪು ಅದನ್ನು ನಿರ್ನಾಮ ಮಾಡಲು ಹುಟ್ಟಿದನು" ಎಂದು ಕೆಲವು ಇತಿಹಾಸಕಾರರು ಹೇಳುತ್ತಾರೆ. ಆದರೆ ಮಹತ್ವಾಕಾಂಕ್ಷೆಯಿಂದ ಕೂಡಿದ ಇವನು ತಂದೆಯ ನೀತಿಗಳನ್ನು ಮುಂದುವರಿಸಿದನಾದರೂ ಪರಿಸ್ಥಿತಿ ಅವನಿಗೆ ಪ್ರತಿಕೂಲವಾಯಿತು. ಆದರೂ ತನ್ನ ಧ್ಯೇಯ ಸಾಧನೆಗಾಗಿ ಹಗಲಿರುಳು ಶ್ರಮಿಸಿ ಬ್ರಿಟಿಷರನ್ನು ಭಾರತದಿಂದ ಓಡಿಸಬೇಕೆಂಬ ದೃಢಸಂಕಲ್ಪ ಮಾಡಿ ಹುಲಿಯಂತೆ ಬಾಳಿ ಹುಲಿಯಂತೆಯೇ ಮಡಿದನು.

ಟಿಪ್ಪುವು ಮೈಸೂರು ರಾಜ್ಯವನ್ನು ವಿಸ್ತರಿಸಿದ. ಅದು ದಕ್ಷಿಣದ ದಿಂಡಿಗಲ್ಲಿನಿಂದ ಉತ್ತರದ ಧಾರವಾಡವರೆಗೆ ಪಶ್ಚಿಮದ ಕೊಂಕಣ ಮತ್ತು ಕರಾವಳಿ ಜಿಲ್ಲೆಗಳಿಂದ ಪೂರ್ವದ ಬಳ್ಳಾರಿ ಮತ್ತು ಕರ್ನೂಲುಗಳ ಬಯಲಿನ ಪ್ರದೇಶದವರೆಗೂ ಹಬ್ಬಿತ್ತು. ಉತ್ತರ ಕರ್ನಾಟಕದ ಪ್ರಮುಖ ಆಯಕಟ್ಟಿನ ಕೋಟೆ–ಪ್ರದೇಶಗಳನ್ನು ಗೆಲ್ಲಲು ಮೇಲಿಂದ ಮೇಲೆ ದಂಡೆತ್ತಿ ಬಂದನು. ಕ್ರಿ.ಶ 1784 ರಿಂದ 1798ರವರೆಗೆ ಹುಬ್ಬಳ್ಳಿ, ಧಾರವಾಡ (ಸದಾಶಿವಗಡ) ಕಾರವಾರ, ಕಿತ್ತೂರು ಹಾಗೂ ಬೆಳಗಾವಿ ಕೋಟೆಗಳನ್ನು ಗೆದ್ದು ಅಲ್ಲಿತನ್ನ ಅಧಿಕಾರಿಗಳನ್ನು ನೇಮಿಸಿ ಆಡಳಿತ ನಡೆಸಿದನು. ಉತ್ತರ ಕರ್ನಾಟಕದ ನವಾಬರು, ದೇಸಾಯರು, ಹಾಗೂ ಜಾಹಗೀರದರರು ಇವರಿಂದ ಕಪ್ಪಕಾಣಿಕೆಯನ್ನು ಪಡೆದು ಅವಶ್ಯವಿದ್ದಾಗ ಸೈನಿಕ ಸಹಾಯ ಪಡೆಯುತ್ತಿದ್ದನು. ಆದರೆ ಟಿಪ್ಪು ಬ್ರಿಟಿಷರೊಡನೆ ಹೋರಾಡುತ್ತಿರುವಾಗ ಉತ್ತರ ಕರ್ನಾಟಕದ ಕೆಲವು ಸಂಸ್ಥಾನಿಕರು ಪರಿಸ್ಥಿತಿಯ ಲಾಭ ಪಡೆದು ಸ್ವತಂತ್ರ ಆಗಲು ಪ್ರಯತ್ನಿಸಿದರು. ನರಗುಂದದ ದೇಸಾಯಿ ವೆಂಕರಾವ ಭಾವೆ ತಾನು ಸ್ವತಂತ್ರ ಎಂದು ಸಾರಿ ಕಪ್ಪಕಾಣಿಕೆಯನ್ನು ಸಲ್ಲಿಸುವದನ್ನು ನಿಲ್ಲಿಸಿದನು. ಇದರಿಂದ ಕುಪಿತಗೊಂಡ ಟಿಪ್ಪು 1285ರಲ್ಲಿ ನರಗುಂದವನ್ನು ಆಕ್ರಮಿಸಲು, ನರಗುಂದದ ದೇಸಾಯಿ ಮರಾಠರ ಆಶ್ರಯಪಡೆದನು ಹೀಗಾಗಿ 1786ರಲ್ಲಿ ಮೈಸೂರು – ಮರಾಠ ಯುದ್ಧ ನಡೆಯಿತು. ಟಿಪ್ಪು ಮರಾಠರ ಸೈನ್ಯವನ್ನು ಸೋಲಿಸಿ ಮನೋಳಿ, ರಾಮದುರ್ಗ ನರಗುಂದ, ಕಿತ್ತೂರ, ಖಾನಾಪುರ, ದೊಡವಾಡ ಹಾಗೂ ಜಾಂಬೋಟಿ ಕೋಟೆಗಳನ್ನು ಗೆದ್ದು ಕೊಂಡನು. ನರಗುಂದ ಮುತ್ತಿಗೆಯನ್ನು ಮುಂದುವರಿಸಿ ವೆಂಕಟ ರಾವ ಭಾವೆ, ಇವನ ದಿವಾನ್ ಕಾಳೋಪಂತ ಪೇಠೆ ಹಾಗೂ ಅವನ ವಿವಾಹಿತ ಮಗಳನ್ನು ಸೇನಾನಿ ಬುರಾನ್

ಉದ್ದೀನ್ ಸೆರೆ ಹಿಡಿದನು. ನರಗುಂದ ಟಿಪ್ಪುವಿನ ವಶವಾಯಿತು. 1787ರ ಗಜೇಂದ್ರಗಡ ಒಪ್ಪಂದದ ಪ್ರಕಾರ ಅವರನ್ನು ಮುಕ್ತಗೊಳಿಸಿದನು.

1785ರಲ್ಲಿ ಕಿತ್ತೂರಿನ ಮೇಲೆ ದಾಳಿಮಾಡಿ ಅಲ್ಲಿ ಮೈಸೂರು ಸೈನ್ಯದ ಒಂದು ಪ್ರಬಲ ದಳವನ್ನು ಇಟ್ಟನು. ಆದರೆ ಇಂಗ್ಲೀಷರ ಧಾಳಿಯ ಹೆದರಿಕೆಯಿಂದಾಗಿ 1787ರ ಎಪ್ರಿಲ್‌ನಲ್ಲಿ ಕಿತ್ತೂರನ್ನು ಮತ್ತೆ ಮರಾಠರಿಗೆ ಬಿಟ್ಟುಕೊಡಲು ನಿರ್ಧರಿಸಿದನು. ಹೀಗೆ ಕಿತ್ತೂರು ಮೂರು ವರುಷಗಳ ಕಾಲ ಟಿಪ್ಪುವಿನ ಆಧೀನದಲ್ಲಿತ್ತು ಆತನ ಸೇನಾಧಿಕಾರಿ ಬದ್ರುಜ್ ಜಮಾಲಖಾನ ಕಿತ್ತೂರಿನ ಆಡಳಿತವನ್ನು ವಹಿಸಿಕೊಂಡು ದೇಸಾಯರ ಅಧಿಕಾರಗಳನ್ನು ಮೊಟಕುಗೊಳಿಸಿ ವರ್ಷಾಸನವನ್ನು ನಿಗದಿ ಮಾಡಿದನು. ಮಲ್ಲಸರ್ಜದೊರೆ ಟಿಪ್ಪುವಿನ ಬಂಧನಕ್ಕೆ ಒಳಗಾದನು. ಅವನನ್ನು ಅವನ ಅಂಗರಕ್ಷಕನಾದ ಕುಂಬಾರ ಮಡಿವಾಳನನ್ನು ಕಬಾಳ ದುರ್ಗದಲ್ಲಿ ಸೆರೆಯಿಟ್ಟನು. ಮೈಸೂರಿನ ಮಾಂಡಲಿಕತ್ವವನ್ನು ಮಲ್ಲಸರ್ಜದೊರೆ ಕೊನೆವರೆಗೂ ಒಪ್ಪಲಿಲ್ಲ.

1786ರಲ್ಲಿ ಸವಣೂರನ್ನು ಟಿಪ್ಪು ವಶಪಡಿಸಿಕೊಂಡಾಗ ನವಾಬ ಹಕಿಂಖಾನನು ಪುಣೆಗೆ ಓಡಿಹೋಗಿ ಪೇಶ್ವೆಯ ಆಶ್ರಯ ಪಡೆದನು. ಮುಂದೆ ಗಜೇಂದ್ರಗಡ ಒಪ್ಪಂದದಂತೆ, ಟಿಪ್ಪು ಸವಣೂರನ್ನು ನವಾಬರಿಗೆ ಮರಳಿಸಬೇಕಾಗಿ ಬಂತು. ನರಗುಂದ, ಬಾದಾಮಿ, ರಾಯದುರ್ಗ ಮತ್ತು ಹರಪನಹಳ್ಳಿಗಳನ್ನು ಮರಾಠರಿಗೆ ಬಿಟ್ಟುಕೊಡಬೇಕಾಯಿತು.

1778ರಲ್ಲಿ ಧಾರವರಾಡ ಕೋಟೆಯನ್ನು ಮರಾಠರಿಂದ ಗೆದ್ದು ಈ ಕೋಟೆಗೆ 'ಖುರ್ಷಿದ್ ಸವಾದ್' ಎಂದು ಹೆಸರಿಟ್ಟು 7 ಲಕ್ಷ ರೂಪಾಯಿ ಖರ್ಚುಮಾಡಿ ಕೋಟೆಯನ್ನು ದುರಸ್ತಿಗೊಳಿಸಿ ದನೆಂದೂ ಹಾಗೂ ರಕ್ಷಣೆಗಾಗಿ 10 ಸಾವಿರ ಕಾಲ್ದಳ, 2ಸಾವಿರ ಅಶ್ವದಳ, 60 ತೋಪುಗಳನ್ನು ಹಾಗೂ 3 ಸಾವಿರ ಸಿಬ್ಬಂದಿಗಳನ್ನು ನೇಮಿಸಿದ್ದ ಬಗ್ಗೆ ಆ ಕಾಲದ ಮೋಡೀ ದಾಖಲೆಗಳಿಂದ ತಿಳಿದು ಬರುತ್ತದೆ. ಮೂರನೇ ಯುದ್ಧದ (1790-92) ಸಮಯದಲ್ಲಿ ಮರಾಠ ಸೇನಾಪತಿಗಳಾದ ಪರಶುರಾಮಭಾವು ಹಾಗೂ ಧೊಂಡೋಪಂತ ಗೋಖಲೆ ಬ್ರಿಟಿಷ್ ಸೈನ್ಯದ ನೆರವಿನಿಂದ ಕೋಟೆಯ ಕಿಲ್ಲೇದಾರ ಬದ್ರುಜ್ ಜಮಾಲ್‌ಖಾನ್ ಹಾಗೂ ದಿವಾನ್ ಹರಿದಾಸಪಂತನನ್ನು ಸೆರೆಹಿಡಿದು ನರಗುಂದದ ಕೋಟೆಯಲ್ಲಿ ಬಂಧನದಲ್ಲಿಟ್ಟರು. ಹೀಗೆ ಕ್ರಮೇಣ ಮರಾಠರ ಹಾಗೂ ಬ್ರಿಟಿಷರ ಕುತಂತ್ರದಿಂದ ಉತ್ತರ ಕರ್ನಾಟಕವು ಟಿಪ್ಪುವಿನ ಕೈತಪ್ಪಿ ಹೋಯಿತು.

ಆದರೆ ಈ ಭಾಗದಲ್ಲಿ ಟಿಪ್ಪು ಮಹತ್ವದ ಸುಧಾರಣೆಗಳನ್ನು ಜಾರಿಗೆ ತಂದನು. ಋತುಗಳು, ಯುಗ, ವರ್ಷ ತಿಂಗಳು, ತೂಕ ಮತ್ತು ಅಳತೆಗಳು, ನಾಣ್ಯಗಳು, ಕೋಟೆ, ನಗರಗಳಿಗೆ ಹೊಸ ಹೆಸರನ್ನು ಕೊಡಲಾಯಿತು. ತನ್ನದು 'ಖುದಾದಾದ್'

ಸರಕಾರವೆಂದು ಟಿಪ್ಪು ಹೇಳಿಕೊಳ್ಳುತ್ತಿದ್ದ. ತನ್ನ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರದೇಶದ ಸ್ಥಳೀಯ ಕಟ್ಟಳೆಗಳಿಗೆ ಅನುಸಾರವಾಗಿ ಆಡಳಿತ ನಡೆಸಿದನು ಅಮಲ್ದಾರರು, ಶಿರಸ್ತೆದಾರರು, ಕುಲಕರ್ಣಿ, ಪಟೇಲ, ಶಾನುಭೋಗ ಹುದ್ದೆಗಳನ್ನು ನಿರ್ಮಿಸಿ ಸರಕಾರವು ನೇರವಾಗಿ ಪ್ರಜೆಗಳ ಸುಖ ದುಃಖಗಳನ್ನು ಕೇಳುವಂತೆ ಮಾಡಿದ್ದ. ಅಮಲ್ದಾರರು ಕಂದಾಯವನ್ನು ವಸೂಲು ಮಾಡುತ್ತಿದ್ದರು. ಈ ಭಾಗದ ಕಂದಾಯ ವ್ಯವಸ್ಥೆಯ ಸುಧಾರಣೆಗಾಗಿ 'ಗಜಮೋಜಣಿ' (33. ಇಂಟಿನ ಗಜ) ಎಂಬ ಆಳತೆ ಜಾರಿಗೆ ತಂದ. ತರಿ ಭೂಮಿಗೆ ಕೆಲವು ವರ್ಷಗಳ ನಂತರ 1-4 ಭಾಗ ಕಂದಾಯ ವಸೂಲ ಮಾಡುವ ಎರ್ಪಾಡು ಮಾಡಿದ್ದನು. ಕಂದಾಯ ಅಧಿಕಾರಿಗಳಿಗೆ ಅವರು ಸಂಗ್ರಹಿಸಿದ ಕಂದಾಯದ ಶೇಕಡಾ 2 1-2 ಕಮೀಶನ್ ನೀಡಲಾಗುತ್ತಿತ್ತು. ಉಳಿಗಮಾನ್ಯ ಪದ್ಧತಿಯ ಜಮೀನದಾರರನ್ನು ನಿರ್ಮೂಲನ ಮಾಡಿ ರೈತವಾರಿ ಪದ್ಧತಿಯನ್ನು ಜಾರಿಗೆ ತಂದ. ಭೂ ಸುಧಾರಣೆಗೆ ತಕಾವಿ ಸಾಲ ಒದಗಿಸಿದ. ಸೈನಿಕರಿಗೆ ಭೂಮಿ ಜಹಗೀರು ಕೊಡುವ ಪದ್ದತಿಯನ್ನು ನಿಲ್ಲಿಸಿ ನಗದು ಕೊಡುವ ವ್ಯವಸ್ಥೆ ಜಾರಿಗೆ ತಂದ. ಇದು ಜಹಗೀರು ಪದ್ಧತಿಯನ್ನು ತೊಡೆದು ಹಾಕಿತು.

ಟಿಪ್ಪು ಕಬ್ಬು ಬೆಳೆಯಲು, ವಿಳ್ಯೆದೆಲೆ, ಅಡಿಕೆ ತೆಂಗು ಬೆಳೆಯಲು ಪ್ರೋತ್ಸಾಹ ನೀಡಿದ. ಸೋಂದಾ, ಸಿರಸಿ, ಹುಬ್ಬಳ್ಳಿ, ದೇವರಹುಬ್ಬಳ್ಳಿ ಇವು ಅಡಿಕೆ ಮತ್ತು ಹತ್ತಿ ವ್ಯಾಪಾರದ ಪ್ರಮುಖ ಕೇಂದ್ರಗಳಾಗಿದ್ದವು. ಸಿರಸಿಯಿಂದ ಮೆಣಸು, ಏಲಕ್ಕಿ, ಮೆಣಸಿನ ಕಾಯಿ, ಶ್ರೀಗಂಧ ಮತ್ತು ಅಕ್ಕಿ ದೊಡ್ಡ ಪ್ರಮಾಣದಲ್ಲಿ ಸರಬರಾಜಾಗುತ್ತಿತ್ತು. ಅನೇಕ ಕಡೆ ವ್ಯಾಪಾರ ಕೋಠಿಗಳನ್ನು ಸ್ಥಾಪಿಸಿದ. ಸದಾಶಿವಗಡ ಹತ್ತಿರದ ಕಡವಾಡದಲ್ಲಿ ಒಂದು ಪ್ರಮುಖ ಕೋಠಿ ಇತ್ತು. ಅಲ್ಲಿ ಸರಾಫ ಮತ್ತು ಲೆಕ್ಕಿಗನನ್ನು

ನೇಮಿಸಿದ್ದ. ಅಲ್ಲಿ ಚಿಲ್ಲರೆ ವ್ಯಾಪಾರವೂ ನಡೆಯುತ್ತಿತ್ತು. ಅಲ್ಲಿ ದರೋಗಾ ವಾಣಿಜ್ಯ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುತ್ತಿದ್ದ. ಕಾರವಾರ ಮತ್ತು ಭಟ್ಕಳ ಆಗಿನ ಮುಖ್ಯ ಬಂದರುಗಳು. ರಫ್ತು ಆಮದುಗಳಿಗೆ ಕರಾವಳಿ ಪ್ರದೇಶಗಳಲ್ಲಿ ಸೌಲಭ್ಯಮಾಡಿ ಕೊಟ್ಟಿದ್ದ. ಇದರಿಂದ ಟಿಪ್ಪು ವಾಣಿಜ್ಯ ವ್ಯಾಪಾರಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿದ್ದ ಎಂದು ತಿಳಿದುಬರುತ್ತದೆ. ದೇಶ ವಿದೇಶಗಳಿಂದ ಬಂದ ಕುಶಲಕರ್ಮಿಗಳು ಇಲ್ಲಿ ನೆಲೆಸಿದರು. ಹೊಸ ಕಸಬು-ಉದ್ದಿಮೆಗಳು ಪ್ರಾರಂಭಗೊಂಡವು.

ಅವನ ರಾಜ್ಯದಲ್ಲಿ 12 ಟಂಕಸಾಲೆಗಳಿದ್ದವು. ಧಾರವಾಡದಲ್ಲಿ ಒಂದು ಇತ್ತು. ಇಲ್ಲಿಂದ 'ಖುರ್ಷಿದ್ ಸವಾದ್' ಎಂಬ ನಾಣ್ಯವನ್ನು ಹೊರಡಿಸಿದನು. ಪಗೋಡಾ, ಫನಮ್, ರೂಪಾಯಿ ಹಾಗೂ ವಿವಿಧ ಪ್ರಕಾರದ ನಾಣ್ಯಗಳನ್ನು ಚಲಾವಣೆಯಲ್ಲಿ ತಂದು ಅವುಗಳಿಗೆ ಮುಸ್ಲಿಂ ಮಹಾಪುರುಷರ ಹೆಸರನ್ನಿಟ್ಟಿದ್ದ. ಉದಾಃ ಹೈದರಿ ಹೊನ್ನು, ಅಹಮ್ಮದಿ ಹೊನ್ ಮತ್ತು ಜೊಹರಾ ಫರೂಕಿ, ಕಜಮಿ ಇತ್ಯಾದಿ, 'ಸುಲ್ತಾನಿ ಅಸ್ರಫಿ' ಎಂಬ ಬೆಳ್ಳಿನಾಣ್ಯವನ್ನು ಚಲಾವಣೆಗೆ ತಂದನು. ಹೊಸ ನಾಣ್ಯ ಪದ್ಧತಿಯನ್ನು ಜಾರಿಗೆ ತಂದದ್ದು, ವಾಣಿಜ್ಯ ವ್ಯವಹಾರಗಳಲ್ಲಿ ಹೊಸಪ್ರಯೋಗ, ನೂತನವಾದ ಕಂದಾಯ ವ್ಯವಸ್ಥೆ, ನಗರಗಳ, ಊರುಗಳ, ಕೋಟೆಗಳ ಹೆಸರುಗಳನ್ನು ಬದಲಾವಣೆ ಮಾಡುವುದರಲ್ಲಿ ಅವನಿಗಿದ್ದ ಆಸಕ್ತಿ ಇವೆಲ್ಲಾ ನೋಡಿದರೆ ಅವನೊಬ್ಬ ದೂರ ದೃಷ್ಟಿಯ ಸುಧಾರಕ ಎಂದು ಹೇಳಿದರೆ ತಪ್ಪಾಗಲಾರದು.

ಧಾರವಾಡದ ಒಂದು 'ಕೈಫಿಯತ್'ನ ಪ್ರಕಾರ ಅಲ್ಲಿಯ ಶುಕ್ರವಾರಪೇಟೆಯ ವೆಂಕಟೇಶದೇವರ ಪ್ರತಿಷ್ಠಾಪನೆ ಟಿಪ್ಪುವಿನ ಕಾಲದಲ್ಲಿ ಆಗಿ ಇದರ ಪೂಜಾದಿ ವ್ಯವಸ್ಥೆಗೆ ಸಮೀಪದ ನವಲೂರ ಗ್ರಾಮದ 1 (ಒಂದು) ಬ್ಯಾಳ (ಬೆಳೆ) ಭೂಮಿಯನ್ನು ದಾನ ಮಾಡಲಾಗಿತ್ತು. ಆಗ ರಾಮಚಂದ್ರಾಚಾರ್ಯ ವ್ಯಾಸಮುದ್ರ ಗುಡಿಯ ಪೂಜಾರಿಯಾಗಿದ್ದರು. ಹಾಗೆಯೇ ಧಾರವಾಡದ ಪೀರ್ಜಾದೆ, ಮುಲ್ಲಾ, ಖತೀಬ ಮತ್ತು ಖಾಜಿಗೆ ಸರ್ವಮಾನ್ಯ ಇನಾಮ ಜಮೀನು ನೀಡಲಾಗಿತ್ತು. ಇದೇ ರೀತಿಯ ಇನಾಮನ್ನು ಪ್ರಮುಖ ಬ್ರಾಹ್ಮಣರಿಗೆ ಪಂಡಿತರಿಗೆ ವರ್ಷಾಸನ ರೂಪದಲ್ಲಿ ನೀಡಲಾಗಿತ್ತು. ಹಾಗೆಯೇ ಇನ್ನೊಂದು ದಾಖಲೆಯ ಪ್ರಕಾರ (ತಾಳೇಬಂದ) ಪರಗಣಾ ರಾಣಿಬೆನ್ನೂರಿನ 5 ಗ್ರಾಮಗಳನ್ನು ಶೃಂಗೇರಿ ಮಠಕ್ಕೆ ಇನಾಮು ನೀಡಲಾಗಿತ್ತು.

ಟಿಪ್ಪುಸುಲ್ತಾನ ಮತ್ತು ಸವಣೂರಿನ ನವಾಬರು ಸ್ವರ್ಣವಲ್ಲೀ ಮಠದ ಗುರುಗಳನ್ನು ಭಕ್ತಿಯಿಂದ ಕಾಣುತ್ತಿದ್ದರೆಂದು ಕೆಲವು ದಾಖಲೆಗಳಿಂದ ಬರುತ್ತದೆ. ಅವನ ಸರಕಾರವು, ಪೂರ್ವ ದಿಂದಲೂ ಮಾನ್ಯವಾಗಿ ಬಂದ ಶಿರಸಿ ಮತ್ತು ಮಲ್ಲಾಪುರ ತಾಲೂಕುಗಳಲ್ಲಿರುವ ಒಟ್ಟೂ 108 ಗ್ರಾಮಗಳನ್ನು ಸ್ವರ್ಣವಲ್ಲೀ ಮಠಕ್ಕೆ ಇನಾಮಾಗಿ ಮಾನ್ಯ ಮಾಡಿತ್ತು. ಹೀಗೆ ಟಿಪ್ಪು ಉತ್ತರ ಕರ್ನಾಟಕದ ಅನೇಕ ಇತರ ಧಾರ್ಮಿಕ ಸಂಸ್ಥೆಗಳಿಗೆ ದಾನದತ್ತಿಗಳನ್ನು ನೀಡಿದ ಬಗ್ಗೆ ಉಲ್ಲೇಖಗಳಿವೆ.

ಟಿಪ್ಪುವಿನ ಧರ್ಮ ಸಮನ್ವಯತೆಯನ್ನರಿತ ಮಹಾತ್ಮಾ ಗಾಂಧೀಜಿಯವರು ಟಿಪ್ಪುವನ್ನು ಹಿಂದೂ ಮುಸ್ಲಿಂ ಐಕ್ಯತೆಯ ಮೂರ್ತಿರೂಪನೆಂದು ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಮುಕ್ತ ಮನಸ್ಸಿನಿಂದ ಕೊಂಡಾಡಿದ್ದಾರೆ.

ತನ್ನ ನಾಡಿನ ರಕ್ಷಣೆಗೆ ಬ್ರಿಟಿಷರ ವಿರುದ್ಧ ಹೋರಾಡಿ ಮಡಿದ ದೇಶಭಕ್ತಿ ಟಿಪ್ಪು ಭಾರತದ ಸ್ವಾತಂತ್ರ್ಯ ಹೋರಾಟ ಗಾರರಿಗೆ ಒಂದು ಉದಾಹರಣೆಯಾದ. ಆತನ ಸ್ವಾಭಿಮಾನ ನಮಗೊಂದು ಆದರ್ಶವಾಗಬಲ್ಲುದು.

ಟಿಪ್ಪುಸುಲ್ತಾನ್ ದ್ವಿ ಶತಮಾನೋತ್ಸವವನ್ನು ವರ್ಷವಿಡೀ ರಾಷ್ಟ್ರೀಯ ಉತ್ಸವವಾಗಿ ಆಚರಿಸಲು ನಮ್ಮ ರಾಜ್ಯ ಸರಕಾರ ಹಾಗೂ ಖಾಸಗೀ ಸಂಘ ಸಂಸ್ಥೆಗಳು ನಿರ್ಧರಿಸಿವೆ. ಟಿಪ್ಪು ಬಲಿದಾನಕ್ಕೆ ಇದು ಸೂಕ್ತ ಗೌರವಾರ್ಪಣೆ ಆಗಿದೆ

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*1. ಕಾಮತ್ ಸೂರ್ಯನಾಥ (ಪ್ರ.ಸಂ.) ಧಾರಾವಾಡ ಜಿಲ್ಲೆಯ ಗೆಜೆಟಿಯರ್ ಬೆಂಗಳೂರು, 1995.
*2. ಪುಣೆ ಪತ್ರಾಗಾರ., 'ಕರ್ನಾಟಕ ಜಮಾವ' 50, 270:
*3. ಬಿ. ಷೇಕ್ ಆಲಿ., ಟಿಪ್ಪು ಸುಲ್ತಾನ್ ರಾಷ್ಟ್ರೀಯ ಜೀವನ ಚರಿತ್ರೆ ಮಾಲೆ, ಎನ್.ಬಿ.ಟಿ. ಇಂಡಿಯಾ, 1979.
*4. ನಂಜುಂಡಸ್ವಾಮಿ, ಎ.ಎಸ್. ಪಾಳೆಯಗಾರರ ಮತ್ತು ಒಡೆಯರ ಇತಿಹಾಸ ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ,

*5. ಶಾಸ್ತ್ರಿ. ಎ.ಕೆ., ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ ಶ್ರೀ ಸರ್ವಜ್ಞೇಂದ್ರೀ ಸರಸ್ವತೀ ಪ್ರತಿಷ್ಠಾನ, ಪ್ರತಿಷ್ಠಾನ, ಸ್ವರ್ಣವಲ್ಲೀ, 1997.
*6. ಸರದೇಸಾಯಿ ಜಿ.ಎಸ್., ನ್ಯೂ ಹಿಸ್ಟರಿ ಆಫ್ ದಿ ಮರಾಠಾಸ್ ಸಂ. 3 ಮುಂಬಯಿ, 1978.
*7. ಸ್ವಾದಿ ಅರಸುಮನೆತನ, ಶ್ರೀ ತೋಂಟದಾರ್ಯ ಮಠ, ಗದಗ, 1995.

❑

ಉತ್ತರ ಕರ್ನಾಟಕದಲ್ಲಿ ಉತ್ಸವಗಳು ಮತ್ತು ರಾಷ್ಟ್ರೀಯತೆ (1905–1911)

– ಡಾ. ಟಿ.ವಿ. ಅಡಿವೇಶ

ಹಿನ್ನೆಲೆ : ಬಂಗಾಲವು 16ನೇ ಅಕ್ಟೋಬರ, 1905 ರಂದು ಅಂದಿನ ವೈಸ್‌ರಾಯ್ ಜನರಲ್‌ನಾದ ಲಾರ್ಡ್ ಕರ್ಜನ್ನನಿಂದ ಆಡಳಿತಾತ್ಮಕ ಕಾರಣಗಳ ಹಿನ್ನೆಲೆಯಲ್ಲಿ (ವಾಸ್ತವಿಕವಾಗಿ ಹಿಂದೂ–ಮುಸ್ಲಿಂ ಐಕ್ಯತೆಯನ್ನು ಮುರಿಯುವ ಹುನ್ನಾರವಾಗಿದ್ದು) ವಿಭಜಿಸಲ್ಪಟ್ಟಿತು ಈ ಘಟನೆಯು ಬಂಗಾಳದ ನಾಯಕರಲ್ಲಿ ಬ್ರಿಟೀಷ್ ವಿರೋಧಿ ಅಲೆಯನ್ನೆಬ್ಬಿಸಿ, ಅದು ವಂಗ–ಭಂಗ ಚಳುವಳಿಯಾಗಿ ಪರಿಣಮಿಸಿತು ಬಂಗಾಲದ ವಿಭಜನೆಯು ಬಂಗಾಲಿಗಳ ಆಶೋತ್ತರಗಳಿಗೆದುರಾಗಿ, ಅವರ ಜನತಾ ಪ್ರತಿಭಟನೆಗಳಿಗೆ ವಿರೋಧವಾಗಿತ್ತು. ಈ ಚಳುವಳಿಯ ಮಹೋನ್ನತ ಧ್ಯೇಯಗಳಾದ ಸ್ವದೇಶಿ ಕಾರ್ಯಕ್ರಮ, ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜ್ಯದ ಬೇಡಿಕೆಗಳು ದೇಶದ ಮೂಲೆ–ಮೂಲೆಗಳನ್ನು ತಲುಪಿ ಸ್ವದೇಶಿ ಚಳುವಳಿಯೆಂದೇ ಖ್ಯಾತವಾಗಿದೆ.

ಸ್ವದೇಶಿ ಚಳುವಳಿಯು ವಿಭಿನ್ನ ಆಯಾಮಗಳನ್ನೊಂದಿದ್ದು, ಅದರ ತತ್ವಗಳು ಜನತೆಯ ತ್ಯಾಗ ಮತ್ತು ಸಂಚಲನೆಯನ್ನು, ಹೋರಾಟದ ಪ್ರವೃತ್ತಿಯನ್ನು ಸ್ವಾತಂತ್ರ್ಯ ಹೋರಾಟದ ವಿವಿಧ ಹಂತಗಳಲ್ಲಿ ಜೀವಂತವಾಗಿರಿಸಿ ಸ್ವಾತಂತ್ರ್ಯೋತ್ತರ ಕಾಲದಲ್ಲಿಯೂ ಅನುಕರಣೀಯವಾಗಿದೆ. ಸ್ವದೇಶಿ ಚಳುವಳಿಯ ಕಾಲವು ನವ ರಾಷ್ಟ್ರೀಯತೆಯ ಕಾಲವಾಗಿದ್ದು, ತೀವ್ರಗಾಮಿ ನಾಯಕರಾದ ಲೋಕಮಾನ್ಯ ಬಾಲಗಂಗಾಧರ ತಿಲಕ, ಬಿಪಿನ್ ಚಂದ್ರಪಾಲ, ಲಾಲ ಲಜಪತರಾಯ ಅರವಿಂದ ಘೋಷ್ ಮುಂತಾದ ನಾಯಕರ ಪ್ರಾಬಲ್ಯ ಮತ್ತು ಪ್ರಭಾವಕ್ಕೊಳಗಾಗಿದೆ. ಈ ಕಾಲದಲ್ಲಿ ಜನತಾ ಚಳುವಳಿಯ ಅನೇಕ ತಂತ್ರ–ಕೌಶಲ್ಯಗಳು ಜನರ ಮಟ್ಟವನ್ನು ತಲುಪಿ, ಜನಸಾಮಾನ್ಯರನ್ನು ಪ್ರೇರೇಪಿಸಿದವು. ಸ್ವದೇಶಿ ವಸ್ತುಗಳ ಪ್ರಚಾರ, ವಿದೇಶಿ ವಸ್ತುಗಳ ಬಹಿಷ್ಕಾರ, ರಾಷ್ಟ್ರೀಯ ಶಾಲೆಗಳ ಸ್ಥಾಪನೆ, ಸಾರ್ವಜನಿಕ ಸಭೆ ಮತ್ತು ಮೆರವಣಿಗೆಗಳ ಸಂಘಟನೆ, ಉಪನ್ಯಾಸ ಕಾರ್ಯಕ್ರಮಗಳು, ಮತ್ತು ರಾಷ್ಟ್ರೀಯ ಕೈಗಾರಿಕೆ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾವಲಂಬನೆ ಅಥವಾ 'ಆತ್ಮಶಕ್ತಿ'ಯನ್ನು ಪ್ರತಿಷ್ಠಾಪಿಸುವುದು ಸ್ವದೇಶಿಯ ಬಹುಮುಖ್ಯ ಆಯಾಮಗಳಾಗಿವೆ. ಇವುಗಳಲ್ಲಿ ಸಾಂಪ್ರದಾಯಕ ಉತ್ಸವ, ಮೇಳ ಮತ್ತು ಜಾತ್ರೆಗಳ ಕ್ರಿಯಾತ್ಮಕ ಬಳಕೆಯೂ ಬಹುಮುಖ್ಯ ಆಯಾಮವಾಗಿದೆ.[1]

ಉತ್ಸವ ಸಮಿತಿಗಳು : ಮಹಾರಾಷ್ಟ್ರ ಮತ್ತು ಬಂಗಾಲ ಗಳಲ್ಲಿರುವಂತೆ ಉತ್ತರ ಕರ್ನಾಟಕ ಭಾಗದಲ್ಲಿಯೂ ಸ್ವದೇಶೀ ಚಳುವಳಿಯ ಹಿನ್ನೆಲೆಯಲ್ಲಿ ಅನೇಕ ಸಂಘ–ಸಂಸ್ಥೆಗಳು ಮತ್ತು ಸಭಾ–ಸಮಿತಿಗಳು ಹುಟ್ಟಿಕೊಂಡವು. ಈ ಎಲ್ಲಾ ಘಟನೆಗಳಿಗೆ ಕಳಸವಿಟ್ಟಂತೆ ತಿಲಕರು 1893 ಮತ್ತು 1895ರಲ್ಲಿ ಕ್ರಮವಾಗಿ ಗಣಪತಿ ಪೂಜೆ ಮತ್ತು ಶಿವಾಜಿ ಜಯಂತ್ಯೋತ್ಸವ ಗಳನ್ನು ಆಗಲೇ ಆರಂಭಿಸಿದ್ದರು. ಆದರೆ ಈ ಸಂದರ್ಭದಲ್ಲಿ ಈ ಉತ್ಸವಗಳು ತಿಲಕರಿಂದ ಇಮ್ಮಡಿ ಉತ್ಸಾಹಭರಿತವಾಗಿ ಪ್ರಚುರಗೊಂಡವು. ಈ ಮೂಲಕ ಜನಸಾಮಾನ್ಯರಲ್ಲಿನ ಧಾರ್ಮಿಕ ಜಿಜ್ಞಾಸು ಮತ್ತು ಐತಿಹಾಸಿಕ ಸಂಪ್ರದಾಯಗಳನ್ನು ಬಳಸಿಕೊಂಡು ಅವರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಒಡ ಮೂಡಿಸುವುದಾಗಿತ್ತು. ಆ ಮುಖಾಂತರ ನಿರಕ್ಷರ–ಸಾಕ್ಷರ, ಬಡವ–ಬಲ್ಲಿದ, ಪಂಡಿತ–ಪಾಮರರನ್ನು ಒಗ್ಗೂಡಿಸುವುದಾಗಿತ್ತು. ಇದು ಅಖಿಲ ಭಾರತ ಕಾಂಗ್ರೆಸ್ ಯೋಚಿಸದ ಕಾರ್ಯವಾಗಿತ್ತು.[2]

ಸ್ವದೇಶಿ ಚಳುವಳಿಯ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಬಿಜಾಪುರ, ಧಾರವಾಡ, ಬೆಳಗಾವಿ ಮತ್ತು ಕಾರವಾರ ಜಿಲ್ಲೆಗಳು ಮುಂಬೈ ಪ್ರೆಸಿಡೆನ್ಸಿಯಲ್ಲಿದ್ದು, ಅವುಗಳು 'ದಕ್ಷಿಣ ಮರಾಠಾವಾಡ ಪ್ರಾಂತ'ವೆಂದೇ ಹರಸುವಾಸಿಯಾಗಿದ್ದು ತಿಲಕರ ಗಾಢಪ್ರಭಾವಕ್ಕೊಳಗಾಗಿದ್ದವು. ಇದರಿಂದಾಗಿ ಇಲ್ಲಿನ ನಾಯಕ ಗಂಗಾಧರರಾವ ದೇಶಪಾಂಡೆ ಮತ್ತು ಗೋವಿಂದರಾವ ಯಾಳಗಿಯವರು ತಿಲಕರಂತೆಯೇ ಅವರ ಪ್ರಭಾವದಿಂದಾಗಿ ಬೆಳಗಾವಿಯಲ್ಲಿ ಶಿವಾಜಿ ಉತ್ಸವವನ್ನು ಸಂಘಟಿಸಿದರು.[3] ನಾರಾಯಣ ಸುಬ್ಬರಾವ ಹರ್ಡಿಕರ್ ಅವರು ಗಣೇಶ ಮತ್ತು ಶಿವಾಜಿ ಉತ್ಸವಗಳೆರಡನ್ನೂ ಹುಬ್ಬಳ್ಳಿಯಲ್ಲಿ ಪ್ರಾರಂಭಿಸಿದರು.[4] ಆಲೂರು ವೆಂಕಟರಾಯರು ಈ ಉತ್ಸವಗಳನ್ನು ಆಚರಿಸಲು ಆರಂಭಿಸುವುದರೊಂದಿಗೆ ಮರಾಠಿಗೆ ಬದಲಾಗಿ, ಕನ್ನಡ ಭಾಷೆಯನ್ನೇ ಉತ್ಸವಗಳ ಮಾಧ್ಯಮ ಭಾಷೆಯನ್ನಾಗಿ ಜಾರಿಗೆ ತಂದರು. 'ರಾಷ್ಟ್ರೀಯ ನೂತನ ವಿದ್ಯಾಲಯ'ದ ಪರಿಕಲ್ಪನೆಯನ್ನು ಧಾರವಾಡದಲ್ಲಿ ಆಲೂರರು ಕಾರ್ಯಗತಗೊಳಿಸಿದರು.[5] 'ಮೊಹರಂ'ನ್ನು ಆಚರಣೆಗೆ ತಂದರು.

ಪುಣೆ, ಸೊಲ್ಲಾಪುರ ಮತ್ತಿತರ ಕಡೆಗಳಲ್ಲಿರುವಂತೆ ಉತ್ತರ ಕರ್ನಾಟಕದಲ್ಲಿಯೂ ಸಭೆ, ಸಮಾರಂಭ ಉತ್ಸವ ಇತ್ಯಾದಿ ಗಳಿಗಾಗಿ ತಿಲಕರನ್ನು ಆಹ್ವಾನಿಸಲು ಒಂದು 'ಸ್ವಾಗತ ಸಮಿತಿ' ಯನ್ನು ಹುಟ್ಟುಹಾಕಲಾಯಿತು. ವಿಷ್ಣುಪಂಥನಾತು ಇದರ ಅಧ್ಯಕ್ಷರಾದರೆ ಶ್ರೀಪಾದರಾವ ಭಾತ್ರೆ ಮತ್ತು ದತ್ತೋಪಂಥ ಬೆಳ್ವಿ ಖ್ಯಾತ ವಕೀಲರಿಬ್ಬರು ಸಮಿತಿಯ ಸದಸ್ಯರಾಗಿದ್ದು, ಗಂಗಾಧರರಾಯರು ಅದರ ಕಾರ್ಯದರ್ಶಿಗಳಾಗಿದ್ದರು. 1906ರಲ್ಲಿ ತಿಲಕರು ಬೆಳಗಾವಿಯಲ್ಲಿ ಸಂಘಟಿಸಿದ ಸಾರ್ವ ಜನಿಕ ಗಣೇಶ ಉತ್ಸವಕ್ಕೆ ಹಾಜರಾಗಿ ಬೆಳಗಾವಿಯ ಸುತ್ತ ಮುತ್ತಲಿನ ಬರುಗಳಾದ ಅಣಿಗೋಳ, ಶಹಪೂರ, ಹುದಲಿ, ಪಾಚ್ಛಾಪುರ ಮುಂತಾದ ಊರುಗಳಲ್ಲಿ ಸಾರ್ವಜನಿಕ ಸಭೆ ಗಳನ್ನು ಕೂಡಿಸಿ ಮಾತನಾಡಿದರು. ಹಾಗೆಯೇ ತಿಲಕರು ಖ್ಯಾತ ಮರಾಠಿ ವೃತ್ತಪತ್ರಿಕೆಯ ಸಂಪಾದಕರಾದ (ಕಾಲ್) ಶಿವರಾಮಪಂಥ ಪರಾಂಜಪೆಯವರೊಂದಿಗೆ ಮೂರು ದಿನಗಳ ಪ್ರಚಾರಾಂದೋಲನವನ್ನು ಕೈಗೊಂಡು ಧಾರವಾಡದ ಮೂಲಕ ಗುರ್ಲಹೊಸೂರು, ಕರಿಕಟ್ಟಿ, ಬೈಲಹೊಂಗಲ, ಹೊಸೂರು, ಹೂಲಿ ಮತ್ತು ಮುರುಗೋಡುಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಿದರು. ಸಾವಿರಗಟ್ಟಲೆ ಜನರು ಈ ಪ್ರಚಾರ ಸಭೆಗಳಿಗೆ ಹಾಜರಾಗುತ್ತಿದ್ದರು. ಈ ಸಂದರ್ಭದಲ್ಲಿ ತಿಲಕರ ಮರಾಠಿ ಭಾಷಣವನ್ನು ಧಾರವಾಡದ ಕೃಷ್ಣರಾವ ಮುದುವೀಡು ಅವರು ಭಾಷಾಂತರಿಸಿ ಕನ್ನಡದಲ್ಲಿ ಹೇಳುತ್ತಿದ್ದರು. ಈ ಮೂಲಕ ತಿಲಕರು ಉತ್ತರ ಕರ್ನಾಟಕದಲ್ಲಿ ಪ್ರಥಮ ಭಾರಿಗೆ ರಾಷ್ಟ್ರೀಯತೆಯ ಬೀಜವನ್ನು ಜನಮಾನಸದಲ್ಲಿ ಬಿತ್ತಿದರು.[6]

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ 1907ರಲ್ಲಿ ಸ್ಥಾಪನೆಗೊಂಡ 'ನೂತನ ವಿದ್ಯಾಲಯ'ವನ್ನು –ಗುಲಬರ್ಗಾದಲ್ಲಿ ಮತ್ತು 'ಉಸ್ಮಾನಿಯ ಮಾಧ್ಯಮಿಕ ಶಾಲೆ'ಯನ್ನು ಬೆಂಚೋಳಿಯಲ್ಲಿ ಶಿವಾಜಿ ಮತ್ತು ಗಣಪತಿ ಉತ್ಸವಗಳನ್ನು ಸಂಘಟಿಸಲಾಗುತ್ತಿತ್ತು ಅವುಗಳ ಸ್ಥಾಪಕರಾದ ವಿಠಲ್‌ರಾವ್‌ದೇವುಳ್‌ಗಾವಂಕರ್ ಮತ್ತು ವೆಂಕಟ ಕಿಷನ್‌ರಾವ್ ರವರಿಬ್ಬರು ತಿಲಕರಿಂದ ಪ್ರಭಾವಿತರಾಗಿದ್ದು, ಸ್ವತಃ ಪುಣೆ, ಸೊಲ್ಲಾಪುರಗಳಲ್ಲಿ ನಡೆಯುವ ಈ ಉತ್ಸವಗಳಲ್ಲಿ ಪಾಲ್ಗೊಂಡು ಪುನೀತರಾಗುತ್ತಿದ್ದರು ನಂತರ ಅದರ ಸವಿಯೂಟವನ್ನು ಈ ಭಾಗ ದಲ್ಲಿಯೂ ಉಣಬಡಿಸುತ್ತಿದ್ದರು. ಇದರಿಂದಾಗಿ ಈ ಭಾಗದ ವಿದ್ಯಾರ್ಥಿ ಸಮೂಹದಲ್ಲಿ ರಾಷ್ಟ್ರೀಯತೆಯ ಕಿಚ್ಚ ಬೆಳೆದು, ಮುಂದೆ ಚಳುವಳಿಗಳನ್ನು ಹುಟ್ಟುಹಾಕುವಲ್ಲಿ ಈ ಉತ್ಸವಗಳನ್ನು ಯಶಸ್ವೀ ಸಾಧನಗಳನ್ನಾಗಿ ಬಳಸಿಕೊಂಡಿದ್ದಾರೆ.[7]

ಈ ಸಂದರ್ಭದಲ್ಲಿ ರಾಜಕೀಯ ಪ್ರೇರಿತ ಸಭೆಸಮಾರಂಭಗಳನ್ನು ಬ್ರಿಟೀಷರು ಧ್ವಂಸಪಡಿಸುತ್ತಿದ್ದರು. ಆದರೆ ಧಾರ್ಮಿಕ ಆಚರಣೆಗಳಿಗೆ ಇದರಿಂದ ವಿನಾಯಿತಿ ಇತ್ತು. ಈ ಅಂಶವನ್ನು ಗಮನಿಸಿದೆ 'ಕರ್ನಾಟಕ ಗಾಂಧಿ' ಎಂದು ಖ್ಯಾತರಾದರೂ ಮೊದಲಿಗೆ ತಿಲಕರ ಗಾಢ ಪ್ರಭಾವಕ್ಕೊಳಗಾದ ಹರ್ಡೇಕರ ಮಂಜಪ್ಪ ಅವರು, ತಿಲಕರ ಗಣಪತಿ ಮತ್ತು ಶಿವಾಜಿ ಉತ್ಸವಗಳನ್ನು ಮಾದರಿಯಾಗಿಟ್ಟುಕೊಂಡು 1911ರಲ್ಲಿ ಪ್ರಪ್ರಥಮಬಾರಿಗೆ 'ಬಸವ ಜಯಂತಿ'ಯನ್ನು ಕರ್ನಾಟಕದಾದ್ಯಂತ ಆಚರಣೆಗೆ ತರಲು ಪ್ರಯತ್ನಿಸಿದರು. ಈ ಮೂಲಕ ಜನಸಾಮಾನ್ಯರಲ್ಲಿ ಸಮಾಜೋ–ರಾಜಕೀಯ ಪ್ರಜ್ಞೆಯನ್ನು ಮೂಡಿಸಿದರು. ಇದು ಮುಂದೆ ಜನಸಾಮಾನ್ಯರಿಗೆ ರಾಷ್ಟ್ರೀಯ ಕಲ್ಪನೆಯನ್ನು ಮೂಡಿಸಿ, ಅವರಲ್ಲಿ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಪ್ರಜ್ಞೆಯನ್ನ ಮೂಡಿಸಿತು.

ಉಪಸಂಹಾರ : 1920ರ ನಂತರದ ಕಾಲದಲ್ಲಿ ಗಾಂಧೀಯುಗದ ಅಸಹಕಾರ, ಕಾನೂನು ಭಂಗ ಮತ್ತು ಭಾರತ ಬಿಟ್ಟು ತೊಲಗಿ ಚಳುವಳಿಗಳ ಜನತಾ ಆಂದೋಲನದ ಮೂಲ ನೆಲೆಯನ್ನು ಸ್ವದೇಶಿ ಚಳುವಳಿಯ ಕಾಲದಲ್ಲಿ ಸಾಂಪ್ರದಾಯಿಕ ಉತ್ಸವಗಳು, ಮೇಳಗಳು ಮತ್ತು ಜಾತ್ರೆಗಳು ಹೊಸ ರೂಪವನ್ನು ಪಡೆದು ಜನತಾ ಸಂಘಟನೆ, ಸಂಚಲನೆ ಮತ್ತು ಚಳುವಳಿಗೆ ಸಾಧನಗಳಾಗಿವೆ. ಆಧುನಿಕ ರಾಜಕೀಯ ವಿಚಾರಗಳನ್ನು ಪ್ರಥಮ ಬಾರಿಗೆ ಜನತೆಯಲ್ಲಿ ಒಡಮೂಡಿಸಿ ಮಕ್ಕಳು – ಮಹಿಳೆಯರನ್ನು, ತರುಣವೃದ್ಧರನ್ನು, ಶ್ರೀಮಂತ–ಬಡವರನ್ನು ಜಾತಿ–ಧರ್ಮಗಳೆನ್ನದೆ ಒಟ್ಟುಗೂಡಿಸಿ ಅವರನ್ನು ಮೊಘುಲ್ ಕಾಲದ ಸಂಪ್ರದಾಯದಿಂದ ಆಧುನಿಕ ಬೆಳಕಿನ ಕಾಲದ ನವ ದಿಗಂತದತ್ತ ಎಳೆದೊಯ್ಯುವಲ್ಲಿ ಈ ರಾಷ್ಟ್ರೀಯತೆಯು ಪ್ರೇರಕವಾಗಿದೆ ಮತ್ತು ಪೂರಕವಾಗಿದೆ.

ಆಧಾರಸೂಚಿ

1. ಬಿಪಿನ್ ಚಂದ್ರ, 'ಇಂಡಿಯಾಸ್ ಸ್ಟ್ರಗಲ್ ಫಾರ್ ಇಂಡಿಪೆಂಡೆನ್ಸ್', ಪು. 128–131.
2. ಅಡಿವೇಶ ಟಿ.ವಿ., 'ದ ಸ್ವದೇಶಿ ಮೂವ್‌ಮೆಂಟ್ ಇನ್ ಕರ್ನಾಟಕ', ಪು. 152–53.
3. ಕಾಮತ್ ಎಸ್.ಯು. (ಸಂ) ಬೆಳಗಾವಿ ಜಿಲ್ಲಾ ಗೆಜೆಟಿಯರ್, ಪು. 136.
4. ಕಾಮತ್ ಎಸ್.ಯು. (ಸಂ), ಬೆಳಗಾವಿ ಜಿಲ್ಲಾ ಗೆಜೆಟಿಯರ್, ಪು. 125.
5. ಆಲೂರು, ವೆಂಕಟರಾವ್, 'ನನ್ನ ಜೀವನ ಸ್ಮೃತಿಗಳು', ಪು. 128.
6. ಕಾಮತ್ ಎಸ್.ಯು. (ಸಂ) ಬೆಳಗಾವಿ ಜಿಲ್ಲಾ ಗೆಜೆಟಿಯರ್, ಪು. 136.
7. ಬಜಂತ್ರಿ ಕೆ.ಎಸ್. 'ನ್ಯಾಷನಲ್ ಎಜ್ಯುಕೇಷನ್‌ಅಂಡ್ ರೈಸ್ ಆಫ್ ನ್ಯಾಷನಲಿಸಂ ಇನ್ ಹೈದ್ರಾಬಾದ–ಕರ್ನಾಟಕ ಏರಿಯಾ',ಪು. 86
8. ಗುಬ್ಬಣ್ಣನವರ, ಶಿವಾನಂದ, 'ಪೊಲಿಟಿಕಲ್ ಐಡಿಯಾಳ್ ಆಫ್ ಹರ್ಡೇಕರ ಮಂಜಪ್ಪ', ಪು 37.

❑

ವಿದೇಶಿ ದಾಖಲೆಗಳ ಹಿನ್ನೆಲೆಯಲ್ಲಿ ಸ್ವಾದಿರಾಜ್ಯದ ಸಾಂಸ್ಕೃತಿಕ ಮಾಹಿತಿಗಳು (1672–1767)

– ಡಾ. ಕೆ.ಜಿ. ವಸಂತ ಮಾಧವ

ಕ್ರಿ.ಶ. 1672ರ ನಂತರ ಘಟ್ಟದ ಮೇಳಿದ್ದ ಸ್ವಾದಿರಾಜ್ಯವು ಕರಾವಳಿಯ ಕಡೆಗೆ ಪ್ರಸರಿಸಿ 1680ರ ನಂತರ ಈ ಕರಾವಳಿ ಪ್ರದೇಶದಲ್ಲಿ ಪ್ರಬಲಗೊಂಡಿತ್ತು. ಮಿರ್ಜಾನ ಉತ್ತರದಿಂದ ಕೆಮೊರಾಮ್ಸವರೆಗಿನ ಪ್ರದೇಶವು ಸ್ವಾದಿ ರಾಜ್ಯಕ್ಕೆ ಸೇರಿತ್ತು. ಈ ರಾಜ್ಯ ಕರಾವಳಿ ಕಡೆಗೆ ಹರಡಿದ್ದುದರಿಂದ ಸ್ವಾದಿ ಅರಸು ಮನೆತನದವರಿಗೆ ವಿದೇಶಿಯರ ಸಂಪರ್ಕ ಉಂಟಾಯಿತು.[1]

ವ್ಯಾಪಾರಸ್ಥ ವಿದೇಶಿಯರು ತಮ್ಮ ಹಿತಾಸಕ್ತಿಯಿಂದ ಈ ರಾಜ್ಯವನ್ನು ಸಂದರ್ಶಿಸಿ ಮತ್ತು ಕೇಳಿ ತಿಳಿದು ತಮ್ಮದೇ ಆದ ಅಭಿಪ್ರಾಯಗಳನ್ನು ನೀಡಿದ್ದರು. ಈ ಅಭಿಪ್ರಾಯಗಳಲ್ಲಿ ಕೆಲವು ಇಲ್ಲಿನ ಸಾಂಸ್ಕೃತಿಕ, ಮುಖ್ಯವಾಗಿ ಸಾಮಾಜಿಕ ಮತ್ತು ಧಾರ್ಮಿಕ ಸಂಗತಿಗಳನ್ನು ರಸವತ್ತಾಗಿ ತಿಳಿಸುತ್ತವೆ. ಇಲ್ಲಿ ಅಧ್ಯಯನಕ್ಕೆ ತೆಗೆದುಕೊಂಡ ವಿದೇಶಿ ಆಕರಗಳಲ್ಲಿ ದಾಖಲೆ ಪತ್ರಗಳು ಮತ್ತು ಪ್ರವಾಸಿ ವರದಿಗಳು ಮುಖ್ಯವಾಗಿವೆ. ಆಂಗ್ಲ ಭಾಷೆಯ ದಾಖಲೆ ಪತ್ರಗಳಲ್ಲಿ ಗಮನಾರ್ಹವಾದವುಗಳು ಅಪ್ರಕಟಿತ. ಬೊಂಬಾಯಿ ಮತ್ತು ಕಾರವಾರ ಭಂಡಶಾಲೆಯ ಕಾಗದ ಪತ್ರಗಳು (ಇದು ಮಹಾರಾಷ್ಟ್ರ, ಸರಕಾರದ ಪತ್ರಾಗಾರ ಬೊಂಬಾಯಿಯಲ್ಲಿದೆ – ಪ್ರಕಟಿತ ಇಂಗ್ಲಿಷ್ ಫ್ಯಾಕ್ಟರಿ ಇನ್ ಇಂಡಿಯ I & III) ತಲಚೇರಿ ಕನ್ಸಲ್ಟೇಶನ್, ಪೋರ್ಚುಗೀಸ್ ದಾಖಲೆ ಪತ್ರಗಳು, ಇವುಗಳು ಮುಖ್ಯವಾಗಿ ಡಾನ್‌ವರ್ಸನ ಸಂಗ್ರಹ ಮತ್ತು ಬಿ.ಎಸ್. ಶಾಸ್ತ್ರಿಯವರ ಬರಹಗಳಲ್ಲಿವೆ. ಈ ಸ್ವಾದಿ ರಾಜ್ಯದ ಕೆಲವು ಸಾಂಸ್ಕೃತಿಕ ಸಂಗತಿಗಳನ್ನು ವಿದೇಶಿ ಪ್ರವಾಸಿಗಳಾದ ಫ್ರಾಯರ್ (frayer 1076) ಜೈಮಿಲಿ ಕರೇರಿ (Gemilli Careri 1695) ಅಲೆಕ್ಸಾಂಡರ್ ಹ್ಯಾಮಿಲ್ಟನ್ (1720) ತಮ್ಮ ವರದಿಗಳಲ್ಲಿ ತಿಳಿಸಿದ್ದಾರೆ. ಈ ಎಲ್ಲಾ ವರದಿಗಳನ್ನು ಗ್ಲೆಸ್ಕೂದ ಹ್ಯಾರಲೂಟಿ ಸೊಸೈಟಿಯವರು ಪ್ರಕಟಿಸಿದ್ದಾರೆ.

ಸ್ವಾದಿರಾಜ್ಯದ ಸಂಸ್ಕೃತಿ

ಈ ರಾಜ್ಯದ ಸಾಂಸ್ಕೃತಿಕ ಜೀವನ ಹಳೆಯ ಸಾಂಪ್ರದಾಯಿಕ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿತ್ತು. ಹೊಸ ವಿಚಾರಗಳನ್ನು ಮತ್ತು ಹೊರಗಿನ ಜನರ ವಿಚಾರ ತಿಳಿಯುವ ಮಾಹಿತಿಗಳನ್ನು ಸ್ಥಳೀಯರು ತೀರಾ ಅಲಕ್ಷಿಸಿದ್ದರು. ಆದರೆ ಕೆಲವು ಸಂದರ್ಭಗಳಲ್ಲಿ ಕಸಬುಗಾರರು ವಿದೇಶಿಯರೊಡನೆ ನಿರ್ದಿಷ್ಟ ಮಟ್ಟದಲ್ಲಿ ಸಂಪರ್ಕವನ್ನು ಹೊಂದಿದ್ದರು. ಇವರಲ್ಲಿ ಮುಖ್ಯರಾದವರು ಸಾಲೆಗಾರರು. ಇವರು ಅತ್ಯಂತ ನಾಜೂಕಾದ ಬಟ್ಟೆಗಳನ್ನು ನೇಯುತ್ತಿದ್ದು ವಿದೇಶಿಯರು ಬಹಳ ಮೆಚ್ಚಿಕೊಂಡಿದ್ದರು. ಇಂತಹ ನೇಕಾರರಿಗೆ ಕಾರವಾರ ಭಂಡಶಾಲೆಯ ಅಧ್ಯಕ್ಷ ಹೆಚ್ಚಿಗೆ ಪ್ರೋತ್ಸಾಹವನ್ನು ಕೊಟ್ಟಿದ್ದನೆಂದು ಭಂಡಶಾಲೆಯ ಪತ್ರದಲ್ಲಿ ನಮೂದಿಸಿದೆ. ಈ ಸಂಪರ್ಕದಿಂದ ಭಂಡಶಾಲೆಗೆ ಸ್ವಲ್ಪ ನಷ್ಟವಾದರೂ, ಇದನ್ನು ಗಣನೆಗೆ ತೆಗೆದುಕೊಂಡಿಲ್ಲ.[2]

ಸ್ವಾದಿರಾಜ್ಯದಲ್ಲಿನ ದೇವಾಲಯಗಳಲ್ಲಿ ನಡೆಯುವ ರಥೋತ್ಸವ, ಹಳ್ಳಿಗಳಲ್ಲಿ ನಡೆಯುವ ಭೂತೋತ್ಸವ ನೃತ್ಯ, ಕೋಳಿ ಅಂಕ ಮತ್ತು ಜನಸಾಮಾನ್ಯರ ನೃತ್ಯ ಇತ್ಯಾದಿಗಳು ಇಲ್ಲಿನ ಸಾಂಸ್ಕೃತಿಕ ಜೀವನವನ್ನು ಪ್ರತಿಬಿಂಬಿಸಿವೆಯೆಂದುಕ್ರಿ.ಶ. 1676ರಲ್ಲಿ

ಬಂದ ಆಂಗ್ಲ ಪ್ರವಾಸಿ ಫ್ರಾಯರ್ ತಿಳಿಸಿದ್ದು ಗಮನಾರ್ಹ. ಅಂಕೋಲದಲ್ಲಿ ಜೋಗಿಗಳಿಂದ ನಡೆಯುತ್ತಿದ್ದ ಭೂತನೃತ್ಯ ಪೂಜೆ ಮತ್ತು ಸುತ್ತಮುತ್ತಲಿನ ಹಳ್ಳಿಯಲ್ಲಿ ನಡೆಯುವ ಕೋಳಿ ಅಂಕ ಜನಾಕರ್ಷಣೀಯವಾಗಿತ್ತೆಂದು ಇದೇ ಪ್ರವಾಸಿ ಹೇಳಿದ್ದಾನೆ. ಹಳ್ಳಿಯ ಜನರು ದೈವಗಳನ್ನು ಭಕ್ತಿಯಿಂದ ಪೂಜಿಸುವುದು ಆಕರ್ಷಣೀಯವಾಗಿತ್ತು. ಇನ್ನೊಂದು ವಿಸ್ಮಯಗೊಳಿಸಿದ ಸಂಗತಿ ಶಿವೇಶ್ವರದಲ್ಲಿ ಕನ್ನೆಯರು ತಮ್ಮ ಕನ್ಯತ್ವವನ್ನು ದೇವರಿಗೆ ಅರ್ಪಿಸುವುದು. ಈ ರಾಜ್ಯದಲ್ಲಿನ ಲಿಂಗವಂತರಲ್ಲಿ ಜೋಗಿಯರು ಮತ್ತು ಜಂಗಮರು ಇದ್ದಾರೆ. ಈ ಜೋಗಿಗಳನ್ನು ಗೃಹಸ್ಥ ಲಿಂಗಾಯತರು ಮನೆಗೆ ಕರೆದುಕೊಂಡು ಹೋಗಿ ಅವರ ಪಾದಪೂಜೆ ಮಾಡುವ ಪದ್ಧತಿಯನ್ನು ಫ್ರಾಯರ್ ಗಮನಿಸಿದ್ದಾರೆ. ಲಿಂಗಾಯತರು ಶವ ಹೂಳುವುದನ್ನು ಇವನು ತಿಳಿಸಿದ್ದಾನೆ. ಹೆಂಡತಿ ಗಂಡನನ್ನು ಅನುಸರಿಸುತ್ತೇನೆಂದರೆ ಆಕೆಯನ್ನು ಜೀವಸಹಿತ ಹೂಳುತ್ತಾರೆ. ಮೊದಲು ಕುತ್ತಿಗೆಯವರೆಗೆ ಮಣ್ಣನ್ನು ಹೇರಿ ಆಮೇಲೆ ಕೆಲವು ಕ್ರಿಯೆಗಳನ್ನು ಮಾಡಿದ ಮೇಲೆ ಕುತ್ತಿಗೆಯನ್ನು ತಿರುಚಿ ಇದರ ಮೇಲೆ ಮಣ್ಣನ್ನು ಹಾಕುತ್ತಾರೆ (ಇದು ಸ್ವಾದಿ ರಾಜ್ಯದ ಗಡಿಪ್ರದೇಶದಲ್ಲಿ ಹೆಚ್ಚು ರೂಢಿಯಲ್ಲಿದ್ದಿತು). ಸಹಗಮನ ಪದ್ಧತಿ ಮತ್ತು ಸಹಗಮನ ಹೊಂದಿದ ಸ್ತ್ರೀಯರಿಗೆ ಸ್ಮಾರಕ ನೆಡುವ ಕ್ರಮ ಇದ್ದದ್ದನ್ನು ಪ್ರವಾಸಿ ಫ್ರಾಯರ್ ಹೇಳಿದ್ದಾರೆ.[3]

ಸ್ವಾದಿರಾಜ್ಯದಲ್ಲಿ ದನಗಳಿಗೆ ಹೆಚ್ಚು ಗೌರವ ಸಲ್ಲಿಸುತ್ತಿದ್ದರು. ಇವುಗಳನ್ನು ಹಿಂಸಿಸಿದರೆ ಅಥವಾ ವಧೆ ಮಾಡಿದರೆ ಅವರು ಸಹಿಸುವುದಿಲ್ಲ. ವಿದೇಶಿಯರು ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಇಂಗ್ಲಿಷ್ ಭಂಡಶಾಲೆಯ ಅಧಿಕಾರಿ ತಮ್ಮವರಿಗೆ ಎಚ್ಚರ ಕೊಟ್ಟಿದ್ದನ್ನು ಅಲ್ಲಿನ ದಾಖಲೆಯಲ್ಲಿ ಹೇಳಿದೆ.[4] ಸ್ವಾದಿ ಹಳ್ಳಿಗಳಿಂದ ಆವರಿಸಿದ ಈ ಸ್ವಾದಿ ರಾಜ್ಯದಲ್ಲಿ ಮಣ್ಣಿನ ಮನೆಗಳೇ ಹೆಚ್ಚು. ಇವುಗಳಲ್ಲಿ ಹೆಚ್ಚಿನವು ಗುಡಿಸಲುಗಳೇ. ರಾಜ್ಯದ ಕೆಲವು ಆಯಕಟ್ಟಿನ ಸ್ಥಳಗಳಲ್ಲಿ ಕೋಟೆಗಳಿವೆ. ಆದರೆ ಇವುಗಳು ಹಾಳು ಬಿದ್ದ ಸ್ಥಿತಿಯಲ್ಲಿವೆ. ಗ್ರಾಮಗಳಲ್ಲಿ ಕೆಲವು ವಿಚಿತ್ರವಾದ ದೇವರು ಮತ್ತು ದೇವಸ್ಥಾನಗಳು ಇವೆ. ಇವುಗಳ ಪಕ್ಕದಲ್ಲಿ ಸ್ಮಾರಕಗಳಿದ್ದು ಇವುಗಳನ್ನು ಸ್ಥಳೀಯರು ಹೆಚ್ಚು ಆಸಕ್ತಿ ಮತ್ತು ಭಕ್ತಿಯಿಂದ ಪೂಜಿಸುವುದನ್ನು ಕ್ರಿ.ಶ. 1698ರಲ್ಲಿ ಬಂದ ಜೈಮಿನಿ ಕರೇರಿ ತಿಳಿಸಿದ್ದಾನೆ. ಇಂತಹ ಒಂದು ದೇವಸ್ಥಾನ ಕೊಕರಹಳ್ಳಿಯಲ್ಲಿದ್ದುದ್ದನ್ನು ಈ ಪ್ರವಾಸಿ ನೋಡಿತನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಇಲ್ಲಿನ ಕಲ್ಲಿನ ಪೀಠದ ಮೇಲೆ ತಾಮ್ರದ ಗುಮ್ಮಟ ಅದರ ಮೇಲೆ ಮನುಷ್ಯನ ಮುಖವಿದ್ದ ತಗಡು ಇದಕ್ಕೆ ಹೊದಿಸಿದನ್ನು ನೋಡಿ ಇದು ಯಾರೋ ಹೆಸರಾಂತ ವ್ಯಕ್ತಿಯೊಬ್ಬನ ಸಮಾಧಿಯೆಂದು ಇವನು ನಿರ್ಣಯಿಸಿದ್ದಾನೆ. ಈ ರಾಜ್ಯದಲ್ಲಿ ಕೋತಿ (ಮಂಗಗಳು)ಗಳಿಗೆ ದೇವಸ್ಥಾನ ಕಟ್ಟಿ ಅವುಗಳ ಪೂಜೆ ಪುನಸ್ಕಾರ ನಡೆಯುತ್ತಿರುವುದನ್ನು ನೋಡಿ ಇವನು ವಿಸ್ಮಯ ಪಟ್ಟಿದ್ದಾನೆ. ರಾಜ್ಯದ ಗಡಿಯಲ್ಲಿ ಕಾವಲುಗಾರರು ಇದ್ದು ಇವರು ದುಡ್ಡು ಕೀಳುವುದರಲ್ಲಿ ಬಹಳ ಪ್ರವೀಣರು. ಹಳ್ಳಿಗಳಲ್ಲಿ ಆಗಿಂದಾಗ್ಗೆ ಸಂತೆಗಳು ನಡೆಯುತ್ತಿದ್ದು ಇವುಗಳಿಗೆ ಹೆಚ್ಚಿನ ಜನರು ಬರುತ್ತಿದ್ದು, ವ್ಯಾಪಾರದೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳು ವಿನಿಮಯ ನಡೆಯುತ್ತಿದ್ದದ್ದನ್ನು ಜೈಮಿಲಿ ಕರೇರಿ (1997)ಯ ವರದಿಯಲ್ಲಿ ಹೇಳಿದೆ. ಸ್ವಾದಿಯ ರಾಜ್ಯದ ಭಾಗವಾಗಿದ್ದ ಪೊಂಡಾದಲ್ಲಿ ಸಹಗಮನ ಪದ್ಧತಿ ವಿಚಿತ್ರ ರೀತಿಯಲ್ಲಿ ನಡೆಯುತ್ತಿದ್ದುದನ್ನು ಇದರ ದುರುಪಯೋಗವನ್ನು ಪುರೋಹಿತರು ತಮ್ಮ ಹಿತಾಸಕ್ತಿಗೆ ಉಪಯೋಗಿಸುತ್ತಿದ್ದದ್ದನ್ನು ಈ ಪ್ರವಾಸಿ ಹೆಚ್ಚು ಒತ್ತಿಹೇಳಿದ್ದಾನೆ ಅಫೀಂ ಸೇದುವುದು ಇಲ್ಲಿನ ಜನರ ಹವ್ಯಾಸವಾಗಿತ್ತು. ಈ ರಾಜ್ಯ ಪರ್ವತ ಪ್ರದೇಶವಾಗಿದ್ದು ಪ್ರಯಾಣಕ್ಕೆ ಕಠಿಣವಾಗಿದೆಯೆಂದು ಜೈಮಿಲಿ ಕರೇರಿ ತಿಳಿಸಿದ್ದಾನೆ.[5]

ಸ್ವಾದಿರಾಜ್ಯದಲ್ಲಿ ನರಬಲಿ, ಸ್ತ್ರೀ ಮತ್ತು ಮಕ್ಕಳನ್ನು ಮಾರುವುದನ್ನು ಕಾರವಾರ ಭಂಡಶಾಲೆಯ ಕೆಲವು ಪತ್ರಗಳು ಉಲ್ಲೇಖಿಸಿವೆ. ಉದಾ. ಕ್ರಿ.ಶ. 1697ರ[6] ವರ್ಷ ಭಂಡಶಾಲೆಯ ಪತ್ರವೊಂದರಲ್ಲಿ ಸ್ವಲ್ಪ ಹಣಕೋಸ್ಕರ ಹೆಂಗಸರನ್ನು ಮತ್ತು ಮಕ್ಕಳನ್ನು ಸ್ವಾದಿ ರಾಜನು ಬಲಿಕೊಡುತ್ತಿದ್ದನೆಂದೂ ಉಲ್ಲೇಖಿಸಿ, ಇಲ್ಲಿನ ಜನಸಾಮಾನ್ಯರ ಜೀವನಕ್ಕೆ ಬೆಲೆಯೇ ಇಲ್ಲವೆಂದು ಹೇಳಿರುವುದನ್ನು ವಿಮರ್ಶಿಸುವ ಅಗತ್ಯವಿದೆ.

ಜ್ಯೋತಿಷ ಮತ್ತು ಮಾಂತ್ರಿಕರು ಇಲ್ಲಿ ಹೆಚ್ಚು ಪ್ರಭಾವ ಶಾಲಿಗಳಾಗಿದ್ದರೆಂದು ಆಂಗ್ಲ ದಾಖಲೆಗಳು ಮತ್ತು ಕ್ರಿ.ಶ. 1720ರಲ್ಲಿ ಬಂದ ಹೆಮಿಲ್ಟನ್ ವರದಿಯು ತಿಳಿಸುತ್ತದೆ. ಇಷ್ಟಲ್ಲದೆ ಆಂಗ್ಲ ಅಧಿಕಾರಿಗಳು ಈ ಜೋಯಿಸರೊಂದಿಗೆ ಸಲಹೆಗಳನ್ನು ಕೇಳುತ್ತಿದ್ದರೆಂದು ಈ ದಾಖಲೆಗಳಿಂದ ತಿಳಿದು ಬರುತ್ತದೆ.[7] ಸ್ವಾದಿರಾಜ್ಯದ ಕೆಲವು ಸಾಮಾಜಿಕ ಮತ್ತು

ಧಾರ್ಮಿಕ ಪದ್ಧತಿಗಳ ಬಗ್ಗೆ ಪೋರ್ಚುಗೀಸ ದಾಖಲೆಗಳು ಅಲ್ಲಲ್ಲಿ ಹೇಳಿವೆ. ಇವರ ದಾಖಲೆಗಳು ಮುಖ್ಯವಾಗಿ ಒಪ್ಪಂದ ಮತ್ತು ಪತ್ರಕಗಳಾಗಿವೆ. ಕೆಲವು ಪತ್ರಗಳು ಗೋವಾ ಪತ್ರಾಗಾರದಲ್ಲಿವೆ.

ಕೆಲವು ಪತ್ರ ದಾಖಲೆಗಳನ್ನು ಭಂಗಾಜಾಪಿರೇರಾ ಅವರು ಸಂಪಾದಿಸಿದ್ದು ಅವು ಆರ್ಕ್ವಿವೊ ಪೋರ್ತುಗೀಜ ಓರಿಯಂಟಲ್ ಎಂಬ ಶೀರ್ಷಿಕೆಯಲ್ಲಿವೆ. ಈ ಪ್ರಬಂಧದಲ್ಲಿ ತಿಳಿಸಿದ ಹೆಚ್ಚಿನ ಸಂಗತಿಗಳು ದಿ॥ ಶಾಸ್ತ್ರಿ ಬಿ.ಎಸ್. ಅವರ ಬರಹಗಳಿಂದ ಎರವು ಪಡೆದಿದೆ.[8] ಇಲ್ಲಿ ಗುಲಾಮ ಪದ್ಧತಿ ಬಳಕೆ ಇದ್ದ ಬಗ್ಗೆ ಪೋರ್ತುಗೀಜ ದಾಖಲೆ ತಿಳಿಸಿದ್ದನ್ನು ಆಂಗ್ಲ ಪತ್ರವು ದೃಢೀಕರಿಸಿದೆ. ಸಕಾಲದಲ್ಲಿ ಸಾಲ ತೀರಿಸದವರನ್ನು ಗುಲಾಮರನ್ನಾಗಿ ಮಾಡುವ ಪದ್ಧತಿ ಇಲ್ಲಿ ಇದ್ದಿತ್ತು. ದೇವದಾಸಿ ಪದ್ಧತಿ ಇಲ್ಲಿ ಹೆಚ್ಚು ರೂಢಿಯಲ್ಲಿದೆ. ಇಷ್ಟಲ್ಲದೆ ಕ್ರೈಸ್ತ ದೇವದಾಸಿಗಳ ಉಲ್ಲೇಖ ಅಲ್ಲಲ್ಲಿ ಪೋರ್ತುಗೀಜ ದಾಖಲೆಗಳಲ್ಲಿವೆ. ಬೇಗಾರ ಪದ್ಧತಿ ಇಲ್ಲಿ ಇದ್ದದ್ದು ಇವರ ದಾಖಲೆಯಲ್ಲಿ ಉಲ್ಲೇಖವಿದೆ.[9]

ಕೆಲವು ದಾಖಲೆಗಳಲ್ಲಿ ಸ್ವಾದಿರಾಜ್ಯದ ಧಾರ್ಮಿಕ ಸ್ಥಿತಿ ಮತ್ತು ಕ್ರೈಸ್ತ ಮತದ ಪ್ರಚಾರ ಮತ್ತು ಸ್ಥಳೀಯರ ಪ್ರತಿಕ್ರಿಯೆಗಳು ಮೂಡಿ ಬಂದಿವೆ. ಪೋರ್ತುಗೀಜರು ಇಲ್ಲಿ ಕ್ರೈಸ್ತ ಮತ ಪ್ರಚಾರ ಮಾಡಲು ಬಹಳ ಆಸಕ್ತಿ ವಹಿಸಿದ್ದರು. ಇದರಿಂದಾಗಿ, ಅಂಕೋಲಾ, ಸುಂಕೇಂ, ಶಿವೇಶ್ವರ ಮತ್ತು ಕಾರವಾರಗಳಲ್ಲಿ ಕ್ರೈಸ್ತ ಇಗರ್ಜಿಗಳು ಸ್ಥಾಪಿತವಾದುವು. ಈ ಮತಪ್ರಚಾರಕರು ಈ ರಾಜ್ಯದಲ್ಲಿ ಸ್ವಂತತ್ರವಾಗಿ ಓಡಾಡಿ ಕೆಲವು ವಿಶೇಷ ವಿನಾಯಿತಿಗಳನ್ನು ಪಡೆದರು. ಅಲ್ಲದೆ ಈ ಧರ್ಮಾಧಿಕಾರಿಗಳು ನ್ಯಾಯ ತೀರ್ಮಾನ ಮಾಡುವ ವಿಶಿಷ್ಟ ಹಕ್ಕುಗಳನ್ನು ಪಡೆದರು. ಇದರೊಂದಿಗೆ ಇವರುಗಳು ಕೆಲವು ವಿಶಿಷ್ಟ ಹಕ್ಕುಗಳನ್ನು ರಾಜರಿಂದ ಪಡೆದರು.[10] ಧಾರ್ಮಿಕ ಸೌಹಾರ್ದವನ್ನು ಸ್ವಾದಿರಾಜರು ಸಾಮಾನ್ಯವಾಗಿ ಮನಗಂಡಿದ್ದರು. ಆದರೆ ಕ್ರೈಸ್ತ ಮತಪ್ರಚಾರ ವೈಖರಿ ಸ್ಥಳೀಯರಿಗೆ ಅತೃಪ್ತಿಯನ್ನುಂಟು ಮಾಡಿ ಕೆಲವು ಅಹಿತಕರ ಘರ್ಷಣೆಗಲು ನಡೆದದ್ದನ್ನು ಕೆಲವು ಪೋರ್ತುಗೀಜ ದಾಖಲೆಗಳು ಅಲ್ಲಲ್ಲಿ ಹೇಳಿದ್ದು ಗಮನಾರ್ಹ. ಉದಾ : ಕ್ರಿ.ಶ. 1752ರಲ್ಲಿ ಶಿವೇಶ್ವರದಲ್ಲಿ ಸ್ಥಳೀಯರಿಗೂ ಮತ್ತು ಕ್ರೈಸ್ತರಿಗೂ ಘರ್ಷಣೆ ನಡೆಯಿತು. ಇದಕ್ಕೆ ಮುಖ್ಯ ಕಾರಣ ಕ್ಯಾಥೋಲಿಕ್ ಧಾರ್ಮಿಕ ಮೆರವಣಿಗೆ ಹಿಂದು ದೇವಸ್ಥಾನದ ಬಳಿಸಾಗಿ ಈ ದೇವಸ್ಥಾನದ ಧಾರ್ಮಿಕ ಕಟ್ಟಳೆಗೆ ಅಡ್ಡಿ ಮಾಡುತ್ತಿತ್ತು. ಇದನ್ನು ನಿಲ್ಲಿಸಬೇಕೆಂದು ಜನರು ಸ್ವಾದಿ ರಾಜ್ಯದ ಅಧಿಕಾರಿಗಳಿಗೆ ಮನವಿ ಮಾಡಿಕೊಂಡರು. ಇದನ್ನು ಒಪ್ಪಿ ಸ್ವಾದಿ ಅಧಿಕಾರಿಗಳು ಈ ಮೆರವಣಿಗೆಯನ್ನು ನಿಲ್ಲಿಸಬೇಕೆಂದು ಚರ್ಚು ಅಧಿಕಾರಿಗಳನ್ನು ಕೇಳಿಕೊಂಡರು. ಆದರೆ ಈ ಚರ್ಚು ಅಧಿಕಾರಿಗಳು ಇದನ್ನು ಗಮನಿಸದೆ ಮೆರವಣಿಗೆಯನ್ನು ತೆಗೆದುಕೊಂಡು ಹೋದರು. ಇದನ್ನು ಸ್ವಾದಿ ಅಧಿಕಾರಿಗಳು ತಡೆಹಿಡಿದರು. ಪರಿಣಾಮವಾಗಿ ಕಲಹ ಉಂಟಾಗಿ ಈ ಇಗರ್ಜಿಗೆ ಧಕ್ಕೆಯುಂಟಾಯಿತು. ಧಾರ್ಮಿಕ ಸೌಹಾರ್ದಕ್ಕೆ ಧಕ್ಕೆ ಉಂಟಾದುದನ್ನು ತಿಳಿದು ಸ್ವಾದಿರಾಜ ಪೋರ್ತುಗೀಜರೊಡನೆ ಕ್ರಿ.ಶ. 1755ರಲ್ಲಿ ಒಪ್ಪಂದ ಮಾಡಿ ಹಾಳುಬಿದ್ದ ಚರ್ಚನ್ನು ತನ್ನ ಸಂತ ಖರ್ಚಿನಿಂದ ಪುನರ್ನಿರ್ಮಾಣ ಮಾಡಿಕೊಟ್ಟನು.[11]

ಧಾರ್ಮಿಕ ದೃಷ್ಟಿಯಲ್ಲಿ ಗಮನಾರ್ಹ ಘಟನೆ ಎಂದರೆ ಪೋರ್ತುಗೀಸ ದಾಖಲೆ ಗುರುತಿಸಿದ್ದು : 'ಶುದ್ಧಿ' ಒಂದು ಧಾರ್ಮಿಕ ವಿಧಿ. ಕ್ರಿ.ಶ. 1714ರ ಇವರ ದಾಖಲೆಯು ಮತಾಂತರ ಹೊಂದಿದ ಕ್ರೈಸ್ತರನ್ನು ಶುದ್ಧಿ ಮಾಡಿ ಮತ್ತೆ ಹಿಂದುಮತಕ್ಕೆ ಸೇರಿಸಿಕೊಳ್ಳುತ್ತಿದ್ದುದನ್ನು ತಿಳಿಸಿದೆ.[12]

ಪೋರ್ತುಗೀಜ ಕೆಲವು ದಾಖಲೆಗಳಲ್ಲಿ ಮುಸ್ಲಿಂರ ವ್ಯಾಪಾರವನ್ನು ತಡೆಗಟ್ಟುವ ಪ್ರಯತ್ನವನ್ನು ಪೋರ್ತುಗೀಜರು ನಡೆಸಿದ್ದನ್ನು ಹೇಳಿದೆ. ಆದರೆ ಸ್ವಾದಿರಾಜ್ಯದಲ್ಲಿ ಮುಸ್ಲಿಂರು ವ್ಯಾಪಾರವನ್ನು ಉತ್ತಮ ರೀತಿಯಲ್ಲಿ ನಡೆಸುತ್ತಿದ್ದುದ್ದನ್ನು ವೀಕ್ಷಿಸಿದಾಗ ಪೋರ್ತುಗೀಜರ ಪ್ರಯತ್ನ ವಿಫಲವಾಯಿತೆಂದು ತಿಳಿಯಬಹುದು. ಮಹ್ಮದೀಯರು ಸ್ವಾದಿರಾಜ್ಯದ ಸೈನಿಕ ಮತ್ತು ರಾಜತಾಂತ್ರಿಕ ಸೇವೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರೆಂದು ಆಂಗ್ಲ ಪತ್ರ ದಾಖಲೆಗಳು ಸೂಚಿಸುತ್ತವೆ.[13]

ಕ್ರಿ.ಶ. 1750ರಲ್ಲಿ ಬರೆದ ವೈಸರಾಯಿ ಮಾರ್ಕ್ವಿಸ್ ಅಲೊರನಾ ವರದಿಯು ಸ್ವಾದಿರಾಜ್ಯದ ಸಾಂಸ್ಕೃತಿಕ ಇತಿಹಾಸವನ್ನು ತಿಳಿಸುವಲ್ಲಿ ಗಮನಾರ್ಹ. ಈ ರಾಜ್ಯದಲ್ಲಿ ಶೆಣೈ, ಕಂಮಟಿ ಮತ್ತು ಪ್ರಭುಗಳು ಕಾರವಾರ ಅಂಕೋಲಾ ಮತ್ತು ಹೊನ್ನಾವರಗಳಲ್ಲಿನ ವ್ಯಾಪಾರವನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಇದರಿಂದ ಇವರುಗಳೊಂದಿಗೆ ವಾಣಿಜ್ಯ ಮೈತ್ರಿ ಹೊಂದುವ

ಅವಶ್ಯಕತೆ ಇದೆ ಎಂದು ಈ ವೈಸರಾಯಿ ಮನಗಂಡಿದ್ದಾನೆ. ಇಲ್ಲಿನ ಕ್ರೈಸ್ತರು ತಮ್ಮ ವೈರಿಗಳಿಗೆ ನಿಷ್ಠರಾಗಿ ಅವರಲ್ಲಿ ಧಾರ್ಮಿಕ ಶಿಥಿಲತೆಯು ಇದ್ದದ್ದನ್ನು ತೋರಿದ ಬಗ್ಗೆ ಈ ವರದಿಯು ತಿಳಿಸುತ್ತದೆ.[14]

ಉಪಸಂಹಾರ

ಸ್ವಾದಿರಾಜ್ಯದ ಸಾಂಸ್ಕೃತಿಕ ಮಾಹಿತಿಗಳನ್ನು ತಿಳಿಸುವ ವಿದೇಶಿ ಆಕರಗಳು ತಮ್ಮದೆಯಾದ ದೃಷ್ಟಿಕೋನದಿಂದ ನೋಡಿರುವುದನ್ನು ಗಮನಿಸಬೇಕು. ಹೆಚ್ಚಿನ ದಾಖಲೆಗಳು ಸ್ಥಳೀಯ ಸಂಸ್ಕೃತಿಯ ಹಿನ್ನೆಲೆಯನ್ನು ಮತ್ತು ಅವುಗಳ ಅಧ್ಯಯನವನ್ನು ಆಳವಾಗಿ ನಡೆಸಲಿಲ್ಲ. ನಡೆಸುವ ಪ್ರಯತ್ನವನ್ನೂ ಮಾಡಿಲ್ಲ. ಈ ವಿದೇಶಿಯರು ಉಪಯೋಗಿಸುತ್ತಿದ್ದ ದುಭಾಷಿಗಳನ್ನು ವ್ಯಾಪಾರಕ್ಕೆ ಸೀಮಿತಗೊಳಿಸಿದ್ದರು. ಕೆಲವು ಕಡೆಗಳಲ್ಲಿ ವಿದೇಶಿಯರು ತಮ್ಮ ಅಜ್ಞಾನವನ್ನು ಪ್ರಕಟಿಸಿ ಸ್ಥಳೀಯ ಸಾಂಸ್ಕೃತಿಕ ಮಾಹಿತಿಗಳನ್ನು ತಿಳಿಸಿದ್ದಾರೆ. ಉದಾ: ಗೋವು ಮತ್ತು ಹನುಮಂತರ ಪೂಜೆಗಳ ಹಿನ್ನೆಲೆಯನ್ನು ತಿಳಿಯದೇ ಇವುಗಳನ್ನು ತಿರುಚಿ ಹೇಳಿದ್ದಾರೆ. ಧಾರ್ಮಿಕ ಕಟ್ಟಳೆಗಳನ್ನು ವಿಕೃತವಾಗಿ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ವಿದೇಶಿ ಆಕರಗಳನ್ನು ಜಾಗರೂಕತೆಯಿಂದ ಪುರ್ನವಿರ್ಮಶಿಸುವ ಅಗತ್ಯ ಇದೆ. ವಿದೇಶಿ ಆಕರಗಳಲ್ಲಿ ತಿಳಿಸಿದ ಸಂಗತಿಗಳನ್ನು ಸ್ಥಳೀಯ ದಾಖಲೆಗಳೊಂದಿಗೆ ತುಲನಾತ್ಮಕ ಅಧ್ಯಯನ ನಡೆಸುವ ಅವಶ್ಯಕತೆ ಇದೆ.

ವಿದೇಶಿ ದಾಖಲೆಗಳಲ್ಲಿ ಮೂಡಿ ಬಂದ ಸ್ವಾದಿ ರಾಜ್ಯದ ಸಾಂಸ್ಕೃತಿಕ ಮಾಹಿತಿಗಳು ವಿಫಲವಾಗಿದ್ದರೂ ಇವುಗಳಲ್ಲಿ ಕೆಲವು ಸಂಗತಿಗಳು ನೈಜತೆಗೆ ದೂರವಾಗಿವೆ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಡಾನವರ್ಸ ಅಭಿಪ್ರಾಯದಂತೆ ಕ್ರಿ.ಶ. 1532ರಲ್ಲಿ ಪೋರ್ತುಗೀಚರು ಸ್ವಾದಿರಾಜನೊಡನೆ ಒಪ್ಪಂದ ಮಾಡಿಕೊಂಡರೆಂದು ಕ್ರಿ.ಶ. 1602ರಲ್ಲಿ ಡಚ್ಚರು ಈ ರಾಜ್ಯವನ್ನು ಆಕ್ರಮಿಸಿದಾಗ ಇವರನ್ನು ಸ್ವಾದಿರಾಜ ಪೋರ್ತುಗೀಜರ ಸಹಾಯದಿಂದ ಹೊಡದಟ್ಟಿದನೆಂತು ತಿಳಿಸಿದ್ದಾರೆ. ನೋಡಿ Danvers - The Portuguese in India Vol-II ಪು. 123. ಇದು ನಂಬಲರ್ಹ. ಏಕೆಂದರೆ ಆ ಕಾಲದಲ್ಲಿ ಸ್ವಾದಿ ರಾಜ್ಯ ಘಟ್ಟದ ಮೇಲಿನಷ್ಟಕ್ಕೆ ಸೀಮಿತವಾಗಿತ್ತು.
2. Fawatt English Factories in India, Vol.-I, P. 294
3. ಡಾ. ಜೊನ್ ಫ್ರಾಯರ ವರದಿ Calcutta weekly English Man (1873 London) PP. 442–425; ಹೆಚ್ಚಿನ ವಿವರ ನಾಗೇಗೌಡ ; ಪ್ರವಾಸಿ ಕಂಡ ಇಂಡಿಯಾ–ಭಾಗ 7 (ಮೈಸೂರು 1983) ಪು. 197, 206, 217–218.
4. Factory Records of Surat 91 - ಕಾರವಾರದಿಂದ ಸೂರತ್ತಿಗೆ ತಾ. 15.9.1684ರಂದು ಬರೆದ ಪತ್ರ, M.A. Desai : Chitta Kula-Karwar (Bombay : 1969) P. 53
5. ಜೈಮಿಲಿ ಕರೇರಿ Indian Travels of Careri : (Ed) S.N. Sen, New Delhi, 1949, PP. 209+210, 212, 214, 216; ನೋಡಿ : ನಾಗೇಗೌಡ – ಅದೇ ಗ್ರಂಥ, ಪುಟ 118–122.
6. Bombay Factory Records Vo. 27; P.27 - ಅದೇ, V-III ಹೆಚ್ಚಿನ ವಿವರಕ್ಕೆ ನೋಡಿ ದೇಸಾಯಿ ಎಂ.ಎ : ಅದೇ ಗ್ರಂಥ, ಪು. 60
7. Hamilton : New Account of East India, Vol-I, PP. 147-8
8. The Portuguese in Kanara (Bombay) 1969 ಅಪ್ರಕಟಿತ ಪ್ರಬಂಧ ; ಕೆಳದಿ ಅರಸರೂ ಹಾಗೂ ಪೋರ್ತುಗೀಜರು (ಧಾರವಾಡ 1972), Studies in Indo-portugeuse History (Bangalore 1981), ಸ್ವಾದಿ ಅರಸರ ಆಕರ ಸಾಮಗ್ರಿ ಪೋರ್ತುಗೀಜ ದಾಖಲೆ, ಸ್ವಾದಿ ಅರಸು ಮನೆತನ (ಸಂ) ಎಂ.ಎಂ. ಕಲಬುರ್ಗಿ ಮತ್ತು ಅ. ಸುಂದರ, ಗದಗ, 1995)
9. Surat Factory Records (91)1684; ತಾ. 17–12–1683 ರಂದು ಸೂರತ್ತಿನಿಂದ ಕಾರವಾರಕ್ಕೆ ಬರೆದ ಪತ್ರ Vol. 126-1, PP. 15-16 ದೇಸಾಯಿ ಎಂ.ಎ., ಪು. 56
10. Danvers : The Portuguese in India Vol. II, PP. 372, 377-43
11. ಸ್ವಾದಿ – ಅರಸು ಮನೆತನ, ಪು. 47–49.

12. ಅದೇ ಗ್ರಂಥ, ಪು. 48
13. Fryer : East India & Persia Vol-I (London 1909-15); Carwar factory records Vol-I Bundle 5; Desai M.A. ಅದೇ ಗ್ರಂಥ ಪು. 82.
14. S.N. Sen : Studies in Indian History (Delhi 1993), PP. 198-201, 228, 229.

❑

ಉತ್ತರ ಕನ್ನಡ ಜಿಲ್ಲೆಯ ಕಾಷ್ಟ ಶಿಲ್ಪಕಲೆ–ಒಂದು ಟಿಪ್ಪಣಿ

– ಕೆ.ಜಿ. ಭಟ್‌ಸೂರಿ

ಕರ್ನಾಟಕ, ಅದರಲ್ಲೂ ಉತ್ತರ ಕನ್ನಡ ಜಿಲ್ಲೆ ಹಲವು ತೆರನಾದ ಕಲೆಗಳ ತವರೂರು. ರೂವಾರಿ ತನ್ನ ಕಲೆಯ ನಿರ್ಮಾಣಕ್ಕೆ ಮರವನ್ನಾಗಲೀ, ಕಲ್ಲನ್ನಾಗಲೀ ಅಥವಾ ಮಣ್ಣನ್ನಾಗಲೀ ಬಳಸಿ ಒಂದು ಆಕೃತಿಯನ್ನೊ ಅಥವಾ ಒಂದು ಸಾಂಕೇತಿಕ ಮೂರ್ತಿಯನ್ನೋ ನಿರ್ಮಿಸುತ್ತಾನೆ. ಹೀಗೆ ನಿರ್ಮಿಸುವ "ಶಿಲ್ಪಕಲೆ ಬರೀ ಪ್ರತಿಮೆ ಅಥವಾ ದೇವತೆಯ ವಿಗ್ರಹವನ್ನು ರೂಪಿಸುವ ಕಲೆಗೆ" ಸೀಮಿತವಾಗಿಲ್ಲ. ತನ್ನ ಮನಸ್ಸಿನ ಭಾವನೆಗಳನ್ನು ಒಂದು ಸ್ಥಿರ ಮಾಧ್ಯಮದ ಮೂಲಕ ತೋರಿಸುವುದುಂಟು.[1] ಒಂದಲ್ಲ ಒಂದು ರೀತಿಯಿಂದ ಸೌಂದರ್ಯ ಪ್ರಜ್ಞೆ ಉಪಯುಕ್ತತೆ ಮತ್ತು ಆಧ್ಯಾತ್ಮಿಕತೆಯ ಸಮನ್ವಯ ಧರ್ಮವು ಕಲೆಯಲ್ಲಿ ಕಾಣುವ ವೈಶಿಷ್ಟ್ಯ. ಇಲ್ಲಿ ಗುಡಿಗಾರಿಕೆ ಅಥವಾ ಗುಡಿಗಾರರ ಕಲೆಯನ್ನು ಪ್ರಧಾನವಾಗಿರಿಸಿಕೊಂಡು ಅವರ ಕಲಾ ಸಂಪ್ರದಾಯವನ್ನು ಉತ್ತರ ಕನ್ನಡ ಜಿಲ್ಲೆಗೆ ಸೀಮಿತ ಮಾಡಿ, ಒಂದು ಪರಿಚಯವನ್ನು ಮಾತ್ರ ಇಲ್ಲಿ ಮಾಡುತ್ತಿದ್ದೇನೆ.

ಗಂಧದ ಕೆತ್ತನೆ, ಬೆಂಡಿನಹಾರ, ತುರಾಯಿ (ಸುಗ್ಗಿ ಕುಣಿತದಲ್ಲಿ ಬಳಸುವ ಬೆಂಡಿನ ತುರಾಯಿ) ಗುಡಿಗೋಪುರದ ಮರದ ವಿನ್ಯಾಸ, ಶಿಲ್ಪಕಲೆ, ಸ್ಥಂಬಗಳ ನಿರ್ಮಾಣ, ಕೆಲವು ಅಲಂಕೃತ ಗೃಹೋಪಯೋಗಿ ಪೀಠೋಪಕರಣ ಭಿತ್ತಿಫಲಕ ಮುಂತಾದವುಗಳಲ್ಲಿ ಈ ಗುಡಿಗಾರ ಕಲಾಕೌಶಲ್ಯ ಎದ್ದು ಕಾಣುತ್ತದೆ.

ಮರದ ಕೆತ್ತನೆಕಲೆಯ ಸಂಪ್ರದಾಯ ಹೆಚ್ಚಿನ ಮಟ್ಟಿಗೆ ದೇವಾಲಯ ರಥಗಳಲ್ಲಿ ಕಾಣಬಹುದು. ರಥಗಳ ಪಟ್ಟಿಕೆಯಲ್ಲ ರಾಮಾಯಣ, ಮಹಾಭಾರತ ಹಾಗೂ ಪೌರಾಣಿಕ ವಿಷಯಕ್ಕೆ ಸಂಬಂಧಪಟ್ಟ ಕಥಾನಕಗಳು, ಯಾಳಿ, ಶಾರ್ದೂಲ, ಗಜ ಮತ್ತು ಹಂಸಗಳ ಕಲಾತ್ಮಕ ನಿರೂಪಣೆ ಕಂಡು ಬರುತ್ತದೆ. ಉದಾಹರಣೆಗಾಗಿ ಕುಮಟಾ ತಾಲ್ಲೂಕಿನ ಧಾರೇಶ್ವರ ದೇವಾಲಯ, ಶಿರಸಿ ತಾಲ್ಲೂಕಿನ ಬನವಾಸಿ, ಹೊನ್ನಾವರದ ರಾಮಮಂದಿರದ ಹೊರಾವರಣದಲ್ಲಿ ನಿಲ್ಲಿಸಿರುವ ರಥ, ಇವುಗಳಲ್ಲಿ ಇಂಥ ಕೆಲವು ಅಪೂರ್ವ ಕಲಾಕೃತಿಗಳು ಪ್ರತಿಬಿಂಬಿತವಾಗಿವೆ. ಹಿಂದಿನ ಸೂಪಾ ತಾಲ್ಲೂಕಿನ (ಇಂದಿನ ಜೋಯಡಾ) ದೂಧಗಾಳಿಯಲ್ಲಿ ರಾಮೇಶ್ವರ ದೇವಾಲಯಗಳ ಸ್ತಂಬದ ಮೇಲೆ ದಶಾವತಾರ ಮತ್ತು ಕಾಮಸೂತ್ರದ ಸ್ವಾರಸ್ಯಕರ ಪಟ್ಟಿಕೆ ಇದೆ. ಕುಮಟಾದ ಮಹಾಲಸ ನಾರಾಯಮ ದೇವಾಲಯದ ಭುವನೇಶ್ವರಿಯು ಸುಂದರ ಕೆತ್ತನೆಯಿಂದೊಡಗೂಡದೆ.

ಮುರುಡೇಶ್ವರದಿಂದ ಒಂದೂವರೆ ಕಿ.ಮೀ. ಅಂತರದಲ್ಲಿ ತೂದಳವೇ ನದಿಯ ದಂಡೆಯ ಮೇಲೆ ಮರದಿಂದ ಕೆತ್ತಲ್ಪಟ್ಟ ಹದಿನಾರು ಮೂರ್ತಿಗಲು ದೊರೆತಿವೆ. ಇವುಗಳಲ್ಲಿ ಮುಖ್ಯವಾದುದು ನೇತ್ರಾಣಿ ಜಟಕ. ನೇತ್ರಾಣಿ ಬಹುಶಃ ಸಮೀಪದ ಗುಡ್ಡದ ಹೆಸರಿರಬೇಕು. ನೇತ್ರಾಣಿ ಜಟಕ ಎನ್ನುವ ಮಾತು ನೇತ್ರಾಣಿ ಗುಡ್ಡದ ಪಾಲಳನಿರಬೇಕು. ನೇತ್ರಾಣಿ ಜಟಕ 120 ಸೆಂ.ಮೀ. ಎತ್ತರವಿದ್ದು, ನಿಂತಭಂಗಿಯಲ್ಲಿದ್ದು, ತಲೆಯ ಮೇಲೆ ಹಾವಿನ ಹೆಡೆಯಿದೆ. ಕೈಯಲ್ಲಿ ದಾಂಡು ಹಿಡಿದಿದೆ. ಗಡ್ಡ, ಮೀಸೆ ಎದ್ದು ಕಾಣುತ್ತದೆ. ವೀರಮಾಸ್ತಿ, ಮಲ್ಲಿಮಾಸ್ತಿ ಮತ್ತು ಮಾಮಾಸ್ತಿ ನೇತ್ರಾಣಿ ಜಟಕನ ಪತ್ನಿಯರು. ಐದನೆಯದು ಬಾಳಬಂಟ, ಆರನೆಯದು ಕುದುರೆ ವೀರಪ್ಪನೆಂದು, ಲೋಕಾರೂಢಿಯಲ್ಲಿರುವ ಮಾತು. ಕುದುರೆ ವೀರಪ್ಪ ಹೆಸರಿಗೆ

ತಕ್ಕಂತೆ ಕುದುರೆಯ ಮೇಲೆ ಕುಳಿತು ಸವಾರಿ ಮಾಡುತ್ತಿರುವ ದೈವವಾಗಿದ್ದು, ನಿಜಕ್ಕೂ ಸುಂದರವಾಗಿದೆ. ಈತ ಉದ್ದನೆಯ ನಿಲುವಂಗಿ ಧರಿಸಿದ್ದಾನೆ. ಟೋಪಿಯನ್ನು ಧರಿಸಿದ ರೀತಿ ಇಂಗ್ಲೀಷ್ 'ಹ್ಯಾಟ್' ಮಾದರಿಯದು. ಏಳನೆಯದು ಯಕ್ಷಿಕಂಬ ಈ ಕಂಬದ ಸುತ್ತಲೂ ಹಾವಿನ ಹೆಡೆಯ ಲಾಂಛನವಿದೆ. ಇದರ ಹೊರತಾಗಿ ಮಾಸ್ತಿ ಮನೆಯಲ್ಲಿ ಇನ್ನೂ ಮೂವತ್ತು ಮರದ ಮೂರ್ತಿಗಳಿವೆ. ಇವುಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಹಾಗೇ ಕಲಾತ್ಮಕತೆಯ ದೃಷ್ಟಿಯಿಂದ ಮತ್ತು ಪ್ರಾದೇಶಿಕ ಜಾನಪದದ ಐತಿಹ್ಯದ ದೃಷ್ಟಿಯಿಂದ ಮಹತ್ವದ್ದಾಗಿದೆ.

ಕರ್ನಾಟಕ ವಿಶ್ವವಿದ್ಯಾನಿಲಯದ ವಸ್ತು ಸಂಗ್ರಹಾಲಯದಲ್ಲಿ 16–17ನೇ ಶತಮಾನಕ್ಕೆ ಸೇರಿದ ಕಿನ್ನರಿ, ಮೂಲತಃ ಹೊನ್ನಾವರ ತಾಲ್ಲೂಕಿನ ಔಂಸಹಳ್ಳಿ ಗ್ರಾಮಕ್ಕೆ ಸೇರಿದೆ. ಇದು 40 ಸೆಂ.ಮೀ. ಎತ್ತರವಿದ್ದು, ಕೈಬಳೆ, ತೋಳಬಂದಿ, ಕಿರೀಟ ಮತ್ತು ಆಭರಣಗಳಿಂದ ಅಲಂಕರಿಸಲ್ಪಟ್ಟಿವೆ. ಮೇಲ್ಭಾಗ ಹೆಂಗಸಿನ ರೂಪ, ಕೆಳಭಾಗ ಒಂದು ಪಕ್ಷಿಯ ಬಾಲದಂತಿದ್ದು ಮೇಲಕ್ಕೇರಿ ನಿಂತಿದ್ದು, ನೃತ್ಯ ಭಂಗಿಯಲ್ಲಿದೆ. ಕಿನ್ನರಿ ಧರಿಸಿದ ಕಿವಿಯೋಲೆಯ ಮೇಲ್ಭಾಗದಲ್ಲಿ ಬುಗುಡಿಯಾಕಾರ ಮತ್ತು ಎರಡು ಕಿವಿಗೂ ಲೋಲಕ ಮತ್ತು ಕೆಳಭಾಗದಲ್ಲಿ ಬೆಂಡೋಲೆ ಧರಿಸಿದೆ. ಕೊರಳಲ್ಲಿ ಹಲವಾರು ಪದಕಗಳಿವೆ. ಎಡಗೈಯಲ್ಲಿ ಉದ್ದ ದಂಟಿನ ಮೊಗ್ಗನ್ನು ಹಿಡಿದಿದೆ. ಎಡಕ್ಕೆ ತುಸು ವಾಲಿದಂತಿದೆ. ಬಲಗೈ ಮುಂದಿದೆ. ಕೆಳಭಾಗದಲ್ಲಿ ಕಟಬಂಧ ಮತ್ತಿತರ ಟೊಂಕದ ಆಭರಣಗಳಿವೆ. ಹಣೆಯಲ್ಲಿ ನಾಮದ ಲಂಬಾಕಾರದ ಗುರುತಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ರಾಮದೇವಿ ಪೂಜೆ ಹೆಚ್ಚು ಪ್ರಚಲಿತವಿದೆ. ಉದಾಹರಣೆಗಾಗಿ ಶಿರಸಿ ಮಾರಿಕಾಂಬೆ. ಮರಗೆತ್ತನೆಯ ಕಲಾಕೌಶಲ್ಯಕ್ಕೆ ಇದೊಂದು ಉತ್ತಮ ನಿದರ್ಶನ. ಸುಮಾರು ನಾಲ್ಕು ಮೀ. ಎತ್ತರದ ಈ ಮೂರ್ತಿ ನಿಂತ ಭಂಗಿಯಲ್ಲಿದ್ದು ಅಷ್ಟಭುಜಳಾಗಿ ಆಯುಧಗಳನ್ನು ಹಿಡಿದಿದ್ದಾಳೆ. ಈಕೆ ಸಿಂಹ ವಾಹನೆ. ಈ ಸುಂದರ ಮೂರ್ತಿಯ ಮುಖ ಭಾವದಲ್ಲಿ ಶಕ್ತಿ ಸ್ವರೂಪ ಪರಿಣಾಮಕಾರಿಯಾಗಿ ಮೂಡಿ ಬಂದಿದೆ. ಮಾರೆಮ್ಮ ಮೂಲತಃ ಈ ಭಾಗದ ಜನಪ್ರಿಯ ಗ್ರಾಮ ದೇವತೆ.[3]

ಒಟ್ಟಿನಲ್ಲಿ ಮರದ ಕೆತ್ತನೆಯ ಈ ಕಲಾತ್ಮಕ ಕೃತಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಇದು ವಾಸ್ತವವಾಗಿ ಉತ್ತರ ಕನ್ನಡದ ಗುಡಿಗಾರರ ಶ್ರೀಮಂತ ಕಲಾಪರಂಪರೆಯನ್ನು ಪ್ರತಿನಿಧಿಸುತ್ತದೆ. ಇಲ್ಲಿ ಕೆಲವು ಮೂರ್ತಿಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳಲಾಗದಿದ್ದರೂ ಕಲಾತ್ಮಕ ಕೆತ್ತನೆಯ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಲೆ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ ಎಂಬುದು ಸ್ಪಷ್ಟವಾಗುತ್ತದೆ. ಸ್ಥಳೀಯವಾಗಿ ಲಭ್ಯವಿರುವ ಮರಮಟ್ಟುಗಳು ಈ ಬಗೆಯ ಕಲೆಗಾರಿಕೆ ಬೆಳೆದು ಬರಲು ಪೂರಕವಾಗಿರಬಹುದು. ಇಷ್ಟಾದರೂ ಈ ಕಲಾಪರಂಪರೆಯಲ್ಲಿ ಆಗಮೋಕ್ತ ಪ್ರತಿಮಾ ಲಕ್ಷಣದ ಎಲ್ಲ ವಿವರಗಳು ಶಾಸ್ತ್ರಬದ್ಧವಾಗಿ ಪಡೆದಿದೆ ಎಂದು ಹೇಳಲಾಗುವುದಿಲ್ಲ. ಅಂತೆಯೇ ಇವುಗಳನ್ನು ಆಯಾ ಪ್ರದೇಶದ ವಿಶಿಷ್ಟ ಕಲೆಯಾಗಿ ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಅಗತ್ಯ ಎಂದು ತೋರಿಸುವುದಷ್ಟೆ ಈ ಪ್ರಬಂಧದ ಉದ್ದೇಶ.

ಅಡಿಟಿಪ್ಪಣಿಗಳು

1. ಶಿವರಾಮ ಕಾರಂತ ಕೆ., 1975, ಭಾರತೀಯ ಶಿಲ್ಪ ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು, ಪುಟ 1.
2. Panchamukhi R.S., 1941 ; Annual Report on Kannada research in Bombay Province for the year 1939-40, Dharwar, P. 28.
3. Bhat Soori K.G., 1987 : Art and Architecture of North Kanara (Early Medieval Phase) (Unpublished Ph.D., Thesis) University of Mysore, PP. 301-303.

❑

ಚಂದಾವರ ಕದಂಬ ವೀರ ಕಾವದೇವರಸನ ಕಬ್ರಗಿ ಶಾಸನ

– ಗಣಪತಿಗೌಡ ಎಸ್.

ಕಬ್ರಗಿಯು ಕುಮಟಾ ತಾಲ್ಲೂಕಿನ ಕತಗಾಲ ಗ್ರಾಮಕ್ಕೆ ಸೇರಿದ ಉಪಗ್ರಾಮವಾಗಿದ್ದು ಕತಗಾಲದಿಂದ ಸುಮಾರು 6 ಕಿ.ಮೀ. ದೂರದಲ್ಲಿದೆ. ಅಲ್ಲಿರುವ ವಿಷ್ಣು ದೇವಾಲಯದ ಬಲಪಾರ್ಶ್ವದಲ್ಲಿ ಈ ಶಾಸನವಿದೆ. 25 ಸಾಲುಗಳಿರುವ ಈ ಶಾಸನವನ್ನು ಕ್ರಿ.ಶ. 13ನೇ ಶತಮಾನದ ಕನ್ನಡ ಅಕ್ಷರಗಳಲ್ಲಿ ಕೊರೆದಿದ್ದು, ಮೇಲ್ಭಾಗದಲ್ಲಿ ಶಿವಲಿಂಗ ಮತ್ತು ಬಸವನ ಚಿತ್ರಗಳಿವೆ.

ಶಾಸನ ನೀಡುವ ಕಾಲವಿವರ ಇಂತಿದೆ : "ವೀರ ಕಾವದೇವ ವರುಷದ 12ನೆಯ ವಿಶ್ವಾವಸು ಸಂವತ್ಸರದ ವಯಶಾಖ ಸುದ್ಧಿ 3 ರವಿವಾರ". ಈ ವಿವರಗಳು 13ನೆ ಶತಮಾನದಲ್ಲಿ ಕ್ರಿ.ಶ. 1245 ಏಪ್ರಿಲ್ 29, ರವಿವಾರಕ್ಕೆ ಸರಿ ಹೊಂದುತ್ತದೆ.

ಶಾಸನದ ಸಾರಾಂಶ ಹೀಗಿದೆ :

ಶಿವಸ್ತುತಿಯಿಂದ ಪ್ರಾರಂಭಿಸಿ, ಚಂದ್ರಿಕಾಪುರ ನೆಲೆವೀಡನ್ನು ಪರಿಚಯಿಸುತ್ತದೆ. ಶ್ರೀ ವೀರಕಾವ ದೇವರಸರು ಮತ್ತು ಕೀರ್ತಿನಾರಾಯಣ ದಂಡನಾಯಕರು ಇಬ್ಬರೂ ಇದ್ದು ಕಬ್ಬರಗಿ ಗ್ರಾಮವನ್ನು ಶ್ರೀ ಮಹಾಬಳ ದೇವರಿಗೆ ಸರ್ವಬಾಧಾ ಪರಿಹಾರವಾಗಿ ಕೊಟ್ಟಿದ್ದನ್ನು ವಿವರಿಸುತ್ತದೆ. ಶಾಸನದಲ್ಲಿಯ ಮೊದಲ 10 ಸಾಲುಗಳು ಆದಿಕದಂಬ ಮಯೂರವರ್ಮನ ವಂಶದ ಸ್ತುತಿ ನೀಡಿದರೆ ಉಳಿದ 15 ಸಾಲುಗಳು ವೀರ ಕಾವದೇವನ ಸಹಿತ ಕೀರ್ತಿನಾರಾಯಣ ದಂಡನಾಯಕ ಹಾಗೂ ಗೋಕರ್ಣದ ತಳಾಧಿಕಾರಿ, ಧೂಳಿಖೇಡದ ಮಾದಯ್ಯ, ವೈದ್ಯರ ಹೆಬ್ಬಾರವ, ಬೆಣ್ಣೆಯ ಹೆಬ್ಬಾರವ, ಕೈದಾಡಿ ಹೆಬ್ಬಾರವ, ತೆಂಗಾಕ ಹೆಬ್ಬಾರವ, ಗಡಿಗಾರಿ ಹೆಬ್ಬಾರವ ಮೊದಲಾದವರ ಹೆಸರುಗಳನ್ನು ಹೇಳುತ್ತದೆ.

ಸುಮಾರು 5 ದಶಕಗಳ ಹಿಂದೆಯೇ ಆರ್.ಎಸ್. ಪಂಚಮುಖಿಯವರು 'ಚಂದಾವರ ಕದಂಬರು' ಎಂಬ ಹೊಸ ಮನೆತನವನ್ನು ಪರಿಚಯಿಸಿ ಅವರ ವಂಶಾವಳಿಯನ್ನು ಕ್ರಿ.ಶ. 1078ರಿಂದ ಪ್ರಾರಂಭಿಸಿದ್ದರು. ಆದರೆ ಇತ್ತಿತ್ತಲಾಗಿ ದೊರೆತ ಕೆಲವು ಹೊಸಶಾಸನಗಳ ಆಧಾರದ ಮೇಲೆ ನಿಜವಾಗಿ ಚಂದಾವರ ಕದಂಬ ಮನೆತನದ ಇತಿಹಾಸ ಅರಸ ತ್ರಿಭುವನಮಲ್ಲ ಬೀರದೇವ / ವೀರದೇವನ ಕಾಲದಿಂದ ಪ್ರಾರಂಭವಾಗುತ್ತದೆಂದು ತಿಳಿದುಬಂದಿದೆ. ಇವನಿಗೆ ಸಂಬಂಧಪಟ್ಟ ಶಾಸನಗಳು ಕ್ರಮವಾಗಿ ಕ್ರಿ.ಶ. 1219 ಮತ್ತು 1223 ರದ್ದಾಗಿದೆ.[2]

ಇದರಲ್ಲಿ ಇವರ ವಂಶಾವಳಿಯ ಕುರಿತ ಯಾವುದೇ ಪ್ರಸ್ತಾವನೇ ಇಲ್ಲ. ಆದರೆ ಬೀರದೇವನು ಚಂದ್ರಿಕಾ ಪುರದಲ್ಲಿ ಆಳುತ್ತಿದ್ದನೆಂದೂ, ಅವನ ಪ್ರಧಾನ ದಂಡ ನಾಯಕ ಕೀರ್ತಿನಾರಾಯಣನನ್ನು ಹೆಸರಿಸುತ್ತದೆ. ಆದರೆ ಗೋಕರ್ಣದ ವೀರಕಾವದೇವರಸನ ಕ್ರಿ.ಶ. 1225ರ ತಾಮ್ರ ಶಾಸನವು ವೀರದೇವನ ಮಗ ತೈಲನೆಂದೂ ಹಾಗೂ ಮೊಮ್ಮಗ ಕಾಮದೇವನೆಂದೂ ಹೇಳಿದೆ.[3] ಅದೇ ರೀತಿ ಕತಗಾಲದ ಹೈಸ್ಕೂಲಿನಲ್ಲಿರುವ ಕ್ರಿ.ಶ. 1256ರ ಶಾಸನವು ಕಾವದೇವನನ್ನು ಚಂದಾವರದಲ್ಲಿದ್ದ ವೀರದೇವನ ಮೊಮ್ಮಗ ಹಾಗೂ ಕಾದಂಬ ಸಂತಾನಂ ಹೈವೆಯ ಅಧಿಕಾರಿ ಎಂದು ಹೇಳಿದೆ.[4] ಇದಕ್ಕೂ ಪೂರ್ವದಲ್ಲಿ ಕ್ರಿ.ಶ. 1167ರ ಎಡತಾರೆಯ ಪಟ್ಟಣದ ತೈಲವರ್ಮನ ಶಾಸನವು ಕೂಡ ವೀರದೇವ, ಕಾವದೇವ ಹಾಗೂ ಕೀರ್ತಿನಾರಾಯಣ

ದಂಡನಾಯಕನನ್ನು ಹೆಸರಿಸುತ್ತದೆ.5 ಈ ಎಲ್ಲ ಶಾಸನಗಳ ಆಧಾರದ ಮೇಲೆ ಚಂದಾವರ ಕದಂಬರ ವಂಶಾವಳಿಯನ್ನು ಈ ಕೆಳಗಿನಂತೆ ಪುನರಚಿಸಬಹುದು.

ವೀರದೇವ / ಬೀರದೇವ

ತೈಲ

ವೀರಕಾವದೇವ

ಶಾಸನದ ಮಹತ್ವ

1. ಚಂದಾವರದ ಶಾಸನದಲ್ಲಿಯ ಬೀರದೇವನೂ, ಗೋಕರ್ಮ ತಾಮ್ರಶಾಸನ, ಕತಗಾಲ ಶಿಲಾಶಾಸನ ಮತ್ತು ಎಡತಾರೆಯಲ್ಲಿ ಬರುವ ವೀರ ದೇವನು ಒಬ್ಬನೆ ಎನ್ನುವುದು ಸ್ಪಷ್ಟವಾಗುವದು.
2. ಪ್ರಸ್ತುತ ಶಾಸನ ಕ್ರಿ.ಶ. 1245ಕ್ಕೆ ಸರಿಹೊಂದುವುದರಿಂದ ವೀರದೇವನ ಮೊಮ್ಮಗ ಕಾವದೇವನ ಆಳ್ವಿಕೆ ಕ್ರಿ.ಶ. 1234ರಲ್ಲಿ ಆರಂಭವಾಯಿತೆಂಬುದನ್ನು ಸ್ಪಷ್ಟಪಡಿಸುತ್ತದೆ.
3. ಕೀರ್ತಿನಾರಾಯಣನು ಕ್ರಿ.ಶ. 1167ರಿಂದ ಹಿಡಿದು ಮುಂದೆ ಬೀರದೇವ ಹಾಗೂ ಕಾವದೇವನ 12ನೆಯ ವರ್ಷದವರೆಗೂ ಮಂತ್ರಿಯಾಗಿದ್ದನೆಂದು ತಿಳಿಸುತ್ತದೆ.
4. ವಿಶಿಷ್ಟ ಹೆಬ್ಬಾರ ಮನೆತನಗಳ ಉಲ್ಲೇಖವಿರುವುದು.
5. ಕಬ್ಬರಗಿಯಲ್ಲಿ ಚಂದಾವರ ಕದಂಬರ ಕಾಲದ ದೇವಾಲಯವಿದ್ದ ಬಗ್ಗೆ ಮಾಹಿತಿ ನೀಡುತ್ತದೆ. ಈಗ ದೇವಾಲಯವನ್ನು ಆಧುನಿಕ ರೀತಿಯಲ್ಲಿ ಕಟ್ಟಲಾಗಿದೆ.
6. ಶಾಸನದಲ್ಲಿ ಹೇಳಿದ ಕಬ್ಬರಗಿಯು ಇಂದಿನ ಕಬ್ರಗಿಯಾಗಿದೆ. ಆದರೆ ಧೂಳಿಖೇಡಯಾವುದೆಂದು ನಿರ್ಣಯಿಸಲಾಗಲಿಲ್ಲ.

ಶಾಸನದ ಪಾಠ

1. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಭಾಯ ಸಂಭವೇ ॥ಶಿವಂ॥
2. ಓಂ ನಮ ಶಿವಾಯ॥ ಸ್ವಸ್ತಿ ನಮಧಿಗತ ಪಂಚ ಮಹಾಸಬ್ದ ಮಹಾಮಂಡಳೇಸ್ವರ ತ್ರೈಕ್ಷಾಕ್ಷ್ಯಸಂ
3. ಭವ ಚತುರಾಶೀತಿ ನಗರಾವಿದಿಷ್ಟಿತ ಲಲಾಮ ಲೋಚನ ಚತುರ್ಭುಜ ಜಗದ್ವಿತಿತಾಷ್ಟ
4. ದಶಾಸ್ವಮೇಧಯಜ್ಞದೀಕ್ಷಾದೀಕ್ಷಿತ ಹಿಮವಂದು ಗಿರೀಂದ್ರಮಂದ್ರ ಭುಜಗೇಂದರ ಸಂಸ್ಥಾಪಿತ ಸಿ–
5. ಲಾ ಸ್ತಂಭ(ಬ)ದ್ಧ ಮದಗಜ ಮಹಾಮಹಿಭಿ ರಾಮಂ ಕಾದಂಬ ಚಕ್ರವರ್ತಿ ಮಯೂರವರ್ಮ್ಮ
6. ಕುಳಭೂಷಣ ಪೆರ್ಮ್ಮಟ್ಟತೂರ್ಯ್ಯ ನಿರ್ಘೊಷಣ ಸಾಖಾಚರೇಂದ್ರ ಮಾರ್ಕ್ಕೊಳುವರಗಂ–
7. ಡ ಗಂಡಬಂಗಾಜ ಅಜ್ಜನಸಿಂಹ ಸಾಹಸೋ ತ್ತುಂಗ ಸಹಜಮ್ರಿಗಮದಾಮೋದ ಶ್ರೀ ಗೋಕ–
8. ರ್ಣ್ನ ಮಹಾಬಲಿ ದೇವರ ದಿಬ್ಯ ಶ್ರೀ ಪಾದ ಪದ್ಮಾರಾಧಕ ಪಱಬಟಿ ಸಾಧಕಂ ಹುಸಿವರ ಸೂಲ ಚಲದಂಕ ರಾ.
9. ಮ ನಿಗ(ಳಂ)ಕ ಮಲ್ಲ ಗಂಡರದಾವಣಿ ಪ್ರತಾಪ ವೀರ ಕಾವದೇವರಸರ ವಿಜಯರಾಜ್ಯಮುತ್ತರೋ ತ್ತರಾಭಿವೃದ್ಧಿ ಪ್ರವ–
10. ರ್ದ್ಧ ಮಾನಮಾಚಂದ್ರಾರ್ಕತಾರಂಬರಂ ॥ ಚಂದ್ರಿಕಾಪುರದ ನೆಲೆವೀಡಿನೊಳು ಸುಖಸಂಕಥಾವಿನೋ –
11. ದದಿಂ ರಾಜ್ಯಂಗೆಯುತ್ತಿರೆ ॥ ಶ್ರೀ ಧಾರಣಿ ಪವಿತ್ರ ಮಾದುದು ವಾರುಜ ಸಂಭವ ಶ್ರಿಷ್ಟಿಸಘಟಿಮದಾ –
12. ಯಿತು ಚಾರುಗುಣ ಮಂತ್ರಿಮಂಡನ ನಾರಾಯಣನಿಂದವೆಂದೊಡೆನೊ ಮಹತ್ವಂ । ಗೋವಿಂದ॥

13. ಶ್ರೀ ಸ್ವಸ್ತಿ ಶ್ರೀಮತು ವೀರಕಾವದೇವ ವರುಶದ (12)ನೆಯ ವಿಶ್ವಾವಸು ಸಂವತ್ಸರದ ವಯಸಾಖ ಸುಧ 3 ರವಾರದಂ.

14. ದು ಶ್ರೀ ಕಾವದೇವರಸರು ಶ್ರೀ ಕೀರ್ತಿ ನಾರಾಯಣ ದಂಣ್ನಾಯಕರುಂ ವೊಂದಾ.

15. ಗಿದ್ದು ಕಬ್ಬರಗೆಯ ಗ್ರಾಮಕ್ಕೆ ಕೊಟ್ಟ ಪತ್ರ ಶ್ರೀ ಮಹಾಬಟಿ ದೇವರಿಗೆ ಸರ್ವ್ವಭಾಧೆ

16. ಪರಿಹವಾಗಿಯೂ ಗ್ರಾಮವ ಕೊಟ್ಟರು ॥ ಶ್ರೀಮತು ವೀರಕಾವದೇವರಸರು ಶ್ರೀ ಕೀರ್ತಿನಾರಾ-

17. ಯಣಯ ದಂಣ್ನಾಕರು ಗೋಕರ್ಣ್ನದ ತ(ಳ)ಧಿಕಾರಿ ಧೂಳಿಖೇಡದ ಮಾದಯ್ಯನುಂ ವೈದ್ಯ.

18. ರ ಹೆಬ್ಬಾರುವ ಮೊದಲಾಗಿ ಬೆಣ್ಣೆಯ ಹೆಬ್ಬಾರವ ಕೈಧಾಡಿ ಹೆಬ್ಬಾರವ

19. ತೆಂಗಾಕ ಹೆಬ್ಬಾರುವ ಗಡಿಗಾರಿ ಹೆಬ್ಬಾರುವ ನಾಣೆ(ಲ್) ಹೆಬ್ಬಾರುವ ಯಿಂತಿ ನಾ

20. ಲ್ವರ ಮುಂದಿಟ್ಟು ಕಬ್ಬರಗೆಯ ಸಿದ್ಧಾಯ ವರ್ಸ ತಪ್ಪುದಂಡ ಬಡ್ಡಿಯಿಂತಿಸುವನೂ ಶ್ರೀ ಗೋ-

21. ಕರ್ಣ್ನ ಮಹಾಬಟಿ (ದೇವರ್ಗ್ಗೆ)ಧಾರಪೂರ್ವ್ವಕಂ ಮಾಡಿಕೊಟ್ಟರು ॥ ಸ್ವದತ್ತಂ ಪರದತ್ತಂ ವಾಯೋ ಹರೇತಿ ವಸುಂಧರಾ

22. ಷಷ್ಠಿರ್ವ್ವರ್ಷ ಸಹಶ್ರಾಣಿ ವಿಷ್ಠಾಯಾಂ ಜಾಯತೇ ಕ್ರಿಮಿ ॥ ಅಕರಸ್ಯ ಕರಿ ಕರ್ತ್ತೊ (.) ಕೋಟಿವರ್ಷ ಸ್ಥಿತ ನಕರಶ್ಚಪ

23. .... ಗೋಕೋಟ ಫಲವಂಶ್ನಿತಿ ॥ ದಾನಂವಾ ಪಾಲನೇಯೋ

24. ದಾನಾಶ್ರೇಯೋನು ಪಾಲನಂ ದಾನಾಸ್ವರ್ಗ್ಗ

25. ಗೇಯೋ.... ನಾಡು.... ಮಲ್ಲ॥

ಅಡಿಟಿಪ್ಪಣಿಗಳು

1. ಪಂಚಮುಖಿ ಆರ್.ಎಸ್ : ಪ್ರೊಗ್ರೆಸ್ ಆಫ್ ಕನ್ನಡ ರಿಸರ್ಚ್ ಇನ್ ಬಾಂಬೆ ಪ್ರೊವ್ಹಿಯನ್ಸಿ (1941–46) ಭಾಗ 2, ಪು. 6–7, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.
2. ಸಂಪತ್ ಎಂ.ಡಿ., "ಚಂದಾವರ ಇನಸ್ಕ್ರಿಪ್ಷನ್ ಆಫ್ ಕದಂಬ ಬೀರದೇವರಸ", ಜರ್ನಲ್ ಆಫ್ ದಿ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ಸಂಪುಟ 9 (ಧಾರವಾಡ), ಪು. 88–94.
3. ಎಪಿಗ್ರಾಫಿಯಾ ಇಂಡಿಕಾ ಸಂಪುಟ, ಸಂಪುಟ 7, ಪುಟ 157–163.
4. ನಮ್ಮ ಗಮನಕ್ಕೆ ಬಂದ ಅಪ್ರಕಟಿತ ಶಿಲಾಶಾಸನ ಷಾಯಿಯಿಂದ ಅಚ್ಚು ಮಾಡಿದ್ದು.
5. ಅಪ್ರಕಟಿತ ಇನ್ನೊಂದು ಹೊಸ ಶಾಸನ.

❑

ಸ್ವಾದಿ ಎಷ್ಟು ಪ್ರಾಚೀನ?

– ಡಾ. ಎಚ್.ಆರ್. ರಘುನಾಥ ಭಟ್

ಪ್ರಾಚೀನತೆ – ಮತ್ತೆ ಅದರಲ್ಲಿ ತರ, ತಮತೆ – ಅಂದರೆ ಅದಕ್ಕಿಂತ ಇದು 'ಹೆಚ್ಚು ಪ್ರಾಚೀನ' (more ancient) ಎಲ್ಲಕ್ಕಿಂತ ಇದು 'ಅತ್ಯಂತ' ಹೆಚ್ಚು ಪ್ರಾಚೀನ (most ancient) ಎಂಬ ಪರಿಕಲ್ಪನೆ ಅಥವಾ ಭಾವನೆಯ ಆವಾಹನೆ ನಮ್ಮ ಮತ್ತು ನಮ್ಮ ಸುತ್ತಮುತ್ತಣ ಸ್ಥಳದ ಮಹಾತ್ಮೆಯನ್ನು ಸಹಜವಾಗಿಯೇ ಹೆಚ್ಚಿಸುತ್ತದೆ.

ಸ್ವಾದಿ ಪ್ರದೇಶ ಪ್ರಾಚೀನತಮ ನೆಲೆಯಾಗಿದೆ. ಸುಮಾರು ಮೂವತ್ತೈದು ವರ್ಷಗಳ ನನ್ನ ಪರಿವೀಕ್ಷಣೆ, ಪ್ರದಕ್ಷಿಣೆಯ ಹಿನ್ನೆಲೆಯಲ್ಲಿ ನಮ್ಮ ಈಚಿನ ಭೂಪರಿವೀಕ್ಷಣೆ ಫಲಪ್ರದವಾಗಿದೆ. ಪ್ರಾಗ್ ಐತಿಹಾಸಿಕ ಅವಶೇಷಗಳು, ಶಾಸನ, ನಾಣ್ಯ ವಾಸ್ತು ಶಿಲ್ಪಕೃತಿಗಳು, ಜಾನಪದ ಪರಂಪರೆಗಳು ಪತ್ತೆಯಾಗಿವೆ. ಇವೆಲ್ಲವುಗಳನ್ನಾಧರಿಸಿ ಸ್ವಾದಿಯ ಪ್ರಾಚೀನತೆಯನ್ನು ನಿರ್ಧರಿಸುವುದು ಸಾಧ್ಯವಾಗುತ್ತಿದೆ. ಸೋಂದಾದ ಸುವರ್ಣ ಗರ್ಭದಲ್ಲಿ ಇನ್ನೂ ಅದೆಷ್ಟು ಸ್ವಾರಸ್ಯಕರ, ಕುತೂಹಲಕಾರಿ ಸಂಗತಿಗಳಿವೆ – ಎಂಬುದು ಮೇಲ್ನೋಟದ ತಿರುಗಾಟದಲ್ಲೆ ಗೊತ್ತಾಗುತ್ತದೆ. ಇಲ್ಲಿಯ ಗುಡ್ಡ–ಕಾಡು, ನದಿ–ಝುರಿ (ನಾಗಝುರಿ) ಗಿರಿಕಂದರಗಳಲ್ಲಿ ಸತತವಾಗಿ ಸುತ್ತಾಡಿದಾಗ ಹಲವು ಪ್ರಾಕ್ತನ ವಸ್ತು ವಿಚಾರಗಳನ್ನು ಪತ್ತೆ ಮಾಡಲಾಗಿದೆ.

ಸ್ಥಳನಾಮವಿಜ್ಞಾನದ ದೃಷ್ಟಿಯಿಂದ ಪರಾಮರ್ಶಿಸಿದಾಗ ಈ ಸ್ಥಳದ ಹೆಸರಲ್ಲಿ ವೈವಿಧ್ಯವಿದೆ. ಸ್ವಾದಿ, ಸೋದೆ, ಸೊದೆ, ಸುಧಾಪುರ (ಅಮೃತಪುರ), ಸೋಮದಾಪುರೀಪುರ, ಸೋಂದಾ (ಸೂಂದಾ), ಸೋಂದಾನಗರ, ಸೋಂದೆ, ಸೊಂದಾ, ಸೋಂದಾಪುರಿ ಹೊನ್ನೆಹಳ್ಳಿ, ಹೊನ್ನಳ್ಳಿ, ಸ್ವರ್ನದಲ್ಲಿ, ಸ್ವರ್ಣವಲ್ಲೀ ಎಂದು ಮುಂತಾಗಿ ಕರೆಯಿಸಿಕೊಳ್ಳುವ ಈ ಪ್ರದೇಶ ಪ್ರಾಚೀನ ಕಾಲದಿಂದಲೂ ಮಾನವನು ನೆಲೆಸಿದ್ದ ನೆಲವೀಡಾಗಿದೆ. ಇಲ್ಲಿಯ ಶಾಲ್ಮಲಾ ನದಿಗುಂಟ ನಡೆದು ಕೂಲಂಕಷವಾಗಿ ನೋಡಿದಾಗ, ಹಳೆಮಠವಿದ್ದ ನೆಲಗಟ್ಟಿನ ಬಳಿ ಹಳೆ ಸಹಸ್ರಲಿಂಗ ಎಂದು ಕರೆಸಿಕೊಂಡ ತಾಣದಲ್ಲಿ ಪ್ರಾಗ್‌ಐತಿಹಾಸಿಕ ಕುರುಹುಗಳು ದೊರೆತಿವೆ. (ಅಲ್ಲೊಂದು ಪುಟ್ಟ ಅಣೆಕಟ್ಟು ಯೋಜನೆಯನ್ನು ಸರ್ಕಾರ ಹೊಂದಿತ್ತು. ಹಿಂದಿನ ಹಿರಿಯ ಸ್ವಾಮೀಜಿ ಸರ್ವಜ್ಞೇಂದ್ರ ಸ್ವಾಮಿಗಳು ಅಂದಿನ ಮುಖ್ಯಮಂತ್ರಿಗಳಿಗೆ ಸೂಚನೆ ನೀಡಿ, ಈ ಕೆಲಸವನ್ನು ನಿಲ್ಲಿಸಿದ್ದರಿಂದ ಆ ನೆಲಜಲದೊಟ್ಟಿಗೆ ಸಂಸ್ಕೃತಿಯ ಕುರುಹುಗಳೂ ಉಳಿದವು. ಇಲ್ಲವಾದರೆ ಸಂಪೂರ್ಣ ಮತ್ತು ಶಾಶ್ವತ ಜಲಾವೃತ್ತವಾಗಿ ಬಿಡುತ್ತಿತ್ತು!) ಈಗಲೂ ಮಳೆಗಾಲವಿಡೀ ಜಲಾವೃತಗೊಳ್ಳುವ ಈ ಬಂಡೆಪ್ರದೇಶದ ಪ್ರಾಚೀನ ಕುರುಹುಗಳನ್ನು ನಡುಬೇಸಿಗೆಯಲ್ಲಿ ಮಾತ್ರ ನೋಡಬಹುದಾಗಿದೆ. ಶಾಲ್ಮಲಾ ನದಿಯಲ್ಲಿಳಿದು ಬಂಡೆಗಳ ಸಂದಿಗೊಂದಿಗಳಲ್ಲಿ ಹುಡುಕಾಡಿ, ಕೈಯಾಡಿಸಿ, ಮತ್ತೆ ಮತ್ತೆ ನೋಡಲಾಗಿ ಸಿಕ್ಕ ಕುರುಹುಗಳು ನಮ್ಮನ್ನು ಬೆರಗುಗೊಳಿಸಿದವು.

ಪ್ರಾಗ್ ಐತಿಹಾಸಿಕ ಬಂಡೆ ಚಿತ್ರಗಳು, ಬ್ರಾಹ್ಮಿ ಬರಹಗಳು, ಕನ್ನಡ ಶಾಸನ, ತಿಗಳಾರಿ ಬಂಡೆ ಶಾಸನ, ಶ್ರೀ ಚಕ್ರದ ಬಂಡೆಶಿಲ್ಪ, ಯೋಗಿಶಿಲ್ಪ, ನಂದಿ, ಶಿವಲಿಂಗ, ಪಾದ ಇತ್ಯಾದಿ ಹಲವು ಕಂಡರಣೆಗಳು ಬಂಡೆಯ ಮೇಲೆ ಕಂಡವು. ಅವುಗಳಲ್ಲಿ ಅತ್ಯಂತ ಪ್ರಾಚೀನವಾದ ಬಂಡೆ ಚಿತ್ರಗಳ ವಿವರಣೆಗೆ ಮಾತ್ರ ಈ ಸಂಪ್ರಬಂಧ ಸೀಮಿತವಾಗಿವೆ.

ಶಾಲ್ಮಲೆಯ ನಡುಬಂಡೆಯ ಮೇಲೆ ಕೆತ್ತಿರುವ / ಕೊರೆದಿರುವ ಈ ಪ್ರಾಗ್ ಐತಿಹಾಸಿಕ ಚಿತ್ರದ ವಸ್ತು ಪ್ರಧಾನವಾಗಿ ಗೂಳಿಯಾಗಿದೆ. ಇದನ್ನು ಬಂಡೆಯ ಪಾರ್ಶ್ವದಲ್ಲಿ ಕೆತ್ತಲಾಗಿದೆ. ನಾಲ್ಕು ಬಲಿಷ್ಠಗೂಳಿಗಳು ಸಾಲಾಗಿ ಹೊರಟಿವೆ. ಅವುಗಳ ಹಿಂದೆ ಮತ್ತೆ ನಾಲ್ಕು ಪುಟ್ಟಗೂಳಿಗಳೂ ಅನುಸರಿಸಿ ನಡೆದಿವೆ. ಇವುಗಳ ಹಿಂದೆ ಪ್ರಾಣಿಪಾದದಂತಿರುವ ಪಾದಗಳುಳ್ಳ ಮನುಷ್ಯ (ಗೋಪಾಲಕ?) ಪ್ರಾಯಶಃ ಭುಜದ ಮೇಲೆ ದೊಣ್ಣೆ ಅಡ್ಡಲಾಗಿಟ್ಟು ಅದನ್ನು ಎರಡೂ ಕೈಗಳಿಂದ ಹಿಡಿದು ನಿಂತಿರುವುದು, ಈ ಚಿತ್ರ ಸಂಯೋಜನೆಯ ಅತ್ಯಂತ ಕುತೂಹಲಕಾರಿ ಸಂಗತಿಯೆಂದರೆ ಗೂಳಿಗಳ ಪಾದಗಳಿಂದ ಹೊರಟ ವಿಚಿತ್ರ ಗಂಟುಗಳು ಮತ್ತು ಮಂಡಲಗಳು, ಜೋಡುಗೆರೆಗಳಿಂದ ರಚಿಸಿದ ಈ ಗಂಟುಗಳು ಅರ್ಥವಿವರಣೆಯ ದೃಷ್ಟಿಯಿಂದ ಇನ್ನೂ ಕಗ್ಗಂಟಾಗಿಯೇ ಉಳಿದಿವೆ. ಒಟ್ಟು ಎಂಟು ಗೂಳಿಗಳ ಪಾರ್ಶ್ವನೋಟ. ಅವುಗಳ ಕೆಳಗಣ ಗ್ರಂಥಿ, ಜೊತೆಗೆ ಹಿಂಗಡೆಯಲ್ಲಿ ನಿಂತ ಮನುಷ್ಯ ಅತ್ಯಂತ ಕುತೂಹಲಕಾರಿಯಾಗಿದೆ. ಕರ್ನಾಟಕದ ಇತರೆಡೆಗಳಲ್ಲಿ ಕಂಡು ಬಂದ ಗೂಳಿ ಚಿತ್ರಗಳೊಟ್ಟಿಗೆ ಹೋಲಿಸಿ ನೋಡಬಹುದು. ಇವು ಕುಳ್ಳೊಳ್ಳಿ (ಜಮಖಂಡಿ, ಬಿಜಾಪುರ ಜಿಲ್ಲೆ), ಗಾವಳಿ (ಕುಂದಾಪುರ, ದ.ಕ.) ಕೆತ್ತನೆಗಳಂತಿವೆ. ಹಿರೇಬೆನಕಲ್, ಚಿಕ್ಕರಾಮಪುರ (ಗಂಗಾವತಿ ತಾ. ರಾಯಚೂರು ಜಿಲ್ಲೆ)ಗಳಲ್ಲಿರುವ ವರ್ಣಚಿತ್ರಗಳಂತಿವೆ. ಆದರೆ ಗೂಳಿಗಳ ಕಾಲುಗಳಿಂದ ಹೊರಟ ಗಂಟುಗಲು ಮಾತ್ರ ವೈಶಿಷ್ಟ್ಯಪೂರ್ಣವಾಗಿದೆ. ಗೂಳಿಯ ಬದಿಯ ಮಂಡಲದ ಚಿತ್ರವು ಗಾವಳಿಯ ಚಿತ್ರಕ್ಕೆ ಹೊಂದಿಕೊಂಡ ಮಂಡಲದಂತಿದೆ. ಹೀಗೆ ಶೈಲಿ ಮತ್ತು ತೌಲನಿಕ ಅಧ್ಯಯನಗಳನ್ನಾಧರಿಸಿ ಇವು ನವಶಿಲಾಯುಗ ಬೃಹತ್‌ಶಿಲಾಯುಗ ಕಾಲವಲಯದಲ್ಲಿರುವ ಚಿತ್ರಗಳೆಂದು ಹೇಳಬಹುದು. ಹರಪ್ಪಾಗೊಳಿಗಳಂತೆ ಕಂಸ ಅಥವಾ ಕವಲೊಡೆದ ಬಾಗು ಕೊಂಬು, ನೀಳವಾದ ಮತ್ತು ಸಪೂರಾದ ಮುಂಡಭಾಗ, ಉದ್ದಬಾಲ, ರೇಖಾಕೃತಿಯಲ್ಲಿ ತೋರಿಸಿದ ಮರ್ಮಾಂಗ ಸಣ್ಣ ಡುಬ್ಬ – ಎಲ್ಲವೂ ಸರಳ ಸುಂದರವಾಗಿವೆ. ಕಾಲುಬುಡಭಾಗದಿಂದ ಜೋಡುಗೆರೆಗಳಲ್ಲಿ ಹೊರಟ ಗಂಟಿನ ಅರ್ಥವಿವರಣೆ ಏನು? ದನಗಳು ಕೂಡಿಕೊಂಡು ಓಡಿಹೋಗಿ ತಪ್ಪಿಸಿಕೊಂಡು ಹೋಗಬಾರದೆಂದು ಮುಂದು–ಹಿಂದಿನ ಒಂದೊಂದು ಕಾಲಿಗೆ ಹಗ್ಗದ ಗಂಟು ಹಾಕುವುದುಂಟು; ಕುತ್ತಿಗೆಗೆ ಕುಂಟೆಕಟ್ಟುವುದೇ ಹೆಚ್ಚು. ಇದನ್ನೇನಾದರೂ ಈ ಗಂಟು ಸೂಚಿಸುವುದೆ? ಅಥವಾ ಹರಪ್ಪಾ/ಬ್ರಾಹ್ಮಿ 'ಮ' ಅಕ್ಷರದಂತಿರುವ ಸಂಕೇತವೆ? ಗೂಳಿಗಳ ಮುಂಬದಿಯಲ್ಲಿರುವ 'ಮಂಡಲ'ದಂತಿರುವ ಚಿತ್ರದ ಹಿನ್ನೆಲೆಯಲ್ಲಿ ಇವು ಯಾವುದೋ ಮಾಂತ್ರಿಕ–ಧಾರ್ಮಿಕ (ಟಚಿರುಥಿಲ–ಡಿಜಟುರುಂಣ) ಪ್ರತೀಕವಾಗಿರುವಂತೆ ಭಾಸವಾಗುತ್ತದೆ.

ಉಳಿಯಂತಹ ಚೂಪಾದ ಉಪಕರಣದಿಂದ ಕಂಡರಿಸಿದ ಈ ಚಿತ್ರಗಳು ಜಾನಪದ ಶೈಲಿಯಲ್ಲಿವೆ. ಪ್ರಮಾಣ ಬದ್ಧತೆ ತಕ್ಕಮಟ್ಟಿಗೆ ಇದೆಯೆನ್ನಬಹುದು. ಆಕೃತಿ ಆದಷ್ಟೂ ಅಂದವಾಗಿರಬೇಕೆಂದು ಪ್ರಯತ್ನಿಸಲಾಗಿದೆ. ಜೊತೆಗೆ ಯಾವುದೋ ನಿಗೂಢ (ಸದ್ಯಕ್ಕೆ) ಧಾರ್ಮಿಕ–ಮಾಂತ್ರಿಕ ಅರ್ಥ ತುಂಬಿರುವಂತಿದೆ. ಕೃಷಿ ಆಧಾರಿತ ಜನಜೀವನವನ್ನು ಇವು ಪ್ರತಿನಿಧೀಕರಿಸುತ್ತವೆ. ಸ್ವಾಧಿಯ ಪ್ರಾಚೀನತಮ ಜನಜೀವನದ ಒಂದು ಆಯಾಮವನ್ನು ಇದು ತೆರೆದು ತೋರಿಸುವಂತಿದೆ.

ಸ್ವಾದಿಯ ಶಾಲ್ಮಲೆಯ ನಡುವಿನ ಇನ್ನೊಂದು ಬಂಡೆಯ ಮೇಲೆ ಇನ್ನೊಂದು ಪುಟ್ಟಗೂಳಿ ಮತ್ತು ಮನುಷ್ಯನ ಚಿತ್ರ ಭಿನ್ನ ಶೈಲಿಯಲ್ಲಿದೆ. ರೇಖಾಕೃತಿ ಅತ್ಯಂತ ಸರಳ ಮತ್ತು ಜ್ಯಾಮಿತಿ ರೇಖಾ ವಿನ್ಯಾಸವನ್ನನುಸರಿಸಿದೆ. ಇದರ ಪಕ್ಕದಲ್ಲಿ ತ್ರಿಕೋಣ – ತುಸು ಪೇಟಿಕಾಶಿರೋಮಾತ್ರವುಳ್ಳ ಬ್ರಾಹ್ಮೀ ಬರಹವಿದೆ. ಕಾಲಮಾನದ ದೃಷ್ಟಿಯಿಂದ ಇದನ್ನು ಬೃಹತ್ ಶಿಲಾಯುಗೋತ್ತರ ಕಾಲದ್ದೆಂದು ಊಹಿಸಬಹುದೇನೊ. ಈ ಪ್ರದೇಶದಲ್ಲಿ ಸಿಕ್ಕ ಕೆಂಪು–ಕಪ್ಪು ಮಡಕೆ ಚೂರುಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಇವೆಲ್ಲವುಗಳನ್ನಾಧರಿಸಿ ಸ್ವಾದಿಯ ಪ್ರಾಚೀನತೆಯನ್ನು ಸದ್ಯಕ್ಕೆ ಪ್ರಾಗ್ಐತಿಹಾಸಿಕ ಕಾಲಕ್ಕೆ (ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದಕ್ಕೆ) ಕೊಂಡೊಯ್ಯಬಹುದು, ಅಲ್ಲಿಯ ನೆಲ ಜಲ ಪಾಶಾಣ ಸಸ್ಯ ಪ್ರಾಣಿ ಸಂಪತ್ತು ಮಾನವನು ನೆಲೆನಿಲ್ಲಲು ಅನುಕೂಲ ಮಾಡಿರಬೇಕು. ಅಲ್ಲಿಂದ ಆರಂಭವಾದ ಜನಜೀವನ ಶಾಲ್ಮಲೆಯಂತೆ ಸತತ ಮುನ್ನಡೆದುಕೊಂಡು ಬಂದಿದೆ. ಭೂ ವಿಜ್ಞಾನಿಗೆ ಗಿಡಗಂಟೆ ಪರಿಸರವು, ಸಮಾಜ ವಿಜ್ಞಾನಿಗೆ ಇಲ್ಲಿಯ ಇತಿಹಾಸ, ಚತುಸ್ಸಮಯ – (ಸ್ಮಾರ್ತಶೈವ, ವೀರಶೈವ, ವೈಷ್ಣವ, ಜೈನ) – ಅದರ ಜೊತೆಗೆ ಗ್ರಾಮೀಣ ಜಾನಪದ ದೈವ, ಇಸ್ಲಾಂ, ಕ್ರೈಸ್ತ ಮತಗಳು, ಸಾಹಿತಿ ಕಲಾವಿದರಿಗೆ ತಾಳಮದ್ದಲೆ, ಯಕ್ಷಗಾನ, ಭಟ್ಟಾಕಳಂಕ, ವಾದಿರಾಜ – ಹೀಗೆ ಯಾವ, ಯಾರ

ದೃಷ್ಟಿಕೋನದಿಂದ ಅಳೆದರೂ ಬೆರಗುಂಟು ಮಾಡುವ ಬೆಡಗಿನ ತಾಣ 'ಸ್ವಾದಿ' ಆಗಿದ್ದು ಸಂಶೋಧಕರನ್ನು ಕೈಬೀಸಿ ಕರೆಯುತ್ತಿದೆ.

(ಸ್ವಾದಿಯ ಸಮಗ್ರ ಅಧ್ಯಯನಕ್ಕೆ ಪ್ರೇರಣೆ, ಪ್ರೋತ್ಸಾಹ, ಆಶೀರ್ವಾದ, ನೀಡುತ್ತ ಬಂದಿರುವ ಪೂಜ್ಯ ಶ್ರೀಮತ್ ಗಂಗಾಧರೇಂದ್ರ ಸರಸ್ವತೀ ಸ್ವಾಮಿಗಳಿಗೆ ಮತ್ತು ಪ್ರಾಂಶುಪಾಲ ಶ್ರೀ ಬಾಲಚಂದ್ರ ಶಾಸ್ತ್ರಿಗಳಿಗೆ, ಪಾಠಶಾಲಾ ವಿದ್ಯಾರ್ಥಿಗಳಿಗೆ, ಪಾರುಪತ್ಯಗಾರ ರಾಯರ ಮತ್ತಿತರ ಪರಿಚಾರಕರಿಗೆ ಮತ್ತು ಶ್ರೀ ಮಠದ ಆಡಳಿತ ಮಂಡಳಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.)

ಆಯ್ದ ಆಕರ ಗ್ರಂಥಗಳು

ಸ್ವರ್ಗವಲ್ಲಿ ಬೃಹದ್ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿ ವಿರಚಿತ ಜ್ಞಾನದೀಪಿಕಾ, ಸ್ವಾದಿ (19ನೆಯ ಶತಮಾನ?), ಮಾಳವಾಡ ಸ.ಸ., ಸ್ವಾದಿ ಅರಸು ಮನೆತನ, ಧಾರವಾಡ, 1967.

ಕರ್ನಾಟಕ ಸ್ಟೇಟ್ ಗೆಝೆಟಿಯರ್, ಉತ್ತರಕನ್ನಡ ಡಿಸ್ಟ್ರಿಕ್ಟ್, (ಸಂ.) ಸೂರ್ಯನಾಥ ಯು. ಕಾಮತ್, ಬೆಂಗಳೂರು, 1905.

ಗೋಪಾಲಕೃಷ್ಣ ಹೆಗಡೆ, ಕೇರಿಮನೆ, ಸ್ವಾದಿ, ಬೆಂಗಳೂರು, 1978, ಶ್ರೀ ಸ್ವರ್ಣವಲ್ಲೀ ಪ್ರಕಾಶ, ಸ್ವಾದಿ, 1991

ಸ್ವಾದಿ ಅರಸು ಮನೆತನ : (ಸಂ.) ಕಲಬುರ್ಗಿ ಎಂ.ಎಂ., ಸುಂದರ ಅ., ಗದಗ, 1995

ಸುಂದರ, ಅ., ಕರ್ನಾಟಕದ ಪ್ರಾಗೈತಿಹಾಸ ಕಾಲದ ಕಲೆ, ಬೆಂಗಳೂರು, 1994

ಹೆಗಡೆ, ಪ್ರಮೋದ, ಸೋಂದಾ : ಎ ಕಲ್ಚರಲ್ ಸ್ಟಡಿ (ಎಂ.ಫಿಲ್ ಪ್ರಬಂಧ, ಅಪ್ರಕಟಿತ), ಧಾರವಾಡ, 1989

ವಾಲಿ, ಸೋಂದಾ ಸಾಂಸ್ಕೃತಿಕ – ಸಾಹಿತ್ಯಿಕ ಅಧ್ಯಯನ, (ಪಿಎಚ್.ಡಿ. ಪ್ರಬಂಧ), ಧಾರವಾಡ, 1991

ಶಾಸ್ತ್ರಿ ಎ.ಕೆ., ಸ್ವರ್ಣದಲ್ಲಿ ಮಹಾ ಸಂಸ್ಥಾನ (ಚರಿತ್ರೆ), ಸ್ವಾದಿ, 1997

ರಘುನಾಥ ಭಟ್ ಎಚ್.ಆರ್., ಸ್ವಾದಿ ಶಾಸನಗಳು, ಸ್ವಾದಿ, 1998

ಶರ್ಮಾ, ತದ್ದಲಸೆ ವಿಘ್ನೇಶ್ವರ, ಶ್ರೀ ಸ್ವರ್ಣದಲ್ಲೀ ದರ್ಶನ, ಸ್ವಾದಿ, 1961

❑

ಉಳವಿಯ ಕಡೆ ಬಾಗಿಲು : ಚಿಂತನ

– ಡಾ. ಚೆನ್ನಕ್ಕ ಪಾವಟೆ

'ಉಳವಿಯ ಕಡೆಯ ಬಾಗಿಲು', 'ಉಳವಿಯ ಕಡೆ ಬಾಗಿಲು' ಎಂಬ ಪದವೇ ಸಂಶೋಧಕರ ಕುತೂಹಲ ಕೆರಳಿಸುವಂತಿದೆ. ಉಳವಿ, ಉತ್ತರ ಕನ್ನಡ ಜಿಲ್ಲೆಯ ಅಂದಿನ ಕ್ಯಾಸನೂರ ಅರಣ್ಯಸೀಮೆಗೆ ಸೇರಿದ ಪ್ರದೇಶ ವೀರಶೈವರ ಪ್ರಾಚೀನ ಶರಣಕ್ಷೇತ್ರ ಹನ್ನೆರಡನೆಯ ಶತಮಾನದ ಚನ್ನಬಸವಾದಿ ಶಿವಶರಣರು ನೆಲೆನಿಂತ ಪುಣ್ಯಭೂಮಿ. ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿಯ ಆರು ಪ್ರಸಿದ್ಧ ವೀರಶೈವ ಕೇಂದ್ರಗಲೆನಿಸಿದ ಶ್ರೀಶೈಲ, ಹಂಪೆ, ಲಕ್ಷ್ಮೇಶ್ವರ, ಗುಮ್ಮಳಾಪುರ, ಕಲ್ಯಾಣ ಹಾಗೂ ಉಳವಿಗಳು ಪ್ರಮುಖವೆನಿಸಿವೆ.

ಅಂದು, ಶಿವಶರಣರು ಕಲ್ಯಾಣದಿಂದ ಅತ್ಯಂತ ಪ್ರಯಾಸಕರ ದುರ್ಗಮ ಅರಣ್ಯ ಪ್ರದೇಶಗಳಲ್ಲಿ ಹಾಯ್ದು, ನೋವು ನಲಿವನ್ನು ಅನುಭವಿಸಿ ಉಳವಿ ಕ್ಷೇತ್ರಕ್ಕೆ ಬಂದು ನೆಲೆನಿಂತರು. ಅಂದಿನ ಗಂಭೀರ ಇತಿಹಾಸವನ್ನು ಶಾಸನಗಳು ಹೇಳಿದರೂ, ಅಧಿಕೃತವಾಗಿ ಉಳವಿ ಇತಿಹಾಸವನ್ನೊಳಗೊಂಡವು ಎರಡು ಕೃತಿಗಳು. 1. ಸೋದೆಯ ಸದಾಶಿವರಾಯನ ಉಳುವೆಯ ಮಹಾತ್ಮ ಒಂದಾದರೆ, 2. ಉಳವಿ ಚನ್ನಬಸವೇಶ್ವರ ವಾರ್ಥಕವೆಂಬುದು ಅಜ್ಞಾತ ಕವಿಕೃತಿ. ಉಳವಿಯ ಪ್ರಾಚೀನ ಇತಿಹಾಸ ವಿವರಿಸುವಲ್ಲಿ ಎರಡು ಕೃತಿಗಳು ತುಂಬ ಮಹತ್ವದ ಆಕರಗಳೆನಿಸಿವೆ. 'ಉಳುವೆ ಮಹಾತ್ಮೆ' ಕೃತಿ ಇಂದಿನವರೆಗೆ ಶಿವಶರಣರ ಅಜ್ಞಾತವಾಗಿದ್ದ ಪೂರ್ವಾರ್ಧದ ದಂಡಿನದಾರಿ ತಿಳಿಸಿದರೆ, ಉತ್ತರಾರ್ಧದ ದಾರಿಯನ್ನು ವೀರಶೈವ ಉಳಿದ ಕೃತಿಗಳಿಗಿಂತ ಭಿನ್ನವಾಗಿ ಹೇಳಿದ ಸದಾಶಿವರಾಯನ ಸಂಶೋಧಕ ದೃಷ್ಟಿಯನ್ನು ಪ್ರತಿಬಿಂಬಿಸುವಂತಿದೆ.

ಇಲ್ಲಿಯವರೆಗೆ ಶರಣರ ದಂಡಿನದಾರಿಯ ಸೂಕ್ಷ್ಮ ವಿವೇಚನೆ ಕೈಕೊಂಡ ಕೃತಿಗಳಲ್ಲಿ ಕಾಲಜ್ಞಾನ, ತುರುಗಾಹಿ ರಾಮಣ್ಣ, ರೇಚಣ್ಣನ ವಚನಗಳು, ವಿರೂಪಾಕ್ಷನ ಚೆನ್ನಬಸವ ಪುರಾಣ, ಕಲ್ಲುಮಠದ ಪ್ರಭುದೇವರ ಲಿಂಗಲೀಲಾವಿಲಾಸ ಚಾರಿತ್ರ್ಯ, ಶರಣಲೀಲಾಮೃತಗಳಿಗೆ ಭಿನ್ನವಾಗಿ ಸೋದೆ ಸದಾಶಿವರಾಯನ 'ಉಳುಮೆ ಮಹಾತ್ಮೆ' ಸಂಶೋಧನಾತ್ಮಕ ವಿವೇಚನಾ ಕೃತಿಯೆನಿಸಿದೆ. ಅದರಲ್ಲಿ ಕಲ್ಯಾಣ ಕ್ರಾಂತಿಯ ತರುವಾಯ ಶರಣರ ದಂಡು ಚೆನ್ನಬಸವಣ್ಣನವರ ನೇತೃತ್ವದಲ್ಲಿ ಕಲ್ಯಾಣದಿಂದ ಪರವತಾಬಾದ (ಗುಲಬರ್ಗ ತಾಲೂಕು) ಪೇರಜಾಬಾದ (ಫಿರೋಜಾಬಾದ, ಗುಲಬರ್ಗ ತಾಲೂಕು) ಕೊಳಕೂರು (ಜೇವರಗಿ ತಾಲ್ಲೂಕು) ಬಡದಳ ಸತ್ತೀಗೆರೆ (ಸವದತ್ತಿ ತಾಲ್ಲೂಕು) ಮುರಗೋಡ (ಸವದತ್ತಿ ತಾಲ್ಲೂಕು) ಹುಬ್ಬಳ್ಳಿ, ಬಂಕಾಪುರ, ಹಾನಗಲ್ಲು ಮಳಿಗೆ (ಮಳಗಿ, ಮುಂಡಗೋಡ ತಾಲ್ಲೂಕು), ಜಾಂಗಲಕ್ಷೇತ್ರ (ಜಗಳಬೆಟ್ಟ, ಸೂಪಾ ತಾಲ್ಲೂಕು)ಕ್ಕೆ ಬಂದು, ಅಲ್ಲಿಯ ರಾಮೇಶ್ವರ ದರ್ಶನ ಪಡೆದು ಘಟ್ಟವನ್ನಿಳಿದು ಸೋದೆಯಪುರ (ಸಿರ್ಸಿ ತಾಲೂಕು)ವನ್ನು ಪ್ರವೇಶಿಸುತ್ತದೆ. ಸೋದೆಯಲ್ಲಿ ಸೋಮೇಶಲಿಂಗ, ಪಂಚಬ್ರಹ್ಮೇಶ್ವರ ಲಿಂಗ ಹಾಗೂ ಪಂಚಮಠಗಳನ್ನು ಸಂದರ್ಶಿಸಿದ ಶರಣರ ದಂಡು ಉಳುವೆಯ ಪುಣ್ಯಕ್ಷೇತ್ರದ ಕಡೆಗೆ ಪಯಣಿಸಿದೆ. ಮಾರ್ಗಮಧ್ಯದಲ್ಲಿ ತುಂಬೆಯ ಬೀಡಿನ (ಯಲ್ಲಾಪುರ ತಾಲ್ಲೂಕು) ಲಂಬೋದರ, ಹನುಮ, ಸದಾಶಿವಲಿಂಗವನ್ನು ಭಕ್ತಿಯಿಂದ ಕಂಡು ಬೇನಕನಘಟ್ಟ (ಯಲ್ಲಾಪುರ ತಾಲ್ಲೂಕು) ಅಂಜನಾನದಿ (ಕರಿಹೊಳೆ–ಕಾಳಿನದಿ) ಬಿಲ್ವವನಗಳನ್ನು ದಾಟಿ ಯಲ್ಲಾಪುರಕ್ಕೆ ಆಜಮಿಸಿದೆ. ಅಲ್ಲಿಯ ಕರಿಹೊಳೆ ಮಠದ ಜಂಗಮತತಿಗಳನ್ನು

ಕಂಡು ಜರಿಪರ್ವತದ ಮೂಲಕ ಬಿದುರೆಪುರ (ಬಿದರಳ್ಳಿ, ಯಲ್ಲಾಪುರ ತಾಲ್ಲೂಕು)ಕ್ಕೆ ಬರುತ್ತಾರೆ. ಆಮೇಲೆ ಹೆಬ್ಬಳಪಳ್ಳಿಯ (ಹೆಬ್ಬಳ, ಸಿರ್ಸಿ ತಾಲ್ಲೂಕು), ಹತ್ತಿರವಿರುವ ಪರ್ವತ, ಪಂಚಲಿಂಗವಿರುವ ಗುಹೆಯಲ್ಲಿಗೆ ನಡೆದು ಬರುತ್ತಾರೆ. ಅಲ್ಲಿಂದ ಉಳುವೆಯ ಕಡೆಗೆ ಮುನ್ನಡೆಯುತ್ತಾರೆ" ಎಂದು ಸದಾಶಿವರಾಯ ಉಳುವೆ ಮಹಾತ್ಮೆಯಲ್ಲಿ ಅಷ್ಟೇ ಸ್ಪಷ್ಟವಾಗಿ, ಸಂಶೋದಿತವಾಗಿ ತಿಳಿಸಿರುವನು.

'ಉಳವಿ ಚೆನ್ನಬಸವೇಶ್ವರ ವಾರ್ಧಕ' ಕನ್ನಡ ಸಂಶೋಧನೆ ಸಂಸ್ಥೆಯ ಅಪ್ರಕಟಿತ ಹಸ್ತಪ್ರತಿ. ಇತ್ತೀಚೆಗೆ 'ಶರಣ ಕ್ಷೇತ್ರ ಉಳವಿ' ಕೃತಿಯಲ್ಲಿ ಪ್ರಕಟಿತಗೊಂಡಿದೆ. ಚನ್ನಬಸವಣ್ಣನೊಂದಿಗೆ ಬಂದಂಥ ಶಿವಶರಣರು ಸೋದೆಯ ಅನಂತರ ಸೂಪಾ ಹತ್ತಿರದ 'ಜಗಳ್ ಪೇಟ್' ಇಂದಿನ ಜಗಳಬೆಟ್ಟದ ಮೂಲಕಹಾಯ್ದು ಮುಂದುವರೆದರೆಂದು ತಿಳಿಸುವ ಕೃತಿ. "ಸುಧಾಪುರದರಸು ಮಾಳ್ಪ ಬಂಧುರ ಬಸವೇಶ್ವರನುತ್ಸವ"ವೆಂಬ ಮಾತು ಸದಾಶಿವರಾಯನ ಸಮಕಾಲೀನದಲ್ಲಿಯೆ ರಚಿತವಾದ ಈ ಕೃತಿಯ ಮಹತ್ವ ತಿಳಿಸುವಂತಿದೆ.

ಕಾಶಿಗಿಂದಧಿಕಮೆನಿಸುವ ಫಲಗಳಿಂ
ಲೇಸಿನಿಂ ಕೇತಾರಕಿಂದಧಿಕಮೆನಿಸು
ವಂಸುರಂತಪ ವಿರಹಿತತ್ವದಿಂ ಶ್ರೀಶೈಲದಧಿಕಮೆನಿಸಿ ಮೆರೆಗುಂ
ಕ್ಲೇಶಬಡಿಸುವ ಕಂಬಿಭಾರ ವಿರಹಿತದಿ ರಾ
ಮೇಶಕಿಂದಧಿಕಮೆಂದೆನಿಸಿ ರಾಜಿಪುದು ಭವ
ಪಾಶಮೋಚನ ಚೆನ್ನಬಸವನ ನಿವಾಸದಿಂದುಳುವಿಗೆಣೆಗಾಣೆ ನಿಳೆಯೊಳ್ ॥

ಎಂಬ ಪದ್ಯ ಕಾಶಿ ಕೇದಾರ ಶ್ರೀಸೈಲ, ರಾಮೇಶಕ್ಕಿಂತ, ಉಳವಿಕ್ಷೇತ್ರ, ಅಧಿಕವಾಗಿದ್ದುದನ್ನು ತುಂಬ ಅರ್ಥವತ್ತಾಗಿ ಸೂಚಿಸಿದೆ.

ಸೋದೆಯಿಂದ ಉಳವಿಗೆ ಹೊರಟು ಶರಣರು ಮಾರ್ಗ ಮಧ್ಯದಲ್ಲಿ ದಟ್ಟ ಕಾಡನ್ನು ದಾಟಿ ಮುಂದೆ ಪ್ರಯಾಣಿಸಿದ್ದರೆನ್ನಬೇಕು. ಅಲ್ಲಿ ಉದ್ದಕ್ಕೂ ನಂದಿಕಂಬಗಳು ಅಥವಾ ಕೂಗು ಬಸವನ ಕಂಬಗಳು ಲಭಿಸುತ್ತವೆ. ಈ ವಿಷಯಕವಾಗಿ ಡಾ. ಬಿ.ಎಸ್. ಗದ್ದಗಿಮಠ ಅವರು "ನಂದಿಕಂಬಗಳು ವೀರಶೈವ ಸ್ಮಾರಕಗಳಾಗಿವೆ. ತೊರಗಲ್ಲಿನಿಂದ ಉಳವಿಯ ಬಾಗಿಲವರೆಗೆ ಈ ಭಾಗದಲ್ಲಿ ಸುತ್ತುಮುತ್ತಲಿನ ಕಂಬಗಳಿಗೆ ಹೇಳುವ 'ಕೂಗು ಬಸವನಕಲ್ಲು' ನಾಮಾಂಕಿತಗಳಿವೆ. ಕೆಲವು ಕಂಬಗಳಲ್ಲಿ ಶಿವಶರಣರು ಸಿದ್ಧರಾಮನ ವಚನಾಂಕಿತವುಳ್ಳ ಶಾಸನಗಳನ್ನು ಕೆತ್ತಲಾಗಿದೆ. ಶಿವಶರಣರು ಉಳಿವಿಗೆ ಹೋಗುವಾಗ ಈ ಕಂಬಗಳಿರುವ ಸ್ಥಳಗಳಲ್ಲಿ ವಿಶ್ರಾಂತಿ ಪಡೆದು ಹೋಗಿರುವರೆಂಬ ಐತಿಹ್ಯ ಇಂದಿಗೂ ಜನಮನದಲ್ಲಿ ನೆಲೆನಿಂತಿದೆ. ಯಲ್ಲಾಪುರದ ಹತ್ತಿರವಿರುವಕೋ ಬಸಪ್ಪ ಎಂಬ ಸ್ಥಳದ ಹೆಸರೂ ಇದನ್ನೇ ಸೂಚಿಸುವಂತಿದೆ" ಎಂದಿರುವರು.

ಈಗ ನಾವು ಗಮನಿಸುವದು ಚನ್ನಬಸವಾದಿ ಶಿವಶರಣರ ಸ್ಮಾರಕಗಳಲ್ಲಿ ಒಂದಾದ 'ಉಳವಿಯ ಕಡೆ ಬಾಗಿಲು' ಎಂಬ ಮೂರು ಕಲಾತ್ಮಕ ಚೌಕಟ್ಟುಗಳ ವಿಚಾರ. ಶರಣರ ದಂಡು ಪ್ರಯಾಣಗೈಯುತ್ತ ಮುರುಗೋಡಿನವರೆಗೆ ನಡೆದು ಬಂದಿದ್ದಿತಷ್ಟೇ. ಮುರುಗೋಡದ ಪ್ರಕೃತಿದತ್ತವಾದ ರಹಸ್ಯ ಗವಿ ಕೆಲಕಾಲವಾದರೂ ಶಿವಶರಣರಿಗೆ ವಚನ ಸಾಹಿತ್ಯ ರಕ್ಷಣೆ ಕೈಕೊಳ್ಳಲು ಗುಪ್ತ ಸ್ಥಳವೆನಿಸಿರಲಿಕ್ಕೂ ಸಾಕು. ಏಕಕಾಲದಲ್ಲಿ ಸಾವಿರಾರು ಶಿವಶರಣರು ಕುಳಿತು ಧ್ಯಾನ ಕೈಕೊಳ್ಳಲು ಅನುಕೂಲವಾಗುವಷ್ಟು ವಿಶಾಲವಾದ ಅಷ್ಟೇ ರಹಸ್ಯವಾದ ಗುಹೆ. ನೆಲಸಮವಾದ ಬಯಲು ಜಾಗದಲ್ಲಿ ಇಲ್ಲಿ ಗುಹೆಯಿದೆ ಎಂಬುದೂ ಅಷ್ಟೇ ರಹಸ್ಯವಾಗಿರುವಂಥದು.

ಶಿವಶರಣರು ಮುರುಗೋಡಿನ ಈ ರಹಸ್ಯ ಗುಹೆಯಲ್ಲಿ ತಂಗಿರುವಾಗ ಗೋವೆ ಕದಂಬ ದೊರೆಗಳ ನೆರವಿನಿಂದ ಉಳುವಿ ಕ್ಷೇತ್ರದ ಪುಣ್ಯಭೂಮಿಯನ್ನು ತಮ್ಮ ಅಂತಿಮ ನೆಲೆಯನ್ನಾಗಿ ತೆಗೆದುಕೊಳ್ಳಲು ನಿರ್ಧರಿಸಿದಂತಿದೆ. ಅದರ ಸ್ಮರಣೆಗಾಗಿ ಈ ಪರಿಸರದಲ್ಲಿರುವ ಉಳವಿಯ ಕಡೆ ಬಾಗಿಲು ಎಂದು ಕರೆಸಿಕೊಳ್ಳುವ ಕಲ್ಲಿನ ಚೌಕಟ್ಟುಗಳು ಜನದ ಭಕ್ತಿಶ್ರದ್ಧೆಗಳನ್ನು ಸಂಪಾದಿಸಿಕೊಂಡಿವೆ. ಮುರುಗೋಡಿನ ಹೊರವಲಯದಲ್ಲಿ ಒಂದು, ನೆರೆಯ ಕಾರಿಮನೆಯ ಹೊಲದ ಆವರಣದಲ್ಲಿ ಒಂದು, ಅಲ್ಲಿಯೆ ಸಮೀಪದಲ್ಲಿದ್ದ ಮೈಲಾರ ಲಿಂಗನ ದೇವಸ್ಥಾನದ ಹೊರೊತ್ತಿನಲ್ಲಿ ಒಂದು – ಹೀಗೆ ಆ

ಪರಿಸರದಲ್ಲಿರುವ ಮೂರು ಚೌಕಟ್ಟುಗಳು ಐತಿಹಾಸಿಕ ಪಳಿಯುಳಿಕೆಗಳೆಂಬ ಗೌರವಕ್ಕೆ ಸಾಕ್ಷಿಯಾಗಿವೆ. ಅವುಗಳ ಮೇಲೆ ಯಾವುದೇ ಬರಹಗಳಿಲ್ಲ.

ಚೌಕಾಕಾರದ ಕಟ್ಟೆಯ ಮೇಲೆ ಅದರ ದುಪ್ಪಟ್ಟು ಎತ್ತರದಲ್ಲಿ ಕಟ್ಟಿದ ಚೌಕಾಕಾರದ ಕಟ್ಟೆ, ಅದರ ಮೇಲೆ ಷಟ್‌ಕೋನಾಕೃತಿಯ ಕಲಾತ್ಮಕ ವಿನ್ಯಾಸಗಳಿಂದೊಡಗೂಡಿದ ಎರಡು ಸ್ತಂಭಗಳು, ಅವುಗಳ ಮೇಲೆ ಎರಡು ವೃತ್ತಾಕಾರದ ಗುಮ್ಮಟಗಳು, ಅದರ ಮೇಲೆ ಎರಡು ವಿನ್ಯಾಸಗಳಿಂದ ಕೂಡಿದ ಬೋದುಗೆಗಳು, ಆ ಎರಡು ವಿನ್ಯಾಸಗಳಿಂದ ಕೂಡಿದ ಬೋದುಗೆಗಳು, ಆ ಎರಡು ಬೋದುಗೆಗಳನ್ನು ಒಂದುಗೂಡಿಸಿರುವ ಒಂದು ತೊಲೆ, ಮೂರು ಚೌಕಟ್ಟುಗಳು ಒಂದೇ ರೀತಿಯ ಕಲಾತ್ಮಕ ವಿನ್ಯಾಸ ಹೊಂದಿವೆ. ಅಷ್ಟೇ ಆಕರ್ಷಕವಾಗಿವೆ. ಮೂರನೆಯ ಚೌಕಟ್ಟಿನ ತದಿಯ ಮೇಲೆ 3 ದಳದ ಪತ್ತಿಯ ಸಂಕೇತವಾಗಿ ಶಿವಶರಣರು ಉಳವಿಗೆ ಹೋಗುವಾಗ ನೆಲೆನಿಂತ ಸ್ಥಳಗಳಲ್ಲಿ ನಿಲ್ಲಿಸಿದ ಚೌಕಟ್ಟುಗಳು ಎಂದು ಜನವಂತಿ, ಐತಿಹ್ಯಗಳು ಹೇಳುತ್ತವೆ. ಇವನ್ನು ಶರಣರ ಇತಿಹಾಸದ ಹಿನ್ನೆಲೆಯಲ್ಲಿ ನಾವು ಗಮನಿಸಿದರೆ ಮುಂದೆ ಬರುವ ಪ್ರಯಾಣಿಕರಿಗೆ ಶರಣರ ದಂಡಿನ ದಾರಿಯ ಸೂಚಕವಾಗಿ ಈ ಚೌಕಟ್ಟುಗಳನ್ನು ಕಾಲಾಂತರದ ಶರಣಾಧಿಮಾನಿಗಳು ನಿಲ್ಲಿಸಿರಬೇಕೆನಿಸುತ್ತದೆ.

ಶರಣರು ನಡೆದ ಮಾರ್ಗವನ್ನು ಅರಿಸಿಕೊಂಡು ಬರುವವರಿಗೆ ಮಾರ್ಗದ ಗುರುತಿನ ಸಂಕೇತಗಳೆಂಬಂತೆ ಅಂದು ಅವು ಕೆಲಸ ಮಾಡಿರಬೇಕೆನಿಸುತ್ತವೆ. ಇಂಥ ಗುರುತಿನ ಸಂಕೇತಗಳು ಮುರುಗೋಡದಲ್ಲಿದ್ದಂತೆ ದಂಡಿನ ದಾರಿಗುಂಟ ಇರಬೇಕು. ಕಾಲಾಂತರದಲ್ಲಿ ಅವೆಲ್ಲ ನಾಶವಾಗಿ, ಮುರುಗೋಡದ ಮೂರು ಚೌಕಟ್ಟುಗಳು ಮಾತ್ರ ಶರಣರ ಸ್ಮಾರಕಗಳೆಂಬಂತೆ ಉಳಿದುಕೊಂಡು ಬಂದಿರಬೇಕೆನಿಸುತ್ತದೆ.

ಉಳವಿಯ ಸಂದರ್ಶನ ಮಾಡುವಲ್ಲಿ ಶಿವಶರಣರಿಗೆ ಮುರುಗೋಡೆ ಉಳವಿಯ ಕಡೆ ಬಾಗಿಲು ಎಂಬಂತೆ ಕಂಡದ್ದರಿಂದ ಸಾಂಕೇತಿಕವಾಗಿ ರಚಿತವಾದವು. ಇಲ್ಲಿಯ ಚೌಕಟ್ಟುಗಳು ಎನ್ನಬಹುದು. ಇವೇ ಕಾಲಾಂತರದಲ್ಲಿ ಉಳವಿಯ ಕಡೇ ಬಾಗಿಲುಗಳೆಂಬಂತೆ ಇತಿಹಾಸ ಪ್ರಸಿದ್ಧ ಕುರುಡುಗಳಾಗಿ ಉಳಿದುನಿಂತಿವೆ.

ಏನೇ ಆದರೂ ಶಿವಶರಣರ ದಂಡಿನ ದಾರಿಯ ವಿಸ್ತೃತ ಅಧ್ಯಯನದ ಕೊರತೆ, ಶರಣರ ಮಾರ್ಗಮಧ್ಯದ ಅವಶೇಷಗಳ ಕೂಲಂಕಷ ಅಧ್ಯಯನದ ಕೊರತೆ ಇಂದು ಸಂಶೋಧಕರನ್ನು ಕಾಡುತ್ತಿದೆ. ಶಿವಶರಣರು ಕಲ್ಯಾಣದಿಂದ ಉಳುಮೆಗೆ ಬಂದ ದಾರಿಯ ಸಮಗ್ರಶೋಧ ಇನ್ನೂ ವ್ಯವಸ್ಥಿತವಾಗಿ ನಡೆಯಬೇಕಿದೆ. ಎಂಟುನೂರು ವರ್ಷ ಕಳೆದರೂ ಈ ದಾರಿಯನ್ನು ಅಕ್ಕಪಕ್ಕದ ಹಳ್ಳಿಯ ಜನ 'ದಂಡಿನ ದಾರಿ' ಎಂದು ನೆನಪಿಟ್ಟು ಕರೆಯುತ್ತಿರುವುದು ಅದರ ಐತಿಹಾಸಿಕ ಮಹತ್ವಕ್ಕೆ ನಿದರ್ಶನವೆನ್ನುವಂತಿದೆ.

❑

ಅಪೂರ್ವ ನರಸಿಂಹಮೂರ್ತಿ ಶಿಲ್ಪಗಳು

– ಎಂ.ಎಲ್. ಶಿವಶಂಕರ್

ಕುಳಿತಿರುವ ನರಸಿಂಹಮೂರ್ತಿ ದ್ವಿಬಾಹುಗಳನ್ನು ಹೊಂದಿದೆ. ಉತ್ತರಕನ್ನಡ ಜಿಲ್ಲೆಯ ಸಿರಸಿ ತಾಲ್ಲೂಕಿನ ಸನ್ನಳ್ಳಿಯಲ್ಲಿ ಅಶೋಕವನದ ಸಮೀಪ ದೊರೆತಿದೆ.[1] ಪ್ರೊ. ನೀಲಾಂಬರ್ ಹಟ್ಟಿ ದಿನಾಂಕ 8–4–94ರಂದು ಈ ಅಪೂರ್ವ ಮೂರ್ತಿಯನ್ನು ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಗೆ ಕೊಟ್ಟಿರುತ್ತಾರೆ. ಈ ಮೂರ್ತಿಯ ಅಳತೆ 60 ಸೆಂ.ಮೀ., 32 ಸೆಂ.ಮೀ., 6 ಸೆಂ.ಮೀ. ಆಗಿದೆ (ಛಾಯಾಚಿತ್ರ 1, 2). ಕಾಲ ಸುಮಾರು ಕ್ರಿ.ಶ. 11–12ನೆಯ ಶತಮಾನ. ಶಿರ ಗುಂಗುರು ಕೂದಲಿನಿಂದ ಕೂಡಿದೆ (ಮುಂಭಾಗ ಮತ್ತು ಹಿಂಭಾಗ). ಕೊರಳಲ್ಲಿ ಪದಕ, ಒಂದೆಳೆಯಲ್ಲಿ ಯಜ್ಞೋ ಪವೀತ, ಕಟಿಬಂಧ, ತೋಳ್ಬಂದಿ, ಮೇಲ್ಭಾಗ ಬೆತ್ತಲೆಯಿದ್ದು, ಸೊಂಟದ ತಳಭಾಗ ಧೋತಿ ಧರಿಸಿದೆ. ಪೀಠಭಾಗ ಪದ್ಮಗಳಿಂದ ಅಲಂಕೃತವಾಗಿದೆ.

ನರಸಿಂಹ ಮೂರ್ತಿಗಳು ಮಧುಕೇಶ್ವರ ದೇವಾಲಯ, ಬನವಾಸಿ (ಉತ್ತರ ಕನ್ನಡ ಜಿಲ್ಲೆ), ಹಲಸಿಯ ದೇವಾಲಯ (ಬೆಳಗಾವಿ ಜಿಲ್ಲೆ), ಕೂಡ್ಲಿ ನರಸಿಂಹ ದೇವಾಲಯಗಳಲ್ಲಿ (ಶಿವಮೊಗ್ಗ ಜಿಲ್ಲೆ) ದೊರೆತಿವೆ.

ಕುಣಿಗಲ್ ಕೆರೆಯ ಹೂಳು ತೆಗೆಯುವಾಗ ನರಸಿಂಹಸ್ವಾಮಿ ಶಿಲಾಮೂರ್ತಿ ದೊರೆತಿದೆ. ಈ ಮೂರ್ತಿ ಸಮಭಂಗದಲ್ಲಿದ್ದು, ಚತುರ್ಭುಜದಿಂದ ಕೂಡಿದ್ದು, ಮುಂಭಾಗದ ಬಲಗೈಗಳು ಮುರಿದಿವೆ. ಎಡ ಮೇಲ್ಭಾಗದ ಕೈ ಶಂಖ, ಎಡ ಕೆಳಗಿನ ಕೈ ಗದೆಯನ್ನು ಹಿಡಿದಿದೆ. ಬಲಕಾಲಿನ ಬಳಿ ನಿಂತಿರುವ ಮೂರ್ತಿ (ಪ್ರಹ್ಲಾದ) ಭಕ್ತಿಪೂರ್ವಕನಾಗಿ ನಿಂತಿದ್ದಾನೆ. ಈ ಮೂರ್ತಿ ಯಜ್ಞೋಪವೀತ, ಕಂಠೀಹಾರದಿಂದ ಅಲಂಕೃತಗೊಂಡಿದೆ. ಈ ಮೂರ್ತಿಎತ್ತರ 117 ಸೆಂ.ಮೀ. ಅಗಲ 44 ಸೆಂ.ಮೀ. ಇರುತ್ತದೆ. ಕಾಲ ಸುಮಾರು 15ನೇ ಶತಮಾನ. ಈಗ ಈ ಮೂರ್ತಿ ಧರ್ಮಸ್ಥಳದ ಮಂಜೂಷಾ ವಸ್ತು ಸಂಗ್ರಹಾಲಯದಲ್ಲಿರುತ್ತದೆ. (ಛಾಯಾಚಿತ್ರ 3).

ಅಡಿಟಿಪ್ಪಣಿಗಳು

1. ಶ್ರೀ ಮಾದವ ಎನ್. ಕಟ್ಟಿ, ನಿರ್ದೇಶಕರು, ಭಾರತೀಯ ಶಾಸನ ನಿರ್ದೇಶನಾಲಯ, ಮೈಸೂರು ಇವರು ಅಶೋಕವನ ಯುದ್ಧಭೂಮಿ ಇರಬಹುದೆಂದು ಅಭಿಪ್ರಾಯಪಟ್ಟಿದ್ದಾರೆ.

❑

ಗೇರುಸೊಪ್ಪಾದಲ್ಲಿನ ಕಾವಿಚಿತ್ರಗಳು – ಒಂದು ಹೊಸ ಶೋಧ

– ಡಾ. ಬೆಂ. ಶಾ. ಶ್ಯಾಮಲಾರತ್ನಕುಮಾರಿ

ಗೇರುಸೊಪ್ಪ ನಗರದ ಬಸ್ತಿಕೇರಿಯ ಬಳಿ ಶರಾವತಿ ನದಿಯ ಆಚೆಯ ದಂಡೆಯ ಮೇಲೆ ಮಾರುತಿ ಮತ್ತು ಲಕ್ಷ್ಮೀವೆಂಕಟೇಶ ದೇವಾಲಯಗಳಿವೆ. ಲಕ್ಷ್ಮೀ ವೆಂಕಟೇಸ ದೇವಾಲಯದ ಪಾಳಿ ಗೋಡೆಯ ಒಳಹೊರ ಮೈಮೇಲಿನ ಅಂಕಣಗಳಲ್ಲಿ ಗೋಡೆಯ ಸುಣ್ಣ ಬಣ್ಣ ಕಾರಣಿಗೆಗಳೊಳಗಿಂದಲೂ ಕೆಲವು ರೇಖಾಚಿತ್ರಗಳು ಮಸಕುಮಸಕಾಗಿ ಗೋಚರಿಸುತ್ತವೆ. ಒಳಗೋಡೆಯ ಚಿತ್ರವೊಂದರಲ್ಲಿ ಒಂದೆಡೆ ಹಸಿಮಣ್ಣಿನ ಕಲೆಯಿದ್ದಂತೆ ಕಾಣಬರುತ್ತದೆ. ಈಚೆಗೆ ಅದನ್ನು ಬೆರಳಿನಿಂದ ಸ್ವಲ್ಪ ಬಲವಾಗಿ ಉಜ್ಜಿ ತೆಗೆಯಲು ನಾವುಪ್ರಯತ್ನಿಸಿದಾಗ ಒಳಗಿನ ಕಾವಿಬಣ್ಣವು ನಿಚ್ಚಳಗೊಂಡಿತು. ಆದ್ದರಿಂದ ಆ ಚಿತ್ರಗಳು ಕಾವಿಕಲೆಯ ಚಿತ್ರಗಳೆಂದು ಸ್ಪಷ್ಟಗೊಂಡಿತು. ದೇವಾಲಯವು ಗೌಡ ಸಾರಸ್ವತ ಸಮಾಜಕ್ಕೆ ಸೇರಿದ್ದು, ದೇವಾಲಯದ ಆಡಳಿತವನ್ನು ಧರ್ಮದರ್ಶಿ ಮಂಡಳಿ ನಿರ್ವಹಿಸುತ್ತಿದೆ.

ದೇವಾಲಯದ ಒಳ ಹೊರ ಮತ್ತು ಒಳಪಾರ್ಶ್ವ ಗೋಡೆಗಳಲ್ಲಿ ಒಟ್ಟು 20 ಕಾವಿಚಿತ್ರಗಳಿವೆ. ಅದರಲ್ಲಿ ಒಳಭಾಗದ ಎಡಪಾರ್ಶ್ವದ ಮೂಲೆಯಲ್ಲಿ ಮೇಲಿನ ಮಹಡಿಗೆ ಹೋಗಲು ಮರದ ಪಾವಟಿಗೆಗಳನ್ನು ಆಳವಡಿಸಲಾಗಿದೆ. ಆ ಭಾಗದಲ್ಲಿದ್ದ ಎರಡು ಚಿತ್ರಗಳು ಪಾವಟಿಗೆಗಳಲ್ಲೇ ಅಡಕಗೊಂಡಿವೆ. ಈ ಚಿತ್ರಗಳು ರಾಮಾಯಣ ಮಹಾಭಾರತ ಪುರಾಣಗಳಿಗೆ ಸಂಬಂಧಿಸಿದ ದೃಶ್ಯಗಲಾಗಿವೆ. ಒಂದೆರಡು ರಾಜಕೀಯ ಚಿತ್ರಗಳೆಂದು ಹೇಳಬಹುದಾಗಿದೆ.

ಚಿತ್ರಗಳನ್ನು ಪರಿಶೀಲಿಸಿದರೆ ಹೊರಭಿತ್ತಿಯಲ್ಲಿ ದ್ವಾರದ ಇಕ್ಕೆಡೆ ದ್ವಾರಪಾಲಕರಾದ ಜಯ ವಿಜಯರು ಕಾಣಬರುತ್ತಾರೆ. ಎಡಗಡೆಯ ದ್ವಾರಪಾಲಕನ ಚಿತ್ರದ ಪಕ್ಕದಲ್ಲಿ ಕಂಡು ಬರುವ ಚಿತ್ರಗಳೆಂದರೆ ಕ್ರಮವಾಗಿ ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನು ಶಲ್ಯನ ಸಾರಥ್ಯದಲ್ಲಿ ತನ್ನ ಶತ್ರುವಾದ ಅರ್ಜುನನ ಮೇಲೆ ಸರ್ಪಾಸ್ತ್ರ ಪ್ರಯೋಗಿಸುತ್ತಿರುವುದು; ನರಸಿಂಹನು ದಾನವರಾಜ ಹಿರಣ್ಯಕಶಿಪುವಿನ ಕರುಳನ್ನು ಬಗಿಯುತ್ತಿರುವುದು, ಸುಧನ್ವ – ಅರ್ಜುನರ ಕಾಳಗ, ದಾನವ ರಾಜನೊಬ್ಬರು ತನ್ನ ಧನುರ್ವಿದ್ಯಾ ಗುರುವಿನಿಂದ ಆಶೀರ್ವಾದ ಪಡೆಯುತ್ತಿರುವುದು; ಬಲಗಡೆಯ ದ್ವಾರಪಾಲಕನ ಚಿತ್ರದ ಪಕ್ಕದಲ್ಲಿ ಶ್ರೀ ಕೃಷ್ಣನ ಸಾರಥ್ಯದಲ್ಲಿ ಕಪಿಧ್ವಜನಾದ ಅರ್ಜುನನು ಕರ್ಣನು ತನ್ನ ಮೇಲೆ ಪ್ರಯೋಗಿಸಿದ ಸರ್ಪಾಸ್ತ್ರವನ್ನು ತನ್ನ ಪ್ರತ್ಯಸ್ತ್ರದಿಂದ ನಿವಾರಿಸುತ್ತಿರುವುದು ಇತ್ಯಾದಿ ಚಿತ್ರಗಳಿವೆ. ಅದರ ಪಕ್ಕದ ಅಂಕಣದಲ್ಲಿ ಅರಳಿದ ಕಮಲಪುಷ್ಪದ ಚಿತ್ರವಿದ್ದು ಉಳಿದ ಭಾಗದಲ್ಲಿ ಚಿತ್ರಗಳೇನೂ ಇರುವುದಿಲ್ಲ. ದೇವಾಲಯದ ಒಳಗೋಡೆಯ ಚಿತ್ರಗಳು ಕ್ರಮವಾಗಿ ಇಂತಿವೆ; ಬಾಗಿಲಿನ ಎಡಗಡೆಯ ಗೋಡೆಯ ಮೇಲೆ ಪೀಠದ ಮೇಲೆ ಆಸೀನನಾದ ಮುಕುಟಧಾರಿಯಾದ ರಾಜ ಅವನ ಸಮ್ಮುಖದಲ್ಲಿ ದಂಡಧಾರಿ ಸೇವಕನೊಬ್ಬನು ಏನನ್ನೋ ನಿವೇದಿಸುತ್ತಿರುವಂತಿದೆ; ಅದರ ಪಕ್ಕದಲ್ಲಿನ ಚಿತ್ರದಲ್ಲಿ ರಾಜರಾಣಿಯರು ಶೃಂಗಾರ ಭಾವದಲ್ಲಿರುವಂತೆ ತೋರಿಸಲಾಗಿದೆ.

ಇಲ್ಲಿನ ಎಲ್ಲಾ ಚಿತ್ರಗಳಲ್ಲಿಯೂ ಮೇಲಿನ ಭಾಗದಲ್ಲಿ ಒಂದೆಡೆ ಚಿತ್ರದ ಹೆಸರನ್ನು ನಮೂದಿಸಲು ಒಂದು ಚಿಕ್ಕ ಆಯತಾಂಕಣವನ್ನು ಕಾಣಬಹುದಾದರೂ ಅದರೊಳಗಿನ ಅಕ್ಷರಗಳು ಸ್ಪಷ್ಟವಾಗಿ ಕಾಣುವುದಿಲ್ಲ. ಆದರೆ ರಾಜ ರಾಣಿಯರ

ಚಿತ್ರದಲ್ಲಿನ ನಾಮಾಂಕಣದಲ್ಲಿ ಪ್ರಭಾವತಿ–ಸುಧನ್ವ ಎಂಬ ಹೆಸರುಗಳನ್ನು ನಾಗರೀಲಿಪಿಯಲ್ಲಿ ಬರೆದಿರುವುದನ್ನು ಸ್ಫುಟವಾಗಿ ಓದಬಹುದಾಗಿದೆ. ಇದರ ಪಕ್ಕದ ಚಿತ್ರದಲ್ಲಿ ಭೀಮ ಮತ್ತು ದ್ರೌಪದಿಯರು ಕೈಯಲ್ಲಿ ಪುಷ್ಪವೊಂದನ್ನು ಹಿಡಿದ ಚಿತ್ರವಿದೆ. ಇದು ಮಹಾಭಾರತದ ಸೌಗಂಧಿಕಾ ಪುಷ್ಪ ಪ್ರಸಂಗವೇ ಆಗಿದೆ. ಭೀಮನನ್ನು ಭೀಮಾಕಾರ (ತುಂಬಾ ದೊಡ್ಡದು)ವಾಗಿಯೂ ದ್ರೌಪದಿಯನ್ನು ಸ್ತ್ರೀಸಹಜ ಗಾತ್ರದಲ್ಲೂ ಬಿಡಿಸಲಾಗಿದೆ. ನಂತರದ ಚಿತ್ರ ದಾನ ಬೇಡಲು ಬಲಿರಾಜನ ಬಳಿಗೆ ಬಂದಿರುವ ವಾಮನ. ಬ್ರಾಹ್ಮಣ ವಟು ವಾಮನವನ್ನು ಪೀಠದ ಮೇಲೆ ಕುಳ್ಳಿರಿಸಿ ಬಲಿ ಮಹಾರಾಜನು ಭಕ್ತಿಭಾವದಿಂದ ವಂದಿಸುತ್ತ ನಿಂತಿರುವಂತೆ ಮೂಡಿಸಲಾಗಿದೆ. ವಾಮನನ ಜಟೆಯು ವೈಶಿಷ್ಟ್ಯಪೂರ್ಣವಾಗಿದೆ. ಕುಲಾವಿಯಂತೆ ಇರುವ ಟೊಪ್ಪಿಗೆಯನ್ನು ಅಳವಡಿಸಲಾಗಿದೆ. ಈ ಚಿತ್ರದಲ್ಲಿ ಕಂಡುಬರುವ ಗುಳಾಪುದೀಪ ವ್ಯವಸ್ಥೆಯ ಗಮನಾರ್ಹವಾಗಿದೆ. ಕುಲಾವಿ ಹಾಗೂ ಗುಳಾಪು ಯೂರೋಪಿಯನ್ ಶೈಲಿಯಲ್ಲಿರುವಂತಿದೆ. ಈ ಚಿತ್ರದ ಪಕ್ಕದಲ್ಲಿ ಕಾಳಿಂಗ ಮರ್ದನನಾಗಿರುವ ಶ್ರೀ ಕೃಷ್ಣನ ಚಿತ್ರವಿದೆ. ಈ ಚಿತ್ರದ ಎಡ ಪಾರ್ಶ್ವದಲ್ಲೇ ಮಹಡಿಗೆ ಮೆಟ್ಟಿಲುಗಳಿದ್ದು ಅದರ ಪಕ್ಕದ ಗೋಡೆಯ ಮೇಲೆ ಗಣೇಶನ ಚಿತ್ರವಿದ್ದು ಅದರ ಮೇಲ್ಭಾಗ ಮಾತ್ರ ಕಾಣಬಹುದಾಗಿದೆ. ಅದರಪಕ್ಕದ ಚಿತ್ರದಲ್ಲಿ ವರ್ತುಲಾಕಾರವಾಗಿ ಗರಿಗೆದರಿ ನಿಂತ ನವಿಲಿನ ಮೇಲೆ ಆಸೀನಳಾದ ಸರಸ್ವತಿಯು ವೀಣಾವಾದನದಲ್ಲಿ ತೊಡಗಿದ್ದಾಳೆ. ಸರಸ್ವತಿಯ ಪಕ್ಕದಲ್ಲಿ ಗಣೇಶನಿರುವುದರಿಂದ ಮೆಟ್ಟಿಲುಗಳ ಸ್ಥಳದಲ್ಲಿ ಸೇರಿಹೋಗಿ ಕಣ್ಮರೆಯಾಗಿರುವ ಚಿತ್ರವು ಲಕ್ಷ್ಮಿಯದೆಂದು ಹೇಳಬಹುದಾಗಿದೆ. ಇನ್ನು ದ್ವಾರದ ಬಲಗೋಡೆಯ ಮೇಲೆ ಧನುರ್ಧಾರಿಗಳಾದ ಹಂಸಧ್ವಜ, ಸುಧನ್ವ, ನಂತರ ಅರ್ಜುನ, ಆನಂತರ ಧನುರ್ಧಾರಿಯಾಗಿ ಸ್ತ್ರೀಪುರುಷ ಸಂಯೋಜಿತ ಚಿತ್ರವಿದೆ. ಇದು ಬೃಹನ್ನಳೆ ಅರ್ಜುನನ ಚಿತ್ರವೆಂದು ಹೇಳಬಹುದು. ಅದರ ಪಕ್ಕದಲ್ಲಿ ಅರಳಿದ ಪದ್ಮದ ಚಿತ್ರವಿದೆ. ಪಾರ್ಶ್ವಗೋಡೆಗೆ ಹೊಂದಿಕೊಂಡು ಒಂದು ಕೊಠಡಿಯಿದೆ. ಕೊಠಡಿಯ ಬಾಗಿಲಿನ ಇಕ್ಕೆಡೆಯ ಗೋಡೆಗಳಲ್ಲಿ ವಿಷ್ಣುವನ್ನು ಹೊತ್ತುನಿಂತ ಪುರುಷರೂಪಿ ಗರುಡ ಹಾಗೂ ರಾಮನನ್ನು ಹೊತ್ತುನಿಂತ ಹನುಮಂತನ ಚಿತ್ರಗಳೂ ಕಂಡುಬರುತ್ತವೆ. ಈ ಚಿತ್ರಗಳಲ್ಲಿ ಕಂಡುಬರುವ ಉಡುಗೆ ತೊಡುಗೆಗಳು ಮುಖ್ಯವಾಗಿ ಕಿರೀಟಗಳು, ಅಂಗಿ ಚಲ್ಲಣ ಆಭರಣಗಳು ಕರಾವಳಿ ಪ್ರದೇಶದ ವಿಶಿಷ್ಟ ಕಲಾಪ್ರಕಾರಗಳಾದ ಯಕ್ಷಗಾನ ಮತ್ತು ಕೇರಳೀಯ ಕಥಕ್ಕಳಿಗಳ ಪ್ರಭಾವವನ್ನು ಎತ್ತಿತೋರಿಸುತ್ತವೆ. ಕರ್ಣನನ್ನು ಮುಕ್ಯವಾಗಿ ಚಿತ್ರಿಸಿರುವುದು ಆ ಪ್ರದೇಶದಲ್ಲಿನ ಬೆಸ್ತರ ಪ್ರಾಮುಖ್ಯವನ್ನು ಪ್ರತಿನಿಧಿಸುತ್ತದೆ.

ಕಾವಿ ಚಿತ್ರಕಲೆಯು ಯೂರೋಪಿನಲ್ಲಿನ ಪುನರುಜ್ಜೀವನ (ರಿನೈಸಾನ್ಸ್) ಕಾಲದ ಗ್ರಿಫಿಟೋ (ಉಡಿುಜಿಜಿುಣಂ) ಚಿತ್ರಕಲಾ ಶೈಲಿಯನ್ನು ಪ್ರತಿನಿಧಿಸುತ್ತದೆ. ಒಂದು ಬಣ್ಣದ ಪದರವನ್ನು ಕೆರೆದು ತೆಗೆದು ಅದರೊಳಂತರ್ಗತವಾದ ಇನ್ನೊಂದು ಬಣ್ಣದ ರೇಖಾಚಿತ್ರಗಳನ್ನು ರಚಿಸುವಕಲೆಯೇ ಗ್ರಿಫಿಟೋ ಕಲೆ. 'ಫ್ರೆಸ್ಕೊ' ಭಿತ್ತಿ ಚಿತ್ರಗಳಂತೆ ಗಿಲಾಯಿ ಹಸಿಯಿದ್ದಾಗಲೇ ಈ ಚಿತ್ರಗಳ ನಿರ್ಮಾಣ ಕಾರ್ಯವನ್ನು ಮುಗಿಸಿಬಿಡಬೇಕಾಗುತ್ತದೆ. ಗೋಡೆಗಾಗಿ ಬಳಸಿದ ಮರಗಲ್ಲುಗಳನ್ನು ಜೋಡಿಸುವ ಗಚ್ಚನ್ನೇ ಗಿಲಾಯಿಗಾಗಿ ಬಳಸಲಾಗುತ್ತದೆ. ಬೆಣ್ಣೆಯಂತೆ ನಯವಾದ ಹಿಮದಷ್ಟು ಬಿಳಿಯಾದ ಸುಣ್ಣದಲ್ಲಿ ಹೊನ್ನಾವರದಿಂದ ಎರಡು ಕಿ.ಮೀ. ದೂರದಲ್ಲಿರುವ ಬಸವರಾಜ ದುರ್ಗ ದ್ವೀಪದಲ್ಲಿ ವಿಫುಲವಾಗಿ ಸಿಕ್ಕುವ 'ಹುರಮುಂಜೆ' (ಕಾವಿಮಣ್ಣು) ಹುಡಿಯನ್ನು ಸೇರಿಸಿ ಪಾಯಸದಂತ ಮಂದವಾದ ಮಿಶ್ರಣವನ್ನು ಸಿದ್ಧಪಡಿಸಿ ಅದನ್ನು ಚಿತ್ರ ನಿರ್ಮಾಣ ಅಂಕಣಗಳಲ್ಲಿ ಏಕಪ್ರಕಾರವಾಗಿ ಲೇಪಿಸಲಾಗುತ್ತದೆ. ಒಂದು ಗಳಿಗೆಯ ನಂತರ ತಾಪಿ ಅಥವಾ ದಬ್ಬಳದಿಂದ ಅನವಶ್ಯಕ ಮಿಶ್ರಣವನ್ನು ಚಿತ್ರಕ್ಕನುಗುಣವಾಗಿ ಕೆರೆದು ಬೇರ್ಪಡಿಸಿದಾಗ ಬಿಳಿಗೋಡೆಯ ಮೇಲೆ ರಕ್ತವರ್ಣದ ಚಿತ್ರಗಳು ರಚನೆಗೊಳ್ಳುತ್ತವೆ. ಒಂದು ದಿನದ ನಂತರ ಪ್ರತಿನಾಲ್ಕು ಗಂಟೆಗೊಮ್ಮೆ ಒಂದು ವಾರದ ಕಾಲ ನೀರು ಸಿಂಪಡಿಸುತ್ತಿದ್ದು ಬಿರುಕುಬಿಡದಂತೆ ಮಾಡಲಾಗುವುದು.

ಹೀಗೆ ಸಿದ್ಧಗೊಂಡ ಚಿತ್ರಗಳು ಚಪ್ಪಟೆಯಾಗಿ ಏಕವರ್ಣೀಯವಾಗಿದ್ದರೂ ಸರಳ ಸೂಕ್ಷ್ಮ ಭಾವಾಭಿವ್ಯಕ್ತಿಗಳಿಂದ ಬಹುಸುಂದರವೆನಿಸುತ್ತವೆ. ಪ್ರತಿ ಚಿತ್ರದಲ್ಲಿ ಸೇರಿಸಿರುವ ಸೂಕ್ಷ್ಮ ವಿವರಗಳು, ನಯನಾಜೂಕುಗಳು ಚಿತ್ರಕಾರನ ಅಭಿರುಚಿಯ ದ್ಯೋತಕವಾಗಿರುತ್ತವೆ. ಈ ಶೈಲಿಯ ಚಿತ್ರಗಳಲ್ಲಿ ಕಲಾಕಾರನ ರೇಖಾಚಿತ್ರ ನಿರ್ಮಿತಿಯ ಸ್ಪಷ್ಟಕಲ್ಪನೆ ಹಾಗೂ ಕೈಚಳಕ ಎರಡೂ ಅತ್ಯಗತ್ಯವಾಗಿರುತ್ತವೆ. ಈ ದೃಷ್ಟಿಯಿಂದ ಕಾವಿಚಿತ್ರಕಲೆ ಒಂದು ವಿಶಿಷ್ಟ ರೀತಿಯ ಚಿತ್ರಕಲೆಯಾಗಿ ನೋಟಕರ ಕಣ್ಮನ ಸೆಳೆಯುತ್ತವೆ.

ಪೋರ್ಚುಗೀಸರು ಪಶ್ಚಿಮ ಕರಾವಳಿಯ ತಮ್ಮ ನೆಲೆಗಳಾದ ಗೋವಾ, ಕೊಚ್ಚಿನ್, ಕಲ್ಲಿಕೋಟೆ ಮುಂತಾದೆಡೆ ಈ ಗ್ರಿಫ್ಟಿಟೋ ಕಲೆಯನ್ನು ಪ್ರಚುರಪಡಿಸಿದರು. ಪೋರ್ಚುಗೀಸರ ಧಾರ್ಮಿಕ ಮತಾಂತರ ನೀತಿಗೆ ಹೆದರಿ ಗೌಡಸಾರಸ್ವತರು ಆ ಪ್ರದೇಶಗಳಿಂದ ಕರ್ನಾಟಕದ ಉತ್ತರ ಕರಾವಳಿಯ ಪ್ರದೇಶಗಳಲ್ಲಿ ನೆಲೆಸಿ ತಮ್ಮ ಮನೆ ಮತ್ತು ದೇವಾಲಯದ ಭಿತ್ತಿಗಳ ಮೇಲೆ ಕಾವಿ ಚಿತ್ರಗಳನ್ನು ರಚಿಸಿದರು. ಇತ್ತೀಚೆಗೆ ಈ ಕಾವಿಚಿತ್ರಗಳು ಮಾಸಲುಗೊಂಡಾಗ ಗೋಡೆಗಳಿಗೆ ಬಣ್ಣ ಹಚ್ಚಲಾಗುತ್ತಿದೆ. ಕಾವಿಚಿತ್ರಗಳು ಕಣ್ಮರೆಯಾಗುತ್ತಿವೆ. ಇನ್ನು ಕಾವಿಚಿತ್ರಕಲೆಯ ಕೇಂದ್ರಗಳಾದ ಹೊಸಾಡು ಮಾವಿನಕುರ್ವೆ, ಹೊನ್ನಾವರ, ಶಿರಸಿ (ಉ.ಕ. ಜಿಲ್ಲೆ) ಹಾಗೂ ಕೊಲ್ಲೂರು (ದ.ಕ. ಜಿಲ್ಲೆ)ಗಳಲ್ಲಿನ ಕಾವಿಚಿತ್ರಗಳನ್ನು ಪರಿಶೀಲಿಸಿದರೆ ಕೆಲವು ವಿಶಿಷ್ಟತೆಗಳು ಕಂಡುಬರುತ್ತವೆ. ಹೊಸಾಡು ಗೇರುಸೊಪ್ಪ ಮತ್ತು ಹೊನ್ನಾವರದ ಕಾವಿಚಿತ್ರಗಳು ಒಂದೇ ಶೈಲಿಗೆ ಸೇರಿದವೆಂದು ಹೇಳಬಹುದಾಗಿದೆ. ಡಾ. ಕೃಷ್ಣಾನಂದ ಕಾಮತರು 'ಕಾವಿ ಕಲೆ' ಎಂಬ ಗ್ರಂಥವನ್ನು ಬರೆದಿದ್ದಾರೆ. ಅದರಲ್ಲಿ ಹೊಸಾಡಿನ ಕಾವಿಕಲಾಶೈಲಿ ಪ್ರತ್ಯೇಕವಾಗಿ ಗುರುತಿಸಿದ್ದಾರೆ. ಹೊಸಾಡು ಹಾಗೂ ಗೇರುಸೊಪ್ಪಾದ ಕಾವಿ ಚಿತ್ರಗಳು ಪರಸ್ಪರ ಬಹಳಷ್ಟು ಹೋಲುತ್ತವೆ. ಈ ಎರಡೂ ಕಡೆಯಲ್ಲಿ ಚಿತ್ರಗಳು ಲಕ್ಷ್ಮೀವೆಂಕಟೇಶ ಮತ್ತು ಮುಖ್ಯಪ್ರಾಣ ವೆಂಕಟೇಶ ದೇವಾಲಯಗಳ ಭಿತ್ತಿಗಳ ಮೇಲೆ ಕಂಡುಬರುತ್ತವೆ. ಚಿತ್ರಗಳು ವಿಷ್ಣುವಿಗೆ ಸಂಬಂಧಿಸಿದುದಾಗಿವೆ. ದೇವಾಲಯಗಳ ಅರ್ಚಕರು ಪರಸ್ಪರ ಸೋದರ ಸಂಬಂಧಿಗಳಾಗಿದ್ದು ಮೂಲತಃ ಕೊಚ್ಚಿನ್ ಕಡೆಯಿಂದ ಬಂದವರೆಂದು ತಿಳಿದುಬಂದಿತು. ಹೊಸಾಡಿನ ಚಿತ್ರಗಳು ಹೆಚ್ಚು ಹಳೆಯದಾಗಿವೆ. ಕೆಲವು ಚಿತ್ರಗಳು ಭಾಗಶಃ ಹಾಳಾಗಿವೆ. ಶಿರಸಿ ಮಾವಿನಕುರ್ವೆ ಹಾಗೂ ಕೊಲ್ಲೂರುಗಳಲ್ಲಿ ಕಾವಿಚಿತ್ರಗಳು ಪುನರ್‌ರಚಿಸಲ್ಪಟ್ಟಿವೆಯಾದ್ದರಿಂದ ನಯ ನಾಜೂಕುಗಳಿಂದ ಕೂಡಿದ್ದರೂ ಮೂಲಸ್ವರೂಪ ಸ್ಪಷ್ಟವಾಗಿ ತಿಳಿಯಲಾಗುವುದಿಲ್ಲ.

ಗೇರಸೊಪ್ಪಾದ ಕಾವಿಚಿತ್ರಗಳು ಗೋಡೆಗಳ ಇತ್ತೀಚಿನ ಸುಣ್ಣ ಕಾರಣಿಯಿಂದ ಸಂರ7ಇಸಲ್ಪಟ್ಟಿರುವುದರಿಂದ ಮೂಲ ಸ್ವರೂಪದಲ್ಲಿ ಉಳಿದುಕೊಂಡು ಬಂದಿವೆ. ಸುಣ್ಣಬಣ್ಣಗಳಿಂದ ಕೂಡಿದ್ದರಿಂದ ಆ ಚಿತ್ರಗಳು ಇನ್ನೂ ಯಾರ ಕಣ್ಣಿಗೂ ಬಿದ್ದಿಲ್ಲ. ಡಾ. ಕೃಷ್ಣಾನಂದ ಕಾಮತರ ಗ್ರಂಥದಲ್ಲೂ ಗೇರಸೊಪ್ಪಾದ ಈ ಚಿತ್ರಗಳು ಈ ಕಾರಣದಿಂದಲೇ ಉಲ್ಲೇಖಗೊಂಡಿಲ್ಲ. ಆದ್ದರಿಂದ ಇದೊಂದು ಹೊಸಶೋಧವಾಗಿದೆ. ಆದರೆ ಗೇರಸೊಪ್ಪದ ಎಲ್ಲ 17 ಕಾವಿಚಿತ್ರಗಳು ಕಣ್ಮರೆಯಾಗುವ ಹಂತವನ್ನು ಇಷ್ಟರಲ್ಲೇ ತಲುಪಲಿವೆ. ಕಾರಣ ದೇವಾಲಯದ ಹೊರ ಗೋಡೆಗಳನ್ನು ಕೆಡವಿ ದೇವಾಲಯದ ಮುಂಭಾಗದ ಅಂಗಳವನ್ನೂ ಸೇರಿಸಿ ಕಲ್ಯಾಣ ಮಂಟಪವನ್ನು ನಿರ್ಮಿಸುವ ಯೋಜನೆಯೊಂದು ರೂಪುಗೊಂಡಿದೆ. ಇಂತಹ ಅತ್ಯಮೂಲ್ಯ ಕಾವಿ ಚಿತ್ರಕಲಾ ನೆಲೆಯನ್ನು ನೋಡಿದರೆ ಚಿತ್ರಕಲಾವಿದರ ಆಸಕ್ತಿ ಕೆರಳಿಸುವಂತಿದೆ.

❏

ಗೇರುಸೊಪ್ಪೆ – ಒಂದು ಅಧ್ಯಯನ

– ಶ್ರೀ ಎಂ.ಎಸ್. ಹೆಗಡೆ ಕಣಿ

ಐತಿಹಾಸಿಕ ದೃಷ್ಟಿಯಿಂದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ 'ಗೇರುಸೊಪ್ಪೆ'ಯ ಕುರಿತು ಸಾಕಷ್ಟು ಅಧ್ಯಯನ ನಡೆದಿದ್ದರೂ ಕಲಾ ವಾಸ್ತುಶಿಲ್ಪದ ದೃಷ್ಟಿಯಿಂದ ಇನ್ನೂ ಸಂಶೋಧನೆಗೆ ಯೋಗ್ಯವಾದ ಹಲವಾರು ವಿಷಯಗಳಿವೆ. ಗೇರುಸೊಪ್ಪೆಯನ್ನು ಶಾಸನಗಳಲ್ಲಿ ನಗಿರಾರಾಜ್ಯ, ನಗರಿರಾಜ್ಯ, ಕ್ಷೇಮಪುರ ಮತ್ತು ಭಲ್ಲಿತಕೀಪುರ ಎಂದೆಲ್ಲ ಹೆಸರಿಸಲಾಗಿದೆ.1 ಹದಿನಾರನೇ ಶತಮಾನದಲ್ಲ ಈ ಪ್ರದೇಶಕ್ಕೆ ಬೆಟ್ಟಿಕೊಟ್ಟ ಇಟಲಿಯ ಪ್ರವಾಸಿ 'ಪಿಯತ್ರೊ ಡೆಲ್ಲಾವಲ್ಲೆ' ಎಂಬವನು ಗೇರುಸೊಪ್ಪೆಯನ್ನು 'ಗೆರ್ಸೋಪ್' ಎಂದು ಕರೆದಿದ್ದಾನೆ.2 ಈತನ ಬರಹದಿಂದ ನಮಗೆ ಈ ಪ್ರದೇಶದ 'ಕಲೆ–ವಾಸ್ತುಶಿಲ್ಪ'ದ ಬಗೆಗೂ ಅಲ್ಪಮಟ್ಟಿಗೆ ವಿಷಯಗಲು ಲಭ್ಯವಾಗುತ್ತವೆ. ದೇಐಾಲಯಗಳನ್ನು ಕಲ್ಲು ಹಾಗೂ ಮಣ್ಣಿನಿಂದ ನಿರ್ಮಿಸುತ್ತಿದ್ದರೆಂದೂ ಮತ್ತು ಆಕಳ ಸಗಣಿಯಿಂದ ಅವುಗಳನ್ನು ಶುಭ್ರಗೊಳಿಸುತ್ತಿದ್ದರೆಂದೂ ತಿಳಿದುಬರುತ್ತದೆ. ಈತ ಗೇರುಸೊಪ್ಪೆಗೆ ಬೆಟ್ಟಿಕೊಟ್ಟ ವೇಳೆಗಾಗಲೇ ಗೇರುಸೊಪ್ಪೆಯ ಸೌಂದರ್ಯ ಕಾಡುಪಾಲಾಗಿತ್ತು.

ಗೇರುಸೊಪ್ಪೆಯ ಗೋವರ್ದನಗಿರಿ ಕೋಟೆ : ಗೇರುಸೊಪ್ಪೆಯಲ್ಲಿನ ಉತ್ತರ ಪ್ರದೇಶದಲ್ಲಿರುವ ಕೋಟೆಯ ಬಗ್ಗೆ ಡೆಲ್ಲಾವಲ್ಲೆ ಬರೆದಿದ್ದಾನೆ. ಈ ವೇಳೆಗೆ ಈ ಕೋಟೆ ಕೆಳದಿಯ ವೆಂಕಟಪ್ಪನಾಯಕನ ಅಧೀನದಲ್ಲಿತ್ತೆಂದು ಆತನ ವಿವರಣೆಯಿಂದ ತಿಳಿದುಬರುತ್ತದೆ. 'ಗೋವರ್ಧನಗಿರಿ' ಎಂಬ ಪ್ರದೇಶವನ್ನು ಗೇರುಸೊಪ್ಪೆಯ ರಾಣಿ ಚೆನ್ನಭೈರಾದೇವಿಯಿಂದ ವೆಂಕಟಪ್ಪನಾಯಕನು ಕಸಿದುಕೊಂಡ ಬಗ್ಗೆ ಲಿಂಗಣ್ಣ ಕವಿ ಬರೆದ 'ಕೆಳದಿ ನೃಪ ವಿಜಯಂ' ಕೃತಿಯಲ್ಲಿ ಉಲ್ಲೇಕಿಸಲಾಗಿದೆ.3 ಗೋವರ್ಧನ ಗಿರಿ ಪ್ರದೇಶದಲ್ಲಿ ಬರುವ ಈ ಕೋಟೆಯನ್ನು ವೆಂಕಟಪ್ಪ ನಾಯಕನು ಈ ಪ್ರದೇಶವನ್ನು ಕಸಿದುಕೊಳ್ಳುವುದಕ್ಕಿಂತ ಮುಂಚೆಯೇ ನಿರ್ಮಿಸಲಾಗಿತ್ತೋ ಅಥವಾ ನಂತರದಲ್ಲಿ ನಿರ್ಮಿಸಲಾಯಿತೋ ಎನ್ನುವುದನ್ನು ಸಂಶೋಧಿಸಬೇಕಾಗಿದೆ.

ಗೇರುಸೊಪ್ಪೆಯಲ್ಲಿ ಈ ಕೋಟೆಯಿರುವ ಪ್ರದೇಶವನ್ನು ಸುತ್ತಾಡಿದರೆ ಇದು ಸುಮಾರು 3 ಕಿ.ಮೀ.ಗಳಿಗಿಂತಲೂ ವಿಸ್ತಾರವಾಗಿರಬಹುದೇನೋ ಎನಿಸುತ್ತದೆ. ಸುಭದ್ರವಾಗಿ ಬಿಳಿಪು ಮಿಶ್ರಿತ ಕಪ್ಪು ಶಿಲೆಯಿಂದ ಹೊರ ಆವರಣವನ್ನು ಕಟ್ಟಲಾಗಿದೆ. ಹಲವಾರು ಸುತ್ತುಗಳಿಂದ ಕೂಡಿದ ಈ ಕೋಟೆಯಲ್ಲಿ ಸಣ್ಣ ಸಣ್ಣ ಶಿಲಾಚಪ್ಪಡಿಗಳನ್ನು ಮಾತ್ರವಲ್ಲದೇ ಮಣ್ಣನ್ನು ಕೂಡ ಬಳಸಲಾಗಿದೆ. ಪ್ರವೇಶದ್ವಾರದ ಲಲಾಟ ಬಿಂಬದಲ್ಲಿ ಸುವ್ಯಲಲಿತಾಸನದಲ್ಲಿರುವ ಚತುರ್ಭುಜ ಗಣೇಶನನ್ನು ಕೆತ್ತಲಾಗಿದೆ.

ಕೋಟೆಗಿಂತ ತಗ್ಗು ಪ್ರದೇಶದಲ್ಲಿರುವ ಕೆರೆ : ಕೋಟೆಯ ಸ್ವಲ್ಪ ಕೆಳಗೆ ತಗ್ಗಾದ ಪ್ರದೇಶದಲ್ಲಿ ವಿಸ್ತಾರವಾದ ಕೆರೆಯೊಂದಿದೆ. ಇದರ ಮೂಲಸ್ವರೂಪ ನಿರ್ದಿಷ್ಟವಾಗಿ ಗಮನಕ್ಕೆ ಬರದಿದ್ದರೂ ನೀರಿನ ದೃಷ್ಟಿಯಿಂದ ಇದು ಆಗ ಪ್ರಮುಖ ಪಾತ್ರ ವಹಿಸಿರಬೇಕು. ಕೋಟೆಗೆ ಸಮೀಪಿಸಿಯೇ ಈ ಕೆರೆ ಇರುವುದರಿಂದ ಇದು ಅತ್ಯಂತ ಪ್ರಸಿದ್ಧಿ ಪಡೆದ ಕೆರೆಯಾಗಿದ್ದಿರಬಹುದು.

ಹನುಮಂತನ ಗುಡಿಯ ಕುರುಹು : ಕೆರೆಯ ಮೇಲ್ಗಡೆ ಕೋಟೆಗೆ ಹೋಗುವ ಮಾರ್ಗದಲ್ಲಿಯೇ ಹುಗಿದುಹೋದ ಹನುಮಂತನ ಗುಡಿಯೊಂದಿದೆ. ಹನುಮಂತನ ವಿಗ್ರಹ ಮೇಲ್ಗಡೆಯೇ ಪ್ರತ್ಯೇಕವಾಗಿದೆ. ಈಗ ಅಲ್ಲಿ ವಾಸಿಸುವ ಜನ ವಿಗ್ರಹವನ್ನು ಮೇಲ್ಗಡೆ ತೆಗೆದಿರಿಸಿದ್ದಾರೆ. ವಿಗ್ರಹ ಚೆನ್ನಾಗಿದ್ದು ವಿಜಯನಗರ ಶೈಲಿಯಲ್ಲಿದೆ. ದೇವಸ್ಥಾನಕ್ಕೆ ಬಳಸಿದ

ದ್ವಾರಬಂಧಗಳೆರಡು ಮುಕ್ಕಾಲು ಪಾಲು ಕುಸಿದಿದೆ. ಇದೇ ದೇವಸ್ಥಾನಕ್ಕೆ ಸಂಬಂಧಿಸಿದ ಶಿಲಾಶಾಸನವೊಂದು ಮುಕ್ಕಾಲು ಪಾಲು ಹುಗಿದಿದೆ. ಈ ಶಾಸನದ ತಲೆಯಲ್ಲಿ ಹನುಮಂತನ ಕೆತ್ತನೆಯಿದೆ. ಬಲ ಹಾಗೂ ಎಡಕ್ಕೆ ಚಕ್ರ-ಶಂಖದ ಕೆತ್ತನೆಯಿದೆ. ಶಾಸನದ ಎರಡು ಸಾಲುಗಳು ಮಾತ್ರ ಕಂಡುಬರುತ್ತವೆ. ಮಧ್ಯಯುಗೀನ ಹಳಗನ್ನಡ ಲಿಪಿಯಲ್ಲಿರುವ ಈ ಶಾಸನ ಮಹತ್ವದ್ದಾಗಿರಬೇಕು. ಕಾರಣ ಶಾಸನವನ್ನೊಳಗೊಂಡ ದೇವಸ್ಥಾನಗಳು ಐತಿಹಾಸಿಕವಾಗಿ ಪ್ರಮುಖ ಪಾತ್ರವಹಿಸುವ ಸಂಗತಿ ಸಂಶೋಧನೆಗಳಿಂದ ತಿಳಿದುಬರುವ ವಿಚಾರ. ಈ ಪ್ರದೇಶದಲ್ಲಿ ಭೂ-ಉತ್ಖನನ ನಡೆದರೆ ಹುಗಿದ ಈ ದೇವಸಥಾನದ ವಾಸ್ತುಶೈಲಿಯ ಚಿತ್ರ ದೊರೆಯಬಹುದು.

ಈ ಮೇಲಿನ ಹನುಮಂತನ ವಿಗ್ರಹದ ಲಕ್ಷಣಗಳನ್ನೇ ಒಳಗೊಂಡ ಇನ್ನೊಂದು ವಿಗ್ರಹ ಗೇರಸೊಪ್ಪೆಯ ಕೆಳಪ್ರದೇಶದಲ್ಲಿ ಈಗ ಆಧುನಿಕ ಕಟ್ಟಡವೊಂದರಲ್ಲಿ ಪೂಜೆಗೊಳ್ಳುತ್ತಿದೆ4 ಈ ದೃಷ್ಟಿಯಿಂದ ಐತಿಹಾಸಿಕ ಗೇರುಸೊಪ್ಪೆ ಹನುಮಂತನ ಆರಾಧನೆಯಲ್ಲಿ ಪ್ರಮುಖ ಪಾತ್ರ ಪಡೆದಿತ್ತೆನ್ನಬಹುದು. ಪ್ರವಾಸಿ ಪಿಯತ್ರೋ ಡೆಲ್ಲಾವಲ್ಲೆ ಕೂಡ ಆತ ಈ ಪ್ರದೇಶಗಳಿಗೆ ಭೇಟಿ ಕೊಟ್ಟ ವೇಳೆಯಲ್ಲಿ ಹನುಮಪ್ಪನ ಆರಾಧನೆಯನ್ನು ಕಣ್ಣಾರೆ ಕಂಡದ್ದನ್ನು ಬರೆದಿದ್ದಾನೆ. ಆದ್ದರಿಂದ ಆತ ಬರೆದ ವಿಷಯ ಕೋಟೆಯ ಸಮೀಪದ ಹನುಮಪ್ಪನ ಕುರಿತೇ ಆಗಿರಬೇಕು. ಇಲ್ಲಿಯ ಶಾಸನದ ಪಡಿಯಚ್ಚು ತೆಗೆದು, ಕೋಟೆಯ ಬಗೆಗೆ ವಿಷಯವೇನಾದರೂ ದೊರೆಯುವದೋ ಎಂಬುದನ್ನು ಪರಿಶೀಲಿಸಬೇಕಾಗಿದೆ.

ಕಾಳಿಗುಡಿ : ಈ ಮೇಲೆ ವಿವರಿಸಿದ ಹನುಮಂತನ ಗುಡಿಗೆ ಸಮೀಪಿಸಿಯೇ ಸಣ್ಣ ಸಣ್ಣ ಶಿಲಾ ಚಪ್ಪಡಿಗಳಿಂದ ನಿರ್ಮಿಸಿದ ಕಾಳಿಗುಡಿಯಿದೆ. ಈ ಗುಡಿಯಲ್ಲಿ ಕಾಳಿಯ ತಲೆಯ ಭಾಗವೊಂದನ್ನು ಕೆತ್ತಿ ಇರಿಸಿದ್ದಾರೆ. ಇದೇ ರೀತಿಯ ಇನ್ನೆರಡು ರುಂಡಗಳು ಗೇರುಸೊಪ್ಪೆಯ ಕೆಳಪ್ರದೇಶದಲ್ಲಿವೆ. ಈ ಪ್ರದೇಶವನ್ನು 'ಮಾರಿಗುಡಿ' ಎಂದೇ ಕರೆಯಲಾಗಿದೆ. ಈ ಸ್ಥಳದಲ್ಲಿ ಕೂಡ ಹನುಮಂತನ ಗುಡಿಯಿತ್ತೆಂದೂ, ಇಲ್ಲಿಯ ವಿಗ್ರಹವನ್ನೇ ಆಧುನಿಕ ಕಟ್ಟಡದಲ್ಲಿ ಇರಿಸಲಾಗಿದೆಯೆಂದೂ ಜನ ಹೇಳುತ್ತಾರೆ. ಆದ್ದರಿಂದ ಕಾಳಿ ಆರಾಧನೆ ಹಾಗೂ ಹನುಮಂತನ ಆರಾಧನೆ ಸಮೀಪದಲ್ಲಿಯೇ ನಡೆಯುತ್ತಿದ್ದವೆಂಬುದಕ್ಕೆ ಎರಡು ಸಾಕ್ಷ್ಯಗಳು ದೊರೆತಂತಾಯಿತು.

ನಗರ ಬಸ್ತಿಕೇರಿ : ಗೇರುಸೊಪ್ಪೆಯಲ್ಲಿ 'ನಗರ ಬಸ್ತಿಕೇರಿ' ಎಂಬ ವಿಸ್ತಾರವಾದ ಪ್ರದೇಶದಲ್ಲಿ ಜೈನ ವಾಸ್ತುಶಿಲ್ಪಗಳ ಸಂಖ್ಯೆಯೇ ಅಧಿಕವಾಗಿತ್ತೆಂದು ತಿಳಿದುಬರುತ್ತದೆ. ಶಾಸನಗಳಲ್ಲಿ ಕೂಡ 'ನಗರ ಬಸದಿ ಕೇರಿ' ಎಂದೇ ಈ ಪ್ರದೇಶವನ್ನು ಬರೆಯಲಾಗಿದೆ.5 ಬಸದಿಗಳೇ ಅಧಿಕವಾಗಿರುವದರಿಂದ ಈ ಹೆಸರು ರೂಢಿಯಾಗಿರಬಹುದು. ಸುಮಾರು 5 ಕಿ.ಮೀ. ಏರುಪೇರುಳ್ಳ ಈ ಪ್ರದೇಶದಲ್ಲಿ ಎಲ್ಲಿ ನೋಡಿದರೂ ಪಾಳುಬಿದ್ದ ಬಸದಿಗಳು, ಶಿಲಾ ಛಾವಣಿಗಳು, ಸ್ತಂಭಗಳು, ಚಿತ್ರಗಳುಳ್ಳ ಪಟ್ಟಿಕೆಗಳು ಮತ್ತು ದ್ವಾರಬಂಧುಗಳು ಮತ್ತು ಬಸದಿಗಳ ಅಧಿಷ್ಠಾನದ ಭಾಗಗಳು ಕಂಡುಬರುತ್ತವೆ. ಬಹುತೇಕ ಬಸದಿಗಳು ಕಡಗಲ್ಲು (ಲ್ಯಾಟರೈಟ್)ಗಳಿಂದಲೇ ನಿರ್ಮಿಸಿದವುಗಳಾಗಿವೆ.6 ಜನ ವಾಸ್ತವ್ಯದ ನೆಲೆಗಳು ನೀರಿಗಾಗಿ ಉಪಯೋಗಿಸಿದ ನೂರಾರು ಕೆರೆ-ಬಾವಿಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ. ಬಾವಿಗಳ ರಚನೆಯಲ್ಲಿ ಸಾಮ್ಯತೆಯಿದೆ. ನಗರಬಸ್ತಿಕೇರಿಯಲ್ಲಿ ಶೈವ-ವೈಷ್ಣವ ವಾಸ್ತುಶಿಲ್ಪ ಕುರುಹುಗಳೂ ಇಲ್ಲದಿಲ್ಲ. ಮೂರ್ತಿಶಿಲ್ಪಗಳೂ ಅಧಿಕ ಸಂಖ್ಯೆಯಲ್ಲಿ ಲಭ್ಯವಾಗುತ್ತವೆ.

ಚತುರ್ಮುಖ ಬಸದಿ : ಈಗಾಗಲೇ ಅಧ್ಯಯನಕ್ಕೆ ಒಳಗಾದ ಚತುರ್ಮುಖ ಬಸದಿಯಲ್ಲಿ ಅಧ್ಯಯನಕ್ಕೆ ಯೋಗ್ಯವಾದ ಹಲವಾರು ವಿಷಯಗಳಿವೆ. ಅಧ್ಯಯನದ ದೃಷ್ಟಿಯಿಂದ ಅಧಿಷ್ಠಾನದಲ್ಲಿನ ಚಿತ್ರಪಟ್ಟಿಕೆಗಳೂ, ಭಿತ್ತಿ ಭಾಗದಲ್ಲಿ ತುಂಬಿರತಕ್ಕ ವಿಭಿನ್ನ ಶೈಲಿಯ ದೇವಕೋಷ್ಠಗಳೂ, ನವರಂಗ ಹಾಗೂ ಗರ್ಭಗೃಹದಲ್ಲಿನ ಛತ್ತುಗಳೂ, ಸ್ತಂಭಗಳೂ ಮತ್ತು ಪ್ರವೇಶದ್ವಾರಗಳಲ್ಲಿ ಕೊರೆದ ದ್ವಿಭಂಗಿಯ ದ್ವಾರಪಾಲಕರ ಶಿಲ್ಪಗಳು ಪ್ರಾಮುಖ್ಯವೆನಿಸುತ್ತವೆ. ಮಾತ್ರವಲ್ಲ, ಬಸದಿಯ ಹೊರಗಡೆ ಮುಖ್ಯ ಅಧಿಷ್ಠಾನದ ಎಲ್ಲ ದಿಕ್ಕುಗಳ ಮೂಲೆಗಳಲ್ಲಿಯೂ ನಿಲ್ಲಿಸಿದ ಸರಳ ಅಲಂಕರಣೆಯ ಸ್ತಂಭಗಳೂ ಕೂಡ ಅಧ್ಯಯನದ ದೃಷ್ಟಿಯಿಂದ ಉಪಯುಕ್ತವಾದವುಗಳಾಗಿವೆ. ಈ ಸ್ತಂಭಗಳನ್ನು ಬಸದಿಯ ತಲೆಯ ಭಾಗದಿಂದ ಇಳಿಜಾರು ಛಾವಣಿಗಳನ್ನು ಜೋಡಿಸುವದಕ್ಕಾಗಿ ನಿಲ್ಲಿಸಿದ್ದರೆಂದು ತೋರುತ್ತದೆ. ಆದರೆ ಈ ಕೆಲಸವನ್ನು ಪೂರ್ತಿಗೊಳಿಸಿಲ್ಲ.

ಚತುರ್ಮುಖ ಬಸದಿಯನ್ನು ಮಾತ್ರ ಬಿಳಿಪು ಮಿಶ್ರಿತ ಕಪ್ಪು ಶಿಲೆಯಿಂದ ನಿರ್ಮಿಸಲಾಗಿದೆ. ಉಳಿದ ಬಸದಿಗಳೆಲ್ಲವೂ ಕೇವಲ ಮುಖ್ಯ ಭಾಗಗಳನ್ನಷ್ಟೇ ಶಿಲೆಯಿಂದ ಪಡೆದಿವೆ. ಕಡಗಲ್ಲಿನಿಂದ ನಿರ್ಮಿತವಾದ ಇಂತಹ ಬಸದಿಗಳು ಬಹುಬೇಗ ನಶಿಸಿದವು. ಗರ್ಭಗೃಹದ ಮೂಲ ವಿಗ್ರಹಗಳು ಮಾತ್ರ ಶಿಲೆಯಿಂದಾಗಿದ್ದು ಸೂಕ್ಷ್ಮ ಕೆತ್ತನೆಗೆ ಒಳಗಾಗಿವೆ. ಇವುಗಳ ದಿವ್ಯ ತೇಜಸ್ಸಿಗೆ ಸರಿ ಸಮಾನವಾದವುಗಳು ಹೊರ ಆವರಣದ ಕಡಗಲ್ಲಿನ ಕಟ್ಟಡಗಳು; ಇದಕ್ಕೆ ಕಾರಣ ಈ ಪ್ರದೇಶದಲ್ಲಿ ವಿರಳವಾಗಿರುವ ಶಿಲೆಯದ್ದೇ ಇರಬೇಕು. ಮಧ್ಯಯುಗೀನ ಕಾಲದಲ್ಲಿ ಜೈನರಲ್ಲಿ ಚತುರ್ಮುಖಬಸದಿ ಪ್ರಮುಖ ಪಾತ್ರವಹಿಸುತ್ತಾದ್ದರಿಂದ ಇದನ್ನು ಮಾತ್ರ ಪೂರ್ತಿಯಾಗಿ ಶಿಲೆಯಿಂದಲೇ ನಿರ್ಮಿಸಿರಬೇಕು.

ಒಟ್ಟಾರೆ ಗೇರುಸೊಪ್ಪೆಯಲ್ಲಿ ವಾಸ್ತುಶಿಲ್ಪ, ಮೂರ್ತಿಶಿಲ್ಪ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ಇನ್ನೂ ಹೆಚ್ಚಿನ ವ್ಯಾಸಂಗವನ್ನು ಕೈಗೊಳ್ಳಬಹುದು. ಇದಕ್ಕೆ ಈಗಾಗಲೇ ಪ್ರಕಟವಾದ ಮತ್ತು ಸಂಶೋಧಿಸಬಹುದಾದ ಶಾಸನಗಳನ್ನು ಮೂಲಾಧಾರಗಳಾಗಿ ಪಡೆಯಬಹುದು.

ಅಡಿಟಿಪ್ಪಣಿಗಳು

1. ಸೌ.ಇಂ.ಇನ್ಸ್. ಸಂ. VII 202, 207
2. ದಿ ಟ್ರವಲ್ಸ್ ಆಫ್ ಪಿಯತ್ರೋಡೆಲ್ಲಾಲ್ಲೆ ಇನ್ ಇಂಡಿಯಾ (ಲಂಡನ್) 1892
3. 'ಕೆಳದಿ ನೃಪ ವಿಜಯಂ' : ಲಿಂಗಣ್ಣ ಕವಿ
4. ಉತ್ತರ ಕನ್ನಡ ಗೆಜೇಟೀರ್ ಸಂ. ಕಾಮತ್ ಸೂರ್ಯನಾಥ್
5. ಎಮ್.ಎ.ಆರ್. 1928
6. ಚಾಲುಕ್ಯನ್ ಅರ್ಕಿಟೆಕ್ಚರ್ : ಕಝೀನ್ಸ್ ಹೆನ್ರಿ

❏

ಗೇರುಸೊಪ್ಪೆಯಲ್ಲಿ ಜೈನೇತರ ವಾಸ್ತು ಶಿಲ್ಪಾವಶೇಷಗಳು

– ಎಂ.ಎಸ್. ಹೆಗಡೆ ಕಣ್ಣಿ

ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಲ್ಲಿ ಪೂರ್ವಕ್ಕೆ 32 ಕಿ.ಮೀ. ದೂರದಲ್ಲಿರುವ 'ಗೋರುಸೊಪ್ಪೆ' ಪ್ರದೇಶ ಜೈನ ಸಾಳುವ ಮನೆತನದಿಂದ ಸುಮಾರು 400 ವರುಷಗಳಿಗೂ ಮಿಕ್ಕಿ ಆಡಳಿತಕ್ಕೆ ಒಳಗಾಗಿತ್ತು ಎಂಬುದು ಶಾಸನೀಯ ದಾಖಲೆ. ಗೇರುಸೊಪ್ಪೆಯ 'ನಗರಬಸ್ತೀ ಕೇರಿ' ಎಂಬ ಪ್ರದೇಶದಲ್ಲಿ ಜೈನಧರ್ಮದ ಕುರಿತಾದ ವಾಸ್ತುಶಿಲ್ಪಾವಶೇಷಗಳು ಅಧಿಕವಾಗಿ ಸಿಗುತ್ತವೆಯಾದರೂ ಅನ್ಯಧರ್ಮಗಳಾದ ಶೈವ ಮತ್ತು ವೈಷ್ಣವ ವಾಸ್ತುಶಿಲ್ಪಾವಶೇಷಗಳೂ ಇಲ್ಲದಿಲ್ಲ. ಈ ಪ್ರದೇಶದ ತುಂಬೆಲ್ಲ ಇಂಥ ಅಂಶಗಳು ಗೋಚರಿಸುತ್ತವೆ. ಉದಾಹರಣೆಗಾಗಿ ಗೋವರ್ಧನಗಿರಿ ಮತ್ತು ನಗರ ಎಂಬ ಸ್ಥಳಗಳನ್ನು ಇಲ್ಲಿ ಹೆಸರಿಸಬಹುದು. ಜೈನ ಧರ್ಮಾಚರಣೆಯ ಸಾಳುವ ದೊರೆಗಳು ಈ ಧರ್ಮವನ್ನು ಪ್ರಬಲವಾಗಿ ಅನುಸರಿಸುತ್ತಿದ್ದರೆಂಬುದಕ್ಕೆ ಇತರ ಧರ್ಮಾಯರಿಗೂ ಒಗ್ಗುವ ಹಾಗೆ ಅನ್ಯಧರ್ಮ ಪೋಶಕರೂ ಆಗಿದ್ದರೆಂಬುದಕ್ಕೆ ಅಳಿದುಳಿದ ವಾಸ್ತುಶಿಲ್ಪಾವಶೇಷಗಳು ಮತ್ತು ಶಾಸನಗಳು ಒಳ್ಳೆಯ ಆಧಾರಗಳಾಗಿವೆ.

ನಗರ ಬಸ್ತೀಕೇರಿಯಲ್ಲಿನ ಪ್ರಮುಖ ಬಸದಿಗಳಾದ ಚತುರ್ಮುಖ ಬಸದಿ, ನೇಮನಾಥ ಬಸದಿ, ವರ್ಧಮಾನ ಬಸದಿ ಮತ್ತು ಪಾರ್ಶ್ವನಾಥ[1] ಬಸದಿಗಳಲ್ಲಿ ನಡುವೆ ವಿಸ್ತಾರವಾದ ಪ್ರಾಂಗಣದಲ್ಲಿ ಈ ಶೈವಾಲಯವನ್ನು ನಿರ್ಮಿಸಲಾಗಿತ್ತು. ಇದು ಜೀರ್ಣಾವಸ್ಥೆಯಲ್ಲಿದ್ದರೂ ಕೂಡ ಅಧ್ಯಯನಕ್ಕೆ ಕೆಲವು ಅಂಶಗಳನ್ನು ಕೊಡಬಲ್ಲದು. ಸದ್ಯಕ್ಕೆ ಗರ್ಭಗುಡಿಯಲ್ಲಿರುವ ಶಿವಲಿಂಗ ಮೂಲಸ್ಥಿತಿಯಲ್ಲಿ ಇಲ್ಲವಾದರೂ ಅಭ್ಯಸಿಸುವುದಕ್ಕೆ ಯೋಗ್ಯವಾಗಿದೆ. ಬ್ರಹ್ಮಸೂತ್ರದಲ್ಲಿರುವ ಈ ಲಿಂಗ ಸಾಳುವ ದೊರೆಗಳ ಕೊಡುಗೆಯೇ ಎನ್ನಬಹುದು. ಉಳಿದಲ್ಲಿ ಬಸದಿಗಳ ರಚನೆಯಲ್ಲಿ ಸಾಮ್ಯತೆಯಿದ್ದರೂ ಕೂಡ ಈ ಶೈವಾಲಯದ ರಚನೆ ಅವುಗಳಿಗಿಂತ ತುಸು ಭಿನ್ನತೆಯಿಂದ ಕೂಡಿದೆ. ಈ ಹಿನ್ನೆಲೆಯಲ್ಲಿ ಹೇಳುವುದಾದರೆ ಮೂಲತಃ ಇದು ಶೈವಾಲಯವೇ ಆಗಿತ್ತೆಂದು ತರ್ಕಿಸಬಹುದು. ಇಲ್ಲಿಯ ಶೈವಧರ್ಮದ ಅಸ್ಥಿತ್ವದ ಯಾವುದೇ ದಾಖಲೆ ಲಭಿಸಿಲ್ಲ.

ಶೈವ ಧರ್ಮದ ಪ್ರಭಾವ ಗೇರುಸೊಪ್ಪೆಯಲ್ಲಿ ಪ್ರಬಲವಾಗಿತ್ತೆಂಬುದಕ್ಕೆ ಆಧಾರವಾಗಿ ನಗರ ಬಸ್ತೀಕೇರಿಯಲ್ಲಿಯೇ ಇರುವ ಇನ್ನೆರಡು ವೀರಭದ್ರ ವಿಗ್ರಹಗಳು ಸಾಕ್ಷಿಗಳಾಗಿವೆ.2 ಇದರಂತೆ ಅಳಿದುಳಿದ ವಾಸ್ತುಶಿಲ್ಪಾವ ಶೇಷಗಳೂ ಕೂಡ ಸಾಕ್ಷಿಗಳು. ವಿಗ್ರಹಗಳನ್ನು ಕಲೆದುಕೊಂಡ ಕೆಲವು ಕಟ್ಟಡಗಳಿದ್ದು, ಇವು ರಚನೆಯಲ್ಲಿ ಬಸದಿಗಳಿಗಿಂತ ಭಿನ್ನವಾಗಿವೆ. ಸರಳ ಅಲಂಕರಣೆಯ ದ್ವಾರಬಂಧಗಳನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ನೋಡಿದರೆ ಬಹುಶಃ ಇಂತಹ ಅವಶೇಷಗಳು ಶೈವಾಲಯಗಳೇ ಆಗಿದ್ದವೆಂಬುದರಲ್ಲಿ ಸತ್ಯತೆಯಿದ್ದಂತೆ ತೋರುತ್ತದೆ. ಅಲ್ಲಲ್ಲಿ ಬಿದ್ದ ಪಾಣೀಪೀಠ ಭಾಗಗಳೂ ಸಹಿತ ಇಂತಹ ದೇಗುಲಗಳು ಶೈವಾಲಯಗಳೇ ಆಗಿದ್ದವೆಂದು ಪ್ರಚುರಪಡಿಸುತ್ತವೆ. ಗಣೇಶನ ಒಂದು ವಿಗ್ರಹ ಹಾಗೂ ನಂದಿಯ ಎರಡು ವಿಗ್ರಹಗಳು ಈ ಪ್ರದೇಶಗಳಲ್ಲಿವೆ. ಈ ಹಿನ್ನೆಲೆಯೊಂದಿಗೆ ಬರೆಯುವುದಾದರೆ ಗೇರುಸೊಪ್ಪೆ ಪ್ರದೇಶ ಶೈವ ಧರ್ಮೀಯದಿಂದಲೂ ಕೇಂದ್ರೀಕರಿಸಲ್ಪಟ್ಟಿರಬೇಕು. ಜೈನ ಸಾಳುವ ಮನೆತನಕ್ಕಿಂತ ಹಿಂದೆಯೇ ಇಲ್ಲಿ ಶೈವ ಧರ್ಮದ ಕಾರ್ಯಾಚರಣೆಗಳು ನಡೆದಿರಬೇಕೆಂಬುದರಲ್ಲಿ ಸತ್ಯತೆಯಿದೆ. ಕಾರಣ ಗೇರುಸೊಪ್ಪೆಯಲ್ಲಿನ ಸುತ್ತಮುತ್ತಲ ಪ್ರದೇಶಗಳಲ್ಲಿ

ಕೂಡ ಶೈವಾಲಯಗಳು ಮೂಲ ವಿಗ್ರಹಗಳೊಡನೆ (ಲಿಂಗವೂ ಸೇರಿ) ಜೀರ್ಣವಾಗಿರುವುದು ತೋರುತ್ತದೆ. ಇಂತಹ ಅವಶೇಷಗಳು ಸಾಳುವ ದೊರೆಗಳ ಅಭಿವೃದ್ಧಿ ದಿನಗಳಿಗಿಂತ ಹಿಂದಿನ ಲಕ್ಷಣಗಳನ್ನು ಸೂಚಿಸುತ್ತವೆ. ಈ ಆಧಾರದ ಮೇಲೆ ಚಿಂತಿಸುವುದಾದರೆ ಗೇರುಸೊಪ್ಪೆಯಲ್ಲಿನ ಶೈವ ಧರ್ಮದ ಹಿನ್ನೆಲೆಯ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆಯಾಗಬೇಕಾಗಿದೆ. ಈ ಕುರಿತ ಪ್ರಯತ್ನ ಅಗತ್ಯ.

ಈ ಪ್ರದೇಶದಲ್ಲಿರುವ ವೈಷ್ಣವ ವಾಸ್ತು ಶಿಲ್ಪಾವಶೇಷಗಳು (ಕೆಲಮಟ್ಟಿಗೆ ಇದೆ) ಅಧ್ಯಯನ ಯೋಗ್ಯ. ಸಾಳುವ ದೊರೆಗಳಲ್ಲಿ ಪ್ರಖ್ಯಾತಳಾದ ರಾಣಿ ಚೆನ್ನಭೈರಾದೇವಿಯ ಕಾಲದಲ್ಲಿ (1575ರಲ್ಲಿ) ನಿರ್ಮಾಣವಾದ ನಗರ ಬಸ್ತೀಕೇರಿಯಲ್ಲಿನ 'ತಿರುವೆಂಗಳನಾಥ ಸ್ವಾಮಿ' ದೇವಸ್ಥಾನವೊಂದು3 ವಾಸ್ತುಶಿಲ್ಪದ ದೃಷ್ಟಿಯಿಂದ ವಿಶಿಷ್ಟ. ತಿಮ್ಮಪ್ಪ ಸೇನುಭೋವನೆಂಬವನು ಈ ದೇವಸ್ಥಾನವನ್ನು ಕಟ್ಟಿಸಿ ಅದರಲ್ಲಿ ತಿರುವೆಂಗಳನಾಥ ಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪಿಸಿದನೆಂದೂ, ರಾಣಿ ಚೆನ್ನಭೈರಾದೇವಿ ಹೆಸರಿನಲ್ಲಿ ಅಲ್ಲಿ ಪೂಜೆ ಪುನಸ್ಕಾರ ನಡೆಯುವಂತೆ ನೋಡಿಕೊಂಡನೆಂದೂ ಮತ್ತು ಈ ಕ್ರಮವನ್ನು ತನ್ನ ವಂಸೀಯರು ಮುಂದುವರಿಸಬೇಕೆಂದು ಭೂಮಿಯನ್ನು ದಾನಮಾಡಿನ ಸಂಗತಿಯನ್ನು ಇದೇ ದೇವಾಲಯದ ಆವರಣದಲ್ಲಿರುವ ಶಿಲಾಶಾಸನವು ತಿಳಿಸುತ್ತದೆ.[4] ವಿಗ್ರಹವಿಲ್ಲದಿರುವ ಈಗಿನ ಈ ದೇವಾಲಯ ಜೀರ್ಣ ಸ್ಥಿತಿಯಲ್ಲಿ ಇದೆ.

ವಾಸ್ತುವಿನ್ಯಾಸದ ದೃಷ್ಟಿಯಿಂದ ಹೇಳುವುದಾದರೆ ಗೇರುಸೊಪ್ಪೆಯಲ್ಲಿ ಉಪಲಬ್ಧವಿರುವ ಐತಿಹಾಸಿಕ ಕಟ್ಟಡಗಳಲ್ಲಿಯೇ ಇದು ಬಿನ್ನವಾದದ್ದು. ಮೂಲ ಸ್ವರೂಪವನ್ನು ತೋರ್ಪಡಿಸುವ ಈ ತಿರುವೆಂಗಳನಾಥ ಸ್ವಾಮಿ ದೇಗುಲದ ಅಧಿಷ್ಠಾನ, ಭಿತ್ತಿ, ಕಪೋತ, ಗರ್ಭಗುಡಿ ಅಂತರಾಳ ಅಥವಾ ನವರಂಗ ಎಂಬ ವಿಭಿನ್ನ ಭಾಗಗಳನ್ನು ಗುರುತಿಸಬಹುದು. ಎತ್ತರವಾದ ಅಧಿಷ್ಠಾನವಿದ್ದು ಅಷ್ಟೇನೂ ಅಲಂಕರಣೆಗಳಿಲ್ಲ. ಉಪಾನ, ಜಗತಿ, ಕಂಠ ಮತ್ತು ಗ್ರೀವ ಎಂಬ ಭಾಗಗಳು ಅಧಿಷ್ಟಾನದಲ್ಲಿ ಗೋಚರಿಸುತ್ತವೆ. ಭಿತ್ತಿ ಅಥವಾ ಗೋಡೆ ಭಾಗಗಳಲ್ಲಿ ಕಡಗಲ್ಲುಗಳನ್ನು (ಲ್ಯಾಟ್‌ರೈಟ್) ಶಿಲ್ಪಿ ನಯವಾಗಿ ಮತ್ತು ವಿಶಿಷ್ಠವಾಗಿ ಬಳಸಿಕೊಂಡಿದ್ದಾನೆ. ಗೋಡೆಯ ಹೊರಭಾಗದಲ್ಲಿ ಏರಿಳಿತ ಅಥವಾ ಹಿಂಬಣೆ ಮುಂಬಣೆಗಳಿವೆ. ಇಂತಹ ಪಟ್ಟಿಕೆಗಳು ಗೋಡೆಯ ತುಂಬೆಲ್ಲ ಗೋಚರಿಸುತ್ತವೆ.[5]

ಗರ್ಭಗುಡಿ ಹಾಗೂ ಅಂತರಾಳ (ನವರಂಗ)ಗಳು ಚಚ್ಚೌಕವಾಗಿದ್ದು ಒಂದೇ ಪ್ರಮಾಣದಲ್ಲಿವೆ. ಇವುಗಳ ಹೊರಗೆ ಪ್ರದಕ್ಷಿಣಾ ಪಥವು ಸುತ್ತುವರಿದಿದೆ. ಇದರಿಂದಾಗಿ ಇದೊಂದು ಸಾಂದಾರ ಶೈಲಿಯ ದೇಗುಲ. ಗರ್ಭಗುಡಿ ಹಾಗೂ ಅಂತರಾಳಗಳ ಸಮಪ್ರದೇಶಗಳಿಗಿಂತ ತಗ್ಗು ಪ್ರದೇಶದಲ್ಲಿ ಪ್ರದಕ್ಷಿಣಾ ಪಥವಿದೆ. ಪ್ರದಕ್ಷಿಣೆ ಮಾಡುವುದರ ಮೂಲಕ ಮೆಟ್ಟಿಲುಗಳನ್ನೇರಿ ಅಂತರಾಳ ಹಾಗೂ ಗರ್ಭಗುಡಿಯನ್ನು ಪ್ರವೇಶಿಸುವ ವ್ಯವಸ್ಥೆಯು ಈ ದೇಗುಲಕ್ಕಿತ್ತು. ಕುಸಿದ ಈ ದೇಗುಲದ ಸುತ್ತಲೂ ಕಡಗಲ್ಲಿನಿಂದಲೇ ಕೊರೆದ ಕಮಾನಾಕೃತಿಯ ತುಂಡುಗಳು ಬಿದ್ದಿವೆ. ಬಹುಶಃ ಇವು ಗರ್ಭಗುಡಿ ಹಾಗೂ ಗೋಡೆ ಭಾಗದ ತಲೆಯ ಮೇಲಿಂದ ಸಂಪರ್ಕ ಹೊಂದಿದ್ದವು. ಈ ಸಂಶಯಕ್ಕೆ ಬರಲು ಕಾರಣವೇನೆಂದರೆ ಒಂದು ಕಮಾನಾಕೃತಿಯಕಲ್ಲಿನ ತುಂಡು ಗೋಡೆ ಭಾಗಕ್ಕೆ ಸೇರಿಕೊಂಡಿದೆ. ಇಂಥ ವ್ಯವಸ್ಥೆ ಗೇರುಸೊಪ್ಪೆಯಲ್ಲಿಯ ಇನ್ನಾವುದೇ ಅಳಿದುಳಿದ ದೇವಸ್ಥಾನಗಳಲ್ಲಿ ಗಣನೆಗೆ ಬರಲಾರದು. ಅಧಿಷ್ಟಾನ, ಗೋಡೆ (ಭಿತ್ತಿ), ಪ್ರದಕ್ಷಿಣಾ ಪಥ, ಗರ್ಭಗುಡಿ ಅಂತರಾಳ ಮತ್ತು ಕಮಾನಾಕೃತಿಯ ರಚನೆಗಳಿಂದಾವೃತವಾದ ಕಲ್ಲು ತುಂಡುಗಳಲ್ಲಿ ಭಿನ್ನವಾದ ಲಕ್ಷಣಗಳು ಗ್ರಹಿಕೆಗೆ ಬರುತ್ತವೆ. ಪೂರ್ತಿಯಾಗಿ ಕಡಗಲ್ಲುಗಳಿಂದ ರಚನೆಯಾದ ಈ ತಿರುವೆಂಗಳನಾಥ ಸ್ವಾಮಿ ದೇವಾಲಯ ಗೇರುಸೊಪ್ಪೆಯ ವಾಸ್ತುವಿನ್ಯಾಸದ ಪ್ರಾದೇಶಿಕ ಶೈಲಿಗೆ ಉತ್ತಮ ಉದಾಹರಣೆ.

ಗೇರುಸೊಪ್ಪೆಯ ಗೋವರ್ಧನಗಿರಿ ಪ್ರದೇಶದಲ್ಲಿ ಹಾಗೂ ನಗರಬಸ್ತೀಕೇರಿ ಎಂಬ ಕೇಂದ್ರ ಪ್ರದೇಶದಲ್ಲಿ ವೈಷ್ಣವ ಧರ್ಮದ ಎರಡು ಹನುಮಂತನ ದೇವಸ್ಥಾನಗಳಿದ್ದವೆಂಬುದಕ್ಕೆ ಹನುಮಂತನ ವಿಗ್ರಹಗಳು ಲಭ್ಯವಿದೆ. ಗೋವರ್ಧನಗಿರಿಯ ಕೋಟೆಯ ಆವರಣದಲ್ಲಿರುವ ಒಂದು ವಿಗ್ರಹ ಕೆಲವು ವಾಸ್ತು ಅವಶೇಷಗಳಿಂದ ಇರುವುದನ್ನು ಕಾಣಬಹುದು.6 ಇನ್ನೊಂದು ವಿಗ್ರಹ ನಗರಬಸ್ತೀಕೇರಿಯ ಆಧುನಿಕ ದೇವಾಲಯದಲ್ಲೂ ಈಗ ಪೂಜೆಗೆ ಒಳಗಾಗಿದೆ.[7] ಇದೂ ಅಲ್ಲದೇ ಗೇರೊಸೊಪ್ಪೆಯ ಸುತ್ತಮುತ್ತಲ ಪ್ರದೇಶಗಳಲ್ಲೂ ವೈಷ್ಣವ ದೇವಸ್ಥಾನಗಳು ಇವೆ. ವಿಷ್ಣು ವಿಗ್ರಹಗಳು ಕಂಡುಬರುತ್ತದೆ.

ಈ ನಿಟ್ಟಿನಲ್ಲಿ 'ಗೇರುಸೊಪ್ಪೆ', ಜೈನ ಸಾಳುವ ಮನೆತನದವರಿಂದ ವಿಶೇಷವಾಗಿ ಜೈನ ವಾಸ್ತುಶಿಲ್ಪವಶೇಷಗಳಿಗೆ ಹೆಸರಾಗಿದ್ದರೂ ಶೈವ, ವೈಷ್ಣವ ಮತ್ತು ಶಾಕ್ತ ವಾಸ್ತುಶಿಲ್ಪವಶೇಷಗಳನ್ನು ಕೂಡ ಗಣನೆಗೆ ಮಾಡಬೇಕು. ಕೆಲವೊಮ್ಮೆ ಇದಕ್ಕೆ ಶಾಸನಾಧಾರವಿದೆ. ಈ ಕುರಿತು ಗೇರುಸೊಪ್ಪೆ ಪ್ರದೇಶದಲ್ಲಿರುವ ಜೈನ ಧರ್ಮೇತರ ಶೈವ ಮತ್ತು ವೈಷ್ಣವ ಧರ್ಮಗಳ ಆಸ್ತಿತ್ವದ ಅವಶೇಷಗಳಿರುವುದನ್ನು ಸಹ ಗ್ರಹಿಸಿ ಇನ್ನು ಹೆಚ್ಚಿನ ಸಂಶೋಧನೆ ನಡೆಸಬೇಕಾಗಿದೆ.

ಆಕರ ಗ್ರಂಥಗಳು – ಟಿಪ್ಪಣಿಗಳು

1. ಕಜಿನ್ಸ್, ಹೆನ್ರಿ : "ಗೇರ್ಸಪ್ಪಾ ಓಲ್ಡ್ ಸೈಟ್ ಅಂಡ್ ರುಯಿನ್ ಟೆಂಪಲ್ಸ್', 'ಚಾಲುಕ್ಯನ್ ಆರ್ಕಿಟೆಕ್ಚರ್ ಆಫ್ ದಿ ಕೆನರೀಸ್ ಡಿಸ್ಟ್ರಿಕ್ಟ್' – ಕಲ್ಕತ್ತಾ, 1926, ಪುಟ 126.
2. ಹೆಗಡೆ ಕಣ್ಣೆ ಎಂ.ಎಸ್. : "ಗೇರುಸೊಪ್ಪೆ – ಒಂದು ಸಾಂಸ್ಕೃತಿಕ ಅಧ್ಯಯನ", 'ಗೇರುಸೊಪ್ಪೆಯ ಮೂರ್ತಿಶಿಲ್ಪ ಕಲೆ', ಪುಟ 217 – (ಎಂ.ಫಿಲ್. ಪ್ರಬಂಧ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1991), ಅಪ್ರಕಟಿತ
3. ಕಾಮತ್ ಸೂರ್ಯನಾಥ ಯು. (ಸಂ.), 'ಕರ್ನಾಟಕ ಸ್ಟೇಟ್ ಗೆಜೆಟಿಯರ್ ಉತ್ತರ ಕನ್ನಡ ಡಿಸ್ಟ್ರಿಕ್', ಪು. 910.
4. ಎಂ.ಎ.ಆರ್., 1928, ಬೆಂಗಳೂರು, 1929, ಶಾಸನ ಸಂಖ್ಯೆ 112, ಪುಟ 101.
5. ಹೆಗಡೆ ಕಣ್ಣೆ ಎಂ.ಎಸ್. : ಗೇರುಸೊಪ್ಪೆ – ಒಂದು ಸಾಂಸ್ಕೃತಿಕ ಅಧ್ಯಯನ, ಗೇರುಸೊಪ್ಪೆ ವಾಸ್ತುಕಲೆ, ಪುಟ 164.
6. ಅದೇ, ಪುಟ 214.
7. ಅದೇ, ಪುಟ 212.

❑

ಹಿರೇಗುತ್ತಿಯ ಹೊಸ ಶಾಸನ – ಶಿಲ್ಪಗಳು

– ಜಯಶ್ರೀ ಬಿ. ದೇಶಮಾನ್ಯೆ

ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನ ಹಿರೇಗುತ್ತಿ ಗ್ರಾಮದ ಸುಮಾರು ಒಂದು ಕಿ.ಮೀ. ದೂರದಲ್ಲಿರುವ ಹಾಳುಬಿದ್ದ ಸ್ಥಳದಲ್ಲಿ ಒಂದು ಜಿನ ವಿಗ್ರಹವಿದ್ದು, ಈ ಸ್ಥಳವನ್ನು ಸ್ಥಳೀಕರು ಜೈನ ಬಸದಿಯೆಂದು ಕರೆಯುತ್ತಾರೆ. ಅದಕ್ಕೆ ಪೂರಕವೆಂಬಂತೆ ಬಸದಿಯ ಅಧಿಷ್ಠಾನದ ಭಾಗವೂ ಅಲ್ಲಿದೆ. ಈ ಸ್ಥಳದಲ್ಲಿ ತೀರ್ಥಂಕರನ ಉಬ್ಬುಶಿಲ್ಪವಿದೆ. ತೀರ್ಥಂಕರನು ಪದ್ಮಾಸನದಲ್ಲಿ ಕುಳಿತಿದ್ದು, ಕೈಗಳು ಯೋಗಮುದ್ರೆಯಲ್ಲಿವೆ. ಸಂಪೂರ್ಣ ನಗ್ನನಾಗಿರುವ ಈತ ನಿರಾಭರಣನಾಗಿದ್ದಾನೆ. ಶಿರದ ಹಿಂಭಾಗದಲ್ಲಿ ಪ್ರಭಾವಲಯವಿದೆ. ತೀರ್ಥಂಕರನ ಇಕ್ಕೆಲಗಳಲ್ಲಿ ಚಾಮರದಾರಿಗಳು ನಿಂತಿರುವರು. ದ್ವಿಭುಜಧಾರಿಗಳಾಗಿರುವ ಇವರು ಒಂದು ಕೈಯಲ್ಲಿ ಚಾಮರವನ್ನು ಹಿಡಿದಿದ್ದು, ಆಭರಣಗಳಿಂದ ಭೂಷಿತರಾಗಿದ್ದಾರೆ.

ಈ ಶಿಲ್ಪದ ಪೀಠದ ಮೇಲೆ ಶಾಸನವನ್ನು ಕೆತ್ತಲಾಗಿದೆ. ಶಾಸನದ ಪಾಠ ಈ ಕೆಳಗಿನಂತಿದೆ.

ಶಾಸನದ ಪಾಠ :

1. ಶ್ರೀ ಮ.ಸಯ್ಯ... ಸೆಟ್ಟಿಯರುಂ ಸುಪುತ್ರ
2. ಬಮ್ಮಿ ಸೆಟ್ಟಿಯರು ಮುಖ್ಯವಾಗಿ ಸಮಸ್ತ ನಗರಂಗಳು
3. ಶ್ರೀ ಮೂಲಸಂಘದ ಕಾಣೂರ್ಗಣದ ಯಾದಿನಾಥ ಸ್ವಾಮಿ
4. ಯ ಪ್ರತಿಮೆಯಂ ಮಾಡಿಸಿ ಕೃತಾರ್ಥರಾದರು
5. ಮಂಗಳ ಮಹಾಶ್ರೀ

ಸಾರಾಂಶ : ಬಮ್ಮಿ ಸೆಟ್ಟಿ, ಸಮಸ್ತ ನಗರಗಳು ಶ್ರೀ ಮೂಲ ಸಂಘದ ಕಾಣೂರ್ಗಣದ ಆದಿನಾಥ ಸ್ವಾಮಿಯ ಪ್ರತಿಮೆಯನ್ನು ಮಾಡಿಸಿ ಕೃತಾರ್ಥರಾದರೆಂದು ಈ ಶಾಸನ ತಿಳಿಸುತ್ತದೆ.

ಈ ಶಾಸನದ ಅಕ್ಷರಗಳ ಶೈಲಿಯು ಸುಮಾರು ಕ್ರಿ.ಶ. 12ನೇ ಶತಮಾನದ್ದೆಂದು ತರ್ಕಿಸಬಹುದು. ಈ ಶಿಲ್ಪದ ದೇಹಾಂಗದ ಅಂಗಾಂಗಗಳನ್ನು ಪ್ರಮಾಣಬದ್ಧವಾಗಿ ಮತ್ತು ಸುಂದರವಾಗಿ ನಿರ್ಮಿಸಿರುವುದು ಗಮನೀಯ. ತಲೆಯ ಹಿಂಬದಿಗೆ ಇರುವ ಅರ್ಧವೃತ್ತಾಕಾರದ ಪ್ರಭಾಮಂಡಲದಲ್ಲಿ ಅಲಂಕರಣವನ್ನು ಕಾಣಬಹುದು. ಈ ಸ್ಥಳದಲ್ಲಿ ಜಿನ ಶಿಲ್ಪವಲ್ಲದೇ ಜೈನ ಬಸದಿಗೆ ಹೋಗುವ ದಾರಿಯಲ್ಲಿ ವಿಜಯನಗರ ಕಾಲದ ವೀರಗಲ್ಲುಗಳಿವೆ. ಇವುಗಳಲ್ಲಿ ಎರಡು ವೀರ ಸತಿಗಲ್ಲು, ಒಂದು ವೀರಗಲ್ಲು ಕಂಡು ಬರುತ್ತವೆ. ಒಂದನೆಯ ಸತಿಗಲ್ಲಿನಲ್ಲಿ ಸದ್ಯಕ್ಕೆ ಮೂರು ಪಟ್ಟಿಕೆಗಳಷ್ಟೇ ಕಂಡುಬರುತ್ತವೆ. ಕೆಳಗಿನ ಪಟ್ಟಿಕೆಯಲ್ಲಿ ವಾದ್ಯವೃಂದದವರಿದ್ದು, ಇವರೆಲ್ಲ ಸೀರೆಯನ್ನು ಧರಿಸಿದ್ದಾರೆ. ಮೇಲಿನ ಪಟ್ಟಿಕೆಯಲ್ಲಿ ಕೆಳಗಡೆ ಮೂರು ಜನ ವೀರರು ಕೈಮುಗಿದು ಕುಳಿತಿದ್ದಾರೆ. ಅವರ ಮೇಲ್ಭಾಗದಲ್ಲಿ ಶಿವಲಿಂಗಕ್ಕೆ ಪೂಜಿಸುತ್ತಿರುವ ವ್ಯಕ್ತಿ ಶಿವಲಿಂಗದ ಎಡಕ್ಕೆ ಕುಳಿತ ನಂದಿ ಚಿತ್ರಗಳಿವೆ.

ಈ ವೀರಸತಿಗಲ್ಲಿನಲ್ಲಿ ಬಹುಶಃ ಕೆಳಗಡೆ ಇನ್ನೊಂದು ಪಟ್ಟಿಕೆಯಿದ್ದು, ಅದರಲ್ಲಿ ವೀರರು ಹೋರಾಡುತ್ತಿರುವ ದೃಶ್ಯವಿರಬಹುದು. ಏಕೆಂದರೆ ಮೇಲಿನ ಪಟ್ಟಿಕೆಯಲ್ಲಿ ಮೂವರು ವೀರರನ್ನು ತೋರಿಸಿದ್ದು ಒಟ್ಟಾರೆ ಈ ವೀರಗಲ್ಲಿನಿಂದ ಆ ವೀರರು ಯುದ್ಧದಲ್ಲಿ ಮರಣ ಹೊಂದಿದ್ದು, ಅವರ ಮಡದಿಯರು ಸತಿ ಹೋದ ಬಗ್ಗೆ ಇದು ತಿಳಿಸುತ್ತದೆ.

ಎರಡನೆಯ ವೀರ – ಸತಿಗಲ್ಲಿನಲ್ಲಿಯೂ ಈ ನಾಲ್ಕು ಭಾಗವು ಮಾತ್ರ ಕಂಡುಬರುತ್ತದೆ. ಕೆಳಗಿನ ದೃಶ್ಯದಲ್ಲಿ ವಾದ್ಯವೃಂದದವರು ಕಂಡುಬರುತ್ತಾರೆ. ಈ ದೃಶ್ಯವೂ ಮಣ್ಣಿನಲ್ಲಿ ಹೂತುಹೋಗಿದೆ. ಎರಡನೆಯ ಪಟ್ಟಿಕೆಯಲ್ಲಿ ಮೂರು ಜನ ವೀರರು ಮತ್ತು ಒಬ್ಬ ಸತಿಯನ್ನು ತೋರಿಸಲಾಗಿದೆ. ಸತಿಯು ಕೈಮುಗಿದು ನಿಂತಿದ್ದಾಳೆ. ಮಧ್ಯದಲ್ಲಿ ವೀರ ಕುಳಿತಿದ್ದು, ಬದಿಗಳಲ್ಲಿ ಮತ್ತಿಬ್ಬರು ವೀರರು ಕೈಮುಗಿದು ನಿಂತಿದ್ದಾರೆ.

ಮೂರನೆಯ ದೃಶ್ಯದಲ್ಲಿ ಏಳು ಜನ ಸ್ತ್ರೀಯರು ತಮ್ಮ ಕೈಗಳನ್ನು ಹೊಟ್ಟೆಯ ಸಮಭಾಗಕ್ಕೆ ಹಿಡಿದು ನಿಂತಿದ್ದಾರೆ. ಮೇಲಿನ ದೃಶ್ಯದಲ್ಲಿ ಶಿವಲಿಂಗಕ್ಕೆ ನಿಂತು ಪೂಜಿಸುತ್ತಿರುವ ವ್ಯಕ್ತಿ, ಶಿವಲಿಂಗದ ಎಡಗಡೆ ನಿಂತ ನಂದಿ, ಮೇಲೆ ಸೂರ್ಯಚಂದ್ರರ ಚಿತ್ರಗಳಿವೆ.

ಒಟ್ಟಾರೆ ಈ ವೀರಸತಿಗಲ್ಲಿನಲ್ಲಿ ಮೂವರು ವೀರರು ಯುದ್ಧದಲ್ಲಿ ಮರಣ ಹೊಂದಿದ್ದು, ಅವರ ಏಳು ಜನ ಮಡದಿಯರು ಸತಿ ಹೋಗಿದ್ದಾರೆಂದು ತಿಳಿಯಬಹುದು. ಈ ವೀರ–ಸತಿಗಲ್ಲಿನಲ್ಲಿ ಮೊದಲಿಗೆ ವೀರರನ್ನು ನಂತರ ಸತಿಯರನ್ನು ತೋರಿಸಿರುವುದು ಮತ್ತು ವಾದ್ಯವೃಂದದವರನ್ನು ಪ್ರತ್ಯೇಕ ಪಟ್ಟಿಕೆಯಲ್ಲಿ ತೋರಿಸಿರುವುದು ವಿಶೇಷವೆನಿಸಿದೆ.

ಈ ಎರಡು ವೀರಸತಿಗಲ್ಲುಗಳು ಪರಸ್ಪರ ತುಸು ಹೋಲಿಕೆಯನ್ನು ಹೊಂದಿವೆ. ಅಂದರೆ ಎರಡರಲ್ಲೂ ಮೂವರು ವೀರರನ್ನು, ಏಲು ಜನ ಸತಿಯರನ್ನು ತೋರಿಸಲಾಗಿದೆ. ಈ ಎರಡು ಶಿಲ್ಪಗಳ ಕಾಲ ಸು. ಕ್ರಿ.ಶ. 13–14ನೇ ಶತಮಾನವಿರಬಹುದು.

ಈ ರೀತಿಯಾಗಿ ಏಳು ಜನ ಸತಿಯರು ಒಂದೇ ಬಾರಿ ಸತಿ ಹೋದ ಬಗ್ಗೆ ತಿಳಿಸುವುದು ತುಂಬಾ ಅಪರೂಪವಾಗಿದೆ. ಆದ್ದರಿಂದ ಈ ವೀರ–ಸತಿಗಲ್ಲುಗಳು ಮಹತ್ವವೆನಿಸಿವೆ.

ವೀರಗಲ್ಲು : ವೀರಗಲ್ಲಿನಲ್ಲಿ ನಾಲ್ಕು ದೃಶ್ಯಗಳಿವೆ. ಕೆಳಗಿನ ದೃಶ್ಯವು ಮಣ್ಣಿನಲ್ಲಿ ಹೂತು ಹೋಗಿದ್ದು, ಅಲ್ಲಿ ಸ್ವಲ್ಪ ಮಾತ್ರ ಯುದ್ಧದ ಚಿತ್ರಣ ಕಂಡುಬರುತ್ತದೆ. ಎರಡನೇ ದೃಶ್ಯದಲ್ಲಿ ವಾದ್ಯ ವೃಂದದವರನ್ನು, ಮೂರನೆಯ ಪಟ್ಟಿಕೆಯಲ್ಲಿ ವಿಮಾನದಲ್ಲಿ ಕುಳಿತ ವೀರರನ್ನು ನಾಲ್ವರು ಅಪ್ಸರೆಯರು ದೇವಲೋಕಕ್ಕೆ ಕೊಂಡೊಯ್ಯುವ ಶಿಲ್ಪ ಹಾಗೂ ಮೇಲಿನ ಪಟ್ಟಿಕೆ ದೇವಲೋಕದ ಚಿತ್ರಣವಾಗಿದ್ದು, ಅಲ್ಲಿ ಮಂಟಪದಲ್ಲಿ ಶಿವಲಿಂಗವಿದೆ. ಅದರ ಬಲಕ್ಕೆ ನಂದಿ, ಎಡಭಾಗದಲ್ಲಿ ಕೈಮುಗಿದು ಕುಳಿತ ವೀರನಿದ್ದಾನೆ. ಈ ಮೇಲಿನ ಪಟ್ಟಿಕೆಗೆ ಮಾತ್ರ ಮಕರತೋರಣವಿದೆ. ಒಟ್ಟಾರೆ ಯುದ್ಧದಲ್ಲಿ ವೀರನು ಮರಣ ಹೊಂದಿದ್ದು, ಆತನಿಗೆ ಸ್ವರ್ಗ ಪ್ರಾಪ್ತಿಯಾದ ಬಗ್ಗೆ ಈ ಶಿಲ್ಪ ತಿಳಿಸುತ್ತದೆ. ಈ ವೀರಗಲ್ಲಿನ ಕಾಲಮಾನ ಸು. ಕ್ರಿ.ಶ. 13–14ನೇ ಶತಮಾನ.

❑

ಗುಂಡಬಾಳದ ಶಾಸನ ಸಹಿತವಾದ ತೀರ್ಥಂಕರ ವಿಗ್ರಹಗಳು

– ಎಸ್. ಗಣಪತಿಗೌಡ

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನಲ್ಲಿರುವ ಗುಂಡಬಾಳವು ಹೊನ್ನಾವರದಿಂದ ಈಶಾನ್ಯಕ್ಕೆ ರಾಷ್ಟ್ರೀಯ ಹೆದ್ದಾರಿ 19ರಲ್ಲಿ ಸುಮಾರು 10 ಕಿ.ಮೀ. ದೂರದಲ್ಲಿದೆ. ಕ್ರಿ.ಶ. 10ನೇ ಶತಮಾನದಿಂದ ಕ್ರಿ.ಶ. 13ನೇ ಶತಮಾನದವರೆಗೆ ಗುಂಡಬಾಳವು, ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿತ್ತು ಎಂದು ಇಲ್ಲಿರುವ ಜಿನಾಲಯಗಳು, ಜನಶಿಲ್ಪಗಳು ಮತ್ತು ಶಿಲಾಶಾಸನಗಳಿಂದ ತಿಳಿಯುತ್ತದೆ.

ಇಲ್ಲಿ ಮೂರು ಶಿಲಾಶಾಸನಗಳು ದೊರಕಿದ್ದು ಈಗಾಗಲೇ ಎರಡನ್ನು ಡಾ. ಸದಾನಂದ ನಾಯಕರು ಪ್ರಕಟಿಸಿದ್ದಾರೆ.1 ಇನ್ನೊಂದು ಅಪ್ರಕಟಿತ ಶಿಲಾಶಾಸನ.

ಪದ್ಮಾವತಿ ಅಮ್ಮನವರ ದೇವಾಲಯ ಎಂದು ಕರೆಯಲಾಗುವ ಇಲ್ಲಿಯ ಜೈನ ಬಸದಿಯಲ್ಲಿ ಒಟ್ಟು ನಾಲ್ಕು ತೀರ್ಥಂಕರ ವಿಗ್ರಹಗಳಿದ್ದು, ಎರಡು ತೀರ್ಥಂಕರ ವಿಗ್ರಹಗಳ ಪೀಠಗಳ ಮೇಲೆ ಚಿಕ್ಕ ಶಾಸನಗಳಿವೆ.

ಮೊದಲ ಶಿಲ್ಪವು ಕಪ್ಪು ಶಿಲೆಯಿಂದ ಕೆತ್ತಲ್ಪಟ್ಟಿದೆ. ತೀರ್ಥಂಕರನು ಸಿದ್ಧಾಸನದಲ್ಲಿ ಯೋಗಮುದ್ರೆಯಲ್ಲಿ ಕುಳಿತಿದ್ದಾನೆ. ಈ ಮೂರ್ತಿಯ ಎತ್ತರ 96 ಸೆಂ.ಮೀ. ಜೊತೆಗೆ ಮಕರತೋರಣವು ಸೇರಿದಂತೆ ಒಟ್ಟು 118 ಸೆಂ.ಮೀ. ಎತ್ತರವಿದೆ. ಅಗಲ 76 ಸೆಂ.ಮೀ. ತೀರ್ಥಂಕರ ವಿಗ್ರಹದ ಪೀಠದ ಮೇಲೆ ಮೂರು ಸಾಲಿನ ಶಾಸನವಿದ್ದು, ಹೈವಲದೇವಿಯ ಮಗಳು ನಾಗಲದೇವಿಯ ಮಗನಾದ ಶ್ರೀಮತ್ ತ್ರಿಭುವನಮಲ್ಲ ಮಲ್ಲಿದೇವನಿಂದ ಸ್ಥಾಪಿಸಲ್ಪಟ್ಟಿತೆಂದೂ ಹೈವಲದೇವಿಯು ಮೂಲಸಂಘದ ಸೂರಸ್ಥ ಗಣದ ಚಾರುಕೀರ್ತಿ ಸಿದ್ಧಾಂತಿದೇವರ ಗುಡ್ಡಿ ಎಂದೂ ತಿಳಿಸುತ್ತದೆ. ಅರ್ಧ ನಿಮಿಲಿತ ನೇತ್ರಗಳು, ಸ್ವಲ್ಪ ದುಂಡಾದ ಮುಖ, ಮಂದಹಾಸ ಚೆಲ್ಲುವ ತುಟಿ, ನೀಳ ನಾಸಿಕ, ಭುಜದವರೆಗೂ ಇಳಿಬಿಟ್ಟ ಗುಂಗುರಾಕಾರದ ಕೇಶ, ವಿಶಾಲವಾದ ಎದೆ, ಬಲಿಷ್ಠವಾದ ಭುಜ, ಮೂರ್ತಿಯ ವೈಶಿಷ್ಟ್ಯವಾದರೆ, ಅಲಂಕೃತವಾದ ಮುಕ್ಕೊಡೆಯು ಪ್ರಭಾಮಂಡಲದ ಸೊಬಗನ್ನು ಹೆಚ್ಚಿಸಿದೆ.

ಅಷ್ಟೇ ರಮ್ಯವಾಗಿ ಮಕರತೋರಣವನ್ನು ಕೆತ್ತಿದ್ದಾರೆ. ಮಕರತೋರಣದ ಮೂಲದಲ್ಲಿ ಎರಡು ಅರ್ಧಗಂಬವಿದ್ದು, ಅದರ ಮೇಲೆ ಸಿಂಹಮುಖದಿಂದ ಹೊರಟ ಸುರುಳಿಯಾಕಾರದ ಬಳ್ಳಿಯು ತೋರಣದ ಉಳಿದ ಭಾಗವನ್ನು ತುಂಬಿದೆ. ಈ ತೋರಣದ ಎರಡೂ ಕಡೆ ಚಾಮರಧಾರಿಗಳಿದ್ದಾರೆ.

ಇದರ ಪಕ್ಕದಲ್ಲಿಯೇ ಇರುವ ಇನ್ನೊಂದು ತೀರ್ಥಂಕರ ವಿಗ್ರಹವೂ ಪದ್ಮಪೀಠದ ಮೇಲೆ ಸಿದ್ಧಾಸನದಲ್ಲಿ ಕುಳಿತಿದ್ದು, ಧ್ಯಾನಮುದ್ರೆಯಲ್ಲಿದೆ. ಈ ಶಿಲ್ಪದ ತೋರಣವು 98 ಸೆಂ.ಮೀ. ಅಗಲ, 138 ಸೆಂ.ಮೀ. ಎತ್ತರವಿದೆ. ಮೂರ್ತಿಯು 77 ಸೆಂ.ಮೀ. ಎತ್ತರವಿದೆ. ಪ್ರಭಾಮಂಡಲದ ಇಕ್ಕೆಲಗಳಲ್ಲಿ ಸುರುಳಿಗಳಿದ್ದು, ಮಧ್ಯದಲ್ಲಿ ಮುಕ್ಕೊಡೆಯಿದೆ. ಮಕರತೋರಣಕ್ಕೆ ಎರಡೂ ಬದಿಯಲ್ಲಿ ಸಿಂಹಗಳಿರುವ ಕಂಬಗಳು ಆನೆಯ ತಲೆಯ ಮೇಲೆ ನಿಂತಿವೆ. ಸಣ್ಣ ಎರಡು ಜಿನ ವಿಗ್ರಹಗಳು ಅರ್ಧ ಗಂಬಗಳ ಮೇಲೆ ಇವೆ. ಇಬ್ಬರು ಚಾಮರಧಾರಿಗಳು ಮಕರತೋರಣದ ಎರಡೂ ಕಡೆ ಇದ್ದಾರೆ. ಬಳ್ಳಿಗಳು ಮತ್ತು

ಸರ್ಪಗಳು ಸಿಂಹದ ಬಾಯಿಂದ ಬಂದಂತೆ ತೋರಿಸಲಾಗಿದೆ. ಬಳ್ಳಿಗಳ ಸುರುಳಿಗಳಲ್ಲಿ ವಾದ್ಯ ಊದುವವರನ್ನೂ, ತಾಳ ಬಾರಿಸುವವರನ್ನೂ ಮತ್ತು ಮೂಲ ವಾಹಕರನ್ನೂ ಚಿತ್ರಿಸಲಾಗಿದೆ. ಈ ಜಿನಶಿಲ್ಪದ ಪೀಠದ ಎದುರು ಮುಖದಲ್ಲಿರುವ ಶಾಸನವು ಮೂಲಸಂಘದ ಕಾಣೂರ್ಗಣದ ಮೇಘ ಪಾಷಾಣಗಚ್ಛವನ್ನು ಹೆಸರಿಸುತ್ತದೆ. ಆದ್ದರಿಂದ ಈ ವಿಗ್ರಹವು ಮೇಘ ಪಾಷಾಣಗಚ್ಛದ ಒಬ್ಬ ಜೈನನಿಂದ ಮಾಡಿಸಲ್ಪಟ್ಟಿರಬೇಕು.

ಮೊದಲನೆ ಶಾಸನದಲ್ಲಿ ಬರುವ ಮಲ್ಲಿದೇವನನ್ನು ಕುರಿತ ವಿವರಣೆ ಕೊಡುವ ಶಾಸನಗಳು ಗುಂಡಬಾಳ ಮತ್ತು ಇದರ ಸುತ್ತಮುತ್ತ ದೊರಕಿದ್ದು ಇವನ ಕಾಲವನ್ನು ಕ್ರಿ.ಶ. 1140–43 ಎಂದು ನಿರ್ಧರಿಸಬಹುದು.

ಈ ಮಲ್ಲಿದೇವನು ಶಿಸುಗಲಿಯಿಂದ ರಾಜ್ಯವಾಳಿದ ಪಾಂಡ್ಯ ವಂಶದ 5ನೇ ದೊರೆಯಾಗಿದ್ದಾನೆ. ಶಾಸನ ಶಿಲ್ಪಗಳ ಆಧಾರದ ಮೇಲೆ ಗುಂಡಬಾಳವು ಜೈನ ಸಂಸ್ಕೃತಿಯ ಒಂದು ಕೇಂದ್ರವಾಗಿತ್ತೆಂದು ಹೇಳಬಹುದು. ಡಾ. ಶ್ರೀನಿವಾಸ ಪಾಡಿಗಾರ ಅವರು ಈ ಶಾಸನಗಳು ಮತ್ತು ವಿಗ್ರಹಗಳು ಸಿಕ್ಕ ಗುಂಡಬಾಳವೇ ಶಿಸುಗಲಿಯಾಗಿದ್ದು, ಗುಂಡಬಾಳದ ಸಂಸ್ಕೃತ ರೂಪ ಶಿಸುಗಲಿಯೆಂದು ಹೇಳಿದ್ದಾರೆ.[2]

ಆದ್ದರಿಂದ ಈ ವಿಗ್ರಹವು ಸುಮಾರು 12ನೇ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಿತವಾಗಿದೆ ಎಂಬುದು ನಿರ್ವಿವಾದ. ಈ ಕಾಲದಲ್ಲಿ ಕಲ್ಯಾಣದಲ್ಲಿ ಚಕ್ರಾಧಿಪತ್ಯವನ್ನು ನಡೆಸುತ್ತಿದ್ದ ಚಾಲುಕ್ಯರು ತಮ್ಮದೇ ಆದ ಶಿಲ್ಪ ಶೈಲಿಯನ್ನು ಸೃಷ್ಟಿಸಿದ್ದರು. ಆದರೆ ಈ ಜಿನಶಿಲ್ಪಗಳು ಕಲ್ಯಾಣ ಚಾಲುಕ್ಯ ಶೈಲಿಗಿಂತ ತುಸು ಭಿನ್ನವಾದ ಶೈಲಿಯಲ್ಲಿ ಕಡೆಯಲ್ಪಟ್ಟಿದ್ದು, ಇದು ಪ್ರಾದೇಶಿಕ ಶೈಲಿಯ ಪ್ರಭಾವವೋ ಎಂದು ಸಂಶಯ ಬರುತ್ತದೆ. ಇದಕ್ಕೆ ನಿದರ್ಶನವೆಂದರೆ ಪೀಠದ ಒಳಹೊಕ್ಕ ಭಾಗದ ಮೇಲೆ ಇರುವ ಶಾಸನ. ಜಿನನ ವಿಶಾಲವಾದ ವಕ್ಷಸ್ಥಳ, ಬಲಿಷ್ಠವಾದ ಭುಜ ಮತ್ತು ಕಂಠದ ಭಾಗವು ಸಣ್ಣದಾಗಿದ್ದು ಪ್ರಮಾಣಬದ್ಧತೆಯ ಕೊರತೆಯಿದೆ. ಶಾಸನವಿಲ್ಲದಿದ್ದರೆ ಇದನ್ನು ಬಹುಶಃ ರಾಷ್ಟ್ರಕೂಟ–ಕಲ್ಯಾಣ ಚಾಲುಕ್ಯರ ಸಂಕ್ರಮಣ ಕಾಲದ್ದೆಂದು ಭಾವಿಸುತ್ತಿದ್ದೇವೇನೋ! ಈ ಶಿಲ್ಪಕ್ಕೆ ಸಂಬಂಧಪಟ್ಟ ಯಾವುದೇ ಭಾಗದಲ್ಲಿ ಯಕ್ಷ–ಯಕ್ಷಿಯರು ಅಥವಾ ಲಾಂಛನ ಇವುಗಳು ಚಿತ್ರಿಸಲ್ಪಟ್ಟಿಲ್ಲವಾದ್ದರಿಂದ ಈ ವಿಗ್ರಹಗಳು ಪ್ರತಿನಿಧಿಸುವ ತೀರ್ಥಂಕರರಾರು ಎಂದು ನಿರ್ಧರಿಸುವುದು ಕಷ್ಟಕರ.3

ಶಾಸನಗಳ ಪಾಠ ಈ ಕೆಳಗಿನಂತಿದೆ :

ಮೊದಲನೆಯ ವಿಗ್ರಹದ ಪೀಠಶಾಸನ

1. ಸ್ವಸ್ತಿ ಶ್ರೀ ಮೂಲಸಂಘದ ಸೂರ್ವಸ್ಥ ಗಣದ ಮುತ್ತುಗ್ಗಡಿ ದೇವರ ಪ್ರತಿಬದ್ಧದ ಚಾರುಕೀ
2. ರ್ತಿ ಸಿದ್ಧಾಂತಿ ದೇವರ ಗುಡ್ಡಿ ಶ್ರೀಮತು ಹಯ್ವಲದೇವಿಯರ ಮಗಳು ನಾಗ
3. ಲ ದೇವಿಯರ ಮಗಂ ಶ್ರೀಮತು ಮಲ್ಲಿ ದೇವರಸರು ಮಾಡಿಸಿದ ಪ್ರತಿಷ್ಠೆ

ಎರಡನೆಯ ವಿಗ್ರಹದ ಪೀಠಶಾಸನ

1. ಶ್ರೀ ಮೂಲಸಂಘ ಕಾಣೂರ್ಗಣ ಮೇಘ (ಷ?) ಪಾಷಾಣ ಗಚ್ಛ ಮಂಗಳ

ಅಡಿಟಿಪ್ಪಣಿಗಳು

1. ಸದಾನಂದ ನಾಯಕ : ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ, ಪು. 90–98
2. ಶ್ರೀನಿವಾಸ ಪಾಡಿಗಾರ : "ಸಮ್ ಇನ್ ಕ್ರಿಪ್ಷನ್ಸ್ ಆಫ್ ಚಂದಾವರ ಕದಂಬಾಸ್" ಸೆಮಿನಾರ ಆನ್ ದಿ ಹಿಸ್ಟರಿ ಆಫ್ ಕಾರವಾರ ಡಿಸ್ಟ್ರಿಕ್ಟ್, 10–11, ಫೆಬ್ರವರಿ, 1990
3. ಶ್ರೀನಿವಾಸ ಪಾಡಿಗಾರ ಮತ್ತು ಎಸ್. ಗಣಪತಿಗೌಡಾ, "ಚಂದಾವರ ಕದಂಬ ತ್ರಿಭುವನಮಲ್ಲ ಮಲ್ಲಿದೇವನ ಗುಂಡಬಾಳದ ಶಾಸನ, ಶಕವರ್ಷ 1063", ಕರ್ನಾಟಕ ಭಾರತಿ, ಸಂಪುಟ 22, ಸಂಚಿಕೆ 3, ಧಾರವಾಡ 1990, ಪು. 78–90

❑

ಸ್ವಾದಿಯಲ್ಲಿ ಮತ್ತೊಂದು ಶಿಲಾಶಾಸನ ಶೋಧನೆ

– ಪ್ರೊ. ಎಚ್.ಆರ್. ರಘುನಾಥ ಭಟ್

'ಸ್ವಾದಿ ಅರಸುಮನೆತನ' ಕನ್ನಡನಾಡಿನ ಅದರಲ್ಲೂ ಉತ್ತರಕನ್ನಡ ಪ್ರದೇಶದ ಪ್ರತಿಷ್ಠಿತ ರಾಜವಂಶಗಳಲ್ಲಿ ಒಂದಾಗಿದ್ದು, ವಿಜಯನಗರ, ಆದಿಲ್‌ಶಾಹಿ ಮತ್ತು ಪ್ರಾದೇಶಿಕ ಸಂಸ್ಕೃತಿಗಳ್ನು ಸಮನ್ವಯಿಸಿ ಸಕಲ ಸಮಾಜೋ-ಧಾರ್ಮಿಕ ಮೌಲ್ಯಗಳನ್ನು ಎತ್ತಿಹಿಡಿದದ್ದು ಶಾಸನ ಮತ್ತು ಆಸಹಿತ್ಯಕ ಆಧಾರಗಳಿಂದ, ವಾಸ್ತುಶಿಲ್ಪ ಕಲಾಕೃತಿಗಳಿಂದ ರುಜುವಾತಾಗುತ್ತದೆ. ಈ ಮನೆತನದ ಸಾಂಸ್ಕೃತಿಕ ಮುದ್ರೆ ಆ ಪ್ರದೇಶದ ಮೇಲೆ ಅದೆಷ್ಟು ಚೆನ್ನಾಗಿ ಅಚ್ಚೊತ್ತಿದೆ ಎಂಬುದನ್ನು ನೋಡಬೇಕಾದರೆ ಸ್ವಾದಿ ಬನವಾಸಿ ಸುತ್ತಮುತ್ತಣ ಶಾಸನಗಳನ್ನು ವ್ಯಾಸಂಗಮಾಡಬೇಕು, ಗುಡಿಗುಂಡಾರಗಳನ್ನು ನೋಡಬೇಕು. ಹಾಗೆ ಸಾಹಿತ್ಯ, ಜಾನಪದ, ಕೈಫಿಯತ್ತು ಮತ್ತಿತರ ಆಕರಗಳನ್ನು ಪರಿಶೋಧಿಸಬೇಕು.

ಸ್ವಾದಿ ಅರಸುಮನೆತನಕ್ಕೆ ಸಂಬಂಧಿಸಿದಂತೆ, ಸ್ವಾದಿ ಮತ್ತು ಅದರ ಸುತ್ತಮುತ್ತಲಿನ ಸ್ಥಳಗಳಲ್ಲಿ ಈವರೆಗೆ ಇಪ್ಪತ್ತೊಂಬತ್ತು ಶಾಸನಗಲು ಲಭ್ಯವಿದ್ದು, ಅವನ್ನು ಭಾರತ ಶಾಸನ ತಜ್ಞರ ಇಲಾಖೆಯ ನಿರ್ದೇಶಕರಾದ ಶ್ರೀ ಎಂ.ಎನ್. ಕಟ್ಟಿಯವರು ಈಗಾಗಲೇ ಪ್ರಕಟಿಸಿದ್ದಾರೆ. ಅವುಗಳ ಪಾಠ ಹಾಗೂ ಸಾರಾಂಶಗಳನ್ನು 'ಸ್ವಾದಿ ಅರಸುಮನೆತನ' ಎಂಬ ಕೃತಿಯಲ್ಲಿ ಪ್ರಕಟಮಾಡಿ ಉಪಕರಿಸಿದ್ದಾರೆ. ಈಚಿನ ನಮ್ಮ ಸ್ವಾದಿ ಕ್ಷೇತ್ರಕಾರ್ಯದಲ್ಲಿ ಒಂದು ಶಿಲಾಶಾಸನವನ್ನು ಗದ್ದುಗೆ ಮಠ/ಮನೆಯೆಂದು ಹೇಳಲಾದ ಐತಿಹಾಸಿಕ ಸ್ಥಳದಿಂದ ತೀರ ದೂರವಿಲ್ಲದ 'ನಾಗಜೆರಿ' ಎಂಬ ನೀರಾವರಿ ನೆಲೆಯಲ್ಲಿ ಪರಿಶೋಧಿಸಲಾಯಿತು. ಜೊತೆಗೆ ಆ ಭೂಮಿಗೆ ಸಂಬಂಧಿಸಿದಂತೆ ನಾಲ್ಕು ಮೂಲೆಗಳಲ್ಲಿ ನಾಲ್ಕು ಸುಂದರವಾದ ಲಿಂಗಮುದ್ರೆ ಕಲ್ಲುಗಳನ್ನು ಪತ್ತೆ ಮಾಡಲಾಗಿದೆ. ಅಷ್ಟೇ ಅಲ್ಲ, ಈಗ ಬೆಳೆಸಿರುವ ತೋಟದ ಒಂದು ಮೂಲೆಯಲ್ಲಿ ಸ್ವಾದಿ ಅರಸರ ಕಾಲದ ಒಂದು ಪುಟ್ಟ ಗುಡಿಯನ್ನು, ಸಂಪೂರ್ಣವಾಗಿ ಶಿಲಾಮಯ ಕಟ್ಟಡವನ್ನು, ಅದರ ಎಲ್ಲ ವಿವರಗಳೊಂದಿಗೆ ಗೊತ್ತು ಹಚ್ಚಲಾಯಿತು.

ಪ್ರಸ್ತುತ ಸುಮಾರು ಇಪ್ಪತ್ನಾಲ್ಕು ಸಾಲುಗಳುಳ್ಳ ಕನ್ನಡ ಶಾಸನವನ್ನು ಈಶ್ವರ ಸಂವತ್ಸರದ ಭಾದ್ರಪದ ಬಹುಳ ಹನ್ನೆರಡರಲ್ಲಿ ನಾಗಜೆರಿ ಚೌಕಿಯ ಚೆನ್ನಬಸಪ್ಪನವರು ಹೊರಡಿಸಿದ್ದು ಸ್ಪಷ್ಟವಾಗಿ ದಾಖಲಿಸಲಾಗಿದೆ. ಇದು ಮುಖ್ಯವಾಗಿ ನಾಗಜೆರಿ ನೀರನ್ನು ಸಾರ್ವಜನಿಕರು ಬಳಸುವುದಕ್ಕೆ ಸಂಬಂಧಿಸಿದಂತೆ ಕೆಲ ಸಂಗತಿಗಳ್ನು, ಪ್ರಾಯಶಃ ಎದ್ದ ಸಮಸ್ಯೆಗಳನ್ನು ಎತ್ತಿ ಹೇಳುತ್ತದೆ. ಅದೇ ಧ್ವನಿಯಲ್ಲಿ ಆ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತದೆ. ಆದರೆ ಶಾಸನಪಾಠದ ಕೊನೆಯಭಾಗ, ಮುಖ್ಯವಾಗಿ ಹತ್ತೊಂಬತ್ತನೆಯ ಸಾಲಿನಿಂದ ಇಪ್ಪತ್ತನಾಲ್ಕನೆಯ ಸಾಲಿನವರೆಗೆ ತ್ರುಟಿತವೂ ಅಸ್ಪಷ್ಟವೂ ಆಗಿರುವುದರಿಂದ ಅದರ ಆಶಯ ಗೊತ್ತಾಗುತ್ತಿಲ್ಲ.

ಶಾಸನದ ಶಿರೋಶಿಲ್ಪದಲ್ಲಿ ಲಿಂಗ ನಂದಿ, ಸೂರ್ಯ, ಚಂದ್ರ ಮುಂತಾದ ಉಬ್ಬುಶಿಲ್ಪಗಳನ್ನು ನೋಡಬಹುದು. ಶಾಸನ ಶಿಲೆಯಾಗಲಿ, ಅದರ ಮೇಲೆ ಕಂಡರಿಸಿದ ಅಕ್ಷರಗಳಾಗಲಿ ಹೇಳಿಕೊಳ್ಳುವಷ್ಟು ಸುಂದರವಾಗಿಲ್ಲ. ವಾಸ್ತವಿಕವಾಗಿ ವಿಜಯನಗರೋತ್ತರ ಕಾಲದ ಹೆಚ್ಚಿನ ಶಿಲಾಶಾಸನಗಳು ಈ ಭಾಗದಲ್ಲಿ ಕಂಡುಬರುವಂತೆ ಲಿಪಿಸೌಂದರ್ಯಕ್ಕಾಗಲಿ, ಶಾಸನ ಪಾಠ ಸೌಂದರ್ಯಕ್ಕಾಗಲಿ ಹೆಸರುವಾಸಿ ಆಗಿಲ್ಲ. ಅಕ್ಷರ ಸ್ಖಾಲಿತ್ಯ, ವ್ಯಾಕರಣದೋಷ, ಭಾಷಿಕ ದೋಷಗಳು ಅಲ್ಲಲ್ಲಿ ಕಂಡುಬರುತ್ತವೆ.

ಸಾಲದಕ್ಕೆ ಬಳಸಿದ ಶಿಲೆಕೂಡ ಅಷ್ಟು ಪರಿಶುದ್ಧವಾಗಿಲ್ಲ. ಸ್ಥಳೀಯವಾಗಿ ಲಭ್ಯವಿರುವ ಹೊಳೆಕಲ್ಲನೇ ಬಳಸಲಾಗಿದೆ. ಇಷ್ಟಾಗಿಯೂ ಶಾಸನಗಳು ಸಮಕಾಲೀನ, ಅಧಿಕೃತ, ದಾಖಲೆಗಳಾಗಿರುವ ಹಿನ್ನೆಲೆಯಲ್ಲಿ ಹದಿನೆಂಟನೆಯ ಶತಮಾನದಲ್ಲೂ ಈ ಮಾತಿಗೆ ಪುಷ್ಠಿನೀಡುವ ಮಾತಿಗೆ ಪೂರಕವಾಗಿ ಈ ಶಾಸನ ನಮಗೆ ಈಗ ಲಭ್ಯವಾಗಿದೆ. ಅದರ ಸದ್ಯಕ್ಕೆ ಓದಿದ ಪಾಠವನ್ನು ಈ ಕೆಳಗೆ ನೀಡಲಾಗಿದೆ.

ಶಾಸನ ಪಾಠ

1. ಯೀಶ್ವರ ಸಂವತ್ಸರದ ಭಾದ್ರಪದ ಬ 12ಲ್ಲು ನಾಗ
2. ಜೆರಿ ಚಲುಕಿ ಚೆಂನಬಸಪ್ಪನವರೂ ಬರಸಿದ ಸಿಲಾ
3. ಶಾಸನಾ ಯೀ ನಾಗಜೆರಿ ಉದುಕಉ ಅನಾದಿ ಲಾರ
4. ಭ್ಯ ಸಕಲ ಜಾತಿಯು ಉದಕ ಬಳಸುತಿತ್ತು (ದ್ದು) ಆ ಮೇಲೆ
5. ನಾಉ ಚಲುಕಿ ಕಟ್ಟಿಕೊಂಡೆಉಯಂತ ಅರಸು
6. ಗಳಿಗೆ ಹೇಳಿಕೊಂಡಲ್ಲಿ ಆ ನಾಗಜರಿ ಉದುಕ
7. ಉ ಮಂದಿಬಳಸುವದಕೆ ಬಿಟ್ಟು ಲಿಂಗಮುದ್ರೆ ಸ್ಥಾ
8. ಪಿತ ಮಾಡಿಕೊಡೆಯಂತ ಸಮಸ್ತು ಗುರಕಾರರಿ
9. ಗೂ ಹೇಳಿದರು. ಆ ಮೇಲೆ ನಾಉಸ್ಥಳಸ್ವಲ್ಪವಾಗು
10. ತ್ತದೆಯಂಬದರಿಂದ ಸಕಲ ಜಾತಿಯು ಉದಕವ(ಸ)
11. ರ್ವ ಪ್ರಮಾಣು ಬಳಸಬಹುದು ಅಗಣಿವ್ಯೆವರಿಗೆ
12. ನಿರ್ಬಂದಾ ಮಾಡಿದವರೂ ಗುರುದ್ರೋಹಿಗಳು ಯಂ
13. ತನಾವಾಗಿ ಹೇಳಿದರಿಂದ ಆಗ ಲಿಂಗಮುದ್ರೆ ಸ್ಥಾಪಿ
14. ತಕೆ ಸರಪಾರದಾರ ಮಹಲಿಂಗಯ್ಯನ ಕಳುಹಿ
15. ಹಾಕಿಸಿಕೊಟ್ಟರು ಹೀಗೆ ಮಾಡಿ, ಮುಂದೆ ಚೆಂದ್ರ
16. ಸೂರ್ಯ್ಯ ಯಿಹಾ ಪರಿಯಂತ್ರ ಯಾರಾದರೂ
17. ಹಸ್ತಾಂತರ ಯಾಚಲುಕಿ ಅಧಿಕಾರಪ್ಪ ಮಾಡುವಲ್ಲಿಯಾರಾ
18. ದರೂನಾಗ ಜೆರಿಯ ಉದಕವ ಸರ್ವಜಾತಿದೂರ್ರಿದ
19. ವರು..............
20. ....
21. ....
22. ....
23. ....
24. .... (ತ್ರುಟಿತ)

ಈ ಶಾಸನಪಾಠದ ಆಶಯ, ತ್ರುಟಿತಭಾಗವನ್ನು ಬಿಟ್ಟು, ಸರಳವೂ ಆಗಿರುವಂತೆ ಸ್ಪಷ್ಟವಾಗಿದೆ. ಚೌಕಿಚನ್ನಬಸಪ್ಪನವರು ಹೊರಡಿಸಿದ ಖಾಸಗಿ ಶಿಲಾಶಾಸನ ಇದಾಗಿದೆ. ಸ್ಥಳೀಯವಾಗಿ ಇಂದಿಗೂ ನೋಡಸಿಗುವ 'ನಾಗಝರಿ' ಜಲಾಶಯದ ನೀರಿನ ಬಳಕೆಗೆ ಸಂಬಂಧಿಸಿದೆ. ಸಕಲ ಜಾತಿಧರ್ಮದವರೂ ಅದನ್ನು ಬಹುಕಾಲದಿಂದಲೂ ಬಳಸುತ್ತ ಬಂದಿದ್ದರು. ಅದಕ್ಕೊಂದು ಚೌಕಿ ಕಟ್ಟಿಕೊಂಡಾಗ ತುಸು ಅನನುಕೂಲವಾಗಿರಬಹುದು. ನಾಗಜರಿ ನೀರನ್ನು ಮಂದಿ (ಜನಸಾಮಾನ್ಯರು) ಬಳಸುವುದಕ್ಕೆ ಬಿಟ್ಟು ಉಳಿದ ಜಾಗಕ್ಕೆ ಲಿಂಗಮುದ್ರೆ ಹಾಕಿ ಕೊಡಿರೆಂದು ಸಮಸ್ತ ಗುರಿಕಾರರಿಗೆ ಹೇಳಿದರು. ಆಮೇಲೆ ಸ್ಥಳ ಸ್ವಲ್ಪವಾಗುತ್ತದೆಯೆಂಬುದರಿಂದಾಗಿ ಸಕಲ ಜಾತಿಯವರೂ ನೀರನ್ನು ಬಳಸಬಹುದೆಂದು ತೀರ್ಮಾನಿಸಿದರು. ಇದು ತುಂಬ ಸ್ವಾರಸ್ಯಕರ ಸಂಗತಿ. ಸಾಂಸ್ಕೃತಿಕ ಇತಿಹಾಸದಲ್ಲಿ ಈ ಬಗೆಯ ಸಂಗತಿಗಳು ನಮ್ಮ ಕುತೂಹಲವನ್ನು ಇನ್ನಷ್ಟು ಕೆರಳಿಸುತ್ತದೆ.

❑

ಸಿದ್ಧಾಪುರ : ಇತ್ತೀಚಿನ ಕೆಲವು ಪುರಾತತ್ವಶೋಧನೆಗಳು

– ಗಣಪತಿಗೌಡ

ಸಿದ್ಧಾಪುರವು ಉತ್ತರಕನ್ನಡ ಜಿಲ್ಲೆಯ ಒಂದು ತಾಲ್ಲೂಕು. ಸಮೃದ್ಧ ಪುರಾತತ್ವ ಅವಶೇಷಗಳನ್ನು ಹೊಂದಿರುವ ಈ ಜಿಲ್ಲೆ ಇತಿಹಾಸಕಾರರಿಗೆ ಅನೇಕ ವಿಷಯಗಳನ್ನು ಒದಗಿಸಬಲ್ಲದು. ನಾನು ಕೈಗೊಂಡ ಅನ್ವೇಷಣೆಯ ಸಮಯದಲ್ಲಿ ಇಲ್ಲಿಯ ಸುಮಾರು 15 ಬೇರೆ ಬೇರೆ ಸ್ಥಳಗಳಿಗೆ ಭೇಟ್ಟಿಕೊಟ್ಟು ಅಲ್ಲಿಯ ಅವಶೇಷಗಳನ್ನು ತಕ್ಕಮಟ್ಟಿಗೆ ಕ್ರೋಢೀಕರಿಸಿ ಈ ಪ್ರಬಂಧದಲ್ಲಿ ವಿವರಿಸಿದ್ದೇನೆ. ಅವುಗಳೆಂದರೆ :

1. ಇತಿಹಾಸ ಪೂರ್ವಕಾಲದ ಅವಶೇಷಗಳು, 2. ಐತಿಹಾಸಿಕ ಅವಶೇಷಗಳು, 3. ವಾಸ್ತು ಶಿಲ್ಪಕ್ಕೆ ಸಂಬಂಧಪಟ್ಟಂತಹ ಅವಶೇಷಗಳು; ಇವುಗಳನ್ನು ಕ್ರಮವಾಗಿ ಈ ಕೆಳಗಿನಂತೆ ವಿಂಗಡಿಸಬಹುದು : ಅ. ಇತಿಹಾಸಪೂರ್ವಕಾಲಕ್ಕೆ ಸೇರಿದ್ದೆನ್ನಬಹುದಾದ ಶಿರಳಗಿಯ ಬೃಹತ್‌ಶಿಲಾ ಸಂಸ್ಕೃತಿಯ ಅವಶೇಷಗಳು, ಬ. ಬೆಳ್ಳಟ್ಟಿಯಲ್ಲಿ ದೊರೆತ ಹಾನಗಲ್ ಕದಂಬರ ಹೊಸ ಶಿಲಾ ಶಾಸನ, ಕ. ಸುಮಾರು ಕ್ರಿ.ಶ. 6–7, 9–10, 15–17ನೇ ಶತಮಾನಕ್ಕೆ ಸೇರಬಹುದಾದ ಮೂರ್ತಿ ಮತ್ತು ವಾಸ್ತುಶಿಲ್ಪಗಳು.

ಶಿರಳಗಿಯ ಅವಶೇಷಗಳು : ಶಿರಳಗಿಯು ಸಿದ್ಧಾಪುರ ತಾಲ್ಲೂಕಿನಿಂದ ಸುಮಾರು 5 ಕಿ.ಮೀ. ದೂರದಲ್ಲಿರುವ ಒಂದು ಹಳ್ಳಿ. ಸಿದ್ಧಾಪುರದಿಂದ ಚಂದ್ರಗುತ್ತಿಗೆ ಹೋಗುವ ರಸ್ತೆಯು ಶಿರಳಗಿಯ ಮಧ್ಯೆ ಹಾದು ಹೋಗುತ್ತದೆ. ದಿಬ್ಬದಂತಿರುವ ಈ ಶಿರಳಗಿಯನ್ನು ರಸ್ತೆಯ ಇಬ್ಭಾಗ ಮಾಡಿದ್ದರಿಂದ ರಸ್ತೆಯ ಎರಡು ಪಕ್ಕಗಳ ಸ್ತರದಲ್ಲಿ ಅನೇಕ ಮಡಿಕೆ ಚೂರುಗಳು ಇರುವದು ನನ್ನ ಗಮನಕ್ಕೆ ಬಂದಿತು. ಇಂತಹ ಅನೇಕ ಮಡಿಕೆ ಚೂರುಗಳು ನೆಲದ ಮೇಲಿನಿಂದ ಸುಮಾರು 5 1/2 ಅಡಿ ಆಳದವರೆಗೆ ದೊರೆತಿವೆ. ಇಲ್ಲಿಯೇ ಹತ್ತಿರ ಸುಮಾರು 100 ಅಡಿ ಅಂತರದಲ್ಲಿ 'ಹೊಗೆ ಕುಣಿ' ಎಂದು ಕರೆಯುವ ಜಂಬಿ ಟ್ಟಿಗೆ ಬೇಣದಲ್ಲಿ ಹಂಡೆಯಾಕಾರದಲ್ಲಿ ಕೊರೆದ ಒಂದು ಕುಣಿ ಇದೆ. ಇಂತಹ ಅನೇಕ ಕುಣಿಗಳು ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಿಸಿದ್ದೆಂದು ಈಗಾಗಲೇ ಬೇರೆ ಕಡೆಗಳಲ್ಲಿ ಗುರುತಿಸಲಾಗಿದೆ. ಉದಾ : ದಕ್ಷಿಣ ಕನ್ನಡದಲ್ಲಿ ಹಿರಿಯಡಕವೆಂದು, ಉತ್ತರ ಕನ್ನಡದ ಕೆಲವು ಭಾಗದಲ್ಲಿ 'ಕೊಟ್ಟ ಎಂದು ಕರೆಯಲಾಗುವ ಕುಣಿಗಳೂ ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿರಬಹುದೆಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇಲ್ಲಿ ದೊರೆತ ಮಡಿಕೆ ಚೂರುಗಳಲ್ಲಿ ಮುಖ್ಯವಾಗಿ ಮಧ್ಯಕಾಲೀನ ಇತಿಹಾಸ ಹಾಗೂ ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಪಟ್ಟಂತಹ ಅವಶೇಷಗಳೆಂದು ವಿಭಾಗಿಸಬಹುದು. ಇಂತಹ ಮಡಿಕೆ ಚೂರುಗಳು ಈಗ ದೊರೆತಿರುವ ಸ್ತರಗಳಿಗಿಂತ ಕೆಳಗಡೆಯೂ ಸಿಗುತ್ತವೆಂದು ಸ್ಥಳಿಕರು ತಿಳಿಸುತ್ತಾರೆ. ಇಲ್ಲಿಯೇ ಸ್ವಲ್ಪ ದೂರದಲ್ಲಿ ಅರಣ್ಯದಿಂದಾವೃತ್ತವಾದ ಪ್ರದೇಶವನ್ನು ಅಗೆದಾಗ ಇಲ್ಲಿಯೂ ಕೂಡ ಹೇರಳವಾಗಿ ಮಡಿಕೆ ಚೂರುಗಳು ದೊರೆತಿವೆ.

ಈ ಮೇಲೆ ದೊರೆತ ಪುರಾತತ್ವ ಅವಶೇಷಗಳಿಂದ ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಪಟ್ಟ ಜನರು ಈ ಪ್ರದೇಶದಲ್ಲಿ ನೆಲೆಸಿದ್ದರೆಂದು ಖಚಿತವಾಗಿ ಹೇಳಬಹುದು ನಂತರ ಬಂದ ಮಧ್ಯಕಾಲೀನ ಜನರು ತಮ್ಮ ವಾಸಸ್ಥಳಕ್ಕೆ ಈ ಪ್ರದೇಶವನ್ನು

ಆಯ್ದುಕೊಂಡು ಕ್ರಮೇಣ ಅವಶ್ಯವಿದ್ದಲ್ಲಿ ಅಗೆಯಲು ಪ್ರಾರಂಭಿಸಿದರು. ಇದರಿಂದ ಮಧ್ಯಕಾಲೀನ ಜನರು ಉಪಯೋಗಿಸುತ್ತಿದ್ದ ಮಡಿಕೆ-ಕುಡಿಕೆಗಳು ಬೃಹತ್ ಶಿಲಾ ಸಂಸ್ಕೃತಿಯ ಅವಶೇಷದೊಂದಿಗೆ ಬೆರೆತವು.

ಈಗಾಗಲೇ ಡಾ. ರಘುನಾಥ ಭಟ್ಟರು ಶಿರಳಗೆ ಸಮೀಪದ ಕಿಲಾರೆಯೆಂಬಲ್ಲಿ ಬೃಹತ್ ಶಿಲಾ ಸಂಸ್ಕೃತಿಗೆ ಸಂಬಂಧಿಸಿದ ಮಡಿಕೆ ಚೂರುಗಳನ್ನು ಅಲ್ಲಿಯ ಕೊಟ್ಟ ದಲ್ಲಿ ಶೋಧಿಸಿದ್ದಾರೆ. ಹಾಗೆಯೇ ಡಾ. ಎಸ್.ವ್ಹಿ. ಪಾಡಿಗಾರ ಮತ್ತು ಕಲ್ಲೂರ ಇವರು ಬೃಹತ್ ಶಿಲಾ ಸಂಸ್ಕೃತಿಗೆ ಸೇರಬಹುದಾದ ಅವಶೇಷಗಳನ್ನು ದಾಂಡೇಲಿಯ ಹತ್ತಿರ ಗುರುತಿಸಿದ್ದಾರೆ.

ಈವರೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಂದೆರಡು ನೆಲೆಗಳಲ್ಲಿ ಮಾತ್ರ ಬೃಹತ್-ಶಿಲಾ ಸಂಸ್ಕೃತಿಯ ಅವಶೇಷಗಳು ದೊರೆತಿದ್ದು ಶಿರಳಗಿಯ ನೆಲೆ ಇನ್ನೊಂದು ಉದಾಹರಣೆಯಾಗಿದೆ. ಉತ್ತರಕನ್ನಡ ಜಿಲ್ಲೆಯಲ್ಲಿ ಬೃಹತ್ ಶಿಲಾಸಂಸ್ಕೃತಿ ಸಾಕಷ್ಟು ಪ್ರಮಾಣದಲ್ಲಿ ಪ್ರಚಲಿತವಿತ್ತೆಂಬುದಕ್ಕೆ ಈ ಸೂಚಕವಾಗಿದೆ. ಶಿರಳಗಿಯ ವಿಷಯವಾಗಿ ಹೆಚ್ಚಿನ ಸಂಶೋಧನೆ ಕೈಗೊಂಡರೆ ಇನ್ನೂ ಹೆಚ್ಚಿನ ವಿಷಯಗಳನ್ನು ಬೆಳಕಿಗೆ ತರಬಹುದೆಂಬುದು ನನ್ನ ಅನಿಸಿಕೆ.

ಶಾಸನ :

ಬೆಳ್ಳಟ್ಟಿಯಲ್ಲಿ ದೊರೆತ ಶಿಲಾಶಾಸನವು ಹಾನಗಲ್ಲ ಕದಂಬ ಮಾವುಲಿದೇವರಸನ ವಿವರಣೆ ನೀಡುತ್ತದೆ. ಇದರಕಾಲ ಶಕ 1020 ಬಹಳ ತ್ರುಟಿತವಾಗಿರುವದರಿಂದ ಹೆಚ್ಚಿನ ವಿಷಯಗಳು ತಿಳಿಯದು.

ಕಲೆ ಮತ್ತು ವಾಸ್ತು ಶಿಲ್ಪ :

ಮುಗ್ದೂರಿನಲ್ಲಿ ದೊರೆತ ವಿಷ್ಣು ಮತ್ತು ನರಸಿಂಹನ ಮೂರ್ತಿಯು ವಾಸ್ತುಶಿಲ್ಪ ಶೈಲಿಯಲ್ಲಿ ಬಹಳ ಗಮನಾರ್ಹ, ಮಾಧವ ರೂಪದಲ್ಲಿನ ವಿಷ್ಣುವಿನ ಮೂರ್ತಿಯು ಚತುರ್ಭುಜವಾಗಿ ಸಮಭಂಗದಲ್ಲಿರುವ ದುಂಡು ಶಿಲ್ಪ. ಇಂತಹದೇ ಮೂರ್ತಿಯನ್ನು ಅ ಡಾ. ಸುಂದರರವರು ಅಂಕೋಲಾ ತಾಲ್ಲೂಕಿನ ಸುಂಕೇರಿಯಲ್ಲಿ ಶೋಧಿಸಿದ್ದು ಇದರ ಕಾಲವನ್ನು ಕ್ರಿ.ಶ. 6ನೆಯ ಶತಮಾನವೆಂದು ಹೇಳಬಹುದು.

ಸುಖಾಸನದಲ್ಲಿ ಕುಳಿತಿರುವ ದ್ವಿಬುಜ ನರಸಿಂಹನು ಬಲಗಾಲನ್ನು ಪೀಠದ ಮೇಲೆ ಊರ್ದ್ವವಾಗಿಯೂ ಎಡಗಾಲನ್ನು ಅಡ್ಡಲಾಗಿ ಮಡಚಿದ್ದಾನೆ. ಬಲಗೈಯನ್ನು ಮೊಣಕಾಲ ಮೇಲೆ ಸಡಿಲವಾಗಿ ಬಿಟ್ಟು, ಬಿಚ್ಚಿದ ಎಡಗೈಯನ್ನು ತೊಡೆಯ ಮೇಲೆ ಊರಿದ್ದಾನೆ. ಈ ನರಸಿಂಹ ವಿಗ್ರಹವು ಬಿದನೂರು, ಕುಪ್ಪಗದ್ದೆ, ಹಲಸಿ, ಬೆಂಗಣಿ, ಕಾರಗಲ್ ಮೊದಲಾದ ಸ್ಥಳದಲ್ಲಿ ದೊರೆತ ಒಂದೆರಡು ಆಭರಣಗಳಿಂದ ಅಲಂಕೃತವಾದ ಸರಳ ಶೈಲಿಯ ವಿಗ್ರಹಕ್ಕೆ ಹೋಲುತ್ತದೆ. ಇವೆಲ್ಲದರ ಆಧಾರದ ಮೇಲೆ ಈ ಮೂರ್ತಿಯ ಕಾಲಮಾನ ಕ್ರಿ.ಶ. 5-6ನೇ ಶತಮಾನವೆಂದು ತರ್ಕಿಸಬಹುದು.

ಸಿದ್ದಾಪುರದ ಜೌರಗುಪ್ಪದಲ್ಲಿ ದೊರೆತಿರುವ ದುರ್ಗಾಮೂರ್ತಿಗಳು ವೈಶಿಷ್ಟ್ಯಪೂರ್ಣವಾಗಿವೆ. ಇಲ್ಲಿ ಒಟ್ಟು 6 ದುರ್ಗಾಮೂರ್ತಿಗಳು ದೊರೆತಿದ್ದು ಒಂದಕ್ಕೊಂದು ಅತೀ ಹತ್ತಿರದ ಸಾಮ್ಯವನ್ನು ಹೊಂದಿದೆ. ಕುಳಿತಿರುವ ಈ ದುರ್ಗಾವಿಗ್ರಹಗಳ ಪೀಠದ ಮೇಲೆ ಪ್ರೇತವಿರುವುದರಿಂದ ಇದು ಸ್ಮಶಾನದುರ್ಗೆ ಆಗಿರುವ ಸಾಧ್ಯತೆ ಇದೆ. ಈ ವಿಗ್ರಹಗಳಲ್ಲಿ ಒಂದೆರಡು ರೌದ್ರಾಕಾರವಾಗಿ ಕಣ್ಣನ್ನು ತೆರೆದಿವೆ. ಇವೆಲ್ಲವೂ ಸುಮಾರು ಒಂದೇ ಕಾಲಕ್ಕೆ ಅನ್ವಯಿಸುವುದರಿಂದ ಮತ್ತು ಒಂದೇ ಕಡೆಯಲ್ಲಿ ಇರುವುದು ವೈಶಿಷ್ಟ್ಯಪೂರ್ಣವಾಗಿದೆ. ಅಲ್ಲದೇ ಇದು ಮೂರ್ತಿಗಳನ್ನು ತಯಾರಿಸುವ ಕೇಂದ್ರ ಸ್ಥಳವಾಗಿತ್ತೇ? ಎಂಬ ಪ್ರಶ್ನೆಯು ಉದ್ಭವಿಸುತ್ತದೆ ಅಥವಾ ಸಪ್ತ ಮಾತೃಕೆಯ ಗುಂಪಿಗೆ ಸೇರಿತ್ತೆ? ಒಂದು ವೇಳೆ ಸಪ್ತ ಮಾತೃಕೆಯ ಗುಂಪಿಗೆ ಸೇರಿದ್ದರೆ ಒಂದೇ ವಿಧವಾಗಿ ಎಲ್ಲ ಮೂರ್ತಿಗಳನ್ನು ಯಾಕೆ ಕೆತ್ತುತ್ತಿದ್ದರು? ಅಥವಾ ಸಪ್ತಮಾತೃಕೆಯರನ್ನು ಬೇರೆ ಬೇರೆ ರೂಪದಲ್ಲಿ ಕೆತ್ತುತ್ತಿದ್ದ ಕಾಲಮಾನದ ನಂತರ ಕೇವಲ ಗುಪ್ಪೆ-ಗುಪ್ಪೆಯಾಗಿ ತೋರಿಸುತ್ತಿದ್ದುದರ ನಡುವಿನ ಒಂದು ವಿಧವಾಗಿರಬಹುದೇ? ಇವೆಲ್ಲ ಪ್ರಶ್ನೆಗೆ ಉತ್ತರ ಇನ್ನು ಹುಡುಕಬೇಕಾಗಿದೆ.

ಬೆಳ್ಳಟ್ಟಿಯಲ್ಲಿ ದೊರೆತ ಸೂರ್ಯನ ಮೂರ್ತಿಯು ಕಲೆಯಲ್ಲಿ ಅಷ್ಟೇ ಸುಂದರವಾಗಿದ್ದು ರಥಾರೂಢನಾದ ಇವನ ರಥವನ್ನು ಅರುಣನು ಚಲಿಸುತ್ತಿದ್ದಾನೆ. ಸೂರ್ಯನ ಕೊರಳಲ್ಲಿ ತೋರುವ ವನಮಾಲೆ ಈ ಶಿಲ್ಪದ ಮುಖ್ಯ ಲಕ್ಷಣ. ಇಂತಹ

ವನಮಾಲೆಯು ಉತ್ತರಭಾರತದ ಶಿಲ್ಪಶೈಲಿಯಲ್ಲಿ ಸಾಮಾನ್ಯ. ಈ ಮೂರ್ತಿಯಲ್ಲಿ ಉತ್ತರ ಭಾರತದ ಕಲಾಪ್ರಭಾವವನ್ನು ಕಾಣಬಹುದಾಗಿದೆ.

ಭಾರತೀಯ – ಇಸ್ಲಾಮ್ ಶೈಲಿಯಲ್ಲಿ ರಚಿಸಲ್ಪಟ್ಟ ನಾರಗುಡಿಯ ಶಿವಾಲಯ ಕೆಳದಿ ವಾಸ್ತುಶಿಲ್ಪದ ಒಂದು ವೈಶಿಷ್ಟ್ಯವಾಗಿದೆ. ಇದೇ ಕಾಲಮಾನಕ್ಕೆ ಸೇರಬಹುದಾದ ಶಿರಳಗಿಯ ವೀರಭದ್ರ ಹಾಗೂ ಗರುಡ ಉತ್ತಮ ಕಲಾಕೃತಿಗಳಲ್ಲೊಂದಾಗಿದೆ.

ಆಧಾರ ಗ್ರಂಥಗಳು

1. ಗುರುರಾಜ ಭಟ್ಟ ಪಿ., 'ಸ್ಟಡೀಸ್ ಇನ್ ತುಳುವ ಹಿಸ್ಟ್ರಿ ಅಂಡ್ ಕಲ್ಚರ್', ಉಡುಪಿ, 1975.
2. ಸುಂದರ ಅ., 'ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು', 'ಕರ್ನಾಟಕ–ಭಾರತಿ', ಸಂ. 8, ಸಂಚಿಕೆ 7, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1976.
3. ಸುಂದರ ಅ., 'ಸಿದ್ಧರ ಮತ್ತು ಸುಂಕೇರಿ ಗ್ರಾಮಗಳಲ್ಲಿರುವ ಎರಡು ಅಪರೂಪದ ಶಿಲಾಮೂರ್ತಿಗಳು', 'ಕರ್ನಾಟಕ ಭಾರತಿ', ಸಂ. 22, ಸಂಚಿಕೆ 3, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, 1990.

❑

ಮುಂಡ್ಕಿಯ ಒಂದು ಅಪೂರ್ವ ಸೂರ್ಯನ ವಿಗ್ರಹ

– ಆರ್.ಆರ್. ಜೋಶಿ

ಇಂದಿನವರೆಗೂ ಸೂರ್ಯನ ಆರಾಧನೆಯ ಸ್ಥಳವಾಗಿದ್ದ ಮುಂಡ್ಕಿ (ಅರ್ಲವಾಡದ ಒಂದು ಭಾಗ) ಅಳ್ನಾವರದಿಂದ ಪಶ್ಚಿಮಕ್ಕೆ ಸುಮಾರು ಐದು ಕಿ.ಮೀ. ದೂರದಲ್ಲಿದೆ. ಇಲ್ಲಿ ಪ್ರಾಚೀನ ಪ್ರಸಿದ್ಧ ಸೂರ್ಯ ದೇವಾಲಯ, ಕಲ್ಮೇಶ್ವರ ದೇವಾಲಯ, ಮೂರ್ತಿಶಿಲ್ಪಗಳು ಹಾಗೂ ವೀರಗಲ್ಲುಗಳಿವೆ.

ಮುಂಡ್ಕಿಯ ಪ್ರಾಚೀನತೆ ಇದುವರೆಗೂ ತಿಳಿದು ಬಂದಿಲ್ಲ. ಅನಿಲಾಪುರ (ಇಂದಿನ ಆಳ್ನಾವರ) ಗೋವೆಯ ಕದಂಬರ ಉಪರಾಜಧಾನಿಯಾಗಿತ್ತು. ಮುಂಡ್ಕಿ ಈ ರಾಜಧಾನಿ ಪಟ್ಟಣದ ಒಂದು ಮುಖ್ಯ ಪುರವಾಗಿರಬಹುದು.

ಸೂರ್ಯನ ದೇವಾಲಯ : ಪ್ರಾಚೀನವಾದ ಈ ದೇವಾಲಯ ಬಹಳಷ್ಟು ನಾಶವಾಗಿದ್ದು, ಅರ್ಲವಾಡದ ಪ್ರಜ್ಞಾವಂತ ಜನರಿಂದ ಈಗ ಜೀರ್ಣೋದ್ಧಾರಗೊಳ್ಳುತ್ತಿದೆ. ಗರ್ಭಗುಡಿಯಲ್ಲಿ ಎತ್ತರದ ಚತುರ್ರಥ ಪಾಣಿಪೀಠದ ಮೇಲೆ ಸುಂದರವಾದ ಸೂಕ್ಷ್ಮ ಕೆತ್ತನೆಯ ಸಮಭಂಗದಲ್ಲಿಯ ಸೂರ್ಯನ ವಿಗ್ರಹವು ಅತ್ಯಂತ ಮನೋಹರವಾಗಿದೆ. ಪಾಣಿಪೀಠ 72 ಸೆಂ.ಮೀ. ಎತ್ತರ, 1.33 ಸೆಂ.ಮೀ. ಅಗಲವಾಗಿದೆ. ಇದರ ಬಲಗಡೆ ಜಲಹರಿಯಿದೆ. ಇದು ಸಹಾ ಆಕರ್ಷಕವಾಗಿದ್ದು, ಅರಳಿದ ಪದ್ಮದ ಹಾಗಿದೆ. ಸೂರ್ಯನ ಹಿಂದಿನ ಮಕರ ತೋರಣದ ಪ್ರಭಾವಳಿ ಸಂಪೂರ್ಣ ಭಗ್ನವಾಗಿದ್ದರೂ ಇಡಿ ಶಿಲ್ಪದ ಭವ್ಯತೆಗೆ, ಚೆಲುವಿಗೆ ಕುಂದುಬಂದಿಲ್ಲ. ಈ ಮಕರತೋರಣದ ನಾಲ್ಕೈದು ಭಾಗಗಳು ಭಗ್ನವಾಗಿ ಬಿದ್ದಿವೆ. ಮಕರಗಳ ಬಾಯಿಯಿಂದ ಹೊರಹೊರಟ ಕಲಾತ್ಮಕವಾದ ಹೂಬಳ್ಳಿಯಲ್ಲಿ ಅಷ್ಟದಿಕ್ಪಾಲಕರು, ಮಾಲಾಕಾರರು, ಉಷಾ ಪ್ರತ್ಯುಷಾರನ್ನು ನೋಡಬಹುದು.

ಸೂರ್ಯನ ವಿಗ್ರಹ : ಈ ವಿಗ್ರಹದ ಎತ್ತರ 2.36 ಸೆಂ.ಮೀ. ಹಾಗೂ ಅಗಲ 75 ಸೆಂ.ಮೀ. ದ್ವಿಭುಜ ಸೂರ್ಯನು ಪದ್ಮಪೀಠದ ಮೇಲೆ ಸಮಭಂಗದಲ್ಲಿ ನಿಂತಿರುವನು. ಈ ದೇವತೆಯು ಕೈಗಳಲ್ಲಿ ಸೂಕ್ಷ್ಮ ಕಲಾ ಕೆತ್ತನೆಯ ಪದ್ಮಗಳನ್ನು ಬೆರಳುಗಳಿಂದ ಹಿಡಿದಿರುವನು. ಕೈಬಳೆ, ತೋಳಬಂಧ, ಭುಜಬಂಧಗಳಿವೆ. ಎಲ್ಲಾ ಬೆರಳುಗಳಲ್ಲಿ ಉಂಗುರಗಳಿವೆ. ಕಾಲುಗೆಜ್ಜೆ, ಕಾಲಖಡಗ, ಮೇಖಲ, ಕಾಲುಂಗರಗಳಿವೆ. ಕೊರಳಲ್ಲಿ ಒಂದು ಎಳೆಯ ಸರ, ಪದ್ಮಪದಕದ ಸರ, ಉದ್ದನೆಯ ಸರ, ಯಜ್ಞೋಪವೀತ, ವೈಜಯಂತಿಮಾಲೆ ಮುಂತಾದ ಅಲಂಕೃತ ಸೂಕ್ಷ್ಮ ಕೆತ್ತನೆಯ ಆಭರಣಗಳಿಂದ ಅಲಂಕೃತವಾಗಿದ್ದಾನೆ. ಟೊಂಕಾಭರಣವು ಗಮನಾರ್ಹವಾಗಿದೆ. ಸುಂದರ ಕಲಾತ್ಮಕವಾದ ಕರಂಡ ಕಿರೀಟವಿದೆ. ಕಿರೀಟದ ಮೇಲೆ ಸಿಂಹ ಮುಖದಿಂದ ಹೊರಬಂದ ಮುತ್ತಿನ ಕುಚ್ಚು ಕಲಾತ್ಮಕವಾಗಿದೆ. ಕಿರೀಟದ ನಡುವೆ ಪದಕವಿದೆ. ಕಿರೀಟದ ಆಚೆ ಈಚೆ ಮುತ್ತಿನಸರ ಜೋತುಬಿದ್ದಿದೆ. ಕಿವಿಯಲ್ಲಿ ಕರ್ಣಕುಂಡಲಗಳಿವೆ. ಸೂರ್ಯನ ಮುಖಭಾವ ಗಂಭೀರವಾಗಿದೆ. ಮುತ್ತಿನ ಅಂಚಿನ ಪ್ರಭಾವಳಿಯು ಇದೆ.

ಪ್ರಭಾವಳಿಯ ಕೆಳಗೆ ಸೂರ್ಯನ ಎಡಕ್ಕೆ ಇಬ್ಬರು ಚಾಮರಧಾರಣಿಗಳು ನಿಂತಿದ್ದಾರೆ. ಒಬ್ಬಳು ಒಂದು ಕೈಯಲ್ಲಿ ಚಾಮರ, ಇನ್ನೊಂದು ಕೈಯ್ಲಿ ಪೂರ್ಣಾಫಲವನ್ನು ಹಿಡಿದಿದ್ದಾಳೆ. ಇನ್ನೊಬ್ಬಳು ಒಂದು ಕೈಯಲ್ಲಿ ಚಾಮರ, ಮತ್ತೊಂದು ಕೈಯನ್ನು ತಲೆಯ ಮೇಲ್ಗಡೆ ಹಿಡಿದಿರುವಳು. ಬಲಗಡೆಗೆ ಇರುವ ಇಬ್ಬರು ಚಾಮರಧಾರಣಿಗಳು ಎಡಕ್ಕೆ ಇರುವ

ಚಾಮರಧಾರಣಿಗಳಂತೆ ಇದ್ದಾರೆ. ಆದರೆ ಇಲ್ಲಿ ತಲೆಯ ಮೇಲ್ಗಡೆ ಹಿಡಿದಿರುವವಳ ಕೈಯಲ್ಲಿ ಹೂಗೊಂಚಲವಿದೆ. ಇವರೆಲ್ಲರೂ ದ್ವಿಭಂಗದಲ್ಲಿ ಇದ್ದು, ಸರ್ವ ಅಲಂಕೃತರಾಗಿದ್ದಾರೆ. ಕೊನೆಯ ಚಾಮರಧಾರಣಿಗಳು ಕತ್ತರಿಕಾಲಿನಲ್ಲಿ ನಿಂತಿದ್ದಾರೆ.

ಸೂರ್ಯನ ಪೀಠದ ಮೇಲೆ ಉಬ್ಬುಶಿಲ್ಪದಲ್ಲಿ ಏಳು ಕುದುರೆಗಳ ನಡುವೆ ಸಾರಥಿಯಾದ ಅರಣನಿರುವನು. ಒಟ್ಟಿನಲ್ಲಿ ಇದೊಂದು ಗೋವೆಯ ಕದಂಬರ ವಿಶಿಷ್ಟ ಮಾದರಿಯ ಕಲಾತ್ಮಕ, ಸೂಕ್ಷ್ಮ ಕೆತ್ತನೆಯ, ಮನಮೋಹಕ ಕೃತಿಯಾಗಿದೆ. ಅಷ್ಟೇ ಅಲ್ಲದೇ ಈ ಭಾಗದ ಒಂದು ಮೇರುಕೃತಿಯಾಗಿದೆ. ಶೈಲಿಯ ದೃಷ್ಟಿಯಿಂದ ನೋಡಲಾಗಿ ಇದು 12ನೇ ಶತಮಾನಕ್ಕೆ ಸೇರಿದ್ದಾಗಿದೆಯೆಂದು ಹೇಳಬಹುದು.

ಭೈರವ : ಈ ಶಿಲಾಪ್ರತಿಮೆಯ ಎತ್ತರ 1.10 ಸೆಂ.ಮೀ. ಹಾಗೂ ಅಗಲ 61 ಸೆಂ.ಮೀ. ಗುಡಿಯ ಮುಂಭಾಗದ ಎಡಕ್ಕೈ ಈ ಪ್ರತಿಮೆ ಇದೆ. ಭೈರವನು ನಾಲ್ಕು ಕೈಗಳಲ್ಲಿ ತ್ರಿಶೂಲ, ಖಡ್ಗ, ಢಮರು, ರಾಕ್ಷಸನ ಜುಟ್ಟನ್ನು ಹಿಡಿದಿರುವನು. ತನ್ನ ಬಲಗಾಲನ್ನು ನಾಯಿಯ ಬೆನ್ನಮೇಲಿಟ್ಟಿರುವನು. ಇದೊಂದು ಗಮನಾರ್ಹ ಭಂಗಿಯಾಗಿದೆ. ನಾಯಿಯು ರಾಕ್ಷಸನ ರುಂಡವನ್ನು ನೆಕ್ಕಲು ಕಾತುರವಾಗಿದೆ. 15 ರುಂಡಗಳು ವೈಜಯಂತಿಮಾಲೆ, ನಾಗಸರ್ಪದ ಕೊರಳಹಾರ, ಕೈಬಳೆ, ಖಡೆ, ಮೇಖಲ, ಕಾಲಗೆಜ್ಜೆ, ಕಿವಿಯೋಲೆ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ತಲೆಕೂದಲು ತಲೆಯಹಿಂದೆ ಸುತ್ತಲೂ ಹರಡಿ ಎತ್ತರವಾದ ಪ್ರಭಾವಳಿಯಂತೆ ಇದೆ. ಮುಖದಲ್ಲಿ ರೌದ್ರರೂಪವಿದೆ. ಇದು ಸಹಾ ಗೋವೆಯ ಕದಂಬರ ಅಪರೂಪದ ಮಾದರಿಯ ಕಲಾಕೃತಿಯಾಗಿದೆ.

ವಿಘ್ನೇಶ್ವರ : ಈ ಮೂರ್ತಿಯ ಎತ್ತರ 63 ಸೆಂ.ಮೀ. ಹಾಗೂ ಅಗಲ 60 ಸೆಂ.ಮೀ. ಚತುರ್ಮುಖನಾದ ಗಣಪತಿಯು ಸಂಖಾಸೀನನಾಗಿದ್ದಾನೆ. ಹಿಂದಿನ ಎರಡೂ ಕೈಗಳು ಭಗ್ನವಾಗಿವೆ. ಮುಂದಿನ ಒಂದು ಕೈಯಲ್ಲಿ ದಂತವನ್ನು, ಇನ್ನೊಂದು ಕೈಯಲ್ಲಿ ಮೋದಕ ಪಾತ್ರೆಯನ್ನು ಹಿಡಿದಿರುವನು. ಇವನ ಸೊಂಡಿಲು ಬಲಮೂರಿಯಾಗಿದೆ. ಹೊಟ್ಟೆಯ ಮೇಲೆ ನಾಗ ಉದರ ಬಂಧವಿದೆ. ಭುಜಸರ, ಕೊರಳಹಾರ, ಕೈಬಳೆ ಮುಂತಾದ ಆಭರಣಗಳಿಂದ ಅಲಂಕೃತನಾಗಿದ್ದಾನೆ. ಇದು ಸಹಾ 12ನೇ ಶತಮಾನಕ್ಕೆ ಸೇರಿದ್ದಾಗಿದೆ.

ರಾಜಯೋಗಿ : ಈತನ ಎತ್ತರ 75 ಸೆಂ.ಮೀ., ಅಗಲ 56 ಸೆಂ.ಮೀ. ಪದ್ಮಾಸೀನನಾಗಿ ಕುಳಿತಿರುವನು. ಕೈಗಲು ಯೋಗಮುದ್ರೆಯಲ್ಲಿವೆ. ಕೈಬಳೆ, ಬಾದಾಮಿ ಆಕಾರದ ತೋಳಬಂಧಗಳಿವೆ. ಯಜ್ಞೋಪವೀತವಿದೆ. ಮೇಲ್ಗಡೆ ಛತ್ರವಿದೆ. ಪ್ರಭಾವಳಿಯ ಸಿಂಹಮುಖದಿಂದ ಹೊರಬಂದ ಹೂಬಳ್ಳಿ ಕಲಾತ್ಮಕವಾಗಿದೆ. ಯೋಗಿಯ ಪಾದದ ಹತ್ತಿರ ಆಚೆ ಈಚೆ ಸ್ತ್ರೀಪುರುಷ ಭಕ್ತರಿರುವರು. ಯೋಗಿಯ ಹಿಂದೆ ಆಚೆ ಈಚೆ ಚಾಮರಗಳಿವೆ. ಈ ಶಿಲ್ಪವನ್ನು ನೋಡಿದಾಕ್ಷಣ ಇದು ತೀರ್ಥಂಕರ ವಿಗ್ರಹವೆಂದು ಭಾಸವಾಗುತ್ತದೆ. ಇದು ಸಹಾ 12ನೇ ಶತಮಾನಕ್ಕೆ ಸೇರಿದ್ದಾಗಿದೆ.

ಮೂಲಸ್ಥಾನ ದೇವರಾದ ಶ್ರೀ ಸೂರ್ಯ ನಾರಾಯಣನಿಂದ ಹಿಡಿದು ಇಲ್ಲಿರುವ ಎಲ್ಲ ವಿಗ್ರಹಗಳಿಗೆ ಕಂತಿ ಮಾಡಿಸಿದ್ದಾರೆ. ಆದಾಗ್ಯೂ ಅವುಗಳ ಆಕರ್ಷಣೆಗೆ ಕುಂದುಬಂದಿಲ್ಲ.

ರಾಷ್ಟ್ರಕೂಟ ಕಾಲದ ವೀರಗಲ್ಲು : ಇದರ ಎತ್ತರ 1.83 ಸೆಂ.ಮೀ. ಅಗಲ 94 ಸೆಂ.ಮೀ. ಹಾಗೂ ದಪ್ಪ 11 ಸೆಂ.ಮೀ. ಇದು ಗೋಗ್ರಹಣದ ವೀರಗಲ್ಲು ವೀರನ ಹಿಂದೆ ಏಳು ಆಕಳುಗಳು ನಿಂತಿವೆ. ವೈರಿಗಳು ಧನುರ್ಧಾರಿಗಳಾಗಿದ್ದಾರೆ. ವೀರನು ಖಡ್ಗ ಮತ್ತು ಢಾಲುಗಳನ್ನು ಹಿಡಿದಿರುವನು. ಮಧ್ಯಭಾಗದಲ್ಲಿ ವೀರನು ಅಪ್ಸರೆಯ ಭುಜದ ಮೇಲೆ ಕೈಹಾಕಿ ಮೇಲೆ ಹಾರುವ ಸ್ಥಿತಿಯಲ್ಲಿರುವನು. ಸುತ್ತಲೂ ವಾದ್ಯಗಾರರಿರುವರು. ಮೇಲ್ಭಾಗದಲ್ಲಿ ವೀರನು ಆಸನದ ಮೇಲೆ ಸುಖಾಸೀನನಾಗಿ ಕುಳಿತಿರುವನು. ತನ್ನ ಕೈಗಳಲ್ಲಿ ಪದ್ಮಗಳನ್ನು ಹಿಡಿದಿರುವನು. ಇವನ ಆಚೆ ಈಚೆ ಚಾಮರಧಾರಣೆ ಅಪ್ಸರೆಯರಿರುವರು. ಈ ಬಿಡಿಶಿಲ್ಪ ಎರಡು ಕಂಬಗಳ ನಡುವೆ ಚಿತ್ರಿಸಲ್ಪಟ್ಟಿದೆ. ಮೇಲ್ಭಾಗದಲ್ಲಿ ಶಾಲಾ ಮಾದರಿಯ ಶಿಖರವಿದೆ. ಆಚೆ ಈಚೆ ಸಣ್ಣ ಶಿಖರಗಳಿವೆ. ಈ ವೀರಗಲ್ಲನ್ನು ಸೂಕ್ಷ್ಮ ದೃಷ್ಟಿಯಿಂದ ನೋಡಲಾಗಿ ಇದು ರಾಷ್ಟ್ರಕೂಟರ ಕಾಲದ ವೀರಗಲ್ಲಾಗಿದೆ. ಆದರೆ ಮುಂಡ್ಕಿಯ ಪ್ರಾಚೀನತೆ ರಾಷ್ಟ್ರಕೂಟರ ಕಾಲಕ್ಕೆ (9ನೇ ಶತಮಾನಕ್ಕೆ) ಹೋಗುತ್ತದೆ. ಮುಂದೆ ಗೋವೆಯ ಕದಂಬರ ಕಾಲದಲ್ಲಿ ಇದು ಒಂದು ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿ ಹೊಂದಿರಬಹುದು.

ಕಲ್ಮೇಶ್ವರ ದೇವಾಲಯ

ಪ್ರಾಚೀನವಾದ ಈ ದೇವಾಲಯ ಪೂರ್ಣ ಭಗ್ನವಾಗಿದೆ. ಇದರ ಸುತ್ತಮುತ್ತಲೂ ಗುರುತಿಸಲಾರದಷ್ಟು ಜಿನ, ಕೇಶವ, ಭೈರವ ಮುಂತಾದ ಶಿಲಾಪ್ರತಿಮೆಗಳು ಭಗ್ನವಾಗಿ ಬಿದ್ದಿವೆ. ಆದ್ದರಿಂದ ಇಲ್ಲಿ ಶೈವ, ಜೈನ, ವೈಷ್ಣವ ಧರ್ಮಗಳು ಪ್ರಚಲಿತದಲ್ಲಿ ಇದ್ದವು ಎಂದು ಹೇಳಬಹುದು. ಕಾಳಾಮುಖ ಸೈವರು ಸೂರ್ಯೋಪಾಸಕರಾಗಿದ್ದು ಅವನ ಆರಾಧಕರೂ ಆಗಿದ್ದರು. ಇದಕ್ಕೆ ಇಲ್ಲಿರುವ ಬೃಹದಾಕಾರದ ಸೂರ್ಯನ ಸುಂದರ ಕಲಾಕೃತಿಯೇ ಸಾಕ್ಷಿಯಾಗಿದೆ. ಬಹುಶಃ ಇದು ಕಾಳಾಮುಖ ಶೈವರಸ್ಥಳ ಇರಬಹುದು. ಧಾರ್ಮಿಕ ಕೇಂದ್ರವಾಗಿ, ಕಲಾಸಂಪತ್ತಿನ ಬೀಡಾಗಿ ಮೆರೆದ ಮುಂಡ್ಕಿ ಈಗ ಒಂದು ಹಾಳೂರಾಗಿದೆ.

❑

ಮುಂಬಯಿ ಕರ್ನಾಟಕ : ಪ್ರಾದೇಶಿಕ ಇತಿಹಾಸದ ಆಕರಗಳು ಮತ್ತು ಅವುಗಳ ಅಧ್ಯಯನ

– ಡಾ. ಶ್ರೀನಿವಾಸ ಹಾವನೂರ

ಈಗಿನ ಕರ್ನಾಟಕ ರಾಜ್ಯದ ನಾಲ್ಕು ಜಿಲ್ಲೆಗಳಾದ ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡಗಳನ್ನೊಳಗೊಂಡ ಸಣ್ಣ ಪ್ರಾಂತ್ಯವೇ ಮುಂಬಯಿ ಕರ್ನಾಟಕ. ಕ್ರಿ.ಶ. 1818ರ ಬ್ರಿಟಿಷರ ಆಳ್ವಿಕೆಯ ಆರಂಭದಲ್ಲಿ ಮೇಲಿನ ಜಿಲ್ಲೆಗಳನ್ನು ಮುಂಬಯಿ ಪ್ರಾಂತ್ಯಕ್ಕೆ ಸೇರಿಸಿದಾಗ ಈ ಭಾಗಕ್ಕೆ ಮುಂಬಯಿ ಕರ್ನಾಟಕ ಎಂಬ ಹೆಸರು ಬಂದಿತು. (ಉತ್ತರ ಕನ್ನಡ ಕ್ರಿ.ಶ. 1862ರಲ್ಲಿ ಈ ವಿಭಾಗಕ್ಕೆ ಸೇರಿಸಲ್ಪಟ್ಟಿತು). ಕ್ರಿ.ಶ. 1956ರಲ್ಲಿ ರಾಜ್ಯಗಳ ಪುನರ್ರಚನೆಯಾಗುವವರೆವಿಗೂ ಇದೇ ಹೆಸರು ಮುಂದುವರೆಯಿತು.

ಆದಿಲ್‌ಷಾಹಿಗಳ ಪತನ (ಕ್ರಿ.ಶ. 1686) ಮತ್ತು ಔರಂಗಜೇಬನ ಮರಣ (ಕ್ರಿ.ಶ. 1707)ಗಳ ನಂತರದ ಪೇಷ್ವಾಯಿ ಕಾಲದಲ್ಲಿಯೇ ಈ ಪ್ರಾಂತ್ಯಕ್ಕೆ ಒಂದು ಅಂಗೀಕೃತ ಅಸ್ತಿತ್ವವಿದ್ದಿತು. ನಂತರ ಕೆಲವು ಕಾಲ ಇದು ಸತಾರ, ಕೊಲ್ಲಾಪುರ ಮತ್ತು ಸಾಂಗ್ಲಿಯ ಮರಾಠಿ ನಾಯಕರ, ಮೈಸೂರು ಅರಸರ ಹಾಗೂ ಕೆಲ ಮಟ್ಟಿಗೆ ನಿಜಾಮರ ವಶದಲ್ಲಿದ್ದಿತು. ಮೇಲಿನ ನಾಯಕರು ಆಗಿಂದಾಗ್ಗೆ ನಡೆಸಿದ ಧಾಳಿಗಳನ್ನು ಈ ಪ್ರಾಂತ್ಯದ ಸ್ವಾದಿ, ಸವಣೂರು, ಕಿತ್ತೂರು ಮುಂತಾದ ಸಂಸ್ಥಾನಿಕರು ಭಾರಿ ಕಪ್ಪ ಕಾಣಿಕೆಗಳನ್ನು ನೀಡಿ, ನಿವಾರಿಸಿಕೊಳ್ಳಬೇಕಿತ್ತು. ತುಂಗಭದ್ರಾ ನದಿಯ ನೈಸರ್ಗಿಕ ತಡೆಯಿಂದಾಗಿ ಮೈಸೂರು ಅರಸರ ಧಾಳಿ ಪರಿಣಾಮಕಾರಿಯಾಗಿರಲಿಲ್ಲ. ಆದರೆ ಮರಾಠರ ಭೌಗೋಳಿಕ ಸಾಮೀಪ್ಯದಿಂದಾಗಿ ಅವರೊಡನೆ ಈ ಪ್ರಾಂತ್ಯದವರ ಒಡನಾಟ ಆಳವಾಗಿಯೇ ಇದ್ದಿತು. ಇಬ್ಬರ ನಡುವೆ ಸಾಮಾಜಿಕ, ಧಾರ್ಮಿಕ ಮತ್ತು ಆಡಳಿತಾತ್ಮಕ ಕೊಡುಪಡೆಗಳು ನಡೆಯುತ್ತಿದ್ದವು. ಅಂತರ್ ಪ್ರಾಂತೀಯ ವಿವಾಹಗಳು ಸಾಮಾನ್ಯವಾಗಿದ್ದು, ಎಷ್ಟೋ ಸಂಸಾರಗಳು ಇತ್ತಿಂದತ್ತ ವಲಸೆ ಹೋದ ಸಂದರ್ಭಗಳೂ ಇದ್ದುವು. ಮರಾಠರ ರಾಜಕೀಯ ಪರಮಾಧಿಕಾರದಿಂದ ಮುಂಬಯಿ ಕರ್ನಾಟಕದ ಮೇಲೆ ಅವರ ಪ್ರಭಾವ ತೀಕ್ಷ್ಣವಾಗಿತ್ತು. ಈ ಪ್ರಾಂತ್ಯದ ಸ್ವಾತಂತ್ರ್ಯ ಚಳುವಳಿ ಹಾಗೂ ಸಾಮಾಜಿಕ ಮತ್ತು ಶೈಕ್ಷಣಿಕ ಪುನರುತ್ಥಾನಗಳ ಕಾರಣಪುರುಷರೂ ಅಗರ್‌ಕರ್, ತಿಲಕ್, ರಾನಡೆ ಮತ್ತು ಗೋಖಲೆ ಮುಂತಾದವರೇ ಆಗಿದ್ದರು.

'ಮುಂಬಯಿ ಕರ್ನಾಟಕ' ಎಂಬ ಹಣೆಪಟ್ಟ ಈಗ ಈ ಪ್ರಾಂತ್ಯಕ್ಕೆ ಇಲ್ಲವಾದುದರಿಂದ ಕ್ರಿ.ಶ. 1700 ರಿಂದ 1920ರ ತನಕ, ಅಂದರೆ ಪೇಷ್ವೆಯರ ಕಾಲದಿಂದ ತಿಲಕರ ತನಕ ಈ ಪ್ರಾಂತ್ಯದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ರಂಗಗಳ ಪರಸ್ಪರ ಕೊಡುಪಡೆಯ ಸುದೀರ್ಘ ಅಧ್ಯಯನ ನಡೆಸಬೇಕೆಂದು ಯೋಜಿಸಲಾಗಿದೆ. ಅಧ್ಯಯನ ನಡೆಯಬೇಕಾದ ಕಾಲವನ್ನು ಸ್ಥೂಲವಾಗಿ ಕೆಳಕಂಡಂತೆ ವಿಂಗಡಿಸಬಹುದು ;

ಕ್ರಿ.ಶ. 1700 ರಿಂದ 1800 – ಪೇಷ್ವಾಯಿ ಪ್ರಭಾವದ ಕಾಲ

ಕ್ರಿ.ಶ. 1800 ರಿಂದ 1880 ಬ್ರಿಟಿಷರ ಆಳ್ವಿಕೆ (ಪ್ರಥಮ ಘಟ್ಟ)

ಕ್ರಿಶ. 1880 ರಿಂದ 1920 ಪುನರುತ್ಥಾನ (ತಿಲಕರ ಕಾಲ)

ಈ ಪ್ರಾಂತ್ಯದ ಇತಿಹಾಸ ಪುನರ್ರಚನೆಯ ಆಕರಗಳನ್ನು ಕೆಳಕಂಡ ರೀತಿ ವಿಂಗಡಿಸಬಹುದು.

1. ಪತ್ರಾಗಾರ ಇಲಾಖೆಯಲ್ಲಿ ಲಭ್ಯವಿರುವ ಕಾಗದ ಪತ್ರ, ದಾಖಲೆಗಲು (ಮೋಡಿ ಲಿಪಿಯ ಮರಾಠಿ ದಾಖಲೆಗಳು ಹಾಗೂ ಇಂಗ್ಲಿಷ್, ಕನ್ನಡ, ಪರ್ಷಿಯನ್ ಮತ್ತು ಕೆಲವು ಐರೋಪ್ಯ ಭಾಷೆಗಳ ದಾಖಲೆಗಳು)
2. ಸಾಹಿತ್ಯಕ ಕೃತಿಗಳು (ಕನ್ನಡ ಮತ್ತು ಮರಾಠಿ)
3. ಬಖೈರುಗಳು / ಖೈಫೀಯತ್‌ಗಳು
4. ಜಾನಪದ ಸಂಪ್ರದಾಯಗಳು
5. ವಂಶಾವಳಿ (ವಂಶಗಳ ಹೆಸರುಗಳು, ಹೊಸ ಸ್ಥಳ ನಾಮಗಳು)
6. ಚರಿತ್ರಪೂರ್ವ ಮಾನವ ನಿರ್ಮಾಣಗಳು
7. ವಾಸ್ತುಶಿಲ್ಪ ಉಳಿಕೆಗಳು
8. ವಾಚಿಕ ಇತಿಹಾಸ

ಆಡಳಿತ, ಕಲೆ ಮತ್ತು ವಾಸ್ತುಶಿಲ್ಪ, ವಾಣಿಜ್ಯ ಮತ್ತು ಆರ್ಥಿಕ ಪರಿಸ್ಥಿತಿ, ಭಾಷೆ ಮತ್ತು ಸಾಹಿತ್ಯ, ಸೇನಾ ವ್ಯವಸ್ಥೆ, ಧಾರ್ಮಿಕ ಕಟ್ಟುಪಾಡು, ಸಾಮಾಜಿಕ ನೀತಿ, ಇವುಗಳ ಸಂಬದ್ಧತೆ – ಈ ದಿಶೆಯಲ್ಲಿ ಆಕರಗಳನ್ನು ಪತ್ತೆ ಹಚ್ಚಿ ದಾಖಲಿಸಲು ಉದ್ದೇಶಿಸಲಾಗಿದೆ. ಇದು ಮಾಮೂಲು ದಾಖಲಿಕೆಯಾಗಿರದೆ, ಮುಂಬಯಿ ಕರ್ನಾಟಕ ಪ್ರಾಂತ್ಯದ ಅಧ್ಯಯನ ಮಾಹಿತಿಯ ಪ್ರಾಮುಖ್ಯತೆಯ ಉಲ್ಲೇಖವೆಂಬುದು ಗಮನಾರ್ಹ. ಮೇಲಿನ ಮಾಹಿತಿ ಅಗಾಧವಾಗಿದ್ದು, ಗೌಣವೆಂಬಂತೆ ಕಾಣುವ ವಿಷಯಗಳೂ ತತ್ಕಾಲಕ್ಕೆ ಲಭ್ಯವಾಗಲು, ಅವುಗಳನ್ನು ಗಣಕ ಯಂತ್ರದಲ್ಲಿ ಶೇಖರಿಸಿಡಲು ಉದ್ದೇಶಿಸಲಾಗಿದೆ.

ಆಡಳಿತಾತ್ಮಕ ದೃಷ್ಟಿಯಿಂದ ಮಾತ್ರ ಸೃಷ್ಟಿಯಾದ ನಾಲ್ಕು ಜಿಲ್ಲೆಗಳಿಗೇ ಈ ಅಧ್ಯಯನ ಸೀಮಿತವಾಗಿದ್ದರೂ ನೆರೆಯ ಪ್ರಾಂತ್ಯಗಳಾದ ಸೊಲ್ಲಾಪುರ, ಗುಲ್ಬರ್ಗ, ಚಿತ್ರದುರ್ಗ, ಗೋವಾ ಹಾಗೂ ದಕ್ಷಿಣ ಕನ್ನಡಗಳಿಗೆ ಈ ಪ್ರಾಂತ್ಯ ನಿಕಟವಾಗಿದ್ದುದರಿಂದ ಮೇಲಿನ ಸ್ಥಳಗಳ ಬಗ್ಗೆ ಲಭ್ಯವಿರುವ ಆಕರಗಳ ಶೋಧನೆ ಹಾಗೂ ಅಧ್ಯಯನಗಳೂ ಇಲ್ಲಿ ಸೇರಿವೆ.

ಆಕರಗಳು ಲಭ್ಯವಿರುವ ಸ್ಥಳಗಳೆಂದರೆ :

1. ಪೂಣೆ, ಮುಂಬಯಿ, ಬೆಂಗಳೂರು ಮತ್ತು ಮೈಸೂರುಗಳಲ್ಲಿನ ರಾಜ್ಯ ಪತ್ರಾಗಾರಗಳು (ಪುಣೆಯ ಪೇಷ್ವಾಯಿ ದಫ್ತರುಗಳು ಮುಖ್ಯ)
2. ದೆಹಲಿ ಮತ್ತು ಕಲ್ಕತ್ತಾಗಳ ಕೇಂದ್ರ ಪತ್ರಾಗಾರಗಳು.
3. ಹೊರದೇಶದ ಪತ್ರಾಗಾರಗಳು – ಬ್ರಿಟಿಷ್ ಗ್ರಂಥಾಲಯ, ಲಂಡನ್. (ಇಲ್ಲಿನ ಓರಿಯಂಟಲ್ ಕಲೆಕ್ಷನ್ ಮತ್ತು ಇಂಡಿಯಾ ಆಫೀಸ್ ಲೈಬ್ರರಿ), ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮತ್ತು ಎಡಿನ್‌ಬರೋಗಳ ವಿಶ್ವವಿದ್ಯಾಲಯ ಗ್ರಂಥಾಲಯಗಳು.
4. ಕೊಲ್ಲಾಪುರ, ರಾಮದುರ್ಗ ಮುಂತಾದೆಡೆಗಳ ಸಂಸ್ಥಾನಿಕರ ಸಂಗ್ರಹಗಳು.
5. ಖಾಸಗಿ ಸಂಗ್ರಹಗಳು.
6. ಮುಂಬಯಿ ಸರಕಾರದ ಇನಾಂ ಕಮಿಷನ್ ನಡವಳಿಕೆಗಳು.
7. ವಿಶ್ವವಿದ್ಯಾಲಯ ಗ್ರಂಥಾಲಯಗಳಲ್ಲಿ ಲಭ್ಯವಿರುವ ಆಡಳಿತ ವರದಿಗಳು ಗ್ಯಾಸೆಟಿಯರ್ ಮುಂತಾದ ಮುದ್ರಿತ ಸಾಮಗ್ರಿ.

ಮುಂದುವರೆಯುವ ವಿಧಾನ

ಮೊದಲನೆಯ ಹಂತ : ಮುಂಬಯಿ, ಪುಣೆ, ಬೆಂಗಳೂರು, ಮೈಸೂರು, ನವದೆಹಲಿ ಮತ್ತು ಕಲ್ಕತ್ತಗಳಲ್ಲಿ ಲಭ್ಯವಿರುವ ಪುಸ್ತಕಗಳು, ವರದಿಗಳು ಹಾಗೂ ಪತ್ರಿಕೆಗಳೇ ಮುಂತಾದ ಮುದ್ರಿತ ಸಾಮಗ್ರಿಯ ಪರಿಶೀಲನೆ.

ಎರಡನೆಯ ಹಂತ : ಮುಂಬಯಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಸ್ಥಳಗಳಲ್ಲಿನ ದಾಖಲೆ ಪರಿಶೀಲನೆಗಾಗಿ ಆಯಾಯ ಸ್ಥಳಗಳ ಪತ್ರಾಗಾರಗಳ ಭೇಟಿ.

ಮೂರನೆಯ ಹಂತ : ಕನ್ನಡ ಹಾಗೂ ಮರಾಠಿ ಸಾಹಿತ್ಯ ಕೃತಿಗಳನ್ನು, ಪ್ರವಾಸ ಕಥನಗಳನ್ನೂ ಬಖೈರುಗಳು ಮತ್ತು ಖೈಫಿಯತ್‌ಗಳನ್ನು ಕೂಲಂಕಷವಾಗಿ ಪರಿಶೀಲಿಸುವುದು.

ನಾಲ್ಕನೆಯ ಹಂತ : ಐತಿಹಾಸಿಕ ಘಟನಾವಳಿಗಳನ್ನು ಒದಗಿಸುವ ಲಾವಣಿಗಳೇ ಮುಂತಾದ ಜಾನಪದ ಸಾಹಿತ್ಯದ ಪರಾಮರ್ಶೆ.

ಐದನೆಯ ಹಂತ : ವಲಸೆಗಳ ಬಗ್ಗೆ ಮಾಹಿತಿ ನೀಡುವ ವಂಶಗಳ ಕುಲನಾಮಗಳನ್ನು ಪತ್ತೆ ಮಾಡುವುದು.

ಆರನೆಯ ಹಂತ : ಕೆಲವು ಹಿರಿಯ ವ್ಯಕ್ತಿಗಳನ್ನು ಸಂದರ್ಶಿಸಿ ತನ್ಮೂಲಕ ಅವರವರ ವಂಶ ಚರಿತ್ರೆಯನ್ನೂ ಜೀವನದ ಪ್ರಮುಖ ಘಟನೆಗಳನ್ನೂ ಹಿಂದಿನ ಸಾಮಾಜಿಕ ಸಂಪರ್ಕಗಳನ್ನೂ ಅರಿಯುವುದು.

ಏಳನೆಯ ಹಂತ : ಈ ರೀತಿ ಸಂಗ್ರಹಿಸಿದ ಮಾಹಿತಿಯ ಗ್ರಂಥ ವಿವರಣಾ ಪಟ್ಟಿ, ಅಪರೂಪ ಪದಗಳು ಮತ್ತು ಪ್ರಮುಖ ಐತಿಹಾಸಿಕ ವಿಷಯಗಳನ್ನು ಕ್ರೋಢೀಕರಿಸುವುದು.

ಎಂಟನೆಯ ಹಂತ : ಮುಖ್ಯ ದಾಖಲೆಗಳ ಪರಿಶೀಲನೆಗಾಗಿ ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿ ಅಂಡ್ ರೆಕಾರ್ಡ್ಸ್ ಹಾಗೂ ಇತರೆ ಬ್ರಿಟಿಷ್ ಗ್ರಂಥಾಲಯಗಳ ಭೇಟಿ.

ಸಾರಾಂಶ

ಈ ಯೋಜನೆ ಪೂರ್ಣಗೊಂಡಾಗ ಇತಿಹಾಸ ಅಧ್ಯಯನದ ವಿಧಾನಶಾಸ್ತ್ರದ ಕೆಲವು ಪ್ರಮುಖ ಅಂಶಗಳು ಬೆಳಕಿಗೆ ಬರುತ್ತವೆ – ಅವೆಂದರೆ :

ಅ. ಒಂದು ಸಣ್ಣ ಪ್ರಾಂತ್ಯದ ಅನನ್ಯತೆ ಸ್ಫುಟವಾಗಿ ಚಿತ್ರಿತವಾಗುವಂತೆ ಅದರ ಚರಿತ್ರೆಯ ಪುನರ್ರಚನೆ.

ಆ. ಸ್ಥಳೀಯ ಇತಿಹಾಸದ ಪ್ರಬಲ ಮೂಲಗಳಾದ ಸಣ್ಣ ನಾಯಕರ ಹಾಗೂ ಸಂಸ್ಥಾನಿಕರ ಚರಿತ್ರೆ ರೂಪಗೊಳ್ಳುವುದು.

ಇ. ನೆರೆ ರಾಜ್ಯಗಳ ಸಾಮಾಜಿಕ ಕೊಡುಪಡೆಯ ಸವಿವರ ಅಧ್ಯಯನ.

ಈ. ಅಸಾಂಪ್ರದಾಯಿಕ ಆಕರಗಳಲ್ಲಿನ ಮಾಹಿತಿಯನ್ನು ನಿಖರವಾಗಿ ಗುರ್ತಿಸುವ ಕ್ರಮದ ಮನವರಿಕೆ.

ಉ. ಪತ್ರಾಗಾರ ದಾಖಲೆಗಳ ಅಧ್ಯಯನವನ್ನು ತ್ವರಿತಗೊಳಿಸುವಿಕೆ.

ಊ. ಐತಿಹಾಸಿ ಮಾಹಿತಿಯ ರಕ್ಷಣೆ ಹಾಗೂ ವ್ಯವಸ್ಥಿತ ಅಧ್ಯಯನಕ್ಕಾಗಿ ಗಣಕ ಯಂತ್ರದ ಬಳಕೆ.

ಋ. ಒಂದು ಭಾಷೆಯಲ್ಲಿ ನಡೆದಿರುವ ಅಧ್ಯಯನವನ್ನು ಅನ್ಯ ಭಾಷೆಯ ಪಂಡಿತರ ಗಮನಕ್ಕೆ ತರುವುದು.

ೠ. ಮುಂದಿನ ಆಳವಾದ ಅಧ್ಯಯನಕ್ಕೆ ಪೂರ್ವ ಸಿದ್ಧ ಮೂಲಗಳನ್ನು ಒದಗಿಸುವುದು.

❑

ಕಂದಬರ ಕಾಲದ ಪೆಟ್ಟಿಗೆತಲೆಕಟ್ಟಿನ ಲಿಪಿ : ಕೆಲವು ವಿಚಾರಗಳು

– ಜಿ.ಎನ್. ಶೇಟ್

ಕ್ರಿಸ್ತಶಕ ಮೂರನೇ ಶತಮಾನದಿಂದ ಏಳನೇ ಶತಮಾನದವರೆಗಿನ ಬನವಾಸಿಯ ಕದಂಬರ ಆಳ್ವಿಕೆಯು, ಕರ್ನಾಟಕ ಇತಿಹಾಸವನ್ನು ನಿರ್ಧರಿಸುವುದರಲ್ಲಿ ಪ್ರಮುಖ ಪಾತ್ರವಹಿಸಿದೆ. ಇವರು ಶಾತವಾಹನರ ಪ್ರಾಬಲ್ಯ ಮತ್ತು ವೈಭವಗಳ ಉತ್ತರಾಧಿಕಾರಿಗಳಾಗಿ ಅಧಿಕಾರಕ್ಕೆ ಬಂದವರು. ಈ ಕದಂಬರ ಆಳ್ವಿಕೆಯಲ್ಲಿ ಕರ್ನಾಟಕದ ಸಂಸ್ಕೃತಿಯು ಒಂದು ಹೊಸ ಮೈಲಿಗಲ್ಲನ್ನು ಸ್ಥಾಪಿಸಿತು. ಇವರು ರಾಜಕೀಯವಾಗಿ ಬಲಿಷ್ಠರಾದಾಗ ದಕ್ಷಿಣದಲ್ಲಿ ಪಲ್ಲವ ಮತ್ತು ಗಂಗರೂ ಉತ್ತರದಲ್ಲಿ ವಾಕಾಟಕರೂ ಸಮಕಾಲೀನರಾಗಿದ್ದು, ಇವರೊಂದಿಗೆ ಸ್ನೇಹದಿಂದಿದ್ದರು. ಈ ಸ್ನೇಹವು ವಾಕಾಟಕ ಮತ್ತು ಗುಪ್ತರೊಡನೆ ಬೆಳೆಸಿದ ವೈವಾಹಿಕ ಸಂಬಂಧದಿಂದ ಮತ್ತಷ್ಟು ಬಲಗೊಂಡಿತು. ಸಾಂಸ್ಕೃತಿಕ ಚರಿತ್ರೆಗೂ ಕದಂಬರು ತಮ್ಮದೇ ಕೊಡುಗೆ ನೀಡಿರುತ್ತಾರೆ.

ಕದಂಬರ ಶಾಸನಗಳ ವೈಶಿಷ್ಟ್ಯವೆಂದರೆ, ಪೆಟ್ಟಿಗೆ ತಲೆಕಟ್ಟಿನ ಲಿಪಿಗಳ ಬಳಕೆ. ಕದಂಬರ ಶಾಸನಗಳಲ್ಲಿಯ ಅಕ್ಷರಗಳು ತಲೆಯ ಮೇಲೆ ಪೆಟ್ಟಿಗೆಯನ್ನು ಹೋಲುವ ಚೌಕಾಕಾರವನ್ನು ಹೊಂದಿರುವುದರಿಂದ ಇವನ್ನು ಪೆಟ್ಟಿಗೆ ತಲೆಕಟ್ಟಿನ ಲಿಪಿಗಳೆಂದು ಕರೆಯುತ್ತಾರೆ. ಈ ಲಿಪಿಗಳು ಇವರ ಸಮಕಾಲೀನರಾದ ವಾಕಾಟಕರ ಮತ್ತು ಮಧ್ಯಭಾರತದ, ಅದರಲ್ಲೂ ಮುಖ್ಯವಾಗಿ ಮಧ್ಯಪ್ರದೇಶದ ಅಕ್ಷರಗಳ ಲಕ್ಷಣಗಳನ್ನು ಹೊಂದಿವೆ. ವಾಕಾಟಕ ಮತ್ತು ಕದಂಬರ ಶಾಸನಗಳಲ್ಲಿಯ ಪೇಟಿಕಾಶಿರದ ಅಕ್ಷರಗಳಲ್ಲಿಯೂ ಪೆಟ್ಟಿಗೆಯ ಒಳಭಾಗವನ್ನು ಕೆತ್ತಿ ಆಳ ಮಾಡಿದ್ದರೆ, ವಾಕಾಟಕರ ಬರಹದಲ್ಲಿ ಗೆರೆಗಳಲ್ಲಿ ಮಾತ್ರವೇ ಪೆಟ್ಟಿಗೆಯನ್ನು ತೋರಿಸಿರುತ್ತಾರೆ. ಈ ಹೊಸ ಬಗೆಯ ಪೇಟಿಕಾಶಿರದ ಅಕ್ಷರಗಳನ್ನು ಯಾರು ಅನ್ವೇಷಿಸಿದರು ಅಥವಾ ಯಾರು ಯಾರಿಂದ ಸ್ವೀಕರಿಸಿದರೆಂಬ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟ.

ಆದಾಗ್ಯೂ ಪೇಟಿಕಾಶಿರದ ಅಕ್ಷರ ಹೇಗೆ ರೂಢಿಗೆ ಬಂದಿತೆಂಬ ಪ್ರಶ್ನೆಯ ಕಡೆಗೆ ನಾವು ಮೊದಲು ಗಮನಹರಿಸೋಣ. ಸಾಹಿತ್ಯಕ ಅಥವಾ ಇತರೆ ಬರವಣಿಗೆಗಳಿಗೆ ಈ ಲಿಪಿಯನ್ನು ವಿಫುಲವಾಗಿ ಬಳಸತೊಡಗಿದ್ದುದರಿಂದ ಈ ಲಿಪಿಯ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ನೀಡಿದಂತಾಗಿದೆ. ಭೂರ್ಜಪತ್ರ ಅಥವಾ ಬಟ್ಟೆಯ ಮೇಲೆ ಮಸಿಯಂತಹ ದ್ರವದಿಂದ ಬರೆದಾಗ ಯಾವುದೆ ಅಕ್ಷರದ ಆರಂಭದ ಭಾಗವು ದಟ್ಟವಾಗಿರುವುದುಂಟು. ಹೀಗೆ ದಟ್ಟವಾಗಿ ಬಣ್ಣ ಅಥವಾ ಮಸಿಬಿದ್ದ ಅಕ್ಷರಭಾಗಗಳನ್ನು ಆಕಸ್ಮಿಕವೆಂಬಂತೆ ಭಾವಿಸದೆ ಅನುಕರಣೆ ಮಾಡಿದುದರಿಂದ ಮುಂದೆ ಬುದ್ಧಿಪೂರ್ವಕವಾಗಿ ಅಕ್ಷರದ ಮೇಲ್ಭಾಗವನ್ನು ದಟ್ಟವಾಗಿಸಿದರು. ಬಹುಶಃ ಈ ಕಾರಣದಿಂದಲೇ ಶಾತವಾಹನರ ಕಾಲದ ಅಕ್ಷರಗಳಲ್ಲಿ ತ್ರಿಕೋನಾಕಾರದ ತಲೆ ಕಟ್ಟು ರೂಢಿಗೆ ಬಂದಿತು. ಇದರ ಮುಂದಿನ ವಿಸ್ತರಣೆಯಾಗಿ ಅಕ್ಷರದ ಮೇಲ್ಭಾಗಗಳನ್ನು ಅತಿಶಯವಾಗಿ ತಿದ್ದಿದುದರ ಪರಿಣಾಮವಾಗಿ ಪೇಟಿಕಾಶಿರದ ಅಕ್ಷರಗಳ ಮೂಡುವಿಕೆಗೆ ಕಾರಣವಾಯಿತು. ಇದು ನಿಜವಾದಲ್ಲಿ, ಮಧ್ಯಭಾರತದ ಭಾಗದಲ್ಲಿಯೇ ಪೇಟಿಕಾಶಿರದ ಮೂಲವನ್ನು ಹುಡುಕಬಹುದಾಗಿದೆ. ಸಾಮಾನ್ಯವಾಗಿ ದಕ್ಷಿಣದಲ್ಲಿ ಬರವಣಿಗೆಯ ಮಾಧ್ಯಮವಾಗಿ ತಾಡಪತ್ರದ ಮೇಲೆ ಮೊನಚಾದ ಕಂಠದಿಂದ ಕೊರೆಯುತ್ತಿದ್ದರು. ಆದರೆ ಉತ್ತರದಲ್ಲಿ ಮಸಿಯಲ್ಲಿ ಬರೆಯುತ್ತಿದ್ದುದನ್ನು ಗುಪ್ತರ ಕಾಲದ

ಬೋವರ್ ಹಸ್ತಪ್ರತಿಯಲ್ಲಿಯೇ ಕಾಣಬಹುದಾಗಿದೆ. ಆದ್ದರಿಂದ ಪೇಟಿಕಾಶಿರದ ಲಿಪಿ ಇಂತಹ ಕಡೆಯೇ ಉದಿಸಿತೆಂಬುದನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗದಿದ್ದರೂ ಅದು ಉತ್ತರಭಾರತದಲ್ಲಿ ಉದಿಸಿರಬಹುದು. ಮುಂದೆ ಇದು ದಕ್ಷಿಣದಲ್ಲಿ ಸೌಂದರ್ಯೀಕರಣಗೊಂಡು ಬಳಕೆಗೆ ಬಂದಿತು.

ಕದಂಬ ಶಾಂತಿವರ್ಮನ ತಾಳಗುಂದಶಾಸನ, ಮೃಗೇಶವರ್ಮನ ಬನವಾಸಿ ಶಾಸನ ಮತ್ತು ರವಿವರ್ಮನ ಗುಡ್ನಾಪುರ ಶಾಸನಗಳಲ್ಲಿ ನಾವು ಲಿಪಿವೈಶಿಷ್ಟ್ಯದ ಗಹನತೆ ಮತ್ತು ಕಲಾತ್ಮಕ ಬರವಣಿಗೆಯನ್ನು ಕಾಣಬಹುದಾಗಿದೆ. 'ಅ', 'ಕ', 'ರ' ಅಕ್ಷರಗಳಲ್ಲಿ ಕೆಳಮುಖವಾಗಿ ಬೆಳೆದ ಗೆರೆಗಳು ಮೇಲ್ಮುಖವಾಗಿ ತಿರುಗಿರುವ ಲಕ್ಷಣಗಳನ್ನು ಕಾಣಬಹುದಾಗಿದೆ. 'ಬ' ಮತ್ತು 'ಪ'ಗಳಲ್ಲಿ ಎಡಗಡೆಯ ಗೆರೆಯು ಮಧ್ಯದಲ್ಲಿ ಬಾಗಿದೆ. 'ಥ' ಅಕ್ಷರವು ಕೇವಲ ವೃತ್ತಾಕಾರದಲ್ಲಿರದೆ ಚಪ್ಪಟೆ ತಳವನ್ನು ಹೊಂದಿ ಉದ್ದಕ್ಕೆ ಬೆಳೆದು ಮಧ್ಯದಲ್ಲಿ ಕಚ್ಚಿನಂತಹ ಚುಕ್ಕೆಯನ್ನು ಹೊಂದಿದೆ. 'ವ' ಮತ್ತು 'ಮ' ಅಕ್ಷರಗಳ ವೃತ್ತಾಕಾರವು ತಳಗಡೆ ಬಾಗಿದ ಗೆರೆಯನ್ನು ಹೊಂದಿದ್ದು, ಬಲಗಡೆಯಿಂದ ಮೇಲಕ್ಕೇರಿ ಪೇಟಿಕಾಶಿರದ ಅಲಂಕಾರದಿಂದ ಕೂಡಿದೆ. 'ಲ'ಕಾರದ ಬಲಭಾಗದ ಗೆರೆಯು ಮೇಲೇರಿ ಅಕ್ಷರದ ಕೆಳಭಾಗವನ್ನು ಮುಟ್ಟುವಷ್ಟು ಬಾಗಿದೆ. ಕದಂಬರ ಶಾಸನಗಳು ಇಂತಹ ಲಿಪಿ ಬದಲಾವಣೆಗಳಿಗೆ ಉತ್ತಮ ಉದಾಹರಣೆಗಳಾಗಿವೆ.

ಕದಂಬರ ಶಾಸನಗಳನ್ನು ಪರೀಕ್ಷಿಸಿದರೆ, ನಿಧಾನವಾಗಿಯಾದರೂ ಲಿಪಿಗಳು ವಿಕಾಸ ಹೊಂದಿರುವುದನ್ನು ಕಾಣಬಹುದು. ಪೇಟಿಕಾಶಿರದ ಲಿಪಿಗಳ ಕಾರಣದಿಂದಲೇ ಈ ಬೆಳವಣಿಗೆಯಾಯಿತೆಂದು ನಿರ್ಧರಿಸುವುದು ಕಷ್ಟ. ಏಕೆಂದರೆ ಪೇಟಿಕಾಶಿರದ ಲಿಪಿಯನ್ನು ಬಳಸಿರುವ ಕದಂಬರ ಶಾಸನಗಳು 55 ರಿಂದ 60 ರವರೆಗೆ ಮಾತ್ರ ದೊರೆತಿವೆ. ಆದರೆ ಶಿಲಾಶಾಸನಗಳಲ್ಲಿ ಕಂಡುಬರುವ ಪೆಟ್ಟಿಗೆಯಾಕಾರದ ಲಿಪಿಗಳು ಲಿಪಿವಿನ್ಯಾಸವನ್ನು ನಿರ್ಧರಿಸಲು ಖಂಡಿತವಾಗಿಯೂ ಸಹಾಯಕವಾಗಿವೆ. ಇಂತಹ ಸುಂದರ ಬರವಣಿಗೆಯು ತೆಗೆದುಕೊಂಡಿರುವ ಕಾಲವನ್ನು ಗಣನೆಗೆ ತೆಗೆದುಕೊಂಡರೆ, ಸಾಮಾನ್ಯ ಉದ್ದೇಶಗಳಿಗೆ, ದೈನಂದಿನ ರಾಜ್ಯಾಡಳಿತದ ದಾಖಲೆಗಳು, ಆವ್ಯ, ನಾಟಕ ಇತ್ಯಾದಿ ಕಾವ್ಯಾತ್ಮಕವಾದ ಹಸ್ತಪ್ರತಿಗಳನ್ನು ನಕಲು ಮಾಡುವುದು ಮುಂತಾದ ಕೆಲಸಗಳಲ್ಲಿ ಸಾಮಾನ್ಯವಾಗಿ ಇದೇ ಲಿಪಿಯನ್ನು ಬಳಸುತ್ತಿದ್ದರೆಂದು ಭಾವಿಸಲಾಗದು. ಇದಕ್ಕೆ ಭಿನ್ನವಾಗಿ, ಇದರೊಂದಿಗೇ ಸಾಮಾನ್ಯ ಬರವಣಿಗೆಗಾಗಿ ಒರಟು ರೀತಿಯ ಬರವಣಿಗೆಯೂ ಬಳಕೆಯಲ್ಲಿದ್ದು, ಅದು ಸಹಾ ಆ ಕಾಲದ ಲಿಪಿಯ ಬದಲಾವಣಗೆ ಸಾಕಷ್ಟು ಕೊಡುಗೆಯನ್ನು ನೀಡಿದೆಯೆನ್ನಬಹುದು. ಈ ಎಲ್ಲಾ ಬದಲಾವಣೆಗಳು ಕದಂಬರ ಪೇಟಿಕಾಶಿರದ ಲಿಪಿಗಳಲ್ಲಿ ಎದ್ದು ಕಾಣುತ್ತವೆ.

ಒಟ್ಟಿನಲ್ಲಿ, ಮೇಲಿನ ಚರ್ಚೆಯಿಂದ ಈ ಕೆಳಗಿನಂತೆ ಎರಡು ಗಮನಾರ್ಹ ಅಂಶಗಳನ್ನು ಪ್ರಸ್ತಾಪಿಸಬಹುದು :

ಅ. ಪೇಟಿಕಾಶಿರದ ಲಿಪಿಗಳು ಬಹುಶಃ ಭಾರತದ ಯಾವುದೋ ಭಾಗದಲ್ಲಿ ಉದಯಿಸಿ ವಾಕಾಟಕ ಮತ್ತು ಕದಂಬರ ಆಶ್ರಯದಲ್ಲಿ ದಕ್ಷಿಣದಲ್ಲಿ ಬಳಕೆಗೆ ಬಂದವು.

ಆ. ಕರ್ನಾಟಕದ ಲಿಪಿ ಬೆಳವಣಿಗೆಯಲ್ಲಿ ಈ ಪೇಟಿಕಾ ಶಿರದ ಲಿಪಿಯ ಯಾವ ಕೊಡುಗೆಯೂ ಇಲ್ಲ. ಕದಂಬರ ಕಾಲದ ಶಾಸನಗಳಲ್ಲಿ ಗಮಿಸಲಾದ ಬದಲಾವಣೆಗಳು ಸಾಮಾನ್ಯ ಬಳಕೆಗಾಗಿ ಉಪಯೋಗಿಸಿದ ಒರಟು ಲಿಪಿಯಲ್ಲಿ ಉಂಟಾದ ಬದಲಾವಣೆಗಳ ಲಕ್ಷಣಗಳನ್ನು ಪ್ರತಿಫಲಿಸುತ್ತವೆ.

ಆಧಾರ ಗ್ರಂಥಗಳು

1. Sṛinivas Ritti, B.R. Gopal (Ed.) : Studịes in Indian History, (Dr. P.B. Desai Ḟelicitation Volume)
2. K.V. Ramesh (Ed.) : Srikanthika (Dr. Srikantha Sastri Felicitation Volume)
3. B.R. Gopal : Corpus Inseriptions of Kadambas
4. Epigraphla Indica (Relevant Volumes)
5. Indian Antiquary (Relevant Volumes)

❑

ಮಂಜುಗುಣಿಯ ತಿರುಮಲ ದೇವರಿಗೆ ಉತ್ತಾರವಾದ ಶಿಲಾಶಾಸನದ ಪ್ರತಿ

– ಡಾ. ಎ.ಕೆ. ಶಾಸ್ತ್ರಿ

ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿರುವ ಮಂಜುಗುಣಿ[1] ಒಂದು ಪುರಾತನ ಹಾಗೂ ಪವಿತ್ರ ಯಾತ್ರಾಸ್ಥಳ. ಶ್ರೀವಾದಿರಾಜ ಸ್ವಾಮಿಗಳು ರಚಿಸಿದ 'ತೀರ್ಥಪ್ರಬಂಧ'ದಲ್ಲಿ ಶ್ರೀ ವೆಂಕಟರಮಣ ದೇವರು ಮಂಜುಗುಣಿಯಲ್ಲಿ ಬಂದು ನೆಲೆಸಿದ ವರ್ಣನೆಯಿದೆ.[2] ವಿಜಯನಗರ ಕಾಲಕ್ಕಿಂತಲೂ ಪೂರ್ವದ್ದಾಗಿರಬಹುದಾದ ಮತ್ತು ವಿಜಯನಗರ ಕಟ್ಟಡ ಶೈಲಿಯುಳ್ಳ ಮಂಜುಗುಣಿಯ ತಿರುಮಲ (ವೆಂಕಟರಮಣ) ದೇವಾಲಯ ವಿಶಾಲವಾಗಿದ್ದು, ಮುಖಮಂಟಪ, ನವರಂಗ, ಅರ್ಧಮಂಟಪ, ಗರ್ಭಗೃಹ ಮತ್ತು ಅನೇಕ ಸುಂದರ ಕೆತ್ತನೆಗಳನ್ನೊಳಗೊಂಡಿದೆ. ನವರಂಗದಲ್ಲಿಯ ಒಳಮಾಳಿಗೆಯ ಮೇಲೆ ವೈಷ್ಣವ ಪೌರಾಣಿಕ ದೃಶ್ಯಗಳನ್ನು ಮತ್ತು ಹೊರ ಪ್ರಕಾರಗಳ ಮೇಲೆ ರಾಮಾಯಣ ಮತ್ತು ಮಹಾಭಾರತದ ಸುಂದರ ದೃಶ್ಯಗಳ ಕೆತ್ತನೆಯಿದೆ.

ಮಂಜುಗುಣಿಯಲ್ಲಿ ಸಹಸ್ರಾರು ಚಾರಿತ್ರಿಕ ದಾಖಲೆಗಳು ಲಭ್ಯವಾಗಿವೆ. ಲೇಖಕರು 'ಶ್ರೀ ಮಂಜುಗುಣಿ ಕ್ಷೇತ್ರದ ಚಾರಿತ್ರಿಕ ದಾಖಲೆಗಳು'[3] ಎಂಬ ಗ್ರಂಥದಲ್ಲಿ ಒಟ್ಟು 209 ಆಯ್ದ ದಾಖಲೆಗಳನ್ನು ಸಂಕಲಿಸಲಾಗಿದೆ. ಪ್ರಸ್ತುತ ಲೇಖನ ವಿಜಯನಗರ ಕಾಲಕ್ಕೆ ಸೇರಿದ ಮಂಜುಗುಣಿಯ ತಿರುಮಲ ದೇವರಿಗೆ ಉತ್ತಾರವಾದ ಶಿಲಾಶಾಸನದಲ್ಲಿಯ ಅಂಶಗಳನ್ನು ಮಾತ್ರ ಬೆಳಕಿಗೆ ತರುತ್ತದೆ.

ದಾನಶಾಸನದ ಪ್ರತಿ, ಶಿರಸ್ಸಿನಲ್ಲಿ ಚಂದ್ರನಿಂದ ಭೂಷಣನಾದ ಮತ್ತು ಮೂರೂ ಲೋಕಗಳಿಗೆ ಕಾರಣೀಕರ್ತನಾದ ಈಶ್ವರ ಮತ್ತು ವರಾಹ ರೂಪದಲ್ಲಿ ಭೂಮಿಯನ್ನು ಸಂರಕ್ಷಿಸಿದ ವಿಷ್ಣು ದೇವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ. ಶಾಸನದ ಪಾಠದಲ್ಲಿಯ ಕೆಲವು ಮಹತ್ವದ ಸಾಲುಗಳು ಇಂತಿವೆ :

"..... ಸ್ವಸ್ತಿ ಶ್ರೀ ಜಯಾಭ್ಯುದಯ ನೃಪ ಶಾಲ್ಲಿವಾಹನ ಶಖವರುಷ 1341ನೆಯ ವಿಳಂಬಿ ಸಂವತ್ಸರದ ಚೈತ್ರ ಶುದ್ಧ 15 ಮಿ ಚಂದ್ರೋಪರಾಗ ಪುಣ್ಯ ಕಾಲದಲ್ಲು... ಶ್ರೀ ವಿರ್‍ರಪ್ರತಾಪ ಶ್ರೀ ಬುಕ್ಕರಾಯ ಮಹಾರ್‍ರಾಯರ್‍ರು ಶ್ರೀ ವಿದ್ಯಾನಗರಿರ್‍ರಿ ನೆಲವಿಡ ನೊಳಿರ್ದು... ರಾಜ್ಯವಂನು ಸಧರ್ಮದಿಂದ ಪ್ರತ್ತಿಪಾಲಿಸುತ್ತ ಯಿದ ಸಮಯದೊಳ ತತ್ಪಾದ ಪದ್ಮೋಪ ಜಿವಿ ಶ್ರೀ ಮನ್ಮಹಾ ಪ್ರಧಾನ ಮಾಧವಾಂಕನು ಗುತ್ತಿ ವೆಂಟೆಕ್ಕೆ ಸಲ್ಲುವ ಬನವಾಶಿ ಪಂನಿಛಾಶಿರ್‍ರವಂನಾಳ್ವುತ್ತಮಿರ್ದ ಸಮಯದೊಳ ಶ್ರೀ ಬುಕರ್‍ರಾಯ ಮಹಾರಾಯರ್‍ರು ಸಮುಖಕ್ಕೆ ಕರ್ಶಿ ಶ್ರೀ ತ್ತಿರ್‍ರಮಲ್ಲದೆವ್ರ ಸಪರ್ಯಾದಿ ಸೆವೆಗೆ ಸಾಕಾಗುವಷ್ಟು ಗ್ರಾಮಗಳಂನು ಶ್ರೀಸ್ವಾಮಿ ಸಂನಿಧಿಯಲ್ಲಿ ಸಮರ್ಪಿಶಿ ಶಿಲ್ಲಾಸ್ತಾಪನ ಮಾಡಿಸಿಕೊಟ್ಟು ಅರ್‍ರಿಕೆ ಮಾಡಿಕೊಳ್ಳುವ ಹಾಂಗೆ ಚಿತ್ತೈಶಿದ್ದರ್‍ರಿಂದ್ದ ಶ್ರೀ ಬುಕ್ಕರಾಯ ಮಹಾರಾಯರ್‍ರಿಗೆ ಯಿತ್ತೊಧಿಕ ಐಶ್ವರ್ಯವಾಗಿ ಆಚಂದ್ರಾರ್ಕ ಸ್ಥಾಯಿಗಳಾಗಿ ಸ್ಥಿರ ಸಾಂಬ್ರಾಜ್ಯವಾಗಬೇಕೆಂದು ಯೀ ಮಂಜುಗುಣಿ ಶಿಮೆ ವಳಗುಳ್ಳ ಗ್ರಾಮಗಳಂನ್ನು ಸಮರ್ಪಿಶಿದ್ದು ಕಲ್ಲಹಳ್ಳಿ ಗ್ರಾಮ 1 ಕಳವಗಾರ್‍ರ ಗ್ರಾಮ 1 ಸವಲ್ಲಿಗ್ರಾಮ 1 ಬರ್‍ರಸುಗುಣಿ ಗ್ರಾಮ 1 ಬಡಗಿಗ್ರಾಮ 1 ಮುಖ್ಯವಾದ ಮಂಜುಗುಣಿ ಗ್ರಾಮ ಅಂತ್ತು ಗ್ರಾಮ 6ನು... ಸಪರ್ಯಗಳಿಗೆ...

ಶ್ರೀಮನ್ಮಹಾ ಪ್ರಧಾನ ಮಾಧವಾಂಕನು ಶ್ರೀಮಂನ್ಮಹಾರಾಯರ್‍ರ ಅಪಣೆಯ ಚಿತ್ತೈಶಿದ ಪ್ರಕಾರ್‍ರ ಸಹಿರಂಣ್ಯೊದಕದಾನ ಧಾರ್‍ರಾಪೂರ್ವಕವಾಗಿ ಸರ್ವಮಾಂನ್ಯವಾಗಿ ಸಮರ್ಪಿಶಿದ ಧರ್ಮಸಾಧನ..."

ಶಾಸನ, ಶಾಲಿವಾಹನ ಶಕ 1341ನೆಯ ವಿಳಂಬಿ ಸಂವತ್ಸರದ ಚೈತ್ರ ಶುದ್ಧ ಪೂರ್ಣಿಮೆ (ಸೋಮವಾರ, 10-4-1419) ಯದಾಗಿದ್ದು, "ಶ್ರೀಮದೆವಾದಿದೆವ ದೇವತಾ ಸಾರ್ವಭೌಮ ಸುರ್‍ರಗಣಮಣಿ ಮುಕುಟ ರತ್ನರಂಜಿತ ಪಾದಪಿಟ... ಸಕಲ ಮನೋಭಿಷ್ಟಪ್ರದಾಯಕ... ಶ್ರೀಮನ್ಮಂಜು ಗುಣಿ ಪುರ್‍ರವರಾಧಿಶ್ವರ್‍ರ..." ಇತ್ಯಾದಿ ಬಿರುದಾಂಕಿತ ಮಂಜುಗುಣಿಯ ಶ್ರೀ ತಿರುಮಲ ದೇವರ ಮತ್ತು ವಿಜಯನಗರ ಸಾಮ್ರಾಜ್ಯವನ್ನಾಳುತ್ತಿದ್ದ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಶ್ರೀವೀರಪ್ರತಾಪ ಬುಕ್ಕರಾಯ ಮಹಾರಾಯರು ಶ್ರೀ ವಿದ್ಯಾನಗರಿಯಲ್ಲಿ ಸುಧರ್ಮದಿಂದ ರಾಜ್ಯವನ್ನು ಪ್ರತಿಪಾಲಿಸುತ್ತಿದ್ದ ಸಂಗತಿ ಉಲ್ಲೇಖವಾಗಿದೆ. ಮಹಾಪ್ರಧಾನ ಮಾಧವಾಂಕನು ಗುತ್ತಿವೆಂಟೆಗೆ ಸಲ್ಲುವ ಬನವಾಶಿ (ಬನವಾಸಿ) ಪನ್ನಿಛಾಸಿರವನ್ನು ಆಳುತ್ತಿದ್ದ ಕಾಲದಲ್ಲಿ ಬುಕ್ಕರಾಯ ಮಹಾರಾಯರು ತಮ್ಮ ಸಮ್ಮುಖಕ್ಕೆ ಮಾಧವಾಂಕನನ್ನು ಕರೆಸಿ, ಮಂಜುಗುಣಿಯ ತಿರುಮಲ ದೇವರ ಸರ್ಪಯಾದಿ ಸೇವೆಗೆ ಸಾಕಾಗುವಷ್ಟು ಗ್ರಾಮಗಳನ್ನು ಸ್ರೀ ಸ್ವಾಮಿಯ ಸನ್ನಿಧಿಯಲ್ಲಿ ಸಮರ್ಪಿಸಿ, ಶಿಲಾಸ್ಥಾಪನ ಮಾಡಿಸಿಕೊಟ್ಟು, ಅರಿಕೆ ಮಾಡಿಕೊಲ್ಲುವ ಹಾಗೆ ಆಜ್ಞಾಪಿಸಿದ್ದರಿಂದ, ಶ್ರೀ ಬುಕ್ಕರಾಯ ಮಹಾರಾಯರಿಗೆ ಇನ್ನೂ ಐಶ್ವರ್ಯ ಪ್ರಾಪ್ತಿಯಾಗಿ, ಅಚಂದ್ರಾರ್ಕ ಸ್ಥಾಯಿಗಳಾಗಿ, ಸ್ಥಿರ ಸಾಮ್ರಾಜ್ಯವಾಗಬೇಕೆಂದು ಚಂದ್ರೋಪರಾಗ (ಚಂದ್ರಗ್ರಹಣ) ಪುಣ್ಯಕಾಲದಲ್ಲಿ ಮಂಜುಗುಣಿ ಸೀಮೆಯೊಳಗಿನ ಕಲ್ಲಹಳ್ಳಿ (ಕಲ್ಲಹಳ್ಳಿ), ಕಳವಗಾರ (ಕಳುಗಾರ), ಸವಲ್ಲಿ (ಸವಲೆ), ಬರ್‍ಸಗುಣಿ, ಬಡಗಿ ಮತ್ತು ಮುಖ್ಯವಾದ ಮಂಜುಗುಣಿ ಎಂಬ ಆರು ಗ್ರಾಮಗಳನ್ನು, ಬುಕ್ಕರಾಯರು ನಿರೂಪಿಸಿದ ಪ್ರಕಾರ, ಶ್ರೀಮನ್ಮಹಾಪ್ರಧಾನ ಮಾಧವಾಂಕನು, ಶ್ರೀಮನ್‌ಮಹಾಸ್ವಾಮಿ ತಿರುಮಲ ದೇವರ ಮಹಾಲಕ್ಷ್ಮಿ, ಆಂಜನೇಯ, ಆದಿ ಮಂಜುಗುಣಿ ಸೋಮೇಶ್ವರ ದೇವರ ಅಂಗರಂಗ ವೈಭವ, ನಿತ್ಯ[4] – ನೈಮಿತ್ಯಕ[5], ಪಕ್ಷೋತ್ಸವ[6], ಮಾಸೋತ್ಸವ[7], ಸಂವತ್ಸರೋತ್ಸವ[8], ಲಕ್ಷದೀಪಾರಾಧನೆ, ವನಭೋಜನ[9] ಮೊದಲಾದ ಪಂಚಕಾಲ ಅವಸರಗಳಿಗೆಂದು ಮೇಲ್ಕಾಣಿಸಿದ ಗ್ರಾಮಗಳನ್ನು ಸಹಿರಣ್ಯೋದಕ ದಾನ ಧಾರಾಪೂರ್ವಕವಾಗಿ ಮತ್ತು ಸರ್ವಮಾನ್ಯವಾಗಿ ಸಮರ್ಪಿಸಿದನೆಂದು ಧರ್ಮಸಾಧನ (ಶಾಸನ)ದಿಂದ ತಿಳಿದುಬರುತ್ತದೆ.

ಮೇಲೆ ವಿವರಿಸಿದ ಆರು ಗ್ರಾಮಗಳ ಶಿಧಾಯ (ಸಿದ್ಧಾಯ–ತೆರಿಗೆ, ಕಂದಾಯ)ದ ಕಾನು(ಕಾಡು), ಕಾಡಾರಂಭ (ಮಳೆಯ ನೀರಿನಿಂದ ಮಾಡುವ ವ್ಯವಸಾಯ, ಕುಷ್ಕಿ) ನೀರಾರಂಭ (ನೈಸರ್ಗಿಕವಾಗಿ ಹರಿಯುವ ನೀರಿನ ಸಂಪತ್ತು), ಅಕ್ಷಿಣಿ (ಕಣ್ಣಿಗೆ ಕಾಣುವ ಸಂಪತ್ತು), ಅಗಾಮಿ (ಭವಿಷ್ಯದಲ್ಲಿ ಬೆಳೆಯಬಹುದಾದ ಸಂಪತ್ತು), ಸಿದ್ಧ (ನೈಸರ್ಗಿಕವಾಗಿ ಹುಟ್ಟಿದ್ದು), ಸಾಧ್ಯ (ಪ್ರಯತ್ನ ಪೂರ್ವಕವಾಗಿ ಮಾಡಿದ್ದು), ಜಲ – ಬಾವಿ, ಕೆರೆ, ಸರೋವರಗಳಲ್ಲಿ ನಿಂತಿದ್ದು), ತರು (ದೇವೋಪಯೋಗಿ ವೃಕ್ಷ), ಪಾಷಾಣ (1. ಕಲ್ಲು; ಬಂಡೆ, 2. ವಿಷ : ಪ್ರಸ್ತುತದಲ್ಲಿ, ಔಷಧಿರೂಪವಾದ ಎಂಬರ್ಥ), ಮೊದಲಾದ ಅಷ್ಟಭೋಗ ತೇಜಸ್ವಾಮಯ್ಯ (ಕೀರ್ತಿಯುತ ಮತ್ತು ಸ್ವತ್ವಯುತ ಒಡೆತನ), ಮೊದಲಾದ್ದನ್ನು ಮತ್ತು ಈ ಗ್ರಾಮಗಳ ಚತುಃಸೀಮೆಯೊಳಗಿನ ಗದ್ದೆ, ಬೆದ್ದಲು (ಕರಡ), ಪೂಗಾರಾಮ (ಅಡಕೆ ತೋಟ), ಹಲಸು, ತೆಂಗು, ಮಾವು ಮುಂತಾದ ಸಂಪತ್ತುಗಳ ಒಡೆತನವನ್ನು ನೀಡಲಾದ ಸಂಗತಿ ಧರ್ಮಸಾಧನದಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ, ಧರ್ಮ ಸಾಧನೆಗಳ ಅಂತ್ಯದಲ್ಲಿ ಸಾಕ್ಷಿ ಗ್ರಂಥಗಳನ್ನು ನಮೂದಿಸಿರುವಂತೆ, ಪ್ರಸ್ತುತ ಧರ್ಮಸಾಧನದ ಅಂತ್ಯದಲ್ಲಿಯೂ, "... ಆದಿತ್ಯ ಚಂದ್ರಾವನಿಲೋ ನಲಶ್ಚ ದ್ಯೌರ್ಭೂಮಿರಾಪೊ ಹೃದಯಂ ಯಮಶ್ಚ॥ ಅಹಶ್ಚ ರಾತ್ರಿಶ್ಚ ಉಭಚ ಸಂಧ್ಯೆ ಧರ್‍ಮಶ್ಚ ಜಾನಾತ್ತಿ ನರಸ್ಯ ವೃತ್ತಂ ॥1॥ ದಾನಪಾಲನಯೊರ್ಮಧ್ಯೆ ದಾನಾಛ್ರೆ ಯೊನು ಪಾಲನಂ । ದಾನಾತ್ಸರ್ಗಮವಾಪ್ನೊತ್ತಿ ಪಾಲನಾದ ಚ್ಯುತಂಪದಂ ॥2॥ ಸ್ವದತ್ತಾ ಪುತ್ತಿಕಾ ಧಾತ್ರಿ ಅನ್ಯದತ್ತಾ ಸಹೋದರ್‍ರಿ ॥ ಪ್ರಭುದತ್ತಾ ಸ್ವಯಂ ಮಾತ್ರ ದಾನ ಭೂತ್ತ ವಸುಂಧರಾ ॥3॥ ಸ್ವದತ್ತಾಂ ಪರದತ್ತಾಂ ವಾ ಯೊಗಕೆತ ವಸುಂಧರಾ । ಷಷ್ಟಿರ್ವರ್ಷ ಸಹಸ್ರಾಣೆ ವಿಷ್ಟಯಾಂ ಜಾಯತೆ ಕ್ರಿಮಿಃ ॥4॥ ಮಂಗಳ ಮಹಾ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ ಶ್ರೀ" ಎಂದು ಉಲ್ಲೇಖಿಸಲಾಗಿದೆ.

ಒಟ್ಟಿನಲ್ಲಿ, ಮಂಜುಗುಣಿಯ ತಿರುಮಲ ದೇವಸ್ಥಾನದ ಚರಿತ್ರೆಯ ಮೇಲೆ ವಿಶೇಷ ಬೆಳಕು ಚೆಲ್ಲುವ ಪ್ರಸ್ತುತ ಧರ್ಮಶಾಸನ, ವಿಜಯನಗರದ ಚರಿತ್ರೆಯ ಮೇಲೂ ಬೆಳಕು ಬೀರುವದರ ಜೊತೆಗೆ, ಬುಕ್ಕರಾಯರ ಕಾಲಕ್ಕೆ ಸಂಬಂಧಿಸಿ ಹೆಚ್ಚಿನ

ಜಿಜ್ಞಾಸೆಗೆ ಎಡೆಮಾಡಿಕೊಡುತ್ತದೆ. ಶಾಸನದಲ್ಲಿ ನಮೂದಿತವಾದ ಗ್ರಾಮಗಳು ಇಂದಿಗೂ ಮಂಜುಗುಣಿಯ ಪರಿಸರದಲ್ಲಿಯೇ ಇವೆ. ಧರ್ಮಸಾಧನದಲ್ಲಿ ನಮೂದಿತವಾದ ಉತ್ಸವಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ಸಾಗಿ ಬಂದಿವೆ. ಭೂಮಿಯ ಸ್ವಾಮ್ಯಕ್ಕೆ ಸಂಬಂಧಿಸಿ, ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಭೂಸುಧಾರಣೆ ಕಾಯಿದೆಗೆ ಅನುಗುಣವಾಗಿ ಬದಲಾವಣೆಗಳಾಗಿದ್ದನ್ನು ಇನ್ನುಳಿದ ಸ್ಥಳಗಳಲ್ಲಿಯಂತೆ ಮಂಜುಗುಣಿಯಲ್ಲಿಯೂ ಕಾಣಬಹುದು. ಶಾಸನದಲ್ಲಿ ನಮೂದಿಸಲಾದ ಕಾಲ[10] ಬುಕ್ಕರಾಯರ ಕಾಲಕ್ಕೆ ಸರಿಹೊಂದುವದಿಲ್ಲವಾದರೂ, ಶಾಸನದಲ್ಲಿಯ ಅಂಶಗಳು ಐತಿಹಾಸಿಕ ಸತ್ಯ. ಶಾಸನದ ಪ್ರತಿ ಮಾಡುವಾಗ ಲಿಪಿಕಾರನು ತಪ್ಪಾಗಿ ಬರೆದಿರಲು ಸಾಕು.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

1. ಶಿರಸಿ–ಕುಮಟಾ ಮಾರ್ಗದ ಬಲ ಭಾಗದಲ್ಲಿ, ಶಿರಸಿಯಿಂದ 26 ಕಿ.ಮೀ. ಅಂತರದಲ್ಲಿ ಮಂಜುಗುಣಿ ಇದೆ.
2. ಪೂರ್ವದಲ್ಲಿ, ತಿರುಮಲ ಯೋಗಿಯೆಂಬ ಶ್ರೀ ವೆಂಕಟೇಶ ದೇವರ ಭಕ್ತಾಗ್ರೇಸರನು ಶ್ರೀ ವೆಂಕಟೇಶನಿಂದ ಅನುಗ್ರಹಿಸಲ್ಪಟ್ಟು, ಅವನ ಆದೇಶದ ಮೇರೆಗೆ ಮಂಜುಗುಣಿಯಲ್ಲಿ ಶ್ರೀವೆಂಕಟೇಶನನ್ನು ಸ್ಥಾಪಿಸಿದನೆಂದೂ, ಅಂದಿನಿಂದ ಶ್ರೀ ವೆಂಕಟೇಶನಿಗೆ "ಶ್ರೀ ತಿರುಮಲ ದೇವ" ಎಂಬ ಅಭಿಧಾನವು ರೂಢಿಯಲ್ಲಿ ಬಂದಿತೆಂದೂ, 'ವೆಂಕಟೇಶ ಮಹಾತ್ಮ್ಯ' ಎಂಬ ಸಂಸ್ಕೃತ ಕಾವ್ಯದಿಂದ ತಿಳಿದುಬರುತ್ತದೆ.
3. ಕರ್ನಾಟಕ ರಾಜ್ಯ ಪತ್ರಾಗಾರ, ಬೆಂಗಳೂರು, 1997
4. ನಿತ್ಯೋತ್ಸವ : ನಿತ್ಯ ಫಲ ಪಂಚಾಮೃತ, ಆಭರಣಗಳಿಂದ ಅಲಂಕಾರ, ಭಕ್ಷ್ಯ ಸಮರ್ಪಣೆ (ಅತ್ತರಸ (ಅತಿರಸ), ಮಧ್ಯಾಹ್ನ ಮತ್ತು ರಾತ್ರೆ ಒ(ವ)ಡೆ 13, ದೋಸೆ 14, ಅಪ್ಪಾಲು 6, ಅನ್ನ) ಮತ್ತು ನೀರಾಜನ (ನೀಲಾಂಜನ, ಆರತಿ)
5. ಚೈತ್ರ ಮಾಸದಲ್ಲಿ ಪ್ರತಿಪದೆ (ಚಾಂದ್ರಯುಗಾದಿ) ಯಂದು ಮಹಾರಥ ಪೂಜೆ ಮತ್ತು ಚೈತ್ರ ಶು. ಪೌರ್ಣಿಮೆಯಂದು ಮಹಾರಥೋತ್ಸವ. ಅದರ ಹಿಂದಿನ ದಿನ ಶ್ರೀ ದೇವರ ವರ್ಧಂತಿ (ಮಹಾಬಲಿ ಪ್ರದಾನ ಮತ್ತು ಸಂತರ್ಪಣೆ)
6. ಕಾರ್ತಿಕ ಶು. ಪೌರ್ಣಿಮೆಯಿಂದ ವೈಶಾಖ ಬ. ಅಮಾವಾಸ್ಯೆವರೆಗೆ ಪ್ರತಿ ಹುಣ್ಣಿಮೆಯಂದು ಬರಿ ಪ್ರದಾನ ಮತ್ತು ತೇರು
7. ಆಶ್ವಿಜು ಶು. ಏಕಾದಶಿಯಿಂದ ಕಾರ್ತಿಕ ಶು. ಏಕಾದಶಿಯವರೆಗೆ ಸೂರ್ಯ ಉದಯಕ್ಕೆ 'ಪಶ್ಚಿಮ ಜಾಗರ' (ಭಾಗವತ ಸಂಪ್ರದಾಯ) ಪಾದುಕಾ ಉತ್ಸವ.
8. ನೈಮಿತ್ಯಕ ಮತ್ತು ಸಂವತ್ಸರೋತ್ಸವಕ್ಕೆ ಸಂಬಂಧಿಸಿ ಚೈತ್ರ ಶು. ಪೌರ್ಣಿಮೆಯಂದು ಮಹಾರಥೋತ್ಸವ.
9. ಕಾರ್ತಿಕ ಪೌರ್ಣಿಮೆಯಂದು ಲಕ್ಷದೀಪೋತ್ಸವ ಮತ್ತು ಪಕ್ಷೋತ್ಸವ ಪ್ರಾರಂಭ ಮತ್ತು ನೆಲ್ಲಿಗಿಡದ ಬುಡದಲ್ಲಿ ವನಭೋಜನ
10. ಈಗಾಗಲೇ ತಿಳಿದಂತೆ, ಬುಕ್ಕರಾಯರ ಕಾಲ ಇಂತಿದೆ – ಮೊದಲನೆಯ ಬುಕ್ಕ (ಕ್ರಿ.ಶ. 1356–1377), ಇಮ್ಮಡಿ ಬುಕ್ಕ (ಕ್ರಿ.ಶ. 1405–1406), ವಿಜಯ ಮುಮ್ಮಡಿ ಬುಕ್ಕ (ಕ್ರಿ.ಶ. 1422–1424) ಶಾಸನದಲ್ಲಿ ನಮೂದಿತವಾದ ಕಾಲ (ಕ್ರಿ.ಶ. 1419).

❑

ಮುಕ್ಕೊಡೆಯ ಕಲ್ಲುಬರಹ

– ಡಾ. ಎಚ್.ಆರ್. ರಘುನಾಥ ಭಟ್

ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರ ತಾಲ್ಲೂಕಿನ ಗುಬ್ಬಿಗೋಡಿನಲ್ಲಿ ನಾನು ನಡೆಸಿದ ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ ಪತ್ತೆಯಾದ ಒಂದು ಮುಕ್ಕಾಗದೆ ಉಳಿದಿರುವ ಮುಕ್ಕೊಡೆಯ ಕಲ್ಲುಬರಹವನ್ನು ಇಲ್ಲಿ ಪ್ರಕಟಿಸಲಾಗುತ್ತಿದೆ. ಈ ಶಾಸನಶಿಲೆಯನ್ನು 9 ಸುಮಾರು 78 x 42 ಸೆಂ.ಮೀ.) ಗುಬ್ಬಿಗೋಡಿನ ಸಾಂಬಸದಾಶಿವೇಶ್ವರ ಗುಡಿಯ ಮಣ್ಣುಗೋಡೆಗೆ ಹಾಕಿ ಕಟ್ಟಿಬಿಟ್ಟಿದ್ದರು. ಈಚೆಗೆ ಈ ದೇವಾಲಯದ ಜೀರ್ಣೋದ್ಧಾರ ಮಾಡುವಾಗ ಈ ಕಲ್ಲು ಹೊರಬಿತ್ತು. ಇದನ್ನು ಈ ದೇಗುಲದ ಪ್ರಾಂಗಣದಂಚಿನದಲ್ಲಿ ಈಗ ನಿಲ್ಲಿಸಿಡಲಾಗಿದೆ.

"ಶ್ರೀ ಶಕವರ್ಷ 1510ನೆಯ ಸರ್ವಜಿತು ಸಂವತ್ಸರದ ಚೈತ್ರ ಶುದ್ಧ ಪಾಡ್ಯದಂದು ಬಿಳಗಿಯ ಮಹಾಪ್ರಭು ಘಂಟೊಡೆಯರು (ಘಂಟಣ್ಣೊಡೆಯ, ಘಂಟೇಂದ್ರ) ಬಿಳಗಿಯ ಕಲ್ಲುಬಸದಿಯ ಪಾರ್ಶ್ವನಾಥ ತೀರ್ಥಂಕರರ ಶ್ರೀಕಾರ್ಯಕ್ಕೆ ವಂದಾನೆಗ್ರಾಮದ ಪೂರ್ವ ಚತುಸ್ಸೀಮೆಯಿಂದೊಳಗಾದ ಭೂಮಿಯನ್ನು ಸರ್ವಮಾನ್ಯವಾಗಿ ಧಾರೆಯೆರೆದು ಸಮರ್ಪಿಸಿದರು" – ಎಂದು ದಾಖಲಿಸುವ ಈ ದತ್ತಿ ಶಾಸನಶಿಲೆ ಬಿಳಗಿ ಅರಸರ ಕಾಲದ ಒಂದು ಉತ್ತಮ ಮುಕ್ಕೊಡೆಯ ಕಲ್ಲಾಗಿದೆ. ಈಗಾಗಲೇ ಪ್ರಕಟವಾದ ಬಿಳಗಿಯ ಎರಡು ದೀರ್ಘ ಶಿಲಾಶಾಸನಗಳಲ್ಲಿ ದತ್ತಿ ನೀಡಿದ ಬೂಮಿಯ ಚತುರ್ಗಡಿಯಲ್ಲಿ ಮುಕ್ಕೊಡೆಯ ಕಲ್ಲು ನೆಡಿಸಿದ್ದರ ಉಲ್ಲೇಖ ಹೀಗಿದೆ :

> **... ನಮಗೆ ದಾನಮೂಲವಾಗಿ ಸಲುವ ।**
> **ಅಯಿವತ್ತಳಿಗೆಯನಾಡು ಚಿಕ್ಕಮಾಳಿಗೆಯನಾಡುಗಳಿಗೆ ಸಲುವ**
> **ಸೋವಿನಕೊಪ್ಪ। ಹಾದಿರಿಮಾನಿ। ಮಳಿಗೆಕಯಿ।**
> **ಕೊಜಿತಾರಿ। ನೇಜೆರಿಮಾನಿ । ಚಟ್ಟನಹಳ್ಳಿ।**
> **ಗೊರಟನಹಳ್ಳಿ । ಬಲುಗಣಿ ।**
> **ಬಂದಾನೆ । ಯೀ**
> **ವೊಂಬತ್ತು ಗ್ರಾಮಗಳನೂ ಪೂರ್ವ ಚತುಸ್ಸೀಮೆ ಯಿಂದೊಳಗಾದ**
> **ಸರ್ವಾಂಗೋಡು ಸಹವಾದ ಭೂಮಿಗಳಿಗೆ**
> **ಚತುರ್ಗಡಿಯಲ್ಲಿ ಮುಕ್ಕೊಡೆಯ**
> **ಕಲ್ಲ ನೆಡಿಸಿ ಸಹಿರಣ್ಯೋದಕ ದಾನಧಾರಾಪೂರ್ವಕವಾಗಿ ಧಾರೆಯ**
> **ನೆಜಿದು ಕೊಟ್ಟೆವಾಗಿ...**

ಇದೇ ಶಾಸನದ ಕೊನೆಯಲ್ಲೂ... ಸರ್ವಾಂಗೋಡು ಸಹಿತವಾದ ಭೂಮಿ ಸಹ ಚತುಸ್ಸೀಮೆಯಲ್ಲಿ ಮುಕ್ಕೊಡೆಯಕಲ್ಲ ನೆಡಿಸಿದ್ದರ ಪ್ರಸ್ತಾಪ ಮತ್ತೆ ಬರುತ್ತದೆ. ಬಿಳಗಿಯ ಎರಡನೆಯ ಶಾಸನದಲ್ಲೂ "ಚತುಸ್ಸೀಮೆಯೊಳ್ಮುಕ್ಕೊಡೆಯ ಕಲ್ಲನೆಡಿಸಿ"ದ್ದು ಕಂಡುಬರುತ್ತದೆ. ಹೀಗೆ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಎಂಬ ನಾಲ್ಕು ಪ್ರಧಾನ ದಿಕ್ಕುಗಳಲ್ಲಿ ದತ್ತಿ ಭೂಮಿಯ ಸೀಮಾ ರೇಖೆಯಲ್ಲಿ ಮುಕ್ಕೊಡೆಯ ಸೀಮಾಕಲ್ಲುಗಳನ್ನು ನೆಡುತ್ತಿದ್ದರು.

ಕ್ರಿಸ್ತಶಕ 1240ರ ಕೊಪ್ಪಳದ ನೇಮಿನಾಥ ಬಸದಿಗೆ ಬಿಟ್ಟ ದತ್ತಿಭೂಮಿಯ ಚತುರ್‌ಗಡಿಗಳಲ್ಲಿ ನಾಲ್ಕು ಮುಕ್ಕೊಡೆಯ ಕಲ್ಲುಗಳನ್ನು ನಿಲ್ಲಿಸಿದ್ದು, ಅದನ್ನು ನಾಲ್ಕು ಸಲ ಪ್ರತ್ಯೇಕವಾಗಿ ಉಲ್ಲೇಖಿಸಿದ್ದರಿಂದ ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ. ಸಂಸ್ಕೃತದಲ್ಲಿ 'ಛತ್ರತ್ರಯ ಪಾಷಾಣ' ಎಂದು ಪುನರುಕ್ತಿಗೈದು ಮತ್ತಷ್ಟೂ ಖಾತ್ರೀಪಡಿಸಲಾಗಿದೆ. ಕ್ರಿ.ಶ. 1276ರ ಬೊಮ್ಮೈಮಲ್ಯೆ (ತಿರುಚಿರಪಳ್ಳಿ) ತಮಿಳು ಶಾಸನಗಳಲ್ಲಿ 'ಶ್ರೀ ಮುಕ್ಕೊಡೈಕಲ್' ಎಂದು ಶ್ರೀಕಾರ(ತಿರು) ಸೇರಿಸಿದೆ. ಶ್ರವಣಬೆಳಗೊಳದ ನಗರಜಿನಾಲಯದ ಕ್ರಿ.ಶ. 1282ರ ಶಾಸನದ ದಾನ ಭಾಗದಲ್ಲಿ ಚತುಸ್ಸೀಮೆಗಳಲ್ಲಿ 'ಬರದ ಮುಕ್ಕೊಡೆ ಹಸುಬೆನೆಟ್ಟ' ಉಲ್ಲೇಖವಿದೆ. ಚಾಮರಾಜನಗರದ ಮಲೆಯೂರು ಜೈನಬಸದಿ ತಾಮ್ರಪತ್ರದಲ್ಲಿ (ಕ್ರಿ.ಶ. 1422) ಗ್ರಾಮದ ಚತುಸ್ಸೀಮೆಯಲ್ಲಿ ಮುಕ್ಕೊಡೆಕಲ್ಲನ್ನು ನೆಟ್ಟಿಸಿದ್ದು ಕಂಡುಬರುತ್ತದೆ. ಸಿದ್ಧಾಪುರ ತಾಲ್ಲೂಕಿನ ಕೊರ್ಲಕೈ ಬಳಿ ಜೀನೀಮಠದ ಜಾಗದಲ್ಲಿ ಶಾಸನರಹಿತ ಮುಕ್ಕೊಡೆಕಲ್ಲನ್ನು ಇತ್ತೀಚಿನ ಕ್ಷೇತ್ರಕಾರ್ಯದಲ್ಲಿ ನಾನು ಶೋಧಿಸಿದ್ದೇನೆ. ಈ ಕೆಲವು ನಿದರ್ಶನಗಳಲ್ಲಿ ಸೀಮಾಕಲ್ಲಾಗಿ ನೆಟ್ಟ ನಾಲ್ಕು ಮುಕ್ಕೊಡೆಕಲ್ಲುಗಳು ನಾಲ್ಕು ಪ್ರಧಾನ ದಿಕ್ಕುಗಳಲ್ಲಿ ಇದ್ದುದು ವೇದ್ಯವಾಗುತ್ತದೆ. ಇಷ್ಟಾದರೂ ಇದರ ಗುಣ ಲಕ್ಷಣ ಹಾಗೂ ಸ್ವರೂಪದ ಬಗೆಗೆ ಖಚಿತವಾಗಿ ಇನ್ನೂ ತಿಳಿದುಬಂದಿರಲಿಲ್ಲ.

ಇದೀಗ ಶೋಧನೆಯಾದ ಶಾಸನ–ಶಿಲ್ಪ ಫಲಕವು ಮುಕ್ಕೊಡೆಯ ಬಗೆಗಿನ ನಮ್ಮ ಅರಿವನ್ನು ಹೆಚ್ಚಿಸುತ್ತದೆ. ಆಯತಾಕಾರದ ಫಲಕದಲ್ಲಿ, ಅರ್ಧಕ್ಕಿಂತ ಹೆಚ್ಚಿನ ಭಾಗದಲ್ಲಿ, ಮೂರು ಕೊಡೆಗಳನ್ನು ಎದ್ದು ಕಾಣುವಂತೆ ಕಂಡರಿಸಲಾಗಿದೆ. ಒಂದರ ಮೇಲೊಂದರಂತೆ ಪೇರಿಸಿಟ್ಟಂತೆ ಚಿತ್ರಿತವಾದ ಈ ಮೂರು ಕೊಡೆಗಳು ಕೇವಲ ಸಾಂಕೇತಿಕವಾಗಿವೆ. ಯಾವ ಅಲಂಕರಣೆಯೂ ಇಲ್ಲದೆ, ತ್ರಿಕೋನಾಕೃತಿ ಅಥವಾ ಪಿರಮಿಡ್ಡಾಕೃತಿಯಲ್ಲಿ ಇವನ್ನು ಕೆತ್ತಲಾಗಿದೆ. ಇದರ ಕೆಳಗಡೆ ಜೈನ ತೀರ್ಥಂಕರನ ಚಿಕಣಿಶಿಲ್ಪವಿದೆ. ಪದ್ಮಾಸನದಲ್ಲಿ ಪದ್ಮಾಸೀನನಾಗಿ ಧ್ಯಾನಮುದ್ರೆಯಲ್ಲಿ ಕುಳಿತ ತೀರ್ಥಂಕರ ವಿಗ್ರಹವೂ ತುಂಬ ಸರಳವಾಗಿದೆ. ಇಲ್ಲಿ ಮುಕ್ಕೊಡೆಗೇ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆಯೆ ಹೊರತು ಈ ಜಿನಬಿಂಬಕ್ಕಲ್ಲ. ಮುಕ್ಕೊಡೆಗಳ ಒಟ್ಟೂ ಎತ್ತರ 22 ಸೆಂ.ಮೀ.ನಷ್ಟಿದ್ದರೆ, ಜಿನಬಿಂಬದ ಎತ್ತರ ಪೀಠಸಹಿತ ಕೇವಲ 5 ಸೆಂ.ಮೀ. ನಷ್ಟಿದೆ!

ಜೈನಶಿಲ್ಪಗಳಲ್ಲಿ ಮುಕ್ಕೊಡೆಯನ್ನು ಸಾಮಾನ್ಯವಾಗಿ ಕಲಾತ್ಮಕವಾಗಿ ಕಂಡರಿಸಲಾಗುತ್ತದೆ. ಮುತ್ತಿನ ಕುಚ್ಚುಗಳು, ಸುಂದರವಾದ ಕಿರೀಟ–ಕಲಶ ಇತ್ಯಾದಿ ಅಲಂಕರಣೆಗಳಿಂದ ಇದು ಶೋಭಿಸುತ್ತದೆ. ಕಿಂಕಾಪು, ದಿವ್ಯರತ್ನ – ರೇಷ್ಮೆ ಕುಚ್ಚುಳ್ಳ ಕೊಡೆಗೆ ಹೋಲಿಸಿದರೆ ಮುಕ್ಕೊಡೆಕಲ್ಲಿನಲ್ಲಿ ಚಿತ್ರಿತವಾದ ಕೊಡೆಗಳು ತೀರ ಸರಳ ಹಾಗೂ ಸಾಂಪ್ರದಾಯಿಕವಾಗಿವೆ. ಆದರೆ ನೀಡಿದ ದಾನ ಶಾಸನೀಯ ಸಂದರ್ಭದಲ್ಲಿ ತ್ರಿಛತ್ರ ಸಂಕೇತ ಮೂಲತಃ ಜೈನಮತೀಯವಾಗಿದೆ. ಜೈನಮತೀಯ ದಾನಗಳು ಜೈನಬಸದಿ, ಮಠಕ್ಕೆ ದತ್ತಿಬಿಟ್ಟ ಜಮೀನುಗಳ ಸೀಮಾ ಕಲ್ಲುಗಳಾಗಿ ನಾಲ್ಕು ದಿಕ್ಕುಗಳಲ್ಲಿ ನೆಡಿಸುತ್ತಿದ್ದ ಮುಕ್ಕೊಡೆ ಕಲ್ಲುಗಳ ಸ್ವರೂಪ ಮತ್ತು ಪ್ರಕ್ರಿಯೆಯಲ್ಲಿ ಸಹಜವಾಗಿಯೇ ಜೈನಧರ್ಮೀಯ ಭಾವವಿದೆಯೆಂದು ಮತ್ತೆ ಹೇಳಬೇಕಿಲ್ಲ.

ಕೆಲವೆಡೆ ಮುಕ್ಕೊಡೆಯ ಬದಲಾಗಿ ಪದ್ಮಾವತಿಯ ಶಿಲ್ಪವುಳ್ಳ 'ಪದ್ಮಾವತಿಕಲ್ಲು', ಕಮಂಡಲು ಚಿತ್ರವುಳ್ಳ 'ಕುಂಡಿಗೈಕಲ್ಲು', 'ಕುಂಡಿಗಲಿ' ಮುಂತಾದವು ಜೈನ ಧರ್ಮ ಸಂಬಂಧವುಳ್ಳವಾಗಿವೆ. ಬೆಂಗಳೂರು ಜಿಲ್ಲೆ ಚಿಕ್ಕಬಳಗುಂಬದಲ್ಲಿ ದೊರೆತ ಶಾಸನಶಿಲಾ ಫಲಕದ ಮೇಲ್ತುದಿಯಲ್ಲಿ ಮುಕ್ಕೊಡೆ, ಅದರ ಕೆಳಗಡೆ ಎಡಕ್ಕೆ ಮುಖ ಮಾಡಿ ನಿಂತ ಕುದುರೆಯ ಶಿಲ್ಪ ಕಂಡುಬರುತ್ತಿದ್ದು, ಇದೂ ಜೈನಬಸದಿಗೆ ದತ್ತಿ ಬಿಟ್ಟ ಭೂ ಸೀಮಾ ರೇಖೆಯನ್ನು ಗುರುತಿಸುವ ಸಲುವಾಗಿದೆಯೆಂದೂ ಹೇಳಲಾಗಿದೆ. ಇವೆಲ್ಲವೂ ಗಡಿಕಲ್ಲು ಅಥವಾ ಸೀಮಾಕಲ್ಲುಗಲಾಗಿದ್ದು, ಶಾಸನ ಸಹಿತ ಇಲ್ಲವೆ ಶಾಸನರಹಿತವಾಗಿರುತ್ತವೆ.

ಈ ಬಗೆಯ ಮುಕ್ಕೊಡೆಕಲ್ಲುಗಳನ್ನು ಸೀಮಾ ಕಲ್ಲುಗಳಾಗಿ ಚತುಸ್ಸೀಮೆಯ ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಗಡಿಗಳಲ್ಲಿಹೆಚ್ಚಾಗಿ ನಿಲ್ಲಿಸಲಾಗುತ್ತದೆ. ಕೊಪ್ಪಳದ ನೇಮಿನಾಥಬಸದಿ ಶಾಸನದಲ್ಲಿರದ ಉಲ್ಲೇಕ ಮತ್ತು ಇತರ ಶಾಸನಗಳಲ್ಲಿರುವಂತೆ 'ಚತುಸ್ಸೀಮೆಯೊಳ್ಮುಕ್ಕೊಡೆ ಕಲ್ಲನೆಡಿಸಿ' ಎಂಬ ಪ್ರಯೋಗ ಈ ಮಾತನ್ನು ಸಮರ್ಥಿಸುತ್ತವೆ. ಮುಳಗುಂದತೀರ್ಥದ ಜೈನಬಸದಿ ಶಾಸನ (ಕ್ರಿ.ಶ. 1053)ದಲ್ಲಿ ಜೈನಬಸದಿಗೆ ದತ್ತಿ ಬಿಟ್ಟ ಹೊಲಕ್ಕೆ ಮೇರೆಯಾಗಿ ಈಶಾನ್ಯಕ್ಕೆ 'ಕವಿಲೆಯಕಲ್ಲ'ನ್ನೂ ಆಗ್ನೇಯ ದೊಳ್ 'ಆದಿತ್ಯನಕಲ್ಲ'ನ್ನೂ ನೈರುತ್ಯದೊಳ್ 'ಚಂದ್ರನ ಕಲ್ಲ'ನ್ನೂ ಮತ್ತು ವಾಯುವ್ಯದೊಳ್ 'ಪದ್ಮಾವತೀ ಕಲ್ಲ'ನ್ನೂ ನೆಡಲಾಗಿದ್ದುದು ತುಂಬ ಸ್ವಾರಸ್ಯಕರವಾಗಿದೆ. ಇದರಿಂದ ಪ್ರಧಾನ ನಾಲ್ಕು ದಿಕ್ಕುಗಳಲ್ಲಿ ಮುಕ್ಕೊಡೆ ಕಲ್ಲುಗಳನ್ನೂ

ಉಳಿದ ನಾಲ್ಕು ಉಪದಿಕ್ಕುಗಳಲ್ಲಿ ಮುಕ್ಕೊಡೇತರ ಜೈನಮತೀಯ ಕಲ್ಲುಗಳನ್ನೂ ಗಡೀಕಲ್ಲುಗಳಾಗಿ ನೆಡುತ್ತಿದ್ದ ಪದ್ಧತಿಯಿದ್ದಿರಬೇಕೆಂದು ಸದ್ಯಕ್ಕೆ ಊಹೆಮಾಡಬಹುದಾಗಿದೆ.

ಒಟ್ಟಿನಲ್ಲಿ ಹೇಳಬಹುದಾದ್ದೆಂದರೆ, ಯಾವ ದಾನಿಯಿಂದ ಯಾವ ಸಂಸ್ಥೆಗೆ ದತ್ತಿ ಬಿಟ್ಟಿರುತ್ತದೆಯೋ ಆ ವ್ಯಕ್ತಿಯ, ಸಂಸ್ಥೆಯ ಧಾರ್ಮಿಕ ಆಶಯಗಳು ಈ ಬಗೆಯ ಗಡಿಕಲ್ಲುಗಳಲ್ಲಿ ಪಡಿಮೂಡಿರುತ್ತವೆ. ಗುಬ್ಬಗೋಂಡಿನಲ್ಲಿ ಪತ್ತೆಯಾದ ಮುಕ್ಕೊಡೆಯ ಕಲ್ಲುಬರಹದಿಂದ ಇದು ಇನ್ನೂ ಸ್ಪಷ್ಟವಾಗುತ್ತದೆ. ದತ್ತಿಬಿಟ್ಟ ಭೂಮಿಯ ಎಲ್ಲೆಗಳನ್ನೂ ನಿಖರವಾಗಿ ಗುರುತಿಸಿ, ಮತೀಯ ಮುದ್ರೆಯೊಂದಿಗಿನ ಸೀಮಾಸೂಚಕ ಶಿಲೆಗಳನ್ನೂ ವಿದ್ಯುಕ್ತನಾಗಿ ನೆಡುವ ಪದ್ಧತಿ ಪ್ರಾಚೀನವಾದುದ್ದಾದರೂ ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದಲ್ಲಿ ಇದು ವ್ಯಾಪಕವಾಗಿತ್ತು ಎಂಬುದಕ್ಕೆ ಈ ಕಾಲದ ಹಲವು ಬಗೆಯ ಗಡಿಕಲ್ಲುಗಳು ಸಾಕ್ಷಿ. ಇವು ಆ ಕಾಲದ ಸಮಾಜೋಧಾರ್ಮಿಕ – ಕೃಷಿಕ ಇತಿಹಾಸದ ಮನಾರಚನೆಗೆ ಪೂರಕ ಸಾಮಗ್ರಿಗಳಾಗಿವೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅಂತೆಯೇ ಈ ಬಗೆಯ ಗಡಿಕಲ್ಲುಗಳನ್ನು ಇನ್ನೂ ವ್ಯಾಪಕವಾಗಿ, ಸಮಗ್ರವಾಗಿ ಸಂಶೋಧಿಸಿ ವರ್ಗೀಕರಿಸುವುದು ಅಗತ್ಯ.

ಶಾಸನ ಪಾಠ

1. ಶ್ರೀ ಶಕವರುಷ 1510ನೆಯ ಸರ್ವಜಿತ್ಸಂವತ್ಸ
2. ರದ ಚೈತ್ರ ಶು 1 ಲು ಶ್ರೀಮನ್ಮಹಾಪ್ರಭು ಘಂಟೊಡೆಯರು ಬಿಳಿಗೆ
3. ಯ ಕಲ್ಲಬಸ್ತಿಯ ಪಾರ್ಶ್ವತೀರ್ಥೇಶ್ವರರ ಶ್ರೀಕಾರ್ಯಕ್ಕೆ ವೊಂದಾನೆಯ ಗ್ರಾಮ
4. ದ ಪೂರ್ವ ಚತುಸ್ಸೀಮೆಯಿಂದೊಳಗಾದ ಭೂಮಿಯನೂ ಸರ್ವ್ವಮಾ
5. ನ್ಯವಾಗಿ ಧಾರೆಯೆಜೆದು ಸಮರ್ಪ್ಪಿಸಿದರು ಶ್ರೀ ಶ್ರೀ ಶ್ರೀ

ಆಧಾರ ಸಾಹಿತ್ಯ

1. ಸಾಧನೆ, ಸಂಪುಟ 8, ಸಂಚಿಕೆ 4, 1979 (ಆರ್.ಎನ್. ಗುರುವ ಅವರ ಲೇಖನ)
2. ಉಪ್ಪಂಗಳ ರಾಮಭಟ್ಟ : ಕನ್ನಡ ವೈಯಾಕರಣ ಭಟ್ಟಾಕಲಂಕ, ಉಡುಪಿ, 1986
3. ಎ.ಇ., ಸಂಪುಟ 16
4. ಪಿ.ಎಸ್.ಐ., ಸಂಪುಟ 2, ಸಂಖ್ಯೆ 474, 658
5. ಎ.ಕ., ಸಂಪುಟ 2 (1973) ಮತ್ತು ಸಂಪುಟ 4 (1975)
6. ಎ.ಆರ್.ಎಸ್.ಐ.ಈ., 1930–40–42–43
7. ಎ.ಎಸ್.ಒ.ಎಂ.–ಎ.ಆರ್., 1910–11 (1976)

❑

ಸ್ವಾದಿ : ವಾಸ್ತು ವಿಶೇಷಗಳ ಒಂದು ಅವಲೋಕನ

– ಡಾ. ಎಸ್.ಕೆ. ಜೋಶಿ

ಪ್ರಾಕೃತಿಕ ಸುಂದರ ಹಸುರಿನ ಹರವಿನಲ್ಲಿ ಕದಂಬರು ಕರ್ನಾಟಕದ ಪ್ರಥಮ ಸಾಮ್ರಾಜ್ಯ ಕಟ್ಟಿದ ಶ್ರೀಯರು ಹೆಸರೇ ಸೂಚಿಸುವಂತೆ ಬನಬನಂಗಳ ವಾಸ 'ಬನವಾಸ', ಬನವಾಸಿ'. ಪಂಪನ ಬಿರಿದ ಮಲ್ಲಿಗೆ ನಾಡು. ಶ್ರೀ ಮಧುಕೇಶ್ವರನ ಮಧುವನುಂಡ ನಾಡಿದು. ಇದರ ಹಚ್ಚ ಹಸುರಿನ ಸೀರೆಯ ಸೆರಗು ಸೋಂಪಾದ ಸೋಂದೆ ತಾನೆ! ಬನವಾಸಿ ಕದಂಬರನಾಡಿನ ಒಂದು ತರಹದ ಸಾಂಸ್ಕೃತಿಕ ನಾಡಿಯಾದ ಪ್ರಾಚೀನ ಸೋಂದೆಗೂ ಜೋಡಿಸಬಹುದು. ಸೋಂದೆಯ ಕೋಟೆಯು ವನದುರ್ಗ ಹಾಗೂ ಮೃದ್‌ದುರ್ಗಗಳ ಸಂಕೀರ್ಣದ ವೈಖರಿಯಾಗಿದ್ದು, ದ್ವಿಕೂಟಾಚಲ ಶ್ರೀ ಶಂಕರನಾರಾಯಣ ದೇವಸ್ಥಾನ, ಶ್ರೀ ವೆಂಕಟರಮಣ ದೇವಾಲಯ, ಜೈನ ಮಂದಿರ, ವೀರಶೈವ ಮಠ ಇತ್ಯಾದಿಗಳು ವಾಸ್ತು ವೈಭವಗಳಾಗಿವೆ (ಕೆ.ವಿ. ಸುಂದರ ರಾಜನ್), ಜೊತೆಗೆ ವಾದಿರಾಜ ಶ್ರೀಗಳ ಸಮಾಧಿ, ತ್ರಿವಿಕ್ರಮ ದೇವಾಲಯ, ಕಲ್ಲಿನ ರಥ, ಹಯಗ್ರೀವ ಸಮುದ್ರ–ಒಂದು ನೀರಿನ ಸಂಗ್ರಹದ ಅನುಕರಣೀಯ ವ್ಯವಸ್ಥೆ, ಶ್ರೀ ವಾದಿರಾಜರು ಇಲ್ಲಿ ಐದು ಪುಷ್ಕರಣಿಗಳನ್ನು ಕಟ್ಟಿಸಿದರೆಂದು ಒಂದು ಆಖ್ಯಾನದ ಹೇಳಿಕೆ, ಭೂತನಾಥ (ಭೂತರಾಜ) ಭೂತದಯೆಯ ಮಂಟಪ, ಆದಿಶಂಕರಷ್ಟು ಹಳೆಯರಾದ (ಕ್ರಿ.ಶ. 788–820), ಅವರ ತರೇನ ಸಂಸ್ಥಾಪಿತ ಸ್ವರ್ಣವಲ್ಲೀ ಮಠ–ಹವ್ಯಕರ ಒಂದು ಅಧ್ಯಾತ್ಮ ಕೇಂದ್ರ.

ಭಕ್ತಿ ಆಂದೋಲನದ ಅಲೆ ಸೋಂದೆಯನ್ನು ಬಿಡಲಿಲ್ಲ. (Bhakti movement in medieval history of south india) ಶ್ರೀ ವಾದಿರಾಜರಂಥ ತತ್ವಜ್ಞಾನಿ – ದಾರ್ಶನಿಕರ ಕೃತಿಗಳು ಅವರು ಆಧ್ಯಾತ್ಮ ಪಥದಲ್ಲಿ ತೋರಿದ ಮಿಂಚು, ಅವರ ಸಮೀಪದ ಶಿಷ್ಯ ಕನಕದಾಸರ ಸಂಕೀರ್ತನೆಗಳ ದೈವ ಸಾಹಿತ್ಯದ ಕೊಡುಗೆ ಇವೆಲ್ಲ ಸೋಂದೆಯ ಪರಿಸರದಲ್ಲಿ ಹರಡಿದ, ಅಂತರ್ ಪ್ರತಿಭೆಯ ಸದ್ದರ್ಶನಗಳಾಗಿವೆ. ಒಂದು ರೀತಿಯಲ್ಲಿ ಕೇವಲ ಐತಿಹಾಸಿಕ ನೆಲೆಯಾಗಿರದೆ, ಸ್ವಾದಿಯು ತೃಪ್ತ ಆತ್ಮಕ್ಕೆ, ಶೈವ–ವೈಷ್ಣವ–ವೀರಶೈವ ನಡೆನುಡಿ ಆಚರಣೆಗಳು ಒಂದು ತರಹದ ಭಾವೈಕ್ಯದ ಸಾಂತ್ವನದ ತಾಣವಾಗಿದೆ.

ಶಮಿತ್, ದರ್ಭ, ಗಂಧ, ಕಾಷ್ಠ, ಪುಷ್ಪ, ಬಿಲ್ವಲಗಳನ್ನು ಬಿಸುಟು, ಅಸ್ತ್ರ ಶಸ್ತ್ರಗಳನ್ನು ಕೈಯಲ್ಲಿ ಹಿಡಿದು, ಕಾದಿ ಕ್ಷತ್ರಿಯನಾದ ಕನ್ನಡದ ಮಯೂರವರ್ಮನ (ಕ್ರಿ.ಶ. 325–345) ಕದಂಬ ಕುಲನಾಡಿದು. ಇದೊಂದು ಐತಿಹಾಸಿಕ ಅಪೂರ್ವ ಘಟನೆ ಚಾತುರ್ವರ್ಣ್ಯವ ನಲುಗಿಸಿದ ಘಟನೆ.

ಸೋಂದೆಯು ಉತ್ತರ ಕನ್ನಡ ಜಿಲ್ಲೆಯ ಅತ್ಯಂತ ಪರಿಚಿತ ತಾಣ. ಇದು ಶಿರಸಿ ತಾಲ್ಲೂಕಿನಲ್ಲಿದೆ. ಶಿರಸಿಯಿಂದ ಯಲ್ಲಾಪುರಕ್ಕೆ ಹೋಗುವ ಎಡಬದಿಯಲ್ಲಿ ಹಮ್ಮಿಕೊಂಡಿದೆ, ಶಿರಸಿಯಿಂದ ಕೇವಲ 16 ಕಿ.ಮೀ. ದೂರ ಶಾಲ್ಮಲಾ ನದಿ ದಡದಲ್ಲಿ. ಈ ಶಾಲ್ಮಲಾ ನದಿಯೆ ಬೇರೆ. (ಧಾರವಾಡದಲ್ಲಿ ಸೋಮೇಶ್ವರದ ಹತ್ತಿರ ಉಗಮವಾಗಿ ಪಶ್ಚಿಮವಾಹಿನಿಯಾಗಿ ಹರಿದು ಸಾಗರ ಸೇರುವ ಶಾಲ್ಮಲೆ ಇದಲ್ಲ)

ಸ್ವಾದಿಯು ಸ್ಥಳನಾಮ ವಿಜ್ಞಾನದ ದೃಷ್ಟಿಯಿಂದ ಸ್ವಾದಿ, ಸೋಂದೆ, ಸೋಂದಾ, ಸೋದೆ, ಸುಧಾಪುರ, ಸೋಂದಾನಗರ, ಸೋಂದಾಪುರಿ, ಹೊನ್ನೆಹಳ್ಳಿ, ಸ್ವರ್ಣವಲ್ಲೀ, ಸೋಮದಾಪುರೀಪುರ ಇತ್ಯಾದಿ ಹೆಸರುಗಳನ್ನು ಹೊಂದಿದೆ.

ಪ್ರಾಗೈತಿಹಾಸಿಕ ಕೊಡಲಿ, ಬಾಚಿ, ಉಳಿ ಇತ್ಯಾದಿ ಶಿಲಾಯುಧಗಳು ಸ್ವಾದಿಯ ಶಾಲ್ಮಲಾ ನದಿಗುಂಟ ಸಿಕ್ಕಿವೆ. (ಡಾ. ಅ. ಸುಂದರ) ಜೊತೆಗೆ ಪ್ರಾಗೈತಿಹಾಸಿಕ ಬಂಡೆ ಚಿತ್ರಗಳು ಬ್ರಾಹ್ಮೀ ಬರಹಗಳು ಕನ್ನಡ ಶಾಸನಗಳು, ತಿಗಳಾರಿ ಬಂಡೆ ಶಾಸನಗಳು (ಶ್ರೀ ಗುಂಡಾ ಜೋಯಿಸ್), ಶ್ರೀ ಚಕ್ರದ ಬಂಡೆಗಲ್ಲು, ಯೋಗಿಶಿಲ್ಪ ನಂದಿ, ಶಿವಲಿಂಗ, ಕೋಟಿಲಿಂಗ ತೀರ್ಥ ಇತ್ಯಾದಿಗಳು ಇಲ್ಲಿಯ ಪ್ರಾಚ್ಯನಿಧಿಯ ಬದುಕಾಗಿವೆ.

ಈ ಪ್ರದೇಶದ ಪ್ರಾಗೈತಿಹಾಸದಲ್ಲಿ ಕೆತ್ತಿರುವ ಬಂಡೆ ಚಿತ್ರಗಳು (ಡಾ. ಎಚ್.ಆರ್. ರಘುನಾಥ ಭಟ್) ಮನುಷ್ಯ, ಗೂಳಿ ಚಿಗರಿ, ಸಮಾಂತರ ರೇಖೆಗಳು, ತ್ರಿಕೋನಗಳು ಗ್ರಾಫಿಟೀ ಮಾರ್ಕಗಳಂತೆ) ಹಾಗೂ ಇಲ್ಲಿಸಿಕ್ಕ ಕೆಂಪು ಕಪ್ಪು ಮಡಕೆ ಚೂರುಗಳು ಈ ಪ್ರದೇಶವನ್ನು ಬೃಹತ್ ಶಿಲಾಯುಗದ ಕಾಲದ್ದೆಂದು ಊಹಿಸಬಹುದಾಗಿದೆ. ಇಲ್ಲಿಯ ಶಿಲಾಬಂಡೆಯ ಗೂಳಿಯ ಬದಿಯ ಚಿತ್ರವನ್ನು 'ಗಾವಳಿ'ಯ ಚಿತ್ರಕ್ಕೆ ಹೋಲಿಸಬಹುದು. ಇದು ಮಂಡಲದಂತಿದೆ. ಶೈಲಿ ಮತ್ತು ತೌಲನಿಕ ಅಧ್ಯಯನಗಳನ್ನಾಧರಿಸಿ, ಇವು ನವಶಿಲಾಯುಗ (Neolith period) ಹಾಗೂ ಬ್ರಹದ್ ಶಿಲಾಯುಗ (Megalithic period) ಗಳೆರಡರ ವಲಯಗಳಲ್ಲಿ ಇರುವ ಆಧಾರಗಳೆಂದು ಹೇಳಬಹುದು.

ಆ ನಾಗರಿಕತೆಯ ವಸತಿಯ ವಾಸ್ತವ್ಯದ ಕೊಡುಗೆಗಳಲ್ಲಿ ನಾಲ್ಕು ದಾಂಗುಡಿಗಳನ್ನು ಕಾಣುತ್ತೇವೆ. ಹೆಸರಿಸಬೇಕಾದರೆ ರಕ್ಷಣಾವಾಸ್ತು, ಧಾರ್ಮಿಕ ವಾಸ್ತು, ಗೃಹ್ಯವಾಸ್ತು, ಸಾರ್ವಜನಿಕ ವಾಸ್ತು. ಜಗತ್ತಿನ ಯಾವುದೇ ಭಾಗದಲ್ಲಿ, ಯಾವುದೇ ಸಮಯದಲ್ಲಿ ಕಂಡುಬರುವ ವಾಸ್ತು ಕೃತಿಗಳನ್ನು ಈ ನಾಲ್ಕು ಬಂಧಗಳಲ್ಲಿ ಕೂಡಿಸಬಹುದು.

ಸೊಂದೆಯ ಜೀವನದಲ್ಲಿಯೂ ಈ ನಾಲ್ಕು ದಾಂಗುಡಿಗಳ ವಾಸ್ತುಕೃತಿಗಳು ದೊರೆಯುವಲ್ಲಿ ಅವನ್ನು ಇಲ್ಲಿ ಪರಾಮರ್ಶಿಸಬಹುದು.

ರಕ್ಷಣಾ ವಾಸ್ತು (Defence Architecture)

ಸ್ವಾದಿಯ ರಕ್ಷಣಾ ಕೋಟೆಯನ್ನು ಕದಂಬಕುಲದ ಕಾಲಕ್ಕೆ ಜೋಡಿಸಲಾಗಿದೆ. ಶಾಲ್ಮಲೆಯು ಪಶ್ಚಿಮ ದಕ್ಷಿಣ ಹಾಗೂ ಉತ್ತರದ ಸೆರಗುಗಳಿಂದ ಸೋಂದೆಯನ್ನು ಸ್ವಾಭಾವಿಕವಾಗಿ ನೀರಿನ ತಡೆಯಿಂದ, ರಕ್ಷಿಸಿದೆ. ಈ ಮೃದ್‌ಕೋಟೆ ವನದುರ್ಗದ ಸಂಕೀರ್ಣತೆಯನ್ನು ಹೊಂದಿದೆ.

ನಾಲ್ಕೂ ಮುಖ್ಯದಿಕ್ಕುಗಳ ಮೂಲೆಗಳಲ್ಲಿ ರಕ್ಷಣಾವೀಕ್ಷಣಾ ಕೋಟೆಯ ಒಳಬದಿಯಿಂದ ರಕ್ಷಣಾ ಸೈನಿಕರಿಗೆ ತೀವ್ರವಾಗಿ ಗೋಡೆಯ ಮೇಲೇರಿ ರಕ್ಷಣೆಯಲ್ಲಿ ಸನ್ನದ್ಧರಾಗಲು ಅನುವು ಮಾಡಿವೆ. ಸಾಮಾನ್ಯವಾಗಿ ಇಂಥ ದುಂಡನೆಯ ಬುರುಜುಗಳು (Bastions) ಗೋಡೆ ಹೊರಬದಿಗೆ ತದನಂತರ ಕಟ್ಟಲ್ಪಟ್ಟ ಕೋಟೆಗಳಲ್ಲಿ ಅಳವಡಿಸಲಾಗಿದೆ. ಆದರೆ ಇಲ್ಲಿ ಒಳ ಬದಿಗೆ ಮಾತ್ರ ಯೋಜಿಸಲಾಗಿದೆ. ಇದಕ್ಕೆ ಮೇಲೆ ನೀಡಿದ ಕಾರಣವೇ ಮುಖ್ಯ.

ಅಲ್ಲದೆ ಪೂರ್ವದ ಪ್ರವೇಶ ದ್ವಾರ, ಅದರ ಒಳ ಬದಿಗೆ ಕಾವಲು ಪಡೆಯ ಸೈನಿಕನ ಪರದೆಯ ಕೋಣೆಗಳು, ಅಡಗು ದಾವಣಗಳು, ನುಸುಳುವ ಕಿಂಡಿಗಳು ಇತ್ಯಾದಿಗಳು ರಕ್ಷಣೆಯ ಚಾಕ ಚಕ್ಯತೆಯನ್ನು ವಿವರಿಸುತ್ತವೆ. ಪಶ್ಚಿಮದ ಗೋಡೆಯಲ್ಲಿ ಅಳವಡಿಸಿದ ದಿಡ್ಡಿ ಬಾಗಿಲು, ಚಿಕ್ಕದಾಗಿದ್ದು, ಭಯದ ವಾತಾವರಣವಾದಲ್ಲಿ ಅಥವಾ ಸೋಲಿನ ಸಂಕೇತ ತೋರಿದಲ್ಲಿ, ಒಳಗಿನಿಂದ ಹೊರಗೆ ಪಾರಾಗಿ ಹೋಗಲು ವ್ಯವಸ್ಥೆ ಮಾಡಿಕೊಟ್ಟಿದೆ.

ಇದೇ ತರಹದ, ಕದಂಬರ ಕಾಲೀನ ಮೃದ್+ವನ ದುರ್ಗಗಳು ಬನಾವಸಿ, ಗುದ್ನಾಪುರ, ಹಾನಗಲ್ ಹಲಸಿ (ಬೆಲಗಾಂವ ಜಿಲ್ಲೆ), ಚಾಂದೋರ (ಚಂದ್ರಪುರ. ಗೋವೆ)ಇತ್ಯಾದಿಗಳಲ್ಲಿ ಕಾಣಬಹುದಾಗಿದೆ, (ಡಾ. ಎಸ್. ಕೆ. ಜೋಶಿ : ಡಿಫೆನ್ಸ್ ಆರ್ಕಿಟೆಕ್ಚರ್ ಇನ್ ಅರ್ಲಿಕರ್ನಾಟಕ). ಕಾಲ ಗತಿಸಿದಂತೆ, ವಿಜಯನಗರ ಹಾಗೂ ಸೋಂದಾ ಅರಸರುಗಳ ಕಾಲದಲ್ಲಿ, ಈ ಕೋಟೆಯನ್ನು ಮತ್ತಷ್ಟು ದೃಢಗೊಳಿಸಲಾಗಿದೆ.

ಇದೇ ರಕ್ಷಣಾ ವಾಸ್ತುವನ್ನು ಮುಂದುವರಿಸುತ್ತ ಕೋಟೆಯ ಗೋಡೆಗಳನ್ನು ತಟಾಕಗಳು ಹೇಗೆ ಸುತ್ತವರಿದಿದ್ದವೆಂಬುದನ್ನು ಕೆಲ ಇನ್ನೂ ಐತಿಹಾಸಿಕ ಆಕರಗಳು ಹೋಳುತ್ತವೆ. ರವಿವರ್ಮನು ಗುಡ್ಡ ತಟಾಕವನ್ನು ನಿರ್ಮಿಸಿದನೆಂದು ಗುಡ್ನಾಪುರ

ಶೀಸನವು ಹಾಗೂ ಕಾಕುಸ್ಥವರ್ಮನು ಕೆರೆಯೊಂದನ್ನು ಕಟ್ಟಿಸಿದ ವಿವರವನ್ನು ತಾಳಗುಂದ ಶಾಸನವೊಂದು ಉಲ್ಲೇಖಿಸುತ್ತವೆ. ಅಗ್ರಹಾರಗಳು ಹಾಗೂ ಬ್ರಹ್ಮಪುರಿಗಳು ಕೋಟೆ ವಸತಿಯ ಅಂಗಗಳಾಗಿ ಕೆಲಸಮಾಡುತ್ತವೆ. ಇಷ್ಟೇ ಅಲ್ಲ, ಅವು ಭದ್ರ ಹಾಗೂ ವ್ಯವಸ್ಥಿತ ಆಗಿನ ಜೀವನ ಪದ್ಧತಿಗೆ ಪೂರಕವಾಗಿವೆ.

ಕದಂಬರು ಬ್ರಾಹ್ಮಣರ ವೇದಾಧ್ಯನಕ್ಕೆ ಪುರಸ್ಕಾರ ವ್ಯವಸ್ಥಿತ ಆಗಿನ ಜೀವನ ಪದ್ಧತಿಗೆ ಪೂರಕವಾಗಿವೆ.

ಕದಂಬರು ಬ್ರಾಹ್ಮಣರು ವೇದಾಧ್ಯಯನಕ್ಕೆ ಪುರಸ್ಕಾರ ನೀಡಿ, ಪ್ರಪ್ರಥಮವಾಗಿ ಅಗ್ರಹಾರ ಸಂಸ್ಕೃತಿಯನ್ನು ಕರ್ನಾಟಕಕ್ಕೆ ನೀಡಿದರೆಂದು ಹೇಳಬಹುದು. ಸೋಂದೆಯೂ ಇಂಥ ಒಂದು ಕದಂಬ ಪ್ರಣೀತ ಪ್ರಸಿದ್ಧ ಅಗ್ರಹಾರವಾಗಿತ್ತು. (ಡಾ. ಮಂದಾಕಿನಿ ಪುರೋಹಿತ:ಬನವಾಸಿ ಕದಂಬರ ಕಾಲದಲ್ಲಿ ವೈದಿಕ ಸಂಸ್ಕೃತಿ).

ಈ ತರಹದ ಕದಂಬ ಕೋಟೆಯ ಬಗ್ಗೆ ಹೇಳುವುದಾದರೆ, ಇದು ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಹೇಳಿದಂತೆ, ಮೃದ್ ದುರ್ಗ+ವನದುರ್ಗಗಳ ಸಂಕೀರ್ಣವಾಗಿವೆ. ಮಲೆನಾಡಿನಲ್ಲಿ ವೃಕ್ಷ ಹಾಗೂ ಮಣ್ಣು ಇವುಗಳ ಕೊರೆತಯಿಲ್ಲ. ಈ ಎರಡು ಪ್ರಾಕೃತಿಕ ಲಭ್ಯ ವಸ್ತುಗಳನ್ನೇ ಉಪಯೋಗಿಸಿ ಕೋಟೆಗಳನ್ನು ಕಟ್ಟುವಿಕೆಯಲ್ಲಿ ಪ್ರಯೋಗಿಸಲಾಗಿದೆ. ಇದು ಕದಂಬರ ಕಾಲದ ಕೋಟೆಗಳ ವೈಶೇಷಿಕತೆ. ಇಂಥದೇ ಬನವಾಸಿಯ ನಮೂನೆಯಲ್ಲೂ ನೋಡಬಹುದು.

ಧಾರ್ಮಿಕ ವಾಸ್ತು (Religious Architeture)

ಸೋಂದಾದಲ್ಲಿಯ ದೇವಾಲಯಗಳ ವಾಸ್ತು, ವಿನ್ಯಾಸ ಹಾಗೂ ಶಿಲ್ಪಗಳ ಬಗ್ಗೆ ಹೇಳಬೇಕಾದರೆ, ಈ ಪ್ರದೇಶವು ಅಧಿಕ ಮಳೆಯ ಸುರಿವ ಮಲೆನಾಡು ಅದುದರಿಂದ, ಅದರ ಹೊಡೆತವನ್ನು ತಪ್ಪಿಸಲು ಹಾಗೂ ದೇವಾಲಯಗಳ ಮೇಲೆ ಬಿದ್ದ ನೀರನ್ನು ದೂರ ಮಾಡಲು, ಇಳಿಜಾರಾದ ಹಾಗೂ ಕಟ್ಟೆ ಕಟ್ಟೆಯಾದ, ಎತ್ತರಕ್ಕೆ ಹೋದಂತೆ ಉದ್ದಗಲಗಳಲ್ಲಿ ಕಡಿಮೆ ಕಡಿಮೆಯಾಗುತ್ತ ಹೋಗುವ ಪಟ್ಟಣ ಶಿಖರ ಸ್ವರೂಪವನ್ನೆ ಇಲ್ಲಿ ಅಳವಡಿಸಲಾಗಿದೆ. ಇದು ಹಿಂದು ದೇವಾಲಯಗಳ ವಾಸ್ತುಶೈಲಿಯಲ್ಲಿ ಕದಂಬ–ನಾಗರ ವಾಸ್ತು ಶೈಲಿಯು ಕ್ರಿ.ಶ. 4–5 ಶತಮಾನದಗಳಲ್ಲಿ ಉಗಮಿಸಿದ್ದು, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣ ಚಾಲುಕ್ಯರ ತದನಂತರ ವಿಜಯನಗರದ ರಾಜರುಗಳ (ಕ್ರಿ.ಶ. 1600) ಕಾಲದವರೆಗೂ ಬೆಳೆಯುತ್ತ ಹಾಗೂ ಬಳಕೆಗೊಳ್ಳುತ್ತಹೋಗಿದೆ.

ಇಳಿಜಾರಾದ ಪಟ್ಟಿಕೆಗಳು ಅಂಚಿನಲ್ಲಿ ಅರ್ಧ ಕಂಸದಂತೆ ಕೆಳ ಮುಖವಾಗಿ ಬಾಗಿರುವುದರಿಂದ ನೀರು ಜರಿಯುತ್ತ ಕೆಳಗೆ ಕೆಳಗೆ ಇಳಿದು, ಛತ್ರಿನ ಸಮಾಂತರದಲ್ಲಿ ಮುಂದೆ ಚಾಚಿದ ಕಪೋತಗಳ ಮೇಲೆ ಬಿದ್ದು ಭಿತ್ತಿಗೆ ಸ್ವಲ್ಪವೂ ತಗಲದಂತೆ, ಗೋಡೆಯಿಂದ ದೂರ ಆಚೆಗೆ ದೂಡುವ ವ್ಯವಸ್ಥೆ ಇದಾಗಿದೆ.

ಇಲ್ಲಿಯ ದೇವಾಲಯಗಳಲ್ಲಿ ಹೇಳಿಕೊಳ್ಳುವಂಥ ಕುಸುರಿನ ಮೂರ್ತಿಗಳಾಗಲಿ, ಕಂಬಗಳಾಗಲೀ, ದ್ವಾರಬಂಧಗಳಾಗಲೀ, ದೇವಕೋಷ್ಟಗಳಾಗಲೀ ಇರುವುದಿಲ್ಲ. ಏಕೆಂದರೆ ದಕ್ಷಿಣ ಭಾರತದಲ್ಲಿ ಸ್ತರ–ಸ್ತರಗಳಾಗಿ ಕಟ್ಟಲ್ಪಡುವ (Structual Temples) ದೇವಸ್ಥಾನಗಳ ನಿರ್ಮಾಣದ ಶೈಶವಾವಸ್ಥೆಯು ಈ ಕಾಲದ್ದಾಗಿದೆ ಎಂದು ಹೇಳಬಹುದು. ಸಮೀಪದ ತಾಣಗಳಲ್ಲಿ ದೊರೆತ ಮೃದು ಕರಿ–ಹಸಿರು ಮಿಶ್ರಿತ ಬೆಸಾಲ್ಟ ಕಲ್ಲು ಮಾತ್ರ ಮೂರ್ತಿ, ಕಂಬಗಳು ಛತ್ತುಗಳು ಹಾಗೂ ಶಿಖರಗಳಿಗೆ ಉಪಯೋಗಿಸಲಾಗಿದೆ. ಈ ಶಿಲೆಗಳ ಉಪಯೋಗವನ್ನು ಬಹಳ ಹಿಡಿತದಿಂದ ಮಾಡಲಾಗಿದೆ. ಏಕೆಂದರೆ ಅದು ಅಪರೂಪದ ಶಿಲೆ. ಬಹಳ ವಿಪುಲವಾಗಿ ಉಪಯೋಗಿಸಬಹುದಾದದ್ದು ಲೇಟೆರೈಟ್. ಅದು ಹೇರಳವಾಗಿ ದೊರೆತರೂ ಕೆತ್ತನೆಗೆ ಕುಸುರಿಗೆ ಏನೂ ಉಪಯೋಗವಿಲ್ಲ. ಪುಳು–ಪುಳು ಉದುರುವ ಗುಣ ಅದಕ್ಕೆ. ಇಲ್ಲಿಯ ದೇವಾಲಯಗಳು ವಿನ್ಯಾಸದಲ್ಲಿ ಸರಳ ಮುಖ ಮಂಟಪ, ಅರ್ಧ ಮಂಟಪ ಹಾಗೂ ಗರ್ಭಗೃಹಗಳಿಂದ ಕೂಡಿ, ಅಡ್ಡಲಾಗಿ ವಿಸ್ತಾರವಾದ ಸಭಾ ಮಂಟಪಗಳಿಂದ ಸಂಯೋಜಿತ ವಾಗಿದೆ. ಶ್ರೀ ವೆಂಕಟೇಶ ದೇವಾಲಯ, ಶ್ರೀ ಶಂಕರನಾರಾಯಣ, ಕಾಳಿ ದೇವಾಸ್ಥಾನ ತದನಂತರದ ಜೈನ ಬಸದಿ ಇತ್ಯಾದಿಗಳು ಒಂದು ತರಹದ ವಾಸ್ತು ವಿನ್ಯಾಸ ಹೊಂದಿವೆ.

ಗೃಹ್ಯವಾಸ್ತು (Domestic Architertured)

ಇಲ್ಲಿಯ ಪುಷ್ಕರಣಿಗಳು (ನೀರಿನ ಹೊಂಡಗಳು) ದೇವಾಲಯಗಳ ಆವರಣಗಳಲ್ಲಿ, ಮಠ ಮಾನ್ಯಗಳ ಪರಿಸರದಲ್ಲಿ ನಿತ್ಯೋಪಯೋಗಿ, ಜನೋಪಯೋಗಿ, ಮಜ್ಜನೋಪಯೋಗಿ, ಧಾರ್ಮಿಕ ವಿಧಿಗಳೋಪಯೋಗಿಯಾಗಿ ಪರಿಣಮಿಸಿದೆ. ಇವು ವಿನ್ಯಾಸದಲ್ಲಿ ಕಡಿಮೆ ಕಡಿಮೆಯಾಗುತ್ತ ಹೋಗುವ ಕಟ್ಟೆ ಕಟ್ಟೆಯ ಸೋಪಾನಗಳುಳ್ಳ ಕಟ್ಟಡವಾಗಿದೆ. ನೆಲದಾಳದಲ್ಲಿ ಅಖಂಡ ನೀರಿನ ನೆಲಗಳು ಇರುವ ತಾಣಗಳನ್ನು ಆರಿಸಿಕೊಂಡು, ಭೂತಲದ ನೀರಿನ ಮೂಲ ತಿಳಿದು, (Groud water Sources) ಅಥವಾ ನಿರಂತರ ನೀರಿನ ಝುರಿಯುಳ್ಳ (Water Brookes) ನಿಮ್ನ ಪ್ರದೇಶವನ್ನು ಆರಿಸಿಕೊಂಡು, ಅಂಥಲ್ಲಿ ಈ ನೀರಿನ ಪುಷ್ಕರಣಿಗಳನ್ನು ನಿರ್ಮಿಸಲಾಗಿದೆ. ಈ ತರಹದ ವಿನ್ಯಾಸ ಹಾಗೂ ವಾಸ್ತುವುಳ್ಳ ಪುಷ್ಕರಣಿಗಳೇ ಸೋಂದೆಯಲ್ಲಿ ಕಾಣಸಿಗುತ್ತವೆ. ಇಲ್ಲಿ ಹಯಗ್ರೀವ ಸಮುದ್ರ, ವೈಷ್ಣವ ಸಂಪ್ರದಾಯದ ಮಠದ ಪರಿಸರದಲ್ಲಿದೆ. ಭೂತನಾಥ (ಭೂತರಾಯನೆಂದೂ ಹೆಸರು) ಮಂಟಪದ ವಿಭಾಗೀಯ ಗೋಡೆಯ ಆಚೆಗೆ, ಉತ್ತರದ ದಿಶೆಯಲ್ಲಿ ಭೂತನಾಥ ಪುಷ್ಕರಣಿ ಎಂದು ಇದು ಕರೆಯಿಸಿಕೊಳ್ಳುತ್ತದೆ. ಶ್ರೀ ವ್ಯಾಸರಾಯರು ಸೋಂದೆಯಲ್ಲಿ ಐದು ಪವಿತ್ರ ಪುಷ್ಕರಣಿಗಳನ್ನು ಕಟ್ಟಿದ ವಿವರ ದೊರೆಯುತ್ತದೆ. ಸ್ವರ್ಣವಲ್ಲೀ ಮಠದ ಪರಿಸರದಲ್ಲಿ ಪಶ್ಚಿಮದ ತೆಂಗಿನತೋಟದಲ್ಲಿ ಇಂಥದೆ ಪುಷ್ಕರಣಿ ಕಂಡು ಬರುತ್ತದೆ. ಹೀಗೆ ಸೋಂದೆಯಲ್ಲಿ ವಿಶಿಷ್ಟ ವಿನ್ಯಾಸದ ಪುಷ್ಕರಣಿಗಳು ಸಂಶೋಧಕರ ಗಮನವನ್ನು ಸೆಳೆಯುತ್ತವೆ. ಶ್ರೀವಾದಿರಾಜ ಮಹಾಸ್ವಾಮಿಗಳ ತೀರ್ಥಪ್ರಬಂಧ ಹಾಗೂ ಭೂಗೋಲ ನಿರ್ಣಯ ಗ್ರಂಥಗಳು ಭಾರತದ ಪುಣ್ಯ ತೀರ್ಥಕ್ಷೇತ್ರಗಳನ್ನು, ಜಲ ಸಂಗ್ರಹಗಳಾದ ಪುಷ್ಕರಣಿಗಳನ್ನು ಹಾಗೂ ನದಿ ನಾಲೆ ಹೊಳೆ ಹಳ್ಳ ಕೊಳ್ಳ ಗಿರಿ ಪರ್ವತ ಇಳಿಜಾರು ಏರುಪೇರುಗಳನ್ನು ವರ್ಣಿಸಿ ಜಲ ಸಾಹಿತ್ಯ ಹಾಗೂ ಭೂಗೋಲ ಸಾಹಿತ್ಯಗಳನ್ನು ಸಾರಸ್ವತ ಲೋಕಕ್ಕೆ ಕೊಡಮಾಡಿವೆ.

ಸಾರ್ವಜನೀಯ ವಾಸ್ತು (Civilian Architecture)

ಸಾವಿರಾರು ಜನ ಮನಶ್ಶಾಂತಿಗಾಗಿ ಆಧ್ಯಾತ್ಮಿಕ ನೆಲೆಗಳಾದ ಮಠಗಳಿಗೆ ಭೇಟಿ ನೀಡುತ್ತಾರೆ. ಸೋಂದೆಯಲ್ಲಿಯ ಮಠಗಳು ಸ್ವರ್ಣವಲ್ಲಿ ಮಠ, ಶ್ರೀ ವಾದಿರಾಜ ಮಠ, ವೀರಶೈವ ವಿರಕ್ತ ಮಠ ಇತ್ಯಾದಿಗಳ್ಳು ಧಾರ್ಮಿಕ ಆಚರಣೆ, ವಿಧಿ, ವಿಧಾನಗಳಿಗೆ ಅನುಕೂಲವಾಗುವಂತೆ ರಚಿಸಲಾಗಿದೆ. ಶ್ರೀಗಳವರ ಸಮಾಧಿಗಳು, ಸಭಾಂಗಣ, ಪ್ರದಕ್ಷಿಣ ಪಥ, ಪ್ರಾಕಾರ, ಭೋಜನ ಶಾಲೆ, ಪಾಠಶಾಲೆ, ಹೋಮ ಹವನಾದಿ ಕೈಕೊಳ್ಳುವ ವಿಭಾಗ, ಸ್ನಾನ ಗೃಹಗಳು ನೀರಿನ ಸಂಗ್ರಹಗಳು ಪುಷ್ಕರಣಿಗಳು, ಇತ್ಯಾದಿಗಳನ್ನು ಬಹು ವ್ಯವಸ್ಥೆಯುತವಾಗಿ ವಿನ್ಯಾಸಗೊಳಿಸಲಾಗಿದೆ.

ಹೀಗೆ ಅಂತತಃ ಬನವಾಸಿನಾಡಿನ ಚೇತನ ಸಿರಿ ಸ್ವಾದಿ. ಇದರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೆ. ಸ್ವಾದಿಯು ನೀಡಿದ ರಕ್ಷಣಾ ವ್ಯವಸ್ಥೆ ಆಧ್ಯಾತ್ಮ ಶಕ್ತಿಯನ್ನಿತ್ತ ಮಠಗಳು; ಶ್ರೀ ಸ್ವರ್ಣವಲ್ಲೀ, ಶ್ರೀ ವಾದಿರಾಜ ಶ್ರೀಗಳ ಸಮಾಧಿಗಳು, ಪುಷ್ಕರಣಿಗಳು, ಇನ್ನುಳಿದ ದೇವಾಲಯಗಳು, ಕೇವಲ ಐತಿಹಾಸಿಕ ಮಾಹಿತಯನ್ನಷ್ಟೇ ಅಲ್ಲ, ಜೊತೆಗೆ ವಾಸ್ತುಶಾಸ್ತ್ರದ ಗುಣಮೌಲ್ಯಗಳನ್ನು ಹೊತ್ತು, ಮಾನವನ ಆಂತರ್ಯದ ಪ್ರಭೆಯನ್ನೂ ಬೆಳಗಿಸಿವೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಮಾಳವಾಡ ಸಸ., (1967), ಸ್ವಾದಿ ಅರಸು ಮನೆತನ, ಧಾರವಾಡ.
2. ಕಲಬುರ್ಗಿ ಎಂ.ಎಂ., ಹಾಗೂ ಸುಂದರ ಅ., (1995), ಸ್ವಾದಿ ಅರಸು ಮನೆತನ, ಗದಗ
3. ಶಾಸ್ತ್ರಿ ಎ.ಕೆ., 1977, ಸ್ವರ್ಣವಲ್ಲೀ ಮಹಾಸಂಸ್ಥಾನ (ಚರಿತ್ರೆ), ಸ್ವಾದಿ.
4. ರಘುನಾಥ ಭಟ್ ಎಚ್.ಆರ್., (1998), ಸ್ವಾದಿ ಶಾಸನಗಳು; ಸ್ವಾದಿ.
5. ತದ್ದಲಸೆ ಶರ್ಮಾ ವಿಘ್ನೇಶ್ವರ, 1961, ಶ್ರೀಸ್ವರ್ಣವಲ್ಲೀ ದರ್ಶನ, ಸ್ವಾದಿ.
6. ರಘುನಾಥ ಭಟ್ ಎಚ್.ಆರ್., (1988), 'ಸ್ವಾದಿ ಎಷ್ಟು ಪ್ರಾಚೀನ?', ಇತಿಹಾಸ ದರ್ಶನ, ಬೆಂಗಳೂರು.
7. ಶಾಸ್ತ್ರಿ ಎ.ಕೆ., 1996, 'ಶ್ರೀ ಸೊಂದಾ ಸ್ವರ್ಣದಲ್ಲಿ ಮಹಾಸಂಸ್ಥಾನದ ಚಾರಿತ್ರಿಕ ದಾಖಲೆಗಳ ಕಿರುಪರಿಚಯ', ಇತಿಹಾಸ ದರ್ಶನ, ಬೆಂಗಳೂರು.
8. ಪುರೋಹಿತ್ ಮಂದಾಕಿನಿ, (1993), 'ಬನವಾಸಿ ಕದಂಬರ ಕಾಲದಲ್ಲಿ ವೈದಿಕ ಸಂಸ್ಕೃತಿ', ಇತಿಹಾಸ ದರ್ಶನ, ಬೆಂಗಳೂರು.

9. ಜೋಶಿ ಎಸ್.ಕೆ., (1994) 'ಕದಂಬರ ರಕ್ಷಣಾ ವಾಸ್ತು ನೆಲೆಗಳು', ಕದಂಬರ ಇತಿಹಾಸ, ರಾಷ್ಟ್ರಮಟ್ಟದ ವಿಚಾರ ಸಂಕಿರಣ, ಬನವಾಸಿ.
10. ಸುಂದರ ಅ., (1994), ಕರ್ನಾಟಕ ಪ್ರಾಗೈತಿಹಾಸಿಕ ಕಾಲದ ಕಲೆ, ಬೆಂಗಳೂರು.
11. ಲೇಖಕನ ಸ್ಥಳ ಸಮೀಕ್ಷೆ ಹಾಗೂ ವಿದ್ವಾಂಸರುಗಳಾದ ಡಾ. ರಘುನಾಥ ಭಟ್ ಎಚ್.ಆರ್., ಡಾ. ಶಾಸ್ತ್ರಿ ಎ.ಕೆ., ಡಾ. ಸೂರ್ಯನಾಥ ಕಾಮತ್ ಹಾಗೂ ಇನ್ನಿತರ ಸಂಶೋಧಕರೊಂದಿಗೆ ಚರ್ಚೆ.
12. ಅಭಿಶಂಕರ ಕೆ., ಡಿಸ್ಟ್ರಿಕ್ಟ್ ಗಾಝೆಟೀಯರ್ ಆಫ್ ನಾರ್ಥ ಕ್ಯಾನರಾ, ಬೆಂಗಳೂರು
13. ಖುಚಿಟಿಛುಾ ಆ.ಓ. (1996), ಗಿಚಿಜುಡಿಚಿರಿಚಿ, ಣುಜ ಆತಿಚುಣಚಿ ಠಿಂಜಣ, ಉಡಿಜಚಿಣ ಛಣಣ ುಂಟಿಂಡಿಜಜ, ಋಚಿಡಿತಿಚಿಜ.
14. ವಾದಿರಾಜ ಕೃತಿಗಳು, (1980), ನಾಗರತ್ನ ಟಿ.ಎನ್., (ಸಂ.), ಮೈಸೂರು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು.
15. ಅರಳು ಮಲ್ಲಿಗೆ ಪಾರ್ಥಸಾರಥಿ, ಹರಿದಾಸ ಝೇಂಕಾರ ತರಂಗಿಣಿ, ಕನ್ನಡ ಹರಿದಾಸ ಸಾಹಿತ್ಯ : 2, ಶ್ರೀ ವಾದಿರಾಜ ಸಂಪುಟ, ಬೆಂಗಳೂರು.

❑

ಗೋವೆ ಕದಂಬರ ಕಾಲದ ಪ್ರಾಚ್ಯ ದಾಖಲೆಗಳು

– ಡಾ. ಚೆನ್ನಕ್ಕ ಪಾವಟೆ

ಕರ್ನಾಟಕದ ಪ್ರತಿಷ್ಠಿತ ಸಾಮ್ರಾಜ್ಯಗಳಲ್ಲಿ ಕಲ್ಯಾಣ ಚಾಲುಕ್ಯರದು ಮಹತ್ವದ ಅಧ್ಯಾಯ. ಅವರ ಮಹಾಮಂಡಲೇಶ್ವರರಾಗಿ ಮೂರು ನೂರು ವರ್ಷ ಗೋವೆಯನ್ನು ಕೇಂದ್ರವನ್ನಾಗಿಸಿಕೊಂಡು ಆಡಳಿತ ನಿರ್ವಹಿಸಿದವರು ಗೋವೆಯ ಕದಂಬರು. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ನೆಚ್ಚಿನ ಕುವರಿ ಮಾಳಲದೇವಿಯನ್ನು ಗೋವೆಯ ಮಂಡಲೇಶ್ವರ ಜಯಕೇಶಿ ವಿವಾಹವಾದ ಸಂದರ್ಭವನ್ನು ಧಾರವಾಡ ತಾಲೂಕಿನ ಶಾಸನ ವಿವರಿಸಿದೆ.

ಗೋವೆ ಕದಂಬರು 'ಹರಧರಣೀ ಪ್ರಸೂತ'ರೆಂದು ಶಿವಮತಮೂಲವನ್ನು ಹೇಳಿಕೊಂಡ ಇವರ ಮನೆದೈವತ ಸೌರಾಷ್ಟ್ರದ ಸೋಮೇಶ್ವರ 'ಧರ್ಮಾವತಾರ' ಎಂದು ಶಾಸನಗಳಲ್ಲಿ ಕರೆಸಿಕೊಂಡ ಈ ಮನೆತನದ ಇಮ್ಮಡಿ ಚಟ್ಟಯಿದೇವ ರಾಜ್ಯತ್ಯಾಗ ಮಾಡಿ ಧರ್ಮಾಸಕ್ತನಾಗಿದ್ದರೆ ಇದೇ ಮನೆತನದ ಕಾದಂಬ ಶಿವಚಿತ್ತ ಶ್ರೀವಜ್ರದೇವನನ್ನು ಸಮಕಾಲೀನ ಕನ್ನಡ ಕೃತಿ ಸಾನಂದಚರಿತೆ ವೀರಶೈವ ಶಿವಶರಣರ ಮಾಲಿಕೆಗೆ ಸೇರಿಸಿದ್ದು ಇವನ 'ಶಿವಚಿತ್ತ' ವಿಶೇಷಣವಾಗಿ ಗಮನಿಸುವಂತಿದೆ.

ಶಿವಶರಣರ ಕಾರ್ಯಕ್ಷೇತ್ರ

ಕಲ್ಯಾಣಕ್ರಾಂತಿಯ ತರುವಾಯ ವೀರಶೈವಧರ್ಮ ಅನುಭಾವ ಸಾಹಿತ್ಯವೆನಿಸಿದ ವಚನಸಾಹಿತ್ಯ ಸಂರಕ್ಷಣೆಯ, ಜವಾಬ್ದಾರಿ ಹೊತ್ತ ಶಿವಶರಣರು ಚೆನ್ನಬಸವಣ್ಣ ಅಕ್ಕನಾಗಮ್ಮ ಮಡಿವಾಳ ಮಾಚೀದೇವರ ನೇತೃತ್ವದಲ್ಲಿ ಕಲ್ಯಾಣದಿಂದ ಉಳವಿತ್ತ ಮುನ್ನಡೆದ ಸಂದರ್ಭದಲ್ಲಿ ಕಾರವಾರ ಜಿಲ್ಲೆಯ ಸುಪಾ ಮುಂಡಗೋಡ, ಹಳಿಯಾಳ ಮತ್ತು ಯಲ್ಲಾಪುರ ತಾಲೂಕುಗಳಲ್ಲಿ ಅಲ್ಲಲ್ಲಿಗೆ ಬೀಡುಬಿಟ್ಟ ಬಿಜ್ಜಳನ ಸೈನಿಕರೊಂದಿಗೆ ಹೋರಾಡಿದ, ಕೆರೆ ದೇವಾಲಯದಾವರಣಗಳಲ್ಲಿ ಪೂಜೆ, ಧ್ಯಾನ ಕೈಕೊಂಡ ವಿಶೇಷ ಕುರುಹುಗಳು ಶರಣರ ಸ್ಮರಣೆಯ ಸಂಕೇತಗಳೆನಿಸಿವೆ.

ಹಳಿಯಾಳ ತಾಲೂಕಿನಲ್ಲಿ ಕ್ಷೇತ್ರಕಾರ್ಯ

ಗೋವೆ ಕದಂಬರ ಪ್ರಮುಖ ಪಟ್ಟಣಗಳಲ್ಲಿ 'ಹಣದ ಪೆಟ್ಟಿಗೆ' ಎನಿಸಿದುದು ಹಳಿಯಾಳ ಪಟ್ಟಣ. ಈ ಪ್ರದೇಶದ ಮಾದಿನಕೊಪ್ಪ, ಕಳಸಾಪುರ, ರಾಯಪಟ್ಟಣ ಮತ್ತು ಮುಂಡಿಕೆ ಪ್ರದೇಶಗಳಲ್ಲಿ ಕೈಕೊಂಡ ಕ್ಷೇತ್ರಕಾರ್ಯದ ಮೂಲಕ ಸಾದರ ಪಡಿಸಿದ ಪ್ರಾಚ್ಯ ದಾಖಲೆಗಳು ಅದನ್ನು ವಿಶೇಷವಾಗಿಸಿವೆ. ಕದಂಬದೊರೆಗಳು ಆಡಳಿತದಲ್ಲಿ ರೂಢಿಸಿಕೊಂಡು ಬಂದ ಶಿಸ್ತು ಅಚ್ಚುಕಟ್ಟುತನ ಪ್ರಾಚ್ಯವಾಸ್ತು ಶಿಲ್ಪ ಸೌಂದರ್ಯ, ಕೆರೆ ಕಾಲುವೆಗಳು, ಹಳಿಯಾಳದ ಕೋಟೆ, ಪ್ರಾಚ್ಯ ದೇವಸ್ಥಾನಗಳು, ಸುಂದರವಾದ ಉದ್ಯಾನವನಗಳು ಅಲ್ಲಲ್ಲಿಗೆ ಚದುರಿದಂತೆ ಶಿಲ್ಪದ ಕಲಾತ್ಮಕ ವೈಭವ ವೈಶಿಷ್ಟ ಪೂರ್ಣವಾಗಿವೆ.

ಊರಮಧ್ಯದ ತುಳಜಾಭವಾನಿ, ಮಲ್ಲಿಕಾರ್ಜುನ ಗಣಪತಿ ದೇವಸ್ಥಾನಗಳು ಹಳಿಯಾಳದ ಆರಾಧನೆಯ ಪ್ರವೃತ್ತಿ ಸೂಚಿಸುವಂತಿವೆ. ಹಳಿಯಾಳ ಪಟ್ಟಣ ತಲುಪುವ ಮುನ್ನವೇ ನೇರ ಹೆದ್ದಾರಿಯಿಂದ 3 ಕಿ.ಮೀ. ಒಳಗಿರುವ ಮುಂದಿನ ಕೊಪ್ಪ ಗ್ರಾಮವು ಒಂದು ಪ್ರಾಚೀನ ಗ್ರಾಮ. ಅತ್ಯಂತ ಕಡಿಮೆ ಜನವಸತಿ, ಕುರುಚಲು ಕಾಡು ಒತ್ತುವರಿಯಾಗಿದ್ದು ಈಗ

ಬೇಚರ್‌ಕ್ ಆಗಿದೆ. ಅಲ್ಲಲ್ಲಿಗೆ ಸಿಗುವ ಮನೆಗಳ ತಳಪಾಯ ಗಡಿಗೆ ಮಡಿಕೆಗಳ ಚೂರು ಇಲ್ಲಿ ಜನವಸತಿಯನ್ನು ನೆನೆಸುವಂತಿವೆ. ಮಾವಿನಕೊಪ್ಪದ ಅವಶೇಷಗಳಲ್ಲಿ ನಸುಬಾಗಿದ ಕಲಾತ್ಮಕ ವಿನ್ಯಾಸಪೂರ್ಣ ಕಲೆಯನ್ನೊಳಗೊಂಡ ನಾರಾಯಣನ ವಿಗ್ರಹ ಅಕ್ಕ ಪಕ್ಕದ ಶ್ರೀದೇವಿ ಭೂದೇವಿಯರ ವಿಗ್ರಹಶಿಲ್ಪದ ವಿನ್ಯಾಸ ಸುಂದರವಾಗಿದೆ.

ಶ್ರೀ ವಿಷ್ಣು ಶಿಲ್ಪ 4 ಪೂಟು ಎತ್ತರ, 3 ಪೂಟು ಅಗಲದ ದಪ್ಪ ಶಿಲೆ. ವಿಷ್ಣು ಸಮಭಂಗದಲ್ಲಿದ್ದು ಚತುರ್ಧಾರಿಯಾಗಿರುವನು. ನಿಂತ ನಿಲುವು ಸರಳ ಮುಖದ ಮೇಲೆ ಮಂದಹಾಸ, ತರುಣ ಮುಖಮುದ್ರೆ, ಸೌಮ್ಯಭಾವ ಅರ್ಧವೃತ್ತಾಕಾರದ ಶಿರಶ್ಚಕ್ರ ಕಿರೀಟ ಮಕುಟ ಕೊರಳಹಾರ ಕರ್ಣಕುಂಡಲ ಯಜ್ಞೋಪವೀತ ನಡುಪಟ್ಟಿ ಕೈಯ ಕಂಕಣ, ಅಭಯಹಸ್ತ, ಶಂಖ ಚಕ್ರಗಳಿದ್ದು ಉಟ್ಟ ಧೋತರದ ನಿರಿಗೆಗಳನ್ನು ಎಣಿಸಲು ಬರುವಂತೆ ವಿನ್ಯಾಸಪೂರ್ಣ ಗೆರೆಗಳನ್ನೊಳಗೊಂಡ ಕಲಾತ್ಮಕ ಶಿಲ್ಪ ಇದಾಗಿದ್ದು ಶಿಲ್ಪದ ಮೇಲ್ಭಾಗಕ್ಕೆ ಹಿಂಬದಿಯಲ್ಲಿ ಷಟ್‌ಕೋನಾಕೃತಿಯ ಕಮಾನು ಶಿಲ್ಪವಿನ್ಯಾಸಕ್ಕೆ ಮೆರುಗನ್ನಿತ್ತಿದ್ದು ಇದುಬಹುಶಃ 13ನೆಯ ಶತಮಾನದ ಶಿಲ್ಪವಾಗಿದೆ.

ಮಾವಿನಕೊಪ್ಪದ ಎರಡು ಎತ್ತರದ ಪ್ರದೇಶಗಳಲ್ಲಿ ಸುಂದರವಾದ ಶಿವಲಿಂಗ, ಕೊರಳಗಂಟೆ ಹಣೆ ಪಟ್ಟಿ ಧರಿಸಿದ ಎರಡು ನಂದಿ ವಿಗ್ರಹಗಳು ಚೇತೋಹಾರಿಯಾಗಿವೆ. ಹಳಿಯಾಳದ ಗಣ್ಯ ನಾಗರಿಕ ಹಿರಿಯರಾರ ಶ್ರೀ ಸಿ.ಜಿ. ಆನೆಗುಂದಿ ಅವರ ಪ್ರಯತ್ನದಿಂದಾಗಿ ಶಿಲ್ಪಗಳು ಜೀರ್ಣೋದ್ಧಾರಗೊಂಡು ನಿಂತಿವೆ.

ಹಳಿಯಾಳದಿಂದ 12 ಕಿ.ಮೀ. ದೂರದ ರಾಯಪಟ್ಟಣ, ಕದಂಬ ಕಾಲದ ರಾಯರ ಹೆಸರಿನಲ್ಲಿ ನಿರ್ಮಾಣಗೊಂಡಿದೆ. ಈಗ ಪಟ್ಟಣದ ಸುತ್ತ ದಟ್ಟಕಾಡು ಬೆಳೆದಿದ್ದು ಅಲ್ಲಿಲ್ಲಿ ಗೌಳಿಗರ ತಾಂಡಾದವರ ವಾಸದ ಕೇಂದ್ರಗಳಾಗಿವೆ. ಕಾಡಿನ ಮಧ್ಯದ ಕಲ್ಲಿನ ಕೊಂಪೆಗಳನ್ನು ದಾಟಿ ಮುಂದುವರೆದರೆ ಕದಂಬರ ಕಾಲದ ದೇವಸ್ಥಾನದ ಅವಶೇಷಗಳು ಇಲ್ಲಿ ವಿಶೇಷವಾಗಿ ಕಾಣಬರುತ್ತವೆ. ರಾಯ ಪಟ್ಟಣದ ಗೌಳಿಗರ ತಾಂಡಾ ತಲುಪಿದಾಗ ಕೆಲವು ದಿವಸಗಳ ಹಿಂದೆ ಬಚ್ಚಿಟ್ಟ ದಿವ್ಯಕ್ಕೆ ಅಂಜನ ಪ್ರಯೋಗ ಕೈಕೊಳ್ಳಲು ನೆರವು ನೀಡಿದ ಆಪಾದನೆಯ ಮೇರೆಗೆ ಎಷ್ಟೋ ಗ್ರಾಮಸ್ಥರನ್ನು ದಂಡಿಸಿದ್ದರಿಂದ ಕ್ಷೇತ್ರಕಾರ್ಯಕ್ಕೆ ಹೋದ ನಮ್ಮನ್ನು ಕಂಡು ಯಾವುದೇ ವಿಷಯ ತಿಳಿಸಲು ಹಿಂಜರಿದರು. ಆದರೂ ಅವರಲ್ಲಿ ವಿಶ್ವಾಸ ಪಡೆದು ಕಾಡಿನಲ್ಲಿ ಮುಂದುವರೆದರೆ ಹೆಜ್ಜೆ ಹೆಜ್ಜೆಗೆ ನಿರಾಸೆ ಆದರೂ ಕಾಡಿನ ಮಧ್ಯದಲ್ಲಿ ಬಂದು ನೋಡಲು ವಿನ್ಯಾಸಪೂರ್ಣವಾದ ಕದಂಬರ ಕಾಲದ ವೀರಗಲ್ಲು ಕಾಣಬಂತು. ಕಲಾತ್ಮಕವಾದ ಸ್ಮಾರಕ 6 ಪೂಟು ಎತ್ತರ 3 1–2 ಪೂಟು ಅಗಲದ್ದು ಗೋವೆ ಕದಂಬರ ಕಾಲದ ಹೋರಾಟ ಒಂದಕ್ಕೆ ಬೆರಳು ತೋರುವಂತಿದೆ.

ಮೂರು ಪಟ್ಟಿಕೆಗಳಲ್ಲಿನ ಶಿಲ್ಪವು ಶಿಲ್ಪಿಯ ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿದೆ. ಗೋವೆ ಕದಂಬರ ಕಾಲದ ಯುದ್ಧನೀತಿಯ ಚಾಕಚಕ್ಯತೆಯನ್ನು ವ್ಯಕ್ತಪಡಿಸಿದೆ; ವೀರಗಲ್ಲಿನ ಅರ್ಧಭಾಗದಷ್ಟು ಹೋರಾಟದ ಚಿತ್ರ, ರಥ ಕುದುರೆ ಕಾಲ್ದಳಗಳ ಯುದ್ಧ, ಸತ್ತು ಬಿದ್ದವರ ದೃಶ್ಯ ಹೋರಾಡುತ್ತಿರುವ ವೀರಾಧಿವೀರರ ಆಟಾಟೋಪ, ಕುದುರೆಗಳ ಓಟ, ಯುದ್ಧವೀರರನ್ನು ದೇವತೆಗಳನ್ನು ವೀರಸ್ವರ್ಗದತ್ತ ಕರೆದೊಯ್ಯುತ್ತಿರುವ ದೃಶ್ಯ, ಅಂದಿನ ಕಾಲದ ವೀರರು ಧರಿಸುವ ಬಟ್ಟೆ ಬರೆ ಕಿವಿಯೋಲೆಗಳು, ತಲೆಯ ಮೇಲೆ ಬೆಳ್ಗೊಡೆ ಹಿಡಿದ ಬಿಲ್ಲುಬಾಣ, ಕೊಂಡ, ಖಡ್ಗ, ಢಾಲುಗಳನ್ನು ಚಿತ್ರಿಸಿದ ಸೂಕ್ಷ್ಮ ಸುಳುಹು ಹೊಳಹುಗಳ ವಿನ್ಯಾಸಪೂರ್ಣ ಶಿಲ್ಪವಾಗಿದೆ. ವೀರಗಲ್ಲು ಕಾಡಿನ ಬಯಲಲ್ಲಿ ರುದರಿಂದ ಪ್ರಕೃತಿ ಪ್ರಕೋಪಕ್ಕೆ ಸವಳಿಗೊಂಡಿದ್ದರೂ ಮೂಲಶಿಲ್ಪ ತನ್ನ ಸೌಂದರ್ಯ ವಿನ್ಯಾಸವನ್ನು ಮಬ್ಬಾದರೂ ಕಾಯ್ದುಕೊಂಡು ಬಂದಿವೆ.

ಹಳಿಯಾಳದಿಂದ 8. ಕಿ.ಮೀ. ದೂರದ ಮುಂಡಿಕೆ ಪ್ರಾಚೀನ ಸೂರ್ಯದೇವಾಲಯದಿಂದ ಪ್ರಸಿದ್ದಿಪಡೆದ ಪ್ರದೇಶ. ಪ್ರಾಚೀನವಾದ ಸೂಯನಾರಾಯಣನ ವಿಗ್ರಹ ಈ ಭಾಗದಲ್ಲಿ ಸೂರ್ಯೋಪಾಸನೆ ಸೂಚಿಸುವ ಅಂಶ. ಮುಂಡಿಕೆ ಎತ್ತರದ ದಿಗ್ಭಾಗದಲ್ಲಿ ಈ ಹಳೆಯ ದೇವಸ್ಥಾನವನ್ನು ಇತ್ತೀಚೆಗೆ ಜೀರ್ಣೋದ್ದಾರಗೊಳಿಸಿರುವರು. ಗರ್ಭಗುಡಿಯಲ್ಲಿ ಎತ್ತರದ ಚತುರಸ್ತ ಪಾಣಿಪೀಠದ ಮೇಲೆ ಸುಂದರವಾದ ವಿಶೇಷ ವಿನ್ಯಾಸಗಳಿಂದ ಕೂಡಿದ ಸೂಕ್ಷ್ಮಕೆತ್ತನೆಯ ಸಮಭಂಗಿಯ ಸೂರ್ಯ ವಿಗ್ರಹ ಕಣ್ಮನ ತಣಿಸುವಂತಿದೆ. ದ್ವಿಭುಜ ಸೂರ್ಯನು, ಪದ್ಮಪೀಠದ ಮೇಲೆ ನಿಂತಿದ್ದು ಧರಿಸಿದ ಕೈ ಬಳೆ, ತೋಳಬಂಧ, ಭುಜಬಂಧ, ಕೈಯಲ್ಲಿ ಉಂಗುರುಗಳು, ಕಾಲುಗೆಜ್ಜೆ, ಕಾಲ್ಗಡಗ, ಮೇಖಲೆ, ಕಾಲುಂಗುರ, ಪದ್ಮ ಪದಕದ

ಮಾಲೆ, ಯಜ್ಞೋಪವೀತ, ವೈಜಯಂತಿಮಾಲೆಯಂತಹ ಸೂಕ್ಷ್ಮ ಸುಳುವಿನ ಆಭರಣಗಳಿಂದ ಸೂರ್ಯನಾರಾಯಣ ಅಲಂಕೃತ ಗೊಂಡಿರುವನು. ತಲೆಯ ಮೇಲೆ ಕರಂಡಕಿರೀಟ, ಸಿಂಹಮುಖದಿಂದ ಹೊರಹೊರಟ ಮುತ್ತಿನ ಕುಚ್ಚು ಕಲಾತ್ಮಕವಾಗಿದೆ. ಕಿರೀಟದ ನಡುವೆ ಪದಕವಿದೆ. ಕಿರೀಟದ ಅಕ್ಕ ಪಕ್ಕ ಮುತ್ತಿನ ಸರ ನೇತಾಡುತ್ತಿದ್ದು, ಸೂರ್ಯನ ಹಿಂದೆ ಒಂದು ಕಾಲದಲ್ಲಿ ಸುಂದರ ಪ್ರಭಾವಳಿ ಇದ್ದು ಅದು ಕಾಲಾಂತರದಲ್ಲಿ ತುಂಡು ತುಂಡಾಗಿ ಹೋಗಿದೆ. ಆ ತುಂಡುಗಳಲ್ಲಿಯೂ ಕಲಾತ್ಮಕ ಹೂಬಳ್ಳಿ, ಅಷ್ಟದಿಕ್ಪಾಲಕರು, ಉಷಾ ಪ್ರತ್ಯುಷೆಯರನ್ನು ನೋಡಬಹುದು.

ಸೂರ್ಯನ ಎಡಬಲದಲ್ಲಿ ಚಾಮರಧಾರಣಿಯರು ಒಂದು ಕೈಯಲ್ಲಿ ಚಾಮರ ಇನ್ನೊಂದು ಕೈಯಲ್ಲಿ ಪೂರ್ಣಫಲ ಹಿಡಿದು ನಿಂತಂತಿದ್ದು ಆ ಶಿಲ್ಪದ ತಲೆಯ ಮೇಲೆ ಹೂಗೊಂಚಲು ಇದೆ. ಸೂರ್ಯ ಪೀಠದ ಉಬ್ಬುಶಿಲ್ಪದಲ್ಲಿ ಏಳು ಕುದುರೆಗಳ ನಡುವೆ ಸಾರಥಿ ಅರುಣನ ಶಿಲ್ಪ ಕಲಾತ್ಮಕಮಾದರಿಯ ಶಿಲ್ಪವೆನಿಸಿದೆ. ಇಷ್ಟು ವಿನ್ಯಾಸಪೂರ್ಣವಾದ ಸೂರ್ಯನಾರಾಯಣನ ಕಂಡರಿಸುವಲ್ಲಿ ಶಿಲ್ಪಿಯ ಧನ್ಯತೆ ವ್ಯಕ್ತಗೊಂಡಿದೆ.

ಇಲ್ಲಿಯ ಪರಿವಾರ ದೇವತೆಗಳಲ್ಲಿ ಭೈರವ, ಮಹಿಷಾಸುರ ಮರ್ದಿನಿ, ಗಣಪತಿ ವಿಗ್ರಹಗಳಿವೆ. ದೇವಸ್ಥಾನದ ಆವರಣದಲ್ಲಿ ತೀರ್ಥಂಕರರ ಪ್ರತಿಮೆಯೊಂದಿದ್ದು ಕುಳಿತ ನಿಲುವಿನ ವಿಗ್ರಹವಿದು. ಇಕ್ಕೆಲಗಳಲ್ಲಿ ಎರಡು ಚಾಮರಗಳಿವೆ. ಅಕ್ಕಪಕ್ಕದಲ್ಲಿ ಇಬ್ಬರು ಭಕ್ತರ ಚಿತ್ರ ಇದ್ದು ವಿಗ್ರಹದ ಸುತ್ತ ಸುಂದರ ಮಕರತೋರಣವಿದೆ. ತಲೆಯ ಮೇಲೆ ಅರ್ಧವೃತ್ತಾಕಾರದ ಪ್ರಭಾಮಂಡಲ, ಕಿರೀಟ ರಹಿತ ತಲೆ, ಕರ್ಣವೃತ್ತಾಕಾರದ ಪ್ರಭಾಮಂಡಲ, ಕಿರೀಟ ರಹಿತ ತಲೆ, ಕರ್ಣಕುಂಡಲ, ಕೊರಳಲ್ಲಿ ಯಜ್ಞೋಪವೀತ, ತೋಳಬಳೆ ಸಹಿತವಾದ ವಿಗ್ರಹ ಗಂಭೀರವಾಗಿದೆ.

ಮುಂಡಿಕೆಯನ್ನು ಗಮನಿಸಿದ ಸಂಶೋಧಕರು ಈಗಾಗಲೇ ಸೂರ್ಯದೇವಸ್ಥಾನದ ಬಗ್ಗೆ ವಿವರಿಸಿರುವರು. ಜೀರ್ಣಗೊಂಡ ಕಲ್ಮೇಶ್ವರ ಮತ್ತು ಸೂರ್ಯನಾರಾಯಣ ದೇವಾಲಯದ ಹತ್ತು ಹೆಜ್ಜೆಯಲ್ಲಿ ರಾಷ್ಟ್ರಕೂಟಕಾಲದ ವೀರಗಲ್ಲೊಂದು ಇದ್ದು ಗೋವೆ ಕದಂಬರ ಮೇಲೆ ಬೆಳಕು ಬೀರುವಂತಿದೆ. ಹೀಗೆ ಒಂದೊಂದಾಗಿ ಗೋವೆ ಕದಂಬರ ಗ್ರಾಮಗಳ ಕ್ಷೇತ್ರಕಾರ್ಯ, ಇನ್ನು ಹೆಚ್ಚಿನ ಪ್ರಾಚ್ಯ ಇತಿಹಾಸ ಅರಿಯಲು ಸಹಕಾರಿಯಾಗುವಂತಿದೆ.

❑

ಚಂದಾವರದ ಕದಂಬ ಕಾಮದೇವರಸ : ಕೆಲವು ಹೊಸ ವಿಚಾರಗಳು ಮತ್ತು ಪರಿಹಾರಗಳು

– ವೈ. ಉಮಾನಾಥ ಶೆಣೈ

ಬನವಾಸಿಯ ಕದಂಬ ಅರಸು ಮನೆತನವು ತಾವೇ ಇಬ್ಭಾಗವಾಗಿ ಶಕ್ತಿ ಕುಂದುತ್ತಿದ್ದಾಗ ಅವರ ಮೇಲೆ ನಡೆದ ಚಾಲುಕ್ಯ ಒಂದನೇ ಪುಲಕೇಶಿಯ ಧಾಳಿ (ಕ್ರಿ.ಶ. ಸುಮಾರು 540) ಯಿಂದಾಗಿ ಅವರು ಇನ್ನೂ ಬಲಹೀನರಾದರು. ಮುಂದೆ ನಡೆದ ಇಮ್ಮಡಿ ಪುಲಕೇಶಿಯ ಧಾಳಿಯಿಂದಾಗಿ ನುಚ್ಚು ನೂರಾದ ಈ ಅರಸು ಮನೆತನದ ಕೆಲವು ಅರಸು ಕುಮಾರರು ಹಲವು ಕಡೆ ಹಂಚಿ ಹೋಗಿ, ಯಾರ ಗಮನಕ್ಕೂ ಬಾರದೆ, ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ ಕಲ್ಯಾಣ ಚಾಲುಕ್ಯರ ಮತ್ತು ಕಲಚೂರ್ಯರ ಅಧೀನದಲ್ಲಿ ಆಳಿದರು. ಗೋವಾ ಮತ್ತು ಹಾನಗಲ್ಲು ಅಲ್ಲದೆ, ಇನ್ನೂ ಸುಮಾರು ಹದಿಮೂರು ಕಡೆ (ಪುನ್ನಾಟ, ಬೇಲೂರು, ಬಂಕಾಪುರ, ಉಚ್ಚಂಗಿ, ನಾಗರಖಂಡ, ದಟ್ಟಹಳ್ಳಿ, ಮಂಜರಾಬಾದ್, ಲುಂಕ, ಮೊಳಕಾಲ್ಮೂರು, ಕೋಗೋಳಿ, ಕೊಡಗು, ಕರಡಿ ಕಲ್ಲು ಮತ್ತು ಚಂದ್ರಾವರ)ಗಳಲ್ಲಿ ಇವರು ಅಳಿದುದನ್ನು ಇತಿಹಾಸಕಾರರು ಗುರುತಿಸಿದ್ದಾರೆ.

ಇವರ ಪೈಕಿ ಚಂದಾವರದ ಕದಂಬರು, ಇಂದಿನ ಉತ್ತರ ಕನ್ನಡ ಜಿಲ್ಲೆ, ಹೊನ್ನಾವರ ತಾಲೂಕಿನ, ಚಂದ್ರಪುರ ಅಥವಾ ಚಂದ್ರಿಕಾಪುರ ಎಂದು ಕರೆಯಲ್ಪಡುತ್ತಿದ್ದ ಚಂದಾವರದಿಂದ ಅಳಿದರು. ಇವರು ಸಹಜವಾಗಿ ತಮ್ಮನ್ನು ಬನವಾಸಿ ಪುರವರಾಧೀಶ್ವರ, ಜಯಂತಿ ಮಧುಕೇಶ್ವರದೇವ ಲಬ್ಧವರ ಪ್ರಸಾದ, ಗೋಕರ್ಣ ಮಹಾಬಲದೇವ ಪಾದಪದ್ಮಾರಾಧಕ ಎಂದು ಕರೆದುಕೊಂಡಿದ್ದರು. ಆದರೇ ಇದೇ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಇಂದಿನ ಸಾಸಿಗುಳಿಯಿಂದ ಅಳಿದ ಪಾಂಡ್ಯ ಅರಸರು ಇದೇ ಬಿರುದುಗಳನ್ನು ಧರಿಸಿದ್ಧರು. ಕಾಮದೇವರಸ ಎಂಬ ಹೆಸರು ಎರಡೂ ಅರಸು ಮನೆತನಗಳಲ್ಲಿ ಸಾಮಾನ್ಯವಾಗಿತ್ತು. ಆದುದರಿಂದ ಈ ಎರಡೂ ಅರಸು ಮನೆತನಗಳ ಇತಿಹಾಸ ಗೋಜಲು ಗೋಜಲಾಗಿತ್ತು. ಸ್ಪಷ್ಟವಾಗಿ ಭಿನ್ನವಾಗಿರುವ ಈ ಎರಡೂ ವಂಶಗಳನ್ನು ಬೇರೆ ಬೇರೆಯಾಗಿ ಗುರುತಿಸಿಕೊಂಡು ಅಧ್ಯಯನ ಮಾಡುವುದು ಇತ್ತೀಚಿಗಿನವರೆಗೂ ಕಷ್ಟವಾಗಿತ್ತು.

ಆದರೆ ಡಾ॥ ಶ್ರೀನಿವಾಸ ಪಾಡಿಗಾರರು ಈ ಎರಡೂ ವಂಶಗಳನ್ನು ಪ್ರತ್ಯ ಪ್ರತ್ಯೇಕವಾಗಿ ಗುರುತಿಸಿ ಕೊಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಅವರು ಹೇಳುವಂತೆ ("ಕದಂಬ ಅಧ್ಯಯನ" 1996ರ ಕದಂಬೋತ್ಸವದಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನ, ಪುಟ 6–8) "ಇತ್ತೀಚೆಗೆ ಶೋಧಿತವಾದ ಅಡತಾರೆಯ ಎರಡು ಶಾಸನಗಳು ಹಾಗೂ ಗುಂಡುಬಾಳದ ಇಮ್ಮಡಿ ಮಲ್ಲೆದೇವನ ಕಾಲದ ಒಂದು ಶಾಸನ, ಈ ಬಗ್ಗೆ ತುಸು ಮಾಹಿತಿ ನೀಡುತ್ತವೆ. ಅಡತಾರೆಯ ಶಾಸನ (23 ಅಗಸ್ಟ್) 1167ರಲ್ಲಿ ಹೊರಟ್ಟಿದ್ದು. ಪಟ್ಟಣದ ತೈಲವರ್ಮನು ಅಡತಾರೆ ಗ್ರಾಮವನ್ನೂ ಕಿಚ್ಚು ಸೋಮಯಾಜಿ ಹಾಗು ಮಹಾಜನರಿಗೆ ಅಗ್ರಹಾರವಾಗಿ ದಾನವಿತ್ತನು. ಶಿಲಾಶಾಸನವನ್ನು ತೈಲವರ್ಮನ ತಮ್ಮ ಮಾವುರ ದೇವ ಹಾಗೂ ಮೊಮ್ಮಗ ವೀರದೇವ ನಿಲ್ಲಿಸಿದರು. ಈ ವೀರ ದೇವರಸನ ಮೊಮ್ಮಗ ಕಾಮದೇವರಸ ಹಾಗೂ ಮಹಾಪ್ರಧಾನ ಕೀರ್ತಿ ನಾರಾಯಣ ದಂಡನಾಯಕ ಶಾಸನವನ್ನು ಪ್ರತಿಪಾಲಿಸಿದರು. ಗುಂಡುಬಾಳದ ಕ್ರಿ.ಶ.1142 (ಡಿಸೆಂಬರ್ 24)ರ ಶಾಸನದಲ್ಲಿ ಪಟ್ಟಣದ ತೈಲನ ಅಳಿಯ

ಮಲ್ಲಿದೇವ ಹಾಗೂ ಅವನ ಮಡದಿ, ಅಂದರೆ ತೈಲನ ಮಗಳು ಹಂಪಾದೇವಿ ಉಲ್ಲೇಖಿತರಾಗಿದ್ದಾರೆ. ಈ ಮಲ್ಲೆದೇವನು ಬಹುಶಃ ಕದಂಬವಂಶದವನಾಗಿರಬೇಕು. ಪಾಂಡ್ಯರ ವಂಶದಲ್ಲಿ ಗಂಡು ಸಂತಾನ ಆಗದೆ ಹೋಗಿ ಹಂಪಾದೇವಿ ಮತ್ತು ಕದಂಬ ಮಲ್ಲಿದೇವನ ಸಂತತಿಗೆ ಆಡಳಿತ ದಾಟಿರಬೇಕು. ಈ ಹೊಸ ಸಂತತಿಯ ಮೊದಲ ಕುಡಿ ಕದಂಬ ವೀರದೇವ ಅಥವಾ ಬೀರದೇವ. ಈತನಿಂದಲೇ ಚಂದಾವರದ ಕಾದಂಬರ ಇತಿಹಾಸ ಆರಂಭವಾಗುತ್ತದೆ."

ಈ ವೀರದೇವ ಅಥವಾ ಬೀರದೇವನ ಮೊಮ್ಮಗನಾದ ವೀರ ಕಾಮದೇವರಸನ ಕುರಿತು ಕೆಲವು ಹೊಸ ಹಾಗೂ ವಿಶೇಷ ಮಾಹಿತಿಗಳನ್ನು ನೀಡುವ ಶಿಲಾ ಶಾಸನವೊಂದು ಇತ್ತೀಚೆಗೆ ಶೋಧಿಸಲ್ಪಟ್ಟಿದೆ. ಇದನ್ನು ಸದ್ಯ ಪ್ರಸ್ತುತ ಪಡಿಸಲಾಗಿದೆ.

ಈ ಕನ್ನಡ ಶಿಲಾಶಾಸನವು ಇತ್ತೀಚೆಗೆ ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಸಂಡಳ್ಳಿ ಎಂಬಲ್ಲಿ ಕುಮಟಾದಿಂದ ಪ್ರಸಿದ್ಧಯಾಣ ಶಿಲಾಪರ್ವತಕ್ಕೆ ಹೋಗುವ ರಸ್ತೆ ಬದಿಯ ಗುಡ್ಡದ ಮೇಲಿರುವ ಶ್ರೀ ರಾಜರಾಜೇಶ್ವರಿ ದೇವಾಲಯ ಪರಿಸರದಲ್ಲಿ ಎರಡು ತುಂಡಾಗಿ ಬಿದ್ದಿರುವ ಶಿಲಾ ಘಟಕಗಳ ಮೇಲೆ ಕಂಡು ಬಂದಿವೆ. ಇವೆರಡನ್ನೂ ಜೋಡಿಸಿದಾಗ ಇವುಗಳ ಒಟ್ಟು ಎತ್ತರ 1 ಮೀಟರ್ ಮತ್ತು ಅಗಲ 46 ಸೆಂಟಿ ಮೀಟರ್ ಮೇಲ್ಭಾಗದ ತುಂಡಿನ ಮೇಲೆ ಶಿವಲಿಂಗ, ಸೂರ್ಯಚಂದ್ರ, ದನ–ಕರು ಮತ್ತು ನಂದಿಯ ಆಕೃತಿಗಳು ಇರುವುದರಿಂದ ಇದನ್ನು ಪೂಜೆಗೆ ಬಳಸಲಾಗುತ್ತಿದೆ. ಇದರಲ್ಲಿ ಶಾಸನಾರಂಭದ ಶಿವಸ್ತುತಿಯೂ ಇದೆ. ಕೆಳ ಭಾಗದ ತುಂಡಿನ ಮೇಲೆ ಉಳಿದ 24 ಪಂಕ್ತಿಗಳೂ ಇವೆ. ಬಲವಾದ ಹೊಡೆತದಿಂದ ಶಿಲಾಫಲಕ ತುಂಡರಿಸಲ್ಪಟ್ಟಿದ್ದುದರಿಂದ ಶಾಸನದ ಕೊನೆಯ ಸಾಲುಗಳೂ ಕೆಲವು ಅಕ್ಷರಗಳೂ ನಾಶಗೊಂಡಿವೆ. ಹೊಯ್ಸಳಕಾಲದ ಅಕ್ಷರ ವಿನ್ಯಾಸದಲ್ಲಿ ಬರೆದಿರುವ ಈ ಶಿಲಾ ಶಾಸನವು ನೋಡಲು ಸುಂದರವಾಗಿದೆ.

ಈ ಶಾಸನದ ಕಾಲ ಶಕ 1186 ನೇ ರಕ್ತಾಕ್ಷಿ ಸಂವತ್ಸವರದ ವೈಶಾಖ ಶುದ್ಧ ಪಂಚಮಿ ಗುರುವಾರ ಅಂದರೆ ಕ್ರಿ.ಶ. 1264ನೇ ಇಸವಿ ಎಪ್ರಿಲ್ ತಿಂಗಳ 3ನೇ ತಾರೀಕು. ಇದನ್ನು ಬರೆಸಿದಾತ ಚಂದಾವರದ ಅರಸ ಶ್ರೀ ವೀರ ಕಾಮದೇವರಸ. ಆದರೆ ಕೆಲವರು ಈತನನ್ನು ವೀರ ಕಾಮದೇವರಸ ಎಂದೂ ಕರೆದಿದ್ದಾರೆ. ಚಂದಾವರದಿಂದ ಆಳಿದ ಅರಸರ ಪೈಕಿ ಈ ಹೆಸರಿನ ಅರಸ ಇವನೇ ಮೊದಲಿನವನಾಗಿರುವುದರಿಂದ ಈತನನ್ನು ಒಂದನೇ ವೀರಕಾಮದೇವರಸನೆಂದು ಕರೆಯಬಹುದು. ಸಾಸಿಗುಳಿಯ ಪಾಂಡ್ಯರಲ್ಲಿ ಇದೇ ಹೆಸರಿನ ಮೂರು ಜನ ಅರಸರಿದ್ದು. ಅವರ ಅನುಕ್ರಮವಾದ ರೀತಿಯಲ್ಲಿ ಕರೆಯಲಾಗಿದೆ. ಜೊತೆಗೆ ಉತ್ತರ ಕನ್ನಡ ಜಿಲ್ಲಾ ಗಝೆಟಿಯರ್‌ನಲ್ಲಿ ಮೂರು ಕಾಮದೇವರಸರ ಬಗ್ಗೆ ವಿವರಗಳನ್ನಿತ್ತಿದ್ದರೂ, ಆ ಕಾಮದೇವರುಗಳು ಸಾಸಿಗುಳಿಯ ಪಾಂಡ್ಯ ವಂಶದವರೆಂದೂ, ಮೇಲೆ ಉಲ್ಲೇಖಿಸಿದ ಚಂದಾವರದ ಕದಂಬ ಕಾಮದೇವನನ್ನು ಚಂದಾವರದ ಒಂದನೇ ವೀರಕಾಮ ದೇವನೆಂದೂ ಗುರುತಿಸಿಕೊಳ್ಳುವದು ಸರ್ವತ್ರ ಹೆಚ್ಚು ಸ್ಪಷ್ಟತೆಯನ್ನು ನೀಡುತ್ತದೆ. ಈ ನೂತನ ಶೋಧಿತ ಶಿಲಾಶಾಸನದಲ್ಲೆ ಈತನ ಹೆಸರನ್ನು ವೀರ ಕಾಮದೇವನೆಂದೇ ಸ್ಪಷ್ಟವಾಗಿ ಬರೆಯಲಾಗಿದೆ. ಈತನ ಆಳ್ವಿಕೆಯ ಕಾಲವನ್ನು ವಿವಿಧ ಆಕರಗಳ ಅಧ್ಯಯನದ ಸಹಾಯದಿಂದ ಡಾ॥ ಶ್ರೀನಿವಾಸ ಪಾಡಿಗಾರರು ಕ್ರಿ.ಶ. 1233–1288 ಎಂದು ಸೂಚಿಸಿದ್ದಾರೆ.

ಪ್ರಸ್ತುತ ಶಾಸನದಲ್ಲಿ ಈ ಅರಸ ಒಂದನೇ ವೀರ ಕಾಮದೇವನು ತನ್ನನ್ನು ತ್ರಿಭುವನ ಚಕ್ರವರ್ತಿ ಎಂದು ಕರೆದು ಕೊಂಡಿದ್ದಾನೆ. ಆದರೆ ಈ ಬಿರುದಿನ ಯತಾರ್ಥತೆ ಸಂದೇಹಾಸ್ಪದವಾದುದು. ಯಾಕೆಂದರೆ, ಈತನ ರಾಜ್ಯ ಇಂದಿನ ಹೊನ್ನಾವರ, ಕುಮಟಾ ಮತ್ತು ಅಂಕೋಲ ತಾಲೂಕುಗಳ ಕೆಲವು ಭಾಗಗಳಷ್ಟು ಚಿಕ್ಕ ಪ್ರದೇಶಕ್ಕೆ ಸೀಮಿತವಾಗಿತ್ತು. ಆದರೆ, ಅಂದಿನ ಕರಾವಳೀ ಕರ್ನಾಟಕದಲ್ಲಿ ಈ ಬಿರುದಿಗೆ ಪಂಥಾಹ್ವಾನ ನೀಡುವಷ್ಟು ಅಥವಾ ವಿರೋಧಿಸುವಷ್ಟು ಪ್ರಬಲ ಅರಸರೂ ಇರಲಿಲ್ಲ. ಸಮಕಾಲೀನ ಹೊಯ್ಸಳ ದೂರೆ ಸೋಮೇಶ್ವರನಾಗಲೀ (1235–54)ಮೂರನೇ ನರಸಿಂಹನಾಗಲೀ (1254–91) ಪ್ರಬಲ ರಾಗಿರದಿದ್ದ ಕಾರಣ ಹಾಗೂ ಅವರು ತಮ್ಮ ಗಮನವನ್ನು ತಮಿಳುನಾಡು ಕಡೆಗೆ ಹರಿಸಿದುದರಿಂದ ಈತ ತನ್ನ ಈ ಬಿರುದನ್ನು ಅವಿರೋಧವಾಗಿ ಬಳಸಿಕೊಂಡಿರುವಂತೆ ಕಾಣುತ್ತದೆ.

ಈ ಶಾಸನದ ಮೂರನೇ ಪಂಕ್ತಿಯಲ್ಲಿ ಈತನನ್ನು 'ವರಾಹಾಲಯಾಭರಣ" ಎಂದು ಕರೆಯಲಾಗಿದೆ. ಈ ವರಹಾಲಯವು ಯಾವುದಾಗಿರಬಹುದದೆಂಬುದು ಒಂದು ಪ್ರಶ್ನೆ. ಗೋಮಾಂತಕ (ಗೋವಾ), ಅದರ ದಕ್ಷಿಣಕ್ಕಿರುವುದು ಗೋಕರ್ಣ,

ಆದರ ದಕ್ಷಿಣಕ್ಕಿರುವ ಹೊನ್ನಾವರವನ್ನೇ ವರಾಹಾಲಯವೆಂದು ಕರೆದಿರಬಹುದೇ? ಚಂದಾವರದಲ್ಲೆ ಆಳ್ವಿಕೆಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು ಈ ಕದಂಬರು ಹೊನ್ನಾವರದಿಂದ ಆಳುತ್ತಿದ್ದರು. ಆದುದರಿಂದ ತನ್ನನ್ನು ಬನವಾಸಿ ಪುರವರಾಧೀಶ್ವರ ಎಂದು ಕರೆದುರೊಂಡಂತೆ ವರಾಹಾಲಯಭರಣ ಎಂದು ಕರೆದು ಕೊಂಡಂತೆ ವರಾಹಾಲಯಾಭರಣ ಎಂದು ಕರೆದುಕೊಂಡಂತೆ ವರಾಹಾಲಯಾಭರಣ ಎಂದು ಕರೆದುಕೊಂಡಿರುವ ಸಾಧ್ಯತೆ ಇದೆ. ಅಥವಾ ವರಾಹಾವತಾರದಿಂದ ಉದ್ಧಾರಗೊಂಡ ಸಮಗ್ರ ಭೂಮಿಯೇ ವರಾಹಾಲಯವೆಂದು ಗಣಿಸಿ ಈತನು ಅದಕ್ಕೆ ಆಭರಣದಂತಿರುವವನು ಎಂಬ ಅರ್ಥದಲ್ಲೆ ಹಾಗೆ ಕರೆದಿರಬಹುದು.

ವೀರ ಕಾಮದೇವರಸನು ಬೀರದೇವ ಅಥವಾ ವೀರದೇವನ ಮೊಮ್ಮಗನೆಂದು ಇತರ ಶಾಸನಗಳಲ್ಲೆ ಹೇಳಿರುವಂತೆ, ಈ ಶಾಸನದಲ್ಲೆಯೂ ಹೇಳಿದೆ. ಆದುದರಿಂದ ಅಜ್ಜನ ನಂತರ ಈತನೇ ಪಟ್ಟಕ್ಕೆ ಬಂದಿರಬಹುದೆಂದು ತೋರುತ್ತದೆ. ಈತನ ತಂದೆ, ತೈಲ ಅಥವಾ ತೈಲಪನೆಂದು ನಮಗೆ ತಿಳಿದಿದೆಯಾದರೂ ಆತನು ರಾಜ್ಯವಾಳಿದಂತೆ ತಿಳಿದು ಬರುವುದಿಲ್ಲ. ಆದರೆ ಡಾ॥ ಶ್ರೀನಿವಾಸ ಪಾಡಿಗಾರರು ಮೇಲೆ ಉಲ್ಲೇಖಿಸಿದ ಕದಂಬ ಅಧ್ಯಯನ (ಪುಟ 8)ದಲ್ಲಿ "ಕ್ರಿ.ಶ. 1225–33ರ ನಡುವೆ ತೈಲನು ಆಳಿದ್ದರೂ ಆಳಿರಬಹುದೇ" ಎಂಬ ಸಂಶಯ ವ್ಯಕ್ತ ಪಡಿಸಿದ್ದಾರೆ ಒಂದು ವೇಳೆ ಆಳಿರುತ್ತಿದ್ದರೆ, ವೀರಕಾಮದೇವರಸನಿಗಿಂತ ಮೊದಲು ತೈಲನ ಹೆಸರು ಬರುತಿತ್ತೇ ವಿನಃ ಅಜ್ಜ ಬೀರದೇವನ ಹೆಸರು ಬರುತ್ತಿರಲಿಲ್ಲ.

ಈ ಶಾಸನದ ಅಧ್ಯಯನದಿಂದ ವೀರಕಾಮದೇವರಸನು ಶೈವ ಸಂಪ್ರದಾಯಕ್ಕೆ ಸೇರಿದವನೆಂದು ತಿಳಿಯುತ್ತದೆ. ಈತನ "ಮಹಾ ತ್ರಿಪುರಾಂತಕಗಣ, ಪಂಚಮಹಾಶಬ್ದ ಮಹಾಮಾಹೇಶ್ವರಂ, ಜಯಂತಿ ಮಧುಕೇಶ್ವರದೇವಲಬ್ಧ ವರಪ್ರಸಾದ ಗೋಕರ್ಣ ಮಹಾಬಲ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕಂ" ಎಂಬ ಬಿರುದುಗಳೇ ಇದನ್ನು ಸಿದ್ಧಪಡಿಸುತ್ತವೆ.

ಮಹಾ ಪರಾಕ್ರಮಿಯಾದ ಈ ಅರಸನು "ಸುಭಟ ಚೂಡಾಮಣಿ, ಪರಬಲಸಾಧಕ, ಛಲದಂಕರಾಮ". ಆದರೆ ವೈದಿಕ ಧರ್ಮಪೋಷಕ, ಶಿಕ್ಷಣಕ್ಕೆ ವಿಶೇಷವಾದ ಪ್ರೋತ್ಸಾಹವನ್ನಿತ್ತನು. ಆದುದರಿಂದ ಈ ಶಾಸನದಲ್ಲಿ ಮೇಲೆ ಉಲ್ಲೇಖಿಸಿರುವ ದಿನಾಂಕದಂದು, ಶಂಕರ ಉಪಾಧ್ಯಾಯ ಎಂಬವರ ಆರು ಜನ ಮಕ್ಕಳಿಗೆ ವಿಶೇಷವಾದ ಧನ ಮತ್ತು ಭೂದಾನವನ್ನೂ ಮಾಡಿದ್ದ. ಇದನ್ನೂ ತಿಳಿಸುವುದೇ ಈ ಶಿಲಾಶಾಸನದ ಮುಖ್ಯ ಉದ್ದೇಶ ವಾಗಿತ್ತು. ಶಾಸನದ ಅನುಸಾರ ಶ್ರೀ ಮದನಾಡಿ ಅಗ್ರಹಾರದ ಸಂಕಡಿವಳ್ಳಿಯ ಸಿದ್ಧಾಯದ ಭೂಮಿಯಿಂದ ಆಯ್ವತ್ತು ಹೊನ್ನು ಮತ್ತು ಮೂರು ಸಾವಿರ ಮರಗಳ ಭೂಮಿಯನ್ನು ಸರಿಯಾಗಿ ವಿಭಾಗಿಸಿ, ಶಂಕರ ಉಪಾಧ್ಯಾಯರ ಮಕ್ಕಳಾದ ಗೋವಿಂದ ಪರಿಮಿತ, ತ್ರಿವಿಕ್ರಮ ಪರಿಮಿತ, ನಾರಾಯಣ ಭಟ್ಟ, ಕೇಶವ ಪರಿಮಿತ, ದಾಮೋದರಭಟ್ಟ ಮತ್ತು ವಿಷ್ಣು ಭಟ್ಟಂಗೆ ಕೊಡಲಾಗಿತ್ತು. ಈ ಧರ್ಮವನ್ನು ಶಾಶ್ವತವಾಗಿ ಪರಿ ಪಾಲಿಸಿದವರಿಗೆ, ಗಂಗಾತಟದ ಅಗಸ್ತ್ಯ ತೀರ್ಥದಲ್ಲಿ ಸಾವಿರ ಕಪಿಲೆ ದನಗಳನ್ನು ದಾನ ಕೊಟ್ಟ ಪುಣ್ಯದ ಫಲವು ಬರುತ್ತದೆ ಎಂದು ಕೊನೆಯಲ್ಲೆ ಸೂಚಿಸಲಾಗಿದೆ.

ಶಾಸನದ ಪೂರ್ಣ ಪಾಠವು ಈ ರೀತಿ ಇದೆ :

1. ಶ್ರೀ ಗುರುಭ್ಯೋ ನಮಃ । ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ
2. ಚಾರವೇ ತ್ರೈಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭವೇ
3. ನಮಸ್ತಸ್ತ್ಯ। ವರಾಹಾಲಯಭರಣ, ಮಹಾ (ತ್ರಿಪು)
4. ರಾಂತಕಗಣ, ಯಸ್ಯ ಮರುಃಖಣ ಖಣಾಯತೇ ಸ್ವಸ್ತಿ ಸಮಧಿಗ
5. ತ ಪಂಚಮಹಾ ಶಬ್ದ ಮಹಾ ಮಾಹೇಶ್ವರ ದೇವಲಬ್ಧ ವರಪ್ರಸಾದಂಸ
6. ಪುರವರಾಧೀಶ್ವರಂ ಜ್ಯಯಂತಿ ಮಧುಕೇಶ್ವರ ದೇವಲಬ್ಧ ವರಪ್ರಸಾದಂಸ
7. ಹಜ? ಮಹಾಮೋದಂ ಶ್ರೀ ಗೋಕರ್ಣ ಮಹಾಬಳ ದೇವರ

8. ದಿಬ್ಬ ಶ್ರೀ ಪಾದ ಪದ್ಮಾರಾಧಕಂ ಪರಬಳ ಸಾಧಕಂ ಹುಸಿವರ ಶೂ
9. ಲ ನಿಗಳಂಕಮಲ್ಲ ಛಲದಂಕರಾಮ ಗಂಡರದಾವಣಿ ಕಲಿಗಳ
10. ಮುಖದ ಕೈ ಸುಭಟ ಚೂಡಾಮಣಿ ಸತ್ಯೋಕ್ತಿ ಕಾಮಿನೀ ಲೋಲರು
11. ಮಪ್ಪ ಶ್ರೀಮತು ತ್ರಿಭುವನ ಪ್ರತಾಪ ಚಕ್ರವರ್ತಿ ಶ್ರೀ ವೀರ ಕಾಮದೇವರ್ರಸರು
12. ಸ್ವಸ್ತಿ ಸಕ ನ್ರಿಪಕಾಲಾಧಿಕ ಸಂವತ್ಸರ 1186ನೇಯ ರಕ್ತಾಕ್ಷಿ ಸಂವತ್ಸ
13. ರ ವೈಶಾಖ ಶು 5 ಗು। ಶ್ರೀ ಗೋಕರ್ಣ ಮಹಾಬಳ ದೇವರ ಸಂನಿಧಾನ
14. ದಲು ಬೀರದೇವರ್ರಸರ ಮೊಮ್ಮಗ ಶ್ರೀ ವೀರ ಕಾಮದೇವರ್ರಸನು ಸಂಖರ ಉಪಾ
15. ಧ್ಯಾಯರ ಮಕ್ಕಳು ಅದು ಮನುಷ್ಯರಿಗೆ ಶ್ರೀ ಮದನಾಡಿಯ
16. ಗ್ರಹಾರ ಸಂಕಡಿವಳ್ಳಿಯನ್ನು ಸುಪ್ಯೋ ದಲ ಸಿದ್ಧಾಯ 185ದೊಳ
17. ಗೆ ಆಯ್ವತ್ತು ಹೊನ್ನ ಸಿದ್ದಾಯದ ಮೂರು ಸಾವಿರ ಮರನ 6 ವ್ರಿತ್ರಿಯಮಾ
18. ಡಿಸಹ ನಮ ಸಿದ್ಧಾಯವಾಗಿ ಕೊಟ್ಟ ಗೋವಿಂದ ಪರಿಮಿತರು ತ್ರಿವಿಕ್ರಮ
19. ಪರಮಿತರು ನಾರಾಯಣ ಭಟ್ಟರು ಕೇಶವ ಪರಮಿತರು ದಾಮೋದರ ಭಟ್ಟ
20. ರು ಇನ್ನು ಅಜುವರಿಗೆ 6 ವ್ರಿತ್ತಿ ವಿಷ್ಣುಭಟ್ಟರು ಸಹಿತ ಅಜುವರು
21. ದವಟರ ಭಟ್ಟರಿಗೆ 1 ರಿಂದುರದೊಗಳ. ಈ ಧರ್ಮ್ಮವ ಆ ಗ್ರಾಮ ಸ
22. ದ ಮಂಕಿ ನಾನುದೇಶಿಗಳುಂ ರಾಜ್ಯ ಸ್ವಪ್ಪರಸುಗಳುಂ ಪ್ರತಿಪಾ (ಅಸು)
23. ವರು ಈ ಧರ್ಮದ ಪ್ರತಿಪಾಲಿಸಿದವರಿಗೆ ಗಂಗೆ?.....
24. ಯಾಗೆ ಅಗಸ್ತ್ಯ ತೀರ್ಥದಲು ಸಹಸ್ರ ಕಪಿಲ್ಯೆಯ...
25. ....ಇರಿಸಿ ದಾನಂ ಗೊಟ್ಟೆ ಫಳ.....
26. ....ತೀರ್ಥಗ..............

❑

ಹೈದ್ರಾಬಾದ ಕರ್ನಾಟಕದಲ್ಲಿ ಬೌದ್ಧಧರ್ಮ

– ಗಾಂಧೀಜಿ ಚಂದ್ರಪ್ಪಾ

ಹೈದ್ರಾಬಾದ ಕರ್ನಾಟಕದ ಪ್ರದೇಶವು ಇಡೀ ಕರ್ನಾಟಕ ಸಂದರ್ಭದಲ್ಲಿ ನೋಡಿದಾಗ ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಸಾಹಿತ್ಯಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಪ್ರಾಚೀನ ಕಾಲದಿಂದಲೂ ಶ್ರೀಮಂತಿಕೆಯನ್ನು ಸಾರಿದೆ.

ಇಂಥ ಪ್ರಾಂತ್ಯವು ಭಾಷಾವಾರು ಪ್ರಾಂತ ರಚನೆಯಾಗಿ ಕರ್ನಾಟಕದಲ್ಲಿ ಸೇರ್ಪಡೆಯಾದಂದಿನಿಂದ ಈ ಪ್ರದೇಶಕ್ಕೆ 'ಹೈದ್ರಾಬಾದ ಕರ್ನಾಟಕ'ವೆಂದು ಕರೆಯುತ್ತ ಬಂದಿದ್ದಾರೆ. ಕಲ್ಯಾಣ ಶರಣರ ಬೀಡಾದ ಈ ಪ್ರದೇಶಕ್ಕೆ 'ಕಲ್ಯಾಣ ಕರ್ನಾಟಕ'ವೆಂದು ಕರೆಯುವುದು ಹೆಚ್ಚು ಸೂಕ್ತ ಎಂಬ ಮನವರಿಕೆಯು ಇತ್ತೀಚಿಗೆ ಜನರಲ್ಲಿ ಮೂಡುತ್ತಿದೆ. ಇಂಥ ನಾಡಿನಲ್ಲಿ ಬುದ್ಧನ ಶಾಂತಿಯ ಸಂದೇಶವನ್ನು ಪ್ರಾಚೀನ ಕಾಲದಿಂದಲೂ ಕಾಣುತ್ತೇವೆ.

ಐತಿಹಾಸಿಕ ಹಿನ್ನೆಲೆ : ಹೈದ್ರಾಬಾದ-ಕರ್ನಾಟಕ ಪ್ರದೇಶವನ್ನು ಸುಮಾರು ಕ್ರಿ.ಪೂ. ಎರಡನೆಯ ಶತಮಾನದಿಂದ ರಾಜಮನೆತನಗಳಾದ ಮೌರ್ಯರು, ಶಾತವಾಹನರು, ಆರನೆಯ ಶತಮಾನದಲ್ಲಿ ಬಾದಾಮಿಯ ಚಾಲುಕ್ಯರು ಅನಂತರ ರಾಷ್ಟ್ರಕೂಟರು ರಾಜ್ಯವಾಳಿದರು.[2] ರಾಷ್ಟ್ರಕೂಟರ ದೊರೆಯಾದ ಅಮೋಘವರ್ಷ ನೃಪತುಂಗನು ಮಳಖೇಡವನ್ನು ರಾಜಧಾನಿಯಾಗಿ ಮಾಡಿಕೊಂಡು ರಾಜ್ಯವಾಳಿದನು. ಈತನ ಕಾಲದಲ್ಲಿ ಬೌದ್ಧ ಧರ್ಮವು ರಾಜಾಶ್ರಯ ಪಡೆದಿತ್ತು. ಕ್ರಿ.ಶ. 973ರ ನಂತರ ಕಲ್ಯಾಣಿ ಚಾಲುಕ್ಯರು ಇಲ್ಲಿ ಆಳ್ವಿಕೆ ಮಾಡಿದರು.

ಬೌದ್ಧ ಧರ್ಮ : ಕರ್ನಾಟಕದ ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಬೌದ್ಧಧರ್ಮ ಒಂದು. ಇಂತಹ ಧರ್ಮದ ಅನೇಕ ಅವಶೇಷಗಳನ್ನು ಹೈದ್ರಾಬಾದ ಕರ್ನಾಟಕದಲ್ಲಿ ಕಾಣುತ್ತೇವೆ. ಗುಲಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಸನ್ನತಿಯು ಪ್ರಾಚೀನ ಕಾಲದ ಬೌದ್ಧ ಧರ್ಮದ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದೆ. ಈ ಭಾಗದಲ್ಲಿ ಆಳಿದ ಮೌರ್ಯರ ಶಾಸನಗಳು, ನಾಣ್ಯಗಳು, ಚೈತ್ಯಗಳು ಕಾಣುತ್ತೇವೆ. 1954ರಲ್ಲಿ ಕಪಟರಾಳ ಕೃಷ್ಣರಾಯರು ಸನ್ನತಿಯನ್ನು ಕುರಿತು ಶೋಧಿಸಿದರು. ಉತ್ಖನನದ ನಂತರ ಇದು ಬೌದ್ಧ ಧರ್ಮದ ಪ್ರಮುಖ ಕೇಂದ್ರವಾಗಿತ್ತೆಂದು ತಿಳಿಯಿತು.[3] ಇಲ್ಲಿ ದೊರೆತಿರುವ ಅವಶೇಷಗಳ ಮೂಲಕ ಮೌರ್ಯರು ಬೌದ್ಧಧರ್ಮದ ನೀತಿ ನಿಯಮವನ್ನನುಸರಿಸಿ ಮೇಲು-ಕೀಳೆಂಬ ಭೇದ-ಭಾವವಿಡದೆ ಸರ್ವರೂ ಸಮಾನರೆಂಬಂತೆ ಆಳ್ವಿಕೆಯು ಮಾಡುತ್ತಿದ್ದರು. ಮೌರ್ಯರ ನಂತರ ಬಂದ ಶಾತವಾಹನರು ಬೌದ್ಧ ಧರ್ಮಕ್ಕೆ ರಾಜಾಶ್ರಯ ಕೊಟ್ಟಿದ್ದರು. ಅರಸರುಗಳಾದ ಶಾತಕರ್ಣಿ, ಗೌತಮಿ ಪುತ್ರ ಶಾತಕರ್ಣಿಯರು ತಮ್ಮ ಆಳ್ವಿಕೆಯ ಕಾಲದಲ್ಲಿ ಸನ್ನತಿಯಲ್ಲಿ ಚೈತ್ಯಾಲಯಗಳು, ಸ್ತೂಪಗಳು, ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದರು.4 ಅಂದಿನಿಂದ ಇಂದಿಗೂ ಈ ಹೈದ್ರಾಬಾದ ಕರ್ನಾಟಕದಲ್ಲಿ ಬೌದ್ಧಧರ್ಮದ ತನ್ನ ಅಸ್ತಿತ್ವವನ್ನು ಕಾಣುತ್ತೇವೆ.

ಮೌರ್ಯರ ಅಶೋಕನಿಗೆ ಸಂಬಂಧಪಟ್ಟ ಅನೇಕ ಶಾಸನಗಳು ಕೊಪ್ಪಳ, ಮಸ್ಕಿ, ಸನ್ನತಿ ಮುಂತಾದ ಸ್ಥಳಗಳಲ್ಲಿ ಲಭ್ಯವಿವೆ. ಅಶೋಕನ ಆಳ್ವಿಕೆಯು ಹಾಗೂ ಆತನ ಶಾಂತಿಯ ಸಂಕೇತದ ಬಿರುದಾದ 'ದೇವನಾಂಪ್ರಿಯ ಅಶೋಕ' ಎಂಬುದರಿಂದ ಜನರಲ್ಲಿ ಧರ್ಮದ ಬಗ್ಗೆ ಆಸಕ್ತಿಯು ಹುಟ್ಟಿತು. ಅಶೋಕನ ಹೈದ್ರಾಬಾದ ಕರ್ನಾಟಕದಲ್ಲಿ ಆಳ್ವಿಕೆಯ;

ಹಾಗೂ ಬೌದ್ಧ ಸ್ತೂಪ, ಶಿಲಾಲೇಖಗಳು, ಬುದ್ಧನ ಕುರಿತು ಜೀವನದ ಚಿತ್ರಣಗಳು, ಫಲಕಗಳು, ಪಾದಗಳು, ಬೋಧಿವೃಕ್ಷ, ತ್ರಿರತ್ನಜ್ಞಾನ ಮುಂತಾದ[5] ಅವಶೇಷಗಳು ಲಭ್ಯವಾಗಿರುವುದರಿಂದ ಈ ಮಾತಿಗೆ ಪೋಷಣ ಒದಗುತ್ತದೆ.

ಸನ್ನತಿಯು ಬೌದ್ಧಧರ್ಮದ ಕೇಂದ್ರವಾಗಿದ್ದುದಕ್ಕೂ ಪೂರಕ ಪುರಾವೆ ಒದಗುತ್ತದೆ. ಇಂದಿಗೂ ಅಲ್ಲಿ ಪ್ರವಾಸಿಗರನ್ನು ಕೈಮಾಡಿ ಕರೆಯುತ್ತಿರುವ ವಿಶಿಷ್ಟವೆನಿಸುವ 'ಚಂದ್ರಕಲಾ ಪರಮೇಶ್ವರಿ' ದೇವಸ್ಥಾನವು ಭೀಮಾ ನದಿಯ ದಂಡೆಯ ಮೇಲೆ ನಿರ್ಮಿತವಾಗಿದೆ. ಅನೇಕ ಆಧಾರಗಳಿಂದ 'ಚಂದ್ರಲಾಂಬೆ' ಎಂಬುದು ಬೌದ್ಧರ ಹೆಸರು ಮುಂದೆ ಚಂದ್ರಲಾಪರಮೇಶ್ವರಿ ಆಗಿದೆ ಎಂಬುದು ಕಪಟರಾಳರು ಹಾಗೂ ಡಾ. ತಾಳ್ತಜೆ ವಸಂತಕುಮಾರ ಅವರ ಅಭಿಪ್ರಾಯವಾಗಿದೆ.[6]

ಸಗರ ಚಕ್ರವರ್ತಿ ಆಳ್ವಿಕೆ ಮಾಡಿದ ಸಗರನಾಡಿನ ಕೇಂದ್ರವಾದ ಶಹಾಪುರ, ಮಹತ್ವ ಪಡೆದ ಧಾರ್ಮಿಕ ಕೇಂದ್ರವಾಗಿದೆ. ಸಗರಾದ್ರಿ ಪರ್ವತ ಬೆಟ್ಟದ ಮೇಲೆ ಹಲವಾರು ಪವಿತ್ರ ತಾಣಗಳಿವೆ. ಶಹಾಪುರದಿಂದ ಭೀಮರಾಯನ ಗುಡಿಗೆ ಹೋಗುವ ಮಾರ್ಗದಲ್ಲಿ ಎಡಕ್ಕೆ ಮಲಗಿರುವ ಸಗರಾದ್ರಿ ಪರ್ವತ ಶ್ರೇಣಿಯಲ್ಲಿ ಮುಗಿಲತ್ತ ಮುಖ ಮಾಡಿ ಅಂಗಾತ ಮಲಗಿರುವ ನಿಸರ್ಗಬುದ್ಧನ ರೂಪರೇಷೆ ಜಗತ್ತಿನ ಪ್ರವಾಸಿಗರನ್ನು ಮಂತ್ರಮುಗ್ಧಗೊಳಿಸುತ್ತದೆ.[7] ಬೆಟ್ಟದ ಮಡಿಲಲ್ಲಿ ಬುದ್ಧನ ಅಗಲವಾದ ಹಣೆ ಚೂಪಾದ ಮೂಗು ವಿಶಾಲವಾದ ಎದೆಯಂತೆ ಒಡೆದು ಕಾಣುವ ಬುದ್ಧನ ರೂಪದ ಈ ನೈಸರ್ಗಿಕ ರಚನೆ, ನಿಜಕ್ಕೂ ವಿಸ್ಮಯವನ್ನುಂಟುಮಾಡುತ್ತದೆ.

ಶಿಕ್ಷಣದ ಕೇಂದ್ರಗಳು : ಪ್ರಾಚೀನ ಶಿಕ್ಷಣ ಪದ್ಧತಿ ಹೆಚ್ಚಾಗಿ ಧಾರ್ಮಿಕ, ಆಧ್ಯಾತ್ಮಿಕ, ಹಿನ್ನೆಲೆಯಿಂದ ಕೂಡಿ ತನ್ನ ಪರಂಪರೆಗೆ ಹೊಂದಿಕೊಂಡು ಬಂದಿದೆ. 'ಅನ್ನದಾನಕ್ಕಿಂತ ವಿದ್ಯಾದಾನ ಬಹು ಶ್ರೇಷ್ಠ'; ವಿದ್ಯೆಗಿಂತ ಶ್ರೇಷ್ಠವಾದದ್ದು ಮತ್ತೊಂದಿಲ್ಲ ಎಂಬ ಉಕ್ತಿಯಂತೆ ಈ ಪದ್ಧತಿಯಲ್ಲಿ ಶಿಕ್ಷಣಕ್ಕೆ ಮಹತ್ವದ ಸ್ಥಾನ ಕೊಟ್ಟಿದ್ದರು. ಬಹು ಪ್ರಾಚೀನ ಕಾಲದಲ್ಲಿ ಶಿಕ್ಷಣ ಮೌಖಿಕ ಪರಂಪರೆಯಲ್ಲಿದ್ದಿತು. ಕ್ರಿ.ಪೂ. ಮೂರನೇ ಶತಮಾನದಿಂದ ಶಿಕ್ಷಣ ಅಕ್ಷರಗಳ ರೂಪದಲ್ಲಿ ಪ್ರಾರಂಭವಾಯಿತು. ಪ್ರಾಚೀನ ಕಾಲದಲ್ಲಿ ಬೌದ್ಧಧರ್ಮ ಅನೇಕ ಶಿಕ್ಷಣ ಕೇಂದ್ರಗಳನ್ನು ಹೊಂದಿತ್ತು. ಉದಾ : ನಾಸಿಕ, ನಾಲಂದ, ಅಜಂತಾ, ಎಲ್ಲೋರ, ನಾಗಾರ್ಜುನಕೊಂಡ ಮುಂತಾದವು ಬೌದ್ಧ ಕೇಂದ್ರಗಳಾಗಿದ್ದವು. ಇದೇ ಸಂದರ್ಭದಲ್ಲಿ ಹೈದ್ರಾಬಾದ ಕರ್ನಾಟಕದ ಬೌದ್ಧ ಧರ್ಮದ ಕೇಂದ್ರಗಳೆಂದರೆ ಸನ್ನತಿ, ನಾಗಾವಿ, ಶಿರವಾಳ ಮುಂತಾದವು. ಇವುಗಳ ಮುಖಾಂತರ ಈ ಭಾಗದಲ್ಲಿ ಜನತೆಯು ಬೌದ್ಧ ಧರ್ಮ ಪ್ರಭಾವಕ್ಕೆ ಒಳಗಾಯಿತು. ಸಂಘ ಸಂಸ್ಥೆಗಳು ಚೈತ್ಯಾಲಯಗಳಲ್ಲಿ ಶಿಕ್ಷಣ ಕೊಡುತ್ತಿದ್ದುವು. ಹೀಗಾಗಿ ಈ ಪ್ರದೇಶದಲ್ಲಿ ಬೌದ್ಧ ಭಿಕ್ಷುಗಳು ಧರ್ಮ ಪ್ರಸಾರ ಮಾಡಲು ಕಾರಣವಾಯಿತು. ಅಲ್ಲದೆ ಶಿಸ್ತು ಸಂಯಮ ಇವೆಲ್ಲವುಗಳನ್ನು ಬೌದ್ಧ ಶಿಕ್ಷಣದಲ್ಲಿ ಕಾಣುತ್ತೇವೆ. ಬ್ರಾಹ್ಮಣ ಶಿಕ್ಷಣ ಪದ್ಧತಿಯು ಉಪನಯನದಿಂದ ಪ್ರಾರಂಭವಾದರೆ ಬೌದ್ಧರಲ್ಲಿ ಪಬ್ಬಜ ಎಂಬುದರಿಂದ ನಡೆಯುತ್ತಿತ್ತು. ವಿದ್ಯಾರ್ಥಿ ಜೀವನ 12 ವರ್ಷವೆಂದು ಖಚಿತಪಡಿಸಲಾಗಿತ್ತು. ವಿದ್ಯಾರ್ಥಿ ಜೀವನ ಮುಗಿದ ಮೇಲೆ ಶ್ರವಣನೆಂದು ಕರೆಯುತ್ತಿದ್ದರು.8 ಬೌದ್ಧ ಧರ್ಮದಲ್ಲಿ ಶಿಕ್ಷಣ ಪದ್ಧತಿಯು ಸಾಮೂಹಿಕವಾಗಿ ಹಾಗೂ ಜಾತಿ, ಮತ, ಪಂಥ ಭೇದವೆನ್ನದೆ ಎಲ್ಲರೂ ಸಾಮಾನ್ಯವಾದ ಪ್ರಾಕೃತ ಪಾಳಿ ಭಾಷೆಯಲ್ಲಿ ಕಲಿಯುತ್ತಿದ್ದರು. ಈ ಭಾಗದ ಶಿಕ್ಷಣ ಕೇಂದ್ರಗಳಲ್ಲಿ ಚಿತ್ತಾಪುರ ತಾಲ್ಲೂಕಿನ ಸನ್ನತಿ ಹಾಗೂ ನಾಗಾಯಿಯು ಬೌದ್ಧಧರ್ಮದ ಪ್ರಮುಖ ಶಿಕ್ಷಣ ಕೇಂದ್ರವಾಗಿದ್ದವು. ಇಲ್ಲಿ ವಿದ್ಯಾರ್ಥಿಗಳು ಬೌದ್ಧಧರ್ಮದ ತತ್ವದ ಮೇಲೆ ಶಿಕ್ಷಣ ಪಡೆಯುತ್ತಿದ್ದರು. ಮೊದಮೊದಲಿಗೆ ಸ್ತ್ರೀಯರಿಗೆ ಶಿಕ್ಷಣ ಸೌಲಭ್ಯವಿರಲಿಲ್ಲ. ಕಾಲಾನುಕ್ರಮದಲ್ಲಿ ಬುದ್ಧನು ತನ್ನ ಸಾಕುತಾಯಿಯಾದ ಪ್ರಜಾಪತಿಯನ್ನು ಸಂಘಕ್ಕೆ ಸೇರಲು ಅವಕಾಶ ಒದಗಿಸಿಕೊಟ್ಟನು. ನಾಗಾವಿ ಒಂದನೆಯ ಶತಮಾನದಲ್ಲಿ ಬೌದ್ಧಧರ್ಮದ ಶಿಕ್ಷಣ ಕೇಂದ್ರವಾಗಿತ್ತು ಎಂದು ತಿಳಿದುಬರುತ್ತದೆ. ·ಚಿತ್ ಎಂದರೆ 'ಜ್ಞಾನ'. ಹಿಂದಿನ ಕಾಲದಲ್ಲಿ ಚಿತ್ತಾಪುರವೆಂದರೆ ಜ್ಞಾನದ ಪಟ್ಟಣವೆಂದು ಕರೆಯುತ್ತಿದ್ದರು. ಹೀಗಾಗಿ ಚಿತ್ತಾಪುರವೂ ಬೌದ್ಧಧರ್ಮದ ಜ್ಞಾನದ ಬೀಡಾಗಿತ್ತೆಂದು ಹೇಳಬಹುದು. ನಾಗಾವಿಯಲ್ಲಿ 800 ವಿದ್ಯಾರ್ಥಿಗಳಿದ್ದ ವಿಷಯವನ್ನು ಶಿಲಾಶಾಸನಗಳು ಹೇಳುತ್ತವೆ. ಇಲ್ಲಿನ ವಿದ್ಯಾರ್ಥಿಗಳು ಬಹಳ ಶಿಸ್ತಿನಿಂದ ಜ್ಞಾನಾರ್ಜನೆಯನ್ನು ಪಡೆಯುತ್ತಿದ್ದರು. ಈ ಭಾಗದಲ್ಲಿ ಅಂದರೆ ಇಂದಿನ ಮಹಾರಾಷ್ಟ್ರ ಕರ್ನಾಟಕ ಆಂಧ್ರಗಳನ್ನೊಳಗೊಂಡ ಪ್ರದೇಶದಲ್ಲಿ ಬೌದ್ಧ ಧರ್ಮದ ಬೆಳವಣಿಗೆಗೆ ಕಾಣುತ್ತೇವೆ.

ಹೈದ್ರಾಬಾದ ಕರ್ನಾಟಕದಲ್ಲಿ ಅನೇಕ ಶಾಸನಗಳು, ಬೌದ್ಧಧರ್ಮದ ಕೇಂದ್ರಗಳು, ಶಿಕ್ಷಣ ಕೇಂದ್ರಗಳು, ಸ್ತೂಪಗಳು, ಚೈತ್ಯಾಲಯಗಳು, ವಿಹಾರಗಳು, ನಿರ್ಮಾಣವಾಗಿರುವುದರಿಂದ ಈ ಭಾಗದಲ್ಲಿ ಭಿಕ್ಷುಗಳು ಮೂಲೆ ಮೂಲೆಯಲ್ಲಿ ಅಲೆದಾಡಿ ಜಾತಿ ಅಸ್ಪೃಶ್ಯತೆಯಾಗಲಿ, ಮೇಲು-ಕೀಳು, ಬಡವ-ಶ್ರೀಮಂತ, ಹೆಣ್ಣು-ಗಂಡು ಎಂಬ ಭೇದಭಾವ ಇರದೆ ಎಲ್ಲರೂ ಸಮಾನರು ಎಂಬುದನ್ನು ಮನವರಿಕೆ ಮಾಡುವಲ್ಲಿ ಯಶಸ್ಸುಗೊಂಡ ಸೂಚನೆ ಸಿಗುತ್ತದೆ ಹಾಗೂ ಹೈದ್ರಾಬಾದ - ಕರ್ನಾಟಕದ ನೆಲೆಯಲ್ಲಿ ಬೌದ್ಧಧರ್ಮವು 2000 ವರ್ಷಗಳಿಂದ ಪ್ರಾಚೀನತೆಯನ್ನು ಉಳಿಸಿಕೊಂಡು ಬಂದಿತೆನ್ನಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಜಯದೇವಿ ಎಂ. ಗಾಯಕವಾಡ, ಪ್ರಾಚೀನ ಬೌದ್ಧ ವಿದ್ಯಾ ಕೇಂದ್ರ ಸನ್ನತಿ, ಪು. 33
2. ಡಾ. ಬಸವರಾಜ ಪೋಲಿಸ ಪಾಟೀಲ (ಸಂ.), ಬಿಡುಗಡೆ, ಪು. 2
3. ಗುಲಬರ್ಗಾ ಜಿಲ್ಲೆ, ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ, ಪು. 782–783
4. ಜಯದೇವಿ ಎಂ. ಗಾಯಕವಾಡ, ಪ್ರಾಚೀನ ಬೌದ್ಧ ವಿದ್ಯಾ ಕೇಂದ್ರ ಸನ್ನತಿ, ಪು. 23.
5. ಡಾ. ತಾಳ್ತಜೆ ವಸಂತಕುಮಾರ, ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ಪು. 252
6. ಜಯದೇವಿ ಎಂ. ಗಾಯಕವಾಡ, ಅದೇ, ಪು. 34–35.
7. ಗುಲಬರ್ಗಾ ಜಿಲ್ಲೆ, ಭಾರತದ ಗ್ಯಾಸೆಟಿಯರ್, ಅದೇ., ಪು. 776.
8. ಎಸ್.ಬಿ. ಯಾಧವಾಡ, ಉದಯೋನ್ಮುಖ ಭಾರತದಲ್ಲಿ ಶಿಕ್ಷಣ

ಬಿ.ಕೆ. ಹಳ್ಳಿಯ ಅಪೂರ್ವ ಭಿತ್ತಿ ಚಿತ್ರಕಲಾ ಭಾಂಡಾರ ಶೋಧ

– ಡಾ. ಎಸ್.ಸಿ. ಪಾಟೀಲ

ಕರಾವಳಿಯ ಪ್ರದೇಶದ ದೇವಾಲಯಗಳಿಗೆ ಅವುಗಳದೇ ಆದ ವಾಸ್ತು ವಿನ್ಯಾಸವಿದ್ದು, ಕಾವಿ ಬಣ್ಣದಿಂದ ಬಿಡಿಸಿದ ಕಾವಿ ಭಿತ್ತಿಚಿತ್ರಕಲೆ ಈ ಪ್ರದೇಶದ ದೇವಾಲಯದ ಪ್ರಮುಖ ಆಕರ್ಷಣೆಯಾಗಿದೆ. ಕರಾವಳಿಯುದ್ದಕ್ಕೂ ಕಂಡುಬರುವ ಈ ಕಾವಿ ಭಿತ್ತಿ ಚಿತ್ರಗಳ ಮಧ್ಯದಲ್ಲಿ ಅಪರೂಪದ ಬಹುವರ್ಣ ಭಿತ್ತಿಚಿತ್ರ ನೆಲೆಯೊಂದು ಇರುವುದು ಬಹುಪಾಲು ಇತಿಹಾಸಕಾರರಿಗೆ, ಕಲಾಸಕ್ತರಿಗೆ ಗೊತ್ತಿಲ್ಲ. ಕಾರವಾರ ಜಿಲ್ಲೆಯ ಹಳಿಯಾಳ ಸಮೀಪ 4 ಕಿ.ಮೀ. ದೂರದಲ್ಲಿ ಹಳಿಯಾಳ ಧಾರವಾಡ ಮಧ್ಯದಲ್ಲಿ ಬಿ.ಕೆ.ಹಳ್ಳಿ ಎಂಬ ಚಿಕ್ಕ ಗ್ರಾಮವಿದೆ. ಬಿ.ಕೆ. ಹಳ್ಳಿ ಎಂದರೆ ಬಂಜರ ಕಂಚನಹಳ್ಳಿ ಎಂದು, ದಾಖಲೆಯಲ್ಲಿ ಬಂಜರ ಕಂಚನಹಳ್ಳಿಯೆಂದೇ ಕರೆಯಿಸಿಕೊಂಡ ಈ ಗ್ರಾಮದಲ್ಲಿ ಕದಂಬರ ಕಾಲದ ದೇವಾಲಯಗಳಿವೆ. ಹಾಗೆಯೇ ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣವಾದ ದೇವಾಲಯಗಳು ಇವೆ. ಪ್ರಸ್ತುತ, ಊರ ಹೊರಗಡೆ ಇರುವ ಶ್ರೀ ರಾಮದೇವಾಲಯವೇ ಅಪರೂಪದ ಕಲಾಕೃತಿಗಳ ವರ್ಣವಿನ್ಯಾಸ ಹೊಂದಿರುವ ವೈಭವದ ತಾಣ. ಕಲಾಸಕ್ತರನ್ನು ಬೆರಗುಗೊಳಿಸುವ ಈ ಅದ್ಭುತ ಕಲಾಭಂಡಾರದ ಸ್ಥೂಲ ಪರಿಚಯ ಪ್ರಸ್ತುತ ಲೇಖನದಲ್ಲಿದೆ.

ದೇವಾಲಯದ ಸ್ವರೂಪ

ಶ್ರೀರಾಮ ದೇವಾಲಯವು ಕಲ್ಲಿನಿಂದ ಕಟ್ಟಿದ ಬಯಲು ಸೀಮೆಯ ದೇವಾಲಯದಂತೆ ಇರದೆ ಮಲೆನಾಡಿನ ಹಳೆಯ ಕೊಳವೆ ಹಂಚಿನ ಮನೆಗಳ ಮಾದರಿಯಲ್ಲಿದ್ದು, ಕಲ್ಲು, ಮಣ್ಣು, ಇಟ್ಟಿಗೆ ಉಪಯೋಗಿಸಿ ಕಟ್ಟಿದ್ದು ಮೇಲ್ಛಾವಣಿಗೆ ಮಣ್ಣಿನ ಹಂಚುಗಳನ್ನು ಹೊದಿಸಲಾಗಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವಿದ್ದು ಅದರ ಸುತ್ತಲು 28 ಕಟ್ಟಿಗೆ (ಮರದ) ಕಂಬಗಳಿವೆ. ಒಳಬದಿಯಲ್ಲಿ ಸಹ ಈ ಮರದ 18 ಕಂಬಗಳು ದೇವಾಲಯವನ್ನು ಸುತ್ತುವರಿದಿವೆ. ಈ ಕಂಬಗಳಿಗೆ ಮೇಲ್ಭಾಗದಲ್ಲಿ ಮೇಲ್ಛಾವಣಿ ಇದೆ. ದೇವಾಲಯ ಮರದ ಕಂಬಗಳ ಮೇಲೆಯೇ ನಿಂತಿರುವುದು. ಈ ದೇವಾಲಯದ ಕೆಳಗಣ ಪ್ರಾಂಗಣ 8 1/2 ಫೂಟ್ ಅಗಲದ ಸುತ್ತಳತೆಯನ್ನು ಹೊಂದಿದ್ದು ಅದರ ಮೇಲ್ಗಡೆ 1 ಫೂಟ ಎತ್ತರದಲ್ಲಿ 2 1/2 ಫೂಟ್‌ನ ಪ್ರಾಂಗಣವಿದೆ. ಹೀಗಾಗಿ ಭಿತ್ತಿ ಚಿತ್ರಗಳು ಸ್ವಲ್ಪ ಎತ್ತರದಲ್ಲಿವೆ.

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಒಳ ಭಾಗದಲ್ಲಿ ಮರದ ಮೇಲೆ ಮತ್ತು ಗಾರೆಯನ್ನು ಮಾಡಿ ಅದರ ಮೇಲೆಲ್ಲಾ ಚಿತ್ರಗಳನ್ನು ಬಿಡಿಸಲಾಗಿದೆ. ದೇವಾಲಯದ ಒಳಗಡೆ ಯಾವ ಸ್ಥಳವನ್ನೂ ಖಾಲಿ ಬಿಡದೆ ಎಲ್ಲವನ್ನು ವರ್ಣಚಿತ್ರಗಳಿಂದ ಅಲಂಕರಿಸಲಾಗಿದೆ. ದೊಡ್ಡದಾದ ಚೌಕುಗಳಿದ್ದು ಮತ್ತೆ ಸಣ್ಣ ಸಣ್ಣ ಪಟ್ಟಿಕೆಗಳನ್ನು ಮಾಡಿಕೊಳ್ಳಲಾಗಿದೆ. ಗರ್ಭಗುಡಿಯಲ್ಲೂ ಸಹ ಸುತ್ತಲು ವರ್ಣವಿನ್ಯಾಸ ಮಾಡಲಾಗಿದೆ. ದೇವಾಲಯದ ಬಲಬದಿಯಲ್ಲಿ ಗಾರೆಯ ಭಿತ್ತಿಯಲ್ಲಿ ಮಾತ್ರ ಚಿತ್ರಗಳಿವೆ. 6 ಫೂಟ ಅಗಲ 7 ಫೂಟ ಉದ್ದದ ಎರಡು ದೊಡ್ಡ ಪಟ್ಟಿಕೆಗಳಿದ್ದು, ಅದರಲ್ಲಿ 2 1/2 ಫೂಟ ಅಗಲ 6 ಫೂಟ ಉದ್ದದ ಮತ್ತೆ ಎರಡು ಪಟ್ಟಿಕೆಗಳಿವೆ. ಇವುಗಳಲ್ಲಿ ಮತ್ತೆ ಸಣ್ಣ ಸಣ್ಣ 6 ಥ 12 ಇಂಚಿನ ಆಯತಾಕಾರದ ಚೌಕುಗಳನ್ನು ಮಾಡಿಕೊಂಡು ಚಿತ್ರಬಿಡಿಸಲಾಗಿದೆ. ನಡುವೆ ಉದ್ದನೆಯ ಪಟ್ಟಿಯೊಂದಿದೆ. ದೇವಸ್ಥಾನದ ಬಲಬದಿಯ ಎಲ್ಲ ಗೋಡೆಯನ್ನು ಇಲ್ಲಿ ಚಿತ್ರಕಲೆಗಾಗಿ ಬಳಸಿಕೊಳ್ಳಲಾಗಿದೆ.

ಹಿಂಬದಿಯ ಗೋಡೆಯು 6 ಘೂಟ ಉದ್ದನೆಯದಾಗಿದ್ದು ಅಲ್ಲಿ 8 ಪಟ್ಟಿಕೆಗಳನ್ನು ಮಾಡಿಕೊಳ್ಳಲಾಗಿದೆ. ಎಡಬದಿಯ ಗೋಡೆಯಲ್ಲಿ ಬಲಬದಿಯ ಅಳತೆಯ ಗಾರೆಯೇ ಮುಂದುವರಿದಿದ್ದು, ಇಲ್ಲಿ 3 ಘೂಟ ಉದ್ದ ಮತ್ತು 6 ಘೂಟ ಅಗಲದ ಪಟ್ಟಿಕೆಗಳಿವೆ. ಭಿತ್ತಿಚಿತ್ರಗಳಿರುವ ಗಾರೆಯೂ ಇಲ್ಲಿ 20 ಘೂಟ ಅಗಲ 6 ಘೂಟ ಉದ್ದದ ಅಳತೆಯನ್ನು ಹೊಂದಿದೆ. ದೇವಾಲಯದ ಮೂರು ಬದಿಯೂ ಈ ಗಾರೆಯ ಭಿತ್ತಿ ಚಿತ್ರಗಳಲ್ಲದೆ ಮೇಲ್ಭಾವಣಿಯಲ್ಲಿ 3 1/2 ಘೂಟನಷ್ಟು ಗೋಡೆಯ ಸುತ್ತಲು ಪ್ರಾಚೀನ ಮಾದರಿಯ ಬೇಟೆಯ ದೃಶ್ಯಗಳ ವರ್ಣ ಚಿತ್ರಗಳಿವೆ.

ಭಿತ್ತಿಚಿತ್ರಗಳ ವಸ್ತು, ವಿಷಯ

ರಾಮಾಯಣ, ಮಹಾಭಾರತ ಮತ್ತು ಇತರ ಪುರಾಣಗಳಿಗೆ ಸಂಬಂಧಿಸಿದ ಚಿತ್ರಗಳು, ಐತಿಹಾಸಿಕ, ಘಟನೆಗಳನ್ನು ಪ್ರತಿಬಿಂಬಿಸುವ ಚಿತ್ರಗಳು, ನಿತ್ಯಜೀವನದ ಘಟನೆಗಳು, ಪ್ರಾಣಿ ಪಕ್ಷಿಗಳು, ಕಾಲ್ಪನಿಕ ಪ್ರಾಣಿ ಪಕ್ಷಿಗಳು, ಪೌರಾಣಿಕ ಪ್ರಾಣಿಗಳಾದ ಐರಾವತ, ಕಾಮಧೇನು, ಉಚ್ಚೃಶ್ರವಸ್ಸು ಹೀಗೆ ವೈವಿಧ್ಯ ವಿಷಯಗಳಿಗೆ ಸಂಬಂಧಿಸಿದ ಚಿತ್ರಗಳು ಇಲ್ಲಿ ರಚನೆಯಾಗಿವೆ. ಇವುಗಳಲ್ಲದೇ ಸಮಕಾಲೀನ ವ್ಯಕ್ತಿಗಳು, ನವಗ್ರಹಗಳಿಗೆ ಸಂಬಂಧಿಸಿದ ತಾಂತ್ರಿಕ ಚಿತ್ರ, ಮೇಷ, ವೃಷಭ, ಕಟಕ ಮುಂತಾದ ದ್ವಾದಶರಾಶಿಗಳ ಚಿತ್ರ, ಅಷ್ಟದಿಕ್ಪಾಲಕರ ಚಿತ್ರಗಳು, ಕೈಲಾಸ, ವೈಕುಂಠ ಬ್ರಹ್ಮಲೋಕದ ಚಿತ್ರಗಳು ಇಲ್ಲಿ ರಚನೆಯಾಗಿವೆ. ಶೇಷಶಯನ ವಿಷ್ಣು, ಮಹಿಷಾಸುರಮರ್ದಿನಿ ಪಂಚವಿಂಶತಿ ರೂಪದ ಶಿವ ಮುಂತಾದ ಪ್ರಮುಖ ದೇವತೆಗಳನ್ನು ಒಂದೊಂದು ಪ್ರತ್ಯೇಕ ಪಟ್ಟಿಕೆಯಲ್ಲಿ ಚಿತ್ರಿಸಿದ್ದಾರೆ. ಆಂಜನೇಯನ ರೂಪಗಳು ಇಲ್ಲಿ ವಿಶಿಷ್ಟವಾಗಿ ರಚನೆಯಾಗಿವೆ. ಒಂದು ಮುಖದ ಆಂಜನೇಯನಲ್ಲದೇ ಮೂರು ಮತ್ತು ಐದು ಮುಖದ ಆಂಜನೇಯನ ಚಿತ್ರಗಳಿವೆ. ಹತ್ತು ಕೈಗಳುಳ್ಳ ಆಂಜನೇಯನ ರೂಪವು ಉಗ್ರವಾಗಿದ್ದು, ನರಸಿಂಹನ ರೂಪ ಹೋಲುತ್ತದೆ. ಇಲ್ಲಿ ಎಲ್ಲ ಕಡೆಗೂ ಆಂಜನೇಯನನ್ನು ನೀಲವರ್ಣದಲ್ಲಿ ವಿಶೇಷವಾಗಿ ಚಿತ್ರಿಸಲಾಗಿದೆ.

ಗೋಡೆಯಲ್ಲಿ ಒಂದೊಂದು ವಿಸ್ತಾರವಾದ ಪಟ್ಟಿಕೆಗಳನ್ನು ಮಾಡಿ, ಅದರಲ್ಲಿ ಮತ್ತೆ ಸಣ್ಣ ಸಣ್ಣ ಚೌರಸಗಳನ್ನು ನಿರ್ಮಿಸಿಕೊಂಡು ಅವುಗಳಲ್ಲಿ ಒಂದು ಕಥೆ, ಇಲ್ಲವೇ ಪುರಾಣಕ್ಕೆ ಸಂಬಂಧಿಸಿದಂತೆ ಘಟನೆಗಳನ್ನು ಧಾರಾವಾಹಿಯ ಹಾಗೆ ಒಂದರ ನಂತರ ಒಂದಾಗಿ ರಚಿಸುತ್ತ ಹೋಗಲಾಗಿದೆ. ಒಂದು ದೊಡ್ಡ ಪಟ್ಟಿಕೆಯಲ್ಲಿ ರಾಮ–ರಾವಣರ ಯುದ್ಧವನ್ನು ಬಿಡಿಸಲಾಗಿದೆ. ಅಲ್ಲಿ ರಾಮ–ರಾವಣ, ಲಕ್ಷ್ಮಣ–ಇಂದ್ರಜಿತ, ರಾಮಲಕ್ಷ್ಮಣ–ಕುಂಭಕರ್ಣ ಹೀಗೆ ವಿವಿಧ ವ್ಯಕ್ತಿಗಳು ಮತ್ತು ಅವರ ಯುದ್ಧದ ವಿವಿಧ ಘಟನೆಗಳನ್ನು ನಿರೂಪಿಸಲಾಗಿದೆ. ಇಂತಹ ಅನೇಕ ದೊಡ್ಡ ಪಟ್ಟಿಕೆಗಳು ಇಲ್ಲಿವೆ.

ಐತಿಹಾಸಿಕ ಘಟನೆಗಳಿಗೆ ಸಂಬಂಧಿಸಿದ ಹೆಚ್ಚಿನ ಚಿತ್ರಗಳು ಗೋಡೆಯ ಮೇಲ್ಭಾಗಜ ಕಟ್ಟಿಗೆಯ ಬೋದಿಗೆಯಲ್ಲಿವೆ. ಅಂತಹ ಒಂದು ಚಿತ್ರದಲ್ಲಿ ಬ್ರಿಟೀಷ್ ಶೈಲಿಯ ಹ್ಯಾಟನ್ನು ಧರಿಸಿ, ಕೈಯಲ್ಲಿ ಕೋವಿ ಹಿಡಿದು ಶಿಸ್ತಿನಿಂದ ಹೊರಟ ಸೈನಿಕರಿದ್ದಾರೆ. ಅವರ ಸಾವಿನಲ್ಲಿ ಹಿಂದುಗಡೆ ಎರಡು ಕುದುರೆಗಳು ಬರುತ್ತಿವೆ. ಅದರಲ್ಲಿ ಕೆಂಪುಕುದುರೆಯ ಮೇಲೆ ಒಬ್ಬ, ಬಿಳಿಕುದುರೆಯ ಮೇಲೆ ಒಬ್ಬ ಅಧಿಕಾರಿಗಳು ಕುಳಿತಿದ್ದಾರೆ. ಅವರೂ ಬ್ರಿಟೀಷ್ ಶೈಲಿಯ ಉಡುಪಿನಲ್ಲೇ ಇದ್ದಾರೆ. ಈ ಸೈನಿಕರು ಸಾಲಾಗಿ ಹೋಗುತ್ತಿದ್ದು ಸಾಲಿನ ತೀರ ಮುಂದುಗಡೆ ವ್ಯಕ್ತಿಯೊಬ್ಬ ತಲೆಯ ಮೇಲೆ ಗಂಟುಹೊತ್ತು ಹೆಗಲಿಗೆ ಕಂಬಳಿ ಇಳಿಬಿಟ್ಟಿದ್ದಾನೆ. ಆತ ಬರೀ ಲಂಗೋಟಿ ಕಟ್ಟಿದ್ದು, ಉಳಿದಂತೆ ಬರಿಮೈಯಲ್ಲಿದ್ದಾನೆ. ಕೊರಳಲ್ಲಿ ಕರಿದಾರ ಒಂದನ್ನು ಕಟ್ಟಿದ್ದು ದಪ್ಪ ಮೀಸೆ ಬಿಟ್ಟಿದ್ದಾನೆ. ಅವನನ್ನು ನೋಡಿದ ತಕ್ಷಣ ಕುರಿಕಾಯುವ ಕುರುಬ ಜನಾಂಗದವನೆಂದು ಊಹಿಸಬಹುದಾಗಿದೆ. ಮತ್ತೊಂದು ಇಂತಹ ಉದ್ದ ಪಟ್ಟಿಕೆಯಲ್ಲಿರುವ ಐತಿಹಾಸಿಕ ಚಿತ್ರದಲ್ಲಿ ಆನೆ, ಕುದುರೆಗಳ ಸಮೇತ ಜನರು ವ್ಯಕ್ತಿಯೊಬ್ಬನನ್ನು ಮೇಣೆಯಲ್ಲಿ ಕುಳ್ಳಿರಿಸಿಕೊಂಡು ಹೋಗುತ್ತಿದ್ದಾರೆ. ಆನೆ, ಕುದುರೆಗಳ ವ್ಯಕ್ತಿ ಪೇಶ್ವೆ ಅರಸರ ವೇಷಭೂಷಣ ಧರಿಸಿದ್ದಾರೆ. ಕೆಲವು ದೊಡ್ಡ ಚಿತ್ರಗಳ ಮೇಲ್ಭಾಗದಲ್ಲಿ ದೀರ್ಘ ವೃತ್ತಾಕಾರದ ಚೌಕಗಳನ್ನು ಮಾಡಿಕೊಂಡು ಅದರಲ್ಲಿ ಅಷ್ಟದಿಕ್ಪಾಲಕರು, ದ್ವಾದಶರಾಶಿಗಳು, ಮತ್ತು ದಶಾವತಾರಗಳಿಗೆ ಸಂಬಂಧಿಸಿದ ಚಿತ್ರಗಳನ್ನು ರಚಿಸಲಾಗಿದೆ. ನವಗ್ರಹಗಳ ಅವರ ವಾಹನ ಸಮೇತ ಚಿತ್ರಿಸಿ ವರ್ಣ ಸಂಯೋಜನೆ ಮಾಡಲಾಗಿದೆ.

ಮೇಲ್ಛಾವಣಿ ಮತ್ತು ಗೋಡೆಯ ಮಧ್ಯದ ಸ್ಥಳದಲ್ಲಿ ಪ್ರತ್ಯೇಕ ಭಿತ್ತಿ ಲೇಪಿಸಿ, ರಚಿಸಿದ ಚಿತ್ರಗಳಲ್ಲಿ ಹೆಚ್ಚಾಗಿ ಬೃಹತ್ತಾದ ಪ್ರಾಣಿಚಿತ್ರಗಳನ್ನು ರಚಿಸಲಾಗಿದೆ. ಆನೆ, ಕುದುರೆ, ಹುಲಿ, ಕಾಲ್ಪನಿಕ ಮತ್ತು ಪೌರಾಣಿಕ ಪ್ರಾಣಿಗಳು ಇವೆ. ಹಾಗೇ ಹುಲಿಯು ಗಿಳಿಯನ್ನು ಕಾಲ ಕೆಳಗೆ ಹಾಕಿ ಬಗಿದು ತಿನ್ನುತ್ತಿರುವುದು, ಹುಲಿ ಆಕಳನ್ನು ಕೊಂದು ತಿನ್ನುತ್ತಿರುವುದು, ಪೌರಾಣಿಕ ಪ್ರಾಣಿಯೊಂದು ಗಿಳಿಯನ್ನು ಕೊಲ್ಲುತ್ತಿರುವುದು ಇಲ್ಲಿ ರಚನೆಯಾದ ಚಿತ್ರಗಳಲ್ಲಿ ಮುಖ್ಯವಾಗಿವೆ. ಬೆದರಿ ಓಡುತ್ತಿರುವ ಜಿಂಕೆಗಳ ಚಿತ್ರಗಳು ಇಲ್ಲಿ ರಚನೆಗೊಂಡಿವೆ. ಪ್ರಾಣಿಬೇಟೆಯ ಚಿತ್ರದಲ್ಲಿ ಒಂದು ಪೌರಾಣಿಕ ಪ್ರಾಣಿಯು ಇನ್ನೊಂದು ಪೌರಾಣಿಕ ಪ್ರಾಣಿಯನ್ನು ಕೊಲ್ಲುತ್ತಿರುವ ದೃಶ್ಯವಿದೆ. ಬೇಟೆಯಾಡುತ್ತಿರುವ ಮೇಲಿನ ಪ್ರಾಣಿಯು ಹುಲಿ, ಸಿಂಹ, ಚಿರತೆ, ಮೊಸಳೆ, ಹಾವುಗಳ ಸಂಯುಕ್ತ ರೂಪ ಹೊಂದಿದ್ದರೆ, ಕೆಳಗೆ ಬೇಟೆಯಿಂದಾಗಿ ಸಾಯುತ್ತಿರುವ ಪ್ರಾಣಿ ಆನೆ, ಹಂದಿ, ಮೀನು, ಘೇಂಡಾಮೃಗಗಳ ಸಂಯುಕ್ತ ರೂಪ ಹೊಂದಿದೆ. ಇದೊಂದು ತುಂಬ ಕಲಾತ್ಮಕವಾದ ಮತ್ತು ಕುತೂಹಲಕಾರಿಯಾದ ಚಿತ್ರವೆನ್ನಬಹುದು.

ಕೆಲವು ಋಷಿ–ಮುನಿಗಳ ಚಿತ್ರಗಳು ಇಲ್ಲಿ ಇದ್ದು, ಅವರಲ್ಲಿ ಕೆಲವರು ಹೋಮ, ಧ್ಯಾನದಲ್ಲಿ ತೊಡಗಿದ್ದರೆ ಕೆಲವರು ಅನುಷ್ಠಾನಗಳಲ್ಲಿ ನಿರತರಾಗಿದ್ದಾರೆ. ಯೋಗಪಟ್ಟಬಂಧದಲ್ಲಿ ಕುಳಿತಿರುವ ಋಷಿ ಬಲಗೈಯಲ್ಲಿ ಮರಾಠಿ ಭಾಷೆಯ ಹಸ್ತಪ್ರತಿಯನ್ನು ಓದುತ್ತಿರುವ ದೃಶ್ಯವಿದೆ. ಈ ಚಿತ್ರಗಳಲ್ಲದೇ ಸಮುದ್ರ ಮಂಥನದೃಶ್ಯ, ಬೇಟೆಯ ದೃಶ್ಯ, ಪೂಜಾರಿಗಳು, ಈಶ್ವರಲಿಂಗವನ್ನು ಪೂಜೆ ಮಾಡುತ್ತಿರುವ ದೃಶ್ಯ ಮನೋಹರವಾಗಿದೆ. ಹೂಬಳ್ಳಿಯ ನಕ್ಷೆಗಳು ಇಲ್ಲಿನ ಇನ್ನೊಂದು ಗಮನಾರ್ಹ ಅಂಶ. ದೊಡ್ಡ ಮತ್ತು ಸಣ್ಣದಾದ ಬಣ್ಣ ಬಣ್ಣದ ಹೂಗಳು, ಬಳ್ಳಿಗಳು, ವಿವಿಧ ಗಿಡ ಮರಗಳು ಅವುಗಳ ನೈಜ ಮತ್ತು ಅಲಂಕಾರಿಕ ರೂಪಗಳು ಇಲ್ಲಿ ರಚಿತ ಗೊಂಡಿವೆ. ಕೆಲವು ಭಾಗದಲ್ಲಿ ವಿಶೇಷವಾಗಿ ಗರ್ಭಗುಡಿಯಲ್ಲಿ ದೊಡ್ಡದಾದ ಪಟ್ಟಿಕೆಯಿದ್ದು ಅಲ್ಲೆಲ್ಲಾ ಹೂಬಳ್ಳಿ ನಕ್ಷೆಯಿಂದ ಆ ಪಟ್ಟಿಕೆಯನ್ನು ಕಲಾತ್ಮಕಗೊಳಿಸಲಾಗಿದೆ.

ಚಿತ್ರಗಳ ಕಾಲ

ಈ ದೇವಾಲಯದಲ್ಲಿನ ಭಿತ್ತಿಚಿತ್ರಗಳ ವಸ್ತುವಿಷಯ, ವರ್ಣಗಾರಿಕೆ, ರಚನಾಶೈಲಿಗಳು ನರಗುಂದ, ಅಮ್ಮಿನಬಾವಿ, ಮಹಾಲಿಂಗಪುರಗಳಲ್ಲಿರುವ ಭಿತ್ತಿಚಿತ್ರಗಳಿಗೆ ಹೆಚ್ಚು ಹೋಲಿಕೆ ಯಾಗುವುದರಿಂದ 18ನೇ ಶತಮಾನದಲ್ಲಿಯೇ ಇವು ಕೂಡಾ ರಚನೆಯಾಗಿರುವ ಸಾಧ್ಯತೆಗಳಿವೆ. ಪೇಶ್ವೆಯವರ ಕಾಲದಲ್ಲಿ ಬಹುಶಃ ಈ ವರ್ಣಚಿತ್ರಗಳು ರಚನೆಯಾಗಿರಬಹುದು.

ಇಲ್ಲಿನ ಶೇಷಶಯನ ವಿಷ್ಣುವಿನ ಚಿತ್ರವು ನರಗುಂದದ ಬಾಬಾಸಾಹೇಬನ ಅರಮನೆಯಲ್ಲಿ ರಚಿಸಿದ ಶೇಷಶಯನ ವಿಷ್ಣುವಿನ ಚಿತ್ರಕ್ಕೆ ಸರಿಯಾಗಿ ಹೋಲುತ್ತದೆ. ಅದೇ ರೀತಿ ಶಿವನು ನಂದಿಯ ಮೇಲೆ ಕುಳಿತು ಬರುತ್ತಿರುವ ಚಿತ್ರವೂ ನರಗುಂದದಲ್ಲಿ ಮತ್ತು ಇಲ್ಲಿ ಒಂದೇ ಶೈಲಿಯಲ್ಲಿ ರಚನೆಯಾಗಿವೆ. ಇವುಗಳಲ್ಲದೆ ಸಮುದ್ರ ಮಂಥನ ಮಾಡುವ ಚಿತ್ರ, ಗರುಡನು ಎರಡೂ ಕೈಯಲ್ಲಿ ಹಾವನ್ನು ಹಿಡಿದು ಕೊಲ್ಲುತ್ತಿರುವ ಚಿತ್ರ, ಕೆಲವು ಅಲಂಕಾರಿಕ ಹೂಬಳ್ಳಿಯ ನಕ್ಷೆಗಳು ನರಗುಂದದ ಭಿತ್ತಿಚಿತ್ರಗಳಿಗೆ ಸರಿಯಾಗಿ ಹೋಲುತ್ತವೆ.

ಹಾಗೆಯೇ ಇಲ್ಲಿನ ಕಾಮಧೇನುವಿನ ಚಿತ್ರ, ಪಂಚವಿಂಶತಿ ರೂಪದ ಶಿವನ ಚಿತ್ರಗಳು ಧಾರವಾಡ ಜಿಲ್ಲೆಯ ಅಮ್ಮಿನಬಾವಿಯ ಹಿರೇಮಠದಲ್ಲಿ ರಚನೆಯಾದ ಚಿತ್ರಗಳಿಗೆ ಹೋಲಿಕೆಯಾಗುತ್ತದೆ. ಅಮ್ಮಿನಬಾವಿಯ ಈ ಚಿತ್ರಗಳೂ ಕ್ರಿ.ಶ. 18ನೇ ಶತಮಾನದಲ್ಲಿ ರಚನೆಯಾಗಿವೆ. ಚಿತ್ರದ ಶೈಲಿ ವರ್ಣಗಾರಿಕೆ ವಿನ್ಯಾಸಗಳಿಂದ ಇವು ಕೂಡಾ 18ನೇ ಶತಮಾನದಲ್ಲಿ ರಚನೆಯಾದ ಚಿತ್ರಗಳೆಂದು ಹೇಳಬಹುದಾಗಿದೆ. ಇವು ಮೇಲ್ಛಾವಣಿ ಕೆಳಗಿನ ಭಿತ್ತಿಚಿತ್ರಗಳಿಗೆ ಮಾತ್ರ ಅನ್ವಯಿಸುವ ಮಾತುಗಳಾಗಿವೆ.

ಇಲ್ಲಿ ಚಿತ್ರಗಳು ಒಂದೇ ಶೈಲಿಯಲ್ಲಿರದೇ ಮೂರು ರೀತಿಯ ಶೈಲಿಯಲ್ಲಿವೆ. ಕೆಲವು ನುರಿತ ಚಿತ್ರಗಾರರ ಕೈಯಿಂದ ರಚನೆಯಾಗಿದ್ದರೆ ಇನ್ನೂ ಕೆಲವು ಚಿತ್ರಗಳು ಪ್ರಬುದ್ಧರಲ್ಲದವರ ಕೈಯಿಂದ ರಚನೆಗೊಂಡಿವೆ. ಅಲ್ಲದೇ ಗ್ರಾಮೀಣ ಜನಪದ ಚಿತ್ರಶೈಲಿಯೂ ಇಲ್ಲಿನ ಬಹುಪಾಲು ಚಿತ್ರಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ದುರಗಮುರಗಿಯವರ ಪೆಟ್ಟಿಗೆಯ ಚಿತ್ರಗಳನ್ನು ಇವು ತದ್ರೂಪವಾಹಿ ಹೋಲುತ್ತವೆ. ಇಂತಹ ಶೈಲಿಯ ಚಿತ್ರಗಳನ್ನು ಈಗಲೂ ತಾಳಿಕೋಟೆಯ 'ಜಿನಗಾರ' ಕುಟುಂಬದ ಕಲಾವಿದರು ರಚನೆ ಮಾಡುತ್ತಿರುವುದು ಗಮನಿಸಿದರೆ ಅಲ್ಲಿಯ ಕಲಾವಿದರ ಹಿರಿಯರು ಇಲ್ಲಿ ಬಂದು ಚಿತ್ರ

ರಚಿಸಿರುವ ಸಾಧ್ಯತೆಯಿದೆ.

ಮೇಲ್ಭಾವಣಿ ಸಮೀಪದ ಗೋಡೆಯಲ್ಲಿ ರಚನೆಯಾಗಿರುವ ಪ್ರಾಣಿಚಿತ್ರಗಳ ಶೈಲಿಯ ಉಳಿದ ಚಿತ್ರಗಳಿಗಿಂತ ಪ್ರಾಚೀನ ವೆನಿಸುತ್ತದೆ. ಮರದ ಪಟ್ಟಿಕೆಗಳಲ್ಲಿಯ ಹೊರಗೋಡೆಯಸುತ್ತಲು ದೊಡ್ಡ ಗಾತ್ರದ ಪಟ್ಟಿಕೆಗಳಲ್ಲಿಯ ಜನಪದ ಶೈಲಿಯ ಚಿತ್ರಗಳು 18ನೇ ಶತಮಾನದವುಗಳಾಗಿವೆ. ಹೀಗೆ ವಿವಿಧ ಕಾಲಘಟದಲ್ಲಿ ವಿವಿಧ ಕಲಾವಿದರಿಂದ ಚಿತ್ರ ರಚಿಸಲಾಗಿದ್ದು, ಇನ್ನು ಸೂಕ್ಷ್ಮವಾಗಿ ಇವುಗಳ ಅಧ್ಯಯನ ಮಾಡಬೇಕಾಗಿದೆ. ಒಟ್ಟಾರೆ ಕರ್ನಾಟಕದಲ್ಲಿ ಸ್ಪಷ್ಟವಾಗಿ ಬಹುಪಾಲು ಉಳಿದಿರುವ ಭಿತ್ತಿಚಿತ್ರಗಳಲ್ಲಿ ಈ ರಾಮ ಮಂದಿರವು ಪ್ರಮುಖ ನೆಲೆಯಾಗಿದೆ.

ಭಿತ್ತಿ ಚಿತ್ರಗಳ ಕೆಲವು ವೈಶಿಷ್ಟ್ಯಗಳು

1. ಇಲ್ಲಿ ಕಿರುರೂಪ ಭಿತ್ತಿಚಿತ್ರಗಳಿವೆ ಮತ್ತು ಜಾನಪದ ಶೈಲಿಯ ಚಿತ್ರಗಳಿದ್ದು ಧಾರಾವಾಹಿಯ ಹಾಗೆ ಸಂಪೂರ್ಣ ರಾಮಾಯಣವನ್ನು ಚಿತ್ರಿಸಲಾಗಿದೆ.
2. ಗಾರೆಯ ಭಿತ್ತಿಯಲ್ಲದೆ, ಮಣ್ಣಿನ ಭಿತ್ತಿಯೂ ಇಲ್ಲಿದ್ದು ಇಟ್ಟಿಗೆಯಿಂದ ದೇವಾಲಯ ನಿರ್ಮಾಣವಾಗಿದೆ.
3. ಗಾರೆ, ಮಣ್ಣು, ಮತ್ತು ಮರದ ಭಿತ್ತಿಯ ಮೇಲೆ ವರ್ಣಚಿತ್ರಗಳನ್ನು ಬಿಡಿಸಲಾಗಿದೆ.
4. ದೇವಾಲಯದ ಗರ್ಭಗುಡಿಯಲ್ಲಿಯೂ ವರ್ಣವಿನ್ಯಾಸ ವಿರುವದು ಒಂದು ಅಪರೂಪದ ಉದಾ ಹರಣೆಯಾಗಿದೆ.
5. ಮೂರು ರೀತಿಯ ವಿಭಿನ್ನ ಶೈಲಿಯ ಭಿತ್ತಿಚಿತ್ರಣ ಇಲ್ಲಿಯ ಇನ್ನೊಂದು ವೈಶಿಷ್ಟ್ಯವಾಗಿದೆ. ವಿಜಯನಗರ ಪೂರ್ವದ ವಿಜಯನಗರ ನಂತರದ ಮತ್ತು 18ನೇ ಶತಮಾನದ ಭಿತ್ತಿಚಿತ್ರಗಳು ರಚನೆಯಾಗಿವೆ.
6. ಶೈವ ಮತ್ತು ವೈಷ್ಣವ ಧರ್ಮದ ಹಿನ್ನೆಲೆಯ ವರ್ಣಚಿತ್ರಗಳು ಮಾತ್ರ ವಿಶೇಷ ಸ್ಥಾನ ಪಡೆದಿದೆ.
7. ಬೇಟೆಯಾಡುವ ಕಾಡುಪ್ರಾಣಿಗಳು, ಬೇಟೆಗೆ ಹೋಗುವ ದೃಶ್ಯ ಇಲ್ಲಿ ತುಂಬ ಕುತೂಹಲಕಾರಿಯಾಗಿ ಚಿತ್ರಗೊಂಡಿವೆ.
8. ಉತ್ತರ ಕನ್ನಡ ಜಿಲ್ಲೆಯಲ್ಲಿ ಭಿತ್ತಿಚಿತ್ರಗಳ ನೆಲೆಗಳೂ ಹೇರಳ ವಾಗಿದ್ದು, ಇದೊಂದು ಮಾತ್ರ ಬಹುವರ್ಣ ಭಿತ್ತಿಚಿತ್ರಗಳ ದೇವಸ್ಥಾನವಾಗಿದೆ.
9. ಈ ದೇವಾಲಯದ ಗರ್ಭಗುಡಿಯಲ್ಲಿ ವಿಶೇಷವಾಗಿ 4 ಅಡಿ ಎತ್ತರದ ರಾಮ, ಲಕ್ಷ್ಮಣ, ಸೀತೆ, ಭರತ ಶತೃಘ್ನ ಮತ್ತು ಹನುಮಂತನ ಮೂರ್ತಿಗಳನ್ನು ಸಾಲಾಗಿ ನಿಲ್ಲಿಸಲಾಗಿದ್ದು, ರಾಮ ಲಕ್ಷ್ಮಣ ಸೀತೆಯೊಂದಿಗೆ ಭರತ, ಶತೃಘ್ನರ ಶಿಲ್ಪಗಳಿರುವುದು ಈ ದೇವಾಲಯ ಒಂದರಲ್ಲೇ ಎನ್ನುವುದು ಇನ್ನೊಂದು ವೈಶಿಷ್ಟ್ಯ.
10. ಗ್ರಾಮೀಣ ಪ್ರದೇಶದ ಸಾಮಾನ್ಯ ಜನಜೀವನದ ದೃಶ್ಯಗಳು ಗ್ರಾಮ ಕಸುಬುಗಳಿಗೆ ಸಂಬಂಧಿಸಿದ ದೃಶ್ಯಗಳು ಪ್ರಥಮ ಬಾರಿಗೆ ಇಲ್ಲಿ ಕಂಡುಬರುತ್ತವೆ.

ರಕ್ಷಣೆ : ಈ ದೇವಾಲಯವು ಅತ್ಯಂತ ದುಸ್ಥಿತಿಯಲ್ಲಿದ್ದು, ನಾಶದ ಭೀತಿ ಎದುರಿಸುತ್ತಿದೆ. ದೇವಾಲಯದ ಪೂಜಾರಿಗಳು ಈ ದೇವಾಲಯವನ್ನು ಸದ್ಯದಲ್ಲೇ ಕೆಡವಿ ಹೊಸದಾಗಿ ಕಟ್ಟಿಸುವ ಸಿದ್ಧತಿಯಲ್ಲಿದ್ದಾರೆ. ಹಾಗೇನಾದರೂ ಮಾಡಿದರೆ ಅಪೂರ್ವಕಲೆಯ ಭಿತ್ತಿಚಿತ್ರಗಳು ನಾಶವಾಗುತ್ತವೆ. ಊರಿನ ಎರಡು ಬಣಗಳ ರಾಜಕೀಯದಿಂದಾಗಿ ಯಾರೂ ಇತ್ತಲಕ್ಷ ಕೊಟ್ಟಿಲ್ಲ. ಜನರು ಸುತ್ತಮುತ್ತಲೂ ಬಹಿರ್ದೆಶೆಗೆ ಕುಳಿತು ಸುತ್ತಲಿನ ವಾತಾವರಣ ಗಲೀಜು ಮಾಡುತ್ತಿದ್ದಾರೆ. ಒಳಗಡೆಗೆ ಸೋಮಾರಿಗಳು ತಮ್ಮ ಜಾಜಾಟದ ಅಡ್ಡೆಯಾಗಿ ದೇವಾಲಯವನ್ನು ಉಪಯೋಗಿಸುತ್ತಿದ್ದಾರೆ. ಮತ್ತೆ ಕೆಲವರು ಚಿತ್ರಗಳನ್ನು ಕೆತ್ತಿ, ಕೊರೆದು, ನಾಶಮಾಡಿದ್ದಾರೆ. ಮಕ್ಕಳು ಚಾಕ್‌ಪೀಸ್ ಮತ್ತು ಇದ್ದಿಲಿನಿಂದ ಭಿತ್ತಿಚಿತ್ರಗಳ ಮೇಲೆ ಗೀಚಾಡಿದ್ದಾರೆ. ಇಂತಹ ಅಮೂಲ್ಯ ಚಿತ್ರಕಲಾ ಭಂಡಾರದ ಪ್ರಾಚೀನ ಸ್ಮಾರಕವನ್ನು ಉಳಿಸುವ ನಿಟ್ಟಿನಲ್ಲಿ ಜನಪ್ರತಿನಿಧಿಗಳು, ಸರ್ಕಾರ, ಪುರಾತತ್ವ ಇಲಾಖೆ, ಸಂಘ ಸಂಸ್ಥೆಗಳು ಆಸಕ್ತ ಅಭಿಮಾನಿಗಳು ಇತ್ತಕಡೆ ಗಮನಹರಿಸಿ ಈ ದೇವಾಲಯದ ಭಿತ್ತಿಚಿತ್ತಗಳು ನಾಶವಾಗದ ಹಾಗೆ ಉಳಿಸಿ ಕೊಳ್ಳಬೇಕಾಗದೆ.

ಹೈದರಾಬಾದ್ ಕರ್ನಾಟಕ ಕನ್ನಡ ಪತ್ರಿಕೋದ್ಯಮದ ಇತಿಹಾಸ (1956ರವರೆಗೆ)

– ವಸಂತಕುಷ್ಟಗಿ

ಪತ್ರಿಕೆಗಳು ಪ್ರಪಂಚವನ್ನು ಕ್ರಿಯಾತ್ಮಕವಾಗಿ ಬಾಳಿಸುವಲ್ಲಿ ಅತ್ಯಂತ ಮಹತ್ತ್ವದ ಪಾತ್ರವನ್ನು ವಹಿಸಿವೆ. ಸ್ವಾವಲಂಬತ್ತ್ವ ಸ್ವಾಭಿಮಾನ, ಸ್ವಾತಂತ್ರ್ಯಗಳ ಘನತೆಗೌರವಗಳನ್ನು ತಿಳಿಸುವುದರಲ್ಲಿ ಹಿರಿದಾದ ಸೇವೆಯನ್ನು ಮಾಡುತ್ತ ಬಂದಿವೆ. ಮೊದ ಮೊದಲು ಕರಪತ್ರಗಳ ಮೂಲಕ ಮೊಳಕೆಯೊಡೆದದ್ದು, ಈಗ ಜೀವನದ ನಾನಾ ಮುಖಗಳಿಗೆ ಕನ್ನಡಿಯನ್ನು ಹಿಡಿದು, ವಾಸ್ತವ ಚಿತ್ರಗಳನ್ನು ತೋರಿಸಲು ಈ ಪತ್ರಿಕೆಗಳು ಬೃಹದಾಕಾರವಾಗಿ ಬೆಳೆಯ ತೊಡಗಿವೆ.

ಆರಂಭದಲ್ಲಿ ಧರ್ಮಪ್ರಸಾರ, ದೇಶಾಭಿಮಾನಗಳನ್ನು ಪತ್ರಿಕೆಗಳು ಜಾಗೃತ ಗೊಳಿಸಿದರೆ, ಈಗ ಅವು ದೈನಂದಿನ ವಿಶ್ವಕೋಶಗಳಾಗಿವೆ. ಅಂತೆಯೇ ಇತ್ತೀಚೆಗೆ 'ಪತ್ರಿಕೆಗಳು' ಒಂದು ಉದ್ದಿಮೆಯಾಗಿ ಬೆಳೆಯ ತೊಡಗಿವೆ. ಭಾರತದಲ್ಲಿ ಇಂದಿನ ಪತ್ರಿಕೆಗಳ ರೂಪಕ್ಕೆ ಕ್ರಿ.ಶ. 1780ರಲ್ಲಿ, ಜೆಮ್ಸ್ ಆಗಸ್ಟಸ್ ಹಿಕ್ಕಿ (ಜನೇವರಿ 20, 1780) ಬೆಂಗಾಸ್ ಗೆಜಿಟ್ ಅಥವಾ ಕಲ್ಕತ್ತಾ ಜನರಲ್ ಆಡ್ವಟೈಜರ್ ಎಂಬ ಪತ್ರಿಕೆಯನ್ನು ಆರಂಭಿಸಿ ನಾಂದಿಯಾದನು. ಆದರೆ ರಾಜಾರಾಮಮೋಹನ ರಾಯನು ಸಂಬಾದ ಕೌಮುದಿ, ಮೀರತ್–ಉಲ್–ಆಕಬಾರ್ ಮತ್ತು ಬ್ರಾಹ್ಮನಿಕಲ್‌ಮಾಗಝಿನ್ ಮೊದಲಾದವುಗಳನ್ನು ಭಾರತೀಯ ಭಾಷೆಗಳಲ್ಲಿ ಆರಂಭಿಸಿ, ಭಾರತೀಯ ಭಾಷಾ ಪತ್ರಿಕೋದ್ಯಮಕ್ಕೆ 'ಪಿತಾಮಹ' ನೆಂದೆನ್ನಿಸಿಕೊಂಡನು. ಮುಂದೆ ಈ ಮಾಧ್ಯಮವನ್ನು ದೇಶದ ಸ್ವಾತಂತ್ರ್ಯ ಸಂಪಾದನೆಗಾಗಿ ಬಹಳ ಅರ್ಥಪೂರ್ಣವಾಗಿ ಬಳಸಲಾಯಿತು. ಈದಿಸೆಯಲ್ಲಿ ಕರ್ನಾಟಕವೂ ಹಿಂದೇಟು ಹಾಕಲಿಲ್ಲ. ಅದನ್ನು, ಕನ್ನಡ ಭಾಷಾ ಪತ್ರಿಕೋದ್ಯಮಕ್ಕೆ ಇರುವ ಸುಮಾರು 150 ವರ್ಷಗಳ ಇತಿಹಾಸವು ಬಿಚ್ಚಿಟ್ಟಿದೆ.

ಈ ಕಾಲದ, ಭಾರತದ ಮುಖ್ಯ ಪ್ರವಾಹಕ್ಕೆ ಸೇರಿಕೊಂಡು 'ಮಂಗಳೂರು ಸಮಾಚಾರ' 'ಕನ್ನಡ ಸಮಾಚಾರ' ವಿಚಿತ್ರವರ್ತಮಾನ ಸಂಗ್ರಹ' 'ಹಿತ ಬೋಧನಿ' ಇತ್ಯಾದಿ ಕನ್ನಡ ಪತ್ರಿಕೆಗಳು ಜನರನ್ನು ಬಡಿದೆಬ್ಬಿಸಲು ಪ್ರಯತ್ನಿಸಿದುವು. ಉತ್ತರ ಕರ್ನಾಟಕದಲ್ಲಿ ಬಾಲಗಂಗಾಧರತಿಲಕರ ಪ್ರಭಾವದಿಂದಾಗಿ ಸ್ವಾತಂತ್ರ್ಯದ ಆಂದೋಲನದತ್ತ ಜನ ಆಕರ್ಷಿತರಾಗ ತೊಡಗಿದಾಗ, ಹಿತೇಚ್ಛು, ಕರ್ನಾಟಕಪತ್ರ, ಧನಂಜಯ, ಸಚಿತ್ರಭಾರತ, ಧನುರ್ಧಾರಿ, ಕರ್ನಾಟಕ ವೈಭವ, ರಾಜಹಂಸ, ಕರ್ನಾಟಕ ಭಾಷಾಸೇವಕ, ವಿದ್ಯಾದಾಯಿನಿ ಮೊದಲಾದಪತ್ರಿಕೆಗಳು ಬಂದವು. ಅವು ಸಾಹಿತ್ಯ ಸಾಂಸ್ಕೃತಿಕ ಮೌಲ್ಯಗಳನ್ನು ಒರೆಗೆ ಹಚ್ಚಿತೋರಿಸಿದುವಲ್ಲದೆ, ಸ್ವಾತಂತ್ರ್ಯ ಸಂಪಾದನೆಗಾಗಿ ಕಹಳೆಯನ್ನೂ ಊದಿದುವು.

ಈಗ ಈ ಸಂದರ್ಭದಲ್ಲಿ ಹೈದರಬಾದ್ ಕರ್ನಾಟಕ ಭಾಗವು ಕನ್ನಡ ಪತ್ರಿಕೋದ್ಯಮಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸಿದೆಯೆ? ಎಂಬ ಪ್ರಶ್ನೆಗೆ ಉತ್ತರ ಹುಡುಕ ಬೇಕಾಗಿದೆ. ಹೈದರಾಬಾದ್ ಕರ್ನಾಟಕವೆಂದರೆ ನಿಜಾಂ ಸಂಸ್ಥಾಮದ ಕಲಬುರಗಿ, ಬೀದರ, ರಾಯಚೂರು ಈ ಮೂರು ಜಿಲ್ಲೆಗಳ ಪ್ರದೇಶ. ಇದರಲ್ಲಿ ಇಂದಿನ ಮಹಾರಾಷ್ಟ್ರದ ಉದ್ಗೀರ, ಹಾಗೂ ಇಂದಿನ ಆಂಧ್ರ ಪ್ರದೇಶದ ಆಲಂಪುರ, ಜಹೀರಾಬಾದ್, ಮುಕ್ತಲ್ ಮೊದಲಾದ ತಾಲ್ಲೂಕುಗಳೂ ಸಮಾವೇಶವಾಗುತ್ತವೆ. ಈ ನಿಜಾಂ ಸಂಸ್ಥಾನದ ಮೂಲಪುರುಷ ನಿಜಾಂ ಮುಲ್‌ಮುಲ್ಕಾ ಎಂಬುವನು. ಆತನ ಕಾಲದಲ್ಲಿ ಹೈದರಾಬಾದ್ ನಿಜಾಂ ಸಂಸ್ಥಾನವು

ಸೆಪ್ಟೆಂಬರ್ 1948ರಲ್ಲಿ ಭಾರತ ಒಕ್ಕೂಟದಲ್ಲಿ ಸೇರಿ ಹೈದರಾ ಬಾದ್ ಪ್ರಾಂತವಾಯಿತು. ಹೀಗೆ ಸಂಸ್ಥಾನವೊಂದು ಪ್ರಾಂತವಾದದ್ದು ಸಹಜವಾದ ಪ್ರಕ್ರಿಯೆಯಾಗಿರಲಿಲ್ಲ. ವಿಶೇಷ ಆಂದೋಲನ ನಡೆದು ಪೋಲಿಸ್ ಕಾರ್ಯಾಚರಣೆಯಾಗಬೇಕಾಯಿತು. ಈ ಸಂದರ್ಭದಲ್ಲಿ ಈ ಭಾಗದಲ್ಲಿ ಪತ್ರಿಕಾಪ್ರಪಂಚವು ತನ್ನ ಕರ್ತವ್ಯವನ್ನು ನಿಭಾಯಿಸಲಿಲ್ಲವೆ? ಜನತೆಗೆ ಸ್ಫೂರ್ತಿಚಿಲುಮೆಯಾಗಿ ಕಾರ್ಯಪ್ರವೃತ್ತವಾಗಿರಬೇಕಾಗಿರಲಿಲ್ಲವೆ? ಈ ಎಲ್ಲ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆ. ಹಾಗಾದರೆ, ಕರ್ನಾಟಕ ಪತ್ರಿಕಾ ಆಕಾಡೆಮಿಯು ಕನ್ನಡ ಪತ್ರಿಕೋದ್ಯಮದ 145ನೆಯ ವರ್ಷದ ರಾಷ್ಟ್ರೀಯ ವಿಚಾರ ಸಂಕೀರ್ಣವನ್ನು ನಡೆಸಿ ಆ ಸಂದರ್ಭದಲ್ಲಿ ಪ್ರಕಟಿಸಿದ ಸ್ಮರಣ ಸಂಚಿಕೆಯಲ್ಲಿ ಹೈದರಬಾದ್ ಕರ್ನಾಟಕದ ಪತ್ರಿಕೆಗಳ ಬಗ್ಗೆ, ಕೆಲವನ್ನಾದರೂ ಆಯ್ದು ಉಲ್ಲೆಖಿಸ ಬಹುದಾಗಿತ್ತು! ಈ ಬಗೆಗೆ ಅದು ಹೇಗೆ ಕಣ್ಣು ತಪ್ಪಿತೊ ಈಗಂತೂ ನಮಗೆ ತಿಳಿಯದು. ಆದ್ದರಿಂದ ಈ ಪ್ರಬಂಧವು ಮರೆತು ಹೋದ ವಿಷಯಗಳನ್ನು ಉಪಲಬ್ಧವಿರುವ ಆಧಾರಗಳ ಮೇಲಿಂದ, ಕ್ರೋಡಿಕರಿಸಿ ಒಂದು ರೂಪವನ್ನು ಕೋಡುವುದರಲ್ಲಿ ಕಿಂಚಿತ್ತಾದರೂ ಪ್ರಯತ್ನಿಸುತ್ತಿದೆಯೆಂಬುದು ನಮ್ಮ ಅಭಿಪ್ರಾಯ.

ಹೈದರಾಬಾದ್ ಕರ್ನಾಟಕದ ಭಾಗ ಎಂದು ಹೆಸರು ಪಡೆದಿರುವ, ಮೇಲೆ ಹೆಸರಿಸಿದ ಕಲಬುರಗಿ ಬೀದರ, ರಾಯಚೂರು ಜಿಲ್ಲೆಗಳೂ ಸಾಹಿತ್ಯ ಸಂಸ್ಕೃತಿ ಜನ ಜೀವನಗಳಿಗಾಗಿ ಕ್ರಿಸ್ತ. ಪೂರ್ವದಿಂದಲೂ ತಮ್ಮ ಆಸ್ತಿತ್ವವನ್ನು ಜಾಗೃತವಾಗಿಟ್ಟುಕೊಂಡು ಬಂದಿರುವುದು ಸತ್ಯ. ನೃಪತುಂಗನ ಕಾಲದ 'ಕವಿರಾಜ ಮಾರ್ಗ' ಗ್ರಂಥವು ಈ ದಿಸೆಯಲ್ಲಿಯೂ ಅಪರೂಪವಾದ ಗ್ರಂಥ ಏಕೆಂದರೆ ಸಮೃದ್ಧ ಆಡಳಿತವು ಇದ್ದಕಾಲದಲ್ಲಿ ಸುದ್ದಿ ಪ್ರಸಾರಮಾಧ್ಯಮವು ಇರಲೇಬೇಕಲ್ಲವೆ? ಆಂದಿನ ಆಸ್ಥಾನವು ಕಾವ್ಯ ಪ್ರಸಾರಕ್ಕೆ ಆದ್ಯತೆಯನ್ನು ನೀಡಿ ತ್ತೆಂಬುದನ್ನು ಗಮನಿಸಿದಾಗ ಕಾವ್ಯಪ್ರಸಾರದ ಮೂಲಕವೇ ಸುದ್ದಿ ಪ್ರಸಾರ ಮಧ್ಯಮವು ಆ ಕಾಲದಲ್ಲಿ ಆಸ್ತಿತ್ತ ್ವದಲ್ಲಿರಲೇ ಬೇಕು! ಇಲ್ಲದೇ ಹೋದಲ್ಲಿ ಕವಿ, ಗಮಕಿ, ವಾದಿ, ವಾಗ್ಮಿಗಳು ಆಸ್ಥಾನದಲ್ಲಿ ವಿಶಿಷ್ಟವಾದ ಸ್ಥಾನಗಳನ್ನು ಪಡೆಯಲು ಸಾಧ್ಯವೇ? ಆದ್ದರಿಂದ ಕವಿರಾಜಮಾರ್ಗ'ದಲ್ಲಿಯೂ, ಪೂರ್ಣ 'ಲಕ್ಷಣಗಳನ್ನು ಪಡೆಯದೇ ಇರುವ ಪತ್ರುಕೋದ್ಯಮಕ್ಕೆ ಸಂಬಂಧಪಟ್ಟ ನಾಡಿಗಳು ಸುದ್ದಿಪ್ರಸಾರ ಮಾಧ್ಯಮದ ಚಿಹ್ನೆಗಳನ್ನೊಳಗೊಂಡು ಗುಪ್ತ ಗಾಮಿನಿಯೂ ಮಿಡಿದಿರಬೇಕು! ಅದರಂತೆ ನಾಗಾಯಿಯ ಶಾಸನ, ಸನ್ನತಿಯ ಅವಶೇಷಗಳು, ಹಿಂದಿನ ಕಾಲದ ಸುದ್ದಿ ಪ್ರಸಾರ ಮಧ್ಯಮದ ಬಳಕೆಯ ಬಗ್ಗೆ ಶೋಧನೆ ಮಾಡುವವರಿಗೆ ಆಹ್ವಾನವನ್ನು ನೀಡಲು ಸಾಧ್ಯ. ಮುಂದುವರಿದ ಕಾಲಗಳಲ್ಲಿ ಚಿಂತನ ಮಂಥನಗಳಿಂದ ಮೂಡಿಬಂದ ವಚನೆಗಳ ಶಿವಶರಣರಾಗಲೀ, ಬದುಕಿನಲ್ಲಿ ವಿಶ್ವಾಸ ಮೂಡಿಸಲು ಗುಡಿಸಲು ಗುಡಿಸಲು ಗಳಲ್ಲಿಯೂ ಜೀವನ ದೀಪ್ತಿಯನ್ನು ಮುಡಿಸಿ ಕೀರ್ತನೆಗಳನ್ನು ಹಾಡಿ ಬೆಳಗಿಸಿದ ಹರಿದಾಸರಾಗಲೀ ಒಂದರ್ಥದಲ್ಲಿ ಬದುಕಿನ ಒಳಿತಿಗೆ ಸಂದೇಶವನ್ನು ಬೀರಿದವರು. ಆದ್ದರಿಂದ ಅತ್ಯಾಧುನಿಕ ಕಾಲವು ಬರುವ ಮುನ್ನಿನಿಂದಲೇ ಈ ಪ್ರದೇಶದಲ್ಲಿ ಪತ್ರಿಕೋಧ್ಯಮಕ್ಕೆ ಬೇಕಾಗುವ ಮೂಲ ಸಂಪತ್ತು ಸಿದ್ಧವಾಗತೊಡಗಿತ್ತೆಂಬುದನ್ನು ಊಹಿಸ ಬಹುದಾಗಿದೆ. ಈ ಲಕ್ಷಣವನ್ನು ಆಧರಿಸಿಯೇ, ಸ್ವಾತಂತ್ರ್ಯೋತ್ತರ ಕಾಲದಿಂದಲೇ ಈ ಭಾಗದಲ್ಲಿ ಪತ್ರಿಕೆಗಳು ಜನ್ಮತಳೆದಿದ್ದುವೆಂಬುದನ್ನು ಸಾಬೀತುಗೊಳಿಸಲು ಇನೂ ಹೆಚ್ಚಿನ ಪ್ರಮಾಣಗಳಿವೆ.

ಈ ದಿಸೆಯಲ್ಲಿ ಖಚಿತವಾಗಿ ನಿಂತಿರುವ ಮಾಹಿತಿಗಳನ್ನಾದರೂ ಸಂಗ್ರಹಿಸಿ 1956ರ ವರೆಗೆ ಅರ್ಥಾತ್‌ನವ ಮೈಸೂರು (ವಿಶಾಲ ಮೈಸೂರು) ಪ್ರಾಂತ ಪುನರ್ ರಚನೆಯಾಗಿ, ಕಲಬುರ್ಗಿ, ಬೀದರ್, ರಾಯಚೂರು, ಜಿಲ್ಲೆಗಳು ಅದರಲ್ಲಿ ಸೇರ್ಪಡೆಯಾಗುವವರೆಗೆ ಮಾತ್ರ ನಮ್ಮ ಈ ಪ್ರಬಂಧಕ್ಕೆ ಸಂಬಂಧಪಟ್ಟ ವಿಷಯ ಸಂಗ್ರಹಕಾರ್ಯವು ಸೀಮಿತವಾಗಿರುತ್ತವೆ. 1857ರ ಸಂದರ್ಭದಲ್ಲಿ ಹೈದರಬಾದ್ ಕರ್ನಾಟಕ ಭಾಗದಲ್ಲಿ ಬರುವ ಕೊಪ್ಪಳ, ಮುಂಡರಗಿ, ಸುರಪುರ ಗಳು ಸ್ವಾತಂತ್ರ್ಯ ಸಂಗ್ರಾಮಕ್ಕೆ ಹೆಚ್ಚು ಒತ್ತು ನೀಡಿ, ಒಂದು ಅರ್ಥದಲ್ಲಿ ಗೆಲುವನ್ನೇ ತಂದುಕೊಟ್ಟು ಜಗತ್ತಿನ ಕಣ್ಣುಗಳನ್ನು ತಮ್ಮತ್ತ ಸೇಳೆದು ಕೊಂಡುವು. ಈ ಅದ್ಭುತ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಈ ವೃತ್ತಿಯನ್ನು ಎಸಗಿದ ಮನೆತನಗಳಲ್ಲಿ ಕಾಗದ ಪತ್ರಗಳ ಪರಿಶೀಲನೆಯಿಂದ ಈ ದಿಸೆಯಲ್ಲಿ ವಿಶೇಷಸಂಗತಿಗಳನ್ನು ಹೊರತೆಗೆದು ಬೆಳಕು ಚೆಲ್ಲಲು ಸಾಧ್ಯವಿದೆ.

1942ರ ಚಳುವಳಿಯ ಪ್ರಭಾವದಿಂದಾಗಿ ಇಡೀ ಭರತಖಂಡದಲ್ಲಿ ಸ್ವಾತಂತ್ರ್ಯವನ್ನು ಪಡೆದೇ ತೀರುತ್ತೇವೆಂಬ ವಿಶ್ವಾಸ ಮೂಡಿಬಂದಾಗ, ನಿಜಾಂನ ಹಿಡಿತ ದಲ್ಲಿದ್ದ ಹೈದಾರಾಬಾದ್ ಸಂಸ್ಥಾನದಲ್ಲಿಯೂ ಸ್ವಾತಂತ್ರ್ಯದ ಆಂದೋಲನದ ಗಾಳಿ

ಬೀಸದೇ ಇರಲಿಲ್ಲ. ತತ್ ಪರಿಣಾಮವಾಗಿ ಸಾಮಾನ್ಯ ಜನತೆಯಲ್ಲಿ ಒಳಗುದಿ ಆರಂಭವಾಗಿ ಉಕ್ಕಿಬರುತ್ತಿರುವ ಸಂದರ್ಭದಲ್ಲಿ 1945ರ ಸಮಯಕ್ಕೆ ಒಂದು ರೂಪ ತಾಳಿತು. ಕಲಬುರಗಿಯಲ್ಲಿ 12 ಜನರು, ಅಂದಿನ ನಿಜಾಂಶಾಹಿಗೆ ಧಿಕ್ಕಾರ ಹೇಳಿ ಅಂದಿನ ತಮ್ಮ ಸರಕಾರಿ ಅರೆಸರಕಾರಿ ನೌಕರಿಗಳನ್ನು ತ್ಯಜಿಸಿ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ಸನ್ನು ಕಟ್ಟಲು ಹೊರಬಂದರು. ಅವರು ಯಾರೆಂದರೆ, ಸರ್ವಶ್ರೀ ಅವರಾದಿ ದತ್ತಾತ್ರೇಯರಾವ್, ಪ್ರೊ. ವ್ಹಿ.ಸಿ ದೇವುಳಗಾಂವಕರ್, ಎಸ್. ಹನುಮಂತರಾವ್, ಶಂಕರರಾವ್ ವಾಂಝುರೇ, ತುಕಾರಾಮ ಕುಲಕರಣಿ, ಆನಂತಶರ್ಮಾ, ನಾರಾಯಣರಾವ್ ಕಾನ್ಯಾಳ ಅವರು ಅಮೃತ ಬಝಾರ ಪತ್ರಿಕೆಯ ಬಳಗದ ದಿವಗಂತ ರಾಘುಜಾಗೀರದಾರರ ಜೊತೆ ಸೇರಿ, ಸ್ವಾತಂತ್ರ್ಯ ಚಳುವಳಿಯ ಕುರಿತಾದ ಕರಪತ್ರಗಳನ್ನು ಬರೆದು ಸೈಕ್ಲೋಸ್ಟೈಲ್‌ಮಾಡಿ, ಮತ್ತೆ ಕೆಲವುಸಲ ಕಲ್ಲಚ್ಚಿನಲ್ಲಿ ಬರೆದು ಪ್ರತಿಗಳನ್ನು ತೆಗೆದು ಮನೆ ಮನೆಗೆ ಹಂಚಿ ಕ್ರಾಂತಿಯ ಕಿಡಿಯನ್ನು ಎಬ್ಬಿಸಿದರು. ದಿವಗಂತ ಅವರಾಧಿ ದತ್ತಾತ್ರೇಯರಾವ್ ಮತ್ತು ಎಸ್. ಹನುಮಂತರಾಯರು ಸೇರಿ 'ನಾಗರಿಕ' ಎಂಬ ವಾರ ಪತ್ರಿಕೆಯನ್ನು ಆರಂಭಿಸಿದರು. ತ್ರಿವರ್ಣಝುಂಡಾದಿಂದ ವೈಭವಯುತವಾಗಿ ವರ್ಣರಂಜಿತವಾಗಿ ಬಂದ ಈ ಪತ್ರಿಕೆಯು ಕಲಬುರಗಿಯಲ್ಲಿ ಝುಂಝಾವಾತವನ್ನೇ ಎಬ್ಬಿಸಿತು. ಅವರಾದಿ ದತ್ತಾತ್ರೇಯರಾಯರುನಾಗರಿಕದ ಸಂಪಾದನಾಕಾರ್ಯದಲ್ಲಿ ತೊಡಗಿರುವಾಗಲೇ ರಾಜ ಕೈದಿಯಾಗಿ ಬಂಧಿತರಾದರು. ಈ ಪತ್ರಿಕೆಯಲ್ಲಿಯ ಲೇಖನಗಳಿಗೆ ಆಕರ್ಷಿತರಾಗಿ ಜನತೆ ರಾಜಕೀಯ ಕ್ರಾಂತಿಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳತೊಡಗಿದ್ದರು ಈ ಕಾರಣದಿಂದ ಅವರಾದಿಯವರನ್ನು ನಿಜಾಂಸರಕಾರ ಬಂದಿಸಿ ಬಹುಪರಿಯಿಂದ ತೊಂದರೆಗಳನ್ನು ಅವರಿಗೆ ಕಾರಾಗೃಹದಲ್ಲಿ ನೀಡಿತು. ಅದೇ ಸಂದರ್ಭದಲ್ಲಿ ಹೇರೂರ ದತ್ತಾತ್ರೇಯರಾಯರು ರಾಷ್ಟ್ರಭಕ್ತಿಯನ್ನು ಜಾಗೃತಗೊಳಿಸುವ ಹಿನ್ನೆಲೆಯ ಸಾಹಿತ್ಯಿಕ ಸಾಂಸ್ಕೃತಿಕ ಮಹತ್ತ್ವವನ್ನು ತಿಳಿಸಿಕೊಡುವ ಕೈಬರಹದ ಸಂಚಿಕೆಗಳನ್ನು ತಂದರು. ಆ ಪ್ರೇರಣೆಯಿಂದಾಗಿ ವಸಂತ ಕುಷ್ಟಗಿ ಮತ್ತು ಲಕ್ಷ್ಮಿಕಾಂತಪಟ್ಟಣಕಾರ್ ಅವರು ಸೇರಿ ಸತತವಾಗಿ ಮೂರು ವರ್ಷ 1947–50ರ ವರೆಗೆ 'ಉದಯ' ಎಂಬ ಕೈಬರಹದ ಪತ್ರಿಕೆಯನ್ನು ತಂದರು. ಈ ಇಬ್ಬರು ಆಗ ಮಿಡ್ಲಿಸ್ಕೂಲಿನ ವಿದ್ಯಾರ್ಥಿಗಳು. ಈ ಪತ್ರಿಕೆಗಳಲ್ಲಿ ಆಗಿನ ದೇಶದ್ರೋಹಿರಜಾಕಾರ ಹಾವಳಿಯ ಶಬ್ಧ ಚಿತ್ರಗಳಿವೆ. ಈ ಪತ್ರಿಕೆಯ ಒಂದೆರಡು ಸಂಚಿಕೆಗಳ ಝೆರಾಕ್ಸ್ ಪತ್ರಿಗಳನ್ನು ರಾಜ್ಯ ಪತ್ರಾಗಾರದಲ್ಲಿ ದಾಖಲಿಸಲಾಗಿದೆಯೆಂದು ತಿಳಿದು ಬಂದಿದೆ. ಇದೇ ರೀತಿ ಮುಂದೆ ಹನುಮಂತರಾವ್ ಕಾನ್ಯಾಳ ಅವರು 'ಪ್ರಕಾಶ' ಎಂಬ ಕೈಬರಹದ ಪತ್ರಿಕೆಯನ್ನು ಕೆಲಕಾಲ ನಡೆಸಿದರು.

ಸುರಪುರ ಮತ್ತು ಶಹಾಪುರಗಳಲ್ಲಿ 1942ರ ಸಂದರ್ಭದಲ್ಲಿ ರಾಘವೇಂದ್ರ ಕುಷ್ಟಗಿ "ಬತ್ತೇರೇಶ ಕಿಂಕರ", ಹೋಳಿ ಶೇಷಗಿರಿರಾವ್, ಭೀಮರಾವ್ ಮಾಸ್ತರ್ ಶಹಾಪುರ, ಗುರಾಚಾರ್ಯ ಬಂಡಿ, ಸಗರ ಕೃಷ್ಣಾಚಾರ್ಯ, ಎಂ. ಆರ್. ಬುದ್ಧಿವಂತಶೆಟ್ಟಿ ಮೊದಲಾದವರು ಕೈಬರಹದ ವಿಶೇಷ ಸಂಚಿಕೆಗಳನ್ನು ತಂದು, ಸಗರ ನಾಡಿನಲ್ಲಿ ರಾಜಕೀಯ, ಸಾಹಿತ್ಯಿಕ, ಸಾಂಸ್ಕೃತಿಕ ತಿಳಿವಳಿಕೆಯನ್ನು ಜನರಲ್ಲಿ ಜಾಗೃತಗೊಳಿಸಿದರು. ರಂಗಂ ಪೇಟೆಯ ಬುದ್ದಿವಂತಶೆಟ್ಟರ ಮನೆಯಲ್ಲಿ ಆ ಕಾಲದ 'ಅರುಣ' ಪತ್ರಿಕೆಯ ಹಸ್ತಪತಿಗಳು ಇನ್ನೂ ನೋಡಲು ದೊರೆಯುತ್ತವೆ. ಸ್ವಾತಂತ್ರ್ಯದ ಅನಂತರ ಅರ್ಥಾತ್ ಅಂದಿನ ಉಪ ಪ್ರಧಾನಿ ಗೃಹ ಸಚಿವರಾಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲರ ಸಕಾಲಿಕ ಉಪಕ್ರಮದಿಂದಾಗಿ ಹೈದರಾಬಾದ ಸಂಸ್ಥಾನದ 'ಪೋಲಿಸಯಾಕ್ಷನ್'ದ ಅನಂತರ, ದಿವಂಗತ ತವಗ ಭೀಮಸೇನರಾಯರು 'ಮಿಂಚು' ಎಂಬ ಪತ್ರಿಕೆಯನ್ನು ತಮ್ಮ ಶಿಕ್ಷಣ ಸಂಸ್ಥೆಯಿಂದ ತಂದು ಅನೇಕ ಯುವಕರಲ್ಲಿಯ ಪ್ರತಿಭೆಗಳನ್ನು ಅರಳಿಸಿದರು. ಈ 'ಮಿಂಚು' ಸಂಚಿಕೆಗಳು ಅಂದಿನ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳ ಕ್ರಿಯಾಶೀಲತೆಗಳನ್ನೂ ಆಳೆತ್ತರಗಳ ನಿಲುವನ್ನು ಸ್ಥಾಪಿಸಲು ತುಂಬ ಸಹಕಾರಿಯಾಗಿವೆ. ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಿಕ ಮತ್ತು ವೈಚಾರಿಕ ಘನತೆಗಳನ್ನು ತೋರಿಸಿಕೊಡುವಲ್ಲಿ ಚಂದ್ರಶೇಖರ ಶಾಸ್ತ್ರಿಗಳ "ಅಮರವಾಣಿ" ಸಂಚಿಕೆಯನ್ನು ಮರೆಯಲು ಸಾಧ್ಯವೇ ಇಲ್ಲ. ಮುಂದೆ ಈ ಪತ್ರಿಕೆಯಿಂದ ನಿರ್ಮಾಣವಾದ ವಾತಾವರಣವು 'ವಿಶ್ವಕಲ್ಯಾಣದ ಬರುವಿಗೆ ನಾಂದಿ ಹೇಳಿತು.

ರಾಯಚೂರು ಜಿಲ್ಲೆಯನ್ನು ಕುರಿತು ಹೇಳುವುದಾದರೆ, 'ಧರ್ಮ ಸಂಜೀವಿನಿ' ಎಂಬ ಪತ್ರಿಕೆಯು ರಾಯಚೂರು ಜಿಲ್ಲೆಯಿಂದ ಜನಜಾಗೃತಿಯುನ್ನುಂಟು ಮಾಡುವಲ್ಲಿ ಸಾಕಷ್ಟು ಪರಿಶ್ರಮವನ್ನು ಪಟ್ಟಿರುವುದೆಂದು ತಿಳಿದು ಬಂದಿದೆ. ಆದರೆ ಆ ಪತ್ರಿಕೆಯ ಸಂಚಿಕೆಗಳು ನೋಡಲು ಸಿಕ್ಕಿಲ್ಲ. ಈ ರೀತಿಯ ಒಂದೆರಡು ಪರಿಶ್ರಮದ ಮೈಲುಗಲ್ಲುಗಳನ್ನು ಹೊರತುಪಡಿಸಿದರೆ

1940ರ ಮುನ್ನ ರಾಯಚೂರು ಜಿಲ್ಲೆಯಲ್ಲಿ ಪತ್ರಿಕೆಗಳ ಪ್ರಕಾಶನ ಕುರಿತಾದ ಪ್ರಯತ್ನಗಳು ವಿಶೇಷವಾಗಿ ಕಂಡುಬರುವುದಿಲ್ಲ. ಆಗ ಜನರು, ಮುಂಬಯಿ ಕರ್ನಾಟಕದಿಂದ ಪ್ರಕಟವಾಗುತ್ತಿದ್ದ ಪತ್ರಿಕೆಗಳನ್ನೇ ತರಿಸಿಕೊಂಡು ಓದುತ್ತಿದ್ದದು ತಿಳಿದು ಬರುತ್ತದೆ. ಈ ರೀತಿ ಪತ್ರಿಕಾ ವಾಚನಾಭಿರುಚಿಗಳನ್ನು ಬೆಳೆಸಲು ರಾಯಚೂರಿನ ಕರ್ನಾಟಕ ಸಂಘವು ವಿಶೇಷ ಏರ್ಪಾಟನ್ನು ಮಾಡಿದ್ದ ಸಂಗತಿಯು ಗಮನಾರ್ಹವಷ್ಟೇ ಅಲ್ಲ ಅಭಿನಂದನಾರ್ಹ. ಈ ಕರ್ನಾಟಕ ಸಂಘವು 1928ರಿಂದಲೇ ವಾಚನಾಭಿರುಚಿಯನ್ನು ಬೆಳೆಸುತ್ತ ಬಂದಿರುವುದನ್ನು ಕೂಡ ನೆನೆಯಲೇಬೇಕು. ಜನತೆಯಲ್ಲಿ ಕನ್ನಡ ವಾಚನಾಭಿರುಚಿ ಬೆಳೆದಂತೆಲ್ಲ ಮುಂದೆ, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕವು ಹೆಚ್ಚು ಹೆಚ್ಚು ಜನಪ್ರಿಯವಾಯಿತು. ಈ ನಿಟ್ಟಿನ ಶ್ರೇಯಸ್ಸು ದಿವಂಗತ ರಾ.ಗು. ಜೋಶಿ ಅವರಿಗೆ ಸಲ್ಲುತ್ತದೆ. ಅವರೊಬ್ಬ ನುರಿತ ಅನುಭವಿ ಮತ್ತು ಮುತ್ಸದ್ದಿ ವರದಿ ಗಾರರಾಗಿದ್ದರು. ಅವರು ನೀಡಿದ ಆಂದಿನ ವರದಿಗಳು ಪತ್ರಿಕೋದ್ಯಮಕ್ಕೆ ವಿಶಿಷ್ಟ ಮಾದರಿಯ ಕೊಡುಗೆಗಳಾಗಿವೆ. ಹೀಗಾಗಿ ಅವರಿಂದ ಪತ್ರಿಕೋದ್ಯಮವು ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿಕೊಂಡಿತು. ಅಂತೆಯೇ ರಾಯಚೂರಿನಿಂದ ಹೈದರಬಾದ್ ಕರ್ನಾಟಕದ ಮೊತ್ತ ಮೊದಲನೆಯ ಪತ್ರಿಕೆ 'ದಕ್ಕನ್ ಪ್ರಭಾತ'ವು ಮೂಡಿ ಮೂಡಿ ಬರಲು ಸಾಧ್ಯವಾಯಿತು. ಈ ವಾರಪತ್ರಿಕೆಯ ಮೊದಲ ಸಂಚಿಕೆಯ 9ನೆಯ ನವೆಂಬರ್ 1940ರಂದು ಹೊರಬಂದಿತು. ಈ ಪತ್ರಿಕೆಯ ಸಂಪಾದಕರು ಪಿ. ರಾಚೋಟಯ್ಯ ಎಂಬುವರು. ಅವರ ಸತತ ಪ್ರಯತ್ನದಿಂದ ಈ ವಾರಪತ್ರಿಕೆಯು ದಿನಪತ್ರಿಕೆಯಾಗಿಯೂ ಬೆಳಕು ಕಂಡಿತು. ಆದರೆ ಐದು ವರ್ಷಗಳ ಅನಂತರ ಅದು ಆರ್ಥಿಕ ಮುಗ್ಗಟ್ಟಿನಿಂದಾಗಿ ನಿಂತಿತು. ಅಷ್ಟರಲ್ಲಿ ಕಲಬುರ್ಗಿಯಿಂದ ರಾಯಚೂರಿಗೆ ಬಂದ "ನಾಗರಿಕ"ವು ತನ್ನ ಸಮರ್ಥ ಸಾಧನೆಯನ್ನು ಶ್ರೀ ಎಸ್. ಹನುಮಂತರಾಯರ ಸಂಪಾದಕತ್ವದಲ್ಲಿ ಸಾಧ್ಯಮಾಡಿಕೊಂಡರೂ, ಅದಕ್ಕೂ ಆರ್ಥಿಕ ಮುಗ್ಗಟ್ಟು ಒದಗಿ ಅದೂ ಕೂಡ ನಿಂತುಹೋಯಿತು. ಅದೇ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯವರೇ ಆದ ಕಲಿಗಣನಾಥ ಹಿರೇಮಠ ಎಂಬುವರು, 'ಸೇವಾ' ಎಂಬ ಪತ್ರಿಕೆಯನ್ನು ಪೋಲಿಸ್‌ಯಾಕ್ಷನ್ ಅನಂತರ ಆರಂಭಿಸಿದರು. ಅದು ನಾಲ್ಕೈದು ವರ್ಷಗಳವರೆಗೆ ಆ ಭಾಗದ ಜನರ ಆಶೋತ್ತರಗಳನ್ನು ಸ್ಪಂದಿಸಿಕೊಂಡು ಬೆಳೆಯಿತು. ಆದರೆ ಅದಕ್ಕೂ ಆರ್ಥಿಕ ಮುಗ್ಗಟ್ಟು ತಟ್ಟದೇ ಬಿಡಲಿಲ್ಲ.

ರಾಯಚೂರು ಜಿಲ್ಲೆಯ 'ಸಾಧನಾ'ಎಂಬ ವಾರ ಪತ್ರಿಕೆಯು ಹೈದರಾಬಾದ್ ಕರ್ನಾಟಕದಲ್ಲಿ ಬಹುಕಾಲ ಬಾಳಿದ ಪತ್ರಿಕೆ. ಹೈದರಾಬಾದು ಕರ್ನಾಟಕಕ್ಕೆ ಮಾತ್ರವಲ್ಲದೆ, ಕರ್ನಾಟಕದ ಉಳಿದ ಭಾಗಗಳ ಓದುಗರನ್ನೂ ಈ ಪತ್ರಿಕೆಯು ಆಕರ್ಷಿಸಿತ್ತು. ಸಾಮಾನ್ಯ ಜನರ ಒತ್ತಾಸೆಗಳನ್ನು ಬಿಚ್ಚುಮನಸ್ಸಿನಿಂದ ಬಿತ್ತರಿಸುವ ಪತ್ರಿಕೆಯಿದು ಎಂದು ಆಗ ಹೆಸರು ಪಡೆದಿತ್ತು. ಜೊತೆಗೆ ಹೊಸಗನ್ನಡದ ಸಾಹಿತ್ಯಿಕ ರೂಪಗಳಲ್ಲಿ ಹೊಸ ಹೊಸ ಲೇಖಕರಿಗೆ ಇಂಬು ನೀಡಿ. ಅವರ ಸಾಹಿತ್ಯದ ಬದುಕನ್ನು ಅರಳಿಸಿತು. ಮೌಲಿಕವಾಗಿಯೇ ಬಂದ ಈ ಪತ್ರಿಕೆಯ ಸಂಚಿಕೆಗಳು, ಅಖಿಲ ಕರ್ನಾಟಕದ ಮಟ್ಟದ ಪತ್ರಿಕೆಗಳ ಸಾಲಿನಲ್ಲಿ ಗೌರವವನ್ನು ಪಡೆದಿದ್ದುವು. ನಿಷ್ಠಾವಂತ ಕಾಂಗ್ರೆಸ್ ಧುರೀಣ ದಿವಂಗತ ಜಿ.ಕೆ. ಪ್ರಾಣೇಶಾಚಾರ್ಯರ ಸಂಪಾದಕತ್ವ ಮತ್ತು ಯಜಮಾನತ್ತ್ವದಲ್ಲಿ ಬಂದ ಈ ಪತ್ರಿಕೆಯು ಹೈದರಾಬಾದ ಸಂಸ್ಥಾನ ಪ್ರಾಂತ್ಯದ ಜನತೆಯ ಮುಖವಾಣಿಯೇ ಆಗಿ ವಿಜೃಂಭಿಸಿತು. ಸಚಿತ್ರವಾಗಿದ್ದ ಈ ಪತ್ರಿಕೆಯು ಹಲವು ಹತ್ತಾರು ವಿನ್ಯಾಸಗಳಿಂದ ಓದುಗರನ್ನು ಹುರಿ ದುಂಬಿಸಿತ್ತು. ಈ ಪತ್ರಿಕೆಯು ರಾಜ್ಯಪುನರ್ ಘಟನೆಯಾಗುವವರೆಗೆ ಹೈದ್ರಾಬಾದಿನಿಂದಲೇ ಪ್ರಕಟವಾಗುತ್ತಿದ್ದು ಅನಂತರ ಬಹು ವರ್ಷ ರಾಯಚೂರಿನಿಂದ ಪ್ರಕಟವಾಗುತ್ತಿದ್ದು ಈಗ ನಿಂತುಹೋಗಿದೆ.

ಆ ಅವಧಿಯಲ್ಲಿ ಕೊಪ್ಪಳದಿಂದ ನಂದಳಿಕೆಯವರು 'ಲೋಕವಾಣಿ' ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಅದು ಕೆಲಕಾಲ ಕೊಪ್ಪಳದಿಂದ ಪ್ರಕಟಗೊಂಡು ಅನಂತರ ರಾಯಚೂರಿನಿಂದ ಪ್ರಕಟವಾಗತೊಡಗಿತು. ಇದೇ ಸಮಯದಲ್ಲಿ ಪಿ. ರಾಚೋಟಯ್ಯ ಮತ್ತು ಕೊಟ್ರಬಸ್ಸಯ್ಯನವರು ಸೇರಿ, 'ಸೇವಕ' ಎಂಬ ಪತ್ರಿಕೆಯನ್ನು ಸ್ವಲ್ಪ ಕಾಲ ನಡೆಸಿದರು.

ರಾಯಚೂರಿನ ಕರ್ನಾಟಕ ಸಂಘವು 1953–54ರಲ್ಲಿ ಆರಂಭಿಸಿದ'ವಿಜಯ' ಎಂಬ ಪತ್ರಿಕೆಯು 5–6 ವರ್ಷ ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು ಉತ್ತಮ ಸಾಹಿತ್ಯ ನಿರ್ಮಾಣ ಮಾಡಿಸುವಲ್ಲಿ ಯಶಸ್ಸು ಪಡೆಯಿತು. ಈ ದಿಸೆಯಲ್ಲಿ ಶ್ರೀ ರಾಘವೇಂದ್ರರಾವ್ ಮತ್ತು ಶ್ರೀನಿವಾಸಚಾರ್ಯ ಹುಣಸಗಿ ಅವರ ಪ್ರಯತ್ನ ಮೆಚ್ಚಿಕೊಳ್ಳುವಂತಹದು.

1949ರ ಜನವರಿಯಲ್ಲಿ ಕಲಬುರಗಿ ಜಿಲ್ಲೆಯ ಯಾದವಗಿರಿಯಿಂದ ಆರಂಭವಾದ 'ಅಮರವಾಣಿ'ಯು 1954ರ ಡಿಸೆಂಬರದಲ್ಲಿ ರಾಯಚೂರಿಗೆ ಬಂದು, ವಿದ್ವಾನ್ ಬಿ.ಎಂ.ವೀರೇಶ್ವರ ಶಾಸ್ತ್ರಿಯವರ ಸಂಪಾದಕತ್ತ್ವದಲ್ಲಿ ಸಹೃದಯರ ಮೆಚ್ಚಿಗೆಯನ್ನು ಪಡೆಯಿತು. ಇದಕ್ಕೆ ಕಾರಣ ಸಂಪಾದಕರು ಸ್ವಂತ ಅಚ್ಚುಕೂಟವನ್ನು ಹೊಂದಿರುವುದೇ ಆಗಿದೆ.

ಸ್ವಾತಂತ್ರ್ಯದ ಆಂದೋಲನದ ಸಂದರ್ಭದಲ್ಲಿ ರಾಯಚೂರು ಜಿಲ್ಲೆಯ ಮುಖಾಂತರ ತಾರಾನಾಥರ ಪಾತ್ರವು ಬಹು ಪ್ರಮುಖವಾದುದು ಮತ್ತು ಜನತೆಯ ಸರ್ವೋತೋಮುಖ ಕಲ್ಯಾಣಕ್ಕಾಗಿ ಅವರ ಸೇವೆ ಅಪೂರ್ವವಾದುದು. ಬಹುಮುಖವಾದುದು. ವಿಶೇಷತಃ ಶಿಕ್ಷಣ ಕ್ಷೇತ್ರಕ್ಕೆ ರಾಷ್ಟ್ರೀಯ ಆಂದೋಲನದ ಹೇತುವಿ ನಿಂದಲೇ ಉತ್ತಮ ಶಿಕ್ಷಣ ನೀಡಲು ಹಮ್ದರ್ದ್ ಶಾಲೆಯನ್ನು ಆರಂಭಿಸಿದುದು ಈ ಮಾತಿಗೊಂದು ನಿದರ್ಶನ. ಅದೇ ರೀತಿ ಧೀರ ಗಂಭೀರ ಸ್ವಾರಸ್ಯದ ಪತ್ರಿಕೋದ್ಯಮಕ್ಕೂ ಅವರ ಸೇವೆ ಚಿರಸ್ಮರಣೀಯ ಸ್ವಾತಂತ್ರ್ಯ ಆಂದೋಲನದಲ್ಲಿ ಪಾಲುಗೊಳ್ಳುತ್ತಿದ್ದಾರೆಂಬ ಗುಮಾನಿಯ ಮೇಲೆ ತಾರಾನಾಥರನ್ನು ಗಡಿಪಾರು ಮಾಡಿದ ಮೇಲೆ, ಅವರು ರಾಯಚೂರಿನ, ಹತ್ತಿರ ತುಂಗಭದ್ರ ನದಿಯ ತಡದ ಮೇಲೆ ಆಶ್ರಮ ಕಟ್ಟಿ ಅಲ್ಲಿಯೇ ನಿಂತರು. ಅಲ್ಲಿಂದಲೇ ಸೃಜನಶೀಲ ಕನ್ನಡ ಸಾಹಿತ್ಯಕ್ಕೆ, ರಾಷ್ಟ್ರಾಭಿಮಾನವನ್ನು ಹೊಡೆದೆಬ್ಬಿಸುವ ಸಾಹಿತ್ಯಕ್ಕೆ ಮೀಸಲಾಗಿರಿಸಿದ 'ಪ್ರೇಮ' ಎಂಬ ಪತ್ರಿಕೆಯನ್ನು ಹೊರಡಿಸಿದರು. ಅಂದಿನ ಅವರ ಸಂಪಾದಕತ್ತ್ವದ ಮತ್ತು 'ಪ್ರೇಮ'ದ ಸಂಚಿಕೆಗಳು ಇಂದಿನ ಕಾಲಕ್ಕೂ ಪ್ರೇರಕ ಶಕ್ತಿಯಾಗಿವೆ.

ಸುಮಾರು 1940ರಿಂದ ಈಚಿನ ಎಂದರೆ 1954ರ ಮಧ್ಯದಲ್ಲಿ ವಿಜಾಪುರ ಜಿಲ್ಲೆಯ ಸಿಸು ಸಂಗಮೇಶ ಅವರು ಮಕ್ಕಳ ಸಾಹಿತ್ಯ ನಿರ್ಮಾಣದ ಕಡೆಗೆ ತಮ್ಮ ಸಂಪೂರ್ಣ ಒಲವನ್ನು ಇತ್ತು ಶಿಶುಸಾಹಿತ್ಯವನ್ನು ವೈವಿಧ್ಯಪೂರ್ಣವಾಗಿ ಬೆಳೆಸತೊಡಗಿದರು. ಸಹಜವಾಗಿಯೇ ವಿಜಾಪುರದ ಗಡಿಯ ರಾಯಚೂರಿನ ಭಾಗದಲ್ಲಿಯೂ ಸಿಸು ಸಂಗಮೇಶ ಅವರ ಚಟುವಟಿಕೆಗಳ ಪ್ರಭಾವವು ಬೀರಿತು. ಅನೇಕ ಪ್ರತಿಭಾವಂತ ಪ್ರಾಥಮಿಕ ಶಾಲೆಯ ಶಿಕ್ಷಕರು ಶಿಶು ಸಾಹಿತ್ಯ ನಿರ್ಮಾಣಕ್ಕೆ ತೊಡಗಿದರು. ಲಿಂಗಸುಗೂರು, ಮುದಗಲ್, ಸಿಂಧ ನೂರುಗಳಲ್ಲಿ ಮಕ್ಕಳ ಸಾಹಿತಿಗಳ ತಂಡವೇ ನಿರ್ಮಾಣವಾಯಿತು. ಉಕ್ಲಿಕುಪ್ಪೇರಾವ್, ಸೀಮಾಮಾ ಮೊದಲಾದವರು ಮಕ್ಕಳಿಗಾಗಿ ಕೈಬರಹದ ಮಾಸ ಪತ್ರಿಕೆಗಳನ್ನು ಆರಂಭಿಸಿದರು. 'ಮಗು' ಮತ್ತು 'ಜ್ಯೋತಿ' ಇವು ಆ ಕಾಲದ ಅಂತಹ ಪತ್ರಿಕೆಗಳು. ಕೆಲವು ಕಾಲ ಈ ಪತ್ರಿಕೆಗಳನ್ನು ಅಚ್ಚು ಮಾಡಿಯೂ ಪ್ರಕಟಿಸಿದರು. ಕೆಲವು ದಿವಸಗಳ ಅನಂತರ ಆರ್ಥಿಕ ಮುಗ್ಗಟ್ಟಿನಿಂದಾಗಿ ಆ ಪತ್ರಿಕೆಗಳು ನಿಂತುಹೋದವು.

ರಾಯಚೂರು ಜಿಲ್ಲೆಯವರೇ ಆಗಿದ್ದು, ಹೈದರಾ ಬಾದಿನಲ್ಲಿದ್ದು ಕೊಂಡು, ಸ್ವಾತಂತ್ರ್ಯಪೂರ್ವದಿಂದಲೂ ತಮ್ಮ ಜೀವನವನ್ನು ಪತ್ರಿಕೋದ್ಯಮದ ವಿಕಾಸಕ್ಕಾಗಿ ಮುಡುಪಿಟ್ಟಿದ್ದ ರಾಘವೇದ್ರಾ ಚಾರ್ಯ ಜಾಗೀರದಾರರನ್ನು ನೆನಸದೇ ಹೋದರೆ ಅನ್ಯಾಯವಾಗುತ್ತದೆ. ಅವರು ಪ್ರಕಟಿಸುತ್ತಿದ್ದ 'ಪ್ರಜಾ' ಎಂಬ ಪತ್ರಿಕೆಯು ಮನಸ್ಸನ್ನು ಹೊಡೆದೆಬ್ಬಿಸುವ ಸ್ಫೂರ್ತಿದಾಯಕ ಲೇಖನಗಳಿಂದಲೂ, ಸುಂದರವಾದ ಮುದ್ರಣದಿಂದಲೂ ಸ್ವಾತಂತ್ರ್ಯದ ಆಂದೋಲನಕ್ಕೆ ಪುಟು ನೀಡುವಂತಹದಾಗಿತ್ತು. ಹೀಗಾಗಿ ಅಂದಿನ 'ಪ್ರಜಾ' ಪತ್ರಿಕೆಯ ಸಂಚಿಕೆಗಳು ಆಗಿನ ಜ್ವಲಂತ ಸಮಸ್ಯೆಗಳನ್ನು ಬಿತ್ತರಿಸಿ, ಆ ಮೂಲಕ ಪ್ರಜೆಗಳನ್ನು ಚಿಂತನಶೀಲರರನ್ನಾಗಿ ಮಾಡಿ, ಆ ಸಮಸ್ಯೆಗಳಿಗೆ ಪರಿಹಾರವನ್ನು ಒದಗಿಸುವಲ್ಲಿಯೂ ಸಫಲವಾದುವು. ಈ ಜನಪ್ರಿಯತೆಯಿಂದಾಗಿ ಸಂಪಾದಕರು ಪ್ರಜಾಜಾಗೀರದಾರರೆಂದೇ ಖ್ಯಾತಿ ಪಡೆದರು.

ಈ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಮತ್ತೆ ಕನ್ನಡ ಚೇತರಿಸಿಕೊಳ್ಳತೊಡಗಿತ್ತು. ಹಿರಿಯರಲ್ಲಿ ಅನೇಕರು ಉರ್ದು ಮತ್ತು ಮರಾಠಿಗಳನ್ನೇ ಬಳಸುತ್ತಿದ್ದರು. ಪರಿಸ್ಥಿತಿ ಹೀಗಿದ್ದರೂ ಒಂದೆರಡು ಕಡೆ ಕೈಬರಹ ಕನ್ನಡ ಪತ್ರಿಕೆಗಳು ಬಂದುವು. ಈ ದಿಸೆಯಲ್ಲಿ ದಿಗ್ಗಾನಿ ಮತ್ತು ತಾಳೀಕೋಟೆ ಮಾಸ್ತರರ ಸೇವೆಯನ್ನು ನೆನೆಯಬೇಕೆಂದು ಬೀದರಿನ ಜನ ಹೇಳುತ್ತಾರೆ.

ನಾವು ಈ ಪ್ರಬಂಧಕ್ಕೆ ಸೀಮಿತಗೊಳಿಸಿಕೊಂಡಿರುವ ಅವಧಿಯಲ್ಲಿ, ಕನ್ನಡ ಪತ್ರಿಕೆಗಳ ಇತಿಹಾಸಕ್ಕೆ ಹೈದರಾಬಾದಿನಲ್ಲಿಯ ಉಸ್ಮಾನಿಯಾ ವಿಶ್ವವಿದ್ಯಾಲಯವು ತನ್ನ ಮಟ್ಟಿನ ಕೊಡುಗೆಗಳನ್ನು ಕೊಟ್ಟಿದೆ. ಆ ಕೊಡುಗೆಗಳನ್ನು ಗೌರವದಿಂದಲೇ ದಾಖಲಿಸಬೇಕು. ರಾಜ್ಯ ಪುನರ್ ಘಟನೆಯಾಗುವುದಕ್ಕೆ ಮುಂಚಿನಿಂದಲೇ, 'ತಾವರೆ', 'ಸಂಜೆರಾಣಿ' ಮೊದಲಾದ ಕಾಲೇಜು ವಾರ್ಷಿಕಗಳು ಬಂದುವು. ಅವುಗಳಲ್ಲಿ ವಿಶೇಷವಾಗಿ ಉಸ್ಮಾನಿಯಾ ವಿಶ್ವವಿದ್ಯಾಲಯದ 'ತಾವರೆ' ಮತ್ತು ನಿಜಾಂ ಕಾಲೇಜಿನ

ವಾರ್ಷಿಕ ಸಂಚಿಕೆಗಳು ಮೌಲಿಕವಾದ ಲೇಖನ ಸಂಚಯಗಳಿಂದ ಕೂಡಿವೆ. ಇವು, ಮೈಸೂರು ವಿಶ್ವವಿದ್ಯಾಲಯದ ಪ್ರಬುದ್ಧ ಕರ್ನಾಟಕದ ಮಾದರಿಯಲ್ಲಿ ಬಂದ ಸಂಚಿಕೆಗಳು. ಹೀಗಾಗಿ ಈ ನಿಟ್ಟಿನಲ್ಲಿ ಅಂದಿನ ಉಸ್ಮಾನಿಯಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಾಪಕರ ಪ್ರಯತ್ನವನ್ನು ಮೆಚ್ಚಲೇ ಬೇಕು. ಏಕೆಂದರೆ ಕನ್ನಡವು ಅಲ್ಪಸಂಖ್ಯಾತರ ಭಾಷೆಯಾಗಿದ್ದು, ಅನೇಕ ಬಹು ಭಾಷಿಕರ ಒತ್ತಡದಲ್ಲಿದ್ದೂ ತನ್ನ ಧ್ವನಿಯನ್ನು ಅಲ್ಲಿ ಎತ್ತಲು ಪ್ರಯತ್ನಿಸಿದ್ದು ಕಡನೆಯ ಸಾಧನೆಯ ಮಾತಲ್ಲ. ಯಾವ ತರಹದ ಬೆಂಬಲವಿಲ್ಲದೆ, ಒಂದು ಕಡೆ ರಾಜಭಾಷೆಯಾಗಿದ್ದ ಉರ್ದುವಿನ ದರ್ಪದಲ್ಲಿ ಕನ್ನಡವು ಬಡವಾಗಿತ್ತು. ಇನ್ನೊಂದು ಕಡೆ ಮಾಂಸಿ ಭಾಷೆಗಳಾದ ತೆಲಗು ಮರಾಠಿಗಳು ತಮ್ಮದೇ ಆದ ಧಾಟಿಯ ಒಲವಿನಲ್ಲಿ ಕನ್ನಡವನ್ನು ಸೊರಗುವಂತೆ ಮಾಡಿದ್ದುವು. ಇಂತಹ ಒತ್ತಡಗಳಲ್ಲಿ ಕನ್ನಡವು ಬಡವಾಯೆತೇನೋ ಎನ್ನಿಸಿದರೂ ಸ್ವಾಭಿಮಾನದ ಉಸಿರನ್ನು ಅದು ಬಿಡಲಿಲ್ಲ. ಅಂತೆಯೇ ಅದು ತನ್ನ ತನವನ್ನು ಉಳಿಸಿಕೊಂಡೇ 1956ರ ನವೆಂಬರ್ 1ರಂದು ಕನ್ನಡದ ಹೆದ್ದೊರೆಯಲ್ಲೊಂದಾಗಿ ಪ್ರವಹಿಸತೊಡಗಿದೆ. ಆದರೆ ಆ ಕಾಲದಲ್ಲಿದ್ದ ಪತ್ರಿಕೋದ್ಯಮದ ಅಸ್ತಿತ್ವ, ಸಾಧನೆ ಇತ್ಯಾದಿಗಳ ಬಗ್ಗೆ ಸಂಶೋಧನೆ ನಡೆದು– ಇತಿಹಾಸವು ಎಲ್ಲರ ಕಣ್ಣುಗಳಿಗೂ ಬೆಳಕು ನೀಡಬೇಕಾಗಿದೆ.

ಒಟ್ಟಾರೆ ಕರ್ನಾಟಕದ ಪತ್ರಿಕೋದ್ಯಮದ ಹೆದ್ದೊರೆಗೆ, ಹೈದರಾಬಾದ ಕರ್ನಾಟಕವು ತನ್ನ ಅವಕಾಶಗಳ ಸೀಮಿತಿಯಲ್ಲಿ ಸುಮ್ಮನಿರದೆ, ತನ್ನ ಸತ್ತ್ವಗಳನ್ನೊಳಗೊಂಡ ತನ್ನ ತೊರೆಗಳನ್ನು ಸಂಗಮಿಸಿಕೊಂಡು ಒಂದಾಗಿದೆ. ಆದರೆ ಸಂಪೂರ್ಣವಾಗಿ, ಇದೆಲ್ಲ ಆಧಿಕೃತ ದಾಖಲೆಗಳಾದ ಗೆಜೆಟಿಯರ್ ಮೊದಲಾದ ಆಕರ ಗ್ರಂಥಗಳಲ್ಲಿ ದಾಖಲೆಯಾಗಬೇಕಾದ ಕಾರ್ಯವು ಇನ್ನೂ ನಡೆಯಬೇಕಾಗಿದೆ.

❑

ಶಿಸುಗಲಿ ಪಾಂಡ್ಯರ ಕೆಕ್ಕಾರ ವೀರಗಂಬ ಶಾಸನಗಳು : ಒಂದು ಅಧ್ಯಯನ

– ಡಾ. ಗಣಪತಿಗೌಡ ಎಸ್.

ಕೆಕ್ಕಾರ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನಿಂದ ಸುಮಾರು 15 ಕಿ.ಮೀ. ದೂರದಲ್ಲಿದೆ. ಇಲ್ಲಿಯ ಅಮ್ಮನವರ ದೇವಾಲಯದಲ್ಲಿ ಚೌಕವಿನ್ಯಾಸದ ಸುಮಾರು 6 ಅಡಿ ಎತ್ತರದ ಮೂರು ವೀರಗಂಬಗಳಿವೆ. ಇವುಗಳ ಒಂದು ಅಥವಾ ಎರಡು ಮೈಯಲ್ಲಿ ಶಾಸನವನ್ನು ಕೊರೆಯಲಾಗಿದೆ. ಈ ಶತಮಾನದ ಐದನೇ ಶತಕದಲ್ಲಾಗಲೇ ವಿದ್ಯಾರತ್ನ ಪಂಚಮುಖಿಯವರು ಇದನ್ನು ಗಮನಿಸಿದ್ದಾರೆ.[1] ಆದರೆ ಈ ಶಾಸನಗಳ ಪಾಠ ನಮಗೆ ತಿಳಿದಂತೆ ಪ್ರಕಟವಾಗಿಲ್ಲ.

ಇಂತಹ ವಿಶಿಷ್ಟ ಮಾದರಿಯ ವೀರಗಂಬಗಳು ಕರಾವಳಿಯ ಕೆಲವೇ ಕೆಲವು ಭಾಗದಲ್ಲಿ ಒಂದು ನಿರ್ದಿಷ್ಟ ಸಮಯಕ್ಕಷ್ಟೇ ಸೀಮಿತವಾಗಿರುವದು ಒಂದು ವಿಶೇಷ. ಇಂತಹ ವೀರಗಂಬಗಳನ್ನ ಉತ್ತರ ಕನ್ನಡ ಜಿಲ್ಲೆಯ ಭಾವಿಕೇರಿ (ಅಂಕೋಲಾ ತಾಲ್ಲೂಕು), ಹಳದಿಪುರ[2], ಹೆಬ್ಬಾನಕೇರಿ, ಕೆಕ್ಕಾರಮಂಕಿ (ಹೊನ್ನಾವರ ತಾಲ್ಲೂಕು)ಯಲ್ಲಿ ಕಾಣಹುದಾಗಿದೆ. ಈ ಕಂಬಗಳಲ್ಲಿಯ ಶಾಸನದ ಭಾಗವನ್ನು ಹೊರತುಪಡಿಸಿ ಉಳಿದ ಮುಖಗಳಲ್ಲಿ ಯುದ್ಧ ಮತ್ತು ರಾಮಾಯಣಗಳಿಂದಾಯ್ದ ಶಿಲ್ಪ ಚಿತ್ರಗಳನ್ನು ಕೆತ್ತಲಾಗಿದೆ. ಅನೇಕ ಲೈಂಗಿಕ ಶಿಲ್ಪಗಳ ದೃಶ್ಯವೂ ಇಲ್ಲಿದೆ.

ಇಲ್ಲಿಯ ಮೊದಲನೆಯ ಶಾಸನ 62 ಸಾಲುಗಳನ್ನು ಎರಡನೆಯ ಶಾಸನ 65 ಸಾಲುಗಳನ್ನು, ಮೂರನೆಯ ಶಾಸನ 30 ಸಾಲುಗಳನ್ನೊಳಗೊಂಡ ಕ್ರಿ.ಶ. 11ನೇ ಶತಮಾನದ ಕನ್ನಡಲಿಪಿ, ಕನ್ನಡ ಗದ್ಯ ಭಾಷೆಯಲ್ಲಿದೆ.[3]

ಕಾಲಮಾನ

1. ಮೊದಲನೇ ಶಾಸನದ ಕಾಲ ಶಕವರ್ಷ 1000 (ಕ್ರಿ.ಶ. 1078).
2. ಎರಡನೇ ಶಾಸನದ ಕಾಲ ಶಕವರ್ಷ 1002, ಸಿದ್ಧಾರ್ಥ ಸಂವತ್ಸರ (ಕ್ರಿ.ಶ. 1079)
3. ಮೂರನೆಯ ಶಾಸನದಲ್ಲಿ ಕಾಲಮಾನದ ವಿವರಣೆ ಇಲ್ಲ.

ವಿಶ್ಲೇಷಣೆ

ಕ್ರಿ.ಶ. 1078ರ ದೇವಾಲಯದ ಪ್ರಕಾರದ ಬಲಭಾಗದಲ್ಲಿರುವ ಮೊದಲನೆಯ ವೀರಗಂಬ ಶಾಸನದಲ್ಲಿ ಪಂಚಮಹಾಶಬ್ದ, ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ಮತ್ತಲೆ ಸಿಂಘ, ಸಂಗ್ರಾಮ ಗರುಡ, ಪಡವಳ ಬುದ್ಧ ಶಕವರ್ಷ 1000 (ಕ್ರಿ.ಶ. 1078) ರಲ್ಲಿ ಗೋಕರ್ಣದಲ್ಲಿ ಅಸುನೀಗಿದ ಬಗ್ಗೆ ಮೊದಲಲ್ಲಿ ವಿವರಣೆ ನೀಡುತ್ತದೆ. ತದನಂತರ ಕಡತೋಕೆಯ ರಕ್ಷಪಾಲ ಕಾಮದೇವನ ಕಟ್ಟಿದಲಗು ಮೊದಲಾದ ಬಿರುದಾವಳಿಗಳನ್ನು ಹೊಂದಿದ್ದ ಪಡವಳ ಬುದ್ಧನ ಮೊಮ್ಮಗನಾದ ಪಡವಳ ಹಾಚ ಮತ್ತು ಬೋಗೋರಿಕ ಕೂಡಿ ಹೈವೆ, ತೆಂಕಲು, ಕೊಂಕಣದಲ್ಲಿಯ ವೈರಿಗಳನ್ನು ಇರಿದು ಪಡವಳ ಬುದ್ಧನಿಗೆ ಶಕವರ್ಷ 1000ದಲ್ಲಿ ವೀರಗಲ್ಲನ್ನು ಮಾಡಿಸಿದರೆಂದು ತಿಳಿಸುತ್ತದೆ. ಕಸಪ ಮತ್ತು ನನ್ನಿಗ ಎನ್ನುವ ಇನ್ನೆರಡು

ವೀರರು ಯುದ್ಧದಲ್ಲಿ ಮಡಿದುದರ ಪ್ರಸ್ತಾಪವಿದೆ. ವೀರಗಂಬವನ್ನು ಅಂಕೋಲೆಯ ನಂದಿಓಜನು ಮಾಡಿದರೆ ಕೇಶವನು ಶಾಸನವನ್ನು ಬರೆದಿದ್ದಾನೆ.[4]

ಕ್ರಿ.ಶ. 1079ರ ಎರಡನೆಯ ವೀರಗಂಬ ಶಾಸನವು ದೇವಾಲಯದ ಪ್ರಾಕಾರದ ಎಡಬದಿಯಲ್ಲಿದೆ. ಈ ಶಾಸನದಂತೆ ಪಂಚಮಹಾಶಬ್ದ – ಮಹಾಮಂಡಳೇಶ್ವರ, ಪೊನ್ನಾವರ ಪುರವರಾಧೀಶ್ವರ ಶ್ರೀಮತು ರಾಮದೇವರಸರ ಹೆಗ್ಗಡೆ, ನಾಡಮನೆ ಮತ್ತು ರಾಜಮನೆಯಲ್ಲಿ ಪ್ರಸಿದ್ಧ ವಾಗ್ಮಿಯಾದಂತಹ ಮಾರಸಿಂಗನ ವಿರುದ್ಧ ಅವನ ವೈರಿಗಳು ನಾಗವರ್ಮರಸನ ಕಿವಿಯಲ್ಲಿ ಪಿಸುಮಾತನ್ನು ನುಡಿಯಲು ಸಿಟ್ಟಿಗೆದ್ದ ನಾಗವರ್ಮರಸನು ಮಾರಸಿಂಗನನ್ನು ಕೊಂದನೆಂದು ತಿಳಿದು ಬರುತ್ತದೆ. ಮಾರಸಿಂಗನ ಹೆಸರಲ್ಲಿ ಅವನ ಹೆಂಡತಿಯಾದ ಹೊನ್ನಬ್ಬೆ ಹೆಗ್ಗಡತಿ, ಗೋನು ಮತ್ತು ಮೇರು ಕೂಡಿ ಶಾಸನವನ್ನು ನೆಡಿಸಿದರು. ಹೆಗ್ಗಡೆ ಜೋಗನ ಮಗನಾದ ಹೆಗ್ಗಡೆ ಗೋನುವನ್ನು ಕಾಮದೇವನ ಅಕ್ಕಡಕೆಯ ಹೆಗ್ಗಡೆ ಎಂದು ಹೇಳಲಾಗಿದೆ. ಅಂಕೋಲೆಯ ಲಕ್ಕಣೋಜನ ಅಳಿಯ ನಂದಿಓಜ ವೀರಗಂಬವನ್ನು ಮಾಡಿದನು. ಶಾಸನವನ್ನು ಸೇನುಬೋವ ಮಾರ್ತ್ತಂಡ ಬರೆದನು.[5]

ಮೂರನೆಯ ವೀರಗಂಬವು ದೇವಾಲಯದ ಎದುರುಗಡೆ ಇದೆ. ಪೊನ್ನಾವರ ಪುರವರಾಧೀಶ್ವರ ಶ್ರೀಮತು ಕಾಮದೇವರಸರು ಮತ್ತು ಗೋಕರ್ಮ ಪುರವರಾಧೀಶ್ವರ ಶ್ರೀಮತು ನಾಗವರ್ಮರಸರ ನಡುವೆ ಬಲ್ಲಾಳ ಬಯಲಿನಲ್ಲಿ ನಡೆದು ಕಾಳಗದಲ್ಲಿ ಜಳವಳಿಯ ಬಡಮ್ಮ ನಾಗವರ್ಮ್ಮರಸರ ಕಡೆಯ ಅನೇಕ ಸೈನಿಕರನ್ನು ಕೊಂದು ಜಯಗೆಯ್ದು ಸ್ವರ್ಗಪ್ರಾಪ್ತನಾದನೆಂದು ಈ ಶಾಸನದಿಂದ ತಿಳಿದು ಬರುತ್ತದೆ. ಶಾಸನವನ್ನು ಹಿರಿಯ ಹೆಗ್ಗಡೆ ಹಾಚ ಮಾಡಿಸಿದನು. ಸಂಧಿವಿಗ್ರಹಿ ಹಯವಣ್ಣಯ್ಯ ಶಾಸನವನ್ನು ರೆದನು. ಪೊನ್ನಯ್ಯನು ಈ ಮಾನಸ್ತಂಭವನ್ನು ನೆಟ್ಟನೆಂಬುದು ಇದರ ವಿಷಯ ವಸ್ತು.6

ವಿಶ್ಲೇಷಣೆ

ಈ ಮೇಲಿನ ಎಲ್ಲ ಶಾಸನದ ಕಾಲವನ್ನು ಗಮನಿಸಿದರೆ ಇದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಅಧಿಕಾರಾವಧಿಗೆ ಸೇರಿದ್ದೆಂಬುದು ಸ್ಪಷ್ಟವಾಗುತ್ತದೆ. ಹಾಗಾದರೆ ಇಲ್ಲಿ ಉಲ್ಲೇಖಿತ ಕಾಮದೇವ ಯಾರು? ಯಾವ ವಂಶಜರು ನಾಗವರ್ಮನಿಗೂ, ಕಾಮದೇವನಿಗೂ ನಡೆದ ಯುದ್ಧದ ಹಿನ್ನೆಲೆ ಏನಿರಬಹುದೆಂದು ತಿಳಿಯಬೇಕಾದರೆ ಇದಕ್ಕೆ ಪೂರಕವಾದ ಆಕರಗಳನ್ನು ಪುನರ್‌ವಿಮರ್ಶಿಸುವುದು ಅಗತ್ಯ.

1. ಚಾಲುಕ್ಯ ಆರನೇ ವಿಕ್ರಮಾದಿತ್ಯನ ಮಾಂಡಳಿಕನಾಗಿದ್ದ ಕಾಮದೇವನ ಕ್ರಿಸ. 1112ರ ಬಳ್ಳಿಗಾವಿಯ ಶಾಸನವೊಂದರಲ್ಲಿ7 ಕಾಮದೇವನನ್ನು "ಪಾಂಡ್ಯವಂಶ ಚೂಡಾಮಣಿ", "ಕೊಂಕಣ ರಾಷ್ಟ್ರಪಾಲ", 'ಗೋಕರ್ಣ ಪುರವರಾಧೀಶ್ವರ" ಮೊದಲಾಗಿ ವಿವರಿಸಲಾಗಿದೆ. ಈ ಶಾಸನವು ಇವನ ಪೂರ್ವಜರ ವಿವರಣೆ ಕೊಡುತ್ತ ಅನೇಕ ಪಾಂಡ್ಯ ಅರಸರು ಹೈವೆಯ ಶಿಶುಗಲಿಯಿಂದ ಆಳಿದ ಬಳಿಕ ಚಂದ್ರ (ರಾಣಿ ಕಮ್ಮಲ ದೇವಿ), ಕಾಮದೇವ (ರಾಣಿ ಭಾಗಲದೇವಿ), ಇಮ್ಮಡಿ ಚಂದ್ರ (ರಾಣಿ ಸಾವಲದೇವಿ) ರಾಜ್ಯಭಾರ ಮಾಡಿದ ನಂತರ ಎರಡನೇ ಕಾಮದೇವ ರಾಜ್ಯಭಾರಕ್ಕೆ ಬರುತ್ತಾನೆ. ಈ ಸಂದರ್ಭದಲ್ಲಿ ಇವನನ್ನು ಗೋಕರ್ಣ ಪುರವರಾಧೀಶ್ವರ ಎಂದು ಸಂಬೋಧಿಸಿರುವದರಿಂದ ಗೋಕರ್ಣವು ಇವನ ಇನ್ನೊಂದು ರಾಜಧಾನಿಯಾಗಿರಬೇಕು ಇಲ್ಲವೇ ಇವನು ಇದರ ಅಧಿಕಾರಿಯಾಗಿರಬೇಕೆಂದು ಊಹಿಸಲು ಆಸ್ಪದವಿದೆ. ಶಾಸನದಲ್ಲಿ ಉಕ್ತವಾಗಿರುವ ಶಿಶುಗಲಿಯು ಬಹುಶಃ ಇಂದಿನ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಸಸಿಗುಳಿಯಾಗಿರಬೇಕು.

2. ಹೊನ್ನಾವರದ ಕೋಟೆಯನ್ನು ಗೋವೆಯ ಕದಂಬ ಮೊದಲನೆಯ ಜಯಕೇಶಿ (ಕ್ರಿ.ಶ. 1050–1078) ಕಟ್ಟಿಸಿದನೆಂದು ಹಳದಿಪುರದ ಚಂಡೇಶ್ವರ ದೇಟಾಲಯದ ವೀರಗಂಬ (ಕ್ರಿ.ಶ. 1078) ಶಾಸನದಿಂದ ತಿಳಿದು ಬರುತ್ತದೆ.8 ಇದರಿಂದ ಕ್ರಿ.ಶ. 1078 ಕ್ಕಿಂತ ಪೂರ್ವದಲ್ಲಿ ಈ ಭಾಗ ಗೋವೆಯ ಕದಂಬರ ವಶದಲ್ಲಿತ್ತೆಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಜಯಕೇಶಿಯು ಕಾಮದೇವನೆಂಬ ಅರಸನನ್ನು ಯುದ್ಧದಲ್ಲಿ ಸೋಲಿಸಿದನೆಂಬ ವಿವರಣೆಯನ್ನು ಗೋವೆಯ ಕದಂಬರ ಶಾಸನವು ತಿಳಿಸುತ್ತದೆ.9

3. ಪ್ರಸ್ತುತ ಲೇಖನದಲ್ಲಿಯ ಮೊದಲನೇ ವೀರಗಂಬ (ಕ್ರಿ.ಶ. 1078)10 ಶಾಸನದಿಂದ ತಿಳಿದು ಬರುವಂತೆ ಕಾಮದೇವನ

ಪರವಾಗಿ ಪಡವಳ ನಂದಿ ಮತ್ತು ಪಡವಳ ಬುದ್ಧ ಯುದ್ಧ ಮಾಡಿ ಗೋಕರ್ಣದಲ್ಲಿ ಅಸುನೀಗಿದರು. ಅಂದ ಮೇಲೆ ಕ್ರಿ.ಶ. 1078ಕ್ಕಿಂತ ಪೂರ್ವದಲ್ಲಿ ಗೋಕರ್ಣದ ಸರ್ವಾಧಿಕಾರಿ ನಾಗವರ್ಮರಸನಾಗಿದ್ದ. ಗೋಕರ್ಣವನ್ನು ತನ್ನ ಅಂಕಿತದಲ್ಲಿ ತಂದುಕೊಳ್ಳುವುದಕ್ಕೋಸ್ಕರವಾಗಿ ಕಾಮದೇವ ಪ್ರಯತ್ನವನ್ನು ಮುಂದುವರಿಸುತ್ತಲೇ ಇದ್ದಿರಬೇಕು.

4. ಶಕವರ್ಷ 1002ರ ಶಾಸನದಲ್ಲಿ ಮಾರಸಿಂಗ ಹೆರ್ಗ್ಗಡೆಯನ್ನು ನಾಗವರ್ಮರಸ ಕೊಂದನೆಂದಿದೆ.[11]

5. ಲೇಖನದಲ್ಲಿಯ ಕೊನೆಯ ಶಾಸನ[12] ತಿಳಿಸುವಂತೆ 'ಬಲ್ಲಾಳ ಬಯಲಿ'ನಲ್ಲಿ ನಡೆದ ಯುದ್ಧದಲ್ಲಿ ನಾಗವರ್ಮರಸ ಸೋಲನ್ನು ಅನುಭವಿಸುತ್ತಾನೆ. ಹೊನ್ನಾವರದ ಕೋಟೆ ಪುನಃ ಕಾಮದೇವನ ಕೈಗೆ ಬರುತ್ತದೆ.

ಸಂಶ್ಲೇಷಣೆ

ಈ ಮೇಳಿನ ಶಾಸನಾಧಾರಗಳನ್ನು ಗಮನಿಸಿದಾಗ ಕಾಮದೇವನ ಇತಿಹಾಸವನ್ನು ಈ ಕೆಳಗಿನಂತೆ ವಿವರಿಸಬಹುದು.

ಕೆಕ್ಕಾರ ಮತ್ತು ಹಳದಿಪುರ ವೀರಗಂಬ ಶಾಸನದಲ್ಲಿ ಬರುವ ಪೊನ್ನಾವರ ಪುರವರಾಧೀಶ್ವರ ಕಾಮದೇವನೆ ಬಳ್ಳಿಗಾವೆ ಶಾಸನದಲ್ಲಿ ಉಲ್ಲೇಖಿತ ಶಿಶುಗಲಿ ಪಾಂಡ್ಯವಂಶ ಚೂಡಾಮಣಿ ಇಮ್ಮಡಿ ಕಾಮದೇವನಾಗಿದ್ದಾನೆ. ಈ ಹಿಂದೆ ಪಂಚಮುಖಿಯವರು ಗುರುತಿಸಿದಂತೆ ಇವನು ಚಂದಾವರ ಕದಂಬ ಅರಸ ರಾಮದೇವನಲ್ಲ.[13] ಗೋವೆಯ ಕದಂಬ ಜಯಕೇಶಿಯಿಂದ ನಿಗ್ರಹಿಸಲ್ಪಟ್ಟ ಕಾಮದೇವನು ಇವನೇ. ಬಹುಶಃ ಚಾಲುಕ್ಯ ಇಮ್ಮಡಿ ಸೋಮೇಶ್ವರ ಮತ್ತು ವಿಕ್ರಮಾದಿತ್ಯನ ನಡುವೆ ನಡೆದ ಸಿಂಹಾಸನ ಕಲಹದ ಸಂದರ್ಭದಲ್ಲಿ ಜಯಕೇಶಿ ವಿಕ್ರಮಾದಿತ್ಯನ ಪರವಹಿಸಿದ್ದನು. ವಿಕ್ರಮಾದಿತ್ಯನು ಪಟ್ಟಕ್ಕೇರುವ ಪೂರ್ವದಲ್ಲಿಯೇ ಅವನೊಂದಿಗೆ ಜಯಕೇಶಿಯು ಆಳುಪರು, ಪಾಂಡ್ಯರು ಮತ್ತು ಚೋಳರ ವಿರುದ್ಧ ದಂಡೆಯಾತ್ರೆ ಗೈದನು.[14] ಜಯಕೇಶಿಯು ಅಳುಪರನ್ನು ನಿಗ್ರಹಿಸುವುದಕ್ಕೋಸ್ಕರವಾಗಿ ಹೊನ್ನಾವರದ ಕೋಟೆಯನ್ನು ಕಟ್ಟಿಸಿರಬೇಕು. ಅಳುಪರೊಂದಿಗೆ ಜಯಕೇಶಿಯು ನಡೆಸಿದ ಕದನದಲ್ಲಿ ಕಾಮದೇವನು ಜಯಕೇಶಿಯ ಪರವಹಿಸಿರುವ ಸಾಧ್ಯತೆ ಇದೆ. ಇವನ ಸಹಕಾರ ಪಡೆದುಕೊಂಡ ಜಯಕೇಶಿ ಮತ್ತು ಆರನೇ ವಿಕ್ರಮಾದಿತ್ಯ ಹೊನ್ನಾವರದ ಅಧಿಕಾರವನ್ನು ಕಾಮದೇವನಿಗೆ ಬಿಟ್ಟುಕೊಟ್ಟಿರಬೇಕು. ಇದರಿಂದ ಅವನು ಪೊನ್ನಾವರ ಪುರವರಾಧೀಶ್ವರನಾದನು.

ಗೋಕರ್ಣದಲ್ಲಿ ಆಳುತ್ತಿದ್ದ ನಾಗವರ್ಮನು ಒಬ್ಬ ಪ್ರಬಲ ಅರಸನಾಗಿದ್ದನು. ಇವನು ಹೊನ್ನಾವರದ ಕೋಟೆಯನ್ನು ಕ್ರಿ.ಶ. 1079ರಲ್ಲಿ ವಶಪಡಿಸಿಕೊಂಡಿದ್ದನು. ಇವನ ಕುರಿತಾಗಿ ಇನ್ನಿತರ ಕೆಲವು ಶಾಸನಗಳು ಮಾಹಿತಿ ಒದಗಿಸುತ್ತವೆ. ಅವುಗಳಲ್ಲಿ ಹಾವೇರಿಯ ಗಳಗನಾಥದಲ್ಲಿರುವ[15] ಕ್ರಿ.ಶ. 1080ರ ಶಾಸನದ ಪ್ರಕಾರ ಮಹಾಮಂಡಳೇಶ್ವರ ಚನ್ನರಸನು ಹೈವೆಯ ನಾಗವರ್ಮನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ಪಡೆದಿದ್ದನೆಂದಿದೆ. ಶಕವರ್ಷ 1035 (ಕ್ರಿ.ಶ. 1113)ರ ಬಾವಿಕೇರಿಯ ವೀರಗಂಬ ಶಾಸನವು ಮಹಾಮಂಡಳೇಶ್ವರ ನಾಗವರ್ಮನ ವಿಷಯವಾಗಿ ಪ್ರಸ್ತಾಪಿಸುತ್ತದೆ. ಕ್ರಿ.ಶ. ಸು. 12ನೇ ಶತಮಾನದ ಕಡಬಾಲ[17] ಶಾಸನದ ಪ್ರಕಾರ ಮಹಾಮಂಡಳೇಶ್ವರ ಜೊಕ್ಕಿದೇವರಸನು ಹೈವೆಯ ನಾಗವರ್ಮರಸನ ವಿರುದ್ಧ ದಂಡಯಾತ್ರೆಗೈದಾಗ ಈ ಯುದ್ಧದಲ್ಲಿ ಕಾಳಾಚಾರಿ ಬರ್ಮನ ಮಗನಾದ ಕೋಟಿಗನು ಅಸುನೀಗಿದನು. ಈ ಮೇಲಿನ ಗಳಗನಾಥ, ಬಾವಿಕೇರಿ, ಕಡಬಾಲ ಶಾಸನದಲ್ಲಿ ಹೇಳಿರುವ ನಾಗವರ್ಮನೇ ಹಳದಿಪುರ, ಕೆಕ್ಕಾರ ವೀರಗಂಬ ಶಾಸನದಲ್ಲಿ ಬರುವ ನಾಗವರ್ಮರಸನಾಗಿರಬೇಕು. ಅಂದಮೇಲೆ ಕ್ರಿ.ಶ. ಸು. 1040 ರಿಂದ ಕ್ರಿ.ಶ. ಸು. 1112ರ ವರೆಗೆ ಇವನ ಆಡಳಿತ ವೈಖರಿ ಈ ಭಾಗದಲ್ಲಿ ಚುರುಕಾಗಿಯೇ ಇತ್ತೆಂದು ಹೇಳಬಹುದು.

ಹೈವೆಯ ಮೇಲಿನ ಸಂಪೂರ್ಣ ಅಧಿಕಾರಕ್ಕಾಗಿ ಕಾಮದೇವ ಮತ್ತು ನಾಗವರ್ಮರಲ್ಲಿ ಯುದ್ಧ ತೀವ್ರಗತಿಯಲ್ಲಿ ಮುಂದುವರಿಯುತ್ತಲೇ ಇತ್ತು. ಕ್ರಿ.ಶ. 1079ರಲ್ಲಿ ನಡೆದ ಬಲ್ಲಾಳ ಬಯಲಿನ ಯುದ್ಧದಲ್ಲಿ ನಾಗವರ್ಮನಿಗೆ ಸೋಲುಂಟಾಗಿ ಕಾಮದೇವನು, ಕೈತಪ್ಪಿಹೋಗಿದ್ದ ಹೊನ್ನಾವರದ ಕೋಟೆಯನ್ನು ವಶಪಡಿಸಿಕೊಂಡನು. ನಂತರ ನಾಗವರ್ಮರಸನ ವಿಷಯವಾಗಿ ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ನಾಗವರ್ಮ ಬದುಕಿರುವವರೆಗೆ ಕಾಮದೇವನಿಗೆ ಗೋಕರ್ಣವನ್ನು ಜಯಿಸಲಿಕ್ಕೆ ಸಾಧ್ಯವಾಗಲಿಲ್ಲ 'ಗೋಕರ್ಣ ಪುರವರಾಧೀಶ್ವರ' ಎಂಬ ಬಿರುದನ್ನು ಕಾಮದೇವ ಧರಿಸುವ ಹೊತ್ತಿಗೆ ನಾಗವರ್ಮ ಆಗಲೇ ತನ್ನ ಆಡಳಿತದಿಂದ ನಿರ್ಗಮಿಸಿರಬೇಕು.

ಶಾಸನ ಸಂಖ್ಯೆ–1

ಅಮ್ಮನವರ ದೇವಾಲಯದ ಪ್ರಾಕಾರದಲ್ಲಿರುವ ವೀರಗಂಬ ಶಾಸನ, ಶಕ. 1000

ಶಾಸನದ ಪಾಠ

1. ಶ್ರೀ ಜಳವಳಿ
2. ಯ ಚಂದ್ರನ ಕೇಶವಂ ಬರೆದ
3. ಅವನ ತಟಿಜಿನ ಬೆನ್ನಂ ಕಾದು
4. ತಟಿಜಿ ಹಾಚಂ ಕಾದಂ ಆ–
5. ಚಂದ್ರಾರ್ಕ್ಕತಾರಂಬರಂ ॥
6. ಸ್ವಸ್ತಿ ಸಮ–
7. ಧಿಗತ ಪಂಚಮಹಾ –
8. ಶಬ್ಧ ಮಹಾಸಾಮ–
9. ನ್ತಾಧಿಪತಿ ಮ–
10. ಹಾ ಪ್ರಚಣ್ಡ ದ–
11. ಣ್ಡನಾಯಕ ನಾ
12. ಸ್ಥಾನವ (ಸ)
13. ನಾಯಕಿಂ (ತಿ)
14. ಯಾಗಿಯ ಗಂಡ
15. ರಾಯಣಂ ಶ್ರೀಮದುಗ–
16. (ರಾ) ಜ ಗೋಮಿಗನ ಮಾವಂ
17. ಪಡವಳ ನಂದಿ ಬೀರರ ಬೀರ
18. ನನ್ನೆಯ ವರ್ಜಿತ ತೇಜ
19. ಚಾಗಸಯಂ. ಮಾತ್ತ
20. ಲೆ ಸಿಂಘಂ ಸಂಗ್ರಾಮಗ–
21. ರುಡಂ ಕೀರ್ತ್ತಿವಿಖ್ಯಾತಂ
22. ಶ್ರೀಮತು ಪಡವಟಿ ನಂ–
23. ದಿ ಗೋಕರ್ಣದಲ್ಲಿ
24. ಸತ್ತ ತೆತ್ತ ನಾ–
25. ಟ್ದಿ (ತು)ಣ ಮಂ ನಂದಿ–
26. ಯ ಮರ್ಮ್ಮಂ ಪಡೆವ–
27. ಟಿ ಬುದ್ಧನ ವೀರಪ–
28. ರಾಕ್ರಮ ಮೆಂತೆಂದೆಡೆ–
29. ಚಲಕೆ ಬಲುಗಣ್ಡಂ
30. ನ (ಪಂಚಗೋ) ತ್ತತ್ತಿ(?)
31. ವೀರಂ ನುಡಿದಂತೆ ಗಂ–

32. ಣ್ಡಂ ಶರಣಾಗತ
33. ವಜ್ರ ಪಂಜರಂ ಭು–
34. ಜಬಲ ವೀರ್ಯ–
35. ಪರಾಕ್ರಮಮಂ ಶ್ರೀಮತುಪ
36. ಡೆವಳ ಬುದ್ಧಂ ಸಖವ–
37. ರ್ಷಂ ಸಾಸಿರದಂದು ಪ–
38. ಡೆವಳ ಬುದ್ದಂ ಕಾಲವ–
39. ಶವನೆಯಿಂದಂ (1*) ಬುದ್ದನ
40. ಮರ್ಮಂ ಪಡೆವಳ ಹಾಚ–
41. ನ ವೀರ ಪರಾಕ್ರಮ ಮೆಂ–
42. ತೆಂದೆಡೆ/ ಕಡತೋಕೆಯ
43. ರಕ್ಷಪಾಲಂ ವೀರಲಕ್ಷ್ಮೀ ಕಾನ್ತಂ
44. ಪುಜೆಗೆವರ ಕಾವಂ ಕೂರದ
45. ವೈರಿಗಟಿ ಬೇರಂ ಕಿರ್ತ್ತಿತ್ತವಂಪ
46. ಗಮುಳಗಣ್ಡ (ನಾ) ಳಂ
47. ಮುಂನಿಜಿವಂ ಕಾವದೇ–
48. ವನ ಕಟ್ಟಿದಲಗು ಶ್ರೀಮ (ತು*)
49. ಪಡೆವಳ ಹಾಚನುಂ ಬೋಗೊ–
50. ಲಿಗನುಂ ಪೈವೆ ತೆಂಕಲು ಕೊಂ–
51. ಕಣಂ ಬನವಾಸಿಯಜೆಯೆ
52. ಪಗೆಯನಿಜಿದ ಪಡೆವಳ
53. ಬುದ್ದಂಗೆ ಸಕ(ವ)ರ್ಷಂ 1000 ದಂದು.
54. ಕಲ್ಲ ನಿಕ್ಕಿಸಿದರು । ಕಸಪಂ
55. ನನ್ನಿಗನುಂ ಕಳಿಯಲ್ಲತ್ತರು
56. ಅಂಕೋಲೆಯ ನಂದಿ ಓಜಂ
57. ಮಾಡಿದಂ ಚಂದ್ರನ ಕೇ–
58. ಶವನ ತಳಜಿ
59. ನ ಬಿನ್ನವಂ ತಳ
60. ಜಿಂ ಹಾಚಂ ಕಾದಂ ಅಚಂ–
61. ದ್ರಾರ್ಕ್ಕ ತಾರಂಬರಂ
62. ಕೇಶವಂ ಬರೆದಂ.

ಶಾಸನಸಂಖ್ಯೆ–2

ಅಮ್ಮನವರ ದೇವಾಲಯದ ಪ್ರಾಕಾರದಲ್ಲಿರುವ ವೀರಗಂಬ ಶಾಸನ, ಶಕ, 1002)

ಶಾಸನದ ಪಾಠ

1. ಸ್ವಸ್ತಿ(1*) ಶ್ರೀ ಮತು
2. ಸಖವರಿಸಂ ಸಾಸಿ–
3. ರದೆರಡನೆಯ
4. ಸಿದ್ಧಾರ್ತ್ಥಿ ಸಂ
5. ತ್ಸರದ ಸ್ವದೆ ಸು–
6. ದ್ಧ ಪಂಚಮಿ ವಡ್ಡ (ವಾ)
7. ರ ದಂದು ಸಮಧಿ (ಗ)
8. ತ ಪಂಚಮಹಾಸ (ಬದ್ಧ)
9. ಪೊನ್ನವುರ ಪುರ (ವ)
10. ರಾಧೀಶ್ವರ ಕಾಮ–
11. ದೇವರಸರ ಹೆರ್ಗ್ಗ (ಡೆ)
12. ಮಾರಷಿಂಗನ
13. ದ ರ್ಷ್ವಭಮಂ ಪೇ–
14. ಳುವಡೆ (ನ್ತುದಿಸಿ?)–
15. ತಪ್ಪ (ನಿ?) ಕರ
16. ಕೇಳುಗಂಡ ಭುಜ–
17. ಬಳವೀರ್ಯ್ಯ ಗೋತ್ರಪ–
18. ವಿತ್ರ ಚಲದಂ(ಕ*) ಕಾಱಂ
19. ಮತ್ತಮಾತನ ಪ್ರ
20. ತಾಪಮಂ ಪೇಳ್ವಡೆ
21. ನಾಡಮನೆಯಲು–
22. ವರಮನೆಯಲು ತ–
23. ನ್ನೆಂದ ಮಾತಲ್ಲದೆ ಪೆಱ–
24. ರಮಾತುಗಳಂ ಸಲಲೀ–
25. ಯ ರಾಜಸಭೆ, ಬ್ರಹ್ಮ–
26. ಸಭೆಯಲ್ಲಾತನಕ್ಕು–
27. ವೆಂದುದಕ್ಕು
28. ವಾಗದದು (ವಾ)–
29. ಗದೆಂತೆಂದೆಡೆ ಅತ
30. ನಾಡಲು ಬಲ್ಲಿದಮಾ
31. ನಸನಂಬುದ ನಜೆ–
32. ದು ನಾಡಮಾನಸರಾ–
33. ತನಮೇಲೆ ದುಷ್ಟ ಕ–
34. ಷ್ಟರು ಪಿಸುಣಂ ನು–

35. ಡಿಯೆ ಪಿಸುಣಂ ನಾ–
36. ಗವರ್ಮರಸರು
37. ಕೇಳ್ದು

ಎರಡನೆಯ ಮುಖ

38. ಆತನಂ ನಾಗವರ್ಮ್ಮರಸ–
39. ರು ಕೊಂದರಾತಂ ಸ್ವರ್ಗ್ಗಪ್ರಾಪ್ತ–
40. ನಾದಂ ಕೆಕ್ಕಾರ ಗೆಲ್ಲುಗನ ನಂ–
41. ನಿಗನ ಮಗ ಬೆ–
42. ಣ್ಣೆಗನ ಬಳಿಯ
43. ಮಾರಸಿಂಗ ವೆರ್ಗ್ಗಡೆಗಿಕ್ಕಿ–
44. ದ ಸಾಸನ (0) ಆತನ ವ (ಧು)
45. ಹೊನ್ನಬ್ಬೆವೆರ್ಗ್ಗಡಿತಿಯ
46. ಗೋನುವ ಮೇರುವ ಯಿಂತೀ
47. ಮೂವರ ಮಾಡಿಸಿದ ಕ–
48. ಲ್ಲು ಅಂಕೋಲೆಯ ಪುಟ್ಟಿದ
49. ಲಕ್ಕಗೋಜನಳಿಯ ನಂ–
50. ದಿಯೋಜನ ಮಾಡಿದ ಕ–
51. ಲ್ಲು (ಮನುಪಮ)–
52. ಚರಿಪವಿದ್ಯಾ
53. ವನ್ತ(ರ) ಮಾಗಂ ಕೆಯ್ವಲ್ಲಿ
54. ಮತ್ತ ಹೆಗ್ಗಡೆ ಜೋಗನ
55. ಮರ್ಮ್ಮಂ ಮಾರಸಿಂಗವೆ–
56. ಗ್ಗ್ಗಡೆಯ ಮಗ ಮತ್ತ
57. ಸಮಸ್ತ ಪೊನ್ನ–
58. ವುರ ಪುರವರಾ–
59. ಧೀಸ್ವರ ಕಾಮದೇ–
60. ವರಸರಕ್ಕಡಿಕೆ
61. ಯ ಹೆಗ್ಗಡೆ ಗೋ–
62. ನು ಮಾಡಿಸಿದ ಕಲ್ಲು (1*) ಬ–
63. ರೆದಂ ಸೇನಬೋವ ಮಾ–
64. ರ್ತ್ತಣ್ಣ ಸಾಯಿರ ವ–
65. ರ್ಸ್ವ ಬಾಳ್ಗೆ॥

ಶಾಸನ ಸಂಖ್ಯೆ–3

ಅಮ್ಮನವರ ದೇವಾಲಯದ ಎದುರುಗಡೆ ಇರುವ ವೀರಗಂಬ ಶಾಸನ.

ಶಾಸನದ ಪಾಠ

1. ಸ್ವಸ್ತಿ ಸಮಧಿ–
2. ಗತ ಪಂಚಮ–
3. ಹಾಶಬ್ದ ಮಹಾ–
4. ಮಂಡಳೇಸ್ವ ರಂ
5. ಪೊನ್ನಾವು
6. ರ ಪುರವರಾ–
7. ಧೀಸ್ವರಂ ಶ್ರೀ.
8. ಮತು ಕಾಂವ–
9. ದೇವರಸರುಂ ಗೋಕ–
10. ರ್ಣ್ನಪುರವರಾಧೀ–
11. ಸ್ವರಂ ಶ್ರೀಮತು
12. ನಾಗವರ್ಮ್ಮರಸ–
13. ರುಂವೀರ್ವ್ವರುಂ ಬಲ್ಲಾ–
14. ಳ ಬಯಲಲು ಬಿ–
15. ಟ್ಟು ಒಡ್ಡೊಡ್ಡಿ ಕಾ–
16. ಳೆಗಂ ಕಾದಿದಲ್ಲಿ
17. ಜಳೆವಳಿಯ ಬಡಮ್ಮ
18. ನಾಗವರ್ಮ್ಮರಸರಾಳ ಪ–
19. ಲರನಿಜಿದು ಜಯಂಗೆ–
20. ಯ್ದು ಪರಲೋಕ ಪ್ರಾಪ್ತ–
21. ನಾದ (1*) ಅವರ ಬಳಿ–
22. ಯ ಬಲ್ಮಾನಸ ಪಿರಿ–
23. ಯ ಹೆರ್ಗ್ಗಡೆ ಹಾಚ–
24. ನುಂ ಮಾಡಿದ ಶಾ–
25. ಸನಂ (1*) ಬರೆದಂ ಸನ್ಧಿ–
26. ವಿಗ್ರಹಿ ಹಇವ–
27. ಣಯ್ಯ (1*) ಮಾಡಿದಂ
28. ಪೊನ್ನೆಯರಸನು (1*) ನಡೆ–
29. ಯಿಸಿದ ಮಾಸ್ತಂಬ
30. (ಮಂ) ಅಯ್ತವಮ್ಮಂ (11*)

ಅಡಿಟಿಪ್ಪಣಿಗಳು

1. ಪ್ರೊಗ್ರೆಸ್ಸ ರಿಪೋರ್ಟ ಆಫ್ ಕನ್ನಡ ರೀಸರ್ಚ್ ಇನ್ ಬೊಂಬೇ ಪ್ರೊವ್ಹಿನ್ಸ 1941–1946. ಪುಟಗಳು 6–7, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
2. ಗಣಪತಿ ಗೌಡ ಎಸ್., "ಎರಡನೆ ಕಾಮದೇವನ ಕಾಲದ ಚಂಡೇಶ್ವರ ವೀರಗಲ್ಲು ಶಾಸನ", ಕರ್ನಾಟಕ ಭಾರತಿ, ಸಂ. 23/2, ಪು. 6–13, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1990.
3. ಲೇಖನದಲ್ಲಿಯ ಶಾಸನದ ಪಾಠ ಗಮನಿಸಿ.
4. ಅದೇ, ಮೊದಲನೆಯ ಶಾಸನ.
5. ಅದೇ, ಎರಡನೆಯ ಶಾಸನ.
6. ಅದೇ, ಮೂರನೆಯ ಸಾಸನ.
7. ಎಪಿಗ್ರಾಫಿಯ ಕರ್ನಾಟಿಕಾ (ಹಳೆಯದು), ಶಿಕಾರಿಪುರ, 99, ಪುಟಗಳು 66–67.
8. ಗಣಪತಿ ಗೌಡ್ ಎಸ್., "ಎರಡನೆ ಕಾಮದೇವನ ಕಾಲದ ಚಂಡೇಶ್ವರ ವೀರಗಲ್ಲು ಶಾಸನ", ಕರ್ನಾಟಕ ಭಾರತಿ, ಸಂ. 23/2, ಪು. 6–13, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1990.
9. ಗೋಪಾಲ್ ಬಿ.ಆರ್., ಮೈನರ್ ಡೈನಾಸ್ಟೀಸ್ ಆಫ್ ಸೌತ ಇಂಡಿಯಾ (ಕರ್ನಾಟಕ), ಪುಟಗಳು 52–53.
10. ಲೇಖನದಲ್ಲಿಯ ಮೊದಲನೆ ಶಾಸನ ಸಾಲುಗಳು, 22–28.
11. ಅದೇ, ಎರಡನೇ ಶಾಸನ, ಸಾಲುಗಳು, 12–39.
12. ಅದೇ, ಮೂರನೆಯ ಶಾಸನ ಸಾಲುಗಳು, 12–15.
13. ಪ್ರೊಗ್ರೆಸ್ಸ್ ರಿಪೋರ್ಟ್ ಆಫ್ ಕನ್ನಡ ರಿಸರ್ಚ ಇನ್ ಬಾಂಬೇ ಪ್ರಾವ್ಹಿನ್ಸ, 1941–46, ಪುಟಗಳು 6–7, ಕನ್ನಡ ಸಂಶೋಧನ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
14. ಗೋಪಾಲ ಬಿ.ಆರ್., ಮೈನರ್ ಡೈನಾಸ್ಟೀಸ್ ಆಫ್ ಸೌತ್ ಇಂಡಿಯಾ (ಕರ್ನಾಟಕ), ಪು. 34.
15. ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್, ಸಂಪುಟ 18, ಶಾ.ಸಂ. 88, ಸಾಲುಗಳು 48–52
16. ಅನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಎಪಿಗ್ರಫಿ, 1949–50, ಶಾ.ಸಂ. 133
17. ಅನ್ಯುಯಲ್ ರಿಪೋರ್ಟ ಆಫ್ ಸೌತ್ ಇಂಡಿಯನ್ ಎಪಿಗ್ರಫಿ, 1939–40, ಶಾ.ಸಂ. 39

❑

ಸೋದೆ ಅರಸರ ಕಾಲದ ವನದುರ್ಗ, ಜಲದುರ್ಗ ಮತ್ತು ಗಿರಿದುರ್ಗ – ಒಂದು ಟಿಪ್ಪಣಿ

– ಎಂ.ಜಿ. ವಾರಿ

ಈ ಸೋದೆ ಅರಸರು 16, 17 ಮತ್ತು 18ನೆಯ ಶತಮಾನದಲ್ಲಿ ಈಗಿನ ಉತ್ತರ ಕನ್ನಡದ ಬಹುಭಾಗ ಮತ್ತು ಗೋವೆಯ ದಕ್ಷಿಣ ಭಾಗ ಇವನ್ನು ಆಳುತ್ತಿದ್ದ ಒಂದು ಚಿಕ್ಕ ಪಾಳೆಯಗಾರರಾಗಿದ್ದರು. ಈ ಸೋದೆಯನ್ನೇ ರಾಜಧಾನಿಯಾಗಿ ಮಾಡಿಕೊಂಡು ಸಮಗ್ರವಾಗಿ ಎರಡು ಶತಮಾನಗಳವರೆಗೆ ಒಟ್ಟು ಎಂಟು ಅರಸರು[1] ಆಳ್ವಿಕೆ ನಡೆಸಿದುದು ಕಂಡುಬರುತ್ತದೆ. ಕ್ರಿ.ಶ. 1680ಕ್ಕೂ ಪೂರ್ವದಲ್ಲಿ ಇವರ ರಾಜ್ಯ ಘಟ್ಟದ ಮೇಲ್ಭಾಗಕ್ಕೆ ಅಂದರೆ ಶಿರಸಿ, ಸೂಪಾ, ಯಲ್ಲಾಪುರ, ಹಳಿಯಾಳಗಳನ್ನುಳ್ಳ (ಸಾಗರ ಮತ್ತು ಸೊರಬ ತಾಲ್ಲೂಕಿನ ಕೆಲವು ಭಾಗಗಳೂ ಸೇರಿ) ಈ ಪ್ರದೇಶಕ್ಕೆ ಸೀಮಿತಗೊಂಡಿತ್ತು. ಕ್ರಿ.ಶ. 1680ರ ನಂತರ ಇಮ್ಮಡಿ ಸದಾಶಿವರಾಯನು (ಕ್ರಿ.ಶ. 1680 ರಿಂದ 1718) ಘಟ್ಟದ ಕೆಳಕ್ಕೂ ತನ್ನ ರಾಜ್ಯವನ್ನು ವಿಸ್ತರಿಸಿದನು. ಹಾಗೆಯೇ ಈತನು ಐರೋಪ್ಯ ವ್ಯಾಪಾರಿಗಳೊಂದಿಗೆ ವ್ಯಾಪಾರ ವಹಿವಾಟಿನ ಸ್ಪರ್ಧಾತ್ಮಕ ಕಣದಲ್ಲಿ ನೇರವಾಗಿ ಇಳಿಯುವ ಮೂಲಕ ಕೈಕೈ ಮಿಲಾಯಿಸಿದನು ಎನ್ನಬಹುದು.[2]

ಹೀಗೆ ಈ ಸೋದೆ ಅರಸರ ಇರುವಿಕೆಯ ಕಾಲ ಮತ್ತು ಪ್ರದೇಶ ವಿಶಿಷ್ಟವಾದುದಾಗಿದೆ. ಅಂದರೆ ಕ್ರಿ.ಶ. 1555 ರಿಂದ 1660ರವರೆಗೆ ಇವರ ರಾಜ್ಯ ಘಟ್ಟದ ಮೇಲೆಯೇ ಸೀಮಿತಗೊಂಡಿತ್ತು. ಆಗ ಬಹುವಾಗಿ ವಿಜಾಪುರದ ಆದಿಲ್‌ಸಾಹಿಗಳಿಗೆ ಈ ಅರಸರು ಬಾಗಿಕೊಂಡಿದ್ದರು. ವಾರ್ಷಿಕ ಕಪ್ಪಕಾಣಿಕೆಗಳನ್ನು ಸಲ್ಲಿಸುವುದು, ತದನಂತರ ಬಹುಮಟ್ಟಿಗೆ ಕಲ್ಲಾಬಿಲ್ಲಿಗೊಳ್ಳದ ರಾಜಕೀಯ ಜೀವನ ಅವರದಾಗಿತ್ತು. ಅಲ್ಲಿಯವರೆಗೆ ಈ ರಾಜ್ಯದ ರಾಜಕೀಯ ಮತ್ತು ಸಾಮಾಜಿಕ ಜೀವನ ಸಾಂಪ್ರದಾಯಿಕ ಸಮುದಾಯ ಜೀವನದೊಂದಿಗೆ ಸೇರಿ ಹೋಗಿತ್ತು. ಆದರೆ 1670ರ ನಂತರ ವಿಜಾಪುರದ ಪತನವಾಗಲಾರಂಭಿಸಿತು. ಕ್ರಿ.ಶ. 1686ರಲ್ಲಿಯ ಔರಂಗಜೇಬನ ದಾಳಿಯು ವಿಜಾಪುರದ ಆದಿಲ್‌ಶಾಹಿಗಳನ್ನು ಸಂಪೂರ್ಣ ಮಣ್ಣುಗೊಡಿಸಿದರೆ ಮರಾಠರನ್ನು ಬಹುಪಾಲು ನಿಸ್ಸತ್ವಗೊಳಿಸಿತು. ಇಂಥ ಅವಸ್ಥೆಯಲ್ಲಿ ಈ ಸೋದೆ ಅರಸರು ಇಂಗ್ಲೀಷರೊಂದಿಗೆ ಅತ್ಯಂತ ಗಾಢ ವೈರತ್ವದಿಂದ ನೇರ ಗುದ್ದಾಟದ ರಂಗಕ್ಕಿಳಿದಿದ್ದರು. ಇದೊಂದು ಆ ಕಾಲದ ಸೋದೆ ಅರಸರ ರಾಜಕೀಯ ಪರಿಸರದ ಸ್ಥೂಲ ಚಿತ್ರವಾಗಿದೆ. ಹೀಗಿರುವಾಗ ಇಂಥ ಪರಿವರ್ತಿತ ಅವಸ್ಥೆಯಲ್ಲಿ ಕಾಲಿಟ್ಟ ಈ ಸೋದೆ ಅರಸರ ಕಾಲದ ಕೋಟೆಗಳ ಒಂದು ಅವಲೋಕನದಿಂದ ಆ ರಾಜರ ಏಳುಬೀಳಿನ ಜೊತೆಗೆ ಕ್ರಮಿಸಿ ಬಂದ ಚಿತ್ರಗಳು ಕಣ್ಮುಂದೆ ನಿಲ್ಲಿಸಿದಂತಾಗುತ್ತದೆ.

ಸೋದೆ ಅರಸರ ಆಡಳಿತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವಕೋಟೆಗಳ ರಚನಾ ಕಾಲವನ್ನವಲಂಬಿಸಿ ಎರಡು ರೀತಿ ವಿಭಾಗಿಸಬಹುದೆಂದು ತೋರುತ್ತದೆ.

1. ಈ ಸೋದೆ ಅರಸರಿಗಿಂತ ಪೂರ್ವದಲ್ಲೇ ಅಂದರೆ ಬೇರೆ ಅರಸರ ಅವಧಿಯಲ್ಲಿ ಅಥವಾ ಬೇರೆ ಅರಸು ಮನೆತನದ ದಂಡಾಧಿಕಾರಿಯಿಂದ ರಚಿತವಾಗಿರುವ ಕೋಟೆಗಳು. ಅ) ಉದಾಹರಣೆಯಾಗಿ ಇಲ್ಲಿ ಕರೂರು ಮತ್ತು ಇಸಳೂರು ಕೋಟೆಗಳನ್ನು ಹೆಸರಿಸಬಹುದು. ಇವು ವಿಜಯನಗರ ಮತ್ತು ವಿಜಯನಗರ ಪೂರ್ವದಲ್ಲಿ ರಚಿತವಾಗಿರುವ ಕೋಟೆಗಳಾಗಿವೆ. ಬ) ವಿಜಾಪುರದ ಆದಿಲ್‌ಶಾಹಿಗಳ ಕಾಲಾವಧಿಯಲ್ಲಿ ಅಂದರೆ ಕಾರವಾರ ಅಂಕೋಲಾ ಭಾಗಗಳಲ್ಲಿ ಅವರ ದಂಡಾಧಿಕಾರಿಯಾದ

ಶರೀಫ–ಉಲ್–ಮುಲ್ಕ್‌ರಿಂದ ರಚಿತವಾಗಿರುವ ಕೋಟೆ ಕೊತ್ತಳೆಗಳು.1 ಅಂಕೋಲಾ ಕೋಟೆ ಮತ್ತು ನಂದ್ವಾಲ್ ಕೋಟೆಗಳ ರಚನೆಗೆ ಈತನೇ ನೇರವಾಗಿ ಕಾರಣನಾದರೆ ಕದ್ರಾ ಮತ್ತು ಕಾರವಾರದ ವೇಜಿಗುಡ್ಡದ ಮೇಲಿರುವ ಕೋಟೆಗಳು ಈತನ ಕಾಲಾವಧಿಯಲ್ಲಿ ರಚಿತವಾದವೆಂದು ಹೇಳಬಹುದಾಗಿದೆ.

ಇಲ್ಲಿಯ ಕರೂರು, ಇಸಳೂರು ಮತ್ತು ಅಂಕೋಲಾದ ಕೋಟೆಗಳು ಸೋದೆ ಅರಸರ ಕಾಲದಲ್ಲಿ ನವೀಕರಣಗೊಂಡಂತೆ ತೋರುವುದು.

2. ಸೋದೆ ಅರಸರ ಆಳ್ವಿಕೆಯ ಕಾಲಾವಧಿಯಲ್ಲಿ ರಚನೆಗೊಂಡಿರುವ ಕೋಟೆಗಳು. ಉದಾಹರಣೆಗೆ ಸೋದೆಯ ಮೂರು ಸುತ್ತಿನ ಕೋಟೆಗಳು, ಶಿರಸಿಯ ಚನ್ನಪಟ್ಟಣದ ಕೋಟೆ, ಸಾಂಬ್ರಾಣಿ ಕೋಟೆ, ಕೊಂಕಿ ಕೋಟೆ, ಕಾರವಾರದ ಸುತ್ತಮುತ್ತಲಿರುವ ಅಂಗಡಿ4, ಶಿವೇಶ್ವರದ ಕೋಟೆಗಳು, (ಪೀರಗುಡ್ಡದ ಎದುರಿಗಿರುವ ಗುಡ್ಡದ ಮೇಲಿರುವ) ಸದಾಶಿವಗಡದ ಕೋಟೆ, ಕೂರ್ಮಗಡ ಕೋಟೆ, ಕಾಣಕೋಣ ಕೋಟೆ ಇತ್ಯಾದಿಗಳು.

ಹಾಗಲ್ಲದೆ ಈ ಎಲ್ಲ ಕೋಟೆಗಳ ರಚನಾ ವಿನ್ಯಾಸ ಅಥವಾ ಅವುಗಳ ಸುತ್ತಲಿನ ಭೂ ಪರಿಸರದ ವಿನ್ಯಾಸ ಇವನ್ನವಲಂಬಿಸಿ ನಮ್ಮ ಪ್ರಾಚೀನರು ಹಲವು ರೀತಿ ವಿಭಾಗಿಸಿರುವುದುಂಟು. ಆದರೆ ಅದರಲ್ಲಿ ಎಲ್ಲರೂ ಒಪ್ಪಿರುವ ಅಥವಾ ಒಪ್ಪಿ ಅನುಕೂಲಕರವಾಗಿ ವಿಭಾಗಿಸಿ ಅವಲೋಕಿಸಲು ಸಾಧ್ಯವಾಗಿರುವ ಮೂರು ವಿಧಾನಗಳೆಂದರೆ – ವನದುರ್ಗ, ಜಲದುರ್ಗ ಮತ್ತು ಗಿರಿದುರ್ಗಗಳೆನ್ನುವ ವಿಭಾಗಗಳ ಕ್ರಮವಾಗಿದೆ. ಈ ನಿಟ್ಟಿನಿಂದ ಈ ಸೋದೆ ಅರಸರ ಕಾಲಾವಧಿಯ ಕೋಟೆಗಳನ್ನು ವೀಕ್ಷಿಸಲು ತುಂಬ ಕುತೂಹಲವನ್ನು ತುಂಬುತ್ತದೆ ಎನ್ನಬಹುದು.

೧) ಜಲದುರ್ಗ : ಸೋದೆಯ ಮೂರನೇ ಸುತ್ತಿನ ಕೋಟೆ, ಕಾರವಾರದ ಅಂಗಡಿಕೋಟೆ, ಸದಾಶಿವಗಡ ಕೋಟೆ, ಕೂರ್ಮಗಡಕೋಟೆ, ಕಾಣಕೋಣಕೋಟೆ, ೨) ವನದುರ್ಗ : ಸೋದೆಯ ಮೊದಲ ಸುತ್ತಿನ ಕೋಟೆ, ಶಿರಸಿಯ ಕೋಟೆ, ಕರೂರು ಕೋಟೆ, ಇಸಳೂರು ಕೋಟೆ, ಸಾಂಬ್ರಾಣಿ ಕೋಟೆ, ೩) ಗಿರಿದುರ್ಗ : ಕೊಂಕಿಕೋಟೆ.[5]

ಇಷ್ಟಾದರೂ ಈ ಕೋಟೆಗಳನ್ನು ಇದೆ ವರ್ಗಕ್ಕೆ ಸೇರುತ್ತದೆ ಎಂದು ಗೆರೆಕೊರೆದು ವಿಭಾಗಿಸಲಾಗದು ಎನ್ನಬೇಕು. ಏಕೆಂದರೆ ಸೋದೆಯ ಕೋಟೆ, ಸದಾಶಿವಗಡ ಕೋಟೆ ಮತ್ತು ಕೂರ್ಮಗಡಕೋಟೆ – ಇವುಗಳ ಸುತ್ತಲಿನ ಭೂ ಆವರಣ ವಿಶಿಷ್ಟವೆನಿಸಿದೆ. ಸೋದೆಯ ಒಳಕೋಟೆ ಅಂದರೆ ಮೊದಲ ಸುತ್ತಿನ ಕೋಟೆಯು ಈಗಿನ ವಾದಿರಾಜ ಮಠದ ಹತ್ತಿರ ಇದೆ. ಸುಮಾರು 3–4 ಎಕರೆಯಷ್ಟು ವೈಶಾಲ್ಯವನ್ನು ಹೊಂದಿದೆ. ಸುತ್ತಲೂ ಕಂದಕಗಳಿಂದ ಆವೃತಗೊಂಡಿದೆ. ಈ ಕಂದಕ ಮುಳ್ಳು ಕಂಟಿಗಳಿಂದ ಇಡಿಕಿರಿದಿದೆ. ಮಳೆಗಾಲದಲ್ಲಿ ನೀರಿನಿಂದ ಆವೃತವಾದ ಅಗಳ್ತವಾಗಿ ತೋರುತ್ತದೆ. ಅಂದರೆ ವನ ದುರ್ಗವೆನಿಸಿದರೂ ಕೆಲಕಾಲ ನೀರಿನಿಂದಲೂ ಈ ಕಂದಕ ತುಳುಕಾಡುತ್ತಿತ್ತೆಂದು ಕಂಡುಬರುವುದು. ಇನ್ನು ಹೊರ ಆವರಣದ ಸೋದೆ ಕೋಟೆಯು ಶಾಲ್ಮಲಾ ನದಿಯ ದಂಡೆಗುಂಟ ನಿರ್ಮಾಣಗೊಂಡುದೂ ಆಗಿದೆ. ಕೆಲಭಾಗ ನದಿದಡದಲ್ಲಿ ಬಂದರೆ, ಉಳಿದ ಭಾಗ ಆಳವಾದ ಕಂದಕಗಳಿಂದ ಕೂಡಿದಂತೆ ತಿಳಿದುಬರುತ್ತದೆ. ಅಂದಮೇಲೆ ಇದನ್ನು ಅರ್ಧ ಜಲದುರ್ಗ, ಅರ್ಧ ವನದುರ್ಗ ಎನ್ನಬೇಕಾಗಬಹುದೇನೊ!?6 ಹಾಗೆಯೇ ಸದಾಶಿವಗಡ ಮತ್ತು ಕಾಣಕೋಣ ಕೋಟೆಗಳ ಪಶ್ಚಿಮ ಭಾಗದಲ್ಲಿ ಕಡಿದಾದ ಭಾಗವನ್ನುಳ್ಳ ಸಮುದ್ರವನ್ನೇ ಕೊನೆಯ ಅಂಚನ್ನಾಗಿ ಮಾಡಿಕೊಳ್ಳಲಾಗಿದೆ. ಇನ್ನುಳಿದ ಮೂರು ಬದಿಗಳಲ್ಲೂ ಸಹಜ ಕಂದಕಗಳನ್ನೇ ಕೋಟೆಯ ಅಂಚುಗಳಾಗಿ ಬಳಸಿಕೊಳ್ಳಲಾಗಿದೆ. ಕೂರ್ಮಗಡ ಕೋಟೆಯು ಮಾತ್ರ ಸದಾಶಿವಗಡ ಕೋಟೆಯಿಂದ ಸುಮಾರು 3 ಕಿ.ಮೀ. ದೂರದಲ್ಲಿರುವ ಮನೋಹರವಾದ ಸಮುದ್ರದ ನಡುವಿನ ಒಂದು ಚಿಕ್ಕ ನಡುಗಡ್ಡೆಯಲ್ಲಿರುವ ಕೋಟೆ. ಇಲ್ಲೊಂದು ಎಚ್ಚರಿಕೆ ಸೂಚನೆಯ ಲೈಟಿಂಗ್ ವ್ಯವಸ್ಥೆ ಇದ್ದಿತು. ಆ ವಾಚ್ ಟವರಿನಿಂದ ಸದಾಶಿವಗಡದ ವಾಚ್ ಟವರಿಗೂ ಸಂಜ್ಞೆಯನ್ನು ರವಾನಿಸಬಹುದಿತ್ತು.

ಇನ್ನು ಗಿರಿದುರ್ಗಕ್ಕೆ ಅತ್ಯುತ್ತಮವಾದ ಉದಾಹರಣೆಯೆಂದರೆ ಕೊಂಕಿ ಕೋಟೆಯಾಗಿದೆ. ಇದು ಶಿರಸಿಯ ಪಶ್ಚಿಮ ಭಾಗಕ್ಕಿರುವ ಮೆಣಸಿನ ಫಿರ್ಕಾದ ಉತ್ತರ ವಲಯದದಲ್ಲಿಯ ದಟ್ಟ ಕಾಡಿನ ನಡುವೆ ಕಂಡು ಬರುತ್ತದೆ. ಬಹುಶಃ ಇಂಥ ಒಂದು ಜಾಗದಲ್ಲಿಯ ಕೋಟೆಯ ನಿರ್ಮಾಣ ಕರ್ನಾಟಕದಲ್ಲೇ ಅಪರೂಪವೆನ್ನಬಹುದು. ಅಂಥ ಆಯಕಟ್ಟಿನ ಸ್ವಲ್ಪ ಆಯ

ತಪ್ಪಿದರೆ ಅಪಾಯವನ್ನೇ ಅಪ್ಪಿಕೊಳ್ಳುವ ಅತ್ಯಂತ ಕಡಿದಾದ ಮಾರ್ಗವಿರುವ ಕೋಟೆಯೇ ಇದಾಗಿದೆ. ಇದರ ನಾಮವೇ ಅದರ ಸ್ವರೂಪವನ್ನು ಬಣ್ಣಿಸುವಂತಿದೆ. ಕೊಂಕು ಅಥವಾ ಕೊಂಕಿ ಎಂದರೆ ವಕ್ರ, ಡೊಂಕಾದ, ಮುರಿಗೆ ಹೊಡೆದ ಎಂಬರ್ಥದೊಂದಿಗೆ ಮೋಹಕ ಎಂಬ ಕಾವ್ಯಾರ್ಥದ ಲೇಪನವೂ ಅದಕ್ಕಿದೆ. ಯಾವುದು ಮುರಿಗೆಯಾಕಾರದ ಹೆಣಿಗೆಯಂತೆ ಇರಬಲ್ಲುದೋ ಅದು ಆಕರ್ಷಕವಾಗಿಯೂ ಕಾಣಿಸಬಲ್ಲುದು. ಹಾಗೆ ಈ ಕೊಂಕಿ ಕೋಟೆಯನ್ನುಳ್ಳ ಬೆಟ್ಟ ಮುರಿಗೆಯಾಕಾರದಲ್ಲಿ ಇಲ್ಲ ನಿಜ. ಆದರೆ ಆ ಬೆಟ್ಟದ ರಚನೆ ಅದಕ್ಕೆ ಹೊದಿಕೆಯಾಗಿರುವ ಹಸಿರಿನ ಮುಡಿ, ಒಟ್ಟು ಆ ಸುಂದರ ಶಾಸನದ ಪರಿಸರದಲ್ಲಿ ಇದರ ನೆಲೆ ಮತ್ತು ಅದರ ಸ್ವರೂಪದ ಅವಲೋಕನದಿಂದ ಅದರ ನಾಮಧೇಯವು ಅನ್ವರ್ಥವಾಗಿ ಅನ್ವಯಗೊಳ್ಳುವಂತೆ ತೋರುವುದು. ಇದನ್ನು ಹೊತ್ತುವುದಂತೂ ಎಷ್ಟು ಆನಂದದಾಯಕವೂ ಅಷ್ಟೇ ಪ್ರಯಾಸಕರ ಮತ್ತು ಅಪಾಯಕರವೂ ಹೌದು. ಅಂತೂ ಕಾವ್ಯದಲ್ಲಿ ಚಿತ್ರಿತವಾಗಿರುವ ಭವ್ಯಾನುಭವ ಇಲ್ಲಿ ನಮಗೆ ಲಭ್ಯ.

ಬೆಟ್ಟದ ನೆತ್ತಿಯಲ್ಲಿ ಕೋಟೆಯು ರೂಪುಗೊಂಡಿದೆ. ಇದರ ನಿರ್ಮಾಣದ ಉದ್ದೇಶ ಹಲವು ರೀತಿಯಾಗಿತ್ತೆಂದು ಜನ ಈಗಲೂ ಭಾವಿಸುತ್ತಾರೆ. ೧) ಅಪರಾಧಿಗಳನ್ನು ದಂಡಿಸಲು ಇಲ್ಲಿಗೆ ಎಳೆದು ತರಲಾಗುತ್ತಿತ್ತು. ೨) ಇದು ಕೆಲವು ಸಂದರ್ಭದಲ್ಲಿ ಗುಪ್ತವಾಗಿ ನಡೆಸಲಾಗುವ ಸಮಾಲೋಚನೆಯ ನೆಲೆಯಾಗಿತ್ತು. ೩) ಕ್ರಮೇಣ ಸೋದೆ ರಾಜರು ತಮ್ಮ ರಾಜಧಾನಿಯ ನೆಲೆಯನ್ನು ಇಲ್ಲಿಗೆ ಸ್ಥಳಾಂತರಿಸುವ ಮುನ್ನಾಲೋಚನೆ ಇದ್ದಿತು. ಆದರೆ ಈ ಕೋಟೆಯಲ್ಲಿ ಕೆಲವು ಮನೆಗಳಿರುವ ಕುರುಹುಗಳಿವೆ. ಒಂದು ಸ್ಮಾರಕ ಶಿಲಾಶಾಸನವಿದೆ. ನಂದಿಯ ವಿಗ್ರಹವೊಂದಿದೆ. ಇದರಿಂದ ಇಲ್ಲಿ ಮೂರನೆಯ ಅಂಶ ಪರಿಶೀಲನಾರ್ಹವೆಂದು ನನಗೆ ತೋರುತ್ತದೆ. ಒಟ್ಟಾರೆ ಈ ಕೋಟೆಯು ಸೋದೆ ಅರಸರ ದೂರಾಲೋಚನೆಯ ಒಂದು ರಹಸ್ಯಮಯ ತಾಣವಾಗಿ ಕಂಡುಬರುತ್ತದೆ.

ಹೀಗೆ ಇಲ್ಲಿಯ ಕೆಲವು ಕೋಟೆಗಳು ವೈರಿಗಳಿಂದ ರಕ್ಷಣೆ ಪಡೆಯುವ ಹಾಗೆ ಸುಸಜ್ಜಿತವಾದ ರೀತಿ ರಚನೆಗೊಂಡವಲ್ಲ. ಅಂದರೆ ಎತ್ತರವಾದ ಕೋಟೆಯ ಗೋಡೆ, ಕಾವಲು ಬುರುಜುಗಳು, ಆಳವಾದ ಕಂದಕಗಳು ಇಲ್ಲಿ ಬಹುಮಟ್ಟಿಗೆ ಕಂಡುಬರದು. ಉದಾಹರಣೆಗೆ ಕಾರವಾರದ ಅಂಗಡಿಕೋಟೆ ಮತ್ತು ಯಲ್ಲಾಪುರ ಹತ್ತಿರದ ಸಾಂಬ್ರಾಣಿಯ ಕೋಟೆಗಳನ್ನು ಗಮನಿಸಬಹುದು. ಇಲ್ಲಿ ವೈರಿಯ ದಾಳಿಯಿಂದ ರಕ್ಷಣೆ ಪಡೆಯುವುದಕ್ಕಿಂತಲೂ ಹೆಚ್ಚಾಗಿ ಸಣ್ಣ ಪುಟ್ಟ ಕಳ್ಳಕಾಕರ ಮತ್ತು ಕ್ರೂರಮೃಗಗಳಿಂದ ರಕ್ಷಣೆ ಪಡೆಯುವುದೇ ಇಂಥ ಸಾಮಾನ್ಯ ಮಟ್ಟದ ಕೋಟೆಗಳ ರಚನೆಗೆ ಕಾರಣವಾಗಿರಬೇಕು. ಇಂದು ಇವೆರಡೂ ಕೋಟೆಗಳೆನ್ನುವ ಸ್ಥಿತಿಯಲ್ಲಿ ಕಾಣಿಸುವುದಿಲ್ಲ.

ಹೀಗೆ ಇಲ್ಲಿ ನಮ್ಮ ಕುತೂಹಲವನ್ನು ಸ್ವಲ್ಪ ಮೀಟುವ ಒಂದೆರಡು ಕೋಟೆಗಳ ಹೊರ ಆವರಣದ ಒಂದು ಚಿತ್ರವನ್ನು ಕಾವ್ಯಾತ್ಮಕ ಶೈಲಿಯ ನಿರೂಪಣೆಯೊಂದಿಗೆ ನಿಮ್ಮ ಮುಂದಿಟ್ಟಿರುವೆನು.

ಅಡಿಟಿಪ್ಪಣಿಗಳು

1. ಈ ಮನೆತನದಲ್ಲಿ ಸೋದೆಯನ್ನೇ ರಾಜಧಾನಿಯಾಗಿ ಮಾಡಿಕೊಂಡು ಆಳಿದ ಅರಸರ ಪಟ್ಟಿ ಈ ರೀತಿ ಬರುತ್ತದೆ. 1. ಇಮ್ಮಡಿ ಅರಸಪ್ಪನಾಯಕ, 2. ರಾಮಚಂದ್ರ ನಾಯಕ, 3. ರಘುನಾಥನಾಯಕ, 4. ಮಧುಲಿಂಗನಾಯಕ, 5. ಇಮ್ಮಡಿ ರಾಮಚಂದ್ರ ನಾಯಕ, 6. ಇಮ್ಮಡಿ ಸದಾಶಿವರಾಯ, 7. ಬಸವಲಿಂಗರಾಯ, 8. ಮುಮ್ಮಡಿ ಸದಾಶಿವರಾಯ.
2. ಈ ಬಗ್ಗೆ ಎಂ.ಎ. ದೇಸಾಯಿ ಅವರ Carwar-Chittakula A History - ಪುಸ್ತಕದ 'Downfall of the English, Chap-8, Siege of Carwar, Chap-9 ಮತ್ತು Fall of Sonda' Chap-10, ಈ ಅಧ್ಯಾಯಗಳನ್ನು ನೋಡಬಹುದು.
3. ನಂದ್ವಾಲ್ ಕೋಟೆಯನ್ನು ಕ್ರಿ.ಶ. 1610ರಲ್ಲಿ ಈತನೇ ಕಟ್ಟಿಸಿದನು. ನೋಡಿ – ಎಂ.ಎ. ದೇಸಾಯಿ ಅವರ ಪೂರ್ವೋಕ್ತ ಗ್ರಂಥದ 8ನೆಯ ಅಧ್ಯಾಯ.
4. 'ಅಂಗಡಿ' ಹೆಸರೇ ಸೂಚಿಸುವಂತೆ ಒಂದು ವ್ಯಾಪಾರದ ಕೇಂದ್ರವಾಗಿತ್ತು. ಘಟ್ಟದ ಮೇಲಿನ ವ್ಯಾಪಾರದ ಸರಕುಗಳನ್ನು ಸಮುದ್ರ ಮುಖೇನವಾಗಿ ಸಾಗಿಸುವಾಗ ಮಧ್ಯದ ಜಾಗವಾಗಿ ಸಮುದ್ರದ ದಡದಲ್ಲೇ ರಚಿತವಾದ ಒಂದು ವ್ಯಾಪಾರಿ ನೆಲೆಯಾದ ಕೋಟೆಯಾಗಿತ್ತು.
5. ಈ ಬಗ್ಗೆ ಹೆಚ್ಚಿನ ವಿವರಗಳಿಗೆ ನೋಡಿ : ನಾ.ವೆಂ. ಭಟ್ಟ, 'ಜನಸೇವಕ' (4–10), ಮಾರ್ಚ–26, 1958.

ಸೋದೆಯ ಸದಾಶಿವರಾಯನ ಉಳಿವೆಯ ಮಹಾತ್ಮೆಯ ಐತಿಹಾಸಿಕ ಮತ್ತು ಭೂವೈಜ್ಞಾನಿಕ ಅಧ್ಯಯನ

– ಡಾ. ಹೆಚ್. ಚಂದ್ರಶೇಖರ

ಪಶ್ಚಿಮ ಕರ್ನಾಟಕದ ಮಲೆನಾಡಿನ ಭಾಗವನ್ನು ಸುಮಾರು 350 ವರ್ಷಗಳ ಕಾಲ (ಕ್ರಿ.ಶ. ಸು. 1400–1763) ಆಳಿದ ಸೋದೆಯ ಅರಸು ಮನೆತನವು ನಮ್ಮ ನಾಡಿನ ಸಾಹಿತ್ಯ, ಸಾಮಾಜಿಕ ಮತ್ತು ವಾಸ್ತುಶಿಲ್ಪವೂ ಸೇರಿದಂತೆ ಕಲೆಗಳಿಗೆ ನೀಡಿದ ಪ್ರೋತ್ಸಾಹವು ಸ್ಮರಣೀಯ. ಈ ಅರಸರಲ್ಲಿ ಒಂದನೆಯ ಸದಾಶಿವರಾಯನು (ಕ್ರಿ.ಶ. 1674–1698) ಸ್ವತಃ ಕವಿ ಮತ್ತು ಸಂಗೀತಗಾರನು. ಇವನು ಒಟ್ಟು 24 ಕೃತಿಗಳನ್ನು ರಚಿಸಿದ್ದಾನೆಂದು ಡಾ. ಹಿರೇಮಠರು ಹೇಳುತ್ತಾರೆ (1995). ಇವನ ಕೃತಿಗಳ ವೈವಿಧ್ಯತೆಯನ್ನು ನೋಡಿದರೆ ಇವನು ಸಮರ್ಥ ಅರಸನಷ್ಟೇ ಅಲ್ಲದೆ ಬಹುಶ್ರುತ ವ್ಯಕ್ತಿತ್ವವುಳ್ಳವನೆಂಬುದು ಗೊತ್ತಾಗುತ್ತದೆ.

ಈ ಅರಸು ಮನೆತನಕ್ಕೆ ಉಳಿಮೆಯ ಚೆನ್ನಬಸವಣ್ಣ ಮನೆದೇವರು. ಉಳಿಮೆಯಲ್ಲಿರುವ ಚೆನ್ನಬಸವಣ್ಣನವರ ಸಮಾಧಿಯನ್ನು ದೇವರಗುಡಿಯಂತೆ ಭಾವಿಸಿ ಅತ್ಯಂತ ಪೂಜ್ಯ ಭಾವನೆಯಿಂದ ಈ ಸಮಾಧಿಯನ್ನು ಈ ಅರಸರು ಪೂಜಿಸಿದ್ದಾರೆ. ಈ ಸಮಾಧಿಯ ಮೇಲೆ ಹಿಂದೆ ಮರ ಮತ್ತು ಹೆಂಚುಗಳನ್ನು ಉಪಯೋಗಿಸಿ ಸುಂದರವಾದ ಗುಡಿಯನ್ನು ಈ ಅರಸರು ಕಟ್ಟಿಸಿದ್ದರು. ಆ ಗುಡಿಯ ಬದಲಾಗಿ, ಆರ್.ಸಿ.ಸಿ.ಯ ಕಲಾತ್ಮಕ ಮಂದಿರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಸೋದೆಯ ಅರಸರು ಕಟ್ಟಿಸಿದ ಸುಂದರ ದೇಗುಲದ ಅವಶೇಷವಾಗಿ ಎರಡು ಮರದ ಕಂಬಗಳು ಮೈಸೂರಿನ ಮಾನಸಗಂಗೋತ್ರಿಯ ಜಾನಪದ ವಸ್ತು ಸಂಗ್ರಹಾಲಯದಲ್ಲಿವೆ. ಇಂದಿಗೂ ಈ ಕಂಬಗಳ ವರ್ಣ ಕಂಗಳಿಗೆ ಮುದ ನೀಡುತ್ತದೆ. ಈ ಕಂಬಗಳನ್ನು ನೋಡಿ ಅಂದಿನ ಉಳಿಮೆಯ ಚೆನ್ನಬಸವಣ್ಣನವರ ಸಮಾಧಿ ದೇವಾಲಯ ಸುಂದರವಾಗಿತ್ತು ಎಂದು ಊಹಿಸಬಹುದು.

ಐತಿಹಾಸಿಕ ಸಂಗತಿಗಳು

ಈ ಅರಸು ಮನೆತನದ ಆರಾಧ್ಯ ದೈವದ ಕ್ಷೇತ್ರವಾದ ಉಳಿವೆಯನ್ನು ಕವಿ ಸದಾಶಿವರಾಯನು ತನ್ನ ಕೃತಿ "ಉಳಿವೆಯ ಮಹಾತ್ಮೆ"ಯಲ್ಲಿ ಮನದುಂಬಿ ಬಣ್ಣಿಸಿದ್ದಾನೆ. ಈ ಕಾವ್ಯದಲ್ಲಿ, ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಮಗ್ರ ಕ್ರಾಂತಿಯ ಕೊನೆಯ ಘಟ್ಟವನ್ನು ಗುರ್ತಿಸಬಹುದು. ಹರಳಯ್ಯ ಮಧುವರಸರು ಹುತಾತ್ಮರಾದ ನಂತರ ಶರಣರ ಒಂದು ತಂಡ, ಚೆನ್ನಬಸವಣ್ಣನವರ ನೇತೃತ್ವದಲ್ಲಿ ಉಳಿವೆಯತ್ತ ಪಯಣ ಬೆಳೆಸಿತು. ಪರವತಾಬಾದಿ (ಪರ್ವತಾಬಾದ), ಪೆರಜಾಬಾದಿ (ಫಿರೋಜಬಾದ), ಕೇಳಕೂರು (ಕೊಳಕೂರು), ಬಡದಳ, ಸತ್ತಿಗೆರೆ, ಮುರುಗೋಡ, ಹೂಬಳ್ಳಿ (ಹುಬ್ಬಳ್ಳಿ), ಬಂಕಾಪುರ, ಹಾನಗಲ್ಲು, ಜಾಂಗಲ, ಸೋದೆಪುರ, ಎಲ್ಲಾಪುರ, ಕಾಳಿನದಿ ದಾಟಿ (ಕರಿಹೊಳೆ) ಉಳುವೆಪುರಕ್ಕೆ ಬಂದಿತು. ಈ ಶರಣರ ತಂಡ ಎಂದು ಸ್ಪಷ್ಟವಾಗಿ ಹೇಳುತ್ತಾನೆ ಸದಾಶಿವರಾಯ. ಮಾರ್ಗ ಮಧ್ಯದಲ್ಲಿ ಶರಣರು ಪೂಜೆಗೈದ ಸ್ಥಳಗಳನ್ನು ಸಂದರ್ಶಿಸಿದ ಮಠಗಳನ್ನೂ ಉದಾಹರಿಸುತ್ತಾನೆ ಈ ಅರಸು. ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಐತಿಹಾಸಿಕ ಅಂಶಗಳುಳ್ಳ ಕೃತಿಯೆನಿಸುತ್ತದೆ ಈ ಕಾವ್ಯ.

ಆದರೆ ಈ ಕಾವ್ಯದ 31ನೆಯ ನುಡಿಯಲ್ಲಿ ಕಡು ಸೋಜಿಗವಾದ ಗವಿಯನ್ನು ಕಂಡಾಕ್ಷಣವೆ ಹಡಪದ ಅಪ್ಪಣ್ಣನು ಆ ಗವಿಯಲ್ಲಿ ವಾಸಮಾಡಿದನೆಂದು ಹೇಳಲಾಗಿದೆ. ಹಡಪದ ಅಪ್ಪಣ್ಣನವರು ಬಸವಣ್ಣನವರ ಜೊತೆಯಲ್ಲಿಯೇ ಕೂಡಲ ಸಂಗಮಕ್ಕೆ ಹೋದರು ಮತ್ತು ಕೃಷ್ಣಾನದಿಯ ಇನ್ನೊಂದು ಬದಿಯಲ್ಲಿರುವ ತಂಗಡಗಿಯಲ್ಲಿ (ಬಸವಣ್ಣನವರು ಲಿಂಗೈಕ್ಯರಾದ ನಂತರ) ಇವರು ಲಿಂಗೈಕ್ಯರಾದರು. ತಂಗಡಗಿಯಲ್ಲಿ ನೀಲಾಂಬಿಕೆಯ ಸಮಾಧಿಯ ಬಳಿಯಲ್ಲಿಯೇ ಹಡಪದ ಅಪ್ಪಣ್ಣನವರ ಸಮಾಧಿ ಇದೆ. ಆದರೆ ಹಡಪದ ಅಪ್ಪಣ್ಣನವರ ಸಮಾಧಿ ಕಟ್ಟಕ್ಕೆ ರಕ್ಷಣಾಗೋಡೆ ಇರದ್ದರಿಂದ ಇದು ನಾರಾಯಣಪುರ ಅಣೆಕಟ್ಟಿನಿಂದ ನಿರ್ಮಿತವಾದ ಬಸವಸಾಗರದಲ್ಲಿ ಮುಳುಗಿದೆ. ಇದೊಂದು ಈ ಕೃತಿಯಲ್ಲಿರುವ ಐತಿಹಾಸಿಕ ಲೋಪ.

ಚೆನ್ನಬಸವಣ್ಣನವರ ಸಮಾಧಿಯ ಕಟ್ಟಡದ ಸುತ್ತಲಿರುವ ಬಯಲಿನಲ್ಲಿ ಒಂದು ದೊಡ್ಡ ಅರಳಿ ಮರ ಇದೆ. ಇದನ್ನು ಚೆನ್ನಬಸವಣ್ಣನವರು ನೆಟ್ಟರೆಂದು ಜನಪದರು ಹೇಳುತ್ತಾರೆ. ಆದ್ದರಿಂದಲೇ ಈ ಮರವು ಸಮಾಧಿ ಮಂದಿರದ ಪೂರ್ಣ ನೋಟಕ್ಕೆ ಅಡ್ಡಿಯಾಗಿದ್ದರೂ ಅವರು ಅದನ್ನು ಕಡಿಯಬಾರದೆನ್ನುತ್ತಾರೆ.

ಈ ಕಾವ್ಯದ 59ನೇ ನುಡಿಯಲ್ಲಿ ಕವಿಯು "ಹೊನ್ನ ಅರಳಿಯ ಮರದ ಕೊನೆಯನು ಚೆನ್ನಬಸವನು ನೆಟ್ಟ"ನು ಎಂದು ಸ್ಪಷ್ಟವಾಗಿ ಹೇಳಿರುವುದು ಐತಿಹಾಸಿಕ ದಾಖಲೆ ಎನಿಸುತ್ತದೆ. ಅದೇ ನುಡಿಯಲ್ಲಿ ಚೆನ್ನ ಬಸವನು ಗಣಗಳನ್ನು ಪನ್ನಗಾಭರಣನ ಸಮೀಪಕ್ಕೆ ಪರಮ ಹರುಷದಿ ಕಳಿಸಿದನು ಎಂದು ಹೇಳಿದ್ದಾನೆ ಕವಿ. ಅಂದರೆ ಚೆನ್ನ ಬಸವಣ್ಣನವರು ಉಳಿದ ಎಲ್ಲಾ ಶರಣರು ಲಿಂಗೈಕ್ಯರಾದ ನಂತರ ಲಿಂಗೈಕ್ಯರಾದರೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಭೂವೈಜ್ಞಾನಿಕ ಅಂಶಗಳು

ಶಿವಕವಿ ಸೋದೆಯ ಸದಾಶಿವರಾಯನು ಚೆನ್ನಬಸವಣ್ಣನವರ ಬಗ್ಗೆ ಅತ್ಯಂತ ಭಕ್ತಿ ಗೌರವವುಳ್ಳವನಾಗಿದ್ದುದಲ್ಲದೆ, ಉಳಿವೆಯ ಪರಿಸರವನ್ನು ಚೆನ್ನಾಗಿ ಬಲ್ಲವನಾಗಿದ್ದನೆಂಬುದಕ್ಕೆ ಅವನ ಈ ಕೆಳಗೆ ಉದಾಹರಿಸಿದ ಒಂದು ನುಡಿ ಸಾಕ್ಷಿ :

ಶಿಲೆಯಲ್ಲವು ಶಿವಲಿಂಗವು
ಜಲವೆಲ್ಲವು ಪುಣ್ಯ ತೀರ್ಥ ತರುಲತೆತೃಣದ
ಮಲೆಯೆಲ್ಲವು ಬಿಲ್ವ ದವನ
ಸಲೆಯುಳುವೆಯ ಕ್ಷೇತ್ರ ಪೇಳಲಶಕ್ಯಂ

ಉಳಿವೆಯ ಸುತ್ತಲಿರುವ ಕಾಡು, ಬೆಟ್ಟ, ಹಳ್ಳ ಮತ್ತು ಗವಿಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು ಈ ಅರಸ ಎಂಬುದಕ್ಕೆ ಈ ಕಾವ್ಯ ಸಾಕ್ಷಿಯಾಗಿದೆ.

ಇಂದಿನ ಉಳಿವೆಯ ಸಮಾಧಿ ಕಟ್ಟಡ ಇರುವದು ಒಂದು ಸಮತಟ್ಟಾದ ಸಣ್ಣಪ್ರದೇಶ. ಆದರೆ ಇದರ ಸುತ್ತಲೂ ಸಹ್ಯಾದ್ರಿಯ ಸಾಲು ಬೆಟ್ಟಗಳು ಹಬ್ಬಿವೆ. ದಟ್ಟವಾದ ಕಾಡು ಇಂದಿಗೂ ಇದೆ. ಆದ್ದರಿಂದ ಶರಣರು ಬಿಜ್ಜಳನ ಸೈನಿಕರಿಂದ ರಕ್ಷಣೆ ಪಡೆಯುವುದಕ್ಕಾಗಿ ಈ ಸ್ಥಳವನ್ನು ಆರಿಸಿಕೊಂಡಿರಬಹುದೆಂದು ಊಹಿಸಬಹುದು.

ಈ ಕಾವ್ಯದಲ್ಲಿ, ಈ ಪ್ರದೇಶದಲ್ಲಿ ಏಳುನೂರಾ ಎಪ್ಪತ್ತು ಗವಿಗಳಿವೆ ಎಂದು ಹೇಲಿದೆಯಾದರೂ, ಅವುಗಳನ್ನು ಇಂದು ನಿಖರವಾಗಿ ಎಣಿಸುವದು ತೀರ ಕಷ್ಟಸಾಧ್ಯದ ಕೆಲಸ. ಆದರೆ ಈ ಕಾವ್ಯದಲ್ಲಿ ವಿಶೇಷವಾಗಿ ಬಣ್ಣಿಸಲ್ಪಟ್ಟಿರುವ ಆಕಳ ಗವಿ, ರುದ್ರಾಕ್ಷಿ ಗವಿ (ಮಂಟಪ), ಹರಳಯ್ಯನ ತೀರ್ಥ ವಿಭೂತಿ ಕಣಜ, ಪಂಚಲಿಂಗೇಶ್ವರ ಗವಿ, ಮಹಾಮನೆ ಅಕ್ಕನಾಗಮ್ಮನ ಗವಿ ಇವುಗಳಿಗೆ ಸಾಗುವ ಹಾದಿ ಒಂದು ಸಾಹಸ ಯಾತ್ರೆ; ಒಂದು ಆನಂದದ ನೋಟ.

ಗವಿಗಳು

ಸದಾಶಿವರಾಯ ಆಕಳ ಗವಿಯ ಇರವನ್ನು ಈ ರೀತಿಯಾಗಿ ಬಣ್ಣಿಸಿದ್ದಾನೆ :

ಆಗಮ ಶಾಸ್ತ್ರ, ಪುರಾಣದ
ಲಾಗುವ ಸಿದ್ಧಿಗಳನಿತ್ತು ಬೇಡಿದ ಜನಕೆ

ಭೋಗವ ಮೋಕ್ಷವ ಕೊಡುತಿಹ
ಗೋಗರ್ಭವ ಪೊಕ್ಕು ನೋಡಿ ಹೊರಟರು ಗಣಗಳ್

ಇಲ್ಲಿ ಬರುವ ಗೋಗರ್ಭ ಎಂಬ ಶಬ್ದ ಆಕಳ ಗವಿಯನ್ನು ನಿರ್ದೇಶಿಸುತ್ತದೆ.

ರುದ್ರಾಕ್ಷಿ ಗವಿ (ಮಂಟಪ)ವನ್ನು ಶರಣರು ಕಂಡ ಪರಿಯನ್ನು ಈ ರೀತಿ ಬಣ್ಣಿಸಲಾಗಿದೆ :

ಹರನೇತ್ರಗಳಿಂದಲುದಿಸಿದ
ವರ ಮುಕ್ತಿಯನಿತ್ತು ಭಕ್ತ ಜನರನು ಕಾವ
ಸಿರಿ ರುದ್ರಾಕ್ಷಿಯ ಮಂಟಪ
ದಿರವನು ಬಸವಾದಿ ಗಣಗಲೆಲ್ಲರು ಕಂಡರು
ಹರಳಯ್ಯನ ಸ್ಮಾರಕ ಚಿಲುಮೆ

ಹರಳಯ್ಯನ ನೆನಪಿಗಾಗಿ ಅಲ್ಲಿರುವ ಒಂದು ನೀರಿನ ಬುಗ್ಗೆ (Spring)ಗೆ ಅವನ ಹೆಸರನ್ನಿಡಲಾಗಿದೆ :

ವರ ಉಳುವೆಯ ಸುಕ್ಷೇತ್ರದಿ
ಹರನಭಿಷೇಕವನು ಮಾಡಬೇಕೆಂದೆನುತ
ಸುರನದಿಯ ನೆನೆಯಲುದಿಸಿದ
ನೆರೆಹಳ್ಳಯ್ಯಗಳ ತೀರ್ಥವಾಯಿತು ಸಹಜ
ವಿಭೂತಿ ಕಣಜದ ಗವಿಯ ಜನನವನ್ನು ಧಾರ್ಮಿಕ

ದೃಷ್ಟಿಯಿಂದ ಈ ಕವಿ ಈ ರೀತಿಯಾಗಿ ಬಣ್ಣಿಸಿದ್ದಾನೆ. ಅದನ್ನು ಓದಿ :

ಪುರದಹನವ ಮಾಡಿದ ಸಮಯದಿ
ನೆರೆ ಜ್ವಾಲೆಯ ಭರದಿ ಬಂದು ನಂದಿಸಿದಂಥ
ಕರಿಯ ವಿಭೂತಿಯ ಗಿರಿಯನು
ಶರಣರು ಕಂಡದನು ಧರಿಸಿಕೊಂಡರು ಮುದದಿ

ಇಂದು ಪಂಚಲಿಂಗೇಶ್ವರ ಗವಿ ಎಂದು ಕರೆಯಲ್ಪಡುವ ಗವಿಯನ್ನು ಈ ಕವಿ ಈ ರೀತಿಯಾಗಿ ಬಣ್ಣಿಸಿದ್ದಾನೆ :

ಎಲ್ಲ ಗಣಗಳು ಕೂಡಿ ಇಹರೆ ಯಾವ ಗವಿ ಅತಿಯೋಗ್ಯವು
ಅಲ್ಲಿಯೋಚಿಸಿ ಆಗ ನಡೆದರು ಅಧಿಕ ಸಂಭ್ರಮದಿಂದಲಿ
ಮಿಲ್ಲಿಶಾಸ್ತ್ರನ ಮೈಯನುರುಹಿದ ಮಾಸದಾಶಿವಲಿಂಗವಂ
ಬಿಲ್ವಪತ್ರೆಗಳಿಂದಲರ್ಚಿಸಿ ಬೇಗ ಮಠಕ್ಕೆ ತಂದರು

ಇದೇ ರೀತಿಯಾಗಿ ಮಹಾಮನೆಗವಿ ಮತ್ತು ಅಕ್ಕನಾಗಮ್ಮನ ಗವಿಯ ಮಹತ್ವವನ್ನು ವರ್ಣಿಸುತ್ತಾನೆ ಈ ಕವಿ :

"ಮಹಾಮನೆ ಗವಿನೋಡಲ್ ಮಹಾಪಾತಕ ನಾಶನ
ಮಹಾಗಣಂಗಳಿಂತೆಂದು ಹರುಷಿತರಾದರು"
"ಅಕ್ಕರಿಂದುಳುವೆ ಕ್ಷೇತ್ರ ಪೊಕ್ಕ ಸಂಭ್ರಮದಿಂದಲಿ
ಅಕ್ಕನಾಗಮ್ಮನು ನಿಲ್ಲೆ ಚೊಕ್ಕಟ ಗವಿಯಾಯಿತು"

ಮೇಲೆ ವಿವರಿಸಲಾದ ಗವಿಗಳು ಇರುವ ಪ್ರದೇಶ ಎತ್ತರದ ಬೆಟ್ಟಗಳಿಂದಲೂ ಆಳವಾದ ಕಣಿವೆಗಳಿಂದಲೂ ಕೂಡಿದೆ. ತುಂಬಾ ಕಡಿದಾದ ಹಾದಿಯಾಗಿದ್ದರೂ ನಿಸರ್ಗ ಪ್ರೇಮಿಗಳಾಗಿದ್ದರೆ ಯಾತ್ರಿಕರು ಈ ಚಾರಣಕ್ಕೆ ಸಿದ್ಧರಾಗಿರಬೇಕು; ಆನಂದಿಸಬೇಕು.

ತೂಗು ಕಂಬಗಳು

ಈ ಪ್ರದೇಶದ ಕಲ್ಲು ಪ್ರಿಕೇಂಬ್ರಿಯನ್ ಯುಗದ ಸುಣ್ಣದ ಕಲ್ಲು ಅಥವಾ ಶಿಲೆ. ಸುಮಾರು 250 ಕೋಟಿ ವರ್ಷಗಳ ಹಿಂದೆ ಈ ಪ್ರದೇಶವು ಸಮುದ್ರದ ತಳದಲ್ಲಿತ್ತು. ಆಗ ಸುಣ್ಣ ಶಿಲೆಯ ಮಡ್ಡಿಯು ಸಂಗ್ರಹಗೊಂಡು ಗಟ್ಟಿಯಾಯಿತು. ನಂತರ

ಹಲವಾರು ಸ್ತರಭಂಗಗಳುಂಟಾಗಿ ಸಮುದ್ರ ತಳವು ಮೇಲೆ ಬಂದ ನಂತರ, ವಾತಾವರಣಕ್ಕೆ ಮೈಯೊಡ್ಡಿತು. ಆಗ ಭೂವೈಜ್ಞಾನಿಕ ನಿಯೋಗಿಗಳಾದ (Geological Agents) ಅಂತರ್ಜಲ, ಗಾಳಿ, ಇಬ್ಬನಿ, ಹರಿವ ನೀರು, ಮಳೆ, ಈ ಸುಣ್ಣ ಶಿಲೆಯ ಮೇಲೆ ದಾಳಿ ಮಾಡಿದವು. ಇದರಿಂದಾಗಿ ಕಣಿವೆಗಳುಂಟಾದವು. ಕೆಲ ಕಣಿವೆಗಳು ಸ್ತರಭಂಗ ಕ್ರಿಯೆಯಿಂದಲೂ ಉಂಟಾಗಿರಬಹುದು. ಈ ಸಂಕೀರ್ಣ ಪ್ರಕ್ರಿಯೆಯಲ್ಲಿ ಗವಿಗಳುಂಟಾದವು. ಗವಿಯ ಮಾಳಿಗೆ (Roof)ಯಿಂದ ಮಳೆ ನೀರು ಜಿನುಗುವಾಗ ತನ್ನೊಡನೆ ಸುಣ್ಣ ಶಿಲೆಯ ಸುಣ್ಣಾಂಶವನ್ನು (ಕ್ಯಾಲ್ಸಿಯಂ ಕಾರ್ಬೊನೇಟ್) ತನ್ನೊಡನೆ ಕರಗಿಸಿಕೊಂಡಿರುತ್ತದೆ. ಅಂಥ ನೀರು ಮಾಳಿಗೆಯಿಂದ ಗವಿಯೊಳಕ್ಕೆ ಜಿನುಗುವಾಗ ಯಾವುದಾದರೂ ಮಣ್ಣಿನ ಕಣ, ಗಿಡದ ಬೇರು ಇತ್ಯಾದಿ ವಸ್ತುಗಳ ಸುತ್ತಲೂ ಸುಣ್ಣದ ಕಾರ್ಬೊನೇಟನ್ನು ಸಂಕ್ಷೇಪಗೊಳಿಸುತ್ತದೆ. ಈ ನಿಕ್ಷೇಪಿಸುವ ಕ್ರಿಯೆ ಕೋಟಿಗಟ್ಟಲೆ ವರ್ಷಗಳ ಕಾಲ ನಡೆದಾಗ ಸುಣ್ಣದ ಕಾರ್ಬೊನೇಟ್, ಗವಿಯ ಮಾಳಿಗೆಯಿಂದ ತೂಗು ಬಿದ್ದ ಕಂಬಗಳಂತೆ ಕಾಣುತ್ತದೆ. ಆದ್ದರಿಂದ ಇವುಗಳನ್ನು ತೂಗು ಕಂಬಗಳೆಂದು (Stalactite) ಕರೆಯುತ್ತಾರೆ. ಈ ತೂಗುಕಂಬಗಳು ವಿವಿಧ ರೂಪವನ್ನು ಹೊಂದಿರಲು ಸಾಧ್ಯ. ಮಾನವಾಕೃತಿಯನ್ನೋ, ರುದ್ರಾಕ್ಷಿ ರೂಪವನ್ನೋ, ಬಾಳೆಹಣ್ಣಿನ ರೂಪವನ್ನೋ, ಆಕಳ ಕೆಚ್ಚಲಿನ ರೂಪವನ್ನೋ ಹೋಲುತ್ತವೆ ಈ ತೂಗುಕಂಬಗಳು. ಪ್ರಸ್ತುತ ಅಕ್ಕನಾಗಮ್ಮನ ಗವಿಯಲ್ಲಿ ಛಾವಣಿಯಿಂದ ನಿಕ್ಷೇಪಗೊಂಡ ತೂಗು ಕಂಬ ಒಬ್ಬ ಹೆಣ್ಣುಮಗಳು ಕೂದಲು ಬಿಟ್ಟುಕೊಂಡು ಮಲಗಿದಂತೆ ಕಾಣುತ್ತದೆ. ಇದಲ್ಲದೆ ಅಕ್ಕನಾಗಮ್ಮ ಇಲ್ಲಿ ಕೆಲಕಾಲ ತಂಗಿದ್ದರಿಂದ ಜನಪದರು ಇದು ಅಕ್ಕನಾಗಮ್ಮನ ಮೂರ್ತಿ ಎಂದು ನಂಬುತ್ತಾರೆ. ಆಕಳ ಗವಿಯೊಳಗೆ ತೂಗು ಕಂಬಗಳು ಆಕಳಿನ ಕೆಚ್ಚಲನ್ನು ಹೋಲುವುದರಿಂದ ಇದಕ್ಕೆ ಆಕಳ ಗವಿ ಎಂದು ಹೆಸರುಬಂತು. ಜನಪದರು ಇದಕ್ಕೆ ಬೇರೆ ಕಾರಣ ಕೊಡುತ್ತಾರೆ. ಗವಿಯ ಮೇಲೆ ಶರಣರಿಗಾಗಿ ಆಗ ಒಂದು ಆಕಳ ಬಂದು ಹಾಲನ್ನು ಕರೆಯುತ್ತಿತ್ತು ಎಂಬುದು ಜನಪದ ಸುಂದರ ಕಲ್ಪನೆಯಷ್ಟೆ. ರುದ್ರಾಕ್ಷಿ ಗವಿ (ಮಂಟಪ)ಯೊಳಗೆ ತೂಗು ಕಂಬಗಳು ರುದ್ರಾಕ್ಷಿಯ ರೂಪವನ್ನು ಹೋಲುವದರಿಂದ ಈ ಹೆಸರು ಬಂದಿದೆ. ಅಲ್ಲದೆ ಕೆಲವೆಡೆ ಬಾಳೆಹಣ್ಣಿನ ರೂಪವನ್ನು ಹೋಲುತ್ತವೆ. ಈ ರುದ್ರಾಕ್ಷಿಗಳು ಶರಣರು ಬಿಟ್ಟುಹೋದ ರುದ್ರಾಕ್ಷಿಗಳು ಮತ್ತು ಬಾಳೆಹಣ್ಣು ಕೂಡ ಶರಣರು ಬಿಟ್ಟುಹೋದವುಗಳೆಂದು ಜನಪದರು ನಂಬುತ್ತಾರೆ.

ನೆಲ ಕಂಬಗಳು

ಕೆಲವೊಂದು ಸಲ, ಗವಿಯ ಛಾವಣಿಯಿಂದ ಜಿನುಗುವ ಖನಿಜಾಂಶ ಭರಿತ ನೀರು ಛಾವಣಿಯಲ್ಲಿ ನಿಕ್ಷೇಪಗೊಳ್ಳದೆ, ಗವಿಯ ನೆಲದ ಮೇಲೆ ನಿಕ್ಷೇಪಗೊಳ್ಳುತ್ತದೆ. ಹಾಗೇ ಅದು ನಿಕ್ಷೇಪಗೊಳ್ಳುತ್ತಾ ಕೋಟ್ಯಾವಧಿ ವರ್ಷಗಳ ಅವಧಿಯಲ್ಲಿ ನೆಲದಿಂದ ಮೇಲಕ್ಕೆ ಉರ್ಧ್ವಮುಖಿಯಾಗಿ ಬೆಳೆಯುತ್ತದೆ. ಇದನ್ನು ನೆಲಕಂಬ (Stalag unite)ವೆಂದು ಕರೆಯುತ್ತಾರೆ. ಊರ್ಧ್ವಮುಖಿಯಾಗಿ ಬೆಳೆಯುವಾಗ ಅದು ವಿವಿಧ ರೂಪಗಳನ್ನು ಪಡೆಯಲು ಸಾಧ್ಯ. ಅಕ್ಕನಾಗಮ್ಮನ ಗವಿಯ ಒಂದು ಮೂಲೆಯಲ್ಲಿ ಎರಡು ಕಂಬಗಳಿವೆ. ಸುಮಾರು ಎರಡು ಅಡಿಗಳಷ್ಟು ಎತ್ತರವಿರುವ ರಚನೆಗಳಿವು. ಜನಪದರು ಇವನ್ನು ಶರಣರು ರಚಿಸಿದ (ಸ್ಥಾವರ) ಲಿಂಗಗಳೆಂದು ನಂಬುತ್ತಾರೆ. ಬಹುಶಃ ಇಂಥ ರಚನೆಗಳನ್ನೇ ನೋಡಿಯೇ ಸದಾಶಿವರಾಯ ತನ್ನ ಕಾವ್ಯದಲ್ಲಿ 'ಶಿಲೆಯೆಲ್ಲವೂ ಶಿವಲಿಂಗ' ಎಂದು ಕರೆದಿರಬಹುದು. ಇದೇ ರೀತಿ ಪಂಚಲಿಂಗೇಶ್ವರ ಗವಿಯಲ್ಲಿ ಒಂದು ನೆಲಕಂಬವು ಐದು ಮುಖವುಳ್ಳ (ಒಂದು ದಿಕ್ಕಿನಲ್ಲಿ ನೋಡಿದರೆ) ಶಿವಲಿಂಗದಂತೆ ಕಾಣುತ್ತದೆ. ಆದ್ದರಿಂದ ಇದು ಪಂಚಲಿಂಗೇಶ್ವರ ಎಂದು ಹೆಸರನ್ನು ಪಡೆದಿದೆ. ಕರಿವಿಭೂತಿ ಕಣಜದ ಗವಿಯಲ್ಲಿ ನೆಲಕಂಬವು ಗಂಟೆಯಾಕಾರವನ್ನು ಪಡೆದಿರುವ ಸುಮಾರು 6 ಅಡಿ ಎತ್ತರವಿರುವ ರಚನೆ. ಈ ಗವಿಯ ಸುತ್ತಲೂ ಇರುವ ಮಣ್ಣಿನಲ್ಲಿ ಮ್ಯಾಂಗನೀಜಿನ ಅಂಶ ಇದೆ. ಆದ್ದರಿಂದ ತಿಳಿ ಕಪ್ಪು ಬಣ್ಣದ ಹುಡಿಯನ್ನು ನೀಡುತ್ತದೆ. ಈ ಮ್ಯಾಂಗನೀಜ ಭರಿತ ಕಪ್ಪು ಧೂಳು ಗಂಟೆಯಾಕಾರದ ರಚನೆಯ ಮೇಲೆ ಕೂತಿರುತ್ತದೆ. ಆದ್ದರಿಂದ ಇದು ಸದಾಶಿವರಾಯನ ಕಣ್ಣಿಗೆ ಪುರದಹನದಿಂದ ಉಂಟಾದ ಬೂದಿಯಂತೆ ಕಂಡಿದೆ. ಈ ಕರಿ ಧೂಳನ್ನು ಚೆನ್ನಾಗಿ ಒರೆಸಿದರೆ ಬಿಳಿ ಬಣ್ಣದ ಕ್ಯಾಲ್ಸಿಯಂ ಕಾರ್ಬೊನೇಟ್ ಕಾಣುತ್ತದೆ.

ಸಂರಕ್ಷಣೆ

ಈ ಗವಿಗಳೆಲ್ಲವು ಭೂವೈಜ್ಞಾನಿಕ ವಿಸ್ಮಯಗಳು. ಈ ವಿಸ್ಮಯಗಳೊಂದಿಗೆ ಶರಣರ ಇತಿಹಾಸ ಹೊಂದಿಕೊಂಡಿರುವುದರಿಂದ ಜನಪದರ ಭಕ್ತಿಗೆ ಪಾತ್ರವಾಗಿವೆ. ಈ ಗವಿಗಳನ್ನು ಹಾಳು ಮಾಡದಂತೆ ಸಂರಕ್ಷಿಸಬೇಕು. ಇವು ಒಂದು ಸಲ ಹಾಳಾದರೆ ಪುನರ್ ಸೃಷ್ಟಿ ಸಾಧ್ಯವಿಲ್ಲ. ಆದ್ದರಿಂದ ಇಲ್ಲಿಗೆ ಸಂದರ್ಶನಕ್ಕೆ ಬರುವ ಯಾತ್ರಿಕರಿಗೆ ತಮ್ಮ ಹೆಸರನ್ನು ಕೆತ್ತದಂತೆ ಮತ್ತು ತೂಗು ಕಂಬಗಳನ್ನು ಒಡೆಯದಂತೆ ತಿಳುವಳಿಕೆ ನೀಡಬೇಕು. ಅದು ಮುಂದೆ ಘಟಿಸದಂತೆ ಇವುಗಳನ್ನು ಕಾಯಲು ಸೂಕ್ತ ಸಿಬ್ಬಂದಿಯನ್ನು ಅರಣ್ಯ ಇಲಾಖೆ ನೇಮಿಸಬೇಕು. ಇಲ್ಲವಾದರೆ ಕೆಲವೇ ವರ್ಷಗಳಲ್ಲಿ ಇವು ವಿರೂಪಗೊಳ್ಳುತ್ತವೆ.

ಆಕರ ಗ್ರಂಥ

1. ಬಿ.ಆರ್. ಹಿರೇಮಠ : ಸೋದೆಯ ಸದಾಶಿವರಾಯನ ಕೃತಿಗಳು, ವೀರಶೈವ ಅಧ್ಯಯನ ಸಂಸ್ಥೆ, ಗದಗ, 1995.

ಉತ್ತರ ಕನ್ನಡ ಜಿಲ್ಲೆಯಲ್ಲಿ ವೈಷ್ಣವಧರ್ಮ

– ಡಾ. ಗಣಪತಿ ಗೌಡ ಎಸ್.

ಸಹ್ಯಾದ್ರಿಯಿಂದಾಗಿ ಕರ್ನಾಟಕದ ಪೂರ್ವಭಾಗದಿಂದ ಪ್ರಾಕೃತಿಕವಾಗಿ ಬೇರ್ಪಟ್ಟಿರುವ ಕರಾವಳಿ ಕರ್ನಾಟಕದಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಒಂದು. ಅತ್ತ ಸಾಗರ, ಇತ್ತ ಸಹ್ಯ ಪರ್ವತದ ಉತ್ತುಂಗ ಸಾಲು. ಇವುಗಳ ನಡು ನಡುವೆ ಈ ಜಿಲ್ಲೆ ಬುಹಮಟ್ಟಿಗೆ ತನ್ನ ಪ್ರಾಕೃತಿಕ ಅಖಂಡತೆಯನ್ನು ಉಳಿಸಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಮಹತ್ವದ ಪ್ರದೇಶವಾಗಿದ್ದರೂ ಧರ್ಮ–ಸಂಸ್ಕೃತಿ– ಕಲೆಗಳಲ್ಲಿ ತನ್ನದೇ ವೈಶಿಷ್ಟ್ಯವನ್ನು ಉಳಿಸಿಕೊಂಡು ಬಂದಿದೆ. ಇಂಥ ಜಿಲ್ಲೆಯಲ್ಲಿನ ವೈಷ್ಣವ ಧರ್ಮದ ಕುರಿತು ಇಲ್ಲಿ ವಿಶ್ಲೇಷಿಸುವಾಗ ದೊರೆತ ಶಿಲ್ಪ ಮತ್ತು ಶಾಸನಗಳನ್ನು ಮಾತ್ರ ಗಮನಿಸಲಾಗಿದೆ.

ಕ್ರಿ.ಶ. 2ನೇ ಶತಮಾನದಲ್ಲಿ ವೈಷ್ಣವಧರ್ಮ ದಖ್ಖನ್ನಿನಲ್ಲಿ ಅಸ್ತಿತ್ವದಲ್ಲಿದ್ದುದರ ಬಗ್ಗೆ ಶಾತವಾಹನರ ರಾಣಿ ನಾಗಮೂಲನಿಕಾಳ ನಾನಾಘಡ ಗುಹಾಶಾಸನ ಆಧಾರವಾಗಿದೆ.[1] ಆದರೆ ಈ ಕಾಲಕ್ಕೆ ವೈಷ್ಣವಧರ್ಮಕ್ಕೆ ಸೇರಬಹುದಾದ ಯಾವುದೇ ದಾಖಲೆಗಳು ಈ ಜಿಲ್ಲೆಯಲ್ಲಿ ಲಭ್ಯವಿಲ್ಲ. ಕ್ರಿ.ಶ. 2ನೇ ಶತಮಾನದ ಕೊನೆ ಮತ್ತು 3ನೇ ಶತಮಾನದ ಆದಿಯಲ್ಲಿ ವೈಷ್ಣವಧರ್ಮಕ್ಕೆ ಸೇರಿದ ಪ್ರಾಚೀನ ಶಿಲ್ಪಗಳು ಇಲ್ಲಿ ಲಭ್ಯವಾಗುತ್ತವೆ. ಈ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಕೊಂತಪಾಲದಲ್ಲಿ ದೊರೆತ ವಿಷ್ಣುವಿಗ್ರಹವು ಜಿಲ್ಲೆಯಲ್ಲಿ ದೊರೆತ ವೈಷ್ಣವ ವಿಗ್ರಹಗಳಲ್ಲಿಯೇ ಅತ್ಯಂತ ಪ್ರಾಚೀನವಾದದ್ದು. ಮೂರ್ತಿಶಿಲ್ಪ ಲಕ್ಷಣದ ಆಧಾರಗಳ ಮೇಲೆ ಇದು ಚುಟು–ಆನಂದರ ಕಾಲಕ್ಕೆ ಸೇರಿದ್ದೆಂದು ಹೇಳಲಾಗಿದೆ.[2] ಇದೇ ವಂಶದ ಚಕ್ರವರ್ತಿಗಳು ವಿಷ್ಣುಸ್ಕಂದ, ವಿಷ್ಣುರುದ್ರ ಮೊದಲಾದ ಹೆಸರನ್ನು ಇಟ್ಟುಕೊಂಡಿರುವರು ಇಲ್ಲಿ ಗಮನಾರ್ಹವಾಗಿದೆ.

ಈ ಜಿಲ್ಲೆಯಲ್ಲಿ ಕನ್ನಡದ ಪ್ರಥಮ ಮನೆತನವಾದ ಕದಂಬರು ಆಳ್ವಿಕೆಗೆ ಬಂದರು. ಇವರು ಬಹುಮಟ್ಟಿಗೆ ವೈದಿಕ ಧರ್ಮಾವಲಂಬಿಗಳಾಗಿದ್ದರೂ, ಬ್ರಹ್ಮದೇಯ ದಾನಗಳನ್ನು ಮಾಡಿರುವದು ಶಾಸನಗಳಿಂದ ತಿಳಿದು ಬರುತ್ತದೆ. ಇವರು ವೇದಾಧ್ಯಯನ ಮತ್ತು ಯಜ್ಞಯಾಗಾದಿಗಳಲ್ಲಿ ನಿರತರಾಗಿದ್ದರೆಂದು ತಾಳಗುಂದ ಶಾಸನ ತಿಳಿಸುತ್ತದೆ. ರವಿವರ್ಮ ಕೃಷ್ಣವರ್ಮ ಮುಂತಾದವರು ಅಶ್ವಮೇಧ ಯಜ್ಞಗಳನ್ನು ನೆರವೇರಿಸಿದ್ದರು. ಕದಂಬರ ಹೆಸರುಗಳಲ್ಲಿ ಕೆಲವಷ್ಟು ವೈಷ್ಣವ ಹೆಸರುಗಳಾಗಿವೆ. ಬನವಾಸಿಯಲ್ಲಿ ದೊರೆತ ಮೃಗೇಶ ವರ್ಮನ ಶಾಸನ ಸಂಸ್ಕೃತದಲ್ಲಿ ವಿಷ್ಣು ಸ್ತುತಿಯನ್ನು ದೊರೆತ ಮೃಗೇಶ ವರ್ಮನ ಶಾಸನ ಸಂಸ್ಕೃತದಲ್ಲಿ ವಿಷ್ಣುಸ್ತುತಿಯನ್ನು ಪ್ರಾರಂಭಿಸುತ್ತದೆ. ಇದನ್ನು ಗಮನಿಸಿದ ವಿದ್ವಾಂಸರು ಈ ಶಾಸನ ಬಹುಶಃ ವಿಷ್ಣುದೇವಾಲಯದ ಮುಂದಿದ್ದಿರಬೇಕೆಂದು ವಾದಿಸಿದ್ದಾರೆ.[3]

ಕ್ರಿ.ಶ. 5–6ನೇ ಶತಮಾನಕ್ಕೆ ಬಂದ ಹಾಗೆ ವೈಷ್ಣವ ಧರ್ಮಕ್ಕೆ ಇಲ್ಲಿ ಭದ್ರ ನೆಲೆ ದೊರೆತಂತೆ ಕಂಡು ಬರುತ್ತದೆ. ಯಾಕೆಂದರೆ ಈ ಜಿಲ್ಲೆಯಲ್ಲಿ ದೊರೆಯುವ ವೈಷ್ಣವ ಶಿಲ್ಪಗಳ ಸಂಖ್ಯೆ ಹೆಚ್ಚಾಗುತ್ತ ಹೋಗುತ್ತವೆ. ಬನವಾಸಿ, ಕಾರವಾರ ತಾಲ್ಲೂಕಿನ ಸಿದ್ಧರ ಅಂಕೋಲ ತಾಲ್ಲೂಕಿನ ಬೆಂಗಣಿ, ಹೊನ್ನಾವರ ತಾಲ್ಲೂಕಿನ ಬಳ್ಕೂರು[4] ಸಿದ್ದಾಮರ ತಾಲ್ಲೂಕಿನ ಮುಗ್ದೂರು[5] ಮೊದಲಾದ ಕಡೆ ನರಸಿಂಹನ ಮೂರ್ತಿಗಳು ದೊರೆತರೆ, ವಿಷ್ಣುವಿನ ಮಾಧವನ ರೂಪದಲ್ಲಿರುವ ಮೂರ್ತಿಗಳು ಹೊನ್ನಾವರ ತಾಲ್ಲೂಕಿನ ಹೈಗುಂದ[6] ಅಂಕೋಲಾ ತಾಲ್ಲೂಕಿನ ಸುಂಕೇರಿ[7] ಸಿದ್ಧಾಪೂರ ತಾಲ್ಲೂಕಿನ ಮುಗ್ದೂರು[8] ಮೊದಲಾದ ಕಡೆ ಲಭ್ಯವಾಗುತ್ತವೆ.

ಆದರೆ ಕ್ರಿ.ಶ. 6–7ನೇ ಶತಮಾನದಿಂದ ಹಿಡಿದು ಕ್ರಿ.ಶ. 11ನೇ ಶತಮಾನದವರೆಗಿನ ಯಾವುದೇ ದಾಖಲೆಗಳು ಅಲಭ್ಯವಿರುವ ಕಾರಣ ಇಲ್ಲಿಯ ವೈಷ್ಣವ ಧರ್ಮದ ಪರಿಸ್ಥಿತಿಯ ಕುರಿತು ವಿವರಿಸುವುದು ಕಷ್ಟ. ಆದುದರಿಂದ ಈ ಧರ್ಮಕ್ಕೆ ಸರಿಸಾಟಿಯಾಗಿ ಪ್ರಬಲವಾದ ಯಾವುದೋ ಇನ್ನೊಂದು ಧರ್ಮ ನಿಂತಿರಬಹುದೆ? ಅಥವಾ ಈ ಕ್ಷೇತ್ರದಲ್ಲಿನ ಅನ್ವೇಷಣಾ ಕಾರ್ಯ ಇನ್ನೂ ತೀವ್ರವಾಗಬೇಕಾಗಿದೆಯೆ? ಮುಂದಿನ ದಿನಗಳಲ್ಲಿ ಇದಕ್ಕೆ ಪೂರಕಮಾಹಿತಿ ಲಭ್ಯವಾಗಬಹುದೇ ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಯಾಕೆಂದರೆ ಹೊನ್ನಾವರದ ಕೇಕಯ ಚಿತ್ರಸೇನನ ಶಾಸನ9, ಭೋಜ ಆಶಂಕಿತವರ್ಮನ ಅಂಕೋಲಾ ತಾಲ್ಲೂಕಿನ ಹಿರೇಗಟ್ಟಿ ಶಾಸನ10 ಮತ್ತು ಕಾರವಾರದ ಬಬ್ರುವಾಡದಲ್ಲಿ ದೊರೆಯುವ ಬುದ್ಧನ ಮೂರ್ತಿ11 ಮೊದಲಾದವರನ್ನು ಗಮನಿಸಿದರೆ ಆರ್ಯಸಂಘ ಇಲ್ಲಿ ಬಲವಾಗಿರುವುದು ಕಂಡು ಬರುತ್ತವೆ. ಬಹುಶಃ ಬೌದ್ಧ ಧರ್ಮ ಈ ಸಂದರ್ಭದಲ್ಲಿ ವೈಷ್ಣವ ಧರ್ಮಕ್ಕೆ ಪ್ರಬಲ ಪೈಪೋಟಿಯ ಧರ್ಮವಾಗಿದ್ದಿರಬಹುದೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುತ್ತದೆ. ಆದರೆ ಹಿರೇಗುತ್ತಿ ಪ್ರಥ್ವೀವರ್ಮರಾಜನ ಶಾಸನ12 ಅಗ್ನಿವೇಶ್ಯ ಗೋತ್ರದ ಮಾಧವಾರ್ಯನನ್ನು ಗೋತ್ರದ ಗೋವಿಂದಸ್ವಾಮಿಯನ್ನು ಹೆಸರಿಸುತ್ತಿದೆ.

ಕ್ರಿ.ಶ. 10ನೇ ಶತಮಾನದ ಸುಮಾರಿಗೆ ಆಳ್ವಿಕೆಗೆ ಬಂದ ಶಿಶುಗಲಿ ಪಾಂಡ್ಯರ ಕಾಲದಲ್ಲಿ ಪುನಃ ವೈಷ್ಣವಧರ್ಮ ಇಲ್ಲಿ ರಾಜಾಶ್ರಯ ಪಡೆದುಕೊಳ್ಳಲು ಪ್ರಾರಂಭಿಸಿತು. ಕ್ರಿ.ಶ. 1140ರ ತುಂಬೋಳ್ಳಿ ಶಾಸನ ತಿಳಿಸುವಂತೆ ಸ್ವಸ್ತಿ ಶಕವರ್ಷ 1062ರ ರೌದ್ರ ಸಂವತ್ಸರದ ಪುಶ್ಯ ಶುದ್ಧ 13 ಉತ್ತರಾಯಣ ಸಂಕ್ರಮಣ ವ್ಯತಿಪಾತಯೋಗ ಕೂಡಲು ಕನ್ನೆದಾನ ಅಗ್ರಹಾರ ತುಂಬೊಳ್ಳಿಯಲ್ಲಿ ಮಾಡಿಸಿದ ವಿಷ್ಣು ವಿಗ್ರಹಕ್ಕೆ ಮತ್ತು ಅಲ್ಲಿಯ ಪೂಜೆಗೆ, ಶ್ರೀಗಂಧಕ್ಕೆ, ಚೈತ್ಯಪವಿತ್ರಕ್ಕೆ, ಮಠದ ಮಾಣಿಗೆ, ಪ್ರತಿ ತಿಂಗಳು ನಡೆಯುವ ಭಾರತಕ್ಕೆ, ನೈವೇದ್ಯಕ್ಕೆ ಅನೇಕ ಗ್ರಾಮಗಳನ್ನು ದಾನ ಬಿಟ್ಟ ವಿಷಯ ತಿಳಿದು ಬರುತ್ತದೆ.14 ಇಲ್ಲಿಯ ವಿಷ್ಣುವಿನ ವಿಗ್ರಹ ಅತ್ಯಂತ ಮನೋಹರವಾಗಿದ್ದು ಚೋಳರ ಪ್ರಭಾವವನ್ನು ಇಲ್ಲಿಯ ವಿಷ್ಣು ಶಿಲ್ಪದಲ್ಲಿ ಕಾಣಬಹುದು.

ಕುಮಠಾ ತಾಲ್ಲೂಕಿನ ಅಡತಾರೆಯಲ್ಲಿ ಎರಡು ಶಾಸನವಿದೆ. ಇದು ಶಕವರ್ಷ 1089, ಸರ್ಬ್ಬಜಿತ್ ಸಂವತ್ಸರ, ಭಾದ್ರಪದ ಶುದ್ಧ ಸಪ್ತಮಿ ಬುಧುವಾರ (ಕ್ರಿ.ಶ. 1162 ಆಗಸ್ಟ್ 23)ಪಟ್ಟಣ ತೈಲವರ್ಮನನ್ನು ಹೆಸರಿಸಿ ಆತನ ತಮ್ಮ ಮಾವುಲಿದೇವ ಮತ್ತು ಮೊಮ್ಮಗ ವೀರದೇವ ಈ ಶಾಸನವನ್ನು ಪ್ರತಿಪಾಲಿಸಿದ ವಿಷಯ ಹೇಳಿ, ಅಲ್ಲಿಯ ಕೇಶವ ದೇವರಿಗೆ ನೀಡಿದ ದಾನವನ್ನು ತಿಳಿಸುತ್ತದೆ.[15]

ಚಂದಾವರ ಕದಂಬರು ವೈಷ್ಣವ ಧರ್ಮದ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಟ್ಟರು. ಈ ವಂಶದ ಹಿರಿಯ ದಂಡನಾಯಕನಾಗಿದ್ದ ಕೀರ್ತಿನಾರಾಯಣ ದಂಡನಾಯಕರು ಚಂದಾವರದಲ್ಲಿ ಪರಿಪೂರ್ಣ ಯೋಗಾನರಸಿಂಹನ ವಿಗ್ರಹವನ್ನು ಸ್ಥಾಪಿಸಿ ಅದರ ಅಂಗಭೋಗ ಮತ್ತು ರಂಗಭೋಕ್ಕೆ ದತ್ತಿ ಬಿಟ್ಟ ವಿಷಯವನ್ನು ಕ್ರಿ.ಶ 1223ರ ಶಾಸನ ತಿಳಿಸುತ್ತದೆ.[16]

ವಿಜಯನದರದ ಆಳ್ವಿಕೆ ಕಾಲದಲ್ಲಿ ಅವರ ಮಾಂಡಲಿಕರಾಗಿ ಅನೇಕರು ಕರಾವಳಿ ಜಿಲ್ಲೆಯಲ್ಲಿದ್ದರು. ಅವರಲ್ಲಿ ನಗಿರೆ ರಾಜ್ಯದ ಮಾಂಡಳಿಕರಾಗಿದ್ದ ಪದುಮಲದೇವಿ ಕೃಷ್ಣ ದೇವರಾಯನ ಆಳ್ವಿಕೆಯಲ್ಲಿ ಕ್ರಿ.ಶ. 1526ರ ಜೂನ್ 24 ರವಿವಾರದಂದು ಗೋಪಣ ಸೇನುಬೋವನ ಮಗನಾದ ಮಹಾಳಪ್ಪ ಸೇನುಬೋವರು ಧರ್ಮಮಾಡಿ ಗೋಕರ್ಣ ಕ್ಷೇತ್ರದೊಳಗೆ ಕುಂಬಿಟಿಯ ವರ್ಧಮಾನ ಸಂತತಿಯ ಮಹಾಬಳ ದೇವರಸರ ಮಕ್ಕಳು ಬೊಂಮಿ ದೇವರಸರು ಸಂಗೀರಾಯರಸನ ಮಕ್ಕಳು ಮಹಾಬಳದೇವರಸರು, ಮೊದಲಾದವರ ಕೈಯಲ್ಲಿ ಭೂಮಿಯನ್ನು ಖರೀದಿಸಿ ರಘುನಾಥ ದೇವ ಮತ್ತು ಅದಕ್ಕೆ ಹೊಂದಿದ ಮಠವನ್ನು ನಿರ್ಮಿಸಿದರು ಎಂದು ಕುಮಠಾ ತಾಲ್ಲೂಕಿನ ಮಿರ್ಜಾನ ಶಾಸನದಿಂದ ತಿಳಿದು ಬರುತ್ತದೆ.[17]

ಭಟ್ಕಳದ ಕೇತಪ್ಯೆ ನಾರಾಯಣ ದೇವಾಲಯದಲ್ಲಿ ದೊರೆತ ಶಾಸನವೊಂದು ಕ್ರಿ.ಶ. 1546ರ ಕಾಲಕ್ಕೆ ಸೇರಿದೆ. ಚೆನ್ನಾದೇವಿ ಅಮ್ಮನ ಕಾಲದ ಈ ಶಾಸನದಲ್ಲಿ ಕೇತಪ್ಯೆ ನಾರಾಯಣ ದೇವಾಲಯದ ನಿರ್ಮಾಣದ ಬಗ್ಗೆ ವಿವರಣೆ ಇದೆ. ದೇವರ ನಿತ್ಯ ನೈವೇದ್ಯಕ್ಕಾಗಿ ತೆರಿಗೆ ರಹಿತವಾದ ಭೂಮಿಯನ್ನು ದಾನ ನೀಡಿರುವದನ್ನು ಇದು ಪ್ರಸ್ತಾಪಿಸುತ್ತದೆ. ಈ ಶಾಸನದಲ್ಲಿ ಹೇಳಿರುವ ಕೇತಪ್ಯೆ ಗೋವಾ ರಾಜ್ಯದ ಕುಡುಲೇರಿಯಿಂದ ಬಂದನೆಂಬುದನ್ನು ಇದು ದೃಢಪಡಿಸುತ್ತಿದೆ. ಆದರೆ ಈತ

ಭಟ್ಕಳಕ್ಕೆ ಬಂದ ಕಾರಣವನ್ನು ಮಾತ್ರ ಶಾಸನ ಪ್ರಸ್ತಾಪಿಸುವುದಿಲ್ಲ. ಇಲ್ಲಿಯ ವೈಷ್ಣವರ ಉಪಹಾರಕ್ಕಾಗಿ ಭೂಮಿಯನ್ನು ದತ್ತಿ ಬಿಡಲಾಗಿತ್ತು.[18]

ಕೇತಪೈನ ಮಕ್ಕಳಾದ ದಾಮಪ್ಪಯ್ಯ, ವಾಮನಪ್ಪಯ್ಯ, ತಿಮ್ಮಪ್ಪಯ್ಯ ಮಾದಪ್ಪಯ್ಯ ಮತ್ತು ಕ್ರಿಷ್ಣಪ್ಪಯ್ಯ ಈ ಮೇಲಿನ ದೇವಾಲಯಕ್ಕೆ ಅಪಾರ ದಾನ ನೀಡಿರುವುದಾಗಿ ಕ್ರಿ.ಶ. 1554ರ ಶಾಸನ19 ತಿಳಿಸಿದರೆ, ನಾರಾಣ ಹೆಬ್ಬಾರನ ಮಗ ಜಮ್ಮಿಹೆಬ್ಬಾರ ಬ್ರಾಹ್ಮಣರ ಊಟೋಪಚಾರಕ್ಕಾಗಿ ಭೂಮಿ ಮತ್ತು ಹಣವನ್ನು ದಾನ ನೀಡಿದ್ದುದಾಗಿ ತಿಳಿದು ಬಂದಿದೆ.[20] ಇದೇ ಕಾಲದ ಇನ್ನೊಂದು ಶಾಸನ ತಿಳಿಸುವಂತೆ ನಾರಾಯಣ ದೇವರಿಗೆ ಕೇತಪ್ಪೆ ಮತ್ತು ಆತನ ಐದು ಜನ ಮಕ್ಕಳ ಹೆಸರಲ್ಲಿ ಪ್ರತಿನಿತ್ಯ ಸೇವೆ ಸಲ್ಲಿಸಬೇಕಾಗಿತ್ತು.

ಗೇರುಸೊಪ್ಪೆಯ ರಾಣಿ ಚೆನ್ನಾಭೈರಾದೇವಿ ಜೈನ ಧರ್ಮಕ್ಕೆ ಹೆಚ್ಚಿನ ಮಹತ್ವವನ್ನು ನೀಡಿದ್ದರೂ, ವೈಷ್ಣವ ಧರ್ಮದ ಏಳ್ಗೆಗೆ ಶ್ರಮಿಸಿದ್ದಳೆನ್ನುವದಕ್ಕೆ ಆಧಾರಗಳಿವೆ. ಈಕೆಯ ಆಳ್ವಿಕೆಯಲ್ಲಿ ತಿಮ್ಮಪ್ಪ ಸೇನಬೋವ ಮತ್ತು ಆತನ ಮೊಮ್ಮಗನಾದ ಕರಣಿಕ ಮಲ್ಲರಸ ತಿರುವೆಂಗಳನ(ವೆಂಕಟೇಶ) ದೇವಾಸಯವನ್ನು ನಿರ್ಮಿಸಿದ್ದರು. ಈ ದೇವರ ದಿನನಿತ್ಯದ ಪೂಜೆ ಪುನಸ್ಕಾರಕ್ಕಾಗಿ 36 ಮೂಡೆ ಹಿಡುವಳಿ ಸಿಗುವ ಭೂಮಿಯನ್ನು ದಾನಮಾಡಲಾಗಿತ್ತು. ಇದರಿಂದ ನೈವೇದ್ಯ, ಹೂಹಾರ ಸಂಜೆ ನೈವೇದ್ಯ, ಗಂಧ ಊದಬತ್ತಿ, ದೀಪ, ಆರತಿ ಜೊತೆಗೆ ಕಾರ್ತಿಕ ಮಾಸದಲ್ಲಿ ನಡೆಯುವ ವಿಶೇಷ ಹಬ್ಬಕ್ಕೂ ಈ ದತ್ತಿಯನ್ನು ಸದ್ವಿನಿಯೋಗಪಡಿಸಿಕೊಳ್ಳಲಾಗುತ್ತಿತ್ತು.[21]

ಶಿರ್ಶಿ ತಾಲ್ಲೂಕಿನ ಸೋಂದಾ ವೈಷ್ಣವ ಧರ್ಮದ ಒಂದು ಪ್ರಮುಖ ಕೇಂದ್ರ. ಇದು ಕ್ರಿ.ಶ.13ನೇ ಶತಮಾನದ ಮಧ್ಯ ಭಾಗದಿಂದ ವೈಷ್ಣವ ಧರ್ಮದ ಪ್ರಮುಖ ಕೇಂದ್ರವಾಗಿ ಬೆಳೆದುಕೊಂಡು ಬಂದಿತು. ಸಹಸ್ರಲಿಂಗದಲ್ಲಿ ದೊರೆಯುವ ಕದಂಬ ತ್ರಿಭುವನ ಮಲ್ಲನ ಶಾಸನದಂತೆ,22 ಪ್ರಕಾಶತೀರ್ಥರ ಶಿಷ್ಯರಾದ ರಾಜೇಂದ್ರಭಾರತೀಯರು ಇಲ್ಲಿ ಕೇಶವಮೂರ್ತಿಯನ್ನು ಪ್ರತಿಷ್ಠಾಪಿಸಿದರು. ದೊರೆ ಎರಡನೇ ಅರಸಪ್ಪ ನಾಯಕ ಸಹಸ್ರಲಿಂಗದಲ್ಲಿನ ಶಂಕರ ಮಠಕ್ಕೆ ಸೇರಿದ ಮಠವೊಂದನ್ನು ಸ್ವರ್ಣವಲ್ಲಿಗೆ ವರ್ಗಾಯಿಸಿದನೆಂದು ತಿಳಿದುಬರುತ್ತದೆ. ಇದಕ್ಕೆ ಮುಖ್ಯ ಕಾರಣ ಕಳ್ಳರು ಮಠದ ಆಸ್ತಿಯನ್ನು ಪದೇ ಪದೇ ದೋಚುತ್ತಿದ್ದುದೇ ಆಗಿತ್ತೆಂದು ಇತ್ತೀಚಿನ ಸಂಶೋಧನೆ ತಿಳಿಸುತ್ತದೆ.[23]

ಮಠದ ಪಕ್ಕದಲ್ಲಿಯೇ ಅರಸಪ್ಪನಾಯಕ ಲಕ್ಷ್ಮೀನರಸಿಂಹ ದೇವಾಲಯವನ್ನು ನಿರ್ಮಿಸಿದನು. ಆ ಸಂದರ್ಭದಲ್ಲಿ ಚಂದ್ರಶೇಖರ ಸರಸ್ವತಿಯವರು ಈ ಮಠದ ಮಠಾಧೀಶರಾಗಿದ್ದರು ಎನ್ನುವದು ಮಠದಲ್ಲಿ ದೊರೆತ ಕ್ರಿ.ಶ. 1674ರ ಶಾಸನ ತಿಳಿಸುತ್ತದೆ.24 ಸವಾಯಿ ರಾಮಚಂದ್ರ ಸೋದೆಯ ಚಕ್ರವರ್ತಿಯಾಗಿದ್ದಾಗ ಸ್ವರ್ಣವಳ್ಳಿ ಮಠಾಧೀಶರಾದ ಸರ್ವಜ್ಞ ಸರಸ್ವತಿಯವರು ರಾಜನ ಶ್ರೇಯಸ್ಸನ್ನು ಬಯಸಿ ವೈದಿಕಯಜ್ಞ ಕೈಗೊಂಡಿದ್ದರೆಂದು ತಿಳಿಸುತ್ತದೆ.

ಕ್ರಿ.ಶ. 16ನೇ ಶತಮಾನದಲ್ಲಿ ಮಾಧ್ವ ಪಂಥದ ವಾದಿರಾಜರು ಸೋಂದಾದಲ್ಲಿ ವೈಷ್ಣವ ಧರ್ಮದ ಪ್ರಗತಿಗಾಗಿ ಶ್ರಮಿಸಿದರು. 1583ರಲ್ಲಿ ವಾದಿರಾಜರು ತ್ರಿವಿಕ್ರಮನ ವಿಗ್ರಹವನ್ನು ಇಲ್ಲಿ ಪ್ರತಿಷ್ಠಾಪಿಸಿದರು.[25] ಇಮ್ಮಡಿ ಅರಸಪ್ಪ ನಾಯಕ ಅಧಿಕ ಮೊತ್ತದ ದಾನವನ್ನು ಈ ಮಠಕ್ಕೆ ನೀಡಿದನು. ತ್ರಿವಿಕ್ರಮ ದೇವಾಲಯದ ಮುಂದಿರುವ ಧ್ವಜಸ್ತಂಭವನ್ನು ವಾದಿರಾಜರ ಶಿಷ್ಯರಾದ ವೇದನಿಧಿತೀರ್ಥರು ಸ್ಥಾಪಿಸಿದರು.

ಬನವಾಸಿ ಮಧುಕೇಶ್ವರ ದೇವಾಸಯದಲ್ಲಿರುವ ಶಾಸನದಂತೆ26 ಇಮ್ಮಡಿ ಅರಸಪ್ಪನ ಮಗಳಾದ ಅರಸಾದೇವಿ ಹಳೆಯ ನರಸಿಂಹನ ವಿಗ್ರಹವನ್ನು ಬದಲಿಸಿ ಹೊಸ ವಿಗ್ರಹವನ್ನು ಪ್ರತಿಷ್ಠಾಪಿಸಿ ಪೂಜೆ ಮತ್ತು ನೈವೇದ್ಯಕ್ಕಾಗಿ ದಾನ ನೀಡಿದ್ದಳೆಂದು ತಿಳಿದು ಬಂದರೆ, ಅರಸಪ್ಪನಾಯಕನ ಮಗ ರಾಮಚಂದ್ರನಾಯಕನ ಶಾಸನದಂತೆ ಇಲ್ಲಿಯ ಲಕ್ಷೀನಾರಾಯಣ ದೇವಾಲಯವನ್ನು ಕುಂದಾಪುರದ ವ್ಯಾಸರಾಯರ ಮಠದ ರಘುಪತಿತೀರ್ಥರ ಶಿಷ್ಯರಾದ ಹಯಗ್ರೀವತೀರ್ಥರು ನೋಡಿಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ. ಸೋಂದಾ ಅರಸರ ಕಾಲದಲ್ಲಿ ವೀರಶೈವ ಧರ್ಮ ತನ್ನ ಪ್ರಾಬಲ್ಯವನ್ನು ಗಳಿಸಿಕೊಳ್ಳಲೂ ಪ್ರಾರಂಭಿಸಿದರೂ, ವೈಷ್ಣವ ಧರ್ಮವೇನೂ ಪ್ರಭಾವ ಹೀನವಾಗಲಿಲ್ಲ. ಯಾಕೆಂದರೆ ಇಂದಿನವರೆಗೂ

ಇಲ್ಲಿಯ ಮಠ ತನ್ನ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದನ್ನು ನೋಡಿದರೆ ವೀರಶೈವ ಧರ್ಮಕ್ಕೆಅರಸರು ರಾಜಾಶ್ರಯ ನೀಡಿದ್ದರೂ ಉಳಿದವರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಇಂದು ಈ ಜಿಲ್ಲೆಯಲ್ಲಿ ಹಲವು ವರ್ಗದವರು ವೈಷ್ಣವ ಧರ್ಮವನ್ನು ಪಾಲಿಸಿಕೊಂಡು ಬರುತ್ತಿದ್ದಾರೆ. ಒಟ್ಟಿನಲ್ಲಿ ಸೂಕ್ಷ್ಮವಾಗಿ ಗಮನಿಸಿದಾಗ ವೈಷ್ಣವ ಧರ್ಮ ಈ ಭಾಗದಲ್ಲಿ ಪ್ರಾಚೀನ ಕಾಲದಿಂದಲೇ ಅಸ್ತಿತ್ವಕ್ಕೆ ಬಂದು ಬಹುಜನರು ಅನುಸರಿಸಿದ ಧರ್ಮವಾಗಿ ಬೆಳೆಯಿತು ಎಂದು ಹೇಳಬಹುದು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Sircar D.C. Select insciptions beanong on indian History, Vol-1, No 82. p.193
2. ಅ. ಸುಂದರ., 'ಇತ್ತೀಚಿನ ಕೆಲವು ಪುರಾತತ್ವ ಸಂಶೋಧನೆಗಳು', ಕರ್ನಾಟಕ ಭಾರತಿ ಸಂ. VIII-2 ಪು.15.
3. Padigar S.V. The calt of Vishnu in Karnataka, karnatak University, Dharwad.
4. ಆ ಸುಂದರ., ಪ್ರಾಚೀನ ಕರ್ನಾಟಕದಲ್ಲಿ ನರಸಿಂಹ ಶಿಲ್ಪದ ವಿಕಾಸ ಒಂದು ವಿವೇಚನೆ', ಸಂಶೋಧನೆ, ಎಂ. ಚಿದಾನಂದಮೂರ್ತಿಯವರ ಗೌರವ ಗ್ರಂಥ, ಪು. 784–783.
5. ಗಣಪತಿ ಗೌಡ., 'ಮುಗ್ದೂರಿನ ಎರಡು ಪ್ರಾಚೀನ ಶಿಲ್ಪಗಳು', ಕರ್ನಾಟಕ ಭಾರತಿ, ಸಂ. XXIV-3 ಪು. 81–84.
6. ಆ ಸುಂದರ.,'ಇತ್ತೀಚಿನ ಕೆಲವು ಮುಖ್ಯ ಪುರಾತತ್ವ ಶೋಧನೆಗಳು', ಕರ್ನಾಟಕ ಭಾರತಿ, ಸಂ VIII-2¥ÀÄ. 10–12.
7. ಅ. ಸುಂದರ., 'ಸಿದ್ಧರ ಮತ್ತು ಸುಂಕೇರಿ ಗ್ರಾಮಗಳಲ್ಲಿನ ಎರಡು ಅಪರೂಪದ ಶಿಲಾಮೂರ್ತಿಗಳು, ಕರ್ನಾಟಕ ಭಾರತಿ, ಸಂ ಘಿಫಿಙ–3 ಪು. 121–31.
8. ಗಣಪತಿ ಗೌಡ., 'ಮುಗ್ದೂರಿನ ಎರಡು ಪ್ರಾಚೀನ ಶಿಲ್ಪಗಳು',ಕರ್ನಾಟಕ ಭಾರತಿ, ಸಂ.XXIV-3ಪು. 81–84.
9. Gopal B.R., Corpus of Kadamba Inscriptions Vol. 1. No. 17.
10. Epigraphia indica. Vol. XXXIII, PP. 63-64.
11. ಆ ಸುಂದರ., 'ಉತ್ತರ ಕನ್ನಡ ಜಿಲ್ಲೆಯ ಅಪೂರ್ವ ಶಿಲ್ಪಗಳು', ಮಾನವಿಕ ಭಾರತಿ. ಸಂ. 3–2 ಪು. 1–2.
12. Epigraphia indica, Vol XXXIII Pp. 70-75.
13. ಅದೇ ಪು. 70–75.
14. ಗಣಪತಿ ಗೌಡ. ಕರ್ನಾಟಕ ಭಾರತಿ, ಸಂ XXIII-7 ಪು. 21–32.
15. ಅದೇ. ಪು. 104–108.
16. Ssmpath M.D. Chandavara inscriprion of Kadamba Bhairadevararasa, Journal of the Epigraphical Society of india, VoI. XI, Pp. 88-94.
17. karnataka Inscriptions, Vol. VI No. 69, Pp. 186- 90, Dharwad
18. Annual Report of South indian Epigraphy, 1965-66,Pp B No. 367.
19. ಅದೇ., ನಂ. 370.
20. ಅದೇ., ನಂ. 371.
21. Mysore Archaeologcial Report., 1928, No. 112.
22. Annual Report & South indian Epigraphy., 1939-40.
23. Hegde P.R. Sonda : A Cultural Study, an unphblished, M. Phill dissertatio, K.U. Dharwad, P. 95.
24. Epigraphia indica., Vol. XXXII, Pp. 79-81
25. Annual Report of South indian Epigraphy., 1939-40 No.75.
26. South indian inscriptions., Vol. XX. No. 241.

❑

ಬಂಗಾರಮಕ್ಕಿ ಪ್ರಸನ್ನವೀರಾಂಜನೇಯ ಸ್ವಾಮಿ ದೇವಾಲಯದಲ್ಲಿನ ಮಂಡಲ ಚಿತ್ರಗಳು

– ಡಾ. ಬೆಂ. ಶಾ. ಶಾಮಲಾ ರತ್ನಕುಮಾರಿ

ಉತ್ತರ ಕನ್ನಡ ಜಿಲ್ಲೆಯ ಬಂಗಾರಮಕ್ಕಿಯು ಶರಾವತಿ ನದಿಯ ಉತ್ತರದ ದಂಡೆಯ ಮೇಲಿದೆ; ದಕ್ಷಿಣದ ದಂಡೆಯ ಮೇಲೆ ಗೇರಸೊಪ್ಪವೂ ಇದೆ. ಗೇರಸೊಪ್ಪ ಮೂಲಕ ಹೊನ್ನಾವರಕ್ಕೆ ಹೋಗುವ ಬಸ್ಸುಗಳು ಬಂಗಾರಮಕ್ಕಿಯ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಾವಯದ ಮುಂದೆ ನಿಲ್ಲುತ್ತವೆ. ಈ ದೇವಾಲಯವನ್ನು ಗೇರಸೊಪ್ಪದಲ್ಲಿನ ಮಾರುತಿ ದೇವಾಲಯದ ಅರ್ಚಕ ಯಜುರ್ವೇದೀ ಅದ್ವೈತ ಸಂಪ್ರದಾಯದ ಹವ್ಯಕ ಮನೆತನದ ಶ್ರೀಗಣೇಶಭಟ್ಟರೆಂಬುವರು ಕಟ್ಟಿಸಿದ್ದಾರೆ. ದೇವಾಲಯದಲ್ಲಿನ ಶಿಲಾಲೇಖದಿಂದ ದೇವರ ಪ್ರತಿಷ್ಠಾಪನೆಯ ಕ್ರೋಧನ ಸಂವತ್ಸರದ ಫಾಲ್ಗುಣ ಬಹುಳ ಪಂಚಮಿ ಅಂದರೆ 30.3.1986 ರಂದು ನೆರವೇರಿತೆಂದು ತಿಳಿದುಬರುತ್ತದೆ. ಪುನರ್ ಪ್ರತಿಷ್ಠಾ ಮಹೋತ್ಸವವನ್ನು 29.3.97ರಂದು ದೀವಗಿಯ ಶ್ರೀ ಶ್ರೀ ಶ್ರೀ ಅವಧೂತ ರಾಮಾನಂದ ಸ್ವಾಮೀಜಿ ಮತ್ತು ಶ್ರೀ ಶ್ರೀ ನಿರ್ಮಲಾನಂದ ಸ್ವಾಮೀಜಿ ಗೋರೆ ನೆರವೇರಿಸಿದ್ದಾರೆ. ಪುನರ್ ಪ್ರತಿಷ್ಠಾಪನೆಯ ನಂತರ ದೇವಾಲಯದ ಒಳಗೋಡೆಗಳ ಮೇಲೆ ಮಂಡಲ ಚಿತ್ರಗಳನ್ನು ಬರೆಯಿಸಲಾಗಿದೆ. ಒಟ್ಟು ಮೂವತ್ತೊಂದು ಮಂಡಲ ಚಿತ್ರಗಳಿದ್ದು ಅವುಗಳ ಹೆಸರನ್ನು (ಕೆಲವು ಚಿತ್ರಗಳನ್ನು ಹೊರತುಪಡಿಸಿ) ಕ್ರಮಾಗತವಾಗಿ ಮುಂದಿನಂತೆ ಕೊಡಲಾಗಿದೆ:

ದಕ್ಷಿಣ ಪಾರ್ಶ್ವ ಭಿತ್ತಿಯಲ್ಲಿ – 1) ಸಹಸ್ರ ಸಂಖ್ಯಾಕ ಕೈಲಾಸ ಮಹಾಯಂತ್ರ 2) ಶ್ರೀ ಚಕ್ರ (ಅಪೂರ್ಣ) 3) ಚಕ್ರಾರವಿಂದ 4) ಚತುರಸ್ರ ಗ್ರಹಮಂಡಲ 5) ವರ್ತುಲ ಗ್ರಹಮಂಡಲ 6) ವಾಸ್ತುಮಂಡಲ 7) ಶ್ರೀ ಗಣಪತಿಯಂತ್ರ 8)ಸ್ವಯಂವರ ಯಂತ್ರ, ಪಶ್ಚಿಮ ಭಿತ್ತಿಯಲ್ಲಿ 9) ಹನುಮತ್ ಯಂತ್ರ 10) ಹನುಮತ್‌ಯಂತ್ರ 11) ಶ್ರೀ ಲಕ್ಷ್ಮೀ ಪೂಜನಯಂತ್ರ 12)ಶ್ರೀ ಚಕ್ರ 13)ಏಕಲಿಂಗತೋಭದ್ರ 14) ಶ್ರೀಚಕ್ರ 15) ಸರ್ವತೋಭದ್ರ 16) ಶ್ರೀ ಲಕ್ಷ್ಮೀ ಪೂಜನ ಯಂತ್ರ 17) ನವನಾಭಿಮಂಡಲ 18)ಅಪೂರ್ಣ ಚಿತ್ರ, ಉತ್ತರ ಭಿತ್ತಿಯಲ್ಲಿ 19) ಅಪೂರ್ಣ ಚಿತ್ರ 20)ಜನನ ಯಂತ್ರ 21)ನಾಮಾಂಕಿತವಿಲ್ಲದ ಚಿತ್ರ 22)ಚತುರ್ಲಿಂಗತೋಭದ್ರ 25) ರುದ್ರ ಪೀಠಮಹಾಯಂತ್ರ 26) ವರುಣ ಮಂಡಲ 27)ಸ್ವಸ್ತಿಕ ಮಂಡಲ 28) ವಾಸ್ತುಮಂಡಲ (29, 30) ನಾಮಾಂಕಿತವಿಲ್ಲದ ಚಿತ್ರಗಳು 31) ದಶ ದಿಕ್ಕುಗಳ ಸಂಕೇತ ಚಿತ್ರಗಳು ಕಂಡುಬರುತ್ತವೆ.

ಮಾನವನು ಧರ್ಮಾರ್ಥಕಾಮಗಳೆಂಬ ಪುರುಷಾರ್ಥ ಸಿದ್ಧಿಗಾಗಿ ನಿತ್ಯ ನೈಮಿತ್ತಿಕ ಕಾಮ್ಯಗಳೆಂಬ ಮೂರು ವಿಧದ ಕರ್ಮಗಳನ್ನು ನಡೆಸಬೇಕೆಂದು ಧಾರ್ಮಿಕ ಗ್ರಂಥಗಳು ವಿಧಿಸುತ್ತವೆ. ಈ ಕರ್ಮಗಳ ಆಚರಣೆಯಲ್ಲಿ ಮಂತ್ರಪಠಣ, ಮಂತ್ರಜಪ, ಚಕ್ರ ಅಥವಾ ಯಂತ್ರಗಳ ಅರ್ಚನೆ, ಮಂಡಲ ವಿಧಿ ಹವನ ಹೋಮಗಳನ್ನು ನಡೆಸಲಾಗುತ್ತದೆ. ಕಾಮ್ಯ ಕರ್ಮಾನುಷ್ಠಾನ ಸಂದರ್ಭದಲ್ಲಿ ಕಾಮ್ಯ ಅಥವಾ ಇಷ್ಟಾರ್ಥ ಸಿದ್ಧಿಗಾಗಿ ಇಷ್ಟದೇವತೆಯನ್ನು ಮಂತ್ರ ಪೂರ್ವಕವಾಗಿ ಮಂಡಲದಲ್ಲಿ ಆಹ್ವಾನಿಸಿ ಹೋಮಕಾರ್ಯದ ಮೂಲಕ ಹವಿಸ್ಸನ್ನು ದೇವತೆಗೆ ಸಮರ್ಪಿಸಿ ಕಾಮ್ಯಾರ್ಥ ಸಿದ್ಧಿಯನ್ನು ಪಡೆಯಲಾಗುತ್ತೆದೆ.

'ಮಂಡಲ' ಎಂದರೆ ನೈಮಿತ್ತಿಕ, ಕಾಮ್ಯ ಕರ್ಮಾನುಷ್ಠಾನದಲ್ಲಿ ಕಾಮ್ಯ ದೇವತೆಯನ್ನು ಮಂತ್ರಪೂರ್ವಕವಾಗಿ ಆಹ್ವಾನಿಸಿ, ಆ ದೇವತೆಯು ಮಂಡಿಸಲು ಆಸನರೂಪವಾಗಿ ಪರಿಗ್ರಹಿಸಲ್ಪಡುವ ಸಾಂಕೇತಿಕ ಚಿತ್ರ.

ಮಂಡಲ, ಚಕ್ರ, ಯಂತ್ರ ರಚನಾ ವಿಧನಗಳನ್ನು ಶ್ರುತ್ಯಾಗಮ ಸ್ಮೃತಿ ಗ್ರಂಥಗಳಲ್ಲಿ ಹೇಳಲಾಗಿದೆ. ಮಂಡಲ ರಚನೆಯನ್ನು ಋಗ್ವೇದೀಯ ಮತ್ತು ಕೃಷ್ಣ ಯಜುರ್ವೇದದ ಬೋಧಾಯನ ಪರಂಪರೆಗಳಿಗನುಗುಣವಾಗಿ ಸಿದ್ಧಗೊಳಿಸಲಾಗುತ್ತದೆ. 'ಮಂತ್ರ ಮಹೋದಧಿ' ಮತ್ತು 'ಮಂತ್ರ ಮಹಾರ್ಣವ' ಗ್ರಂಥಗಳಲ್ಲಿ ಮಂಡಲ ಚಿತ್ರಗಳಿಗೆ ಸಂಬಂಧಿಸಿದಂತೆ ವಿಪುಲವಾಗಿ ವಿವರಗಳು ದೊರೆಯುತ್ತವೆ.

ಜಪ ಹಾಗೂ ಅರ್ಚನೆಗಾಗಿ ವಿಧಿಸಿದ ಮಂತ್ರ, ಯಂತ್ರ ಅಥವಾ ಚಕ್ರಗಳಲ್ಲಿ ಋಷಿ ಪ್ರಣೀತ ಇಷ್ಟದೇವತಾ ಸಂಬಂಧಿ ಬೀಜಾಕ್ಷರವಿರುತ್ತದೆ. ಆದರೆ ಆಹ್ವಾನಿತ ಇಷ್ಟದೇವತಾ ಮಂಡನಕ್ಕಾಗಿ ಪೂಜಾ ಸಂದರ್ಭದಲ್ಲಿ ಆಸನರೂಪ ಮಂಡಲವನ್ನು ಸ್ಥಾಪಿಸಲಾಗುವುದರಿಂದ ನೆಲದ ಮೇಲೆಯೇ ನಿರ್ದಿಷ್ಟ ಹಾಗೂ ವಿಭಿನ್ನ ಆಕೃತಿಯನ್ನುಳ್ಳ ಮಂಡಲ ಚಿತ್ರಗಳನ್ನು ಬರೆಯಲಾಗುತ್ತದೆ. ಆದ್ದರಿಂದ ಮಂಡಲ ಚಿತ್ರಗಳಲ್ಲಿ ಬೀಜಾಕ್ಷರಗಳನ್ನು ಬರೆಯಲಾಗುವುದಿಲ್ಲ. ಚತುರಸ್ರ, ತ್ರಿಕೋಣ, ಅರ್ಧಚಂದ್ರ, ವರ್ತುಲ ಮುಂತಾದ ಆಕಾರಗಳನ್ನು ಕಾಮ್ಯದೇವತಾ ಲಕ್ಷಣ ಹಾಗೂ ಉದ್ದೇಶಗಳಿಗನುಗುಣವಾಗಿ ರಚಿಸಲಾಗುತ್ತದೆ ಹಾಗೂ ಪಂಚ ಭೂತಗಳ ಸಂಕೇತವಾಗಿ ಹಸಿರು, ಕೆಂಪು ಹಳದಿ, ಕಪ್ಪು ವರ್ಣಗಳನ್ನೂ ಬಳಸಲಾಗುತ್ತದೆ. ಅಂತೆಯೇ ಪೃಥ್ವೀ ಮತ್ತು ಅಪ್‌ತತ್ತ್ವಗಳನ್ನೂ, ಸತ್ವಗುಣವನ್ನು ಬಿಳಿ ವರ್ಣದಲ್ಲಿ, ತೇಜಸ್ಸನ್ನು ರಜೋಗುಣವನ್ನು ಕೆಂಪು ವರ್ಣದಲ್ಲಿ, ವಾಯು ತತ್ತ್ವವನ್ನು ಹಳದಿ ಅಥವಾ ಅರಿಶಿನ ವರ್ಣದಲ್ಲಿ, ಆಕಾಶತತ್ತ್ವವನ್ನು ತಮೋಗುಣವನ್ನು ಕಪ್ಪು ವರ್ಣದಲ್ಲಿ ಹಾಗೂ ವಲ್ಲಿಕಾ ರಚನೆಯಲ್ಲಿಯೂ ಸಮೃದ್ಧಿಗಾಗಿಯೂ ಹಸಿರು ವರ್ಣದಲ್ಲಿ ರಚನೆಯಲ್ಲಿಯೂ ಸಮೃದ್ಧಿಗಾಗಿಯೂ ಹಸಿರು ವರ್ಣದಲ್ಲಿ ರಚಿಸಲಾಗುತ್ತದೆ.

ಈಗ ಬಂಗಾರಮಕ್ಕಿ ವೀರಾಂಜನೇಯ ದೇವಾಲಯ ದೊಳಗಣ ಮಂಡಲ ಚಿತ್ರಗಳ ವಿವರಗಳ ಬಗ್ಗೆ ಪರಿಶೀಲಿಸ ಬಹುದಾಗಿದೆ.

ಶತರುದ್ರೀಯ, ಮಹಾರುದ್ರ, ಅತಿರುದ್ರ ಮುಂತಾದ ರುದ್ರ ದೇವತಾನುಷ್ಠಾನಗಳಲ್ಲಿ 'ಏಕಲಿಂಗತೋಭದ್ರ', 'ಚತುರ್ಲಿಂಗ ತೋಭದ್ರ', 'ಅಷ್ಟಲಿಂಗತೋಭದ್ರ' ಹಾಗೂ 'ದ್ವಾದಶ ಲಿಂಗತೋಭದ್ರ' ಮಂಡಲ ಚಿತ್ರಗಳನ್ನು ಬರೆಯುವುದು ಕಂಡು ಬರುತ್ತದೆ. ರುದ್ರಪೀಠ ಮಹಾಯಂತ್ರದ ಬಳಕೆಯು ರುದ್ರಾನುಷ್ಠಾನ ಸಂಬಂಧದಲ್ಲಿಯೇ ಕಂಡುಬರುತ್ತದೆ. ರುದ್ರಹೋಮ ಸಂದರ್ಭದಲ್ಲಿ ರುದ್ರನ ಪಂಚಾವರಣ ಆವಾಹನೆಗಾಗಿ ಅಷ್ಟದಿಕ್ಕುಗಳಲ್ಲಿ ಅಷ್ಟನಾಗಗಳನ್ನು ಹೊಂದಿರುವ 'ರುದ್ರ ಪೀಠ ಮಹಾಯಂತ್ರ'ವನ್ನು ರಚಿಸಲಾಗುತ್ತದೆ. 'ಸಹಸ್ರ ಸಂಖ್ಯಾಕ ಕೈಲಾಸ ಮಹಾಯಂತ್ರ'ವನ್ನು ರಚಿಸಲಾಗುತ್ತದೆ.

'ಶ್ರೀ ಚಕ್ರ'ವನ್ನು ರಾಜರಾಜೇಶ್ವರೀ ದೇವತಾ ಪ್ರೀತ್ಯರ್ಥ ಸಾಮಾನ್ಯವಾಗಿ ಸರ್ವಕಾರ್ಯಸಿದ್ಧಿಗಾಗಿಯೂ ವಿಶೇಷವಾಗಿ ವಿದ್ವಜ್ಜನರು ಜ್ಞಾನಪ್ರಾಪ್ತಿಗಾಗಿಯೂ ವಿರಕ್ತರು ಮೋಕ್ಷ ಪ್ರಾಪ್ತಿಗಾಗಿಯೂ ಅರ್ಚಿಸುತ್ತಾರೆ. ಇದೊಂದು ಪೂಜಾಯಂತ್ರವಾಗಿದ್ದು ಅಷ್ಟಮಿ ನವಮಿ ಚತುರ್ದಶಿ ತಿಥಿಗಳಂದು ಹಾಗೂ ಶುಕ್ರವಾರ ದಂದು ಶ್ರೀಚಕ್ರದ ಪೂಜೆಯನ್ನು ಮಾಡಲಾಗುತ್ತದೆ. ವೀರಾಂಜನೇಯ ದೇವಾಲಯದಲ್ಲಿ 'ತಂತ್ರಸಾರ' ಗ್ರಂಥೋಕ್ತ ರೀತ್ಯಾ ಮೇರುಪೃಷ್ಠ, ಭೂಪೃಷ್ಠ ಭಾಗಗಳನ್ನೊಳಗೊಂಡ 'ಅಷ್ಟದಳಯುಕ್ತ ಶ್ರೀಚಕ್ರಮಂಡಲ', 'ಷೋಡಶದಳಯುಕ್ತ ಶ್ರೀಚಕ್ರಮಂಡಲ' ಮತ್ತು ಸಾಮಾನ್ಯ 'ಶ್ರೀ ಚಕ್ರಮಂಡಲ' ಎಂಬುದಾಗಿ ಮೂರು ರೀತಿಯ ಮಂಡಲ ಚಿತ್ರಗಳನ್ನು ನೋಡಬಹುದಾಗಿದೆ.

ದುರ್ಗಾ ಹೋಮದ ಅನುಷ್ಠಾನದಲ್ಲಿ ಅರ್ಚನೆಗಾಗಿ ಬಳಸುವ ಬಿಂದು ಮಕರಂದ ಮಂಡಲದ ಮಧ್ಯಭಾಗ ಮತ್ತು ಭೂಪುರ (ಮಂಡಲದ ಹೊರಭಾಗ)ಗಳನ್ನೊಳಗೊಂಡ 'ದುರ್ಗಾಯಂತ್ರ'ದ ಚಿತ್ರವಿದೆ. ಆದರೆ ಈ ಚಿತ್ರವನ್ನು ಹೆಸರಿಸಿಲ್ಲ.

ವಿವಾಹಕ್ಕೆ ತಡೆಯಾಗುವ ಪ್ರತಿಬಂಧಕಗಳ ನಿವೃತ್ತಿಗಾಗಿ ಸ್ವಯಂವರ ಪಾವರ್ತಿ ಮಂಡಲವು ರಚಿಸಲ್ಪಡುತ್ತದೆ; ಹೋಮದ ನಂತರ ಯಂತ್ರಧಾರಣೆಗಾಗಿಯೂ ಬಲಸಲಾಗುತ್ತದೆ. ಸುಖ ಪ್ರಸವಕ್ಕಾಗಿಯೂ, ಗರ್ಭಸಂರಕ್ಷಣಕ್ಕಾಗಿಯೂ ಪ್ರಯೋಕ್ತವಾಗುವ 'ಜನನ ಮಹಾಯಂತ್ರ', 'ಗರ್ಭಾಂತರ ಯಂತ್ರ'ಗಳ ಚಿತ್ರಗಳನ್ನೂ ಇಲ್ಲಿ ಕಾಣಬಹುದಾಗಿದೆ.

'ಗ್ರಹಮಂಡಲ' ಕ್ಕೆ ಸಂಬಂಧಿಸಿದಂತೆ ಎರಡು ಚಿತ್ರಗಳಿವೆ. ಮೊದಲನೆಯ ಗ್ರಹಮಂಡಲ ಚಿತ್ರವು ವರ್ತುಲಾಕಾರದಲ್ಲಿದ್ದು ಮಧ್ಯಭಾಗದಲ್ಲಿ ಗ್ರಹಗಳನ್ನು, ಅದರ ಸುತ್ತಲೂ 27 ನಕ್ಷತ್ರಗಳನ್ನು ಅದರ ಸುತ್ತ 12 ರಾಶಿಗಳನ್ನೂ ಮತ್ತು ಹೊರ ಸುತ್ತಿನಲ್ಲಿ ಅಷ್ಟದಿಕ್ಪಾಲಕರನ್ನೂ ಹಾಗೂ ಕೆಳಭಾಗದಲ್ಲಿ ದುರ್ಗಾದಿ ಅಷ್ಟದಿಕ್ಪಾಲಕರನ್ನು ಹಾಗೂ ಕೆಳಭಾಗದಲ್ಲಿ ದುರ್ಗಾದಿ ಅಷ್ಟದೇವತೆಗಳನ್ನೂ ಒಳಗೊಂಡಿದೆ. ಎರಡನೆಯ ಗ್ರಹಮಂಡಲ ಚಿತ್ರವು ಚತುರಸ್ರ ಆಕಾರದಲ್ಲಿದ್ದು ನವಗ್ರಹಗಳನ್ನು ಅವುಗಳ ಸಂಕೇತಗಳೊಂದಿಗೆ ಹೆಸರಿಸಲಾಗಿದೆ. ಮೊದಲನೆಯ ಗ್ರಹಮಂಡಲದಲ್ಲಿ ಎರಡನೆಯ ಗ್ರಹಮಂಡಲದ ನವಗ್ರಹ ಸಂಕೇತಗಳನ್ನು ಅಳವಡಿಸಿದರೆ ಮಾತ್ರ ಶಾಸ್ತ್ರೀಯವಾದ ಬೋಧಾಯನೋಕ್ತ ಗ್ರಹಮಂಡಲವಾಗುವುದು.

'ವಾಸ್ತು ಮಂಡಲ'ಕ್ಕೆ ಸಂಬಂಧಿಸಿದಂತೆಯೂ ಎರಡು ಚಿತ್ರಗಳಿವೆ. ಗ್ರಹವಾಸ್ತು ಮತ್ತು ಪ್ರಾಸಾದವಾಸ್ತು ಎಂದು ವಾಸ್ತುಮಂಡಲ ಎರಡು ವಿಧವಾಗಿವೆ. ಹೊಸಮನೆಯ ಗೃಹಪ್ರವೇಶ, ದುರಸ್ತಿಯ ನಂತರ ಕಟ್ಟಡ ಪ್ರವೇಶ ಹಾಗೂ ಮನೆ ಬದಲಾಯಿಸಿದಾಗ ವಾಸ್ತು ಹೋಮ ಮತ್ತು ವಾಸ್ತು ಮಂಡಲದ ಅರ್ಚನೆ ನಡೆಸಲಾಗುತ್ತದೆ. ಪ್ರಾಸಾದ ವಾಸ್ತುಮಂಡಲದಲ್ಲಿ 84 ದೇವತೆಗಳೂ ಗ್ರಹವಾಸ್ತು ಮಂಡಲದಲ್ಲಿ 53 ದೇವತೆಗಳೂ ಅಳವಡಿಸಲ್ಪಟ್ಟಿರುತ್ತಾರೆ. ಇಲ್ಲಿನ ಎರಡು ವಾಸ್ತುಮಂಡಲವನ್ನು ಋಗ್ವೇದೀಯ ರೀತ್ಯಾ ಮತ್ತು ಶೌನಕೋಕ್ತರೀತ್ಯಾ ರಚಿಸಲಾಗಿದೆ.

ನವ ಹೋಮ ಕುಂಡ ರಚನಾವಿಧಾನವನ್ನು ನಿರೂಪಿಸುವ ಚಿತ್ರವೂ ಇಲ್ಲಿದೆ. 'ಕುಂಡಾರ್ಕ' ಗ್ರಂಥದ 'ನವಕುಂಡಿಕಾ ವಿಧಾನ' ರೀತ್ಯಾ ರಚಿತವಾಗಿದೆ. ನವಕುಂಡ ರಚನಾ ವಿಧಾನದ ವಿವರಗಳು ಇಂತಿವೆ :

ಆಕೃತಿ	ದೇವತೆ	ದಿಕ್ಕು
ವರ್ತುಲಕುಂಡ	ವಿಷ್ಣು	ಪಶ್ಚಿಮ
ಚತುರಸ್ರಕುಂಡ	ದೇವಿ	ಆಗ್ನೇಯ
ಆಶ್ವತ್ಥಪತ್ರ ಅಥವಾ ಯೋನಿಯಾಕೃತಿ	ದೇವಿ	ಆಗ್ನೇಯ
ಅರ್ಧಚಂದ್ರ	ಅಭಿಚಾರಕ್ರಿಯಾ ದೋಷನಿವಾರಕ ದೇವತೆ	ದಕ್ಷಿಣ
ತ್ರಿಕೋಣ	ಅಭಿಚಾರಕ್ರಿಯಾ ದೋಷನಿವಾರಕ ದೇವತೆ	ನೈರುತ್ಯ
ಷಡಸ್ರ	ಸಾಂದರ್ಭಿಕ ಇಷ್ಟದೇವತೆ	ವಾಯುವ್ಯ
ಪದ್ಮಾಕ	ಸ್ತ್ರೀದೇವತೆ	ಉತ್ತರ
ಅಷ್ಟಸ್ರ	ಸಾಂದರ್ಭಿಕ ಇಷ್ಟದೇವತೆ	ಈಶಾನ್ಯ

ಇತ್ತೀಚೆಗೆ ಚಿಂತಾಮಣಿ ತಾಲೂಕಿನ ಕೈವಾರ ಕ್ಷೇತ್ರದಲ್ಲಿನ ಯಾಗಶಾಲೆಯಲ್ಲಿ, ಮೇಲೆ ವಿವರಿಸಿದಂತೆ ನವ ಹೋಮಕುಂಡಗಳನ್ನು ನಿರ್ಮಿಸಲಾಗಿದೆ. ಹವ್ಯಕ ಬ್ರಾಹ್ಮಣರನ್ನೇ ಕರೆಸಿ ಹೋಮಕಾರ್ಯವನ್ನು ನಡೆಸಲಾಗುತ್ತಿದೆ.

'ಸರ್ವತೋಭದ್ರ'ವು ಶುಭಪ್ರದ ಮಂಡಲವಾಗಿದೆ. ಸರ್ವದೇವತಾತ್ಮಕ ಮಂಡಲವಾಗಿದ್ದು ಸಂಕೀರ್ಣಕಾಂಡದಲ್ಲಿ ವಿವರಿಸಲ್ಪಟ್ಟಿದೆ. ಪ್ರತಿಷ್ಠಾಪನೆ, ಶಾಂತಿ ಮತ್ತು ಎಲ್ಲ ರೀತಿಯ ಕಾಮ್ಯಕರ್ಮಾನುಷ್ಠಾನದಲ್ಲಿ ಬಳಕೆಗೊಳ್ಳುತ್ತದೆ.

ಸ್ವಸ್ತಿಕ ಮಂಡಲವೂ ಸರ್ವತೋಭದ್ರದಂತೆ ಮಂಗಳ ಮತ್ತು ಅಭಿವೃದ್ಧಿಕಾರಕ ಸಂಕೇತವಾಗಿ ಬಳಕೆಯಾಗುತ್ತದೆ. ಇದು ಅತ್ಯಂತ ಜನಪ್ರಿಯವಾದ ಹಾಗೂ ಸರ್ವೇಸಾಮಾನ್ಯವಾಗಿ ಕಂಡುಬರುವ ಮಂಡಲ ಚಿತ್ರವಾಗಿರುತ್ತವೆ.

ಸ್ವಸ್ತಿಕ ಮತ್ತು ಸರ್ವತೋಭದ್ರ ಚಿತ್ರಗಳನ್ನು ಕುರಿತು ತ್ರಿವಿಕ್ರಮಭಟ್ಟನು ತನ್ನ 'ನಳಚಂಪು'ಕೃತಿಯಲ್ಲಿ ಪ್ರಸ್ತಾಪಿಸಿದ್ದಾನೆ. ನೈಷಧರಾಜ ನಳನು ವೈದರ್ಭಿ ರಾಜಕುಮಾರಿ ದಮಯಂತಿಯ ಸ್ವಯಂವರದಲ್ಲಿ ಭಾಗಿಯಾಗಲು ವಿದರ್ಭ ದೇಶಕ್ಕೆ ಹೋಗಿದ್ದಾಗ ಜನಸಾಮಾನ್ಯರು ಈ ಶುಭ ಸಂಭ್ರಮದ ಮಹೋತ್ಸವದ ಸಂಕೇತವಾಗಿ ತಮ್ಮ ಮನೆಗಳ ಹೊರಗೋಡೆಗಳ ಮೇಲೆ ಸ್ವಸ್ತಿಕ ಮತ್ತು ಸರ್ವತೋಭದ್ರದ ಚಿತ್ರಗಳನ್ನು ಅತ್ಯಂತ ಕೌಶಲ್ಯಪೂರ್ಣವಾಗಿ ಸುಂದರವಾಗಿ ರಚಿಸಿದ್ದನ್ನು* ವೀಕ್ಷಿಸಿದ ನಳನು ಚಿತ್ರಲೇಖನ ಕಲಾಕೌಶಲವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದನ್ನು ಉಲ್ಲೇಖಿಸುವುದರ ಮೂಲಕ ತ್ರಿವಿಕ್ರಮ ಭಟ್ಟನು ಮಂಡಲ ಚಿತ್ರಗಳ ಬಗ್ಗೆ ತನ್ನ ಮೆಚ್ಚುಗೆಯನ್ನೂ ವ್ಯಕ್ತಗೊಳಿಸಿದ್ದಾನೆ.

ಇಂದು ಈ ಮಂಡಲ ಚಿತ್ರಗಳು ಪಶ್ಚಿಮ ಕರಾವಳಿಯ ಪ್ರದೇಶದ ಧಾರ್ಮಿಕ ಸಾಮಾಜಿಕ ಚಿತ್ರಕಲಾ ಪ್ರಕಾರವಾಗಿ ಜನಜೀವನದಲ್ಲಿ ಹಾಸು ಹೊಕ್ಕಾಗಿ ಉಳಿದು ಬಂದಿವೆ. ಹವ್ಯಕ ಬ್ರಾಹ್ಮಣರು ಹವನ ಹೋಮ ಶಾಂತಿ ಅರ್ಚನೆ ಅನುಷ್ಠಾನಗಳಲ್ಲಿ ಮಂಡಲವರ್ಣ ಚಿತ್ರಗಳನ್ನು ರಚಿಸಿ ಅರ್ಚಿಸುವುದರಿಂದ ಸಾಮಾಜಿಕರಲ್ಲಿ ಈ ಕಲೆಯ ಬಗ್ಗೆ ಧಾರ್ಮಿಕ ಶ್ರದ್ಧೆ ಮೂಡಿ ಬಂದಿದೆ. ಆ ಮೂಲಕ ಐಹಿಕ ಸುಖ ಸಾಧನೆ ಸಾಧ್ಯವೆಂಬ ವಿಶ್ವಾಸವೂ ಬೆಳೆದುಬಂದಿದೆ. ಆದುದರಿಂದ ಪಶ್ಚಿಮ ಕರಾವಳಿ ಪ್ರದೇಶದ ಹಾಗೂ ಹವ್ಯಕ ಬ್ರಾಹ್ಮಣರ ವಿಶಿಷ್ಟವಾದ ಈ ಮಂಡಲ ಚಿತ್ರಕಲೆಯ ಪರಿಚಯವನ್ನು ಎಲ್ಲರಿಗೂ ಮಾಡಿಕೊಡುವುದಕ್ಕಾಗಿಯೇ ಈ ಲೇಖನ.

❑

ಬನವಾಸಿಯಲ್ಲಿ ದೊರೆತ ಕೆಲವು ರೋಮನ್ ಅವಶೇಷಗಳು: ಒಂದು ಟಿಪ್ಪಣಿ

– ಡಾ॥ ಎಚ್. ಆರ್. ರಘುನಾಥ ಭಟ್

ಉತ್ತರಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಬನವಾಸಿಯಲ್ಲಿ ಈವರೆಗೆ ಹಲವು ಪ್ರಾಚ್ಯಾವಶೇಷಗಳು ದೊರೆತಿವೆ. ಅವುಗಳಲ್ಲಿ ಕೆಲವು ರೋಮನ್ ಅವಶೇಷಗಳು ಕುತೂಹಲಕಾರಿಯಾಗಿವೆ. ರೋಮನ್ ಮಡಕೆ, ರೋಮನ್ ನಾಣ್ಯ–ಪದಕದ ಕಲ್ಲಚ್ಚು, ಮಣಿಗಳು, 'ಕ್ಯಾಮಿಯೊ' ಮುಂತಾದವುಗಳನ್ನಿಲ್ಲಿ ವಿಶೇಷವಾಗಿ ಹೆಸರಿಸಬೇಕು.

ಬನವಾಸಿ ಶೋಧನೆಯ ಇತಿಹಾಸದಲ್ಲಿ 1920–71ರಲ್ಲಿ ಆರಂಭಿಸಿದ ಬನವಾಸಿ–ಉತ್ಖನನ ಒಂದು ಮಹತ್ವೂರ್ಣ ಘಟ್ಟವಾಗಿದೆ. ಮೈಸೂರು ವಿಶ್ವವಿದ್ಯಾ ನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗವು ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಮತ್ತು ವಸ್ತು ಸಂಗ್ರಹಾಲಯಗಳ ಇಲಾಖೆಯ ಸಹಭಾಗಿತ್ವದಲ್ಲಿ ಪರಿಣತ ಪುರಾತತ್ವಜ್ಞರಾಗಿದ್ದ ಪ್ರೋ॥ ಎಂ. ಶೇಷಾದ್ರಿಯವರ ನಿರ್ದೇಶಕತ್ವದಲ್ಲಿ ನಡೆಸಿದ ಉತ್ಖನನಗಳಲ್ಲಿ (ಬಿಎನ್ ವಿ–ಖು ನಿವೇಶನದ ಐದು ಮತ್ತು ಆರನೆಯ ಪದರಗಳಲ್ಲಿ ಹಾಗೂ ಬಿಎನ್‌ವಿ–ಗಿಖನೆಯ ನಿವೇಶನದಲ್ಲಿ)ರಸೆಟ್ ಕೋಟೆಡ್ ಕೆಯೊಲಿನ್ ಪೆಂಟೆಡ್ ಮಡಕೆ ಮತ್ತು ರೋಮನ್ ಅನುಕರಣೆಯ ರೌಲೆಟೆಡ್ ಮಡಕೆ ಚೂರುಗಳು ಪತ್ತೆಯಾದವು. ಶಾತವಾಹನರ ನೆಲೆಯಲ್ಲಿ ಈ ಬಗೆಯ ಮಡಕೆ ಕುಡಿಕೆಗಳು ಪತ್ತೆಯಾಗಿರುವುದು ಮಹತ್ವೂರ್ಣವಾದುದೆಂದು ತಿಳಿಯಲಾಗಿದೆ.

1975–76ರ ಸುಮಾರಿಗೆ ಬನವಾಸಿ ಕೋಟೆಯ ಹೊರವಲಯದಲ್ಲಿ ರೋಮನ್ ನಾಣ್ಯ–ಪದಕದ ಕಲ್ಲಚ್ಚೊಂದು ಅಕಸ್ಮಾತ್ತಾಗಿ ಸಿಕ್ಕಿತ್ತು. ಇದನ್ನು ಮ.ಚ. ವಡೆಯರು ಸಂಗ್ರಹಿಸಿದರು. ಆಗಲೇ ಅದನ್ನು ಪರೀಕ್ಷಿಸಿ ಅದರ ಪಡಿಯಚ್ಚನ್ನ ಛಾಯಾಚಿತ್ರವನ್ನು ತೆಗೆದು ಅಭ್ಯಾಸ ಮಾಡಿ ಪ್ರಕಟಿಸಿದೆನು.2 ಅನಂತರ ಡಾ॥ ಎ.ವಿ. ನರಸಿಂಹಮೂರ್ತಿಯವರು ಅವನ್ನು ನಾಣ್ಯಗೆಚ್ಚೆಂದು ಭಾವಿಸಿ ಲೇಖನವನ್ನು ಪ್ರಕಟಿಸಿದರು. ಇದನ್ನು ಸ್ಥಳೀಯವಾಗಿ ತಯಾರಿಸಿದರೋ ರೋಮ್ ದೇಶದಿಂದ ಆಮದು ಮಾಡಿಕೊಂಡರೋ ತಿಳಿಯದೆಂದು ಹೇಳಿದರು.3 ಅದರ ಪುನರಾವಲೋಕನದಿಂದ ಅದು ಸ್ಥಳೀಯವಾಗಿ ತಯಾರಿಸಿರಬಹುದಾದ ಕಲ್ಲಚ್ಚು; ಮೂಲ ರೋಮನ್ ನಾಣ್ಯದ ಚಿತ್ರವನ್ನು ಇದರಲ್ಲಿ ಅನುಕರಿಸಲಾಗಿದೆ ಎಂಬುದು ಸ್ಪಷ್ಟವಾಯಿತು. ರೋಮನ್ ಸಾಮ್ರಾಟ ಟೈಬೀರಿಯಸ್‌ನ ನಾಣ್ಯದ ಹಿಮ್ಮುಖದಲ್ಲಿ ಕಂಡುಬರುವ ಚಿತ್ರ–ಬರಹಗಳನ್ನೂ ಆದಷ್ಟೂ ಪ್ರಾಮಾಣಿಕವಾಗಿ ಅನುಕರಿಸಲಾಗಿದೆ. ಮೂಲ ರೋಮನ್ ನಾಣ್ಯದ ಚಿತ್ರ–ಬರಹಗಳೊಡನೆ ಇದನ್ನು ಹೋಲಿಸಿದರೆ ಇದು ಇನ್ನೂ ಸ್ಪಷ್ಟವಾಗುತ್ತದೆ. ಸ್ತ್ರೀ ದೇವತೆ ಎತ್ತರವಾದ ಸ್ಟೂಲಿನ ಮೇಲೆ ಕುಳಿತಿದ್ದಾಳೆ. ಎತ್ತಿದ ಬಲಗೈಯಲ್ಲಿ ಉದ್ದನೆಯ ದಂಡ ಹಿಡಿದಿದ್ದಾಳೆ. ಎಡಗೈಯಲ್ಲಿ ಗಿಡದ ಟೊಂಗೆಯನ್ನು ಹಿಡಿದುಕೊಂಡಿದ್ದಾಳೆ. ಈ ಚಿತ್ರದ ಬಲಭಾಗದಲ್ಲಿ ಪುಟ್ಟ ಮಣಿಚುಕ್ಕೆಗಳಿಂದುಂಟಾದ ವೃತ್ತದಲ್ಲಿ ನಾಣ್ಯ ಬರಹವಿದೆ, (ಒಚಿಥುಟ ೭೦ಟಣುಜಿ) ಇವಿಷ್ಟನ್ನೂ ಒಳ್ಳೆಯ ಬಳಪದ ಮೃದು ಕಲ್ಲಿನಲ್ಲಿ ಸೂಕ್ಷ್ಮವಾಗಿ ಕೆತ್ತಲಾಗಿದೆ. ಈ ನಾಣ್ಯ ಪದಕಕ್ಕೆ ತೊಟ್ಟು ಇಡಲು ಅನುಕೂಲವಾಗುವಂತೆ ತುದಿಯಲ್ಲಿ ಪುಟ್ಟ ಕೊಳವೆಯನ್ನು ಅಚ್ಚಿಸಲಾಗಿದೆ. ಇದರಿಂದ ದಾರ ಪೋಣಿಸಲು ಅನುಕೂಲವಾಗುತ್ತದೆ.

ಶಾತವಾಹನರ ನೆಲೆಯಲ್ಲಿ ಈ ಬಗೆಯ ನಾಣ್ಯದ ಪಡಿಯಚ್ಚು ಸಾಮಾನ್ಯವಾಗಿ ಸಿಗುತ್ತಿರುತ್ತದೆ. ಕೆಲವೊಮ್ಮೆ ಮೂಲ

ರೋಮನ್ ನಾಣ್ಯಗಳ ಜೊತೆ ಜೊತೆಯಲ್ಲೇ ಸಿಕ್ಕಿದ್ದುಂಟು. ಈ ರೀತಿಯ ನಾಣ್ಯಗಳಿಂದ ತಯಾರಿಸಿದ ಕಂಠಹಾರ ಅಥವಾ 'ಪವನ್‌ಸರ' ಹಿಂದಿದ್ದಂತೆ ಇಂದಿಗೂ ಜನಪ್ರಿಯ ಹಾಗೂ ಪ್ರತಿಷ್ಠಿತ ಆಭರಣವಾಗಿದೆ. ಜೈನ ಕಲ್ಪಸೂತ್ರದಲ್ಲಿ 'ಉರಸ್ಥ ದಿನಾರಮಾಲೆ'ಯೆಂದೇ ಕರೆಯಲಾಗಿದೆ.4 ಅಂದರೆ ಇದು ರೋಮನ್ ದಿನಾರುಗಳಿಂದ ತಯಾರಾದ ಸರವೆಂಬುದು ಸ್ಪಷ್ಟವಾಗುವುದು. ಮೊದಮೊದಲು ಮೂಲ ರೋಮನ್ ದಿನಾರ್‌ಗಳನ್ನೇ ಬಳಸಿ ಕಂಠಹಾರವನ್ನು ತಯಾರಿಸುತ್ತಿದ್ದಿರಬೇಕು. ಕಾಲಾಂತರದಲ್ಲಿ ಆ ಬಗೆಯ ಅನುಕರಣೆಯ ಸರವನ್ನೂ ದಿನಾರಮಾಲೆಯೆಂದು ಕರೆಯುವುದು ರೂಢಿಯಾಗಿ ಹೋಯಿತು. ರೋಮನ್ ನಾಣ್ಯಗಳ ಸರವಷ್ಟೇ ಅಲ್ಲ, ಅವುಗಳ ಅನುಕರಣೆಯನ್ನು ಮಾಡಿ ಸರ ತಯಾರಿಸುತ್ತಿದ್ದರೆಂದೂ ಇದರಿಂದ ಗೊತ್ತಾಗುತ್ತದೆ. ಇದಕ್ಕೆ ಕಾರಣವೇನು?

ಮೂಲತಃ ಚಿನ್ನದ ರೋಮನ್ ನಾಣ್ಯಗಳ ಬಗೆಗಿನ ಮೋಹ ಅಥವಾ ಆಕರ್ಷಣೆ ನಮ್ಮಲ್ಲಿ ವಿಶೇಷವಾಗಿತ್ತು. ಅದರಿಂದಾಗಿ ಬೆಳೆದು ಬಂದ ಬೇಡಿಕೆ ವಿಶೇಷವಾಗಿದ್ದಿರಬೇಕು. ಹೀಗಾಗಿ ಹಲವೆಡೆ ಸ್ಥಳೀಯ ಸೊನಗಾರರು ತಮ್ಮ ಮನೆಗಳಲ್ಲೇ ರೋಮನ್ ನಾಣ್ಯಗಳನ್ನು ಅನುಕರಿಸಿ ಅಚ್ಚುಗಳನ್ನು ತಯಾರಿಸಿಕೊಳ್ಳುತ್ತಿದ್ದಿರಬೇಕು. ಬನವಾಸಿಯಲ್ಲಿ ಪತ್ತೆಯಾದ ನಾಣ್ಯ ಪದಕದ ಕಲ್ಲಚ್ಚು ಇಂಥ ಒಂದು ನಿದರ್ಸನವಾಗಿದೆ. ಇಷ್ಟಾಗಿಯೂ ಇವುಗಳು ತಮ್ಮ ಐತಿಹಾಸಿಕ ಮಹತ್ವವನ್ನು ಕಳೆದುಕೊಂಡಿಲ್ಲ. ಅನುಕರಣೆಯ ಹಂತದಲ್ಲಿ ಮೂಲ ರೋಮನ್ ನಾಣ್ಯಗಳ ಪರಿಚಯ ಇರಬೇಕಲ್ಲ? ಬನವಾಸಿ ಪ್ರದೇಶದಲ್ಲಿ ಪ್ರಾಚೀನ ಕಾಲದಲ್ಲಿ ರೋಮನ್ ನಾಣ್ಯಗಳು ಪರಿಚಿತವಾಗಿದ್ದಿರಬೇಕು. ಈ ಹಿನ್ನೆಲೆಯಲ್ಲಿ ಬನವಾಸಿಯಿಂದ ತೀರ ದೂರವಿಲ್ಲದ ಅಕ್ಕಿ ಆಲೂರಲ್ಲಿ ಅಗಸ್ಟಸ್ ಮತ್ತು ಟೈಬಿರಿಯಸ್ ಸಾಮ್ರಾಟರ ನಾಣ್ಯಗಳಲ್ಲದೆ, ಅವರ ನಂತರದ ಅಂಟೊನಿಯಸ್ ಪಯಸ್ (138–61), ಥಿಯೊಡೊಸಿಯಸ್ (408–450), ಮೆಸಿಯನ್ (450–457), ಲಿಯೊ ಖ (457–474), ಝಿನೊ (474–491), ಅನಾಸ್ತಸಿಯಸ್ (491–518), ಜಸ್ಟಿನಸ್ ಖ (518–527) ಅರಸರ ಸುವರ್ಣ ನಾಣ್ಯಗಳೂ ಬೆಳಕಿಗೆ ಬಂದಿದ್ದು ಗಮನಾರ್ಹವಾಗಿವೆ.5 ಅದಕ್ಕಿಂತ ಸ್ವಾರಸ್ಯಕರವಾಗಿ ಶಿರಸಿ ತಾಲೂಕಿನ ಹುಲೇಕಲ್ಲಿನಲ್ಲಿ ರೋಮನ್ ಚಕ್ರವರ್ತಿಗಳಾದ ಲಿಸಿಯಸ್, ಡೆಮಿಟ್ರಿಯಸ್, ಟೊಲೆಮಿ, ಅಗಥೆ ಕ್ಲೆಸ್‌ರ ನಾಣ್ಯಗಳು ಪತ್ತೆಯಾಗಿರುವುದು ವರದಿಯಾಗಿದೆ.6 ವಡಗಾಂವ್, ಮಾಧವಪುರದಲ್ಲಿ (ಬೆಳಗಾಂವ್ ಜಿಲ್ಲೆ) ರೋಮನ್ ದಿನಾರಿಗಳು ಸಿಕ್ಕಿರುವುದೂ ಇಲ್ಲಿ ಸ್ಮರಣೀಯ.7 ಬನವಾಸಿಯೊಡನೆ ಸಾಂಸ್ಕೃತಿಕ ಸಂಬಂಧವಿಟ್ಟುಕೊಂಡೆ ನಾಗಾರ್ಜುನಕೊಂಡದಲ್ಲಿರುವ ದಾನಶಾಸನಗಳಲ್ಲೂ ದಿನಾರಿಗಳನ್ನು ಹೆಸರಿಸಲಾಗಿದೆ.8 ಇದುವರೆಗೆ ನಮಗೆ ತಿಳಿದು ಬಂದಿರುವಂತೆ ದಖಿನಿನಲ್ಲಿ ದಿನಾರಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ದೊರೆತಿವೆ.

ರೋಮನ್ 'ಕ್ಯಾಮಿಯೊ' (ಅಚಿಟಜಂ) ಎಂದು ಹೇಳಲಾದ ಬೆಲೆಯುಳ್ಳ ಹರಳುಕಲ್ಲಿನ ಅವಶೇಷ ತುಂಬ ಕುತೂಹಲಕಾರಿಯಾಗಿದೆ. ಕೋಟೆಯ ಒಳಭಾಗದಲ್ಲಿ (ಬಿಎನ್‌ವಿ ಗಿಖ ನೆಲೆಯ ಬಳಿ) ಮನೆಯ ಗೋಡೆ ಕಟ್ಟುವುದಕ್ಕಾಗಿ ಮಣ್ಣು ಅಗೆಯುತ್ತಿದ್ದಾಗ ಅಕಸ್ಮಾತ್ತಾಗಿ ಸಿಕ್ಕ ಈ ಅಮೂಲ್ಯ ವಸ್ತುವನ್ನು ಪರೀಕ್ಷಿಸಿ ಮೊದಲ ಬಾರಿಗೆ ಇಲ್ಲಿ ಟಿಪ್ಪಣಿಸಲಾಗಿದೆ. ಇದನ್ನು ಸಾಮಾನ್ಯವಾಗಿ ಇಂಟಾಗ್ಲಿಯೊ (ಖಟಣಚಿಂಟುಂ) ಎಂದು ಕರೆಯಲಾಗುತ್ತಿದೆ. ವಾಸ್ತವವಾಗಿ ಮತ್ತು ತಾಂತ್ರಿಕ ಪರಿಭಾಷೆಯಲ್ಲಿ ಇದನ್ನು 'ಕ್ಯಾಮಿಯೊ' (ಅಚಿಟಜಂ) ಎಂದೇ ಕರೆಯಬೇಕು. ಬಿಳಿ ಮತ್ತು ಕಂದು ಮಣ್ಣು ಬಣ್ಣವುಳ್ಳ ಎರಡು ಪದರುಗಳುಳ್ಳ ಹರಳುಕಲ್ಲಾಗಿದ್ದು (ಖಜಟು ಕಡಿಜಭಿಱಂಞ ಖಣಂಟಿಜ) ಇದನ್ನು ಚಾಲ್ಸಿಡೊನಿಯ ಪ್ರಭೇದವಾದ ಅಗೇಟ್ ಅಥವಾ ಸಾರ್ಡೊನಿಕ್ಸ್ ಎಂದು ಕರೆಯುತ್ತಾರೆ. ಇದರ ಮೇಲ್ಪದರದಲ್ಲಿ ಉಬ್ಬು ಶಿಲ್ಪವನ್ನು ಸೂಕ್ಷ್ಮವಾಗಿ ಕಂಡರಿಸಲಾಗಿದೆ. ಇದರ ಬಹುಭಾಗ ತಿಳಿ ಬಿಳಿ ಬಣ್ಣದಲ್ಲಿದೆ; ಕೆಲ ಭಾಗ ಕಂದು ಬಣ್ಣದಲ್ಲಿದೆ. ಬೆಂಗಡೆ ನುಣುಪಾಗಿದೆ. ಅಂಡಾಕೃತಿಯಲ್ಲಿರುವ ಈ ಪುಟ್ಟ ಕಲಾಕೃತಿ ನೋಡಲು ತುಂಬ ಸೊಗಸಾಗಿದೆ. ರೋಮನ್ ಚಕ್ರವರ್ತಿ ಅಗಸ್ಟಸ್ ಈ ಬಗೆಯ ಕ್ಯಾಮಿಯೊವನ್ನು ಚಾಲ್ಸಿಡೊನಿಯಲ್ಲಿ ಕಂಡರಿಸಿದ್ದುಂಟು.

ಬನವಾಸಿ ಕ್ಯಾಮಿಯೋದ ಮೇಲೆ ರಾಜಗಾಂಭಿರ್ಯವುಳ್ಳ ರೋಮನ್ ಗಣ್ಯ ವ್ಯಕ್ತಿ ರೂಪಶಿಲ್ಪವು (ಕಂಡಿಣಡಿಚುಣಣಜ) ಸೂಕ್ಷ್ಮವಾಗಿ ಎದ್ದು ಕಾಣುತ್ತದೆ. ಬಲಕ್ಕೆ ಮುಖ ಮಾಡಿದ ಈ ಪ್ರಧಾನ ಪುರುಷನ ಶಿಲ್ಪವನ್ನು 'ಪ್ರೊಫೈಲ್' ಮಾದರಿಯಲ್ಲಿ ಕೆತ್ತಲಾಗಿದೆ. ಇದರ ವೇಷಭೂಷಣ, ನಿಲುವು ಭಂಗಿ ಸ್ವಾರಸ್ಯಕರವಾಗಿದೆ. ರೋಮನ್ 'ಗಾಲಾ' (ಮುಚ್ಚಗಳಿಂದ ಅಲಂಕೃತವಾದ

ಟೋಪ್ಪಿ), ಅಲಂಕೃತ ಎದೆಪಟ್ಟಿ, ವಿಶಿಷ್ಟವಾದ ರೋಮನ್ ಶಿರೋಭಾಗ, ನೀಳಗರುಡಮೂಗು, ಚೂಪುಗದ್ದ, ಚುರುಕು ನೇತ್ರ ಮುಂತಾದವು ರೋಮನ್ ರಾಜ ಪುರುಷನ ಮೆರುಗನ್ನು ಹೆಚ್ಚಿಸುತ್ತವೆ. ಇವೆಲ್ಲ ಅಗಸ್ಟಸ್‌ನ ರೂಪಚಿತ್ರ ಕಲೆಯ ಕೆಲವು ಪ್ರಧಾನ ಲಕ್ಷಣಗಳೆನ್ನಬಹುದು. ಕ್ರಿಸ್ತಶಕಾರಂಭದ ಶತಕಗಳಲ್ಲಿ ಈ ಬಗೆಯ ಕಲಾತ್ಮಕ ಪೆಂಡೆಂಟ್‌ಗಳನ್ನು ಪ್ರಚಾರ ಮಾಧ್ಯಮವಾಗಿ ಆಗಸ್ಟಸ್ ದೊರೆ ಬಳಕೆಯಲ್ಲಿ ತಂದನೆಂದು ಹೇಳಲಾಗಿದೆ.

ಬನವಾಸಿಯ ಕ್ಯಾಮಿಯೊ ರೋಮನ್ ಸ್ಫುರದ್ರೂಪಿ ರಾಜಪುರುಷನ ಚಿತ್ರಸ್ವರೂಪದಲ್ಲಿ, ಶೈಲಿ ಮತ್ತು ತಂತ್ರಗಳಲ್ಲಿ, ಅಂದಚಂದದಲ್ಲಿ ವಿಶಿಷ್ಟ ಕಲಾ ಸೃಷ್ಟಿಯಾಗಿದೆ. ರೋಮನ್ ವ್ಯಕ್ತಿಚಿತ್ರಕಲೆ ಎಷ್ಟು ಸೊಗಸಾಗಿ ರೂಪುತಳಿಯಿತೆಂಬುದು ಇಂಥ ನಿದರ್ಶನಗಳಿಂದ ಮನದಟ್ಟಾಗುತ್ತದೆ. ಇದರಲ್ಲಿ ಮೂಡಿಬಂದ ವಾಸ್ತವಿಕತೆ, ನಿಖರತೆ, ಸೂಕ್ಷ್ಮತೆ ನಮ್ಮನ್ನು ಬೆರಗುಗೊಳಿಸುವಂಥದ್ದು. ಗ್ರೀಕ್ ಕಲೆಯ ಆದರ್ಶವಾದಿತ್ವ, ಸರಳೀಕೃತ ಸಾರ್ವತ್ರಿಕತೆಗಿಂತ ಭಿನ್ನವಾದ ಈ ರೋಮನ್ ಕಲೆಯಲ್ಲಿ ದೈಹಿಕ ಅಂಗಲಕ್ಷಣಗಳನ್ನು ತುಂಬ ಪ್ರಾಮಾಣಿಕವಾಗಿ, ಆದಷ್ಟೂ ಯಥಾವತ್ತಾಗಿ ಪಡಿ ಮೂಡಿಸಲಾಗಿದೆ. ಒಬ್ಬ ಬಲಿಷ್ಠ ಸೇನಾನಿಯ ಸ್ಫುರ ದ್ರೂಪ ಸೂಕ್ಷ್ಮ ತೀಕ್ಷ್ಣ ದೃಷ್ಟಿ, ಬಿಗಿ ಹಿಡಿದ ತುಟಿ, ನಿಖರವಾದ ಚೂಪುಗದ್ದ ಮುಂತಾದ ದೈಹಿಕ ಲಕ್ಷಣಗಳು ರೇಖಾಪ್ರಧಾನವಾಗಿ ಮೂಡಿಬಂದಿದೆ. ಇವುಗಳಿಂದಾಗಿ ಇದೊಂದು ಉತ್ತಮ ಕಿರುಕಲಾಕೃತಿಯೆನ್ನಿಸಿಕೊಳ್ಳುತ್ತದೆ.

ಬನವಾಸಿಯಲ್ಲೇ ಇನ್ನೂ ಹೆಚ್ಚಿನ ಅನ್ವೇಷಮೆ ನಡೆಸಿದಲ್ಲಿ ರೋಮನ್ ಅವಶೇಷಗಳು ಇನ್ನೂ ಸಿಗುವ ಸಾಧ್ಯತೆಯಿದೆ. ಇದರಿಂದ ಈ ಪ್ರದೇಶವು ರೋಮನ್ ಸಂಪರ್ಕಕ್ಕೆ ಒಳಗಾಗಿದ್ದರ ಬಗೆಗೆ ಹೆಚ್ಚಿನ ವಿವರಗಳು ಸಿಗುವವು. ಬನವಾಸಿಯು ರೋಮನ್ ಸಾಂಸ್ಕೃತಿಕ – ವಾಣಿಜ್ಯಕ ಸಂಬಂಧ–ಸಂಪರ್ಕಕ್ಕೊಳಗಾಗಿದ್ದಿರಬಹುದು; ಒಂದು ಕಾಲದಲ್ಲಿ ಈ ವ್ಯವಹಾರ ಚುರುಕಾಗಿದ್ದಿರಬಹುದು. ಕಾರಣ ಪ್ರಾಚೀನ ವ್ಯಾಪಾರಮಾರ್ಗದಲ್ಲಿ ಬನವಾಸಿ ಅಂತರ್ಗತವಾಗಿತ್ತು.

ಅಡಿಟಿಪ್ಪಣಿಗಳು

1. ಪುರಾತತ್ವ, ಸಂ. 4, 1970–71, ಪು. 56–57
2. ಕರ್ನಾಟಕ ಶಾಸನ ಕಲೆ, ಮೈಸೂರು, 1977, ಪು. 120
3. ಎ.ವಿ. ನರಸಿಂಹಮೂರ್ತಿ, ಬಿ.ಕೆ. ಗುರುರಾಜರಾವ್ (ಸಂ.), ರಂಗವಲ್ಲಿ, ನವದೆಹಲಿ, 1983, ಪು. 146–147
4. ಕೆ. ಕೃಷ್ಣಮೂರ್ತಿ : ನಾಗಾರ್ಜುನಕೊಂಡ, ನವದೆಹಲಿ, 1977, ಪು. 80
5. ಎಂ.ಎಸ್. ನಾಗರಾಜರಾವ್ : ಪ್ರೊಗ್ರೆಸ್ ಆಫ್ ಅರ್ಕಿಯೊಲಜಿ ಇನ್ ಕರ್ನಾಟಕ, ಮೈಸೂರು, 1978; ಎಚ್ಚೆಸ್ಕೆ (ಸಂ.) : ಅವಲೋಕನ, ಬೆಂಗಳೂರು, 1985, ಪು. 56
6. ಎಆರ್‌ಇಎ, 1939–40, 1942–43
7. ಅವಲೋಕನ
8. ಪಿ.ರೇ. ಹಿಮಾಂಶು : ಮೊನಾಸ್ಟರಿ ಎಂಡ್ ಗಿಲ್ಡ್, ದೆಹಲಿ, 1986, ಪು. 146

❑

ಮುಂಬೈ-ಕರ್ನಾಟಕದ ಕೆಲವು ಪುರಾತತ್ವ ನೆಲೆಗಳು

– ಕು. ಜಯಮ್ಮ ಬಿ.

ಗೋಧೂಳ್ಳಿ, ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಗೋಧೂಳ್ಳಿಯ ಅಳ್ನಾವರದಿಂದ ಗೋವಾಕ್ಕೆ ಹೋಗುವ ಮಾರ್ಗದಲ್ಲಿ ಸುಮಾರು 7 ಕಿ.ಮೀ. ದೂರದಲ್ಲಿದೆ. ಈ ಗ್ರಾಮದಲ್ಲಿ ಎರಡು ಕಡೆ ಹಾಳಾದ ಜನವಸತಿ ನೆಲೆಗಳಿವೆ. ಒಂದು ನೆಲೆಯ ಗ್ರಾಮದ ಪೂರ್ವಭಾಗದಲ್ಲಿ ಆಂಜನೇಯ ದೇವಾಲಯದ ಹಿಂಭಾಗದಲ್ಲಿದೆ. ಇದು ಸುಮಾರು ಒಂದು ಹೆಕ್ಟೇರ್ ವಿಸ್ತೀರ್ಣದಲ್ಲಿದೆ. ಈ ಜಾಗ ದಿನ್ನೆ ಆಕಾರದಲ್ಲಿದೆ. ಈ ನೆಲೆಯ ಬದಿಯಲ್ಲಿಯೇ ಕಲ್ಲುಗಳನ್ನು ವೃತ್ತಾಕಾರವಾಗಿ ಹೂತಿರುವ ಮೂರು ಸ್ಥಳಗಳಿವೆ. ಇಲ್ಲಿ ಸಂಪೂರ್ಣ ಗಿಡ-ಗಂಟಿಗಳು ಬೆಳೆದಿರುವುದರಿಂದ ಇದು ಏನೆಂಬುದು ಸ್ಪಷ್ಟವಾಗಿ ಗೋಚರಿಸುವುದಿಲ್ಲ. ಇದರ ಬದಿಯಲ್ಲಿಯೇ ಮತ್ತೊಂದು ದಿನ್ನೆ ಇದೆ. ಇಲ್ಲೆಲ್ಲಾ ಇಟ್ಟಿಗೆಗಳು ಗುಂಪಾಗಿ ಬಿದ್ದಿವೆ. ಪ್ರಾಯಶಃ ಈ ಜಾಗ ಯಾವುದಾದರೂ ಪ್ರಾಚೀನ ದೇವಾಲಯದ ಸ್ಥಳವಾಗಿರಬೇಕು. ಏಕೆಂದರೆ ಇಲ್ಲಿ ಗುರುತಿಸಲಾಗದಷ್ಟು ಭಗ್ನಗೊಂಡ ಶಿಲ್ಪಗಳಿವೆ. ಈ ಮೂರು ಕಡೆ ಅನೇಕ ಗಡಿಗೆ-ಮಡಿಕೆ ಇಟ್ಟಿಗೆಗಳು ಸಂಗ್ರಹವಾಗಿವೆ. ಮತ್ತೊಂದು ನೆಲೆಯು ಗ್ರಾಮದ ಕೆರೆಯ ಬಳಿಯ ಹಾಳಾದ ಈಶ್ವರ ದೇವಾಲಯದ ಬಳಿ ಇದೆ. ಇಲ್ಲಿಯೂ ಸಹ ಅನೇಕ ಗಡಿಗೆ-ಮಡಿಕೆ, ಇಟ್ಟಿಗೆ ತುಂಡುಗಳು ದೊರೆತಿವೆ. ಈ ನೆಲೆಯನ್ನು ಈಗ ಹೊಲವನ್ನಾಗಿ ಪರಿವರ್ತಿಸಲಾಗಿದೆ.

ಈ ನೆಲೆಗಳಲ್ಲಿ ಕಂಡುಬಂದ ಗಡಿಗೆ-ಮಡಿಕೆಗಳಲ್ಲಿ ಹೆಚ್ಚಿನವು ಕೆಂಪುಬಣ್ಣದ್ದಾಗಿವೆ. ಈ ಗಡಿಗೆಗಳ ಸಂಗ್ರಹದಲ್ಲಿ ಒಂದು ಗಡಿಗೆಯ ತುಂಡು ವಿಶೇಷವೆನಿಸಿದೆ. ಅದು ಕೆಂಪು ಬಣ್ಣದ್ದಾಗಿದೆ. ಇದರ ರಚನೆ ಮತ್ತು ವಿನ್ಯಾಸ ಉಳಿದವುಗಳಿಗಿಂತ ಭಿನ್ನವಾಗಿದೆ. ಆ ಗಡಿಗೆಯ ಸುಮಾರು ಕ್ರಿ.ಶ. 2ನೇ ಶತಮಾನದ ಗಡಿಗೆಯನಲು ಹೋಲುವುದು ಉಳಿದ ಗಡಿಗೆಗಳ ತುಂಡುಗಳು ಮಧ್ಯಯುಗೀನ ಮತ್ತು ನಂತರ ಕಾಲದ್ದಾಗಿವೆ.

ಇಲ್ಲಿ ಹೆಚ್ಚಾಗಿ ಹಂಚು ಮತ್ತು ಹಂಚಿನ ತುಂಡುಗಳು ಕಾಣಸಿವೆ. ಒಟ್ಟು ನಾಲ್ಕೈದು ರೀತಿಯ ಹಂಚುಗಳು ಇಲ್ಲಿವೆ. ಒಂದು ಹಂಚಿನ ತುದಿಯು ಅರ್ಧವೃತ್ತಾಕಾರವಾಗಿದೆ. ಅದರ ಹಿಂದಿನ ಭಾಗ ಮುರಿದಿದೆ. ಒಂದು ಹಂಚಿನ ತುಂಡಿನಲ್ಲಿ ಮುಂದಿನ ಭಾಗ ಸ್ವಲ್ಪ ಚೂಪಾಗಿ ಹಿಂದಿನ ಭಾಗ ಆಯತಾಕಾರವಾಗಿದೆ. ಆದರೆ ಹಿಡಿಕೆಯ ಕುರುಹು ಕಾಣುವುದಿಲ್ಲ. ಹಿಡಿಕೆ ಯಾವ ಭಾಗದಲ್ಲಿ ಇತ್ತು ಎಂದು ತಿಳಿಯಬೇಕಾದರೆ ಅಲ್ಲಿ ಇಂಥ ಒಂದು ಪೂರ್ಣ ಪ್ರಮಾಣದ ಹಂಚನ್ನು ಹುಡುಕಿದಾಗ ಮಾತ್ರ ಸಾಧ್ಯ. ಮತ್ತೊಂದು ಹಂಚಿನ ತುದಿಯಲ್ಲಿ ಎರಡು ಪಾರ್ಶ್ವಗಳು ಅರ್ಧಗೋಲಾಕಾರದಲ್ಲಿವೆ. ಇನ್ನೊಂದು ಹಂಚು ಆಯತಾಕಾರವಾಗಿದ್ದು ಅದರ ಸ್ವರೂಪ ತಿಳಿಯುವುದಿಲ್ಲ. ಈ ಎಲ್ಲ ಹಂಚುಗಳ ಎರಡೂ ಮಗ್ಗುಲುಗಳು ಚಪ್ಪಟೆಯಾಗಿವೆ. ಆದರೆ ಮತ್ತೊಂದು ಹಂಚು ಇಲ್ಲಿ ಗಮನ ಸೆಳೆಯುತ್ತದೆ. ಇದರ ಮುಂಭಾಗ ಅರ್ಧವೃತ್ತಾಕಾರದಲ್ಲಿದೆ. ಅದರ ಮೇಲಿನಭಾಗ ಮತ್ತು ಮಧ್ಯಭಾಗದ ಕೆಲವು ಸುಳಿಗಳನ್ನು ಗಮನಿಸಿದರೆ ಅದರ ಕೆಳಭಾಗ ಸ್ವಲ್ಪ ತಗ್ಗಾಗಿರುವುದು ಕಂಡುಬರುತ್ತದೆ. ಈ ಹಂಚುಗಳೆಲ್ಲ ಎರಡು ಸೆಂ.ಮೀ. ದಪ್ಪ ಇವೆ. ಈ ಹಂಚುಗಳ ಲಕ್ಷಣಗಳು ಬಹುತೇಕ ಕ್ರಿ.ಶ. 5-6ನೇ ಶತಮಾನಕ್ಕೆ ಸೇರಿದವೆಂದು ತರ್ಕಿಸಬಹುದು. ಈ ಹಂಚುಗಳ ನಮೂನೆಗಳು ಈಗಾಗಲೇ ದೊರೆತ ಹಲಸಿ, ವಡಗಾಂವ-ಮಾಧವಪುರ

ಮತ್ತು ಗುಡ್ನಾಪುರದ ಹಂಚುಗಳನ್ನು ಹೋಲುವುದಿಲ್ಲ. ಆದರೆ ಬಣ್ಣ, ಸ್ವರೂಪ, ರಚನೆ ಆಕಾರ ಆ ಕಾಲದವುಗಳಿಗಿಂತ ಹೆಚ್ಚು ಭಿನ್ನ ಇರುವುದು ಗಮನೀಯ.

ಮೊದಲನೇ ನೆಲೆಯ ಬಳಿ ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಸುಮಾರು ಆರು ವೀರಗಲ್ಲುಗಳಿವೆ. ಅವುಗಳನ್ನು ಶಿಲ್ಪಗಳಲ್ಲಿ ವಿವರಿಸಲಾಗಿದೆ.

ತಬಕದ ಹೊನ್ನಳ್ಳಿ

ತಬಕದ ಹೊನ್ನಳ್ಳಿಯು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಒಂದು ಚಿಕ್ಕ ಗ್ರಾಮವಾಗಿದೆ. ಇದು ಕಲಘಟಗಿಯಿಂದ ತಡಸಕ್ಕೆ ಹೋಗುವ ಮಾರ್ಗದಲ್ಲಿದೆ. ಈ ಗ್ರಾಮದಿಂದ ಬೀರವಳ್ಳಿಗೆ ಹೋಗುವ ರಸ್ತೆಯಲ್ಲಿ ಚಿಕ್ಕ ಬ್ರಹ್ಮಾನಂದಮಠವಿದೆ. ಈ ಮಠದ ಮಹಾಮಂದಿರ ನಿರ್ಮಿಸಲು ಗುಡ್ಡದ ಮೇಲೆ ಬುನಾದಿಯನ್ನು ತೋಡುತ್ತಿರುವಾಗ ಕಬ್ಬಿಣದ ಕಿಟ್ಟಗಳು ದೊರೆತಿದ್ದು ಗ್ರಾಮದ ಜನರು ಅವುಗಳ ಮೇಲಿನ ಉಬ್ಬು-ತಗ್ಗುಗಳನ್ನು ಗಮನಿಸಿ ಅವುಗಳನ್ನು ಮೂರ್ತಿಗಳೆಂದು ಭಾವಿಸಿ ಪತ್ರಿಕಾವರದಿಯನ್ನು ನೀಡಿದ್ದರು. ಅವುಗಳನ್ನು ಪರಾಮರ್ಶಿಸಲು ಸ್ಥಳಕ್ಕೆ ಭೆಟ್ಟಿ ನೀಡಿದಾಗ ಅಲ್ಲಿ ಪ್ರಾಚೀನ ಜನವಸತಿ ನೆಲೆ ಇರುವುದು ಹಾಗೂ ಅವುಗಳು ಮೂರ್ತಿಗಳಲ್ಲ; ಕಬ್ಬಿಣದ ಶಿಲ್ಪದ ತುಂಡುಗಳೆಂದು ಸ್ಪಷ್ಟಪಡಿಸಿಕೊಳ್ಳಲಾಯಿತು.

ಈ ನೆಲೆಯ ಸುಮಾರು ಎರಡು-ಮೂರು ಹೆಕ್ಟೇರ್ ವಿಸ್ತಾರವಾಗಿದೆ. ಇಲ್ಲಿ ಬೂದುಗೆಂಪು ಮಣ್ಣಿದೆ. ಈ ನೆಲೆಯಲ್ಲಿ ಅನೇಕ ಗಡಿಗೆ ಮಡಿಕೆ ಮತ್ತು ಇನ್ನಿತರ ಸಾಂಸ್ಕೃತಿಕ ವಸ್ತುಗಳು ಹರಡಿವೆ. ಇಲ್ಲಿ ಸಂಗ್ರಹಿಸಿದ ಗಡಿಗೆ-ಮಡಿಕೆಗಳು ಕಬ್ಬಿಣದ ಬೃಹತ್ ಶಿಲಾ ಸಂಸ್ಕೃತಿಯ ಕೆಂಪು ಬಣ್ಣದ ಗಡಿಗೆಗಳನ್ನು ಹೋಲುತ್ತವೆ. ಇನ್ನುಳಿದವು ತದನಂತರದ ಕಾಲದ್ದಾಗಿವೆ. ಈಗಾಗಲೇ ಕಬ್ಬಿಣ ಕಿಟ್ಟ ತುಂಡುಗಳು ಕಬ್ಬಿಣ ಬೃಹತ್ ಶಿಲಾ ಸಂಸ್ಕೃತಿಯ ನೆಲೆಗಳಲ್ಲಿ ಕಂಡುಬಂದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಅದು ಗುಡ್ಡ ಪ್ರದೇಶವಾಗಿದ್ದು ಅಲ್ಲಿ ಹುಲ್ಲು ಬೆಳೆದಿರುವುದರಿಂದ ಇತರೆ ಸಾಂಸ್ಕೃತಿಕ ವಸ್ತುಗಳನ್ನು ಸಂಗ್ರಹಿಸುವುದು ಜಟಿಲವಾಗಿದೆ. ಈ ಬಗ್ಗೆ ಹೆಚ್ಚಿನ ಸಂಶೋಧನೆಯನ್ನು ಅಲ್ಲಿ ಕೈಗೊಳ್ಳಬೇಕಾಗಿದೆ.

ಸಿದ್ಧಾಪುರ

ಸಿದ್ಧಾಪುರವು ಧಾರವಾಡದಿಂದ ಅಳ್ನಾವರದ ರಸ್ತೆಯಲ್ಲಿ ವಾಯುವ್ಯಕ್ಕೆ ಸುಮಾರು 10 ಕಿ.ಮೀ. ದೂರದಲ್ಲಿದೆ. ಇಲ್ಲಿಯ ಪಂಚಲಿಂಗೇಶ್ವರ ದೇವಾಲಯದ ಮುಂಭಾಗದಲ್ಲಿ ಒಂದು ಮತ್ತು ಹಾಳು ಬಸವಣ್ಣ ಗುಡಿ ಬಳಿ ಒಂದು ಒಟ್ಟು ಎರಡು ಹಾಳಾದ ನೆಲೆಗಳಿವೆ. ದೇವಾಲಯದ ಮುಂಭಾಗದಲ್ಲಿರುವ ಸುಮಾರು ಒಂದೆರಡು ಹೆಕ್ಟೇರ್ ಪ್ರದೇಶದಲ್ಲಿ ಚದುರಿದ ಗಡಿಗೆ-ಮಡಿಕೆಗಳು, ಇಟ್ಟಿಗೆಗಳು ದೊರೆತಿವೆ. ಹಾಳು ಬಸವಣ್ಣನ ಗುಡಿ ಬಳಿ ಸುಮಾರು ಅರ್ಧ ಹೆಕ್ಟೇರ್ ಪ್ರದೇಶದಲ್ಲಿ ಎರಡು ಕಡೆ ಗುಂಪು-ಗುಂಪಾಗಿ ಇಟ್ಟಿಗೆಗಳು ಕಂಡುಬರುತ್ತವೆ.

ಈ ನೆಲೆಯಲ್ಲಿ ಒಂದು ಕೆಂಪು ಗಡಿಗೆ-ಮಡಿಕೆಗಳು ಮತ್ತೊಂದು ಬೂದು ಗಡಿಗೆ ಮತ್ತು ಇನ್ನಿತರ ಲಕ್ಷಣದ್ದಾಗಿವೆ. ಕೆಂಪು ಗಡಿಗೆಗಳು ಸುಮಾರು ಕ್ರಿ.ಶ. 3-4ನೇ ಶತಮಾನಕ್ಕೆ ಸೇರಿದ್ದಾಗಿವೆ. ಉಳಿದವು ಮಧ್ಯಯುಗೀನ ಕಾಲಕ್ಕೆ ಸೇರಿವೆ. ಈ ನೆಲೆಯಲ್ಲಿ ದೊರೆತ ಒಂದು ಇಟ್ಟಿಗೆಯ ತುಂಡು ವಿಶೇಷ ಗಮನವನ್ನು ಸೆಳೆಯುತ್ತದೆ. ಗೋಡೆಯಲ್ಲಿ ಹಿಂಚಾಚು ಮುಂಚಾಚುಗಳನ್ನು ಹೊಂದಿದಂತಿರುವ ಈ ಇಟ್ಟಿಗೆಯ ತುದಿಯಲ್ಲಿ ಅಧಿಷ್ಠಾನ ಭಾಗದಂತೆ ಕೆಳಗಿನಿಂದ ಮೇಲಕ್ಕೆ ಐದು ಅಡ್ಡ ತರಗಳನ್ನು ಉದ್ದೇಶಪೂರ್ವಕವಾಗಿ ಕೆತ್ತಿರುವುದು ಕಾಣುತ್ತೇವೆ. ನಡುವಿನ ತರವು ದಪ್ಪವಾಗಿ ಮತ್ತು ಆಯತಾಕಾರವಾಗಿ ಮುಂದೆ ಚಾಚಿದೆ. ಹೀಗಾಗಿ ಈ ಇಟ್ಟಿಗೆಯನ್ನು ಗೋಡೆಯ ಅರೆಗಂಬವಾಗಿ ಬಳಸಿರುವ ಸಾಧ್ಯತೆ ಹೆಚ್ಚು. ಈ ನೆಲೆಯ ಇಟ್ಟಿಗೆಗಳು ಸುಮಾರು ಕ್ರಿ.ಶ. 6ನೇ ಶತಮಾನಕ್ಕೆ ಸೇರುತ್ತವೆ.

ಶಿಲ್ಪಗಳು : ಗೋಧೂಳಿಯ ಆಂಜನೇಯ ದೇವಾಲಯದ ಮುಂಭಾಗದಲ್ಲಿ ಆರು ವೀರಗಲ್ಲುಗಳಿವೆ.

ವೀರಗಲ್ಲು-1 : ವೀರಗಲ್ಲು ಮೂರು ದೃಶ್ಯಗಳಲ್ಲಿದೆ. ಶಿಲ್ಪದ ಬಲಭಾಗದ ಚಿತ್ರಗಳು ಕೆಳಗಿನಿಂದ ಮೇಲಿನವರೆಗೆ ಭಗ್ನಗೊಂಡಿವೆ. ಉಳಿದಿರುವ ಚಿತ್ರಗಳೆಂದರೆ ಕೆಳಗಿನ ದೃಶ್ಯದಲ್ಲಿ ಎಡಭಾಗದಲ್ಲಿ ಒಂದರ ಮೇಲೆ ಒಂದರಂತಿರುವ ಎರಡು

ಕುದುರೆಗಳ ಮೇಲೆ ಇಬ್ಬರು ವೈರಿ ಪಡೆಯವರು ಕುಳಿತಿದ್ದಾರೆ. ಇಲ್ಲಿ ಕುದುರೆಗಳನ್ನು ದೊಡ್ಡದಾಗಿ ವೈರಿಗಳನ್ನು ಚಿಕ್ಕದಾಗಿ ತೋರಿಸಲಾಗಿದೆ. ಇವರಿಗೆ ಅಭಿಮುಖವಾಗಿ ವೀರ ಕೈಯಲ್ಲಿ ಬಿಲ್ಲು-ಬಾಣ ಹಿಡಿದು ನಿಂತಿದ್ದಾನೆ. ವೀರನ ಚಿತ್ರ ಸ್ವಲ್ಪ ಕಂಡುಬರುತ್ತಿದೆ. ಎರಡನೇ ದೃಶ್ಯದಲ್ಲಿ ನಾಲ್ವರು ಅಪ್ಸರೆಯರು ವೀರನನ್ನು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ವೀರನ ಬದಿಯಲ್ಲಿರುವ ಇಬ್ಬರು ಅಪ್ಸರೆಯರು ಒಂದುಕೈಯಲ್ಲಿ ವೀರನನ್ನು ಮತ್ತೊಂದು ಕೈಯಲ್ಲಿ ಕಲಶವನ್ನಿಡಿದು ನಿಂತಿರುವುದು ಗಮನೀಯ. ಕೊನೆಯ ಅಪ್ಸರೆಯರು ಒಂದು ಕೈಯಲ್ಲಿ ಚೌರಿಯನ್ನು ಹಿಡಿದಿದ್ದಾರೆ. ಅಪ್ಸರೆಯರ ಇಕ್ಕೆಲಗಳಲ್ಲಿ ಇಬ್ಬರು ಕಿರು ವ್ಯಕ್ತಿಗಳು ಡಮರು ಬಾರಿಸುತ್ತಿದ್ದಾರೆ. ಅಪ್ಸರೆಯರ ವೇಷಭೂಷಣಗಳು ಗಮನಸೆಳೆಯುತ್ತವೆ. ಕಿವಿಯಲ್ಲಿ ಅಗಲವಾದ ಕುಂಡಲ ಕೊರಳಲ್ಲಿ ಉದ್ದನೆಯ ಮಣಿಸರ, ಕೈಕಡಗ, ಕಾಲ್ಗಡಗ ಮುಂತಾದ ಆಭರಣಗಳನ್ನು ಧರಿಸಿರುವರು. ತಮ್ಮ ತಲೆಯ ಕೇಶವನ್ನು ನೆತ್ತಿಯ ಮೇಲೆ ಸಿಂಬೆಯಂತೆ ವೃತ್ತಾಕಾರವಾಗಿ ಕಟ್ಟಿ ಅಲಂಕರಿಸಿದ್ದಾರೆ. ಮೇಲಿನ ದೃಶ್ಯದ ಮಧ್ಯದಲ್ಲಿ ಶಿವಲಿಂಗವಿದೆ. ಶಿವಲಿಂಗದ ಎಡಬದಿಯಲ್ಲಿ ಕುಳಿತ ನಂದಿ ಇದೆ. ಇದರ ಮೇಲ್ಭಾಗದಲ್ಲಿ ಯತಿ ನಿಂತು ಶಿವಲಿಂಗಕ್ಕೆ ಪೂಜಿಸುತ್ತಿದ್ದಾನೆ. ಬಹುಶಃ ಈತ ಕರ್ಪೂರ ಬೆಳಗುತ್ತಿರಬಹುದು. ಯತಿಯ ರುಮಾಲು ಹಿಂದಕ್ಕೆ ಉದ್ದವಾಗಿ ಜೋತು ಬಿದ್ದಿದೆ. ಕಚ್ಚೆ ಉಟ್ಟಿದ್ದಾನೆ. ಶಿವಲಿಂಗದ ಬಲಬದಿಯಲ್ಲಿ ವೀರ ಅರ್ಧ ಪದ್ಮಾಸನದಲ್ಲಿ ಕುಳಿತಿದ್ದಾನೆ. ವೀರ ತನ್ನ ಕೇಶವನ್ನು ನೆತ್ತಿಯ ಮೇಲೆ ವೃತ್ತಾಕಾರವಾಗಿ ಕಟ್ಟಿ ಸಿಂಗರಿಸಿಕೊಂಡಿದ್ದಾನೆ. ಈ ದೃಶ್ಯದ ಮೇಲಿನ ಪಟ್ಟಿಕೆಯಲ್ಲಿ ಎರಡು ಸಾಲಿನ ಶಾಸನವಿದೆ. ವಿಮಾನಕ್ಕೆ ಕಲಶವಿದೆ.

ವೀರಗಲ್ಲು-2 : ವೀರಗಲ್ಲಿನಲ್ಲಿ ಮೂರು ದೃಶ್ಯಗಳಿವೆ. ಕೆಳಗಿನ ದೃಶ್ಯ ಬಹುಶಃ ಹೋರಾಟದ ದೃಶ್ಯವಿದ್ದು ಅದು ಪೂರ್ಣ ಮಣ್ಣಿನಲ್ಲಿ ಹೂತು ಹೋಗಿ ಅಥವಾ ಭಗ್ನಗೊಂಡು ವೀರನ ರುಂಡಭಾಗ ಮಾತ್ರ ಕಂಡುಬರುತ್ತಿದೆ. ಎರಡನೆಯ ಭಾಗದಲ್ಲಿ ಮಡಿದ ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕೊಂಡೊಯ್ಯುತ್ತಿದ್ದಾರೆ. ವೀರ ತನ್ನ ಕೈಗಳನ್ನು ಅಪ್ಸರೆಯರ ಭುಜದ ಮೇಲೆ ಹಾಕಿದ್ದಾನೆ. ಅಪ್ಸರೆಯರು ತಮ್ಮ ಕೈಗಳನ್ನು ವೀರನ ಸೊಂಟದ ಮೇಲೆ ಹಾಕಿದ್ದಾರೆ. ಎಡಭಾಗದ ಅಪ್ಸರೆಯರ ಬಳಿ ಮತ್ತೊಬ್ಬಳು ಸ್ತ್ರೀ ನಿಂತಿದ್ದು ಬಲಗೈಯಲ್ಲಿ ದಂತದಂತಹ ವಸ್ತುವನ್ನಿಡಿದಿದ್ದಾಳೆ. ಅಪ್ಸರೆಯರು ಕೇಶವನ್ನು ಹಿಂಬದಿಯಲ್ಲಿ ವೃತ್ತಾಕಾರವಾಗಿ ಸಿಂಗರಿಸಿಕೊಂಡಿದ್ದಾರೆ. ಈ ದೃಶ್ಯದ ಮೇಲಿನ ಮೂಲೆಗಳಲ್ಲಿ ಇಬ್ಬರು ಸ್ತ್ರೀಯರು ಏನನ್ನೋ ಹಿಡಿದು ನಿಂತಂತೆ ತೋರಿಸಿರುವುದು ಅಪರೂಪವಾಗಿದೆ. ಬಹುಶಃ ಇವರು ಸ್ತ್ರೀ ವಾದ್ಯಗಾರ್ತಿಯರಿರಬಹುದೇ(?). ಮೇಲಿನ ದೃಶ್ಯದ ಮಧ್ಯದಲ್ಲಿ ಶಿವಲಿಂಗವಿದೆ. ಇಲ್ಲಿ ಶಿವಲಿಂಗವನ್ನು ಇಬ್ಬರು ಯತಿಗಳು ಪೂಜಿಸುತ್ತಿರುವುದು ಮಹತ್ವದ್ದೆನಿಸಿದೆ. ಯತಿಗಳ ಬೆನ್ನ ಹಿಂದೆ ಜೋಳಿಗೆಗಳಿವೆ. ಇವರು ತಲೆಗೆ ರುಮಾಲನ್ನು ಸುತ್ತಿಕೊಂಡಿದ್ದಾರೆ. ಶಿವಲಿಂಗಕ್ಕೆ ಪುಷ್ಪಾರ್ಚನೆಯನ್ನು ಮಾಡಲಾಗಿದೆ. ಶಿವಲಿಂಗದ ಬಲಬದಿಗೆ ವೀರ ಶಿವಲಿಂಗದ ಕಡೆ ಮುಖಮಾಡಿ ಅರ್ಧಪದ್ಮಾಸದಲ್ಲಿ ಕುಳಿತಿದ್ದಾನೆ. ಈತನ ಬಲಗೈ ಆಭಯಮುದ್ರೆಯಲ್ಲಿ, ಎಡಗೈ ತೊಡೆಯ ಮೇಲಿದೆ. ಶಿಲ್ಪದ ಪಾರ್ಶ್ವಗಳಲ್ಲಿ ಅಪ್ಸರೆಯರಿಬ್ಬರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಒಂದು ಕೈಯನ್ನು ಸೊಂಟದ ಮೇಲಿಟ್ಟಿದ್ದರೆ ಮತ್ತೊಂದು ಕೈಯಲ್ಲಿ ಚೌರಿಯನ್ನಿಡಿದಿದ್ದಾರೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿತ್ರಗಳಿವೆ. ಎರಡನೆಯ ಪಟ್ಟಿಕೆಯಲ್ಲಿ ಮಹಿಳಾ ವಾದ್ಯಗಾರ್ತಿಯರನ್ನು ಮೇಲಿನ ಪಟ್ಟಿಕೆಯಲ್ಲಿ ಚೌರಿಧಾರಿಯನ್ನು ತೋರಿಸಿರುವುದು ವಿಶೇಷವೆನಿಸಿದೆ.

ವೀರಗಲ್ಲು-3 : ಈ ವೀರಗಲ್ಲಿನಲ್ಲಿ ಮೂರು ದೃಶ್ಯಗಳಿವೆ. ಶಿಲ್ಪದ ಕೆಳಗಿನ ಮತ್ತು ಎರಡನೆಯ ದೃಶ್ಯದ ಬಲಭಾಗದ ಚಿತ್ರಗಳು ಸ್ವಲ್ಪ ಭಗ್ನಗೊಂಡಿವೆ. ಕೆಳಗಿನ ದೃಶ್ಯದಲ್ಲಿ ವೀರ ಮೃತವ್ಯಕ್ತಿಯ ಮೇಲೆ ನಿಂತು ವೈರಿಗಳೊಡನೆ ಕಾದಾಡುತ್ತಿದ್ದಾನೆ. ಈತ ಕೈಯಲ್ಲಿ ಬಿಲ್ಲು-ಬಾಣಗಳನ್ನಿಡಿದು ಪ್ರಯೋಗ ಹಸ್ತದಲ್ಲಿದ್ದಾನೆ. ವೈರಿ ದಳದವರೂ ಸಹ ಬಿಲ್ಲು-ಬಾಣಗಳನ್ನಿಡಿದು ಪ್ರಯೋಗಭಂಗಿಯಲ್ಲಿದ್ದಾರೆ. ವೀರನ ಕಾಲಕೆಳಗಿರುವ ಮೃತ ವ್ಯಕ್ತಿಯನ್ನು ಇಲ್ಲಿ ದೊಡ್ಡದಾಗಿ ಚಿತ್ರಿಸಲಾಗಿದೆ. ಪ್ರಾಯಶಃ ಈತ ವೈರಿಪಡೆಯ ಮುಖ್ಯಸ್ಥನಿರಬಹುದು. ಎರಡನೆಯ ದೃಶ್ಯದ ಕೆಳಭಾಗ ಮತ್ತು ಬಲಬದಿಯ ಮೇಲಿನ ಭಾಗದಲ್ಲಿ ಮೋಡದ ಚಿತ್ರಣವನ್ನು ಮೂರು ಹಂತಗಳಲ್ಲಿ ಸಾಲಾಗಿ ಚಿತ್ರಿಸಲಾಗಿದೆ. ಈ ಮೋಡಣ ಚಿತ್ರದ ಮೇಲೆ ಮಡಿದ ವೀರನನ್ನು ಇಬ್ಬರು ಅಪ್ಸರೆಯರು ತಮ್ಮ ಭುಜದ ಮೇಲೆ ಹಾಕಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಬದಿಗಳಲ್ಲಿ

ವಾದ್ಯಮೇಳದವರಿದ್ದಾರೆ. ಎಡಮೂಲೆಯಲ್ಲಿ ಒಬ್ಬ ವ್ಯಕ್ತಿ ಕೈಯಲ್ಲಿ ಹಾರವನ್ನಿಡಿದು ಮೇಲಿನಿಂದ ಕೆಳಗೆ ಹಾರುತ್ತಿರುವಂತಿದ್ದಾನೆ. ವೀರ ಮತ್ತು ಅಪ್ಸರೆಯರು ತಲೆಗೆ ಮಣಿಗಳಿಂದ ತಯಾರಿಸಿದ ವಸ್ತ್ರವನ್ನು ಕಟ್ಟಿಕೊಂಡಿದ್ದಾರೆ. ಮತ್ತು ವೀರ ಮತ್ತು ಅಪ್ಸರೆಯರು ಕಟಿವಸ್ತ್ರ ಧರಿಸಿರುವುದು ಗಮನ ಸೆಳೆಯುತ್ತದೆ.

ಮೇಲಿನ ದೃಶ್ಯದಲ್ಲಿ ವೀರ ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಬಲಗೈ ಅಭಯಮುದ್ರೆಯಲ್ಲಿ ಎಡಗೈಯನ್ನು ತೊಡೆಯ ಮೇಲಿಟ್ಟುಕೊಂಡಿದ್ದಾನೆ. ಬದಿಗಳಲ್ಲಿ ಇಬ್ಬರು ಅಪ್ಸರೆಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಒಂದು ಕೈಯನ್ನು ಸೊಂಟದ ಮೇಳಿಟ್ಟು ಮತ್ತೊಂದು ಕೈಯಲ್ಲಿ ಚೌರಿಯನ್ನಿಡಿದಿದ್ದಾರೆ. ಈ ಅಪ್ಸರೆಯರು ಸಹ ಪೀಠದ ಮೇಲೆ ನಿಂತಿದ್ದಾರೆ. ಈ ಚಿತ್ರಗಳ ಬಲಬದಿಯಲ್ಲಿ ವ್ಯಕ್ತಿಯೊಬ್ಬ ಬಹುಶಃ ವೀರ ಪದ್ಮಾಸನದಲ್ಲಿ ಕುಳಿತಿದ್ದಾನೆ. ಈತನ ಬಲಕ್ಕೆ ಯತಿ ನಿಂತು ಶಂಖ ಊದುತ್ತಿದ್ದಾನೆ. ದೃಶ್ಯದ ಎಡಭಾಗದಲ್ಲಿ ಶಿವಲಿಂಗ, ಶಿವಲಿಂಗಕ್ಕೆ ಯತಿಯೊಬ್ಬ ನಿಂತು ಪೂಜಿಸುತ್ತಿದ್ದಾನೆ. ಯತಿಯ ಮುಂದೆ ಕಮಂಡಲ ಇದೆ. ಶಿವಲಿಂಗದ ಕೆಳ ಭಾಗದಲ್ಲಿ ಕುಳಿತ ನಂದಿ ಇದೆ. ಶಿವಲಿಂಗಕ್ಕೆ ಪೇಟ/ಕಿರೀಟವನ್ನು ತೋರಿಸಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ-ಚಂದ್ರರ ಚಿತ್ರಗಳಿವೆ. ಮೇಲಿನ ದೃಶ್ಯವನ್ನು ವಿಮಾನದಲ್ಲಿ ತೋರಿಸಲಾಗಿದೆ.

ವೀರಗಲ್ಲು-4 : ಈ ವೀರಗಲ್ಲು ಸಹ ಮೂರು ಹಂತಗಳಲ್ಲಿದೆ. ಇಲ್ಲಿರುವ ದೃಶ್ಯಗಳು ಮೂರನೇ ವೀರಗಲ್ಲಿನಲ್ಲಿರುವ ದೃಶ್ಯಗಳಂತೆಯೇ ಇದ್ದು ಶಿಲ್ಪದ ನಿರೂಪಣೆ ಉತ್ತಮವಾಗಿದೆ. ವಿವರಣೆಯನ್ನು ಇಲ್ಲಿ ಸ್ವತಃ ಹೆಚ್ಚಾಗಿ ತೋರಿಸಲಾಗಿದೆ.

ಕೆಳಗಿನ ದೃಶ್ಯದಲ್ಲಿ ವೀರ ಮೃತ ವ್ಯಕ್ತಿಯ ಮೇಲೆ ನಿಂತು ವೈರಿಗಳೊಡನೆ ಕಾದಾಡುತ್ತಿದ್ದಾನೆ. ವೀರ ಕೈಯಲ್ಲಿ ಬಿಲ್ಲು-ಬಾಣ ಹಿಡಿದು ಪ್ರಯೋಗ ಭಂಗಿಯಲ್ಲಿದ್ದಾನೆ. ವೈರಿ ಪಡೆಯವರೂ ಸಹ ಕೈಯಲ್ಲಿ ಬಿಲ್ಲು-ಬಾಣ ಹಿಡಿದು ಮುನ್ನುಗ್ಗುತ್ತಿದ್ದಾರೆ. ಇಲ್ಲಿಯೂ ಸಹ ಮೃತ ವ್ಯಕ್ತಿಯನ್ನು ದೊಡ್ಡದಾಗಿ ತೋರಿಸಲಾಗಿದೆ. ವೀರನ ಹಿಂಬದಿಯಲ್ಲಿ ಗೋವುಗಳನ್ನು ಸಾಲಾಗಿ ತೋರಿಸಲಾಗಿದೆ. ಈ ಗೋವುಗಳ ಮಧ್ಯ ಒಂದು ಎಮ್ಮೆಯನ್ನು ತೋರಿಸಿರುವುದು ವಿಶೇಷವೆನಿಸಿದೆ. ರಾಷ್ಟ್ರಕೂಟರ ಕಾಲದ ವೀರಗಲ್ಲುಗಳಲ್ಲಿ ಎಮ್ಮೆಯನ್ನು ತೋರಿಸುವುದು ಸಾಮಾನ್ಯ. ಎರಡನೇ ದೃಶ್ಯದಲ್ಲಿ ವೀರನನ್ನು ಇಬ್ಬರು ಅಪ್ಸರೆಯರು ತಮ್ಮ ಭುಜದ ಮೇಲೆ ಹಾಕಿಕೊಂಡು ಸ್ವರ್ಗಕ್ಕೆ ಕೊಂಡೊಯ್ಯುತ್ತಿದ್ದಾರೆ. ಅಪ್ಸರೆಯರು ಒಂದು ಕೈಯಲ್ಲಿ ಕಳಶವನ್ನಿಡಿದಿದ್ದಾರೆ. ಇವರ ಕೆಳಭಾಗದಲ್ಲಿ ಮೋಡದ ಚಿತ್ರಣವನ್ನು ಹಂತ-ಹಂತವಾಗಿ ತೋರಿಸಲಾಗಿದೆ. ಎಡ ಮತ್ತು ಬಲ ಮೂಲೆಯಲ್ಲಿಯೂ ಮೋಡದ ಚಿತ್ರಣವನ್ನು ಹಂತ-ಹಂತವಾಗಿ ತೋರಿಸಲಾಗಿದೆ. ಎಡ ಮತ್ತು ಬಲ ಮೂಲೆಯಲ್ಲಿಯೂ ಮೋಡದ ಅಲಂಕರಣೆಯಿದೆ. ವೀರ ಅಪ್ಸರೆಯರೊಂದಿಗೆ ಇಲ್ಲಿ ವಾದ್ಯ ಮೇಳದವರೂ ಇದ್ದಾರೆ. ಒಬ್ಬ ವ್ಯಕ್ತಿ ಬಲ ಮೂಲೆಯಲ್ಲಿ ಮೇಲಿನಿಂದ ಕೆಳಗೆ ಹಾರುತ್ತಿರುವಂತಿದ್ದು, ಕೈಯಲ್ಲಿ ಹಾರವನ್ನಿಡಿದಿದ್ದಾನೆ. ವೀರ ಮತ್ತು ಅಪ್ಸರೆಯರು ಕಟೀವಸ್ತ್ರಧಾರಿಯಾಗಿದ್ದಾರೆ. ತಲೆಗೆ ಅಲಂಕೃತ ರುಮಾಲು ಧರಿಸಿದ್ದಾರೆ.

ಮೇಲಿನ ದೃಶ್ಯದಲ್ಲಿ ವೀರ ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಬಲಗೈ ಅಭಯ ಹಸ್ತದಲ್ಲಿದ್ದು, ಎಡಗೈಯನ್ನು ತೊಡೆಯ ಮೇಲಿಟ್ಟುಕೊಂಡಿದ್ದಾನೆ. ವೀರ ಕಿರೀಟಧಾರಿ, ಕರ್ಣಕುಂಡಲ ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಈತನ ಬದಿಗಳಲ್ಲಿ ಇಬ್ಬರು ಅಪ್ಸರೆಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಒಂದು ಕೈಯಲ್ಲಿ ಚೌರಿಯನ್ನಿಡಿದಿದ್ದಾರೆ. ಇವರೂ ಸಹ ವೀರ ಕುಳಿತಿರುವ ಪೀಠದ ಮೇಲೆಯೇ ನಿಂತಿದ್ದಾರೆ. ಬಲಭಾಗದಲ್ಲಿ ವ್ಯಕ್ತಿಯೊಬ್ಬ ಅರ್ಧ ಪದ್ಮಾಸನದಲ್ಲಿ ಕುಳಿತಿದ್ದಾನೆ. ಬಹುಶಃ ಈತನು ಹೋರಾಟದಲ್ಲಿ ಮಡಿದ ವೀರನಿರಬಹುದು. ಆದರೆ ಈತ ಸ್ವರ್ಗಾರೋಹಣ ಹಂತದಲ್ಲಿ ಕಾಣುವುದಿಲ್ಲ. ಬಲಗೈಯಲ್ಲಿ ಏನನ್ನೋ ಹಿಡಿದಿದ್ದಾನೆ. ಎಡಗೈಯನ್ನು ತೊಡೆಯ ಮೇಲಿಟ್ಟಿದ್ದಾನೆ. ಈತನ ಬಲಕ್ಕೆ ಯತಿ ನಿಂತು ಶಂಖ ಊದುತ್ತಿದ್ದಾನೆ. ಶಿಲ್ಪದ ಎಡಭಾಗದಲ್ಲಿ ಶಿವಲಿಂಗ ಅದಕ್ಕೆ ಯತಿಯೊಬ್ಬ ನಿಂತು ಪೂಜಿಸುತ್ತಿದ್ದಾನೆ. ಕೆಳಗೆ ಕಮಂಡಲವಿದೆ. ಶಿವಲಿಂಗದ ಕೆಳಗೆ ಕುಳಿತ ನಂದಿ ಇದೆ. ಮೇಲೆ ಸೂರ್ಯ-ಚಂದ್ರರ ಚಿತ್ರಗಳಿವೆ. ಈ ಮೇಲಿನ ದೃಶ್ಯವನ್ನು ವಿಮಾನದಲ್ಲಿ ತೋರಿಸಲಾಗಿದೆ.

ವೀರಗಲ್ಲು-5 : ವೀರಗಲ್ಲು ಮೂರು ಹಂತಗಳಲ್ಲಿದೆ. ಕೆಳಭಾಗದಲ್ಲಿ ವೀರ ಬಲಗೈಯಲ್ಲಿ ಹಿಡಿದ ಬಣದಿಂದ ವೈರಿಯ ಹೊಟ್ಟೆಗೆ ತಿವಿದಿದ್ದಾನೆ. ಬಾಣ ವೈರಿಯ ಹೊಟ್ಟೆ ಹೊಕ್ಕು ಬೆನ್ನ ಹಿಂದೆ ಬಂದಿದೆ. ವೀರ ಎಡಗೈಲ್ಲಿ ಬಿಲ್ಲನ್ನು ಮೇಲಕ್ಕೆ ಎತ್ತಿ

ಹಿಡಿದಿದ್ದಾನೆ. ವೀರನೊಂದಿಗೆ ಸಹಚರರಿದ್ದಾರೆ. ವೈರಿ ಪಡೆಯಲ್ಲಿ ಎಲ್ಲರೂ ಕೈಯಲ್ಲಿ ಬಿಲ್ಲು-ಬಾಣಗಳನ್ನಿಡಿದಿದ್ದಾರೆ. ಎರಡನೇ ದೃಶ್ಯದಲ್ಲಿ ಮಡಿದ ವೀರನನ್ನು ಅಪ್ಸರೆಯರಿಬ್ಬರು ಭುಜದ ಮೇಲೆ ಹಾಕಿಕೊಂಡು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಅಪ್ಸರೆಯರು ಒಂದು ಕೈಯಲ್ಲಿ ವೀರನ ಸೊಂಟವನ್ನು, ತಮ್ಮ ಮತ್ತೊಂದು ಕೈಯಲ್ಲಿ ಏನನ್ನೋ ಹಿಡಿದಿದ್ದಾರೆ (ಚೌರಿ?). ಜೊತೆಯಲ್ಲಿ ವಾದ್ಯಮೇಳದವರಿದ್ದಾರೆ. ವಾದ್ಯ ಮೇಳದವರು ಇಲ್ಲಿ ಸ್ತ್ರೀಯರಾಗಿರುವುದನ್ನು ಗಮನಿಸಬೇಕಾಗಿದೆ. ಈ ರೀತಿ ವಾದ್ಯ ಮೇಳದವರು ಅಪರೂಪ.

ಮೇಲಿನ ದೃಶ್ಯದಲ್ಲಿ ವೀರ ಪೀಠದ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ಪೀಠ ಸ್ವಲ್ಪ ಎತ್ತರವಾಗಿದೆ. ಬಲಗೈಯನ್ನು ಮೊಣಕಾಲ ಮೇಲೂ, ಎಡಗೈಯನ್ನು ತೊಡೆಯ ಮೇಲೂ ಇಟ್ಟಿದ್ದಾನೆ. ಪೀಠದ ಬದಿಯಲ್ಲಿ ಅಪ್ಸರೆಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಒಂದು ಕೈಯನ್ನು ಸೊಂಟದ ಮೇಲೂ ಮತ್ತೊಂದು ಕೈಯಲ್ಲಿ ಚೌರಿಯನ್ನಿಡಿದಿದ್ದಾರೆ. ಎಡೆ ಮೂಲೆಯಲ್ಲಿ ಶಿವಲಿಂಗ ಅದಕ್ಕೆ ಅಭಿಮುಖವಾಗಿ ಕುಳಿತ ನಂದಿ ಇದೆ. ಶಿವಲಿಂಗದ ಕೆಳಗೆ ವ್ಯಕ್ತಿಯೊಬ್ಬ ವೀರನ ಕಡೆ ಮುಖಮಾಡಿ ಕೈಮುಗಿದು ಕುಳಿತಿದ್ದಾನೆ. ಶಿಲ್ಪದ ಬಲ ಮೂಲೆಯಲ್ಲಿ ಹಾರುತ್ತಿರುವ ವ್ಯಕ್ತಿಯಿದ್ದಾನೆ. ಈ ಮೇಲಿನ ದೃಶ್ಯವನ್ನು ವಿಮಾನದಲ್ಲಿ ತೋರಿಸಲಾಗಿದೆ. ಈ ವೀರಗಲ್ಲಿನಲ್ಲಿ ವ್ಯಕ್ತಿಗಳನ್ನು ನೀಳವಾಗಿ ತೋರಿಸಲಾಗಿದೆ.

ವೀರಗಲ್ಲು-6 : ವೀರಗಲ್ಲಿನಲ್ಲಿ ಎರಡು ದೃಶ್ಯಗಳು ಮಾತ್ರ ಕಂಡುಬರುತ್ತವೆ. ಹೋರಾಟದ ದೃಶ್ಯ ಭಗ್ನಗೊಂಡಿದೆ. ಈಗ ಕಾಣುತ್ತಿರುವ ಕೆಳಗಿನ ದೃಶ್ಯದಲ್ಲಿ ಮಡಿದ ವೀರನನ್ನು ಅಪ್ಸರೆಯರು ದೇವಲೋಕಕ್ಕೆ ಕರೆದೊಯ್ಯುತ್ತಿದ್ದಾರೆ. ಜೊತೆಯಲ್ಲಿ ವಾದ್ಯ ಮೇಳದವರಿದ್ದಾರೆ. ಕೆಳಭಾಗದಲ್ಲಿ ಮೋಡದ ಅಲಂಕರಣೆಯನ್ನು ತೋರಿಸಲಾಗಿದೆ. ಮೇಲಿನ ದೃಶ್ಯದಲ್ಲಿ ಪೀಠದ ಮೇಲೆ ವೀರ ಸುಖಾಸನದಲ್ಲಿ ಕುಳಿತಿದ್ದಾನೆ. ಬದಿಗಳಲ್ಲಿ ಅಪ್ಸರೆಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ಒಂದು ಕೈಯಲ್ಲಿ ಚೌರಿಯನ್ನಿಡಿದು ಮತ್ತೊಂದು ಕೈಯನ್ನು ಸೊಂಟದ ಮೇಲಿಟ್ಟಿದ್ದಾರೆ. ಎಡಗಡೆ ಮತ್ತೊಬ್ಬ ವ್ಯಕ್ತಿ ಸೊಂಟದ ಮೇಲೆ ಕೈಯಿಟ್ಟು ನಿಂತಿದ್ದಾನೆ. ಶಿಲ್ಪದ ಬಲಭಾಗದಲ್ಲಿ ಶಿವಲಿಂಗ ಕೆಳಗೆ ಕುಳಿತನಂದಿ ನಂದಿಯ ಮೇಲೆ ಒಬ್ಬ ಸ್ತ್ರೀ ಕೈಯಲ್ಲಿ ಹಾರ ಹಿಡಿದು ನಿಂತಿದ್ದಾಳೆ. ಅವಳ ಕೆಳಗೆ ವ್ಯಕ್ತಿಯೊಬ್ಬ ನಿಂತಿದ್ದಾನೆ.

ಮೇಲೆ ವಿವರಿಸಿರುವ ಆರೂ ವೀರಗಲ್ಲುಗಳು ರಾಷ್ಟ್ರಕೂಟರ ಕಾಲಕ್ಕೆ ಸೇರಿದವುಗಳಾಗಿವೆ. ಮೊದಲನೇ ವೀರಗಲ್ಲಿನ ವೀರ ಮತ್ತು ಅಪ್ಸರೆಯರ ವೇಷಭೂಷಣಗಳು ಗಮನಸೆಳೆಯುತ್ತವೆ. ಎರಡನೆಯ ವೀರಗಲ್ಲಿನಲ್ಲಿ ಶಿವಲಿಂಗಕ್ಕೆ ಇಬ್ಬರು ಯತಿಗಳು ಪೂಜಿಸುತ್ತಿರುವುದು ವಿಶೇಷವೆನಿಸುತ್ತದೆ. ಮೂರು ಮತ್ತು ನಾಲ್ಕನೇ ವೀರಗಲ್ಲುಗಳು ಒಂದೇ ರೀತಿಯ ವಿವರಗಳನ್ನು ಹೊಂದಿವೆ. ಇವುಗಳಲ್ಲಿ ಸ್ವರ್ಗಾರೋಹಣದ ದೃಶ್ಯದಲ್ಲಿ ಕೈಯಲ್ಲಿ ಹಾರಹಿಡಿದು ಹಾರುತ್ತಿರುವ ವ್ಯಕ್ತಿಗಳು ವಿಶೇಷವೆನಿಸಿದ್ದಾರೆ ಮತ್ತು ವೀರ ಮತ್ತು ಅಪ್ಸರೆಯರು ಇಲ್ಲಿ ಕಟಿವಸ್ತ್ರಧಾರಿಗಳಾಗಿದ್ದಾರೆ. ದೇವಲೋಕದ ಚಿತ್ರಣದಲ್ಲಿ ವೀರನೊಟ್ಟಿಗೆ ಅಪ್ಸರೆಯನ್ನು ಸಹ ಪೀಠದ ಮೇಲೆ ನಿಂತಂತೆ ತೋರಿಸಿರುವುದು ಅಪರೂಪವಾಗಿದೆ. ಇಲ್ಲಿ ಇಬ್ಬರು ಯತಿಗಳನ್ನು ಬೇರೆ ಬೇರೆ ತೋರಿಸಲಾಗಿದೆ. ಐದನೆಯ ವೀರಗಲ್ಲಿನ ಎರಡನೆಯ ದೃಶ್ಯದಲ್ಲಿ ಸ್ತ್ರೀ ವಾದ್ಯಗಾರ್ತಿಯರನ್ನು ಚಿತ್ರಿಸಿರುವುದು ಗಮನೀಯ. ಏಕೆಂದರೆ ಸ್ತ್ರೀ ವಾದ್ಯಗಾರ್ತಿಯರು ವಿರಳ. ಐದು ಮತ್ತು ಆರನೆಯ ವೀರಗಲ್ಲಿನ ಸ್ವರ್ಗಾರೋಹಣ ದೃಶ್ಯಗಳು ಒಂದಂಕ್ಕೊಂದು ಹೋಲುತ್ತವೆ.

ಈ ವೀರಗಲ್ಲುಗಳ ವಿವರ ಮತ್ತು ಶೈಲಿಯನ್ನು ಗಮನಿಸಿದರೆ ಇವುಗಳ ಕಾಲಮಾನ ಸು. ಕ್ರಿ.ಶ. 9-10ನೇ ಶತಮಾನ ಎನ್ನಬಹುದು. ಈ ವೀರಗಲ್ಲುಗಳಷ್ಟೇ ಅಲ್ಲದೇ ಸುಮಾರು ಹತ್ತು, ಹನ್ನೊಂದು ಭಗ್ನ ಮಹಾಸತಿಗಲ್ಲುಗಳು ಈ ಗ್ರಾಮದಲ್ಲಿವೆ. ಅವುಗಳನ್ನು ಗ್ರಾಮದ ಮಧ್ಯದಲ್ಲಿ ಒಂದುಕಡೆ ಗುಂಪಾಗಿ ಹಾಕಲಾಗಿದೆ. ಅಲ್ಲದೇ ಗ್ರಾಮದಲ್ಲಿ ಭಗ್ನ ಶಿವಲಿಂಗ, ನಂದಿ ಮತ್ತು ಎರಡು ಗಣೇಶ ಶಿಲ್ಪಗಳಿವೆ.

ಬೌದ್ಧ ಯಕ್ಷ? : ಹುಬ್ಬಳ್ಳಿ ತಾಲೂಕಿನ ಕೋಳಿವಾಡ ಗ್ರಾಮದಲ್ಲಿ ಶಿಲಾಫಲಕದ ಮೇಲೆ ಚಿತ್ರಿಸಿದ ಉಬ್ಬುಶಿಲ್ಪ (ಈಗಾಗಲೇ ಅದು ಗಜಲಕ್ಷ್ಮಿ ಶಿಲ್ಪ ಎಂದು ಇತಿಹಾಸ ದರ್ಶನ ಸಂಪುಟ-20ರಲ್ಲಿ ಪ್ರಸ್ತುತ ಲೇಖಕರೇ ಪ್ರಕಟಿಸಿದ್ದಾರೆ) ಬೌದ್ಧ ಯಕ್ಷನೇ? ಎಂಬುದನ್ನು ನೋಡಬೇಕಾಗಿದೆ. ಏಕೆಂದರೆ ಕೋಳಿವಾಡದಲ್ಲಿ ಈಗಾಗಲೇ ಬೌದ್ಧ ದೇವತೆ ತಾರಾಭಗವತಿಯ ಶಿಲ್ಪ ಇದೆ

ಸ್ಥಳದಲ್ಲಿ (ಕಲ್ಮೇಶ್ವರ ದೇವಾಲಯದ ಆವರಣ) ದೊರೆತಿದೆ ಮತ್ತು ಗ್ರಾಮದಲ್ಲಿಯ ಮಹಾಮಾಯಿ ದೇವಾಲಯ ಬುದ್ಧನ ತಾಯಿ ಮಾಯಾವತಯಿ ಹೆಸರಿನಲ್ಲಿ ನಿರ್ಮಾಣವಾಗಿರಬಹುದೇ? ಹೆಚ್ಚಿನ ಸಂಶೋಧನೆ ಅಗತ್ಯವಿದೆ.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಶಿವತಾರಕ್ ಕೆ.ಬಿ., 2001 : ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ.
2. ಶೇಷಶಾಸ್ತ್ರಿ ಆರ್., 1982 : ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
3. ಧಾರವಾಡ ಜಿಲ್ಲೆಯ ಗ್ಯಾಝೆಟಿಯರ್, 1995.
4. ಜಯಮ್ಮ ಬಿ., 2005 : "ಹುಬ್ಬಳ್ಳಿ ಮತ್ತು ಕುಂದಗೋಳ ತಾಲೂಕುಗಳ ಅಪರೂಪದ ಗಜಲಕ್ಷ್ಮಿ ಶಿಲ್ಪಗಳು", ಇತಿಹಾಸ ದರ್ಶನ, ಸಂಪುಟ-20, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ಪು. 68-70.
5. ಸುಂದರ ಅ "ವಡಗಾಂವ-ಮಾಧವಪುರ : ಇತರ ಕೆಲವು ಮುಖ್ಯ ಪುರಾತತ್ವ ಅವಶೇಷಗಳು (ಸಂಶೋಧನೆ)", ಕರ್ನಾಟಕ ಭಾರತಿ, ಸಂಪುಟ-11, ಸಂಚಿಕೆ-1, ಕ.ವಿ.ವಿ., ಧಾರವಾಡ, ಪು. 68-88.
6. "ಪ್ರಾಚೀನ ಕಾಲದ ಯರಕ ಮೂರ್ತಿಗಳು", ಸಂಯುಕ್ತ ಕರ್ನಾಟಕ, ದಿನಪತ್ರಿಕೆ, ದಿನಾಂಕ : 20-7-2005, ಪು. 1.

❑

ಉತ್ತರ ಕನ್ನಡ ಜಿಲ್ಲೆಯ ಸೂರ್ಯ ಮೂರ್ತಿಗಳ ವೈಶಿಷ್ಟ್ಯಗಳು

– ಡಾ. ಕೆ.ಬಿ. ಸುದರ್ಶನ್

ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸೂರ್ಯಾರಾಧನೆಯು ಜನಪ್ರಿಯವಾಗಿತ್ತು. ಅಲ್ಲಿನ ಸೂರ್ಯಮೂರ್ತಿಯ ಲಕ್ಷಣಗಳು ವೈಶಿಷ್ಟ್ಯಪೂರ್ಣವಾಗಿವೆ.

ಕರಾವಳಿ ಕರ್ನಾಟಕದ ದಕ್ಷಿಣದಲ್ಲಿ ಕುಂಭಕಾಶಿ, ಬೈಂದೂರು, ಬಾರಕೂರು, ಮರೋಳಿ ಮುಂತಾದವುಗಳಲ್ಲಿ ಸೂರ್ಯ ಮಂದಿರಗಳಿವೆ. ಬೈಂದೂರಿನ ಸೂರ್ಯಶಿಲ್ಪ ಪ್ರಸಿದ್ಧವಾದುದು.

ಉತ್ತರಕನ್ನಡ ಜಿಲ್ಲೆಯಲ್ಲಿ, ನಾಲ್ಕೈದು ಸೂರ್ಯಮೂರ್ತಿಗಳು ಕಂಡು ಬಂದಿವೆ. ಕವಂಚೂರಿನ ಸೂರ್ಯ ಮೂರ್ತಿಯು, ಎಲ್ಲಾ ಶೈಲಿಗಳ ಸಂಗಮವಾಗಿದ್ದರೆ, ರಾಯಪಟ್ನದ ಸೂರ್ಯಕಿರೀಟವು ರೇಖಾನಾಗರ ಶೈಲಿಯಲ್ಲಿದೆ. ಕಾವಲವಾಡದ ಸೂರ್ಯ ಪ್ರತಿಮೆಯು, ಸ್ಥಳೀಯ ಶೈಲಿಗೆ ಅನುವು ಮಾಡಿ ಕೊಟ್ಟಿದ್ದರೆ, ಬನವಾಸಿಯ ಸೂರ್ಯ, ಸ್ಥಳೀಯ ಹಾಗೂ ಕಲ್ಯಾಣ ಚಾಲುಕ್ಯರ ಶೈಲಿಯನ್ನು ಅನುಕರಿಸಿದೆ.

ಕವಂಚೂರಿನ ಸೂರ್ಯಶಿಲ್ಪ (ಸಿದ್ಧಾಪುರ ತಾ.) 1 : ಶಿರಸ್ಸಿನ ಚಕ್ರವಿಲ್ಲದ, ಜಟಾ ಮತ್ತು ಕರಂಡಮುಕುಟಶೈಲಿ ಮಿಶ್ರಿತವಾಗಿರುವ, ತ್ರಿಕೋಣಾಕೃತಿಯ ಕಿರೀಟವನ್ನು ಹೊಂದಿರುವ ಕವಂಚೂರಿನ ಸೂರ್ಯಮೂರ್ತಿಯು, ವಿಶಿಷ್ಟವಾದುದಾಗಿದೆ. ಇದು ಚೋಳ, ಬಾದಾಮಿ ಹಾಗೂ ಕಲ್ಯಾಣಿ ಚಾಲುಕ್ಯ ಮತ್ತು ಹೊಯ್ಸಳರ ಶೈಲಿಯ ಸಂಗಮವೆಂದರೆ ಬಹುಶಃ ಅತಿಶಯೋಕ್ತಿ ಎನಿಸದು. ಬಾದಾಮಿ ಚಾಲುಕ್ಯರಲ್ಲಿಯಂತೆ ಇಲ್ಲಿನ ಸೂರ್ಯನಿಗೆ, ನಾಲ್ಕು-ನಾಲ್ಕು ಕೈಗಳು ಎರಡೂ ಬದಿಯಲ್ಲಿವೆ. ಡಾ. ಶ್ರೀನಿವಾಸ ಪಾಡಿಗಾರ್‌ರವರು, ಬಾದಾಮಿಯಲ್ಲಿರುವ ಅರಳೀತೀರ್ಥದ ಬಿಂಬದಲ್ಲಿ, ಇಂತಹುದೇ ಶೈಲಿಯನ್ನು ಗುರುತಿಸಿದ್ದಾರೆ. ಅದಕ್ಕೂ ಎಂಟು ಕೈಗಳು. ಮೊದಲ ಎರಡು ಕೈಗಳಲ್ಲಿ ಕಮಲಗಳಿವೆ. ಉಳಿದ ಕೈಗಳಲ್ಲಿ ವಿವಿಧ ಆಯುಧಗಳು ಇವೆ. ಶಿವ, ವಿಷ್ಣು, ಸೂರ್ಯ ಒಂದೇ ಕಡೇ ತರಲ್ಪಟ್ಟು, ಇದನ್ನು ತ್ರೈಪುರುಷ ಕಲ್ಪನೆ ಎಂದು ಹೇಳಲಾಗಿದೆ. ಕವಂಚೂರಿನ ಸೂರ್ಯನಿಗೂ ಹೀಗೆಯೇ ಕಮಲ ಹಾಗೂ ಆಯುಧ ಧಾರಣೆ ಇದೆ. ಮುಖ ಭಗ್ನವಾಗಿದೆ. ಮೊದಲ ಎರಡು ಕೈಗಳಲ್ಲಿರುವ, ತ್ರಿಕೋಣಾಕೃತಿಯ ಕಮಲವು ಹಾಗೂ ಸಣ್ಣದಂಟು, ಗಂಗರ ಶೈಲಿಯನ್ನು ವ್ಯಕ್ತಪಡಿಸುತ್ತದೆ. (ಮಣ್ಣೆ, ನೆಲಮಂಗಲ ತಾ.) ಎರಡೂ ಕೈಗಳ ಬಹುಗಳನ್ನು ಹೊಂದಿ, ವಿಶಾಲ ಎದೆ, ಕಂಠಾಭರಣ, ಉಪವೀತ, ಕಟೀಬಂಧ ಇವುಗಳು ಮಣಿ ಖಚಿತವಾಗಿ ಹಾಗೂ ಕಟೀವಸ್ತ್ರವು ಎರಡೂ ಕಡೆ ಇಳಿ ಬಿದ್ದಿರುವ ಶೈಲಿಯನ್ನು ಗುರುತಿಸಿದಾಗ, ಚೋಳರ ಶೈಲಿಗೆ ಸಂಬಂಧಿಸಿದ್ದು ಎಂದು ಹೇಳಬಹುದು (ಉದಾ : ತಗಡೂರು ಮತ್ತು ಕೊಳ್ಳೇಗಾಲದ ಸೂರ್ಯಮೂರ್ತಿಗಳು).

ಆಭರಣಗಳು, ಕಲ್ಯಾಣೀ ಚಾಲುಕ್ಯರ ಶೈಲಿಯದಾಗಿವೆ. ಸಾಮಾನ್ಯವಾಗಿ, ಉಷೆ ಹಾಗೂ ಪ್ರತ್ಯುಷೆಯರು ಮೂರ್ತಿಯ ಕೆಳಭಾಗದಲ್ಲಿರುವುದು ವಾಡಿಕೆ. ಆದರೆ ಈ ಶಿಲ್ಪದಲ್ಲಿ ಇವರಿಬ್ಬರೂ ಕಟೀಭಾಗಕ್ಕೆ, ಸಮನಾಗಿ, ಅದೂ ಸಮೀಪದಲ್ಲಿಯೇ ನಿಂತಿರುವುದು ವೈಶಿಷ್ಟ್ಯ. ಇವರದು ಕ್ರಿಯಾಭಂಗಿ. ಏಕಾಗ್ರಚಿತ್ತದ ಉಷೆಯು ಬಾಣವನ್ನು ಎಸೆಯಲು ಸಿದ್ಧಳಾಗಿ ನಿಂತಿದ್ದರೆ

ಪ್ರತ್ಯುಷೆಯು ಬಾಣವನ್ನು ಬಿಟ್ಟು ನಂತರ ವಿಶ್ರಾಂತಿ ಭಂಗಿಯಲ್ಲಿರುವಂತೆ ಚಿತ್ರಿತಳಾಗಿದ್ದಾಳೆ. ಇಂಥದೇ ಉಷೆಯ ಶೈಲಿಯನ್ನು ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದ, ಪೂರ್ವಬದಿಯ ಹೊರಭಿತ್ತಿಯಲ್ಲಿ ಕಾಣಬಹುದು. ಆದರೆ ಪ್ರತ್ಯುಷೆಯ ಮುಖವು ಭಗ್ನವಾಗಿದೆ. ಇಲ್ಲಿ ಅದೇ ಹೊಯ್ಸಳ ಶೈಲಿಯಲ್ಲಿ ಉಷಾ ಹಾಗೂ ಪ್ರತ್ಯುಷೆಯರು ಸ್ಪಷ್ಟವಾಗಿ ಕಾಣುತ್ತಾರೆ. ಇವರಿಬ್ಬರ, ಸಮೀಪದಲ್ಲಿಯೇ, ಚಾಮರಧಾರಿಣಿಯರು ನಿಂತಿರುವುದು ಸಾಮಾನ್ಯ ಲಕ್ಷಣ. ಆದರೆ, ಇಲ್ಲಿ ಚಾಮರ ಧಾರಿಣಿಯರ ಬದಲು, ಕೇವಲ ಚಾಮರಗಳು, ಯಾವ ಆಶ್ರಯವೂ ಇಲ್ಲದೆ, ಉಷಾ ಹಾಗೂ ಪ್ರತ್ಯುಷೆಯರ ಮೇಲೆ ಗಾಳಿಯಲ್ಲಿ ತೇಲಾಡುತ್ತಿರುವುದನ್ನು ಕಾಣುತ್ತೇವೆ. ಸೂರ್ಯನನ್ನು ಬಾದಾಮೀ ಚಾಲುಕ್ಯರ ಕಾಲದಲ್ಲಿ, ತ್ರೈಪುರುಷ ಎಂದು ಹೇಳಿ, ಶಿವ ಹಾಗೂ ವಿಷ್ಣುವಿನೊಡನೆ ಗುರುತಿಸುತ್ತಿದ್ದರು. ಇಲ್ಲಿ ಸೂರ್ಯನೊಡನೆ ವಾಯುವನ್ನು ಗುರುತಿಸಬಹುದು.

ಈ ಸಿದ್ಧಾಂತವನ್ನು ಚಿಹ್ನಾರ್ಥಕವಾಗಿ ಚಾಮರರೂಪದಲ್ಲಿ ಪ್ರತಿನಿಧಿಸಿರುವಂತಿದೆ.

ರಾಯಪಟ್ನದ ಎರಡು ಸೂರ್ಯನ ಶಿಲ್ಪಗಳು (ಹಳಿಯಾಳ್ ತಾ||)*2:ಇಲ್ಲಿ ದೊರೆತ ಸೂರ್ಯ ಮೂರ್ತಿ ಮೂರು ಚೂರಾಗಿದೆ. ಗ್ಯಾಜಿಟಿಯರ್ ಇಲಾಖೆಯವರು, ಈ ಮೂರ್ತಿಯನ್ನು ಹಳಿಯಾಲ ತಹಸೀಲ್ದಾರರ ಕಛೇರಿಗೆ ಮುಟ್ಟಿಸಿದ್ದಾರೆ. ಅದನ್ನು ಜೋಡಿಸಿ ಭಾವಚಿತ್ರವನ್ನು ಪಡೆಯಲಾಗಿದೆ.

ಈ ರಾಯಪಟ್ನದ ಸೂರ್ಯನ ಕಿರೀಟವು ಕರಂಡ ಅಥವಾ ಜಟಾಮುಕುಟದಂತಿರದೆ, ಬಾದಾಮೀ ಚಾಲುಕ್ಯರ ಕಾಲದ ರೇಖಾನಾಗರ ಶೈಲಿಯನ್ನು ಹೋಲುತ್ತದೆ. ಇಂಥ ಶೈಲಿಯಲ್ಲಿ ಕಲಾತಂತ್ರ ಮತ್ತು ನೈಜತೆಯು ಪ್ರತಿಬಿಂಬಿಸಿ, ಸ್ಪಷ್ಟತೆ ಕಾಣುತ್ತದೆ. ಉದ್ದನೆಯ ಕಿರೀಟಕ್ಕೆ ಮುಖವು ಸಣ್ಣದಾಗಿದ್ದು, ಕಿರೀಟದ ಭಾರಕ್ಕೆ ಮುಖವು ಸ್ವಲ್ಪ ಕೆಳಕ್ಕೆ ವಾಲಿದಂತಿದೆ. ಸಾಮಾನ್ಯವಾಗಿ, ಸೂರ್ಯನ ಪಾದವನ್ನು ಚಿತ್ರಿಸುವುದಿಲ್ಲ. ಆದರೆ, ಇಲ್ಲಿ ಪಾದ ಮತ್ತು ಬೆರಳುಗಳು ಸ್ಪಷ್ಟವಾಗಿ ಕಾಣುತ್ತಿದ್ದು, ಇಡೀ ದೇಹದ ಭಾರವು ಪಾದದ ಬೆರಳುಗಳ ಮೇಲೆ ಕೇಂದ್ರಿಕೃತವಾಗಿರುವುದು, ಈ ಮೂರ್ತಿಯ ವೈಶಿಷ್ಟ್ಯ. ರೇಖಾನಾಗರ ಶೈಲಿಯಲ್ಲಿರುವ ಕಿರೀಟಕ್ಕೆ ಕೊಟ್ಟಿರುವ ಪ್ರಾಮುಖ್ಯವನ್ನು ಉಳಿದ ಭಾಗಕ್ಕೆ ಕೊಟ್ಟಂತಿಲ್ಲ, ಉದ್ದನೆಯ ಹಾರ, ಕಟೀವಸ್ತ್ರ ಇವುಗಳು ಕಲ್ಯಾಣಿ ಚಾಲುಕ್ಯರ ಶೈಲಿಯಾದರೂ, ಎಲ್ಲವೂ ಸೇರಿ ಕಚ್ಚೆಯನ್ನುಧರಿಸಿದಂತೆ ಕಾಣಿಸುತ್ತಿರುವ, ಸ್ಥಳೀಯ ಶೈಲಿಯು ವೈಶಿಷ್ಟ್ಯ ಪೂರ್ಣವಾಗಿದೆ. ದ್ವಿಭಂಗದಲ್ಲಿರುವ ಪ್ರತ್ಯುಷೆ, ಏಳು ಕುದುರೆಗಳು, ಇವೆಲ್ಲವೂ ಕೇವಲ ಸಾಂಕೇತಿಕವಾಗಿದೆ.

ಇಲ್ಲಿನ ಕಂಬದಲ್ಲಿ ಸೂರ್ಯನ ಅಪರೂಪದ ಉಬ್ಬುಶಿಲ್ಪ ವೊಂದಿದೆ. ಕಡಿವಾಣವನ್ನು ಹಿಡಿದು, ಸೂರ್ಯ ಏಳು ಕುದುರೆಗಳನ್ನು ನಡೆಸುತ್ತಿರುವುದು ಈ ಮೂರ್ತಿಯ ವೈಶಿಷ್ಟ್ಯ. ಸೂರ್ಯನ ಮುಖವು ಗುಂಡಾಗಿದ್ದರೂ, ಸಣ್ಣದಾದ ಕಿರೀಟವು ಮುಖಕ್ಕೆ ಹೊಂದಿಕೆಯಾಗಿಲ್ಲ. ಕಿರೀಟ ದುಂಡುಮುಖ, ಮಣಿ ಖಚಿತವಾದ ಕಂಠೀಹಾರ ಮೊದಲಾದವು, ಕೋಲಾರಜಿಲ್ಲೆಯ ಮುಳಬಾಗಿಲು ತಾಲ್ಲೂಕು ಅವನಿಯಲ್ಲಿರುವ ಲಕ್ಷ್ಮಣೇಶ್ವರ ದೇವಾಲಯದ, ಉತ್ತರಭಿತ್ತಿಯ ಮೇಲಿರುವ ಬಾಲಸೂರ್ಯನದಂತಿದ್ದು, ಚೋಳ–ನೊಳಂಬರ ಶೈಲಿಯನ್ನು ಹೋಲುವಂತಿವೆ. ಕುದುರೆಗಳು ಸ್ಪಷ್ಟವಾಗಿ ಬಿಡಾವಣೆಗೊಂಡಿವೆ. ವಿಜಯನಗರದ ಅರಸರುಗಳು ಸಾಹಸಪ್ರಿಯರು ಅಥವಾ ಯುದ್ಧ ಪ್ರಿಯರು ಎಂಬ ಅಭಿಪ್ರಾಯವನ್ನು ಉಂಟು ಮಾಡುವುದಕ್ಕಾಗಿ ಕುದುರೆಗಳನ್ನು ನಡೆಸುತ್ತಿರುವ ಸೂರ್ಯನನ್ನು ಸಾಂಕೇತಿಕವಾಗಿ ಇಲ್ಲಿ ಪ್ರದರ್ಶಿಸಿರಬೇಕು.

ಕಾವಲವಾಡದ ಸೂರ್ಯಶಿಲ್ಪ (ಹಳಿಯಾಳ್ ತಾ||)*3: ಸ್ಥಳೀಯ ಶೈಲಿಯನ್ನು ಪ್ರತಿಬಿಂಬಿಸುವುದಕ್ಕಾಗಿ ಕಾವಲವಾಡ ಸೂರ್ಯಮೂರ್ತಿಯನ್ನು ಪ್ರತಿನಿಧಿಸಿರಬೇಕು. ತ್ರಿಕೋಣಾಕೃತಿಯಾದ ಪ್ರಭಾವಳಿಯಲ್ಲಿ ಶಿರಶ್ಚಕ್ರವು ಎಲೆಯ ಮತ್ತು ಬೆಂಕಿಯ ಜ್ವಾಲೆರೂಪದಲ್ಲಿದ್ದು, ವೈಷ್ಣವ ಹಾಗೂ ಶೈವ ಸಂಪ್ರದಾಯವನ್ನು ಪ್ರತಿನಿಧಿಸುತ್ತದೆ. ಕಿರೀಟವು ಯಕ್ಷಗಾನ ಕಲಾವಿದರುಗಳು ಕಟ್ಟಿಕೊಳ್ಳುವ ಪೇಟದಂತಿದೆ. ಕಿವಿಯಲ್ಲಿರುವ ಮಕರ ಕುಂಡಲಗಳು ಹಿಂಭುಜದವರೆಗೂ ಇಳಿಬಿದ್ದಿವೆ. ಕಮಲ ಹಾಗೂ ದಂಟು ಕಟ್ಟಿಗೆಯಂತಿದ್ದು, ಅದು ಸೂರ್ಯನ ಇನ್ನೆರಡು ಹಸ್ತಗಳೋ ಎಂಬಂತೆ ಭಾಸವಾಗುತ್ತದೆ. ವಿಶಾಲವಾದ ಎದೆಯ ಮೇಲೆ, ಕಂಠೀಹಾರ ಹಾಗೂ ಕಂಠಾಭರಣಗಳು ಹರಡಿಕೊಂಡಿದೆ. ಕಟೀ ಪ್ರದೇಶವು ಆಭರಣಗಳಿಂದ ಕೂಡಿ, ಅದೇ ವಸ್ತ್ರಾಲಂಕಾರವೆಂದು ಭಾಸವಾಗುವಂತಿದೆ. ಆದ್ದರಿಂದ, ಇವುಗಳು ಸ್ಥಳೀಯ ಶೈಲಿಯನ್ನು ಹೋಲುತ್ತವೆ ಈ ಜಿಲ್ಲೆಯು,

ಯಕ್ಷಗಾನಕ್ಕೆ ಪ್ರಖ್ಯಾತಿಯಾಗಿರುವುದರಿಂದ, ಇಂತಹ ಪ್ರಭಾವವು ಹಾಗೂ ಯಕ್ಷಗಾನ ಕಲಾವಿದರುಗಳ ವೇಷಧಾರಣೆಯ ಛಾಯೆಯು ಈ ಸೂರ್ಯ ಮೂರ್ತಿಯಲ್ಲಿ ಪ್ರತಿನಿಧಿಸಿರಬಹುದು.

ಬನವಾಸಿಯ ಸೂರ್ಯಶಿಲ್ಪ (ಸಿರಸಿ ತಾ॥)*4: ಕೊನೆಯದಾಗಿ, ಬನವಾಸಿ, ಸಿರಸಿ ತಾ. ಮಧುಕೇಶ್ವರ ದೇವಸ್ಥಾನ; ಇಲ್ಲಿರುವ ಸೂರ್ಯನ ಶಿಲ್ಪ ವೈಷ್ಣವ ಸಂಪ್ರದಾಯದ್ದು ಎಂದು ಹೇಳಲು ಮೂರು ಕಾರಣಗಳಿವೆ. ಶಿರಶ್ಚಕ್ರ ಹಾಗೂ ಸಿಂಹಲಲಾಟ ಕೂಡಿಕೊಂಡು "ಓಂ" ಆಕಾರದಲ್ಲಿದೆ; ಕಿರೀಟವು ಕೆಲಶದ ಮಾದರಿಯಲ್ಲಿದೆ; ಯಜ್ಞೋಪವೀತವನ್ನು ಹೊಂದಿದೆ. ಮೂರ್ತಿಯ ಆಕೃತಿ ಮತ್ತು ಮುಖವು, ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನದಲ್ಲಿರುವ ಸೂರ್ಯನಾರಾಯಣ ನಂತಿದ್ದರೂವಯಸ್ಸಿಗೆ ಸಹಜವಾದ ಬೊಜ್ಜು ಹಾಗೂ ಬಾಗಿರುವ ಎದೆಯ ಭಾಗವು ಸ್ಪಷ್ಟವಾಗಿ ಕಾಣುತ್ತದೆ. ಎರಡೂ ಕೈಯಲ್ಲಿರುವ ಕಮಲಗಳು ಬೆಂಕಿಯ ಕೊಳ್ಳಿಯ ಮಾದರಿಯಲ್ಲಿವೆ.

ಕಲ್ಯಾಣಿ ಚಾಲುಕ್ಯ ಶೈಲಿಯ ಆಭರಣಗಳ ಸಹಿತವಾದ ಹೊಯ್ಸಳ ಶೈಲಿಯ ಈ ಮೂರ್ತಿಯು, ಧೀರೋದಾತ್ತ ವ್ಯಕ್ತಿತ್ವವನ್ನು ಹೊಂದಿದ್ದರೂ, ಸೂಕ್ತವಾದ ಹಾಗೂ ಸಮರ್ಪಕವಾದ ವಿನ್ಯಾಸದ ಕೊರತೆ ಎದ್ದು ಕಾಣುತ್ತದೆ. ಶಿಲ್ಪಿಗೆ, ಸೂರ್ಯನಾರಾಯಣನ ಮೂರ್ತಿಯ ಕಲ್ಪನೆಯಿದ್ದು ಕಾರಣಾಂತರಗಳಿಂದ, ಚತುರ್ಭುಜವನ್ನು ವಿನ್ಯಾಸಗೊಳಿಸುವುದರ ಬದಲು, ದ್ವಿಭುಜವನ್ನು ಮೂಡಿಸಿದ್ದಾನೆ. ಏಕೆಂದರೆ, ಈ ಎರಡೂ ಹಸ್ತಗಳನ್ನು ವಾಸ್ತವಕ್ಕಿಂತಲೂ ಹೆಚ್ಚುಭಾಗ ಕೆಳಭಾಗದಲ್ಲಿ ಕಾಣುತ್ತೇವೆ. ಆಕರ್ಷಕವಾದ ಆಕಾರದ ಜೊತೆ, ವಿನ್ಯಾಸ ಮೂಡಿಸಿದ್ದೇ ಆಗಿದ್ದರೆ, ಸೂರ್ಯನಾಯನಾರ್ ಕೋಯಿಲ್‌ನ ಸೂರ್ಯ ಅಥವಾ ಅದಕ್ಕಿಂತಲೂ ಮಿಗಿಲಾದ ಮೂರ್ತಿಯನ್ನು ಸೃಷ್ಟಿಸ ಬಹುದಿತ್ತೇನೋ ಎಂದೆನಿಸುತ್ತದೆ. ಮಧುಕೇಶ್ವರ ದೇವಾಲಯದ ನವರಂಗದ ಕೈಪಿಡಿಯ ಮೇಲೆ, ಸಾಲಾಗಿ ದ್ವಾದಶ ಆದಿತ್ಯರ ಉಬ್ಬುಶಿಲ್ಪಗಳನ್ನು ಕೆತ್ತಿದ್ದಾರೆ. ಆದರೆ ಈ ಶಿಲ್ಪಗಳಲ್ಲಿ ಸ್ಪಷ್ಟತೆ ಇಲ್ಲ.

ಆಧಾರ ಸೂಚಿ ಮತ್ತು ಟಿಪ್ಪಣಿಗಳು

*1. ಕವಂಚೂರಿನ ಸೂರ್ಯನ ಮೂಲ ಆಕರ : ಡಾ॥ ಅ. ಸುಂದರ

*2. ರಾಯಪಟ್ನದ ಎರಡು ಸೂರ್ಯ ಶಿಲ್ಪಗಳು: ಮೂಲ ಆಕರ ಡಾ॥ ಸೂರ್ಯನಾಥ ಕಾಮತ್

*3. ಕಾವಲವಾಡದ ಸೂರ್ಯಶಿಲ್ಪ : ಮೂಲ ಅಕರ ಡಾ॥ ಸೂರ್ಯನಾಥ ಕಾಮತ್

*4. ಬನವಾಸಿಯ ಸೂರ್ಯಶಿಲ್ಪ: ಮೂಲ ಆಕರ ಡಾ॥ ಸೂರ್ಯನಾಥ ಕಾಮತ್

❑

ಬಿಳಗಿ ಅರಸರ ಆಳ್ವಿಕೆಯಲ್ಲಿ ದೇವಸ್ಥಾನಗಳ ಆರ್ಥಿಕ ನಿರ್ವಹಣೆ ಹಾಗೂ ಶಾಸನಗಳು

– ಡಾ. ರಾಜಾರಾಮ ಹೆಗಡೆ

ಬಿಳಗಿ ಇಂದಿನ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲ್ಲೂಕಿನ ಒಂದು ಗ್ರಾಮ. ಹದಿನೈದನೇ ಶತಕದ ಅಂತ್ಯ ಭಾಗದಲ್ಲಿ ಬಿಳಗಿಯ ಸಮೀಪದ ಐಸೂರಿನಲ್ಲಿ ಆಳ್ವಿಕೆ ಪ್ರಾರಂಭಿಸಿದ ಒಂದು ಮನೆತನ. ತನ್ನ ಉಚ್ಛ್ರಾಯಾವಸ್ಥೆಯಲ್ಲಿ ಈ ಸ್ಥಳವನ್ನು ಕೇಂದ್ರವನ್ನಾಗಿ ಆರಿಸಿಕೊಂಡಿತು.1 'ಒಡೆಯರು' ಎಂದು ತಮ್ಮ ಹೆಸರಿನ ಮುಂದೆ ಸೇರಿಸಿಕೊಳ್ಳುವ ಈ ಅರಸರು ಸ್ಥೂಲವಾಗಿ ಇಂದಿನ ಸಿದ್ದಾಪುರ ತಾಲೂಕನ್ನು ಒಳಗೊಳ್ಳುವಂತೆ ಐವತ್ತಳಿಗೆ ನಾಡು, ಚಿಕ್ಕಮಾಳಿಗೆಯ ನಾಡು ಹಾಗೂ ಚಂದ್ರಗುತ್ತಿ ವೇಂಠೆಯ ಕೆಲಭಾಗಗಳನ್ನು ಆಳಿದ್ದು ಕಂಡುಬರುತ್ತೆದ. ವಿಜಯನಗರ ಪತನಾನಂತರ ಪ್ರಾಬಲ್ಯಕ್ಕೆ ಬಂದ ಈ ಸ್ಥಾನಿಕ ಅರಸು ಮನೆತನ ಸೀಮಿತವಾದರೂ ಸ್ವತಂತ್ರ ಅಧಿಕಾರವನ್ನು ಹೊಂದಿತ್ತು ಎಂಬುದು ಗಮನಾರ್ಹ. ತಮ್ಮ ಶಾಸನಗಳಲ್ಲಿ ಎಲ್ಲೂ ಅವರು ಸ್ವಾಮಿರಾಜರನ್ನು ಪರಿಗಣಿಸಿಲ್ಲ. ಹದಿನೇಳನೆಯ ಶತಕದಲ್ಲಿ ಕೆಳದಿಯ ಅರಸರು ಸುಲಭವಾಗಿ ಇವರನ್ನು ಸೋಲಿಸುತ್ತಿದ್ದರೂ ತಮ್ಮ ಪ್ರದೇಶದ ಸ್ವಾಮಿತ್ವವನ್ನು ಇವರು ಕಳೆದುಕೊಂಡಂತೆ ತೋರುವುದಿಲ್ಲ. ಹದಿನೇಳನೆಯ ಶತಮಾನದ ಅಂತ್ಯಭಾಗದಲ್ಲಿ ಈ ಮನೆತನದ ಆಳ್ವಿಕೆ ಕೊನೆಗೊಂಡಿತು.

ಪ್ರಸ್ತುತ ವಿಷಯವನ್ನು ಈ ಪ್ರದೇಶದಲ್ಲಿ ದೇವಾಲಯ ನಿರ್ಮಾಣದ ಇತಿಹಾಸ ಹಾಗೂ ವಾಸ್ತುಶಿಲ್ಪದ ಬೆಳಕಿನಲ್ಲಿ ವಿಶ್ಲೇಷಿಸುವದು ಹೆಚ್ಚು ಪ್ರಯೋಜನಕಾರಿ. ಬಿಳಗಿ ಅರಸರ ಕಾಲಕ್ಕಿಂತ ಮೊದಲು ಈ ಪ್ರದೇಶದಲ್ಲಿ ದೇವಾಲಯಗಳು ಇದ್ದ ಪುರಾವೆ ಲಭ್ಯವಿದ್ದರೂ ವಿವರಗಳು ತಿಳಿಯುವುದಿಲ್ಲ. ದೊಡ್ಡ ಪ್ರಮಾಣದಲ್ಲಿ ಖರ್ಚನ್ನು ನಿರ್ವಹಿಸಿ ಅಂತ ಚಟುವಟಿಕೆಯನ್ನು ಈ ಖರ್ಚನ್ನು ನಿರ್ವಹಿಸಿ ಅಂಥ ಚಟುವಟಿಕೆಯನ್ನು ಈ ಪ್ರದೇಶದಲ್ಲಿ ಸಂಘಟಿಸಿದ ಉದಾಹರಣೆ ಬಿಳಗಿ ಅರಸರಿಗಿಂತ ಹಿಂದೆ ಅಥವಾ ನಂತರ ನಮಗೆ ಸಿಕ್ಕುವುದಿಲ್ಲ. ಬಿಳಗಿಯ ರತ್ನತ್ರಯ ಬಸದಿಯ ಕ್ರಿ.ಶ. 1593ರ ಶಾಸನದಲ್ಲಿ ಘಂಟೇಂದ್ರನಿಗೂ ಸುಮಾರು ಐದು ತಲೆಮಾರು ಹಿಂದಿನ ಕಲ್ಲಪ್ಪೊಡೆಯನ ಕಾಲದಿಂದ ಈ ಮನೆತನ ಜೀರ್ಣೋದ್ದಾರ ಮಾಡಿಸಿದ ಹಾಗೂ ಕಟ್ಟಿಸಿದ ಜೈನ ಬಸದಿಗಳ ಸವಿಸ್ತಾರ ದಾಖಲೆ ನೀಡಲ್ಪಟ್ಟಿದೆ2. ಈ ದಾಖಲೆ ಸುಮಾರು ಎಂಟು ಬಸದಿಗಳ ಹೊಸ ನಿರ್ಮಾಣವನ್ನೂ, ಮೂರು ಬಸದಿಗಳ ಜೀರ್ಣೋದ್ಧಾರವನ್ನೂ ಉಲ್ಲೇಖಿಸುತ್ತದೆ. ಈ ಶಾಸನದಲ್ಲಿ ಕೇವಲ ಜೈನ ಮಂದಿರಗಳ ಉಲ್ಲೇಖವಿದ್ದು ಅವುಗಳಲ್ಲಿ ಕೆಲವನ್ನು ಕುರಿತು ನಮಗೆ ಬೇರೆ ಪುರಾವೆಗಳು ಬೇಕಾಗಿವೆ.

ಹದಿನಾರನೆಯ ಶತಕದ ಉತ್ತರಾರ್ಧದಲ್ಲಿ ಹಿಂದೆ ಇಲ್ಲದಷ್ಟು ದೊಡ್ಡಪ್ರಮಾಣದಲ್ಲಿ ದೇವಾಲಯ ವಾಸ್ತುವಿಗೆ ಹಾಗೂ ದತ್ತಿಗೆ ಈ ಅರಸೊತ್ತಿಗೆ ಖರ್ಚು ಮಾಡಿದ್ದು ಕಂಡುಬರುತ್ತದೆ. ಕ್ರಿ.ಶ. 1570ರಲ್ಲಿ, ವೀರಪ್ಪೊಡೆಯನ ರಾಣಿ ವೀರಾಂಬಿಕೆ ಸಂಪೂರ್ಣ ಶಿಲಾಮಯವಾದ ವಿರೂಪಾಕ್ಷ ದೇವಾಲಯವನ್ನು ಬಿಳಗಿಯಲ್ಲಿ ಕಟ್ಟಿಸಿ ಶಾಸನ ಹಾಕಿಸಿದಳು3. ಈ ದೇವಾಲಯದ ಗೋಪುರ, ಪ್ರಾಕಾರ, ಮಂಟಪ, ಚಂದ್ರಶಾಲೆಗಳನ್ನು ಶಾಸನದಲ್ಲಿ ಹೆಮ್ಮೆಯಿಂದ ಉಲ್ಲೇಖಿಸಲಾಗಿವೆ. ಜೊತೆಗೆ ಒಂದು ನಂದಿ ಮಂಟಪ ಹಾಗೂ ಧ್ವಜಸ್ತಂಭ ಕೂಡ ಈ ದೇವಾಲಯದ ತಲವಿನ್ಯಾಸದಲ್ಲಿ ಬರುತ್ತದೆ. ಕ್ರಿ.ಶ. 1581ರಲ್ಲಿ ಘಂಟೇಂದ್ರನಿಂದ ಬಿಳಗಿಯ ರತ್ನತ್ರಯ ಬಸದಿ ಪೂರ್ಣ ಗೊಳಿಸಲ್ಪಟ್ಟಿತು. ಆತನ ತಂದೆ ರಂಗರಾಜನಿಂದ ಪ್ರಾರಂಭಿಸಲ್ಪಟ್ಟ ವಾಸ್ತುವಿನ

ತಲವಿನ್ಯಾಸದಲ್ಲಿ ಮೂರು ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಅನುಕೂಲವಾಗುವಂತೆ ದೀರ್ಘಾಯುತವಾದ ಗರ್ಭಗೃಹ. ಅದೇ ಪ್ರಮಾಣದ ಅಂತರಾಳ ಹಾಗೂ ಮಂಟಪಗಳು ಯೋಜಿಸಲ್ಪಟ್ಟಿದ್ದು, ಘಂಟೇಂದ್ರನ ಕಾಲದಲ್ಲಿ ರಂಗಮಂಟಪ, ಇನ್ನೆರಡು ದೇವ ಕೋಷ್ಠಗಳು ಹಾಗೂ ಪ್ರವೇಶ ದ್ವಾರದಲ್ಲಿ ಚಂದ್ರಶಾಲೆ ಇವು ಸೇರಿಸಲ್ಪಟ್ಟವು. ಹೀಗೆ ರತ್ನತ್ರಯ ಬಸದಿಯು ಬಿಳಗಿಯ ಅರಸರ ಸಂದರ್ಭದ ಮಹತ್ವಾಕಾಂಕ್ಷೆಯ ವಾಸ್ತುಶಿಲ್ಪವಾಗಿದೆ. ಬಸದಿಗೆ ಬಳಸಿದೆ ಕಲ್ಲಿನಲ್ಲೂ ಕುಶಲ ಕೆತ್ತನೆಗೆ ಅನುಕೂಲವಾದ ಕಂಭಗಳಿಗೆ, ಮೂರ್ತಿರಚನೆಗೆ ತಂದು ಉಪಯೋ ಗಿಸಿದ್ದಾರೆ. ಶಿಲ್ಪಿಗಳೂ ಕೂಡ ವಿಶೇಷ ಪರಿಣತಿ ಹೊಂದಿದವರಾಗಿದ್ದರು. ಈ ಬಸದಿಯ ಕೆತ್ತನೆ ಕೆಲಸ ಮೂರ್ತಿಶಿಲ್ಪ ಮುಂತಾದವುಗಳು ಇದನ್ನು ಸೂಚಿಸುತ್ತವೆ. ಈ ಸಮಯದಲ್ಲೇ ಕಟ್ಟಿರಬಹುದಾದ ಮತ್ತೊಂದು ಶಿಲಾಮಯ ದೇವಾಲಯ ಇಟಗಿ ರಾಮೇಶ್ವರ ದೇವಾಲಯ.4 ಆಳೆತ್ತರದ ಅಧಿಷ್ಠಾನದ ಮೇಲೆ ಕಟ್ಟಿದ ಈ ಮಂದಿನ ಗರ್ಭಗೃಹ, ಸುಕನಾಸ ಹಾಗೂ ಮಂಟಪಗಳನ್ನೂ ಒಳಗೊಂಡಿದೆ. ಆದರೆ ಈ ಮಂದಿರದ ಬಗೆಗೆ ನಮಗೆ ವಿಶೇಷ ನಾಶನಾಧಾರ ಲಭ್ಯವಿಲ್ಲ. ಈ ರೀತಿಯಲ್ಲಿ ಹತ್ತು-ಹದಿನೈದು ವರ್ಷಗಳಷ್ಟು ಕಿರು ಅವಧಿಯಲ್ಲಿ ಈ ಮೇಲಿನ ಮೂರು ವಾಸ್ತುಗಳು ರಚನೆಯಾಗಿದ್ದು ಗಮನಾರ್ಹ.

ಬಿಳಗಿಯಲ್ಲಿ ಪಾಳುಬಿದ್ದ ಇತರ ಕೆಲವು ಸಣ್ಣಪುಟ್ಟ ಕಲ್ಲಿನ ದೇವಾಲಯಗಳಿವೆ. ಹದಿನೇಳನೇ ಶತಮಾನದಲ್ಲಿ ಸಿದ್ಧಾಪುರದ ವಿಘ್ನೇಶ್ವರ ದೇವಾಲಯ (ಕ್ರಿ.ಶ. 1651) ಹಾಗೂ ಭುವನಗಿರಿಯ ಭುವನೇಶ್ವರಿ ದೇವಾಲಯ (ಕ್ರಿ.ಶ. 1692) ದೊಡ್ಡ ಪ್ರಮಾಣದಲ್ಲಿ ಕಟ್ಟಲ್ಪಟ್ಟು ರಾಜ್ಯದ ಆದಾಯದಲ್ಲಿ ಪಾಲು ಪಡೆದವು. ಬಿಳಗಿಯಲ್ಲಿ ಶಿಲ್ಪಗಳ, ವಾಸ್ತುಕರ್ಮಿಗಳ ವಸತಿಯೇ ಇದ್ದಿತ್ತೆಂದು ತೋರುತ್ತದೆ. 'ಒಡ್ಡರ ಬೇಣ' ಎಂದು ಕರೆಸಿಕೊಳ್ಳುವ ಹಾಳುಬಿದ್ದ ಸ್ಥಳವೊಂದು ಸೋಮನದಿಯ ದಡದಲ್ಲಿದೆ.

ದತ್ತಿಗಳು5 : ಈ ಅರಸರು ನೀಡಿದ ದತ್ತಿ ಶಾಸನಗಳು ಕಲ್ಲಿನಲ್ಲಿ ಹಾಗೂ ತಾಮ್ರಪಟಗಳಲ್ಲಿ ಲಭ್ಯ ಇವೆ. ಬಿಳಗಿಯ ವಿರೂಪಾಕ್ಷ ದೇವಾಲಯ (ಕ್ರಿ.ಶ. 1570), ರತ್ನತ್ರಯ ಬಸದಿ (ಕ್ರಿ.ಶ. 1581 ಹಾಗೂ ಕ್ರಿ.ಶ. 1592) ಹಾಗೂ ಸಿದ್ದಾಪುರದ ವಿಘ್ನೇಶ್ವರ ದೇವಾಲಯ (ಕ್ರಿ.ಶ. 1651)6ಗಳು ರಾಜ್ಯಾದಾಯವನ್ನು ಬಿಟ್ಟುಕೊಟ್ಟ ವಿವರ ಹಾಗೂ ವಿವಿಧ ಖರ್ಚಿನ ವಿವರಗಳನ್ನು ನೀಡುವ ಶಿಲಾಶಾಸನಗಳನ್ನು ಹೊಂದಿವೆ. ಮೂಡುಬಿದಿರೆಯ ಬಸದಿಗಳಿಗೆ ಕೊಟ್ಟ ದತ್ತಿಯನ್ನು ಉಲ್ಲೇಖಿಸುವ ಎರಡು ತಾಮ್ರ ಶಾಸನಗಳು (ಕ್ರಿ.ಶ. 1546 ಹಾಗೂ 1561) ಈ ಮೇಲಿನ ಶಾಸನಗಳಿಗೂ ಪೂರ್ವದ ಉದಾಹರಣಗಳು.7 ಗೋಕರ್ಣದ ಮಹಾ ಬಲೇಶ್ವರ ದೇವರಿಗೆ ಸೋಮಶೇಖರ ನಾಯಕನು ಮಾಡಿದ ದಾನಗಳನ್ನು ವಿವರಿಸುವ ತಾಮ್ರ ಶಾಸನವೊಂದು (ಕ್ರಿ.ಶ. 1686)ದೊರೆತಿದೆ.8 ಮತ್ತೊಬ್ಬ ಸೋಮ ಶೇಖರ ನಾಯಕನು ಸಿದ್ಧಾಪುರದ ಗಂಗಾಧರೇಶ್ವರ ದೇವರಿಗೆ ಮಾಡಿದ ದಾನದ ಎರಡು ತಾಮ್ರಪಟಗಳು (ಕ್ರಿ.ಶ. 1760) ಸಿಕ್ಕಿವೆ.9 ಭುವನಗಿರಿಯ ಭುವನೇಶ್ವರಿ ದೇವಾಸಯ ಹಾಗೂ ಇಟಗಿಯ ರಾಮೇಶ್ವರ ದೇವಾಲಯಗಳು ಇಂದಿಗೂ ಪೂಜೆಗೊಳ್ಳುತ್ತಿದ್ದರೂ ಶಾಸನಗಳು ಲಭ್ಯವಿಲ್ಲದ ಕಾರಣ ವಿವರಗಳು ತಿಳಿಯುವುದಿಲ್ಲ.

ದೇವಾಲಯದ ಉತ್ಪನ್ನ ಮೂಲಗಳು

ದೇವಾಲಯಗಳಿಗೆ ಬಿಟ್ಟ ರಾಜ್ಯದ ಉತ್ಪನ್ನ ಮೂಲತ: ವ್ಯವಸಾಯೋತ್ಪನ್ನ. ನಮಗೆ ದೊರೆಯುವ ಆಧಾರಗಳಿಂದ ಸ್ಥೂಲವಾದ ಲೆಕ್ಕದಲ್ಲಿ 46ರಷ್ಟು ಹಳ್ಳಿಗಳು ದತ್ತಿಯ ಮಿತಿಗೆ ಒಳಪಟ್ಟಿದ್ದವು (ಪಟ 1). ಒಂದು ಹಳ್ಳಿಯ ಎಲ್ಲಾ ಉತ್ಪನ್ನವನ್ನೂ ಎಲ್ಲಾ ಉದಾಹರಣೆಗಳಲ್ಲೂ ಬಿಟ್ಟ ಹಾಗಿಲ್ಲ. ಕೆಲವೊಮ್ಮೆ ಒಂದೇ ಹಳ್ಳಿಯ ಒಂದೇ ಹಿಡುವಳಿಯ ಉತ್ಪನ್ನ ಬೇರೆ ಬೇರೆ ದೇವಾಲಯಗಳಿಗೆ ಹಂಚಿಕೊಟ್ಟದ್ದನ್ನು ಕಾಣಬಹುದು. ರತ್ನತ್ರಯಬಸದಿಯ ಶಾಸನದಲ್ಲಿ ಬರುವ ವಿವರದಲ್ಲಿ, ಅಲ್ಲಿ ಹೆಸರಿಸಿರುವ ಎಲ್ಲಾ ಒಂಭತ್ತು ಹಳ್ಳಿಗಳ ಒಟ್ಟೂ ಉತ್ಪನ್ನವನ್ನು ಬಸದಿಗೆ ನೀಡಿದ್ದು ಕಂಡುಬರುತ್ತದೆ. ಪ್ರತಿ ಹಳ್ಳಿಯಿಂದ ಬರುವ ಬೇರೆ ಬೇರೆ ಆದಾಯದ ಮೂಲಗಳನ್ನು ಹೆಸರಿಸಿ ಒಟ್ಟುಗೂಡಿಸಿ ಆ ಹಳ್ಳಿಯ ಉತ್ಪನ್ನವನ್ನು ಶಾಸನದಲ್ಲಿ ಬರೆಸಲಾಗಿದೆ. ಬಹುಶಃ 'ಸಿದ್ದಾಯ'ಎಂಬ ಕರವನ್ನು ಎಲ್ಲೆಲ್ಲಿ ಹೆಸರಿಸುತ್ತಾರೋ ಅಲ್ಲೆಲ್ಲ ಒಂದು ಹಳ್ಳಿಯ ಎಲ್ಲಾ ಉತ್ಪನ್ನವನ್ನು ದತ್ತಿಗೆ ಪರಿಗಣಿಸಿದ್ದಾರೆ. ಕೆಳದಿ ರಾಜ್ಯದ ಸಂದರ್ಭದಲ್ಲಿ 'ಸಿದ್ದಾಯ' ಒಂದು ಉಪಕರವಾಗಿತ್ತೆಂದು ಸಂಶೋಧನೆಗಳು ತೋರಿಸಿದರೂ ಮಧ್ಯಕಾಲೀನ ಕರ್ನಾಟಕದ ಕಾಲದಿಂದಲೂ ಬಹು ಪ್ರದೇಶಗಳಲ್ಲಿ 'ಸಿದ್ದಾಯ'ವೇ ನಿರ್ಧಿಷ್ಟಪಡಿಸಿದ

ಮುಖ್ಯ ಭೂ ಆದಾಯ ವಾಗಿತ್ತೆಂಬುದು ಈ ವರೆಗೆ ನಡೆದ ಸಂಶೋಧನೆಗಳಿಂದ ವಿಧಿತವಾಗುತ್ತದೆ10. ಈ ಸಂದರ್ಭದಲ್ಲಿ 'ಸಿದ್ದಾಯ'ವನ್ನು ಅದೇ ಅರ್ಥದಲ್ಲಿ ತೆಗೆದುಕೊಳ್ಳಬಹುದು. ಏಕೆಂದರೆ 'ಸಿದ್ದಾಯ'ವನ್ನು ಹೆಸರಿಸುವಾಗೆಲ್ಲ ಪ್ರಥಮವಾಗಿ ಅದನ್ನೇ ಉಲ್ಲೇಖಿಸಿ ನಂತರ ಉಳಿದ ಕರಗಳಾದ ಹದಿಕೆ ಬಿರಾಡ, ಕುಳಬಡ್ಡಿ ಉಪಾತ್ತರ ಅಥವಾ ಇಪಾರ್ರ ಮುಂತಾದವುಗಳನ್ನು ಉಲ್ಲೇಖಿಸಿದ್ದಾರೆ. ಕ್ರಿ.ಶ. 1760ರ ಸಿದ್ಧಾಪುರದ ತಾಮ್ರಪಟದಲ್ಲಿ 'ಸಿದ್ದಾಯ'ದ ಬದಲು 'ಸಿಸ್ತ'ನ್ನು ಮುಖ್ಯ ಕರವನ್ನಾಗಿ ಉಲ್ಲೇಖಿಸಿದ್ದಾರೆ. ಈ ಮೇಲಿನ ಎಲ್ಲ ಕರಗಳನ್ನು ಹಣರೂಪದಲ್ಲಿ ವಸೂಲಿ ಮಾಡುತ್ತಿದ್ದರು. ಹಾಗಾಗಿ ಅದನ್ನು ಸುವರ್ಣಾದಾಯ ಎಂದು ಕರೆದಿದ್ದಾರೆ. ಈ ರೀತಿ 'ಸಿದ್ದಾಯ', 'ಬಿರಾಡ', 'ಕುಳಬಡ್ಡ', 'ಉಪಾತ್ತರ', 'ಉಪಾದ್ರ', 'ವರ್ತನೆ', 'ಪಾಲು', 'ವಿಭಾಯ, ' 'ಕಟ್ಟುಗುತ್ತಿಗೆಟ','ಸುತ್ತು', 'ಮರುಗುತ್ತಿಗೆ' 'ಹದಿಕೆ ಬಿರಾಡ' ಎಂದು ಉಲ್ಲೇಖಿಸಿರುವ ರಾಜ್ಯದ ಉತ್ಪನ್ನ ಮೂಲಗಳನ್ನು ಗದ್ಯಾಣದ ರೂಪದಲ್ಲಿ ಸಂದಾಯ ಮಾಡುವ ಪರಿಪಾಠ ಇತ್ತು. ದೇವಸ್ಥಾನಕ್ಕೆ ಬರುವ ಸುವರ್ಣಾದಾಯವನ್ನು ಗದ್ಯಾಣ, ವರಾಹಗಳ ರೂಪದಲ್ಲಿ ಹಾಗೂ ಚಿಲ್ಲರೆ ಹಣ, ಹಾಗೂ ವೀಸೆಗಳ ರೂಪದಲ್ಲಿ ಶಾಸನಾಂಕಿತ ಮಾಡಿದ್ದು ಕಂಡುಬರುತ್ತದೆ. ಹಣ ರೂಪದ ಆದಾಯವಲ್ಲದೇ ಧಾನ್ಯ ರೂಪದಲ್ಲಿಯೂ ದೇವಾಲಯಗಳಿಗೆ ರಾಜ್ಯಾದಾಯವನ್ನು ಬಿಡುವದು ಸಾಮಾನ್ಯವಾಗಿತ್ತು. ಈ ಪ್ರದೇಶದ ಮುಖ್ಯ ಬೆಳೆಯಾದ ಭತ್ತವನ್ನು ಖಂಡುಗದ ಅಳತೆಯಲ್ಲಿ ಉಲ್ಲೇಖಿಸಿದ್ದಾರೆ. ಬಹುಶಃ ಮೇಲೆ ಉಲ್ಲೇಖಿಸಿದ ಎಲ್ಲಾ ಕರಗಳನ್ನು ಬೆಳೆಗೆ ಕ್ರಯ ಕಟ್ಟ ಹಣದ ರೂಪದಲ್ಲಿ ಪಡೆಯುವ ವ್ಯವಸ್ಥೆ ಕಡ್ಡಾಯವಾಗಿರಲಿಲ್ಲ. ಹಾಗಾಗಿ ಕೆಲವೊಮ್ಮೆ 'ಸಿಸ್ತು', 'ಉತ್ತಾರ', 'ಗುತ್ತಿಗೆ', 'ಗೇಣಿ' ಮುಂತಾದ ಸಂದಾಯಗಳನ್ನು ಭತ್ತದ ರೂಪದಲ್ಲಿ ಉಲ್ಲೇಖಿಸಿದ್ದಾರೆ. ದೇವಾಲಯದ ಪೂಜೆ ಪುನಸ್ಕಾರಕ್ಕೆ ಬೇಕಾದ ಧಾನ್ಯಕ್ಕೆ, ಹಾಗೂ ಪರಿಚಾರಕರಿಗೆ ನೀಡಬೇಕಾದ ಸಂಬಳಕ್ಕೆ ಈ ರೀತಿ ಭತ್ತವನ್ನು ನೇರವಾಗಿ ದೇವಾಲಯಗಳಿಗೆ ನೀಡುವ ವ್ಯವಸ್ಥೆ ಮಾಡಿದ್ದು ಶಾಸನಗಳಿಂದ ವೇದ್ಯವಾಗುತ್ತದೆ.

ಹೀಗೆ ಶಾಸನಗಳಲ್ಲಿ ಹಳ್ಳಿಗಳಿಂದ ರಾಜ್ಯಕ್ಕೆ ಸಂದಾಯವಾಗುತ್ತಿದ್ದ ಆದಾಯವನ್ನು ಲೆಕ್ಕಹಾಕಿ ಪ್ರತ್ಯೇಕಿಸಿ ನೀಡಿದ್ದಾರೆಯೇ ಹೊರತು ಹಳ್ಳಿಗಳನ್ನೇ ದಾನವಾಗಿ ನೀಡಿಲ್ಲ. ರತ್ನತ್ರಯಬಸದಿಯ ಶಾಸನದಲ್ಲಿ ಒಂಬತ್ತು ಹಳ್ಳಿಗಳ ಗಡಿಯಲ್ಲಿ "ಮುಕ್ಕೊಡೆಯ ಕಲ್ಲನ್ನು ನೆಡಿಸಿ ಧಾರಾಪೂರ್ವಕ" ಕೊಟ್ಟ ವಿಧಿಯ ಉಲ್ಲೇಖಿಸಿದ್ದಾರೆ.11 ಈ ಉದಾಹರಣೆಯನ್ನು ಬಿಟ್ಟರೆ ಉಳಿದ ಕಡೆ ಗಡಿಯನ್ನು ನಿರ್ದಿಷ್ಟಪಡಿಸಿದ ಉಲ್ಲೇಖವಿಲ್ಲ. ಬದಲಾಗಿ ಹಳ್ಳಿಯ ಹೆಸರು ಹಾಗೂ ವ್ಯಕ್ತಿಗಳ ಹೆಸರುಗಳನ್ನಷ್ಟೇ ನೀಡಿ, ಉತ್ಪನ್ನದ ವಿವರ ಹಾಗೂ ಮೊತ್ತವನ್ನು ಲೆಕ್ಕಹಾಕುವುದರಲ್ಲಿ ವಿಶೇಷ ಲಕ್ಷ್ಯ ಇಟ್ಟಿದ್ದಾರೆ. ಅಥವಾ "....ಗ್ರಾಮದ ಗದ್ಯಾಣ....ಕ್ಷೇತ್ರವನ್ನು ಶಾಸನಾಂಕಿತ ಮಾಡಿ" ಎಂಬ ವಾಕ್ಯಗಳು ರಾಜ್ಯಕ್ಕೆ ಬರುವ ಆಧಾಯದ ಪರಿಭಾಷೆಯಲ್ಲೇ ಇಲ್ಲಿ ದಾಖಲೆ ಮಾಡಲ್ಪಟ್ಟಿದ್ದನ್ನು ಸೂಚಿಸುತ್ತವೆ.[12] ಬಿಳಗಿ ಅರಸರ ಶಾಸನಗಳು ಸೂಚಿಸುವ ಪ್ರಕಾರ ಹೆಚ್ಚಿನ ಕರಗಳೆಲ್ಲ ಹಣರೂಪದಲ್ಲೆ ಸಂದಾಯವಾಗುತ್ತಿದ್ದವು. ಹಾಗಾಗಿ ರಾಜ್ಯದ ಬದಲು ಈ ದೇವಾಲಯಗಳು ಆ ಆದಾಯವನ್ನು ಪಡೆಯುತ್ತಿದ್ದವು. ದೇವಾಲಯಗಳಿಗೆ ಆ ರೂಪದಲ್ಲಿ ಅಪ್ರತ್ಯಕ್ಷವಾದ ರೀತಿಯಲ್ಲಿ ಉತ್ಪನ್ನ ನೀಡುವ ಭೂಮಿಯ ಮೇಲೆ ಹಿಡಿತ ಇದ್ದಿರಬಹುದೇ ಹೊರತೂ ಭೂಮಿಯೇ ಅವುಗಳ ಸೊತ್ತದ ಬಗ್ಗೆ ಸರಿಯಾದ ಆಧಾರ ಸಿಕ್ಕುವುದಿಲ್ಲ.

ಸೋಮಶೇಖರ ನಾಯಕನು ಸಿದ್ದಾಪುರದ ಗಂಗಾಧರೇಶ್ವರ ದೇವಾಲಯಕ್ಕೆ ಕೃಷಿಯೇತರ ಉತ್ಪನ್ನವನ್ನೂ ನಿಗದಿ ಮಾಡಿದ್ದನು. ಸಿದ್ದಾಪುರದ ಮೂಲಕ ಸಾಗಿಸಲ್ಪಡುವ ಅಡಿಕೆ ಮತ್ತು ಮೆಣಸುಗಳ ಹೇರುಗಳ ಮೇಲೆ, ಒಂದು ಗದ್ಯಾಣ ಬೆಲೆಯ ಹೇರಿಗೆ ಒಂದು ಹಣದಂತೆ ಎಲ್ಲ ವ್ಯಾಪಾರಿಗಳೂ ನೀಡಬೇಕೆಂಬ ಅಪ್ಪಣೆ ಹಿಂದೆ ಉಲ್ಲೇಖಿಸಿದ ಕ್ರಿ.ಶ. 1760ರ ಒಂದು ತಾಮ್ರಶಾಸನದಲ್ಲಿದೆ. ಅದೇ ದೇವಾಲಯಕ್ಕೆ ಆತನು 124 ಬಿಟ್ಟ ಆಳುಗಳ ಸೇವೆಯನ್ನು ನಿಗದಿಪಡಿಸಿದ್ದನ್ನು 1760ರ ಮತ್ತೊಂದು ಶಾಸನ ಹೇಳುತ್ತದೆ.[13]

ಸಂದಾಯ ವಿಧಾನ

ಕೃಷಿಯ ಕರಗಳು ದೇವಾಲಯಗಳಿಗೆ ವರ್ಷಕ್ಕೊಮ್ಮೆ ಸಂದಾಯವಾಗುತ್ತಿದ್ದವು. ಏಕೆಂದರೆ ದೇವಾಲಯದ ಖರ್ಚಿಗೆ ಸರಿಬರುವ ಉತ್ಪನ್ನವನ್ನು ವಿಂಗಡಿಸಿ ಕೊಡುವಾಗ ಒಂದು ವರ್ಷದ ಖರ್ಚುಗಳನ್ನು ಲೆಕ್ಕ ಹಾಕಲಾಗಿದೆ. ದೇವಾಲಯಗಳು ಆ ಆದಾಯವನ್ನು ವಸೂಲಿಮಾಡಿದ ವಿಧಾನ ಅಷ್ಟು ಸ್ಪಷ್ಟವಾಗಿಲ್ಲ. ಇಡೀ ಹಳ್ಳಿಯ ಎಲ್ಲ ಉತ್ಪನ್ನವನ್ನು ಬಿಟ್ಟ ದೃಷ್ಟಾಂತಗಳಲ್ಲಿ

ಯಾವುದೇ ವಸೂಲಿಯ ಗ್ರಾಮಾಧಿಕಾರಿಗಳನ್ನು ಉಲ್ಲೇಖಿಸಿಲ್ಲ. ವಿರೂಪಾಕ್ಷ ದೇವಾಲಯ ಹಾಗೂ ರತ್ನತ್ರಯಬಸದಿಗಳಲ್ಲಿ ಮೇಲ್ವಿಚಾರಣೆಗಾಗಿ ಅಧ್ಯಕ್ಷರುಗಳನ್ನು ನೇಮಕ ಮಾಡಿದ್ದು ಕಂಡುಬರುತ್ತದೆ. ಬಹುಶಃ ಅವರೇ ಆದಾಯವನ್ನು ಬೇರೆ ಬೇರೆ ಸ್ಥಳಗಳಿಂದ ವಸೂಲಿ ಮಾಡುತ್ತಿದ್ದರು. ಆದರೆ ಬೇರೆ ದೇವಾಲಯಗಳ ಸಂದರ್ಭದಲ್ಲಿ ಈ ವ್ಯವಸ್ಥೆ ಅಷ್ಟು ಸರಳವಾಗಿದ್ದಂತಿಲ್ಲ. ವ್ಯಕ್ತಿಗಳನ್ನು ಹೆಸರಿಸಿದ ಸಂದರ್ಭದಲ್ಲಿ ಅವರು ಈ ಬಗ್ಗೆ ದೇವಾಲಯದ ಜತೆ ನೇರ ಸಂಪರ್ಕ ಹೊಂದಿರುವ ಸಾಧ್ಯತೆ ಇದೆ. ಕರ ತುಂಬುವವರ ಜತೆ ರಾಜ್ಯ ಹಲವು ತರದ ಹೊಂದಾಣಿಕೆ ಮಾಡಿತ್ತು. ಒಂದೇ ವ್ಯಕ್ತಿಯ ಉತ್ಪನ್ನವನ್ನು ಬೇರೆ ಬೇರೆ ಮಂದಿರಗಳಿಗೆ ಕೆಲವೊಮ್ಮೆ ವಿಂಗಡಿಸಿ ಕೊಟ್ಟಿತ್ತು. ಹಿಂದಿನವರು ಮಾಡಿದ ದತ್ತಿಗಳನ್ನು ಅನುಲಕ್ಷಿಸಿ ಮಾನ್ಯಮಾಡಿ ನಂತರದವರು ಉಳಿದ ಸಂದಾಯದ ಹಣವನ್ನು ಮತ್ತೊಂದು ದೇವಾಲಯಕ್ಕೆ ಹೊಂದಿಸಲು ಈ ರೀತಿ ಮಾಡಿರಬಹುದು. ಒಂದು ಸಂದರ್ಭದಲ್ಲಿ ಒಬ್ಬ ವ್ಯಕ್ತಿಯಿಂದ ಬರತಕ್ಕ 30 ಗದ್ಯಾಣಗಳಲ್ಲಿ 6 ಗದ್ಯಾಣಗಳನ್ನು ಅರಮನೆಗೆ ಸಂದಾಯವಾಗತಕ್ಕದ್ದು ಎಂದು ಅದನ್ನು ಕಳೆದು ಉಳಿದ ಹಣವನ್ನು ದೇವಾಲಯಕ್ಕೆ ನೀಡಿದ್ದು ಕಂಡುಬರುತ್ತದೆ.14 ಮತ್ತೊಂದು ಉದಾಹರಣೆಯಲ್ಲಿ ಗೌಡುಂಬಳಿಯನ್ನು ಕಳೆಯಲಾಗಿದೆ. 15 ದೇವಸ್ಥಾನಕ್ಕೆ ಬಿಟ್ಟ ದತ್ತಿಯಲ್ಲಿ ಉಂಬಳಿ, ಉತ್ತರದ ಭೂಮಿಗಳನ್ನು ಕೆಲವೊಮ್ಮೆ ಸೇರಿಸಲಾಗಿದೆ.16 ಇದರ ಸ್ವರೂಪ ನಮಗೆ ಸ್ಪಷ್ಟವಾಗುವುದಿಲ್ಲ.

ಖರ್ಚುಗಳು

ಧಾರ್ಮಿಕ ವಿಧಿಗಳು: ದೇವಾಲಯಕ್ಕೆ ಬಿಟ್ಟ ಒಟ್ಟು ಉತ್ಪನ್ನವನ್ನು ವ್ಯವಸ್ಥಿತವಾಗಿ ಧಾರ್ಮಿಕ ವಿಧಿಗಳಿಗೆ ಹಾಗೂ ಅದನ್ನು ನಡೆಸುವ ಪರಿಚಾರಕ ವರ್ಗದವರಿಗೆ ಹಂಚಿಕೊಟ್ಟಿದ್ದರು. ತೀರ ವಿವರವಾಗಿ ಅದನ್ನು ಶಾಸನದಲ್ಲಿ ದಾಖಲಿಸಿದ್ದಾರೆ. ಧಾರ್ಮಿಕ ವಿಧಿಗಳ ಖರ್ಚನ್ನು ಸಾಧಾರಣವಾಗಿ ಹಣದ ರೂಪದಲ್ಲಿ ಲೆಕ್ಕ ಹಾಕಿದ್ದಾರೆ. ಎಣ್ಣೆ, ತುಪ್ಪ, ಹಾಲು, ಗಂಧ, ಧೂಪ, ಬತ್ತಿಹತ್ತಿ, ಅಡಕೆ, ವೀಳ್ಯದೆಲೆ, ಹಣ್ಣು, ತೆಂಗಿನಕಾಯಿ ಮುಂತಾದವುಗಳು ಪ್ರತಿ ವಿಧಿಗೆ ಎಷ್ಟು ಬೇಕಾಗುತ್ತವೆ ಎಂದು ಲೆಕ್ಕಮಾಡಿ ನಂತರ ಅವುಗಳಿಗೆ ವಾರ್ಷಿಕ ಖರ್ಚುಎಷ್ಟಾಗುತ್ತದೆ ಎಂದು ಮೊತ್ತ ತೆಗೆದಿದ್ದಾರೆ. ವಸ್ತು ರೂಪದಲ್ಲಿ ರಾಜ್ಯ ಬಿಟ್ಟುಕೊಟ್ಟ ಆದಾಯವೆಂದರೆ ನೈವೇದ್ಯ ಹಾಗೂ ಅಮೃತಪಡಿಗಾಗಿ ಭತ್ತವನ್ನು ಮಾತ್ರ. ಈ ರೀತಿ ಲೆಕ್ಕಾಚಾರ ಹಾಕುವ ವಿಧಾನದಲ್ಲಿ ಆಯಾ ದೇವಾಲಯಗಳಲ್ಲಿ ನಡೆಯುತ್ತಿದ್ದ ಎಲ್ಲ ಧಾರ್ಮಿಕ ವಿಧಿಗಳ ವಿವರವೂ ನಮಗೆ ಸಿಗುತ್ತದೆ. ದೈನಂದಿನ, ಹಾಗೂ ನಿಯತಕಾಲಿಕ ವಿಧಿಗಳ, ಹಾಗೂ ಆಗಾಗ ನಡೆಸಲ್ಪಡುತ್ತಿದ್ದ ಹಬ್ಬ ಹುಣ್ಣಿಮೆಗಳ ವೆಚ್ಚವನ್ನೆಲ್ಲ ಭರಿಸಲು ರಾಜ್ಯ ಅನುಕೂಲ ಮಾಡಿತ್ತು. ರತ್ನತ್ರಯಬಸದಿಯಲ್ಲಿ ಅಂಥ ಅತೀ ಹೆಚ್ಚು ವಿಧಿಗಳನ್ನು ಅಲ್ಲಿಯ ನೇಮಿನಾಥ, ಪಾರ್ಶ್ವನಾಥ ಹಾಗೂ ವರ್ಧಮಾನ ತೀರ್ಥಂಕರರಿಗೆ ನೆರವೇರಿಸುತ್ತಿದ್ದುದು ಕಂಡುಬರುತ್ತದೆ. ಸುಮಾರು ಹತ್ತರಷ್ಟು ದೈನಂದಿನ ವಿಧಿಗಳ ಉಲ್ಲೇಖ ಬಸದಿಯ ಶಾಸನದಲ್ಲಿದೆ. ಪ್ರತಿ ಮೂರ್ತಿಗೂ ದಿನಕ್ಕೆರೆಡು ಬಾರಿ ಬಾರಿ ಕ್ಷೀರಾಭಿಷೇಕ ನಡೆಯುತ್ತಿತ್ತು. ದಿನವೂ ಅಲ್ಲಿ ನಾಲ್ಕು ನಂದಾದೀಪ್ತಿಗಳು, 24 ಅಲಂಕಾರ ದೀಪ್ತಿಗಳು ಉರಿಯುತ್ತಿದ್ದವು. ಆರು ಹಬ್ಬಗಳನ್ನು ವರ್ಷಂಪ್ರತಿ ಆಚರಿಸುತ್ತಿದ್ದರು. ಸಿದ್ದಾಪುರದ ವಿಘ್ನೇಶ್ವರ ದೇವಾಲಯದಲ್ಲಿ ಒಂಭತ್ತು ಹಬ್ಬಗಳನ್ನು ಆಚರಿಸುತ್ತಿದ್ದರು. ಗಂಗಾಧರೇಶ್ವರ ದೇವರ ಜಾತ್ರೆಗೆ ಸೋಮಶೇಖರ ನಾಯಕನಿಂದ ಎರಡು ತಾಮ್ರಪಟಗಳ ಮೂಲಕ ಅನುಕೂಲ ಕಲ್ಪಿಸಲಾಗಿತ್ತು. ದೇವಾಲಯದ ಧಾರ್ಮಿಕ ವಿಧಿಗಳಲ್ಲಿ ಹಬ್ಬ ಹುಣ್ಣಿಮೆಗಳಿಗೆ ಉಳಿದೆ ವಿಧಿಗಳಿಗಿಂತಲೂ ಕಡಿಮೆ ಖರ್ಚು ತಗಲುತ್ತಿತ್ತು.

ದೇವಾಲಯದ ಪರಿಚಾರಕರು

ದೇವಸ್ಥಾನದ ಉತ್ಪನ್ನದ ಬಹುಭಾಗ ದೇವಾಲಯದ ವಿಧಿಗಳ ಆಚರಣೆಗೆ ಹಾಗೂ ಮೇಲ್ವಿಚಾರಣೆಗೆ ಶಾಶ್ವಕ ಪರಿಚಾರಕ ವರ್ಗದವರನ್ನು ನಿಯಮಿಸಿ ಅವರಿಗೆ ವೇತನ ನೀಡಲು ಖರ್ಚಾಗುತ್ತಿತ್ತು. ಪೂಜಾರಿಗಳು ಅತಿ ಅವಶ್ಯವಾದ ಅಗತ್ಯವಾಗಿದ್ದರು. ದೊಡ್ಡ ದೇವಾಲಯಗಳಲ್ಲಿ ಬೇರೆ ಬೇರೆ ವಿಧಿಗಳನ್ನು ಪೂರೈಸಲು ಜಾಸ್ತಿ ಅರ್ಚಕರು ಬೇಕಾಗಿದ್ದರು. ವಿರೂಪಾಕ್ಷ ಹಾಗೂ ವಿಘ್ನೇಶ್ವರ ದೇವಾಲಯಗಳಲ್ಲಿ ಎರಡೆರಡು ಅರ್ಚಕರಿದ್ದರು. ಹಿಂದೆ ಉಲ್ಲೆಖಿಸಿದ ಗೋಕರ್ಣದ 1686ರ ತಾಮ್ರ ಪಟದಲ್ಲಿ ಬೇರೆ ಬೇರೆ ಅರ್ಚನೆಗಳಲ್ಲಿ ಪರಿಣತರಾದ ಮೂರು ಅರ್ಚಕರ ಜೀವನೋಪಾಯವನ್ನು ಬಿಳಗಿ ಅರಸರು ಕಲ್ಪಿಸಿದ್ದು ಗೊತ್ತಾಗುತ್ತದೆ.17 ಗೋಕರ್ಣದಲ್ಲಿ ಅದಾಗಲೇ ಇದ್ದ ಹಲವು ಅರ್ಚಕರ ಜತೆ ಈ ಮೇಲಿನವರು ಹೆಚ್ಚು

ಸೇರ್ಪಡೆಯಾಗಿದ್ದಿರಬಹುದು. ವಾದ್ಯದವರು ಅಥವಾ ಓಲಗದವರು ದೊಡ್ಡ ದೇವಾಲಯಗಳ ಅನಿವಾರ್ಯ ಅಂಗಗಳಾಗಿದ್ದರು. ವಿರೂಪಾಕ್ಷ ದೇವಾಲಯದಲ್ಲಿ ಅವರ ಸಂಖ್ಯೆ ಎರಡಿದ್ದರೆ. ವಿಘ್ನೇಶ್ವರ ದೇವಾಲಯದಲ್ಲಿ ನಾಲ್ಕು ಇತ್ತು. ವಿಘ್ನೇಶ್ವರ ದೇವಾಲಯದಲ್ಲಿ ಇಬ್ಬರು ನಾದಸ್ವರದವರು ಹಾಗೂ ಇಬ್ಬರು ಡೋಲಿನವರು ಇದ್ದರು. ರತ್ನತ್ರಯಬಸದಿ ಉಳಿದೆಲ್ಲ ಮಂದಿರಗಳನ್ನು ಮೀರಿಸಿತ್ತು. ಅಲ್ಲಿ ಆರು ಓಲಗದವರಿದ್ದರು. ಈ ಮೇಲಿನವರ ಜತೆ, ತಾಳ, ಛಳಗಗಳಿಗೆ ತಲಾ ಒಬ್ಬೊಬ್ಬರಿದ್ದರು. ಅದೇ ಬಸದಿಯಲ್ಲಿ ಹತ್ತು ಭೋಗಪಾತ್ರದ ಜನರಿದ್ದರು. ನಟ್ಟುವ ಜನ 1, ತಾಳಧಾರಿಗಳು 1, ಮದ್ದಳೆಯವರು 2, ಸಂಗೀತದವರು 1, ಶೃತಿಯವರು 1, ಪಾತ್ರದವರು 4, ಹೀಗೆ. ದೇವಾಲಯದ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸಲು ಅಧ್ಯಕ್ಷರು ವಿರೂಪಾಕ್ಷ ದೇವಾಲಯ ಹಾಗೂ ರತ್ನತ್ರಯ ಬಸದಿಯಲ್ಲಿ ಇದ್ದರು. ಪಾಟಾಳಿಗಳು, ಪರಿಚಾರಕರು ಮುಂತಾದವರು ಸಹಾಯಕ್ಕಾಗಿ ಇದ್ದರು. ಈ ರೀತಿಯಲ್ಲಿ ವಿರೂಪಾಕ್ಷ ಹಾಗೂ ವಿಘ್ನೇಶ್ವರ ದೇವಾಲಯಗಳಲ್ಲಿ ಅವರ ಸಂಖ್ಯೆ 7, ಹಾಗೂ ರತ್ನತ್ರಯ ಬಸದಿಯಲ್ಲಿ 22 ಇತ್ತು. ಪರಿಚಾರಕ ವರ್ಗದವರಿಗೆ ಹಣ ಹಾಗೂ ಧಾನ್ಯ ಈ ಎರಡೂ ರೂಪದಲ್ಲೂ ವೇತನ ಸಲ್ಲಿಸುತ್ತಿದ್ದರು. ಪಟ್ಟಿ 2 ತೋರಿಸುವಂತೆ ರತ್ನತ್ರಯ ಬಸದಿಯ ಸಿಬ್ಬಂದಿ ವರ್ಗದವರಿಗೆ ಉಳಿದ ದೇವಾಲಯಗಳ ಸಿಬ್ಬಂದಿಗಳಿಗಿಂತ ಹೆಚ್ಚು ವೇತನ ಸಿಗುತ್ತಿತ್ತು. ಬಹುಶಃ ದೇವಾಲಯದ ಚಟುವಟಿಕೆ ಹಾಗೂ ಮಹತ್ವ ವೇತನದ ಪ್ರಮಾಣವನ್ನು ನಿರ್ಧರಿಸಿತ್ತು. ರತ್ನತ್ರಯ ಬಸದಿಯ ಎರಡು ಅಧ್ಯಕ್ಷರಿಗೆ ತಲಾ 12 ಗದ್ಯಾಣ ಹಾಗೂ ಒಂದು ಕಂಬಳಿ ಸಿಕ್ಕಿದರೆ ವಿರೂಪಾಕ್ಷ ದೇವಾಲಯದ ಅಧ್ಯಕ್ಷನಿಗೆ 10 ಗದ್ಯಾಣ ದೊರೆಯುತ್ತಿತ್ತು. ರತ್ನತ್ರಯ ಬಸದಿಯ ಶ್ರೀಬಲಿ ಹಾಗೂ ಅಮೃತಪಡಿಗಾಗಿ 100 ಖಂಡುಗ ಭತ್ತ ಖರ್ಚಾಗುತ್ತಿತ್ತು. ಅದನ್ನು ಯಾರು ಉಪಯೋಗಿಸುತ್ತಿದ್ದರು ಎಂಬ ಬಗೆಗೆ ಉಲ್ಲೇಖವಿಲ್ಲ. ದೇವಸ್ಥಾನದ ಪರಿಚಾರಕ ವರ್ಗದವರಿಗೆ ಅಂಥ ನಿರ್ದಿಷ್ಟ ಪಡಿಸಿದ ಉತ್ಪನ್ನವೂ ಇದ್ದಿರಬಹುದು. ವಿಘ್ನೇಶ್ವರ ದೇವಾಲಯದಲ್ಲಿ ನೈವೇದ್ಯದ ಅನ್ನವನ್ನು ಓಲಗದವರಿಗೆ ಸಲ್ಲಿಸಲಾಗುತ್ತಿತ್ತು.

ಈ ಮೇಲೆ ವಿಚಾರಿಸಿದ ಖರ್ಚಿನ ಬಾಬ್ತುಗಳು ದೇವಾಲಯದ ಧಾರ್ಮಿಕ ವಿಧಿಗಳ ಬಾಬ್ತಿಗಿಂತ ಅಧಿಕ ಇದ್ದವು. ಪಟ್ಟಿ 3ರಲ್ಲಿ ತುಲನೆ ಮಾಡಿದ ಮೂರು ದೇವಾಲಯಗಳ ಖರ್ಚುಗಳ ಮೊತ್ತ ಇದನ್ನು ಸಮರ್ಥಿಸುತ್ತದೆ.

ಉಪಸಂಹಾರ : ಈ ರೀತಿಯಲ್ಲಿ ಬಿಳಗಿ ಅರಸರ ಕಾಲದಲ್ಲಿ ಪ್ರಾದೇಶಿಕ ಮಟ್ಟದಲ್ಲಿ ಹಲವು ದೇವಾಲಯಗಳು ರಾಜಾಶ್ರಯ ಪಡೆದು ಬೆಳೆದವು. ಆ ದೇವಾಲಯಗಳನ್ನು ನಡೆಸಿಕೊಂಡು ಹೋಗಲಿಕ್ಕೆ ತಗಲುವ ವೆಚ್ಚವನ್ನು ಲೆಕ್ಕ ಹಾಕಿ ಆ ಮೊತ್ತವನ್ನು ರಾಜ್ಯದಾಯದಿಂದ ವಿಂಗಡಿಸಿ ಕೊಡಲಾಗಿತ್ತು. ರಾಜ್ಯದ ಬದಲು ದೇವಾಲಯಗಳೇ ರಾಜ್ಯದ ಸ್ಥಾನದಲ್ಲಿ ನಿಂತು ಅವುಗಳನ್ನು ವಸೂಲಿ ಮಾಡಿಕೊಂಡು ಖರ್ಚನ್ನು ತೂಗಿಸಬೇಕಿತ್ತು. ಈ ವಸೂಲಿ ಪದ್ಧತಿಯು ಕುರಿತು ಸುವ್ಯವಸ್ಥಿತವಾಗಿ ರಾಜ್ಯ ನೀತಿಯನ್ನು ಅಳವಡಿಸಿಕೊಂಡಿದ್ದರ ಬಗ್ಗೆ ಆಧಾರ ಸಿಕ್ಕುವುದಿಲ್ಲ. ದೇವಾಲಯದ ಆರ್ಥಿಕ ವ್ಯವಹಾರದ ಬಹುಪಾಲು ಹಣ ಚಲಾವಣೆಯಿಂದಲೇ ನಡೆಯುತ್ತಿತ್ತು. ಅಂದರೆ ಅದರ ಉತ್ಪನ್ನ ಹಾಗೂ ಖರ್ಚುಗಳು ಸಾಧಾರಣವಾಗಿ ಹಣರೂಪದಲ್ಲೇ ವಿಧಿಸಲ್ಪಟ್ಟಿರುವುದರಿಂದ ಸಮಕಾಲೀನ ಆರ್ಥಿಕ ವ್ಯವಹಾರದಲ್ಲಿ ಹಣ ಚಲಾವಣೆಗಳಿಸಿದ ಪ್ರಾಮುಖ್ಯತೆಯನ್ನು ಇದು ಸೂಚಿಸುತ್ತದೆ. ಅಥವಾ ಈ ಕುರಿತು ವಿವರ ಸಂಶೋಧನೆಗಳು ಅಗತ್ಯ ಇವೆ.

ಬಿಳಗಿ ಅರಸರ ಕಾಲದ ದೇವಾಲಯಗಳ ಇನ್ನೊಂದು ವೈಶಿಷ್ಟ್ಯ ಎಂದರೆ ಈ ದೇವಾಲಯಗಳ ಅಸ್ತಿತ್ವದಲ್ಲಿ ಇದ್ದ ರಾಜಾಶ್ರಯದ ಪಾತ್ರ, ರಾಜ್ಯ ವಿಂಗಡಿಸಿ ಕೊಟ್ಟ ಉತ್ಪನ್ನದಲ್ಲೇ ಪ್ರಮುಖ ದೇವಾಲಯಗಳು ತಮ್ಮ ಉಸಿರನ್ನು ಇಟ್ಟುಕೊಂಡಿದ್ದವು. ದೇವಾಲಯದ ಆರ್ಥಿಕ ವ್ಯವಹಾರದಲ್ಲಿ ರಾಜ್ಯ ತನ್ನ ನಿರ್ಣಾಯಕ ಮೊತ್ತವನ್ನು ಉಳಿಸಿಕೊಂಡಿತ್ತು. ದೇವಾಲಯಗಳ ಚಟುವಟಿಕೆಗಳು, ಖರ್ಚುಗಳು, ಕಟ್ಟಡಗಳು ಎಲ್ಲವೂ ರಾಜಶಾಸನ ಪುಟವನ್ನವಲಂಬಿಸಿದ್ದವು. ಬಿಳಗಿ ಅರಸರ ದೇವಾಲಯಗಳಲ್ಲೇ ರತ್ನತ್ರಯಬಸದಿ ಈ ದೃಷ್ಟಿಯಿಂದ ದೊಡ್ಡದು. ಅಲ್ಲಿ ಪರಿಚಾರಕ ವರ್ಗ ಹಾಗೂ ಧಾರ್ಮಿಕ ವಿಧಿಗಳು ಸಂಖ್ಯೆಯಲ್ಲಿ ಮಾತ್ರ ಜಾಸ್ತಿಯಿಲ್ಲ, ರಾಜ್ಯ ಆ ಪ್ರತಿಯೊಂದು ಬಾಬ್ತಿಗೆ ನಿಗಧಿಪಡಿಸಿದ ಹಣ ಕೂಡಾ ಸಾಪೇಕ್ಷವಾಗಿ ಹೆಚ್ಚಿತ್ತು.

ಇಂಥ ರಾಜಾಶ್ರಯ ಕೆಲವು ದೇವಾಲಯಗಳ ಮಟ್ಟಿಗೆ ನಿರ್ಣಾಯಕವಾಗಿ ಪರಿಣಮಿಸಿದಂತೆ ಕಾಣುತ್ತದೆ. ಬಿಳಗಿ ರಾಜರು ಮಹತ್ವಕಾಂಕ್ಷೆಯಿಂದ ನಿರ್ಮಿಸಿದ ವಿರೂಪಾಕ್ಷ ದೇವಾಲಯ ಹಾಗೂ ರತ್ನತ್ರಯ ಬಸದಿಗಳು ಎಷ್ಟು ಕ್ವಚಿತ್ತಾಗಿ

ತಮ್ಮ ವೈಭವವನ್ನು ಪಡೆದವೋ ಅಷ್ಟೇ ತ್ವರಿತವಾಗಿ ಅವರ ಆಳ್ವಿಕೆಯ ನಂತರ ಹಾಳು ಬಿದ್ದವು. ಇದು ಬಿಳಗಿ ರಾಜರು ಆರ್ಥಿಕ ಸವಲತ್ತುಗಳನ್ನು ನಿರ್ಮಾಣ ಮಾಡುವರಲ್ಲಿ ಮಾತ್ರ ನಿರ್ಣಾಯಕರಾಗಿರಲಿಲ್ಲ. ಈ ವ್ಯವಸ್ಥೆ ತಪ್ಪದೇ ಮುಂದುವರಿಯುವಲ್ಲಿ ಕೇವಲ ಆಶ್ವಾಸನೆಯಾಗಿದ್ದರು ಎಂಬುದನ್ನು ಸೂಚಿಸುತ್ತದೆ. ಹಾಗಾಗಿ ಬಿಳಗಿ ರಾಜ್ಯ ವ್ಯವಸ್ಥೆ ಹಾಳಾದಾಗ ಈ ದೇವಾಲಯಗಳು ಒಂದು ಪ್ರತಿ ವ್ಯವಸ್ಥೆಯನ್ನು ಸೃಷ್ಟಿಸಿಕೊಳ್ಳಲು ವಿಫಲವಾದವು.

ಆದರೆ ಸಿದ್ಧಾಪುರದ ವಿಘ್ನೇಶ್ವರ ದೇವಾಲಯ, ಭುವನೇಶ್ವರಿ ದೇವಾಲಯ ಹಾಗೂ ಇಟಗಿಯ ರಾಮೇಶ್ವರ ದೇವಾಲಯಗಳು ಮಾತ್ರ ಇಂದಿಗೂ ತಮ್ಮ ಮಹತ್ವವನ್ನು ಉಳಿಸಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಬಹುಶಃ ಬಿಳಗಿ ಅರಸರ ಪತನಾನಂತರ ಈ ಎಲ್ಲ ದೇವಾಲಯಗಳನ್ನು ಪ್ರಭಾವಿಸಿದ ಸಾಮಾಜಿಕ ಹಾಗೂ ಆರ್ಥಿಕ ಕಾರಣಗಳನ್ನು ವಿವರವಾಗಿ ಅಧ್ಯಯನ ಮಾಡಿದಾಗಲೇ ಈ ಮೇಲಿನ ದೇವಾಲಯಗಳ ವ್ಯವಸ್ಥೆ ಹಾಳಾಗಿದ್ದರ ನಿಜವಾದ ಕಾರಣ ತಿಳಿಯಬಹುದು.18

ಪಟ್ಟಿ–1

ಶಾಸನಗಳಲ್ಲಿ ಲಭ್ಯವಿರುವಂತೆ ದತ್ತಿಯ ವಿವರಗಳು

ದೇವಾಲಯದ ಹೆಸರು	ಹಳ್ಳಿಗಳ ಸಂಖ್ಯೆ	ದತ್ತಿ ಹಣ ರೂಪದಲ್ಲಿ	ವಸ್ತುರೂಪದಲ್ಲಿ
1. ಪಾರ್ಶ್ವತೀರ್ಥಂಕರ ಬಸದಿ, ಐಸೂರು	1.	24 ಗದ್ಯಾಣ	300 ಖಂಡುಗ ಭತ್ತ
2. ಪಾರ್ಶ್ವತೀರ್ಥಂಕರ ಬಸದಿ, ಇಡುವಣಿ	2	63 ಗದ್ಯಾಣ	–
3. ಪಾರ್ಶ್ವರ್ಥಂಕರ ಬಸದಿ, ಬಿಳಗಿ	3	163 ಗದ್ಯಾಣ	–
4. ಪಾರ್ಶ್ವರ್ಥಂಕರ ಬಸದಿ, ಬಿಳಗಿ ಅರಮನೆ	3	104 ಗದ್ಯಾಣ	–
5. ಮಾಣಿಕ್ಯತೀರ್ಥಂಕರ ಬಸದಿ, ಬಿಳಗಿ	1	50 ಗದ್ಯಾಣ	–
6. ಪಂಚ ಬಸದಿ, ತಾಳಗುಪ್ಪೆ	1	36 ಗದ್ಯಾಣ	–
7. ಅಧೀಶ್ವರಬಸದಿ	3	43.5 ಗದ್ಯಾಣ	–
8. ರತ್ನತ್ರಯಬಸದಿ	2	101.5 ಗದ್ಯಾಣ	–
9. ಶಾಂತೇಶ್ವರಬಸದಿ	2	36 ಗದ್ಯಾಣ	–
10. ಚಂದ್ರನಾಥ ಬಸದಿ, ಬಳಗುಳಿ	4	28 ಗದ್ಯಾಣ	–
11. ತ್ರಿಭುವನತಿಲಕಬಸದಿ, ಬಿದಿರೆ	1	44.5 ಗದ್ಯಾಣ	–
12. ಗಂಧಕುಟಿ ಶಾಂತೀಶ್ವರ, ಬಿಳಗಿ	1	12 ಗದ್ಯಾಣ	–
13. ವಿರೂಪಾಕ್ಷ ದೇವಾಲಯ, ಬಿಳಗಿ	4	86 ಗದ್ಯಾಣ 7 ಹಣ 3 ಹಾಗ	110 ಖಂಡುಗ ಭತ್ತ
14. ರತ್ನತ್ರಯಬಸದಿ, ಬಿಳಗಿ	9	443 ಗದ್ಯಾಣ 101 ಹಣ 3 ವೀಸ	300 ಖಂಡುಗ ಭತ್ತ
15. ವೀಘ್ನೇಶ್ವರ ದೇವಾಲಯ, ಸಿದ್ಧಾಪುರ	4	65 ಗದ್ಯಾಣ 2 ಹಣ 3 ಹಾಗ	100 ಖಂಡುಗ ಭತ್ತ
16. ತ್ರಿಭುವನಚೂಡಾಮಣಿಬಸದಿ, ಬಿದಿರೆ	1	24 ಗದ್ಯಾಣ	
17. ಪಾರ್ಶ್ವನಾಥಬಸದಿಯ ಸತ್ರ, ಬಿದಿರೆ	3	–	112 ಮೂಟೆ ಅಕ್ಕಿ

18. ಗೋಕರ್ಣಮಹಾಬಲೇಶ್ವರ ದೇವಾಲಯ	2	45.5 ಗದ್ಯಾಣ	–
19. ಗಂಗಾಧರೇಶ್ವರ ದೇವಾಲಯ, ಸಿದ್ಧಾಪುರ	2	24 ಗದ್ಯಾಣ	115 ಬಿಟ್ಟಿ ಆಳು

ಪಟ್ಟಿ – 2

ದೇವಾಲಯದ ಸಿಬ್ಬಂದಿಗೆ ಸಂಬಳ (ಒಬ್ಬರಿಗೆ ವರ್ಷಕ್ಕೆ) (ಮೂರು ದೇವಾಲಯಗಳ ತುಲನಾತ್ಮಕ ಪಟ್ಟಿ)

ಸಂ.	ಸಿಬ್ಬಂದಿ	ವಿರೂಪಾಕ್ಷ ದೇವಾಲಯ		ರತ್ನತ್ರಯಬಸದಿ		ವಿಘ್ನೇಶ್ವರ ದೇವಾಲಯ	
		ಹಣ	ವಸ್ತು	ಹಣ	ವಸ್ತು	ಹಣ	ವಸ್ತು
		ಗದ್ಯಾಣ	ಭತ್ತ ಖಂಡುಗ	ಗದ್ಯಾಣ	ಭತ್ತ ಖಂಡುಗ	ಗದ್ಯಾಣ	ಭತ್ತ ಖಂಡುಗ
1.	ಅರ್ಚಕ ಭಟ್ಟರು	3	36	–	–	12	–
2.	ಕೀಳು ಶಾಂತಿ ಭಟ್ಟರು	2	30	–	–	12	–
3.	ಪಾಟಾಳಿಗಳು	ಮುಕ್ಕಾಲು	30	–	–	–	–
4.	ಭಂಡಾರಿ (ವಾದ್ಯದವರು)	1.5	42	7	20	–	24
5.	ಅಧ್ಯಕ್ಷರು	10	–	13	ಒಂದು ಕಂಬಳಿ	–	–
6.	ಭೋಗವಾತ್ರದವರು	–	–	15	–	–	–
7.	ಪರಿಚಾರಕರು	–	–	9.5	20	–	–

ಪಟ್ಟಿ – 3

ದೇವಾಲಯದ ಬೇರೆ ಬೇರೆ ಉದ್ದೇಶಕ್ಕೆ ಆಗುತ್ತಿದ್ದ ಖರ್ಚಿನ ಪ್ರಮಾಣ (ಮೂರು ದೇವಾಲಯದ ತುಲನಾತ್ಮಕ ಪಟ್ಟಿ)

ದೇವಾಲಯ	ಧಾರ್ಮಿಕ ವಿಧಿಗಳು	ಸಿಬ್ಬಂದಿ ಸಂಬಳ	ಒಟ್ಟು
1. ವಿರೂಪಾಕ್ಷ ದೇವಾಲಯ	30.5 ಗದ್ಯಾಣ 44 ಖಂಡುಗ ಭತ್ತ	55.5 ಗದ್ಯಾಣ 66 ಖಂಡುಗ ಭತ್ತ	86 ಗದ್ಯಾಣ 110 ಖಂಡುಗ ಭತ್ತ
2. ರತ್ನತ್ರಯಬಸದಿ	98 ಗದ್ಯಾಣ 100 ಖಂಡುಗ ಭತ್ತ	245 ಗದ್ಯಾಣ 200 ಖಂಡುಗ ಭತ್ತ	443 ಗದ್ಯಾಣ 300 ಖಂಡುಗ ಭತ್ತ
3. ವಿಘ್ನೇಶ್ವರ ದೇವಾಲಯ	21 ಗದ್ಯಾಣ 4 ಖಂಡುಗ ಭತ್ತ	44 ಗದ್ಯಾಣ 96 ಖಂಡುಗ ಭತ್ತ	65 ಗದ್ಯಾಣ 100 ಖಂಡುಗ ಭತ್ತ

ಅಡಿಟಿಪ್ಪಣಿಗಳು

1. 'ಬಿಳಗಿ ಅರಸುಗಳ ವಂಶಾವಳಿ' ಎಂಬ ಕೃತಿಯನ್ನು ಶ್ರೀ ಬೆನಗಲ್ ರಾಮರಾವ್ ಸಂಪಾದಿಸಿದ್ದಾರೆ. ಡಾ॥ ಶಾಮಾಶಾಸ್ತ್ರಿಯವರು 'ಬಿಳಗಿ ಅರಸುಗಳ ಚರಿತ್ರೆ' ಎಂದು ಅದೇ ಪುಸ್ತಕವನ್ನು ಸಂಪಾದಿಸಿದ್ದಾರೆ. ಬಿಳಗಿ ಅರಸರ ಮೇಲೆ ಡಾ॥ ಸೂರ್ಯನಾಥ ಕಾಮತರೂ 'ಬಿಳಗಿಯ ಒಡೆಯರು' ಎಂಬ ಪುಸ್ತಕವನ್ನು ಹೊರತಂದಿದ್ದಾರೆ.
2. Indian Epigroaphy Annual Report (IEAR) 1970 - 71 No. 158, p. 52.

ದತ್ತಕ ವಿಧಿ–ಮುಂಬಯಿ ಕರ್ನಾಟಕದ ಕೆಲವು ಘಟನೆಗಳು

– ಡಾ. ಶ್ರೀನಿವಾಸ ಹಾವನೂರ

ಅತಿ ಪ್ರಾಚೀನ ಕಾಲದಲ್ಲಿ, ಕುಟುಂಬದಲ್ಲಿ ಓರ್ವ ಮಗ ಅವಶ್ಯವಾಗಿ ಬೇಕಾಗುತ್ತಿದ್ದ. ಉದ್ದೇಶ, ಕುಟುಂಬದಲ್ಲಿಯ ಇಳಿವಯದವರ ರಕ್ಷಣೆ ಮಾಡಬೇಕೆಂದು. ಗಂಡು ಮಗ ಒಂದು ವೇಳೆ ಇರದೆ ಹೋದರೆ, ಬೇರೊಬ್ಬನನ್ನು ಕುಟುಂಬದೊಳಗೆ ಸೇರಿಸಿಕೊಳ್ಳುತ್ತಿದ್ದರು. ಇದಕ್ಕೆ ಯಾವುದೇ ಧಾರ್ಮಿಕ ಸ್ವರೂಪವಿರಲಿಲ್ಲ. ಆ ಸ್ವರೂಪ ಬಂದದ್ದು ಆರ್ಯನ್ ಪ್ರಭಾವದಿಂದ. ಕ್ರಮೇಣ ಎಂದರೆ ವೇದೋತ್ತರ ಕಾಲದಲ್ಲಿ ಅದಕ್ಕೆ ಸಾಮಾಜಿಕ ನೆಲೆಯೂ ಸೇರಿಕೊಂಡಿತು. ಪುರಾಣ ಕಥೆಗಳಲ್ಲಿ ಒಂದೆರಡು ದೃಷ್ಟಾಂತಗಳೂ ಇವೆ. ಅತ್ರಿ ಋಷಿಯು ತನ್ನೊಬ್ಬ ಮಗನನ್ನು ದತ್ತಾಗಿ ಬೇರೊಬ್ಬರಿಗೆ ಕೊಟ್ಟನೆಂದು ತೈತ್ತಿರೀಯ ಸಂಹಿತೆಯಲ್ಲಿ ಬಂದಿದೆ. ಅದಕ್ಕಿಂತ ದತ್ತಕ ವಿಶಿಷ್ಟವಾಗಿದೆ. ಶುನಶ್ಶೇಪನ ತಂದೆ ಅಜೀಗರ್ತ. ಶುನಶ್ಶೇಪನ ತಂದೆಯು ಮಾತುಕೊಟ್ಟಿದ್ದ ತನಗಾಗಿ ಶುನಶ್ಶೇಪನನ್ನು ಯಜ್ಞದಲ್ಲಿ ಬಲಿಕೊಡಬೇಕಾಗಿ ಬಂದಾಗ, ವಿಶ್ವಾಮಿತ್ರ ಮುನಿಯು ಅದರಿಂದ ಅವನನ್ನು ಪಾರು ಮಾಡಿದ. ವಿಶ್ವಾಮಿತ್ರನಿಗೋ ಅದಾಗಲೇ ಹಲವಾರು ಮಕ್ಕಳು. ಅವರಲ್ಲಿಯೇ ಒಬ್ಬನನ್ನಾಗಿ ಶುನಶ್ಶೇಪನನ್ನು ದತ್ತು ತೆಗೆದುಕೊಂಡನಂತೆ.

ಪ್ರಾಚೀನ ಇತಿಹಾಸ ಕಾಲದಲ್ಲಿ ದತ್ತಕ ವಿಧಿಯನ್ನು ನಿಯಮಿತಗೊಳಿಸಲು ಕೆಲವು ಸ್ಮೃತಿ ಗ್ರಂಥಗಳು ಪ್ರಯತ್ನಿಸಿದುವು. ಅವುಗಳಲ್ಲಿ ಮನುಸ್ಮೃತಿ, ವಾಶಿಷ್ಠ, ಬೌಧಾಯನ, ಶೌನಕ ಮತ್ತು ಸಾಕಲ್ಯ ಇವು ಹೆಚ್ಚು ಪ್ರಸಿದ್ಧವಾದವುಗಳು. ಅವುಗಳ ಮೇಲೆ ಪ್ರತ್ಯೇಕವಾಗಿ ದತ್ತಕ ವಿಧಿಯನ್ನು ಕುರಿತೇ ಟೀಕಾ ಗ್ರಂಥಗಳು ಹೊರಟವು. ಅವುಗಳಲ್ಲಿ ನೀಲಕಂಠನ 'ಮಯೂಖ', ನಂದಪಂಡಿತನ 'ದತ್ತಕ ಚಂದ್ರಿಕಾ', ಹಾಗೆಯೇ 'ದತ್ತಕ ಮೀಮಾಂಸಾ' ಇವು ಮೂರನ್ನು ಪ್ರಸಂಗ ಬಂದಾಗ, ಪರಿಶೀಲಿಸಿ ನಿರ್ಣಯಕ್ಕೆ ಬರುವುದು ರೂಢಿಗತವಾಯಿತು.

ಆದರೆ ಈ ಟೀಕಾಗ್ರಂಥಗಳ ವಿವರಣೆ ಒಂದರ ಹಾಗೆ ಇನ್ನೊಂದು ಇಲ್ಲ. ಅದಕ್ಕೆ ಕಾರಣವೆಂದರೆ ನಮ್ಮ ದೇಶದಲ್ಲಿಯ ಹಿಂದೂ ಸಮಾಜವು ಬೆಳಬೆಳದಂತೆಲ್ಲ ಪ್ರಾದೇಶಿಕ ಬದಲಾವಣೆಗಳನ್ನು, ಮೈಗೂಡಿಸಿಕೊಂಡದ್ದು. ಉದಾಹರಣೆಗೆ 'ಪುತ್ರ' ಎಂಬವನು ದತ್ತಕ ಹೋಗಲು ಸಾಧ್ಯವಷ್ಟೆ. ಆದರೆ ನಂದಪಂಡಿತನು 'ಪುತ್ರ'. ಇದರಲ್ಲಿ 'ಪುತ್ರಿ'ಯೂ ಅಂತರ್ಗತವೆಂದು ತಿಳಿಯಬೇಕು ಎನ್ನುತ್ತಾನೆ. ಅರ್ಥಾತ್ ಸ್ತ್ರೀಯನ್ನೂ ದತ್ತು ತೆಗೆದುಕೊಳ್ಳಬಹುದು ಎಂದಾಯಿತು. ಅದಕ್ಕೆ ಅವನು ಎರಡು ಪೌರಾಣಿಕ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಒಂದು, ಶಾಂತಾ ಎಂಬ ದಶರಥನ ಮಗಳು, ವ್ಯೋಮಪಾದರಾಜನಿಗೆ ದತ್ತಕ ಹೋದುದಂತೆ. ಇನ್ನೊಂದು ಉದಾಹರಣೆ, ಕುಂತೀಭೋಜನು ಸುರ ಎಂಬವನ ಮಗಳು ಕುಂತಿಯನ್ನು ದತ್ತು ತೆಗೆದುಕೊಂಡದ್ದು.

ಮಧ್ಯಯುಗದಲ್ಲಿ

ಮಧ್ಯಯುಗದಲ್ಲಿ 'ದತ್ತಕ'ದ ಉದ್ದೇಶಗಳನ್ನು (concept) ನಿರ್ದಿಷ್ಟಗೊಳಿಸಲಾಗಿದ್ದಿತು. ಅವೆಂದರೆ

* ಸ್ವರ್ಗದಲ್ಲಿಯ ಪಿತೃಗಳಿಗೆ ಸದ್ಗತಿ-ಪ್ರಾಪ್ತಿ
* ಕುಟುಂಬದ ಅಂಶ ಪರಂಪರೆಯನ್ನು ಮುಂದುವರಿಸುವುದು.
* ವಂಶಾನುಗತವಾದ ಹಕ್ಕುಗಳನ್ನು ಮತ್ತು ಆಸ್ತಿಯನ್ನು ಉಪಭೋಗಿಸುವುದು.

ಮೇಲಿನವುಗಳಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಇವೆರಡೂ ಸೇರಿರುತ್ತವೆ ಎಂಬುದನ್ನು ಗಮನಿಸಬೇಕು. ಇವುಗಳಲ್ಲಿ ಯಾವುದಕ್ಕೆ ಹೆಚ್ಚು ಒತ್ತು ಎಂದು ಹೇಳುವುದು ಕಷ್ಟ. ಅದು ಆ ಕುಟುಂಬಗಳ ಪರಿಸ್ಥಿತಿಯನ್ನು ಅವಲಂಬಿಸಿರುತ್ತದೆ.

ಮೇಲಿನವುಗಳಲ್ಲಿ ಮೂರನೆಯದರ ಕಾರ್ಯಾಚರಣೆಯ ಬಾಬತ್ತಿನಲ್ಲಿ ಸರಕಾರೀ ಯಂತ್ರದ ಅಗತ್ಯ ಬೀಳತೊಡಗಿತು. ಆಸ್ತಿಯ ಹಸ್ತಾಂತರ ಅಷ್ಟು ಸುಲಭವಾದದ್ದಲ್ಲ. ಆದ್ದರಿಂದ ಮಧ್ಯಯುಗದಲ್ಲಿ ಆ ಪ್ರದೇಶಗಳ ಸರಕಾರದವರು (ಅದು ಸಂಸ್ಥಾನವೂ ಆಗಿರಬಹುದು) ಒಂದಿಷ್ಟು 'ನಜರಾಣಾ' ಪಡೆದು ದತ್ತಕ್ಕೆ ಅಧಿಕೃತ ಮುದ್ರೆಯನ್ನೊತ್ತುವ ಕ್ರಮವು ಬಳಕೆಯಲ್ಲಿ ಬಂದಿತು. ಸಾಮ್ರಾಜ್ಯವನ್ನೇ ಆಳುತ್ತಿದ್ದ ಪೇಶ್ವೆಯರೂ ಸಂಬಂಧಪಟ್ಟ ಪ್ರದೇಶದ ಅಧಿಕಾರಿಗಳಿಗೆ ಮುಂಚಿತ ತಿಳಿಸಿಯೇ ದತ್ತಕ ತೆಗೆದುಕೊಳ್ಳಬೇಕೆಂದು ವಿಧಿಸಿದ್ದರು. ಆದರೇನು, ಅವರುಗಳು ಲಂಚ ತೆಗೆದುಕೊಂಡು ದತ್ತಕ-ಪಶ್ಚಾತ್ ಎಷ್ಟೋ ಬಾರಿ ಮಂಜೂರನ್ನು ಕೊಟ್ಟದ್ದುಂಟು.

ಎಲ್ಲರಿಗೂ ತಿಳಿದಿರುವ ಹಾಗೆ ದತ್ತಕ ವಿಧಿಯು ಮೂವರು ಗಂಡಸರನ್ನು ಒಳಗೊಳ್ಳುತ್ತದೆ. ಮಗನನ್ನು ದತ್ತು ಕೊಡುವ ತಂದೆ, ಅದನ್ನು ಸ್ವೀಕರಿಸುವವ, ಮತ್ತು ಸ್ವತಃ ದತ್ತು ಹೋಗುವವ. ಈ ಮೂವರ ಕಾರ್ಯದಲ್ಲಿ ನ್ಯಾಯಕ್ಷಮತೆ ಇದೆಯೆಂಬುದನ್ನು ಖಾತ್ರಿ ಮಾಡಿಕೊಳ್ಳಬೇಕಾಗುತ್ತದೆ. ಆದರೆ ಎಷ್ಟೋ ಬಾರಿ ಇಲ್ಲಿ ಆ ಮೂವರಲ್ಲದೆ, ಸಂಬಂಧಪಟ್ಟ ಸ್ತ್ರೀಯರದೂ ಪಾತ್ರವಿರುತ್ತದೆ. ಇವರೆಲ್ಲ ಸೇರಿದಾಗ ನ್ಯಾಯ ಕ್ಷಮತೆಯು (Competence) ಪ್ರಶ್ನಾರ್ಹವಾಗುತ್ತದೆ.

ಬ್ರಿಟಿಶರ ಕಾಲದಲ್ಲಿ

ಬ್ರಿಟಿಷರ ಕಾಲದಲ್ಲಿ ಎಂದರೆ 19ನೆಯ ಶತಮಾನದಲ್ಲಿ ದತ್ತಕ ವಿಧಿಯಲ್ಲಿ ಹತ್ತಾರು ತೊಡಕುಗಳು ಕಾಣಿಸಿಕೊಂಡವು. ಹಿಂದೂಗಳ ದತ್ತಕ ವಿಧಿ-ಎನ್ನುವುದೇ ಅವರಿಗೆ ಹೊಸತು. ಅವರು ಎದುರಿಸಬೇಕಾಗಿಬಂದ ಕೆಲವು ತೊಡಕುಗಳಿವು :

- ಶಾಸ್ತ್ರದ ಪ್ರಕಾರ ದತ್ತಕ ವಿಧಿ ಜರುಗಿತೆ?
- ದತ್ತಕ ಹೋದ ಹುಡುಗನ ಮದುವೆಯಾಗಿತ್ತೆ?
- ದತ್ತಕದ ಕಾಲಕ್ಕೆ ಮೃತನಾದವನ ಹೆಂಡತಿ ಗರ್ಭಿಣಿ ಇದ್ದರೆ?
- ದತ್ತಕ ವಿಧಿಗೆ ಸವತಿಯರ ಒಪ್ಪಿಗೆಯನ್ನು ಪಡೆದಿತ್ತೆ?
- ಆಸ್ತಿಯನ್ನು ದತ್ತಕಕ್ಕೆ ಮುಂಚೆ ಅಥವಾ ಆ ಕೂಡಲೇ ಬೇರೆ ರೀತಿಯಲ್ಲಿ ವಿಲೇವಾರಿ ಮಾಡಿದ್ದಿತೆ?

ಇಂಥ ಅಂಶಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವಲ್ಲಿ ಮುಂಬಯಿಯ ಪ್ರಥಮ ಗವರ್ನರ್ ಎಲ್‌ಫಿನ್‌ಸ್ಟನ್ ಪುಣೆಯಲ್ಲಿಯ ಶಾಸ್ತ್ರಿಗಳನ್ನು ಕೇಳುವ ಕ್ರಮವನ್ನು ರೂಢಿಸಿದ್ದ ಒಂದು ವಿಷಯದಲ್ಲಿ ಮಾತ್ರ – ಆಸ್ತಿ ಇದ್ದವರು, ಸಂಸ್ಥಾನಿಕರು ಪೂರ್ವ ಪರವಾನಿಗೆ ಪಡೆದಿರಬೇಕು ಎನ್ನುವ ಬಾಬತಿನಲ್ಲಿ ಕಟ್ಟುನಿಟ್ಟಾಗಿ ವರ್ತಿಸುತ್ತಿದ್ದರು. ಆಮೇಲೆ ಅದಕ್ಕೆ ಇನ್ನೆರಡು ನಿಯಮಗಳನ್ನು ಸೇರಿಸಿದರು :

1. ಸರಕಾರವು ದತ್ತಕವನ್ನು ಮಾನ್ಯ ಮಾಡಬಹುದು. ಅದರರ್ಥ ಅವನು ತಂತಾನೆ ಹಕ್ಕಿನಿಂದ ಆ ಆಸ್ತಿಗೆ ಒಡೆಯನಾಗಲಾರ. ಆ ಹಕ್ಕುದಾರಿಯನ್ನು ನಿರ್ದಿಷ್ಟವಾಗಿ ಪಡೆದಿರಬೇಕಾಗುತ್ತದೆ.

2. ಯಾವದೊಂದು ದತ್ತಕ ವಿಧಿಯನ್ನು ಸರಕಾರವು ಆ ವ್ಯಕ್ತಿಯ ಮೇಲೆ ಉಪಕಾರಗೈದಂತೆಯೇ ಎಂದು ತಿಳಿಯತಕ್ಕದು. ಇದರಲ್ಲಿ ಅವರ ಅಪ್ಪಟ ಸ್ವಾರ್ಥವಿತ್ತೆಂದು ಬೇರೆ ಹೇಳಬೇಕಿಲ್ಲ. ಯಾರೊಬ್ಬ ದೇಸಾಯಿ/ ಸಂಸ್ಥಾನಿಕ ತೀರಿ ಹೋದರೆ,

ಮಕ್ಕಳಿಲ್ಲವೆಂಬ/ವಾರಸುದಾರರಿಲ್ಲೆಂಬ ಕಾರಣ ಕೊಟ್ಟು ಆ ಪ್ರದೇಶವನ್ನು ತಮ್ಮ ನೇರ ಆಡಳಿತಕ್ಕೆ ಒಳಗಾಗಿಸಬಹುದು. ಡಾಲಹೌಸಿ ವ್ಹಾಯಿಸರಾಯನ 'ಆಂಭಿಣಡಿುಟಜ ಂಜಿ ಐಚಿಫಿಜ' ಈ ವಿಷಯದಲ್ಲಿ ಸುಪ್ರಸಿದ್ಧವಿದೆ. ಅದರ ಬಹು ದೊಡ್ಡ ಉದಾಹರಣೆ ಝಾಂಸಿಯ ರಾಣಿ ಲಕ್ಷ್ಮೀಬಾಯಿಯದು. ಅಲ್ಲಿಯ ರಾಜನು ಜೀವಂತ ಇದ್ದಾಗಲೇ ಒಬ್ಬ ಹುಡುಗನನ್ನು ದತ್ತು ತೆಗೆದುಕೊಂಡಿದ್ದನು. ರಾಣಿಯು ಅದಕ್ಕೆ ಮಂಜೂರಾತಿಯನ್ನು ಕೇಳಿದಾಗ ಡಾಲಹೌಸಿ ಕೊಡಲಿಲ್ಲ. ಆ ಮುಂದೆ 1856ರ ವಿಪ್ಲವದಲ್ಲಿ ರಾಣಿಯು ಯಾವ ರೀತಿ ಪ್ರತಿಕ್ರಿಯೆ ತೋರಿದಳೆಂಬುದನ್ನು ಬಲ್ಲೆವು.

ಮುಂಬಯಿ ಕರ್ನಾಟಕದಲ್ಲಿ

ಬ್ರಿಟಿಷರು ಈ ಭಾಗವನ್ನು ವಶಪಡಿಸಿಕೊಂಡಾಗ ಇಲ್ಲಿ ನಾನಾ ಬಗೆಯ ವತನದಾರರು (ದೇಸಾಯಿ, ದೇಶಪಾಂಡೆ, ಇನಾಂದಾರ ಇ.) ಆರಂಭದ ವರ್ಷಗಳಲ್ಲಿಯ (1820ರ ದಶಕ) ದತ್ತಕ ವ್ಯಾಜ್ಯದ ಪ್ರಕರಣಗಳು ತಲೆದೋರಿದುವು. ಆ ಕಾಲಕ್ಕೆ ಇಲ್ಲಿ ಸೆಂಟ್ ಜಾನ್ ಥ್ಯಾಕರೆ ಇಡೀ ಧಾರವಾಡ ಸುಭಾದ (ಬೆಳಗಾಂವಿ, ವಿಜಾಪುರಗಳೂ ಸೇರಿದಂತೆ) ಕಲೆಕ್ಟರನಾಗಿಯೂ, ದಕ್ಷಿಣ ಮಹಾರಾಷ್ಟ್ರ, ಸಂಸ್ಥಾನಗಳ ಪೊಲಿಟಿಕಲ್ ಏಜಂಟ್ ಎಂದೂ ನೇಮಕವಾಗಿ ಇದ್ದನು. ಅವನ ಮೇಲಿನ ಅಧಿಕಾರಿಯಾಗಿ ಚಾಪ್ಲಿನ್ ಎಂಬಾತ ಕಮೀಷನರ್ ಆಗಿದ್ದನು.

1820ರ ಆಗಸ್ಟ್ 12ರಂದು ಚಾಪ್ಲಿನ್ ಈ ಕೆಳಗಿನ ಆಶಯದ ಹುಕುಮನ್ನು ಹೊರಡಿಸಿದನು : ಈ ಹಿಂದೆ ಪೇಶ್ವೆಯರ ಕಾಲದಲ್ಲಿ ದತ್ತಕ ತೆಗೆದುಕೊಳ್ಳುವವರು ಆ ಸರಕಾರದ ಪರವಾನಿಗೆಯನ್ನು ಪಡೆಯಬೇಕೆಂದು ವಿಧಿಸಿದ್ದರೂ ಅನೇಕರು ಹಾಗೆ ಮಾಡುತ್ತಿಲ್ಲ. ಆದ್ದರಿಂದ ಆ ಮೂಲಕ ತಿಳಿಸುವುದೇನೆಂದರೆ, ಯಾರೇ ವತನದಾರರು ದತ್ತಕ ತೆಗೆದುಕೊಳ್ಳುವ ಮುಂಚೆ ಸುಭಾದ (ಧಾರವಾಡ) ಮುಖ್ಯಸ್ಥನ ಲಿಖಿತ ಅನುಮತಿಯನ್ನು ಪಡೆದಿರಲೇಬೇಕು. ಹಾಗೆ ಅರ್ಜಿ ಸಲ್ಲಿಸಿದಾಗ ಆ ಮುಖ್ಯಸ್ಥನು ವಿಚಾರಣೆ ನಡೆಸಿ, ಶಾಸ್ತ್ರ, ರೀತ್ಯಾ ಅದು ಸರಿಯಾದದ್ದೆಂದು ಖಾತ್ರಿ ಮಾಡಿಕೊಂಡು ಅನುಮತಿ ನೀಡುವನು. ಇಲ್ಲವೆ ನಿರಾಕರಿಸಬಹುದು. ಅದನ್ನು ಪೂರ್ಣತಃ ಪಾಲಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಸರಕಾರವು ಅಂಥ ದತ್ತಕವನ್ನು ಮಾನ್ಯ ಮಾಡುವುದಿಲ್ಲ ಮತ್ತು ದತ್ತು ಹೋದ ಹುಡುಗನಿಗೆ ಯಾವುದೇ ಹಕ್ಕು-ಆಸ್ತಿ ಪಡೆಯುವದನ್ನು ನಿರ್ಬಂಧಿಸಲಾಗುವುದು.

ಕಿತ್ತೂರಿನ ಕೊನೆಯ ದೇಸಾಯಿ ಶಿವಲಿಂಗರುದ್ರ ಸರ್ಜನು ದತ್ತಕ ತೆಗೆದುಕೊಂಡು ಮರುಗಳಿಗೆಗೆ ತೀರಿಕೊಂಡನಷ್ಟೆ. ಆಗ ಥ್ಯಾಕರೆ ಕಿತ್ತೂರಿಗೆ ಬಂದು ಇದೇ ಹುಕುಮನ್ನು ರಾಣಿ ಚೆನ್ನಮ್ಮ ಹಾಗೂ ಇತರ ಗಣ್ಯರಿಗೆ ಓದಿ ತೋರಿಸಿದ್ದು (ಅಕ್ಟೋಬರ್ 1824) ಮತ್ತು ಅದರನ್ವಯ ಮಾಸ್ತ ಮರಡಿಯ ಆ ಹುಡುಗನ ದತ್ತಕವನ್ನು ಮಾಡದೇ ಕಿತ್ತೂರ ದೇಸಗತಿಯನ್ನು ನೇರ ಬ್ರಿಟಿಷ್ ಆಡಳಿತದಲ್ಲಿ ತರಬಯಸಿದ.

ಆದರೆ ಬ್ರಿಟಿಷರು ಬರುವುದಕ್ಕೆ (1818) ಮುಂಚೆ ಜರುಗಿದ್ದ ದತ್ತಕಗಳ ಸ್ಥಾನಮಾನ ಏನೆಂದು ಇರಬೇಕು? ಇಂಥವು ಸಾಕಷ್ಟು ಇದ್ದುದರಿಂದ 25 ಅಕ್ಟೋಬರ್ 1831ರಲ್ಲಿ ಸರಕಾರವು ಬೇರೊಂದು ಹುಕುಮನ್ನು ಹೊರಡಿಸಿ.

As the Government admits that children adopted should succeed to lnam lands. But with regard to Jagirs, no adoption can have any effect unless it is expressly so declared by Govt.

'ಇನಾಮ' ಮತ್ತು 'ಜಹಗೀರು' ಇವುಗಳ ಅಂತರವನ್ನೂ ತುಸು ವಿವರಿಸಬೇಕು. ಇನಾಮ ಜಮೀನು ಆಸ್ತಿ ವಂಶಪಾರಂಪರ್ಯವಾಗಿ ಬಂದಿರುವಂತಹದು. ಜನ್ಮ ಜಾತವಾಗಿ ಅದರ ಹಕ್ಕುದಾರಿಕೆ ಪ್ರಾಪ್ತವಾಗುವುದು. ದೇಸಾಯಿಗಳು, ದೇಸ ಪಾಂಡೆಗಳು, ಇತರ ಸಂಸ್ಥಾನಿಕರು ಈ ಸದರಿಯಲ್ಲಿ ಬರುವರು. ಅದೇ 'ಜಹಗೀರ' ಎನ್ನುವುದು. ಸರಕಾರವು ವ್ಯಕ್ತಿಯೊಬ್ಬ ತನಗೆ ಸಲ್ಲಿಸಿದ ಸೇವೆ ಪ್ರತಿಫಲವೆಂದು ಉದಾರವಾಗಿ ಕೊಟ್ಟಿರುವಂತಹದು. ಪಟೇಲರು, ಕುಲಕರ್ಣಿಗಳು, ಕೊತ್ವಾಲರು ಇದರಡಿಯಲ್ಲಿ ನಿಲ್ಲುತ್ತಾರೆ.

ದತ್ತಕ ಪೂರ್ವದ ಅಥವಾ ಅನಂತರದ ಆಸ್ತಿಯ ವಿಲೇವಾರಿಯ ಸಾಧಕ ಬಾಧಕಗಳನ್ನು ತಿಳಿಯಲು, ಸರಕಾರವು ಮಾಹಿತಿಯನ್ನು ಸಂಗ್ರಹಿಸಿ, ಅದೇ ಆಗ ನೇಮಕವಾಗಿದ್ದ, ಮತ್ತು ಇಂಥ ಸಂದಿಗ್ಧಗಳನ್ನು ಪರಿಹರಿಸಲು ಅನುಜ್ಞೆಯನ್ನು

ಹೊಂದಿದ್ದ ಇನಾಮ ಕಮೀಶನ್ನಿಗೆ ಕಳಿಸಿಕೊಟ್ಟಿತು. ಅದರ ಕಮೀಷನರ್ ಆಗಿದ್ದ ಹಾರ್ಟ್ ಈ ಕುರಿತು ತನ್ನ ವರದಿಯನ್ನು ಸಾದರಪಡಿಸಿದ. (27 ಮಾರ್ಚ್ 1847). ಅದರಲ್ಲಿ ಇನಾಮ ಆಸ್ತಿಯ ದಾನ/ವಿಕ್ರಯಗಳಿಗೂ ಸರಕಾರದ ಪೂರ್ವಾನುಮತಿ – ಬೇಕೆಂದು ಸ್ಪಷ್ಟಪಡಿಸಿದ್ದಾರೆ.

ಮರುವರ್ಷ (29 ಮಾರ್ಚ್ 1848) ಹಾಟ್ ದತ್ತಕ ವಿಧಿಯ ಪೂರ್ವಾಪರಗಳನ್ನು ಕುರಿತು ಇಡೀ ಪ್ರಾಂತಕ್ಕೆ ಅನ್ವಯಿಸುವ ಸವಿವರ ನಿಯಮಾವಳಿಯನ್ನು ಸಿದ್ಧಗೊಳಿಸಿ ಸರಕಾರಕ್ಕೆ ಹಾಜರುಪಡಿಸಿದನು. ಅದರ ಒಂದು ಮೋಜೆಂದರೆ ಈ ನಿಯಮಾವಳಿಯ 'ಗಟ್ಟಿತನ' (Efficacy) ಅಥವಾ ಯುಕ್ತಾಯುಕ್ತತೆಯನ್ನು ಪರೀಕ್ಷೆಗೆ ಒಳಪಡಿಸಲು, ಮೊದಲು ಅವನ್ನು ಮುಂಬಯಿ ಕರ್ನಾಟಕ ಪ್ರದೇಶದಲ್ಲಿ ಪ್ರಯೋಗಿಸಿ ನೋಡಬೇಕು ಎಂಬುದು. ಇದನ್ನೆ ತಳಹದಿಯಾಗಿಟ್ಟುಕೊಂಡು ಇಡೀ ದೇಶಕ್ಕೆ ಅನ್ವಯಿಸುವ 'The Hindu Law of Adoption' 1879ರಲ್ಲಿ ಸಿದ್ಧವಾಯಿತು.

ವಿಧವೆಯರು ದತ್ತಕ ತೆಗೆದುಕೊಳ್ಳುವುದು

ಹೆಚ್ಚಿನ ತೊಡಕುಗಳು ವಿಧವೆಯರು ದತ್ತಕ ತೆಗೆದುಕೊಳ್ಳ ಹೊರಟಾಗ ತೋರಿಬಂದುಉವು. ನಮ್ಮ ಸಮಾಜದ ನಡವಳಿಕೆಯಲ್ಲಿ ಗಂಡಸು ತನಗೆ ಬೇಕೆಂದವರನ್ನು ದತ್ತು ತೆಗೆದುಕೊಳ್ಳುವನು. ಅದಕ್ಕೆ ಅವನ ಸಹಧರ್ಮಿಣಿಯ ಒಪ್ಪಿಗೆ ಸ್ವಯಂಸಿದ್ಧವಾದದ್ದಾಗುತ್ತಿತ್ತು. ಆದರೆ ತನಗೆ ಬೇಕೆಂದವನನ್ನು ದತ್ತು ತೆಗೆದುಕೊಳ್ಳುವುದು ಸುಲಭವಿರಲಿಲ್ಲ. ತನ್ನ ಖಾಸ ತವರಿನವರನ್ನೊ ಅಥವಾ ಯಾರಯಾರನ್ನೊ ಆಕೆ ದತ್ತು ತೆಗೆದುಕೊಂಡು, ಆಸ್ತಿ ಇನ್ನೆಲ್ಲಿಯೋ ಹರಿದು ಹೋಗಬಾರದೆಂದು, ಆಗಿನ ಅವಿಭಕ್ತ ಕುಟುಂಬದ ಇತರ ಹಿರಿಯರಾಗಲೀ ಸವತಿಯರಾಗಲೀ ಸಮ್ಮತಿಸದೇ ಹೋಗಬಹುದು. (ಆಸ್ತಿ ವಂತ ತನಗೆ ಮಕ್ಕಳಿಲ್ಲದಾಗ ಇನ್ನೊಂದು ಎರಡು ಹೆಚ್ಚಿನ ಹೆಣ್ಣನ್ನು ತರತ್ತಿದ್ದುದು ಸ್ವಾಭಾವಿಕವೇ ತಾನೇ.) ಅಂತೂ ಕುಟುಂಬದಲ್ಲಿ ಅವಳ ದುಯ್ಯಮ ಸ್ಥಾನ ವಿಧವೆಯ ದತ್ತಕ ವಿಚಾರಗಳಿಗೆ ಅಡ್ಡ ಗಾಲು ಹಾಕಬಹುದಿತ್ತು. ಸಾಲದ್ದಕ್ಕೆ ಈ ಮೊದಲು ಹೇಳಿದಂತೆ ಸ್ಮೃತಿಗಳಲ್ಲಿಯ ದತ್ತಕ ವಿಷಯದ ಟೀಕಾಗ್ರಂಥಗಳು ಪರಸ್ಪರ ವಿರೋಧರೂಪದ ನಿಲುವನ್ನು ತಳೆದದ್ದು ಬ್ರಿಟಿಷರಿಗೆ ಬಗೆಹರಿಯದ ಸಮಸ್ಯೆಯಾದದ್ದುಂಟು.

ಬ್ರಿಟಿಷರ ಆಡಳಿತದ ಸುರುವಾತಿಗೆ ತಲೆದೋರಿದ ದತ್ತಕ ಸಮಸ್ಯೆಗಳು ಬಂದಾಗ, ಶಾಸ್ತ್ರಿಗಳನ್ನು ಕೇಳುವ ಪರಿಪಾಠ, ಪುಣೆಯಲ್ಲದೆ ಇತರ ಕಡೆಗಳಿಗೂ ನಡೆದು ಬಂದ ಪ್ರಸಂಗಗಳಿವೆ. ಉದಾಹರಣೆಗೆ ರಲೆಕ್ಟರ್ ಥ್ಯಾಕರೆ ಹುಬ್ಬಳ್ಳಿಯ ಓರ್ವ ಶಾಸ್ತ್ರಿಗಳನ್ನು ಈ ರೀತಿ–ಕೇಳಿ ಉತ್ತರ ಪಡೆದನೆಂದು ಒಂದೆಡೆ ದಾಖಲೆಗೊಂಡಿದೆ (1820).

ಪ್ರಶ್ನೆ: ಸಾಯುವಾಗ ಗಂಡನ್ನು ದತ್ತಕ ತೆಗೆದುಕೊಳ್ಳುವ ಬಗ್ಗೆ ಏನೂ ಹೇಳದಿದ್ದಾಗ ವಿಧವೆಯಾದ ಹೆಂಡತಿ ದತ್ತು ತೆಗೆದುಕೊಳ್ಳಬಹುದೊ? ಈ ರೀತಿ ದತ್ತು ಹೋದವನಿಗೆ ಆಸ್ತಿಯ ಹಕ್ಕುದಾರಿಕೆ ಪ್ರಾಪ್ತವಾಗುವದೊ?

ಉತ್ತರ: 'ಧರ್ಮಸಿಂಧು'ವಿನ ಪ್ರಕಾರ ಆಕೆ ದತ್ತಕ ತಗೊಳ್ಳಬಹುದು. ಆದರೆ ನಂದ ಪಂಡಿತನು ಇದನ್ನು ಒಪ್ಪುವುದಿಲ್ಲ. ಗಂಡನ ಒಪ್ಪಿಗೆ ಇಲ್ಲದಂಥ ಯಾವ ಕೆಲಸವನ್ನೊ ಆಕೆ ಮಾಡಬಾರದು, ಎನ್ನುತ್ತಾನೆ. ಅದೇ ವಿಜ್ಞಾನೇಶ್ವರನು, ವಿಧವೆ ದತ್ತಕ ತಗೊಳ್ಳುವರೆ ಸಾಯುವ ಮುಂಚೆ ಗಂಡನು ಅದಕ್ಕೆ ಒಪ್ಪಿರಬೇಕು–ಎನ್ನುತ್ತಾರೆ. ಏನಿದ್ದರೂ ನಮ್ಮ ಭಾಗದ (ಮುಂಬಯಿ ಪ್ರಾಂತ) ಪದ್ಧತಿಯು ವಿಧವೆಯು ದತ್ತಕ ತೆಗೆದುಕೊಳ್ಳಬಹುದೆಂತಲೇ ಹೇಳುತ್ತದೆ.

ಪ್ರಶ್ನೆ : ಹಾಗಿದ್ದರೆ ಕೆಲವು ಉದಾಹರಣೆಗಳನ್ನು ಕೊಡುವಿರ?

ಉತ್ತರ : ರಾಮದುರ್ಗ ಸಂಸ್ಥಾನದಲ್ಲಿ, ಸಂಸ್ಥಾನಿಕ ಗೋವಿಂದರಾಯನು ತೀರಿಕೊಂಡಮೇಲೆ ವಿಧವೆ ರಾಧಾ ಬಾಯಿಯು ರಾಮರಾವ ಎಂಬನನ್ನು ದತ್ತಕ ತೆಗೆದು ಕೊಂಡಿದ್ದಾಳೆ. ಜಾಲಿಹಾಳ ದೇಸಗತಿಯಲ್ಲಿ, ವಿಧವೆ ಕೊಂಡಿದ್ದಾಳೆ. ಜಾಲಿಹಾಳ ದೇಸಗತಿಯಲ್ಲಿ, ವಿಧವೆ ಲಕ್ಷ್ಮವ್ವನೂ ಹಾಗೇ ಮಾಡಿದ್ದಾಳೆ. ಆದರೆ ದತ್ತಕ ಹೋದ ಲಕ್ಷ್ಮವ್ವನೂ ಹಾಗೇ ಮಾಡಿದ್ದಾಳೆ. ಆದರೆ ದತ್ತಕ ಹೋದ ಪಟೇಲ, ಕುಲಕರ್ಣಿಗಳು ಸರಕಾರದ ವಿರುದ್ಧ ಏನಾದರೂ ಮಾಡಿದ್ದರೆ, ಅವರ ಆಸ್ತಿಯನ್ನು ಸರಕಾರವು ವಶಪಡಿಸಿ ಕೊಂಡಿದೆ. ಮತ್ತು ನಜರಾಣಿಯನ್ನು ಕೊಟ್ಟ ಮೇಲೆ ಅವರ ಆಸ್ತಿಯನ್ನು ಮರಳಿ ಕೊಟ್ಟದ್ದುಂಟು.

ಒಟ್ಟಿನಲ್ಲಿ ಮುಂಬಯಿ ಸರಕಾರವು ವಿಧವೆಯರ ದತ್ತಕ ವಿಧಿಯನ್ನು ಮಾನ್ಯ ಮಾಡುವ ಒಲವನ್ನೆ ತೋರಿದೆ.

ಪ್ರಕೃತ ಮುಂಬಯಿ ಕರ್ನಾಟಕಕ್ಕೆ ಸಂಬಂಧಿಸಿದ 1820ರ ದಶಕದ ಎರಡು ದತ್ತಕ ಪ್ರಕರಣಗಳನ್ನು ನೋಡುವಾ.

1. ಡಂಬಳ ದೇಸಾಯಿಣಿ

ಈ ಭಾಗದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಮೊದಲು ಸಿಡಿದೆದ್ದ ಸಂಸ್ಥಾನವೆಂದರೆ ಡಂಬಳ. ಕ್ರಿ.ಶ. 1800ರಲ್ಲಿ ನರ್ಕಲ್ ವೆಲ್ಲಸ್ಲಿಯು ಮರಾಠಾ ಸೈನ್ಯದೊಡನೆ ಸೇರಿ ಡಂಬಳ ಕೋಟೆಯನ್ನು ಗೆದ್ದು ಕೊಂಡನು. ಆದ ಕಾರಣ ಡಂಬಳ ದೇಸಾಯಿಯು ಧುಂಡಿಯಾ ವಾಘನಿಗೆ ಆಶ್ರಯ ನೀಡಿದ್ದುದು. ಕೋಟೆಯು ವಶವಾಗಿ ಡಂಬಳದ ವೆಂಕಪ್ಪ ದೇಸಾಯಿಯು ಸೆರೆ ಸಿಕ್ಕ ಮೇಲೆ ವೆಲ್ಲಸ್ಲಿಯು ಅವನನ್ನು ಗಲ್ಲಿಗೇರಿಸಿದನು. ತಾನು ಮಾಡಿದ್ದುದು ತಪ್ಪೆಂದು ತೋರಿತು-ವೆಲ್ಲಸ್ಲಿಗೆ. ಅವನು ಇಂಗ್ಲೆಂಡಿಗೆ ಹಿಂತಿರುಗುವ ಮುಂಚೆ, ವೆಂಕಪ್ಪನಾಯಕನ ಹೆಂಡತಿಯು ದತ್ತಕ ತೆಗೆದುಕೊಳ್ಳುವುದಕ್ಕೂ ಆ ಹುಡುಗನು ಡಂಬಳದ ಬಹದ್ದೂರದೇಸಾಯಿ ಎಂಬ ಬಿರುದನ್ನೂ, ದೇಸಗತಿಯ ಹಕ್ಕುದಾರಿಕೆಯನ್ನೂ ಪಡೆಯುವುದಕ್ಕೆ ಸಮ್ಮತಿಸಬೇಕೆಂದು ಬರೆದಿಟ್ಟು ಹೋದನು. ಆ ಪ್ರಕಾರ ವಿಧವೆ ಮಥುರಾಬಾಯಿಯು ಶಿವಪ್ಪ ಎಂಬವನನ್ನು ದತ್ತಕ ತೆಗೆದುಕೊಂಡಳು.

ಯಾವಾಗ ಥ್ಯಾಕರೆ ಧಾರವಾಡ ಸುಭಾದ ಆಡಳಿತವನ್ನು ವಹಿಸಿಕೊಂಡನೋ ಆಗಿನಿಂದ ಈ ದತ್ತಕವನ್ನು ಅಲ್ಲಗಳೆದು, ದೇಸಗತಿಯನ್ನು ಮುಣಗಿಸಬೇಕೆಂದೇ ಎಣಿಸಿದ ಕಮೀಶನರ್ ಚಾಪ್ಲಿನ್‌ಗೆ ಪತ್ರ ಬರೆದನು(30-7-1820).ಅವನು ಕೊಟ್ಟ ಕಾರಣವೆಂದರೆ ವೆಲ್ಲಸ್ಲಿಯದು ಸಾಮಾನ್ಯ ಸ್ವರೂಪದ ಅನುಮತಿ ಇತ್ತಲ್ಲದೆ, ಶಿವಪ್ಪನೆಂಬ ಹುಡುಗನನ್ನು ದತ್ತು ತೆಗೆದುಕೊಳ್ಳಲೆಂದು ಸರಕಾರದ ಪೂರ್ವಾನುಮತಿಯನ್ನು ಪಡೆದಿಲ್ಲ-ಎಂಬುದಾಗಿತ್ತು! ಈ ಉದ್ದೇಶವನ್ನಿಟ್ಟುಕೊಂಡು ಇತರರಿಗೂ ಅನ್ವಯಿಸುವ ಒಂದು ಜಾಹೀರನಾಮೆಯ ಕರಡನ್ನೂ ಸಿದ್ದಗೊಳಿಸಿದನು! ಮುಂದೆ 1824ರಲ್ಲಿ ಕಿತ್ತೂರ ಸಂಸ್ಥಾನವನ್ನೂ ಇದೇ ರೀತಿ ಮುಣುಗಿಸಬೇಕೆನ್ನುವ ಅವನ ಮನೀಷೆಗೆ ಇದು ಸಮರ್ಥನೆಯನ್ನು ಕೊಡಬಲ್ಲುದು. ಡಾಲ್ ಹೌಸಿಯ ನೀತಿಯನ್ನು ಮೂರು ದಶಕಗಳ ಹಿಂದೆಯೇಥ್ಯಾಕರೆ ಸಾಹೇಬನು ಕಾರ್ಯಾಚರಣೆಗೆ ತರುವ ಹವಣಿಕೆಯಲ್ಲಿದ್ದನೆಂದ ಹಾಗಾಯಿತಲ್ಲವೆ!

ಚಾಪ್ಲಿನ್ ಮಾತ್ರ ಅದಕ್ಕೆ ಅನುಮತಿ ಕೊಡಲಿಲ್ಲ. 4-8-1820ರಂದು ಆತ ಥ್ಯಾಕರೇಗ ಈ ರೀತಿ ಉತ್ತರಿಸಿದ:

For the reasons, however Stated by you I am unwilling to set aside the adoption by the widow of the Dumbal desaee. But with a view to prevent these irregulartities in future, the proclamaion you recommend may be issued.

ಈ ಜಾಹೀರನಾಮೆಯನ್ನು ಈ ಹಿಂದೆ ಪ್ರಸ್ತಾಪಿಸಿದ್ದಾಗಿದೆ.

2. ರಂಗಾಪುರ ದತ್ತಕ ಪ್ರಕರಣ

ಡಂಬಳದ ಹತ್ತಿರವೇ ಇರುವ ಊರು ಈ ರಂಗಾಪುರ. ಅಲ್ಲಿಯ ಮಹಾಪುರುಷ ಮನೆತನದವರು ಆ ಹಳ್ಳಿಯನ್ನು ಇನಾಮ ರೂಪದಲ್ಲಿ ಉಪಭೋಗಿಸುತ್ತಿದ್ದರು. ಕುಟುಂಬದ ಯಜಮಾನ ಶಿವಯ್ಯನು ಗಂಡು ಸಂತಾನವಿಲ್ಲದೆ ತೀರಿಕೊಂಡನು. ಅವನ ಹೆಂಡಂದಿರಾದ ತ್ರಿವೇಣಿ ಮತ್ತು ಪಾರ್ವತಿಯರಲ್ಲಿ ತ್ರೀವೇಣಿಗೆ ಗಂಗಾಬಾಯಿ ಎಂಬ ಮಗಳಿದ್ದಳು. ಆದ್ದರಿಂದ ಹಿರಿಯ ಹೆಂಡತಿಯಾದ ತ್ರಿವೇಣಿಯು ಮಹದೇವಯ್ಯ ಎಂಬವನನ್ನು ದತ್ತಕ ತೆಗೆದುಕೊಂಡಳು. ಅದಕ್ಕೆ ಪಾರ್ವತಿಯ ಸಮ್ಮತಿಯೂ ಇದ್ದಿತು.

ಕೆಲವು ವರ್ಷಗಳಾದ ಮೇಲೆ ತ್ರಿವೇಣಿಗೂ ದತ್ತಕ ಮಗನಿಗೂ ಹೊಂದಿಕೆಯಾಗಲಿಲ್ಲ. ಆಕೆ ತನ್ನ ಮಗಳು ಗಂಗಾಬಾಯಿ ಮಗನನ್ನು ದತ್ತಕ ತೆಗೆದುಕೊಳ್ಳಬಯಸಿದಳು. ಆದರೆ ಇದಕ್ಕೆ ಜ್ಞಾತಿಗಳ ಹಾಗೂ ಸವತಿಯ ಒಪ್ಪಿಗೆ ಇರಲಿಲ್ಲ. ಆದರೂ ಹಟಹಿಡಿದು, ತ್ರಿವೇಣಿಯು ನೆರೆಯ ಊರಾದ ಬಿದರ ಹಳ್ಳಿಯಲ್ಲಿ (ಇದು ಪಟವರ್ಧನರ ಶಿರಹಟ್ಟಿ ಸಂಸ್ಥಾನದ ಹದ್ದಿನಲ್ಲಿ ಇದ್ದುದರಿಂದ) ದತ್ತಕ ವಿಧಿಯನ್ನು ನಡೆಸಲಾಯಿತು. ಇನ್ನು ಆಸ್ತಿ ಗಂಗಾಬಾಯಿಯ ಮನೆತನಕ್ಕೆ ಹೋಗುವುದಾಯಿತಲ್ಲ!

ಮೋಜೆಂದರೆ ದತ್ತಕ ವಿಧಿಯ ಕಾಲಕ್ಕೆ ತ್ರಿವೇಣಿ ಬಿದಹಳ್ಳಿಗೆ ಹೋಗಿರಲಿಲ್ಲ. (ಏನಿದ್ದರೂ ವಿಧವೆಯೇ ನೇರವಾಗಿ ದತ್ತಕ ವಿಧಿಯಲ್ಲಿ ಭಾಗವಹಿಸ ಬರುವುದಿಲ್ಲ.) ಗಂಗಾಬಾಯಿ ಹಾಗೂ ಅವಳ ಗಂಡನೂ ಹೋಗಿರಲಿಲ್ಲ.

ಅದೇ ಆಗ ಅಧಿಕಾರ ಸ್ಥಾನ ವಹಿಸಿದ್ದ (1818) ಬ್ರಿಟಿಷ ಸರಕಾರಕ್ಕೆ ಇದೆಲ್ಲ ಹೊಸತು. 12 ಜನ ಸದ್ಗೃಹಸ್ಥರ ಪಂಚಾಯತಿಯನ್ನು ಧಾರವಾಡದಲ್ಲಿ ನೆರೆಸಿದರು.

ವಿಚಾರಣೆಯ ಆರಂಭಕ್ಕೆ ಮೊದಲ ದತ್ತಕದ ಹುಡುಗ ನನ್ನು ಸ್ವಗೋತ್ರದಿಂದ ಯಾಕೆ ತರಲಿಲ್ಲ, ತೀರ ಹೊರಗಿನವನನ್ನು ತಂದದ್ದೇಕೆ, ಎಂಬ ಪ್ರಶ್ನೆಯೂ ಬಂದಿತು. ಅವನ ಉಪನಯನವೂ ನಿರ್ಣಯಕ್ಕೆ ಬರುವಲ್ಲಿ ಪ್ರಸ್ತಾಪಿಸಲ್ಪಟ್ಟಿತ್ತು. ಸಂಬಂಧಪಟ್ಟವರ ಗೈರುಹಾಜರಿಯೂ ಚರ್ಚಾಸ್ಪದವೆನಿಸಿತು. ಕೊನೆಗೆ ಶಾಸ್ತ್ರಾಧಾರವನ್ನು ಹುಡುಕಿ, ಮೊದಲ ದತ್ತಕವು ಕಾನೂನು ರೀತ್ಯಾ ಮತ್ತು ಶಾಸ್ತ್ರರೀತ್ಯಾ ಸಿಂಧುವಾಗಿ ಇರುವಾಗ ಇನ್ನೊಂದು ದತ್ತಕ ಹುಡುಗನ್ನು ತರುವುದಕ್ಕೆ ಶಾಸ್ತ್ರ ಸಮ್ಮತಿಯಿಲ್ಲ–ಎಂದು ಪಂಚಾಯ್ತಿಯು ನಿರ್ಧರಿಸಿತು.

ಇಂಥವೇ ಸೂಕ್ಷ್ಮ ಸಮಸ್ಯೆಗಳುಳ್ಳ ಹಲವಾರು ವಾಜ್ಯ ಸರಕಾರದ ಮುಂದೆ ಬಂದವು. ವಿಶೇಷತ: ಇನಾಮ ಕಮೀಷನ್ನಿನ ಆಸ್ತಿಯ ಹಕ್ಕುದಾರಿಕೆಯನ್ನು ನಿರ್ಣಯಿಸುವಾಗ ಇವುಗಳ ಹೆಚ್ಚಳ ಕಂಡುಬರುತ್ತದೆ. ಈ ಭಾಗದ ಅತ್ಯಂತ ದೊಡ್ಡ ವ್ಯಾಜ್ಯವೆಂದರೆ, ಕುರ್ತಕೋಟಿ, ಗೌಡರ ಮನೆತನದ್ದು, ಅವರೇನು ಮಹಾ ಶ್ರೀಮಂತರಲ್ಲ. ಆದರೂ ಅತ್ಯಂತ ತುರುಸಿನಿಂದ ಹಲವಾರು ವರ್ಷಗಳವರೆಗೆ ಎರಡೂ ಪಕ್ಷಗಳು ಹೋರಾಡಿದುವು. 19ನೇ ಶತಮಾನದ ಕೊನೆಯಲ್ಲಿ ಈ ವ್ಯಾಜ್ಯವು ಲಂಡನ್ನಿನ ಪ್ರೀನಿಕೌನ್ಸಿಲ್‌ವರೆಗೂ ಹೋಗಿ ಬಂದಿತು!

ಸೂಚನೆ: ಮಹಾರಾಷ್ಟ್ರ ರಾಜ್ಯ ಪತ್ರಾಗಾರದ ಹಲವಾರು ದಾಖಲೆಗಳನ್ನು ಪರಿಶೀಲಿಸಿ ಅವುಗಳ ಆಧಾರದಿಂದ ಸಿದ್ಧವಾದ ಲೇಖನದು.

❑

ಉತ್ತರಕನ್ನಡ ಜಿಲ್ಲೆಯಲ್ಲಿ ಬೌದ್ಧ ಧರ್ಮ

– ಡಾ. ಗಣಪತಿಗೌಡ. ಎಸ್

ಉತ್ತರ ಕನ್ನಡ ಜಿಲ್ಲೆಯ ಉದ್ದಗಲಕ್ಕೂ ಸಂಚರಿಸಿದಂತೆ ಮೂಲೆ ಮೂಲೆಗೂ ಸಿಗುವ ಹಾಳಾದ ಗುಡಿ, ಶಿಲಾಶಾಸನ, ವೀರಗಲ್ಲು, ಅಧೋಗತಿಯಲ್ಲಿರುವ ಕೋಟೆ ಕೊತ್ತಲಗಳು, ಹಿಂದೂ, ಬೌದ್ಧ ಮತ್ತು ಜೈನ ಮೂರ್ತಿ ವಾಸ್ತುಶಿಲ್ಪಗಳು ಇಲ್ಲಿನ ಗತವೈಭವಕ್ಕೆ ಜೀವಂತ ಸಾಕ್ಷಿಗಳಾಗಿವೆ. ಇಲ್ಲಿ ದೊರೆಯುವ ಬೌದ್ಧಾವಶೇಷಗಳಿಂದ ಜಿಲ್ಲೆಯಲ್ಲಿನ ಬೌದ್ಧ ಧರ್ಮದ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ.

ಈ ಜಿಲ್ಲೆಯಲ್ಲಿನ ಬೌದ್ಧಧರ್ಮದ ಪ್ರಾಚೀನತೆಯನ್ನು ಮೌರ್ಯ ಚಕ್ರವರ್ತಿ ಅಶೋಕನ ಕಾಲಕ್ಕೆ ಕೊಂಡೊಯ್ಯಬಹುದು. ಈ ವಿಚಾರದ ಕುರಿತು ಬೌದ್ಧ ಗ್ರಂಥಗಳಾದ ದೀಪವಂಶ ಮತ್ತು ಮಹಾವಂಶ ಮಾಹಿತಿ ನೀಡುತ್ತವೆ. ಅಶೋಕನ ಕಾಲದಲ್ಲಿ ಮೂರನೇ ಬೌದ್ಧಸಮ್ಮೇಳನವು ಪಾಟಲಿಪುತ್ರದಲ್ಲಿ ಥೇರಮೊಗ್ಗಲಿ ಪುತ್ರನ ನೇತೃತ್ವದಲ್ಲಿ ನಡೆಯಿತು. ಈ ಸಮ್ಮೇಳನದ ನಂತರ ಬೌದ್ಧಧರ್ಮವನ್ನು ನೆರೆಯ ದೇಶಗಳಲ್ಲಿ ಪ್ರಸಾರ ಮಾಡುವುದಕ್ಕಾಗಿ ಅಶೋಕನು ಬೌದ್ಧಭಿಕ್ಷುಗಳನ್ನು ದೇಶದ ನಾನಾ ಭಾಗಗಳಿಗೆ ಕಳುಹಿಸಿಕೊಟ್ಟನು. ಅವರಲ್ಲಿ ಥೇರ ಮಹಾದೇವ ಮತ್ತು ಥೇರ ರಕ್ಷಿತ (ರಕ್ಷಿತ)ರನ್ನು ಬೌದ್ಧ ಧರ್ಮಪ್ರಸಾರಕ್ಕಾಗಿ ಮಹಿಷಮಂಡಲ ಮತ್ತು ವನವಾಸಿಗೆ ಕಳುಹಿಸಲಾಯಿತು. ಆ ಕಾಲದಲ್ಲಿ ಇಂದಿನ ಬನವಾಸಿ, 'ವನವಾಸಿ' ಎಂದು ಪ್ರಸಿದ್ಧಿ ಪಡೆದಿತ್ತು. ಕಾರ್ತಿಕ ಮಾಸದಲ್ಲಿ ರಕ್ಷಿತ ವನವಾಸಿಗೆ ಬಂದು ಅನೇಕ ಜನರನ್ನು ಬೌದ್ಧ ಧರ್ಮಕ್ಕೆ ಮತಾಂತರಗೊಳಿಸಿ ಇಲ್ಲಿ ಬೌದ್ಧ ಧರ್ಮ ಭದ್ರವಾಗಿ ನೆಲೆಯೂರುವಂತೆ ಮಾಡಿದನೆಂದು 'ಮಹಾವಂಶ' ಸಾಬೀತು ಪಡಿಸುತ್ತದೆ.[1]

ಧರ್ಮಪ್ರಚಾರದಲ್ಲಿ ನಿರತರಾಗಿದ್ದ ಭಿಕ್ಷುಗಳು ತಮ್ಮ ಧರ್ಮಾನುಯಾಯಿಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಕಾರ್ಯನಿರತರಾಗಿದ್ದರೆನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ನೀಡಬಹುದು. ಇಕ್ಷ್ವಾಕು ವಂಶದ ವೀರಪುರುಷದತ್ತನ ಆಳ್ವಿಕೆಗೆ ಸೇರಿದ ಸು. ಕ್ರಿ.ಶ. 270ರ ಕಾಲಮಾನದ ನಾಗಾರ್ಜುನಕೊಂಡದ ಶಾಸನದಲ್ಲಿ ಬೌದ್ಧಯತಿಯೋರ್ವ ವನವಾಸಿಯನ್ನೊಳಗೊಂಡಂತೆ ಹಲವು ದೇಶಗಳಲ್ಲಿನ ಜನರನ್ನು ಮತಾಂತರಗೊಳಿಸಿದನೆಂದರೆ2, ಇಲ್ಲಿಯ ಇನ್ನೊಂದು ಚಿಕ್ಕಶಾಸನದ ಪ್ರಕಾರ (ಖಂಂಣ ಕಡುಡಿಣ, ಎಟಿಥಿಡುಠಿಣುಂಟಿ, ಸು. ಕ್ರಿ. ಶ. 3ನೇ ಶತಮಾನದ ಪೂರ್ವಾರ್ಧಕ್ಕೆ ಸೇರಿದ್ದು) ವಿಭಜ್ಜವಾದ ಶಾಖೆಗೆ ಸೇರಿದ ಭಿಕ್ಷುವೊಬ್ಬ ವಿಜಯಪುರಿಯಲ್ಲಿ ನೆಲೆಸಿದ್ದು, ವನವಾಸವನ್ನೊಳಗೊಂಡಂತೆ ಹಲವರನ್ನು ಮತಾಂತರಗೊಳಿಸಿದ ನೆಂದಿದೆ.[3]

ಸಿಂಹಳದ ಚಕ್ರವರ್ತಿ ದುತ್ಥಗಾಮಿನಿ ಕ್ರಿಸ್ತಶಕದ ಆದಿಭಾಗದಲ್ಲಿ ಕಟ್ಟಿಸಿದ ಮಹಾಸ್ತೂಪದ ಆರಂಭೋತ್ಸವಕ್ಕಾಗಿ ದೇಶದ ನಾನಾ ಭಾಗಗಳಿಂದ ಜನರನ್ನೂ ಈತ ಆಮಂತ್ರಿಸಿದ್ದನು. ಈತ ನೀಡಿದ ಆಮಂತ್ರಣವನ್ನು ಮನ್ನಿಸಿ ಬನವಾಸಿಯಿಂದ ಥೇರಚಂದ್ರಗುಪ್ತನ ನೇತೃತ್ವದಲ್ಲಿ 80,000 ಬೌದ್ಧ ಭಿಕ್ಷುಗಳ ಸಿಂಹಳಕ್ಕೆ ಹೋಗಿದ್ದರು.4 ಇಲ್ಲಿಹೇಳಿರುವ ಬೌದ್ಧಭಿಕ್ಷುಗಳ ಸಂಖ್ಯೆಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳಿದ್ದರೂ ಕ್ರಿ.ಪೂ. ಮೂರನೇ ಶತಮಾನ ದಿಂದಲೇ ಬನವಾಸಿ ಬೌದ್ಧ ಧರ್ಮದ ಕೇಂದ್ರವಾಗಿ ಬೆಳೆದು ಬಂದಿತ್ತು ಎನ್ನುವುದನ್ನು ತಳ್ಳಿಹಾಕುವಂತಿಲ್ಲ.

ಕ್ರಿ.ಶ. ಎರಡನೇ ಶತಮಾನದ ಉತ್ತರಾರ್ಧಕ್ಕೆ ಸೇರಬಹುದಾದ ಬ್ರಾಹ್ಮಿಲಿಪಿಯಲ್ಲಿ ಬರೆದ ಪ್ರಾಕ್ತನ ಭಾಷೆಯ ಎರಡು ಸಾಲಿನ ಶಾಸನ. ಇದು 'ಸಿದ್ಧಂ' ಎಂಬ ಸ್ವಸ್ತಿ ಪದದಿಂದ ಆರಂಭವಾಗುವುದು. ಶಾಸನದಲ್ಲಿ ರಾಜನಾದ ವಾಸಿಠಿಪುತ್ರ ಸಿವಸಿರಿ ಪುಳುವಾವಿಯ ಸ್ಮಾರಕ ಶಿಲೆ ಎಂದು ಹೇಳಿದೆ. ಶಾಸನದ ಒಂದು ಬದಿಯಲ್ಲಿ ಉಬ್ಬುಶಿಲ್ಪ ಚೈತ್ಯವಿನ್ಯಾಸದ ಮಾದರಿಯಿರುವುದರಿಂದ ಇದು ಇಲ್ಲಿಯ ಬೌದ್ಧಧರ್ಮದ ಅಸ್ತಿತ್ವಕ್ಕೆ ದೊರಕುವ ಪ್ರಾಕ್ತನ ಆಧಾರ ಎನ್ನುವುದು ವಿದ್ವಾಂಸರ ಅಭಿಪ್ರಾಯ.

ಬನವಾಸಿಯ ಮಧುಕೇಶ್ವರ ದೇವಾಲಯದ ಪ್ರಾಕಾರ ದೊಳಗಿರುವ ನಾಗರ ಪ್ರತಿಮೆಯ ಮೇಲೆ ಕ್ರಿ.ಶ.ಸು. 159ರ ಕಾಲಮಾನಕ್ಕೆ ಸೇರಿದ ಬ್ರಾಹ್ಮಿಲಿಪಿ ಮತ್ತು ಪ್ರಾಕೃತ ಭಾಷೆಯಲ್ಲಿ ಬರೆದ ಶಾಸನವೊಂದಿದೆ. ಇದರ ಪ್ರಕಾರ ಹಾರಿತೀಪುತ್ರ ವಿಣ್ಹುಕಡ ಚುಟುಕುಲಾನಂದ ಶಾತಕರ್ಣಿಯ ಹನ್ನೆರಡನೇ ವರ್ಷದ ಒಂದು ಶುಭದಿನ ರಾಜನ ಮಗಳು, ಮಹಾಭೋಜನ ಹೆಂಡತಿಯಾದ ಶಿವಸ್ಕಂದ ನಾಗಶ್ರೀ ಎಂಬುವಳು ರಾಜಕುಮಾರನೊಂದಿಗೆ ನಾಗ, ತಟಾಕ, ವಿಹಾರಗಳನ್ನು ಅಮಾತ್ಯನಾದ ಸ್ಕಂದಸ್ವಾತಿ (ಖಡಸತಿ)ಯ ಮೇಲ್ವಿಚಾರಣೆಯಲ್ಲಿ ನಿರ್ಮಿಸಿ ದಾನ ಮಾಡಿದಳು. ನಾಗಶಿಲ್ಪವನ್ನು ಸಂಜಯಂತಿ (ಬನವಾಸಿ) ಆಚಾರ್ಯನಾಗಿದ್ದ ದಮೋರಕನ ಶಿಷ್ಯನಾದ ನಟಕ ನಿರ್ಮಿಸಿದನೆಂದಿದೆ.[6]

ಬನವಾಸಿಯಲ್ಲಿ ಬೌದ್ಧ ಧರ್ಮದ ಮಹೀಶಾಸಕ ಶಾಖೆ ರಾಜಾಶ್ರಯ ಪಡೆದುಕೊಂಡಿತ್ತು. ನಾಗಾರ್ಜುನಕೊಂಡದಲ್ಲಿ ದೊರೆತ ಸು.ಕ್ರಿ.ಶ. 291ರ ಕಾಲಮಾನಕ್ಕೆ ಸೇರಬಹುದಾದಶಾಸನದನ್ವಯ ಇಲ್ಲಿಯ ಇಕ್ವಾರು ಕುಲದ ಮಹಾರಾಜ ಎಹವಲ ಚಾಂತಮೂಲನ ಭಗಿನಿ ವೀರಪುರುಷದತ್ತನ ಮಗಳು ಮತ್ತು ಬನವಾಸಿಯ ರಾಜನ ಹೆಂಡತಿ ಮಹೀಶಾಸಕ ಆಚಾರ್ಯರುಗಳಿಗಾಗಿ ನಾಗಾರ್ಜುನ ಕೊಂಡದಲ್ಲಿ ಸ್ತಂಭ ಹಾಗೂ ವಿಹಾರಗಳನ್ನು ಕಟ್ಟಿಸಿದ ಉಲ್ಲೇಖವಿದೆ.7 ಆದರೆ ಬನವಾಸಿಯ ರಾಜನ ಹೆಸರನ್ನು ಶಾಸನ ಪ್ರಸ್ತಾಪಿಸುವುದಿಲ್ಲ. ಈ ಕಾಲದಲ್ಲಿ ಶಾತವಾಹನರು ಇಲ್ಲಿ ಆಳ್ವಿಕೆ ಮಾಡುತ್ತಿದ್ದುದರಿಂದ ಮಹೀಶಾಸಕ ಶಾಖೆಗೆ ಪ್ರೋತ್ಸಾಹ ನೀಡುತ್ತಿದ್ದವರು ಶಾತವಾಹನ ಅರಸರು ಎಂದು ಹೇಳಬಹುದಾಗಿದೆ.

ಮಹಾಭೋಜರ ಕಾಲದ ಶಾಸಮವೊಂದರ ಪ್ರಕಾರ ಬನವಾಸಿಯ ಮಹಾರಾಜ ಮಹಾಭೋಜಿಯ ಮಗಳು, ಮಹಾರಠಿಯ ಹೆಂಡತಿಯೂ, ಖಂಡನಾಗಶತಕ (ಸ್ಕಂದನಾಗಶತಕ)ನ ತಾಯಿಯೂ ಮಹಾಭೋಜ ಅಹಿಜಧೇನಸೇನನ ತಂಗಿಯೂ ಆದ ನಾಗಮೂಲಾನಿಕೆಯು ಕಾವೇರಿಯಲ್ಲಿ ಬೌದ್ಧಭಿಕ್ಷುಗಳಿಗಾಗಿ ಒಂದು ಗುಹಾಲಯ ನಿರ್ಮಿಸಿದ ವಿಚಾರ ತಿಳಿದುಬರುತ್ತದೆ.8 ಶಾಸನ ತಿಳಿಸುವಂತೆ ಬನವಾಸಿಯ ಶ್ರೇಷ್ಠಿಯಾದ ಭೂತಪಾಲನು ಕಾರ್ಲೆಯಲ್ಲಿ ನಿರ್ಮಿಸಿದ ಚೈತ್ಯಾಲಯ ಜಂಬೂದ್ವೀಪದಲ್ಲಿಯೇ ಉತ್ತಮವಾಗಿದೆ. ಇದರಿಂದ ಆ ಕಾಲದಲ್ಲಿ ಕೇವಲ ರಾಜಪರಿವಾರ ದವರಷ್ಟೇ ಅಲ್ಲದೇ ಜನಸಾಮಾನ್ಯರು ಬೌದ್ಧಧರ್ಮಕ್ಕೆ ಕೈ ಬೆಂಬಲ ಹಾಗೂ ಪ್ರೋತ್ಸಾಹ ನೀಡುತ್ತಿದ್ದರೆನ್ನುವುದನ್ನು ತಿಳಿದುಕೊಳ್ಳಬಹುದು.

ಇತ್ತೀಚೆಗೆ ಬನವಾಸಿಯಲ್ಲಿ ಉತ್ಖನನವನ್ನು ಕೈಗೊಳ್ಳಲಾಗಿದೆ. ಇಲ್ಲಿ ಗಜಪೃಷ್ಠಾಕೃತಿಯ ಕಟ್ಟಡಗಳ ಅವಶೇಷಗಳು, ಇಟ್ಟಿಗೆಯ ಎರಡು ಚೈತ್ಯಾಲಯಗಳು, ಸುಟ್ಟ ಮಣ್ಣಿನ ಗೊಂಬೆಗಳು ಮತ್ತು ಮೃತ್ಪಾತ್ರೆಗಳ ಅವಶೇಷಗಳು ದೊರೆತಿವೆ. ಆದರೆ ಸ್ತೂಪದ ಅವಶೇಷಗಳು ಕಂಡುಬಂದಿಲ್ಲ.9 ಇದಕ್ಕೆ ಪೂರಕವಾಗಿ ಮಧುಕೇಶ್ವರ ದೇವಾಸಯದ ಬಳಿಯಲ್ಲಿಯೇ ಮೈತ್ರೇಯ ಬುದ್ಧನ ಒಂದು ವಿಗ್ರಹ ದೊರಕಿದೆ. ಇದು ಲಂಬೋಧಕವಾಗಿದ್ದು, ನಿರಲಂಕೃತವಾಗಿದೆ. ಎಡಗೈಯಲ್ಲಿ ಕಲಶವಿದ್ದರೆ, ಬಲಗೈ, ಧರ್ಮಚಕ್ರ ಮುದ್ರೆಯಲ್ಲಿದೆ. ಇದರಿಂದಾಗಿ ಕ್ರಿ.ಶ. ಆರಂಭದ ಹೊತ್ತಿಗೆ ಬನವಾಸಿಯ ಪರಿಸರದಲ್ಲಿ ಬೌದ್ಧಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತೆಂಬುದು ಡಾ. ಅ. ಸುಂದರರವರ ಅಭಿಪ್ರಾಯ.

ಹೊನ್ನಾವರ ತಾಲೂಕಿನ ಹೈಗುಂದದಲ್ಲಿ ಕುಬ್ಜಯಕ್ಷನ ಎರಡು ಶಿಲ್ಪಗಳು ದೊರೆತಿವೆ.11 ಒಂದು ಶಿಲ್ಪ ಸುಮಾರು ಆರು ಅಡಿ ಎತ್ತರ ಹೊಂದಿದ್ದು ಬಲಗೈ ಮುರಿದಿದೆ. ಎಡಗೈಯನ್ನು ಸೊಂಟದ ಮೇಲಿಡಲಾಗಿದೆ. ಕುಬ್ಜನಂತೆ ಕಾಣುವ ಈ ಶಿಲ್ಪದ ದೊಡ್ಡ ಪ್ರಮಾಣ ಹೊಟ್ಟೆ, ಕಂಠಿಹಾರ, ಅಗಲವಾದ ಮುಖ, ದಪ್ಪನೆಯ ತುಟಿ ಮೊದಲಾದವು ಮೂರ್ತಿಯ ಸೌಂದರ್ಯವನ್ನು ಹೆಚ್ಚಿಸಿದೆ. ಕಾರವಾರ ತಾಲೂಕಿನ ಬಬ್ರುವಾಡದಲ್ಲಿ ದೊರೆತ ಬುದ್ಧನ ಮೂರ್ತಿಯೊಂದು ಯೋಗಮುದ್ರೆಯಲ್ಲಿದೆ. ವಿಶಾಲವಾದ ಎದೆ, ದಷ್ಟಪುಷ್ಟವಾದ ಬಾಹುಗಳು, ಅರ್ಧನಿಮಿಲಿತ ನೇತ್ರ, ನೀಳ ನಾಸಿಕ, ಗುಂಗುರು-ಗುಂಗುರು ತಲೆಕೂದಲು ಮೂರ್ತಿಯ

ವೈಶಿಷ್ಟಗಳು. ಇವುಗಳ ಜೊತೆಗೆ ಬನವಾಸಿಯಲ್ಲಿ ದೊರೆತ ಯಕ್ಷಿಯ ಮೂರ್ತಿಯೊಂದು ಸುಮಾರು ಕ್ರಿ.ಶ. ಎರಡು–ಮೂರನೇ ಶತಮಾನಕ್ಕೆ ಸೇರಿರುವುದರಿಂದ ಈ ಶತಮಾನದಲ್ಲಿನ ಬೌದ್ಧಧರ್ಮದ ಖ್ಯಾತಿಯನ್ನು ಅರಿಯಬಹುದಾಗಿದೆ.12

ಗೋಕರ್ಣ ಸಮೀಪದ ತೊರ್ಕೆಯಲ್ಲಿ ಬೌದ್ದ ಗುಹೆಗಳು ಇದ್ದುದರ ಬಗ್ಗೆ ಕೆ.ಜಿ. ಕುಂದಣಗಾರರು ಗಮನ ಸೆಳೆದರು.13 ಇವರ ಪ್ರಕಾರ ಪ್ರಾಚೀನ ಕಾಲದ 'ತಗರ' (ಮುಖ್ಯ ನಗರ) ಈಗಿನ ತೊರ್ಕ. ವಿದ್ವಾಂಸರು ಮುಂದುವರಿದು ಹೇಳುತ್ತಾ ಕೊಂಕಣದ ಶಿಲಾಹಾರರಿಗೆ 'ತಗರಪುರವರಾಧೀಶ್ವರ' ಎಂಬ ಬಿರುದು ಇದ್ದು ಅವರು ತಮ್ಮನ್ನು ಜೀಮೂತವಾಹನನ ವಂಶದವರೆಂದು ಹೇಳಿಕೊಳ್ಳುತ್ತಾರೆ. ಜೀಮೂತವಾಹನನ ಕಥೆಯಲ್ಲಿ ಹೇಳಿರುವ ತಾರ್ಕ್ಯಪುರ 'ತಗರ' ಆಗಿರಬೇಕೆಂಬುದು ಅವರ ಅನಿಸಿಕೆ.

ಚುಟುಕುಲಾನಂದ ಚಕ್ರವರ್ತಿ ಶಿವಾಲನಂದನ ನಾಣ್ಯದ ಒಂದು ಮಗ್ಗುಲಲ್ಲಿ ಕಲ್ಲುಗುಡ್ಡೆ ಮತ್ತು ಇನ್ನೊಂದು ಮಗ್ಗುಲಲ್ಲಿ ಬೋಧಿವೃಕ್ಷದ ಚಿತ್ರಗಳಿವೆ. ಇವು ಖಚಿತವಾದ ಬೌದ್ಧಧರ್ಮದ ಸಂಕೇತಗಳು ಎನ್ನುವುದು ಡಾ. ರಘುನಾಥ ಭಟ್ಟರ ಅನಿಸಿಕೆ. 14 ಆದುದರಿಂದ ಚುಟುಕುಲಾನಂದರ ಕಾಲದಲ್ಲಿ ಬೌದ್ಧಧರ್ಮ ರಾಜಾಶ್ರಯ ಪಡೆದ ಧರ್ಮವಾಗಿತ್ತೆನ್ನಬಹುದು.

ಬನವಾಸಿಯ ಸಮೀಪದ ಕಾಡಗೋಡು ಎಂಬಲ್ಲಿ 1971ರಲ್ಲಿ ಉತ್ಖನನವನ್ನು ನಡೆಸಲಾಗಿದೆ. ಈ ಉತ್ಖನನದಲ್ಲಿ ಸ್ತೂಪದ ಅವಶೇಷಗಳನ್ನು ಪತ್ತೆಹಚ್ಚಲಾಗಿದೆ. ಇಲ್ಲಿ ದೊರೆತ ಇಟ್ಟಿಗೆಯ ಆಧಾರಗಳಿಂದ ಇದರ ಕಾಲಮಾನವನ್ನು ಕ್ರಿ.ಶ. ಸು. ಎರಡು –ಮೂರನೇ ಶತಮಾನಕ್ಕೆ ಸೇರಿಸಲಾಗಿದೆ.15

ಕದಂಬರ ಕಾಲದಲ್ಲಿಯೂ ಬೌದ್ಧಧರ್ಮ ಜಿಲ್ಲೆಯಲ್ಲಿ ತನ್ನ ಖ್ಯಾತಿಯನ್ನು ಮುಂದುವರಿಸಿಕೊಂಡು ಬಂದಿತ್ತು. ಕದಂಬ ಚಕ್ರವರ್ತಿ ರವಿವರ್ಮನ ಕಾಲದ ಕ್ರಿ.ಶ 485ರ ಹೊನ್ನಾವರದ ಕೇಕಯ ಚಿತ್ರಸೇನ ಮಹಾಕೆಲ್ಲನ ತಾಮ್ರ ಶಾಸನವು "ಸಿದ್ಧಂ ಜಯತ್ಸಮಿತ್ ಗುಣಭದ್ರ್ ಬುದ್ದಸ್ಸತ್ವ ಸಮಾಶ್ರಯಃ ಶುದ್ದೋದನ ಕುಲೋದ್ಭೂತ ಪದ್ಮಪತ್ರ ನಿಭೆಕ್ಷಣಃ ಎಂದು ಪ್ರಾರಂಭವಾಗುತ್ತದೆ. ಕದಂಬರಾಜ ರವಿವರ್ಮನು ಆಳುತ್ತಿದ್ದಾಗ ಆತನ ಆಶ್ರಿತನಾದ ಕೇಕಯ ವಂಶೀಯ ಚಿತ್ರಸೇನನು ಅಂಬುದ್ವೀಪ (ಈಗಿನ ಅಂಜದೀವ್) ಎಂಬಲ್ಲಿ ಕಣಸಪುಕೊಳ್ಳಿಯ ಹೊಲವನ್ನು ಹಾಗೂ ನಾಪಿತಹಳ್ಳಿಯ ತೋಟವನ್ನು ಆಶ್ವಯುಜ ಪೂರ್ಣಿಮೆಯಂದು ಆರ್ಯ ಸಂಘಕ್ಕೆ ದಾನ ನೀಡಿರುವ ವಿಷಯ ತಿಳಿದುಬರುತ್ತದೆ.16 ಈ ಆರ್ಯ ಸಂಘದ ಸದಸ್ಯರು ಬೌದ್ಧ ಧರ್ಮದ ಅಪರಮಹಾವನಶೈಲಿಯ ಶಾಖೆಯೊಂದಿಗೆ ಬೆರೆತಿರುವ ವಿಷಯವು ತಿಳಿದು ಬರುತ್ತದೆ. ನಾಗಾರ್ಜುನಕೊಂಡದಲ್ಲಿನ ಒಂದು ಶಾಸನದಲ್ಲಿಯೂ ಆರ್ಯ ಸಂಘಕ್ಕೆ ಸೇರಿದ್ದ ಬೌದ್ದ ಭಿಕ್ಷು ಅಪರಮಹಾವನ ಶೈಲಿಯ ಶಾಖೆಗೆ ಸೇರಿದ ಕಟ್ಟಡವೊಂದನ್ನು ನಿರ್ಮಿಸಿದ ಉಲ್ಲೇಖವಿದೆ. ಮಹಾ ಸಾಂಘಿಕರಲ್ಲಿ ಅಪರಮಹಾವನ ಶೈಲಿಯ ಒಂದು ಶಾಖೆ ಎಂದು ಹೇಳಲಾಗಿದೆ.[17]

ಕಾರವಾರ ಸಮೀಪದ ದೀಪಕ ನಾಡಿನ ಸುಂದರಿಕಾ ಎಂಬ ಹೆಸರಿನ ಗ್ರಾಮವನ್ನು ವಿಹಾರ ಮತ್ತು ಸಂಘಗಳಿಗೆ ದಾನ ನೀಡಿದ ವಿವರಗಳನ್ನು ಅಂಕೋಲಾ ತಾಲೂಕಿನ ಹಿರೇಗುತ್ತಿಯ ಭೋಜ ಅಶಂಕಿತವರ್ಮನ ಶಾಸನ ತಿಳಿಸುತ್ತಿದೆ.18 ಕಾರವಾರದ ಬಬ್ರುವಾಡದಲ್ಲಿರುವ ಕುಳಿತ ಬುದ್ಧದ ವಿಗ್ರಹ ಸುಮಾರು ಇದೇ ಶತಮಾನಕ್ಕೆ ಸೇರಿದ್ದಾಗಿದೆ.[19]

ಕದಂಬರ ನಂತರ ಬೌದ್ಧಧರ್ಮ ಈ ಭಾಗದಲ್ಲಿ ಹೆಚ್ಚು ಉಚ್ಛ್ರಾಯ ಸ್ಥಿತಿಯಲ್ಲಿದ್ದಂತೆ ಕಂಡುಬರುವುದಿಲ್ಲ. ಅಂದಮಾತ್ರಕ್ಕೆ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿತ್ತು ಎನ್ನುವ ಹಾಗಿಲ್ಲ. ಕ್ರಿ.ಶ. ಆರನೇ ಶತಮಾನದ ಹೊತ್ತಿಗೆ ಕೊಂಕಣಪುರಕ್ಕೆ ಭೇಟಿ ನೀಡಿದ್ದ ಚೀನಾದ ಯಾತ್ರಿಕ ಹ್ಯೂಯೆನ್‌ತ್ಸಾಂಗ್ ಹೇಳುವ ಪ್ರಕಾರ ಇಲ್ಲಿ 100 ಬೌದ್ಧ ಸಂಘಾರಾಮಗಳು ಮತ್ತು 10,000ಕ್ಕು ಹೆಚ್ಚು ಬೌದ್ಧ ಅನುಯಾಯಿಗಳಿದ್ದಾರೆ. ರಾಜರ ಅರಮನೆಯ ಬಳಿ 300 ಭಿಕ್ಷುಗಳಿರುವ ದೊಡ್ಡ ಸಂಘಾರಾಮ ಇದೆ. ಇವರು ಸಾಹಿತ್ಯ ಮತ್ತು ಪ್ರತಿಭೆಗೆ ಹೆಸರಾಗಿದ್ದವರು. ಈ ವಿಹಾರದಲ್ಲಿ ಎರಡು ಅಡಿ ಎತ್ತರದ ಸಿದ್ಧಾರ್ಥನ ತಲೆಬುರುಡೆ ಇದೆ. ಇದನ್ನು ಸೊಗಸಾಗಿ ಅಲಂಕರಿಸಿದ ಕರಂಡದಲ್ಲಿಟ್ಟಿದ್ದಾರೆ. ಪ್ರತಿ ಉಪವಾಸದ ದಿನ ಇದನ್ನು ಹೊರತೆಗೆದು ಭಕ್ತಿಯಿಂದ ಪೂಜೆ ಸಲ್ಲಿಸುತ್ತಾರೆ. ನಗರದ ಬಳಿ ಇನ್ನೊಂದು ವಿಹಾರ ಇದೆ. ಅಲ್ಲಿ ಗಂಧದ ಮರದಲ್ಲಿ ಕಡೆದಿರುವ ಹತ್ತು ಅಡಿ ಎತ್ತರದ ಮೈತ್ರೇಯನ ವಿಗ್ರಹವಿದೆ. ಇದು ಆಗಾಗ್ಗೆ ಪ್ರಜ್ವಲಿಸುತ್ತಿರುತ್ತದೆ. ಈ ವಿಹಾರವನ್ನು 20 ದಶಲಕ್ಷ ಅರ್ಹಂತರು

ಕಟ್ಟಿದರು ಎಂದಿದ್ದಾನೆ.[20] ಹ್ಯೂಯೆತ್‌ತ್ಸಾಂಗ್ ಭೇಟಿ ನೀಡಿದ ಕೊಂಕಣ ಪುರವನ್ನು ಬನವಾಸಿ ಎಂದು ಗುರುತಿಸಲಾಗಿದೆ. ಆದರೆ ಹ್ಯೂಯೆನ್‌ತ್ಸಾಂಗ್ ಭೇಟಿ ನೀಡಿರುವ ಕೊಂಕಣಪುರ ಕೊಂಕಣ-900ರಲ್ಲಿನ ಒಂದು ಪ್ರಮುಖ ಪ್ರದೇಶವಾಗಿರಬೇಕು. ಇದರ ಅನ್ವೇಷಣೆಗೆ ಇನ್ನೂ ಹೆಚ್ಚಿನ ಸಂಶೋಧನೆ ಅವಶ್ಯವಿದೆ.

ಒಟ್ಟಿನಲ್ಲಿ ಕ್ರಿ.ಶ. 8-9ನೇ ಶತಮಾನದವರೆಗೆ ಬೌದ್ಧಧರ್ಮ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿತ್ತು. ಆ ಸಮಯಕ್ಕೆ ಅದ್ವೈತವನ್ನು ಉಳಿಸಿಕೊಂಡು ಬಂದಿತ್ತು. ಆ ಸಮಯಕ್ಕೆ ಅದ್ವೈತ ಸಿದ್ಧಾಂತದ ಆಗಮನ, ಜೈನಮತದ ಪ್ರಾಬಲ್ಯ, ಭಕ್ತಿಯೇ ಪ್ರಾಧಾನವಾದ ಕೆಲವು ಧರ್ಮಗಳ ಉದಯ ಇವೆಲ್ಲವೂ ಬೌದ್ದ ಧರ್ಮ ಪುನಃ ತಲೆ ಎತ್ತದಂತೆ ನೋಡಿಕೊಳ್ಳುವಲ್ಲಿ ಪ್ರಧಾನಪಾತ್ರ ವಹಿಸಿದವು. ಅನ್ಯಧರ್ಮಗಳ ಹೊಡೆತದಿಂದ ಅಳಿವು-ಉಳಿವಿಗಾಗಿ ಬೌದ್ಧಧರ್ಮ ಹೋರಾಡಬೇಕಾಗಿ ಬಂದಾಗ ತನ್ನ ತತ್ತ್ವಗಳನ್ನು ಸರಳಗೊಳಿಸುವುದು ಮಾತ್ರವಲ್ಲದೇ ಭಕ್ತಿಪ್ರಧಾನವೂ ಆಗುವುದು ಅನಿವಾರ್ಯವಾಯಿತು. ಈ ದಿಕ್ಕಿನಲ್ಲಿ ಅದು ಪ್ರಯತ್ನಿಸಿ ಯಶಸ್ವಿಯೂ ಆಯಿತು. ಬನವಾಸಿ ಈ ಸುಧಾರಿತ ಬೌದ್ಧಮತದ ಕೇಂದ್ರವಾಗಿ ಈ ಭಾಗದಲ್ಲಿ ಹನ್ನೊಂದನೆಯ ಶತಮಾನದವರೆಗೆ ಮುಂದುವರೆಯಿತು. ಬಳ್ಳಿಗಾವೆಯ ಶಾಸನವೊಂದರಲ್ಲಿ ಕಲ್ಯಾಣಿ ಚಾಳುಕ್ಯ ಚಕ್ರವರ್ತಿ ಅಹವಮಲ್ಲನ ಮಂತ್ರಿ ರೂಪಭಟ್ಟಯ್ಯನು ಜಯಂತಿ ಪ್ರಬುದ್ಧವಿಹಾರವೆಂಬ ಬೌದ್ಧ ವಿಹಾರವನ್ನು ಕಟ್ಟಿಸಿದನೆಂದು ಹೇಳಿದಂತಿದೆ. ಇಲ್ಲಿ ಬುದ್ಧನಿಗಿಂತ ತಾರಾಭಗವತಿ ಮತ್ತು ಅವಲೋಕಿತೇಶ್ವರ ಪ್ರಧಾನ ಸ್ಥಾನ ಪಡೆದಿದ್ದುದರಿಂದ ವಜ್ರಾಯಾನ ಶಾಖೆಯು ಇಲ್ಲಿ ಖಚಿತರೂಪ ಪಡೆಯುವಂತಾಯಿತು.[21]

ಬನವಾಸಿಯ ವಸ್ತುಸಂಗ್ರಹಾಲಯದಲ್ಲಿ ಈಗ ಇಟ್ಟಿರುವ ತಾರಾಭಗವತಿಯ ಭಗ್ನಮೂರ್ತಿಯು ವಿಶಿಷ್ಟವಾಗಿದೆ. ಕಲ್ಯಾಣಿ ಚಾಳುಕ್ಯರ ಕಾಲಕ್ಕೆ ನಿಗದಿಗೊಳಿಸಬಹುದಾದ ಈ ಮೂರ್ತಿಯ ರುಂಡವಷ್ಟೇ ಲಭ್ಯ. ಮುಕುಟ ಮಧ್ಯದಲ್ಲಿ ಧ್ಯಾನಿಬುದ್ಧನ ಆಕಾರವನ್ನು ಕಡೆದಿರಿಸಲಾಗಿದೆ. ಇದರ ಕರ್ಣಕುಂಡಲ, ಕಂಠಹಾರ, ಕಿರೀಟದ ಎಲ್ಲಾ ಅಲಂಕಾರವೂ ಸೊಗಸಾಗಿದೆ. ಮುಖ್ಯದಲ್ಲಿ ಆಧ್ಯಾತ್ಮಿಕ ತೇಜಸ್ಸಿದೆ. ಬನವಾಸಿಯಲ್ಲಿದ್ದ ವಜ್ರಯಾನ ಪರಂಪರೆಗೆ ಇದು ಸಾಕ್ಷಿ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ.[22]

ಅಂತಿಮವಾಗಿ ಹೇಳುವುದಾದರೆ ಬೌದ್ಧ ಧರ್ಮ ಉತ್ತರಕನ್ನಡ ಜಿಲ್ಲೆಗೆ ಮೌರ್ಯಚಕ್ರವರ್ತಿ ಅಶೋಕನ ಕಾಲದಲ್ಲಿ ಪಾದಾರ್ಪಣೆ ಮಾಡಿ ಶಾತವಾಹನ-ಚುಟುಕುಲಾನಂದರ ಕಾಲದಲ್ಲಿ ರಾಜಾಶ್ರಯ ಪಡೆದ ಧರ್ಮವಾಗಿ ಬೆಳೆಯಿತು. ಕದಂಬರು, ಬಾದಾಮಿ ಚಾಳುಕ್ಯರು ಮತ್ತು ರಾಷ್ಟ್ರಕೂಟರ ಕಾಲದವರೆಗೆ ತನ್ನ ಅಸ್ತಿತ್ವವನ್ನುಳಿಸಿಕೊಂಡು ಬಂದು ಕಲ್ಯಾಣಿ ಚಾಳುಕ್ಯರು ಹಾಗೂ ಅನಂತರದ ಕಾಲದಲ್ಲಿ ತಾಂತ್ರಿಕ ಬೌದ್ಧಧರ್ಮಕ್ಕೆ ಪ್ರೇರಣೆ ನೀಡಿತು. ಸುಮಾರು ಹದಿಮೂರನೇ ಶತಮಾನದ ಹೊತ್ತಿಗೆ ಅನೇಕ ಬಾಹ್ಯ ಶಕ್ತಿಗಳ ಹೊಡೆತದ ವಿರುದ್ಧ ಹೋರಾಡುತ್ತಾ ಕೊನೆಗೆ ಸಂಪೂರ್ಣವಾಗಿ ನಾಮಾವಶೇಷಗೊಂಡಿತು.

ವಿಜಯನಗರ ಅರಸರ ಕಾಲದ ಹೊತ್ತಿಗೆ ಇದು ಹೇಳ ಹೆಸರಿಲ್ಲದಾಯಿತು. ಹಿಂದೂ ದೇವಾಲಯದಲ್ಲಿನ ದಶಾವತಾರ ಶಿಲ್ಪಗಳಲ್ಲಿ ಬುದ್ದನನ್ನು ಒಂಬತ್ತನೇ ಅವತಾರವೆಂದು ಪರಿಗಣಿಸಲಾಯಿತು. ಇದಕ್ಕೆ ಉಹಾಹರಣೆಯಾಗಿ ಸೋಂದಾದಲ್ಲಿನ ಹುಣಸೆಹೊಂಡದ ವೆಂಕಟೇಶ್ವರ ದೇವಾಲಯದಲ್ಲಿನ ದಶಾವತಾರ ಶಿಲ್ಪವನ್ನು ಗಮನಿಸಬಹುದು. ಈ ಜಿಲ್ಲೆಯಲ್ಲಿನ ಮುಖ್ಯ ಬೌದ್ಧನೆಲೆಗಳೆಂದರೆ ಬನವಾಸಿ, ಗೋಕರ್ಣ, ತೊರ್ಕೆ, ಹೈಗುಂದ, ಬಬ್ರುವಾಡ ಕಾಡಗೋಡು ಮೊದಲಾದ ಸ್ಥಳಗಳು.

ಆಧಾರಸೂಚಿ ಮತ್ತು ಟಿಪ್ಪಣಿಗಳು

1. Giegerwilhem., Mahavamsa or the Great Chronicle of Ceylon, Colombo, Ch. XII, P. 82
2. krishna K.G. Uttankita Sanskrit Vidya Aranya Epigraphs. Vol. II, No. 185
3. Ibid, No. 191. and El Vol. XXXIII, P. 247-250.
4. ವಸಂತಕೂಮಾರ್ ತಾಳ್ತಜೆ., ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ಪು. 54.
5. ರಘುನಾಥ ಭಟ್ ಎಚ್.ಆರ್. ಕರ್ನಾಟಕ ಶಾಸನ ಕಲೆ. ಪು. 5-9

6. EI., Vol. XXXIV, PP. 239-242; Krishna K.G. Uttankrit Vidya Aranya Epigraphs, Vol-11.N. 184
7. Ibid., No. 201
8. ವಸಂಕುಮಾರ್ ತಾಳ್ವಜೆ., ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ಪು. 81.
9. A. Sundara., "Some Note worthy Antiquities from Banavasi Area" QJMS, VOl. LXX, No. III, PP. 164-170.
10. ಅ. ಸುಂದರ., 'ಬನವಾಸಿಯ ಕೆಲವು ಅಪೂರ್ವ ಪ್ರಾಚೀನ ಶಿಲ್ಪಗಳು', ಕರ್ನಾಟಕ ಭಾರತಿ, ಸಂ XX 1-3-4, ಪು. 149–150.
11. ಅ. ಸುಂದರ., 'ಇತ್ತೀಚಿನ ಕೆಲವು ಪುರಾತತ್ವ ಶೋಧನೆಗಳು', ಕರ್ನಾಟಕ ಭಾರತಿ, ಸಂ VIII-2, ಪು. 10–22.
12. A. Sundara., op. cit., pp. 164-170.
13. ಕುಂದಣಗಾರ ಕೆ.ಜಿ. ಸಾಹಿತ್ಯ ಪರಿಷತ್ಪತ್ರಿಕೆ, ಸಂ. 19–3(1935)
14. ಡಾ. ರಘುನಾಥ ಭಟ್ ಎಚ್. ಆರ್. ಕರ್ನಾಟಕ ಶಾಸನ ಕಲೆ ಪು. 5–9
15. A. Sundara. op.cit., pp 164-170.
16. Gopal B.R., Corpus of Kadamba inscriptions No I, No. 17.
17. Dutt Nalinksha, Buddhist sects in india, P. 126.
18. EI. VoI. XXXIII, P. 70-75.
19. ಅ. ಸುಂದರ., 'ಉತ್ತರ ಕನ್ನಡ ಜಿಲ್ಲೆಯ ಕೆಲವು ಅಪೂರ್ವ ಶಿಲ್ಪಗಳು', ಮಾನವಿಕ ಭಾರತಿ, ಸಂ. ಖಖಖ–2, ಪು. 10–22.
20. Water Thomas, On Yuan Chuang's Travels in india, pp. 237-38.
21. ತಾಳ್ತಜೆ ವಸಂತಕುಮಾರ., ಕರ್ನಾಟಕದಲ್ಲಿ ಬೌದ್ಧ ಸಂಸ್ಕೃತಿ, ಪು. 88.
22. Bhat Raghunath H.R., "Tarabhagavati from Banavasi and Balligave" Journal of Karnataka University Social Sciencs., Vol. XXII.

❑

ಚಂದಾವರ ಕದಂಬ ವೀರಕಾವದೇವ ಮತ್ತು ಶಿವಚಿತ್ತ ವೀರಕಾವದೇವನ ನಾಗೂರು ಶಿಲಾಶಾಸನಗಳು

– ಡಾ. ಗಣಪತಿಗೌಡ. ಎಸ್.

ಇತ್ತೀತೆಗೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನಲ್ಲಿ ನಾನು ಕ್ಷೇತ್ರ ಕಾರ್ಯ ಅನ್ವೇಷಣೆ ಕೈಗೊಂಡಿದ್ದಾಗ ಈ ತಾಲೂಕಿನ ಮಿರ್ಜಾನಿನಿನಿಂದ ಪೂರ್ವಕ್ಕೆ 5 ಕಿ.ಮೀ. ದೂರದಲ್ಲಿರುವ ನಾಗೂರಿನಲ್ಲಿ ಎರಡು ಶಿಲಾಶಾಸನಗಳು ಬೆಳಕಿಗೆ ಬಂದವು. ಇಲ್ಲಿಯ ವಿಷ್ಣುದೇವಾಲಯ ಬಲ ಮತ್ತು ಎಡಪಾರ್ಶ್ವದಲ್ಲಿ ಒಂದೊಂದು ಶಿಲಾಶಾಸನವಿದೆ. ಬಲಪಾಶ್ವದಲ್ಲಿರುವ ಶಾಸನದ ಮುಂಭಾಗದಲ್ಲಿ 14ನೇ ಶತಮಾನದ ಲಿಪಿಯಿದ್ದರೆ, ಹಿಂಬದಿಯಲ್ಲಿ ತಿಗಳಾರಿ ಲಿಪಿಯಿದೆ. ಎಡಪಾರ್ಶ್ವದಲ್ಲಿರುವ ಶಾಸನ ಕೇವಲ ಕನ್ನಡ ಭಾಷೆಯನ್ನಷ್ಟೇ ಹೊಂದಿದ್ದರೂ ಇದರ ಅಕ್ಷರದ ಗಾತ್ರ ವಿನ್ಯಾಸದಲ್ಲಿ ತುಂಬಾ ಅಸ್ಪಷ್ಟತೆ ಇದೆ. ಇಲ್ಲಿಯ ಎರಡು ಶಾಸನಗಳಲ್ಲಿನ ಕನ್ನಡ ಪಾಠಗಳನ್ನು ಮಾತ್ರ ಅಧ್ಯಯನಕ್ಕೆ ಅಳವಡಿಸಲಾಗಿದೆ. ಶಾಸನಗಳ ಮೇಲ್ಭಾಗ ಅರ್ಧವೃತ್ತಾಕಾರ ವಾಗಿದ್ದು, ಮೇಲ್ಭಾಗದಲ್ಲಿ ಚಂದ್ರ –ಸೂರ್ಯರ ಸಂಕೇತ, ಶಿವಲಿಂಗ, ಅರ್ಚಕ, ನಂದಿ ಮತ್ತು ಬಿಲ್ಲು ಬಾಣ ಧರಿಸಿರುವ ವ್ಯಕ್ತಿಗಳನ್ನು ಚಿತ್ರಿಸಲಾಗಿದೆ.

ಶಾಸನದ ಕಾಲ: ಬಲಪಾರ್ಶ್ವದಲ್ಲಿರುವ ಮೊದಲನೆಯ ಶಾಸನ ಶಿವಚಿತ್ತವೀರಕಾವದೇವನ ಆಳ್ವಿಕೆಯ 59ನೇ ವರ್ಷ ತಾರಣ ಸಂವತ್ಸರದ ಕಾರ್ತಿಕ ಶುದ್ಧ ಆದಿತ್ಯವಾರವಾಗಿದೆ. ಈ ಕಾಲಮಾನ ಕ್ರಿ.ಶ. 1404ನೇ ಅಕ್ಟೋಬರ್ 5ನೇ ರವಿವಾರಕ್ಕೆ ಸರಿ ಹೊಂದುತ್ತದೆ.

ಎಡಪಾರ್ಶ್ವದಲ್ಲಿರುವ ಎರಡನೇ ಶಾಸನದಲ್ಲಿ ಶ್ರೀ ವೀರಕಾವದೇವರಸನ ಆಳ್ವಿಕೆಯ ಸರ್ವಧಾರಿ ಸಂವತ್ಸರ ಕಾರ್ತಿಕ ಶುದ್ಧ ಆದಿತ್ಯವಾರದ ಉಲ್ಲೇಖವಿದೆ. ಆಳ್ವಿಕೆಯ ವರ್ಷ ಸ್ಪಷ್ಟವಿಲ್ಲ. ಈ ವಿವರ ಕ್ರಿ.ಶ. 1408 ನವ್ಹೆಂಬರ್ 17ನೇ ಶನಿವಾರಕ್ಕೆ ಸರಿಹೊಂದುತ್ತದೆ.

ಶಾಸನಗಳ ಸಾರಾಂಶ

ಮೊದಲನೆಯ ಶಾಸನದಲ್ಲಿ 34 ಸಾಲುಗಳಿವೆ. ಗಣಾಧಿಪತಿಗೆ ನಮನದೊಂದಿಗೆ ಮತ್ತು 'ನಮಸ್ತುಂಗ' ಇತ್ಯಾದಿ ಶಿವಸ್ತುತಿಯೊಂದಿಗೆ ಇದು ಆರಂಭಗೊಂಡಿದೆ. ಮೊದಲ ಭಾಗದಲ್ಲಿ ಸಮಧಿಗತ ಪಂಚಮಹಾಶಬ್ಧ, ಮಹಾಮಂಡಲೇಶ್ವರ, ಬನವಾಸಿ ಪುರವರಾಧೀಶ್ವರ ಜಯಂತೀ ಮಧುಕೇಶ್ವರದೇವರ ಲಬ್ಧವರ ಪ್ರಸಾದ, ಹರಧರಣೀ ಪ್ರಸೂತ, ಮುಕ್ಕಣ್ಣ ಕದಂಬ ವಂಶಜ ಪಶ್ಚಿಮ ಸಮುದ್ರಾಧಿಪತಿ ಶ್ರೀ ಗೋಕರ್ಣ ಮಹಾಬಳೇಶ್ವರ ದೇವರ ದಿವ್ಯ ಶ್ರೀಪಾದ ಪದ್ಮಾರಾಧಕನಾದ ಶಿವಚಿತ್ತ ವೀರಕಾವದೇವನ ಆಳ್ವಿಕೆಯ 59ನೇ ವರ್ಷ ತಾರಣ ಸಂವತ್ಸವರದ ಕಾರ್ತಿಕ ಶುದ್ಧಬ ಆದಿತ್ಯವಾರದ ಉಲ್ಲೇಖವಿದೆ. ಅಂದು ನಾಘೂರಬಬ ಮಾನಿಸ ಪ್ರಭುಗಳು ಒಮ್ಮತದಿಂದ ವಿನಾಯಕ ದೇವರು, ವಿಷ್ಣುದೇವರು ಮತ್ತು ಮಹಾದೇವರುಗಳಿಗೆ ಸಂಬಂಧಿಸಿದಂತೆ ಆದಾಯಗಳನ್ನು ನಿರ್ದಿಷ್ಟಪಡಿಸಿ ಬೋರಿವಾಳ ಪರಿಷೆಯ ಶ್ರೀ ಪ್ರಕಾಶತೀರ್ಥ ಶ್ರೀಪಾದಂಗಳಿಗೆ ಧಾರಾಪೂರ್ವಕವಾಗಿ ಬಿಟ್ಟದ್ದಾಗಿ ತಿಳಿಸುತ್ತದೆ. ವಿನಾಯಕ ದೇವರು ಮತ್ತು ವಿಷ್ಣುದೇವರ ಶಾಂತಿಗೆ, ಗಣಪತಿಯ ಹೋಮಕ್ಕೆ

ಭೂಮಿಯಿಂದ ಬರುವ ಆದಾಯಗಳನ್ನು ನೀಡಲಾಗಿದೆ. ಇದಲ್ಲದೇ ವೀರಕಾವದೇವರಸನು ಗ್ರಹಣ ಕಾಲದಲ್ಲಿ ಮಹಾಬಳ ದೇವರ ಮುಂದೆ ನೈವೇದ್ಯ, ನಂದಾದೀಪ ಇತ್ಯಾದಿ ಗಳಿಗಾಗಿ ದಾನ ನೀಡಿದ ಉಲ್ಲೇಖವೂ ಇದೆ.

ಎರಡನೇ ಶಾಸನದಲ್ಲಿಯೂ, ಮೇಲ್ಭಾಗದಲ್ಲಿ ಅರ್ಧಚಂದ್ರಾಕಾರವಾಗಿದ್ದು, ಮೊದಲನೇ ಶಾಸನದಲ್ಲಿ ಕಂಡುಬರುವ ಎಲ್ಲಾ ಶಿಲ್ಪಗಳೂ ಇವೆ. ಈ ಉಬ್ಬುಶಿಲ್ಪದ ಕೆಳಗಡೆ ಕನ್ನಡ ಲಿಪಿಯಲ್ಲಿರುವ ಮೂವತ್ತು ಸಾಲುಗಳ ಶಾಸನವಿದೆ. ಅಕ್ಷರಗಳ ಗಾತ್ರ, ರೂಪಗಳು ಒಂದೇ ತೆರನಾಗಿರದೇ ಕೆಲವೆಡೆ ಸ್ಪಷ್ಟವೂ ಇನ್ನು ಕೆಲವೆಡೆ ಅಸ್ಪಷ್ಟವೂ ಇದೆ. ಗಣಪತಿ, ಸರಸ್ವತಿ, ದೇವತೆಗಳ ನಮನದೊಂದಿಗೆ ಆರಂಭಗೊಂಡು 'ನಮಸ್ತುಂಗ' ಇತ್ಯಾದಿ ಶಿವಸ್ತುತಿಯನ್ನು ಒಳಗೊಂಡಿದೆ. ನಂತರ ಸಮಧಿಗತ ಪಂಚಮಹಾಶಬ್ಧ ಮಹಾಮಂಡಳೇಶ್ವರ, ಬನವಾಸಿ ಪುರವರಾಧೀಶ್ವರ, ಶ್ರೀ ಗೋಕರ್ಣ ಮಹಾಬಳದೇವರ ದಿವ್ಯಶ್ರೀ ಪಾದಪದ್ಮಾರಾಧಕ, ಪಶ್ಚಿಮ ಸಮುದ್ರಾಧಿಪತಿ, ಅರಿರಾಯರ ಗಂಡರ ದಾವಣಿ ಬಿರುದಾಂಕಿತ ಶ್ರೀ ವೀರಕಾವದೇವರಸನು ಗೋಕರ್ಣ ಮಹಾಬಳ ದೇವರ ಸಂವಿಧಾನದಲ್ಲಿ ಬೋರಿವಾಳ ಪರುಷೆಯ ಅಗಸ್ತ್ಯಾಶ್ರಮ ಶ್ರೀಪಾದಂಗಳ ಶಿಷ್ಯ ಶ್ರೀ ಪ್ರಕಾಶತೀರ್ಥ ಶ್ರೀಪಾದಂಗಳಿಗೆ ವಿನಾಯಕ ಮತ್ತು ವಿಷ್ಣುದೇವರ ಪೂಜಾಪುನಸ್ಕಾರಗಳಿಗಾಗಿ ಕೆಲವು ಆದಾಯಗಳನ್ನು ದಾನ ಬಿಟ್ಟಿದ್ದಾಗಿ ತಿಳಿಸುತ್ತದೆ. ನಾಘೂರ ಪ್ರಭುಗಳ ಉಲ್ಲೇಖವೂ ಇದೆ. ಆದರೆ ಈ ಭಾಗದಲ್ಲಿ ಶಾಸನದ ಅಕ್ಷರಗಳು ಬಹಳ ಅಸ್ಪಷ್ಟವಿದೆ.

ಶಾಸನಗಳ ಮಹತ್ವ

ಪ್ರಸ್ತುತ ಎರಡು ಶಾಸನಗಳನ್ನು ಗಮನಿಸಿದರೆ ಇವು ಚಂದಾವರ ಕದಂಬರ ಶಾಸನಗಳೆಂಬುದು ಸ್ಪಷ್ಟವಿದೆ. ಮೊದಲ ಶಾಸನದಲ್ಲಿ ಶಿವಚಿತ್ತ ವೀರಕಾವದೇವರಸನ ಉಲ್ಲೇಖವಿದೆಯಾದರೆ, ಎರಡನೇ ಶಾಸನದಲ್ಲಿ ವೀರಕಾವದೇವರಸನ ಉಲ್ಲೇಖವಿದೆ. ಎರಡೂ ಶಾಸನದಲ್ಲಿಯೂ ಶ್ರೀ ಪ್ರಕಾಶತೀರ್ಥ ಶ್ರೀಪಾದರ ಉಲ್ಲೇಖವಿರುವುದರಿಂದ ಮತ್ತು ಇವೆರಡು ಶಾಸನಗಳ ನಡುವೆ ಸಂವತ್ಸರಗಳಲ್ಲಿ ಕೇವಲ ನಾಲ್ಕು ವರ್ಷ ಅಂತರ ವಿರುವುದರಿಂದ ವೀರಕಾವದೇವ ಮತ್ತು ಶಿವಚಿತ್ತ ವೀರಕಾವದೇವ ಒಬ್ಬನೇ ಆಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ.

ಈ ಮೇಲಿನ ಎರಡೂ ಶಾಸನಗಳು ಮತ್ತು ಈಗಾಗಲೇ ಈತನ ಆಳ್ವಿಕೆಗೆ ಸಂಬಂಧಿಸಿದಂತೆ ದೊರೆತ ಶಿಲಾಶಾಸನಗಳ ಆಧಾರದಿಂದ ಶಿವಚಿತ್ತ ವೀರಕಾವದೇವರಸನ ಇತಿಹಾಸವನ್ನು ಈ ಕೆಳಗಿನಂತೆ ಪುನಾರಚಿಸಬಹುದು. ಈತನ ತಂದೆಯಾದ ಶಿವಚಿತ್ತ ಬಸವಿದೇವರಸನು ಚಂದಾವರದಿಂದ ಆಳ್ವಿಕೆ ಮಾಡುತ್ತಿದ್ದುದಕ್ಕೆ ದಾಖಲೆಗಳಿವೆ.1 ಇದನ್ನು ನೋಡಿದರೆ ಇವರಿಬ್ಬರ ಜಂಟಿ ಆಳ್ವಿಕೆ ಈ ಭಾಗದಲ್ಲಿದ್ದುದು ಮನದಟ್ಟಾಗುತ್ತದೆ. ಕ್ರಿ.ಶ. 1378ರ ಹೊತ್ತಿಗೆ ಈತನ ತಂದೆ ಬಸವೀದೇವ ಪ್ರಭಾವಶಾಲಿಯಾಗಿ ಚಂದ್ರಿಕಾಪುರದಿಂದ ಆಳ್ವಿಕೆ ಮಾಡುತ್ತಿದ್ದ ವಿಷಯವನ್ನು ಗೇರುಸೊಪ್ಪೆಯಲ್ಲಿನ ಶಾಸನ ಪ್ರಸ್ತಾಪಿಸುತ್ತಿದೆ.2 ಹೀಗಾಗಿ ಬಹುಶಃ ಶಿವಚಿತ್ತ ಕಾವದೇವ ರಾಜಧಾನಿ ಚಂದ್ರಿಕಾಪುರದ ವಿಷಯದಲ್ಲಿ ತನ್ನ ತಂದೆಯೊಂದಿಗೆ ಹಸ್ತಕ್ಷೇಪ ಮಾಡಿದಂತೆ ಕಂಡುಬರುವುದಿಲ್ಲ.

ಪ್ರಸ್ತುತ ಈ ಲೇಖನದಲ್ಲಿ ಚರ್ಚಿಸಿರುವ ಎರಡೂ ಶಾಸನಗಳು ವೀರಕಾವದೇವನ ಆಳ್ವಿಕೆಗೆ ಸೇರಿದ್ದು ಕ್ರಮವಾಗಿ ಕ್ರಿ.ಶ. 1404 ಮತ್ತು ಕ್ರಿ.ಶ. 1408ಕ್ಕೆ ಸರಿಹೊಂದುತ್ತದೆ. ಕ್ರಿ.ಶ. 1408ರ ಶಾಸನ ಈತನ 59ನೇ ವರ್ಷದ ಆಳ್ವಿಕೆಯನ್ನು ಹೇಳಿರುವುದರಿಂದ ಈತ ಕ್ರಿ.ಶ. 1949–50 ರಲ್ಲಿ ಪಟ್ಟಕ್ಕೆ ಬಂದಿರುವುದು ಸ್ಪಷ್ಟವಾಗುತ್ತದೆ. ಈತನ ಆಳ್ವಿಕೆಗೆ ಸೇರಿದ ಉಪ್ಪಲೆಯ ಮೂರು ವೀರಗಲ್ಲು ಶಾಸನಗಳು ಸರ್ವಧಾರಿ ಸಂವತ್ಸರದಲ್ಲಿ ಹೊರಡಿಸಲ್ಪಟ್ಟಿದ್ದು ಕ್ರಿ.ಶ. 1349ಕ್ಕೆ ಸರಿಹೊಂದುವುದರಿಂದ ಇದು ಆತನ ಆಳ್ವಿಕೆಯ ಮೊದಲನೆ ವರ್ಷ ಎಂದು ತಿಳಿಯಬಹುದು. ಈ ಶಾಸನಗಳನ್ವಯ ನಗಿರೆಯ ಕೋಟೆಯರಸ ನಡಿಮನಾಡಿನಲ್ಲಿಯ ಕಡಿಮೆಯ ಮೇಲೆ ಆಕ್ರಮಣ ಮಾಡಿದ್ದುದರಿಂದ ಎರಡೂ ಬಣಗಳಿಗೆ ಮರವಳಿಯೂರಿನಲ್ಲಿ ಯುದ್ಧ ನಡೆಯಿತು. ಈ ಯುದ್ಧದಲ್ಲಿ ಸಾತವಳಿಯ ಬಂಕೇಯ ನಾಯಕ ಮರಣವನ್ನಪ್ಪಿದನು4. ಕ್ರಿ.ಶ. 1354ಕ್ಕೆ ಸೇರುವ ಮೊಗಟಾ ವೀರಗಲ್ಲಿನಲ್ಲಿ ಕಾವದೇವನ ಸೈನ್ಯ ವೈರಿಗಳೊಂದಿಗೆ ಹೋರಾಡುವಾಗ ಮಡಿದ ವೀರನನ್ನು ಪ್ರಸ್ತಾಪಿಸಿದೆ. ಈ ಶಾಸನ ಕಾವದೇವನ ಆಳ್ವಿಕೆಯ ಮೂರನೇ ವರ್ಷಕ್ಕೆ ಸೇರಿದ್ದಾಗಿದೆ.5

ಸಾಮ್ರಾಜ್ಯ ವಿಸ್ತರಣೆಗಾಗಿ ಹೋರಾಟ

ಕ್ರಿ.ಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ನಂತರ ಪಶ್ಚಿಮ ಕರಾವಳಿಯಲ್ಲಿನ ತಮ್ಮ ಸಾಮ್ರಾಜ್ಯವಿಸ್ತರಣೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದರು. ಕ್ರಿ.ಶ. 1347ರಲ್ಲಿ ಕರಾವಳಿ ಪ್ರದೇಶದ ಮೇಲೆ ಪ್ರಾಬಲ್ಯ ಸಾಧಿಸುವುದಕ್ಕಾಗಿ ಚಂದ್ರಗುತ್ತಿಯಿಂದ ಆಳ್ವಿಕೆಮಾಡುತ್ತಿದ್ದ ವಿಜಯನಗರದ ದೊರೆ ಹರಿಹರನ ಸಹೋದರನಾಗಿದ್ದ ಮಾರಪ್ಪ ಒಡೆಯ ದಿಗ್ವಿಜಯ ಕೈಗೊಂಡನು. ಮುನ್ನುಗ್ಗಿ ಬರುತ್ತಿರುವ ಮಾರಪ್ಪನ ಸೈನ್ಯವನ್ನು ಚಂದಾವರ ಕದಂಬರ ಸೈನ್ಯ ತಡೆದಿದ್ದುದರಿಂದ ಎರಡೂ ಬಣಗಳ ಮಧ್ಯೆ ಯುದ್ಧ ಏರ್ಪಟ್ಟಿತು. ಈ ಯುದ್ಧದಲ್ಲಿ ವಿಜಯನಗರದ ಸೈನ್ಯವನ್ನು ಎದುರಿಸಲಾಗದ ಕದಂಬರ ಸೈನ್ಯ ಸೋಲನ್ನನುಭವಿಸಿತು. ಕದಂಬ ದೊರೆಯನ್ನು ಸೋಲಿಸಿದ ನಂತರ ಮಾರಪ್ಪ ಒಡೆಯ ಗೋಕರ್ಣಕ್ಕೆ ಭೆಟ್ಟಿ ನೀಡಿ ಸಮುದ್ರದಲ್ಲಿ ಸ್ನಾನ ಮಾಡಿ ಶಿವನಿಗೆ ಪೂಜೆ ಸಲ್ಲಿಸಿ, ಪಿತೃಗಳಿಗೆ ಅರ್ಪಣೆ ನೀಡಿ ಬ್ರಾಹ್ಮಣರಿಗೆ ಭೂಮಿ, ಬಂಗಾರ, ಗೋವುಗಳನ್ನು ದಾನ ನೀಡಿದನು. ಈ ಮಾಹಿತಿಯನ್ನು ನೀಡುವ ಶಾಸನದಲ್ಲಿ ಕದಂಬ ದೊರೆಯ ಹೆಸರಿನ ಪ್ರಸ್ತಾಪವಿಲ್ಲ.6 ಆದರೆ ಮಾರಪ್ಪ ಒಡೆಯ ಈ ಭಾಗದಲ್ಲಿ ದಿಗ್ವಿಜಯ ಕೈಗೊಂಡಾಗ ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಚಂದಾವರ ಕದಂಬ ದೊರೆ ಬಸವಿದೇವರಸನಾಗಿದ್ದನು. ಬಹಶಃ ಈತನೇ ವಿಜಯನಗರ ಸೈನ್ಯದಿಂದ ಸೋತ ಕದಂಬ ದೊರೆಯಾಗಿರಬೇಕು. ಈ ಸೋಲಿನ ನಂತರ ಚಂದಾವರ ಕದಂಬ ದೊರೆಗಳು ಘಟ್ಟದ ಮೇಲಿನ ಸಾರ್ವಭೌಮತ್ವವನ್ನು ಕಳೆದುಕೊಂಡಿರಬೇಕು.

ನಂತರ ವಿಜಯನಗರ ಅರಸರು ತಮ್ಮ ಸಾಮಂತರಾಗಿದ್ದ ಗೇರುಸೊಪ್ಪೆ (ನಗಿರೆ)ಯ ಸಾಳ್ವರಿಗೆ ಚಂದಾವರದ ಕದಂಬರನ್ನು ಹತ್ತಿಕ್ಕಲು ಆದೇಶ ಮಾಡಿರಬಹುದು ಅಥವಾ ತಮ್ಮ ನೆರೆಯಲ್ಲಿ ಪರಮವೈರಿಯಾಗಿದ್ದ ಇನ್ನೊಂದು ಮನೆತನದ ಅಸ್ತಿತ್ವ ಸಾಳ್ವರಿಗೆ ಬೇಕಾಗಿರಲಿಲ್ಲ. ಹೀಗಾಗಿ ಒಂದು ಕಡೆ ಗೇರುಸೊಪ್ಪೆಯ ಸಾಳ್ವರು, ಇನ್ನೊಂದು ಕಡೆ ದಕ್ಷಿಣ ಕನ್ನಡದಲ್ಲಿ ವಿಜಯನಗರದ ಗವರ್ನರನಾಗಿದ್ದ ಮಹಾಪ್ರಧಾನ ಮಲೆಯ ದಂಡನಾಯಕ7 ಚಂದಾವರ ಕದಂಬರ ಪ್ರಾಬಲ್ಯಕ್ಕೆ ಬಲವಾದ ಪೆಟ್ಟುಕೊಡಲು ಪ್ರಾರಂಭಿಸಿದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಹೈವೆ–500ರ ಭಾಗದ ಮೇಲೆ ಚಂದಾವರ ಕದಂಬರು ಹಿಡಿತ ಇಟ್ಟುಕೊಂಡಿದ್ದಕ್ಕೆ ನಾಗೂರಿನಲ್ಲಿ ದೊರೆತ ಪ್ರಸುತ್ತ ಶಾಸನಗಳು ಆಧಾರ ಒದಗಿಸುತ್ತವೆ. ಈ ಶಾಸನದನ್ವಯ ಶಿವಚಿತ್ತ ವೀರಕಾಮದೇವರಸನು ಗೋಕರ್ಣ ಮಹಾಬಳದೇವರ ಸನ್ನಿದಾನದಲ್ಲಿ ಬೋರಿವಾಳ ಪರಿಷೆಯ ಅಗಸ್ತ್ಯಶ್ರಮ ಶ್ರೀಪಾದಂಗಳ ಶಿಷ್ಯ ಶ್ರೀಪ್ರಕಾಶ ತೀರ್ಥಶ್ರೀಪಾದಗಳಿಗೆ ವಿನಾಯರ ಮತ್ತು ವಿಷ್ಣುದೇವರ ಪೂಜೆ–ಪುನಸ್ಕಾರಗಳಿಗಾಗಿ ಕೆಲವು ದತ್ತಿ ಬಿಟ್ಟಿದ್ದಿದಾಗಿ ತಿಳಿಸಿದೆ. ಹೀಗೆ ವಿಜಯನಗರ ಮತ್ತು ಅವರ ಮಾಂಡಲಿಕರ ಪ್ರಭಾವದ ಮಧ್ಯೆಯೂ ತನ್ನ ಪ್ರಾಬಲ್ಯವನ್ನು ಮುಂದುವರಿಸಿಕೊಂಡು ಬಂದು ಹಲವಾರು ಕೊಡುಗೆಗಳನ್ನು ನೀಡಿದ ಕೀರ್ತಿ ಶಿವಚಿತ್ತ ವೀರಕಾವದೇವರಸನಿಗೆ ಸೇರುತ್ತದೆ.

ನಾಗೂರು ವಿಷ್ಣು ದೇವಾಲಯದ ಬಲಬದಿಯಲ್ಲಿರುವ ಶಾಸನ ಸಂಖ್ಯೆ–1

1. ಶ್ರೀ ಗಣಾಧಿಪತಎ ನಮಃ॥ ನಮಃಸ್ತುಂಗ ಶಿರಸ್ತುಂಗ ಚಂದ್ರಚಾಮರ
2. ತಾರಾಯೋತ್ರೈಲೋಕ್ಯಾಬಿ ನಗರಾರಂಭಂ ಮೂಲಸ್ಥಂಭಾಯ ಸಂಭ
3. ವೇ॥ಂ ಸ್ವಸ್ತಿ ಸಮಧಿಗತ ಪಂಚಮಹಾಸಬ್ಧ ಮಹಾಮಹೇಶ್ವರಂ ಬನ
4. ವಾಸಿ ಪುರವಾಧೀಶ್ವರಂ ಜಯಂತಿಮಧುಕೇಶ್ವರ ದೇವರ ಲಬ್ಧವರ ಪ್ರಸಾ
5. ದಂ ಹರಧರಣೀ ಪ್ರಸೂತ ಮುಕ್ಕಣ್ಣ ಕದಂಬ.... ರಾಯಮಣಿಮ
6. ಕುಡಚೂಡಾಮಣಿ ಪಶ್ಚಿಮ ಸಮುದ್ರಾಧಿಪತಿ ದೀನಾನಾಥ ಸಮುದ್ಧರಣ ಹುಸಿವರ
7. ಸೂಲ ನಿಷ್ಕಳಂಕಮಲ್ಲ ಸತ್ಯಪ್ರತಾಪ ಚಕ್ರವರ್ತಿ ಶ್ರೀ ಗೋಕರ್ಣ ಮಹಾಬಳೇಶ್ವರ
8. ದೇವರ ದಿಬ್ಬ ಶ್ರೀವಾದಪದ್ಮಾರಾಧಕರುಪುಪ್ಪ ಶಿವಚಿತ್ತವೀರಕಾವದೇ

9. ವರ್ಸರು ರಾಜ್ಯವ ಪ್ರತಿಪಾಲಿಸುವ 59 ತಾರಣ ಸ (೦)ವಛರದ ಕಾರ್ತಿಕ ಸು.1 ಆದಿವಾರದಂ

10. ದು ನಾಘೊರದ 11 ಮಾನಿಸ ಪ್ರಭುಗಳು ತಂವೊಳೇಕಸ್ತವಾಗಿ ಶ್ರೀ ವಿನಾಯಕದೇವರ

11. ರ ಶ್ರೀ ವಿಷ್ಣುದೇವರ ಷಾ (ಪಾ)ಲೆಯ ದೇವರಿಗೆ ಬಹಾಯ ಸುಂಕ ದೊಮ್ಮಾನದ ವೊಳಗೆ ಬಹಂತ

13. ಡು ಭಾಗಯಾಯವನೂ ಹೊಂನರೊಳಗೆ ಬಹಂತಹಯಾ

14. ಯಾವೊಂದು ಭಾಗ ವಿಷ್ಣು ದೇವರಿಗೆ ವೊಂದುಭಾಗ ವಿನಾಯ್ಕ (ಪಾ)ಲಿಗೆ ಯಿಂ

15. ಲೇ ಎರಡು ಭಾಗವನುನೊ ಬೋರಿವಾಳ ಪರಿಸೆಯ ಪ್ರಕಾಸತೀರ್ಥಶ್ರೀ

16. ಪಾದಂಗಳಿಗೆ ಯೀಮರ್ಯ್ಯಾದಯ ಪಾದ (ಸಸಿಗೆರ್ಶಾ?) ಧಾರಾ ಪೂರ್ರ್ಯವಾಗಿ ಕೊಟ್ಟ

17. ರು ವಿನಾಯಕ ದೇವರ ವಿಷ್ಣುದೇವರ ಸಾಂತಿಗೀ ಗಣಪತಿ....

18. ವನಮೇಲೆ ಲೋಕಿಮ ಖ... ರಿಕೆಯ ಎಮಡಿಕೆ.... ಡುಗ ಅನ್ತು ಶಾಂಟ

19. ತಿಗೆ ಗಳ ಯಾತಮೆಯ ಗಡಿ ಬಡಗ (ದ) ಸಯಲಿಯಾಮಬಾಳ (3)..... ಗಡಿತೆಂಕದೆಸ

20. ಯಲ್ಲಿಕ್ಕಿದ ಕಲಿಂದ ಮೇಲೆ ಪಡುವಲುಯೂಲಿಯ ಹ.... ಉ ದಾರಿಯಂ

23. ದ ಮೇಲೆ ಯಿಂದ..... ವೊಳಗಣಯಾತಿದ

22. ಮೇಲೆ ಗುಂಡಿಯ ಮಾರಿದ ಕಡಿನನೀರುಂಬ ಬಯಲು....ಡಿವೋದ ಬಯ

23. ಲು ಸಹಿತ ತೆಂಕಲು ಸೋಗೆ (ಕಾ)ಯ ಬಯಲು ಸಹಿತ ಹರಿವ.... ಕೂಡಲ

24. ಳ ಬಡಗಲು....ಕೂ

25. .... ಗೊಳ ಬಯಲೊಳಗೆ ವಿನಾಯ (ಕ) ದೇವರಿಗೆ (5?) ಮೂಡೆ ವಿಷ್ಣು ದೇವರಿಗೆ 5 ಮೂಡೆಯಿ

26. ತೀಸುವ (ವೀರ) ಕಾವದೇವರು ಧಾರಾಪೂರ್ವವಾಗಿ ಕೊಟ್ಟರು ಶ್ರೀ ವೀರಕಾವದೇವರ್ಸರು

27. ಗ್ರಹಣಕಾಲದಲ್ಲಿ ಶ್ರೀ ಮಹಾಬಳದೇವರ ಮುಂದೆ ಶ್ರೀ....

28. ವರಿಗೆ ನಯವೇದ್ಯ ನಂದಾವೆಳಗ.... ಧಾರಾ ಪೂರ್ವ್ವವಾಗಿಹ

29. ಗದ್ಯಾಣ 10

30. ವೇಗ 3

31. ಹೆಬ್ಬಾರ 22ಯಿಂತು.... ಮೇ ಗ. 10

32..... ಧರ್ಮ್ಮಯಿ...ವ ಮತಿವಾಳಿ

33. ಕುರುಕ್ಷೇತ್ರದೊಳಗೆ 100 ಕಿವೆತೆ ಬ್ರಾಹ್ಮ

34. ಯಿ ಧರ್ಮವನು । ಭೂಮಿಯ.....

ಮುಂದಿನ ಭಾಗ ಹಾಳಾಗಿದೆ.

ನಾಗೂರು ವಿಷ್ಣುದೇವಾಲಯದ ಎಡಬದಿಯಲ್ಲಿರುವ ಶಾಸನ ಸಂಖ್ಯೆ–2

1. ಶ್ರೀಗಣಾಧಿಪತ ಎನಮಃ॥ ಶ್ರೀ ಸರಸ್ವತ್ಯಾಯ ನಮಃ॥

2. ನಮಸ್ತುಂಗ ಸಿರಸ್ತುಂಗ ಚಂದ್ರಾಚಾಮರಚಾರವೇ ತ್ರೈಲೋಕ್ಯ

3. ನಗರಾಂಭ ಮೂಲಸ್ತಂಭಾಯ ಸಂಭವೇ॥ ಸ್ವಸ್ತಿ ಸಮಧಿ

4. ಗತ ಪಂಚ ಮಹಾಸಬುದ ಮಹಾಮಹೇಶ್ವರ ಬನವಾಸಿಪುರವ

5. ರಾಧೀಸ್ವರ ಶ್ರೀ ಗೋಕರ್ಣ್ನ ಮಹಾಬಳದೇವರ ದಿಬ್ಬ ಶ್ರೀಪಾದಪದ್ಮಾ

6. ರಾಧಕಂ ಪಶ್ಚಿಮ ಸಮುದ್ರಾಧಿಪತಿ ಯರಿರಾಯರ

7. ಗಂಡರದಾವಣಿ ಶ್ರೀ ವೀರಕಾವದೇವರ್ಸರು ರಾಜ್ಯವ ಪ್ರತಿಪಾಳಿಸು

8. .....ನೆಯ ಸರ್ಬ್ಬಧಾರಿ ಸಂವತ್ಸರದ ಕಾರ್ತ್ತಿಕ ಸು

9. ದಿವಾರದಂದು ಶ್ರೀವೀರಕಾವರ್ಸರು..... ಶ್ರೀಗೋಕ

10. (ರ್ಣ್ನ) ಮಹಾಬಳದೇವರ ಸಂನಿಧಾನದಲಿ ದೇವರ

11. ..... ದಿಂ ಬೋರಿವಾಳ ಪರುಷೆಯ ಅಗಸ್ತ್ಯಶಮ ಶ್ರೀಪಾದಂ

12. ಗಳ ಶಿಷ್ಯ ಶ್ರೀ ಪ್ರಕಾಶತೀರ್ಥ ಶ್ರೀಪಾದಂಗಳಿಗೆ (ಪುಜ್ಯಾ)

13. ಹ ಪ್ರಭುಗಳು ಸ.... ಮಾನಾಗಿ ವಿನಾಯ್ಕನ ಶ್ರೀವಿಷ್ಣುದೇವ

14. ರ.....

13.......

16......

17. ವಂತಾಗಿ ನಾಘೂರ (ಪ್ರ)ಭುಗಳ

18....... ನಡಸುವಂತಾಗಿ ಶ್ರೀ.........ಸಂನಿಧಿಯಾ

19. ಳು.........

20. ...... ಗ್ರಹಣ ಕಾಲದಲಿ*

*(ಶಾಸನದ ಪಾಠವನ್ನು ಓದಲು ಸಹಕರಿಸಿದ ಡಾ. ಶ್ರೀನಿವಾಸ ಪಾಡಿಗಾರ ಇವರಿಗೆ ಕೃತಜ್ಞತೆಗಳು.)

ಆಧಾರಸೂಚಿ ಮತ್ತು ಟಿಪ್ಪಣಿಗಳು

1. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ನಂ6, ನಂ. 78, ಪು. 243–45, ಕನ್ನಡ ಸಂಶೋಧಮ ಸಂಸ್ಥೆ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
2. ಎಂ.ಎ.ಆರ್. 1928, ನಂ. 108
3. ಡಿಸ್ಕ್ರಿಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಆಂಡ್ ಕಾಫರ್ ಪ್ಲೇಟ್ ಇನ್‌ಸ್ಕ್ರಿಪ್ಷನ್ಸ್ (1940–43)ನಂ. 25, 26, 27, ಕನ್ನಡ ಸಂಶೋಧನ ಸಂಸ್ಥೆ, ಕೆ.ವಿ.ವಿ. ಧಾರವಾಡ
4. ಅದೇ.
5. ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ನಂ. 6. ಪು. 241–43, ಕೆ. ವಿ. ವಿ. ಧಾರವಾಡ
6. ಎಂ.ಎ.ಆರ್., 1929, ಪು. 171
7. ಸೂರ್ಯನಾಥ ಕಾಮತ್., ಉತ್ತರ ಕನ್ನಡ ಜಿಲ್ಲಾ ಗ್ಯಾಜಿಟಿಯರ್, ಪು. 122.



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

2021